**ಸಮಗ್ರ ಸಾಹಿತ್ಯ ಮಾಲೆ : ಸಂಪುಟ – 21**

# ಸಂಕೀರ್ಣ ಬರೆಹ ಸಂಪುಟ

**ಉಪನ್ಯಾಸಗಳು–ಅಂಕಣ ಬರೆಹ–ಸಂಕೀರ್ಣ ಬರೆಹ ನೆನಪುಗಳು**

**ಭಾಗ – 2**

## ವಿ. ಸೀತಾರಾಮಯ್ಯ

## ವಿ. ಸೀ. ಸಂಪದ

**ರಾಜೀವನಗರ, ಬನಶಂಕರಿ ೩ನೇ ಸ್ಟೇಜ್, ಬೆಂಗಳೂರು–೫೬೦ ೦೮೫**


**ಖಓಏಇಇಖಓಂ ಃಂಖಇಉೂಂ ಖಒಕಾಖಂ :** (ಗಖಚಿಚಿಥಿಚಿಚಿಡಿಚಿಣ ಂಚಿಖಾಚಿಚಿಚಿ ಃಚಿಡಿಜಾಚಿ ಖಚಿಚಿಖಾಜಾಡಿಚಿಚಿ ಃಚಿಡಿಜಾಚಿ ಓಜಾಚಿಚಿಗಿಣಾಚಿಚಿಣ), **ಕಚಿಡಿಣ–ಖಖ** ಥಾ ೧ಡಿ. ಗಿ. ಖಾಚಿಡಿಚಿಚಿಟು, ಕಾಟುಜಾಜ ಥಾ ಗಿ. ಖ ಖಾಚಿಚಿಟಚಿಜಚಿ, ಓಂ ೨೫, 'ಗಿಚಿಣಾಚಿಜುಚಿಡಿಚಿ', ೭ಣು '೧ಣ' ೧ಣಡಿಥ ಖಚಿಗಿಡಾಚಿಚಿಡಿಚಿಡಿ, ಃಚಿಚಿಚಿಖುಚಿಚಿಖಾಚಿಡುಖಡಿಜ ಖಾಚಿರಾಜ ೪ಣು ಫಾಚಿಜ ಃಚಿಚಿರಾಚಿಟಡಿಜ ೫೬೦೦೮೫

ಕಚಿರಾಜ : ಥಾ + ೩೫೨ = ೩೮೪

ಕಚಿಗಿಜಾಡಿ ಥಾಜ ೭೦ಉಖ ಒಚಿಗಿಟಿಖುರ

**ವಿ.ಸೀ. ಸಮಗ್ರ ಸಾಹಿತ್ಯ ಮಾಲೆಯಲ್ಲಿ ಪ್ರಥಮ ಮುದ್ರಣ : 2014**



ಬಿ ಖಭಾಜಾಗಿತಾಜ


**ಬೆಲೆ : ರೂ. 200/–**


**ವಿ. ಸೀ. ಸಂಪದ** (ವಿ. ಸೀ. ಸಂಸ್ಮರಣ ವೇದಿಕೆ)
ನಂ. ೨೫, 'ವಸುಂಧರಾ', ೭ನೇ 'ಸಿ' ಕ್ರಾಸ್, ರಾಜೀವನಗರ
ಬನಶಂಕರಿ ೩ನೇ ಸ್ಟೇಜ್, ೪ನೇ ಫೇಸ್, ಬೆಂಗಳೂರು–೫೬೦ ೦೮೫



ಅಧ್ಯಕ್ಷರು : ಪ್ರೊ. ಎಂ. ಎಚ್. ಕೃಷ್ಣಯ್ಯ

ಉಪಾಧ್ಯಕ್ಷರು : ಪ್ರೊ. ಕೆ. ಎಸ್. ಕಲ್ಲಾಪುರ (ಧಾರವಾಡ)

ಕಾರ್ಯದರ್ಶಿ : ಪ್ರೊ. ಎಂ. ವಿ. ಸತ್ಯನಾರಾಯಣ

ಕೋಶಾಧಿಕಾರಿ : ಕೆ. ಬಿ. ಷಣ್ಮುಖಪ್ಪ

ಸದಸ್ಯರು : ಎಚ್. ವಿ. ವೆಂಕಟಸುಬ್ಬಯ್ಯ
ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ
ಪ್ರೊ. ಎಮ್. ರಾಮಚಂದ್ರ (ಕಾರ್ಕಳ)
ಡಾ. ಎನ್. ಎಸ್. ತಾರಾನಾಥ (ಮೈಸೂರು)
ಎಸ್. ಸತ್ಯನಾರಾಯಣ
ಶ್ರೀಮತಿ ಮೀನಾ ವಾಂಗೀಕರ್ (ಪುಣೆ)
ಶ್ರೀಮತಿ ಅಂದನೂರು ಶೋಭ
ಮುನಿಧರ್ಮಯ್ಯ
ಎಂ. ವಿ. ವಿ. ಮೂರ್ತಿ
ವೈ. ಎಂ. ರಾಜು



ಮುಖಪುಟ ವಿನ್ಯಾಸ : **ನಾಗೇಂದ್ರ ಕುಮಾರ್**

ಮುದ್ರಣ : **ನೇತ್ರಾ ಪ್ರಿಂಟರ್ಸ್**, ಬೆಂಗಳೂರು–೫೬೦ ೦೧೮

# ಪರಿವಿಡಿ

**ಪ್ರಸ್ತಾವನೆ**

**ಅರಿಕೆ – ಎಂ. ವಿ. ವೆಂಕಟೇಶ ಮೂರ್ತಿ**

**I. ವಿಶೇಷ ಉಪನ್ಯಾಸಗಳು**

1. ಶಿವರಾಮ ಕಾರಂತ 1
2. ಒಳ್ಳೆಯ ಮನುಷ್ಯ ಒಳ್ಳೆಯ ಬದುಕು 23

**II. (ಅಂಕಣ ಬರೆಹ) – ಲೋಕ ಸಮೀಕ್ಷೆ**

1. ಲೋಕರಾಜಕೀಯದಲ್ಲಿನ ಎರಡು ಮುಖ್ಯ ಸಂಗತಿಗಳು 48
2. ಹೊಸ ದಶಕದ ಹೊಸ್ತಿಲಲ್ಲಿ 55
3. ಕಾಂಗ್ರೆಸ್ ಮಹಾಧಿವೇಶನ 52
4. ವರಮಾನ - ಧಾರಣೆವಾಸಿ 69
5. ಮಿತವ್ಯಯ - ವ್ಯಯ 75
6. ಹಿಂದೀ ಭಾಷಾ ಹೇರಿಕೆ ವಿವೇಕವಲ್ಲ 80
7. ವಿಫಲಗೊಂಡ ಶೃಂಗಸಮ್ಮೇಳನ 86
8. ಆಲ್ಜೀರಿಯಾ ಪ್ರಶ್ನೆ 94
9. ಕೇರಳದಲ್ಲಿ ಮುಂದಿನ ಚುನಾವಣೆಗಳು 101
10. ನಾನಾವತಿ ವ್ಯವಹಾರ 107
11. ಸಂಪುಗಳು 115
12. ಕ್ಯೂಬಾ ಪ್ರಸಂಗ 122



13. ಜಪಾನಿಗೆ ಐಸೆನ್ ಹೊವರ್ ಭೇಟಿ 130
14. ಕಾಮನ್‌ವೆಲ್ತ್ ರಾಜಕೀಯ 136
15. ನಮ್ಮ ವಿಶ್ವವಿದ್ಯಾನಿಲಯದ ಗುರಿ, ಗಮ್ಯಗಳು 143
16. ಇತ್ತೀಚಿನ ಐತಿಹಾಸಿಕ ಪ್ರಸಂಗಗಳು 149
17. ಅಧ್ಯಕ್ಷ ಐಸೆನ್ ಹೊವರರ ಭಾರತ ಭೇಟಿ 154
18. ಅಧ್ಯಕ್ಷ ಅಯೂಬರ ಯುದ್ಧದ ಮಾತು 161

**III. ಸಂಕೀರ್ಣ ಬರೆಹ**

1. ಹಣ-ನಾಣ್ಯಗಳು 170
2. ಸಮಾಜದಲ್ಲಿ ವ್ಯಾಪಾರಸ್ಥರ ಸ್ಥಾನವೇನು 183
3. ನಮ್ಮೆದುರಿಗೆ ಇರುವ ಪ್ರಮುಖ ಸಮಸ್ಯೆಗಳು 188
4. ನಮ್ಮ ಪತ್ರಿಕೋದ್ಯಮ 190
5. ಮೈಸೂರು ಚಿನ್ನ 198
6. ಧಾರಣೆವಾಸಿಗಳ ಏರಿಕೆ 201
7. ಯೋಜನೆ, ರಕ್ಷಣೆಗಳಿಗೆ ಹಣಪೂರೈಕೆ 213
8. ರಾಮರಾಜ್ಯದ ರೀತಿನೀತಿ 223
9. ನಿರುದ್ಯೋಗ ಸಮಸ್ಯೆ 232
10. ಅನಾಣ್ಯೀಕರಣ : ಸಂಪಾದಕರಿಗೊಂದು ಪತ್ರ 240
11. ಪರಿಷತ್ತಿನ ಕಟ್ಟಡ ಕಾರ್ಯಕಲಾಪ ಬೆಳೆದು ಬಂದ ಬಗೆ 242
12. ರಾಜ್ಯೋತ್ಸವ ಚಿಂತನೆ 248
13. ಆಕಾಶವಾಣಿಗೆ ಸ್ವಾಯತ್ತತೆ 251
14. ಪೊಲೀಸ್ ದಳ : ಜನದ ರಕ್ಷಕರು, ಸ್ನೇಹಿತರು 257
15. ವೃದ್ಧಾಪ್ಯದ ಎರಡು ಹಂತಗಳು 263

**IV. ಹಳೆಯ ಬೆಂಗಳೂರಿನ ನೆನಪುಗಳು** 273

**ಅನುಬಂಧ** 351

# ಪ್ರಸ್ತಾವನೆ

ವಿ. ಸೀತಾರಾಮಯ್ಯನವರು ಭಾರತೀಯ ನವೋದಯ ಯುಗದಲ್ಲಿ ಕನ್ನಡದಲ್ಲಿ ಸಾಹಿತ್ಯ ನಿರ್ಮಿಸಿದ ಪ್ರಮುಖರಲ್ಲಿ ಒಬ್ಬರು. ಭಾರತೀಯ ಎಂಬುದು ಒಂದು ಇದೆಯೆ? ಇದ್ದರೆ ಅದು ಹೇಗಿದೆ? ಅದರ ಗುಣ ಲಕ್ಷಣಗಳೇನು? ಅದು ಸರ್ವತಂತ್ರ ಸ್ವತಂತ್ರತೆ? ಸ್ವಯಂಭೂ ಆದದ್ದೇ? ಭಾರತೀಯತೆಗೂ ಪಾಶ್ಚಾತ್ಯ ಚಿಂತನೆ ಮತ್ತು ರೀತಿ ರಿವಾಜುಗಳಿಗೂ ತೌಲನಿಕವಾಗಿ ಇರುವ ಸಾಮ್ಯಗಳೇನು? ಭಾರತೀಯತೆ, ಭಾರತ, ಭಾರತವಾಸಿಗಳು ಜಗತ್ತಿಗೆ ಸ್ವತಂತ್ರವಾಗಿ ಕೊಡ ಬೇಕಾದ, ಕೊಡಬಹುದಾದ ಕಾಣಿಕೆಗಳು ಇವೆಯೆ? - ಇವು ಭಾರತೀಯ ನವೋದಯದ ಕೆಲವು ಮುಖ್ಯ ಸಾಂಸ್ಕೃತಿಕ ಪ್ರಶ್ನೆಗಳು. ಕಲೆ, ಮಾನವಿಕ, ಶುದ್ಧ ವಿಜ್ಞಾನ ಮತ್ತು ಸ್ವಲ್ಪ ಮಟ್ಟಿಗೆ ತಂತ್ರಜ್ಞಾನ ಕ್ಷೇತ್ರಗಳವರೆಗೂ ಈ ಪ್ರಶ್ನೆ ಬಾಚಿಕೊಂಡಿತ್ತು.

ಸಂಸ್ಕೃತಿಗಳ ಭಿನ್ನತೆಯು ಇಪ್ಪತ್ತೊಂದನೆಯ ಶತಮಾನದಲ್ಲಿ ಭಾರತ ಕುರಿತ ಅಧ್ಯಯನಗಳಲ್ಲಿ ಪ್ರಮುಖ ಸ್ಥಾನ ತಡೆಯುತ್ತಿರುವಂತೆ, ಇಪ್ಪತ್ತನೆಯ ಶತಮಾನದ ಆರಂಭಕ್ಕೆ ಹೋಲಿಕೆಗೆ ಅಗ್ರಸ್ಥಾನವಿತ್ತು. ವಿ. ಸೀ. ಅವರ ಆಸಕ್ತಿ ಅಧ್ಯಯನ ಭಿನ್ನತೆಯ ನೆಲೆಯನ್ನು ಆಗಾಗ ಮುಟ್ಟಬಹುದು, ಆದರೆ ತೌಲನಿಕವಾಗಿ ಯಾವುದೇ ನೆಲೆಗಳನ್ನು ವಿಶ್ಲೇಷಿಸುವಾಗ ಹೋಲಿಕೆಯ ನೆಲೆಯನ್ನೇ ಹೆಚ್ಚಾಗಿ ಆತುಕೊಳ್ಳುತ್ತದೆ. ಗಮಭೀರವಾಗಿ ಸಾಹಿತ್ಯ ಮತ್ತು ಕಲೆಯನ್ನು ಕುರಿತ ಬರಹಗಳು ಮತ್ತು ಅವರ ಅರ್ಥಶಾಸ್ತ್ರ ಪದವಿಯ ಅಧ್ಯಯನದಿಂದ ಆಸಕ್ತಿ ಬೆಳೆಸಿಕೊಂಡ ಆರ್ಥಿಕ ಮತ್ತು ಇತರ ಮಾನವಿಕ ಬರವಣಿಗೆಗಳನ್ನು ವಿ.ಸೀ. ಅವರು ಮಾಡಿದ್ದಾರೆ.

'ಸಂಕೀರ್ಣ ಬರೆಹ ಸಂಪುಟ-ಭಾಗ 2' ರಲ್ಲಿ ಅನುಬಂಧವನ್ನು ಬಿಟ್ಟು ನಾಲ್ಕು ಭಾಗಗಳಿವೆ. ಎರಡು ವಿಶೇಷ ಉಪನ್ಯಾಸಗಳು, ಅಂಕಣ ಬರೆಹ 'ಲೋಕ ಸಮೀಕ್ಷೆ', ಸಂಕೀರ್ಣ ಬರೆಹ, ಹಳೆಯ ಬೆಂಗಳೂರಿನ ನೆನಪುಗಳು. ಇಲ್ಲಿ ಸಂಕಲನಗೊಂಡಿರುವ ಅವರ ಬರಹಗಳು ಅಕ್ಷರ ರೂಪ ತಳೆದದ್ದು ಕಳೆದ ಶತಮಾನದ ಉತ್ತರಾರ್ಧದ ಆರಮಭದ ದಶಕಗಳಲ್ಲಿ. 1947ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ದೊರೆತ ಬಳಿಕ ದೇಶವನ್ನು ಗಾಂಧೀ, ಟ್ಯಾಗೋರ್, ರಮಣ ಮಹರ್ಷಿಯವರ ಆದರ್ಶಗಳ ಬೆಳಕಲ್ಲಿ ಮುನ್ನಡೆಸುವ



ಸಾಧ್ಯತೆಯೇನೇ ಇತ್ತು. ಆದರೆ ಅದನ್ನು ಸಾಧಿಸಲು ಕೇಂದ್ರ ಸರ್ಕಾರದಲ್ಲಿ, ಯೋಜನಾ ಆಯೋಗದಲ್ಲಿ ಇದ್ದವರಿಗೆ ಮನಸ್ಸಾಗಲೀ, ಮಾನಸೀಕತೆಯಾಗಲೀ ಇರಲಿಲ್ಲ. ನೆಹರೂ ಯುಗದಲ್ಲಿ ಅರಳಿದ ಬರೆಹಗಳು, ವಿ.ಸೀ. ಅವರ ವೈಚಾರಿಕ ಬರೆಹಗಳು. ಈ ಮಾತು ವಿಶೇಷವಾಗಿ ಈ ಸಂಪುಟಕ್ಕೆ ಸಲ್ಲುವಂಥ ಮಾತು. ಲೆನಿನ್ ಮಾದರಿಯ ಪಂಚಭೂಷಿಕ ಯೋಜನೆಗಳು ಅನುಷ್ಠಾನ, ಒಂದೆರಡು ಪಂಚವಾರ್ಷಿಕ ಯೋಜನೆಗಳ ಬಳಿಕ ಕೃಷಿಗಿಂತಲೂ ಕೈಗಾರಿಕಾ ವಲಯಕ್ಕೆ ಹೆಚ್ಚಿನ ಆದ್ಯತೆ ಲಭಿಸತೊಡಗಿದ್ದು ಅಂದಿನ ಪ್ರಮುಖ ವಿದ್ಯಮಾನ.

ಭಾರತೀಯ ನೆಲೆಯ ಅಂದರೆ ಸ್ಥೂಲವಾಗಿ ಹೇಳುವುದಾದರೆ - ಆಚಾರ್ಯ ಚಾಣಕ್ಯ, 'ಶುಕ್ರನೀತಿಸಾರ'ದಲ್ಲಿರುವ ಆರ್ಥಿಕ, ಸಾಮಾಜಿಕ ಚಿಂತನೆಗಳಾಗಲಿ, ಮಹಾತ್ಮ ಗಾಂಧಿ ಮತ್ತು ಜೆ. ಸಿ. ಕುಮಾರಪ್ಪ ಅವರ ಸಾಮಾಜಿಕ ಹಿತವನ್ನು ಗಮನಿಸಿಯೇ ಮಾಡಿರುವ ಸ್ವದೇಶಿ ಅರ್ಥ ಚಿಂತನೆ, ರಾಜಕೀಯ ಚಿಂತನೆಯಾಗಲೀ ಆಗ ಮನ್ನಣೆಗೆ ಬರಲಿಲ್ಲ. (ಈಗ ಸ್ವಚ್ಛ ಭಾರತ ಅಭಿಯಾನಕ್ಕೆ ಹೊರಟಿರುವ ಬಿಜೆಪಿ ನೇತೃತ್ವದ ಸರ್ಕಾರದ ಮೂಲತತ್ವ - ಅದು ತನ್ನನ್ನು ಎಷ್ಟೇ ಭಾರತೀಯ ಎಂದು ಬಿಂಬಿಸಿಕೊಂಡರೂ, ಈ ವರೆಗೂ - ಅಂಥ ಪ್ರಯತ್ನಗಳು ನಡೆದಂತಿಲ್ಲ).

ಕೆಲವು ವಿವರಗಳಲ್ಲಿ ವ್ಯತ್ಯಾಸವಿರಬಹುದಾದರೂ ವಿ.ಸೀ. ಅವರದು ಪಂಡಿತ್ ನೆಹರೂ ಅವರ ಚಿಂತನೆಗೆ ಸಮೀಪದ ಚಿಂತನೆ ಎನ್ನಬಹುದು. ಬೃಹತ್ ಅಣೆಕಟ್ಟುಗಳ ನಿರ್ಮಾಣ, ಅರಣ್ಯ ನಾಶ, ಹಸಿರು ಕ್ರಾಂತಿಯ ಅವಾಂತರಗಳು ಅವರ ಬರೆಹಗಳ ಕೇಂದ್ರದಲ್ಲಿ ಇಲ್ಲ. ನೆಹರೂ ಯುಗದ ಪ್ರಧಾನ ಧಾರೆಯ ಚಿಂತನೆಗಳನ್ನು ಅವಲೋಕಿಸಿದಷ್ಟು ಅವರ ಬರವಣಿಗೆ, ಆಗ ಅಪ್ರಧಾನವಾಗಿದ್ದ ಕೆಲವು ವೈಚಾರಿಕ ಧಾರೆಗಳನ್ನು ಗಮನಿಸುವುದಿಲ್ಲ. ಅವ ನವೋದಯದ ಪ್ರಮುಖ ಸಾಹಿತಿಗಳ ಚಿಂತನೆಯ ಬಾಹುಶ್ಯ, ಆಸಕ್ತಿಯ ವಲಯಗಳು ಇಂದಿಗೂ ಆಶ್ಚರ್ಯವೆನಿಸುವಷ್ಟು ವಿಸ್ತಾರವೆನಿಸುತ್ತವೆ. ಟಿ.ವಿ., ಇಂಟರ್ನೆಟ್ ಇರದ ಯುಗ ಅದು. ಆಗ ನವೋದಯದ ಪೀಳಿಗೆಗಳವರು ನಡೆಸಿದ ಬೌದ್ಧಿಕ ಸಾಹಸ ವಿಸ್ಮಯ ಹುಟ್ಟಿಸುತ್ತದೆ. ಆದರೆ ವಿ.ಸೀ. ಅವರೂ ಸೇರಿದಂತೆ ಆ ಕಾಲದ ಹಿರಿಯರು ಡಾ. ಬಿ. ಆರ್. ಅಂಬೇಡ್ಕರ್, ಡಾ. ರಾಂ ಮನೋಹರ ಲೋಡಿಯಾ, ಪಂಡಿತ್ ದೀನದಯಾಳ್ ಉಪಾಧ್ಯಾಯ - ಈ ಮೂವರು ಮಹನೀಯರ ವೈಚಾರಿಕತೆಗೆ ಮುಖಾಮುಖಿಯಾದಂತಿಲ್ಲ. ಇದು ಆಶ್ಚರ್ಯವೆನಿಸುವ ಸಂಗತಿ. ಎಲ್ಲರಿಗೂ ಅವರವರ ಜೀವನದಲ್ಲಿ, ಓದಿನ ಮೂಲಕ ಗಳಿಸಿಕೊಂಡ ಅರಿವಿನಿಂದ ಅನೇಕ ಲಾಭಗಳು ಆಗುವುದರ ಜೊತೆಗೆ ಕೆಲವು ಪ್ರಶ್ನಾತೀತ ಮೂಲೆ, ತೊಡಕುಗಳೂ ಸೃಷ್ಟಿಯಾಗುತ್ತವೆ. ಅದು ಶ್ರದ್ಧಾ ಸ್ಥಾನದ ಬೀಜಸ್ಥಾನ, ಅಲ್ಲಿ ವೈಚಾರಿಕತೆ ಕೆಲಸ ಮಾಡುವುದಿಲ್ಲ. ಬೇಂದ್ರೆಯವರಿಗೆ ಅರವಿಂದರು, ಅರವಿಂದರ ಪೂರ್ಣಯೋಗ; ಕುವೆಂಪು ಅವರಿಗೆ ಪರಮಹಂಸ-ವಿವೇಕಾನಂದ, ರಾಮಕೃಷ್ಣ ಮಿಷನ್

ಕಾರ್ಯಚಟುವಟಿಕೆ; ಡಿ.ವಿ.ಜಿ.ಯವರಿಗೆ ಗೋಪಾಲಕೃಷ್ಣ ಗೋಖಲೆ, ಭಗವದ್ಗೀತೆ; - ಹೀಗೆ. ಈ ಮಾತಿಗೆ ಈಗಿನ ಅಂಬೇಡ್ಕರ್ ವಾದಿಗಳಾಗಲೀ, ಲೋಹಿಯಾ ವಾದಿಗಳಾಗಲೀ, ಹಿಂದುತ್ವವಾದಿಗಳಾಗಲೀ ಅಪವಾದವೇನೂ ಅಲ್ಲ. ಶ್ರದ್ಧಾ ಸ್ಥಾನದಲ್ಲಿ ಪ್ರಶ್ನೋಪನಿಷತ್ತಿಗೆ ಜಾಗವಿಲ್ಲ.

ಈ ನೆಲೆಯಲ್ಲಿ ವಿ.ಸೀ. ಅವರಿಗೆ ಸೆಕ್ಯುಲರಿಸಂ, ನೀತಿ, Justice, ಮಾನವತಾ ವಾದ (humanism), ನೆಹರೂ ವಿಚಾರಗಳು ಶ್ರದ್ಧಾ ಕೇಂದ್ರಗಳು. ಅವರು ಯಾವುದೇ ಸಾಹಿತ್ಯವಿರಲಿ, ರಾಜಕೀಯ, ಸಾಮಾಜಿಕವಿರಲಿ - ಅವುಗಳನ್ನು ನೋಡುವುದು ಈ ಚಿಂತನೆ, ತತ್ವಗಳ ನೆಲೆಗಟ್ಟಿನ ಮೇಲೆ. ಇದರರ್ಥ ಅವರು ಒಂದು ಪಕ್ಷವಾಗಿ ಕಾಂಗ್ರೆಸ್ಸಿನ ಬೆಂಬಲಿಗರು ಎಂದಲ್ಲ. ಅವರ ವಾಲುವಿಕೆ (inchination) ಯನ್ನು ಕುರಿತ ಮಾತು ಇದು. ಈ ದೃಷ್ಟಿಯಿಂದ ನಂತರ ಬಂದ ಗೋಪಾಲಕೃಷ್ಣ ಅಡಿಗ, ಲಂಕೇಶ್, ಅನಂತ ಮೂರ್ತಿ ಅವರ ಕಾಲದಲ್ಲಿ ಸಾಹಿತ್ಯದ ಸಂಧರ್ಭದಲ್ಲಿ ಪರಿಸ್ಥಿತಿ ಬರಲಾಯಿತೂ ಅಡಿಗರು 'ನೆಹರೂ ನಿವೃತ್ತರಾಗುವುದಿಲ್ಲ' ಕವನ ಬರೆದರು, ಲೋಹಿಯಾ ಅನುವಾದಿಸಿದರು ಮತ್ತು ಜನಸಂಘದಿಂದ ಚುನಾವಣೆ ಎದುರಿಸಿದರು.

ಭಾರತದಲ್ಲಿ ಪಂಚವಾರ್ಷಿಕ ಯೋಜನೆಗಳು ಜಾರಿಗೆ ಬಂದ ಮೇಲೆ ಅನೇಕ ವೈರುಧ್ಯಗಳೂ ಸಾಮಾಜಿಕ ಅಂತರಗಳೂ ನಿರ್ಮಾಣಗೊಂಡವು. ಆರ್ಥಿಕ ಸಮೀಕ್ಷಕರೊಬ್ಬರು ಗುರುತಿಸುವಂತೆ - "ಮೂರನೇ ಯೋಜನೆಯ ಕೊನೆಯ ವರ್ಷದಲ್ಲಿ ಆವರಿಸಿದ ಬರ ಸರ್ಕಾರದ ಪ್ರಮುಖ ವೈಫಲ್ಯವನ್ನೂ, ತಲೆಕೆಳಗು ಆದ್ಯತೆಯನ್ನೂ ಸ್ಪಷ್ಟಪಡಿಸಿತು. ನಾಲ್ಕನೇ ಯೋಜನೆಯ ಆರಂಭದಲ್ಲಿ 'ಪ್ಲಾನ್ ಹಾಲಿಡೇ' - ಯೋಜನೆಗೆ ತಾತ್ಕಾಲಿಕ ವಿದಾಯ ಹೇಳುವ ಪರಿಸ್ಥಿತಿಯುಂಟಾಯಿತು... ನಾಲ್ಕನೇ ಯೋಜನೆಯ ಕರಿಡಿನಲ್ಲಿ ರಾಜಕೀಯ ರಾಜಕೀಯ ವ್ಯವಸ್ಥೆ, ಆಡಳಿತ ಹಂದರ ಎರಡೂ ವಿಫಲಗೊಂಡಿವೆಯೆಂದು ಸರ್ಕಾರವೇ ಅಮಶೀಕರಿಸಬೇಕಾಯಿತು. "ದೋಷಗಳನ್ನು ಹಾಡಿಗಿಂತ ಹೆಚ್ಚು ಖಚಿತವಾಗಿ ಗುರುತಿಸಲಾಗಿದೆ; ಸುಧಾರಣೆಗೆ ಅಸ್ತಿಭಾರ ಹಾಕಲಾಗಿದೆ" ಎನ್ನಲಾಯಿಬತು. ಎಲ್ಲಕ್ಕಿಂತ ಮೂಲಭೂತ ಪರಿಮಿತಿಯನ್ನು ಯೋಜನಾಕರ್ತರ ಮಾತುಗಳೇ ಸ್ಪಷ್ಟಪಡಿಸಿದವು: "ಕೇಂದ್ರದಲ್ಲಿ ಹಾಗೂ ರಾಜ್ಯಗಳಲ್ಲಿ ಹೊಸ ಹೊಸಬಗೆಯ ಕರ್ತವ್ಯಗಳನ್ನು ಹಳೆಯದೇ ಸರ್ಕಾರ ಯಂತ್ರಕ್ಕೆ ವಹಿಸಲಾಯಿತು."[1]

* * *

1. ಶತಮಾನದ ತಿರುವಿನಲ್ಲಿ ಭಾರತ : ಎಸ್. ಆರ್. ರಾಮಸ್ವಾಮಿ, ಪುಟ.90



ಹಾಗಾದರೆ ವಿ.ಸೀ. ಅವರಂಥ ಸಂಕೀರ್ಣ ಓದುಗಳನ್ನು ಹೊಂದಿದ್ದ ಚಿಂತಕರನ್ನು ಅರ್ಥ ಮಾಡಿಕೊಳ್ಳುವುದು ಹೇಗೆ? ಪ್ರಖ್ಯಾತ ಪತ್ರಕರ್ತೆ ವಿದ್ವಾಂಸ ಅರುಣ್ ಶೌರಿಯವರ ಒಂದು ಮಾತು ಇಲ್ಲಿ ಸ್ಮರಣೀಯ: "Whether the issue is illegal intitration from Bangladesh; or the nature of the Pakistan: State; or the deological and texthal basis of Islamic terrorism; or the designs of China and what its rise means to us; or the drift in Nepal; or the spread of Naxalite violence - we shut our eyes. The Problem swells"[2] ಬುದ್ಧಿ ಜೀವಿಯಾದವರು - ಈಗಿನ - ಎಲ್ಲದಕ್ಕೂ ಕಣ್ಣು ಮುಚ್ಚಿಕೊಳ್ಳುವುದರಲ್ಲಿ ನಿಸ್ಸೀಮರು. ಅಂಕಿ ಅಂಶಗಳು ಮತ್ತು ಸರಿಯಾದ ತರ್ಕದಿಂದ ವಸ್ತು ಸ್ಥಿತಿಯನ್ನು ಅರಗಿಸಿಕೊಳ್ಳುವುದರಲ್ಲಿ, ಮುಖಾಮುಖಿಯಾಗುವುದರಲ್ಲಿ ಬಹಳ ಹಿಂದೆ ಬಿದ್ದಿದ್ದಾರೆ. ಅರುಣ್ ಶೌರಿ ಹೇಳುವ ಮತ್ತೂ ಒಂದು ಮಾತು ಸ್ವಾರಸ್ಯಕರವಾಗಿದೆ : ".. We look the other way. It bursts. We hold a meeting. The meeting concludes that a commission must be set up. Drafts of its terons of reference go up and down. Eventually, the commission is set up. We don't depute staff for months, we don't or can't assign an office. At last; it starts work. But its time is up. We extend the commissions tennre-that shows how serious we are "to leave no stone unturned.[3]

ವಿ.ಸೀ. ಹಾಗಲ್ಲ, ಅವರು ಮತ್ತು ಅವರ ಕಾಲದ ಇತರ ಸಾರ್ವಜನಿಕ ಬುದ್ಧಿ ಜೀವಿಗಳು ಎನ್ನಬಹುದಾದ ಮಾಸ್ತಿ, ಡಿ.ವಿ. ಗುಂಡಪ್ಪನವರು, ಶಿವರಾಮ ಕಾರಂತ ಅಂಥವರಲ್ಲ. ..... ಸ್ವಭಾವ ವಿ.ಸೀ. ಅವರಿಗೆ ಜೀವನ್ಮರಣದ ಪ್ರಶ್ನೆಯಾಗಿತ್ತು. ಪ್ರಶ್ನೆಗಳ ಮೇಲೆ ಪ್ರಶ್ನೆ ಎತ್ತುವುದು ಎನ್ನುವುದು ಅವರ ಬರೆಹವೇಕೆ; ಇಡೀ ಚಿಂತನೆಯ ಅಂಗವೇ ಆಗಿತ್ತು. ಅವು ಬಹಳ ಗಂಭೀರವಾದ, ಅಷ್ಟೇ ಪ್ರಾಚಲವಾದ ಜಿಜ್ಞಾಸೆಯಾಗಿರುತ್ತಿದ್ದವು. ವಿ.ಸೀ. ಅವರ ಬರೆಹ ಇಂದಿಗೂ ಓದಿಸಿಕೊಂಡು ಹೋಗುವುದು ಈ ಕಾರಣಕ್ಕೆ.

'Public life must be spiritualised' ಎಂದಿದ್ದರು ಗೋಪಾಲ ಕೃಷ್ಣ ಗೋಖಲೆ. ವಿ.ಸೀ. ಅವರು ಸ್ವತಃ ಪೂರ್ಣ ಆಸ್ತಿಕರಾಗಿದ್ದರು ಎನ್ನುವಂತಿಲ್ಲ. ಆದರೆ ಸಾರ್ವಜನಿಕ ಜೀವನ ಮತ್ತು ಮನುಷ್ಯನ ಅಂತರಂಗದ ಬಾಳ್ವೆ ಶುದ್ದವಾಗಿರಬೇಕು

2. Where will all this take us? : Arun Shourie (2008), P.11
3. ಅದೇ.

ಎಂಬ ಹಂಬಲ ಅವರಿಗೆ ಅದಮ್ಯವಾಗಿತ್ತು. ಅದೇ ಕಾರಣಕ್ಕೆ ವಿ.ಸೀ. ಅವರಿಗೆ ಕಾರಂತರು ಇಷ್ಟವಾಗುತ್ತಾರೆ. ವಿ.ಸೀ. ಒಂದೆಡೆ ಇದೇ ಸಂಪುಟದಲ್ಲಿ ಕಾರಂತರ ಬಗ್ಗೆ ಹೀಗೆ ಬರೆದಿದ್ದಾರೆ: "ಕಾರಂತರನ್ನು ಈಗ ಸುಮಾರು ಮೂವತ್ತು ವರ್ಷಗಳಿಂದ ಬಲ್ಲೆನೆಂದೆ. ಇಷ್ಟು ಧೀರ್ಘಕಾಲ ಅವರನ್ನು ನೋಡಿರುವ ಯಾರಿಗೂ ಅವರು ಎಷ್ಟು ಬೇಗ ಎಷ್ಟು ದೊಡ್ಡದಾಗಿ, ಸೂಕ್ಷ್ಮವಾಗಿ ಬೆಳೆದುಬಿಟ್ಟರು ಅನಿಸುತ್ತದೆ. ಅಪರಿಚಿತ ನೇತರನ ಹತ್ತಿರ ಸ್ವಪ್ರತಿಷ್ಠೆಯನ್ನು ಮರೆತು ಪ್ರಶ್ನೆ ಟೀಕೆ ಕೇಳುವ ಎದೆ ಎಷ್ಟು ಜನರಲ್ಲಿರಬಹುದು? ಬೇರೆಯವರು ನಮ್ಮನ್ನು ನೋಡುವಂತೆ ನಮ್ಮನ್ನು ನಾಚೀನೋಡಿಕೊಳ್ಳುವ ನಿರ್ಭಯ ಆತ್ಮ ಪರೀಕ್ಷೆ ಎಷ್ಟು ಜನರಿಗೆ ಇದ್ದೀತು?... ನೈತಿಕ ಉದ್ವೇಗದ ಸುಂಟರಗಾಳಿಯಂತೆ, ಮತಾಂತರಿಸುವ ಪ್ರಬಲ ಧೀಕ್ಷೆ ತೊಟ್ಟವರಂತೆ ಕಾಣುತ್ತಿದ್ದ, ವರ್ತಿಸುತ್ತಿದ್ದ ಆ ಕಾರಂತರೆಲ್ಲಿ? ಎಲ್ಲ ಬಗೆಯ ಮನುಷ್ಯರನ್ನು ಅಭಿಪ್ರಾಯಗಳನ್ನು ಗೌರವಿಸುವ ಈ ಕಾರಂತರೆಲ್ಲಿ?"[1]

ಎಲ್ಲರೂ ಕಾರಂತರನ್ನು ಆಧುನಿಕರು, ನಾಸ್ತಿಕರು ಎಂದು-ಸಾಮಾನ್ಯವಾಗಿ ಭಾವಿಸಿದರೆ ವಿ.ಸೀ. ಅವರ ಪಾಲಿಗೆ ಕಾರಂತರು ಸಾಂಪ್ರದಾಯಿಕರು. ಹೇಗೆ? ಎಂದರೆ : "ಕಾರಂತರು ಮಾತನಾಡುವಾಗ ಅವರಲ್ಲಿ ಅತ್ಯಂತ ಆಧುನಿಕತೆ, ಪ್ರಗತಿಶೀಲ ಮನೋವೃತ್ತಿ ಇದ್ದ ಹಾಗೆ ಅನಿಸಿದರೂ ಅದು ತೋರಿಕೆ ಮಾತ್ರಲ ಅಂತಃಕರಣದ ಆಳದಲ್ಲಿ ಅವರು ಸಂಪ್ರದಾಯಕರು (Consorvative) ಎಂದು ನನ್ನ ಮತ. ಸಾಂಪ್ರದಾಯಕತೆಗೆ ಒಳ್ಳೆಯ ಅರ್ಥವೂ ಇದೆಯಷ್ಟೆ. ಹಿಂದಿನಿಂದ ಬಂದ, ಉಳಿಸಲು ಉಳಿಸಲು ಯೋಗ್ಯವಾದದ್ದನ್ನು ಉಳಿಸುವ ಬುದ್ಧಿ ಅದು... ಈ ಅರ್ಥದಲ್ಲಿ ಕಾರಂತರ ಸಾಂಪ್ರದಾಯಕತೆಯನ್ನು ಗ್ರಹಿಸತಕ್ಕದ್ದು"[2].

ಈಗ ಕಾರಂತರನ್ನು ಕುರಿತು ನಡೆಯುತ್ತಿರುವ ಅಧ್ಯಯನಗಳಲ್ಲಿ ವಿ.ಸೀ. ಅವರು ಶಿವರಾಮ ಕಾರಂತರನ್ನು ಕುರಿತು ಬರೆಯುತ್ತಿರುವುದನ್ನು ಬಳಸಿಕೊಂಡರೆ ಲಾಭವಿದೆ ಎನ್ನುವ ಕಾರಣದಿಂದ ಈ ಮಾತುಗಳನ್ನು ಹೇಳಿದೆ. ಕಾರಂತರನ್ನು ಕುರಿತು ಅನೇಕಬೊಳಸೂಕ್ಷ್ಮಗಳನ್ನು ಕೊಡುವ ಬರೆಹ ಈ ಉಪನ್ಯಾಸ.

ವಿ.ಸೀ. ಅವರು ಕಾರಂತರ 'ಜ್ವೊಯೇ ಬೆಳಕು' ಕೃತಿಯನ್ನು ಬಿಚ್ಚಿಕೊಳ್ಳುತ್ತಾರೆ. ಅದನ್ನು "ನೇರವಾದ, ಪ್ರಾಮಾಣಿಕವಾದ, ಶ್ರದ್ಧಾ ಭೂಯಿಷ್ಠವಾದ ಪದ್ಯ ರಚನೆ"ಯ ಕೃತಿಯೆಂದು ಗುರುತಿಸಿ ಡಿ.ಇವಿ.ಜಿ.ಯವರ 'ಬಾಳಿಗೊಂದು ನಂಬಿಕೆ', ರಂ.ರಾ. ದಿವಾಕರ ಅವರ 'ಅಂತರಾತ್ಮನಿಗೆ' ಪಳೊಡನೆ ಹೋಲಿಸಿದ್ದಾರೆ.

1. ಸಂಕೀರ್ಣ ಬರೆಹ ಸಂಪುಟ - ಭಾಗ-2, ವಿ.ಸೀ. (2015), ಪುಟ.13
2. ಅದೇ ಪುಟ 15-16



ವಿ.ಸೀ. ಅವರು ಹೇಳಿರುವ ಈ ಕೃತಿಗಳ ಸಾಲಿಗೆ ಸಲ್ಲುವ ಕೃತಿಗಳು, ನಂತರದಲ್ಲಿ ಕನ್ನಡದಲ್ಲಿ ಹೆಚ್ಚಾಗಿ ಬರಲಿಲ್ಲ. ಸ್ವಾಮಿ ಜಗ್ರಾತ್ಮಾನಂದರ 'ಬದುಕಲು ಕಲಿಯಿರಿ' ಮುಕುಂದೂರು ಸ್ವಾಮಿಗಳ 'ಮೇಗ್ವಾಗಲ್ಲ ಐತೆ' ಗಳನ್ನು ಈ ಸಾಲಿನಲ್ಲಿ ಸೇರಿಸಬಹುದೇನೋ. ಕಾರಂತರ ಇಡೀ ವ್ಯಕ್ತಿತ್ವವನ್ನು ವಿ.ಸೀ. ಅವರು ಎಷ್ಟು ಚೆನ್ನಾಗಿ ಈ ಒಂದು ವಾಕ್ಯದಲ್ಲಿ ಸೆರೆ ಹಿಡಿದಿದ್ದಾರೆ: "ಅವರು ಒಬ್ಬ full, free, frank and fearless ಎನ್ನಬಹುದು. 'f' ಅಕ್ಷರ ಕೇಳಲು ಸ್ವಲ್ಪ ಒರಟು ನಿಜ. ಆದರೆ ಅದರಲ್ಲಿ ತೇಜಸ್ಸಿದೆ, ವೀರ್ಯವಿದೆ, ಚುರುಕಿದೆ, ಪ್ರಗತಿ ಚೇತನವಿದೆ. ನುಗ್ಗಿಸಾಗುವ ದಿಟ್ಟತನ, ಪೌರುಷ ಇವೆ."

* * *

'ಒಳ್ಳೆಯ ಮನುಷ್ಯ ಒಳ್ಳೆಯ ಬದುಕು' - ಇದು ಟಿ. ಎಸ್. ವೆಂಕಟಯ್ಯ ಸ್ನಾತಕೋಪನ್ಯಾಸ, 1973ರಲ್ಲಿ ಮಾಡಿದ್ದು. What is the Good? Why ahould Ironebe good? ಎಂಬ ಪ್ರಶ್ನೆಗಳನ್ನು ಎತ್ತಿಕೊಂಡು ವಿ.ಸೀ. ಅವರು ಬದುಕು ಮತ್ತು ಮೂಲ್ಯ ಪ್ರಪಂಚದ ಜಿಜ್ಞಾಸೆ ಮಾಡಿದ್ದಾರೆ. ಆಚಾರ ವಂತಿಕೆ ಪ್ರಶ್ನೆಯನ್ನು ಎತ್ತಿಕೊಂಡು ಚಿಂತನೆಗೆ ತೊಡಗುವ ವಿ.ಸೀ. ಅವರು ಸನ್ಯಾಸಿಗಳು ಬಯಸುವ ಮುಕ್ತಿ ದೋಷವನ್ನು ಅಷ್ಟಾಗಿ ಇಷ್ಟಪಡುವುದಿಲ್ಲ. ಅವರು ಈ ಆಚಾರದಿಂದ ಲಾಭವಾಗುವ ಬಗೆಯನ್ನು ಸಗಸಾಗಿ ನಿರೂಪಿಸಿದ್ದಾರೆ:

"ನಾನು ಆಚಾರವಂತ; ತಾಯಿ ತಂದೆಯರನ್ನು ಕಾಪಾಡುತ್ತೇನೆ; ದೇವಸ್ಥಾನಕ್ಕೆ ಹೋಗುತ್ತಾಎನೆ; ದುರ್ವಸನಗಳಲ್ಲದವನು; ನನಗೆ ಇನ್ನೊಬ್ಬರಲ್ಲಿ ಹಗೆಯಿಲ್ಲ", ಎಂಬುದೂ ಸಾಲದೇನೋ. ಅದೂ .......; Phraise ಎಂಬ ಆಕ್ಷೇಪಣೆಗೆ ಈಡಾಗಬಹುದು.. ಜಪ, ತಪ, ಧ್ಯಾನ ಮಾಡಿಕೊಂಡು ಒಂದು ದ್ವೀಪದ ಹಾಗೆ ತನ್ನ ಬದುಕನ್ನು ನಡೆಸಿಕೊಂಡು ಕೃತಾರ್ಥತೆ ಸಾಧಿಸಬಹುದು. ಈ ಕೃತಾರ್ಥತೆ ತುಂಬು ರಕ್ತದ್ದಲ್ಲ; ಇದರಲ್ಲಿ ಕ್ರಿಯಾಕಾರಿಕತೆಗೆ ಸಂಬಂಧಿಸಿದ ಯಾವ ಅಂಶವೂ ಪಚಲಿತನ ಸಾಧನೆಯೂ ಹೊರಗಿನ ಪ್ರಪಮಭಕ್ಕೆ ಅಲ್ಲಿ ಇಲ್ಲ. (ಪುಟ.29). ಗುಡ್ ಮತ್ತು ಗುಡ್ ಫಾರ್ ನಥಿಂಗ್ ಎನ್ನಬಹುದಾದ ವಿಷಯಗಳನ್ನು ಜನಜೀವನದ ಸಂಧರ್ಭದಲ್ಲಿ ವಿ.ಸೀ. ಇಲ್ಲಿ ಆಳವಾಗಿ ವಿಮರ್ಶೆಗೆ ಒಳಪಡಿಸಿದ್ದಾರೆ. ಅಲ್ಲಿ ಅವರು Ethics ಕುರಿತು ನಡೆಸಿರುವ ಅಧ್ಯಯನ ಮತ್ತು ಚಿಂತನೆಗಳು ರೂಪ ತಳೆದಿವೆ. ಈ ವಿಷಯಗಳ ಸೂಕ್ಷ್ಮತೆಯನ್ನು ಚೆನ್ನಾಗಿ ಅರಿತಿರುವ ವಿ.ಸೀ. ಅವರು ಔಚಿತ್ಯ ಪುರ್ಣ ನಡವಳಿಕೆಗಳು, ಔದಾರ್ಯ ಇವು ಉತ್ತಮ ಸಂಸ್ಕೃತಿಯ ಲಕ್ಷಣ ಎಂದು ವಿಖ್ಯಾನಿಸುತ್ತಾರೆ. ಫ್ರೆಂಚ್ ನಾಟಕಕಾರ ಮೋಲಿಯ, ಮದಾಂ ದುಫ್ಹಾಂ ಎಂಬ ಮಹಿಳೆ ಇವರ ಉದಾಹರಣೆಗಳನ್ನು ಕೇಡುತ್ತಾರೆ.

ಮರಾಂ ದುಂಪ್ಪೊಂ ಕುರಿತ ಪ್ರಸಂಗ ಉಲ್ಲೇಖಾರ್ಹ : "…. ಎಂಬಾಕೆಯ ಮನೆಗೆ ವಿದ್ವಾಂಶರು ಸಾಮಾನ್ಯವಾಗಿ ಬರುತ್ತಿದ್ದರು. ಉಳಿದೆಲ್ಲ ಉಪಚಾರಗಳು ಚೆನ್ನಾಗಿರುತ್ತಿದ್ದವು. ಒಮ್ಮೆ ಗೆಳತಿಯೊಬ್ಬಳು ಆಕೆಯನ್ನು ಕರೆದು 'ನಿನ್ನ ಉಪಚಾರ ದಿವ್ಯವಾಣೆರೆ. ಆದರೆ ನಿನ್ನ ಕಾಫಿಯನ್ನು ಇನ್ನೂ ಸ್ವಲ್ಪ ಮೇಲ್ಪಡಿಸಿದರಾಗುತ್ತಿತ್ತು' ಎಂದಳಂತೆ. ಈಕೆ 'ಹೌದು, ನನಗೆ ಗೊತ್ತು. ಇನ್ನೆರಡು ತಿಂಗಳು ತಾಳು; ನನ್ನಲ್ಲಿ ಕೆಲಸ ಮಾಡುತ್ತಿದ್ದ ಹೆಣ್ಣು ನನ್ನಿಂದ ಸಾಲ ತೆಗೆದು ಹಸು ಕೊಂಡಿದ್ದಾಳೆ; ದಿನದಿನಕ್ಕೆ ಹಾಲು ಕೆಡುತ್ತಿದೆ. ಇನ್ನೆರಡು ತಿಂಗಳಲ್ಲಿ ಸಾಲ ತೀರುತ್ತದೆ. ಈಗ ಏನಾದರೂ ನುಡಿದರೆ ಇವರ ಹಂಗಿಗೆ ಸಿಕಿರುವುದರಿಂದ ಈ ಆಕ್ಷೇಪಣೆಗೆ ಈಡಾಗುತ್ತಿದ್ದೇನೆ ಎಂದು ನೊಂದುಕೊಳ್ಳಬಹುದು. ಸ್ವಲ್ಪ ತಾಳು-' ಎಂದಳಂತೆ." (ಪುಟ. 31). ಈ ಪ್ರಸಂಗ ನಿರೂಪಿಸಿದ ಮೇಲೆ ವಿ.ಸೀ. ಅವರ ವ್ಯಾಖ್ಯಾನ ನೋಡಿ: "ಇದೂ ನಯದ ನಡೆ; ಒಳ್ಳೆಯತನವೇ. ಕ್ಷಮೆಯ ಬಹು ಸೂಕ್ಷ್ಮವಾದ ಮುಖ".

ಇಲ್ಲಿ ಒಂದು ಕುತೂಹಲದ ಪ್ರಶ್ನೆ ಕೇಳಬೇಕೆನಿಸುತ್ತದೆ. ವಿ.ಸೀ. ಅರಿತು ದರ್ಶನಗಳನ್ನು ಓದಿಕೊಂಡಿದ್ದವರು. ಭಾರತೀಯ ಮತ್ತು ಪಾಶ್ಚಾತ್ಯ ದರ್ಶನಗಳೆರಡನ್ನೂ ನೋಡಿದ್ದವರು. ಪಾಶ್ಚಾತ್ಯರಲ್ಲಿ ವಿವಿಧ ದಾರ್ಶನಿಕ ಪಂಥಗಳನ್ನು ಓದಿದ್ದ ಅವರಿಗೆ ಹ್ಯುಮನಿಸಂ ದಾರಿ ಹೆಚ್ಚು ಆಪ್ತ ಎಂಬುದು ನನ್ನ ಅಭಿಪ್ರಾಯ. ಅದೇ ರೀತಿ ಭಾರತೀಯ ದರ್ಶನ ಪ್ರಪಂಚಕ್ಕೆ ಬಂದರೆ ವಿ.ಸೀ. ಅವರು ಜೈನ ಮುಂತಾದ ವಾಸ್ತವವಾದಿ ದರ್ಶನಗಳಿಗೆ (Realist) ಹತ್ತಿರದ ಚಿಂತನೆಯವರೋ, ಅಥವಾ ಬೌದ್ಧ ಮತ್ತು ಅದ್ವೈತಗಳಂತಹ ಆದರ್ಶವಾದಿ ದರ್ಶನಗಳಿಗೆ (Idealist) ಸಮೀಪದ ಚಿಂತನೆಯವರೋ? ಎಂಬ ಪ್ರಶ್ನೆ ಮೂಡುತ್ತದೆ.

ಜೈನ ದರ್ಶನದ ಪ್ರಕಾರ ಜೀವವು ಚೈತನ್ಯಮಯ. ಜೀವನ ಲಕ್ಷಣವೆಂದರೆ ಜ್ಞಾನ. ಸಹಜವಾಗಿ ಜೀವನು ಅನಂತ ಜ್ಞಾನ ಹೊಂದಿರುತ್ತಾನೆ. ಆದರೆ ಕರ್ಮದ ಆವರಣಕ್ಕೆ ಅವನು ಒಳಗಾಗುತ್ತಾನೆ, ತನ್ಮೂಲಕ ಅವನ ಶುದ್ಧವಾದಂಥ ಚೈತ್ಯರೂಪವು ಆವೃತವಾಗುತ್ತದೆ. ಸಮ್ಯಕ್ ಚಾರಿತ್ರ್ಯದ ಅನುಸಂಧಾನದಿಂದ ಜೀವಕ್ಕೆ ಅಂಟಿರುವ ಆವರಣವು ಕಳಚಿಬೀಳುತ್ತದೆ, ಆಗ ಜೀವನು ಮತ್ತೆ ಶುದ್ಧ ಸ್ವರೂಪವನ್ನು ಪುನಃ ಹೊಂದಬಹುದು. ಆಗ ಅವನು ಕೈವಲ್ಯ ಮತ್ತು ಸರ್ವಜ್ಞತ್ವ ಪಡೆಯಬಹುದು - ಸ್ಥೂಲವಾಗಿ ಇದು ಜೈನರ ಜ್ಞಾನಮೀಮಾಂಸೆ.

ಜ್ಞಾನದರ್ಶನದ ಮತ್ತೊಂದು ಪ್ರಮುಖ ಆಯಾಮ ಸ್ಯಾದ್ವಾದ. ಯಾವುದೇ ಚಿಂತನೆ ನಡೆಸುವ ಮೊದಲಯ ಜೈನದಾರ್ಶನಿಕರು ಆ ಚರ್ಚಿತ ವಿಷಯವನ್ನು ಸೀಮಿತ-ಸಾಪೇಕ್ಷಗೊಳಿಸುವುದಕ್ಕೆ ಸ್ಯಾದ್ವಾದದ ಪರಿಕಲ್ಪನೆಯನ್ನು ಬಳಸಿಕೊಂಡಿದ್ದಾರೆ. 'ಸ್ಯಾತ್' ಎಂದರೆ ಇರಬಹುದು. ಅಂದರೆ 'ಯಾವುದೇ ಒಂದು ವಿಧದಲ್ಲಿ, ಒಂದು



ವಸ್ತು ವಿಷಯವನ್ನು ಸದ್ಯದಲ್ಲಿ ಪರಾಮರ್ಶಿಸುವುದು, ಅನುಭವಕ್ಕೆ ತಂದುಕೊಳ್ಳುವುದು - ಜೈನದೃಷ್ಟಿ. ಅಲ್ಲಿ ಅನುಭವವಾಗುತ್ತದೆ. ಆದರೆ ಅವರೇ ಹೇಳುವಂತೆ ಅದು ಆ ಸತ್, ಎಂಬುದು ತ್ರಿಕಾಲ ಸತ್ಯವಲ್ಲ. ಆದರೆ ಜೈನರು ಪ್ರತಿಪಾದಿಸುವ ಸತ್ಯ ಸಾಪೇಕ್ಷವಾಗಿರುವ ಸತ್ಯವಾಗಿರುತ್ತದೆ.

ವಿ.ಸೀ. ಅವರು ಒಟ್ಟು ಚಿಂತನೆಯ ಭಂಗಿಯನ್ನು ಸ್ಯಾದ್ವಾದಿ ಜೈನದರ್ಶನಕ್ಕೆ ಸಮೀಪದ್ದು ಎಂದು ಪರಿಗಣಿಸಬಹುದು. ಅವರೇ ಅದನ್ನು ಒಂದು ಕಡೆ ಪರೋಕ್ಷವೆನಿಸುವಂತೆ ಒಪ್ಪಿಕೊಂಡಿದ್ದಾರೆ. "..ಜೈನರ ಮೂರು ರತ್ನಗಳೆಂದು ವಿಂಗಡಣೆಯಲ್ಲಿ ಬರುವ ಸಮ್ಯಕ್ ದರ್ಶನ, ಸಮ್ಯಕ್ ಜ್ಞಾನ, ಸಮ್ಯಕ್ ಚಾರಿತ್ರ ಎಂಬವು ಈ ಪ್ರಸಂಗದಲ್ಲಿ ನೆರವಾಗುವ ವರ್ಗೀಕರಣ; ಬೆಳಕು ಹಾಯಿಸುವಂಥದ್ದು. ಯಾವುದೋ ನಂಬಿಕೆ ಹುಟ್ಟಿಕೊಂಡು ಈವರೆಗೂ ನಡೆಸಿದ ಬದುಕು ಸರಿಯಾಗಲಿಲ್ಲ; ಬೇರೆಡೆ ತಿರುಗಬೇಕು, ಇಂಥದ್ದಕ್ಕೆ - ಅಹಿಂಸೆಗೋ, ಪ್ರೀತಿಗೋ, ಮೈತ್ರಿಗೋ, ದಯಕ್ಕೋ, ಸಾಭ್ರಾತ್ರಕ್ಕೋ ತನ್ನನ್ನು ಮುಡಿಪು ರೂಡಿಕೊಂಡ ಹೊರತು ಬದುಕು ನೆಟ್ಟಗಾಗದು ಎಂಬ ವಿಶ್ವಾಸ ಹುಟ್ಟಬೇಕು." (ಪುಟ 37).

ವಿ.ಸೀ. ಅವರು ಡಿ.ವಿ.ಜಿ., ಮೊದಲಾದ ನವೋದಯದವರೊಡನೆ ಒಡನಾಟ, ಆತ್ಮೀಯತೆ ಹೊಂದಿದ್ದರೂ ಅವರ ದರ್ಶನ ಪ್ರತಿಪಾದನೆ ಈ ಹಿರಿಯರಂತೆ ಆದರ್ಶ ದಾರ್ಶನಿಕ ನೆಲೆಯ ಅದ್ವೈತ ದರ್ಶನವಲ್ಲ ಎಂಬುದು ಗಮನಿಸಬೇಕಾದ ಅಂಶ. ಬ್ರಹ್ಮ, ಧರ್ಮ, ಕರ್ಮ, ರಸದ ನೆಲೆಯ ಬಗ್ಗೆ ಅವರಿಗೆ ಅಪಾರ ಆಕರ್ಷಣೆಯಿದೆ (ಈ ಅಂಶಗಳನ್ನು ಡಾ. ಬಿ. ರಾಘವನ್ ಪ್ರಸ್ತಾಪಿಸುತ್ತಾರೆ.) ಆದರೆ ಅದಕ್ಕಿಂತ ಅವರಿಗೆನೀತಿ-ಮೌಲಲ್ಯಾಧಿಕಾರ-ಹಿಂಸೆ, ಅಹಿಂಸೆ ಇವುಗಳ ನೆಲೆಗಟ್ಟು ಪ್ರಮುಖವೆನಿಸುತ್ತದೆ. ಈ ನಿಟ್ಟಿನಲ್ಲಿ ವಿ.ಸೀ. ಅವರ 'ಎಥಿಕ್ಸ್' ಕೇಂದ್ರಿತ ಧೋರಣೆ, ನಂಬಿಕೆಗಳು ಶಿವರಾಮ ಕಾರಂತ, ಶ್ರೀರಾಗರಿಗೆ ಹೆಚ್ಚು ಸಮೀಪದವು; ಸ್ವಲ್ಪ ಮಟ್ಟಿಗೆ ಶಂಬಾ ಜೋಶಿಯವರ ವಿಚಾರ ಸರಣಿಗೆ ಹತ್ತಿರದ್ದು. ಅವರದ್ದು Trust, test, tell ಎಂಬುದಕ್ಕಿಂತ test, trust, communicate - ಎಂಬ ದಾರಿ ಎಂದು ತೋರುತ್ತದೆ. ಈ ಅರ್ಥದಲ್ಲಿ ಅವರು ಬುದ್ಧಿ ಪ್ರಧಾನ ವೈಚಾರಿಕರೇ ಹೊರತು ಬೇರೊಂದು ಅಲ್ಲ. ಹಾಗಾಗಿ ಅವರ ಬರಹದಲ್ಲಿ ಸಮಕಾಲೀನರಲ್ಲಿ ಕಾಣದ (ಹೆಚ್ಚಾಗಿ) ಒಗರು, ಸಂದೇಹಗಳು ಹೆಚ್ಚು.

ನಾಡಿನ ಬದುಕು ರಾಜತ್ವದಿಂದ ಪ್ರಜಾಪ್ರಭುತ್ವಕ್ಕೆ, ಧರ್ಮಕೇಂದ್ರಿತ ಯುಗಗಳಿಂದ ಮಾನವ ಕೇಂದ್ರಿತ ಯುಗಕ್ಕೆ ಹೊರಳುವ ಸಮಯದಲ್ಲಿ ಬದುಕನ್ನು, ಲೋಕ ಜೀವನವನ್ನು ಎಲ್ಲ ದೃಷ್ಟಿಯಿಂದಲೂ ಐಹಿಕ ಮತ್ತು ಪಾರಮಾರ್ಥಿಕ) ಒಪ್ಪಿಕೊಂಡು ಬರೆದ ಬರೆಹಗಳೆಂದರೆ ವಿ.ಸೀ. ಅವರ ಬರೆಹಗಳು. ಕರ್ನಾಟಕದಲ್ಲಿ ಮತ, ಧರ್ಮದಿಂದ

ದೂರಲಾಗಿರುವ ಆರತ್ವ 'ದೂರ' ಕಾಪಾಡಿಕೊಂಡಿರುವ, ಪಾಶ್ಚಾತ್ಯ ಅರ್ಥದಲ್ಲಿ ಸೆಕ್ಯುಲರ್ ಎನ್ನಬಹುದಾದ ಧೋರಣೆ ವಿ.ಸೀ. ಅವರಲ್ಲಿ ಹೆಚ್ಚು. ಅದು ಈ ಸಂಪುಟದಲ್ಲೂ ಇದೆ. ಹಾಗಾಗಿ ಅವರು ಲೇಖನ ಬರೆಯಲಿ, ಕವಿತೆ ಬರೆಯಲಿ ಅಲ್ಲಿ ನಡೆಯುವುದು ಇಷ್ಟು. ಅವರ ವೈಚಾರಿಕ ಪ್ರಪಂಚಕ್ಕೆ ಪ್ರಾಚೀನ ಪ್ರಪಂಚ, ಆಧುನಿಕ ಜೀವನಗಳ ಭಾವಗಳು ಹೊಂದಿಕೊಳ್ಳುತ್ತವೆಯೇ ಹೊರತು ಆ ಪ್ರಪಂಚದ ವಿವಿಧ ಸ್ತರಹಗಳಿಗೆ ವಿ.ಸೀ. ಅವರು ಬೆಳೆಸಿಕೊಂಡಿರುವ ದೃಷ್ಟಿಯು ವಿಸ್ತರಿಸುವುದಿಲ್ಲ.

ಇಲ್ಲಿನ ಲೇಖನಗಳಲ್ಲಿ ಕಾಣುವ ಇನ್ನೊಂದು ಅಂಶವೆಂದರೆ ವಿ.ಸೀ. ಅವರು ಪ್ರಾಚೀನ ಸಂಸ್ಥೆಗಳಾದ ಧರ್ಮಶಾಸ್ತ್ರ, ಸ್ಮೃತಿ, ಆಶ್ರಮ ಧರ್ಮ, ವರ್ಣಧರ್ಮಗಳು ನಿಂತು, ಕ್ರಮೇಣ ಕಣ್ಮರೆಯಾಗಿ ಆ ಜಾಗದಲ್ಲಿ ಶಾಸನ ಮಂಡಳಗಳು, ಸಂವಿಧಾನ, ನ್ಯಾಯಾಲಯ, ಗಂಡು ಹೆಣ್ಣಿನ ಉದ್ಯೋಗದ ಪ್ರಶ್ನೆ, ಗಂಡು ಹೆಣ್ಣುಗಳು ಹೊಸ ಬಗೆಯಲ್ಲಿ ಅನುಭವಿಸುವ ವಿವಿಧ ಸ್ವಾತಂತ್ರ್ಯಗಳನ್ನು ಗುರುತಿಸುವುದು. ಸುಸ್ಥಿತ ಕಾನೂನು ಮತ್ತು ಮೊರಾಲಿಟಿಯ ಮೇಲೆ ಅವರ ಬಹುಪಾಲು ವಿಚಾರಸೌಧ ನಿಂತಿದೆ.

ಈ ಅಂಶಗಳು ಅವರ ಶಿಷ್ಯರಾಗಿದ್ದ ಕವಿ ಕೆ. ಎಸ್. ನರಸಿಂಹಸ್ವಾಮಿಯವರಲ್ಲಿ ನೀರಷ್ಟು ಬಂದಿದೆ. ಅದರ ವಿಸ್ತೃತ ಅಧ್ಯಯನ ಇನ್ನೂ ಆಗಬೇಕಿದೆ.

ಅಂದಿರೆ ನಮ್ಮಲ್ಲಿ ಅನೇಕ ನವೋದಯಗಳನೆ ಅಥವಾ ನವೋದಯದ ಒಳಗೆ ಭಿನ್ನ ಧಾರೆಗಳನ್ನು ಸೌಜನ್ಯದಿಂದ ನಂಬಿಕೊಂಡು ಬರೆಹ-ಬದುಕನ್ನು ಒಂದಾಗಿಸಿ ಕೊಂಡಂಥ ಸಾಹಿತಿಗಳಿದ್ದಾರೆ. ಯೋಗ, ಕೃಪೆ, ಅನುಗ್ರಹವನ್ನು ಒಪ್ಪುವ ಬೇಂದ್ರೆ ಇದ್ದಾರೆ; ಕರ್ಮ, ವಿಧಿಯನ್ನು ಒಪ್ಪಿದರೂ ಸ್ಮೃತಿ ಪ್ರಮಾಣ ಪ್ರಶ್ನಿಸಿ ನಿರಾಕರಿಸುವ, ಋತನನ್ನು ಸಂಪೂರ್ಣ ಒಪ್ಪುವ, ಅದೇ ವೇಳೆ ವರ್ಣ ಮತ್ತು ಆಶ್ರಮಗಳನ್ನು ಸಂಪೂರ್ಣ ತಿರಸ್ಕರಿಸುವ ಕುವೆಂಪು ಇದ್ದಾರೆ; ಮನುಷ್ಯನ ಬದುಕಿನ ಮೇಲೆ ನಿಯಂತ್ರಣಕ್ಕೆ ಸಿಗದ ನಿಸರ್ಗ ಮತ್ತು ತತ್ವ ಮತ್ತು ಮಾನವರು ಬೆಳೆಸಿಕೊಂಡಿರುವ ಮಾನಸಿಕ ವಿಚಾರ ಲೋಕ ಬಿಟ್ಟರೆ ಬೇರೆ ಏನನ್ನೂ ನಂಬದ ಕಾರಂತರಿದ್ದಾರೆ; ಸಾಂಪ್ರದಾಯಿಕ ಚಿಂತನೆಗೆ ಆಧುನಿಕ ಅಭಿವ್ಯಕ್ತಿ ನೀಡುವ ಡಿ.ವಿ.ಜಿ. ಮತ್ತು ದೇವುಡು ಅವರಿದ್ದಾರೆ. ನವೋದಯ ಸಾಹಿತ್ಯ ಪ್ರಪಂಚದಲ್ಲಿ ಬಹುತೇಕರು ಬ್ರಾಹ್ಮಣ ಪಂಗಡದ ಲೇಖಕರಿದ್ದರೂ ಅವರಿಲ್ಲ ಬಹು ಮುಖತೆ ಇದೆ, ಬಹುತ್ವದ ಗುಣವಿದೆ. ಭಿನ್ನತೆಗಳೂ ಸಾಕಷ್ಟಿವೆ.

* * *

ವಿ.ಸೀ. ಅವರ ಅಂಕಣ ಬರಹಗಳ ವ್ಯಾಪ್ತಿ ದೊಡ್ಡದು, ಅವರು ಎತ್ತಿರುವ ಪ್ರಸಂಗ ಪ್ರಶ್ನೆಗಳೂ ಸೂಕ್ಷ್ಮವಾದವು. ಸಹಜವಾಗಿಯೇ ವಿ.ಸೀ. ಅವರ ರಾಜಕೀಯ ಚಿಂತನಗಳು ಬಂದು ಸ್ವತಂತ್ರ ಪಿ.ಎಚ್.ಡಿ. ಗೆ ವಸ್ತು. ಎರಡನೇ ಮಹಾಯುದ್ಧದ



ನಂತರ ವಿಶ್ವದಲ್ಲಿ ಉಂಟಾದ ರಾಜಕೀಯ ಆರ್ಥಿಕ ಸ್ಥಿತ್ಯಂತರಗಳ ಅರಿವಿನ ಕಥನ ಅವರ ಈ ಬರೆಹಗಳು. ವಿಶ್ವದಲ್ಲಿ ಉಂಟಾದ ಬಂಡವಾಳಶಾಹಿ ಬಣ ಮತ್ತು ಕಮ್ಯುನಿಸ್ಟ್ ಬಣಗಳಿಂದ ಒಂದು ಟೆನ್ಶನ್ ಉಂಟಾಯಿತು. ಅನೇಕ ತೃತೀಯ ಜಗತ್ತಿನ ರಾಷ್ಟ್ರಗಳು ಈ ಬಣಗಳಲ್ಲಿ ಒಂದಿಲ್ಲೊಂದು ಕಡೆ ನಿಷ್ಠೆ ಅಥವಾ ವಾಲುವಿಕೆ ತೋರಿಸಬೇಕಾಗಿ ಬಂತು. ಆಗ ಬದಲಾದ ರಾಷ್ಟ್ರಗಳ, ಬದಲಾದ ಸನ್ನಿವೇಶದ ಕರ್ಮಕತೆಗಳನ್ನು ವಿ.ಸೀ. ನಿರೂಪಿಸಿದ್ದಾರೆ. ಶೈಕ್ಷಣಿಕ ತಜ್ಞನಂತೆ, ಸಾವಧಾನವಾಗಿ ತರಗತಿಯಲ್ಲಿ ವಿದ್ಯಾರ್ಥಿಗಳಿಗೆ ಪಾಠ ಮಾಡುವವರಂತೆ ವಿ.ಸೀ. ರಾಜಕೀಯ ವಿಷಯಗಳ ಪೂರ್ಣ ಪರಗಳನ್ನು ಬಿಚ್ಚಿಡುತ್ತಾರೆ. ತಮ್ಮ ಅಭಿಪ್ರಾಯ ಮಂಡನೆ ಅವರಿಗೆ ಇಲ್ಲಿ ಪ್ರಧಾನವಾಗುವುದಿಲ್ಲ. ಬದಲಿಗೆ ವಿಷಯದ ವಿಶ್ಲೇಷಣೆಗೆ ಮಹತ್ವ ನೀಡುತ್ತಾರೆ. ಇದು ಉದ್ದಕ್ಕೂ ಅವರ ರಾಜಕೀಯ ಬರಹಗಳ ಲಕ್ಷಣವೇ ಆಗಿದೆ. ಡಿ.ವಿ.ಜಿ.ಯವರ ರಾಜ್ಯಶಾಸ್ತ್ರ ರಾಜಕೀಯದ ಮೀಮಾಂಸೆಯ ಗ್ರಂಥವಾಗಿದೆ, ವಿ.ಸೀ.ಅವರ ಈ ಬಗೆಯ ಲೇಖನಗಳು ರಾಜಕೀಯ ತತ್ವಗಳ ಅನ್ವಯಿಸ ವಿಮರ್ಶೆಯಾಗಿದೆ. ಇವೆರಡೂ ಬಗೆಯ ಮಾನವಿಕ ಸಾಹಿತ್ಯ ಮತ್ತು ಇದೆರೊಂದಿಗೆ ಮಾಸ್ತಿಯವರು ಬರೆದಿರುವ ಐದು ಸಂಪುಟಗಳ 'ಜೀವನ' ಪತ್ರಿಕೆಯ ಸಂಪಾದಕೀಯ ಲೇಖನಗಳನ್ನು ಕಣ್ಮುಂದೆ ತಂದುಕೊಂಡರೆ, 1950 ರಿಂದ 1980ರ ಸುಮಾರಿನ ದೇಶ- ವಿದೇಶಗಳ ರಾಜಕೀಯ, ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ವಿದ್ಯಮಾನಗಳಿಗೆ ಈ ಮೂವರು ಹಿರಿಯರು ಸ್ಪಂದಿಸಿದ ರೀತಯ ಚಿತ್ರಣ ಹೊರಡುತ್ತದೆ. ಕನ್ನಡದ ಪ್ರಮುಖ ಸಾಹಿತಿಗಳು ಎಂದೂ 'ಶುದ್ಧ' ಸಾಹಿತಿಗಳಾಗಿರಲಿಲ್ಲ.

ಅವರಿಗೆ ಈಗ ದಲಿತವಾದ, ಸಮಾಜವಾದ, ಹಿಂದುತ್ವ ವಾದದವರಿಗೆ ಇರುವಂತೆ ಇಷ್ಟಾನಿಷ್ಟ, ಒಲವೂಸಮಾಧಾನಗಳು ಆ ಕಾಲದ ವಿದ್ಯಮಾನಗಳ ಬಗ್ಗೆ ಇದ್ದವು ಎಂಬುದನ್ನು ಕುರಿತು ಮರುಚಿಂತನೆ ಮಾಡಬೇಕಿದೆ. 1950ಕ್ಕಿಂತ ಮೊದಲು ಸಾಹಿತ್ಯ ರಚನೆ ಮಾಡಿದವರನ್ನು ಅಡಿಗರ ಮಾತನ್ನು ಬಳಸಿ ಹೇಳುವುದಾದರೆ 'ವೇದಾಂತದ ಮಂಜಿನಲ್ಲಿ' ಕಳೆದು ಹೋದವರು ಎಂದು ಸಾರಾಸಗಟಾಗಿ ವರ್ಗೀಕರಿಸುವುದು ಸಾಧ್ಯವಿಲ್ಲ. ಈಗಾಗಲೇ ಡಿ.ವಿ.ಜೀ., ವಿ.ಸೀ., ಮಾಸ್ತೀ, ಕುವೆಂಪು, ಬೇಂದ್ರೆ, ಬಿ.ಎಂ.ಶ್ರೀ, ಕೆ.ಎಸ್.ನ., ಪು.ತಿ.ನ., ಆಲೂರು ವೆಂಕಟರಾವ್, ಪಂ. ತಾರಾನಾಥ ಮುಂತಾದವರ ಬಹುತೇಕ ಸಮಗ್ರ ಸಾಹಿತ್ಯ ಕಣ್ಮುಂದೆ ಇದೆ. ಈ ಕಾರಣದಿಂದ ಅವರ ಸಾಹಿತ್ಯಕ ಮತ್ತು ಸಾಹಿತ್ಯೇತರ ಅಧ್ಯಯನ ನಡೆಸಿ, ಆ ಮೂಲಕ ನವೋದಯ ಯುಗದ ಮರು ಮೌಲ್ಯ ರೂಪನ ನಡೆಯಬೇಕಿದೆ. ನವೋದಯದ ಖಂಡ ಖಂಡ ಚಿತ್ರಣವೇನೋ ನಮ್ಮ ಮುಂದಿದೆ, ಆದರೆ ಭಾರತ, ಕನ್ನಡ ನಾಡು ಮತ್ತು ಅಂದಿನ ವಿಶ್ವ ಎಂಬ ಪಟ್ಟಕದ ಮೂಲಕ ಈಗ ಲಭ್ಯವಿರುವ ಅರಿವಿನ ಬೆಳಕನ್ನು ಹಾಯಿಸಬೇಕಾಗಿದೆ. ಅದರಿಂದ ಹೊಸದಾಗಿ ಲಭಿಸುವ ವರ್ಣ ವೈವಿಧ್ಯಗಳನ್ನು, ಏರು-ತಗ್ಗುಗಳನ್ನು ಮರು

ಪರಿಶೀಲಿಸಬೇಕಾಗಿದೆ. ಕನ್ನಡಿಗರ ಬೌದ್ಧಿಕತೆಯ ಕಥನವನ್ನು ನಿರ್ಮಿಸುವುದು ಇಂದಿನ ಅವಶ್ಯಕತೆ ಮತ್ತು ಅನಿವಾರ್ಯತೆ ಕೂಡ.

ಸಾಹಿತ್ಯದಂತೆ ಜೀವನದಲ್ಲಿ ಶುಚಿಯ ಪರಿಕಲ್ಪನೆಯನ್ನು ಉದ್ದಕ್ಕೂ ಪ್ರತಿಪಾದಿಸಿದ ವಿ.ಸೀ. ಅವರು ಶುದ್ಧ ಸಾಹಿತಿಯಾಗಿದ್ದರೂ, ಆದರೆ ರಾಜಕೀಯ ಅಭಿಪ್ರಾಯಗಳನ್ನು ತಮ್ಮೊಳಗೆ ಹರಳು ಗಟ್ಟಿಸಿಕೊಂಡು ಅಭಿವ್ಯಕ್ತಿ ಪಡಿಸಿದ್ದ ವಿಶೇಷ ವ್ಯಕ್ತಿತ್ವವಾಗಿದ್ದರು ಎಂಬುದನ್ನು ಮರೆಯುವಂತಿಲ್ಲ. ಉದಾಹರಣೆಗೆ 1975ರ ಎಮರ್ಜೆನ್ಸಿ, ಇಂದಿರಾ ಗಾಂಧಿ ಹತ್ಯೆ, ಶಾಬಾನೋ ಪ್ರಕರಣ, ಮಂಡಲ್ ಕಮೀಷನ್, ಬಹುಮತವಿರದ ಕೇಂದ್ರ ಸರ್ಕಾರಗಳ ಆಡಳಿತದ ದಶಕಗಳು, ಅಯೋಧ್ಯಾ ಪ್ರಕರಣ, ಭಾರತದ ಅಣ್ವಸ್ತ್ರ ಪರೀಕ್ಷೆ, ಚಂದ್ರಯಾನ, ಮಂಗಳಯಾನ, ಪರ್ವಕ್ಕೆ ಕಾಂಗ್ರೆಸ್‌ಗೆ ಪರ್ಯಾಯವಾಗಿ ಬಿಜೆಪಿ ಮತ್ತು ಆಮ್ ಆದ್ಮಿ ಪಾರ್ಟಿಗಳು ಬಲವಾಗಿ ತಲೆ ಎತ್ತಿರುವುದು, 21ನೇ ಶತಮಾನದ ಅಭಿವೃದ್ಧಿ ಮೀಮಾಂಸೆ, ಜಿಹಾದಿ ಬಣಗಳ ಅಟ್ಟಹಾಸ, ಅಭಿವ್ಯಕ್ತಿ ಸ್ವಾತಂತ್ರ್ಯದ ಪ್ರಶ್ನೆ, ಮಹಿಳೆ ಮತ್ತು ಮಕ್ಕಳ ಹಕ್ಕುಗಳು - ಇವುಗಳ ಹಿನ್ನೆಲೆಯಲ್ಲಿ ವಿ.ಸೀ. ಅವರು ಪ್ರತಿಪಾದಿಸಿದ ತಾತ್ವಿಕತೆಯನ್ನು ನೋಡಬಹುದು. ಈ ಪ್ರಯತ್ನ ಸ್ಥೂಲ ಚಿತ್ರಗಳನ್ನು ಮಾತ್ರ ನೀಡುವುದಾದರೂ ಎರಡು ಸಂಗತಿಗಳು ಇದರಿಂದ ಹೊಮ್ಮುತ್ತವೆ :

1) ಧಾರ್ಮಿಕ ಯುಗ ಮುಗಿದು ಮಾನವ ಕೇಂದ್ರಿತ ಯುಗ ಬಂದಾಗ ಇಂಗ್ಲೆಂಡಿನ ಚಿಂತಕರ ಉದಾರವಾದಿ ಪ್ರಜಾಪ್ರಭುತ್ವ ರೂಪದ ಪರವಾದ ಚಿಂತನೆಗಳು ಕನ್ನಡದ ಮೇಲೂ ಪ್ರಭಾವ ಉಂಟುಮಾಡಿದವು. Humanism ಪ್ರಮುಖ ತತ್ವವಾಗಿ ಸಾಹಿತ್ಯ ಮತ್ತು ಇನ್ನಿತರ ವಿಶ್ಲೇಷಣೆಗಳನ್ನು ಪ್ರಭಾವಿಸಿತು. ಅದರಲ್ಲಿ ಪ್ರಮುಖವಾಗಿರುವ ಲೇಖಕರು ಪ್ರೊ. ವಿ. ಸೀತಾರಾಮಯ್ಯ.

2) ಈಗ ಆಧುನಿಕೋತ್ತರ ಮತ್ತು ..... ಘಟ್ಟದಲ್ಲಿ, ಹಿಂದೆಯು ಜಾಗತೀಕರಣ ಗೊಂಡಿರುವ ಕಾಲದಲ್ಲಿ ಎಷ್ಟೇ ಉತ್ತಮಾಂಶಗಳಿದ್ದರೂ ಕೇವಲ ಮಾನವ ಪ್ರೇಮ, ಮಾನವ ಪರ ಕಾಳಜಿಯಂಥ ವಿಚಾರಗಳು ಸಾಲದೇನೂ. ಕೋಮುವಾದ ಮತ್ತು ಜಿಹಾದಿ ಕಾರ್ಯಾಚರಣೆಗಳು ದೊಡ್ಡ ಪ್ರಮಾಣದಲ್ಲಿ ತಲೆ ಎತ್ತಿರುವಾಗ ವಸಹಾತು ಶಾಹಿ ಯುಗದಲ್ಲಿ ಸೃಷ್ಟಿಯಾದ ಎಲ್ಲ ಬಗೆಯ ಸಂಸ್ಥೆ, ಆಕೃತಿಗಳನ್ನೂ ಮತ್ತೊಮ್ಮೆ ವಿಚಾರದಬೊರೆಗಲ್ಲಿಗೆ ಹಚ್ಚಬೇಕೆನಿಸುತ್ತದೆ. ಈ ಬರೆಗಲ್ಲು ಒಂದೊ, ಎರಡೊ ಅಥವಾ ಅದಕ್ಕಿಂತ ಹೆಚ್ಚೋ ಇರಬಹುದು.

ಈಗ ಸಾಹಿತ್ಯದ ಅಧ್ಯಯನದಲ್ಲಿ 'ಕಲ್ಚರಲ್ ಸ್ಟಡೀಸ್' ಪ್ರಚಲಿತವಿದೆ. ಅದರಲ್ಲಿ ಒಬ್ಬ ಬುದ್ಧಿಜೀವಿ (intellectual) ಹೇಗಿರುತ್ತಾನೆ ಎಂಬ ಕಲ್ಪನೆಯನ್ನು ಆಂಟೋನಿಯೊ ಗ್ರಾಮ್ಷಿ (Antonio Gramsci) ನೀಡುತ್ತಾನೆ. ಅದರ ಪ್ರಕಾರ - Intellectuals also



play a key role in Gransci's ideas. The common notion of intellectuals is that of a small elite group of highly intelligent, morally endowed, independent men (always) who constitute the conscience of mankind[1] ಈ ಬಗೆಯ ವ್ಯಾಖ್ಯಾನಗಳು ಜನಿಸುವ ಮೊದಲೇ ವಿ.ಸೀ. ಅವರು ಬೌದ್ಧಿಕ ಕ್ಷೇತ್ರದಲ್ಲಿ ತನ್ಮಯರಾಗಿದ್ದರು.

ಇಲ್ಲಿರುವ ಅಂಕಣ ಬರಹಗಳಲ್ಲಿ ವಿ.ಸೀ. ಅವರು ಕಾಂಗ್ರೆಸ್, ಕೇರಳದ ಚುನಾವಣೆಗಳು, ನಾನಾವತಿ ವ್ಯವಹಾರ, ನಿರುದ್ಯೋಗದ ಸಮಸ್ಯೆಗಳ ಬಗ್ಗೆ ಬರೆದಿದ್ದಾರೆ. ಅದೇ ರೀತಿ ಹಿಂದಿ ಹೇರಿಕೆ, ವಿಶ್ವವಿದ್ಯಾಲಯಗಳು, ಪತ್ರಿಕೋದ್ಯಮ, ರಾಜ್ಯೋತ್ಸವ, ಆಕಾಶವಾಣಿ, ಪೊಲೀಸ್ ದಳ ಕುರಿತು ಚಿಂತಿಸಿದ್ದಾರೆ. ಆರ್ಥಿಕ ವಿಷಯಗಳಿಗೆ ಬಂದರೆ ವರಮಾನ-ಧಾರವಾಸಿ, ಸಂಪ್ಲಗಳು, ಹಣ-ನಾಣ್ಯಗಳು, ಸಮಾಜದಲ್ಲಿ ವ್ಯಾಪಾರಸ್ಥರ ಸ್ಥಾನ, ಯೋಜನೆ-ರಕ್ಷಣೆಗೆ ಹಣದ ಪೂರೈಕೆ, ಅನಾಣ್ಯೀಕರಣ ಕುರಿತು ಚರ್ಚಿಸಿದ್ದಾರೆ. ಅಂದರೆ ಒಬ್ಬ ಸಾರ್ವಜನಿಕ ಬುದ್ಧಿಜೀವಿಗೆ ಇರಬೇಕಾದ ಸಮಾಜಹಿತ ಕುರಿತ ನಿಷ್ಠೆ, ಧೀಮಂತಿಕೆ ಮತ್ತು ನಿಷ್ಪಕ್ಷಪಾತವಾಗಿ ವಿಮರ್ಶಿಸುವ ಸುಧಾ ಅವರಲ್ಲಿ ಸಮೃದ್ಧವಾಗಿದೆ. ವಿ.ಸೀ. ಅವರು ಅಂದು ಎತ್ತಿರುವ ಕೆಲವು ಸಮಸ್ಯೆಗಳು ಈಗ ಬದಲಾಗಿವೆ ಅಥವಾ ಇಲ್ಲವಾಗಿವೆ. ಉದಾ: ಒಂದು ಲೇಖನದಲ್ಲಿ ಅವರು ಜರ್ಮನ್ ಸಮಸ್ಯೆ ಗುರುತಿಸುತ್ತಾರೆ. (ಪು 59). ಈಗ ಜರ್ಮನಿಯ ವಿದ್ಯಾಮಾನಗಳನ್ನು ಗಮನಿಸಿ ವಿಶ್ಲೇಷಿಸಿರುವುದು ಇಂದಿಗೂ ಆದರ್ಶವೆನಿಸುತ್ತದೆ. ಈಗಿನ ಕನ್ನಡ ಪತ್ರಿಕೋದ್ಯಮದಲ್ಲಿ ಅಂತರರಾಷ್ಟ್ರೀಯ ವಿದ್ಯಮಾನಗಳ ಆಗು ಹೋಗುಗಳನ್ನು ವಿಶದವಾಗಿ ಚರ್ಚಿಸಬಲ್ಲ ಪತ್ರಕರ್ತರ ಸಂಖ್ಯೆ ತೀರಾ ಕಮ್ಮಿ. ಈ ನಿಟ್ಟಿನಲ್ಲಿ ಪತ್ರಿಕೋದ್ಯಮ ಮತ್ತು ಸಂವಹನ, ಮಾಧ್ಯಮಗಳಲ್ಲಿ ತೊಡಗಿಸಿಕೊಂಡಿರುವವರು ಕುತೂಹಲದಿಂದ ಈ ಸಂಕೀರ್ಣ ಸಂಪುಟವನ್ನು ಗಮನಿಸಿದರೆ, ಅವರಿಗೇ ಸಾಕಷ್ಟು ಲಾಭವಿದೆ. ಅದೇ ಲೇಖನದಲ್ಲಿ ವಿ.ಸೀ. ಅವರು ಪೋರ್ಚುಗೀಸರು ಗೋವಾದಿಂದ ಹೊರಗೆ ಹೋಗುವ ವಿಷಯ ಪ್ರಸ್ತಾಪಿಸಿದ್ದಾರೆ. 1959ರಲ್ಲಿ ಬರೆದ ಲೇಖನದಲ್ಲಿ ಅವರು 10 ವರ್ಷಗಳಲ್ಲಿ ಗೋವಾ ಬಿಡುವ ಮಾತನ್ನು ಉಲ್ಲೇಖಿಸಿ, ಏನಾಗುವರೋ ಎಂದಿದ್ದಾರೆ.

ಆದರೆ ವಿ.ಸೀ. ಅವರ ನಿರೀಕ್ಷೆ ಅವರ ನಿರೀಕ್ಷೆ ಮೀರಿ 1961ರ ಡಿಸೆಂಬರ್ 19ರಂದು ಗೋವಾ ಅಧಿಕೃತವಾಗಿ ಭಾರತಕ್ಕೆ ಸೇರಿಕೊಂಡಿತು. ಅದಾದ ಎರಡು ವರ್ಷಗಳ ನಂತರ ಅಲ್ಲಿ ಮೊದಲ ಚುನಾವಣೆ ನಡೆಯಿತು. ಇಲ್ಲಿ ವಿ.ಸೀ. ಅವರಲ್ಲಿ ಗಮನಿಸಬೇಕಾದ್ದು ಅವರ ಸಜಾಗರತೆ.

---

1. Introducing cultural studies a Graphic guide : Ziauddin Sardar & Borin Van Loon, (2013), P.51

ಪ್ರಜಾಪ್ರಭುತ್ವದಲ್ಲಿ ಎಷ್ಟೋಸಲ ಭ್ರಷ್ಟ ಆಡಳಿತ, ನಿಧಾನಗತಿ ನೋಡಿದಾಗ ಬಲಿಷ್ಠವಾದ ಸರ್ಕಾರ ಇರಬೇಕು ಅನಿಸುವುದು ಸಹಜ. ಅದರೊಂದಿಗೆ ಸರ್ಕಾರ 'ಜಬರ್‌ದಸ್ತ್' ಆಗಿರಬೇಕು ಎಂದೂ ಭಾವವನೆ ಉಂಟಾಗಬಹುದು. "ಇನ್ನೂ ಜನ ಸರ್ಕಾರವೆಂದರೆ ಜಬರದಸ್ತಿನಿಂದ ಕೆಲಸ ಮಾಡುವ ಅಧಿಕಾರ ವರ್ಗವೆಂದೇ ಅರಿತಿದೆ. ಜರ್ಬಿನಿಂದ ನಡೆದರೇ ಅದಕ್ಕೆ ತೃಪ್ತಿ, ಚುರುಕು ಕಂಡಾವು."-ಎಂಬ ಜನರ ಭಾವನೆಗಳನ್ನು ವಿ.ಸೀ. ಸೆರೆಹಿಡಿದಿದ್ದಾರೆ. ಅವರು ಬರೆದದ್ದು ಪ್ರಜಾಪ್ರಭುತ್ವ ಜಾರಿಯಾದ ಆರಂಭದ ವರ್ಷಗಳಲ್ಲಿ. ಆದರೆ ಆರು ದಶಕಗಳ ಪ್ರಜಾರಾಜ್ಯದ ನಂತರವೂ ಕಳೆದ ವರ್ಷ (2014) ಲೋಕಸಭೆಗೆ ನಡೆದ ಚುನಾವಣೆ ಸಮಯದಲ್ಲಿ 'ಶಕ್ತಿಶಾಲಿ' ಸರ್ಕಾರ 'ಪ್ರಬಲ ಕೇಂದ್ರ ಸರ್ಕಾರ' ಬೇಕು ಎಂಬ ಭಾವನೆ ತೀವ್ರವಾಗಿದ್ದುದು ಪ್ರಜಾಪ್ರಭುತ್ವಕ್ಕೆ ಪೂರಕವೆ? - ಚಿಂತಿಸಬೇಕು.

ವಿ.ಸೀ. ಅವರೇ ಸ್ವತಃ ಪ್ರಾಧ್ಯಾಪಕರಾಗಿದ್ದವರು, ಶಿಕ್ಷಣ ವ್ಯವಸ್ಥೆ ಹೊಸದಾಗಿ ರೂಪಗೊಂಡ ಬಗೆಯನ್ನು ಹತ್ತಿರದಿಂದ ಕಂಡಿದ್ದರು. ಶಿಕ್ಷಣದಲ್ಲಿ , ಅದರಲ್ಲೂ ಯೂನಿವರ್ಸಿಟಿ ಶಿಕ್ಷಣದಲ್ಲಿ ವಿದ್ಯೆ ಹಿಂದಾಗಿ, ರಾಜಕೀಯ, ಅಧಿಕಾರ ಲಾಲಸೆಗಳು ಮುಂದಾಗಿರುವುದನ್ನು ವಿ.ಸೀ. ಅವರು 'ನಮ್ಮ ವಿಶ್ವವಿದ್ಯಾನಿಲಯದ ಗುರಿ, ಗಮ್ಯಗಳು, ಲೇಖನದಲ್ಲಿ ಗಮಿಸಿದ್ದಾರೆ. ಅವರು ಗಮನಿಸಿರುವ ಮುಖ್ಯಾಂಶಗಳು ಇವು:

- ವಿದ್ಯಾಸಾಧನೆಗಿಂತ ಪರೀಕ್ಷೆಯಲ್ಲಿ ಪಾಸಾಗುವ ಅಭ್ಯಾಸ, ಮೋಹ ಹೆಚ್ಚಿತು.
- ಜ್ಞಾನ ಶಾಸ್ತ್ರಗಳ ಮರ್ಮ, ಮಾರ್ಗ, ಸತ್ವ ಗ್ರಹಿಸುವ, ಅನುಸಂಧಾನ ಮಾಡುವ ಪ್ರವೃತ್ತಿ ಕುಂಠಿತವಾಯಿತು.
- ಬರಿಯ ಮೇಧಾನಿತನಕ್ಕಿಂತ ಬೇರೆ ಬೇರೆ ಜನವರ್ಗಗಳ ಪ್ರಾತಿನಿಧ್ಯಕ್ಕೆ ಪ್ರಾಬಲ್ಯ ಬಂದಿತು.
- ಪರೀಕ್ಷೆಗಳಲ್ಲಿ ಪಕ್ಷಪಾತ, ಸಭಾಸದಸ್ಯರ ಮರ್ಜಿ ಹಿಡಿಯುವುದು.

1947 ರಿಂದ 1942ರ ವರೆಗಿನ ಆಗುಹೋಗುಗಳಲ್ಲಿ ಶಿಕ್ಷಣಕ್ಕೆ ಹೆಚ್ಚಿನ ಪ್ರಾಧಾನ್ಯತೆ ಇದ್ದಿತು. 1942 ರಿಂದ ಮುಂದಕ್ಕೆ ಮೇಲೆ ಹೇಳಿರುವ ಕ್ಷುದ್ರ ಪ್ರವೃತ್ತಿಗಳು ವಿಶ್ವವಿದ್ಯಾನಿಲಯದಲ್ಲಿ ಹೆಚ್ಚಿದವು ಎಂಬುದು ವಿ.ಸೀ. ಅವರ ಪ್ರತಿಪಾದನೆ. ಅವರು ಈಗ (2015) ಇರುವ ಕರ್ನಾಟಕ ರಾಜ್ಯದ ವಿಶ್ವವಿದ್ಯಾನಿಲಯಗಳನ್ನು ನೋಡಿದ್ದರೆ ಎಷ್ಟು ಸಂಕಟ ಪಡುತ್ತಿದ್ದರೋ? 1950ರ ದಶಕದಲ್ಲೇ ವಿ.ವಿ.ಗಳಲ್ಲಿ ಸಂಶೋಧನಾ ಗುಣಮಟ್ಟ ಕುಸಿಯುತ್ತಿದೆ ಎಂದು ಡಿ.ವಿ.ಜಿ.ಯವರು ಆಕ್ಷೇಪ ತೆಗೆದಿದ್ದರು. ಈಗ ದೇಶದಲ್ಲಿ ವಿಶ್ವವಿದ್ಯಾಲಯಗಳೂ, ಕಾಲೇಜುಗಳಿಗೆ ಬರಲಿಲ್ಲ. ವಿದ್ಯಾರ್ಥಿಗಳೂ ಸಾಕಷ್ಟಿದ್ದಾರೆ. ಆದರೆ ಸಂಶೋಧನೆ ಮತ್ತು ಗುಣಮಟ್ಟದ ಬೋಧನೆ ಎರಡೂ ನಿರೀಕ್ಷಿತ ಮಟ್ಟದಲ್ಲಿ ನಡೆಯುತ್ತಿಲ್ಲ. ಈಚೆಗೆ ಒಬ್ಬರು ವಿದ್ವಾಂಸರು ಉದ್ಗಾರ ತೆಗೆದಂತೆ, ಈಚೀಚೆಗೆ ಭಾರತದಲ್ಲಿ ವಿಶ್ವವಿದ್ಯಾಲಯ ಕಟ್ಟುವುದೆಂದರೆ ಕಟ್ಟಡ ನಿರ್ಮಾಣ ಎಂದು ಮಾತ್ರವೇ ಆಗಿದೆ.



ವಿ.ಸೀ. UGC ಅವರು ಕುರಿತು ಉತ್ಸಾಹದ ಮಾತುಗಳನ್ನು ಬರೆದಿದ್ದಾರೆ. ಆದರೆ ಈಗ ಇಂಗ್ಲೆಂಡಿನ ಯುಜಿಸಿಗೆ ಮೂಲವಾದ ಆಕೃತಿಯ ಸಂಸ್ಥೆ ಮುಚ್ಚಿಡಲಾಗಿದೆ. ಭಾರತದಲ್ಲಿ ಯೋಜನಾ ಆಯೋಗವನ್ನು ವಿಸರ್ಜಿಸಿ, 'ನೀತಿ ಆಯೋಗ' ರಚನೆಯಾಗಿದೆ. ಅದೇ ರೀತಿ UGCಯಲ್ಲಿ ಬದಲಾವಣೆಯನ್ನು ತರಬೇಕೆಂಬ ಮಾತು ಕೇಳಿ ಬರುತ್ತಿದೆ. ಅಂದರೆ ಕೆಲವು ವಿಷಯಗಳಲ್ಲಿ ವಿ.ಸೀ. ಅವರು ಯಾವ ಯುಗ ಆರಂಭವಾಗಿದೆ, ಆರಂಭವಾಗುತ್ತಿದೆ ಎಂದು ಅಂದು ಬರೆದಿದ್ದರೋ ಈಗ ಅಮಥವುಗಳ ಪೈಕಿ ಕೆಲವದರ 'ಅವತಾರ' ಪೂರ್ಣಗೊಂಡಿದೆ.

ವಿ.ಸೀ. ಅವರು ಸರ್ಕಾರದ ಯೋಜನೆಗಳನ್ನು ಕುರಿತು ಸಕಾರಾತ್ಮಕವಾಗಿ ಹೀಗೆ ಹೇಳುತ್ತಾರೆ: "ಸರ್ಕಾರ ಹಣವನ್ನು ಪೋಲು ಮಾಡುವುದಿಲ್ಲ, ದಕ್ಷವಾಗಿದೆ; ಆಯಾ ಕಾರ್ಯಗಳಿಗೇ ಹಣ ವಿನಿಯೋಗವಾಗಿ ಕೆಲಸ ನಡೆಯುತ್ತಿದೆ. ಇದರಿಂದ ದೇಶದ ಸ್ವಾಸ್ಥ್ಯ ಸಂರಕ್ಷಣೆ ಆಗುತ್ತದೆ;..." (ಪುಟ:333). ಮೊದಲೇ ತಿಳಿಸಿದಂತೆ ಇಂಥಲ್ಲೆಲ್ಲಾ ವಿ.ಸೀ. ಅವರು ಸರ್ಕಾರದ ಯೋಜನೆಗಳ ಪರವಾಗಿದ್ದಾರೆ. ಆದರೆ ಇದಕ್ಕೆ ವಿರುದ್ಧವಾದ ಚಿಂತನೆ ಅನ್ಯಪಕ್ಷಗಳ ಯೋಜನೆಗಳ ಪರ ಅನ್ಯಪಕ್ಷಗಳ ಅಥವಾ ಭಿನ್ನಧಾರೆಗಳ ಚಿಂತಕರು, ಸಾಮಾಜಿಕ ಕಾರ್ಯಕರ್ತರಲ್ಲಿ ಇತ್ತು. ಆಚಾರ್ಯ ಜೆ.ಬಿ. ಕೃಪಲಾನಿ ಸರ್ಕಾರ ಜನರ ಆದ್ಯತೆಗಳನ್ನು ಪೂರೈಸುವುದರಲ್ಲಿ ವಿಫಲವಾಗಿರುವುದನ್ನು ಸೊಗಸಾಗಿ ಈ ರೀತಿ ಗುರುತಿಸಿದ್ದಾರೆ : "ಭಾರತಕ್ಕೆ ಬೇಕಾಗಿದ್ದುದು ಆಹಾರ; ಸರ್ಕಾರ ಕೊಟ್ಟದ್ದು ಉಕ್ಕು".

ವಿ.ಸೀ. ಅವರ ಓದು ಮತ್ತು ಬರೆಹ ಎರಡರ 'ರೇಂಜ್' ಅಸಾಧಾರಣವಾದದ್ದು. ಅವರು ಅಷ್ಟೆಲ್ಲಾ ಜ್ಞಾನಾರ್ಜನೆಯನ್ನು 'ಸಣ್ಣ ಸಂಬಳದ' ಕಾಲದಲ್ಲಿ ಹೇಗೆ ಮಾಡಿದರೋ ಎಂದು ನೆನೆದರೆ ವಿಸ್ಮಯವೆನಿಸುತ್ತದೆ. ಜ್ಞಾನಾರ್ಜನೆಗೆ ಮತ್ತು ಅದನ್ನು ಲೋಕಕ್ಕೆ ಉಣಬಡಿಸುವ ವಾಙ್ಮಯ ತಪಸ್ಸನ್ನು ಬದುಕಿನುದ್ದಕ್ಕೂ ಮಾಡಿದವರು ವಿ.ಸೀ. ಅವರು. ಬೆಂಗಳೂರು ಕುರಿತ 'ಹಳೆಯ ಬೆಂಗಳುರಿನ ನೆನಪುಗಳು...' ಇಂದಿಗೂ ಓದಿಸಿಕೊಂಡು ಹೋಗುವ ಸುಧೀರ್ಘ ಲೇಖನ (77 ಪುಟಗಳು). ವಿವಿಧ ಹಂತಗಳಲ್ಲಿ ಆಧುನಿಕ ಬೆಂಗಳೂರು ಬೆಳೆದ ಬಗೆ, ಕೆಲವು ಮಹನೀಯರ ಕಿರು ಪರಿಚಯಗಳು ಇದರಲ್ಲಿವೆ. ಜೊತೆಗೆ ಬಡಾವಣೆಗಳು, ರಸ್ತೆಗಳು, ಸ್ಥಾಪಕ, ಕಟ್ಟಡಗಳು, ಭಾಷೆ ಕುರಿತು ವಿ.ಸೀ. ತಿಳಿಸಿದ್ದಾರೆ. ಡಿ.ವಿ.ಜಿ.ಯವರ 'ಜ್ಞಾಪಕ ಚಿತ್ರಶಾಲೆ'ಯ ಸಂಪುಟಗಳ ಉದ್ದಕ್ಕೂ 'ಗುಂಡಪ್ಪನವರ ಬೆಂಗಳೂರು' ಹರಡಿಕೊಂಡಿದೆ. ಅದೇ ರೀತಿ 'ಹಳೆಯ..' ಎಂಬ

ಅಪೂರ್ಣ ಲೇಖನದಲ್ಲಿ 'ವಿ.ಸೀ. ಅವರ ಬೆಂಗಳೂರು' ಸಾಂದ್ರವಾಗಿ ಮೂಡಿ ಬಂದಿದೆ. ಇಂಗ್ಲೀಷಿನಲ್ಲಿ ಮುಂಬೈ, ದೆಹಲಿ, ಕೊಲ್ಕತ್ತ, ಚೆನ್ನೈ ಕುರಿತು ಬಹಳ ಆತ್ಮೀಯವಾಗಿ ಬರೆದ ಬರಹಗಳಿವೆ, ಗ್ರಂಥಗಳಿವೆ. ವಿ.ಸೀ. ಅವರ ಈ ವಿಷಯ ಕುರಿತ ಭಾಗವನ್ನೇ ಸಚಿತ್ರವಾಗಿ ಮುದ್ರಿಸಿದರೆ ನಗರ ಸಮಾಜಶಾಸ್ತ್ರ ಆರ್ಕಿಟೆಕ್ಚರ್ ಮತ್ತು ನಗರ ಇತಿಹಾಸ (ಅರ್ಬನ್ ಹಿಸ್ಟರಿ) ದೃಷ್ಟಿಯಿಂದ ನೋಡುವ ಕುತೂಹಲಗಳಿಗೆ ಮಹದುಪಕಾರ ವಾಗುತ್ತದೆ. ಜನ ಊರಿನಿಂದ ಬೆಳೆಯುತ್ತಾರೆ. ಹಾಗೆ ಬೆಳೆದು ದೊಡ್ಡವರಾದವರು ನಂತರ ಊರನ್ನು ಬೆಳೆಸುತ್ತಾರೆ. ಕಾರಂತರ 'ನಷ್ಟದಿಗ್ಗಜಗಳು' ಕಾದಂಬರಿಯಲ್ಲಿ ನಗರ ಪಿತೃಗಳ ಬಗ್ಗೆ ವಿಡಂಬನೆ ಇದೆ. ಅದರ ಶೈಲಿ, ರುಚಿ ಬೇರೆ. ವಿ.ಸೀ. ಅವರ ಈ ಚಿತ್ರಣ ಬೇರೆ. ಡಿ.ವಿ.ಜೀ., ವಿ.ಸೀ., ರವಿ ಬೆಳಗೆರೆ, ಸುರೇಶ್ ಮೂನ ಮುಂತಾದವರ ಪ್ರಯತ್ನಗಳಿಂದ ಕನ್ನಡಿಗರಿಗೆ, ಹೊಸ ತಲೆಮಾರಿನವರಿಗೆ ಬೆಂಗಳೂರಿನ ಜೀವಂತ ಆಸ್ತ ಚಿತ್ರಣ ಸಿಗುವಂತಾಗಿದೆ.

ಕೆಲವು ವರ್ಷಗಳ ಹಿಂದೆ ಜುಗ್ ಸುರಯ್ಯ ಎಂಬ ಇಂಗ್ಲಿಷ್ ಲೇಖಕರು ಕಲ್ಕತ್ತ (ಈಗ ಕೋಲ್ಕತ್ತ) ಕುರಿತು. 'Culcutta : Acity Remebered' ಅದರಲ್ಲಿ ಅವರು ಆ ಮಹಾನಗರದ ಕುರಿತು ಹೇಳಿರುವ ಮಾತು : "Any one who has ever been there has his own Calcutta. All you have to do is listen to it, as I have listened to mine" ಅವರವರ ಭಾವ ಪ್ರಪಂಚದಲ್ಲಿ ಹುಟ್ಟಿದ, ಬೆಳೆದ ಹಳ್ಳಿ, ಪಟ್ಟಣ, ಮಹಾನಗರಗಳ ಚಿತ್ರಣ ಅಚ್ಚೊತ್ತಿರುತ್ತದೆ. ಅದು ಅವರ ನೆನಪಿನ ಕೋಶದ ಪ್ರಮುಖ, ಆರ್ದ್ರ ಭಾಗವಾಗಿರುತ್ತದೆ. ಅಂಥ ಒಂದು ಆರ್ದ್ರತೆ, ಕಂಡೂ ಕಾಣದಂತೆ ವಿ.ಸೀ. ಅವರು ಕೊಟ್ಟಿರುವ ಬೆಂಗಳೂರಿನ ಚಿತ್ರಣದಲ್ಲಿದೆ. ಅವರು ಈ ಭಾಗ ಅಥವಾ ಕೃತಿಯನ್ನು ಮುಗಿಸಲಾಗಲಿಲ್ಲ ಎನ್ನುವುದು ಸ್ವಲ್ಪ ಬೇಸರದ ಸಂಗತಿ. ಅಷ್ಟರ ಮಟ್ಟಿಗೆ ಕನ್ನಡಕ್ಕೆ ಆದ ನಷ್ಟ ಅದು.

ವಿ.ಸೀ. ಅವರು ಎಷ್ಟು ವಿಷಯಗಳ ಮೇಲೆ ಬರೆದಿದ್ದಾರೆ, ಎಷ್ಟು ಧೀರ್ಘವಾಗಿ ವಿಶ್ಲೇಷಣೆ ಮಾಡಿ-ಬರೆದಿದ್ದಾರೆ, ತಮ್ಮ ಓದನ್ನು ಎಷ್ಟು ಚೆನ್ನಾಗಿ ಬಳಸಿಕೊಂಡಿದ್ದಾರೆ ಮತ್ತು ಜೀವನದಲ್ಲಿ ಕೊನೆಗೂ ಉಳಿಯುವಮಥದ್ದು ಹಣ, ಅಧಿಕಾರಗಳಲ್ಲಿ ಬದಲಿಗೆ ಸ್ನೇಹ-ವಿಶ್ವಾಸಗಳು ಎನ್ನುವುದನ್ನು ಅದೆಷ್ಟು ಚೆನ್ನಾಗಿ ಮನಮುಟ್ಟುವಂತೆ ತಿಳಿಸಿಕೊಟ್ಟಿದ್ದಾರೆ ಎನ್ನುವುದನ್ನು ನೆನೆಸಿಕೊಂಡರೆ ಮನಸ್ಸು ತುಂಬಿಬರುತ್ತದೆ. ಈ ಸೀತಣ್ಣ ಬಹಳ ದೊಡ್ಡ ವ್ಯಕ್ತಿ. ಭಾವುಕರಾಗದೆ ಅವರ ಬಗ್ಗೆ ಬರೆಯುವುದು ಕಷ್ಟ.. ಕೊನೆಗೂ ನನ್ನ ಮನಸ್ಸಿನಲ್ಲಿ ಉಳಿದಿರುವುದು ಅವರ 'ಹಣ ಪ್ರಪಂಚ'ಕ್ಕಿಂತ ಮಿಗಿಲಾಗಿ ಅವರ ಭಾವಲೋಕ, ಅವರ 'ಮೃಗಶಾಲೆಯ ಸಿಂಹಗಳು' 'ಎಮ್ಮ ಮನೆಯಂಗಳದಿ..' ಕವಿತೆಗಳು. ಕೊನೆಗೂ ಇಷ್ಟೆಲ್ಲ ಬೌದ್ಧಿಕ ಸಮೃದ್ಧಿಯ ನಡುವೆಯೂ ಇಹವನ್ನು ಜೋಪಾನವಾಗಿ, ಶುಚಿಯಾಗಿ ಕಾಪಾಡಿಕೊಳ್ಳಬೇಕು ಎನ್ನುವ ಪರಮನಿಷ್ಠೆ. ಮನುಷ್ಯ



ಅಂತರಂಗದಲ್ಲಿ ಕೋಮಲವಾಗಿಬಿಟ್ಟರೆ ಬಹಳ ಸಂಕಟ ಪಡಬೇಕಾಗುತ್ತದೆ. ಆದರೆ ಅದರಿಂದ ಉಂಟಾಗುವ ಪಾಕ, ಬಹಳ ಭಿನ್ನವಾದ ಸಾಹಿತ್ಯ ಸೃಷ್ಟಿಗೆ ಕಾರಣವಾಗುತ್ತದೆ. ಆ ಪಾಕ, ಆ ಶುಚಿ ವಿ.ಸೀ.ಯವರ ಸಾಹಿತ್ಯದ ಮುಖ್ಯ ಧಾತು. ವಿ.ಸೀ. ಅವರು ಕನ್ನಡ ಸಾಹಿತ್ಯಗಳಲ್ಲಿ ಪಂಕ್ತಿವಾಹನರು. ಭಾರತೀಯತೆಯನ್ನು, ಸಂಸ್ಕೃತಿಯನ್ನು ವಿಶಾಲರ್ಥದ ಸೆಕ್ಯುಲರ್ ನೆಲೆಯಲ್ಲಿ ನಿಂತು ಹೇಗೆ ಸೂಕ್ಷ್ಮವಾಗಿ ವ್ಯಾಖ್ಯಾನಿಸಬಹುದು ಎಂಬುದರ ಅತ್ಯುತ್ತಮ ಮಾದರಿ ವಿ.ಸೀ. ಅವರ ವಾಙ್ಮಯ.

ಸದ್ಯದ ಸಾಂಸ್ಕೃತಿಕ ವಾಗ್ವಾದಗಳಲ್ಲಿ ವಿ.ಸೀ. ಅವರ ಸಾಹಿತ್ಯ ಮತ್ತು ಚಿಂತನೆಯ ಪ್ರಸ್ತಾಪ ತೀರಾ ಗುಣವಾಗಿದೆ.ಯುವ ಪೀಳಿಗೆ ಮತ್ತೆ ವಿ.ಸೀ. ಅವರ ಸಾಹಿತ್ಯವನ್ನು ಕೈಗೆತ್ತಿಕೊಂಡು ವಿಮರ್ಶಾತ್ಮಕವಾಗಿ ಓದಲಿ ಎಂದು ಹಾರೈಸುತ್ತೇನೆ. ವಿ.ಸೀ. ಅವರ ಒಂದು ಸಂಪುಟಕ್ಕೆ ನಾಲ್ಕು ಮಾತು ಬರೆಯುವ ಅವಕಾಶ ಕೊಟ್ಟವರನ್ನು ತಲೆಬಾಗಿ ವಂದಿಸಿ ವಿರಮಿಸುತ್ತೇನೆ.

**ಡಾ. ಜಿ. ಬಿ. ಹರೀಶ**

# I. ವಿಶೇಷ ಉಪನ್ಯಾಸಗಳು

## 1. ಶಿವರಾಮ ಕಾರಂತ

**(ಉಡುಪಿಯ ಮಹಾತ್ಮಾಗಾಂಧೀ ಮೆಮೋರಿಯಲ್ ಕಾಲೇಜಿನಲ್ಲಿ 1956ರಲ್ಲಿ ನೀಡಿದ ಉಪನ್ಯಾಸ)**

೧೯೨೮ ಅಥವಾ ೨೯ರ ಸೆಪ್ಟೆಂಬರ್-ಅಕ್ಟೋಬರ್ ತಿಂಗಳ ಒಂದು ಅಪರಾಹ್ನ ಬೆಂಗಳೂರಿನ ಅವೆನ್ಯೂ ರಸ್ತೆಯಲ್ಲಿ ಶಿವರಾಮ ಕಾರಂತರಿಗೂ ನನಗೂ ಪ್ರಥಮ ಸಮಾಗಮವಾಯಿತು. ನಮ್ಮ ಇಬ್ಬರ ಪರಿಚಯವುಳ್ಳ ಮಹನೀಯರೊಬ್ಬರು ನಮಗೆ ಪರಿಚಯ ಹೊಂದಿಸಿಕೊಟ್ಟರು. ಕೆಲವು ನಿಮಿಷಗಳ ತರುವಾಯ ಮರುದಿನ ನನ್ನ ಮನೆಯಲ್ಲಿ ನಾವು ಮೂವರೂ ಮತ್ತೊಮ್ಮೆ ಸೇರಬೇಕೆಂದು ಅಲ್ಲಿ ನಿಷ್ಕರ್ಷೆಯಾಯಿತು. ನನ್ನ ಹೊಸ ಪರಿಚಯಸ್ಥರ ಮುಖ, ನಡವಳಿಕೆ, ಹಾವ ಭಾವಗಳನ್ನು ಕಂಡು ನನಗೆ ಆಕರ್ಷಣೆ ಆಯಿತು. ಆ ಮುಖಾಕೃತಿಯಲ್ಲಿ ವಿಶಿಷ್ಟವಾದ ಅಸಾಮಾನ್ಯವಾದ ಏನೊ ಒಂದು ಲಕ್ಷಣವನ್ನು ನಾನು ಕಂಡೆ. ಅವರು ನಕ್ಕಾಗ ಅವರ ಹಲ್ಲ ಸಾಲು ಚೆಲುವಾಗಿ ಕಾಣಿಸಿತು. ನಗೆಯಲ್ಲಿ ನಿರ್ಮಲತೆ ಕಂಡಿತು. ಮುಖದಲ್ಲಿ ದೃಢತೆಯ ಸತ್ವ ಇರುವಂತೆಯೂ, ಪ್ರಕಾಶಮಯವಾದ ಕಣ್ಣುಗಳಲ್ಲಿ ಅಭಿವ್ಯಕ್ತಿಯ ಏನೋ ಒಂದು ಶಕ್ತಿ ಹೊರಸೂಸುತ್ತಿರುವಂತೆಯೂ, ಗಲ್ಲದಲ್ಲಿಯೂ ಮೂಗಿನಲ್ಲಿಯೂ ಅಸಾಧಾರಣವಾದ ಧೀರತೆ, ಖಚಿತತೆ ಕೆತ್ತಿಕೊಂಡಂತೆಯೂ ನನಗೆ ಅನುಭವವಾಯಿತು. ಆ ವಿಚಿತ್ರವಾದ ಹೇರ್‌ಕಟ್ - ಇಂದಿನವರೆಗೂ ಮಾರ್ಪುಗೊಳ್ಳದಿರುವ ಅವರ ಕೂದಲಿನ ವಿನ್ಯಾಸ - ಒಂದರಿಂದಲೇ ಮೊದಲಬಾರಿ ಅವರನ್ನು ನೋಡಿದವರಿಗೂ ಅವರ ವ್ಯಕ್ತಿತ್ವದ ಅಸಾಮಾನ್ಯತೆ ಗೋಚರಕ್ಕೆ ಬರುವಂತಿತ್ತು. ಒಟ್ಟಿನಲ್ಲಿ, ಜೀವನದಲ್ಲಿ ಬೇಸರಿಕೆ ಬಂದಿರುವ ಯಾವ ಅಂಶವೂ ಇಲ್ಲದ ಒಬ್ಬ ಉತ್ಸಾಹಶಾಲಿಯೂ ಪ್ರಾಮಾಣಿಕನೂ ಆದ ವ್ಯಕ್ತಿ ಈತನೆಂದೂ ಈತನ ಚೈತನ್ಯ ವಿವಿಧೋದ್ದೇಶಗಳಿಗೆ ಅನುಕೂಲವಾಗಿ ಹರಿಯಬಲ್ಲ ಸ್ವಭಾವದ್ದೆಂದೂ ನನಗೆ ಆ ದಿನ ಕಲ್ಪನೆಯುಂಟಾಯಿತು.

ಮರುದಿನ ಹೇಳಿದ ಸಮಯಕ್ಕೆ ಸರಿಯಾಗಿ - ಒಂದು ಮಿನಿಟೂ ಆಚೆ ಈಚೆ ಇಲ್ಲದೆ - ಕಾರಂತರು ನಮ್ಮ ಮನೆಗೆ ದಯಮಾಡಿ ಬಂದರು. ತಾವು ಬರೆದ ನಾಟಕಗಳನ್ನು ಆ ದಿನ ನನಗೆ ಓದಿ ಹೇಳಿದರು. ಓದಿ ಮುಗಿದ ಮೇಲೆ ಆ ಬಗ್ಗೆ ನನ್ನ ಅಭಿಪ್ರಾಯವನ್ನು ಕೇಳಿದರು. ಚೆನ್ನಾಗಿದೆಯೆಂದು ನಾನು ಹೇಳಿದೆನೆಂದು ಕಾಣುತ್ತದೆ. ನನ್ನ ಕಂಠೋಕ್ತಿ ಅವರಿಗೆ ಹೇಗೆ ಕೇಳಿಸಿತೊ ಕಾಣೆ. ಒಂದನೆಯದಾಗಿ ನಾವಿಬ್ಬರೂ ಹೊಸ ಪರಿಚಯದವರು. ಎರಡನೆಯದಾಗಿ ನಾನು ಮಿತ್ರಲಾಭ ಮಾಡಿಕೊಳ್ಳುವವನಾಗಿದ್ದವನು. ಅಲ್ಲದೆ ಕೇಳಿದ

ಕೂಡಲೇ, ತಕ್ಷಣ ತೋರಿಕೆಯಂತೆ ಸಾಹಿತ್ಯದ ಕೃತಿಯ ವಿಚಾರ, ಅವುಗಳ ಕರ್ತೃಗಳಾದ ಹೊಸಬರ ಹತ್ತಿರ ಮಾತನಾಡುವುದು ಸರಿಯಲ್ಲವೆಂದು ಅರಿತಿದ್ದವನು. ಅಂಥ ಇಷ್ಟವನ್ನು ಅಡಗಿಸಿಕೊಳ್ಳುವುದು ಒಳ್ಳೆಯದೆಂದು ಎಣಿಸಿ ಹಾಗೆ ಮಾಡಲು ಯತ್ನಪಡುತ್ತಿದ್ದವನು. ಅಂಥ ರೂಢಿ ಸರಿಯೂ ಅಲ್ಲ ಎನ್ನುವವನು. ಇಷ್ಟೆಲ್ಲ ಯೋಚನೆ ಮಾಡಿದೆನೊ ಇಲ್ಲವೊ! ಹೀಗಿರುವಾಗ ಹೊಸ ಗೆಳೆಯರಿಗೆ ಏನು ಹೇಳಲಿ ಎಂಬ ಸಂದೇಹದಲ್ಲೇ ನಾನು ಏನೋ ಅಂದಿರಬೇಕು. ನನ್ನ ಈ ಸಂದಿಗ್ಧ ಪ್ರವೃತ್ತಿ ನನ್ನ ಅತಿಥಿಗೆ ಸರಿಹೋಗಲಿಲ್ಲ. ಆತ ಎಲ್ಲರಂತೆ ಅಲ್ಲ -ಆಗಲೂ ಅಲ್ಲ, ಈಗಲೂ ಅಲ್ಲ - ಎಂದು ನನಗೆ ಅನುಭವವಾಯಿತು. 'ಚೆನ್ನಾಗಿದೆ ಎಂದಿರಿ, ಸರಿ, ಚೆನ್ನಾಗಿರಬೇಕೆಂದು ನನಗೆ ತೋರದೆ ಹೋದರೆ ನಾನು ಅದನ್ನು ಬರೆಯಲುಂಟೆ? ಕೈಯಲ್ಲಿ ಹಿಡಿದುಕೊಂಡು ತಿರುಗಲುಂಟೆ? ಸಿಕ್ಕಿದವರಿಗೆಲ್ಲ ತೋರಿಸುತ್ತಿದ್ದೆನೆ?' ಎಂದು ಹೇಳಿ ಮುಗುಳ್ನಗೆ ನಕ್ಕರು. 'ನಾನು ಬರೆದುದರಲ್ಲಿ ಯಾವುದು ಚೆನ್ನಾಗಿಲ್ಲ ಎಂಬುದನ್ನು ನಿಮ್ಮ ಹತ್ತಿರ ಕೇಳಬೇಕಾಗಿತ್ತು' ಎಂದು ಕಾರಂತರು ಹೇಳಿದರು. ಇಂಥ ವ್ಯಕ್ತಿಯನ್ನು ನಾನು ಅದಕ್ಕೆ ಹಿಂದೆ ಕಂಡದ್ದಿಲ್ಲ. ಇಷ್ಟು ಧಾರಾಳವಾದ, ನಿಷ್ಕಪಟವಾದ ಧೀರ ವೃತ್ತಿಯನ್ನು ನನ್ನಂಥ ಸಾಮಾನ್ಯರ ಪ್ರಪಂಚದಲ್ಲಿ ಮೊದಲ ಸಲ ನಾನು ಕಂಡಂತಾಯಿತು. ತನ್ನ ಕೃತಿಯ ನಿಷ್ಪಕ್ಷಪಾತವಾದ ವಿಮರ್ಶೆ ಬೇಕೆಂದು, ನೇರ ಚೆನ್ನಾಗಿಲ್ಲದ ಭಾಗ ಯಾವುದು ಹೇಳಿ ಎಂದು ಕೇಳುವ ವ್ಯಕ್ತಿಗಳು ಅಪೂರ್ವ; ಲೋಪದೋಷಗಳನ್ನರಿಯುವ ಇಷ್ಟವುಳ್ಳವರು ಮತ್ತಷ್ಟು ಅಪೂರ್ವ. ಎಲ್ಲಿಯೂ ಹೀಗೇ ಎಂಬುದರಿಂದಲೇ ನನಗೂ ಇವರಿಗೂ ಜನ್ಮಜನ್ಮಾಂತರದ ಬಾಂಧವ್ಯವಿದ್ದಿರಬೇಕೆಂದು ಭಾವಿಸುವ ಮಟ್ಟಿಗೆ ನನಗೆ ಅವರಲ್ಲಿ ಆತ್ಮೀಯತೆಯುಂಟಾಯಿತು. ಅಂದು ಅವರು ನನ್ನ ಮುಂದೆ ಓದಿದ ಕೃತಿಗಳನ್ನು ಕುರಿತು ಆಗ ನನಗೆ ತೋರಿದ ಎರಡು ಮಾತುಗಳನ್ನು ಸ್ಪಷ್ಟವಾಗಿ ನುಡಿದೆ. ಅವರಿಗೆ ಹೇಗೆ ಪ್ರಿಯವಾಯಿತೋ ಏನೊ. ಗ್ರಂಥಕರ್ತರೇ ಓದುವಾಗ ನಿಷ್ಕರ್ಷೆಯಾಗಿ ಲೇಖನದ ಗುಣ ಕೆಲವೇಳೆ ಕಾಣದಾಗಬಹುದು. ಅವರ ವ್ಯಕ್ತಿತ್ವ, ಓದಿನ ಕಾಕು, ಓದಿದ ಸಮಯ, ಸನ್ನಿವೇಶ, ಇತರ ಮಾನವ ಸಂಗತಿಗಳು ಅರ್ಥಗಳನ್ನೂ ಬೆಲೆಗಳನ್ನೂ ಮಾರ್ಪಡಿಸಬಲ್ಲವು. ಅಲ್ಲದೆ ಜಾಗ್ರತವಾಗಿಯೋ, ಅರ್ಧಾವಧಾನದಲ್ಲಿಯೋ ಕೇಳುವಾಗ ಮನಸ್ಸಿಗೆ ತೋರಿದ ಅಂಶಗಳು ವಿಮರ್ಶೆಯ ಮಟ್ಟಕ್ಕೆ ಏಕೆ, ನ್ಯಾಯವಾದ ಅಭಿಪ್ರಾಯ ಮಟ್ಟಕ್ಕೆ ಏರಬೇಕಾಗಿಲ್ಲ. ತಕ್ಷಣದ ಅನಿಸಿಕೆಗಳನ್ನು ಸರ್ವಪ್ರಮಾಣದಂತೆ ನುಡಿಯುವುದು ಸರಿಯಲ್ಲವೆಂದು ನನ್ನ ಎಣಿಕೆ. ಜೊತೆಗೆ, ನನ್ನನ್ನು ಯಾರಾದರೂ ಅವಸರಿಸಿದರೆ ನನ್ನಲ್ಲಿರಬಹುದಾದ ಅಲ್ಪಸ್ವಲ್ಪ ಬುದ್ಧಿ ಮಂದವಾಗಿಬಿಡುತ್ತದೆ. ಕಾಲಾವಕಾಶ ಬೇಕೆಂದರೂ, ಕಾರಂತರ ಚುರುಕಿನ ಕರ್ತೃತ್ವಶಾಲಿಗಳಿಗೆ ಅರ್ಥವಾಗದು. ನಿಮಗೆ ಕಾದರೆ ಕಲ್ಪಗಳು, ಬ್ರಹ್ಮಕಲ್ಪಗಳು ಕಾಯುತ್ತಿರಬೇಕಾದೀತು, ಅಷ್ಟು ಆಯುಷ್ಯವನ್ನು ಭಗವಂತನು ಮಾನವರಿಗೆ ದಾನಮಾಡಿದ್ದರೆ ಚೆನ್ನಾಗಿರುತ್ತಿತ್ತು - ಎನ್ನುವವರು ಅವರು.



ಅಲ್ಲಿಂದ ಮುಂದೆ ನಮ್ಮ ಸ್ನೇಹಬಾಂಧವ್ಯ, ಸರಸ, ಮಾತುಕತೆ ಆರಂಭವಾದವು. ಅಂದು ತೊಡಗಿದ ಸ್ನೇಹದ ಸಂತೋಷ ನನ್ನ ಭಾಗ್ಯದಿಂದ ನಮ್ಮ ಮಿತ್ರತ್ವವನ್ನು ನಿರಂತರವಾಗಿ ಮಾಗಿಸಿದೆ; ಒಂದು ಪಕ್ವತೆಗೆ ತಂದಿದೆ. ಆಮೇಲೆ ನಾವು ಪ್ರಪಂಚದಲ್ಲಿ ಇರತಕ್ಕ, ನಡೆಯುವ, ನಡೆಯಲಾರದ ಎಷ್ಟೊ ವಿಷಯಗಳನ್ನು ಕುರಿತು ಇತಿಮಿತಿಯಿಲ್ಲದೆ ಆಡಿಕೊಂಡಿದ್ದೇವೆ. ಅಭಿಪ್ರಾಯಭೇದಗಳೆಷ್ಟೋ. ಆದರೆ ಧಾರಾಳವಾಗಿ ಚರ್ಚೆ ಮಾಡಿದ್ದೇವೆ. ಕೆಳೆತನವೊಂದು ನಿಜವಾದರೆ, ಸರಸವಾದದ್ದಾದರೆ ಲೋಕವಾರ್ತೆಯನ್ನು ಕುರಿತು ಯಾವ ಅಭಿಪ್ರಾಯಭಿನ್ನತೆಯೂ ಕೆಳೆತನಕ್ಕೆ ಭಂಗ ತರಬಾರದೆಂದು ನನ್ನ ಮತ. ಎಲ್ಲಕ್ಕೂ ದೊಡ್ಡದು ಸಜ್ಜನಿಕೆ; ಪ್ರೀತಿಯ ಮನಸ್ಸು.

ಕಾರಂತರನ್ನು ಕುರಿತು, ಅವರ ಕೃತಿಗಳನ್ನು ಕುರಿತು ಆಡುವುದು ನನ್ನ-ಅವರ ಸ್ನೇಹದ ಹಿನ್ನೆಲೆಯಲ್ಲಿ ಸುಲಭವಾದ ಕೆಲಸವಲ್ಲ. ಸದ್ಯಕ್ಕೆ ಅದರಲ್ಲಿ ತೊಡಗಲೂ ನನಗೆ ಶಕ್ಯವಿಲ್ಲ. ನಮಗೆ ಅಭಿಮಾನವೂ ಪ್ರೇಮವೂ ಇರುವ ವ್ಯಕ್ತಿಯ ಕೃತಿಗಳಿಗೆ ಬೆಲೆಕಟ್ಟುವಲ್ಲಿ ನಮ್ಮ ಮೌಲ್ಯಾಂಕನದ ರೀತಿ, ಬಣ್ಣ ಬೇರಾಗಬಹುದು; ತೂಕ ತಪ್ಪಬಹುದು. ಕೃತಿಯ ನಿಷ್ಪಕ್ಷಪಾತ ವಿಮರ್ಶೆಗೆ ಆತ್ಮೀಯತೆಯೇ ದೊಡ್ಡ ತೊಡಕಾಗಿ ನಿಲ್ಲಬಾರದೆಂಬುದನ್ನು ನಾನು ಬಲ್ಲೆನು. ಆದರೂ ವ್ಯಕ್ತಿನಿರಪೇಕ್ಷವಾದ, ಅತ್ಯಂತ ವೈಜ್ಞಾನಿಕವೆನಿಸುವ, ಹಿಮಗಡ್ಡೆಯಂತೆ ತಣ್ಣಗಿರುವ ನಿರುದ್ವಿಗ್ನ ವಿಮರ್ಶೆ ನನಗೆ ಮೆಚ್ಚಲ್ಲ. ಸಾಹಿತ್ಯದ್ದು ಅಂತಃಕರಣಪೂರಿತವಾದ ಮಾನವ್ಯ ಪ್ರಭಾವ ಎಂದು ನನ್ನ ಭಾವನೆ. ಅದರದು ಸೌಹಾರ್ದ ಪ್ರಪಂಚ. ಅಲ್ಲಿ ಪಕ್ಷಪಾತಗಳಿದ್ದೇ ಇರುತ್ತವೆ. ನಮ್ಮ ಬದುಕಿನ ಏನೆಲ್ಲ ನಮಗೆ ಪ್ರೀತಿ ಅಪ್ರೀತಿಗಳನ್ನು ತರುವುವೋ ಅವೆಲ್ಲ ಆಳದಲ್ಲಿ ನಮ್ಮ ಮನಸ್ಸನ್ನು ರೂಪಿಸುತ್ತಲೇ ಇರುವುವು. ಆದುದರಿಂದ ಬರೆಯುವವನಲ್ಲಿ, ಓದುವವನಲ್ಲಿ, ಅಭಿರುಚಿ ಇಷ್ಟಗಳಲ್ಲಿ ಭಿನ್ನತ್ವವುಂಟಾದರೆ, ವಿಮರ್ಶೆಯಲ್ಲಿ ಕಿಂಚಿತ್ ತೋಲತಪ್ಪಿದರೆ ಹಾನಿ ಇಲ್ಲವೆಂದು ತಿಳಿಯುವವನು ನಾನು. ಎಂದರೆ ಒಳ್ಳೆಯದರ ಪ್ರೀತಿಯಲ್ಲಿ ಸ್ವಲ್ಪ ಧಾರಾಳ ವಹಿಸಿದರೆ ಯಾರೂ ಅಸಹನೆ ಪಡಬಾರದು. ಕೀಳಾದ್ದನ್ನು ನಿರಾಕರಿಸುವಾಗ ಧಾರಾಳದ ಈ ಪ್ರಶ್ನೆ ಏಳಬೇಕಾದ್ದಿಲ್ಲ. ಎಲ್ಲಿಯೂ ಮರ್ಯಾದೆಯ ಮಿತಿಗಳಿವೆ. ಇಂಥ ಮನಸ್ಸಿನ ಓಲಿನಲ್ಲಿಯೇ ಕಾರಂತರನ್ನು ಕುರಿತು ಎರಡು ಮಾತನ್ನು ಹೇಳುತ್ತಿದ್ದೇನೆಂಬ ಎಚ್ಚರ ನನಗಿದೆ. ನನ್ನ ಹೇಳಿಕೆ ತೀರ್ಮಾನವಲ್ಲ - ವಿಮರ್ಶೆಯಲ್ಲಿ ಕೊನೆಯ ತೀರ್ಮಾನವೆಂಬುದುಂಟೆ? ಎಂದಾದರೂ ಇತ್ತೆ? ಎಂಬುದೂ ನನಗೆ ಆಗಾಗ ತೋರುವ ಪ್ರಶ್ನೆಗಳು. ಅಲ್ಲದೆ ಯಾವುದನ್ನೂ ಸರ್ವರೂ ಒಪ್ಪಿಕೊಳ್ಳಬೇಕೆಂಬ ಹಟವೂ ನನಗಿಲ್ಲ. ವಿಚಾರ ಸರಣಿಯಲ್ಲಿ ಏಕಮುಖತೆ ಅಗತ್ಯವಾದರೂ ಬಹುಮುಖವಾದ ಸತ್ಯವನ್ನು ಪರೀಕ್ಷಿಸುವಾಗ ಕೇವಲ ಏಕಮುಖತೆ ಲೋಪವಾಗಲೂಬಹುದು. ಒಂದು ಸಾಕಲ್ಯ ಸಮೀಕ್ಷೆ ಸಾಧ್ಯವಾಗಬೇಕು. ಆ ಪ್ರಯತ್ನದಲ್ಲಿಯೂ ತೊಡಕುಂಟು. ಎಂದಿಗೂ ದಾರಿ, ವಿವಕ್ಷೆ, ಸಿದ್ಧಿಭೇದ ಉಂಟೇನೊ.

ನಾವು ಮೊದಲು ಭೇಟಿಯಾಗುವ ಹೊತ್ತಿಗಾಗಲೇ ಕಾರಂತರು ತಮ್ಮ ತವರಾದ ಕೋಟ ಮಾತ್ರವಲ್ಲದೆ, ವಿದ್ಯಾಭ್ಯಾಸವನ್ನೂ ಬಿಟ್ಟು ಗಾಂಧೀಜಿಯವರು ಭಾರತದ ಮುಂದಿಟ್ಟ ರಚನಾತ್ಮಕ ಕಾರ್ಯಗಳಿಗೆ ಜೀವನವನ್ನು ಅರ್ಪಣೆ ಮಾಡಿಯಾಗಿತ್ತು. ತಮ್ಮ ವಿವಾಹದ ವಿಷಯವನ್ನು ಕುರಿತು ತಂದೆತಾಯಿಗಳು ಯಾವ ಯೋಚನೆಯನ್ನೂ ಮಾಡಬೇಕಾದ್ದಿಲ್ಲವೆಂದೂ, ಅವರ ಆಸ್ತಿಯಲ್ಲಿ ಯಾವ ಪಾಲನ್ನೂ ತಾನು ಬೇಡೆನೆಂದೂ ಅವರಿಗೆ ತಿಳಿಸಿ ಬಹುಶಃ ಅವರನ್ನು ಬೀಳ್ಕೊಂಡಾಗಿತ್ತು. ತಾನು ಹುಟ್ಟಿದ ಶ್ರೀಮಂತ ಕುಟುಂಬದಿಂದ ಏನನ್ನೂ ಆಶಿಸದೆ, ನಿರೀಕ್ಷಿಸದೆ, ಉಟ್ಟಬಟ್ಟೆಯಲ್ಲಿ ಬಡತನವನ್ನು ಸ್ವೀಕರಿಸಿ, ದೇಶಸೇವೆಗೆ ಧುಮುಕಿ ಆಗಿತ್ತು. ಯಾವ ಕ್ರಿಯಾರಂಗಕ್ಕೂ ಸ್ವಯಂಸೇವಕರು ಬೇಕಲ್ಲವೆ? ಅವರು ಮದುವೆಗೆ ಆಸ್ತಿಗೆ ಕಾದು ಕುಳಿತರೆ ಹೇಗೆ? ತಾವು ವರಿಸಿದ ಕೆಲಸಕ್ಕೆ ನಿರಾಡಂಬರವಾದ ಒಂದು ಮೊಸಲು ಬದುಕನ್ನು ಬದುಕಲು ಅವರು ನಿಷ್ಠೆ ವಹಿಸಿದ್ದರು. ಕಾರಂತರ ದೇಶಸೇವೆಯೂ ಸರ್ವಸಾಮಾನ್ಯವಾದುದಾಗಿರಲಿಲ್ಲ. ಯಾವ ಸದ್ದುಗದ್ದಲವನ್ನೂ ಮಾಡದೆ ಎಲ್ಲಾದರೂ ಒಂದು ಕೆಲಸವನ್ನು ಮನಃಪೂರ್ತ ಮಾಡುವುದು, ಇತರರಿಂದ ಮಾಡಿಸುವುದು-ಇಷ್ಟೇ ತಮ್ಮ ಅನುಭವದ ಪರಿಣಾಮವಾಗಿ ತೀರ್ಮಾನಿಸಿ ಅವರು ದೇಶಸೇವೆಗೆ ಕಟ್ಟಿದ ಅರ್ಥ. ಸಾರ್ವಜನಿಕ ಸೇವೆಯಲ್ಲಿ ಪ್ರಖ್ಯಾತರಾದ ಮೊಳಹಳ್ಳಿ ಶಿವರಾಯರೆಂಬ ವಕೀಲರು - ನಮ್ಮ ಪುಣ್ಯದಿಂದ ಈ ೨೦-೮೦ರ ವಯಸ್ಸಿನಲ್ಲಿಯೂ ಲೋಕಸೇವೆಗೆ ತಮ್ಮನ್ನು ತೆತ್ತುಕೊಂಡಿರುವ ಹಿರಿಯರು ಅವರು- ಆಗ ಪುತ್ತೂರು ತಾಲೂಕು ಬೋರ್ಡಿನ ಅಧ್ಯಕ್ಷರಾಗಿದ್ದರು. ಅವರು ತಮ್ಮ ತಾಲೂಕಿನ ರಚನಾತ್ಮಕ ಕೆಲಸಗಳಲ್ಲಿ ತೊಡಗಿದ್ದರು. ಕಾರ್ಯಕರ್ತ ಸ್ವಯಂಸೇವಕರಿಗೆ ಶಿಕ್ಷಣ ವಿಷಯದಲ್ಲಿಯೂ, ಸಂಸ್ಕೃತಿ ಸಂಬಂಧದಲ್ಲಿಯೂ ತರಬೇತು ಕೊಡುವ ಹೊಣೆಯನ್ನು ಕಾರಂತರು ತಮ್ಮ ಹೆಗಲಿಗೇರಿಸಿಕೊಂಡರು. ತಾವು ನಡಸುವ ತರಬೇತಿ ಶಿಬಿರಕ್ಕೆ ಬರಬೇಕೆಂದು ನನಗೆ ಒಂದು ಸಲ ಆಮಂತ್ರಣ ಕೊಟ್ಟರು.

ಅಷ್ಟು ಹೊತ್ತಿಗಾಗಲೇ ಅವರು ಹೆಗಲ ಮೇಲೆ ಟವೆಲು, ಇನ್ನೊಂದರಲ್ಲಿ ಕ್ಯಾಮರಾ, ಬಗಲಿಗೆ ತೂಗುಚೀಲ ಹಿಡಿದು ತನ್ನ ಪ್ರಥಮ ಅಖಿಲ ಭಾರತ ಯಾತ್ರೆಯನ್ನು ಮುಗಿಸಿ ಬಂದಿದ್ದರು. ಅವರ ಆಗಿನ ವೇಷ ನನಗಿನ್ನೂ ನೆನಪಿದೆ. ಆ ವೇಷದ ಹಿನ್ನೆಲೆಯಲ್ಲಿದ್ದ ಸರಳತೆಗೂ ವಿಶ್ವಾಸದ ದೃಢಕ್ಕೂ ನನ್ನ ಹೃದಯವು ಇಂದಿನವರೆಗೂ ಮಾರು ಹೋಗಿದೆ. ತಾಯ್ನಾಡಿನ ಸೇವೆಯಲ್ಲಿ ತನ್ನ ಪಾತ್ರವನ್ನು ತಾನೇ ತಿಳಿಯಬೇಕೆಂಬ ಲವಲವಿಕೆಯಿಂದ, ತನ್ನ ಮಿತಿಯನ್ನು ಅರಿತು, ಅಳೆದು ಜೀವನ ಪಥವನ್ನು ನಿರ್ಣಯಿಸಲು ಹೊರಟ ಆ ನಿಲವು ಅನುಪಮವಾದುದು. ನಾಡಿನ ಜನರ ಬದುಕನ್ನು ಪ್ರತ್ಯಕ್ಷ ಪ್ರಮಾಣದಿಂದಲೇ ಅರಿಯಬೇಕು; ಸ್ನೇಹಿತರನ್ನು ಕಾಣಬೇಕು, ಸಂಪಾದಿಸಬೇಕು; ಕಲಾಕೃತಿಗಳನ್ನು ನೋಡಬೇಕು ಎಂಬ ಹಿರಿಯಾಸೆಯಿಂದ ಅವರು ನಾಡೆಲ್ಲ ಅಲೆದು, ಈ ಭಾರತ ದೇಶದ ಎಲ್ಲ ಬಗೆಯ ನೆಲ, ಜಲ, ಜನರನ್ನು ಕಂಡರು;



ಉದ್ಯೋಗದ, ಕಲೆಯ, ಧರ್ಮದ ಕೇಂದ್ರಗಳ ದರ್ಶನ ಪಡೆದರು; ಮುಂದಿನ ಜೀವನ ಮಾರ್ಗವನ್ನು ರೂಪಿಸಬಲ್ಲ ಅನುಭವವನ್ನು ಸಂಗ್ರಹಿಸಿದರು. ಭಾರತವನ್ನು ಕುರಿತು ಅವರೇ ತಯಾರಿಸಿಕೊಂಡ ಅನುಭವ ಚಿತ್ರದಲ್ಲಿ ಲೋಪ ದೋಷಗಳಿದ್ದಿರಬಹುದು. ಯಾರ ಚಿತ್ರದಲ್ಲಿ ಇರುವುದಿಲ್ಲ? ಆದರೇನಂತೆ, ಅದು ಸ್ವಾನುಭವದಿಂದ ನಿರ್ಮಿಸಿದ ಪ್ರಾಮಾಣಿಕವಾದ ಚಿತ್ರ. ತಮ್ಮ ದೇಶದ ಜನಜೀವನದಲ್ಲಿ ಯಾವುದು ಸರಿಯಲ್ಲ, ಯಾವುದಕ್ಕೆ ತನ್ನ ಜೀವನವು ಮುಡಿಪಾಗಿರತಕ್ಕದ್ದು, ಗತಿಶೀಲವಾದ ಪ್ರಪಂಚದಲ್ಲಿ ಬಾಳಬೇಕೆಂಬ ಹಂಬಲವುಳ್ಳ ಜನ ಯಾವುದನ್ನು ನಿವಾರಿಸತಕ್ಕದ್ದು ಎಂಬ ಜ್ಞಾನವು ಅವರಿಗೆ ಭಾರತ ಯಾತ್ರೆಯಿಂದ ದೊರೆಯಿತೆಂದು ಕಾಣುತ್ತದೆ. ಅದಕ್ಕೂ ಮೊದಲು, ಕಾರಂತರು ಕರ್ಣಾಟಕದ ಮೂಲೆ ಮೂಲೆಗೂ ಸಂಚರಿಸಿದ್ದರಂತೆ; ಬ್ರಹ್ಮಚರ್ಯದ ಮೇಲೆ ಅಲ್ಲಿ ಇಲ್ಲಿ ಉದ್ದವಾದ ಓಜಸ್ವಿ ಭಾಷಣಗಳನ್ನು ಮಾಡಿದ್ದರಂತೆ; ಹಿಂದುಸ್ಥಾನ ಸೇವಾದಲದಲ್ಲಿ ಸೈನಿಕರಾಗಿದ್ದರಂತೆ. ಕಲಾಪ್ರಪಂಚಕ್ಕೆ ಮೊಸಲಾಗಿಟ್ಟ 'ವಸಂತ' ಎಂಬ ಪತ್ರಿಕೆಯನ್ನು ಹೊರಡಿಸಿ ನಿಲ್ಲಿಸಿಯಂತೂ ಆಗಿತ್ತು. ವಿಡಂಬನೆ, ಕಟೂಕ್ತಿಗಳಿಂದ ತುಂಬಿದ 'ಗರ್ಭಗುಡಿ'ಎಂಬ ನಾಟಕವನ್ನು ಬರೆದು ಆಡಿಸಿಯಾಗಿತ್ತು. ಆ ನಾಟಕದಲ್ಲಿ ಕಾರಂತರು ನಮ್ಮ ಸಮಾಜದ ಮಠ ದೇವಾಲಯಗಳಲ್ಲಿರುವ ಕೊಳೆಕೆಸರನ್ನು ನಿರ್ಭಯವಾಗಿ ಬಹಿರಂಗವಾಗಿ ಬಯಲಿಗೆಳೆದಿದ್ದಾರೆ. ಆ ನಾಟಕದಿಂದ ಕ್ರುದ್ಧರಾದವರು ಆಡಿಕೊಂಡಂತೆ ಎಲ್ಲಾದರೂ ಮಾಡಿದ್ದರೆ ನಾಟಕಕರ್ತರ ರೂಪ ಉಳಿಯುತ್ತಿರಲಿಲ್ಲ. ಸುದೈವದಿಂದ, ನಮ್ಮ ಜನಕ್ಕೆ ಒಳ್ಳೆಯದು-ಕೆಟ್ಟದು ಯಾವುದೂ ಕ್ರಿಯಾರೂಪವನ್ನು ತಾಳುವುದಂತೂ ಇನ್ನೂ ಅಪರೂಪ. ಹೊರ ದೇಶದಲ್ಲಿ ಇಂಥ ನಾಟಕಗಳನ್ನು ಬರೆದವರ ಜೀವಕ್ಕೆ ಅಪಾಯವೇ. ನಮ್ಮ ದೇಶವು ವೈಚಿತ್ರ್ಯಗಳ ಬೀಡಾದುದರಿಂದ 'ಗರ್ಭಗುಡಿ' ಯಂಥ ನಾಟಕಗಳನ್ನು ಬರೆದೂ, ಸಾಲದುದಕ್ಕೆ ಆಡಿಯೂ ಕಾರಂತರು ಬದುಕಿ ಉಳಿದರು. ಗಂಭೀರವಾದ, ಪ್ರಾಮಾಣಿಕವಾಗಿ ಮಾಡಿದ ಯಾವ ಮೊನೆಯ ವಿಮರ್ಶೆಯೂ ನಮ್ಮ ಜನಕ್ಕೆ ಪ್ರಾಯಃ ಮೈ ತಾಕುವುದಿಲ್ಲವೆಂದು ತೋರುವುದು. ಕಾರಂತರ ಬಾಣಗಳಿಗೂ ಇದೇ ಗತಿ ಆಯಿತು. ಅವುಗಳಿಂದ ನಿಜವಾಗಿ ನೊಂದವರಿಲ್ಲ, ನೋವನ್ನು ಹೃದಯಕ್ಕೆ ಹಚ್ಚಿಕೊಂಡವರಿಲ್ಲ. ಅದೇ ನೋವು.

ಪುತ್ತೂರಿನಿಂದ ಸುಬ್ರಹ್ಮಣ್ಯಕ್ಕೆ ಹೋಗುವ ದಾರಿಯಲ್ಲಿ ನಡುವೆ ಹತ್ತಿರದಲ್ಲೇ ಇರುವ ಬೆಳ್ಳಾರೆಯಲ್ಲಿ ಸ್ವಯಂಸೇವಕ ಶಿಬಿರವನ್ನು ನಡಸುತ್ತಿದ್ದ ವ್ಯಕ್ತಿ ಇದೇ ಕಾರಂತರು ಎಂದ ಮೇಲೆ ಶಿಬಿರದಲ್ಲಿ ನಿಷ್ಠುರ ತ್ಯಾಗ, ಶಿಸ್ತು ಇರದೆ ಹೋದೀತೆ? ತರಬೇತಿ ಎಂದರೆ ಕಷ್ಟಸಹಿಷ್ಣುತೆಯ ಪರೀಕ್ಷೆಯಲ್ಲವೆ? ದೇಶಕ್ಕೋಸ್ಕರ ಜೀವನ ಧಾರೆ ಎರೆದ ತರುಣರಿಗೆ ಮುಂದಿನ ಜೀವನದಲ್ಲಿ ಎಂಥೆಂಥ ಕಷ್ಟಗಳು ಬರಲಿವೆ, ಅವನ್ನೆಲ್ಲ ಒಮ್ಮೆ ಶಿಬಿರದಲ್ಲೇ ರುಚಿ ತೋರಿಸಿ ಅವರನ್ನು ಸಿದ್ಧಗೊಳಿಸಬೇಡವೆ? ಶಿಬಿರದಲ್ಲಿ ದೊರೆಯುತ್ತಿದ್ದ - ಗುಣ ಮತ್ತು ಪರಿಮಾಣಗಳೆರಡರಲ್ಲೂ ಕಠೋರವಾದ - ಸೌಕರ್ಯಗಳನ್ನೂ ಆಹಾರ ನಿಯಮಗಳನ್ನೂ ನೋಡಿದರೆ ಕಾರಂತರು ಹಾಗೆ

ಯೋಚಿಸುವಂತೆ ಕಾಣುತ್ತಿತ್ತು. ಕೆಲವು ದಿನ ತರಕಾರಿ ಇಲ್ಲದ ಊಟ, ಒಂದೆರಡು ದಿನ ಉಪ್ಪು ಹುಳಿ ಕಾಣದ ಊಟ, ನೀರಿನದೇ ಅಪರಾವತಾರವೆನ್ನಬಹುದಾದ ಮಜ್ಜಿಗೆ, ತುಪ್ಪದ ಸೋಂಕನ್ನು ನಿರಾಕರಿಸಿದ ತಪ್ಪೋಯೋಗ - ಇಂಥ ನಿಯಂತ್ರಣದಲ್ಲಿ ಶಿಬಿರವು ಸಾಗುತ್ತಿತ್ತು. ಅತಿಥಿಯಾದ ನನಗೆಷ್ಟೋ ರಿಯಾಯಿತಿ ಇದ್ದಿರಬೇಕು. ಕಡಿಮೆ ಆದರೂ ಎರಡು ದಿನ ತಂಗಿದ ನನಗೆ ಕಷ್ಟವಾಯಿತು ಎನ್ನುವಾಗ ಕಾರಂತರ ಕೈಯೊಳಗೆ ಸಿಲುಕಿದ ಭಾವೀ ದೇಶಸೇವಕರು ಇನ್ನೂ ಏನನ್ನೆಲ್ಲಾ ಅನುಭವಿಸಬೇಕಾಗಿತ್ತೋ ಅದು ಊಹಿಸಲರ್ಹವಾದ ವಿಷಯ. ಆದರೆ ಕಾರಂತರ ಶಿಷ್ಯರು ಅವರ ಮೇಲಿಟ್ಟ ವಿಶ್ವಾಸ, ಶಿಬಿರದಲ್ಲಿ ಅವರು ಓಡಿಯಾಡುತ್ತಿದ್ದ ಉಲ್ಲಾಸ, ಕೆಲಸ ಮಾಡುವುದರಲ್ಲಿ ಅವರು ತೋರುತ್ತಿದ್ದ ಶ್ರದ್ಧೆ, ಭಕ್ತಿಗಳನ್ನು ನೋಡಿ ನಾನು ವಿಸ್ಮಿತನಾದೆ. ಕವಾಯತು, ಶ್ರಮದಾನ ಮುಂತಾದ ಎಲ್ಲ ಶಿಬಿರಗಳಲ್ಲಿರುವ ಸಾಮಾನ್ಯ ಚಟುವಟಿಕೆಗಳು ಮಾತ್ರವಲ್ಲದೆ ಕಾರಂತರ ಶಿಬಿರದಲ್ಲಿ ಪ್ರತಿ ಸಾಯಂಕಾಲ ಸ್ವಯಂಸೇವಕರಿಗೆ ಸಾಂಸ್ಕೃತಿಕ ತರಗತಿಯ ಏರ್ಪಾಟಿತ್ತು. ನನ್ನಂಥ ಹೊರಗಿನ ಮಾತಿನವರು ಯಾರಾದರೂ ಸಿಕ್ಕಿದರೆ ಸರಿ, ಇಲ್ಲವಾದರೆ, ನಾಯಕ ಕಾರಂತರದೇ ಉಪನ್ಯಾಸಗಳು. ಮುಗಿದ ಮೇಲೆ ವಿನೋದಾವಳಿ. ಪ್ರತಿಯೊಂದೂ ಗಡಿಯಾರದ ಮುಳ್ಳಿನಂತೆ ನಡೆಯಬೇಕು. ಯಾವ ಕೆಲಸ, ಕಾರ್ಯಕ್ರಮ ಆದರೂ ಸರಿಯೇ. ಒಬ್ಬರನ್ನು ಕಾಯುವ ಪರಿಪಾಠ ಇಲ್ಲ. ಯಾರೂ ಬರದಿದ್ದರೆ ಕಾರಂತರೊಬ್ಬರೇ ಆ ಕೆಲಸ ಮಾಡಿ ಮುಗಿಸುವರು. ನಾನು ಅಲ್ಲಿ ತಂಗಿದ ಮೂರನೆಯ ಬೆಳಗಿನ ಜಾವ ಶಿಬಿರದವರು ಹಿಂದಿನ ರಾತ್ರಿ ನಿದ್ದೆಕೆಟ್ಟಿದ್ದುದರಿಂದ ಏಳಬೇಕಾದ ಹೊತ್ತಿಗೆ ಏಳಲಿಲ್ಲ. ಪ್ರಾರ್ಥನಾಕಾಲ ಸಮೀಪಿಸಿತು. ಕಾರಂತರು ಒಬ್ಬರೇ ಕೈಯಲ್ಲಿ ಲಾಟೀನು ಹಿಡಿದು ಹೊರನಡೆದರು; ಆ ನಸುಬೆಳಕಿನಲ್ಲಿ ಪೂರ್ವಕ್ಕೆ ಮುಖಮಾಡಿ ಏಕಾಕಿಯಾಗಿ ಪ್ರಾರ್ಥನೆಯನ್ನು ಜರುಗಿಸಿದರು; ಧ್ವಜವನ್ನು ಏರಿಸಿದರು. ಇನ್ನೊಂದು ನೆನಪು: ಆ ಸಂಜೆ ನಾವು ಅಡ್ಡಾಡಲು ಹೋದೆವು. ದಾರಿಯಲ್ಲಿದ್ದ ಒಂದು ಎತ್ತರವಾದ ಗೇರುಮರವನ್ನು ನೋಡುತ್ತಲೇ ಕಾರಂತರು ನಿಂತರು. ಒಂದು ಕಲ್ಲನ್ನು ಹುಡುಕಿ ರಪ್ಪನೆ ಮೇಲೆ ಬೀಸಿ ನಾಲ್ಕು ಗೇರುಹಣ್ಣು ಉರುಳಿಸಿ ಹೊಸ ಹಣ್ಣಿನ ರುಚಿಯನ್ನು ನನಗೆ ತೋರಿಸಿದರು. ಗೋಡಂಬಿಯ ಹಸಿ ಬಿತ್ತದ ರುಚಿ ನನಗೆ ತೀರ ಹೊಸತು. ಆದರೆ ಆಸೆ ನನಗೆ ಇನ್ನೂ ತೀರಿಲ್ಲ. ಮಾರ್ಚ್-ಏಪ್ರಿಲ್ ತಿಂಗಳು ಬಂದಾಗೆಲ್ಲ ಆ ನೆನಪು ಹಾದು ಬಾಯಿಯಲ್ಲಿ ನೀರೂರುತ್ತದೆ. ಗುರಿ ತಪ್ಪದಂತೆ ಹಣ್ಣಿಗೆ ಕಲ್ಲೆಸೆಯಲು ಅವರು ನಿಂತ ಭಂಗಿ ನನಗೆ ಈಗಲೂ ಕಣ್ಣಿಗೆ ಕಟ್ಟುತ್ತಿದೆ. ಇತರ ವಿಷಯಗಳಲ್ಲೂ ಹೀಗೆಯೇ; ಕಾರಂತರು ಹೊಡೆದ ಕಲ್ಲು ಇದೇ ರೀತಿ ಅವರೆಣಿಸಿದ ಗುರಿಯನ್ನು ಮುಟ್ಟುತ್ತದೆ. ಹಾಗೆ ತಾಕಬೇಕಾದರೆ ಅವರ ನಿಲುಮೆಯೇ (ಕಲ್ಲು ಹಿಡಿದ ಕೈತೂಕ, ಎಸೆತದ ಹದಗಳೇ) ಕಾರಣ. ಹಿಡಿದದ್ದನ್ನು ಸಾಧಿಸಿಯೇಬಿಡಬೇಕೆಂಬ ಹಟ - ಸಾಧನೆಯ ಹಟ, ಹಟದಿಂದ ಸಾಧನೆ - ಅವರ ಯಶಸ್ಸಿಗೆ ಕಾರಣ.



ಕಾರಂತರ ಜೀವನವು ಮುಖ್ಯವಾಗಿ ಪ್ರವಹಿಸಿದೆ. ಅವರಂತೆ ವಿಧವಿಧವಾದ ಪ್ರತಿಭೆಯುಳ್ಳವರು ಕನ್ನಡ ಸಾಹಿತಿಗಳಲ್ಲಿ ಬೇರೆ ಯಾರೂ ಇಲ್ಲ. ಬರವಣಿಗೆ ಅವರ ಜೀವನದ ಎಷ್ಟು ದೊಡ್ಡ ಭಾಗವೆಂದಿಟ್ಟುಕೊಂಡರೂ ಅದು ಅವರ ಹಲವು ಚಟುವಟಿಕೆಗಳಲ್ಲಿ ಒಂದೆಂಬುದನ್ನು ನಾವು ಮರೆಯುವ ಹಾಗಿಲ್ಲ. ಅವರ ಮನಸ್ಸೇ ಹಾಗೆ: ತೀಕ್ಷ್ಣ, ಅವಿಶ್ರಾಂತ, ಬಹುಪ್ರವೃತ್ತ, ಅತೃಪ್ತ. ಯಾವ ಒಂದೇ ವಿಷಯದಲ್ಲಿಯೂ ಬಹುಕಾಲ ಸ್ಥಿರವಾಗಿ ನಿಲ್ಲದು. ಒಂದು ಕೆಲಸದಿಂದ ಇನ್ನೊಂದಕ್ಕೆ, ಒಂದು ಬಗೆಯಿಂದ ಮತ್ತೊಂದಕ್ಕೆ, ಒಂದು ಸಾಹಿತ್ಯ ಪ್ರಕಾರದಿಂದ ಇನ್ನೊಂದರ ಬೆಳಸಿಗೆ ಜಿಗಿಯುವ ಅವರ ಈ ಪ್ರವೃತ್ತಿಯನ್ನು ಕಂಡಾಗ ಸ್ಥಿರಬುದ್ಧಿಯೇ ಇವರಿಗಿಲ್ಲವೋ ಅನಿಸುತ್ತದೆ - ಆಳವಾಗಿ ವಿಚಾರಿಸದವರಿಗೆ. ಈ ನಾನಾಮುಖಿ ಪ್ರತಿಭೆಯ ದೆಸೆಯಿಂದಲೇ ಅವರು ಹಿಡಿದ ಕೆಲಸವನ್ನು ಅನ್ನ ನೀರಿಲ್ಲದೇ, ಭೂತ ಹಿಡಿದವರಂತೆ ಪಟ್ಟು ಹಿಡಿದು, ಮುಗಿಸಿಬಿಡುತ್ತಾರೆ. ಎಷ್ಟು ಸ್ವಲ್ಪ ಕಾಲಾವಕಾಶವಾದರೂ ಸರಿಯೆ, ಆವೇಶ ಬಂದಾಗ ನೂರಾರು ಪುಟಗಳನ್ನು ಬರೆದು ಇಡುತ್ತಾರೆ. ಅವರು ಯೋಚನೆ ಮಾಡುವುದು ಎಂದರೆ ಕೆಲಸ ಮಾಡುವುದು ಎಂದೇ ಅರ್ಥ. ನಡುವೆ ಆತಂಕಗಳಿಂದಾಗಿ ಕೆಲಸ ತಡವಾದರೆ ಅವರಿಗೆ ಸೈರಣೆ ಇಲ್ಲ. ವೇಗವಾಗಿ ಧಾವಿಸುವುದು ಅವರ ಸ್ವಭಾವ. ಅವರ ಕೃತಿಗಳು ಕೊನೆಗೊಳ್ಳುತ್ತಾ ಬಂದ ಹಾಗೆ ಅವಸರದ ಚಿನ್ಹೆ ಸ್ಪಷ್ಟವಾಗಿ ಮೂಡಿರುತ್ತದೆ. ಅವರ ದೊಡ್ಡ ಕಾದಂಬರಿಗಳ ಆರಂಭದಲ್ಲಿರುವ ಅವಧಾನ, ಅದ್ರುತತೆ, ಸಂಪೂರ್ಣತೆ - ಕೆಲವು ವೇಳೆ ಕೊನೆಯಲ್ಲಿರುವುದಿಲ್ಲ. ಇದಕ್ಕೆ ಕಾರಣ ಕೃತಿಯು ಮುಗಿಯುತ್ತಿರುವ ಹಾಗೆ ಅವರಿಗೆ ಅದರಲ್ಲಿ ಆಸಕ್ತಿ ಕುಂದುವುದು. ಅಥವಾ, ಅಷ್ಟರಲ್ಲೇ ಅವರ ಆಸಕ್ತಿಯನ್ನು ಇನ್ನಾವುದೋ ಒಂದು ಕೆರಳಿಸಿರುವುದು. ಆದ್ದರಿಂದ ಈ ಕಡೆಗೆ ಧ್ಯಾನ ಕಡಿಮೆ ಆಗಿ, ಆ ಕಡೆಗೆ ಮನಸ್ಸು ತೊನೆಯುವುದು. ಇಡೀ ಕೃತಿಯನ್ನು ಮುಗಿಸಿದ ಮೇಲೆ ಒಂದು ಸಾರಿ ತಿದ್ದಬಾರದೆ, ಅಲ್ಲಿ ಇಲ್ಲಿ ಒಪ್ಪಕೊಟ್ಟರೆ ಇನ್ನಷ್ಟು ಚೆನ್ನಾಗದೆ ಎಂದು ಯಾರಾದರೂ ಹೇಳಿದರೆ ಕಾರಂತರು ಮುಗುಳ್ನಕ್ಕು ಅದಕ್ಕೇನಂತೆ, ಹೊಸದಾಗಿ ಬೇರೊಂದನ್ನು ಬರೆಯಬಹುದಲ್ಲ ಎನ್ನುವರು. ಅವರ ಭಾವಗಳೂ ವಿಚಾರಗಳೂ ರಚನೆಗಳೂ ಒಂದನ್ನೊಂದು ಬೆಂಬತ್ತಿ ಓಡುವ ದ್ರುತಗತಿಯಿಂದಾಗಿ ಅವುಗಳಲ್ಲಿ ಯಾವುದೂ ಪೂರ್ತಿಯಾಗಿ ಸಾವಕಾಶವಾಗಿ ರಚಿತವಾದಂತೆ ಕಾಣುವುದಿಲ್ಲ. ಒಂದಕ್ಕಿಂತ ಹೆಚ್ಚು ಕೆಲಸಗಳಲ್ಲಿ ಏಕಕಾಲದಲ್ಲಿ ಕೈ ಹಾಕಿ ನಡೆಸುವುದೂ, ಪರಿಣಾಮವು ಬೇಗನೆ ಬರಬೇಕೆಂದು ಹಾತೊರೆಯುವುದೂ ಅವರ ಸ್ವಭಾವ. ಹಾಗೆಯೇ, ಇನ್ನಾವುದೋ ವಸ್ತುಸಾಮಗ್ರಿಯನ್ನು ಅಣಿಮಾಡಿದ ಬಳಿಕ ಹೊಳೆಯ ದಂಡೆಗೊ ಅಥವಾ ಬೇರೆ ಯಾವುದಾದರೂ ಪ್ರಶಾಂತ ಸ್ಥಳಕ್ಕೊ ಹೋಗಿ ಅಲ್ಲಿ ತನ್ನ ರಚನೆಯನ್ನು ಮೊದಲಿನಿಂದ ಕೊನೆಯವರೆಗೂ ಸಂಯೋಜಿಸಿಕೊಂಡು, ಘಟನೆಗಳನ್ನು ಹೊಂದಿಸಿಕೊಳ್ಳುವರು. ಇದನ್ನು ಕಾರಂತರ ಪರಿಚಯವುಳ್ಳವರೆಲ್ಲ ಬಲ್ಲರು. 'ಬಾಲಪ್ರಪಂಚ'ವೆಂಬ ಮಕ್ಕಳ ವಿಶ್ವಕೋಶವನ್ನು ಅವರು ತಯಾರಿಸಿದ್ದು ಈ ರೀತಿ. ಎಡಬಿಡದೆ ನಾಲ್ಕು ತಿಂಗಳು

ಬರವಣಿಗೆ, ಲೆಟರ್‌ಪ್ರೆಸ್ ಅಚ್ಚು , ಪಡಿಯಚ್ಚು ಎಲ್ಲವೂ ಸಿದ್ಧವಾದ ಬಳಿಕ ಪ್ರಕಾಶಕರು ತಮ್ಮಪಾಲಿಗೆ ಬಂದ ಅಂಶವನ್ನು ಪೂರ್ತಿಗೊಳಿಸುವ ವರೆಗೆ ಅವರ ಬೆನ್ನು ಹತ್ತಿ ಕೆಲಸ ಮಾಡಿಸಿಕೊಂಡರು. ಹಿಡಿದ ಕೆಲಸವನ್ನು ನಡುವೆ ನಿಲ್ಲಿಸುವುದು ಅವರಿಗೆ ತಿಳಿಯದು. ಅವರ ಒಳಗಿನ ಆವೇಶಕ್ಕೆ ಕಾರಣವಾದ ಭೂತಕ್ಕೆ ತೃಪ್ತಿ ತಿಳಿಯದು.

ಸುಮಾರು ಹತ್ತು-ಹನ್ನೆರಡು ವರ್ಷ ಪ್ರತಿವರ್ಷವೂ ಅವರು ತಮ್ಮ ಸ್ನೇಹಿತರ ಸಹಕಾರದಿಂದ ಪುತ್ತೂರಲ್ಲಿ ದಸರಾ ಉತ್ಸವವನ್ನು ಏರ್ಪಡಿಸಿ ಅದಕ್ಕೋಸ್ಕರ ಹಗಲಿರುಳು ದುಡಿಯುತ್ತಿದ್ದರು. ಕರ್ನಾಟಕದ ಎಲ್ಲ ಭಾಗಗಳಿಂದಲೂ ಉಪನ್ಯಾಸ, ಸಂಗೀತಗಳಿಗೆ ಸ್ನೇಹಿತರನ್ನು ಹಿಡಿದು ತರುವುದು, ಪ್ರತ್ಯೇಕವಾಗಿ ನಾಟಕಗಳನ್ನು ಬರೆದು ಹುಡುಗರನ್ನು ಕೂಡಿಸಿ ಅವನ್ನು ಆಡಿಸುವುದು, ಸ್ವತಃ ತಾನೇ ಕೈಯಿಂದ ರಂಗ ಸಜ್ಜಿಕೆಯನ್ನು ತಯಾರಿಸುವುದು, ಸ್ಫೂರ್ತಿ ಬಂದಾಗ ತಾನೇ ನಾಟಕಗಳಲ್ಲಿ ಪಾತ್ರ ವಹಿಸುವುದು, ಕುಣಿಯುವುದು - ಈ ಎಲ್ಲ ಕೆಲಸಗಳನ್ನು ಒಬ್ಬರೇ ಮಾಡುತ್ತಿದ್ದರೂ ಆಯಾಸಪಟ್ಟಂತೆ ಅವರು ಕಂಡದ್ದಿಲ್ಲ. ಹಿಡಿದ ಕೆಲಸದ ಆವೇಶವೂ ಆವೇಗವೂ ಅಗತ್ಯವೂ ಮುಗಿಯುತ್ತಲೇ, ವಿಶ್ರಾಂತಿಗೋಸ್ಕರ ಎಲ್ಲಾದರೂ ಹೋಗುವುದು ಅವರ ರೂಢಿ. ಹೆಚ್ಚಾಗಿ ತಿಂಗಳುಗಟ್ಟಲೆ ದೇಶಾಟನೆ ಮಾಡುವುದೇ ಅವರ ವಿಶ್ರಾಂತಿಯಾಗುತ್ತಿತ್ತು. ಎಷ್ಟರವರೆಗೆ ಹೊಸದೊಂದು ಆಸಕ್ತಿ, ವಿಚಾರ, ಪ್ರಿಯವಸ್ತು ಅವರನ್ನು ಕೆರಳಿಸಲಿಲ್ಲವೋ ಆ ವರೆಗೆ ಪರ್ಯಟನೆ, ವಿಶ್ರಾಂತಿ; ಆಮೇಲೆ ನೇರವಾಗಿ ಮನೆ ಸೇರಿ ಮರಳಿ ಅಧ್ಯವಸಾಯ, ಸಾಧನೆ, ಬರವಣಿಗೆ.

ಕಾರಂತರು ಕೈಗೊಂಡ ಎಲ್ಲ ಉದ್ಯಮಗಳಲ್ಲಿ ಲೇಖಕ, ಭಾಷಣಕಾರ, ನಾಟಕಕಾರ, ಫೋಟೋಗ್ರಾಫರ್, ಆದರ್ಶವಾದಿ, ಸುಧಾರಕ, ಉಪಾಧ್ಯಾಯ, ಪ್ರಕಟನಕಾರ, ಯಂತ್ರೋದ್ಯೋಗಪ್ರವರ್ತಕ, ಚಿತ್ರಗಾರ ಮುಂತಾದ ನಾನಾ ರೂಪಗಳಲ್ಲಿ ನಿಲವು ನಿಲುಗಡೆ ಇಲ್ಲದ ಉತ್ಸಾಹ ಮತ್ತು ಸಂತತವೇಗದ ಮುದ್ರೆ ಒತ್ತಿರುತ್ತದೆ. ಅವರ ಭಾವಗಳ ಚಲನವಲನ, ಅವುಗಳಲ್ಲಿ ಹುದುಗಿರುವ ಚೈತನ್ಯ, ಚಾಲನ ಶಕ್ತಿ, ತೇಜಸ್ಸು, ಅವರ ಪ್ರತಿಭೆಯ ವ್ಯಾಪನೆ, ಬಹುಮುಖತ್ವ, ಮನಸ್ಸಿನ ಶ್ರೀಮಂತಿಕೆ ಇವುಗಳೊಡನೆ ಹೆಜ್ಜೆ ಇಡುವುದು ಒಡನಾಡಿಗಳಿಗೆ ಅಸಾಧ್ಯವೇ ಸರಿ. ಅವರ ನಾಲ್ಕು ಹೆಜ್ಜೆಗೆ ನಾವು ಒಂದನ್ನೂ ಇಡಲಾರೆವು. ‘ಮುಕ್ತದ್ವಾರ’ವನ್ನಾಡಿಸುತ್ತಿದ್ದಾಗ ಕಾರಂತರಿಗೆ ತಾವು ಮಾಡಿಕೊಂಡಿದ್ದಂತೆ ಕಾಲನಟನ ನರ್ತನವನ್ನು ನಡೆಸುವುದು ಸೂಕ್ತವಲ್ಲವೆನಿಸಿತು. ಮಾರನೆಯ ದಿನವೇ ಪ್ರದರ್ಶನವಾದುದರಿಂದ ಕಾರಂತರು ಅಂದು ರಾತ್ರಿಯೆಲ್ಲ ಗೆಜ್ಜೆಕಟ್ಟಿ ಕುಣಿದು ಸಾಧನೆಮಾಡಿ ತಾವೇ ಕಾಲನಟನಾದರು. ಅವರ ನರ್ತನವೂ ಹಾಗೆಯೇ. ಅದರಲ್ಲಿ ಕಲಿಕೆ, ತಿದ್ದಿಕೆಯ ಅಂಶ ಕಡಮೆ; ಆವೇಶ, ಸ್ಫೂರ್ತಿ, ಆಶುಕಲ್ಪನಾಶಕ್ತಿ, ಆವಿಷ್ಕಾರಗಳೇ ಹೆಚ್ಚು. ಕಾರಂತರ ಮೂಡಿಗೂ, ಆವೇಶಕ್ಕೂ ಸಮನಾಗುವ ಇನ್ನೊಬ್ಬ ನಟನಾರು? ಅವನೆಷ್ಟೇ ಕಲಿತರೂ ನುರಿತರೂ ಆ ಅಂತಃಸ್ಫೂರ್ತಿಯನ್ನೆಲ್ಲಿಂದ ತಂದಾನು? ಗುರುಗಳಿಂದ ಕಲಿಯಬಹುದಾದ ತಂತ್ರಕ್ಕಿಂತ ಖಚಿತವಾದ, ನಿಯತವಾದ



ನಡೆಗಿಂತ, ಗುರುತಿಸಬಹುದಾದ ಬರೆದಿಡಬಲ್ಲ ಕ್ರಮಕ್ಕಿಂತ ಅಂತರಂಗದ ನುಡಿತವೇ ಅಧಿಕವಾಗಿರುವ ಕಾರಂತನೃತ್ಯ ಕಾರಂತರೊಬ್ಬರಿಗೇ ಸಾಧ್ಯವಲ್ಲವೆ? ಅವರ ಜತೆಗೆ ಕುಣಿಯಬೇಕಾದವರಿಗೂ, ಇರಬೇಕಾದವರಿಗೂ ತುಂಬಾ ಸಹನೆ ಅಗತ್ಯ. ಅವರಿಗೋಸ್ಕರ ಮನೆಕಟ್ಟಿ ಅದನ್ನು ನಡಸುತ್ತಿರುವ ಅವರ ಜೀವನ ಸಂಗಾತಿಗೆ ಅದೆಷ್ಟು ತಾಳ್ಮೆ ಬೇಕೊ ದೇವರೇ ಬಲ್ಲ. ಕಾರಂತರ ಪ್ರತಿಭೆಗೆ ಮನಸೋತು, ಒಲಿದುಬಂದ ಶ್ರೀಮತಿ ಲೀಲಾದೇವಿಯವರಿಗೆ ಮಕ್ಕಳ ಮತ್ತು ಕಾರಂತರ ಲಾಲನೆಪಾಲನೆಯೊಂದೇ ಅಲ್ಲದೆ, ಅವರ ಲೆಕ್ಕಪತ್ರವನ್ನೂ ನೋಡಿಕೊಂಡು ಮನೆಗೆ ಹೇಳಿ-ಹೇಳದೆ ಬರುವ ಅಸಂಖ್ಯ ಮಿತ್ರರ, ಅತಿಥಿಗಳ ಸತ್ಕಾರ ಮಾಡುತ್ತ, ನಡುನಡುವೆ ಕಾರಂತರ ಗ್ರಂಥಗಳ ನಕಲು ತೆಗೆಯುತ್ತ, ಅವರೊಡನೆ ನೃತ್ಯ ಮಾಡುತ್ತ, ಅವರ ಪ್ರಿಂಟರಿಯ ವ್ಯವಸ್ಥೆ ನೋಡಿಕೊಳ್ಳುತ್ತ, ಮನೆಯ ಎಮ್ಮೆ ಹಸು ಹುಲ್ಲೆ ನಾಯಿಗಳನ್ನು ನೋಡಿಕೊಳ್ಳುತ್ತ ಇರಬೇಕಾದರೆ ಎಂಥ ತಾಳ್ಮೆ ಬೇಕಾದೀತು? ಅವರಿಗೆ ನಮೋ.

ಇಂಥ ಆವೇಶ ಮತ್ತು ಸಾಧನೆಯ ಉದ್ವೇಗವು ಕಳೆದಾಗ ಕಾರಂತರ ವ್ಯಕ್ತಿತ್ವವು ಪರಿನಿರ್ಮಲವಾಗಿ ಗೋಚರವಾಗುತ್ತದೆ. ಅವರ ಛಲವು ಅವರನ್ನು ಬಿಟ್ಟಿರುವ ಸಮಯ ಕಾರಂತರಷ್ಟು ಸ್ನಿಗ್ಧ ವ್ಯಕ್ತಿ, ‘ಸಾಧುಪ್ರಾಣಿ’ ಬೇರೆ ಇಲ್ಲ. ಆಗ ಅವರಿಗೆ ಪ್ರತಿಯೊಬ್ಬರ ಹತ್ತಿರವೂ ಹೋಗಿ ನಾಲ್ಕು ಹಾಸ್ಯೋಕ್ತಿಗಳನ್ನು ಹೇಳಿ ಎಲ್ಲರನ್ನೂ ನಗಿಸಿ ತಾನೂ ನಕ್ಕು ಪ್ರೇಮ ಮತ್ತು ವಿಶ್ವಾಸದ ವಾತಾವರಣವನ್ನು ನೆಲೆಗೊಳಿಸುವುದು ಇಷ್ಟವಾಗುತ್ತದೆ. ಮಕ್ಕಳೊಡನೆ ಅವರು ಒಂದು ಕ್ಷಣಾವಕಾಶದಲ್ಲಿ ಬೆಳೆಸಬಲ್ಲ ಸವಿ, ಸದರ ಆಶ್ಚರ್ಯಕರ ವಾದ್ದು. ಹಾಗೆಯೇ ನೂರಾರು ಜನದೊಡನೆ ಕೆಳೆ ಬೆರೆವ, ನೆರವು ನಡೆವ, ಒಲಿದು ಒಲಿಸುವ ಬಾಳಗುಣ ಕೂಡ. ಇದು ಸೌಜನ್ಯದಿಂದ, ಸ್ನೇಹಪರತೆಯಿಂದ ಎಲ್ಲವನ್ನೂ ಪ್ರೀತಿಸುವ ಮನೋಧರ್ಮದಿಂದ ಮಾತ್ರ ಬರಬಲ್ಲ ಗುಣ. ಅವರ ಮಾನವೀಯತೆ ಮತ್ತು ಅಂತಃಕರಣ ಪ್ರವೃತ್ತಿ ಇವಕ್ಕೂ ಅವರ ನಡತೆಗೂ ಇರತಕ್ಕ ಅನ್ಯೋನ್ಯ ಸಾಮರಸ್ಯವು ಅವರ ಜೀವನದ ಪರಮ ವೈಶಿಷ್ಟ್ಯವೆಂದು ನನಗನಿಸುವುದು. ಇದರಿಂದಲೇ ಕಾರಂತರೊಡನೆ ಕೂಡಿ ಆಡುವುದು ಅಷ್ಟು ಸುಲಭ. ಅವರ ವಾದಕ್ಕೆ ನಿಮ್ಮ ಸಮ್ಮತಿ ಇರಲಿ, ಇಲ್ಲದಿರಲಿ, ನಿಮಗೆ ಅವರ ವಾದವು ಏನೆಂದು ಅವರೇ ಸ್ಪಷ್ಟವಾಗಿ ತಿಳಿಸುವುದರಿಂದ, ನಿಮ್ಮ ನಿಲುಮೆಯಲ್ಲಿ ಶಂಕೆಗೆ ಎಡೆ ಇಲ್ಲ. ನೀವು ಅವರ ವಾದಕ್ಕೆ ಒಪ್ಪಿದಿರೋ ನಿಮ್ಮ ಧ್ಯೇಯಸಾಮರಸ್ಯದಿಂದ ಉಂಟಾಗುವ ಸಂತೋಷ ಒಂದು ತರ; ಒಪ್ಪಲಿಲ್ಲವೋ ನಿಮ್ಮ ಅಭಿಪ್ರಾಯ ನಿಮಗೇ ಇರಲಿ, ಅಷ್ಟು ಮಟ್ಟಿಗೆ ಕಾರಂತರಿಗೂ ನಿಮಗೂ ಒಡಂಬಡಿಕೆ ಇಲ್ಲ; ನಿಮ್ಮ ಪಾಡಿಗೆ ನೀವು, ಅವರ ಪಾಡಿಗೆ ಅವರು. ಅವರ ಮಾತು ಕಟುವಾದರೂ ಅವರಲ್ಲಿ ಕಟುಕತನವಿಲ್ಲ. ಅಭಿಪ್ರಾಯವು ನೇರವಾಗಿ ನೆಟ್ಟರೂ ನೋವಿಲ್ಲ. ಮಾತು ಕಹಿಯೆನಿಸಿದರೂ ಮನುಷ್ಯ ಸಂಬಂಧಗಳನ್ನು ಕೆಡಿಸುವಂಥಾದ್ದಲ್ಲ.

ಅವರ ಅಸಂಖ್ಯ ಅಭಿರುಚಿಗಳು, ದೇಶದ ಒಳಗಿನ ಮತ್ತು ಹೊರಗಿನ ಸ್ನೇಹಸಂಬಂಧಗಳು, ಪತ್ರವ್ಯವಹಾರದ ಹತ್ತು ಮುಖಗಳು, ತ್ರಿಲೋಕ ಸಂಚಾರಿಯಂತೆ ಅವರು ಸುತ್ತುವ ಪ್ರಾಂತದೇಶಗಳು, ಪತಿತರನ್ನು ನಿರ್ಮಲ ಜೀವನದತ್ತ ಒಯ್ದು ಮನುಷ್ಯವ್ಯಕ್ತಿಗಳನ್ನಾಗಿ ಮಾಡಿ ಪ್ರಪಂಚದಲ್ಲಿ ಅವರನ್ನು ತಲೆಎತ್ತಿ ಬಾಳುವಂತೆ ಮಾಡುವ ಅವರ ಪುನರ್ನಿವೇಶನದ ಪ್ರಯತ್ನಗಳು ಮುಂತಾದ್ದನ್ನು ಕುರಿತು ನಾನು ಏನನ್ನೂ ಹೇಳಬಯಸುವುದಿಲ್ಲ. ಏಕೆಂದರೆ, ಸಾಹಿತ್ಯಲೋಕದ ನಮಗೆ ಇವು ಅಪ್ರಕೃತ. ಕರ್ನಾಟಕದಲ್ಲಿ, ಕನ್ನಡ ಸಾರಸ್ವತ ಪ್ರಪಂಚದಲ್ಲಿ ಇಂದು ಅವರ ಗಣನೆ ಒಬ್ಬ ಸಾಹಿತಿ ಎಂದು. ಅವರ ಸಾಹಿತ್ಯದ ಹೆಚ್ಚಿನ ಭಾಗ ಗುಣದಲ್ಲಿ , ಪರಿಮಾಣದಲ್ಲಿ, ವೈವಿಧ್ಯದಲ್ಲಿ ಭಾರತದಲ್ಲಿ ಸೃಷ್ಟಿಯಾಗುತ್ತಿರುವ ಯಾವ ಉತ್ತಮ ಸಾಹಿತ್ಯಕ್ಕೂ ಕಡಿಮೆಯಾಗಿಲ್ಲ. ಕನ್ನಡ ಸಾಹಿತ್ಯದ ಯಾವ ಪ್ರಕಾರವನ್ನು ತೆಗೆದುಕೊಂಡರೂ ಸರಿಯೆ; ಆ ಭಾಗದ ಮೊದಲ ಐದಾರು ಮಂದಿಯಲ್ಲಿ ಕಾರಂತರು ಒಬ್ಬರು.

ಕಾರಂತರು ಪ್ರಾಧಾನ್ಯದಿಂದ ಕವಿಯಲ್ಲವಾದರೂ ಒಳ್ಳೆಯ ಗೀತಗಳನ್ನು ಕಟ್ಟಿದ್ದಾರೆ. ನಾಟಕ ಕಲೆಯ ಪ್ರಯೋಜನಕ್ಕೆ ಅವನ್ನು ಹೂಡಿದ್ದಾರೆ. ಅವರ ಗೀತನಾಟಕಗಳು ಕಾವ್ಯದ ಒಂದು ವಿಶೇಷ ರೂಪವೇ. ಒಂದು ಬಗೆಯ ದೃಶ್ಯದಲ್ಲಿ ಲೇಖಕನು ವ್ಯಕ್ತಗೊಳಿಸಬೇಕೆಂದಿರುವ ಭಾವಗಳಿಗೆ ಹೆಚ್ಚಿನ ಒತ್ತು, ಆಳ, ರಂಜನೆ ಬರಬೇಕಾದರೆ ನಾಟಕದೊಡನೆ ಕವಿತೆ, ಗೀತ ಸಮಾವೇಶಗೊಳ್ಳಬೇಕು. 'ಸೋಮಿಯ ಸೌಭಾಗ್ಯ'ವೆಂಬ ನಾಟಕದಲ್ಲಿ ಕಾರಂತರು ಉಪಯೋಗಿಸಿದ ಜಾನಪದ ಗೀತೆಗಳು ಕವಿತೆಯಲ್ಲದೆ ಬೇರೇನು? ಅವರು ಬರೆದ ಐತಿಹಾಸಿಕ, ಧಾರ್ಮಿಕ, ಕಾಲ್ಪನಿಕ, ಅದ್ಭುತರಮ್ಯ ನಾಟಕ ಗಳಲ್ಲಿ ಕವಿತೆಗಳೂ ಗೀತೆಗಳೂ ಧಾರಾಳವಾಗಿ ಪ್ರಯೋಗಿಸಲ್ಪಟ್ಟಿವೆ. ತಮ್ಮ ಪ್ರಾಂತದ 'ದೇಸಿ' ಅಥವಾ ಜಾನಪದ ಗೀತೆಗಳ ನಿಲವು ಒಲವುಗಳನ್ನು ಅವರು ಹಾರ್ದಿಕವಾಗಿ ಬಲ್ಲರು. ಅವರ ಕಿವಿಗೂ ಕಂಠಕ್ಕೂ ತಾಳ, ಲಯ, ತಾನಗತಿಯ ನಾನಾಪ್ರಕಾರಗಳನ್ನು ಸೆರೆಹಿಡಿಯುವ ಚುರುಕಿದೆ. ಅವರ ನರ್ತನಗಳಿಗೂ ನಾಟಕಗಳಿಗೂ ಅವರು ಉಪಯೋಗಿಸಿದ ತಾನಗಳು ಎಲ್ಲೆಲ್ಲಿಂದಲೋ ಬಂದವು. 'ಕಿಸಾಗೋತಮಿ'ಯಲ್ಲಿ ಭಾವವು ಏಕಧಾರೆಯಾಗಿ, ಏಕಗತಿಯಲ್ಲಿ ಹರಿಯುವಂತೆ ಕಂಡರೆ, 'ಮುಕ್ತದ್ವಾರ'ದಲ್ಲಿ ಬರುವ ಧರ್ಮದಾತರ ಶ್ರೇಣಿಯ ಧಾರಾವಾಹಿ ಚಿತ್ರಣಕ್ಕಾಗಿ ಗೀತಗಳ ತಾನಗತಿ ವೈವಿಧ್ಯಸಂಪನ್ನವಾಗಿ ಲಾಸ್ಯವಾಡುವುದು. ಛಾಯಾನಾಟಕಗಳಲ್ಲಿಯೂ, ಮಕ್ಕಳು ಮತ್ತು ಪ್ರಾಣಿಗಳೇ ಪಾತ್ರಧಾರಿಗಳಾದ ವಿಡಂಬನೆಗಳಲ್ಲಿಯೂ, ಅವರು ಉಪಯೋಗಿಸುವ ಛಂದೋಗತಿ ಬೇರೆಯೇ ಒಂದು ವಿಧವಾಗಿರುವುದು. ಅದರ ತಂತ್ರವಿಶೇಷ ಇನ್ನೂ ನಮ್ಮ ಸಾಹಿತಿಗಳ ಗಮನಕ್ಕೆ ತಟ್ಟಿದಂತಿಲ್ಲ . 'ಶೀಲಭಂಗ'ವೆಂಬ ಇನ್ನೊಂದರಲ್ಲಿ ಪ್ರಕೃತಿಯ ಚೆಲುವನ್ನು ನಮ್ಮ ಪ್ರೀತಿ, ಭಕ್ತಿಗಳ ಪ್ರದರ್ಶನಕ್ಕಾಗಿ ನಾಶಮಾಡುವ ಪ್ರವೃತ್ತಿ ಅವರಿಗೆ ಹೇಗೆ ಕಾಣಿಸಿತೆಂಬುದರ ರೂಪಣವಿದೆ. ಅಥವಾ ಅಂಥ ಒಂದು ಸನ್ನಿವೇಶದಲ್ಲಿ ಹುಟ್ಟಿದುದು ಈ ಕೃತಿ ಎನ್ನಬಹುದು. 'ಯಾರೋ ಅಂದರು' ಎಂಬ



ಗೀತನಾಟಕದ ಛಂದಸ್ಸಿನಲ್ಲಿ ಶ್ರೋತೃಗಳನ್ನು ನಗಿಸುವ ಶಕ್ತಿಯನ್ನು ನಾವು ಗುರುತಿಸಬಹುದು. ಕಾರಂತರು ತುಳಿದ ಈ ಹೊಸದಾರಿ ನಾಟಕಕಲೆಯ ತಂತ್ರದ ದೃಷ್ಟಿಯಿಂದ ಬಹಳ ಮಹತ್ತಾದುದು. ಇದೊಂದು ದೊಡ್ಡ ಸಾಧನೆ.

ವಿಡಂಬನೆಯ ಅನೇಕ ಕೃತಿಗಳನ್ನು ಕಾರಂತರು ರಚಿಸಿದ್ದಾರೆ. ಉದಾ: ನಾರದನನ್ನು ನಾಯಕನನ್ನಾಗಿ ಇಟ್ಟುಕೊಂಡು ಅವರು ತಮ್ಮ ಬರವಣಿಗೆಯ ಆರಂಭಕಾಲದಲ್ಲಿ ರಚಿಸಿದ 'ದೇವದೂತರು' ಎಂಬ ಕೃತಿ. ಅದರ ಕೆತ್ತನೆ ಸ್ವಲ್ಪ ಒರಟಾಗಿದೆಯೆನ್ನುವಿರೇನೋ. ಆದರೆ ಬಳ್ಳಿ ಮಿಂಚಿನ ತಿವಿತವಿದೆ ಅಲ್ಲಿ. ಮಿಂಚು ನೋಡಲು ಚೆನ್ನ. ಆದರೆ ಸಾವಿರ ಮೈಲಿಯ ದೂರದಲ್ಲಿ ಅದರ ಕಾವು ಸುಡುವುದು, ಜೋಕೆ. ಆಮೇಲಿನ 'ಗ್ನಾನ'ದಲ್ಲಿ ಬರುವ ವಿಡಂಬನೆಯೂ ಮೊನೆಯಾಗಿದೆ. 'ಗ್ನಾನ' ಎನ್ನುವ ತಲೆಬರಹದಿಂದ ಹಿಡಿದು ಸಂಗ್ರಹದ ಕಟ್ಟಕಡೆಯ ಪ್ರಬಂಧದ ಕಡೆಯ ಸಾಲಿನವರೆಗೂ ಕಾರಂತರ ವಿಡಂಬನೆಯ ಉಗುರಿನ ಚೂಪು ಪ್ರಕಟವಾದದ್ದೇ ಸರಿ. ಎಲ್ಲವನ್ನೂ ಎಲ್ಲರನ್ನೂ ವಿಡಂಬಿಸುವ, ಮೂದಲಿಸುವ ತುಂಟತನವು ನೈತಿಕ ಮೂಲ ಧ್ಯೇಯವುಳ್ಳ ಸೂಕ್ಷ್ಮಗ್ರಾಹಿ ಲೇಖಕನ ಜೀವನದಲ್ಲಿ ಬರುವ ಒಂದು ಘಟ್ಟವೆಂದು ಅದನ್ನು ನಾವು ತಿಳಿಯತಕ್ಕದ್ದು. ಆದರೆ ಕಾರಂತರಿಗಿಂತ ಕಡಿಮೆ ಪ್ರತಿಭೆಯುಳ್ಳ, ಮನಸ್ಸಿನ ಆರೋಗ್ಯವುಳ್ಳ, ಕಡಮೆ ಸಂಯಮವುಳ್ಳ ಲೇಖಕನೊಬ್ಬನು ಈ ಹಾದಿ ಹಿಡಿದಿದ್ದರೆ ತನ್ನ ವಿಡಂಬನೆಗೆ ತಾನೇ ಮೋಹಗೊಂಡು ಹತಪ್ರಭನಾಗುತ್ತಿದ್ದನು. 'ಸುತ್ತಲೂ ಲತ್ತೆ ಕೊಡುವ ಕತ್ತೆ – ಇದು ಮಹನೀಯರೊಬ್ಬರ ಮುನ್ನುಡಿ' ಎಂದು 'ಗ್ನಾನ'ದ ಮೊದಲಲ್ಲಿ ಕಾರಂತರು ಬರೆದ ಟೀಕಾವಚನವು ಕಾರ್ಲೈಲನನ್ನು ಕುರಿತು ಯಾರೋ ಅಂದ ಮಾತು. ಸುತ್ತಲೂ ಲತ್ತೆ ಕೊಡುವ ಗುಣ ಕತ್ತೆಗೆ ಇರಲಿ, ಇಲ್ಲದಿರಲಿ, ಕಾರ್ಲೈಲನಲ್ಲಿತ್ತೋ ಇಲ್ಲವೋ, ಕಾರಂತರಿಗೆ ಅನಿಸಿತೋ, ತನ್ನ ಈ ಕೃತಿಯಲ್ಲಿದೆ ಎಂದು? 'ಗ್ನಾನ'ವನ್ನು ಬರೆದಾಗ ಇದ್ದ ಅವರ ಮನೋವೃತ್ತಿಗೆ ಈ ವರ್ಣನೆ ಹೊಂದುವಂತೆ ಕಾಣಿಸಿರಬೇಕು. ಇಲ್ಲದಿದ್ದರೆ ಆ 'ಗ್ನಾನ'ದ ವಾಕ್ಯವನ್ನು ಮುನ್ನುಡಿಯಾಗಿ ಅಚ್ಚುಮಾಡಿಸುತ್ತಿದ್ದರೆ?

ಕಾರಂತರು ಎರಡು ಪ್ರವಾಸ ಕಥನಗಳನ್ನು ಬರೆದಿದ್ದಾರೆ: 'ಅಬೂವಿಂದ ಬರಾಮಕ್ಕೆ,' 'ಅಪೂರ್ವ ಪಶ್ಚಿಮ.' ಈ ಎರಡು ಕೃತಿಗಳಲ್ಲೂ ಕನ್ನಡದಲ್ಲಿ ನಾವು ಬಹಳವಾಗಿ ಕಾಣದ ಪರ್ಯವೇಕ್ಷಣೆ, ನೋಟ ಇವೆ. 'ಅಪೂರ್ವ'ಕ್ಕೆ ಪೂರ್ವ ಅಲ್ಲದ್ದು ಎಂಬರ್ಥವಿರುವಂತೆಯೇ ಅಸಾಮಾನ್ಯವಾದುದು, ಸಾಧಾರಣವಾಗಿ ಕಾಣ ದೊರೆಯದುದು ಎಂಬ ಅರ್ಥವಿಶೇಷವೂ ಇದೆ. ಕಾರಂತರು ಬರೆಯಲು ಆರಂಭಿಸಿದಾಗ ಅವರಲ್ಲಿ ಅತಿರೇಕವಾಗಿ ಕಂಡುಬರುತ್ತಿದ್ದ ಶಬ್ದ ಚಮತ್ಕಾರವನ್ನೂ ಶಬ್ದ ಯುಕ್ತಿಯನ್ನೂ 'ಅಪೂರ್ವ ಪಶ್ಚಿಮ' ಎಂಬ ವಿಳಾಸದಲ್ಲಿಯೂ ನಾವು ಗುರುತಿಸಬಹುದು. ಆದರೆ ಇಲ್ಲಿನ ಶ್ಲೇಷ ಸಾರ್ಥಕ. 'ಅಪೂರ್ವ'ವು ಪಶ್ಚಿಮವೂ ನಿಜ,

ಅಪೂರ್ವವೂ ಸರಿಯೇ. ತನ್ನ ಬದುಕಿನಲ್ಲಿಯೂ ತನ್ನ ದೇಶಬಾಂಧವರ ಬದುಕಿನಲ್ಲಿಯೂ ಸೌಂದರ್ಯವನ್ನು ಹೆಚ್ಚಿಸಲಿಕ್ಕಾಗಿ ಕಾರಂತರು ದೇಶವಿದೇಶಗಳನ್ನು ಸುತ್ತಾಡಿದ್ದಾರೆ. ಅಲ್ಲಿನ ನಿಸರ್ಗ ಮತ್ತು ಮಾನವ ನಿರ್ಮಿತ ಚೆಲುವನ್ನು ಆವಾಹಿಸಿಕೊಂಡಿದ್ದಾರೆ; ಅರಗಿಸಿಕೊಂಡಿದ್ದಾರೆ. ಚಿತ್ರಕಲೆಯಲ್ಲಿ, ಸಂಗೀತದಲ್ಲಿ, ಶಿಲ್ಪದಲ್ಲಿ, ವಾಸ್ತುವಿನಲ್ಲಿ, ನರ್ತನದಲ್ಲಿ ಹೇಗೋ ಹಾಗೆ ಜನಜೀವನದಲ್ಲಿಯೂ ಸಂಘ ಜೀವನದಲ್ಲಿಯೂ ತಾನು ನೋಡಿದ ಸೃಷ್ಟಿಗುಣದ ಪ್ರಭಾವಕ್ಕೆ ಒಳಗಾಗಿ ಕಾರಂತರ ಅಂತರಂಗವು ಪ್ರಫುಲ್ಲಿತವಾಗಿದೆ, ಸಂಪನ್ನವಾಗಿದೆ. ಅವರ ದೃಷ್ಟಿ ಅಪೂರ್ವವಾಗಿದೆ. 'ತೆರೆಯ ಮರೆಯಲ್ಲಿ', 'ಹುಚ್ಚು ಮನಸ್ಸಿನ ಹತ್ತು ಮುಖಗಳು' ಎಂಬ ಕೆಲವು ಗ್ರಂಥಗಳಲ್ಲಿ ಅವರು ತಮ್ಮ ಮೇಲೆ ಪ್ರಭಾವ ಬೀರಿದ ವಸ್ತು, ವಿಚಾರ ಮತ್ತು ವ್ಯಕ್ತಿಗಳನ್ನು ಕುರಿತೂ ತನ್ನ ಅಂತರಂಗ ವಿಕಸನವನ್ನು ಕುರಿತೂ ಹೇಳಿಕೊಂಡಿದ್ದಾರೆ. ಪರಿವರ್ತನೆಗಳೂ ಅನಿರೀಕ್ಷಿತ ಘಟನೆಗಳೂ ಅವರ ವ್ಯಕ್ತಿತ್ವದ ಪುಷ್ಟಿಗೆ ಕಾರಣ; ಧ್ಯೇಯಸಾಧನೆಗೋಸ್ಕರ ಅವರಲ್ಲಿರುವ ಛಲಕ್ಕೆ ಪ್ರೇರಣೆ, ಪ್ರಚೋದನೆ. ಅವರ ವ್ಯಕ್ತಿತ್ವದಲ್ಲಿ ನಾವು ಕಾಣುವುದು ಗಂಡುಗಂಡಸುತನವನ್ನು, ಯಾರನ್ನೂ ಆಶ್ರಯಿಸದೆ ಸ್ವತಂತ್ರವಾಗಿಯೂ ನಿರ್ಭಯವಾಗಿಯೂ ಬಾಳುವ ಆತ್ಮಗೌರವವನ್ನು. ಅದರಲ್ಲಿ ಅರೆ, ಹಸಿ ಬಣ್ಣಗಳಿಗೊ ಮೈಗೆ ಹೊಂದಿಸಿಕೊಳ್ಳಲಾರದುದಕ್ಕೊ ಅವಕಾಶವಿಲ್ಲ. ಅದರಲ್ಲಿ ಅಂಶಗಳು ಸಮರಸವಾಗಿ ಬೆರೆತು ಒಂದು ಹದಕ್ಕೆ ಬಂದಿವೆ. ಪ್ರಪಂಚದೊಡನೆ ತನ್ನ ಷರತ್ತುಗಳ ಮೇಲಿಂದಲೇ ವ್ಯವಹರಿಸುವ ದಿಟ್ಟತನವುಳ್ಳ ಗಂಡುಜೀವನದ ಪರಿಚಯವು ಕಾರಂತರ ವ್ಯಕ್ತಿತ್ವದಲ್ಲಿ ನಮಗೆ ಕಾಣಸಿಗುವುದು.

ಕಾರಂತರನ್ನು ಈಗ ಸುಮಾರು ಮೂವತ್ತು ವರ್ಷಗಳಿಂದ ಬಲ್ಲೆನೆಂದೆ. ಇಷ್ಟು ದೀರ್ಘಕಾಲ ಅವರನ್ನು ನೋಡಿರುವ ಯಾರಿಗೂ ಅವರು ಎಷ್ಟು ಬೇಗ ಎಷ್ಟು ದೊಡ್ಡದಾಗಿ, ಸೂಕ್ಷ್ಮವಾಗಿ ಬೆಳೆದುಬಿಟ್ಟರು ಅನಿಸುತ್ತದೆ. ಅಪರಿಚಿತನೋರ್ವನ ಹತ್ತಿರ ಸ್ವಪ್ರತಿಷ್ಠೆಯನ್ನು ಮರೆತು ಪ್ರಶ್ನೆ ಟೀಕೆ ಕೇಳುವ ಎದೆ ಎಷ್ಟು ಜನರಲ್ಲಿರಬಹುದು? ಬೇರೆಯವರು ನಮ್ಮನ್ನು ನೋಡುವಂತೆ ನಮ್ಮನ್ನು ನಾವೇ ನೋಡಿಕೊಳ್ಳುವ ನಿರ್ಭಯ ಆತ್ಮಪರೀಕ್ಷೆ ಎಷ್ಟು ಜನರಿಗೆ ಇದ್ದೀತು? ನಮ್ಮ ದೃಷ್ಟಿಯಲ್ಲಿ ನಾವು ಸದಾ ಯೋಗ್ಯರೇ ಎಂದುಕೊಂಡು ಸ್ವವಿಮರ್ಶೆಗೆ ಯಾರೂ ಮನಸ್ಸು ಕೊಡರು. ಕಾರಂತರ ಖಂಡಿತವಾದ, ಸ್ವಾಭಿಪ್ರಾಯದ ಮೇಲಿನ ಅಭಿಮಾನ, ತವಕ ಮುಂತಾದುವನ್ನು ನೋಡಿದರೆ ಈ ಮನುಷ್ಯ ಸಹಜವಾದ ವಿಮರ್ಶೆಯನ್ನು ಸಾವಧಾನದಿಂದ ಆಲಿಸಿಯಾನೆ ಎಂದು ಸಂದೇಹ ಬರುವುದು. ಆದರೆ ಆತ್ಮವಿಮರ್ಶೆಮಾಡಿಕೊಳ್ಳುವ, ಪರರಿಂದ ಮಾಡಿಸಿ ಕೊಳ್ಳುವ ಗುಣವು ಅವರಲ್ಲಿದ್ದುದರಿಂದಲೇ ಅವರು ಬೆಳೆದರು, ಬಹುಬೇಗ ಇತರರಿಗಿಂತ ಎಷ್ಟೋ ಬೇಗ ಬೆಳೆದರು ಅನಿಸುತ್ತದೆ. ಇವರಷ್ಟು ವೇಗವಾಗಿಯೂ ಸಾಕಲ್ಯದಿಂದಲೂ ಬೆಳೆದ ಬೇರೆಯವರನ್ನು ನಾನು ಕಾಣೆ. ಯಾವ ಬಗೆಯ ಪರಾಧೀನತೆಗೂ ಒಳಪಡದೆ ಸ್ವಾಭಿಮಾನದಿಂದ ಸ್ವತಂತ್ರವಾಗಿ ಒಬ್ಬ ಮನುಷ್ಯ



ಬೆಳೆಯಲು ಏನೆಲ್ಲ ಸಿದ್ಧತೆ, ಎಷ್ಟು ಕಾಲದ ಸಿದ್ಧತೆ ಬೇಕೊ ಅಷ್ಟೆಲ್ಲವನ್ನು ಕಾರಂತರು ಮಾಡಿಕೊಂಡದ್ದರಿಂದಲೇ ಬೆಳೆದರು. ಕುದಿಯುವ ಕೆಚ್ಚನೆಯ ಕ್ರೋಧದ ಆವೇಗ, ಜಡತೆಯ ಅಸಹನೆ, ತ್ವರೆ, ಉದ್ವೇಗಪೂರಿತ ವಿಮರ್ಶೆ, ವಿಡಂಬನೆಗಳ ಕಾರಂತರೆಲ್ಲಿ? ತಿಳಿವಳಿಕೆಯಿಂದ ಮಾಗಿ ಅನುಭವದಿಂದ ಪಕ್ವವಾಗಿ ಮಿದುವಾಗಿ ಹಿತವಾಗಿ ಸ್ನಿಗ್ಧವಾಗಿ ಬೆಳೆದು ನಿಂತ ಇಂದಿನ ಕಾರಂತರೆಲ್ಲಿ? ನೈತಿಕ ಉದ್ವೇಗದ ಸುಂಟರ ಗಾಳಿಯಂತೆ, ಮತಾಂತರಿಸುವ ಪ್ರಬಲ ದೀಕ್ಷೆ ತೊಟ್ಟವರಂತೆ ಕಾಣುತ್ತಿದ್ದ, ವರ್ತಿಸುತ್ತಿದ್ದ ಆ ಕಾರಂತರೆಲ್ಲಿ? ಎಲ್ಲ ಬಗೆಯ ಮನುಷ್ಯರನ್ನೂ ಅಭಿಪ್ರಾಯಗಳನ್ನೂ ಗೌರವಿಸುವ ಈ ಕಾರಂತರೆಲ್ಲಿ? ಬಾಯ ಚಪಲವನ್ನು ಅಡಗಿಸಲಾರದೆ ಚೇಷ್ಟೆ ಕೀಟಲೆ ಮಾತುಗಳನ್ನು ಆಡುತ್ತಾ, ಈ ಮನುಷ್ಯ ನಾಲಿಗೆಯಿಂದ ತನ್ನ ಕುಳಿ ತೋಡಿಕೊಳ್ಳುತ್ತಿದ್ದಾನೆನ್ನಿಸುತ್ತಿದ್ದ ಆ ಕಾರಂತರೆಲ್ಲಿ? ಗಂಟೆಗೆ ಒಂದೆರಡು ಅದೂ ಅರೆ ಮಾತು ಆಡುತ್ತಾ ಮೌನವಾಗಿ ಗಂಟೆ ಗಂಟೆ ಕಳೆಯುವ ಈಗಿನ ಕಾರಂತರೆಲ್ಲಿ? ಅಂದಿಗಿಂತ ಮನಸ್ಸಿಗೆ ಹೆಚ್ಚು ನೆಮ್ಮದಿ ಬಂದಿದೆಯೆ? ಇಷ್ಟು 'ಯಮ'ವೇಕೆ ಎನ್ನಿಸುತ್ತದೆ, ಇನ್ನೂ ಅಷ್ಟು ವಿದಗ್ಧವಾಗದ ಮನಸ್ಸಿನ ನಮಗೆ. ಅಂದಿಗೂ ಇಂದಿಗೂ ಕಾರಂತರು ಎಷ್ಟೋ ಹದವಾದ್ದನ್ನು ನಾವು ಕಂಡಿದ್ದೇವೆ. ಅವರಲ್ಲಿ ನಡೆದ ಈ ಬದಲಾವಣೆಯನ್ನು ಅವರ ಸತ್ವವೆಲ್ಲವೂ ಪರಿಶುದ್ಧವಾಗಿ ನೆಲೆನಿಂತಿರುವ ಕಾದಂಬರಿಗಳ ಬೆಳವಣಿಗೆಯಲ್ಲಿ ಗುರುತಿಸಲು ಬರುತ್ತದೆ. ತನಗೆ ನೈಸರ್ಗಿಕವಾಗಿ ದೊರೆತ ಶಕ್ತಿಯನ್ನೂ ನಮ್ಮ ನಾಡಿನಲ್ಲಿ ಈ ೪೦-೫೦ ವರ್ಷಗಳಿಂದ ನಡೆಯುತ್ತಿರುವ ಜೀವನ ನಾಟಕದ ವಿನೋದ ವಿಷಾದಗಳನ್ನೂ ಸ್ವಾನುಭವದ ಮೂಸೆಯಲ್ಲಿರಿಸಿ ಸಾರವತ್ತಾದ ಕಾದಂಬರಿ ರೂಪದಲ್ಲಿ ಅವರು ಪ್ರಕಟಿಸಿದ್ದಾರೆ.

ಕನ್ನಡ ಸಾಹಿತ್ಯದ ಪ್ರಾದೇಶಿಕ, ಸಾಮಾಜಿಕ ಮತ್ತು ಸಾಮಾನ್ಯ ಕಾದಂಬರಿ ಪ್ರಪಂಚಕ್ಕೆ ಕಾರಂತರು ನೀಡಿರುವ ಕಾಣಿಕೆ ಅತ್ಯಮೂಲ್ಯವಾದುದೆಂದು ಕೆಲವರು ಉತ್ತಮ ವಿಮರ್ಶಕರಿಂದ ಪರಿಗಣಿತವಾಗಿದೆ. ಕನ್ನಡದಲ್ಲಿ ಕಾದಂಬರಿಯ ಕಲೆ ಅಥವಾ ತಂತ್ರದ ಬೆಳವಣಿಗೆಯ ದೃಷ್ಟಿಯಿಂದಲೂ ಕಾರಂತರ ಕಾದಂಬರಿಗಳಿಗೆ ಉನ್ನತ ಸ್ಥಾನವಿದೆ. ಗುಣದಲ್ಲಿ, ವಿವಿಧತೆ ವಿಸ್ತಾರಗಳಲ್ಲಿ, ಅನುಭವದ ಆಳದಲ್ಲಿ, ಅಂತರ್ಗತ ದರ್ಶನದಲ್ಲಿ, ಸಂಕೀರ್ಣತೆಯಲ್ಲಿ, ಪ್ರಕೃತಿ ಸೌಂದರ್ಯದ ಸುಭಗತೆಯಲ್ಲಿ, ಅಲ್ಲಲ್ಲಿ ಹೊಮ್ಮುವ ಕಾವ್ಯತೆಯಲ್ಲಿ, ಮಾತು ವರ್ಣನೆಗಳ ಖಚಿತತೆ ವಿಶದತೆಗಳಲ್ಲಿ ಇವನ್ನು ಮೀರಿಸುವ ಕೃತಿಗಳು ವಿರಳ. ಕಾರಂತರು ವರ್ಣಿಸಿರುವಷ್ಟು ಜನರನ್ನೂ ಪಾತ್ರಗಳನ್ನೂ ಬೇರೆ ಯಾರೂ ಸೃಷ್ಟಿಸಿಲ್ಲ. ಪಾತ್ರಗಳನ್ನು ಇವರಷ್ಟು ನೇರವಾಗಿ, ರಸಪುಷ್ಟಿಯಾಗಿ, ಸಾಕಾರವಾಗಿ ರೂಪಿಸಿದವರೂ ಇಲ್ಲ. ಕಾರಂತರ ಕಣ್ಣಿನ ನೋಟದಲ್ಲಿ ಗುರಿ ಇದೆ, ನಿಟ್ಟಿದೆ; ಮಾತ್ರವೇ ಅಲ್ಲ , ಇತರರಿಗೆ ಕಾಣಿಸುವುದಕ್ಕಿಂತ ಹೆಚ್ಚು ಮುಖಗಳನ್ನು ಕಾಣಬಲ್ಲ ಗ್ರಹಿಕೆ, ದರ್ಶನ ಇವೆ. ಯಾವಾತನ ಅನುಭವವು ವಿವಿಧವಾಗಿಯೂ ವಿಸ್ತಾರವಾಗಿಯೂ ಆಳವಾಗಿಯೂ ಇರುವುದಿಲ್ಲವೋ, ಹಲವು ಮನಸ್ಸುಗಳ

ಮಟ್ಟವನ್ನು ಅಳೆಯುವ, ತೂಗುವ, ಮೌಲ್ಯಪರೀಕ್ಷೆ ಮಾಡುವ ಯೋಗ್ಯತೆ ಇಲ್ಲವೋ, ವಸ್ತುನಿಷ್ಠವಾದ ಮಾನವ ಜೀವನದ ಪರಿಚಯುವಿಲ್ಲವೋ ಅಂಥವನು ಕಾದಂಬರಿಕಾರನಾಗನು. ಕಾರಂತರಲ್ಲಿ ಕಾದಂಬರಿಗಳ ರಚನೆಗೆ ಬೇಕಾದ ಎಲ್ಲ ಶಕ್ತಿಗಳ ಶುಭಾಭಿಸಂಧಿ ಇದೆ: ವಿಷಯ ವೈವಿಧ್ಯವಿದೆ, ಮನುಷ್ಯರ ಬಗೆಗೆ ಆಳವಾದ ವಿಶ್ವಾಸವಿದೆ, ಧರ್ಮದ ಮೇಲೆ ಪಕ್ಷಪಾತವಿದೆ. ಈ ಗುಣಗಳು ಇಷ್ಟು ಪ್ರಮಾಣದಲ್ಲಿ ಪ್ರಾಯಃ ನಮ್ಮ ಬೇರೆ ಕಾದಂಬರಿಕಾರರಲ್ಲಿ ಕಾಣಿಸದು. ಜೀವನದಲ್ಲಿ ನಾವು ಸರ್ವಸಾಧಾರಣವಾಗಿ ಕಾಣುವ ವ್ಯಕ್ತಿಗಳಲ್ಲಿ ಸಾಮಾನ್ಯರು ಕಾಣಲಾಗದ ಸ್ವಭಾವದ ಎಳೆಗಳನ್ನೂ ಮಟ್ಟ ಪದರಗಳನ್ನೂ ಕಾರಂತರು ಕಾಣಬಲ್ಲರು, ಕೇಳಿಸದ ಅಂತರಂಗದ ನುಡಿತವನ್ನೂ ಉಲಿವನ್ನೂ ಕೇಳಬಲ್ಲರು, ಸಾಮಾಜಿಕರಂಗದ ವಿವರಗಳನ್ನು ಸೆರೆಹಿಡಿಯಬಲ್ಲರು. ಗುಡುಗು, ಮಿಂಚು, ಮುಗಿಲಿನ ಗರ್ಜನೆ ತರ್ಜನೆ, ಮೋಡಗಳ ವಿವಿಧ ವಿಲಾಸಗಳು ಲಾಸ್ಯಗಳು, ಮಳೆಯ ಭೋರ್ಗರೆತ, ನೆರೆಯ ಏರಾಟ, ಕಡಲ ಹುಚ್ಚಾಟ, ರೌದ್ರ ಮೊದಲಾದ ನಿಸರ್ಗದ ಚಿತ್ರವನ್ನು ನಮ್ಮ ಸಾಹಿತ್ಯದಲ್ಲಿ ವಿವರವಾಗಿ ಚಿತ್ರಿಸಿದವರಲ್ಲಿ ಕಾರಂತರೇ ಮೊದಲಿಗರು, ಶ್ರೇಷ್ಠರು. ಬೆಟ್ಟಗಳಿಗೆ ಅವರು ಹೆಚ್ಚಾಗಿ ಒಲಿದಂತೆ ತೋರಿದರೂ ಕಡಲಿನ ನೀಲಿಯೊಟ್ಟಿಲನ್ನೂ ಅವರು ವರ್ಣಿಸಿದ್ದಾರೆ. ಸಮುದ್ರದ ಕಾರೊಡಲ ವಿಸ್ತಾರದಲ್ಲಿಯೂ ಮಲೆನಾಡಿನ ದಟ್ಟವಾದ ಕಾಡುಗಳಲ್ಲಿಯೂ ಬೆಟ್ಟದ ಕಣಿವೆ ತಪ್ಪಲುಗಳಲ್ಲಿಯೂ ಬದುಕುವ ಜೀವಗಳನ್ನು ಚಿತ್ರಿಸುವುದು, ಅವರ ಬಲೆ, ಬೇಟೆ ಮುಂತಾದುವನ್ನು ಕಣ್ಣಿಗೆ ಕಟ್ಟುವುದು ಕಾರಂತರಂತೆ ಕಲೆಗಾರನಾಗಿ ಮನುಷ್ಯನಾಗಿ ಬಾಳಿದ ನಿರೀಕ್ಷಕನಿಗೆ ಮಾತ್ರ ಸಾಧ್ಯವೆಂದು ತೋರುತ್ತದೆ. ಪರಿಸರದ ಕಷ್ಟಕಾರ್ಪಣ್ಯಗಳನ್ನು ಇದಿರಿಸಿ ಜೀವನ ವ್ಯಾಪಾರವನ್ನು ಸಾಗಿಸುವ ಧೀರರ ರೂಪಣವು ಕಾರಂತರಿಗೆ ಬಹಳ ಅಚ್ಚುಮೆಚ್ಚು. ಸುಸಂಸ್ಕೃತ ಮನುಷ್ಯರಾಗಲಿ ಅಥವಾ ಅಸಂಸ್ಕೃತರೂ ಅನಾಗರಿಕರೂ ಎನಿಸುವ ಕುಡಿಯರಾಗಲಿ ಕಾಡನ್ನು ಕಡಿದು, ಕುಮರಿಗದ್ದೆಗಳನ್ನು ಹೂಡಿ, ತೋಟಗಳನ್ನೆಬ್ಬಿಸಿ, ಮೃಗಗಳನ್ನು ಪಳಗಿಸಿ ನಿಸರ್ಗದ ನಟ್ಟ ನಡುವೆ ಸಫಲಜೀವನವನ್ನು ನಡಸುತ್ತಿರುವ ಅಪರಾಜಿತ ಮನಸ್ಸಿಗೆ, ಸಾಹಸಕ್ಕೆ ಕಾರಂತರು ಮನಸೋತಿದ್ದಾರೆ. ಆ ಸರಳತೆ ನಿಷ್ಕಪಟತೆಗಳನ್ನು ಕೆಡಿಸುವ, ಕೊಳೆಮಾಡುವ ನಾಗರಿಕರ, ಸುಸಂಸ್ಕೃತರ ದುರ್ಮಾರ್ಗತೆಯನ್ನು ಚಿತ್ರಿಸುವುದು ಕೂಡ ಇವರಂಥ ಅನುಭವಿಗಳಿಗೆ ಮಾತ್ರ ಶಕ್ಯ. ವ್ಯಕ್ತಿಗಳನ್ನು ಕಾಣಿಸುತ್ತಾ, ಇಂಥ ಎಲ್ಲ ಸಂಬಂಧದಲ್ಲಿಯೂ ಕಾರ್ಯಮಾಡಿ ಲೋಕದ ಮೇಲೆಲ್ಲ ನಿಸರ್ಗಜೀವಿಗಳ ಬದುಕನ್ನೇ ಎಲ್ಲೆಲ್ಲಿಯೂ ಹದಗೆಡಿಸಿರುವ ಪ್ರಭಾವಗಳ ಲೋಕಸಾಮಾನ್ಯತೆಯನ್ನು ಹೀಗೆ ರೂಪಕದಲ್ಲಿ ಎಂಬಂತೆ-ಸಂಕೇತವಾಗಿ, ಉಪಲಕ್ಷಣವಾಗಿ ಎಂಬಂತೆ - ಚಿತ್ರಿಸಬಲ್ಲ ಶಕ್ತಿ, ಅಂಶದಲ್ಲಿ ಸಾರ್ವವನ್ನು ಕಾಣಿಸುವಂಥದು. ಒಂದು 'ಕುಡಿಯರ ಕೂಸಿ'ನ ಕಥೆಯಲ್ಲಿ - ಆ ಜನರ ಕಥೆಯ ಜೊತೆಗೆ ಎಷ್ಟು ಖಚಿತ, ಮಾನವೀಕಥೆ ಅದು-ಎಷ್ಟು ಮನಸ್ಸಿನ, ಗುಣಮಟ್ಟಗಳ ಜನ ಇದ್ದಾರೆ ಅಲ್ಲಿ!-ಒಂದು ಬಗೆಯ ಚೆಲುವಾದ ನಿಸರ್ಗಜೀವನ



ಒಳಕಾರಣಗಳಿಂದ, ಹೊರ ಪ್ರಭಾವಗಳಿಂದ, ವ್ಯವಹಾರದ ಅಗತ್ಯಗಳಿಂದ, ಹಿರಿಯರೆಂಬ ಜನವರ್ಗದವರ ವಂಚನೆಯಿಂದ, ಅನ್ಯಮತದವರ ಮತಾಂತರದ ಧೂರ್ತ ಕೃತ್ಯಗಳಿಂದ ಹೇಗೆ ಹದಗೆಡುತ್ತದೆ; ಅವರ ವ್ಯಕ್ತಿ ಜೀವನ, ಸಮಾಜದ ಕಟ್ಟುಪಾಡುಗಳು, ಅವರ ನಂಬಿಕೆ ಧರ್ಮಗಳು ಹೇಗೆ ವಿಕಾರಗೊಳ್ಳುವುವು ಎಂಬುದರ ಒರದಿ, ಪ್ರತಿಫಲನ ಇವೆ. ಮೂಲನಿವಾಸಿಗಳ ಪಂಡಗವೊಂದು ಸಾಮಾನ್ಯವಾಗಿ ಹೇಗೆ ರೂಪಾಂತರಗೊಳ್ಳುತ್ತದೆ ಎಂಬ ಮಾನವ ಸಮಾಜ ಚರಿತ್ರೆಯ ಪ್ರಕಾರವೇ ಮೂಡುತ್ತದೆ ಎನ್ನಬಹುದು. ಸಾಂಸ್ಕೃತಿಕ ಬೆಳವಣಿಗೆಯ ಹಲವು ಮಜಲುಗಳಲ್ಲಿ ಜೀವಿಸುತ್ತಿರುವ ಹಲವು ವ್ಯಕ್ತಿಗಳ ಸಾಹಸ ಕಾರಂತರ ಕಾದಂಬರಿಗಳನ್ನೋದುವಾಗ ನಮ್ಮ ಕಣ್ಣ ಮುಂದೆ ನಲಿಯುವುದು. ಕೆಲವು ಪಾತ್ರಗಳಲ್ಲಿ ಧೈರ್ಯ ನಂಬಿಕೆ ಮತ್ತು ತಾಳ್ಮೆಯನ್ನೂ ಇನ್ನು ಕೆಲವಲ್ಲಿ ಮನುಷ್ಯ ಸ್ವಭಾವದ ಇತಿಮಿತಿ ಅಶಕ್ತಿಗಳನ್ನೂ ಏರುಜಾರುಗಳನ್ನೂ ಹಗೆ ನಲ್ಮೆ ಸಿಹಿಕಹಿಗಳನ್ನೂ ಅವರು ತೋರಿಸುವರು. ಹೀಗೆ ತೋರಿಸುವಾಗ ಅವರ ಮನಸ್ಸು ಕ್ರಿಯಾತತ್ಪರವಾಗಿರುವುದು. ಒಮ್ಮೆ ನಿರಪೇಕ್ಷವಾಗಿಯೂ ಮತ್ತೊಮ್ಮೆ ಅನ್ಯೋನ್ಯ ಸಾಪೇಕ್ಷವಾಗಿಯೂ ಇನ್ನೊಮ್ಮೆ ವಿಮರ್ಶಾತ್ಮಕವಾಗಿಯೂ ಪ್ರವರ್ತಿಸುವ ಅವರ ಲೇಖನಿ ಸದಾ ಪಾತ್ರಗಳ ಮೌಲ್ಯವನ್ನು ಶೋಧಿಸುತ್ತಲೇ ಇರುವುದು. ಎಲ್ಲಕ್ಕೂ ಮಿಗಿಲಾಗಿ ಆ ಪಾತ್ರಗಳ ಹದ, ತೋರ, ಹಸರ, ಬೆಲೆ ಮತ್ತು ಗುಣವನ್ನು ವಾಚಕರೇ ಅಳೆಯುವಂತೆ ಅವನ್ನು ಚಿತ್ರಿಸುವ ಜಾಣ್ಮೆ ಕಾರಂತರ ಕಲೆಯ ವೈಶಿಷ್ಟ್ಯ. 'ಚೋಮನ ದುಡಿ' ಮತ್ತು 'ಬೆಟ್ಟದ ಜೀವ'ದಂಥ ಕಾದಂಬರಿಗಳಲ್ಲಿ ಕಾರಂತರು ವ್ಯಕ್ತಿಗಳನ್ನು ನಿರ್ಮಾಣಮಾಡುವ ಕುಶಲಕರ್ಮ ನಮಗೆ ಸ್ಫುಟವಾಗಿ ಕಾಣುತ್ತದೆ. ಚೋಮನ ದುಡಿ ಹೇಗೋ ಗೋಪಾಲಯ್ಯನವರದೂ ಹಾಗೇ-ಒಂದು ಕಗ್ಗಲ್ಲ ಮೂರ್ತಿ ಕೆತ್ತನೆ; ಎರಡೂ ಶಿಲ್ಪಕೃತಿಗಳು. 'ಹೆತ್ತಳಾತಾಯಿ'ಯಲ್ಲಿ ಅಸಹ್ಯವಾದ ಅಥವಾ ಕರುಣಾಜನಕವಾದ ಸಾಮಾಜಿಕ ಸಮಸ್ಯೆಯೊಂದರ ಮೇಲೆ ಬೆಳಕು ಚೆಲ್ಲುವ ಪ್ರಯತ್ನ ನಡೆದಿದೆ. 'ಔದಾರ್ಯದ ಉರುಳಲ್ಲಿ', 'ಮುಗಿದ ಯುದ್ಧ', 'ಕುಡಿಯರ ಕೂಸು', 'ಮರಳಿ ಮಣ್ಣಿಗೆ' ಇವುಗಳಲ್ಲಿ ಕಥೆಯ ಹರವು ವಿಸ್ತಾರವಾಗುತ್ತದೆ, ಹಿನ್ನೆಲೆ ದೊಡ್ಡದಾಗುತ್ತದೆ. ಘಟನೆಗಳನ್ನು ವಿಸ್ತಾರವಾಗಿ, ವ್ಯಾಪಕವಾಗಿ ಬೆಳಸಲಾಗಿದೆ. ಪ್ರತಿಯೊಂದು ಘಟನೆಗೂ ವ್ಯಕ್ತಿಗೂ ಇಲ್ಲಿ ಕೊಟ್ಟಿರುವ ಪ್ರಾಧಾನ್ಯ ಮತ್ತು ಮೌಲ್ಯಕ್ಕೆ ನಿಶ್ಚಿತವಾದ ಅರ್ಥ, ಉದ್ದೇಶ ಇವೆ; ಅನ್ಯೋನ್ಯ ಸಂಬಂಧವಿದೆ, ಸಾಕಲ್ಯವಿದೆ. ಕಾರಂತರು ಮಾತನಾಡುವಾಗ ಅವರಲ್ಲಿ ಅತ್ಯಂತ ಆಧುನಿಕತೆ, ಪ್ರಗತಿಶೀಲ ಮನೋವೃತ್ತಿ ಇದ್ದಹಾಗೆ ಅನಿಸಿದರೂ ಅದು ತೋರಿಕೆ ಮಾತ್ರ; ಅಂತಃಕರಣದ ಆಳದಲ್ಲಿ ಅವರು ಸಂಪ್ರದಾಯಸ್ಥರು (Conservative) ಎಂದು ನನ್ನ ಮತ. ಸಾಂಪ್ರದಾಯಕತೆಗೆ ಒಳ್ಳೆಯ ಅರ್ಥವೂ ಇದೆಯಷ್ಟೆ. ಹಿಂದಿನಿಂದ ಬಂದ, ಉಳಿಸಲು ಯೋಗ್ಯವಾದುದನ್ನು ಉಳಿಸುವ ಬುದ್ಧಿ ಅದು. ಒಡೆಯುವುದು, ಹಳಿಯುವುದು, ಹಲ್ಲು ಕಿರಿಯುವುದು, ಬುಡ ಕೀಳುವುದು ಅಸಾಮಾಜಿಕ, ಬರ್ಬರ. ಕಡೆಗೆ ವಿಫಲ ವೃತ್ತಿಗಳೇ ಸೈ. ಈ

ಅರ್ಥದಲ್ಲಿ ಕಾರಂತರ ಸಾಂಪ್ರದಾಯಕತೆಯನ್ನು ಗ್ರಹಿಸತಕ್ಕುದು. ಭೋಗಿಗಳು, ಪಟ್ಟಣಿಗರು, ಧರ್ಮದ ಡಾಂಭಿಕರು, ಶ್ರೀಮಂತರು ಇವರನ್ನು ಕಂಡರೆ ಕಾರಂತರಿಗೆ ಎಲ್ಲಿಲ್ಲದ ಕೋಪ. ಹಲತೆರದ ಇವರ ಪೊಳ್ಳನ್ನು ಬಯಲಿಗೆಳೆಯುವಾಗ ಅವರು ಉಗ್ರರಾಗುತ್ತಾರೆ. ಸೈರಣೆ, ಸಹಾನುಭೂತಿ ಕಳೆದುಕೊಳ್ಳುತ್ತಾರೆ. ಉಳಿದವರನ್ನು ಅಷ್ಟು ವಿಚಕ್ಷಣೆಯಿಂದ ವರ್ಣಿಸುವ ಕಾರಂತರೇ ತನಗೆ ಒಪ್ಪದ ಈ ವರ್ಗದವರ ವಿಷಯದಲ್ಲಿ ತನ್ನ ಕಲಾಕರ್ಮಕ್ಕೆ-ಅದರ ಹಾಳತಕ್ಕೆ- ಊನ ಬರುವಂತೆ ಏಕೆ ವರ್ತಿಸಿದರೋ ಅನಿಸುತ್ತದೆ. ಗೆದ್ದವರನ್ನು ಕುರಿತು-ಕೇವಲ ಅಷ್ಟಕ್ಕಾಗಿ - ಅವರ ಬಾಯಿಯಿಂದ ಒಂದು ಒಳ್ಳೆಯ ಮಾತು ಹೊರಡದು. ಗೆಲವಿನ ಗರ್ವದಿಂದ ನಗರದಲ್ಲಿ ಬೀದಿವರಿಯುವ, ಸುಧಾರಿಸಿದ ವರ್ಗಕ್ಕೆ ಸೇರಿದ ಜನರಿಗೆ ಶೀಲವೇ (Character) ಇಲ್ಲವೆಂದು ಕಾರಂತರಿಗೆ ಎನ್ನಿಸುವುದೇನೊ. ಅವರ ಮೇಲೆ ಹೆಚ್ಚು ಗೌರವವಿಲ್ಲ. ಅಂಥವರ ವೈಯಕ್ತಿಕ ಮತ್ತು ಸಾಮಾಜಿಕ ಜೀವನವು ಬರಡು, ದೇಶದ ಕೊರಳಿನ ಕೊರಡು. ಆಧುನಿಕತೆಯ ಸೋಗು, ಬೆಡಗು ಮತ್ತು ಸ್ವಾಚ್ಛಂದ್ಯಕ್ಕಿದಿರಾಗಿ ಕಾರಂತರು ಕೆಲವು ವ್ಯಕ್ತಿಗಳನ್ನು ನಿಲ್ಲಿಸುವರು. ಇವರು ಹೆಚ್ಚಾಗಿ ಅಜ್ಞರು, ಅಶಿಕ್ಷಿತರು, ಹೊರಗಣ್ಣಿಗೆ ಸೋತವರು. ಆಧುನಿಕತೆಯ ವಿಜೃಂಭಣೆ ಮತ್ತು ಸದ್ದುಗದ್ದಲದ ನಡುವೆ ಕಂಡೂ ಕಾಣಿಸದಂತೆ, ಕೇಳಿಯೂ ಕೇಳಿಸದಂತೆ ನೀರವವಾಗಿ, ಆದರೆ ಧೈರ್ಯ ಸಾಹಸಯುಕ್ತವಾಗಿ ಜೀವನದ ಸತ್ಯತೆಗೆ, ಸಾರಪೋಷಕ ಧಾತುವಿಗೆ ಸಮೀಪವಾಗಿ ಬದುಕುತ್ತಿರುವ ಈ ಜನರ ಮೇಲೆ ಕಾರಂತರ ಪ್ರೇಮ ನಿರರ್ಗಳವಾಗಿ ಹರಿಯುತ್ತದೆ. ಔದಾರ್ಯದ ಉರುಳಿಗೆ ಸಿಲುಕುವ ರಾಧಾಕೃಷ್ಣ ಅಂಥ ಒಬ್ಬ ವ್ಯಕ್ತಿ; ಸಖಾರಾಮರಾಯನಂಥವರು ಇನ್ನೊಬ್ಬ ಹಸುವಿನಂಥ ಪ್ರಾಣಿ. ಅನಾಗರಿಕ ಆದಿವಾಸಿ ಕುಡಿಯ ಸಮಾಜಕ್ಕೆ ಸೇರಿದ ಮುದಿ ಗುರಿಕಾರ ಕೆಂಚ ಮತ್ತು ಕರಿಯ ಅಂಥವರು. ಸಮಕಾಲೀನ ಪ್ರಾದೇಶಿಕ ಕಾದಂಬರಿಗಳಲ್ಲಿ ಹೆಸರಾಂತ 'ಮರಳಿ ಮಣ್ಣಿಗೆ'ಸಮಗ್ರವಾಗಿ ನೆಯ್ದ ಮೂರು ತಲೆಮಾರುಗಳ ಒಂದು ಚಿತ್ರಣ. ಇದರಲ್ಲಿ ಬರುವ ಹೆಣ್ಣು ಜೀವಗಳ ತ್ಯಾಗ, ತಾಳ್ಮೆ, ಧೀರತೆಗಳು ಮನುಷ್ಯ ಜೀವನದ ಚೆಲುವನ್ನೂ ಸಾಹಸವನ್ನೂ ಜಗತ್ತಿಗೆ ಎತ್ತಿ ತೋರಿಸುವ ಧನ್ಯಜೀವನದ ಪ್ರತೀಕಗಳು. ಈ ಕಾದಂಬರಿಯ ಸ್ಫೂರ್ತಿ ಹೊರಗಿಂದ - ಪರ್ಲ್ ಬಕ್ ಬರೆದ 'ಗುಡ್ ಅರ್ತ್' ಇಂದ - ಬಂತೆಂದು ಕೆಲವರು ಹೇಳುವರು. ಅದು ಹೇಗೊ ಏನೊ. 'ಗುಡ್ ಅರ್ತ್' ಓದಿದವರೆಲ್ಲ ಒಂದೊಂದು 'ಮರಳಿ ಮಣ್ಣಿಗೆ'ಯಂಥ ಬೆಲೆಯ ಕಾದಂಬರಿಗಳನ್ನು ಬರೆದರೆ ಇನ್ನೂ ಒಂದು ನೂರು ಮಂದಿ ಅದನ್ನು ಓದಲಿ. ಈ ಕಾದಂಬರಿ ಕರೆನಾಡಿನ ಹಳ್ಳಿಗಳ ಬದುಕಿನಲ್ಲಿ ಹುಟ್ಟಿ ಬೆಳೆದು ಆ ಬಣ್ಣ ಬೆಳಗಿದ್ದು. ಅಲ್ಲಿನದೇ ಬುಡ, ತಾಳು, ಎಲೆ, ಹೂ, ಹಣ್ಣು, ಸವಿ ಅದರದು. ನಮ್ಮ ಬದುಕನ್ನು ತುಂಬಿಕೊಳ್ಳಲು ಬೇಕಾದ ಶಕ್ತಿ ಎಲ್ಲಿಂದ ಬಂದರೇನು ಅನಿಸುತ್ತದೆ, 'ಮರಳಿ ಮಣ್ಣಿಗೆ'ಯನ್ನು ನೋಡುವಾಗ. ಈ ಕಥೆಯ ಹೆಣ್ಣು ಪಾತ್ರಗಳ ಚಿತ್ರಣದಲ್ಲಿ ಕಾರಂತರು ಬಹುದೊಡ್ಡ ವಿಚಕ್ಷಣೆಯನ್ನೂ ಕಾಣ್ಕೆಯನ್ನೂ ಇಟ್ಟಿದ್ದಾರೆ. ಪ್ರಾಯಃ ಮಾಸ್ತಿಯವರನ್ನು ಬಿಟ್ಟರೆ, ಕಾರಂತರಂತೆ ಹೆಣ್ಣುಗಳನ್ನು ಪ್ರೀತಿ ಗೌರವಗಳಿಂದ ಸೃಷ್ಟಿಸುವವರು ಬೇರೆ ಇಲ್ಲವೆಂದು ನನಗೆನಿಸುತ್ತದೆ.



ಕಾರಂತರನ್ನು ಕೋಟದಲ್ಲಿ ಬೆಳಸಿದ ಆ ತಾಯಿಯ ಮಮತೆ, ಮೃದುತೆ, ನಯ, ಪ್ರೀತಿ ಕಾರಂತರ ಹೃದಯದಲ್ಲಿ ಈಗಲೂ ಆಧಿಪತ್ಯ ಮಾಡುತ್ತಿರಬೇಕು. ಅವರ ಹೃದಯದ ಚಿರಂತನ ಸ್ಫೂರ್ತಿಸ್ರೋತವಾದ ತಾಯ ನೆನಹು ಕಾರಂತಸೃಷ್ಟಿಯ ಹೆಣ್ಣುಗಳ ವ್ಯಕ್ತಿತ್ವವನ್ನು ಮಂಗಳಮಯವಾಗಿ ಬೆಳಗುತ್ತಿರಬೇಕು. ಕಾರಂತರ ಕಾದಂಬರಿಗಳಲ್ಲಿರುವ, ಅದರಲ್ಲಿಯೂ, 'ಮರಳಿ ಮಣ್ಣಿಗೆ'ನ ಸ್ತ್ರೀಯರು, ಭಾರತಕ್ಕೆ ಗೌರವವನ್ನು ತಂದ, ತರಬಲ್ಲ ತಾಯಂದಿರು. ಹೆಣ್ಣು ಜೀವನದ ಇಂತಹ ಮಹಾಕಾವ್ಯ ಎಲ್ಲ ಕಾಲಕ್ಕೂ ಪ್ರಿಯವಾಗಬೇಕು.

ಇತ್ತೀಚೆಗೆ ಕಾರಂತರು ಬರೆದ 'ಗೊಂಡಾರಣ್ಯ'ವೆಂಬ ಕಾದಂಬರಿಯು ನಮ್ಮ ನಾಡಿನ ರಾಜಕೀಯದ ಕೆಸರಿನ ಒಂದು ವಾಸ್ತವ ಚಿತ್ರ. ಒಳಸಂಚು, ದೌಷ್ಟ್ಯ, ಸ್ವಾರ್ಥಾಭಿಲಾಷೆ, ಅಧಿಕಾರಲಾಲಸೆ ಮುಂತಾದ ದುರ್ವ್ಯಾಪಾರಗಳು ಬಹುವಾಗಿರುವ ರಾಜಕೀಯ ರಂಗದ ಸ್ವಾರ್ಥ ಕೃಪಣತೆಗಳ ಒಂದು ಸಾಂಕೇತಿಕ ಚಿತ್ರ. ಇಂಥ ಜೀವನದಲ್ಲಿ ಅರ್ಥವೇನಿದೆ? ಆದರ್ಶವೇನಿದೆ? ಸಾರ್ವಜನಿಕ ಸೇವಾಕಾಂಕ್ಷೆ ಎಲ್ಲಿದೆ? ಎಂದು ಕಾರಂತರು ಸವಾಲು ಹಾಕಿದ್ದಾರೆ. ಅವರ ಮನಸ್ಸು ಮುನಿದ ವೇಳೆ ಇನ್ನೂ ಹೇಗೆ ವ್ಯಗ್ರವಾಗಿ ಅಸಹನಶೀಲವಾಗಿರಬಲ್ಲದೆನ್ನುವುದಕ್ಕೆ ಈ ಕೃತಿ ಸಾಕ್ಷಿ. ಇದನ್ನು ಬರೆಯಲು ಅವರು ಯಾವ ಸುಖಪಟ್ಟರೊ. ಇಂಥ ಅಸುಖವನ್ನೂ ಬೇಗೆಯನ್ನೂ ರಾಜಕೀಯ ಜೀವನ ಏಕೆ ಉಂಟುಮಾಡಬೇಕೋ ದೇವರೊಬ್ಬ ಬಲ್ಲ. ಈ ಪರಿಯ ಸಾರ್ವಜನಿಕ ಜೀವನ ಸೂಕ್ಷ್ಮಸಂವೇದಿಯಾದ ಕಲೆಗಾರನಿಗೆ ಜುಗುಪ್ಸೆ ತಾರದಿರುವುದೆ? ಕಾರಂತರು ಸ್ವತಃ ಚುನಾವಣೆಯಲ್ಲೇ ಹೋರಾಡಿ ಅದರ ಒಳನೋಟದ ಮಡ್ಡಿಯನ್ನೂ ವಿಕಾರ ಗಳನ್ನೂ ಬಲ್ಲವರಾದ್ದರಿಂದ ಅವರ ಅನುಭವದ ಕಹಿ ಎಲ್ಲವೂ 'ಗೊಂಡಾರಣ್ಯ'ದಲ್ಲಿ ಬಟ್ಟಿ ಇಳಿದಿದೆ. ಮನುಷ್ಯರ ಕ್ರೌರ್ಯದಿಂದಲೂ ಅಧಿಕಾರ ಲಾಲಸೆ ಮತ್ತು ವಂಚನೆಯ ನಗ್ನ ನೃತ್ಯದಿಂದಲೂ ಈ ಕಾದಂಬರಿಗೆ 'ಗೊಂಡಾರಣ್ಯ'ವೆಂಬ ಹೆಸರು ಸಾರ್ಥಕವಾದೀತು. ಆದರೆ ಕವಿಹೃದಯವುಳ್ಳ ಕಾರಂತರು ಹಸಿಯ ರಾಜಕೀಯದ ಒಳಹೊಗುವುದರಿಂದ ಅವರ ಜೀವಕ್ಕೂ ಅವರ ಕಲೆಗೂ ಎರಡಕ್ಕೂ ನೋವಲ್ಲದೆ ಸುಖ, ಹಿತ ಇಲ್ಲವೆಂದು ನನ್ನ ಭಾವನೆ. ಇದು ತಪ್ಪಿರಬಹುದು. Touch pitch and be defiled. ಡಾಮರ (ಕೆಸರು)ನ್ನು ಮುಟ್ಟು; ಕೈಕೊಳೆ ಮಾಡಿಕೊ ಎಂಬ ಮಾತು ಸರ್ವಥಾ ಸತ್ಯ. ಕವಿತೆ, ರಾಜಕೀಯ ವ್ಯವಹಾರ -ಇವು ಪರಸ್ಪರ ವಿರಸವೃತ್ತಿಯ ಪ್ರಪಂಚಗಳು.

'ಗೊಂಡಾರಣ್ಯ'ದ ತರುವಾಯ ಬಂದ 'ಒಡಹುಟ್ಟಿದವರು' ಎಂಬ ಕಾದಂಬರಿಯಲ್ಲಿ ಕಾರಂತರ ಲೇಖನಿಯಲ್ಲಿ ಮರಳಿ ಮಾನವ್ಯದ ಚಿಗುರು, ಹೂ ಬಿಟ್ಟಿದೆ. ಇಲ್ಲಿ 'ಗೊಂಡಾರಣ್ಯ'ದ ಮೃಗಗಳ ದಂತನಖಗಳಿಲ್ಲ, ಓರೆ ಕೋರೆಗಳಿಲ್ಲ. ಅದಕ್ಕೂ ಹಿಂದಿನ 'ಬತ್ತಿದ ತೊರೆ' 'ಚಿಗುರಿದ ಕನಸು' ಮೊದಲಾದ ಕಾದಂಬರಿಗಿಂತ 'ಒಡಹುಟ್ಟಿದವರ'ಲ್ಲಿ ಹೆಚ್ಚು ಮಾನವೀಯ ಗುಣಗಳಿದ್ದು ಕಾರಂತರ ಸಾಹಿತ್ಯದ ಮೂಲ

ಪ್ರಜ್ಞೆಯನ್ನು ಪ್ರಕಟಗೊಳಿಸುತ್ತದೆ. ನಮ್ಮ ಕಾಲದ ಪ್ರತೀಕಗಳೆಂಬಂತೆ ಸಂಗತಿಗಳ ವಾಸ್ತವ ರೂಪಣ ಕಣ್ಣೆದುರಿನ ಲೋಕಕ್ಕೆ ತುಂಬಾ ಹತ್ತಿರ ನಡೆಯದಿದ್ದರೆ ಮೇಲೇನೊ. ಸಾಹಿತ್ಯದ ರಸಕ್ಕೆ ಒದಗಬೇಕಾದರೆ ಕಾದಂಬರಿಯ ಕಥನ, ರೂಪಣ ಕೆಲವುಕಡೆ ಸ್ವಲ್ಪ ವಿಶೇಷವಾಗಿ ಮಾರ್ಪಡಬೇಕೇನೊ - ಇಲ್ಲವಾದರೆ ಅತಿ ಹತ್ತಿರದ ಸಮಾಜಚಿತ್ರ, ಕಾಲದ ವಸ್ತು ಚಿತ್ರ, ಒರದಿ ಆಗಿ ಬಿಡುತ್ತದೇನೊ ಎಂಬ ಯೋಚನೆ ಹಾಯಬಲ್ಲದು. ಕಾರಂತರ ಸ್ಫೂರ್ತಿಗೆ ಮೂಲದಲ್ಲಿರುವ ಮನುಷ್ಯರ ಪ್ರೀತಿವಿಶ್ವಾಸ, ಸಾಮಾನ್ಯ ಕುಟುಂಬದಲ್ಲಿ ಜನರು ತೋರುವ ದರ್ಪ ಸೋಗು, ಇವುಗಳಿಂದ ಹರಡುವ ನಲವು ನೋವು ಬೇಗುದಿ ಇದರ ಚಿತ್ರಣವು ಈ ಕಾದಂಬರಿಯಲ್ಲಿ ಸಮರ್ಪಕವಾಗಿ ಮೂಡಿದೆ. 'ಒಡಹುಟ್ಟಿದವರ'ಲ್ಲಿ ನಾವು ಕಾಣುವಂಥಾ ಜೀವನವು ಎಂದಿಗೂ ಹೊಸದೇ, ಎಂದಿಗೂ ಹಳೆಯದೇ. ಮನುಷ್ಯ ಸಮಾಜದಲ್ಲಿ, ಸಂಸ್ಕೃತಿಯಲ್ಲಿ ಎಷ್ಟು ಬದಲಾವಣೆಗಳಾದರೂ ಹೆಣ್ಣಿಗೆ ತಾಯ್ತನದ ಹಂಬಲದಂತೆ ಈ ಮೂಲ ಪ್ರವೃತ್ತಿಗಳು ಸನಾತನ, ಚಿರ ನೂತನ. ಮನುಷ್ಯ ಸ್ವಭಾವಕ್ಕೆ ಅನುರೂಪವಾದ ವಾಸ್ತವ ಸರಳತೆ, ಪರಿಸ್ಫುಟತೆ ಸಾಹಿತಿಯ ಕೃತಿಗಳಲ್ಲಿ ಚಿರಸ್ಥಾಯಿಯಾದರೆ ಆತನ ಕಲೆ ಸಿದ್ಧಿಯನ್ನು ಮುಟ್ಟಿತೆನ್ನಬೇಕು. ಆತ ವರ್ಣಿಸುವ ಜೀವನದಲ್ಲಿ ಜಟಿಲತೆ ಎಷ್ಟೇ ಇರಲಿ, ಅದರ ಮಟ್ಟ ಪರಿಸರ ಯಾವುದೇ ಇರಲಿ, ಒಲವು ಒತ್ತು ಹೇಗೇ ಬೀಳಲಿ, ಚಿತ್ರಣವು ಪರಿಸ್ಫುಟವಾಗಿರಬೇಕಾದುದೂ ಅಗತ್ಯ. ತಾನು ಆರಿಸಿದ ವಸ್ತುವಿನ ಹೊರಗಿದ್ದು, ವಸ್ತುಧರ್ಮಕ್ಕೆ ವಿರುದ್ಧವಾಗಿರುವ ಮನಸ್ಸನ್ನು ಸಡಿಲಗೊಳಿಸಿ ಜಾರುವ ದಾರಿಗೆ ಎಳೆಯುವ, ಕೊಳೆಯಲ್ಲಿ ಮುಳುಗಿಸುವ, ಅದರಲ್ಲಿ ರುಚಿಕಾಣಿಸುವ ವಿಷಯಗಳೂ ವಿಚಾರಗಳೂ ಎಷ್ಟು ಆಕರ್ಷಕವಾಗಿದ್ದರೂ, ಸಂಪಾದನೆಯ ದೃಷ್ಟಿಯಿಂದ ಎಷ್ಟು ಲಾಭಪ್ರದವೆನಿಸಿದರೂ ಅವಕ್ಕೆ ಮರುಳಾಗದೆ ಇರುವ, ಅವುಗಳಿಂದ ತನ್ನನ್ನೂ ತನ್ನ ಕೃತಿಯನ್ನೂ ಲೋಕವನ್ನೂ ಪಾರಾಗಿಸುವ ಸಾಹಿತಿ ಯಶೋಭಾಜನನಾಗುವನು.

ಕಾದಂಬರಿಯ ಪ್ರಪಂಚವನ್ನು ಬಿಟ್ಟರೆ ಕಾರಂತರ ವ್ಯಕ್ತಿಚಿತ್ರ, ರೇಖಾಚಿತ್ರ ಪ್ರಪಂಚದಲ್ಲಿಯೂ ನಮಗೆ ಅವರ ಚಿಕ್ಕ ದೊಡ್ಡವರು ಕಾಣಸಿಗುವರು. ಕಾರಂತರ ವ್ಯಕ್ತಿ ಚಿತ್ರದಲ್ಲಿ ವ್ಯಕ್ತಿಯ ವಿವರಗಳಿಗಿರುವಷ್ಟೇ ಪ್ರಾಧಾನ್ಯ ಅವನ ಅಂತರಂಗ ವಿಶ್ಲೇಷಣಗಳಿಗೂ ಇರುತ್ತದೆ. ಒಂದು ಹರಿತವಾದ ರೇಖೆ, ಘಟನೆ ಅಥವಾ ಮಾತಿನ ವಿನ್ಯಾಸದಿಂದಲೇ ವ್ಯಕ್ತಿಯ ಪರಿಚಯವೂ ನಮಗೆ ಆಗುತ್ತದೆ. ಈ ವ್ಯಕ್ತಿಗಳಾದರೂ ಯಾರು? ನಮ್ಮ ನಮ್ಮವರೇ, ನಾವು ಸುತ್ತಲೂ ನೋಡುವ ಸ್ಥಳೀಯ ಜನರೇ. ತಮಗೆ ತಾವೇ ಬದುಕುತ್ತಿರುವ ಶುಂಠರು, ಸಾರ್ವಜನಿಕ ಸೇವಕರು, 'ಧುರೀಣ'ರು, ಕಲೆಗಾರರು, ಮುಂದಾಳುಗಳು, ನೌಕರರು, ಚಳುವಳಿಗಾರರು, ಮೋಸಗಾರರು, ಉಪಾಧ್ಯಾಯರು, ಕಂಟ್ರಾಕ್ಟರುಗಳು, ವ್ಯಾಪಾರಿಗಳು, ವೈದ್ಯರು, ಸಿನೆಮಾದವರು ಎಲ್ಲರೂ ಕಾರಂತರ ಲೇಖನಿಯ ಮೊನೆಗೆ, ವಿಡಂಬನೆಯ ಕಣ್ಣಿಗೆ ಬಲಿಯಾದವರೇ. ಈ ಬಗೆಯ ವ್ಯಕ್ತಿಗಳದೊಂದು ರೀತಿಯಾದರೆ, ನಾಡಿನಲ್ಲಿ ಹೆಸರಾದ



'ದೇಹಜ್ಯೋತಿ'ಗಳ ಅಂಶ ಚಿತ್ರ, ಪೂರ್ಣ ಚಿತ್ರಗಳನ್ನು ಕಾರಂತರು ಎಷ್ಟೋ ಹೆಣೆದಿದ್ದಾರೆ. ಅವರು ಸೃಷ್ಟಿಸಿದ ಈ ಚಿಕ್ಕ ದೊಡ್ಡ ವ್ಯಕ್ತಿಗಳದೇ ಒಂದು ಚಿತ್ರಶಾಲೆಯನ್ನು ಏರ್ಪಡಿಸಬಹುದು, ಅಷ್ಟು ವೈವಿಧ್ಯವನ್ನವರು ತಮ್ಮ ಕಂಡರಣೆಯ ಕಲೆಯಲ್ಲಿ ಸಾಧಿಸಿದ್ದಾರೆ.

ಇನ್ನೂ ಏನೇನೋ ಕೆಲಸಮಾಡಿದ್ದಾರೆ ಅವರು. ಕಾರಂತರು ಮುಟ್ಟದ್ದೂ ಇದೆಯೆ ಎಂದೂ ಕೇಳಬಹುದೇನೋ. ಅವರ ಪ್ರಯೋಗಗಳು ಅನೇಕ. ಹಲವು ಶಿಕ್ಷಣ ಪ್ರಯೋಗಗಳನ್ನು ಅವರು ಮಾಡಿದ್ದಾರೆ. ಪುತ್ತೂರಿನಲ್ಲಿ ಅವರು ಸ್ವಲ್ಪ ಕಾಲ ನಡಸಿ ನಿಲ್ಲಿಸಿದ 'ಬಾಲವನ' ಅಂಥ ಒಂದು ಪ್ರಯೋಜಕ ಪ್ರಯೋಗ. ಕನ್ನಡ ಜಿಲ್ಲೆಯ ವಿಶಿಷ್ಟ ಜಾನಪದ ಕಲೆಯಾದ 'ಯಕ್ಷಗಾನ'ದ ಮೇಲೆ ಕಾರಂತರಿಗೆ ಹಿಂದಿನಿಂದಲೂ ಅಚಲವಾದ ಪ್ರೀತಿ. ಯಕ್ಷಗಾನ ಕಲೆಯ ಮೂಲ, ಲಕ್ಷಣ ಮತ್ತು ಅದರ ಸಾಧ್ಯತೆಗಳನ್ನು ಕುರಿತು ಅವರಷ್ಟು ತುಂಬಿದ ತಿಳಿವಿನಿಂದ, ಬೆಲೆ ತಾರತಮ್ಯಗಳ ಎಣಿಕೆಯುಳ್ಳ, ಹೊಸ ಕಾಲದ ದೃಷ್ಟಿಯಿಂದ ಕೂಡ, ಮಾತಾಡಬಲ್ಲವರು ಕನ್ನಡನಾಡಿನಲ್ಲಿ ವಿರಳ. ಆ ವಿಷಯದಲ್ಲಿ ಅವರು ಮಾಡಿದ ಪರಿಶ್ರಮ, ಸಂಶೋಧನೆ ಅಲ್ಪವೇನಲ್ಲ. ಮೊನ್ನೆ ಇದೇ ವಿಷಯವಾಗಿ ಧಾರವಾಡದ ಕನ್ನಡ ಸಂಶೋಧನ ಸಂಸ್ಥೆಯಲ್ಲಿ ಅವರು ಉಪನ್ಯಾಸ ಮಾಡಿದರು. ಕನ್ನಡ ಜಿಲ್ಲೆಯಲ್ಲಿಯೂ ಘಟ್ಟಗಳಲ್ಲಿಯೂ ಪ್ರಚುರವಾದ ಭೂತಗಳ ಚಿತ್ರಗಳನ್ನು ಗ್ರಹಿಸಿ, ಅಲ್ಲಿನ ವೇಷಗಳನ್ನು ಕಾಣಿಸಲು ತೆಗೆದ ಅವರ ಚಲಚಿತ್ರದ ಒಂದೆರಡು ಸಾವಿರ ಅಡಿಯ ಛಾಯಾಗ್ರಹಣ ಬೆಂಕಿಗೆ ತುತ್ತಾದುದು ಒಂದು ದೊಡ್ಡ ನಷ್ಟ.

ಅವರು ಬರೆದಿರುವ ಒಂದು ಕೃತಿಯನ್ನು ಕುರಿತು ನನಗೆ ವಿಶೇಷ ಆದರ. 'ಬಾಳ್ವೆಯೇ ಬೆಳಕು' ಎಂಬ ಆ ಸಣ್ಣ ಪುಸ್ತಕದಲ್ಲಿ ತಮ್ಮ ವಿಶ್ವಾಸವನ್ನು ಅವರು ಕಾಣಿಸಿದ್ದಾರೆ. ಅಲ್ಲಿನ ತತ್ವವನ್ನು ಕುರಿತು ನನಗೆ ಯಾವ ವಿರೋಧವೂ ಇಲ್ಲ. ಆ ಮಟ್ಟಿಗೆ ಅದು ಸರಿಯೂ ಸರಿ. ಅಲ್ಲಿನ ವಾದಸರಣಿ ನಿರ್ಮಲವಾಗಿದೆ. ಅಷ್ಟು ಬೋಧಪ್ರದವಾಗಿ, ತನ್ನ ಮನಸ್ಸಿಗೆ ತೋರಿದ ಜೀವನದರ್ಶನವನ್ನು ನೇರವಾಗಿ ಕಾಣಿಸುವುದು ಸುಲಭವಲ್ಲ. ಆ ವಾದ ಸರಣಿಯಲ್ಲಿ ಯುಕ್ತಿಯ ನಾಲ್ಕಾರು ಎಂಟು ಲೋಪ, ತೆರಪು ಕಾಣಬಹುದು. ಜೀವನಕ್ಕೆ ಜೀವನವೇ ಬೆಳಕು ತೋರಬೇಕು ನಿಜ; ಹೊರಗಿನ ಬಾಳಿಂದಲೂ ಆ ಬೆಳಕು ಬೀರುತ್ತದೆ; ತನ್ನ ಬಾಳಿನ ಸಮೀಕ್ಷೆಯಿಂದಲೂ ಬರುತ್ತದೆ, ತನ್ನ ಕಾಲದ ಬದುಕಿನಿಂದಲೂ ಬರುತ್ತದೆ, ಹಿಂದಿನ ಕಾಲಗಳಿಂದಲೂ ಬರುತ್ತದೆ; ಇವೆಲ್ಲದರ ತಾರತಮ್ಯ ಶಿಕ್ಷಣದಿಂದಲೂ ಬರುತ್ತದೆ. ಮತ್ತು ಲೋಕ ಚರಿತ್ರೆಯಲ್ಲಿ ಜನ ಯಾವುದಕ್ಕೆ ಯಾವ ಬೆಲೆ ಕಟ್ಟಿದ್ದಾರೆಯೊ, ಹೇಗೆ ನಡೆದಿದ್ದಾರೆಯೊ, ಹೇಗೆ ನಡೆಯದೆ ಬಿಟ್ಟಿದ್ದಾರೆಯೊ, ಯಾವ ಬೆಲೆಗಳನ್ನು ಕಟ್ಟಿಕೊಟ್ಟು ಬದುಕಿದ್ದಾರೆಯೊ ಈ ಎಲ್ಲದರ ಫಲಾಫಲಗಳ ಸಾಕ್ಷಿ ಬೇರೆ ಇರುತ್ತಾರೆ. ಇವೆಲ್ಲದರ ಬೆಳಕು ಮತ್ತೊಂದು

ರೀತಿಯದು. ಆದರೆ ಪ್ರತಿ ಹೆಜ್ಜೆಯಲ್ಲಿಯೂ ಯಾರಿಗಾಗಲಿ ಅದು ಕಾಣುವುದು ಕಷ್ಟ. ಹಳೆಯ ಅನುಭವದಿಂದ ಬಂದ ಬೆಳಕು ಹೊಸಸನ್ನಿವೇಶಕ್ಕೆ ಬೆಳಕಾಗದಿರಬಹುದಲ್ಲವೆ? ಯಾವುದನ್ನಾದರೂ ಬೆಳಕೆಂದು ನಂಬಲು ಪ್ರಮಾಣಗಳಾವುವು? ಯಾವುದನ್ನು ಸ್ಥಾಪಿಸಬೇಕಾಗಿದೆಯೋ ಅದನ್ನೇ ಸ್ಥಾಪ್ಯವಾಗಿ ಸ್ಥಾಪಕವಾಗಿ ಬಳಸಬಹುದೆ? – ಎಂಬೆಲ್ಲ ವಾದಗಳನ್ನು ಟೀಕಾಕಾರರು ಎತ್ತಬಹುದು. ಇದು ಬುದ್ಧಿಯ, ಯುಕ್ತಿಯ ಪ್ರಪಂಚ.

ಆದರೆ ಕನ್ನಡ ಲೇಖನಗಳಲ್ಲಿ ಇಂಥ ನೇರವಾದ, ಪ್ರಾಮಾಣಿಕವಾದ, ಶ್ರದ್ಧಾಭೂಯಿಷ್ಠವಾದ ಗದ್ಯರಚನೆ ಶ್ರೀ ಡಿ.ವಿ.ಜಿ.ಯವರ 'ಬಾಳಿಗೊಂದು ನಂಬಿಕೆ', ಶ್ರೀ ದಿವಾಕರರ 'ಅಂತರಾತ್ಮನಿಗೆ' ಮುಂತಾದ ಎಲ್ಲಿಯೊ ಅತಿ ವಿರಳವಾದ ಒಂದೆರಡರಲ್ಲಿ ಮಾತ್ರ ಆಗಿದೆ. ಈ ಕೃತಿಯ ಶ್ರದ್ಧೆ, ಮನೋವಿಲಾಸ, ಕಲ್ಯಾಣದೃಷ್ಟಿ, ಸೂಕ್ಷ್ಮ ತಲಸ್ಪರ್ಶಿತೆ ಮುಂತಾದ ಗುಣಗಳಿಗಾಗಿಯೂ ಒಂದೆರಡು ಪ್ರಕರಣಗಳಲ್ಲಿನ ಕಾವ್ಯತೆ, ಗದ್ಯಪುಂಜಗಳಿಗಾಗಿಯೂ ನನಗೆ ಇದರಲ್ಲಿ ತುಂಬಾ ಪಕ್ಷಪಾತ.

ಹಾಗೆಯೇ 'ಕಲೆಯ ದರ್ಶನ'ಎಂಬ ಪುಸ್ತಕದ ವಿಶೇಷವೂ. ನಮ್ಮ ನಾಡಿನಲ್ಲಿ ಕಾರಂತರೊಬ್ಬರು ಮಾತ್ರ ಕಲೆಯ ವಿಷಯದಲ್ಲಿ ಇಂಥದನ್ನು ಬರೆಯಬಲ್ಲರು. ಒಂದೆರಡು ಕಲೆಗಳಲ್ಲಿ ಪರಿಣತಿ ಇಲ್ಲದವರೂ, ಸ್ವಂತವಾಗಿ ನಿರ್ಮಾಣಶಕ್ತಿ ಇಲ್ಲದವರೂ ಬರೆದ ಬರಹ ಪುಸ್ತಕದ ಮಾತಾಗುತ್ತದೆ ಮಾತ್ರ. ಅಲ್ಲಿಂದ ಇಲ್ಲಿಂದ ನಾಲ್ಕು ಮಾತು ಕಲಿತು ಅವನ್ನು ಪ್ರಜ್ಞಾವಾದವಾಗಿ ಬಳಸಿ ಹೊಗಳಿಸಿಕೊಳ್ಳಲು ಇಂಥ ವಿಷಯದಲ್ಲಿ ತಿಳಿವಳಿಕೆ ಬೆಳೆಯದಿರುವ ನಮ್ಮಂಥ ನಾಡಿನಲ್ಲಿ ಸುಲಭ. ನೃತ್ಯ, ಗಾನ, ಚಿತ್ರ, ಸಾಹಿತ್ಯ ನಿರ್ಮಾಣ ಈ ಕಲೆಗಳಲ್ಲಿ ಸ್ವಂತವಾಗಿ ಕೆಲಸಮಾಡಿದ ಅವರಿಗೆ ಆಪ್ತವಾದ ತಿಳಿವಳಿಕೆ ಉಂಟು. ಜೊತೆಗೆ ನಮ್ಮ ಕಾಲದಲ್ಲಿ ಒಳಗೆ ಹೊರಗೆ ಪ್ರಕಾಶಕ್ಕೆ ಬಂದ ಈ ಎಲ್ಲ ಕಲಾಕೃತಿಗಳನ್ನೂ ಪ್ರತ್ಯಕ್ಷವಾಗಿ ನೋಡಿ, ಕೇಳಿ ಅದರಿಂದ ಅವರ ಮನಸ್ಸು ಸತ್ಯವನ್ನು ಅರಿಯಲು ಯತ್ನಿಸಿದೆ. ಇಂಥವರು ಕಲೆಗಾರನ ಮೂಲ ಪ್ರವೃತ್ತಿಗಳನ್ನೂ ರೀತಿ ರಚನೆಗಳನ್ನೂ ಆ ಬಗ್ಗೆ ವಿಮರ್ಶೆಯನ್ನೂ ಕುರಿತು ನುಡಿದಾಗ ಅದಕ್ಕೆ ನಿಜವಾದ ಜೀವಂತಿಕೆ ಬರುತ್ತದೆ; ಅಧಿಕಾರವಾಣಿ ಬರುತ್ತದೆ.

ನಾನೂ ಕಾರಂತರೂ ಅಣ್ಣತಮ್ಮಂದಿರಂತೆ, ಜೊತೆ ಹಕ್ಕಿಗಳಂತೆ ಕೂಡಿಯಾಡಿದ್ದೇವೆ, ಓಡಿಯಾಡಿದ್ದೇವೆ. ಕರ್ನಾಟಕದಲ್ಲಿ ಎಲ್ಲೆಲ್ಲೂ , ಹೊರಗೂ ಜಯಪುರ, ಮುಂಬಯಿ, ಮದ್ರಾಸು ಸುತ್ತಿದ್ದೇವೆ. ಅವರ ವಿಷಯ, ಅವರ ಗ್ರಂಥಗಳ ವಿಷಯ ಆಡಲು ನನಗಿಂತ ದೂರದವರಾದರೆ ಚೆನ್ನ-ಬಾಂಧವ್ಯದಲ್ಲಿಯೂ, ಕಾಲಮಾನದಲ್ಲಿಯೂ. ಒಬ್ಬ ಲೇಖಕನ ಕೃತಿಯ ಬೆಲೆ ಕಟ್ಟಲು ನಾವು ಸ್ವಲ್ಪ ದೂರದಲ್ಲಿ ನಿಂತಿದ್ದರೆ ಒಳ್ಳೆಯದೆಂದು ನನಗೆ ತೋರಿದೆ. ಆದರೆ ಈ ಆಪ್ತತೆಯಲ್ಲಿ ಪ್ರಯೋಜನವಿಲ್ಲದಿಲ್ಲ.



ವ್ಯಕ್ತಿಯನ್ನು ಹತ್ತಿರದಿಂದ ಸ್ವಲ್ಪಮಟ್ಟಿಗೆ ನೋಡಿದವನಿಗೆ, ಆತನ ಮನಃಪ್ರವೃತ್ತಿಗಳನ್ನು ಗುರುತಿಸಿ ದಿನದಿನದ ನಡತೆಯಲ್ಲಿ-ವಿಶ್ವಾಸಗಳಲ್ಲಿ-ಕ್ರಿಯಾ ವಿಧಾನದಲ್ಲಿ ಅವನ್ನು ಕಂಡವರಿಗೆ ಹೊರಗಿನಿಂದ ನುಡಿಯುವವರಿಗಿಂತಲೂ ಒಂದು ಹೆಚ್ಚಿನ ಅನುಕೂಲ ದೊರೆಯುತ್ತದೆ. ಆದ್ದರಿಂದ ಇದಕ್ಕೆ ಒಂದು ವಿಶೇಷ ಬೆಲೆ ಬರಬಲ್ಲದು.

ಇಷ್ಟು ಹೇಳಬಹುದು. ಹೇಳಬೇಕಾದ್ದು ನನ್ನ ಕರ್ತವ್ಯವೆಂದರೆ ಸರಿಯೆ: ಈ ವ್ಯಕ್ತಿ ದೊಡ್ಡದು. ಈತ ಎಲ್ಲಿಯೋ 'ನಾನೇ ನನ್ನ ಕೃತಿ' ಎಂದಿದ್ದಾರೆ. ಇದು ನಿಜ. ದೇಶವೆಲ್ಲ ಸುತ್ತಿ, ನಾನಾ ಬಗೆಯ ಜನರನ್ನು ನೋಡಿ, ಅವರೊಡನೆ ಕೂಡಿ ಆಡಿ, ಮಕ್ಕಳಿಗೋಸ್ಕರ ಹಾಡಿ ನಲಿದು, ಕಲೆಗೋಸ್ಕರ ದುಡಿದು ದಣಿದು, ತನ್ನ ಆಸಕ್ತಿಯ ಮಾರ್ಗದಲ್ಲೇ ನಡೆದು, ಇತರರ ಆಸಕ್ತಿ ಕೆರಳುವಂಥ ಕೃತಿಗಳನ್ನೂ ನಿರ್ಮಾಣ ಮಾಡಿ, ತನ್ನ ಮನಸ್ಸಿನ  ಪ್ರಪಂಚವನ್ನೂ ಕೃತಿಯ ಪ್ರಪಂಚವನ್ನೂ ಅವರು ಬೆಳಸಿಕೊಂಡಿದ್ದಾರೆ. ಕನ್ನಡ ಸಾರಸ್ವತ ಪ್ರಪಂಚವನ್ನು  ಹಿಗ್ಗಿಸಿದ್ದಾರೆ. ತಮ್ಮ ಮೂರ್ತಿತ್ವವನ್ನು ರೂಪಿಸಿಕೊಂಡು ಒಂದು ಗಣ್ಯ ವ್ಯಕ್ತಿಯಾಗಿದ್ದಾರೆ. ಅವರ ಪ್ರಾಮಾಣಿಕತೆ, ದೊಡ್ಡತನ, ಔದಾರ್ಯ, ಶುಚಿಯಾದ ಅಪರಾಜಿತವಾದ ಮನಸ್ಸು ಸಾಧಾರಣ ದುರ್ಲಭ. ಒಳ್ಳೆಯ ಶಿಕ್ಷಣದ ಫಲ ಪುಸ್ತಕವಲ್ಲ, ಮನುಷ್ಯವ್ಯಕ್ತಿ ಎಂದಿದ್ದಾರೆ ಹಿರಿಯರು. ಕಾರಂತರನ್ನು ನೋಡಿದರೆ ಒಮ್ಮೆ ಹಾಗೆ ಹೇಳೋಣ ಅನ್ನಿಸುತ್ತದೆ. ಕಾರಂತರು ಸ್ವಶಿಕ್ಷಿತರು, ತಮ್ಮನ್ನು ತಾವೇ ಬೆಳಸಿಕೊಂಡವರು. ಆದುದರಿಂದ ಸಾಮಾನ್ಯ ಶಾಲೆಗಳ ವಿದ್ಯಾವಂತರಂತೆ  ಅವರಲ್ಲಿ ತಗ್ಗಿ ಬಗ್ಗುವ ಕಡೆಗೆ, ಅನುಸರಣೆಯ ಕಡೆಗೆ ಒಲವಿಲ್ಲ. ಅವರು ಸಂಪಾದಿಸಿದ್ದು ನಿಜವಾದ ವಿದ್ಯೆ. ಮನುಷ್ಯನ ವ್ಯಕ್ತಿತ್ವದ ವಿಕಾಸಕ್ಕೆ, ಬಿಡುಗಡೆಗೆ ಪೋಷಕವಾಗುವ ವಿದ್ಯೆ. 'ಸಾ ವಿದ್ಯಾ ಯಾ ವಿಮುಕ್ತಯೇ' ಎಂದು ವಿದ್ಯೆಯ ಸ್ವರೂಪ ಲಕ್ಷಣ ಹೇಳಿದ್ದಾರೆ. ಯಾವುದು ನಮ್ಮನ್ನು ಕಾರ್ಪಣ್ಯದಿಂದ, ಅಜ್ಞಾನದಿಂದ, ಸಣ್ಣತನದಿಂದ, ಸಾಮಾನ್ಯ ಪೂರ್ವಗ್ರಹಿಕೆ ಬರ್ಬರತೆಗಳಿಂದ ಬಿಡುಗಡೆ ಮಾಡುವುದೋ ಅದೇ ವಿದ್ಯೆ. ಮೋಕ್ಷ ಪರಕ್ಕೆ ಮಾತ್ರ ಸಂಬಂಧಿಸಿದುದಲ್ಲ. ಅದಕ್ಕೆಷ್ಟೋ ಇಹಕ್ಕೂ ಅಷ್ಟೇ ವ್ಯಾಪಕವಾಗತಕ್ಕದ್ದು. ಇಂಗ್ಲಿಷಿನಲ್ಲಿ ಹೇಳುವುದಾದರೆ ಅವರು ಒಬ್ಬ full, free, frank and  fearless man ಎನ್ನಬಹುದು. 'ಜ' ಅಕ್ಷರ ಕೇಳಲು ಸ್ವಲ್ಪ ಒರಟು, ನಿಜ. ಆದರೆ ಅದರಲ್ಲಿ ತೇಜಸ್ಸಿದೆ, ವೀರ್ಯವಿದೆ, ಚುರುಕಿದೆ, ಪ್ರಗತಿ ಚೇತನವಿದೆ, ನುಗ್ಗಿ ಸಾಗುವ ದಿಟ್ಟತನ, ಪೌರುಷ ಇವೆ. ಕನ್ನಡ ಸಂಸ್ಕೃತಗಳಲ್ಲಿಲ್ಲದ ಒಂದು ಶಬ್ದ ಘೋಷ ಇದೆ. ಅವರಿಗಿಂತ ಹೆಚ್ಚು free (ಸ್ವತಂತ್ರ),  fearless (ನಿರ್ಭೀತ) ಮನುಷ್ಯರೂ ಬೇರೆ ಯಾರಾದರೂ ಕರ್ನಾಟಕದಲ್ಲಿದ್ದಾರೆಯೇ? ಮನುಷ್ಯ ಭೀತಿಯೂ ಇಲ್ಲ, ದೈವ ಭೀತಿಯೂ ಇಲ್ಲ; ಹಗೆಯೂ ಇಲ್ಲ, ಸ್ನೇಹವೂ ಇಲ್ಲ; ತಾನು ಹಿಡಿದ ಕೆಲಸವನ್ನು ಹರಿಹರ ಬ್ರಹ್ಮಾದಿಗಳು ಬಂದರೂ - ಸ್ವತಃ ತನಗೇ ತೋರದೆ - ಬಿಡತಕ್ಕದ್ದಲ್ಲ. ಪ್ರಾಮಾಣಿಕವಾದ ಇಂಥ ಸತ್ವ ನಮ್ಮ ದೇಶದಲ್ಲಿ ಇಂಗಿ ಹೋಗುವುದರ ಬದಲು ಸಾಕಷ್ಟು ಪ್ರಮಾಣದಲ್ಲಿ, ಸ್ಥಳಗಳಲ್ಲಿ ಇದ್ದಿದ್ದರೆ ನಮ್ಮ ದೇಶ

ಹೀಗಿರಬೇಕಾಗಿರಲಿಲ್ಲ. ಇನ್ನು ಕಾರಂತರ ಜೀವನದಷ್ಟು ಬಹುಮುಖವಾಗಿ ಬೆಳೆಯಲು ಎಲ್ಲರಿಗೂ ಸಾಧ್ಯವಲ್ಲ. ಅವರ ವಿಚಾರಗಳು, ಕಾರ್ಯಕ್ಷೇತ್ರ ಒಂದೇ,ಎರಡೇ! ಎಲ್ಲವನ್ನೂ ತಿಳಿಯಬೇಕು, ಎಲ್ಲದರಲ್ಲಿಯೂ ದುಡಿಯಬೇಕು ಎನ್ನುವ ಕಾಂಕ್ಷೆ ನಮ್ಮ ತರುಣರಲ್ಲಿ ಬಹುಜನಕ್ಕೆ ಉಂಟಾದ ದಿನ ಈ ನಾಡಿನ ಕಲ್ಯಾಣದ ದೊಡ್ಡ ಹೆಜ್ಜೆಯನ್ನು ಮುಂದಕ್ಕೆ ಎತ್ತಿಟ್ಟಂತಾಗುತ್ತದೆ. ಕೇವಲ  ವಿಷಯ ಸಂಗ್ರಹದ ದೃಷ್ಟಿಯಿಂದ ಕಾರಂತರು ದುಡಿದಷ್ಟು, ಅವರು 'ಬಾಲಪ್ರಪಂಚ'ಕ್ಕೋಸ್ಕರ ಅಧ್ಯಯನ ಮಾಡಿದಷ್ಟು ನಮ್ಮ ಯುವಕರಲ್ಲಿ ಎಷ್ಟು ಮಂದಿ ದುಡಿದಾರು? ಶಾಸ್ತ್ರಜ್ಞಾನಕ್ಕಿಂತಲೂ ಹೆಚ್ಚಾಗಿ ಓದಿದ ವಿಷಯವನ್ನು ಒಂದಕ್ಕೊಂದು ಸಮನ್ವಯಗೊಳಿಸಿ, ಅನುಭವ ಮತ್ತು ವ್ಯಕ್ತಿತ್ವದ ಬಲದಿಂದ ಅದನ್ನು ಜೀವನದರ್ಶನವಾಗಿ ಮಾರ್ಪಡಿಸುವ ಶಕ್ತಿ ಎಷ್ಟು ಜನರಿಗಿದೆ? ಬದುಕುವುದು, ಕೇವಲ ಉಸಿರಾಡಿಕೊಂಡಿರುವುದು ಮನುಷ್ಯ ಜೀವನದ ಧರ್ಮವೂ ಅಲ್ಲ, ಜನಾಂಗಕ್ಕೆ ಭೂಷಣವೂ ಅಲ್ಲ. ಪ್ರಯೋಜನವಂತೂ ಅಷ್ಟಕಷ್ಟೆ. ಬದುಕಿದರೆ ಸಾಲದು, ಚೆನ್ನಾಗಿ ಬದುಕಬೇಕು ಎಂದು ಕಾರಂತರಂತೆ ಹಂಬಲವುಳ್ಳವರ ಸಂಖ್ಯೆ ಕಡಮೆ. ಬಹುಮುಖ ಕ್ರಿಯಾಸಿದ್ಧಿ ಕಾರಂತರ ಯತ್ನದ ಗುರಿ, ಪೂರ್ಣತೆ ಅವರ ಜೀವನದ ಗುರಿ. ಬಾಳು ದೊಡ್ಡದಾಗಬೇಕು, ಚೆನ್ನಾಗಬೇಕು, ಸುಂದರವಾಗಬೇಕು ಎಂಬ ಗುರಿಯನ್ನು ಸದಾ ಲಕ್ಷ್ಯದಲ್ಲಿರಿಸಿಕೊಂಡು ನಡೆದ ಹಿರಿಯ ಜೀವ ಕನ್ನಡದ ಶಿವರಾಮ ಕಾರಂತರು.

❑

# 2. ಒಳ್ಳೆಯ ಮನುಷ್ಯ, ಒಳ್ಳೆಯ ಬದುಕು

**(ಬೆಂಗಳೂರಿನ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯಲ್ಲಿ 1973ರಲ್ಲಿ ನೀಡಿದ ಪ್ರೊಫೆಸರ್ ಟಿ. ಎಸ್. ವೆಂಕಣ್ಣಯ್ಯ ಜ್ಞಾಪಕೋಪನ್ಯಾಸ)**

1

ವೆಂಕಣ್ಣಯ್ಯನವರು ಒಳ್ಳೆಯ ಮನುಷ್ಯರು; ಅವರ ಬದುಕು ಒಳ್ಳೆಯದು. ಹೆಚ್ಚು ಗದ್ದಲವಿಲ್ಲದೆ ಅವರು ತಮ್ಮ ಬದುಕನ್ನು ನಡಸಿದರು. ತಾವು ಶುಚಿಯಾಗಿದ್ದು ಸುತ್ತಲಿನ ಎಲ್ಲ ಕಾರ್ಯಗಳಲ್ಲಿಯೂ ತಮಗೆ ಒಪ್ಪಿ ಬಂದ ಸಂಸ್ಥೆಗಳಿಗೆ ಸೇರಿಕೊಂಡು ನೆರವಿತ್ತರು. ಮಾತು ಕಡಮೆ, ಬರವಣಿಗೆ ಕಡಮೆ; ಆದರೆ ಅವರ ವಿಶ್ವಾಸಕ್ಕೆ ಎಲ್ಲೆ ಇರಲಿಲ್ಲ. ಮನಸ್ಸಿಗೆ ಒಮ್ಮೆ ಬಂದಿತೆಂದರೆ ಅದನ್ನು ದೃಢವಾಗಿ ಬೆಂಬಲಿಸುತ್ತಿದ್ದರು. ಎತ್ತರವಾದ ಆಳು. ಸುತ್ತಲಿದ್ದ ನಾಲ್ವರೈವರು ಎತ್ತರದ ಆಳುಗಳಿಗಿಂತ ಎತ್ತರದವರು. ಕಠಿಣವಾದ ಯಾರ ನಡತೆಯೂ ಅವರಿಗೆ ಮೆಚ್ಚುತ್ತಿರಲಿಲ್ಲ. ಕಠಿಣವನ್ನು ಕಂಡರೆ ಕೇಳಿದರೆ ಒಳಗೇ ಒದ್ದಾಡುತ್ತಿದ್ದರು. ಈ ಜನರೇಕೆ ಇಷ್ಟು ಕ್ರೂರ, ಒರಟು ಎನ್ನುತ್ತಿದ್ದರು. ಅವರ ಈ ಎತ್ತರಕ್ಕೆ ಅವರೇ ಸಂಕೋಚಪಟ್ಟುಕೊಳ್ಳುತ್ತಿದ್ದರೇನೋ ಎಂಬಂತೆ ತಲೆ, ಮುಖ ತಗ್ಗಿಸಿ ನಡೆಯುತ್ತಿದ್ದರು. ಬಲ್ಲವರಿಗೆಲ್ಲ ಅವರಲ್ಲಿ ಗೌರವ; ಪ್ರೀತಿ. ಹೆಚ್ಚು ಹಣ ಅವರಲ್ಲಿ ಇರಲಿಲ್ಲ; ಇದ್ದುದನ್ನು ಪೋಲು ಮಾಡಲಿಲ್ಲ. ಶಕ್ತಿಮೀರಿ, ಕೆಲವೇಳೆ ಸಾಲಸೋಲಗಳಿಗೆ ಸಿಕ್ಕಿ, ತಮ್ಮ ಸುತ್ತಮುತ್ತಲವರಿಗೂ ಸ್ನೇಹಿತರಿಗೂ ಸಹಾಯ ಮಾಡಿದುದುಂಟು. ಆರೇಳು ಮಂದಿ ತಮ್ಮಂದಿರು, ಬಹುಶಃ ಒಬ್ಬಳೇ ತಂಗಿ. ಹುಟ್ಟಿ ಬೆಳೆದ ಮನೆಯಲ್ಲಿ ಹಿರಿಯರಾಗಿದ್ದುಕೊಂಡು, ನಿಜವಾದ ಅಣ್ಣನ ಹಾಗೆ ನಡೆದುಕೊಂಡರು. ನಾನು ಅವರನ್ನು ಕಾಣುವ ಹೊತ್ತಿಗೆ ಅವರ ತಂದೆ ತೀರಿಕೊಂಡಿದ್ದರು; ತಾಯಿ ಇನ್ನಷ್ಟು ಕಾಲ ಜೊತೆಯಲ್ಲಿದ್ದು, ಅವರ ಅಭಿವೃದ್ಧಿಯನ್ನು ಕಂಡರು. ಭಾರತಾದಿಗಳನ್ನು ತಾಯಿ ಓದುತ್ತಿದ್ದುದರಿಂದ ಇವರಿಗೂ ಅವುಗಳಲ್ಲಿ ಅಭಿರುಚಿ ಹುಡುಗತನದಿಂದ ಬಂದಿತ್ತು. ಸಾಮಾನ್ಯ ಮೈಬಣ್ಣ; ಅಗಲ ಮುಖ; ಕಾಂತಿಯುತ ಅರೆ ಕೆಂಪು ಕಣ್ಣುಗಳು; ಅವರದೇ ಬಗೆಯ ಮೀಸೆ; ಒಳ್ಳೆಯ ಹಲ್ಲಸಾಲು. ಅವರು ಸಂತೋಷದಲ್ಲಿ ಮುಗುಳುನಗೆ ನಕ್ಕಾಗ ಮುಖ ಕಳೆಗೊಳ್ಳುತ್ತಿತ್ತು. ಆ ಕಣ್ಣಕಾಂತಿಯನ್ನು, ಹಲ್ಲಸಾಲನ್ನು ಆಗ ನೋಡಬೇಕಿತ್ತು: ಎಷ್ಟು ಸ್ನಿಗ್ಧವಾಗಿ ಅವರ ಮನಸ್ಸು ಅರಳೀತು ಎಂಬುದು ಕಾಣುತ್ತಿತ್ತು. ಹಿಂದೆ ಒಮ್ಮೆ ಸೂಟು ಹಾಕುತ್ತಿದ್ದರಂತೆ; ಚುಂಗು ಬಿಟ್ಟ ರುಮಾಲು ಧರಿಸುತ್ತಿದ್ದರಂತೆ;

ಹೊಗೆ ಬತ್ತಿ ಸೇದುತ್ತಿದ್ದರಂತೆ; ನಾನು ಅವನ್ನು ಕಂಡುದಿಲ್ಲ. ನಾನು ಕಂಡಾಗ ಪೂರ್ತಿ ಹಳೆಯ ಕಾಲದ ಮೈಸೂರವರಾಗಿ ಮುಚ್ಚು ಕುತ್ತಿಗೆಯ ಕೋಟು ಧರಿಸಿ ಪಂಚೆ ಉಡುತ್ತಿದ್ದರು.

ಯಾವುದಾದರೊಂದು ವಿಶೇಷ ಪ್ರಸಂಗ ಬಂದು ತಾವು ಚರ್ಚೆಯಲ್ಲಿ ಭಾಗವಹಿಸ ಬೇಕಾದಾಗ, ಸಂಗತಿಯ ನಾಲ್ಕು ಮುಖಗಳನ್ನು ಅರಿತು ಸಮಧಾತುವಾಗಿ ತೀರ್ಮಾನಕ್ಕೆ ಬರುತ್ತಿದ್ದರು. 'ಹೀಗೆ ಬಹುಶಃ, ಇರಬಹುದು'; 'ಹೀಗೆ ಅರ್ಥ ಮಾಡಿದರೆ ಹೆಚ್ಚು ಸಮಂಜಸವಾದೀತೆನಿಸುತ್ತದೆ' ಎನ್ನುವರು. ಚರ್ಚೆ ವಿವಾದವಾಗಿ ವಿರಸ ಬೆಳೆಯು ವಂತಾದರೆ ಅಲ್ಲಿಗೆ ಆ ದಿನ ಅದು ನಿಂತು ಒಂದು ಸಮಾಧಾನ ಬರುವಂತೆ, ಮಿತಿ, ಮರ್ಯಾದೆ ಮೀರದಂತೆ ಮಾಡುವ ಸ್ವಭಾವ ಅವರದು. ಒಮ್ಮೆ ದೊಡ್ಡಸಭೆಯಲ್ಲಿ ಯಾವುದೊ ಒಂದು ನಿರ್ಣಯವಾಗಬೇಕಿತ್ತು. ಅಧ್ಯಕ್ಷರಿಗೆ ಹೇಳಿ 'ಕೋರಂ ಇಲ್ಲ, ಸರ್; ತೀರ್ಮಾನ ಮುಂದಕ್ಕೆ ಹಾಕೋಣ' ಎಂದರು. ಜೀವನದಲ್ಲಿ ದೊಡ್ಡದರ ಕಡೆ, ಶುಚಿಶೀಲದ ಕಡೆ ಹೇಗೆ ಒಲುತ್ತಿದ್ದರೊ ಹಾಗೇ ಅವರ ಧರ್ಮಸಂಪ್ರದಾಯವೂ ಕಾವ್ಯಾಭಿರುಚಿಯೂ ಚೊಕ್ಕವಾಗಿ, ಸೂಕ್ಷ್ಮವಾಗಿ ಇತ್ತು. ಅಂಥ ಹೆಚ್ಚು ಮಂದಿಯನ್ನು ನಾನು ಕಂಡಿಲ್ಲ. ಅವರು ಒಪ್ಪದಾದ, ಅವರಿಗೆ ನೋವುಂಟು ಮಾಡಿತೆಂದು ಯಾವುದೊ ನನ್ನ ಒಂದು ಕವಿತೆಯನ್ನು ಒಮ್ಮೆ ನಾನು ಹರಿದು ಹಾಕುತ್ತೇನೆಂದೆ. 'ಪದ್ಯ ಚೆನ್ನಾಗಿದೆ: ನನ್ನ ಮನಸ್ಸಿಗೆ ಪಥ್ಯವಲ್ಲದ ಹೊರಕಾರಣದಿಂದ ಇದು ಒಪ್ಪದಿರಬಹುದು; ಹರಿದು ಹಾಕಬೇಡಿ; ಜೀವಹತ್ಯವಾಗುತ್ತದೆ' ಎಂದರು. ತಮ್ಮ ಮೊದಲ ಹೆಂಡತಿ ತೀರಿಕೊಂಡ ಅಲ್ಪ ಕಾಲದಲ್ಲಿಯೇ ನನಗೆ ಆಗಬೇಕಾಗಿದ್ದ ಒಂದು ನೆರವಿಗಾಗಿ ನಾಲ್ಕಾರು ಜನರನ್ನು ಕಂಡು ಆ ಕೆಲಸ ಬೇಗ ನೆರವೇರುವಂತೆ ಮಾಡಿಕೊಟ್ಟರು.

ಕಾವ್ಯ ವಿಮರ್ಶೆಯಲ್ಲಿ ಹೇಗೊ ಅದರ ಸಂಪಾದನೆಯಲ್ಲಿಯೂ ಅವರ ವಿಚಕ್ಷಣೆ ಸೂಕ್ಷ್ಮವಾದ್ದು. ಶ್ರೀ ರಾಮಕೃಷ್ಣ ಪರಮಹಂಸರನ್ನು ಕುರಿತು ಸ್ವಲ್ಪ ಭಾಗ ಅವರು, ಸ್ವಲ್ಪ ಭಾಗ ಕೃಷ್ಣಶಾಸ್ತ್ರಿಗಳು ಒಂದು ಸಣ್ಣ ಪುಸ್ತಕ ಬರೆದರು. ರಾಮಕೃಷ್ಣರ ಜೀವನವನ್ನು ಕುರಿತು ಅವರಿಗೆ ಅಪಾರ ಪ್ರೀತಿ. ರವೀಂದ್ರನಾಥ ಠಾಕೂರರ 'ಪ್ರಾಚೀನ ಸಾಹಿತ್ಯ'ದಲ್ಲಿ ಬಹುಭಾಗವನ್ನು ಕನ್ನಡಿಗರಿಗೆ ಕೊಟ್ಟು ಪತ್ರಲೇಖೆ, ಊರ್ಮಿಳೆಯರನ್ನು ಕುರಿತು ಒಂದು ಸೂಕ್ಷ್ಮದೃಷ್ಟಿಯನ್ನು ಕನ್ನಡಿಗರಿಗೆ ಪರಿಚಯ ಮಾಡಿಕೊಟ್ಟರು. ಅವರ 'ಕನ್ನಡ ಕಾದಂಬರಿ'ಯ ಸಂಗ್ರಹ ಕೇವಲ ಸಂಗ್ರಹವಲ್ಲ; ಅಲ್ಲಿ ಆಯ್ದ ಕಾವ್ಯಭಾಗ, ಬರೆದ ಪೀಠಿಕೆ, ಯಾವುದನ್ನು ಸಾಮಾನ್ಯರು ಕಷ್ಟವೆಂದುಕೊಳ್ಳಬಲ್ಲರೊ ಅಂಥ ಶಬ್ದಗಳ ಅರ್ಥಕೋಶ – ಇವು ನಿಜವಾದ ವಿಮರ್ಶೆ. ಹರಿಹರನ 'ಬಸವರಾಜದೇವರ ರಗಳೆ' ಅವನ ಅತ್ಯುತ್ತಮ ಕಾವ್ಯಕ್ರಿಯೆಗಳಲ್ಲಿ ಒಂದು. ಅದನ್ನು ಅವರು ಸಂಪಾದಿಸಿದರು. ರಾಘವಾಂಕನ 'ಸಿದ್ಧರಾಮ ಚಾರಿತ್ರ'ವನ್ನು ಅವರು ನರಸಿಂಹಾಚಾರ್ಯರ ಜೊತೆಗೆ ಸಂಗ್ರಹಿಸಿದ ಕಾರ್ಯವೂ ಹಾಗೆಯೇ. ಸ್ವಂತವಾಗಿ ಕವಿತೆ ಬರೆಯಬಲ್ಲವರಾಗಿದ್ದರು.



ಎರಡು ಮೂರನ್ನು ಬರೆದು ಹರಿದು ಹಾಕಿದ್ದರು. ತನ್ನ ನಿರ್ಮಾಣಶಕ್ತಿ ಕವಿತಾರಚನೆಯ ಕಡೆಗಲ್ಲ; ನನಗೆ ಬರವಣಿಗೆ ಕಷ್ಟ; ನಾನು ಸೋಮಾರಿ–ಇತ್ಯಾದಿ ಸಬೂಬುಗಳನ್ನು ಹೇಳಿ ಬರವಣಿಗೆಯ ಅನೇಕ ಪೇಚಾಟಗಳನ್ನು ತಪ್ಪಿಸಿಕೊಂಡರು. ವಿದ್ಯೆಯ ಫಲ ವಿನಯ, ಸಂಸ್ಕಾರ; ಕೇವಲ ಪಾಂಡಿತ್ಯವಲ್ಲ. ಒಂದು ವ್ಯಕ್ತಿ, ಒಂದು ಉತ್ತಮ ಬದುಕಿನ ರೂಪಣ ಅದರಿಂದ ಸಿದ್ಧಿಸಬೇಕು. ಯಾವುದು ನಮ್ಮ ಮನಸ್ಸನ್ನು ಬಿಡುಗಡೆ ಮಾಡುವುದೊ ಅದು ವಿದ್ಯೆ ಎಂಬ ಮಾತುಂಟು ನಮ್ಮಲ್ಲಿ. ಆ ಮೂರೂ ಅವರಲ್ಲಿ ಫಲಿಸಿದ್ದುವು.

ಇದು ಅವರನ್ನೇ ಕುರಿತ ಉಪನ್ಯಾಸವಲ್ಲ; ಅವರ ಹೆಸರಲ್ಲಿ ಗೆಳೆಯ ಶ್ರೀ ರಾಜರತ್ನಂ ಸ್ಥಾಪಿಸಿರುವ ದತ್ತಿಯ ಮೂರನೆಯ ಉಪನ್ಯಾಸ. ವೆಂಕಣ್ಣಯ್ಯನವರೇ ನನಗೆ 1923ರಲ್ಲಿ ಶ್ರೀ ಗುಂಡಪ್ಪನವರ ಮತ್ತು ಶ್ರೀ ಮಾಸ್ತಿಯವರ ಪರಿಚಯ ಮಾಡಿ ಕೊಟ್ಟರು. ಈ ತ್ರಿಪುಟೀಮಂಗಳ ನನ್ನನ್ನು ಈ ಉಪನ್ಯಾಸ ಸಾಹಸಕ್ಕೆ ಒಪ್ಪಿಸಿತು. ಉಪನ್ಯಾಸದ ವಿಳಾಸವನ್ನು ಹೀಗೆ ಹಾಕಿಕೊಳ್ಳುವುದಕ್ಕೆ ಅವರ ಬದುಕು, ಆ ನೆರವು ನಿದರ್ಶನವಾಯಿತು.

ನನಗೆ ಅನೇಕ ವೇಳೆ ಅನ್ನಿಸಿದೆ : ಭಗವದ್ಗೀತೆಯಂತಹ ಗ್ರಂಥ ಭಾರತ ಸಂಸ್ಕೃತಿಯ ಸಾರಭೂತ ಗ್ರಂಥವಾಗಿದ್ದರೂ–ಅಲ್ಲಿನ ಒಂದೊಂದು ಪದ್ಯವೂ ಬದುಕನ್ನು ರೂಪಿಸುವ ಅಖಂಡವಾಗಿ, ಆಚಂದ್ರಾರ್ಕವಾಗಿ, ನಿಷ್ಕೃಷ್ಟವಾಗಿ, ಸುಂದರವಾಗಿ, ಕಾಮಧೇನುವಿನ ಕೆಚ್ಚಲಂತೆ ಬಯಸಿದ ವಿಶೇಷಾರ್ಥ ಕೊಡಬಲ್ಲದ್ದಾಗಿದೆ–ಅಲ್ಲಿನ ತತ್ತ್ವದರ್ಶನವನ್ನು ಕೊಟ್ಟ ಕೃಷ್ಣನ ಜೀವನಚಿತ್ರಣ ಮಹಾಭಾರತದಲ್ಲಿ ಆ ಬಗೆಯದಾಗಿ ಕಾಣದಿದ್ದಿದ್ದರೆ ನನ್ನ ಮನಸ್ಸಿಗೆ ಗೀತೆಯ ಸಾರ್ಥಕತೆ ಬೆಲೆಯುಳ್ಳದ್ದಾಗುತ್ತಿರಲಿಲ್ಲ: ಒಂದೇ ಒಂದು ಸಂದರ್ಭವನ್ನು ಬಿಟ್ಟು. ಕರ್ಣನನ್ನು ಒಲಿಸಿಕೊಳ್ಳಲೆಂದು ಆತ ಆಡಿದ ಮಾತು– 'ಷಷ್ಠೇ ಚ ತ್ವಾಂ ತಥಾಕಾಲೇ ದ್ರೌಪದ್ಯುಪಗಮಿಷ್ಯತಿ' ಎಂಬುದು–ಅಂಥ ಒಂದು ಸಂದರ್ಭ. ಬಹುಶಃ ಆ ಮಾತು ಆ ಸನ್ನಿವೇಶಕ್ಕೆ ಅಗತ್ಯವಾಗಿತ್ತೇನೊ. ಅಂಥ ಮನುಷ್ಯನೂ ಅಂಥ ಮಾತನ್ನು ಆಡಬೇಕಾಗಿ ಬಂದಿತ್ತೇನೊ–ಹೇಳಲಾರೆ. ಕೃಷ್ಣನ ನಿಃಸ್ವಾರ್ಥ ಜೀವನದಲ್ಲಿ ಕೂಡ ಅಂಥ ಪ್ರಸಂಗ ಒಂದರಲ್ಲಿ ಅವನು ತೇರಲಿಲ್ಲ–

> ವಾದಕಾದರು ಸರಿಯೆ
>   ಭೇದಕಾದರು ಸರಿಯೆ
> ಕೃಷ್ಣನೆನ್ನಲು ಬಹುದೆ
>   ಕರ್ಣಗೆ–
> ಆರನೆಯವನಾಗಿ ನಾಳೆ
>   ದ್ರೌಪದಿ ನಿನ್ನ ಕೂಡ್ಯಾಳು ಎಂದು.

–ಶಾಂತಂ ಪಾಪಂ– 'ನೆರೆದಾಳು' ಎನ್ನಿಸಿದೆ. ಆಕೆ ಹೆಂಗಸು. ಎಷ್ಟು ಈತನಿಗೆ ಆಪ್ತಳೊ, ಅವಳ ಸ್ವಭಾವವನ್ನು ಇವನು ಅರಿತವನೊ, ಆ ಮಾತಿರಲಿ. ಆಕೆ ದೂರ ದಲ್ಲಿದ್ದಾಳೆ. ಪಾಂಡವರ ನೆಚ್ಚಿನ ಹೆಂಡತಿ. ಒಮ್ಮೆ ಕೂಡ ಅವರಲ್ಲಿ ಯಾರೂ ಆಕೆಗೆ ಹೀನಾಯ ಸುಳಿವಂತೆ ನುಡಿದಿಲ್ಲ, ನಡೆದಿಲ್ಲ. ಮದುವೆಯಾಗಿ ಎಷ್ಟೋ ವರ್ಷ ಸಂದು ಉಪಪಾಂಡವರು ಹುಟ್ಟಿದ್ದಾರೆ. ಅಂಥವಳನ್ನು ಕುರಿತು ಯಾರೂ ಈ ಮಾತನಾಡುವುದು ಸರಿಯಾಗದು ಎನ್ನಿಸಿದೆ. ತಂಗಿಯಾದರೂ ಭಕ್ತಳಾದರೂ ಇದು ಸರಿಯಾಗದು.

ಮಹಾಭಾರತದ ಕೃಷ್ಣನನ್ನು ಕಂಡರೆ, ಗೀತೆಯ ಕೃಷ್ಣನನ್ನು ಕಂಡರೆ ವೆಂಕಣ್ಣಯ್ಯ ನವರಿಗೆ ತುಂಬಾ ವಿಶ್ವಾಸ. ವ್ಯಾಸರ ಮಹಾಭಾರತವನ್ನೂ ನಾರಣಪ್ಪನ ಭಾರತವನ್ನೂ ಚೆನ್ನಾಗಿ ಓದಿದ್ದವರು ಅವರು. ಪಂಪಭಾರತ ಅವರಿಗೆ ಪ್ರಿಯವಾಗಿದ್ದಷ್ಟು ಇನ್ನಾವ ಕನ್ನಡ ಕಾವ್ಯವೂ ಇರಲಿಲ್ಲ. ಕಾರ್ಯಮುಖವಾದ ಚೈತನ್ಯ ಕೃಷ್ಣನದು; ಬರಿಯ ಭಾವಮಯ ಮಾತ್ರ ಅಲ್ಲ. ಕಾರ್ಯಸಾಧನೆಗೆ ಬದುಕು ನಿವೇದಿತವಾಗಬೇಕಾದ್ದು. ಈ ಕಡೆ ಮನುಷ್ಯನ ಜೀವ, ಆ ಕಡೆ ಕಾರ್ಯಸಾಧನೆ ಇವೆರಡೂ ಜೊತೆಗೆ ನಡೆಯಬೇಕಾದವು,–ಬೆಂಕಿಗೆ ಅಥವಾ ಸೂರ್ಯನಿಗೆ ಶಾಖ, ಕಾಂತಿ ಅಥವಾ ಬೆಳಕು ಎರಡಾದರೂ ಮುಖವಿದ್ದಂತೆ. ಬೆಂಕಿ ಸುಟ್ಟು ಬೂದಿ ಮಾಡುವ ಹಾಗೆ ಶುದ್ಧಿ ಮಾಡಬಲ್ಲದು; ಅದು ಪಾವಕ. ಈ ವ್ಯಕ್ತಿತ್ವ, ಆ ಶೀಲ, ಆ ಕ್ರಿಯಾಮುಖತೆ, ಆ ಕಾರ್ಯದಕ್ಷತೆ ಮೂರೂ ಈ ದಿನದ ವಿಷಯಕ್ಕೆ ಸಂಬಂಧಿಸಿದ ಸಂಗತಿಗಳೇ. ನನ್ನ ಶಕ್ತಿಗೆ ಮೀರಿದ್ದೆಂದು ಕಾಣಿಸಿದರೂ ಸಾಹಸ ಮಾಡುತ್ತಿದ್ದೇನೆ–ಕ್ಷಮೆ ಬೇಡಿ. (ಬದುಕು ನಾಡಿನ ಜೀವನಕ್ಕೆ ವಿಸ್ತಾರವಾಗಿ ಅನ್ವಯಿಸುವ ನೆಲಸುಳ್ಳದ್ದು. ಆ ನೆಲಸನ್ನು ಇಂದು ನಾನು ಸಮೀಪಿಸುತ್ತಿಲ್ಲ!)

2

ಹಿಂದೆ ಸಂಪಗೆ ವೆಂಕಟಪತಯ್ಯನವರ ದತ್ತಿಯ ಉಪನ್ಯಾಸವಾಗಿ ನಾನು ಸತ್ಯ (ಅಥವಾ ವಾಸ್ತವ ಸಂಗತಿ) ಮತ್ತು ಮೌಲ್ಯ (Fact and Value) –ಅದರ ಸ್ವರೂಪ ಲಕ್ಷಣ, ಪ್ರಕಾರಗಳು, ಅದು ಕಾರ್ಯ ಮಾಡುವ ರೀತಿ ಎಂಬುದನ್ನು ಕುರಿತು ಇಲ್ಲಿ ಮಾತನಾಡಿದ್ದೆ. ಮೂರು ಮೂರು ಮಾತುಗಳ ಎರಡು ಪ್ರಸಂಗಗಳನ್ನು ಉದಾಹರಣೆ ಯಾಗಿ ನಿವೇದಿಸಿದ್ದೆ. ಅವುಗಳಲ್ಲಿ ಒಂದು ತ್ರಿವರ್ಗ: ಸತ್ಯ, ಶಿವ, ಸುಂದರ ಎಂಬುದು. 'ಶಿವ' ಎಂಬ ಮಾತು 'ಒಳ್ಳೆಯ' ಎಂಬುದರ ಚರಿತಾರ್ಥತೆಯನ್ನು ತೋರಿಸುವ ಮಾತು. ಒಳ್ಳೆಯದರ ಪರಮಾವಧಿ 'ಶಿವ' ಅಥವಾ 'ಮಂಗಳ'. 'ಒಳ್ಳೆಯದು' ಎಂದರೇನು? ಅದರ ಸಾಧನೆಯ ರೀತಿ ಹೇಗೆ? ಸಿದ್ಧಿ ಏತರಲ್ಲಿ? ಇದರಿಂದ ಲೋಕ ಜೀವನಕ್ಕೆ ಯಾವ ಪ್ರಯೋಜನ ಸಿದ್ಧಿಸುತ್ತದೆ? ಒಳ್ಳೆಯದು ಎಂದರೆ ಸಾಕೆ? ಅದರ ಅರ್ಥವ್ಯಾಪ್ತಿ ಎಲ್ಲಿಯವರೆಗೆ ಆಕಾಂಕ್ಷೆ ಉಳ್ಳದ್ದು? ಇದಕ್ಕೆ ಸಂಬಂಧಿಸಿದ ನಿಯಮಗಳೊ



ನಿರ್ಬಂಧಗಳೊ ಸಂದೇಹಗಳೊ ಸಮಸ್ಯೆಗಳೊ ಯಾವುವು?– ಎಂಬುದನ್ನೆಲ್ಲ ಈ ಒಳ್ಳೆಯದೆಂಬುದರ ಪ್ರಪಂಚ ಒಳಗೊಳ್ಳುತ್ತದೆ. ಅಷ್ಟು ಕೂಲಂಕಷವಾಗಿ ಆ ವಿಷಯವನ್ನು ಪರಿಶೀಲಿಸಲು ನನಗೆ ಶಕ್ತಿಯಿಲ್ಲ; ಸದ್ಯಃ ಅವಕಾಶವಿಲ್ಲ. ನಮ್ಮ ಕಾಲದ ಹೆಚ್ಚು ಶಕ್ತರಾದ ಜಿಜ್ಞಾಸುಗಳು ಅದನ್ನು ಮಾಡಬೇಕು. ಒಂದೆರಡು ಸಂಗತಿಗಳನ್ನು ಮಾತ್ರ ನಿವೇದಿಸಲು ಬಯಸಿದ್ದೇನೆ.

Beauty (ಚೆಲುವು) ಎಂಬುದನ್ನು ಕುರಿತು ಆಂದ್ರೆ ಮಾಲ್ರೂಸ್ ಅವರು Beauty was that which everyone prefers to see in real life ಎಂದರು. ಅದರಂತೆಯೇ Good (ಒಳಿತು) ಎನ್ನಲೆ? ಬೇಕಾದರೆ and like to have ಎಂಬುದನ್ನೂ ಆಂದ್ರೆಯವರ ಮಾತಿಗೆ ಸೇರಿಸಿಕೊಳ್ಳಬಹುದು. Good ಎಂಬುದಕ್ಕೆ To be and to do ಎಂಬುದನ್ನೂ ಹೇಳಬಹುದು, ಇಷ್ಟು ಸುಲಭವೇ ಆಗಿದ್ದರೆ ವಿಷಯ. ಈ ಸೂತ್ರ ಸರಳವಾದರೂ ಸಾಲದೆನ್ನಿಸುತ್ತದೆ. ಪ್ರಪಂಚಗಳೂ ಬೇರೆ ಬೇರೆ.

What is the Good? Why should I or one be good? ಎಂಬ ಪ್ರಶ್ನೆಗಳು ಎಲ್ಲ ದೇಶಗಳ, ಕಾಲಗಳ ಜಿಜ್ಞಾಸುಗಳಿಗೂ ಮುಖ್ಯವೆನ್ನಿಸಿವೆ. ಅದನ್ನು ನಮ್ಮಲ್ಲಿನ ಧರ್ಮಶಾಸ್ತ್ರಗಳು, ಪಾಶ್ಚಾತ್ಯರು Ethics ಎಂದೂ ವಿಚಕ್ಷಣೆಗೆ ತರುತ್ತಿದ್ದರು. ಬಗೆಬಗೆಯ ತತ್ತ್ವಗಳನ್ನೂ ಆದರ್ಶಗಳನ್ನೂ ದೃಷ್ಟಿರೀತಿಗಳನ್ನೂ ವಿವೇಚನೆಗಳನ್ನೂ ಮಾಡಿದರು. ಎಷ್ಟು ಬಗೆಯ, ಬಹುನಿಶಿತ ಆಲೋಚನೆ ಇಲ್ಲಿ ಸೇರಿಕೊಳ್ಳುತ್ತದೆ! ಪ್ರೊ।। ರಾಧಾಕೃಷ್ಣನ್ ನಮಗೆ ಪಾಠಹೇಳಲು ತೊಡಗಿದ ಮೊದಲ ದಿನದಲ್ಲಿ Ethics ಎಂಬುದಕ್ಕೆ ಹೀಗೆ ಪ್ರವೇಶಮಾಡಿದರು: 'ಎಲ್ಲರೂ ಶ್ರೀಮಂತರಾಗಿ ಅಥವಾ ಒಳ್ಳೆಯ ಕುಲಗಳಲ್ಲಿ ಹುಟ್ಟದಿರಬಹುದು; ಮೇಧಾವಿಗಳಾಗದಿರಬಹುದು; ಶಕ್ತಿಸಾಮರ್ಥ್ಯ ಇಲ್ಲದಿರಬಹುದು; ಧನಿಕರಾಗದಿರಬಹುದು; ಪದವಿಗಳಲ್ಲಿ ಇಲ್ಲದಿರಬಹುದು' ಇತ್ಯಾದಿ ಹೇಳಿ, 'ಆದರೆ ಎಲ್ಲರೂ ಒಳ್ಳೆಯವರಾಗಿರಬಹುದು. ಆ ಒಳ್ಳೆಯದು ಎಂದರೇನು? ಏತರಲ್ಲಿದೆ ಈ ಒಳ್ಳೆಯತನ? ಇದರ ಪರಿಶೀಲನೆಯಲ್ಲಿ ಯಾವ ಲಕ್ಷಣಗಳು, ಮಿತಿಗಳು ಸೇರುತ್ತವೆ? ಒಟ್ಟು ತತ್ತ್ವದರ್ಶನಗಳಲ್ಲಿ Ethicsನ ಸ್ಥಾನ ಏನು? – ಎಂಬುದನ್ನು ನಾವು ಈ ವರ್ಷ ಪಾಠ ಮಾಡಬೇಕಾಗಿದೆ' ಎಂದರು. ನಮ್ಮಲ್ಲಿ ಯಾವುದನ್ನು ಧರ್ಮ, ಋತ ಎನ್ನುತ್ತೇವೊ ಆ ಮಾತಿಗೆ ಅದು ಹತ್ತಿರದ್ದು. ಈ ಎರಡು ಶಬ್ದಗಳಿಗೂ ಯಾವುದು ಹಿಡಿದು, ತಡೆದು ನಿಲ್ಲಿಸುತ್ತವೆಯೋ, ಒಳಿತಿಗೆ ಪೋಷಣೆ–ಸೂತ್ರವನ್ನು ಅರ್ಥ ವಿವರಣೆಗೆ ಬಳಸುತ್ತಿದ್ದೇನೆ–ಕೊಡುತ್ತದೆಯೊ ಅದಕ್ಕೆ ಧರ್ಮ, ಋತ ಎಂಬ ಅರ್ಥವಿದೆ: Proper, ಯುಕ್ತ; Order, ಕ್ರಮಬದ್ಧ; ಸರಿ, Right;– ಇದೇ ಧರ್ಮದ ನೆಲೆ. ಯಾವುದೊ ಒಂದು ವಿಧಾನಕ್ರಿಯೆ ಲೋಕದ ಧರ್ಮವನ್ನು ನಡೆಸುತ್ತದೆ. 'ಋತಸ್ಯ ಗೋಪಾಯ' ಎಂಬ ಮುಂತಾದ ಮಾತುಗಳಲ್ಲಿ ಅದು ನಿರ್ದೇಶಗೊಳ್ಳುತ್ತದೆ. ಎಂಬಾಗ, ಸತ್ಯ ಶಿವ ಸುಂದರ ಮೂರೂ ಮೌಲ್ಯಗಳೆಂದು ಒಪ್ಪಿಕೊಂಡಾಗ, –ಇವು

ಪರಮದ ಲಕ್ಷಣಗಳೆಂದಾಗ–(Features of the Absolute) ಆಲೋಚನೆಗಳಲ್ಲಿ, ಸಾಧನೆಗಳಲ್ಲಿ–ಅಸಮಂಜಸತೆಗಳು ಹುಟ್ಟಿಕೊಳ್ಳುತ್ತವೆ. ಈ ಒಳ್ಳೆಯದೆಂದರೆ ಯಾವ ಯಾವ ಕಾಲಗಳಲ್ಲಿ, ದೇಶಗಳಲ್ಲಿ, ವೃತ್ತಿಗಳಲ್ಲಿ, ಚರಿತ್ರೆಯ ಪರಿವಿಡಿಯಲ್ಲಿ ಇದು ಅನ್ವಯವಾಗುತ್ತದೆ, ಆಗಿದೆ ಎಂಬುದರ ಆಲೋಚನೆ ಹುಟ್ಟಿಕೊಳ್ಳುತ್ತದೆ. ನಿಜವಾಗಿ ಇದರ ವಿಸ್ತಾರ ಎಷ್ಟು ದೊಡ್ಡದು ಎಂಬುದು ಪರಿಚಯವಾಗಬಹುದು. ಸಾಮಾನ್ಯವಾಗಿ ಒಳ್ಳೆಯ ಕವಿ, ಶಿಲ್ಪಿ, ಅಧಿಕಾರಿ, ಸಾಹಸಿ, ಕೆಲಸಗಾರ, ವಿದ್ಯಾರ್ಥಿ, ವೈದ್ಯ ಎಂದಾಗ ಕ್ರಿಯಾಕುಶಲತೆಯನ್ನು ಕುರಿತು ಮಾತ್ರ ಆಲೋಚಿಸುತ್ತೇವೆ. 'Antonio is a good man' ಎಂದು ಷೈಲಾಕ್ ಹೇಳಿದಾಗ ಅವನಲ್ಲಿ ಹಣವಿದೆ, ಗಟ್ಟಿಕುಳ ಎಂದೇ ಅರ್ಥ ಮಾಡಿದ್ದುಂಟು. ಒಳ್ಳೆಯ ಹಣ್ಣು, ಪದಾರ್ಥ, ಊಟ, ಮನೆ, ತೋಟ, ವ್ಯಾಪಾರ–ಇನ್ನೆಷ್ಟೋ–ಒಂದು ಮಿತವಾದ ಪ್ರಯೋಗಾರ್ಥದಲ್ಲಿ ಉಪಯೋಗಿಸಲ್ಪಡುತ್ತವೆ. ಅದರಲ್ಲಿ ಮಾನವನ ಗುಣ, ಶೀಲ, ಕ್ರಿಯಾಪ್ರಪಂಚ ಇಲ್ಲದ್ದರಿಂದ ಅವು ಈ ಎಣಿಕೆಗೆ ಸಲ್ಲುವುದಿಲ್ಲ.

ಆದರೆ ಒಳ್ಳೆಯ, Good ಎಂದರೆ ಸಾಲದು: Goody-Goody, God's good man, A Good natured man with no harm in him; ಹುಟ್ಟಿದವನು ಹುಟ್ಟಿದ ಹಾಗೆಯೇ ಇದ್ದಾನೆ–ಒಂದೇ ಸಮನೆ–ಎಂಬ ಮಾತುಗಳೂ ಉಂಟು. ಅವನಲ್ಲಿ ಕೆಡುಕಿಲ್ಲ, ಬದಲಾವಣೆ ಆಗದೆ ಒಂದೇ ರೀತಿ ಬೆಳೆದಿದ್ದಾನೆ; ಇದ್ದಾನೆ–ಎಂದಾಗ ಒಳ್ಳೆಯ ಅರ್ಥ, ಅಲ್ಲದ್ದು ಎರಡೂ ಸೇರುತ್ತವೆ. ಇನ್ನಾವುದೊ ವಿವೇಚನೆ ಇರುತ್ತದೆ ಜೊತೆಗೆ: ಒಳ್ಳೆಯವನು ದುರ್ಬಲ; ಯಾರನ್ನೂ ಎದುರಿಸುವುದಿಲ್ಲ; ಏತಕ್ಕೂ ನಿಂತು ಹೋರಾಡುವವನಲ್ಲ; ಆ ಶಕ್ತಿ ಬೆಳಸಿಕೊಂಡಿಲ್ಲ, ಬಳಸುವುದಿಲ್ಲ ಎಂಬ ಸ್ವಭಾವ ಉಂಟು. ತನ್ನಷ್ಟಕ್ಕೆ ತಾನು ಒಳ್ಳೆಯವನಾಗಿದ್ದುಕೊಂಡು ಇನ್ನೊಬ್ಬರಿಗೆ ಕೆಡಕು ಮಾಡದೆ ತನ್ನ ಮಿತಿಯಲ್ಲಿ ಒಂದು ಶಾಂತಿಯನ್ನೊ ಸಮಾಧಾನವನ್ನೊ ಸಾಧಿಸಿಕೊಂಡು 'ಅಂದರಿಕೀ ಮಂಚಿವಾಡು ಅನಂತಯ್ಯ' ಎಂಬಂತೆ ಇರಬಹುದು. ಕೆಲವರಿಗೆ ಇಷ್ಟು ಸಾಕು. ಇನ್ನೊಂದು ಬಗೆಯ ಜನವೂ ಉಂಟು: 'ನಾನು ಆಚಾರವಂತ; ತಾಯಿ ತಂದೆಯರನ್ನು ಕಾಪಾಡುತ್ತೇನೆ; ದೇವಸ್ಥಾನಕ್ಕೆ ಹೋಗುತ್ತೇನೆ; ದುರ್ವ್ಯಸನಗಳಿಲ್ಲದವನು; ನನಗೆ ಇನ್ನೊಬ್ಬರು ಹಗೆಯಲ್ಲ', ಎಂಬುದೂ ಸಾಲದೇನೊ. ಅದೂ ದಂಭವಾಗಬಲ್ಲದು; Pharisee ಎಂಬ ಆಕ್ಷೇಪಣೆಗೆ ಈಡಾಗಬಹುದು. ಹೆಂಡತಿ ಮಕ್ಕಳೆ, ಮನೆಯೆ ಮಠವೆ, ವ್ಯಾಪಾರವೆ?–ಸಂನ್ಯಾಸಿಯಾದ ನನಗೆ ಮುಕ್ತಿಯಾಗದಿದ್ದರೆ ಇನ್ನಾರಿಗಾಗ ಬೇಕು?–ಎಂಬುದು ಅಹಂಕಾರವಾಗಬಲ್ಲದು. ಅಲ್ಲಿ 'ನಾನು' ಹೋಗಿಲ್ಲ. ಇಂಥವನು ಹತ್ತೇ ರೂಪಾಯಿ ಕೊಟ್ಟನೆ; ನಾನು ನೂರು ಕೊಡುತ್ತೇನೆ; ನಮ್ಮ ಮನೆಯಿಂದ ಯಾರನ್ನೂ ಓಡಿಸಲಿಲ್ಲ; ಊಟ ಉಪಚಾರ, ನಯ ನಾಗರಿಕತೆ, ಉಡುಗೆ ತೊಡುಗೆಗಳಲ್ಲಿ ನಮ್ಮಲ್ಲಿ ಕಡಮೆಯಾಗಬಾರದು–ಎಂಬುದೂ ಒಂದು ಬಗೆಯ ದಂಭವೇ



ಸರಿ. ಜಪ, ತಪ, ಧ್ಯಾನ ಮಾಡಿಕೊಂಡು ಒಂದು ದ್ವೀಪದ ಹಾಗೆ ತನ್ನ ಬದುಕನ್ನು ನಡಸಿಕೊಂಡು ಕೃತಾರ್ಥತೆ ಸಾಧಿಸಬಹುದು. ಈ ಕೃತಾರ್ಥತೆ ತುಂಬು ರಕ್ತದ್ದಲ್ಲ; ಇದರಲ್ಲಿ ಕ್ರಿಯಾಕಾರಿತೆಗೆ ಸಂಬಂಧಿಸಿದ ಯಾವ ಅಂಶವೂ ಪ್ರಯೋಜನ ಸಾಧನೆಯೂ ಹೊರಗಿನ ಪ್ರಪಂಚಕ್ಕೆ ಅಲ್ಲಿ ಇಲ್ಲ. ಇದು ಸ್ವಭಾವತಃ ಬಂದಿರಬಹುದು. ಬೆಳಸಿಕೊಂಡುದಾಗಿರಬಹುದು. ಅಥವಾ ಗಮ್ಯವಾಗಿ ಸಾಧಿಸಬೇಕೆಂಬಂತೆ ನಡಸಿಕೊಂಡದ್ದಾಗಿರಬಹುದು. ಒಂದು ಬಗೆಯ ಸಂಪಾದನೆಯೇ ಇದು. ದ್ವಂದ್ವಗಳಿಂದ ಕೂಡಿದ ಮನುಷ್ಯನ ಜೀವನದಲ್ಲಿ ಇಷ್ಟನ್ನು ಸಾಧಿಸುವುದೂ ಕಷ್ಟವೇ. ಆದರೆ ಲೋಕ ಇಂಥವನನ್ನು ಮುಟ್ಟದು. ಲೋಕಕ್ಕೂ ಇವನಿಗೂ ಸಂಬಂಧವಿಲ್ಲ. ಇವನು ಲೋಕದಿಂದ ಉದ್ವೇಗಗೊಳ್ಳ, ಲೋಕಕ್ಕೆ ಇವನು ಉದ್ವೇಗ ತರಲಿಲ್ಲ ಎಂಬುದೂ ಸಾಲದು. ಇವನು ಇದ್ದರೂ ಒಂದೇ, ಇಲ್ಲದಿದ್ದರೂ ಒಂದೇ; ಇವನಿಂದ ಅದಕ್ಕಾಗಲಿ, ಅದರಿಂದ ಇವನಿಗಾಗಲಿ ಒಳ್ಳೆಯದು, ಕೆಟ್ಟದ್ದು ಇಲ್ಲ ಎಂಬುದು ತಟಸ್ಥ ವರ್ತನೆಯಾದೀತು.

ಇದನ್ನು ಸಾಧಿಸುವುದು ಪ್ರಯಾಸವೇ. ಇಂಥವರಿಗೆ ಕೈತುಂಬ ಹಣ, ಪದವಿ ಇದ್ದು ತಿನ್ನಲು ಉಣ್ಣಲು ಬೇಕಾದಷ್ಟಿದ್ದರೆ, ಇದರಿಂದ ತಂದೆ ತಾಯಿ, ಹೆಂಡತಿ ಮಕ್ಕಳು, ನೆರೆ ಹೊರೆ, ರಾಜ್ಯ ಸಮಾಜ–ಯಾವುದಕ್ಕೂ ತೊಂದರೆಯಿಲ್ಲ ಎಂಬಂತಿದ್ದರೆ ಪರವಾಇಲ್ಲ. ಇಲ್ಲವಾದರೆ, ಇತರರ ಉಪೇಕ್ಷೆಗೆ, ಕೆಲವೇಳೆ ತಿರಸ್ಕಾರಕ್ಕೆ ಕೂಡ, ತುತ್ತಾಗಬಹುದು. ಯಾರ ತಾಳಿಕೆಗೂ ಬಾರದೆ ಏತಕ್ಕೂ ಕನಲದೆ ಕದಲದೆ ಬದುಕಿರುವಷ್ಟು ಕಾಲ ಇದ್ದು ಹೋಗುವ (ಸಣ್ಣ ಅರ್ಥದಲ್ಲಿ) 'ಕೂಟಸ್ಥಂ ಬ್ರಹ್ಮ' ಎಂಬಂತಹ ಸ್ಥಿತಿಯಾದಾಗ ಇದು ನಿರ್ಗುಣ. ಇನ್ನೊಂದು ಮಾತುಂಟು: 'ಸ್ವಾಂತಸ್ಸುಖಾಯ' ಎಂಬ ಮಹಾವಾಕ್ಯದ ಸಂಕುಚಿತಾರ್ಥ: ಈ ಜೀವನದಲ್ಲಿ ಒಂದು ಬಗೆಯ ಕಾರ್ಪಣ್ಯವನ್ನು ಸಾಧಿಸುತ್ತದೆ. ಇದರ ಧ್ಯಾನ, ಕಲ್ಪನೆ ಕೆಲಸಮಯಗಳಲ್ಲಿ ಮನಸ್ಸಿಗೆ ಸಂತೋಷ ತರುತ್ತದೆ, ಪೂಜ್ಯತೆ ತರುತ್ತದೆ. ಇದರ ಸಾಧನೆಯೂ ನಿಜವಾಗಿ ಶಕ್ತಿ, ಬುದ್ಧಿ ಇರುವವನಿಗೆ ಕಷ್ಟಸಾಧ್ಯವೇ.

ಒಬ್ಬನನ್ನು ಬಹು ಒಳ್ಳೆಯ ಮನುಷ್ಯ ಎಂದಾಗ 'ನಾವು ಕಚ್ಚುತ್ತೇವೆಯೆ, ಒದೆಯುತ್ತೇವೆಯೆ? ನಮಗೇಕೆ ಪುರಸ್ಕಾರವಿಲ್ಲ?'- ಎಂದು ಕೇಳಬಹುದು. ಇಂಥಲ್ಲಿ ತಾವೂ ಒಳ್ಳೆಯವರೇ, ಕಚ್ಚಿದರೆ ಒದ್ದರೆ ಕೆಟ್ಟವರಾಗುತ್ತಿದ್ದೆವು ಎಂಬ ಭಾವನೆ ಇರುತ್ತದೆ. ಅಥವಾ 'ಇವಳು ಮದುವೆ ಆದಳಂತೆ; ಸದ್ಯ ಅವಳು ಅದೇ ಗಂಡನಿಗೆ ಹೆಂಡತಿ ಆಗಿ ಸುಖವಾಗಿ ಬಾಳಿದರೆ ಸಂತೋಷ' ಎಂಬುದು ವ್ಯಂಗ್ಯ. ವಿಷಯದ ಇನ್ನೊಂದು ಮುಖ ಇಲ್ಲಿ ಕಾಣುತ್ತದೆ. ನಿಷ್ಕ್ರಿಯತೆ ಜಡವಾಗಬಲ್ಲದು; ನಿರ್ವೀರ್ಯವಾಗಬಹುದು. ಯಾವ ಕಾರ್ಯಸಾಧನೆಗೂ ನೆರವು ಕೊಡದೆ ನಿಷ್ಪ್ರಯೋಜನವೇನು?-ವ್ಯರ್ಥವೇ ಆಗಬಹುದು. ಲೋಕಕ್ಕೆ ಕಚ್ಚಬಾರದು, ಒದೆಯಬಾರದು; ಪ್ರಯೋಜನಕಾರಿ, ಕಾರ್ಯಸಾಧಕ ಆಗಬೇಕು ಎಂದಾಗ ಲೋಕದ ಸಂಪರ್ಕ ಕಟ್ಟಿಕೊಳ್ಳುತ್ತದೆ. ಯಾರಿಗಾದರೂ ಉಪಯೋಗವುಂಟೆ, ಕೆಡುಕಾಗುತ್ತದೆಯೆ–ತನ್ನವರಿಗಾಗಲಿ, ಹೆರರಿಗಾಗಲಿ?–ಎಂಬ ಮಾತುಗಳನ್ನು ನೆನಪಿಗೆ ತಂದುಕೊಳ್ಳಬಹುದು. ಇತರರಿಗೆ ಕೆಡುಕೊ ಪ್ರಯೋಜನವೊ

ಆಗಲಿ, ಬಿಡಲಿ; ತನಗೆ, ತನ್ನವರಿಗೆ ಆದರೂ ಬೇಡವೆ?–ಆಗಬೇಕಲ್ಲವೆ?–ಎಂಬಾಗ ಕೂಡ ಅಷ್ಟು ಖಚಿತವಾಗಿ 'ಸ್ವ' ಅಲ್ಲಿ ಮುಗಿಯುತ್ತದೆಯೆ? ತನಗೆ, ತನ್ನವರಿಗೆ ಪ್ರಯೋಜನ ಎಂದಾಗ, ಇನ್ನೊಬ್ಬರಿಗೆ ಆ ಮಟ್ಟಿಗೆ ನಷ್ಟ-ಕಷ್ಟ ಸುಲಭವಾಗಿ ಆಗಬಲ್ಲದು; ಆ ಪ್ರಯೋಜನಗಳೂ ಅವಕಾಶವೂ ಇತರರಿಗೆ ಇಲ್ಲವಾಗಬಹುದು. ಅವರಿಗೆ ಕ್ರೋಧ, ಆವೇಶ ಉಂಟಾಗಬಹುದು–ಅವರೂ ಇದೇ ಲೋಕದ ಜನರಾದ್ದರಿಂದ, ಇವನಿಗೆ ಇಲ್ಲದಿದ್ದ ರಾಗದ್ವೇಷಗಳು ಅಲ್ಲಿ ಪ್ರಸ್ಫುಟವಾಗುವುದರಿಂದ. ಸಮಾಜದ ಸಂಪರ್ಕ ಒಳ್ಳೆಯದು, ಸರಿ, ಋಜುವಾದ್ದು ಎಂಬುದಕ್ಕೆ ಹೀಗೆ ಸೇರಿಕೊಳ್ಳುತ್ತದೆ. ಈ ಜಾತಿಯವನು ಬುದ್ಧಿವಂತನೆಂದು ಕೆಲಸಕ್ಕೆ ನೇಮಿಸಿದರೆ ಇನ್ನೊಬ್ಬನಿಗೆ 30 ವರ್ಷ ಅಂಥ ಕೆಲಸ ದೊರೆಯದಾಗುತ್ತದೆ ಎಂಬ ಎಣಿಕೆ ನಮ್ಮಲ್ಲಿ ಬಂದುದುಂಟು. ಒಳ್ಳೆಯ ಬದುಕನ್ನು ಬದುಕಬೇಕಾದ ಮನುಷ್ಯ ಹೀಗೆ ಲೋಕಕ್ಕೆ ಅಂಟಿಕೊಂಡು ಬರುತ್ತಾನೆ. ಇಲ್ಲಿ ಯಾವುದೊ ವಿರುದ್ಧ ಅಥವಾ ಕೋಟಲೆ ಸುಲಭವಾಗಿ ಏರ್ಪಟ್ಟಿತು. ಇಂಥಲ್ಲಿ ಒಳ್ಳೆಯ ಬದುಕೆಂದರೆ ಹೇಗೆ ಬದುಕಬೇಕು? ಒಳ್ಳೆಯ ಮನುಷ್ಯನೆಂದರೆ ಯಾರು? ಎಂಬ ಪ್ರಶ್ನೆ ಏಳುತ್ತದೆ. ತನಗೆ, ತನ್ನವರಿಗೆ, ಎಂದರೆ ಸ್ವಂತ ಪ್ರಯೋಜನಕ್ಕೆ, ಬೇಡ; ತನಗೆ ಹೇಗಾದರಾಗಲಿ, ತನ್ನ ಮನೆಯವರಿಗೆ, ಕೋಮಿನವರಿಗೆ, ಊರವರಿಗೆ–ಇನ್ನೂ ಮುಂದೆ ಹೋಗಿ, ತನ್ನ ದೇಶ ಅಥವಾ ರಾಷ್ಟ್ರಕ್ಕೆ ಪ್ರಯೋಜನ ಸಾಧನೆ–ಎಂಬುವವರೆಗೂ ವಿಷಯದ ವ್ಯಾಪ್ತಿ ಬೆಳೆಯುತ್ತದೆ. ಇಲ್ಲಿ ಇನ್ನೂ ದೊಡ್ಡ ಕ್ಲೇಶಗಳೂ ವಿರಸಗಳೂ ಬೆಳೆಯುವ ಸಂಭವವುಂಟು. ಬೆಳೆದಷ್ಟೂ ತೊಡಕುಗಳೂ ಪ್ರಸಂಗಗಳೂ ಬೆಳೆಯಲು ಅವಕಾಶವಾಗುತ್ತದೆ.

ಅಲ್ಲದೆಯೊ: ಆ ಪ್ರಯೋಜನವನ್ನು ಸಾಧಿಸುವ ಮಾರ್ಗ ಯಾವುದು? ಸಾಧನಗಳು ಯಾವುವು?–ಎಂಬುದೂ ಎಣಿಕೆಗೆ ಬಂದಾವು. ಈ ಸಾಧನಗಳು, ಮಾರ್ಗಗಳು ಒಳ್ಳೆಯವೆ, ಅಲ್ಲವೆ? ಇವನ್ನು ನಿಶ್ಚಯಿಸುವ ಗುಣಗಳು, ರೀತಿಗಳು ಯಾವುವು? – ಎಂಬಲ್ಲಿ ಸಾಧನ, ಗಮ್ಯ – Means, Ends –ಎಂಬ ಸಂಗತಿಗಳ ಪ್ರಪಂಚವೊಂದು ಹುಟ್ಟಿಕೊಳ್ಳುತ್ತದೆ. ಬಹುಸುಲಭವಾಗಿದ್ದ ಪ್ರಶ್ನೆ ಇಂಥಲ್ಲಿ ಗೋಜಿ ಗಿಟ್ಟುಕೊಳ್ಳುತ್ತದೆ. ಸಾಧನೆಗಳೂ ಮಾರ್ಗಗಳೂ ಒಳ್ಳೆಯವಾಗಿರಬೇಕು, ಗುರಿ ಗಮ್ಯ ಎಷ್ಟು ಉತ್ತಮವಾಗಿ ಇರಲಿ ಎಂಬ ಮುಖ ಒಂದು ಕಡೆಯಾದರೆ, ಗುರಿ ಗಮ್ಯ ಸರಿಯಾಗಿದ್ದರೆ, ಹಿತಕಾರಿಯಾಗಿದ್ದರೆ ಆಯಿತು, ಮಾರ್ಗ ಯಾವುದಾದರೂ ಸರಿಯೆ, ರೀತಿ ಎಲ್ಲವೂ ಯುಕ್ತವೆ – ಎಂಬಂಥದು ಇನ್ನೊಂದು ಮುಖ. ಕ್ರಿಯಾಮಂಡಲ ಇಂಥಲ್ಲಿ ಹೆಚ್ಚು ವಿಸ್ತಾರವುಳ್ಳದ್ದು, ತೊಡಕಿನದು. Good as Means, Good as End ಎಂಬ ಎರಡು ಕಲ್ಪನೆಗಳಿಗೂ ತುಂಬ ಅಂತರವಿರಬಲ್ಲದು. ಅಂಥಲ್ಲೆಲ್ಲ ಈ ಒಳ್ಳೆಯದು ಎಂಬುದು ನಿಜವಾಗಿ ಒಳ್ಳೆಯದೆ, ಅಲ್ಲವೆ? ಯಾವ ಅರ್ಥದಲ್ಲಿ? ಯಾರಿಗೆ? ಎಂಥ ಪರಿಸ್ಥಿತಿಯಲ್ಲಿ? ಕಾಲದಲ್ಲಿ? ಸನ್ನಿವೇಶದಲ್ಲಿ? – ಎಂಬುದು ವಿಷಯದ ಇನ್ನೊಂದು ನೆಲಸು. ಇಂಥಲ್ಲಿ ವ್ಯಕ್ತಿಯಾದವನು ತಟಸ್ಥನಾಗಿರಲು ಶಕ್ಯವಿಲ್ಲ. ಪಕ್ಷಗಳು, ಪ್ರಯೋಜನ ಮಂಡಲಗಳು ಹುಟ್ಟಿಕೊಳ್ಳುತ್ತವೆ. ಗುಂಪಿಗೆ ಪ್ರಯೋಜಕವಾದ್ದು ತನಗೆ



ನಷ್ಟಕಾರಣವಾಗುತ್ತದೆ. ಅಥವಾ ಗುಂಪು ಪಕ್ಷಗಳಿಗೆ ಅನುಕೂಲವಾಗುವಂಥುದು ಕೇವಲ ಒಳ್ಳೆಯದಾಗದಿರಬಹುದು. The Good of the Party, of the Sect ಎಂಬವನ್ನು ನೆನೆಯಬಹುದು. ನೆರೆಯವನಿಗೆ ಅಸಹ್ಯವಾದೀತು; ಕಷ್ಟ ನಷ್ಟ ಆದೀತು–ಮುಂತಾದ ಪ್ರಶ್ನೆ ಹುಟ್ಟಿದಂದು ಸಂಸ್ಕೃತಿ ಎಂಬುದು ಹುಟ್ಟಿ ಹೆಜ್ಜೆ ಮುಂದಿಡತೊಡಗುತ್ತದೆ. ಇಂಥಲ್ಲಿ ಯಾವುದು ಮಾರ್ಗ ಎಂಬುದು ಅಗತ್ಯವಾಗಿ, ಒಳ್ಳೆಯವನೆಂಬವನೂ ಕೆಲವು ಮಾರ್ಗಗಳನ್ನು ಹಿಡಿಯಬೇಕಾಗುತ್ತದೆ, ಕೆಲವನ್ನು ಬಿಡಬೇಕಾಗುತ್ತದೆ. ಇಲ್ಲಿ ಅರ್ಥ ಅಥವಾ ಸ್ವಾರ್ಥ ಎಂಬುದರ ಪರೀಕ್ಷಣ, ಅನುಸರಣೆ ಬಹುಸೂಕ್ಷ್ಮ. (ಉದಾ: ಮೋಲಿಯೆ ಎಂಬ ಫ್ರೆಂಚ್ ನಾಟಕಕಾರನಿಗೆ ತನಗಿಂತ ಕಿರಿಯ ವಯಸ್ಸಿನ ಚೆಲುವೆ ಹೆಂಡತಿ ಇದ್ದು, ಅವನ ಮಂಡಲಿಯಲ್ಲಿಯೇ ಅಭಿನಯಿಸುತ್ತಿದ್ದಳು. ಅವಳು ತನ್ನ ವಯಸ್ಸಿನ ಕಂಪನಿಯವರಲ್ಲಿ ಸಲಿಗೆ ವಹಿಸಕೂಡದು, ನಗೆಯಾಡಬಾರದು ಎಂದು ಮೋಲಿಯೇ ಹೇಳಿದ. ಅವಳು 'ನಾನು ನಿಮಗೆ ಎಂದೂ ತಪ್ಪಿಲ್ಲ; ತಪ್ಪುವುದಿಲ್ಲ; ನಿಮಗೇಕೆ ಅಸೂಯೆ?' ಎಂದಾಗ ಅವನಿಗೆ ವ್ಯಥೆ ಆಗಿತ್ತು. ನಾಟಕ ರಚನೆಯಲ್ಲಿ, ಅಭಿನಯದಲ್ಲಿ ನಿರುತ್ಸಾಹದಿಂದಿರುವಾಗ ಗೆಳೆಯನೊಬ್ಬನು ಕಾರಣ ಕೇಳಿದ. ಮೊದಲು ಏನೂ ಇಲ್ಲವೆಂದರೂ ಕಡೆಗೆ ನಿಜವಾದ ಕಾರಣವನ್ನು ತಿಳಿಸಿದ. 'ಆಶೋತ್ತರಗಳನ್ನು ತೋರಿಸಿದೆಯ? ಭಯಪಡಿಸಿದೆಯ?' ಎಂದು ಗೆಳೆಯ ಕೇಳಿ–'ಆಗಿದೆ'ಎಂದಾಗ, 'ಒಂದೆರಡು ಒದೆಕೊಟ್ಟು ನೋಡು; ಕೆಲವು ಹೆಣ್ಣುಗಳಿಗೆ ಗಂಡಿನ ಈ ವರ್ತನೆ ಪ್ರಿಯ, ಯುಕ್ತವಾಗಿರುತ್ತದೆ' ಎಂದನಂತೆ. ಆಗ ಮೋಲಿಯೆ 'No, no. You know not what you say. How can I hurt a thing which I love so much?' ಎಂದನಂತೆ. ಈ ಔದಾರ್ಯ ನಿಜವಾದ-ಒಳ್ಳೆಯ-ಸಂಸ್ಕೃತಿಯ ಲಕ್ಷಣ.

ಮದಾಂ ದುಫ್ಹಾಂ (Mme Duffand) ಎಂಬಾಕೆಯ ಮನೆಗೆ ವಿದ್ವಾಂಸರು ಸಾಮಾನ್ಯವಾಗಿ ಬರುತ್ತಿದ್ದರು. ಉಳಿದೆಲ್ಲ ಉಪಚಾರಗಳು ಚೆನ್ನಾಗಿರುತ್ತಿದ್ದವು. ಒಮ್ಮೆ ಗೆಳತಿಯೊಬ್ಬಳು ಆಕೆಯನ್ನು ಕರೆದು 'ನಿನ್ನ ಉಪಚಾರ ದಿವ್ಯವಾಗಿದೆ. ಆದರೆ ನಿನ್ನ ಕಾಫಿಯನ್ನು ಇನ್ನೂ ಸ್ವಲ್ಪ ಮೇಲ್ಪಡಿಸಿದರಾಗುತ್ತಿತ್ತು' ಎಂದಳಂತೆ. ಈಕೆ 'ಹೌದು, ನನಗೆ ಗೊತ್ತು. ಇನ್ನೆರಡು ತಿಂಗಳು ತಾಳು; ನನ್ನಲ್ಲಿ ಕೆಲಸ ಮಾಡುತ್ತಿದ್ದ ಹೆಣ್ಣು ನನ್ನಿಂದ ಸಾಲ ತೆಗೆದು ಹಸು ಕೊಂಡಿದ್ದಾಳೆ; ದಿನ ದಿನಕ್ಕೆ ಹಾಲು ಕೆಡುತ್ತಿದೆ. ಇನ್ನೆರಡು ತಿಂಗಳಲ್ಲಿ ಸಾಲ ತೀರುತ್ತದೆ. ಈಗ ಏನಾದರೂ ನುಡಿದರೆ ಇವರ ಹಂಗಿಗೆ ಸಿಕ್ಕಿರುವುದರಿಂದ ಈ ಆಕ್ಷೇಪಣೆಗೆ ಈಡಾಗುತ್ತಿದ್ದೇನೆ ಎಂದು ನೊಂದುಕೊಳ್ಳಬಹುದು. ಸ್ವಲ್ಪ ತಾಳು–' ಎಂದಳಂತೆ. ಇದೂ ನಯದ ನಡೆ; ಒಳ್ಳೆಯತನವೇ. ಕ್ಷಮೆಯ ಬಹು ಸೂಕ್ಷ್ಮವಾದ ಮುಖ.

ನಮಗೆ ಬೇಕಿರಲಿ, ಇಲ್ಲದಿರಲಿ, ನಮ್ಮ ಹೊರಗೆ ಪ್ರಪಂಚವಿದೆ. ಬಗೆಬಗೆಯ ಸಮಾಜ, ಕೋಮು, ಪ್ರಯೋಜನಮಂಡಲ ಇರುತ್ತದೆ. ಇಲ್ಲಿ ಆಳುವ ಜನರಿರುತ್ತಾರೆ; ವಿಷಯಗಳಿರುತ್ತವೆ. ನಮ್ಮಂಥ ದೇಶಗಳಲ್ಲಿ ವಿರೋಧ ವರ್ಗಗಳಿರುತ್ತವೆ. ಸಂವಿಧಾನ,

ಕ್ರಿಯಾವಿಧಾನ, ಸಮಯಗಳು ಇರುತ್ತವೆ. ಕೆಲವು ಮಾರ್ಗಗಳೂ ಆಚರಣೆಗಳೂ ಸರಿ, ಸಾಧು. ಅಪರಾಧವಲ್ಲ; ನಿಯತ. ಇನ್ನು ಕೆಲವು ತದ್ವಿರುದ್ಧ. ಅದರಿಂದ ಶಿಕ್ಷೆಯೊ ಕಷ್ಟವೊ ಉಂಟು ಎಂದು ಉಗ್ರ ಕೋಟಲೆಗಳು ಹುಟ್ಟಿಕೊಳ್ಳುತ್ತವೆ. ಸ್ಥಿತವಾದ, ಸ್ತಿಮಿತಕ್ಕೆ ಬಂದ ಒಂದು ಲೌಕಿಕ ಸನ್ನಿವೇಶಕ್ಕೆ ಕೂಡ ಇದು ಇರುವಾಗ, ಬದಲಾವಣೆಗೆ ಹಾತೊರೆಯುವ ಪ್ರಸಂಗದಲ್ಲಿ ಶಕ್ತಿಗಳೂ ಬಣಗಳೂ ನಾನು ಮುಂದು ತಾನು ಮುಂದು ಎಂದು ಮೇಲೆ ಬೀಳುತ್ತಿರುತ್ತವೆ. ವಿರುದ್ಧ ಕಾರಣಗಳಿಂದಾಗಿ ಬಹು ಒಳ್ಳೆಯವರೆನಿಸಿ ಕೊಂಡವರೂ ಸ್ನೇಹಿತರೆಂಬವರೂ ಹೀಗೊ ಹಾಗೊ ಓಲಿ ಕಾರ್ಯರಂಗಕ್ಕೆ ಬರುತ್ತಾರೆ. ಬ್ರೂಟಸ್ ಮನಸ್ಸಿನಲ್ಲಿ ಯಾವ ಕಳವಳವೆದ್ದಿತ್ತೊ, ಏಕಾಂತದಲ್ಲಿ ತಾನಿರುವ ಸಮಯದಲ್ಲಿ ಕೂಡ 'It must be by his death' ಎಂಬ ಆಲೋಚನೆಯಲ್ಲಿರುತ್ತಾನೆ. ಈ Predisposition ಸೀಸರ್ ಕೊಲೆಗೆ ಮುಂದುವರಿಯುವ ಪ್ರಭಾವಗಳು ಕಾರ್ಯಕಾರಿ ಯಾಗಲು ನೆರವಾಗುವ ಮನಸ್ಸಿನ ಈ ಸ್ಥಿತಿಯಲ್ಲಿ ಆ ತೀರ್ಮಾನಕ್ಕೆ ಉತ್ತೇಜನ, ಉಪೋದ್ಬಲ ದೊರೆಯುವುದು ಸುಲಭವಾಗುತ್ತದೆ. ಇಂಥ ಸಂದರ್ಭಗಳನ್ನು ದುಡಿಸಿ ಕೊಳ್ಳುವ ಪ್ರಭಾವಗಳು ಎಷ್ಟೊ–ಮನಸ್ಸಿನವು, ಪ್ರಯೋಜನಾಕಾಂಕ್ಷೆಯವು–ಸೇರಬಲ್ಲವು. ಆದ್ದರಿಂದ ಮೌಲ್ಯಗಳು ಇಷ್ಟಾರ್ಥಗಳು ಮಿಶ್ರವಾಗಿ (mixed) ಜಟಿಲವಾಗುತ್ತದೆ. ಒಳ್ಳೆಯವನ ಒಳ್ಳೆಯತನ ಹೇಗೆ, ಏಕೆ ಒಂದು ರೀತಿ ಪ್ರವರ್ತಿಸುತ್ತದೆ; ಇನ್ನೊಂದು ರೀತಿ ಅಲ್ಲ–ಎಂಬುದು ಆಗ ನಿರ್ಣಯಗೊಳ್ಳುವುದು. ಲೋಕದ ಸಂಬಂಧ ಬಂದಾಗ ಕ್ರಿಯಾವಂತನಾಗಬೇಕೆನ್ನುವ ಮನುಷ್ಯನ ಪ್ರವೃತ್ತಿಗಳೂ ಕಾರ್ಯ ವಿಧಾನಗಳೂ ಪಕ್ಷಪಾತಗಳೂ ನಿರೀಕ್ಷಿಸಿದ ಪರಿಣಾಮಗಳೂ ಅವನ ಜೀವನವನ್ನೂ ಲೋಕದ ಜೀವನವನ್ನೂ ತಿರುಗಿಸಬಹುದು.

'ವಿನಾ ವೈರಂ ಚ ರೌದ್ರತಾ' 'ರೌದ್ರಂ ಪರಪ್ರಾಣಾಭಿಹಿಂಸನಂ। ನಿರ್ವೈರಂ ಕ್ರಿಯತೇ ಮೋಹಾತ್' ತಪ್ಪು, ಇದೊಂದು ವ್ಯಸನ. 'ಕಾಡಿನಲ್ಲಿ ಋಷಿಗಳು ಬಂದು ಕೇಳಿದರು; ಇದು ಕ್ಷತ್ರಿಯ ಧರ್ಮ ಎಂದುಕೊಂಡು ಬಿಲ್ಲು ಬಾಣ ಹಿಡಿದು ತಮ್ಮನೊಡನೆ ನೀನು ಹೋಗುತ್ತಿದ್ದೀಯೆ; 'ನ ಹಿ ಮೇ ರೋಚತೇ ವೀರಾ.' ಶಸ್ತ್ರಸಹಿತನಾದ ಕ್ಷತ್ರಿಯ ಹೀಗೆ ಹೋಗುವುದು ಬೆಂಕಿಯ ಹತ್ತಿರ ಸೌದೆ ಇದ್ದಂತೆ. ಈ ಸಂಗತಿ ನಿನಗೆ ತಿಳಿಯದ್ದಲ್ಲ, ಸ್ನೇಹದಲ್ಲಿ ಹೇಳುತ್ತಿದ್ದೇನೆ'–ಎಂದು ಸೀತೆ ರಾಮನಿಗೆ ಹೇಳಿದ್ದು ಅವನಿಗೆ ಪಥ್ಯವಾಗಲಿಲ್ಲ. ಆಕೆಯ ಮಾತು ಎಷ್ಟು ಹೃದ್ಯವಾಗಿ ಸ್ನಿಗ್ಧವಾಗಿ ಇದ್ದರೂ ಅವನು ತನ್ನ ಧರ್ಮವನ್ನು ಕಂಡ ರೀತಿ, ನಿರ್ವಹಿಸಬೇಕೆಂದು ತೀರ್ಮಾನ ಮಾಡಿದ ರೀತಿ ತನ್ನ ಧರ್ಮವನ್ನೂ ಕಾರ್ಯವನ್ನೂ ಹೇಗೆ ಭಾವಿಸಿದ ಎಂಬುದನ್ನು ಸ್ಪಷ್ಟಪಡಿಸುತ್ತದೆ. 'ಕ್ಷತ್ರಿಯೈರ್ಧಾರ್ಯತೇ ಚಾಪೋ ನಾರ್ತಶಬ್ದೋ ಭವೇದಿತಿ'; ಭೀತರಿಗೆ ತಪಸ್ಸು ಶಾಂತಿ ದೊರಕುವುದಿಲ್ಲ, ಋಷಿಗಳು ಬೇಡದಿದ್ದರೂ ಇಂಥ ಕೆಲಸವನ್ನು ಮಾಡಬೇಕಾದುದು ನನ್ನ ಕರ್ತವ್ಯ; ಧರ್ಮ. ಅವರು ಕೇಳಿದ ಮೇಲೆ, 'ಪರಾ ತ್ವತ್ತೋ ಗತಿರ್ವೀರ ಪೃಥಿವ್ಯಾಂ ನೋಪಪದ್ಯತೇ' ಎಂದಿದ್ದಾರೆ. 'ನೀನು ನಾಥನಾಗಿ ಇದ್ದರೂ ಅನಾಥರಾಗಿದ್ದೇವೆ; ನಮ್ಮನ್ನು ಕಾಪಾಡುವುದು



ನಿನ್ನ ಧರ್ಮ; ರಾಜನಾದವನ ಕಾರ್ಯ' ಎಂದು ಅವರು ಕೇಳಿದ್ದಾರೆ. ರಾಕ್ಷಸರನ್ನು ನಾಶಮಾಡುತ್ತೇನೆಂದು ಮಾತುಕೊಟ್ಟಿದ್ದೇನೆ. ಇಂಥಲ್ಲಿ ನನ್ನ ಕಾರ್ಯ ನಿಷ್ಕರ್ಷೆಗೊಂಡಿದೆ. ನಿನ್ನನ್ನೂ ಲಕ್ಷ್ಮಣನನ್ನೂ ಕಡೆಗೆ ನನ್ನನ್ನೂ ಇದರ ಸಾಧನೆಗೆ ಅರ್ಪಿಸಿಕೊಂಡೇನೇ ಹೊರತು ಇದನ್ನು ನಿರ್ವಹಿಸಿಯೇ ತೀರುತ್ತೇನೆ'– ಎನ್ನುತ್ತಾನೆ. ಇಲ್ಲಿ ಪ್ರಶ್ನೆ ಕೇಳಿದ ಸೀತೆಯನ್ನು ಬೇಕಾದರೆ ಬಿಟ್ಟೇನೆನ್ನಬಹುದು; ಅವಳು ಮೇಲಾಗಿ ಹೆಂಡತಿ; ಇವನ ಧರ್ಮ ಅವಳದಾಗಬೇಕು ಎಂಬ ಭಾವನೆ ನಮ್ಮಲ್ಲಿ ಸಂಪ್ರದಾಯ. ಪ್ರತಿಜ್ಞೆ ಮಾಡುವಾಗಲೂ ಲಕ್ಷ್ಮಣನನ್ನು ಕೇಳಲಿಲ್ಲ. ಈಗಲೂ ಅವನು ಸುಮ್ಮನಿದ್ದ. ಎರಡೂ ಕಡೆ. ಹಿಂದೆ ಒಂದು ಸಲ ರಾಮನು ಹೇಳಿದ್ದ: ನನ್ನ ತೀರ್ಮಾನದಂತೆ ನಡೆದುಕೋ – 'ಮದ್ಬುದ್ಧಿರನುಗಮ್ಯತಾಂ' ಎಂದು. ಲಕ್ಷ್ಮಣನು ಅವನು ಹೇಳಿದಂತೆ ಎಂದಿಗೂ ನಡೆದುಕೊಳ್ಳುವವನು. ಅವನ ಅಭಿಪ್ರಾಯವನ್ನು ಪ್ರತ್ಯೇಕವಾಗಿ ಕೇಳಬೇಕಾಗಿರಲಿಲ್ಲ. ತನ್ನ ಪ್ರಾಣವನ್ನೇ ಪಣವಾಗಿ ಅರ್ಪಿಸಲು ಸಿದ್ಧನಾಗಿರುವವನಿಗೆ ಇನ್ನಾವುದೂ ಲಕ್ಷ್ಯಕ್ಕೆ ಬರುವುದಿಲ್ಲ–ಎಂಬಲ್ಲಿ ಎಲ್ಲಿಯವರೆಗೆ ಇಂಥ ವ್ಯಕ್ತಿಗೆ ಕ್ರಿಯಾವ್ಯಾಪ್ತಿ ಹರಡಬಲ್ಲದು ಎಂಬುದು ಅರಿವಾದೀತು. ಇದು ಶೀಲಲಕ್ಷಣ (Character Trait). ಇವನ ಧರ್ಮ ಇವನಂತೆ ಭಾವಿಸಿದ್ದು. ಅದು ಮಾತ್ರ ವೀರ. ಅದರ ಸಾಧನೆಯೊಂದೇ ಧರ್ಮ, ಸಿದ್ಧಿ ಎಂಬ ಕಲ್ಪನೆಯು ಇಲ್ಲಿ ಒಳ್ಳೆಯ ಬದುಕು, ಒಳ್ಳೆಯತನ ಆಗುತ್ತದೆ. ಇತರರ ಸಲಹೆ, ಆಲೋಚನೆ ಪಥ್ಯವಾಗದು. ಒಳ್ಳೆಯವನೆಂಬವನೂ ಹೀಗೆ ತೀರ್ಮಾನಿಸಬಹುದು. ಕೆಟ್ಟವನೂ ದುರ್ಮಾರ್ಗನೂ ಸಮಸ್ತ ಪ್ರಯೋಜನಗಳನ್ನೂ ತನಗೆ, ತನ್ನವರಿಗೆ, ತನ್ನ ನಾಡಿಗೆ– ಬಂದದ್ದು ಬರಲಿ, ಏನೇ ಆಗಲಿ, ಸಂಪಾದಿಸಬೇಕು, ಸಾಧಿಸುತ್ತೇನೆ ಎಂಬಾಗ, ಪ್ರತಿರೋಧ ಯಾವ ಮಿತಿಗೆ ಮುಟ್ಟಬಲ್ಲದು ಎಂಬುದನ್ನು ದುರ್ಯೋಧನನಲ್ಲಿ, ರಾವಣನಲ್ಲಿ, ಒಂದು ಮಟ್ಟದವರೆಗೂ ಕೋರಿಯೊಲೇನಸ್ನಲ್ಲಿ ಒಂದು ಛಲವಾಗಿ ಹಠವಾಗಿ ಕಾರ್ಯ ಮಾಡುವುದನ್ನು ಕಾಣಬಹುದು.

ಈ ಸಾಧನೆಗೆ ಇತರ ಪ್ರಯೋಜನ, ಕಷ್ಟ ಸುಖ, ಸಾವು ನೋವು ಎಣಿಕೆಗೆ ಬರುವುದಿಲ್ಲ ಎಂದಾಗ ಒಳ್ಳೆಯದು, ಹಿತ ಎಂಬುದರಲ್ಲಿ ಒಂದು ಮೇಲು, ಇನ್ನೊಂದು ಬೀಳು; ಒಂದು ಕಾರ್ಯಸಾಧಕ, ಇನ್ನೊಂದಲ್ಲ; ಇಂಥುದಕ್ಕೆ ಈ ಸಜ್ಜು, ಸಾಮಗ್ರಿ, ನೆರವು–ಹೇಗಾದರೂ ಸರಿಯೆ, ಒದಗಿಸಿಕೊಳ್ಳಬೇಕು–ಎಂಬ ಆಲೋಚನೆ ಪ್ರಚಂಡ ವಾಗಿ ಬೆಳೆಯುತ್ತದೆ. ದ್ವೇಷ, ಅಪಮಾನ, ಮುಯ್ಯಿಬುದ್ಧಿ, ಅಸೂಯೆ ಮೊರೆಯುತ್ತವೆ. ಇವುಗಳ ಪರವಾಗಿ ಮಾತುಕತೆ, ಪ್ರಚಾರ ನಡೆಯುತ್ತವೆ. ಇಲ್ಲಿ ಋತ ಅನೃತಗಳ ವಿವೇಚನೆ ತಳ್ಳಿಬೀಳುತ್ತದೆ. ಒಂದನ್ನು ಸಾಧಿಸುವುದಕ್ಕೆ, ಇನ್ನೊಂದನ್ನು ತುಳಿಯುವುದಕ್ಕೆ ಬೇಕಾದ ತಂತ್ರಗಳೆಲ್ಲ ಆಲೋಚನೆಗೆ ನೆರೆದು, ಈ ಕೈ ಬಲವಾಗಬೇಕು, ಎದುರು ಕೈ ದುರ್ಬಲವಾಗಿ ಸೋಲಬೇಕು ಎಂಬುದೊಂದೇ ಆಲೋಚನೆಯಾಗುತ್ತದೆ. ನಡುವೆ ಇನ್ನಾವ ನಿಲವಿಗೂ ಅವಕಾಶ ಕೂಡ ಇರುವುದಿಲ್ಲ; ಕೊಡುವುದಿಲ್ಲ. ನಮ್ಮ ಪರವಾಗಿ ನಿಲ್ಲುವವರು, ಇರುವವರು ಮಾತ್ರ ಮಿತ್ರರು; ನಿಲ್ಲದವರು ಶತ್ರುಗಳು. Declare

yourselves–Those who are not with us are against us. ಅಥವಾ ನನ್ನ ದೇಶ, ನನ್ನ ಜನ, ನನ್ನ ಧರ್ಮ– Right or wrong ಸರಿಯಾಗಲಿ, ತಪ್ಪಾಗಲಿ– ಎಂಬ ಮಾತುಗಳು ಹುಟ್ಟಿಕೊಂಡಿವೆ. ಇದು ದೊಡ್ಡ ಘರ್ಷಣೆಯ ಕಾಂಡ. ಲೋಕದ ಎಷ್ಟೋ ಕಷ್ಟಗಳು, ನಾಶಕ್ರಿಯೆಗಳು, ಯುದ್ಧ ನೂರಾರು ವರ್ಷದ ವೈರ ಇಂಥಲ್ಲಿ ಫಲಿಸುತ್ತವೆ: ಕ್ಷುದ್ರ ಕಾರಣಗಳಿಂದ, ಪಕ್ಷಪಾತಗಳಿಂದ ಅಥವಾ ನಮ್ಮ ಧರ್ಮ, ಕರ್ತವ್ಯ ಎಂಬ ಕಲ್ಪನೆ, ಮೋಹಗಳಿಂದ. ಇಂಥಲ್ಲಿ ವೀರ, ಪ್ರತಿಷ್ಠೆ, ಜಯ, ಮಿತ್ರ ಲಾಭ, ಭೇದ[1], ಕುಟಿಲಾದಿ ಉಪಾಯಗಳು ಲೋಕದಲ್ಲಿ ಬೆಳೆದಿವೆ. ಇಂಥಲ್ಲಿ ಪ್ರಬಲಿಸುವ ಜನ ಕೇವಲ ಒಳ್ಳೆಯವರಾಗಿರಬಹುದು, ಅಲ್ಲದವರಾಗಿರಬಹುದು. ಇಂಥಲ್ಲಿನ ಬದುಕು ಅಚ್ಚವಾಗಿ ನಿರ್ವಿಕಾರವಾಗಿ ಒಳ್ಳೆಯದೇ ಆಗಿರಬೇಕು ಎಂಬ ಮನಸ್ಸಿನದಾಗಿರುವುದಿಲ್ಲ. ಇಂಥವರು ಒಳ್ಳೆಯವರೆಂಬವರಿಗೆ ಯಾವ ಬಗೆಯ ಪ್ರೋತ್ಸಾಹ, ಆಸರೆ ಕೊಡುತ್ತಾರೊ ಹೇಳುವಂತಿಲ್ಲ. ಇವರಿಂದ ಹೇಗೂ ಕೆಡುಕಿಲ್ಲ ಎಂದು ಉಪೇಕ್ಷೆಗೊಳ್ಳುತ್ತಾರೆ. Neither fear nor favour. ಅವರಿಂದ ಭಯವಿಲ್ಲ, ಅವರ ಪ್ರಸಾದ, ಅನುಗ್ರಹ ಅಗತ್ಯವಿಲ್ಲ. ಇತ್ತ ಈ ಒಳ್ಳೆಯ ಜನ ಅದರಿಂದ ಕುಗ್ಗಿ ಮನಸ್ಸಿನಲ್ಲಿ ಯಾವ ವಿಕಾರವನ್ನೂ ತಂದುಕೊಳ್ಳದಿದ್ದರೆ ಸಂತೋಷ. ಎಲ್ಲಕ್ಕೂ ಒಂದು ಕ್ರಯ ತೆರಬೇಕು ಎನ್ನುತ್ತಾರೆ. ಈ ಉಪೇಕ್ಷೆ ಬಹುಶಃ ಒಳ್ಳೆಯತನ ತೆರಬೇಕಾದ ತೆರಿಗೆ. ಇದು ವ್ಯಥೆ ತರಬಲ್ಲ ಮಾತು; ಆದರೆ ಸತ್ಯದ ಒಂದು ಮುಖ. ತಾನು ಒಳ್ಳೆಯದಾಗಿರುವುದಕ್ಕೆ ಇನ್ನೊಬ್ಬರಿಂದ ಮರ್‍ಯಾದೆ ಏಕೆ ನಿರೀಕ್ಷಿಸಬೇಕು? ಒಳ್ಳೆಯದು ಪ್ರಯೋಜನ ತರುವುದೆಂದೆ? ಸರಕಾರದ ಮತ್ತು ಜನತೆಯ ಮಾನ್ಯತೆ ತರುವುದೆಂದೆ? ಒಳ್ಳೆಯದು ಒಳ್ಳೆಯದು. ಒಳ್ಳೆಯದಾಗಿರುವುದು ಮನಸ್ಸಿಗೆ ನಾವು ಮಾಡಿಕೊಳ್ಳಬೇಕಾದ ಒಂದು ಹದ, ಸಂಸ್ಕಾರ; ಅದನ್ನು ಸಾಧಿಸಿದರಾಯಿತು. ಸಾಲದೆ?

ಗೋಡ್ಸೆ ಗಾಂಧಿಯನ್ನು ಗುಂಡಿಟ್ಟು ಕೊಂದಾಗ ಬರ್ನಾರ್ಡ್ ಷಾ 'This tells you how dangerous it is to be good' ಎಂದರು. ಗಾಂಧೀಜಿಯವರು ಒಳ್ಳೆಯವರೆ? ಅಷ್ಟೇಯೆ?–ಎನ್ನಬಹುದು. ಯಾರು ಹೇಗೆ ಎಣಿಸಿದರೆ ಹಾಗೆ. 'ದೇಶ ಎರಡು ಭಾಗವಾಗಿ ಇನ್ನೊಂದು ಭಾಗದವರಿಗೆ ಐವತ್ತೈದು ಕೋಟಿ ರೂಪಾಯಿ ಸಲ್ಲಿಸಬೇಕು, ಅದನ್ನು ಅವರು ಹೇಗೆ ಬಳಸಿಕೊಳ್ಳುತ್ತಾರೊ ಎಂಬುದು ನಮ್ಮ ಚಿಂತೆಯಾಗಬೇಕಾಗಿಲ್ಲ. ಅವರಿಗೆ ಸಲ್ಲಬೇಕಾದ್ದು ಅದು; ಕೊಟ್ಟುಬಿಡೋಣ'–ಎಂದಾಗ, ಇಂಥ ಗಾಂಧಿಯಿಂದ ನಮಗೆ ಏನು ಪ್ರಯೋಜನ ಎಂದರು. ಆ ಬಗೆಗೆ ಅವರು ಉಪವಾಸ ಕೈಕೊಂಡಾಗ ದೆಹಲಿ ಬಿಟ್ಟು ಬೊಂಬಾಯಿಗೆ ಹೋದರು. ಇವರು

1. ಬ್ರಿಟಿಷರಿಗೆ ಮಾತ್ರ ಮಿತವಾದ್ದಲ್ಲ [illegible] ಎಂಬ ಮಾತು. ನಮ್ಮಲ್ಲಿಯೂ ಸಾಮ ([illegible]), ದಾನ ([illegible]), ಭೇದ ([illegible]), ದಂಡ ([illegible])–ಈ ಉಪಾಯಗಳು ಮೊದಲಿನಿಂದ ನಡೆದು ಬಂದ ಮಾರ್ಗಗಳೇ.



ಇರುವವರೆಗೂ ಶತ್ರುವರ್ಗಕ್ಕೆ ಸಹಾಯ ಎಂದು ಗುಂಡಿಟ್ಟು ಅವರನ್ನು ಕೊಂದ ಮನುಷ್ಯನಿಗೆ ತಾನು ದೇಶವನ್ನು ಅವರಿಂದ ಪಾರು ಮಾಡಿದ್ದೇನೆ, ಅಂಥ ಬಿಡುಗಡೆಗಾರನೆಂದು ನನಗೆ ಮಾನ್ಯತೆ ಬರುತ್ತದೆ ಎಂದೇ ಎಣಿಕೆ ಇತ್ತಂತೆ. ಹಾಗೆಯೇ ಅವರು, ಭಜನೆ ಮಾಡುತ್ತಿರುವಾಗ ಕಡೆಕಡೆಗೆ ಹೆಚ್ಚು ಜನ ಸೇರದೆ ಕೆಲವು ಮುದುಕರು, ಹೆಂಗಸರು, ಮಕ್ಕಳು ಮಾತ್ರ ಬರುತ್ತಿದ್ದರಂತೆ. 'ಈಶ್ವರ ಅಲ್ಲಾ ತೇರೆ ನಾಮ್' ಎಂದು ರಾಮಧುನ್‌ಗೆ ಸೇರಿಸಿದಾಗ ನಿಮ್ಮನ್ನು ಕೊಲ್ಲುತ್ತೇವೆಂದರು. ಗಾಂಧಿಯವರಿಗೆ ಗೊತ್ತಿತ್ತು–ಅವನ್ನು ಒಪ್ಪುವುದಕ್ಕೆ ಎಲ್ಲ ಜನರಿಗೂ ಸನ್ಮತಿ ಬೇಕು; ನಾಡಿಗೆ ಅದೊಂದೇ ಮಾರ್ಗ ಎಂದು. ಸನ್ಮತಿ ಎಂದು ಬಂದೀತೊ ಎಂಬ ಹೃದಯದ ಬೇನೆಯಿಂದ, ಬೇಗೆಯಿಂದ ಆ ಮಾತಾಡುತ್ತಾ ಭಜನೆಗೆ ಇನ್ನೊಂದು ಸಾಲನ್ನು–'ಸಬಕೋ ಸನ್ಮತಿ ದೇ ಭಗವನ್'– ಸೇರಿಸಿದರು. ಎದೆಯೊಡೆದ ಪ್ರಾರ್ಥನೆ ಅದು. 'ಅನ್ಯಥಾ ಶರಣಂ ನಾಸ್ತಿ'; 'ನಾನ್ಯಃ ಪಂಥಾ ವಿದ್ಯತೇ ಅಯನಾಯ' ಎಂಬ ಮಾತುಗಳಿವೆ. ಹಾಗೆ ಆದುದರಿಂದಲೇ ನನಗೆ ದೇವತೆಗಳ ಹೆಸರುಗಳಲ್ಲಿ 'ಸುಮನಸಃ' ಎಂಬ ಮಾತಿನ ಬೆಲೆ ಎಲ್ಲಕ್ಕಿಂತ ದೊಡ್ಡದು ಎನ್ನಿಸಿದೆ. ಸುಮನಸರಲ್ಲದವರು ಹೇಗೆ ದೇವತೆಗಳಾದಾರು? ಸುಮನಸರು ಎಂದರೆ ಒಳ್ಳೆಯವರು.

ಈ ಸೌಮನಸ್ಯ ಮನುಷ್ಯನ ಜೀವಿತದ ಎಲ್ಲ ಕಾರ್ಯರಂಗಗಳಲ್ಲಿಯೂ ಹರಿಯಬೇಕು. ಕ್ರಿಯೆ ಮಾತ್ರವಲ್ಲ ಮುಖ್ಯ; ಕ್ರಿಯೆಯನ್ನು ಪ್ರಚೋದಿಸುವ ಪ್ರವೃತ್ತಿ, Impulse (urge) to action ಮುಖ್ಯ. ಶಸ್ತ್ರಾಸ್ತ್ರಗಳಿಂದಲೇ ಕೇಡಲ್ಲ; ಅವನ್ನು ಹೀಗೆ ಹಾಗೆ ಬಳಸಬೇಕೆಂಬ ಪ್ರವೃತ್ತಿಯಿಂದ; ಪ್ರಯೋಗದಿಂದ ಕೇಡು. ಈ ಕಾರ್ಯಪ್ರವೃತ್ತಿ ಶುದ್ಧವಾದ ಹೊರತು ಒಳ್ಳೆಯತನಕ್ಕೆ ಗೆಲವಿಲ್ಲ, ನಿಲವಿಲ್ಲ. ಆದುದರಿಂದಲೇ ಈ Impulse to action ಎಂಬುದು ಶುದ್ಧವಾಗಬೇಕು. ಇದು ಶಿಕ್ಷಣದಿಂದ, ಶಿಷ್ಟತೆ, ಸಂಸ್ಕಾರಗಳಿಂದ ಬರಬೇಕಾದ್ದು. ಜನಸಮುದಾಯದಲ್ಲಿ ಬಹುದೊಡ್ಡವರು, ಮೇಧಾವಿಗಳು, ರಾಜಕಾರಣ ಪಟುಗಳು ಎನ್ನುವವರ ಮನಸ್ಸಿನಲ್ಲಿ ಕೂಡ ಯಾವುದೊ ಪಕ್ಷಪಾತ, ಪೂರ್ವಗ್ರಹಪೀಡೆ, ಅಸಮಾಧಾನ, ಶಂಕೆ, ಸಂಶಯ ತುಂಬಿಕೊಂಡು ಅವರ ಮಾತುಕತೆಯನ್ನು, ಅವರ ಉತ್ಸಾಹ ಪ್ರೋತ್ಸಾಹಗಳನ್ನು ನಡಸುತ್ತವೆ. ರಾಮ್–ರಹೀಂ ಎರಡೂ ಒಂದೇ ಎಂಬ ಕಬೀರನ ಮಾತು ನೆನಪಿಗೆ ಬರುವುದಿಲ್ಲ. ಅಂಥವನು ಮುಸಲ್ಮಾನನೇ ಅಲ್ಲ, ಹರಾಂ ಎಂದು ಅವರು ಅನ್ನಬಹುದು. ಇತ್ತ ಹಿಂದೂಗಳು ಅಥವಾ ರಾಮಭಕ್ತರು ಅವನನ್ನು ಸಂಪೂರ್ಣ ಸಂತನೆಂದು ಒಪ್ಪದೆ ಅವನ ಗೀತೆಗಳನ್ನೇ ನುಡಿಯದಿರಬಹುದು. ಮತಗಳೆಂಬವುಗಳಲ್ಲಿ ಈ ಕಾರ್ಪಣ್ಯ ತುಂಬಿದೆ. ಇಂಥ ಸಂದರ್ಭಗಳಲ್ಲಿಯೇ Religious ಎಂಬುದಕ್ಕಿಂತ Religion ಎಂಬುದು ದೊಡ್ಡದು ಎಂದಿರುವುದು. ಆದರೆ ಯಾವ ಮತಧರ್ಮವೂ ಅಲ್ಲದ ಶುದ್ಧ ಮತಧರ್ಮವೆನ್ನಬಹುದಾದ್ದು ಯಾವುದೊ? ಯಾರಿಗೊ?–ನಿರ್ಣಯಿಸುವುದು ಕಷ್ಟ. ಏನೇ ಆಗಲಿ, ಲೋಕಕ್ಕೆ ಅತೀತವಾದ, ಪ್ರಪಂಚಕ್ಕೆ ಮೂಲಭೂತವಾದ 'A stream of tendency not human that some

how makes for righteousness'– ಎಂಬ ವಾಕ್ಯದ ಎಲ್ಲ ಶಬ್ದಗಳನ್ನೂ ತೆಗೆದುಕೊಂಡು ಅದನ್ನು ಗೇಲಿಮಾಡಿ ಆಗಿದೆ. ಮೂರು ಖಂಡಗಳಾಗಿ ಈ ವಾಕ್ಯವನ್ನು ವಿಂಗಡಿಸಿ A stream of tendency/not human/that makes for righteousness ಎಂಬುದರ ಜೊತೆಗೆ somehow[2] ಎಂಬುದನ್ನು ಸೇರಿಸಿ ಯಾವುದೊ ತಬ್ಬಲಿ ಸಮಯದಲ್ಲಿ ಆರ್ನಲ್ಡ್ ಆ ವಾಕ್ಯವನ್ನು ಬರೆದ. ಇಂಥ ಸಂದರ್ಭದಲ್ಲಿ ಕ್ರಿಯಾಪ್ರವೃತ್ತಿ ನಿರ್ಮಲವಾಗಿದ್ದರೆ ಉಳಿದುದೆಲ್ಲ ಶಕ್ಯವಾಗುತ್ತದೆ ಎಂದು ಮಾತ್ರ ಹೇಳಬಹುದು.

ಚಿತ್ತವೃತ್ತಿ ಒಂದು ರೀತಿಯಾದರೆ ಇಚ್ಛೆ ಬಲವಾದಾಗ, ಒತ್ತುವಾಗ ಇನ್ನೊಂದು ರೀತಿ ಕಾರ್ಯ ಪ್ರವೃತ್ತಿ ಉಂಟುಮಾಡುತ್ತದೆ. ಇವೆರಡೂ ಕೋಟಲೆ ಉಂಟುಮಾಡಬಹುದು. ಇದರ ಜೊತೆಗೆ Emotion ಅಥವಾ Feeling–ಭಾವಬಂಧುರತೆ–ಇವೆಲ್ಲವನ್ನೂ ನಡಸುವ ಮನೋವಿಕಾರ ಅಥವಾ ವಿಶೇಷ–ಇವೆಲ್ಲ ಒಮ್ಮೊನೆಯವೇ ಆಗಿ ಕಾರ್ಯಮಾಡದಿದ್ದರೆ ಒಳ್ಳಿತೆಂಬುದು ಆಗುವುದಿಲ್ಲ, ಹುಟ್ಟುವುದಿಲ್ಲ. ಈ ಎಲ್ಲ ಮಟ್ಟಗಳಲ್ಲಿಯೂ ಲೌಕಿಕ ಪ್ರಯೋಜನ, ಅಪ್ರಯೋಜನಗಳ ನೆಲಸಿರುತ್ತದೆ. ಹೊರಗಿನವರು ಹಾಗಿರಲಿ, ಮನೆಯವರು, ಸಮಾಜದವರು, ಊರವರು, ರಾಷ್ಟ್ರದವರು–ಪ್ರತಿಯೊಬ್ಬರೂ ಇಂಥ ಒಂದು ಕಾರ್ಯಕ್ಕೆ ವಿರೋಧವನ್ನು ತರಬಹುದು. ಇಂಥ ಸಂದರ್ಭದಲ್ಲಿ ಹೀಗೆ ಮಾಡುವುದೆ, ಬೇಡವೆ?–ನಮಗೆ ಎಷ್ಟು ಒಳ್ಳೆಯದೆಂದು ತೋರಲಿ–ಎಂಬುದಕ್ಕೆ ಧಾರ್ಮಿಕವಾದ ಒಂದು ಧೈರ್ಯ (Moral Courage) ಬೇಕು. ಅಂಥ ಸಂದರ್ಭದಲ್ಲಿ ದೇಹದ ಶಕ್ತಿ ಹೇಗೊ–ಸುತ್ತಲಿನ ಶಾಂತಿ, ಸಮ್ಮತಿ ಹೇಗೊ–ಅದರ ಪರಿಣಾಮಗಳನ್ನೆಲ್ಲ ಸಹಿಸಿಕೊಳ್ಳಬಲ್ಲ ಧಾರಣೆ, ತಾಳ್ಮೆ ಹೇಗೊ–ಇದಿರಿಗೆ, ಜೊತೆಗೆ ಯಾರು ನಿಂತಾರು, ಇಲ್ಲ–ಎಂಬೆಲ್ಲ ಚಿಂತನೆ ತರುತ್ತದೆ. ಇಷ್ಟಾದರೂ ಜೊತೆಗೆ ಯಾರಿರಲಿ, ಇಲ್ಲದಿರಲಿ, 'ಏಕ್‌ಲಾ ಚಲೋರೆ' ಎಂಬುದು ಸಾಹಸವೂ ವ್ಯಕ್ತಿಗುಣವೂ ಆಗುತ್ತದೆ. ಇದು ಅನೇಕ ವೇಳೆ ಏಕಾಂಗ ಸಾಹಸ. ಒಬ್ಬ ಜೀಸಸ್, ಒಬ್ಬ ಸೋಕ್ರಟೀಸ್, ಒಬ್ಬ ಗಾಂಧಿ ಹಾಗೆ ನಿಂತಾರು–ಪ್ರಾಣ ಪಣ ಮಾಡಿ. ಅದು ಕ್ರೂರ, ಅನ್ಯಾಯ ಎಂದು ಕಾಣಿಸಿದರೂ ಎಲ್ಲ ಕಾಲದ ಜನರ ಮನಸ್ಸು ಹೃದಯಗಳನ್ನು ಉರಿಸುತ್ತ ಬೆಳಗುತ್ತ ನಿಲ್ಲುವ ಪ್ರಭಾವವಾಗಿರುತ್ತದೆ. ಒಳ್ಳೆಯದು Dangerous–ಅಪಾಯಕರ–ಆಗುವ ಸಂದರ್ಭ ಅಂಥದು.

ಎಲ್ಲ ಮತತತ್ತ್ವಗಳಲ್ಲಿಯೂ ಮುಂದೆ ಹೇಳುವಂಥ ಭಾವವಿದ್ದರೂ ಜೈನರ ಮೂರು ರತ್ನಗಳೆಂಬ ವಿಂಗಡಣೆಯಲ್ಲಿ ಬರುವ ಸಮ್ಯಕ್ ದರ್ಶನ, ಸಮ್ಯಕ್ ಜ್ಞಾನ, ಸಮ್ಯಕ್ ಚಾರಿತ್ರ ಎಂಬವು ಈ ಪ್ರಸಂಗದಲ್ಲಿ ನೆರವಾಗುವ ವರ್ಗೀಕರಣ; ಬೆಳಕು

---

2. ಮಾನವರಿಗೆ ಸುಲಭವಾಗಿ ಗೊತ್ತಾಗದ ರೀತಿಯಲ್ಲಿ ಎಂಬುದು ಏಕೆ ಗೇಲಿಗೀಡಾಗಬೇಕೊ ಕಾಣೆ. ಖಟಿಛಿಡಿಣಾಚಿಛಿಟಜ ಎಂಬ ಮಾತು ಲಾಗಾಯ್ತಿನಿಂದ ಬಳಕೆಯಲ್ಲಿ ಇದ್ದೇ ಇದೆ, ಅಲ್ಲವೆ?



ಹಾಯಿಸುವಂಥದು. ಯಾವುದೊ ನಂಬಿಕೆ ಹುಟ್ಟಿಕೊಂಡು ಈವರೆಗೂ ನಡೆಸಿದ ಬದುಕು ಸರಿಯಾಗಲಿಲ್ಲ; ಬೇರೆಡೆ ತಿರುಗಬೇಕು; ಇಂಥುದಕ್ಕೆ– ಅಹಿಂಸೆಗೊ ಪ್ರೀತಿಗೊ ಮೈತ್ರಿಗೊ ದಯಕ್ಕೊ ಸೌಭ್ರಾತ್ರಕ್ಕೊ ತನ್ನನ್ನು ಮುಡಿಪು ಮಾಡಿಕೊಂಡ ಹೊರತು ಬದುಕು ನೆಟ್ಟಗಾಗದು ಎಂಬ ವಿಶ್ವಾಸ ಹುಟ್ಟಬೇಕು. ಈ ವಿಶ್ವಾಸ ಪ್ರತಿಯೊಬ್ಬನ ಜೀವಕ್ಕೂ ತಟ್ಟಬೇಕು ಎಂಬುದು ಮತದ ವಿಶ್ವಾಸ. ಅದು ಮತಾಂತರವಾದ–ಮತಾಂತರಕ್ಕೆ ತಿರುಗಿದ ಮುಖ. ಇದು ಒಂದೇ ಮತದವರ ಬದುಕಿನಲ್ಲಿಯೇ ಒಂದು ಬಗೆಯಿಂದ ಇನ್ನೊಂದು ಬಗೆಗೆ ತಿರುಗುವ ಪ್ರವೃತ್ತಿಯಾಗಬಹುದು. ಆ ಬಗೆಗೆ ಆಳವಾದ ಆಲೋಚನೆ ಮಾಡಿ ಈ ಹೊಸ ಮತಿಗೆ ಸಂಬಂಧಪಟ್ಟ ತತ್ತ್ವಭಾಗವನ್ನು ವಿಶದವಾಗಿ ವಿವರವಾಗಿ ಮನವರಿಕೆ ಮಾಡಿಕೊಳ್ಳುವ ಭಾಗ ಜ್ಞಾನಭಾಗ. ಇದು ಎರಡನೆಯದು. ಹೊಸ ದರ್ಶನ ಬಂದರೆ ಸಾಲದು, ಹೊಸ ಜ್ಞಾನ ಸಿಕ್ಕಿದರೆ ಸಾಲದು; ಪಾಂಡಿತ್ಯ ದೊರಕಬಹುದು. ಆದರೆ ನಡವಳಿಕೆಯಲ್ಲಿ ಪ್ರತಿದಿನ, ಕ್ಷಣ, ಆಲೋಚನೆ, ಪ್ರವೃತ್ತಿ, ಕಾರ್ಯಗಳಲ್ಲಿ ಇದು ರೂಪಗೊಳ್ಳದಾದರೆ ಅದು ಶೀಲವಾಗುವುದಿಲ್ಲ, ಚಾರಿತ್ರವಾಗುವುದಿಲ್ಲ; ಕಾರ್ಯಮುಖವಾಗದ ಜ್ಞಾನ ನಿಷ್ಪ್ರಯೋಜನ; ರಾಕ್ಷಸವಾಗಬಲ್ಲದು ಕೂಡ–ಎಂಬ ಮೂರು ಮುಖದ ತತ್ತ್ವ ಎಲ್ಲಿಗೂ ಅನ್ವಯವಾಗಬಲ್ಲದ್ದು.

ಇದರ ಅಭಿಮಾನ, ಉತ್ಸಾಹ ಅತಿಶ್ರದ್ಧೆಯಾದೀತು. 'ಇದು ನನ್ನನ್ನು ಉದ್ಧಾರ ಮಾಡಿತು, ಇತರರನ್ನೂ ಮಾಡಬಲ್ಲದು; ಮಾಡಬೇಕು. ಈ ಸತ್ಯ ತಿಳಿಯದಾಗ ಜನ ಎಂದಿನಂತೆ ಇರುತ್ತಾರೆ; ತಿಳಿಸಬೇಕು, ಕಲಿಸಬೇಕು,' ಎಂಬ ಶ್ರದ್ಧೋತ್ಸಾಹ ಅತಿಶ್ರದ್ಧೆಯಾಗಿ ವಿಪರೀತಕ್ಕೆ ಹೋಗಬಹುದು. ಮತ (Religious) ಶ್ರದ್ಧೆ ಹೀಗಾಗಿರುವುದೇ ಹೆಚ್ಚು. ಬಲಾತ್ಕಾರದಿಂದ ಆಗಲಿ, ಇದನ್ನು ಸಾಧಿಸದಿದ್ದರೆ ನಾನು ನನ್ನ ಮತದ ಭಕ್ತ ಅಲ್ಲ ಎಂಬ ಭಾವ ಉದ್ರೇಕವಾಗುತ್ತದೆ, ಆವೇಶವಾಗುತ್ತದೆ. ಇತರರನ್ನು ಮತಾಂತರಿಸುವುದರಲ್ಲಿ, ಉಗ್ರಪಂಥಗಳಲ್ಲಿ ಇತರ ಸಣ್ಣ ದೊಡ್ಡ ಉಪಾಯಗಳನ್ನೂ ರಾಜಕೀಯ ಪ್ರಭಾವವನ್ನೂ ಹಣದ ಪ್ರಭಾವವನ್ನೂ ಬಳಸಿಕೊಂಡು ಮೋಹ ಭಯಗಳನ್ನು ತೋರಿ ಪ್ರಬಲಿಸುತ್ತದೆ. ಭಕ್ತಿಶ್ರದ್ಧೆಗಳ ಈ ಅಪ-ರೂಪ ಜನರನ್ನು ಅಂಧರನ್ನಾಗಿ ಮಾಡುತ್ತದೆ. ಇಂಥಲ್ಲಿ ಒಳ್ಳೆಯ ದಾರಿಯ ಕಡೆಗೇ ಕಣ್ಣು ಮುಚ್ಚಬಹುದು,–ಇದರ ಸಾಧನೆಗೆ ಎಲ್ಲ ದಾರಿಗಳೂ ಸರಿ ಎಂಬಂತೆ; ಸಹನೆ, ಸಹಾನುಭೂತಿ ತೋರದೆ ಕರ್ಕಶವಾಗಬಲ್ಲದು. ಯಾವುದು ಜ್ಞಾನಕಾಂಡವಾಗಿ ವಿಶದವಾಗಿ ನಿಷ್ಪಕ್ಷಪಾತವಾಗಿ ಅಚ್ಛೋದವಾಗಿ ಇರಬಲ್ಲದೊ ಅದು ಶೀಲದಲ್ಲಿಯೂ ಹಾಗೆ ಉಳಿದರೆ ಮಾತ್ರ ಮಂಗಳವಾದೀತು. ಜ್ಞಾನಕಾಂಡ ಕಷ್ಟ. ಆಚರಣೆಯಲ್ಲಿ ಬಹುಜನಕ್ಕೆ ನಿಲುಕದು. ಸಾಮಾನ್ಯರನ್ನು ಭಕ್ತಿಯ ಭರ, ಆವೇಗ ನೂಕಿಕೊಂಡು ನುಗ್ಗುತ್ತದೆ. ಬಹುಮಟ್ಟಿಗೆ ಅನೇಕ ಮತಗಳ ಮತಾಂತರ ಕಾರ್ಯಕ್ಕೆ ಇದೇ ಕಾರಣ. ಕಾರಣ ಒಳ್ಳೆಯದು; ಕಾರ್ಯ ತಪ್ಪು. ರೀತಿ, ಮಾರ್ಗ ಸಾಧುವೂ ಸಭ್ಯವೂ ಆಗಬೇಕು. ಬಾಯಿ

ಮಾತಿನಲ್ಲಿ ನಮ್ಮ ಮತದಲ್ಲಿ ಎಲ್ಲರಿಗೂ ಸಮತೆ ಇದೆ, ಸಮಾನತೆಯಿದೆ ಎಂದು ಹೇಳಿದರೂ ಆ ಮತಕ್ಕೆ ಸೇರಿದವರಿಗೆ ಮಾತ್ರ ಇದು ಲಭ್ಯ. ಅಲ್ಲಿಯೂ ತಾರತಮ್ಯ, ಮೇಲು ಬೀಳು, ಅಚ್ಚ ಬೆರಕೆ ಎಂಬ ಎಣಿಕೆಗಳು ಬರುತ್ತವೆ. ಉಳಿದವರು ವ್ರಾತ್ಯರು; ಪಾಷಂಡಿಗಳು; ಪತಿತರು; ಭವಿಗಳು; ಕಾಫಿರ್; Heathen. ಈ ಮತಕ್ಕೆ ಸೇರಿದರೆ, ಅದರ ಲಾಂಛನಗಳನ್ನು ಧರಿಸಿದರೆ 'ಪುನರ್ಜನ್ಮ ನ ವಿದ್ಯತೆ'–ಎಂದು ಆಶಂಸನ ದೊರೆಯುತ್ತದೆ ಕೂಡ.

ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಬಹು ದೊಡ್ಡವರಾದ, ಆಚಾರ್ಯ ಸಮಾನರಾದ ಜನ ದೊಡ್ಡ ಕಾರ್ಯವನ್ನು ಸಾಧಿಸಬಯಸಿದ್ದಾರೆ. ಭರನ್ಯಾಸ ಎಂಬ ಸಂಗತಿ ಇದೆ: ಎಷ್ಟು ಕಷ್ಟಪಟ್ಟರೂ ಮನಸ್ಸು ನೇರ್ಪಡದೆ ವಕ್ರವಾಗಿಯೇ ಒಡೆದೊಡೆದೇ ನಡೆಯುತ್ತದೆ ಕೆಲವಲ್ಲಿ: 'ನಿನ್ನ ಹೊಣೆಗಾರಿಕೆಯನ್ನೆಲ್ಲ ನಾನು ವಹಿಸುತ್ತೇನೆ, ಯಾವುದಕ್ಕೂ ಕರ್ತೃತ್ವವಿಟ್ಟುಕೊಳ್ಳದೆ ನಿನ್ನ ಹೊಣೆಯನ್ನು ನನಗೆ ಒಪ್ಪಿಸು' ಎಂದು ರಾಮಕೃಷ್ಣ ಪರಮಹಂಸರು ನಾಟಕಕಾರ ಗಿರೀಶಚಂದ್ರಘೋಷರಿಗೆ ಹೇಳಿದರೆಂದಿದೆ. (ಅಂಥ ಹಿರಿಯರಲ್ಲಿ ಈ ವ್ಯಕ್ತಿಗೆ ಆಳವಾದ ವಿಶ್ವಾಸವಿದೆಯೆಂಬುದು ಇಲ್ಲಿ ಅಧ್ಯಾಹಾರ). ತನ್ನ ಕಡೆಯ ಮಾತಾಗಿ ಶ್ರೀಕೃಷ್ಣನು ಅರ್ಜುನನಿಗೆ ಹೀಗೆ ಹೇಳಿದ: "ಅಹಂ ತ್ವಾ ಸರ್ವ ಪಾಪೇಭ್ಯೋ ಮೋಕ್ಷಯಿಷ್ಯಾಮಿ, ಮಾ ಶುಚಃ." ಹೀಗೆ ಕೃಷ್ಣನು ಮಾತ್ರ ಹೇಳಬಲ್ಲವನಾಗಿದ್ದ. ಆದ್ದರಿಂದಲೇ ಗೀತೆಯ ಈ ಭಾಗ ಶ್ರೀ ವೈಷ್ಣವ ಪಂಥದಲ್ಲಿ ಬಹುದೊಡ್ಡ ಸಂಧಿ. ಕೈಂಕರ್ಯ, ಸರ್ವಾರ್ಪಣ ಅಥವಾ ಪ್ರಪತ್ತಿ, ಸಮಸ್ತ ಭರನ್ಯಾಸ ಇವು ಎಂಥವನನ್ನೂ ಉದ್ಧಾರಮಾಡಬಲ್ಲದು ಎಂಬ ತತ್ತ್ವ ಅತಿಶಯವಾಯಿತು. ಈ ಮಾತೂ ಮೋಹಕವಾಗಿ ಸರ್ವಸಾಧಕವಾಗಿದ್ದರೂ ಸ್ವೀಕರಿಸುವ ಮಹಾತ್ಮ ಒಂದು ಕಡೆ, ಅರ್ಪಿಸುವ ಈ ವ್ಯಕ್ತಿ ಇನ್ನೊಂದು ಕಡೆ ವಿಶಿಷ್ಟರು. ಆದರೆ, ಸಾಧಿಸುವುದು ಕಷ್ಟ. ಇವರೆಲ್ಲರೂ ಶಕ್ತರೇ ನಿಜ; ಅಷ್ಟರ ಮಟ್ಟಿಗೆ ಇಂಥ ಹಿರಿಯರ ಮೇಲೆ ನನ್ನ ಪಾಪ ಹೊರಬಾರದು; ಅವರಿಗೆ ಭಾರವಾಗದ ರೀತಿ ನಾನು ಬದುಕಬೇಕೆಂಬ ಶುಚಿ, ನಿಷ್ಠೆ, ಶ್ರದ್ಧೆ ಒಪ್ಪಿಸುವವನಿಗೆ ಮಾತ್ರ ಬಂದೀತು, ಬರಬೇಕು. ಒಂದು ಪರಮಾವಧಿಗೆ ಹೋದ ಸ್ಥಿತಿಯನ್ನು ಇದು ಚಿತ್ರಿಸುತ್ತದೆ.

ಶ್ರೀಕೃಷ್ಣ ಹೇಳಿದ ಇನ್ನೊಂದು ಸಂಗತಿ ಮತಧರ್ಮ ಒಳ್ಳೆಯದು ಎಂಬ ಸಂಬಂಧ ದಲ್ಲಿ ವಿವರಣೆಗೆ ಬರುತ್ತದೆ. ಮನಸ್ಸಿನಲ್ಲಿ ಒಂದು ವಿಷಾದ ಉಂಟಾಗಿ ತಾನು ಯುದ್ಧ ಮಾಡುವುದಿಲ್ಲವೆಂದು ರಥದಲ್ಲಿ ಅರ್ಜುನನು ಕುಳಿತಾಗ 'ವೀರವ್ಯಕ್ತಿಯಾಗಿರುವ ನಿನಗೆ ಅಪಕೀರ್ತಿ; ಶತ್ರುಗಳ ಎದುರಲ್ಲಿ ನಗೆಪಾಟಲಾಗುತ್ತದೆ–ಅನಾರ್ಯಜುಷ್ಟಂ ಅಸ್ವರ್ಗ್ಯಂ ಅಕೀರ್ತಿಕರಂ–' ಎಂಬವು ಮಾತುಗಳು. ಇಷ್ಟು ದಿನ ಆಲೋಚಿಸಿ ಈವರೆಗೆ ನಡೆದ ಕಾರ್ಯಕಲಾಪಗಳೂ ಉತ್ಸಾಹಗಳೂ ವ್ಯರ್ಥವಾಗುತ್ತದೆ. ನೀನು ಕ್ಷತ್ರಿಯ. ಕ್ಷತ್ರಿಯ ಧರ್ಮವನ್ನು ನೆರವೇರಿಸು. ಇತರ ಯಾವ ಚಿಂತೆಯೂ ಬೇಡ–'ಯುದ್ಧ್ಯಸ್ವ'



'ವಿಗತಜ್ವರಃ'; 'ಗೆದ್ದೆಯಾ, ರಾಜ್ಯ ಬರುತ್ತದೆ; ನಿನಗೆ, ನಿನ್ನ ಸೋದರರಿಗೆ; ಸತ್ತೆಯಾ, ಮೋಕ್ಷ ಸಿಕ್ಕುತ್ತದೆ. ಇದು ನಿನ್ನ ಸ್ವಧರ್ಮ' – ಎಂದು ಕೃಷ್ಣ ಒಂದು ದೊಡ್ಡ ಉಪದೇಶ ಮಾಡುತ್ತಾನೆ; ಸಂದೇಹ, ವಿಷಾದ, ಮನಸ್ಸಿನ ಕೋಟಲೆ ಉಂಟಾದಾಗ. ಆಗಬೇಕಾದುದು ಮುಖ್ಯ ಕಾರ್ಯ; ಆ ಕರ್ತವ್ಯದಿಂದ ತಪ್ಪಿಸಿಕೊಳ್ಳುವುದು ಸರಿಯಲ್ಲ–ಎಂದು ಧರ್ಮ ಸ್ವರೂಪ, ಕರ್ತವ್ಯಸ್ವರೂಪ, ಕರ್ಮಸ್ವರೂಪ, ಉತ್ತಮನಾದ ವ್ಯಕ್ತಿಯ ಶೀಲಲಕ್ಷಣ, ಸಾಧನೆಯ ಸ್ವರೂಪ ಎಲ್ಲವನ್ನೂ ಹೇಳಿ, ಯಾವ ಧರ್ಮಸಂದೇಶಕ್ಕೂ ಆಧಾರವಾಗಿರುವ ತತ್ತ್ವ ದರ್ಶನವನ್ನು ಕೊಡುತ್ತಾನೆ. ಆದುದರಿಂದಲೇ ಸಾಂಖ್ಯಯೋಗಗಳ ಪ್ರಸಂಗ ಬರುತ್ತದೆ. ಗೀತೆ ಪ್ರಥಮತಃ ಉಪನಿಷತ್ತುಗಳಂತೆ–ದರ್ಶನವಲ್ಲ. ಬುದ್ಧಿ ರಚಿಸುವ ತರ್ಕ, ವಾದ, ತತ್ತ್ವ ಸಿದ್ಧಾಂತಗಳಿಗೂ ಒಂದು ಮಟ್ಟದಲ್ಲಿ ಬೆಲೆ ಉಂಟು. ಅದಕ್ಕೂ ಆಧಾರಭೂತವಾಗಿ ದೈವ ಅಥವಾ ಈಶ್ವರ, ಅದರ ಕ್ರಿಯೆಗೆ ಒಳಪಟ್ಟು ಸಮಸ್ತವೂ ನಡೆದರೆಯೇ ಮನಸ್ಸಿಗೆ ಕೊನೆಯ ಸಮಾಧಾನ ಎಂದು ಲೋಕ ನಂಬಿದೆ. ಅಂಥ ಈಶ್ವರಸತ್ವ ತಾನು ಎಂಬಂತೆ ಹೇಳಿದ ಕೃಷ್ಣನ ವ್ಯಕ್ತಿತ್ವ ಆ ಹೊತ್ತಿಗೆ ಆ ನೆಲೆಗೆ ಸ್ಥಾಪಿತವಾಗಿತ್ತು. ರಾಜಸೂಯದಲ್ಲಿ, ಉದ್ಯೋಗಪರ್ವದಲ್ಲಿ ಆತನ ತೇಜಸ್ಸು ದೈವೀಶಕ್ತಿಯನ್ನು ಕಂಡಿತ್ತು. ಹಿಂದೆ ವೈವಸ್ವತ ಮನು ಮುಂತಾದವರಿಗೆ ತಾನು ಅದೇ ಧರ್ಮವನ್ನು ಬೋಧಿಸಿದ್ದೆ; ಈ ಯುಗದಲ್ಲಿ ನಿನಗೆ ಹೇಳುತ್ತಿದ್ದೇನೆಂದು ಅರ್ಜುನನಿಗೆ ತಿಳಿಸಿ ಅವನನ್ನು ಒಲಿಸಲು ಯತ್ನಿಸಿದ್ದ. ವಿಶ್ವರೂಪವನ್ನು ಕಾಣಿಸುತ್ತ ಮೋಹಗೊಂಡುದರಿಂದ ಅಲ್ಲ; ಅದ್ಭುತ ಆಧ್ಯಾತ್ಮ ಶಕ್ತಿಯನ್ನು ಮೆರದದ್ದರಿಂದ ಅಲ್ಲ; ಇರುವ ಈ ಎಲ್ಲಕ್ಕೂ ನಾಶಕಾಲ ಬಂದಿದೆ; ಇದು ದೈವೇಚ್ಛೆ; ಈ ನನ್ನ ಕಾರ್ಯದಲ್ಲಿ ಮಾತ್ರ ನೀನು ತೊಡಗುತ್ತಿದ್ದೀಯೆ; ನಿಮಿತ್ತ ಮಾತ್ರವಾಗು–ಎಂದು ಹೇಳಿದ. ಇನ್ನೂ ಮುಂದೆ ಹೋಗಿ, 'ವಿಮೃಶ್ಯೈತದಶೇಷೇಣ ಯಥೇಚ್ಛಸಿ ತಥಾ ಕುರು' ಎಂದು ನುಡಿದ. ಒಡನೆಯೇ 'ಪ್ರಿಯನೂ ಹಿತವನೂ ಇವರ ಮಂಗಳವನ್ನು ಬಯಸುವವನೂ ಸಾಧಿಸುವವನೂ ನಾನು ಆಗಿದ್ದೇನೆ, ನಿನ್ನ ಮೇಲೆ ಯಾವ ದೋಷವೂ ಬೇಡ, ನಿನಗೆ ಚಿಂತೆ ಬೇಡ; ಸಮಸ್ತ ಪಾಪಗಳಿಂದಲೂ ನಿನ್ನನ್ನು ಬಿಡುಗಡೆ ಮಾಡುತ್ತೇನೆ, ಮಾ ಶುಚಃ' (Don't worry) ಎಂದೂ ಹೇಳಬೇಕಾಗುತ್ತದೆ. ಸುತ್ತಿಗೆಯ ಇಷ್ಟು ಪೆಟ್ಟುಗಳು ಬೀಳಬೇಕಾಯಿತು ಕ್ರಿಯಾಪ್ರಚೋದನೆಗೆ, ಸಾಧನೆಗೆ ಎಂದಾಗ. ವ್ಯಕ್ತಿ ಶೀಲ, ಸ್ವಧರ್ಮ ಅಥವಾ ಸ್ಥಾನಧರ್ಮ, ಅಗತ್ಯ ಕರ್ತವ್ಯ; ಇವುಗಳ ಜೊತೆಗೆ ಸಂಬಂಧಪಟ್ಟ ಧರ್ಮದ ವಿಜ್ಞಾನವನ್ನೂ ಈಶ್ವರತತ್ತ್ವವನ್ನೂ ಉಪದೇಶಮಾಡಿ ಮೋಹವನ್ನು ಕಳೆದು ಕೃಷ್ಣ ಅವನನ್ನು ಕಾರ್ಯಪ್ರವೃತ್ತನನ್ನಾಗಿ ಮಾಡಬೇಕಾಯಿತು. 'ಸಂದೇಹ ಬೇಡ, ಇಂಥ ಕಾರ್ಯ ನಿನ್ನ ಧರ್ಮ. ಫಲಾಪೇಕ್ಷೆ ಇಲ್ಲದೆ ಮಾಡು. ಈಶ್ವರಾರ್ಪಿತವಾಗಿ ಮಾಡು.' ಹಾಗೇ 'ಮಾ ತೇ ಸಂಗೋಸ್ತು ಅಕರ್ಮಣಿ' ಎಂದ. 'ನಿಶ್ಚೇಷ್ಟನಾಗಿ ನಿನ್ನ ಕರ್ಮದಲ್ಲಿ ಉದಾಸೀನ ನಾಗಬೇಡ–ನಾನು, ನನ್ನವರು, ಬಂಧುಬಾಂಧವರು, ಅವರ ಕೊಲೆ ಮುಂತಾದುವು ಕಾರ್ಪಣ್ಯಹತಚೇತಸನ ಎಣಿಕೆ ಎಂಬ ಲಕ್ಷಣದ್ದಾಗುತ್ತವೆ' ಎಂದ.

ವಿಷಯದ ಈ ವಿಸ್ತಾರದಲ್ಲಿ ಒಳ್ಳೆಯದು, ಕರ್ತವ್ಯ, ಅದರ ಹಿಂದಿನ ಮನಸ್ಸು, ಫಲಾಫಲ ವಿಶೇಷ ಇವೆಲ್ಲ ವಿವರಣೆಗೆ ಬರುತ್ತವೆ. ಕೆಲವನ್ನು ಮಾಡುವುದು ಒಳ್ಳೆಯದು; ಇನ್ನು ಕೆಲವನ್ನು ಮಾಡದಿರುವುದು, ತಟಸ್ಥವಾಗಿರುವುದು ಸಲ್ಲ ಎಂಬ ನೆಲಸುಗಳೂ ಇರುತ್ತವೆ–ಒಳ್ಳೆಯದು, ಕೆಟ್ಟದ್ದು ಎಂಬ ವಿವೇಚನೆಯಲ್ಲಿ. ಹಾಗೆಯೇ ತದ್ವಿರುದ್ಧವಾಗಿ ಮಾಡುವುದು ಕೆಟ್ಟದ್ದು, ಮಾಡದಿರುವುದು ಮೇಲು–ತಟಸ್ಥನಾಗುವುದು ಮೇಲಾಗುವುದು ಎಂಬುದನ್ನು ಅನುಮಾನಿಸಬೇಕಾಗುತ್ತದೆ. ಸಾಮಾನ್ಯವಾದ ಒಳ್ಳೆಯತನವೇನು ಎಂಬುದು, ಯಾರು ಒಳ್ಳೆಯವರು ಎಂಬುದು ಎಲ್ಲರಿಗೂ ಗೊತ್ತಿರುತ್ತದೆ. ಉತ್ಕಟ ಸನ್ನಿವೇಶಗಳಲ್ಲಿ, ದೊಡ್ಡ ಸಂದೇಹ ಬಂದಾಗ, ಸಮಸ್ಯೆ ಹುಟ್ಟಿಕೊಂಡಾಗ ಹೇಗೆ ಕಾರ್ಯಪ್ರವೃತ್ತನಾದರೂ ಫಲಾಫಲ ಬಹುಪ್ರಮಾಣದ ನಾಶಕ್ಕೆ ಈಡಾಗುತ್ತದೆ ಎಂಬ ಕಾರಣದಿಂದ ಇಂಥ ಮಹಾಪ್ರಶ್ನೆಗಳೂ ಸನ್ನಿವೇಶಗಳೂ ಏಳುತ್ತವೆ. ಇಲ್ಲವಾದರೆ ಇಷ್ಟಕ್ಕೆ ಅಗತ್ಯವಿರುವುದಿಲ್ಲ. ಪ್ರಶ್ನೆ ಏಳುವುದು ದೊಡ್ಡವನಲ್ಲಿಯಾದಾಗ ಅವು ಇನ್ನೂ ಬೆಲೆಯುಳ್ಳದ್ದು.

ನಾಲ್ಕು ಜನ ಏನೆಂದಾರು? ದೇವರು ಮೆಚ್ಚಬೇಡವೆ? ಪಾಪ ಪುಣ್ಯ ಯೋಚನೆ ಮಾಡಿ. ನಿಮ್ಮ ಮನಸ್ಸನ್ನೇ ಕೇಳಿಕೊಂಡು ಇದು ಸರಿಯೆ,  ತಪ್ಪೆ ನಿರ್ಣಯಿಸಿಕೊಂಡು ಮಾಡಿ. ಮನೆಯ ಭೀತಿ ಇಲ್ಲವೆ? ಸಮಾಜದ, ರಾಜಶಾಸನದ ಭೀತಿ ಇಲ್ಲವೆ? ದೈವಾಪಚಾರವಾಗುವುದಿಲ್ಲವೆ? ನಿನ್ನ ಅಂತರಾತ್ಮ, ಅಂತಸ್ಸಾಕ್ಷಿಯನ್ನು ಕೇಳಿಕೊ. ಕಾಯಿಲೆ ಬಂದೀತು. ಹತ್ತು ಜನ ಬಹಿಷ್ಕರಿಸಿ ಪತಿತನೆಂದು ಹೊರಗೆ ಹಾಕಿಯಾರು. ಮಾನನಷ್ಟ, ಸ್ಥಾನನಷ್ಟ, ಧನನಷ್ಟ ಆಗುತ್ತವೆ. ಪಾಪ ಎಂದಾಗ ನರಕವಾಸ ಮಾಡಬೇಕಾಗುತ್ತದಲ್ಲವೆ?– ಎಂಬೆಲ್ಲ ಭಯಗಳೂ ವಿವೇಚನೆಗಳೂ ಬರುತ್ತವೆ. ಇವು ಎಲ್ಲರಿಗೂ ತಿಳಿದ ಸಂಗತಿಗಳು. ಒಳಿತು ಕಾರ್ಯಕಾರಿಯಾಗುವ ಪ್ರವೃತ್ತಿ ಇರುವುದಿಲ್ಲ. ಕೆಟ್ಟದ್ದರಿಂದ ನಿವೃತ್ತಿಯಾಗ ಬೇಕಾದಾಗ ಆ ತೀರ್ಮಾನಕ್ಕೆ ಬರುವುದಿಲ್ಲ. ಇದು ಲೋಕದ ಎಲ್ಲಾ ಕಾಲದಲ್ಲಿಯೂ ಎಲ್ಲ ಜನರಲ್ಲಿಯೂ ಕರ್ಮದಲ್ಲಿಯೂ ಉಂಟಾದ ಸಂದೇಹಗಳು. ಎಂಥವರಿಗೂ ಇವು ಹುಟ್ಟಿಕೊಂಡಾವು. ಆದುದರಿಂದಲೇ ಸಾಧಾರಣ ಅರ್ಥದಲ್ಲಿ, ವಿಶೇಷಾರ್ಥದಲ್ಲಿ ಕೂಡ, ‘ಕಿಂ ಕರ್ಮ ಕಿಮಕರ್ಮೇತಿ ಕವಯೋಽಪ್ಯತ್ರ ಮೋಹಿತಾಃ’ ಎಂಬ ಮಾತು ಆಲಿಸಬೇಕಾದ್ದಾಗುತ್ತದೆ.

ಒಳಗೂ ಹೊರಗೂ ಶುಚಿಯಾದವನಿಗೂ–ಹಾಗೆ ತನಗೆ ತಾನು ಭ್ರಮೆ ತಂದುಕೊಂಡರೆ ಸಾಲದು–ಚೆನ್ನಾಗಿ ಬದುಕಬೇಕೆಂದಿರುವವನಿಗೂ ಶ್ರುತಿಸ್ಮೃತಿ ಆಚಾರ ಕುಲಧರ್ಮ ಕಾಲಧರ್ಮ ಗೊತ್ತಿರುವವನಿಗೂ ಕೆಲವು ಪ್ರಸಂಗಗಳು ಸಂದೇಹವನ್ನು ತರಬಹುದು. ಅಂಥಲ್ಲಿ ಶಿಷ್ಟರನ್ನು ಕೇಳಿ; ‘ಯೇ ತತ್ರ ಬ್ರಾಹ್ಮಣಾಃ ಸಂಮರ್ಶಿನಃ। ಯುಕ್ತಾ ಆಯುಕ್ತಾಃ। ಅಲೂಕ್ಷಾ ಧರ್ಮಕಾಮಾಸ್ಯುಃ’ ಎಂಬ ಮಾತನ್ನು ಒಂದು ಪದವೀ ಪ್ರದಾನ ಸಮಾರಂಭದಂತಹ ಸಮಯದಲ್ಲಿ ಉಪನಿಷತ್ತಿನ ಆಚಾರ್ಯರು ಅನುಶಾಸನ



ಮಾಡಿರುತ್ತಾರೆ. ಅಂಥವರಿಗೆ ಮಾತ್ರವೇ ಬಹುತರ ಕಡೆಯ ನಿರ್ಣಾಯಕ ಸಂಗತಿಯಾಗಿ ಉತ್ಕಟ ಸಂದರ್ಭದಲ್ಲಿ ಧರ್ಮ ಯಾವುದು? ಸರಿಯಾದುದು ಯಾವುದು?– ಎಂಬ ಅಂಶದಲ್ಲಿ ಆತ್ಮತುಷ್ಟಿ ಎಂಬುದು–ಕಡೆಗೆ–ನಿಮ್ಮನ್ನು ತೀರ್ಮಾನಕ್ಕೆ ತರಲಿ ಎಂದು ಹೇಳಿದ್ದು; ಎಲ್ಲರಿಗೂ ಅಲ್ಲ. ಹಿರಿಯರೊಬ್ಬರು ಹೇಳಿದಂತೆ ‘ಸರ್ವಧರ್ಮಾನ್ ಪರಿತ್ಯಜ್ಯ ಯಥೇಚ್ಛಸಿ ತಥಾ ಕುರು’ ಎನ್ನಲಿಲ್ಲ ತಾನೆ ಗೀತೆ? ಪದ್ಯದ ಒಂದರ ಉತ್ತರಾರ್ಧವನ್ನು ಇನ್ನೊಂದರ ಪೂರ್ವಭಾಗಕ್ಕೆ ಛಂದೋಭಂಗವಾಗದಂತೆ ಸೇರಿಸಿ ಹೇಳಿ ಸ್ವೇಚ್ಛೆಗೆ ರಹದಾರಿ (Charter of Licence) ಕೊಡಲಿಲ್ಲ.

ಮನುಷ್ಯನು ಏಕಾಂಗಿಯಾಗಿ ಹುಟ್ಟಿದರೂ ಒಂದು ಸಂಸಾರದಲ್ಲಿ ಅವನೊಬ್ಬನೇ ಅಲ್ಲ ಇರುವುದು. ಹಾಗೆ ಬದುಕುವುದೂ ಶಕ್ಯವಲ್ಲ. ಪ್ರಪಂಚವನ್ನು ಬಿಟ್ಟು ಸಂನ್ಯಾಸ ಸ್ವೀಕರಿಸುವವನ ಮಾತು ಬೇರೆ. ಲೋಕದಲ್ಲಿ ಇರುವವನಿಗೆ Ethical ಸಂಬಂಧಗಳು ಮನೆಯಲ್ಲಿ, ಹೊರಗೆ ಕಲ್ಪಿತವಾಗುತ್ತವೆ. ಹತ್ತು ಜನದ ನಡುವೆ ನಡೆಯಬೇಕಾಗಿ ರುವವನಿಗೆ ನೂರಾರು ಸಂದರ್ಭಗಳಲ್ಲಿ ಸಂದೇಹಗಳು, ಕರ್ತವ್ಯ ನಿರ್ಣಯ ಕರ್ಮಗಳು ಒದಗುತ್ತವೆ. ನಮ್ಮ ರಾಷ್ಟ್ರಗಳಂತಹ ರಾಷ್ಟ್ರಗಳಲ್ಲಿ ಹತ್ತಾರು ಬಗೆಯ ಪಂಥ, ಪದ್ಧತಿ, ಬಣಗಳಿರುತ್ತವೆ. ಇವರೆಲ್ಲರಿಗೂ ಸಮಧಾತುವಾಗಿ ನಡೆಯುವುದೇ ಸರಿಯಾದ ನಡತೆ ಯಾಗುತ್ತದೆಯಾಗಿ ಒಂದು ಬಗೆಯ ಸಾಪೇಕ್ಷತೆ (Relativity) ಉತ್ಪನ್ನವಾಗುತ್ತದೆ. ಅಂತಾರಾಷ್ಟ್ರೀಯ ವ್ಯವಹಾರದಲ್ಲಿ ಇದರ ವಿಸ್ತಾರ ಮತ್ತಷ್ಟು ದೊಡ್ಡದು. ಇಲ್ಲಿ ಹಿರಿಯ, ಕಿರಿಯ, ಸಂಕುಚಿತವಾದ, ವಿಸ್ತಾರವಾದ ನೆಲಸುಗಳು, ಉಪ್ಪರಿಗೆಗಳು (hierarchy) ಅಥವಾ ಸಮಾನ ಕೇಂದ್ರತೆಯ ವರ್ತುಲಗಳು (concentric fields) ಹುಟ್ಟಿಕೊಳ್ಳುತ್ತವೆ.

ಸಮಾಜದಲ್ಲಿ, ರಾಷ್ಟ್ರದಲ್ಲಿ ನಾಯಕನಾಗಿ ಕಾರ್ಯ ನಡಸಬೇಕಾಗಿರುವಾಗ ಕ್ರಿಯಾಮಂಡಲ ಲಕ್ಷಾಂತರ ಜನಗಳ ಮೇಲೆ ಒಳಿತು ಕೆಡಕುಗಳನ್ನು ಮಾಡಬಲ್ಲದು. ಯಾವುದೊ ಊರಿನ ಮೂಲೆಯಲ್ಲಿ ಹುಟ್ಟಿ ಬೆಳೆದ ಒಬ್ಬ ಮನುಷ್ಯ ಹೇಗೊ ಜನ ನಾಯಕನಾಗಿ, ರಾಜ್ಯದ ಮಂತ್ರಿ ಆಗಿ, ಕೇಂದ್ರದಲ್ಲಿ ಮಂತ್ರಿ ಆದಾಗ ಒಂದು ತೀರ್ಮಾನಕ್ಕೆ ಬರುವ ಮುಂಚೆ ಎಷ್ಟು ಜನಕ್ಕೆ ತನ್ನ ಒಂದು ತೀರ್ಮಾನದಿಂದ ಪ್ರಯೋಜನ, ಮಂಗಳ ಆಗಬಹುದು, ಎಷ್ಟು ಜನಕ್ಕೆ ನಷ್ಟ, ಕ್ಲೇಶ ಉಂಟಾಗಬಹುದು ಎಂಬ ಪರಿಶೀಲನೆಯ ಅಗತ್ಯ ಬೀಳುತ್ತದೆ. ಎಲ್ಲಿಯೂ ಪದವಿಗೆ ಒಂದು ಮದ ಸಹಜವಾದ್ದು. 2–3 ಗಂಟೆಗಳಲ್ಲಿ ರಾಮೇಶ್ವರದಿಂದ ಕಾಶ್ಮೀರದವರೆಗೆ ಸರಕಾರದ ಖರ್ಚಿನಲ್ಲಿ ಹಾರಿ ಸೇರಬಲ್ಲ ಅವಕಾಶ ವಿರುತ್ತದೆ! ಒಂದು ತೀರ್ಮಾನದಿಂದ ಒಟ್ಟು ಒಂದು ಕೈಗಾರಿಕೆಗೊ ಜನವರ್ಗಕ್ಕೆಲ್ಲವೊ ಮೇಲು ಬೀಳುಗಳಾಗುವ ಸಂದರ್ಭಗಳು ಉಂಟಾಗುತ್ತವೆ. ತಕ್ಷಣದಲ್ಲಿ ಅವನ ಕಾರ್ಯಕ್ಕೆ ಅಡ್ಡಿ ಇಲ್ಲವಾಗಿ ಅದನ್ನು ಹೇಗೊ ಸಾಧಿಸುವ ಮೋಹವೊ ಇಚ್ಛೆಯೊ ಪ್ರವೃತ್ತಿಯೊ ಹಟವೊ ಉಂಟಾಗುತ್ತದೆ. ಇಂಥಲ್ಲಿನ ಜವಾಬ್ದಾರಿ ದೊಡ್ಡದು. ಒಳ್ಳೆಯದು, ಮಂಗಳ ಎಂಬ ಸಂದರ್ಭದಲ್ಲಿ ಒಬ್ಬ ವ್ಯಕ್ತಿ, ಅವನ ಇಷ್ಟ–ರುಚಿ, ಒತ್ತು, ತಕ್ಷಣದ ಅಗತ್ಯ

ಎಂಬುದಕ್ಕಿಂತ ಹೆಚ್ಚಾಗಿ ಆಳವಾಗಿ ತನ್ನಲ್ಲೇ ಆಲೋಚನೆ ಮಾಡಿ ಸರಿ ತಪ್ಪು, ನ್ಯಾಯಾನ್ಯಾಯ, ಮಂಗಳಾಮಂಗಳ, ಹಿತಾಹಿತಗಳನ್ನು ತಾನಾಗಿ ತೀರ್ಮಾನಮಾಡಬೇಕಾಗುತ್ತದೆ. ಹೀಗೆ ಶೀಲ, ಸ್ವಧರ್ಮ, ಅಗತ್ಯ ಕರ್ತವ್ಯ, ಹೊಣೆಗಾರಿಕೆ ಎಲ್ಲಕ್ಕೂ ಪ್ರವೇಶ ಉಂಟು. ಇಲ್ಲಿ ಸಾಮಾನ್ಯ ಸರಳವಾದ ಒಳಿತು ಕೆಡಕುಗಳು ಮಾತ್ರವೇ ಬಳಕೆಗೆ ಬರುವುದಿಲ್ಲ. ನೂರು ಒಳ್ಳೆಯದು ಶಕ್ಯವಾಗಿರುವಾಗ ಎಲ್ಲಕ್ಕಿಂತ ಹೆಚ್ಚು ಒಳ್ಳೆಯದಾವುದು? ದೋಷಯುತವಾದ ನೂರು ತೀರ್ಮಾನಗಳಲ್ಲಿ ಯಾವುದು ಅತಿಕಡಮೆ ದೋಷ ಉಳ್ಳದ್ದು–ಎಂದು ವಿನಯದಿಂದ, ಆಕ್ರೋಶವಿಲ್ಲದ ಸಮಸ್ತ ಹಿತದೃಷ್ಟಿಯಿಂದ, ಎಲ್ಲಕ್ಕೂ ಹೊಣೆಹೊತ್ತಂತೆ ಕಾರ್ಯರೀತಿಯನ್ನು ನಿರ್ಣಯಿಸುವ ಹೊಣೆಗಾರಿಕೆ ದೊಡ್ಡದು.

ಅನೇಕ ವೇಳೆ ನ್ಯಾಯ–Justice–ಎನ್ನುವುದಕ್ಕೂ ಮಾನವೀ ಕರುಣೆಗೂ ಘರ್ಷಣೆ ಬರುತ್ತದೆ. ನ್ಯಾಯ ಕಠಿಣವಾಗಬಹುದು. If all of us got only what we deserved who would escape whipping? –ಎಂಬ ಮಾತನ್ನು ಕೇಳಿದ್ದೇವೆ. ಕೆಲವು ಮತಗಳಲ್ಲಿ ನನ್ನ ದೇವರು Just God, Jealous God–ಎಂಬ ಮಾತು ಬರುತ್ತದೆ. ದೇವರಿಗೆ ಅದು ಅಗತ್ಯವಂತೆ. ಅನ್ಯ ದೇವರಿಗೆ ಎರಗಿದರೆ ಅವನಿಗೆ ಕೋಪವಂತೆ; ಕಿವಿ ಮೂಗು ಕೊಯ್ಯುವನಂತೆ; ತಾಳನಂತೆ. ಅವನೋ: ಪಕ್ಷಪಾತ ಮಾಡುವ ಹಾಗಿಲ್ಲ. ಯಾರು ಯಾರನ್ನು ಹೇಗೆ ಹೇಗೆ ಶಾಸನ ಮಾಡಬೇಕೊ–ಮಾಡಬೇಕಾದ ಅಗತ್ಯ ಆತನಿಗೆ ಇರಬಹುದು. ಆದರೆ ದೇವರ ಕರುಣೆ ಮನುಷ್ಯನಿಗೆ ಸರ್ವದಾ ಅಗತ್ಯ. ಅವನು ಕರುಣಾಶಾಲಿ, ಅವನ ಪ್ರೀತಿ ಆಳಿನ ಭಕ್ತಿಗೆ ನೆಲೆಯಾಗುತ್ತದೆ, ಆಕಾಂಕ್ಷೆಯಾಗುತ್ತದೆ. ದೇವರು ಎಂಬ ತತ್ತ್ವಕ್ಕೆ ಕಡೆಯ ಸ್ಥಾಪಕತೆ ಇದೆಯೆಂಬುದು ಎಣಿಕೆ; ನಂಬಿಕೆ. ನಿರಾಶೆಯಲ್ಲಿ, ಅಪಮಾನದಲ್ಲಿ, ಸೋಲಲ್ಲಿ, ದಿಕ್ಕಿಲ್ಲದಾದಾಗ ದೇವರೆಂಬುದಕ್ಕೆ ಮೊರೆಯಿಟ್ಟು ಎಲ್ಲವನ್ನೂ ಅದರಲ್ಲಿ ಅರ್ಪಣೆ ಮಾಡಿದಾಗ ಅದು ಅಮರ ಶ್ರಯ, ಶರಣು, ಶಾಂತಿ ವಿಶ್ರಾಂತಿ ಸ್ಥಾನ ಎಂಬ ಭಾವ ದೊಡ್ಡದಾಗುತ್ತದೆ. ಭಯಕೃತ್ ಅದೇ; ಭಯನಾಶಕವೂ ಅದೇ ಎಂಬ ನಂಬಿಕೆ ಅದಕ್ಕೆ ಆಧಾರ. ಸ್ವಶಕ್ತಿಯಿಂದ ಸಹಿಸುತ್ತೇನೆಂದೇ ಕಡೆಯವರೆಗೂ ಮುರಿಯದೆ ನಿಲ್ಲುವ ಗಂಡುಸಾಮರ್ಥ್ಯ ಮನುಷ್ಯನಲ್ಲಿ ಅಪರೂಪ. ದೊಡ್ಡ ಮರದ ಆಶ್ರಯವನ್ನು ನಂಬಿ, ಪಡೆದು ಅದಕ್ಕೆ ಹಬ್ಬಿರುವ ಬಳ್ಳಿಗಳಂತೆ ಆಲಂಬನ. ಕೃಷ್ಣಭಕ್ತಿಯ ಒಂದು ಅಭಿಪ್ರಾಯದ ಪ್ರಕಾರ ಲೋಕದಲ್ಲಿ ಕೃಷ್ಣನೊಬ್ಬನೇ ಗಂಡು, ಉಳಿದ ಲೋಕವೆಲ್ಲ ಹೆಣ್ಣು ಎಂಬ ಗಣನೆಯಿದೆ. ಅದು ಇದಕ್ಕೆ ಪೋಷಕ. ದೇವರು ಎಂಬ ಕಲ್ಪನೆ ಮೂಲ ಅಸ್ತಿತ್ವದ್ದೆ?–ಅಥವಾ ಜೀವನದ ತತ್ತ್ವಬುದ್ಧಿಯ ಅಗತ್ಯವೆಂದು ಮನುಷ್ಯನು ಮಾಡಿಕೊಂಡುದೆ? Existential or Essential – ಎಂಬ ಆಲೋಚನೆ ಬಂದಿದೆ. ಎಂಥ ಸಂದರ್ಭದಲ್ಲಿಯೂ ಅವನ ದಯೆ, ಕಾರುಣ್ಯ ಬೇಕು. ಬಸವಣ್ಣನವರು ದಯೆಯಿಲ್ಲದ ಧರ್ಮವಾವುದಯ್ಯ ಎಂದರು. ಧರ್ಮವನ್ನು ಧರ್ಮವನ್ನಾಗಿ ಮಾಡುವುದು ದಯೆ. ಕೃಪೆಯೂ ಅರುಳ್ ಮುಂತಾದವೂ ಹಾಗೇ. ಲೋಕಸ್ವರೂಪವನ್ನು ತಿಳಿದವರು ಲೋಕಕಾರುಣ್ಯಕ್ಕೂ ಹಂಬಲಿಸಬೇಕು. ಈ



ಸಂದರ್ಭದಲ್ಲಿ ಸೀತಾದೇವಿ ಹನುಮಂತನಿಗೆ ಹೇಳಿದ ಒಂದು ಮಾತು ನಮ್ಮ ಧರ್ಮಕ್ಕೆಲ್ಲ ಮೂಲಧಾತುವನ್ನು ಕೊಡಬಲ್ಲಂಥದು:

ಪಾಪಾನಾಂ ವಾ ಶುಭಾನಾಂ ವಾ ವಧಾರ್ಹಾಣಾಂ ಪ್ಲವಂಗಮ
ಕಾರ್ಯಂ ಕರುಣಂ ಆರ್ಯೇಣ ನ ಕಶ್ಚಿನ್ನಾಪರಾಧ್ಯತಿ–

ಅಪರಾಧ ಮಾಡದೆ ಇರುವವರು ಯಾರೂ ಇಲ್ಲ; ಆರ್ಯರೆಂಬವರು ಕರುಣೆಯನ್ನು ಕಾರ್ಯವಾಗಿ ಮಾಡಿಕೊಳ್ಳಬೇಕು. ಪಾಪಿಗಳೇ ಆಗಲಿ, ಬೇರೆಯವರೇ ಆಗಲಿ, ವಧೆಗೆ ಅರ್ಹರೆಂದು ಎಣಿಸಿದವರು ಕೂಡ ಕರುಣೆಗೆ ಪಾತ್ರರು ಎಂದಳು ಆ ತಾಯಿ. ಭೂದೇವಿ ಅಥವಾ ಕ್ಷಮಾದೇವತೆಯ ಮಗಳು ಆಕೆ. ಎಷ್ಟು ಕಷ್ಟಪಟ್ಟಳು, ಪಾಪ. ಕಡೆಗೆ, 'ಹೆಣ್ಣಾಗಿ ಜನಿಸಿದ ಎನ್ನೊಳಪರಾಧಮುಂಟು' ಎಂದು ಆಕೆಯ ಬಾಯಲ್ಲಿ ಒಬ್ಬ ಕವಿ ಹೇಳಿಸಬೇಕಾದ ಘಟ್ಟಕ್ಕೆ ಬಂದವಳು. ರಾಮಾಯಣ ಆದುದರಿಂದಲೇ 'ಸೀತಾಯಾಃ ಚರಿತಂ ಮಹತ್.'

ಎಷ್ಟು ಹೇಳಿದರೂ ಒಬ್ಬನು ಮಾಡಬಹುದಾದ ಒಳ್ಳೆಯ ಕೆಲಸಕ್ಕೆ ಮಿತಿ ಉಂಟು: ಕಾಲದೇಶವರ್ತಮಾನಗಳೆಂಬ ಮರ್ಯಾದೆಯುಂಟು. ಇವು ಯಾರಿಗೂ ಎಲ್ಲಕ್ಕೂ ಮಿತಿಗಳು. ಆದರೆ ತನ್ನ ಬದುಕನ್ನು, ಅದರ ನಿಷ್ಠೆ, ಶುಚಿ, ವಿಶದತೆಗಳನ್ನು ಕಾಪಾಡಿಕೊಂಡು ಆಲೋಚಿಸಿ ತೀರ್ಮಾನಿಸಬೇಕು; ಮನಸ್ಸು, ಶಕ್ತಿ, ಅವಕಾಶ ಇದ್ದಂತೆ ಕಾರ್ಯಪ್ರವೃತ್ತನಾಗಬೇಕು. ಇದಕ್ಕಿಂತ ಹೆಚ್ಚು ಯಾರೂ ಮಾಡಲಾಗುವುದಿಲ್ಲ. ಎಂದೇ ಈಗಿನ ಪ್ರಪಂಚಕ್ಕಿಂತ ಮೇಲಾದ ಇನ್ನೊಂದನ್ನು ದೇವರೇ ನಿರ್ಮಾಣ ಮಾಡುವುದಕ್ಕೆ ಆಗುತ್ತಿರಲಿಲ್ಲವೇನೊ ಎಂದು In this best of all possible worlds ಎಂದು ಲೈಬ್ನಿಟ್ಸ್ ಹೇಳಿದ.

ನಮ್ಮಲ್ಲಿ ಸಂಕೋಚಮಾರ್ಗ, ವಿಕೋಚಮಾರ್ಗ ಎಂಬವಿವೆ. ಒಂದು ಜೀವದ ಬೆಳವಣಿಗೆಯಲ್ಲಿ ಪ್ರೀತಿಯನ್ನೂ ಕ್ರಿಯಾಪ್ರಪಂಚವನ್ನೂ ವಿಸ್ತರಿಸಿಕೊಂಡು ವಿಶ್ವಸಮಸ್ತಕ್ಕೂ ವ್ಯಾಪಕವಾಗಿ ಅದನ್ನು ವಿಸ್ತರಿಸಬೇಕು. ಅದೆಲ್ಲ ತನ್ನ ವಿಶ್ವಾಸಮಂಡಲಕ್ಕೆ ಸೇರಿದ್ದು, ಅದು ಬೇರೆಯಲ್ಲ, ತಾನು ಬೇರೆಯಲ್ಲ; ಸಾಧನೆಗೆ ಹಾಗೆ ಪ್ರವರ್ತಿಸಬೇಕು ಎಂದು ಅದು ವಿಸ್ತಾರಗೊಳ್ಳಬೇಕು. ಯಾರೂ ಒಂದು ಊರಿನ, ಒಂದು ರಾಷ್ಟ್ರದ ರಾಷ್ಟ್ರಕನು ಮಾತ್ರ ಅಲ್ಲ; ಸ್ವದೇಶೋ ಭುವನತ್ರಯಂ ಎಂಬ ನುಡಿ ಇಲ್ಲಿ ಸಾರ್ಥಕವಾಗುತ್ತದೆ. Citizen of the world ಎಂಬುದೂ ಇದಕ್ಕಿಂತ ಸಣ್ಣ ವ್ಯಾಪ್ತಿ ಉಳ್ಳದ್ದೇ. ಇಂಥ ಮನುಷ್ಯನಿಗೆ ತನ್ನ ರಾಷ್ಟ್ರವೆಂಬುದೇ ಮೋಹವಲ್ಲವೆ? ಆ ಸ್ಥಿತಿಯನ್ನು ಅರ್ಥ ಮಾಡಿಕೊಳ್ಳುವುದಾಗಲಿ, ಅದಕ್ಕೆ ತಕ್ಕಂತೆ ನಡೆಯುವುದಾಗಲಿ, ಸಾಮಾನ್ಯರ ಕಲ್ಪನೆಗೆ ಮೀರುತ್ತದೆ. ಇನ್ನೊಂದು ಮಾರ್ಗ: ಎಲ್ಲದರ ಸಾರಸಂಗ್ರಹವಾಗಿ ತನ್ನ ಹೃದಯದಲ್ಲಿ ಕೇಂದ್ರೀಕೃತಮಾಡಿ ಮನಸ್ಸಿಗೆ ಆಳವನ್ನೂ ತುಂಬನ್ನೂ ತಂದುಕೊಳ್ಳುವುದು: ಇದು ಸಾಧನೆ. ಎರಡನ್ನೂ ವಿವೇಚನೆಯಲ್ಲಿ ವ್ಯತ್ಯಾಸ ಮಾಡಬಹುದೆ ಹೊರತು ಪ್ರತ್ಯೇಕ

ಮಾಡಿ ಇವನ್ನು ತೋರಿಸುವುದಕ್ಕಾಗುವುದಿಲ್ಲ. ಅನುಭವದ ವ್ಯಾಪಾರ ಎಷ್ಟು ದೊಡ್ಡದಾಗ ಬಲ್ಲದು, ಯಾವ ಹದವನ್ನು ರಸವನ್ನು ಸಾಧಿಸಬಲ್ಲದು ಎಂಬುದಕ್ಕೆ ಇವು ದೀವಿಗೆ ಯಾಗುವಂತಹ ಮಾತುಗಳು. ಈ ಸಮಯಗಳಲ್ಲೆಲ್ಲ 'ಪ್ರಶಾಂತಾತ್ಮ ವಿಗತಭೀಃ' 'ಪ್ರೀತಮನಃ–ಅಂತಃಪ್ರಸನ್ನಾಂ' 'ನ ಶೋಚತಿ, ನ ಕಾಂಕ್ಷತಿ' ಎಂಬ ಮುಂತಾದ ಮಾತುಗಳೂ ವಾಕ್ಯಗಳೂ ದಿಕ್ಕು ತೋರಿಸುತ್ತಿರುತ್ತವೆ. ಮಾರ್ಗ ಕಷ್ಟ. ನಮ್ಮ ಒಳ್ಳೆಯತನ ನಿರಂತರವಾಗಿ, ಕಡೆಯ ಉಸಿರು ಧರಿಸಿರುವವರೆಗೂ ಎಚ್ಚರವಾಗಿಯೇ ಇದ್ದು ನಮ್ಮನ್ನು ನಡಸಬೇಕಾಗಿರುತ್ತದೆ. ಬರಿಯ ವಾಕ್ಯಗಳನ್ನು ಹೇಳಿದರೆ, ಉಪನ್ಯಾಸಗಳನ್ನು ಕೊಟ್ಟರೆ, ಉದ್ಗ್ರಂಥಗಳನ್ನು ಬರೆದರೆ ಇದನ್ನು ಸಾಧಿಸಿದಂತಾಗುವುದಿಲ್ಲ. ಇಷ್ಟು ಮಾತ್ರ ಸತ್ಯ: ಗೀತೆಯ ಇನ್ನೊಂದು ಮಾತು "ನ ಮೇ ಭಕ್ತಃ ಪ್ರಣಶ್ಯತಿ' ಎಂದು. ಇಲ್ಲಿ 'ನನ್ನ' ಎಂಬ ಕೃಷ್ಣನ ಭಕ್ತ–'ಕೃಷ್ಣಭಕ್ತಿ ಉಳ್ಳವನ' ಎಂಬ ಅರ್ಥವನ್ನು ಮಾತ್ರ ತೆಗೆದುಕೊಳ್ಳದೆ, ಯಾವನ ಮನಸ್ಸು ಅತ್ಯುತ್ತಮ ಧ್ಯೇಯವೊಂದನ್ನು ರೂಪಿಸಿಕೊಂಡು ಅದಕ್ಕಾಗಿ ತೊಳಲುತ್ತದೆಯೊ ಬಳಲುತ್ತದೆಯೊ ತಪಿಸುತ್ತದೆಯೊ ಸಾಧಿಸುವ ಯತ್ನದಲ್ಲಿ ಇರುತ್ತದೆಯೊ ಅಂಥವನಿಗೆ ಎಂದು ಅರ್ಥ ಕಲ್ಪಿಸಿ, ಅಂಥವನಿಗೆ ಒಂದು ಸಲ ಇಂಥ ದರ್ಶನ ಉಂಟಾದರೆ ಅದು ಸರ್ವಥಾ ಸರ್ವದಾ ರಕ್ಷಕವಾಗುತ್ತದೆ, ಅವನನ್ನು ಎಂಥ ಕಷ್ಟಗಳಲ್ಲಿಯೂ ಪಾರು ಮಾಡುತ್ತದೆ ಎಂದು ಖಚಿತಪಡಿಸಬೇಕು. ಆ ಬೆಂಕಿ ಆರದಂತೆ, ಬೆಳಕು ನಂದದಂತೆ ಮಾತ್ರ ನೋಡಿಕೊಳ್ಳುವ ಜೋಕೆ ಇರಬೇಕು.

ಕೆಲವು ಮಾತುಗಳಂತೂ ನಮ್ಮ ನಾಡಿನಲ್ಲಿ ಒಣ ಮಂತ್ರಗಳಂತೆ–ಅಫೀಮಿನಂತೆ– ಇವೆ ಎನ್ನುವವರು ಇದ್ದಾರೆ. ಬದುಕಿಗೆ ಬದಲಾಗಿ ಅವು ನಮ್ಮ ತಲೆಯ ಮೇಲೆ ಕವಿಯುವ ಮಾತುಗಳಾಗಿವೆ. ಕಾರ್ಪಣ್ಯದಿಂದ ಈ ಮಾತನ್ನು ಹೇಳುತ್ತಿಲ್ಲ. ಯುಧಿಷ್ಠಿರನು ಒಮ್ಮೆ ಹೇಳಿದ: 'ಸತ್ಯಂ ಮಾತಾ, ಪಿತಾ ಜ್ಞಾನಂ, ಧರ್ಮೋ ಭ್ರಾತಾ, ದಯಾ ಸಖಾ। ಶಾಂತಿಃ ಪತ್ನೀ, ಕ್ಷಮಾ ಪುತ್ರಃ, ಷಡೈತೇ ಮಮ ಬಾಂಧವಾಃ'. ಲೋಕದ ಉತ್ಥಾನತೆಗೆ ಇಷ್ಟು ಸಾಕು. ಆದರೆ, ಈ ಮಾತುಗಳ ಅರ್ಥಕಲ್ಪನೆಯಲ್ಲಿ ಎಷ್ಟು ಅರೆತಿಳಿವು, ಅಂಧಶ್ರದ್ಧೆ, ಆಷಾಢಭೂತಿತನ, ಪಕ್ಷಪಾತ, ಅಹಂಕಾರ ಸೇರಿಕೊಳ್ಳುತ್ತವೆ! ಎಷ್ಟು ಜನರ ಎಷ್ಟು ದೌರ್ಬಲ್ಯಕ್ಕೆ ಕಾರಣವಾಗುತ್ತವೆ! ಯಾವ ಒಂದು ಸಮಯದಲ್ಲಾಗಲಿ ಈ ಮಾತುಗಳಿಗೆ ಹೇಗೆ ಅರ್ಥ ಮಾಡಬೇಕು, ಅನ್ವಯಿಸಿ ಕಾರ್ಯಪ್ರವೃತ್ತರಾಗಬೇಕು ಎಂಬುದು ಪ್ರತಿ ಸಂದರ್ಭದಲ್ಲಿನ ಪರೀಕ್ಷೆ. ಬದುಕಿನ ಪ್ರತಿಕ್ಷಣವೂ ಕಡೆಯ ಉಸಿರೆಳೆಯುವವರೆಗೂ ಧರ್ಮ-ಸೋದರ, ದಯೆ-ಗೆಳೆಯ, ಶಾಂತಿ-ಹೆಂಡತಿ–ಇಂಥ ಮಾತುಗಳನ್ನು ನೆನೆಸಿ ಕೊಂಡು ನಮ್ಮ ನಾಡಿನ, ಹೊರನಾಡಿನ, ಅಂತಾರಾಷ್ಟ್ರೀಯ ಜೀವನದ, ಹಳಹೊಸ ವ್ಯಾಪಾರಗಳನ್ನು ಅವಗಾಹನೆಗೆ ತಂದುಕೊಂಡಾಗ–ಇಂದಂತೂ–ಮನಸ್ಸಿಗೆ ಸಂತೋಷ, ಧೈರ್ಯ ಬರುವುದಿಲ್ಲ. ಆದರೆ, ಹೇಗೇ ಆಗಲಿ, ಇವನ್ನು ಮನಸ್ಸಿನಲ್ಲಿಟ್ಟುಕೊಂಡು ಅರ್ಥಮಾಡಿಕೊಂಡರೆ, ಇನ್ನೊಂದು ಗೀತಾನುಡಿ 'ಯಃ ಪಶ್ಯತಿ ಸ ಪಶ್ಯತಿ'– ಎಂಬುದರ



ತಿಳಿವು ಮೂಡುತ್ತದೆ; ಚಿತ್ತವೃತ್ತಿ ಶುದ್ಧವಾಗುತ್ತದೆ; ಅಂತಸ್ಸಾಕ್ಷಿ ಶಕ್ತವಾಗುತ್ತದೆ; ದಿನದ ಬದುಕು ಒಳ್ಳೆಯದಾಗುತ್ತದೆ.

ನಾನು ಇಲ್ಲಿ ಗಂಡಸರನ್ನು ಕುರಿತಂತೆ ಮಾತ್ರ ಮಾತನಾಡಿದ್ದೇನೆ. ಹೆಂಗಸು ಯಾವ ರೀತಿ ಇಂದಿನ ಪ್ರಪಂಚದಲ್ಲಿ ನಡೆದುಕೊಳ್ಳುತ್ತಾಳೆ, ನಡೆದುಕೊಳ್ಳಬೇಕೆಂದು ಎಣಿಸುತ್ತಾಳೆ–ಎಂಬುದನ್ನು ನಾನು ಅರಿತವನಲ್ಲ. ನಮ್ಮ ದೇಶದಲ್ಲಿ ಇದುವರೆಗೂ ಕೂಡುಕುಟುಂಬಪದ್ಧತಿ, ದಾಂಪತ್ಯ ಧರ್ಮ, ವರ್ಣಾಶ್ರಮಧರ್ಮ ನಡೆದುಕೊಂಡು ಬಂದುವು. ಅವುಗಳಂತೆ ಬಹುಮಟ್ಟಿಗೆ ಹೆಣ್ಣುಮಕ್ಕಳ ಜೀವನ ಹಾಗೂ ಹೀಗೂ ರೂಪಗೊಂಡು ಬಂದಿತು. ಕಾಲ ಬದಲಾಯಿಸಿದೆ. ವೇದ, ಸ್ಮೃತಿ (ಧರ್ಮಶಾಸ್ತ್ರ) ಮುಂತಾದವಕ್ಕೆ ಇಂದು ಪೂಜ್ಯತೆ ತಪ್ಪಿದೆ. ದೇವ, ಸ್ವರ್ಗ, ನರಕ ಎಂಬ ಮಾತುಗಳು ನಡತೆಯನ್ನು ತಡೆಯದಾಗಿವೆ, ರೂಪಿಸದಾಗಿವೆ. ಆಶ್ರಮ ಧರ್ಮದ ರೂಢಿ ನಿಂತು ಬಹುಕಾಲವಾಯಿತು. ವರ್ಣಧರ್ಮ ಈವರೆಗೂ ಸುಮಾರು ನಡೆದುಕೊಂಡು ಬಂದಿತು; ನಾಳೆಗೆ ಅಚ್ಚಳಿಯದೆ ಇದು ಉಳಿಯುವಂತಿಲ್ಲ. ಮನು, ಪರಾಶರ, ಯಾಜ್ಞವಲ್ಕ್ಯ ಮುಂತಾದವರ ನಿಯಮಗಳು Morality ಎಂಬ ನೀತಿಧರ್ಮದ ಉಳಿಕೆಗಳಂತೆ ನಿಲ್ಲಬಹುದೇ ಹೊರತು ಚಾಲ್ತಿ ಕಾನೂನಾಗಿ (Positive Law) ನಿಲ್ಲುವಂತಿಲ್ಲ. ನಮ್ಮ ಶಾಸನ ಮಂಡಲಿಗಳು–ಎಂದರೆ, ಜನತೆಯ ಪ್ರತಿನಿಧಿಗಳು ಆರಿಸಿದ ಜನ–ನಾಳೆ ಶಾಸನಗಳನ್ನು ಮಾಡುತ್ತಾರೆ. ರಾಷ್ಟ್ರದ ಸಂವಿಧಾನ ಎಲ್ಲರಿಗೂ ಸಮಾನತೆ ಕೊಟ್ಟಿದೆ. ನ್ಯಾಯಾಲಯಗಳ ದೃಷ್ಟ್ಯಾ ಸರ್ವರೂ ಸಮ–ಸಮಾನ. ಗಂಡಾಗಲಿ, ಹೆಣ್ಣಾಗಲಿ, ಪ್ರತಿಯೊಬ್ಬರೂ ಸಮವಾಗಿ ಓದು ಬರಹ ಕಲಿತು ವೃತ್ತಿಗಳನ್ನು ಹಿಡಿಯಬಹುದು. ವಿವಾಹ, ಪುನರ್ವಿವಾಹ, ದಾಂಪತ್ಯ ವಿಚ್ಛೇದನ ಮುಂತಾದಲ್ಲಿ ಬದುಕಿನ ಸ್ವಾತಂತ್ರ್ಯ ದೊರಕುತ್ತವೆಯಾಗಿ ಯಾರು ಯಾರಿಗೂ ಅಧೀನರಾಗಿರಬೇಕಿಲ್ಲ. ಗಂಡನನ್ನು ಯಜಮಾನರು ಎಂದರೆ ಕೂಡ ಮುನಿದಾರು. ಹೆಣ್ಣು ಗಂಡು ಬೇಕಾದ ಉದ್ಯೋಗ ಗಳಲ್ಲಿ ತೊಡಗಿ ಸ್ವತಂತ್ರರಾಗಿ ನಡೆಯಲೂ ದುಡಿಯಲೂ ಬರೆಯಲೂ ಸಂಚಾರ ಮಾಡಲೂ ಅಧಿಕಾರ ಉಳ್ಳವರಾಗಿರುತ್ತಾರೆ. ಆದ್ದರಿಂದ ದಾಂಪತ್ಯ ಜೀವನದಲ್ಲಿ ಹೊಸ ಕಾಲದ್ದು ಮಹಾಯೋಗವಾಗುತ್ತದೆ. ಇದನ್ನು ನಾಳೆಯ ಹೆಣ್ಣು ಗಂಡು ಹೇಗೆ ನಿರ್ವಹಿಸುತ್ತಾರೆಯೊ ಜೀರ್ಣ ಮಾಡಿಕೊಳ್ಳುತ್ತಾರೆಯೊ–ಅದು ನಾಳೆಗೆ ರೂಢಿಸುವ ಮಂಗಳ. ಸಾವಿರಾರು ವರ್ಷಗಳಿಂದ ದೇವರು, ವ್ರತ, ನೇಮ, ಆಚಾರ ಮುಂತಾಗಿ ನಡಸಿಕೊಂಡು ಸಮಾಜವನ್ನು ನಡಸಿಕೊಟ್ಟವರು ಹೆಣ್ಣು ಮಕ್ಕಳು. ನಾಳೆಗೂ ತಮ್ಮ ಹೊಸರೀತಿಯಲ್ಲಿ ಇದನ್ನು ನಡಸಿಕೊಂಡಾರು. ವಿವಾಹಪದ್ಧತಿಯಲ್ಲಿ ಮತ್ತು ಸಮಾಜದ ವರ್ಗೀಕರಣದಲ್ಲಿ 'ತೇಽಪಿ ಯಾಂತಿ ಪರಾಂ ಗತಿಂ' ಎಂದು ಹೇಳಿ ಇಂದು ಉತ್ತೀರ್ಣ ರಾಗುವುದು ಕಷ್ಟ. ಪರಿಸ್ಥಿತಿ ಸೂಕ್ಷ್ಮವಾಗಿದೆ. ಸಮಾನತೆ-ಸ್ವಾತಂತ್ರ್ಯ ಎಂಬ ಹೆಸರಲ್ಲಿ ಅನೇಕ ದುಸ್ಸಾಹಸಗಳು ಕೂಡ ಕೆಲವು ಕಾಲ ಹುಟ್ಟಿಕೊಂಡಾವು. ಒಟ್ಟಿನಲ್ಲಿ ನಮ್ಮ

ಜನತೆ ಸಾಧು ಎಂದು ಈವರೆಗೂ ಕಂಡುಬಂದಿದೆ. ಹಾಗೆಯೇ ಉಳಿಯುತ್ತದೆಯೆ? ಹೀಗಾಗಿ ವರ್ಣವ್ಯವಸ್ಥೆ, ಅವರ್ಣೀಯರು, ಹೆಣ್ಣು ಗಂಡು ಸರಿಸಮಾನರಾಗಿ ಉಳಿಯುವ ನಾಳೆಯ ಕಾಲದಲ್ಲಿಯೂ ಈ ದೇಶದ ಮಾನ ಗುಣ ಶೀಲ ಸುಧಾರಿತವಾಗಿ ಉಳಿದು ಕೊಂಡಾವು ಎಂಬುದು ನನ್ನ ಆಸೆ. ಆ ಸಾಮರಸ್ಯ ಹೊಸತಾಗಿ ಸಾಧಿಸಬೇಕಾದ್ದು.[3]

3

ಈ ಉಪನ್ಯಾಸ ವೆಂಕಣ್ಣಯ್ಯನವರ ನೆನಪಿಗೆ ಸಂದುದು. ಅವರು ಲೋಕಸ್ವರೂಪ ವನ್ನು ತಿಳಿದಿದ್ದರು; ಕಷ್ಟನಿಷ್ಠುರ ಅನುಭವಿಸಿದ್ದರು. ಆ ಕಷ್ಟನಿಷ್ಠುರಗಳು ತಮಗೂ ಸಂಬಂಧಪಟ್ಟವರಿಗೂ ಆಗಿರಬಹುದು; ಇತರರಿಗೂ ಆಗಿರಬಹುದು. ಈ ಎಲ್ಲ ಸಂದರ್ಭಗಳಲ್ಲಿಯೂ ಅವರ ಮನಸ್ಸು ತಾಳ್ಮೆಯಿಂದ ಕೂಡಿರುತ್ತಿತ್ತು. ಒರಟು, ಕರ್ಕಶ ಆದ ಸನ್ನಿವೇಶ ಹುಟ್ಟಿಕೊಂಡಾಗ ತಮ್ಮನ್ನು ತಾವು ನಿಯಾಮಿಸಿಕೊಂಡು ನುಡಿ ಯುತ್ತಿದ್ದರು. ಇದೇ ಸುಶಿಕ್ಷಿತ ಸಂಸ್ಕಾರವಂತನ ಲಕ್ಷಣ. ಒಮ್ಮೆ ಅವರ ತಾಯಿಯವರೇ 'ಏನು ವೆಂಕಣ್ಣ, ನಿನಗೆ ಮನೆಯವರೂ ಒಂದೇ, ಹೊರಗಿನವರೂ ಬೀದಿಯವರೂ ಒಂದೇ. ಇತ್ತಕಡೆ ಸ್ವಲ್ಪ ಹೆಚ್ಚು ಗಮನ ಕೊಡಬಾರದೆ? ನನ್ನ ಮಾತನ್ನು ಕಿವಿ ಮೇಲೆ ಹಾಕಿಕೊ' ಎಂದರಂತೆ. ಅವರು ಹೇಳಿದ್ದು ಇವರನ್ನು ಯಾವುದೊ ಕಷ್ಟಕ್ಕೆ, ಅನ್ಯಾಯಕ್ಕೆ ಈಡು ಮಾಡುತ್ತದೆ ಎಂದು ಅರಿತು 'ಅಮ್ಮಾ, ನೀನೇ ನನಗೆ ಎಷ್ಟೋ ವೇಳೆ ಹೇಳಿದ್ದೀಯೆ: ನಾನೂ ಹಾಗೇ ಓದಿದ್ದೇನೆ, ಸರ್ವಸಮದೃಷ್ಟಿ ಅಗತ್ಯ ಎಂದು. ನೀನು ಈಗ ಹೇಳುತ್ತಿರುವುದು ನಿಜವೇ ಆದರೆ, ನಿನ್ನ ಪರೀಕ್ಷೆಯಲ್ಲಿ ನಾನು ಪ್ಯಾಸಾದೆ' ಎಂದರಂತೆ. ತಾಯಿಗೆ ಉತ್ತರ ರುಚಿಸಿತೊ ಇಲ್ಲವೊ. ತುಂಬ ಪ್ರೀತಿ ಬಾಂಧವ್ಯ ಅವರದು. ನ್ಯಾಯವಾದದ್ದನ್ನು ಅವರು ನಡಸುತ್ತಾರೆಂದು ಎಲ್ಲರೂ ವಿಶ್ವಾಸವಿಟ್ಟು ಕೊಂಡಿದ್ದರು. ಹೆಚ್ಚಾಗಿ ಮಹಾವಾಕ್ಯಗಳನ್ನು ಹೇಳುತ್ತಿದ್ದವರಲ್ಲ. ದೇವರ ಪೂಜೆ ಆಚಾರ ಮುಂತಾದ್ದನ್ನು ಹೊರಗಣ್ಣಿಗೆ ಹೊಡೆಯುವಂತೆ ಮಾಡುತ್ತಿರಲಿಲ್ಲ. ಒಂದರ್ಧ ಗಂಟೆ ಸ್ನಾನ ಮಾಡಿ ಆದ ಮೇಲೆ ಒಗೆದ ಬಟ್ಟೆ ಉಟ್ಟು ಮನೆಯಲ್ಲಿ ಸಂಗ್ರಹಿಸಿದ ಹೂವನ್ನೊ ಅಕ್ಷತೆಯನ್ನೊ ಮಂಟಪದಲ್ಲಿದ್ದ ದೇವರಿಗೆ ಹಾಕಿ ಮನಸ್ಸನ್ನು ಸಮಾಧಾನ ಪಡಿಸಿ ಕೊಳ್ಳುತ್ತಿದ್ದರು. ಮಂತ್ರಾದಿಗಳು ಅವರಿಗೆ ಬರುತ್ತಿದ್ದವೊ ಇಲ್ಲವೊ, ಅದನ್ನು ಇತರರು ಬೆಲೆಗಟ್ಟಬೇಕಿರಲಿಲ್ಲ. ಅಗಡಿಯ ಸಾಧುಗಳಾದ ಶೇಷಾಚಲ ಸದ್ಗುರುಗಳ ಸನ್ನಿಧಿ, ಪ್ರೀತಿವಿಶ್ವಾಸ ದೊರಕಿತ್ತು; ಆ ಸಾಧುಗಳ ನುಡಿ ನಡೆ ನೋಡಿದ್ದರು. ಅದನ್ನು ಹಿರಿಯರಾದ ಮಾಸ್ತಿಯವರು ಪದ್ಯದಲ್ಲಿ, ಗದ್ಯದಲ್ಲಿ ತಿಳಿಸಿದ್ದಾರೆ. ಶ್ರೀ ರಾಮಕೃಷ್ಣ ಪರಮಹಂಸರ

3. ಹಣವಿದ್ದವನಿಗೆ ನ್ಯಾಯ ದಕ್ಕುತ್ತದೆ; ಕೆಲವರು ಕೆಲವರಿಗಿಂತ ಹೆಚ್ಚು ಸಮ ಎಂಬಂತಹ ಆಕ್ಷೇಪಣೆಗಳುಂಟು, ನಿಜ. ಅಂಥ ಪ್ರಕರಣಗಳಲ್ಲಿ ಸರ್ಕಾರವೋ ನ್ಯಾಯವಾದಿ ಸಂಸ್ಥೆಗಳೋ ಹಣವಿಲ್ಲದವರ ಪರ, ತಬ್ಬಲಿ ಅನಾಥರ ಪರ ವಾದಿಸಿ ನ್ಯಾಯವನ್ನು ದೊರಕಿಸುವ ಏರ್ಪಾಡುಗಳನ್ನು ನಾಳೆ ಮಾಡಬಹುದು.



ಜೀವನ ಚರಿತ್ರೆ, ಅವರ ವಚನಗಳು ಅವರ ಮನಸ್ಸನ್ನು ತುಂಬಿದ್ದುವು. ತನ್ನ ಬಳಿ ಇದ್ದ, ಬಂದ ಎಲ್ಲರಿಗೂ ಹಿರಿಯರಾಗಿ ಅವರು ನಡೆದುಕೊಂಡರು, ನಡಸಿಕೊಂಡರು. ನನ್ನ ಬದುಕಿನ ಮೇಲೂ ಅದೇ ಪ್ರಭಾವ ಬೀರಿದ್ದಾರೆ. ಇನ್ನೂ ಮೈಸೂರಿನಲ್ಲಿ ಬೇರೆ ಮನೆ ಸಿಕ್ಕದಿದ್ದುದರಿಂದ ಕೆಲವು ತಿಂಗಳ ಕಾಲ ನನ್ನ ಜೊತೆಯಲ್ಲಿಯೇ ಇದ್ದರು. ಹೀಗೆ ಹತ್ತಿರದಲ್ಲಿ ಅವರನ್ನು ನೋಡುವ ಸೌಭಾಗ್ಯ ನನಗೆ ದೊರಕಿತ್ತು. ಅದು ಎಷ್ಟು ಉನ್ನತವಾದ ಜೀವ! ಅನ್ಯಾಯಕ್ಕೆ, ಹಿಂಸೆಗೆ ಒಳಗೆ ಕುದಿಯುತ್ತಿತ್ತು. ಒಂದು ಒಳ್ಳೆಯದು ನಡೆಯಿತು ಎಂದು ಕೇಳಿದಾಗ ಎಷ್ಟು ಸಂತೋಷ ಪಡುತ್ತಿತ್ತು ಎಂಬುದರ ನೆನಪು 'ಹೃದಯಸರಸಿಜೇ ದೀಪಮುದ್ಯುತ್ ಪ್ರಕಾಶಂ' ಎಂಬಂತೆ. ಅವರ ನೆನಪಿನ ಉಪನ್ಯಾಸ ಇದು. ಅವರು ನನಗೆ ಶ್ರೀ ಗುಂಡಪ್ಪನವರ ಪರಿಚಯ ಮಾಡಿಕೊಟ್ಟರು ಎಂದಿದ್ದೇನೆ. ಶ್ರೀಮಾನ್ ಗುಂಡಪ್ಪನವರ ಅಪ್ಪಣೆಯಂತೆ, ಅವರು ನಟ್ಟು ಬೆಳಸಿದ ಈ ಸಂಸ್ಥೆಯಲ್ಲಿ ನಾನು ಈ ಕೆಲವು ಮಾತುಗಳನ್ನಾಡುತ್ತಿರುವುದು ನನಗೆ ಮಹಾ ಸಮಾರಂಭ.

ಸುಮಾರು 1929–30ರ ಕಾಲದಿಂದ ಈವರೆಗೂ ನನಗೆ ಮಿತ್ರರಾಗಿ, ನಾನು ದುಡಿದ ಸಂಸ್ಥೆಗಳಲ್ಲಿ ತಾವೂ ದುಡಿದು, ಅನೇಕ ಗ್ರಂಥಗಳನ್ನು ರಚಿಸಿ, ಸ್ವಂತವಾಗಿ ಹಿಂದೆ ಕನ್ನಡಕ್ಕೆ ಇಲ್ಲದಿದ್ದ ರತ್ನನ ಪದಗಳು, ನಂಜಿಯ ಪದಗಳು, ನಾಗನ ಪದಗಳು ಮುಂತಾದುವನ್ನೂ ಪುರುಷ ಸರಸ್ವತಿ ಮಾರ್ಗದ ಕೃತಿಗಳನ್ನೂ, ಆ ಮೂಲಕ ಒಂದು ಹೊಸ ಬಗೆಯ ಸಾಹಿತ್ಯ ಪ್ರಸಂಗವನ್ನೂ ನಿರ್ಮಾಣ ಮಾಡಿ, ಶ್ರದ್ಧೆಯಿಂದ ಹಲವು ಧರ್ಮಗಳ ವ್ಯಾಸಂಗ ಪ್ರತಿಪಾದನೆ ಮಾಡಿ, ತಮ್ಮದೇ ಆದ ವಿಶೇಷ ಸ್ಥಾನವನ್ನು ಸಂಪಾದಿಸಿಕೊಂಡಿರುವ ಶ್ರೀ ರಾಜರತ್ನಂ ಅವರು ಕಲ್ಪಿಸಿದ ದತ್ತಿ–ಇವು ಸೇರಿ ಇಂದಿನ ನಾಲ್ಕು ಮಾತುಗಳನ್ನು ಇಲ್ಲಿ ಹೇಳಲು ಅವಕಾಶ ದೊರಕಿಸಿಕೊಟ್ಟಿವೆ. ಸಹನೆಯಿಂದ ಇದನ್ನು ಕೇಳಿದ ನಿಮಗೂ ನಮಃ.

❑

# II. ಅಂಕಣ ಬರೆಹ

## 1. ಲೋಕರಾಜಕೀಯದಲ್ಲಿನ ಎರಡು ಮುಖ್ಯ ಸಂಗತಿಗಳು

**ಲೋಕಸಮೀಕ್ಷೆ** ಎಂಬ ಹೆಸರಿನ ಈ ಮಾಲೆಯಲ್ಲಿ, ಲೋಕದಲ್ಲಿ ನಡೆಯುವ ಮುಖ್ಯಘಟನೆಗಳ ಸಮಾಲೋಚನೆಯನ್ನು ಸಾಧಾರಣ್ಯದಿಂದ ಮಾಡುವುದು ಸರಿಯಾದೀತು. ತಿಂಗಳಿಗೆ ಒಂದು ಸಲವಾದರೂ, ಶಕ್ಯವಾದರೆ ತಿಂಗಳ ಮೊದಲ ವಾರದಲ್ಲಿ, ಕಳೆದ ನಾಲ್ಕು ವಾರಗಳ ಲೋಕದ ಸ್ಥಿತಿಗತಿಗಳ ಸ್ಥೂಲ ರೇಖೆಗಳನ್ನು ಕಾಣಿಸಬಹುದು. ಆ ಕಾಲದಲ್ಲಿ ನಡೆದ ಮುಖ್ಯ ಸಂಗತಿಗಳೇನು? ಬೆಳೆದ ಸಂಬಂಧ ಗಳೇನು? ಲೋಕದ ಶಾಂತಿ, ಕ್ಷೇಮಗಳಿಗೆ ಸಹಾಯಕವಾಗುವುವು ಯಾವುವು? ವಿರಸ ಪ್ರಕರಣಗಳು ಯಾವುವು? ಯಾವ ನಡವಳಿಕೆಗಳಿಂದ ಪರಿಸ್ಥಿತಿ ಉತ್ತಮಗೊಳ್ಳುವ ಆಸೆ ಭರವಸೆ ಮೂಡುವಂತಿವೆ? - ಎಂಬುದನ್ನು ವರದಿ ಮಾಡುವುದು ಅಗತ್ಯ.

ಹಿಂದಿನ ಲೇಖನ ಒಂದರಲ್ಲಿ ಹೇಳಿದೆ: ವ್ಯಕ್ತಿಗಳಿಗೆ ಹೇಗೋ ಲೋಕಕ್ಕೂ ರಾಷ್ಟ್ರ ರಾಷ್ಟ್ರಗಳ ಸಂಬಂಧದ ಚರಿತ್ರೆಯಲ್ಲಿಯೂ ಹಾಗೇ ಒಂದು ಕರ್ಮಕಥೆ ಇದೆ ಎಂದು. ನಮ್ಮವರು ಪ್ರಾರಬ್ಧ ಎಂಬ ಒಂದು ಮಾತನ್ನು ಬಳಸುತ್ತಾರೆ. ಪ್ರಾರಬ್ಧ, ಸಂಚಿತ, ಆಗಾಮಿ ಎಂಬ ಮೂರು ಬಗೆಯದು ಕರ್ಮ. ಪ್ರಾರಬ್ಧ ಹಿಂದೆ ಆರಂಭವಾದದ್ದು. ಸಂಚಿತ ನಾವೇ ಸಂಪಾದಿಸಿ ಕೂಡಿಸಿದ್ದು. ಆಗಾಮಿ ಮುಂದೆ ಬರಲಿರುವುದು. ಪ್ರಾರಬ್ಧ ನಿಷ್ಠುರವಾದ್ದು. ಅದರ ಫಲಾಫಲಗಳನ್ನು ಅನುಭವಿಸಿಯೇ ತೀರಬೇಕು. ಕಣ್ಣೀರನ್ನಿಟ್ಟರಿಲ್ಲ, ನಿಟ್ಟುಸಿರುಬಿಟ್ಟರಿಲ್ಲ. ಅದನ್ನು ತಪ್ಪಿಸಿಕೊಳ್ಳುವ ಯಾವ ಉಪಾಯವೂ ಇಲ್ಲ. ಮನುಷ್ಯ ಹೊಸ ಕರ್ಮದ ಸಂಚಯದಲ್ಲಿ ಎಚ್ಚರಿಕೆ ಯಿಂದಿರಬಹುದು. ಬುದ್ಧಿವಂತರಾದವರು, ಲೋಕಸ್ವರೂಪ ಬಲ್ಲವರು, ಯುಕ್ತ-ಅಯುಕ್ತ, ಫಲ-ಅಫಲ ಎಂಬ ವಿವೇಚನೆಯುಳ್ಳವರು ಕೆಲವು ಬಗೆಯ ಕರ್ಮಗಳನ್ನು ತಾವೇ ನಿರ್ಣಯಿಸಬಹುದು. ಮಾಡಿದ್ದೆಲ್ಲ ಕರ್ಮ; ಮಾಡದೆ ಬಿಟ್ಟದ್ದೆಲ್ಲ ಕರ್ಮ; ಮಾಡಬೇಕಾದ್ದನ್ನು ಮಾಡದಿರುವುದು ಕರ್ಮ. ತಟಸ್ಥವಾಗಿ ಉದಾಸೀನವಾಗಿರುವುದೂ ಕರ್ಮವೇ. ಸಾಮಾನ್ಯ ಜೀವನದಲ್ಲಿ ನಿಷ್ಕರ್ಮ ಎಂಬುದಿಲ್ಲ. ಮಾಡುವುದನ್ನು ಮಾಡದಿರುವುದೂ ಮಾಡಕೂಡದುದನ್ನು ಮಾಡುವುದೂ ಎರಡೂ ದೋಷವೇ.

ಆಗಾಮಿ ಲೌಕಿಕ ಕಾರಣದಿಂದಾಗಬಹುದು. ದಿನಚರಿಯ ಲೌಕಿಕಕ್ಕೆ ಕಾಣಿಸದ 'ಅದೃಷ್ಟ'ದಿಂದ ಬರಬಹುದು. ಸದ್ಯಕ್ಕೆ ಅದೃಷ್ಟದ ವಿಚಾರ ಬೇಡ. ಅದು ಹೇಗೂ



ಕಣ್ಣಿಗೆ ಕಾಣಿಸದ್ದು. ಲೌಕಿಕ ಎಂಬುದರಲ್ಲಿ ಯಾರು ಯಾರೊ ಏನೇನೊ ಮಾಡಿ ಅದರ ಫಲವಾಗಿ ನಮ್ಮ ಮೇಲೆ, ನಮ್ಮ ರಾಷ್ಟ್ರದ ಮೇಲೆ ಉಂಟಾಗುವ ಪರಿಣಾಮ ಗಳು ಸೇರುತ್ತವೆ. ನಾವೆಷ್ಟೇ ಸರಿಯಾಗಿ ಎಚ್ಚರಿಕೆಯಿಂದ ಇರಲಿ, ಲೋಕಜೀವನದಲ್ಲಿ ನಮಗೆ ಸಂಬಂಧ ಪಡುವ ಎಲ್ಲರ ಕರ್ಮಫಲವೂ ನಮ್ಮ ಮೇಲೆ ಬೀಳುವುವು. ಅವರು ಪ್ರಬಲರಾಗಿ ವ್ಯಾಪಕರಾಗಿದ್ದಷ್ಟೂ ಲೋಕದ ಮೇಲೆ ಅವರ ಪ್ರಭಾವ ದೊಡ್ಡದಾಗುವುದು. ಎರಡು ಕೋಣಗಳು ಹೋರಾಡಿದರೆ ಅವುಗಳ ನಡುವೆ ಸಿಗುವ ಎಲ್ಲ ಗಿಡಗಳೂ ಮುರಿದು ಬೀಳುವುದು ಎಂಬುದುಂಟು. ಎರಡು ಪ್ರಬಲ ರಾಷ್ಟ್ರಗಳು ಹೋರಾಡುವಾಗ ನಡುವಣ ಸುತ್ತಮುತ್ತಲ ಎಲ್ಲ ರಾಷ್ಟ್ರಗಳಿಗೂ ಮಿತ್ತು. ಸುತ್ತ ಮುತ್ತ, ದೂರ ಇರುವ ರಾಷ್ಟ್ರಗಳಿಗೂ ಅದರ ಬೇಗೆ ಕಷ್ಟ ತಟ್ಟುವುವು. ಅಲ್ಲದೆಯೋ ಅವರು ಹೋರಾಡುವಾಗ ತಮ್ಮ ಪ್ರಯೋಜನಕ್ಕೆ ತಕ್ಕಂತೆ ನಡೆಯುವರು. ಅವರು ಉಳಿಸಿದರೆ ನಾವು ಉಳಿಯಬಹುದು. ಉದಾಹರಣೆಗಾಗಿ, ಸ್ವಿಟ್ಜರ್ಲೆಂಡಿನ ತಾಟಸ್ಥ್ಯವನ್ನು ಸುತ್ತಲ ಯಾವ ದೊಡ್ಡ ರಾಷ್ಟ್ರವಾದರೂ ಭಂಗಮಾಡಬಹುದು. ಅದು ನೆರೆಯವರ ಹಗೆಯನ್ನು ಎರಡು ದಿನ ಎದುರಿಸಲಾರದು. ಅದರ ತಾಟಸ್ಥ್ಯವನ್ನು ರಷ್ಯ, ಜರ್ಮನಿ, ಆಸ್ಟ್ರಿಯ, ಇಟಲಿ ನಡಸಿಕೊಡುತ್ತಿರುವುದರಿಂದ ಶಾಂತಿಯಿಂದ ಉಳಿದಿದೆ. ಹುಲಿ ಸಿಂಹಗಳು ಉಳಿಯಗೊಟ್ಟರೆ ತಾನೇ ಮೊಲ ಜಿಂಕೆಗಳ ಸ್ವಾಸ್ಥ್ಯ, ಹಿತ! ಇಲ್ಲವಾದರೆ ಅವುಗಳ ಹೊಟ್ಟೆಗೆ ಸೇರುವ ಭಾಗ್ಯ ಒಂದೇ ಈ ಪ್ರಾಣಿಗಳಿಗೆ ಉಳಿಯುವುದು! ಅವುಗಳ ಉಗುರು, ಹಲ್ಲು, ಶಕ್ತಿ ರಾಕ್ಷಸವಾಗಿರುವುದರಿಂದಲೇ ಉಳಿದವರ ರಕ್ಷಣಾತಂತ್ರ ಅದಕ್ಕೆ ತಕ್ಕಂತೆ ಬೆಳೆಯಬೇಕು.

ಸುತ್ತಲ ಚರಿತ್ರೆ, ಒಂದೊಂದು ದೇಶದ ಚರಿತ್ರೆಯನ್ನು ಮಾರ್ಪಡಿಸುತ್ತದೆ ಎಂದಾಯಿತು. ಯೂರೋಪಿನಲ್ಲಿ ನಡೆದ ಪ್ರಪಂಚದ ಮೊದಲ ಮಹಾಯುದ್ಧದ ಪರಿಣಾಮವಾಗಿ ಆಟ್ಟೋಮನ್ ಚಕ್ರಾಧಿಪತ್ಯ ಎಂಬ ತುರ್ಕಿಯ ಚಕ್ರಾಧಿಪತ್ಯ ಮುರಿದು ಒಡೆದು ಚೂರಾಯಿತು. ಅದಕ್ಕೆ ಸಂಬಂಧಿಸಿದ ಅರೇಬಿಯದ ಪ್ರಾಂತಗಳು ಬೇರೆಯಾದವು. ಉತ್ತರ ಆಫ್ರಿಕದ ಭಾಗಗಳನ್ನು ಯೂರೋಪಿನ ಮಿತ್ರರಾಷ್ಟ್ರಗಳವರು ಹಂಚಿಕೊಂಡರು. ಉತ್ತರ ಆಫ್ರಿಕದಲ್ಲಿ ತಮ್ಮ ವಸಾಹತುಗಳನ್ನು, ಮಾಂಡಲಿಕರನ್ನು, ಪ್ರಭಾವ ವಲಯಗಳನ್ನು ಮಾಡಿಕೊಂಡರು. ತಮ್ಮ ಸ್ಥಾನ ಮಾನ ಬಲಪಡಿಸಿಕೊಂಡು ಭೂಮಧ್ಯ ಸಮುದ್ರದ ದಕ್ಷಿಣದಲ್ಲಿ ಇರುವ ಆ ಭೂಭಾಗ ಅವರಿಗೆ ಅನುಕೂಲ ಸ್ಥಾನವಾಯಿತು. ಅಲ್ಲಿಗೆ ಹೊರಗಿನ ಇನ್ನಾರೂ ಬಾರದಂತೆಯೂ ಯಾರೂ ಇಲ್ಲಿಂದ ಇನ್ನೊಂದು ಕಡೆಗೆ ಇವರ ಇಷ್ಟವನ್ನು ಮೀರಿ ಹೋಗದಂತೆಯೂ ಏರ್ಪಡಿಸಿತು. ಎರಡನೇ ಮಹಾಯುದ್ಧದಲ್ಲಿ ಇದರ ಪ್ರಯೋಜನ ಬ್ರಿಟಿಷರಿಗೂ ರಾಷ್ಟ್ರೀಯ ಫ್ರೆಂಚರಿಗೂ ಇವರ ಮಿತ್ರರಾಗಿ ಬಂದ ಅಮೇರಿಕನ್ನರಿಗೂ ದೊರೆಯಿತು. ಸ್ವಲ್ಪಕಾಲ ಮಾತ್ರ ಅಬ್ಬರಿಸಿ ಅಬಿಸ್ಸೀನಿಯವನ್ನು ಆಕ್ರಮಿಸಿ ಬಂದ ಇಟಲಿಯವರನ್ನು ಮುರಿದು ಓಡಿಸಲು ನೆರವಾಯಿತು. ಜರ್ಮನರ ಆಕಾಂಕ್ಷೆಗಳು ಯೂರೋಪಿಂದ ಹರಡದಂತೆ

ಮಾಡಿತು. ಅಟ್ಲಾಂಟಿಕಿನಿಂದಲೂ ರಷ್ಯದಿಂದಲೂ ಗ್ರೀಸಿಗೆ ಸಹಾಯ ದೊರೆಯಲು ಅವಕಾಶ ಕೊಟ್ಟಿತು. ಮುಂದೆ ರಷ್ಯಾಕ್ಕೆ, ಇಂಗ್ಲಂಡ್ ಅಮೇರಿಕಾ ರಾಷ್ಟ್ರಗಳು ಯುದ್ಧ ಸಜ್ಜನ್ನು ಸಾಗಿಸಲು ನೆರವಾಯಿತು. ಈ ಭಾಗವನ್ನೂ ಭೂಮಧ್ಯ ಸಾಗರದ ಅನುಕೂಲ ಗಳನ್ನೂ ಒದಗಿಸಿಕೊಂಡು ಇಟಲಿಯನ್ನು ಜರ್ಮನಿಯು ಮುರಿಯಲೂ ಫ್ರಾನ್ಸನ್ನು ಪುನಃ ಆಕ್ರಮಿಸಲೂ ಯುಗೋಸ್ಲಾವಿಯಾಕ್ಕೆ ಸಹಾಯ ಕೊಡಲೂ ಅನುಕೂಲ ಒದಗಿಸಿತು.

ಮುರಿದ ಇನ್ನೊಂದು ಸಾಮ್ರಾಜ್ಯ ಆಸ್ಟ್ರಿಯ-ಹಂಗರಿಯದು. ಸಾವಿರ ವರ್ಷಕ್ಕೆ ಮೇಲ್ಪಟ್ಟ, ಬಾಳಿದ ಆ 'ಪವಿತ್ರ' ಚಕ್ರಾಧಿಪತ್ಯ ಒಡೆದು ಸತ್ವಹೀನವಾಯಿತು. ಹಂಗರಿ ಬೇರೆಯಾಯಿತು. ಸ್ವತಂತ್ರ ರಾಷ್ಟ್ರೀಯತೆಯನ್ನು ಬಯಸಿ ನೈರುತ್ಯದಲ್ಲಿ, ದಕ್ಷಿಣದಲ್ಲಿ, ಉದ್ದಕ್ಕೂ ಹೊಸದಾಗಿ ಸಣ್ಣ ಸಣ್ಣ ರಾಷ್ಟ್ರಗಳ – ಬಾಲ್ಕನ್ ರಾಷ್ಟ್ರಗಳೆಂಬ ಹೆಸರಿನ ಮಂಡಳ ಹುಟ್ಟಿ ಅನೇಕ ಸಮಸ್ಯೆಗಳನ್ನು ಯೂರೋಪಿನ ಜೀವನಕ್ಕೆ ತಂದವು. ಆಸ್ಟ್ರಿಯವೇ ದುರ್ಬಲವಾಗಿ ಜರ್ಮನಿ-ರಷ್ಯಗಳ ನಡುವೆ ದಿಕ್ಕು ತೋಚದಂತೆ ಅವರ ಮರ್ಜಿ ಕಾಯಬೇಕಾದ ಅಗತ್ಯಕ್ಕೊಳಗಾಯಿತು. 1870ರಿಂದ ಬೆಳೆದ ಯೂರೋಪಿನ ಚರಿತ್ರೆಯನ್ನು ಅರ್ಥಮಾಡಿಕೊಂಡಲ್ಲದೆ ಈ ಸಿಕ್ಕುಗಳು ಅರ್ಥವಾಗುವುದಿಲ್ಲ.

ಅಲ್ಲಿಂದ ತೊಡಗಿದ ಯೂರೋಪಿನ ಕರ್ಮಕತೆ ಪ್ರಪಂಚವನ್ನು ತೊಡಕು ಮಾಡಿದೆ. ಯೂರೋಪಿನ ದೊಡ್ಡ ರಾಷ್ಟ್ರಗಳವರು ಆಫ್ರಿಕದಲ್ಲಿ, ಅಮೇರಿಕದಲ್ಲಿ, ಏಷ್ಯದಲ್ಲಿ, ಆಸ್ಟ್ರೇಲಿಯಾದಲ್ಲಿ, ಪೂರ್ವ ಪಶ್ಚಿಮ ದ್ವೀಪ ಸಮುದಾಯದಲ್ಲಿ, ಉತ್ತರ ಧ್ರುವಗಳಲ್ಲಿ ಪ್ರಬಲರಾಗಿ ನಡಸಿರುವ ಪರಸ್ಪರ ಕೋಟಲೆಯ ಸಂಬಂಧದ ಚರಿತ್ರೆ ಈ ಸುಮಾರು 200-300 ವರ್ಷದಲ್ಲಿ – ಅದರಲ್ಲಿಯೂ ವಿಶೇಷವಾಗಿ ಈಚಿನ 70-80 ವರ್ಷಗಳಲ್ಲಿ – ವಿಧಿಯ ಕಾರ್ಯದಂತೆ ಲೋಕದ ಜನತೆಯ ಮೇಲೆ ಕವಿದು ಇತರ ರಾಷ್ಟ್ರಗಳ ಸುಖದುಃಖಗಳನ್ನು ರಚಿಸಿದೆ. ನಮ್ಮ ಸಮೀಕ್ಷೆಯಲ್ಲಿ ಈ ಪ್ರತಿಯೊಂದನ್ನೂ ವಿವರಿಸುವುದು ಶಕ್ಯವಿಲ್ಲ. ಮುಖ್ಯವಾದ ಒಂದೆರಡು ಸಂಗತಿಗಳ ನಿರ್ದೇಶನವನ್ನಷ್ಟೇ ಮಾಡುತ್ತೇನೆ.

ಎರಡನೆಯ ಯುದ್ಧದ ಪರಿಣಾಮವಾಗಿ ಎರಡು ಮುಖ್ಯ ಸಂಗತಿಗಳು ಹುಟ್ಟಿಕೊಂಡವು. 1) ರಷ್ಯ-ಅಮೇರಿಕಗಳಿಗೆ ನಡುವೆ, ಎಂದರೆ ರಷ್ಯ ಮತ್ತು ಅದರ ಪ್ರಭಾವ ವಲಯವಾದ ಪೂರ್ವ ಯೂರೋಪಿನ ರಾಷ್ಟ್ರಗಳಿಗೂ ಪಶ್ಚಿಮ ಯೂರೋಪಿನ ರಾಷ್ಟ್ರಗಳಲ್ಲಿ ಮಿತ್ರವರ್ಗವಾಗಿ ಜರ್ಮನಿಯೊಡನೆ ಯುದ್ಧ ಮಾಡಿ, ಇಂಗ್ಲೆಂಡ್ ಫ್ರಾನ್ಸಿನ ಸಹಾಯಕ್ಕೆ ನೆರೆದ ಅಮೇರಿಕಾಕ್ಕೆ ನಡುವೆ ಬೆಳೆದ ವಿರಸ 2) ಹೊಸ ಚೀಣದ ಹುಟ್ಟು. ಈ ವಿರಸ ದೈತ್ಯ ಪ್ರಮಾಣದ್ದು. ಕಳೆದ ಯುದ್ಧ, ಸ್ಥೂಲವಾಗಿ, ಜರ್ಮನಿ ಹೊತ್ತಿಸಿದ್ದು. ಜರ್ಮನಿ ಯುದ್ಧದಲ್ಲಿ ಸೋತಿತು. ಸೋತಾಗ ರಷ್ಯನರು ಒಂದು ಕಡೆಯಿಂದಲೂ ಪಶ್ಚಿಮ ರಾಷ್ಟ್ರಗಳವರು ಇನ್ನೊಂದು ಕಡೆಯಿಂದಲೂ ಬಂದು ಹಿಂದಿನ ಜರ್ಮನಿಗೆ ಸೇರಿದ್ದ ಭಾಗಗಳನ್ನು ಆಕ್ರಮಿಸಿ ಆಯಾ ಭಾಗಗಳಲ್ಲಿ ಜರ್ಮನ್ ಸೈನ್ಯದ



ಶರಣಾಗತಿಯನ್ನು ಪಡೆದರು. ಪೂರ್ವ ಭಾಗ ರಷ್ಯನರ ಪ್ರಭಾವಕ್ಕೆ ಒಳಪಟ್ಟಿತು. ಪಶ್ಚಿಮ ಜರ್ಮನಿ ಇಂಗ್ಲೆಂಡ್, ಅಮೇರಿಕಾ, ಫ್ರಾನ್ಸ್ ರಾಷ್ಟ್ರಗಳ ಪ್ರಭಾವಕ್ಕೆ ಸಿಕ್ಕಿತು. ಹಿಂದೆ ಜರ್ಮನಿಯ ರಾಜಧಾನಿಯಾಗಿದ್ದ ಬರ್ಲಿನ್ ನಗರ ಈ ಇಬ್ಬರ ಪ್ರಭಾವಕ್ಕೂ ಒಳಪಟ್ಟಿತು. ಬರ್ಲಿನ್ ಹೋಳಾಗಿ ಅದರ ಪೂರ್ವಾರ್ಧ ರಷ್ಯನರ ಅಂಕೆಗೂ ಕಮ್ಯುನಿಸ್ಟ್ ತತ್ವಕ್ಕೂ ಒಲಿದಿರುವ ಜರ್ಮನ್ ಡೆಮೊಕ್ರಾಟಿಕ್ ರಿಪಬ್ಲಿಕ್‌ಗೂ ಸೇರಿತು. ಬರ್ಲಿನಿನ ಪಶ್ಚಿಮದ ಭಾಗ ಪಶ್ಚಿಮ ಜರ್ಮನಿ, ಜರ್ಮನ್ ಫೆಡರಲ್ ರಾಷ್ಟ್ರಕ್ಕೆ ಸೇರಿ, ಪಶ್ಚಿಮ ರಾಷ್ಟ್ರಗಳ ರಕ್ಷಣೆಯಲ್ಲಿದೆ. ಪಶ್ಚಿಮ ಜರ್ಮನಿಯಲ್ಲಿ ಪಾಶ್ಚಿಮಾತ್ಯ ಬಗೆಯ ರಾಜಕೀಯ ಜೀವನ, ಚುನಾವಣಾ ಪದ್ಧತಿಗೆ ಒಳಗಾಗಿದೆ. ಸ್ವಾತಂತ್ರ್ಯಕ್ಕೂ ಸ್ವಾಧೀನತೆಗೂ ಅವಕಾಶ ವುಂಟಾಗಿ ಅದು ಆಡೆನೊವರರ ಪ್ರಭಾವದಲ್ಲಿ ಅಭಿವೃದ್ಧಿಗೊಂಡಿದೆ. ಪೂರ್ವದ ಭಾಗ ರಷ್ಯನ್ ಸೈನ್ಯದ ಮತ್ತು ಕಮ್ಯುನಿಸ್ಟ್ ಪಕ್ಷದ ಒತ್ತಡದಲ್ಲಿ ಗ್ರೋಟಿವ್ವಾಲ್ ಅವರ ಅಧಿಕಾರಕ್ಕೆ ಒಳಪಟ್ಟಿದೆ. ಬರ್ಲಿನ್ ಮಧ್ಯದ ಒಂದು ಭಾಗ ಇವರಿಗೆ, ಒಂದು ಭಾಗ ಅವರಿಗೆ ಸೇರಿ ಪರಮ ಅಭಿಮಾನಶಾಲಿಗಳಾದ ಜರ್ಮನರು ಒಡೆದು ಪರಸ್ಪರವಾಗಿ ವೈರವನ್ನು ಮಸೆಯುವಂತಾಗಿದೆ. ಈ ಹತ್ತು ವರ್ಷಗಳಲ್ಲಿ ಪೂರ್ವದಿಂದ 23 ಲಕ್ಷ ಮಂದಿ ಪಶ್ಚಿಮ ಜರ್ಮನಿಗೆ ವಲಸೆ ಬಂದಿದ್ದಾರೆ. ರಷ್ಯನರು ಪೋಲೆಂಡ್, ಬಾಲ್ಟಿಕ್ ರಾಜ್ಯಗಳು, ಆಸ್ಟ್ರಿಯ, ಹಂಗರಿ, ರುಮೇನಿಯ, ಬಲ್ಗೇರಿಯ, ಆಲ್ಜೀರಿಯ, ಸ್ವಲ್ಪ ಕಾಲ ಯುಗೋಸ್ಲಾವಿಯ (ಈಗ ಅದು ಪೂರ್ತಿ ಸ್ವತಂತ್ರವಾಗಿದೆ) ಪ್ರದೇಶದಲ್ಲಿ ತಮ್ಮ ಪ್ರಭಾವವನ್ನು, ಸೈನ್ಯವನ್ನು ನಟ್ಟಾದ ಮೇಲೆ ಝುಕೋಸ್ಲೊವಾಕಿಯವನ್ನು ಕಬಳಿಸುವಂತೆ ತಮ್ಮ ಆಧಿಪತ್ಯಕ್ಕೆ ತೆಗೆದುಕೊಂಡಾಗ, ಪಶ್ಚಿಮ ಮಿತ್ರ ಮಂಡಲದವರು ಹುಷಾರಾದರು. ಉತ್ತರ ಅಟ್ಲಾಂಟಿಕ್ ಕೌಲಿನ ಸಂಸ್ಥೆಯನ್ನು (NATO) ರಚಿಸಿಕೊಂಡು ರಕ್ಷಣಾ ವ್ಯವಸ್ಥೆ ಮಾಡಿಕೊಂಡರು. ಅದಕ್ಕೆ ಪೂರ್ಣ ಬೆಂಬಲ, ಪ್ರಧಾನ ಶಕ್ತಿಸ್ಥಾನ ಅಮೇರಿಕ. ಅಮೇರಿಕವನ್ನು ಹೇಗಾದರೂ ಮಾಡಿ ಯೂರೋಪಿನಿಂದ ಕಾಲ್ತೆಗೆಸಬೇಕೆಂದು ರಷ್ಯನರ ಮಹಾಪ್ರಯತ್ನ. ರಷ್ಯನರ ಮಹಾ ಪ್ರಭಾವವನ್ನು ಮುರಿದು, 1931ಕ್ಕೆ ಮುಂಚೆಯ ಯುದ್ಧ ಪೂರ್ವ ಕಾಲದಲ್ಲಿ ಸ್ವತಂತ್ರ ರಾಷ್ಟ್ರಗಳಾಗಿದ್ದ ರಾಷ್ಟ್ರಗಳಿಗೆ ಶಕ್ಯವಾದರೆ, ಪುನಃ ಸ್ವಾಧೀನತೆ ದೊರೆಯುವಂತೆ ಮಾಡಬೇಕೆಂಬುದೂ ಶಕ್ಯವಾಗದಿದ್ದರೆ ಯೂರೋಪಿನಲ್ಲಿಯೂ ಬೇರೆ ಕಡೆಯೂ ರಷ್ಯನ್ ಕಮ್ಯುನಿಸ್ಟ್ ಪ್ರಭಾವ ವಿಸ್ತಾರವಾಗದಂತೆ ತಡೆಯುವುದೂ ಇವರ ಆಶಯ. ಇದಕ್ಕಾಗಿ ವಿಶ್ವಸಂಸ್ಥೆಯಲ್ಲಿಯೂ NATO ಮೂಲಕವೂ ಇತರ ಒಪ್ಪಂದಗಳ ಮೂಲಕವೂ ಪಶ್ಚಿಮ ರಾಷ್ಟ್ರಗಳವರು ತಮ್ಮ ರಕ್ಷಣೆಯನ್ನೂ ಪ್ರಭಾವವನ್ನೂ ಬೆಳಸಿಕೊಳ್ಳುವ ಹವ್ಯಾಸದಲ್ಲಿದ್ದಾರೆ. ಈ ಎರಡು ವರ್ಗದ ವಿರಸ ಲೋಕಜೀವನವನ್ನು ಸಂತತವಾದ ಕಳವಳಕ್ಕೂ ಅಸ್ತಿಮಿತತೆಗೂ ಈಡುಮಾಡಿದೆ. ಇವರ ಸ್ನೇಹವಲಯ ಬೇರೆ, ಅವರವು ಬೇರೆ. ಕೆಲವನ್ನು ಅವರೂ ಇವರೂ, ಇಬ್ಬರೂ, ಬಯಸುತ್ತಿದ್ದಾರೆ. ಅಲ್ಲಿ ಆಗಾಗ್ಗೆ ತಳಮಳಗಳುಂಟಾಗಿ ಎರಡೂ ಕಡೆಯವರು ಭಯಪ್ರದರ್ಶನ ಮಾಡಿದ್ದಾರೆ. ಸದ್ಯಕ್ಕೆ ಯೂರೋಪಿನಲ್ಲಿ ಬರ್ಲಿನ್ ಪಟ್ಟಣದ

ಪ್ರಶ್ನೆ, ಜರ್ಮನ್ ಏಕೀಕರಣದ ಪ್ರಶ್ನೆ ಬಹುಕಾಲದಿಂದ ದೊಡ್ಡ ಪ್ರಶ್ನೆಗಳಾಗಿವೆ. ಬಾಯಿ ಮಾತಿಗೆ ಇಬ್ಬರೂ ಜರ್ಮನಿಯ ಐಕ್ಯವನ್ನು ಬಯಸುತ್ತಿದ್ದರೂ ಅದು ಸದ್ಯಕ್ಕೆ ಆಗುವ ಕಷ್ಟ ದೊಡ್ಡದು.

ಈ ಎರಡು ಪಕ್ಷಗಳವರು ಅರಬ್ ಪ್ರಪಂಚದಲ್ಲಿ ಪ್ರಭಾವಯುತರಾಗಲು ಪ್ರಯತ್ನಿಸುತ್ತಿದ್ದಾರೆ. ಪರ್ಷಿಯದಿಂದ ಹಿಡಿದು ಎಲ್ಲ ಅರಬ್ಬಿ ರಾಷ್ಟ್ರಗಳಲ್ಲಿಯೂ ಈಚಿನ ವರೆಗೂ ಇಂಗ್ಲಿಷ್, ಫ್ರೆಂಚ್ ಪ್ರಭಾವಗಳಿದ್ದವು. ಈಚೆಗೆ ಅಮೇರಿಕಾ ಪ್ರಭಾವ ಸೇರಿಕೊಂಡಿದೆ. ಆಫ್ರಿಕಾದಲ್ಲೆಲ್ಲಾ ಯೂರೋಪಿನ ಸ್ವಾಸ್ಥ್ಯಗಳೇ, ಅನುಕೂಲ ವರ್ಗಗಳೇ ಬಲಿತಿವೆ. ಇಂದು ಈಜಿಪ್ಟಿನ ಜನರಲ್ ನಾಸ್ಸೆರವರ ನಾಯಕತ್ವದಲ್ಲಿ ಸಂಯುಕ್ತ ಅರಬ್ ರಿಪಬ್ಲಿಕ್ (UAR) ಎಂಬ ಗಣರಾಜ್ಯ ಹುಟ್ಟಿ ಅರಬ್ ರಾಷ್ಟ್ರೀಯ ಪ್ರಭಾವವನ್ನು ಉತ್ತರದಲ್ಲಿ ಲೆಬೆನಾನಿಂದ ಹಿಡಿದು ದಕ್ಷಿಣದಲ್ಲಿ ಸೌದಿಅರೇಬಿಯಾ – ಸೂಡಾನ್ ವರೆಗೂ, ಪಶ್ಚಿಮದಲ್ಲಿ ಶಕ್ಯವಾದರೆ ಉತ್ತರ ಆಫ್ರಿಕದ ಎಲ್ಲ ಅರಬ್ಬೀ ಜನತೆಗಳವರೆಗೂ ಈ ಸಕಲ ಅರಬ್ಬೀ ಪ್ರಭಾವ ಬಲಗೊಳ್ಳಲು ಯತ್ನಿಸುತ್ತಿದೆ. ಆದರೆ ಈ ಕಾರ್ಯಗಳಲ್ಲಿನ ಅನೈಕಮತ್ಯ ಹೆಚ್ಚಿನದು. ಒಂದು ರಾಷ್ಟ್ರೀಯ ಅರಬ್ ತತ್ವ ಹಿಂದೆ ತುರ್ಕಿ ಆಡಳಿತಕ್ಕೆ ಒಳಪಟ್ಟಿದ್ದ ಅರಬ್ಬೀ ರಾಷ್ಟ್ರಗಳಲ್ಲೆಲ್ಲಾ ತಕ್ಕಮಟ್ಟಿಗೆ ಬಲಗೊಳ್ಳುತ್ತಿದೆ. ಅರಬ್ಬೀ ರಾಷ್ಟ್ರೀಯವಾದ ಎಲ್ಲರಿಗೂ ಬೇಕಿದ್ದರೂ, ನಾಸ್ಸೆರ್ ಪ್ರಾಬಲ್ಯದಿಂದ ಯುವಕ ಅರಬ್ಬೀಯರು ಸ್ಫೂರ್ತಿಗೊಂಡಿದ್ದರೂ, ಅನೇಕ ಬಗೆಯ ಅಸೂಯೆ, ಭಯ, ಸಂದೇಹ, ಒಳ ಪ್ರಯೋಜನ ಇವರನ್ನು ಇನ್ನೂ ಬೆಸೆಯದೆ ಬೇರೆ ಬೇರೆಯಾಗಿಯೆ ಇಟ್ಟಿವೆ. ಇವರೆಲ್ಲರಿಗೂ ಸಾಮಾನ್ಯವಾದ್ದು ಅರಬ್ಬೀ ರಾಷ್ಟ್ರೀಯ ಮನೋಭಾವ ಮೊದಲನೆಯದು. ಎರಡನೆಯದು, ಯುದ್ಧ ಫಲವಾಗಿ ಅದರ ಕೊನೆಯಲ್ಲಿ ನಿರ್ಮಾಣವಾದ ಯೆಹೂದ್ಯ ರಾಜ್ಯವಾದ ಇಸ್ರೇಲ್ ಮೇಲಿನ ದ್ವೇಷ. ಆ ಒಂದು ಸಣ್ಣ ರಾಷ್ಟ್ರವನ್ನು ಸದೆ ಬಡಿಯುವ ಪ್ರಯತ್ನ ಕೂಡ ನೆರವೇರುವ ಹಾಗಿಲ್ಲ. ಅದು ಇವರ ಆಕ್ರೋಶಕ್ಕೆ ಕಾರಣವಾಗಿದೆ.

ಇದರ ಜೊತೆಗೆ ಕಮ್ಯುನಿಸ್ಟ್ ವರ್ಗಗಳವರು ಅರಬ್ ರಾಷ್ಟ್ರಗಳಲ್ಲಿ ಸೇರಿ ಕೊಂಡು ಇವುಗಳನ್ನು ನಾಸ್ಸೆರ್ ಪ್ರಭಾವಕ್ಕೆ ಒಳಪಡದಂತೆ ಪಶ್ಚಿಮ ಪ್ರಭಾವಗಳಿಂದ ಬಿಡಿಸಿಕೊಳ್ಳುವಂತೆಯೂ ರಷ್ಯ ಪ್ರಭಾವಕ್ಕೆ ಒಳಪಡುವಂತೆಯೂ ಕಾರ್ಯ ಮಂಡಲ ವನ್ನು ರಚಿಸಿ, ಇದಕ್ಕೆ ಉತ್ತರದಲ್ಲಿ ರಷ್ಯ, ಪೂರ್ವದಲ್ಲಿ ಚೀಣ ಮಹತ್ ಪ್ರಯತ್ನಗಳನ್ನು ಮಾಡುತ್ತಿವೆ. ಪಶ್ಚಿಮ ಏಷ್ಯಾದಲ್ಲಿರುವ ಈ ಅರಬ್ಬೀ ರಾಜ್ಯಗಳ ಭವಿತವ್ಯ ಹೀಗೆ ಇತರರ ಚದುರಂಗದ ಆಟದಲ್ಲಿ ಸಿಕ್ಕಿಬಿದ್ದ ಕಾಯಿಗಳ ಅವಸ್ಥೆ.

ಹೋದ ಮಹಾಯುದ್ಧದ ಫಲವಾಗಿ ಏಷ್ಯದಲ್ಲಿ ನಡೆದ ಮಹದ್ಘಟನೆ, ಕಮ್ಯುನಿಸ್ಟ್ ಚೀಣದ ನಿರ್ಮಾಣ. ಸುನ್ಯಾತ್ ಸೇನರು ಹರಡಿದ ರಾಷ್ಟ್ರೀಯ ಭಾವದಿಂದ ಜಾಗ್ರತವಾಗಿ ಐಕಮತ್ಯಕ್ಕೆ ತಿರುಗುತ್ತಿದ್ದು ಚಿಯಾಂಗ್–ಕೈ–ಷೇಕ್ ಅವರ ನಾಯಕತ್ವದಲ್ಲಿ ಚೀಣದ ಆಡಳಿತ ಮೊದಲು ಚೆನ್ನಾಗಿ ನಡೆಯಿತು. ಆದರೆ ಅಲ್ಲಿ ಅಮೇರಿಕನ್



ಪ್ರಭಾವ ಮೊದಲಿಂದಲೂ ಹೆಚ್ಚಾಗಿ ಬೆಳೆಯಿತು. ಆದರೆ ಚಿಯಾಂಗ್-ಕೈ-ಷೇಕ್ ರಾಷ್ಟ್ರಶಕ್ತಿಯ ಬೆಳವಣಿಗೆಯನ್ನು ಮಾಡಲಾಯಿತು. ಶ್ರೀಮಂತರ, ಉದ್ಯೋಗ–ಕೈಗಾರಿಕೆಗಳ ನಾಯಕರ, ದೊಡ್ಡ ಜಮೀನುದಾರರ, ವ್ಯಾಪಾರಿಗಳ ಕೈ ಮೇಲಾಗಿ ದೇಶದಲ್ಲಿ ಲಂಚ ದೌರ್ಬಲ್ಯ ಹೆಚ್ಚಾಯಿತು. ರಷ್ಯನರ ಸಹಾಯದಿಂದ ಚೀಣದ ಕಮ್ಯುನಿಸ್ಟ್ ನಾಯಕರಾದ ಮೌತ್ಸೆಟುಂಗ್‌ರು ತಮ್ಮ ಬೆಂಬಲಿಗರ ನೆರವಿನಿಂದ ಏಷ್ಯದಲ್ಲಿನ ಚೀಣವನ್ನೆಲ್ಲಾ ವಶಮಾಡಿಕೊಂಡಿದ್ದಾರೆ. ಈಗ ಪೀಕಿಂಗನ್ನು ರಾಜಧಾನಿ ಮಾಡಿಕೊಂಡಿದ್ದಾರೆ. ಚಿಯಾಂಗ್-ಕೈ-ಷೇಕ್‌ರ ಬೆಂಬಲಿಗರನ್ನು ಏಷ್ಯದ ಪ್ರಧಾನ ಭಾಗದಿಂದ ಫಾರ್ಮೋಸಾಗೆ ಓಡಿಸಿದ್ದಾರೆ. ಇಂದು ಟಿಬೆಟ್ಟನ್ನು ಪೂರ್ತಿಯಾಗಿ ವಶ ಮಾಡಿಕೊಂಡು ತಮ್ಮ ಪ್ರಭಾವವನ್ನು ಅಖಂಡ ಏಷ್ಯದಲ್ಲಿ ಸ್ಥಾಪಿಸಲು ಸರ್ವ ಪ್ರಯತ್ನ ಮಾಡುತ್ತಿದ್ದಾರೆ. ಮೇಲೆ ಉತ್ತರ ಕೊರಿಯಾ, ದಕ್ಷಿಣದಲ್ಲಿ ಉತ್ತರ ವಿಯೆಟ್ನಾಮ್ – ಲಾವೋಸ್ ಕಡೆಗಳಲ್ಲಿ ಪರೋಕ್ಷವಾಗಿ ತಮ್ಮ ಪ್ರಭಾವವನ್ನು ಬೀರುತ್ತಿದ್ದಾರೆ. ಬರ್ಮ, ಇಂಡಿಯಗಳ ಮೇಲೆ ತಮ್ಮ ಬಿಸಿತಟ್ಟುವಂತೆ ಪ್ರಬಲಿಸುತ್ತಿದ್ದಾರೆ. ಈ ಎಲ್ಲ ಕಡೆಗಳಲ್ಲಿನ ಕಮ್ಯುನಿಸ್ಟ್ ಪಕ್ಷದ ಜನ, ಅಂತಾರಾಷ್ಟ್ರೀಯ ಕಮ್ಯುನಿಸ್ಟ್ ಸಾಧಕ ದಳ ಅವರಿಗೆ ನೆರವಾಗುತ್ತದೆ. ಪ್ರಪಂಚದ ಎಲ್ಲ ದೇಶ ಕಮ್ಯುನಿಸ್ಟ್ ಆಗುವವರೆಗೆ ಇವರಾರಿಗೂ ಶಾಂತಿ ಸಮಾಧಾನ ಇಲ್ಲ. ರಷ್ಯ – ಚೀಣ ಕಮ್ಯುನಿಸ್ಟ್‌ರ ತೀರ್ಥಕ್ಷೇತ್ರಗಳು, ಗಮ್ಯಸ್ಥಾನಗಳು. ಚೀಣದವರಾಗಲಿ, ರಷ್ಯದವರಾಗಲಿ ಯಾರ ಮೇಲೆ ಒತ್ತಾಯ ಹೂಡಿದರೂ ಬೇರೆ ಕಡೆ ಇರುವ ದೇಶದ ಕಮ್ಯುನಿಸ್ಟ್ ವರ್ಗದವರು ಅದನ್ನು ಆಕ್ರಮಣಕಾರಿ ಎನ್ನುವುದಿಲ್ಲ. ಈಚೆಗೆ ಕಮ್ಯುನಿಸ್ಟ್ ಅಧಿಕಾರಿಯಾದ ಜ್ಯೋತಿ ಬಸು ಅವರು ಕಲ್ಕತ್ತಾದಲ್ಲಿ ಹೇಳಿದಂತೆ, ಚೀಣ ಸಮಾಜವಾದಿ ಗಣರಾಜ್ಯವಾದ್ದರಿಂದ, ಅದು ಎಂದಿಗೂ ಯಾರ ಮೇಲೂ ಬೀಳದು. ಚೀಣ ಎಂದಿಗೂ ಆಕ್ರಮಣಕಾರಿಯಲ್ಲ ಎಂಬಂಥದು ಎಲ್ಲೆಲ್ಲಿಯೂ ಕಮ್ಯುನಿಸ್ಟ್‌ರ ವಾದ. ಅದರ ಬೇರು, ತೆನೆ ಸ್ವರಾಷ್ಟ್ರಗಳಲ್ಲಲ್ಲ; ಮಾಸ್ಕೋದಲ್ಲಿ, ಬೀಜಿಂಗಲ್ಲಿ. ಪೂರ್ವವನ್ನೆಲ್ಲ ತಮ್ಮ ವಶಪಡಿಸಿಕೊಳ್ಳಬೇಕೆಂಬುದು ಚೀಣದ ಪ್ರಯತ್ನ.

ರಷ್ಯ, ಚೀಣ ಎರಡೂ ಎರಡು ತರಹವಾಗಿ ಕೈ ಸೇರಿಸಿ ಕೆಲಸಮಾಡುತ್ತವೆ. ಅವರೊಳಗೊಳಗೆ ಏನು ಅಸಮಾಧಾನ, ಭಾವಭಿನ್ನತೆ ಇರಲಿ. ಇನ್ನು, ಕಮ್ಯುನಿಸ್ಟ್ ಆಗದ ರಾಷ್ಟ್ರಗಳಲ್ಲಿ ಒಬ್ಬರು ಸಹಾಯ ಕೊಡುವಂತೆ ಕಂಡಾಗ ಇನ್ನೊಬ್ಬರು ಬೆದರಿಕೆ ಹಾಕುವುದು ಕೆಲವು ಕಾಲದಿಂದ ನಡೆದು ಬರುತ್ತಿರುವ ಲಕ್ಷಣ. ರಷ್ಯ ಯುಗೋಸ್ಲಾವಿಯಾದೊಡನೆ ಸಮಾಧಾನದಿಂದ ಇದ್ದರೆ ಚೀಣ ಅದನ್ನು ತೆಗಳುವುದು. ರಷ್ಯ ಪೋಲೆಂಡನ್ನು ಅಂಕೆಯಲ್ಲಿಡಬೇಕೆಂದಾಗ ಚೀಣ ಅದಕ್ಕೆ ಕೆಳೆ ಸಂದೇಶವನ್ನು ಕಳಿಸುವುದು. ರಷ್ಯ ಅರಬ್ ರಾಷ್ಟ್ರಗಳನ್ನು ಒಲಿಸಿಕೊಳ್ಳುವಂತೆ ಪ್ರಯತ್ನಿಸಿದರೆ ಚೀಣ ಈಜಿಪ್ಟಿನ ಮೇಲೆ ಆಕ್ಷೇಪಣೆಯ ಮಾತಾಡಲು ಇನ್ನೊಂದು ಅರಬ್ಬೀ ದೇಶದ ವಕ್ತಾರರಿಗೆ ತನ್ನ ಉತ್ಸವಗಳಲ್ಲಿ ಅವಕಾಶ ಕೊಡುವುದು. ಎರಡೂ ರಾಷ್ಟ್ರಗಳೂ ಇರಾಕಿನ ಬಿಕ್ಕಟ್ಟಿನಲ್ಲಿ ಜನರಲ್ ಖಾಸಿಂ ಅವರನ್ನು ವಿಚಿತ್ರ ಸನ್ನಿವೇಶಕ್ಕೆ ಸಿಕ್ಕಿಸಿಕೊಂಡಿರುವಂತೆ ಕಾಣುತ್ತದೆ.

ಈ ರಾಜಕೀಯದ ಪರಿಣಾಮ ಮುಂದೆ ಹೇಗೆ ರೂಪುಗೊಳ್ಳುವುದೋ ಅದರಂತೆ ಇತರ ಸಣ್ಣಪುಟ್ಟ ರಾಷ್ಟ್ರಗಳ ಭಾಗ್ಯ ನಿರ್ಣಯವಾಗಲಿದೆ. ಇಂದು ಯಾವ ರಾಷ್ಟ್ರವೂ ಈ ಅಂತಾರಾಷ್ಟ್ರೀಯ ದೈತ್ಯರಾಜಕೀಯಕ್ಕೆ ಭಯಪಟ್ಟುಕೊಂಡೇ ಬಾಳಬೇಕಾಗಿರುವುದು. ಇದರಿಂದ ಹೊರಗಿರಬೇಕೆಂಬ ನಮ್ಮಂಥ ರಾಷ್ಟ್ರಗಳವರಿಗೂ ಈ ಬಿಸಿ, ಕಹಿ ವಿಷ ಒಂದಲ್ಲ ಒಂದು ರೀತಿಯಲ್ಲಿ ತಟ್ಟುತ್ತಲೇ ಇದೆ. ವಿದೇಶಿ ವ್ಯವಹಾರದಲ್ಲಿ ನಮ್ಮ ದೇಶದ ವ್ಯವಹಾರವೇ ಸರ್ವ ಪ್ರಧಾನವಾದ್ದಲ್ಲ. ಹೊರಗಿನವರ ನಡವಳಿಕೆಯಿಂದಲೂ ಅದರ ತಾಪದಿಂದಲೂ ನಾವು ನಿರಂತರವಾಗಿ ತಪ್ಪಿಸಿಕೊಂಡು ಬಾಳಬೇಕಾಗಿದೆ. ಒಳ ಐಕ್ಯತೆ, ರಾಷ್ಟ್ರದ ಸಂಘಟನೆ ಎಷ್ಟು ದೃಢವಾಗಿ ಸಮರಸದಿಂದ ಬೆಳೆದರೆ, ಅಷ್ಟು ಅಷ್ಟು ಚೆನ್ನಾಗಿ ನಾವು ಆತ್ಮರಕ್ಷಣೆ ಮಾಡಿಕೊಳ್ಳಬಹುದು. ಇಲ್ಲವಾದರೆ ಹೊರಗಿನವರ ಕೋಟಲೆ ವ್ಯವಹಾರಗಳು ನಮ್ಮನ್ನು ಮುರಿಯುವುವು, ನಾಶಮಾಡುವುವು. ನಮ್ಮ ಸ್ವಾಯತ್ತತೆ ಮಣ್ಣುಪಾಲಾಗುವುದು.

(ಡಿಸೆಂಬರ್ 1959)

❑

## 2. ಹೊಸ ದಶಕದ ಹೊಸ್ತಿಲಲ್ಲಿ

ವರ್ಷ-ದಶಕ-ಕಾಲು ಶತಮಾನ-ಅರ್ಧ ಶತಮಾನ- ಶತಮಾನ ಎಂಬ ಮಿತಿಗಳನ್ನು ಹಾಕಿಕೊಂಡು ಮನುಷ್ಯರ ಜೀವನದಲ್ಲಿ ನಡೆಯುವುದನ್ನು ಪರಿಶೀಲಿಸುವುದು ವಾಡಿಕೆ. ನಡೆಯುವ ಸಂಗತಿಗಳಿಗೆ ಆ ಗಮನವಿಲ್ಲ. ಅವು ತಮ್ಮಂತೆ ನಡೆಯುತ್ತವೆ. ಎಂದೋ ಆರಂಭವಾಗಿ, ಹೇಗೋ ಬೆಳೆದು, ಹೇಗೋ ಕೊನೆಗೊಳ್ಳುತ್ತವೆ. ಒಂದು ಕಾಲದ ಅವಧಿಯಲ್ಲಿ ಏನೇನು ನಡೆಯಿತು? ಹೇಗೆ? ಏಕೆ?-ಎಂದು ವರ್ಗೀಕರಿಸಿ ಪರಿಶೀಲಿಸುವುದು ಮನುಷ್ಯ ಸ್ವಭಾವ. 1960ರಲ್ಲಿ ಹಿಂದಿನ ದಶಕ ಕಳೆದು ಹೊಸದಶಕ ಆರಂಭವಾಗುತ್ತಿದೆ. ಅದರ ಹೊಸ್ತಿಲಿನಲ್ಲಿರುವಾಗ ಮುಂದಿನ 10 ವರ್ಷಗಳಲ್ಲಿ ಲೋಕದ ಪರಿಸ್ಥಿತಿ ಹೇಗಿದ್ದೀತು? ಹೇಗಾದೀತು? - ಎಂದು ಕೆಲವು ಊಹೆ, ಕಲ್ಪನೆಗಳನ್ನು ಇಲ್ಲಿ ಮಾಡಬಹುದು. ಯಾವುದೂ ಹಟಾತ್ತಾಗಿ ಕಾರಣವಿಲ್ಲದೆ ನಡೆಯುವುದಿಲ್ಲ. ಈ ವರೆಗೂ ನಡೆದ ಸಂಗತಿಗಳ ಪರಿಣಾಮವಾಗಿ ಮಾತ್ರವೇ ಲೋಕಚರಿತ್ರೆ ಕಟ್ಟುತ್ತದೆ. ಅವುಗಳ ಪರಿಣಾಮವಾಗಿಯೇ ಸ್ನೇಹ, ವೈರ, ತಾಟಸ್ಥ್ಯ, ಉದಾಸೀನ ಭಾವಗಳು ಉಂಟಾಗುತ್ತವೆ. ಎಲ್ಲ ಕಾಲದಲ್ಲಿಯೂ ಪ್ರಧಾನ ಸಂಗತಿಗಳುಂಟು. ಉಪ / ಅಧೀನ ಸಂಗತಿಗಳುಂಟು. ಇನ್ನು ಕೆಲವು ಒಟ್ಟು ಲೋಕದ ದೃಷ್ಟಿಯಿಂದ ಮಹತ್ತರವಲ್ಲ. ಆಯಾ ಜನಕ್ಕೂ ಪ್ರದೇಶಕ್ಕೂ ಅವು ಸಾವು ಬದುಕುಗಳ, ಸುಖ ದುಃಖಗಳ ಪ್ರಸಂಗಗಳಾಗಿರಬಹುದು. ಪ್ರಪಂಚದ ಗತಿಯನ್ನು ಹೆಚ್ಚು ಕಡಮೆ ಮಾಡಬಲ್ಲ ಸತ್ವ ಅವಕ್ಕಿಲ್ಲವಾದ್ದರಿಂದ ಅವುಗಳ ಗೌರವ ಅಷ್ಟು ದೊಡ್ಡದಾಗದು.

ಸದ್ಯಕ್ಕೆ ದಕ್ಷಿಣ ಅಮೇರಿಕ, ಆಸ್ಟ್ರೇಲಿಯಾ ಖಂಡಗಳಿಗೆ ಸೇರಿದ ಸಂಗತಿಗಳನ್ನು ಗಮನಿಸಬೇಕಾಗಿಲ್ಲ. ದಕ್ಷಿಣ ಅಮೇರಿಕದ ಸಣ್ಣ ದೊಡ್ಡ ರಾಷ್ಟ್ರಗಳಲ್ಲಿ ಜನವರ್ಗ ಯಾವ ಹೆಚ್ಚು ಪ್ರಜಾಧಿಪತ್ಯಕ್ಕೂ ಒಳಪಡವು. ನಿರಂಕುಶಾಧಿಕಾರಿಗಳು ಸೈನ್ಯದ ಬಲದಿಂದ ಅಥವಾ ರಾಜಕೀಯ ಪಕ್ಷಗಳ ಹಲವು ಬಗೆಯ ಪಿತೂರಿಗಳಿಂದ ಆಡಳಿತಗಳನ್ನು ಮಾರ್ಪಡಿಸುತ್ತಿದ್ದಾರೆ. ಆ ರಾಷ್ಟ್ರಗಳಿಗೆ ಬೇಕಿರಲಿ ಬೇಡದಿರಲಿ, ಅಮೇರಿಕ ಸಂಯುಕ್ತ ಸಂಸ್ಥಾನ ಆ ಭಾಗದಲ್ಲೆಲ್ಲಾ ಯೂರೋಪಿನ ಯಾವ ಪ್ರಬಲರಾಷ್ಟ್ರ ಪ್ರಭಾವವೂ ಬೀಳದಂತೆ ಎಚ್ಚರವಾಗಿ ಸಾಗರಗಳಲ್ಲಿ ಕಾದಿದೆ. ಮಧ್ಯ ಅಮೇರಿಕದ ಕತೆಯೂ ಹೀಗೇ. ಉತ್ತರದ ಕೆನಡಾದಲ್ಲಿ ಶಾಂತಿ, ಸಮೃದ್ಧಿ ನೆಲಸಿವೆ. ಅದು ಬ್ರಿಟಿಷರ-ಅಮೇರಿಕನರ

ಕೆಳೆಗೆ ಬಲಿದದ್ದು. ಇತ್ತ ಆಸ್ಟ್ರೇಲಿಯಾ, ನ್ಯೂಸಿಲೆಂಡ್ ರಾಷ್ಟ್ರಗಳಲ್ಲಿ ಸುಭಿಕ್ಷೆ, ಶಾಂತಿ, ಪ್ರಜಾಧಿಪತ್ಯ ನೆಲಸಿವೆ. ಲೋಕಶಾಂತಿಗೆ ಅವುಗಳಿಂದ ನೆರವಾದೀತೇ ಹೊರತು ಭಯವಿರುವ ಹಾಗಿಲ್ಲ. ಪೂರ್ವದ ಪೆಸಿಫಿಕ್ ಸಾಗರದ ದ್ವೀಪವಾಸಿಗಳು, ಪಶ್ಚಿಮದ ಅಟ್ಲಾಂಟಿಕ್ ದ್ವೀಪ ಸಮುದಾಯ ಕ್ರಾಂತಿಗಳಿಗೆ ಈಡಾಗಿವೆ. ಪಶ್ಚಿಮದ ಕ್ಯೂಬದಲ್ಲಿ ಜನರಲ್ ಕ್ಯಾಸ್ಟ್ರೋ ಅವರ ಶಕ್ತಿ-ಅಶಕ್ತಿಗಳೆರಡೂ ಕಾರ್ಯಕಾರಿಯಾಗಿದ್ದರೂ ಒಂದು ಕಡೆ ಬ್ರಿಟಿಷರ ಪ್ರಭಾವ, ಇನ್ನೊಂದು ಕಡೆ ಅಮೇರಿಕದ ಭಯ ಕೆರಿಬಿಯನ್ ಸಮುದ್ರದ ಆ ಪಶ್ಚಿಮ ದ್ವೀಪ ಸಮುದಾಯದ ಸ್ಥಿತಿಗತಿಗಳಿಂದ ಹೆಚ್ಚು ಅಲ್ಲಕಲ್ಲೋಲ ಆಗದಂತೆ ತಡೆದಿವೆ. ಪೂರ್ವ ದ್ವೀಪಗಳಲ್ಲಿ ಡಚ್ಚರಿಂದ ಬಿಡುಗಡೆ ಹೊಂದಿದ ಇಂಡೋನೇಷ್ಯ, ಶಕ್ತರಾದ ಸೈನ್ಯ ಬಲವುಳ್ಳವರ ದರ್ಪದಲ್ಲಿ ತನ್ನ ಚರಿತ್ರೆಯನ್ನು ರೂಪಿಸಿಕೊಳ್ಳುತ್ತಿದೆ. ಮಲಯ ಸಂಸ್ಥಾನಗಳು ಸ್ವತಂತ್ರವಾಗಿವೆ. ಸಿಂಗಪುರ ಸ್ವತಂತ್ರವಾಗಿ ಮಲಯ ಸಂಸ್ಥಾನಗಳಲ್ಲಿ ಸೇರಿಕೊಳ್ಳುವ ಹಾಗಿದೆ.

ಮುಖ್ಯವಾಗಿ ನಾವು ಯೋಚಿಸಬೇಕಾದ್ದು ಯೂರೋಪ್, ಏಷ್ಯ, ಆಫ್ರಿಕ ಖಂಡಗಳ ಪರಿಸ್ಥಿತಿಯನ್ನು. ಕಳೆದ ದಶಕದಲ್ಲಿ ಲೋಕಕ್ಕೆಲ್ಲ ತಟ್ಟಬಹುದಾದ ದೊಡ್ಡ ತೊಂದರೆ ಒಟ್ಟು ಆಫ್ರಿಕದಲ್ಲಿ ಯಾವುದೂ ನಡೆಯಲಿಲ್ಲ. ಸೂಯೆಜ್ ಕಾಲುವೆಗೆ ಸಂಬಂಧಿಸಿದ ಒಂದು ಪ್ರಕರಣ ಮಾತ್ರ ಲೋಕಕ್ಕೆ ತಲ್ಲಣವನ್ನುಂಟು ಮಾಡಿತು. ಅಮೇರಿಕದ ತ್ವರಿತ ಕಾರ್ಯದಿಂದ ಅದು ಬೇಗ ಉಪಶಾಂತವಾಯಿತು. ಆಫ್ರಿಕದಲ್ಲಿ ಯೂರೋಪಿನ ಬಿಳಿಯರು ಹತ್ತರಲ್ಲಿ ಒಂದು ಭಾಗ ಇದ್ದರೂ ಅವರ ಪ್ರಾಬಲ್ಯ ಎಲ್ಲೆಡೆಯೂ ಇನ್ನೂ ಬಲಿದಿದೆ. ಘಾನ, ಗೋಲ್ಡ್ ಕೋಸ್ಟ್ ಸ್ವತಂತ್ರವಾದ ರಾಷ್ಟ್ರಗಳಾದರೂ ನೈಜೀರಿಯಾ, ರೊಡೀಷಿಯಾ, ನಯ್ಯಾಸಲ್ಯಾಂಡ್ ಮುಂತಾದವು ಇಂದಿನ 10 ವರ್ಷದಲ್ಲಿ ಸ್ವತಂತ್ರವಾಗುವ ಸಂಭವವಿದೆಯಾದರೂ ಉತ್ತರ ಮತ್ತು ಮಧ್ಯ ಆಫ್ರಿಕದ ಅನೇಕ ಭಾಗಗಳಲ್ಲಿ ಆಫ್ರಿಕನ್ನರಿಗೂ ಬಿಳಿಯರಿಗೂ ಹೆಚ್ಚು ಒಡಂಬಡಿಕೆಯಾಗುವ ಅವಕಾಶವಿದೆ. ಯೂರೋಪಿನ ಪ್ರಬಲ ರಾಷ್ಟ್ರಗಳು ಔದಾರ್ಯದಿಂದ ನಡೆದರೆ, ಈ ಭಾಗವೆಲ್ಲ ಸುಖ ಶಾಂತಿಗಳಿಂದ ಏಳಿಗೆ ಪಡೆಯಬಹುದು. ಸಹಾರಾ ಮರುಭೂಮಿಯ ಬಸಿರು ಬಗೆದು ಅಲ್ಲಿಂದ ಪೆಟ್ರೋಲ್, ಕಲ್ಲಿದ್ದಲು, ನಾನಾ ಖನಿಜಗಳು, ಇತರ ಬಗೆಯ ಸಂಪತ್ತಿ ಈ ವರೆಗೆ ಎಣಿಸದ ಪ್ರಮಾಣದಲ್ಲಿ ಉತ್ಪನ್ನವಾಗಿ, ಮರುಭೂಮಿ ಅರಳಿ ನಂದನವನವಾದೀತು. ಅದು ನಾಳಿನ ಕತೆ. ದಕ್ಷಿಣ ಆಫ್ರಿಕದಲ್ಲಿ ಮಾತ್ರ ಒಂದು ಮೊಂಡುತನವೂ ವರ್ಣದ್ವೇಷವೂ ಎಲ್ಲಿ ವಿಷಮಿಸಿ ಗಾಸಿ ಹೆಚ್ಚಾದೀತೋ ಎನ್ನಿಸುತ್ತದೆ. ಆದರೂ ಎಷ್ಟು ಮಂದಿ ಯೂರೋಪಿಯನ್ನರು, ಎಷ್ಟು ದಿನ ಮುಷ್ಟಿ ಬಿಗಿ ಹಿಡಿದಾರು? ಆಫ್ರಿಕನ್ನರು ಕಣ್ಣು ತೆರೆಯುತ್ತಿದ್ದಾರೆ, ವಿದ್ಯೆ ಶಿಕ್ಷಣ ಪಡೆಯುತ್ತಿದ್ದಾರೆ, ಬೇರೆ ದೇಶಗಳಿಗೆ ಸಂಚಾರ ಹೋಗುತ್ತಿದ್ದಾರೆ. ಅಲ್ಲಿನ ಸೌಖ್ಯ ನೋಡಿ ಬಂದು ತಾವೂ ಏಳಿಗೆಗೆ ದುಡಿಯ ಬೇಕೆಂದು ಆಶಿಸುತ್ತಿದ್ದಾರೆ. ಈ ದಶಮಾನದಲ್ಲಿಲ್ಲದಿದ್ದರೆ ಮುಂದಿನದರಲ್ಲಿಯಾದರೂ ಆಫ್ರಿಕದ ಮುಕ್ಕಾಲು ಭಾಗ ಸ್ವತಂತ್ರವಾಗುತ್ತದೆ. ಇಲ್ಲಿ ಕೂಡ ಯೂರೋಪ್ -



ಅಮೇರಿಕದಲ್ಲಿ ಪ್ರಬಲವಾಗಿರುವ ಸತ್ವ ಪ್ರಭಾವಗಳು ಈ ಏಳಿಗೆಯನ್ನು ಚುರುಕುಗೊಳಿಸುತ್ತದೆ ಎನ್ನಿಸುತ್ತದೆ. ಅಮೇರಿಕದ, ಫ್ರಾನ್ಸಿನ, ರಷ್ಯದ, ಇಸ್ರೇಲಿನ ಪ್ರಭಾವ ಒಂದೊಂದೂ ಒಂದೊಂದು ರೀತಿಯಲ್ಲಿ ಈ ಸಿದ್ಧಿಗೆ ನೆರವು ಕೊಡಲಿದೆ.

ಆಫ್ರಿಕದ ಉತ್ತರ ಭಾಗದಲ್ಲಿ ವಾಯವ್ಯದ ಸಣ್ಣ ಸಣ್ಣ ರಾಷ್ಟ್ರಗಳು ಸ್ವತಂತ್ರವಾಗಿ ಬೆಳೆಯುತ್ತಿವೆ. ಮೊರಾಕ್ಕೊ, ಟ್ಯೂನಿಸ್ ಫ್ರೆಂಚರಿಂದಲೂ ಸ್ಪೈನಿನವರಿಂದಲೂ ಬಿಡುಗಡೆ ಹೊಂದಿ ಏಳ್ಗೆಗೊಳ್ಳುತ್ತಿವೆ. ಆಲ್ಜೀರಿಯಾದಲ್ಲಿ ಇಷ್ಟರಲ್ಲೇ ರಾಷ್ಟ್ರೀಯ ಆಲ್ಜೀರಿಯನ್ನರಿಗೂ ಫ್ರೆಂಚ್ ಆಡಳಿತದವರಿಗೂ ಒಡಂಬಡಿಕೆ ಆದೀತು. ಇಲ್ಲದಿದ್ದರೆ ಉತ್ತರ ಆಫ್ರಿಕದ ಮುಸ್ಲಿಂ ಅರಬ್ ರಾಷ್ಟ್ರಗಳ ಶಾಂತಿ ಸೌಹಾರ್ದ ಫ್ರಾನ್ಸಿಗೆ ಉಳಿಯುವಂತಿಲ್ಲ; ಅಮೇರಿಕ –ಇಂಗ್ಲಂಡಿನ ಸೌಹಾರ್ದ ಉಳಿಯುವುದಿಲ್ಲ; ಪ್ರಪಂಚದ ವಿಶ್ವಾಸ ಫ್ರಾನ್ಸಿನ ಕಡೆಗಿರುವುದಿಲ್ಲ. ಆಲ್ಜೀರಿಯಾವನ್ನು ಸುಮಾರು ಸುಮುಖವಾಗಿಟ್ಟುಕೊಳ್ಳುವವರೆಗೂ ಅದನ್ನು ದಾಟಿ ಸಹಾರಾವನ್ನು ರೂಢಿಸಿಕೊಂಡು ಪುನಃ ತನ್ನ ಯೂರೋಪಿಯನ್ ಗರಿಮೆಯನ್ನು ಸ್ಥಾಪಿಸಿಕೊಳ್ಳಲಾಗುವುದಿಲ್ಲ. ತಕ್ಷಣದಲ್ಲಿ ಆಲ್ಜೀರಿಯಾದಲ್ಲಿ ನೆಲಸಿರುವ 10 ಲಕ್ಷ ಮಂದಿ ಫ್ರೆಂಚರ ಒರಟುತನವನ್ನು ರಕ್ಷಿಸಲು ಪ್ರೆಸಿಡೆಂಟ್ ಡಿಗಾಲ್ ಆಲ್ಜೀರಿಯಾದ ರಾಷ್ಟ್ರಕರನ್ನು ಸಮಾಧಾನಪಡಿಸದಿದ್ದರೆ ಫ್ರಾನ್ಸಿನ ಅಭಿವೃದ್ಧಿಯೇ ಹಿಂದೆ ಬಿದ್ದೀತು. ತಮ್ಮ ಹಣಕಾಸಿನ ಸ್ಥಿತಿಯನ್ನು ಒಪ್ಪ ಮಾಡುವುದಕ್ಕಾಗದೆ ಯೂರೋಪಿನಲ್ಲಿ ಕೂಡ ತಮ್ಮ ಪ್ರಾಶಸ್ತ್ಯವನ್ನು ಕಳೆದುಕೊಳ್ಳಬೇಕಾಗುವುದು. ಅದರ ಸೈನ್ಯಶಕ್ತಿ ಕೂಡ ಕುಂಠಿತವಾದೀತು. ಲಿಬಿಯ ಸ್ವತಂತ್ರವಾಗಿದೆ. ಈಜಿಪ್ಟಿನಲ್ಲಿ ಅಧ್ಯಕ್ಷ ನಾಸ್ಸೆರ್ ಸಮ್ಮಿಳಿತ ಅರಬ್ ರಿಪಬ್ಲಿಕನ್ ಅಧ್ಯಕ್ಷರಾಗಿ ತಕ್ಕ ಮಟ್ಟಿಗೆ ಪ್ರಬಲರಾಗಿಯೇ ಕುಳಿತಿದ್ದಾರೆ. ಹಿಂದೆ ನಿರೀಕ್ಷಿಸಿದಷ್ಟು ಬೇಗ ಅವರ ಮುಂದಾಳ್ತನದಲ್ಲಿ ಅರಬ್ ರಾಷ್ಟ್ರಗಳ ಏಕೀಕರಣ, ಐಕಮತ್ಯ ಸಾಧಿಸದೆ ಹೋದರೂ ಎಚ್ಚತ್ತ ಅರಬ್ ರಾಷ್ಟ್ರಗಳ ಗೌರವಯುತ ನಾಯಕರಾಗಿ ಅವರ ಹಿರಿಮೆ ಯುವಕ ಆರಬ್ಬರ ಉತ್ಸಾಹಗಳ ಕಣ್ಣೆದುರಿಗಿದೆ. ಬೇಗ ಸೂಯೆಜ್ ಕಾಲುವೆಯನ್ನು ವಿಸ್ತರಿಸಿಕೊಂಡು ಆಳ ಮಾಡಿಕೊಂಡು, ಹೆಚ್ಚು ದೊಡ್ಡ ಪೆಟ್ರೋಲ್ ಹಡಗುಗಳು ಅಲ್ಲಿ ಸಂಚಾರ ಮಾಡಿ ಅಲ್ಲಿನ ವ್ಯಾಪಾರ ಬೆಳೆಯುವಂತಾದೀತು. ಇದಕ್ಕೆ ನೆರವಾಗಿ ಇಂಗ್ಲಿಷರಿಗೂ ಫ್ರೆಂಚರಿಗೂ ಅವರಿಗೂ ನಡುವೆ ಉಂಟಾಗಿದ್ದ ವೈಮನಸ್ಯ ಹರಿದಿದೆ. ಅಮೇರಿಕನ್ನರು, ರಷ್ಯನರು ಇಬ್ಬರೂ ನೆರವನ್ನಿತ್ತು ಈಜಿಪ್ಟಿನ ಆರ್ಥಿಕ ಸ್ಥಿತಿ ಉತ್ತಮಗೊಳ್ಳಲು ನೆರವಾಗಿದ್ದಾರೆ. ಟೀಟೋ, ನಾಸ್ಸೆರ್, ನೆಹರೂ ಈ ಮೂವರ ಮಧ್ಯಸ್ಥ ವರ್ತನೆ ಲೋಕಕ್ಕೆ ವಿಶೇಷ ಲಕ್ಷಣಗಳಾಗಿ ಉಳಿದಾವು. ದಕ್ಷಿಣದಲ್ಲಿ ಸುಡಾನ್ ಈಜಿಪ್ಟಿಗೆ ಪೂರ್ತಿ ನೆರವಾಗಿಲ್ಲದಿದ್ದರೂ ವಿರೋಧವಾಗಿಲ್ಲದೆ ನೈಲ್ ನದಿಯ ನೀರಿನ ವಿವಾದಗಳನ್ನು ಬಹುತರ ಒಪ್ಪಿ ನಿವಾರಿಸಿಕೊಂಡಾರು. ಎಲ್ಲಿ ಹೋಗಿ, ಈಜಿಪ್ಟಿಗೂ ಇಸ್ರೇಲಿಗೂ ಇರುವ ದ್ವೇಷ ಕಡಮೆಯಾಗಬೇಕು. ಇವರಿಷ್ಟದಿಂದಲ್ಲದಿದ್ದರೆ ಪಶ್ಚಿಮ ಏಷ್ಯದಲ್ಲಿ ಸ್ಥಿತಿಗತಿಗಳನ್ನು ಒಂದು ಸ್ತಿಮಿತಕ್ಕೆ ತರುವ ಕಾರಣದಿಂದಲಾದರೂ

ಈ ಹಗೆತನ ನಿಂತು ಇಸ್ರೇಲಿನ ಇರವಿಗೆ ಈಜಿಪ್ಟ್, ಅರಬ್ಬೀ ರಾಷ್ಟ್ರಗಳು ಒಪ್ಪಿಕೊಳ್ಳಬೇಕಾದೀತು. ನೆಲೆತಪ್ಪಿದ ಅರಬ್ಬರ ರಕ್ಷಣೆ ಪೋಷಣೆಗೆ ಒಂದು ಸಮರ್ಪಕವಾದ ಏರ್ಪಾಡಾದೀತು. ಈ ನಡುವೆ ವಾಯವ್ಯ ಆಫ್ರಿಕದ ಎಲ್ಲ ಅಭಿವೃದ್ಧಿ ಕಾರ್ಯಗಳಿಗೂ ಇಸ್ರೇಲ್ ನೆರವಾಗುತ್ತಿರುವುದು ಇಸ್ರೇಲಿಗೆ ಒಂದು ದೊಡ್ಡ ಶಕ್ತಿಯ ಸಂಗತಿಯಾಗುತ್ತಿದೆ.

ಇನ್ನುಳಿದುದು ಮುಖ್ಯವಾಗಿ ಯೂರೋಪಿನ ರಾಜಕೀಯ; ಏಷ್ಯದ್ದು. ಯೂರೋಪಿನದರಲ್ಲಿ ಪಶ್ಚಿಮ ರಾಷ್ಟ್ರದ ನೆರವಿಗೆ ಮಿತ್ರ ರಾಷ್ಟ್ರವಾಗಿ ನಿಂತಿರುವ ಅಮೇರಿಕದ ವ್ಯವಹಾರ ಸೇರುತ್ತದೆ. ರಷ್ಯ ಮತ್ತು ರಷ್ಯಾದ ಆಶ್ರಿತ ರಾಜ್ಯಗಳಿಗೂ ಪಶ್ಚಿಮದ ಇತರ ರಾಷ್ಟ್ರಗಳಿಗೂ ವಿರಸ ಹತ್ತಿಕೊಳ್ಳುವ ಎಷ್ಟೋ ಪ್ರಸಂಗಗಳು ಕಳೆದ ದಶಕದಲ್ಲಿ ಬಂದು ಹೋದವು. ಪರಮಾಣು ಶಸ್ತ್ರಗಳು ತಮ್ಮೊಬ್ಬರಲ್ಲಿದ್ದಾಗ ಅವನ್ನು ಉಪಯೋಗಿಸಿ ಅಮೇರಿಕನ್ನರು ರಷ್ಯಕ್ಕೆ ಹಾನಿ ಮಾಡಬಹುದಾಗಿತ್ತು. ಕೈ ತಡೆದು ಕೊಂಡರು. ಆದರೂ ರಷ್ಯನರು ಮಧ್ಯ ಯೂರೋಪಿನ ಅನೇಕ ರಾಷ್ಟ್ರಗಳಲ್ಲಿ ತಮ್ಮ ಪ್ರಭಾವವನ್ನು ಬಿಗಿಸಿಕೊಂಡಾಗ ನೇಟೋ ಸಂಸ್ಥೆಯನ್ನು ಕಟ್ಟಿ ಬಲಪಡಿಸಿಕೊಂಡರು. ಈಚೆಗೆ ರಷ್ಯದಲ್ಲಿ ಅದ್ಭುತ ಯುದ್ಧಸಜ್ಜಿನ ಜೊತೆಗೆ ಕೈಗಾರಿಕೆ, ಪರಮ ಸಾಹಸಗಳ ಜೊತೆಗೆ ಖಂಡಾಂತರ ಕ್ಷಿಪಣಿಗಳ ನಿರ್ಮಾಣ, ಸ್ಪುಟ್ನಿಕ್, ಲ್ಯೂನಿಕ್ ಮುಂತಾದ ಆಕಾಶಯಾನದ ಅದ್ಭುತ ಸಾಧನೆ-ಇವುಗಳಿಂದಾಗಿ ಯುದ್ಧಶಕ್ತಿಯಲ್ಲಿ ರಷ್ಯ ಪಶ್ಚಿಮ ರಾಷ್ಟ್ರಗಳವರನ್ನು ಎದುರಿಸಿ ಉಳಿಯಬಲ್ಲದು, ಗೆಲ್ಲಬಲ್ಲದು ಎಂಬಂತಾಗಿದೆ. ಆದರೆ ಹೊಸ ಶಸ್ತ್ರಾಸ್ತ್ರಗಳನ್ನು ಪ್ರಯೋಗಿಸಿದರೆ ತಾವಿಬ್ಬರೂ ನಾಶವಾಗುತ್ತಾರೆ, ಲೋಕವನ್ನು ನಾಶ ಮಾಡಬೇಕಾಗುತ್ತದೆ ಎಂಬ ಭಯ ಇಬ್ಬರಿಗೂ ಚೆನ್ನಾಗಿ ಗೊತ್ತಾಗಿದೆ. ಅಲ್ಲದೆ, ತಮ್ಮ ಜನಕ್ಕೆ ಹೆಚ್ಚು ಆಹಾರ, ವಸ್ತ್ರ, ಮನೆಗಳು, ಜೀವನದ ಸುಖ ಸೌಕರ್ಯಗಳು ಒದಗುವಂತಾಗಿ ಅಮೇರಿಕದ ಸಮೃದ್ಧಿಯನ್ನು ಮೀರಿಸುವ ಸಮೃದ್ಧಿ ರಷ್ಯಕ್ಕೆ ಬರಬೇಕು; ಆ ಮೂಲಕ ಇತರ ರಾಷ್ಟ್ರಗಳಿಗೆ ತಮ್ಮ ಆದರ್ಶ ರೀತಿ ನೀತಿಗಳಲ್ಲಿ ವಿಶ್ವಾಸ ಬರುವಂತಾಗಬೇಕು ಎಂಬ ಉದ್ದೇಶದಿಂದ ರಷ್ಯದ ನಾಯಕರು ಸ್ನೇಹವನ್ನು ಬಯಸುತ್ತಿದ್ದಾರೆ. ಅಮೆರಿಕನ್, ಬ್ರಿಟಿಷ್ ನಾಯಕರು ರಷ್ಯಕ್ಕೆ ಭೇಟಿಕೊಟ್ಟದ್ದೂ ಕ್ರುಶ್ಚಾಫ್ ಈಚೆಗೆ ಅಮೇರಿಕಕ್ಕೆ ಭೇಟಿಕೊಟ್ಟದ್ದೂ ರಷ್ಯಕ್ಕೆ ಐಸೆನ್ ಹೋವರ್ ಇಷ್ಟರಲ್ಲಿಯೇ ಭೇಟಿ ಕೊಡಲಿರುವುದೂ ಬಿಗಡಾಯಿಸಿದ್ದ ಪರಿಸ್ಥಿತಿ ಹಗುರವಾದ ಲಕ್ಷಣಗಳು.

ಎಲ್ಲಿ ಹೋಗಿ ಯೂರೋಪಿನಲ್ಲಿ ಉಳಿದಿರುವ ಎರಡು ವಿವಾದದ ಅಂಶಗಳು (1) ನಿಶ್ಶಸ್ತ್ರೀಕರಣ (2) ಜರ್ಮನ್ ಸಮಸ್ಯೆ : ಮುಂದಿನ ಹತ್ತು ವರ್ಷಗಳಲ್ಲಿ ಸಂಪ್ರದಾಯದ ಸೈನ್ಯ ಪ್ರಮಾಣಗಳು ಯೂರೋಪಿನಲ್ಲಿ ಕಡಮೆಯಾದಾವು. ರಷ್ಯದ ಸುತ್ತಲೂ ಇರುವ ನೇಟೋ ಬಲದ ಕೇಂದ್ರಗಳು ಕೃಶವಾದಾವು. ರಷ್ಯದ ಮತ್ತು ಅದರ ಮಿತ್ರವರ್ಗದ ಸೈನ್ಯಶಕ್ತಿಯೂ ಅಲ್ಲಿನ ಬಿಕ್ಕಟ್ಟುಗಳೂ ಸಡಿಲವಾದಾವು. ಬಹುತರ ಮುಂದಿನ ಹತ್ತು ವರ್ಷಗಳಲ್ಲಿ ಪ್ರಪಂಚ ಸಂಸ್ಥೆಯಲ್ಲಿಯೂ ಶೃಂಗ ಸಮ್ಮೇಳನಗಳಲ್ಲಿಯೂ ಸೈನ್ಯದ ಮತ್ತು ಶಸ್ತ್ರಾಸ್ತ್ರದ ಪ್ರಮಾಣಗಳನ್ನು ತುಂಬ ಕಡಮೆ ಮಾಡುವ ಒಡಂಬಡಿಕೆಗಳು



ಉಂಟಾಗಿ, ಲೋಕಕ್ಕೆ ಶಾಂತಿಯ ಬೆಳಕು ಯೂರೋಪ್ ಕಡೆಯಿಂದ ಹೆಚ್ಚಾಗಿ ಬಂದೀತೆನ್ನಿಸುತ್ತದೆ. (2) ಇಬ್ಭಾಗವಾದ ಜರ್ಮನಿಯನ್ನು ಸೇರಿಸುವುದು, ಅದಕ್ಕೆ ಬಲವುಂಟುಮಾಡುವುದು ರಷ್ಯನರಿಗೆ ಇಷ್ಟವಿಲ್ಲ. ಪಶ್ಚಿಮ ದೇಶದವರಿಬ್ಬರಿಗೂ ಇಷ್ಟವಿರುವಂತಿಲ್ಲ. ಏಕೀಕೃತ ಜರ್ಮನಿ ನಿರಸ್ತ್ರವಾಗುವುದಾದರೆ ಎಲ್ಲರೂ ಒಪ್ಪಿಯಾರು. ಅದನ್ನು ವಿಧಿಸುವುದು ಯಾರು? ಹೇಗೆ? ಅಲ್ಲದೆಯೋ ಪಶ್ಚಿಮ ಜರ್ಮನರು ಪೂರ್ವ ಜರ್ಮನಿ ರಾಜ್ಯದ ಸ್ವಾಧೀನತೆಯನ್ನು ಒಪ್ಪುತ್ತಿಲ್ಲ. ಸದ್ಯಕ್ಕೆ ಅಸೆ ನೆರವೇರುವ ಹಾಗಿಲ್ಲದಿದ್ದರೂ ಪೋಲೆಂಡಿನ ವಶಕ್ಕೆ ಹೋಗಿರುವ ಜರ್ಮನಿಯ ಭಾಗಗಳನ್ನು ಅವರಾಗಲಿ, ರಷ್ಯನರಾಗಲಿ ಹಿಂದಿರುಗಿಸುವ ಭರವಸೆಯಿಲ್ಲ. ಪೂರ್ವ ಜರ್ಮನಿಯ ಮೇಲಿನ ಪ್ರಭಾವವನ್ನು ಸಡಿಲಗೊಳಿಸುವ ಇಷ್ಟವೂ ರಷ್ಯನರಿಗಿಲ್ಲ. ಅದು ಸಡಿಲವಾದರೆ ಮಧ್ಯ ಯೂರೋಪಿನ ಇತರ ರಾಷ್ಟ್ರಗಳ ಮೇಲಿನ ರಷ್ಯನ್ ಪ್ರಭಾವ ಸಡಿಲ ಗೊಳ್ಳುವುದರಿಂದ, ಸದ್ಯಕ್ಕೆ ಆ ಕಾರ್ಯ ತಡೆದೀತೆನ್ನಿಸುತ್ತದೆ.

ಬರ್ಲಿನ್ ನಗರದ ಕಷ್ಟ ಇನ್ನೂ ನಿವಾರಣೆಯಾಗಬೇಕಾಗಿದೆ. ಪಶ್ಚಿಮ ಜರ್ಮನಿಗೆ ತೃಪ್ತಿಕರವಾಗಿ ಅದು ಪರಿಹಾರವಾಗುವುದು ಅಗತ್ಯ. ಪಶ್ಚಿಮ ಜರ್ಮನಿಯ ಗಡಿಯಿಂದ 110 ಮೈಲಿ ದೂರ ಇರುವ ಆ ಊರಿನ ಸ್ವಾಸ್ಥ್ಯವನ್ನು, ಸ್ವಾತಂತ್ರ್ಯವನ್ನು ಕಾಪಾಡುವ ಹೊಣೆಯನ್ನು ಪಶ್ಚಿಮ ರಾಷ್ಟ್ರಗಳು ಹೊತ್ತಿವೆ. ಬಹುತರ ಮುಂದಿನ 10 ವರ್ಷಗಳಲ್ಲಿ ಬರ್ಲಿನ್ ಸಮಸ್ಯೆ ಪರಿಹಾರ ಒಂದು ಹದಕ್ಕೆ ಬಂದೀತು. ಈ ನಡುವೆ ಅಧ್ಯಕ್ಷ ಡಿಗಾಲರು ಇಂಗ್ಲಂಡ್ ಅಮೇರಿಕಾಗಳ ಸಮಗಣನೆ ಬಯಸುತ್ತಿರುವ ಚಿತ್ರ ಕಾಣುತ್ತದೆ. ಸಮಗಣನೆ ದೊರಕದಾದರೆ ಒಂದೊ ಅವರೇ ಪದಚ್ಯುತರಾಗುತ್ತಾರೆ ಅಥವಾ ಯೂರೋಪಿನ ರಾಜಕೀಯದಲ್ಲಿ ಇನ್ನೊಂದು ಬಗೆಯ ರಾಜಕೀಯ ಉಂಟಾಗುತ್ತದೆ. ಇಂಗ್ಲಂಡ್ ಜರ್ಮನಿಗೆ, ಇಂಗ್ಲಂಡ್ ಫ್ರಾನ್ಸಿಗೆ ಒಡ್ಡಿರುವ ಅಲ್ಪ ಸ್ವಲ್ಪ ಸಮಾಧಾನ ಬಹುತರ ಪರಿಹಾರವಾದಾವು. ಅಮೇರಿಕದ ನೆರವಿಲ್ಲದೆ ಈ ಯಾವುದೂ ಸ್ವತಂತ್ರವಾಗಿ ನಿಲ್ಲಲಾರವಾದ್ದರಿಂದ, ಅಮೆರಿಕಾ ಪ್ರಯತ್ನ ಯೂರೋಪಿನ ಶಾಂತಿ ಸುಭಿಕ್ಷಗಳಿಗೆ ಒಲಿದಿರುವುದರಿಂದ ಈ ವೈಮನಸ್ಯಗಳು ಮುಂದಿನ 10 ವರ್ಷಗಳಲ್ಲಿ ಕಡಮೆಯಾದಾವು.

ಅರಬ್ಬೀ ರಾಷ್ಟ್ರಗಳು ತಮ್ಮ ಅಸೂಯೆ, ಕಾರ್ಪಣ್ಯ, ಅನೈಕಮತ್ಯಗಳಿಂದ ಒಟ್ಟಿಗೆ ಸೇರಲಾರದಿವೆ. ಆದರೂ ತಮ್ಮ ಹಿತದೃಷ್ಟಿಯಿಂದಲೇ ಯಾವುದಾದರೊಂದು ರೀತಿ ಬಹುತರ ಕಮ್ಯುನಿಸಂ ಹರಡುವ ಭಯವನ್ನು ಹೋಗಲಾಡಿಸಿಕೊಂಡು ತಮ್ಮ ಸಂಪತ್ತನ್ನು ಉಳಿಸಿಕೊಳ್ಳುವ, ಬೆಳಸಿಕೊಳ್ಳುವ ದೃಷ್ಟಿಯಿಂದ ಹೆಚ್ಚು ಶಾಂತವಾದಾವು. ಇರಾಕ್, ಸೌದಿ ಅರೇಬಿಯಗಳಲ್ಲಿ ಮುಂದಿನ 10 ವರ್ಷಗಳಲ್ಲಿ ಏನು ನಡೆದೀತೆಂಬುದು ಅರಬ್ಬಿ ರಾಷ್ಟ್ರಗಳ ಕತೆಯನ್ನು ಮಾರ್ಪಡಿಸುವುದು.

ಕಳೆದ 10 ವರ್ಷಗಳಲ್ಲಿ ಬೆಳೆದ ಬಹುದೊಡ್ಡ ಪ್ರಭಾವವೆಂದರೆ ಜನತಾ ಚೀಣದ ಪ್ರಾಬಲ್ಯ. ದುರ್ದಮ್ಯವಾಗಿ, ರಾಕ್ಷಸವಾಗಿ ಆ ಶಕ್ತಿ ಬೆಳೆಯುತ್ತಿದೆ. ಅದರ

ಪಾಲಕ ರಾಷ್ಟ್ರವಾದ ರಷ್ಯಕ್ಕೆ, ಅದರ ಬೆಳವಣಿಗೆ ನಡವಳಿಕೆ, ಚೇಷ್ಟೆ ಕಳವಳವನ್ನುಂಟು ಮಾಡಿರುವ ಹಾಗೆ ಕಾಣುತ್ತದೆ. ನೂರು ವರ್ಷಗಳಿಗೆ ಹಿಂದೆ, ಯೂರೋಪಿನವರು ಚೀಣಾದಲ್ಲಿ ಅಧಿಕಾರ ಸ್ಥಾಪಿಸುವ ಮುಂಚೆ, ಎಷ್ಟು ಹರಡಿತ್ತೊ ಅಷ್ಟು ಭಾಗದಲ್ಲೆಲ್ಲಾ ಚೀಣ ಪುನಃ ಪ್ರಬಲಿಸಬೇಕೆಂದಿದೆ. ತನ್ನನ್ನು ಸೋಲಿಸಿ ಹಿಡಿದಿದ್ದ ಜಪಾನಿನ ಮೇಲೂ ಅದಕ್ಕೆ ಅತೃಪ್ತಿ. ತನಗೆ ಹಗೆಯಾಗಿ ಶತ್ರುನೆಲೆಯಾಗಿರುವ ಫಾರ್ಮೋಸಾವನ್ನು ತನ್ನ ವಶಕ್ಕೆ ತೆಗೆದುಕೊಳ್ಳಬೇಕೆಂದಿದೆ. ಹಾಂಕಾಂಗಿಂದ ಬ್ರಿಟಿಷರನ್ನು ಓಡಿಸುವುದಾಗಲಿ, ಕ್ವಿಮಾಯಲ್ – ಮಾತ್ಸು ದ್ವೀಪಗಳನ್ನು ವಶಪಡಿಸಿಕೊಳ್ಳುವುದಾಗಲಿ, ಆಗ್ನೇಯ ಏಷ್ಯಾದ ರಾಷ್ಟ್ರಗಳ ಸ್ವಾತಂತ್ರ್ಯವನ್ನು ಕಬಳಿಸುವುದಾಗಲಿ ಅದಕ್ಕೆ ಕಷ್ಟವಲ್ಲ. ಆದರೆ ಉತ್ತರದಲ್ಲಿ ಅಲಾಸ್ಕಾದಿಂದ ಹಿಡಿದು ದಕ್ಷಿಣ ಕೊರಿಯಾ, ಜಪಾನ್, ಫಾರ್ಮೋಸ ಫಿಲಿಪೈನ್ಸ್, ದಕ್ಷಿಣ ವಿಯೆಟ್ನಾಂ ಈ ಎಲ್ಲ ಕಡೆಯಿಂದಲೂ ಅದಕ್ಕೆ ವಿರೋಧವಾಗಿ ನಿಂತಿರುವ ಅಮೇರಿಕಾ, ಪಶ್ಚಿಮ ರಾಷ್ಟ್ರಗಳ ಮತ್ತು ಪ್ರಪಂಚ ಸಂಸ್ಥೆಯ ಹೆದರಿಕೆ ಅದರ ಕೈ ತಡೆದಿದೆ. ಅಲ್ಲಿ ಇಲ್ಲಿ ಅಷ್ಟು ಇಷ್ಟು ಕೀಟಲೆ ಮಾಡಿ, ಕೋಟಲೆ ಹೂಡಿ ತಮ್ಮ ಪ್ರಾಬಲ್ಯವನ್ನು ಚೀಣ ಹೆಚ್ಚು ಮಾಡಿಕೊಳ್ಳಬಯಸುವುದು. ಒಳಖಂಡದಲ್ಲಿ ದೊಡ್ಡ ಯುದ್ಧ ಮಾಡದೆ ಅಮೆರಿಕವನ್ನಾಗಲಿ, ಪ್ರಪಂಚ ರಾಷ್ಟ್ರ ಸಂಸ್ಥೆಯನ್ನಾಗಲಿ ಕೆರಳಿಸದೆ ಮಾಡುವುದನ್ನು ಮಾಡಿ, ಚೀಣ ಮುಂದಿನ 10 ವರ್ಷಗಳಲ್ಲಿ ಪ್ರಚಂಡವಾಗಿ ಬೆಳೆಯುತ್ತದೆ. ಅದನ್ನು ವಿಶ್ವಸಂಸ್ಥೆಗೆ ಸೇರಿಸಿಕೊಂಡು ಅದರ ನಡವಳಿಕೆಯನ್ನು ತಿದ್ದಿದರೆ ಲೋಕಕ್ಕೆ ಹಿತವಾದೀತೇ ಹೊರತು, ಅದನ್ನು ಹೊರಗಿಟ್ಟು ಅದರ ನಡತೆಯ ಪರಿಣಾಮದಿಂದ ಲೋಕವನ್ನೂ ಶಾಂತಿಯನ್ನೂ ಉದ್ಧಾರ ಮಾಡುವ ಭರವಸೆ ಇರುವ ಹಾಗಿಲ್ಲ. ಆದ್ದರಿಂದ ಕೂಡ ಭಾರತ ಅದರ ಸದಸ್ಯತ್ವಕ್ಕೆ ಬೆಂಬಲ ಕೊಡುತ್ತಿರುವುದು. ಏಷ್ಯದಲ್ಲಿ ಅದರ ಭಯ, ದಕ್ಷಿಣ ರಾಷ್ಟ್ರಗಳಿಗೆಲ್ಲ ಭೂತದ ಭಯದಂತೆ ಕವಿದಿದೆ. ದಕ್ಷಿಣ ಏಷ್ಯವೆಂದರೆ ಭರತಖಂಡವೂ ಸೇರಿದ್ದಲ್ಲವೇ.

ಒಂದು ಕಡೆಯ ಮಾತು. ಭಾರತಕ್ಕೂ ಪಾಕಿಸ್ತಾನಕ್ಕೂ ಇರುವ ಮೂರು ವಿವಾದಗಳಲ್ಲಿ ಗಡಿಗಳನ್ನು ಗುರುತಿಸುವ, ಸಿಂಧೂ ನದಿಯ ನೀರಿನ ವಿಭಾಗದ ಎರಡೂ ಈ 10 ವರ್ಷಗಳಲ್ಲಿ ಪೂರ್ತಿ ಪರಿಹಾರವಾದಾವು. ಕಚ್ಚಿಗೆ ಸಂಬಂಧಿಸಿದ ಭಾಗಕ್ಕಾಗಿ ಸ್ವಲ್ಪ ಕೊಸರಾಟವಾದೀತು ಮಾತ್ರ. ಕಾಶ್ಮೀರದ ಪ್ರಶ್ನೆ ಇಬ್ಬರ ಒಪ್ಪಂದದಿಂದ ಬಗೆಹರಿಯಬೇಕಾದ್ದು. ನ್ಯಾಯ ಹೇಗೇ ನಿರ್ಣಯ ಕೊಡಲಿ, ಧರ್ಮಾಧರ್ಮದ ಭಾಗ, ಚರಿತ್ರೆ ನಮ್ಮದೇ ಸರಿ ಎನ್ನಲಿ-ಈಗ ನಮ್ಮ ನಮ್ಮ ವಶದಲ್ಲಿರುವ ಆ ರಾಜ್ಯದ ಭಾಗಗಳು ನಮ್ಮ ನಮ್ಮ ಪಾಲಿಗೆ ಉಳಿದು ಗಡಿಗಳಲ್ಲಿ ಇಲ್ಲಷ್ಟು ಅಲ್ಲಷ್ಟು ಹೊಂದಾಣಿಕೆಯ ಒಪ್ಪಂದ ಮಾಡಿಕೊಂಡು ಹಾಳು ಶನಿ ಪಾಳ್ಗತೆ ಮುಗಿಯಲೆಂದು ಬಂದು ಒಡಂಬಡಿಕೆಗೆ ಮುಂದಿನ 10 ವರ್ಷಗಳಲ್ಲಿ ಬರಲಾಗುತ್ತದೆಯೊ ಏನೊ! ಕ್ರೋಧಾವೇಶಗಳೂ ನಷ್ಟಗಳೂ ಸಂಶಯಗಳೂ ಆ ಮೂಲಕ ಕಡಮೆಯಾದಾವು. ಅವುಗಳಿಂದಾಗಿ ಎರಡು ರಾಷ್ಟ್ರಗಳೂ ನಿರಂತರವಾಗಿ ವೆಚ್ಚಮಾಡುತ್ತಿರುವ ನೂರಾರು ಕೋಟಿ ರೂ. ಉಳಿದು



ಎರಡೂ ನಾಡುಗಳ ಸುಭಿಕ್ಷಕ್ಕೂ ಜನಸುಖಕ್ಕೂ ವಿನಿಯೋಗವಾಗಿ ದುಡಿಯಲಾದೀತೇನೊ. ಎಲ್ಲಿ ಹೋಗಿ, ಮುಂದಿನ 10 ವರ್ಷಗಳಲ್ಲಿ ಪೋರ್ಚುಗೀಸರು ಗೋವೆಯನ್ನು ಬಿಟ್ಟು ಹೋಗುವ ಮಾತು ಏನಾಗುವುದೊ! ಬಿಟ್ಟಾರು, ಹೋದಾರು. ಹೋಗುವ ಮುಂಚೆ ಡಿಯು ದ್ವೀಪವನ್ನು ಪಾಕಿಸ್ತಾನಕ್ಕೆ ದಾನಮಾಡಿ ಹೋಗದಿದ್ದರೆ ಅವರೊಂದು ಉಪಕಾರ, ಪುಣ್ಯಕಾರ್ಯ ಮಾಡಿದಂತಾಗುತ್ತದೆ.

(ಡಿಸೆಂಬರ್ 1959)

❑

# 3. ಕಾಂಗ್ರೆಸ್ ಮಹಾಧಿವೇಶನ

ಈ ಸಲ ಬೆಂಗಳೂರಿನಲ್ಲಿ ನಡೆವ ಕಾಂಗ್ರೆಸ್ ಮಹಾಧಿವೇಶನಕ್ಕೆ 65 ವರ್ಷಗಳ ಚರಿತ್ರೆಯಿದೆ. ನಾಡಿಗೆ ಸ್ವಾತಂತ್ರ್ಯ ದೊರಕಿಸುವ ಉದ್ದೇಶ ಹುಟ್ಟಿ ಬೆಳೆದದ್ದು ಅ ಚರಿತ್ರೆ. ಭಾರತೀಯರಲ್ಲದ ವೆಡ್ಡರ್ ಬರ್ನ್, ಕಾಟನ್ ಪ್ಯಾಕ್ ಮುಂತಾದ ಹಲವರು ಪಾಶ್ಚಿಮಾತ್ಯರ ಪ್ರೀತಿ ಆಶ್ರಯಗಳಲ್ಲಿ ಬೆಳೆಯಿತು. ನವರೋಜಿ, ಮೆಹತಾ, ವಾಚಾ ಮುಂತಾದ ಪಾರ್ಸಿ ಹಿರಿಯರು ನಾಯಕರಾಗಿ ಕೆಲಸಮಾಡಿದರು. ಹಿಂದೂ, ಮುಸಲ್ಮಾನ್, ಕ್ರೈಸ್ತ, ಪಾರ್ಸಿ ಎಂಬ ಭೇದವಿಲ್ಲದೆ ಸಾವಿರಾರು ಮಂದಿ ಆ ಸಂಸ್ಥೆಯ ಶಕ್ತಿಗಾಗಿಯೂ ಕೀರ್ತಿಗಾಗಿಯೂ ದುಡಿದರು. ಒಂದು ಕಾಲಕ್ಕೆ ಅದರಲ್ಲಿಯೇ ಮಂದಪಂಥ, ತೀವ್ರಗಾಮಿ ಪಂಥಗಳುಂಟಾಗಿ ಸೂರತ್ ಕಾಂಗ್ರೆಸ್ ಸಮಯದಲ್ಲಿ ಎರಡು ಬಣಗಳಾಗಿ ಒಡೆಯಿತು. ಪುನಃ ಸುಮಾರು 1920ರ ಹೊತ್ತಿಗೆ ಮನಸ್ಸುಗಳ ಸಮ್ಮೇಳನವಾಯಿತು. ಕೇವಲ ಮೃದುಮಾರ್ಗದಲ್ಲಿಯೇ, ಯುಕ್ತಿವಾದಗಳಿಂದಲೇ ಬ್ರಿಟಿಷರನ್ನು ಗೆಲ್ಲಬೇಕು, ಒಲಿಸಿಕೊಳ್ಳಬೇಕು ಎಂಬ ಪಂಥ ಲಿಬರಲ್ ಪಂಥವಾಗಿ ಉಳಿದುಕೊಂಡು ತನ್ನ ರೀತಿ ನಾಡಸೇವೆಯನ್ನು ಮಾಡಿತು. ತಿಲಕರು ಪ್ರೆಸಿಡೆಂಟರಾಗ ಬೇಕಾಗಿದ್ದ ನಾಗಪುರದ ಅಧಿವೇಶನದಲ್ಲಿ, ಅವರು ಆ ಮುಂಚೆ ತೀರಿಕೊಂಡದ್ದರಿಂದ, ತಿಲಕರು ಪುನಃ ಕಾಂಗ್ರೆಸ್ಸಿಗೆ ನಾಯಕರಾಗುವ ಅವಕಾಶ ತಪ್ಪಿತು. ಅಲ್ಲಿಂದೀಚೆಗೆ ಗಾಂಧೀಜಿಯವರ ಒಟ್ಟು ಮುಂದಾಳ್ತನದಲ್ಲಿ ಅದು ಬಲದಿಂದ ಬಲಕ್ಕೆ ಬೆಳೆಯಿತು. ಅದರ ಕ್ರಿಯಾರಂಗ ನಾಡಿನ ಸಮಗ್ರ ಜೀವನಕ್ಕೆ ವ್ಯಾಪಿಸಿ ರಾಷ್ಟ್ರದ ಜೀವನವೆಂದರೂ ಒಂದೇ, ಕಾಂಗ್ರೆಸ್ಸಿನ ಕಾರ್ಯರಂಗವೆಂದರೂ ಒಂದೇ ಎನ್ನುವಷ್ಟು ಮಟ್ಟಿಗೆ ಬೆಳೆಯಿತು. ನಾಯಕರಾದ ಗಾಂಧೀಜಿಯವರ ಬದುಕೂ ಹಾಗೇ ವಿಸ್ತಾರಗೊಂಡಿತು. ಗಾಂಧೀಜಿ, ಕಾಂಗ್ರೆಸ್, ರಾಷ್ಟ್ರ ಎಂಬ ಮೂರು ಮಾತುಗಳು ಸುಮಾರು ಸಮಾನಾರ್ಥಕವಾದಂತೆ ಈ ಬೆಳವಣಿಗೆ ನಡೆಯಿತು. ಜಿನ್ನಾ ಅವರು ಹೊರಟು ಹೋದಾಗ, ಸ್ವರಾಜ್ ಪಕ್ಷ ಒಂದು ದಾರಿ ಹಿಡಿದಾಗ, ಸುಭಾಷ್ ಬೋಸ್ ಎರಡನೆಯ ಸಲ ಅಧ್ಯಕ್ಷ ಪದವಿಗೆ ಆಯ್ಕೆಯಾದಾಗ ಕೆಲವು ಅರೆವಿರಸ, ಬಿರುವಿರಸ ಪ್ರಕರಣಗಳು ಹುಟ್ಟಿದರೂ ಒಟ್ಟು ಸಂಸ್ಥೆಯಲ್ಲಿ ಶೈಥಿಲ್ಯವಾಗಲಿ, ದೌರ್ಬಲ್ಯವಾಗಲಿ ಉಂಟಾಗಲಿಲ್ಲ. ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಮುಂತಾದ ಎಲ್ಲ ಕ್ಷೇತ್ರಗಳಲ್ಲಿಯೂ ಕಾಂಗ್ರೆಸ್ಸಿನ ಕಾರ್ಯ ನಾಡಿನ ಮೇಲೆಲ್ಲ



ಬೆಳೆಯಿತು. ಅದರಷ್ಟು ಶಿಸ್ತು, ದೀಕ್ಷಾ ಬುದ್ಧಿ, ತ್ಯಾಗಶೀಲತೆ, ದೇಶಭಕ್ತಿ ಬೆಳಸುವುದು ಕಷ್ಟವೆನ್ನುವ ಮಟ್ಟಿಗೆ ಅದು ಬೆಳೆಯಿತು.

ಅದು ವಿದ್ಯಾವಂತರಿಗೆ ಮಾತ್ರ ಸಂಬಂಧಿಸಿದ ಸಂಸ್ಥೆಯಾಗಿ ಉಳಿಯಲಿಲ್ಲ. 1920ರಿಂದ ಈಚೆಗೆ ಒಟ್ಟು ಜನತೆಯ ಸ್ವಾತಂತ್ರ್ಯಾಭಿಲಾಷೆಯ ಸಾಧಕ ಸಂಸ್ಥೆಯಾಯಿತು. ಆಗ, ಈಗ ನೇರವಾದ, ಉಗ್ರವಾದ ಕಾರ್ಯಕ್ರಮಗಳನ್ನು ಕೈಗೊಂಡಿತು. ಜನತೆಯ ಸಾಮೂಹಿಕ ಚಳವಳಿಗಳನ್ನು ನಡಸಿ ಬ್ರಿಟಿಷರಿಗೆ ವಿರುದ್ಧವಾಗಿ ಧೈರ್ಯದಿಂದ ನಿಂತು ಆಳರಸರಿಂದ ಹಿಂಸೆಪಟ್ಟಿತು. ದೇಶದ ಸ್ವಾಧೀನತೆಯ ಸಾಧನೆಯಲ್ಲಿ ಕಾಂಗ್ರೆಸ್ ನಾಯಕರು ಸೆರೆಯಲ್ಲಿ ಕೊಳೆತರು, ಜೀವ ತೆತ್ತರು, ಆಸ್ತಿಪಾಸ್ತಿ ಕಳೆದುಕೊಂಡರು, ಗಡಿಪಾರಾದರು. ಆದರೂ ಕಾಂಗ್ರೆಸ್ಸಿನ ದೃಢಚಿತ್ತತೆ ಗಾಂಧೀಜಿಯವರ ನಾಯಕತ್ವ ದಲ್ಲಿಯೂ ನೆಹರೂ - ಪಟೇಲ್ - ಆಜಾದರಂಥ ವೀರಭಕ್ತರ ಸಾಹಸದಿಂದಲೂ 47ರಲ್ಲಿ ನಾಡಿಗೆ ಸ್ವಾತಂತ್ರ್ಯ ದೊರೆಯುವಂತಾಯಿತು. ಕಾಂಗ್ರೆಸಿಗೆ ವಿರೋಧವಾಗಿದ್ದವರ ಮತ್ತು ಬೇರೆ ರಾಜಕೀಯ ಪಕ್ಷಗಳ ಜನರಿಗೆ ಕೂಡ ಈ ಸಂಗತಿ ಗೊತ್ತು. ಕಾಂಗ್ರೆಸ್ಸಿನ ಈ ಸಾಹಸವಿಲ್ಲದಿದ್ದರೆ ಬ್ರಿಟಿಷರು ಭಾರತದಿಂದ ಕಾಲ್ತೆಗೆಯುತ್ತಿರಲಿಲ್ಲ, ಈ ನಾಡು ಇಷ್ಟು ಬೇಗ ಸ್ವತಂತ್ರವಾಗುತ್ತಿರಲಿಲ್ಲ. ಜೊತೆಗೆ, ಬ್ರಿಟಿಷರ ಔದಾರ್ಯವೂ ಅವರು ಭಾರತಕ್ಕೆ ಕೊಟ್ಟಿದ್ದ ಆಶ್ವಾಸನೆಯೂ ಬ್ರಿಟನ್ನಿನ ರಾಜಕೀಯ ಚರಿತ್ರೆ 1947ರ ಸುಮಾರಿಗೆ ಅವರ ರಾಷ್ಟ್ರಜೀವನದಲ್ಲಿಯೇ ತಂದಿದ್ದ ಕಷ್ಟ ಸಂಕೋಚಗಳೂ ನಮ್ಮ ನಾಡಿನ ಸ್ವಾತಂತ್ರ್ಯಕ್ಕೆ ನೆರವಾಗಿವೆ. ಅಮೇರಿಕದ ಸೌಹಾರ್ದವೂ ಲೋಕಾಭಿಪ್ರಾಯವೂ ಒದಗಿ ನಮ್ಮ ಸ್ವಾಧೀನತೆಗೆ ನೆರವಾದವು. ಭಾರತಕ್ಕೆ ಬಿಡುಗಡೆ ಬಂದಿತು.

ಬಿಡುಗಡೆ ತಂದ ಸಂಸ್ಥೆಯೇ ಸ್ವಾಧೀನ ಭಾರತದ ಅಂಗರಚನೆ ಮಾಡುವುದಕ್ಕೂ ಅದರ ಬಾಳನ್ನು ಸರ್ವತೋಮುಖವಾಗಿ ಬೆಳಸಿ ಕಟ್ಟುವುದಕ್ಕೂ ತಕ್ಕ ಸಂಸ್ಥೆಯಾಗಿದ್ದುದು ಸಹಜ, ಅನುಸ್ಯೂತ ಅಲ್ಲವೆ? ಆದುದರಿಂದಲೇ ರಾಜ್ಯಸೂತ್ರವನ್ನು ಕಾಂಗ್ರೆಸ್ಸೇ ವಹಿಸಿಕೊಂಡಿತು. ಅದು ಈ 12-13 ವರ್ಷಗಳಲ್ಲಿ ನಾಡಿಗೆ ಮಹದುಪಕಾರವಾದ ಅನೇಕ ಕಾರ್ಯಗಳನ್ನು ಮಾಡಿದೆ, ಸೇವೆ ಸಲ್ಲಿಸಿದೆ. ಸುತ್ತಲೂ ಎಲ್ಲಿ ನೋಡಿದರೂ ಕ್ರಾಂತಿ, ತಳಮಳ, ಕೊಲೆ, ಕೋಟಲೆ, ಅರಕ್ಷಿತತೆ ಇರುವಾಗ ಶಾಂತಿ, ಸುರಕ್ಷಣೆ, ಸ್ತಿಮಿತತೆ ನಮ್ಮ ನಾಡಿನ ರಾಜಕೀಯ ಜೀವನದಲ್ಲೊಂದರಲ್ಲಿಯೇ ಏಕಸೂತ್ರದಲ್ಲಿ ನಡೆದಿರುವುದು. ಇದರ ಕೀರ್ತಿಯೆಲ್ಲಾ ಕಾಂಗ್ರೆಸ್ಸಿಗೆ ಹೋಗಬೇಕಾದ್ದು. ಮುಖ್ಯವಾಗಿ ಅದರ ನಾಯಕರಾದ ಪಂಡಿತ ನೆಹರೂ ಅವರಿಗೂ, ಅವರ ಜೊತೆಗೆ ಕೆಲಸ ಮಾಡಿದ ಪಟೇಲ್, ರಾಜೇಂದ್ರ ಪ್ರಸಾದ್, ಮೌಲಾನಾ ಆಜಾದ್, ರಾಜಾಜಿ ಮುಂತಾದವರಿಗೆ. ಇವರು ನಾಡಿನ ಮೊದಲ ಪಂಕ್ತಿಯ ನಾಯಕರು. ಪಾಕಿಸ್ತಾನ ಒಡೆದು ನಾಡಿನ ದೊಡ್ಡ ಭಾಗವನ್ನು ಮುರಿದುಕೊಂಡು ಹೋದರೂ, ದೇಶೀಯ ರಾಜ್ಯಗಳನ್ನೆಲ್ಲ ಒಟ್ಟಿನಲ್ಲಿ ಭರತಖಂಡದಲ್ಲಿ ವಿಲೀನಗೊಳಿಸಿ ಇದನ್ನು ಅಖಂಡ ಭಾರತವನ್ನಾಗಿ ಮಾಡಿದ ಸಾಹಸ ಪಟೇಲರದು. ಇಂದಿಗೆ ಎರಡು ಚುನಾವಣೆಗಳಲ್ಲಿ ಕಾಂಗ್ರೆಸ್ ಗೆದ್ದು, ಒಟ್ಟು ಭಾರತದಲ್ಲೆಲ್ಲ

ತನ್ನ ಅಧಿಕಾರವನ್ನು ನಡಸಿದೆ. ಈಚೆಗೆ ಕೇರಳ ಒಂದರಲ್ಲಿ ಒಂದೆರಡು ವರ್ಷಗಳ ಕಾಲ ಮಾತ್ರ ಕಮ್ಯುನಿಸ್ಟ್ ಪಕ್ಷ ಅಧಿಕಾರಕ್ಕೆ ಬಂದಿತಾದರೂ, ಕೇಂದ್ರ ಸರ್ಕಾರದಲ್ಲಿನ ಕಾಂಗ್ರೆಸ್ ಬಹುಮತ, ಇತರ ರಾಜ್ಯಗಳಲ್ಲಿನ ಕಾಂಗ್ರೆಸ್ ಬಹುಮತ, ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಾರ್ವದೇಶಿಕ ಶಿಸ್ತು, ಈ ವರೆಗೂ ಭಾರತದ ರಾಜಕೀಯ ಜೀವನವನ್ನು ಸುರಕ್ಷಿತವಾಗಿ ನಡಸಿಕೊಂಡು ಬಂದಿತು. ಈ ಪುಣ್ಯ, ಕೀರ್ತಿ, ಉಪಕಾರ ದೊಡ್ಡವು.

ಸ್ವಾತಂತ್ರ್ಯ ದೊರಕಿಯಾದ ಮೇಲೆ ಕಾಂಗ್ರೆಸ್ ರಾಜಕೀಯ ರಂಗದ ಒಂದು ಪಕ್ಷವಾಗಿ ಕೆಲಸ ಮಾಡದೆ ಹಿಮ್ಮೆಟ್ಟಬೇಕೆಂಬುದು ಗಾಂಧೀಜಿಯವರ ಇಷ್ಟವಾಗಿತ್ತು. ಆ ರೀತಿ ಆಗಲಿಲ್ಲ. ಹಾಗೆ ನಡೆದಿದ್ದರೆ ಆಧುನಿಕ ಭಾರತದ ರಾಜಕೀಯ ಜೀವನ ಹೇಗೆ ರೂಪಿತವಾಗುತ್ತಿತ್ತೊ ಹೇಳುವುದು ಕಷ್ಟ. ಅದು ಅಧಿಕಾರ ಸೂತ್ರವನ್ನು ವಹಿಸಿ, ಫಲವಾಗಿ ಶಕ್ತಿ ಸ್ತಿಮಿತತೆಗಳನ್ನು ಹೇಗೆ ಬೆಳಸಿದೆ ಎಂಬುದನ್ನು ಹೇಳಿದೆ. ಆದರೆ, ಅದರಲ್ಲಿ ದೌರ್ಬಲ್ಯ ತೋರಿಕೊಂಡು ಅದರ ಸಂಸ್ಥಾ ಭಾಗಕ್ಕೂ ಆಳ್ವಿಕೆ ನಡಸುವ ಮತ್ತು ಪಾರ್ಲಿಮೆಂಟರಿ ಭಾಗಕ್ಕೂ ಕೆಲವೇಳೆ ಹೊಂದಿಕೆ ಇಲ್ಲದೆ ಆಗಿದೆ. ಸ್ವಾತಂತ್ರ್ಯಕ್ಕೆ ಮುನ್ನ ಕೇವಲ ನಿಃಸ್ವಾರ್ಥದಿಂದ ದುಡಿದು ಬೆಳೆದ ಸಂಸ್ಥೆಯಲ್ಲಿ ಕೆಲವೇಳೆ ಸ್ವಾರ್ಥ, ಪಕ್ಷ ಶ್ರದ್ಧೆ, ಸ್ಥಾನ ಅಧಿಕಾರ ಮೋಹ ಬೆಳೆದಿರುವುದುಂಟು. ಅದು ಗೆಲ್ಲುವ ಸುಮಾರು ಸಮಯದಲ್ಲಿ ಅದಕ್ಕೆ ಬಹು ಸಂಖ್ಯೆಯಲ್ಲಿ ಸೇರಿಕೊಂಡ ಅಷ್ಟೇನೂ ಅಸ್ವಾರ್ಥವಲ್ಲದ ಗುಂಪುಗಳು ಕಾಂಗ್ರೆಸ್ಸಿನ ಒಳ ಹದವನ್ನು ಕೆಡಿಸಿದವೆನ್ನಬೇಕು. ಕೇವಲ ರಾಜಕೀಯವಾದ ಒಂದು ಪಕ್ಷ ಸ್ಥಾನಭದ್ರತೆಗಾಗಿ, ಸ್ವಾರ್ಥಸಾಧನೆಗಾಗಿ ಏನೇನು ಮಾಡಬಹುದೊ ಅದನ್ನೆಲ್ಲ ಹಲವೇಳೆ, ಹಲವು ಕಡೆ ಕಾಂಗ್ರೆಸಿನ ಹೆಸರಲ್ಲಿ ಮಾಡಿರುವುದರಿಂದ ಅದಕ್ಕೆ ಅಪಕೀರ್ತಿ ಬಂದಿತು. ಇಂದು ಹಲವು ಕಡೆ ಅದರ ಪರವಾಗಿ ವಿಶ್ವಾಸ ತುಂಬಾ ಕಡಮೆಯಾಗಿದೆ. ಬಹುತರ ಮುಂದಿನ ಚುನಾವಣೆಗಳಲ್ಲಿ ಅದಕ್ಕೆ ಕೇಂದ್ರದಲ್ಲಿಯೂ ಇನ್ನೂ ಅನೇಕ ರಾಜ್ಯಗಳಲ್ಲಿಯೂ ಸಂಖ್ಯಾ ಬಹುಮತ ದೊರೆತೀತಾದರೂ ಅದಕ್ಕಿರುವ ಬಹುಮತ ಕಡಮೆಯಾದೀತೇನೊ. ಈ ಅಧಿವೇಶನದಲ್ಲಿ ನಿಷ್ಠುರ ನೇಮಗಳನ್ನು ಹೊತ್ತು ಕಾಂಗ್ರೆಸ್ ಪುನಃ ಶುಚಿಶೀಲವಾಗದಿದ್ದರೆ ಇನ್ನೊಂದು ಚುನಾವಣೆಗೆ ಅದು ಬಹುಶಃ ಹಿಂದೆ ಬಿದ್ದೀತು.

ಅದರ ಧರ್ಮದಲ್ಲಿ ಅದು ಕ್ರಮಶಃ ಚ್ಯುತಿಗೊಂಡುದಕ್ಕೆ ಒಂದು ಕಡೆ ಅದು ಕಾರಣವಾದರೆ, ಇನ್ನೊಂದು ಕಡೆ ಇತರ ಪಕ್ಷಗಳ ಏಳಿಗೆಯೂ ಇದಕ್ಕೆ ಕಾರಣವಾಗಿದೆ. ಹೇಳಿ ಕೇಳಿ ಪ್ರಜಾಸತ್ತೆಯಲ್ಲಿ ರಾಜಕೀಯ ಜೀವನ ವ್ಯವಹಾರಕ್ಕೆ ಸಂಬಂಧಿಸಿದ್ದು. ಆಳುತ್ತಿರುವವರನ್ನು ಉರುಳಿಸಿ ತಾವು ಆ ಸ್ಥಾನಕ್ಕೆ ಬಂದು ರಾಜ್ಯಸೂತ್ರವನ್ನೂ ತಮ್ಮ ಪ್ರಯೋಜನವನ್ನೂ ಹೊಂದಿಕೊಳ್ಳುವಂತೆ ಮಾಡುವುದು ಇಲ್ಲಿ ಸಾಮಾನ್ಯ ಮಾರ್ಗ.



ಸ್ಥಾನದಲ್ಲಿ ಇರುವವರು ಸರ್ವಪ್ರಕಾರದಲ್ಲಿ ಅಲ್ಲೇ ಇರುವುದಕ್ಕೆ ಪ್ರಯತ್ನಿಸುವರು; ಅದಕ್ಕಾಗಿ ಲೋಭ, ಮೋಹ, ಭಯ ತೋರಿಸುವರು. ಭೇದಾದಿಗಳನ್ನುಂಟು ಮಾಡುವರು. ಇದು ಕಾಂಗ್ರೆಸಿನಂಥ ಚಾರಿತ್ರವುಳ್ಳ ಸಂಸ್ಥೆಯಲ್ಲಿ ಕಂಡರೆ ಜನಕ್ಕೆ ಬೇಸರ ಹೆಚ್ಚಾಗುವುದು ಸಹಜ. ಶುದ್ಧವಾದ ಕನ್ನಡಿಯಲ್ಲಿಯೇ ಮಾಲಿನ್ಯ ಹೆಚ್ಚು ಕಾಣುವುದು. ಬೆಳ್ಳನೆಯ ಬಟ್ಟೆ ಮೇಲೆಯೇ ದೂಳು ಅಸಹ್ಯವಾಗುವುದು. ಅಲ್ಲದೆ ರಾಜಕಾರ್ಯವನ್ನು ನಡಸುವವರ ಮೇಲೆ ಎಲ್ಲರ ಆಕ್ರೋಶ, ಅಸೂಯೆ, ಅತೃಪ್ತಿ ಎರಗುವುದು. ಸಣ್ಣ ಲೋಪದೋಷಗಳು ದೊಡ್ಡವಾಗಿ ಕಾಣಿಸಿ, ರಾಜಕೀಯ ವಿರೋಧ ಪಕ್ಷಗಳು ಅವನ್ನು ಕಟು ಆಕ್ಷೇಪಣೆಗೆ ಈಡು ಮಾಡುವ ಅವಕಾಶವಿರುತ್ತದೆ. ಅಲ್ಲದೆ ಅದು ಬಹುದಿನ ಕಾಂಗ್ರೆಸ್ ಸರಕಾರಕ್ಕೆ ವಿರುದ್ಧ ಪಕ್ಷವಾಗಿತ್ತು. ಆಡಳಿತದ ಅಧಿಕಾರವರ್ಗವನ್ನು ಕಂಡರೆ ಅದಕ್ಕೆ ಸಂಶಯ. ಆದುದರಿಂದ ಅದರ ವಿಶ್ವಾಸವನ್ನು ಇನ್ನೂವರೆಗೂ ಪೂರ್ತಿಯಾಗಿ ಒಲಿಸಿಕೊಳ್ಳಲಾದಂತಿಲ್ಲ.

ಅತ್ತ ಆಡಳಿತಗಾರರ ಕಡೆ ನೋಡಿದರೆ, ಆಳುವ ಪಕ್ಷದವರ ವಿಷಯದಲ್ಲಿ ಅವರಿಗೂ ಪೂರ್ತಿ ಏಕಹೃದಯತೆಯ ಸಂಪಾದನೆಯಾಗಿಲ್ಲ. ಕಾಂಗ್ರೆಸ್ ನಾಯಕರಲ್ಲಿ ಹಲವರಿಗೆ ಆಡಳಿತದ ಅನುಭವ, ಶಿಸ್ತು ಸಂಪ್ರದಾಯಗಳು ಅಭಾವವಾಗಿದ್ದವು. ಆಡಳಿತದ ನೌಕರರ ನೆರವು ನಂಬಿಕೆಗಳಿಲ್ಲದೆ ಪಕ್ಷದ ಧೋರಣೆಗಳನ್ನೂ ತಾವು ಬಯಸುವಂತೆ ರಾಷ್ಟ್ರದ ಹಿತವನ್ನೂ ಸಾಧಿಸುವುದು ಸುತರಾಂ ಕಷ್ಟ. ಅಪನಂಬಿಕೆ ಇರುವ ಕಡೆ ರೂಪಾಯಿಗೆ ನೂರು ಪೈಸೆ ಬೆಲೆಯೂ ಸೌಹಾರ್ದವೂ ಗಳಿಕೆಯಾಗದು.

ಇನ್ನೊಂದು ಸಂಗತಿ : ನಮ್ಮ ಜನಕ್ಕೆ ಪ್ರಜಾರಾಜ್ಯ ಪದ್ಧತಿ ಹೊಸದು. ಇನ್ನೂ ಜನ ಸರ್ಕಾರವೆಂದರೆ ಜಬರದಸ್ತಿಂದ ಕೆಲಸ ಮಾಡುವ ಅಧಿಕಾರ ವರ್ಗವೆಂದೇ ಅರಿತಿದೆ. ಜರ್ಬಿನಿಂದ ನಡೆದರೆಯೇ ಅದಕ್ಕೆ ತೃಪ್ತಿ, ಚುರುಕು ಕಂಡಾವು. ಮೇಲಿನ ಮಟ್ಟದವರೂ ಓದಿದವರೂ ಸಣ್ಣ ಪುಢಾರಿಗಳೂ ಎಲ್ಲೆಲ್ಲಿಯೂ ಪ್ರಜಾತಂತ್ರದ ತತ್ವಗಳನ್ನು ಬಲ್ಲವರೂ ಬಳಸುವವರೂ ತಮ್ಮ ಪ್ರಯೋಜನಕ್ಕೆ ದುಡಿಸಿಕೊಳ್ಳುವವರು. ಸಾಮಾನ್ಯ ಜನದ ಮನಸ್ಸು ಇನ್ನೂ ಇದರ ಧಾತುವನ್ನು ಅರ್ಥಮಾಡಿಕೊಂಡಿಲ್ಲ. ಪ್ರಜಾವರ್ಗಕ್ಕೆ ತಕ್ಕ ತಿಳಿವಳಿಕೆ, ಶಿಕ್ಷಣ, ತರಬೇತು ಆಗುವುದಕ್ಕೆ ಇನ್ನಷ್ಟು ಕಾಲ ಬೇಕು. ಅಷ್ಟರಲ್ಲಿ ಇನ್ನೇನಾಗುವುದೊ ಎರಡನೆಯ ಸಂಗತಿ: ನಮ್ಮ ಜನಕ್ಕೆ ಇಷ್ಟು ದೊಡ್ಡ ಪ್ರಮಾಣದ ಅಧಿಕಾರ, ಹಣದ ವಹಿವಾಟು, ಪ್ರೋತ್ಸಾಹ ಶಕ್ತಿ – Patronage ಹಿಂದೆ ಪರಿಚಿತವಾದುವಲ್ಲ. ಇವು ಎಲ್ಲವೂ ತಲೆಗೆ ಅಮಲೇರಿಸುವ ಪ್ರಭಾವಗಳು, ಶಕ್ತಿಗಳು. ಇವು ಹೊಟ್ಟೆಗೆ ಹೋದರೆ ಸಾಮಾನ್ಯರಿಗೆ ಜೀರ್ಣವಾಗುವುದಿಲ್ಲ. ಅನೇಕರಲ್ಲಿ ಪ್ರಜಾತಂತ್ರಕ್ಕೆ ವಿರೋಧವಾದ ವಿಕಾರಗಳು, ರೋಗ ರುಜಿನಗಳು ಹುಟ್ಟುತ್ತವೆ. ಜೊತೆಗೆ,

ಸ್ಥಳ, ಸ್ಥಳದಲ್ಲಿನ ವೋಟುದಾರರ ಸಂಖ್ಯೆಯನ್ನು ತಮ್ಮ ಕೈಯಲ್ಲಿಟ್ಟುಕೊಂಡಿರುವ ಸ್ಥಳದ ನಾಯಕರ ಪ್ರಭಾವಗಳು ಆಡಳಿತ ಪಕ್ಷದ ಮೇಲೆ ಬೀಳುತ್ತ ಪಕ್ಷದ ನೀತಿಯ ಮಟ್ಟವನ್ನೂ ಆಡಳಿತದ ಸುಭಗತೆಯನ್ನೂ ಕೆಡಿಸುತ್ತವೆ. ನಾಳೆ ಎಲೆಕ್ಷನ್ನಲ್ಲಿ ಗೆಲ್ಲಬೇಕಾದರೆ ಇಂಥಿಂಥವರ ನೆರವು ಬೇಕೆಂಬ ಯೋಚನೆ ಒಳ್ಳೆಯ ನಾಯಕರನ್ನೂ ಅವರ ಮನಸ್ಸನ್ನೂ ದುರ್ಬಲಗೊಳಿಸಬಲ್ಲದು. ಅಸಂಖ್ಯಾತರಾದ ಸಣ್ಣ ಪುಟ್ಟ ಪುಢಾರಿಗಳು ತಮಗೆ ಪಕ್ಷದ ನಾಯಕರಲ್ಲಿರುವ ಬಳಕೆಯನ್ನೂ ವಿಶ್ವಾಸವನ್ನೂ ಮಾನ್ಯತೆಯನ್ನೂ ಉಪಯೋಗಿಸಿ ಕೊಳ್ಳಬಯಸುವರು. ಸ್ವಂತ ಪ್ರಯೋಜನಗಳನ್ನು ಸಾಧಿಸಿಕೊಳ್ಳುವರು. ಆಡಳಿತ ವರ್ಗದವರ ಮೇಲೆ ಅಪಪ್ರಚಾರ ಮಾಡುತ್ತಾರೆ. ಅವರ ಮೇಲೆ ಸೊಡ್ಡು ಹೊರಿಸಲೇ ಹೊಂಚುತ್ತಾರೆ. ಎರಡೂ ಕಡೆ ನ್ಯಾಯ ನಿಷ್ಪಕ್ಷಪಾತಗಳನ್ನು ಕೆಡಿಸುತ್ತಾರೆ. ಒಂದು ಪಕ್ಷದ ದೂರುವಿನ ಮೇಲೆ ಇದರಷ್ಟು ಮಾರಕವಾದ್ದು ಇನ್ನೊಂದಿಲ್ಲ. ಒಂದು ಕಡೆ ಪಕ್ಷದ ನಾಯಕರ ಮನಸ್ಸು ಸಡಿಲವಾಗಿ ಒಟ್ಟು ನಾಡಿನ ಹಿತಕ್ಕಿಂತ ಪಕ್ಷದ ಮತ್ತು ಪಕ್ಷದ ಜನರ ಪ್ರಯೋಜನದ ಕಡೆಯೇ ನಿರಂತರವಾಗಿ ನೋಡುತ್ತಿರಬೇಕಾಗುವುದು. ಆಡಳಿತಗಾರರ ಬಳಿಗೆ ಹೋಗಿ ಪ್ರಭಾವಶಾಲಿಗಳಾದ ರಾಜಕೀಯದವರು ಅವರ ಮನಸ್ಸನ್ನು ಸಡಿಲಗೊಳಿಸುತ್ತಾರೆ. ಮೋಹ ಜಾಲಗಳನ್ನು ನೇಯುತ್ತಾರೆ. ತಮ್ಮ ತೀರ್ಮಾನವನ್ನು ಮೇಲಿನವರು ನಡಸುವರೊ ಇಲ್ಲವೊ ಎಂಬ ಅಪನಂಬಿಕೆ ಅವರ ಕೈಯನ್ನು ಅಭದ್ರಮಾಡುತ್ತದೆ. ಅತಿ ದೊಡ್ಡ ಅಧಿಕಾರಿಯ ನ್ಯಾಯಸಮ್ಮತವಾದ ಮಾತನ್ನು ಮಂತ್ರಿಗಳು ತಳ್ಳಿ ಹಾಕುವರೆಂಬ ಶಂಕೆ ಹುಟ್ಟಿದರೆ, ಇವರ ತೀರ್ಮಾನಬುದ್ಧಿ ಕುಂಟುತ್ತದೆ. ಇದಲ್ಲದೆ ತಾವು ಯಾರ ಮೇಲೆ ಶಿಸ್ತುಕ್ರಮ ಆಡಳಿತ ನಡಸಬೇಕಾಗಿದೆಯೊ ಅಂಥವರೆದುರಿಗೆ ದೊಡ್ಡ ಹುದ್ದೆಯ ಆಡಳಿತಗಾರರಿಗೇ ಮಾನ್ಯತೆ ಕಡಮೆಯಾದಂತೆ ಸ್ಥಳದ ರಾಜಕೀಯ ವರ್ಗಗಳವರ ಪ್ರತಿಷ್ಠೆ ಹೆಚ್ಚಾಗುವುದು. ಇದು ಪ್ರತಿ ಮಂತ್ರಿಯ ದೇಶ ಸಂಚಾರ ಸಮಯದಲ್ಲಿಯೂ ನಡೆದರೆ ಆಡಳಿತದವರ ಮಟ್ಟ ಕಡಮೆಯಾಗುತ್ತದೆ. ಮಂತ್ರಿಗಳಲ್ಲಿ, ರಾಜಕೀಯದವರಲ್ಲಿ, ಆಡಳಿತ ವರ್ಗದಲ್ಲಿ ಆಯಾ ವರ್ಗದ ಸ್ಥಾನ ಮಾನ, ನಿಷ್ಠೆ ಕಟ್ಟುನಿಟ್ಟಾಗಿ ನಡೆದರೆ ಮಾತ್ರ ಪ್ರಜಾತಂತ್ರದಲ್ಲಿ ಜನಹಿತ ಸಮಾನವಾಗಿ ಸಾಧ್ಯವಾದೀತು. ಇಲ್ಲವಾದರೆ ಸಾರ್ವತ್ರಿಕವಾಗಿ ರಾಜಕೀಯ ಜೀವನ ಹದಗೆಡುವುದು.

ಇದು ಬಹುಮಟ್ಟಿಗೆ ಕಾಂಗ್ರೆಸ್ ಆಡಳಿತದಲ್ಲಿ ಕಾಣುತ್ತಿರುವ ಲಕ್ಷಣ. ಈ ದೌರ್ಬಲ್ಯವನ್ನು ನಿವಾರಣೆ ಮಾಡಿ ಹೆಚ್ಚು ಶುಚಿಶೀಲತೆ ಬಂದ ಹೊರತು ಪುನಃ ಕಾಂಗ್ರೆಸಿಗೆ ಕೀರ್ತಿ ಬರುವುದಿಲ್ಲ. ಜೊತೆಗೆ ಎಲ್ಲ ರಂಗಗಳಲ್ಲಿಯೂ ಆಡಳಿತದ ಜನ ದಕ್ಷತೆ ಉಳ್ಳ ನೂರಾರು ಸಾವಿರಾರು ಮಂದಿ ಪಕ್ಷದ ಎರಡು, ಮೂರು, ನಾಲ್ಕನೆಯ ಮಟ್ಟದ ನಾಯಕರಾಗಿ ತಯಾರಾಗುತ್ತಿರುವ ಚಿಹ್ನೆ ಕಾಣುತ್ತಿಲ್ಲ. ಇತರ ಪಕ್ಷಗಳಲ್ಲಿ ಇವೊತ್ತು ಕಾಂಗ್ರೆಸ್‌ನಷ್ಟು ದೀರ್ಘ ಚರಿತ್ರೆಯನ್ನು, ಸೇವೆ ಸಾಧನೆಗಳ ಚಾರಿತ್ರವನ್ನು ಉಳ್ಳ ಪಕ್ಷಗಳು ಬೇರೆ ಇಲ್ಲವಾದರೂ ಭಾರತದ ಹೊಸ ರಾಜಕೀಯ ಹುಟ್ಟಿದಂದಿನಿಂದ ಇತರ ಪಕ್ಷಗಳು ಹುಟ್ಟಿ ಬಲಿಯುತ್ತಿವೆ. ಕಾಂಗ್ರೆಸ್ ತಾನೊಂದೇ ರಾಷ್ಟ್ರಹಿತವನ್ನೆಲ್ಲ ಪ್ರತಿನಿಧಿಸುತ್ತೇನೆ ಎಂದು ಹೇಳುವುದಕ್ಕೆ ಇನ್ನು ಮುಂದೆ ಆಗದು. ಅದರ ರಾಜಕೀಯ ಅಂಗವೂ ಸಂಸ್ಥೆಯ ಇತರ ಕ್ಷೇತ್ರಗಳನ್ನು ನಡಸುವ ಅಂಗವೂ ಒಮ್ಮನಸ್ಸಿನಿಂದ ಕೆಲಸ ಮಾಡಬೇಕಾಗವುದು. ಸಂಸ್ಥೆಯ ಪ್ರಧಾನ ನಾಯಕರೇ ಪಾರ್ಲಿಮೆಂಟರಿ ಶಾಖೆಯ ನಾಯಕರಾಗಿ ರಾಜಕೀಯದಲ್ಲಿ ಜವಾಬ್ದಾರಿ ಹೊರುವುದು ಅಗತ್ಯವಾಗುವುದು. ಎರಡು ಬಣಗಳು ಸೇರಿಕೊಂಡು ವಿರಸಗಳನ್ನು ವಿರೋಧವನ್ನು ಮಸೆಯುವುದು ರಾಷ್ಟ್ರ ಜೀವನಕ್ಕೆ ತುಂಬಾ ಕೆಡುಕಿನ ಸಂದರ್ಭ. ಸಂಸ್ಥೆಯ ಒಳಗಿನ ಗುಂಪುಗಳೂ ಅವರ ನಂಜು, ಪಿತೂರಿ, ಅನೈಕಮತ್ಯ, ಕಾದಾಟಗಳೂ ಕಾಂಗ್ರೆಸ್ಸಿನ ಹೆಸರನ್ನು ಎಲ್ಲ ರಾಜ್ಯಗಳಲ್ಲೂ ತುಂಬಾ ಕೆಡಿಸಿವೆ. ಕಾಂಗ್ರೆಸ್‌ನಲ್ಲಿ ಜನಕ್ಕೆ ವಿಶ್ವಾಸ ಕಡಮೆಯಾಗುವುದಕ್ಕೆ ಇತರ ಪಕ್ಷಗಳವರು ಪ್ರಬಲರಾಗುವುದೂ ಇನ್ನೊಂದು ಕಾರಣವಾಗಿದೆ. ಈ ಮತ್ತು, ಇಂಥ ಅನೇಕ ಮುಖ್ಯವಾದ ಸಂಗತಿಗಳನ್ನು ಬೆಂಗಳೂರಿನ ಈ ಅಧಿವೇಶನ ಪರ್ಯಾಲೋಚಿಸುವುದು ಸೂಕ್ತ. ರಾಷ್ಟ್ರಹಿತಸಾಧಕ ಆದ, ರಾಷ್ಟ್ರಶಕ್ತಿಯನ್ನು ಬಲಿಸುವ ನಿರ್ಣಯಗಳಿಗೆ ಬಂದಾರೆಂಬ ನಿರೀಕ್ಷೆ ಇದೆ.

ರಾಜಕೀಯ ಪಕ್ಷದ ಪರಿಸ್ಥಿತಿಯನ್ನು ನೋಡಿದರೆ ಸದ್ಯಕ್ಕೆ ಇತರ ಯಾವ ಪಕ್ಷವೂ ಇದರಷ್ಟಾದರೂ ಸರ್ವಹಿತಸಾಧಕವಾಗಿ ಇನ್ನೈದು ವರ್ಷಗಳಾದರೂ ಬಲಿತಾವೆಂದು ಕಾಣಿಸುವುದಿಲ್ಲ. ಸೋಷಿಯಲಿಸ್ಟ್ ಪಕ್ಷಗಳಲ್ಲಿ ಹಿಂಬಾಲಕ ವರ್ಗಕ್ಕಿಂತ ನಾಯಕವರ್ಗ ಹೆಚ್ಚಿರುವಂತಿದೆ. ನಾಯಕರಲ್ಲಿ ಒಬ್ಬೊಬ್ಬರದು ಒಂದೊಂದು ಮತಿ, ಮಾತು. ಇನ್ನೊಂದು ಕಮ್ಯುನಿಸ್ಟ್ ಪಂಥ. ಕಾಮಗಾರವರ್ಗ ರಾಕ್ಷಸವಾಗಿ ಬೆಳೆದು ಅದರ ಎಲ್ಲ ವರ್ಗಗಳನ್ನೂ ಅವರು ದುಡಿಸಿಕೊಂಡು ಪ್ರಬಲಿಸಿ ಆ ಪಕ್ಷ ಅಧಿಕಾರಕ್ಕೆ ಬರುವುದಾದರೆ, ಭಾರತದಲ್ಲಿ ಪ್ರಜಾತಂತ್ರದ ಆಸೆ ಮುಗಿದಂತೆಯೇ. ಇನ್ನೊಂದು ಕಡೆ ರಾಜ್ಯಾಧಿಕಾರ ಕಳೆದುಕೊಂಡವರ, ಮತವಳರ, ದೊಡ್ಡ ಜಮೀನ್ದಾರರ, ವರ್ತಕರ, ದೊಡ್ಡ ಬಂಡವಾಳಗಾರರ ಪಕ್ಷವೊಂದಕ್ಕೆ ಪ್ರಾಬಲ್ಯ ಬಂದರೆ ಈ ವರೆಗೂ ಸಾಧಿಸಿದ ಸಾಮಾಜಿಕ ಹಿತ ಕರಗಿ ಹೋಗುತ್ತದೆ. ಭರತಖಂಡದ ಬಹುಸಂಖ್ಯೆಯ ಪಕ್ಷ ಹಿಂದೂ ಎಂಬ ಹೆಸರಿನಲ್ಲಿ ಪ್ರಾಬಲ್ಯ ಪಡೆದರೆ ಮುಸ್ಲಿಂ, ಕ್ರಿಸ್ತ, ಸಿಖ್, ಹರಿಜನ ವರ್ಗ ಮುಂತಾದ ಎಲ್ಲ ವಲಯಗಳಲ್ಲಿಯೂ ಘರ್ಷಣೆ, ಕೋಟಲೆಗಳು ನಾಡಿನಲ್ಲಿ ಬಲಿಯುವ ಭಯವಿದೆ. ಪಕ್ಷ, ಪ್ರಾಂತ, ಭಾಷಾ ಕಲಹಗಳ ಜೊತೆಗೆ ಇದು ಸೇರಿದರೆ ಭಾರತದ ಅದೃಷ್ಟದಲ್ಲಿ ಪುನಃ ಇನ್ನೇನು ದುರ್ಗತಿ ಹುಟ್ಟುವುದೋ. ಕಡೆಯಲ್ಲಿ ಈ ಸಂಪ್ರದಾಯ ವರ್ಗದವರಿಗೂ ಕಮ್ಯುನಿಸ್ಟ್ ವರ್ಗಕ್ಕೂ ಭೀಷಣ ವಿರೋಧ ಹುಟ್ಟಿ ಇನ್ನೊಂದು ಕುರುಕ್ಷೇತ್ರವು ನಡೆದೀತು. ಆದರೂ ಇತರ ಪಕ್ಷಗಳು ಇನ್ನೂ ದುರ್ಬಲವಾಗಿರುವುದರಿಂದ, ಸಾಕಷ್ಟು

ಸುಸಂಘಟಿತವಾಗಿಲ್ಲದಿರುವುದರಿಂದ ಮಾತ್ರ ಕಾಂಗ್ರೆಸ್ ಬಲವಾಗಿದೆ. ಗೆಲ್ಲಬೇಕು ಎನ್ನುವಂತಾಗಬಾರದು; ಗೆಲ್ಲಬೇಕು. ಇವರಿಗಿಂತ ಇತರ ಪಕ್ಷಗಳವರು ಅಪ್ರಿಯ, ಅಹಿತ ಎಂಬ ಕಾರಣದಿಂದ ಮಾತ್ರ ಇದರ ಪ್ರಾಧಾನ್ಯ ಉಳಿಯುವಂತಾಗಬಾರದು. ಪಂಡಿತ ನೆಹರೂ ಅವರಂಥ ಹಿರಿಯರ ಪುಣ್ಯದಿಂದ, ಮಾರ್ಗದರ್ಶನದಿಂದ ಕಾಂಗ್ರೆಸ್‌ನಲ್ಲಿರುವ ಕೊಳೆ, ವಿರಸ, ಅಯುಕ್ತತೆ ತೊಲಗಿ ಮುಂದಿನ 5-10 ವರ್ಷಗಳಲ್ಲಿ ನಾಡಿನ ಶಕ್ತಿ ಮಹೋನ್ನತಿಗೆ ಬೆಳೆದು, ಈ ದೇಶಕ್ಕೆ ಬಲವೂ ಸುಭಿಕ್ಷವೂ ಕೀರ್ತಿಯೂ ಬರುವಂತಾಗಲು ಈ ಅಧಿವೇಶನದಲ್ಲಿ ಕಾರ್ಯಕಲಾಪಗಳೂ ಪರಿಣಾಮಗಳೂ ಕಟ್ಟಿದರೆ ಸಂತೋಷ.

❑

# 4. ವರಮಾನ – ಧಾರಣೆವಾಸಿ

ಹಿಂದಿನ ಕಾಲಗಳ ಅನುಭವ ಇರುವವರಿಗೆ, ಇಂದಿನ ಪರಿಸ್ಥಿತಿಯಲ್ಲಿ ಕೆಲವು ವಿಶೇಷ ಸಂಗತಿಗಳು ಎದ್ದು ಕಾಣುತ್ತವೆ. ಹೊಸತಾಗಿ ನೂರಾರು ಬಗೆಯ ಉದ್ಯೋಗಗಳೂ ಕಾರ್ಯವಿಧಾನಗಳೂ ಸಾವಿರಾರು ಕೋಟಿ ರೂ. ವೆಚ್ಚದಲ್ಲಿ ಹುಟ್ಟಿ ನಡೆಯುತ್ತಿರುವುದು ಅವುಗಳಲ್ಲಿ ಒಂದು. ಅವುಗಳ ಪರಿಣಾಮವಾಗಿ ಕೂಲಿ, ಸಂಬಳ, ವರಮಾನ ಹೆಚ್ಚುತ್ತಿರುವುದು, ಎರಡು. ಜನ ಕೊಳ್ಳಬೇಕಾದ ಎಲ್ಲ ಪದಾರ್ಥ, ಸೇವೆ ಸೌಕರ್ಯಗಳ ಬೆಲೆ ಹೆಚ್ಚಿ ಧಾರಣೆವಾಸಿಗಳು ಏರಿ ಜೀವನಕ್ಕೆ ತಗಲುವ ವೆಚ್ಚ ಹೆಚ್ಚಾಗಿರುವುದು ಮೂರನೆಯದು. ಇನ್ನೂ ಎಷ್ಟೋ ಲಕ್ಷಣಗಳು ಇವೆ - ಇವಕ್ಕೆ ಕಾರಣವಾಗಿ, ಇವುಗಳ ಪರಿಣಾಮವಾಗಿ. ಈ ಮೂರು ಸಂಗತಿಗಳನ್ನು ಕುರಿತು ಕೆಲವು ಮಾತುಗಳನ್ನು ಹೇಳುತ್ತೇನೆ.

ದೇಶದ ಬಡತನ ಮುರಿಯುವಂತೆ ಇಲ್ಲಿ ಸಂಪತ್ತು ಹೆಚ್ಚಬೇಕು. ಆ ಸಂಪತ್ತು ಎಲ್ಲ ಬಗೆಗಳಲ್ಲಿಯೂ ಸಮರಸದಲ್ಲಿ ಹಂಚಬೇಕು. ಇದಕ್ಕೆ ಅನುಕೂಲವಾಗಿ ಉದ್ಯೋಗಗಳೂ ಕೈಗಾರಿಕೆಗಳೂ ನಿರ್ಮಾಣವಾಗಿ ದೇಶದಲ್ಲಿ ಉತ್ಪತ್ತಿಕಾರ್ಯ ವಿವಿಧವಾಗಬೇಕು. ಆ ಮೂಲಕ ಒಂದು ಕಡೆ ಉತ್ಪತ್ತಿ ಕೌಶಲವೂ ಇನ್ನೊಂದು ಕಡೆ ಉತ್ಪತ್ತಿಯ ಪ್ರಮಾಣವೂ ಹೆಚ್ಚಬೇಕು – ಎಂಬುದೂ ಗುರಿಯೇ. ಸರ್ಕಾರ ಈ ಹತ್ತು ವರ್ಷಗಳಿಂದಲೂ ನಿರ್ಮಿಸುತ್ತಿರುವ ಆರ್ಥಿಕ ಪುನರುಜ್ಜೀವನದ ಆವರಣದಲ್ಲಿ ಇದಕ್ಕೆ ಬೇಕಾದಷ್ಟು ಉತ್ತೇಜನ, ನೆರವು ಸಿಕ್ಕಿವೆ. ತಕ್ಕಷ್ಟು ಫಲ ದೊರೆತಿಲ್ಲವೇನೊ. ಇವುಗಳ ನಾಲ್ಕರಷ್ಟು ಕೆಲಸ ನಡೆದರೂ ಏಳಿಗೆ ಸಾಲದು ನಿಜ. ಆದರೂ ಇದನ್ನು ಜೀರ್ಣಿಸಿಕೊಳ್ಳುವುದು ಕೂಡ ಜನಕ್ಕೆ, ನಾಡಿಗೆ ಕಷ್ಟವಾಗಿದೆ. ಈ ಜೀರ್ಣಶಕ್ತಿಯನ್ನು ಹೆಚ್ಚಿಸುವುದು ಈ ಕಾರ್ಯಗಳ ಒಂದು ಗುರಿ. ಆದ್ದರಿಂದ ಅದನ್ನು ಹೆಚ್ಚಾಗಿ ಮನಸ್ಸಿಗೆ ತಂದುಕೊಳ್ಳಬಾರದು. ಇನ್ನು ಉತ್ಪತ್ತಿಯಂತ್ರ ಇಲ್ಲೇ ನಿರ್ಮಾಣ ಮಾಡಿಕೊಂಡದ್ದಾಗಿರ ಬಹುದು ಅಥವಾ ವಿದೇಶದಿಂದ ಆಮದು ಮಾಡಿಕೊಂಡಿರಬಹುದು. ಇದರ ಚಾಲನೆಯ ಕುಶಲಕರ್ಮವೂ ತಂತ್ರವೂ ಹಾಗೇ. ಇಲ್ಲಿಯೇ ಬೆಳದದ್ದಾದರೆ ಅದಕ್ಕೆ ತೆರಬೇಕಾದ ಹಣ, ಪ್ರಯೋಜನ ಇಲ್ಲಿಯೇ ವಿನಿಯೋಗವಾಗುವುದು. ಇಲ್ಲಿನ ಲಾಭಕ್ಕೇ ಒದಗುವುದು. ಹೊರಗಿಂದ ತರಿಸಿದ್ದಾದರೆ, ಹೊರಗಿನವರ ನೆರವಿನಿಂದ ಅದು

ನಡೆಯುವುದಾದರೆ, ಅದಕ್ಕೆ ಹೊರಗಿನವರಿಗೆ ಹಣ ಲಾಭ ತೆರಬೇಕು. ಇದರ ಜೊತೆಗೆ ಉತ್ಪತ್ತಿ, ಜನರ ದಿನಬಳಕೆಯ ಸಾಮಗ್ರಿಗಳನ್ನು ತಯಾರು ಮಾಡಿ ಅವರ ಭೋಗಕ್ಕೆ ಹೆಚ್ಚು ಸಾಮಾನುಗಳನ್ನು ಒದಗಿಸುವುದಾದರೆ ನೇರವಾಗಿ ಅದರ ಪ್ರಯೋಜನ ಜನರ ಭೋಗಕ್ಕೆ ದೊರೆಯುವುದು. ಹೆಚ್ಚು ಉತ್ಪತ್ತಿಯಿಂದ ಪದಾರ್ಥಗಳು ಹೆಚ್ಚು ಅಗ್ಗವಾದಾವು. ಅಲ್ಲದೆ ಈ ಉತ್ಪತ್ತಿ ಗಣಿಯ ಕೆಲಸ, ಪೆಟ್ರೋಲ್ ಉತ್ಪನ್ನ, ಜಲವಿದ್ಯುತ್ ನಿರ್ಮಾಣ, ಭೂಸಾರ ಪೋಷಕಗಳ, ಯಂತ್ರಗಳ ನಿರ್ಮಾಣ, ರಸ್ತೆ, ಹಡಗು, ರೈಲ್ವೆ, ತಂತಿ ಏರ್ಪಾಡು ಹಾಕುವುದು, ರಕ್ಷಣೆಯ ಸಜ್ಜು ಮುಂತಾದವುಗಳ ಉತ್ಪತ್ತಿಗಾದರೆ, ನೇರವಾಗಿ ಜನದ ಭೋಗಕ್ಕೆ ಈ ಉದ್ಯೋಗದ ಪ್ರಯೋಜನ ದೊರೆಯುವುದಿಲ್ಲ. ವಿದ್ಯೆಗೆ, ಆರೋಗ್ಯ ಸಲಕರಣೆಗಳಿಗೆ, ಸಂಶೋಧನ ಶಾಖೆ, ಆಡಳಿತ ವರ್ಗ, ಪೊಲೀಸ್ ಮತ್ತು ನ್ಯಾಯ ಶಾಖೆ ಇವುಗಳಿಗೆ ಕೂಡ ಮಾಡುವ ವೆಚ್ಚವೂ ಹಾಗೇ. ಈ ಕೆಲಸ, ಉದ್ಯೋಗ ಕಾರ್ಯಗಳ ಪ್ರಯೋಜನ ಬಳಸು. ದೊಡ್ಡ ಯಂತ್ರಗಳನ್ನು ನಿರ್ಮಾಣ ಮಾಡುವ ಯಂತ್ರೋದ್ಯೋಗ ಬೇರೆ ಇದೆ. ಅದರ ಪ್ರಯೋಜನ ಇನ್ನಷ್ಟು ಬಳಸಿನದು.

ಈ ಹತ್ತು ವರ್ಷಗಳಲ್ಲಿ ಈ ಎರಡನೆಯ ಬಗೆಯ ಉತ್ಪತ್ತಿ ಉದ್ಯೋಗದ ಕಡೆಗೆ ಹೆಚ್ಚು ಗಮನ ಕೊಡಬೇಕಾಗಿ ಬಂದಿದೆ. ಇನ್ನೂ 5-10 ವರ್ಷ ಇದು ಪ್ರಧಾನವಾಗಿ ನಡೆಯಬೇಕು, ದೇಶ ಶಕ್ತವಾಗಬೇಕಾದರೆ. ಆದುದರಿಂದ ಹೂಡಿದ ಬಂಡವಾಳದ ಪರಮ ಪ್ರಯೋಜನ ಜನದ ಭೋಗದ ಸಾಮಗ್ರಿಗಳ ಉತ್ಪತ್ತಿಗೆ ಒದಗುತ್ತಿಲ್ಲ. ಅವು ಒಂದು ಕಡೆ ಹಿಂದೆ ವಿದೇಶಗಳಿಗೆ ಸಾಗುತ್ತಿದ್ದ ಸಂಪತ್ತನ್ನು ನಾಳೆ ದೇಶದಲ್ಲಿ ಉಳಿಯುವಂತೆ ಮಾಡುವುದು, ಜನರ ತಂತ್ರ ಮತ್ತು ಕ್ರಿಯಾಶಕ್ತಿಯನ್ನು, ಸಾಹಸವನ್ನು ಹೆಚ್ಚಿಸುವುದು. ನಾವೇ ಅಂತಹವನ್ನು ಹೆಚ್ಚಾಗಿ ತಯಾರಿಸಿ ಬೇರೆ ದೇಶಕ್ಕೆ ರಫ್ತುಮಾಡಿ ಲಾಭ ಸಂಪಾದಿಸುವಂತೆ ಶಕ್ತಿ ತರುವಂಥದ್ದು. ಆದರೆ ತಕ್ಷಣಕ್ಕೆ ಅವು ಪೇಟೆಯಲ್ಲಿ ಮಾರುವ ಪದಾರ್ಥಗಳ ಪ್ರಮಾಣವನ್ನು ಹೆಚ್ಚಿಸುವ ಹಾಗಿಲ್ಲ. ಕೊಂಡು ತಿನ್ನುವ ಪದಾರ್ಥದ ಬೆಲೆಯನ್ನು ಕಡಿಮೆ ಮಾಡುವ ಹಾಗಿಲ್ಲ. ಈ ಶಕ್ತಿ ನಾಳಿನ ಬಂಡವಾಳ. ಆದರೆ ಈ ಎಲ್ಲ ವರ್ಗಗಳಲ್ಲಿಯೂ ತಿನ್ನುವವರ ಸಂಖ್ಯೆಯನ್ನು, ಪದಾರ್ಥಗಳ ಕೊಳ್ಳುವವರ ಸಂಖ್ಯೆಯನ್ನು ಹೆಚ್ಚಿಸುತ್ತದೆ. ಉದ್ಯೋಗ, ವರಮಾನ ಹಿಂದೆ ಇಲ್ಲದಿದ್ದವರಿಗೆ ಹೆಚ್ಚು ವರಮಾನ ಒದಗಿಸಿ ಅವನ್ನು ಕೊಳ್ಳುವ ಅವರ ಶಕ್ತಿಯನ್ನು ಹೆಚ್ಚಿಸುತ್ತದೆ. ಇಂಥವರ ವರಮಾನ ಅಧಿಕವಾಗಿರುವುದರಿಂದ ಪದಾರ್ಥಗಳನ್ನು ಪೇಟೆಯಲ್ಲಿಯೂ ಕೊಳ್ಳಲು ಇವರ ಸಾಮರ್ಥ್ಯ ಹೆಚ್ಚುತ್ತದೆ; ಎಂದರೆ ಪದಾರ್ಥದ ಬೆಲೆಯನ್ನು ಏರಿಸುತ್ತದೆ. ಸೌತೆಕಾಯಿಗೆ ನಾಲ್ಕು ಆಣೆ ಕೊಡುವವರಿರುವಾಗ ಎರಡು ಆಣೆಗೆ ಕೊಳ್ಳುವವರಿಗೆ ಅದು ಸಿಕ್ಕೀತು ಹೇಗೆ; ಮಾರುವವನೇ ಮಾರಬೇಕು.

ಈ ಉದ್ಯೋಗಗಳಲ್ಲಲ್ಲದೆ ರಾಷ್ಟ್ರ ಜೀವನ ಇತರ ಎಲ್ಲ ರಂಗಗಳಲ್ಲಿಯೂ – ಹೊಸ ಆಡಳಿತ ಮಂಡಲ, ಕೈಗಾರಿಕೆಗಳು, ಗೃಹ ವಸತಿನಿರ್ಮಾಣ ಕಾರ್ಯ, ವ್ಯಾಪಾರ ವಾಣಿಜ್ಯ, ಬ್ಯಾಂಕ್‌ಗಳ ಲೇವಾದೇವಿ – ತುಂಬಾ ಹೆಚ್ಚಾಗಿ ಬೆಳೆಯುತ್ತಿವೆ. ಇದು



ಎಲ್ಲರಿಗೂ ತಿಳಿದ ಸಂಗತಿ. ಆಹಾರ ಧಾನ್ಯ ಸಾಮಗ್ರಿಗಳು, ಬಟ್ಟೆ, ವಾಸ ಮಾಡುವ ಮನೆ ಈ ಮೂರು ಎಲ್ಲರಿಗೂ ಮೊದಲ ಅಗತ್ಯ. ಅವುಗಳು ಎಷ್ಟು ಅಗ್ಗವಾದರೆ ಅಷ್ಟು ದೇಶಕ್ಕೆ ಸುಭಿಕ್ಷ. ಆದರೆ ಜನಸಂಖ್ಯೆ ಹೆಚ್ಚಿ ತಿನ್ನುವ ಬಾಯಿಗಳ ಸಂಖ್ಯೆ ಈ ದೇಶದಲ್ಲಿ ಒಂದು ಕಡೆ ಹೆಚ್ಚುತ್ತಿದೆ. ಹುಟ್ಟಿದ ವರ್ಷದಿಂದ ಹಿಡಿದು 10-20 ವರ್ಷದ ವರೆಗೂ 50-55 ವರ್ಷದ ಮೇಲಿನ ವಯಸ್ಸಿನವರೂ ಉತ್ಪತ್ತಿ ಮಂಡಲಕ್ಕೆ ನೇರವಾಗಿ ಸಹಾಯ ಮಾಡುವುದಿಲ್ಲ. ಅವರು ಕೇವಲ ತಿನ್ನುವವರು, ಬಳಸುವವರು. ಅವರ ಭೋಜನದ ಭಾಗ 20-55 ವರ್ಷ ವಯಸ್ಸಿನ ಸುಮಾರು ಒಟ್ಟು 14 ಕೋಟಿ ಜನರ ಮೇಲೆ ಬೀಳುತ್ತದೆ. ಇದರಲ್ಲಿ ಹೆಂಗಸರು ಸುಮಾರು ಅರ್ಧ ಜನ ಉತ್ಪತ್ತಿ ಕಾರ್ಯಗಳಲ್ಲಿ ನಮ್ಮ ದೇಶದಲ್ಲಿ ತೊಡಗರು. ಆಲಸರೂ ನಿರುದ್ಯೋಗಿಗಳೂ ಇನ್ನಷ್ಟು ಮಂದಿ. ಕೆಳಮಟ್ಟಗಳಲ್ಲಿರುವರೆಂಬ ಕೆಲವು ಜನರಲ್ಲಿ ಗಂಡಸರೂ ಹೆಂಗಸರೂ ದುಡಿಯುತ್ತಾರೆ. ಮಧ್ಯಮ ವರ್ಗದವರಲ್ಲಿ, ಸಿರಿವಂತರಲ್ಲಿ ಹೆಂಗಸರು ಉತ್ಪತ್ತಿ ಕಾರ್ಯದಲ್ಲಿ ಭಾಗ ವಹಿಸುವುದಿಲ್ಲ. ಹೀಗಿರುವಾಗ ಹೆಚ್ಚು ಜನಕ್ಕೆ ಅಶನ ಪೋಷಣ ದೊರಕಿಸಬೇಕಾದ ಭಾರ ಕೆಲಸ ಮಾಡುವ ಕೆಲವರ ಮೇಲೆ ಬೀಳುತ್ತದೆ. ಆರ್ಥಿಕವಾಗಿ ಇದು ದೊಡ್ಡ ಹೊರೆ ಆಗಿ ಕೆಲಸ ಮಾಡುವವರ ಶಕ್ತಿ ದೊಡ್ಡ ಶ್ರಮಕ್ಕೆ ಈಡಾಗುತ್ತದೆ. ಆ ಶಕ್ತಿ ಬೇಗ ಕುಗ್ಗಲು, ಬತ್ತಲು ಅವಕಾಶವುಂಟು. ರಾಷ್ಟ್ರದ ದೃಷ್ಟಿಯಿಂದ ಇದೂ ಒಂದು ನಷ್ಟವೆ.

ದೇಶದಲ್ಲಿ ವಿದ್ಯಾಸೌಕರ್ಯ, ಉದ್ಯೋಗಗಳ ಅವಕಾಶ ಹೆಚ್ಚಿದಂತೆಲ್ಲಾ ಸಂಪಾದನೆಯ ಅವಕಾಶ ಮತ್ತು ಸಂಪಾದನೆ ಹೆಚ್ಚುವುದಲ್ಲವೆ? ಆಗ ಜನರು ತಮ್ಮ ಜೀವನ ಮಟ್ಟವನ್ನು ಹೆಚ್ಚಿಸಿಕೊಳ್ಳಬಯಸುವುದು ಸಹಜ. ಅವರಿಗೆ ಉತ್ತಮ ತಿಂಡಿ ತೀರ್ಥ ಬೇಕು. ಬಟ್ಟೆ ಬರೆ ಬೇಕು. ಅಚ್ಚುಕಟ್ಟಾದ ವಾಸದ ಮನೆ ಬೇಕು. ಅಲ್ಲಿ ದೀಪ, ಕುರ್ಚಿ, ಮೇಜು, ಮಂಚ, ಪೌಡರ್, ಲಿಪ್‌ಸ್ಟಿಕ್, ಹಲ್ಲಂಟು, ಬುರುಸು ಬೇಕು; ಪ್ರಯಾಣ ಬೇಕು, ವಿನೋದ ಬೇಕು. ನಾಗರಿಕ ಜೀವನದಲ್ಲಿ ಯಾವಯಾವುದು ಸಂತೋಷವೋ ಅವೆಲ್ಲ ಪ್ರತಿಯೊಬ್ಬರೂ ಬೇಕೆನ್ನುತ್ತಾರೆ. ಅತಿ ಬಡತನವಿರುವ ದೃಶ್ಯ ಇವರ ಒಂದು ಕಡೆ ಇದ್ದರೆ ಅತಿ ಭೋಗದ ಚಿತ್ರ ಇನ್ನೊಂದು ಕಡೆ ಇರುತ್ತದೆ. ಇವರ ಗಮನ ಭೋಗದ ಕಡೆಗೇ. ಹೊರಗಿಂದ ಬಂದ ಪುಸ್ತಕಗಳೂ ಚಿತ್ರಗಳೂ, ಸುಖ ಭೋಗ ವಿಲಾಸಗಳ ಪ್ರಕಾರಗಳನ್ನು ಮೆರಸುವ ಜನರೂ ಈ ಆಸೆಯನ್ನು ಮಸೆಯುತ್ತಾರೆ. ಸಹಜವಾಗಿ ಎಲ್ಲರ ಮನಸ್ಸೂ ಆ ಕಡೆ ಆಕರ್ಷಿತವಾಗುತ್ತದೆ. ಇಲ್ಲದವರು ಇದ್ದವರನ್ನು ಕಂಡು ಅಸೂಯೆ ಪಡುತ್ತಾರೆ; ಇಲ್ಲದಾಗ ಹೀನಾಯ ಪಡುತ್ತಾರೆ. ಇದ್ದವರು ಇನ್ನಷ್ಟು ವಿಜೃಂಭಣೆಗೆ - ಮೆರೆತಕ್ಕೆ ಆಶಿಸುತ್ತಾರೆ. ಇವೊತ್ತಿನ ಆರ್ಥಿಕ ಸಾಮಾಜಿಕ ಜೀವನದಲ್ಲಿ ಇದೊಂದು ವಿಶೇಷ ಲಕ್ಷಣ. ಇತ್ತ ಆಹಾರ ಎಲ್ಲರಿಗೂ ಬೇಕು. ಬಟ್ಟೆ ಎಲ್ಲರಿಗೂ ಬೇಕು. ವಾಸದ ಮನೆ ಎಲ್ಲರಿಗೂ ಬೇಕು. ಮೊದಲಿಂದಲೂ ಈ ಜನಕ್ಕೆ ಸಾಕಾದಷ್ಟು ಆಹಾರ ಇಲ್ಲಿ ಉತ್ಪತ್ತಿಯಾಗುತ್ತಿಲ್ಲ. ಬ್ರಿಟಿಷರು ಆಳುತ್ತಿದ್ದಾಗ ಸಾಲದ್ದನ್ನು ಹೊರಗಿನಿಂದ ಆಮದು ಮಾಡುತ್ತ ತಮ್ಮ ಹಡಗುಗಳಲ್ಲಿ ಹೊತ್ತು ತರುತ್ತಿದ್ದರು. ಅವರು ರಚಿಸಿದ

ವ್ಯಾಪಾರ ಯಂತ್ರವೂ ಬ್ಯಾಂಕುಗಳೂ ಇದಕ್ಕೆ ನೆರವಾಗುತ್ತಿದ್ದವು. ಬರ್ಮ, ಪಾಕಿಸ್ತಾನದಿಂದ ನಮಗೆ ಅಕ್ಕಿ, ಗೋಧಿ, ಹತ್ತಿ, ಸೆಣಬು, ಟೀ ಸರಬರಾಜಾಗುತ್ತಿದ್ದಾಗಲೂ ನ್ಯೂನತೆ ಇತ್ತು. ಈಗ ಅವು ವಿದೇಶಗಳಾಗಿವೆ. ಅಲ್ಲಿಂದ ಬರಬಹುದಾದ ಎಲ್ಲ ಆಹಾರ ಸಾಮಗ್ರಿಗಳ ಆಮದೂ ಸುಸೂತ್ರವಾಗಿ ಆಗುತ್ತಿಲ್ಲ. ಬೇರೆ ದೇಶಗಳಿಂದ ಕೊಳ್ಳಲು ಸಾಕಷ್ಟು ಹಣವಿಲ್ಲ. ತರಲು ನಮ್ಮವೇ ಹಡಗಿಲ್ಲ. ನಮ್ಮ ಹೊಲಗದ್ದೆ ತೋಟಗಳಲ್ಲಿ ಬೆಳೆಯುವ ಬೆಳೆ ಕಡಮೆ. 1890ರಲ್ಲಿ 600 ಪೌಂಡು ಬೆಳೆಯುತ್ತಿದ್ದ ಭೂಮಿ ಈಗ 400 ಪೌಂಡೇ ಬೆಳೆಯುತ್ತದೆನ್ನುತ್ತಾರೆ. ಬೆಳೆಯುವವರು ಬೆಲೆ ಹೆಚ್ಚಾಗಿ ದೊರಕದಾದರೆ ಉತ್ಪತ್ತಿ ಮಾಡರು. ಆಹಾರದ ಬೆಳೆಗಳಿಗಿಂತ ಮಾರಾಟದ ಬೆಳೆಗಳಾದ ಹೊಗೆಸೊಪ್ಪು, ಕಬ್ಬು, ನೆಲಗಡಲೆ, ಎಣ್ಣೆ ಬಿತ್ತಗಳು ಮುಂತಾಗಿ ಹೆಚ್ಚಾಗಿ ಬೆಳೆಯಲು ಆಸಕ್ತರಾಗುತ್ತಾರೆ. ಇಷ್ಟವಿಲ್ಲದವರನ್ನು ಇದನ್ನೇ ಬೆಳೆಯಿರಿ ಎನ್ನಲು ಯಾರಿಗೂ ಶಾಸನದ ಅಧಿಕಾರವಿಲ್ಲ. ಇತರ ವ್ಯವಹಾರದ ಕಷ್ಟಗಳು ಬೇರೆ ಇವೆ. ಅಲ್ಲದೆಯೋ ಈಗಿನ ರಾಜಕೀಯದಲ್ಲಿ ಉತ್ಪತ್ತಿಕಾರರ ವೋಟುಗಳ ಆಧಾರದ ಮೇಲೆ ಚುನಾವಣೆ ನಡೆಯಬೇಕಾಗಿದೆಯಾಗಿ ಅವರಿಗೆ ತೃಪ್ತಿಕರ ಬೆಲೆ ಬರುವಂತೆ ರಾಜಕೀಯ ಮಂಡಲಗಳವರು ನೋಡಿಕೊಳ್ಳಬೇಕು. ನೂರಾರು ವರ್ಷಗಳ ಕಾಲ ತಾವು ಬೆಳೆದ ದವಸವನ್ನು ಅಗ್ಗವಾಗಿ ಮಾರಿ ಪಲ್ಲ ಬತ್ತವನ್ನು 5 ರೂ.ಗೆ 6ಕ್ಕೆ ಮಾರಿದ್ದನ್ನು ನಾವು ನೋಡಿದ್ದೇವೆ. ವರ್ಷದ ಫಸಲಿಗೆ ಬಹು ಕಡಮೆಯ ಬೆಲೆ ಪಡೆದು ವರ್ಷಕ್ಕೆ ತಿನ್ನಲು ಸಾಲದೆ ಬಿತ್ತನೆಗೆ ಸಾಲಗಾರರಾಗಿದ್ದಾರೆ. ರೈತರಿಗೆ ಈಗ ತಾನೇ 10 - 20 ವರ್ಷದಿಂದ ಹೆಚ್ಚು ಬೆಲೆಗಳು ಬರಲು ಆರಂಭವಾಗಿವೆ. ಅದು ಅದೃಷ್ಟವೇ ಸರಿ. ಅಲ್ಲದೆಯೋ ಅವರ ಜೀವನದ ಆಸೆ ಆಕಾಂಕ್ಷೆಗಳೂ ಅವರ ಜೀವನದ ಮಟ್ಟವೂ ಹೆಚ್ಚುತ್ತಿದೆ. ಇತರರಂತೆ ಇತರ ಪದಾರ್ಥಗಳಿಗೆ ಅವರೂ ಪೇಟೆಯಲ್ಲಿ ಹೆಚ್ಚು ಹಣವನ್ನೇ ತೆರಬೇಕು. ಅವಕ್ಕೆ ಹಣ ಒದಗಿಸಲು ಅವರ ವ್ಯವಸಾಯದ ಉತ್ಪತ್ತಿ ದೊರಕಿಸಿದ ಸಂಪಾದನೆಯೇ ಒದಗಬೇಕು. ಎಂದರೆ, ಅವರ ಉತ್ಪತ್ತಿ ವೆಚ್ಚ, ಅವರ ಜೀವನದ ವೆಚ್ಚ ಎರಡೂ ಹೆಚ್ಚಾಗಿ ಅವರು ಬೆಳೆವ ಧಾನ್ಯ ಹೆಚ್ಚು ಬೆಲೆ ಕೇಳುವುದು ಸಹಜವಾಗಿದೆ.

ಒಳ ದೇಶದಲ್ಲಿ ಉತ್ಪತ್ತಿಯಾದ ಈ ಸಾಮಗ್ರಿಗಳು ಸಾಲವಾಗಿರುವಾಗ, ಹೊರಗಡೆಯಿಂದ ಅಕ್ಕಿ ಗೋಧಿಗಾಗಿ (ಕಳೆದ 10 ವರ್ಷಗಳಲ್ಲಿ 2.5 ಕೋಟಿ ಟನ್ನು ತರಿಸಲಾಗಿದೆ) ಕೋಟ್ಯಾಂತರ ರೂಪಾಯಿ ವೆಚ್ಚ ಮಾಡಿ ತರಿಸಬೇಕಾಗುವುದು. ಅದನ್ನು ಸಾಲದ ರೂಪಿನಲ್ಲೊ ಅಥವಾ ಅದಕ್ಕೆ ಸಮ ಬೆಲೆಯ ಇತರ ಕಚ್ಚಾ ಪದಾರ್ಥಗಳನ್ನೋ ಕೈಗಾರಿಕೆಗಳವನ್ನೋ ಹೊರಗೆ ರಫ್ತು ಮಾಡಬೇಕು. ಇದರಿಂದಲೂ ಧಾರಣೆವಾಸಿಗಳು ಏರಬೇಕಾಗುತ್ತದೆ. ಒಳಗೆ ಬೇಕಿದ್ದ ಪದಾರ್ಥ ಹೊರಗೆ ಹೋಗಬೇಕಾದರೆ, ಹೊರಗಿನ ಪದಾರ್ಥಕ್ಕೆ ಹೆಚ್ಚು ಹಣ ಕೊಡಬೇಕಾದರೆ, ಈ ಎರಡರ ಫಲವೂ ಒಳ ದೇಶದ ಜನರ ಮೇಲೆ ಬೀಳುವುದು ತಾನೆ? ಧಾರಣೆವಾಸಿ ಏರಿದ ಹಾಗೆಲ್ಲ ಜೀವನದ ವೆಚ್ಚ ಏರೀತು. ಜೀವನದ ಮಟ್ಟ ಏರಿದಂತೆ ಗಿರಾಕಿ ಹೆಚ್ಚುವುದು; ಪದಾರ್ಥದ



ಬೆಲೆಯೂ ಏರುವುದು. ಉದ್ಯೋಗ ವರಮಾನ ಏರಿದಂತೆ ಕೊಳ್ಳುವ ಶಕ್ತಿ, ಆಸೆ, ಗಿರಾಕಿ ಏರಿ, ಪದಾರ್ಥದ ಬೆಲೆ ಏರುವುದು. ಉದ್ಯೋಗ, ವರಮಾನ, ತಿನ್ನುವ ಪದಾರ್ಥಗಳ ಬೇಡಿಕೆ ಇವನ್ನು ಬೇಡವೆನ್ನಲಾಗುವುದೆ? ಇವುಗಳ ಜೊತೆಗೆ ಪದಾರ್ಥಗಳು ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಾಗುವ ಪ್ರತಿಕೂಲದಿಂದಲೊ ತಡೆಯಿಂದಲೊ ವ್ಯಾಪಾರ ವರ್ಗದವರ, ಇತರ ಬಗೆಯ ಅಸಾಮಾಜಿಕ ವೃತ್ತಿಯವರ ಸ್ವಾರ್ಥತೆಯಿಂದಲೊ ಬೇಕಾದಷ್ಟು ಪದಾರ್ಥ ಸುಸೂತ್ರವಾಗಿ ಒದಗಲಾಗದೆ ಬೆಲೆ ಏರುವುದುಂಟು. ಇದರಿಂದಲೂ ಧಾರಣೆವಾಸಿಗಳು ಏರುವುದು. ಸರ್ಕಾರ ತೆರಿಗೆ ಹಾಕಿದರೂ ಹಾಗೇ. ಆದರೆ ಮಣಕ್ಕೆ ಇನ್ನು ಮೂರು ಕಾಸು ತೆರಿಗೆ ಹೆಚ್ಚಿಸಿದಾಗ ಸೇರಿಗೆ ಒಂದಾಣೆ ಬೆಲೆ ಹೆಚ್ಚು ಕೊಡಬೇಕಾಗುವುದು ಈ ನಾಡಿನ ದೌರ್ಭಾಗ್ಯ.

ಧಾರಣೆವಾಸಿಗಳು ಏರಿದಂತೆ ಜೀವನವೆಚ್ಚ ಹೆಚ್ಚಾಗಿ ಕೂಲಿ ಸಂಬಳದ ದರ ಏರಬೇಕೆಂಬ ಆತುರ ಕೆಲಸಗಾರರಲ್ಲಿ ಹೆಚ್ಚುವುದು. ಪದಾರ್ಥಗಳಿಗೆ ಗಿರಾಕಿ ಹೆಚ್ಚಾಗಿ, ಉತ್ಪತ್ತಿಯ ಒದಗಣೆಯಲ್ಲಿ ಕಡಮೆಯಾದರೆ ಬೆಲೆಗಳು ಏರಿಯೇ ತೀರುವುದಲ್ಲವೆ? ಬಡಬಗ್ಗರಿಗೆ, ನಡುಮಟ್ಟದವರಿಗೆ, ಮುಖ್ಯವಾಗಿ–ನಿರ್ದಿಷ್ಟವಾಗಿ ಇಷ್ಟೇ ಹಣದ ಸಂಪಾದನೆ ಬರಬಲ್ಲದವರಿಗೆ ಬದುಕು ದುರ್ಭರವಾಗುವುದು. ಇಂಥ ಸಂದರ್ಭದಲ್ಲಿ ಸಂಬಳ ಏರಿಸಬೇಕೆಂದು ಹಟವೂ ಸಂಪುಗಳೂ ನಡೆವುವು. ಅವನ್ನು ಏರಿಸದಿದ್ದರೆ ಉತ್ಪತ್ತಿಗೆ ನಷ್ಟವಾಗುವುದು. ನಷ್ಟ ಉತ್ಪತ್ತಿಕಾರರ ಮೇಲೆ ಬಿದ್ದರೆ ಅವರಲ್ಲಿ ಉತ್ಪತ್ತಿಯ ಉತ್ಸಾಹ ಪ್ರಯೋಜನವು ಕಡಮೆಯಾಗುವುದು. ಗಿರಣಿ ಕೇಂದ್ರಗಳೇ ಮುಚ್ಚಬೇಕಾದೀತು. ಪರೋಕ್ಷವಾಗಿ ಅದರ ನಷ್ಟವು ಜನತೆಯ ಮೇಲೇ ಬೀಳುವುದು. ಏರಿಸಿದರೆ ಉತ್ಪತ್ತಿಯ ವೆಚ್ಚ ಏರುವುದು. ಅವರು ಪುನಃ ಮಾರುವ ಬೆಲೆಗಳನ್ನು ಏರಿಸಬೇಕಾಗುವುದು. ಏರುವ ಧಾರಣೆಗಳ ಪ್ರಮಾಣಕ್ಕೆ ತಕ್ಕಂತೆ ಕೂಲಿ ಸಂಬಳಗಳು ಏರುವುದು ಅಪರೂಪ. ಬೆಲೆಗಳು ಏರಿದರೆ ಉತ್ಪತ್ತಿಕಾರರಿಗೆ ಪ್ರಯೋಜನ. ಅವರಲ್ಲಿ ಕೆಲಸ ಮಾಡುವ ಉದ್ಯೋಗಿಗಳಿಗೆ ಸಂಬಳಗಳಿಗೆ ನೆರವು ದೊರೆಯುತ್ತದೆ. ಬೆಲೆಗಳು ಕುಗ್ಗಿದರೆ ತಿನ್ನುವವರಿಗೆ ಕೊಳ್ಳುವವರಿಗೆ ಪ್ರಯೋಜನ, ಉತ್ಪತ್ತಿಕಾರರಿಗೆ ನಷ್ಟ. ಕೆಲವರನ್ನು ಕೆಲಸದಿಂದ ತೆಗೆದು ಹಾಕುವುದು ಸಂಭವ. ಅವರ ವೆಚ್ಚಕ್ಕಿಂತ ಹೆಚ್ಚು ಪ್ರಮಾಣದಲ್ಲಿ ಉತ್ಪಿತ್ತಿ ಹೆಚ್ಚಿಸಿದರೆ ಪದಾರ್ಥದ ಬೆಲೆಯನ್ನು ಪೇಟೆಯಲ್ಲಿ ಏರಿಸದೆ ಅಥವಾ ಕಡಮೆಗೆ ಮಾರಾಟ ಮಾಡಬಹುದೆನಿಸುತ್ತದೆ. ಹೆಚ್ಚು ಉತ್ಪತ್ತಿಯ ಪ್ರಯೋಜನ ಜನರಿಗೆ ದೊರೆಯುವಂತಾಗುವುದು. ಆ ಸ್ಥಿತಿಗೆ ಬರುವುದಕ್ಕೆ ಭಾರತದಲ್ಲಿ ಇನ್ನಷ್ಟು ಕಾಲ ಹಿಡಿದೀತು. ಮೂರನೇ ಪಂಚವಾರ್ಷಿಕ ಯೋಜನೆ ಮುಗಿಯುವ ಹೊತ್ತಿಗೆ ಆಹಾರ ಪದಾರ್ಥಗಳ ಉತ್ಪತ್ತಿ ಈಗಿಗಿಂತ 2-3 ರಷ್ಟು ಹೆಚ್ಚಾಗಬಲ್ಲದು. ಈಗ ಬಳಸಾಗಿ ನಡೆಯುತ್ತಿರುವ ಉತ್ಪತ್ತಿಕಾರ್ಯ ನೇರವಾಗಿ ಜನದ ಪ್ರತಿದಿನದ ಬಾಳಿನ ನೆರವಿಗೆ ಅಗತ್ಯ ಸಾಮಗ್ರಿಗಳನ್ನು ಭೋಗ ಸಾಮಗ್ರಿಗಳನ್ನು ಒದಗಿಸಬಲ್ಲವಾದಾವು. ಇಲ್ಲಿನ ಉತ್ಪತ್ತಿ ವರಮಾನ ಹೆಚ್ಚಿ ಜನಕ್ಕೆ ಕೊಳ್ಳುವ ಶಕ್ತಿ ಹೆಚ್ಚಾದೀತು. ನಮ್ಮ ವಿದೇಶಿ

ವ್ಯಾಪಾರ ಹೆಚ್ಚಿ ಅದರಿಂದ ನಿವ್ವಳ ಸಂಪಾದನೆಯಾದೀತು. ನಮಗೆ ಬೇಕಾದಂಥ ಪದಾರ್ಥಗಳನ್ನು ಬೇಕಾದಷ್ಟು ಅಗ್ಗವಾಗಿ ಎಲ್ಲೆಲ್ಲಿಂದಲೂ ಕೊಳ್ಳಬಹುದಾದೀತು. ಈ ನಡುವೆ ಬಹುತರ ಏರುತ್ತಿರುವ ಬೆಲೆಗಳ ಕಷ್ಟವನ್ನು ಇನ್ನು ಸ್ವಲ್ಪಕಾಲ ಅನಿವಾರ್ಯವಾಗಿ ತಾಳಿಕೊಳ್ಳಬೇಕಾದೀತು. ಆದರೆ ಇದನ್ನು ತಾಳುವುದು ಕಷ್ಟ. ಒಂದು ಸಂಸಾರದಲ್ಲಿ 5 ಜನ ಸಾಮಾನ್ಯ: ಒಬ್ಬನಿಗೆ ಎರಡು ಊಟ, ಎರಡು ಕಾಫಿ, ಒಂದು ಸಲ ತಿಂಡಿ ಅದ್ದೂರಿ ಜೀವನವೇನಲ್ಲ. ಅದಕ್ಕೆ ಒಂದು ರೂಪಾಯಿ ಬೇಡವೆ? ಎಂದರೆ ಇಷ್ಟಕ್ಕೆ ತಿಂಗಳಿಗೆ 150 ರೂ. ವೆಚ್ಚ ಬೀಳುತ್ತದೆ. ಎಷ್ಟು ಜನಕ್ಕೆ ಈ ಸಂಪಾದನೆ ಉಂಟು. ಇನ್ನು ಬಾಡಿಗೆ, ಬಟ್ಟೆ, ವಿದ್ಯೆ, ರೋಗ ಚಿಕಿತ್ಸೆಗೆ ಹಣ ಎಲ್ಲಿಂದ ಬರಬೇಕು? ಪದಾರ್ಥದ ಬೆಲೆಗಳು ಏರಿದರೆ ಇಂಥ ಸಂಸಾರಗಳ ಗತಿ?

ಒಂದು ಕೆಲಸವನ್ನು ಸರ್ಕಾರದ ಕಡೆಯಿಂದ ನಿಷ್ಠುರವಾಗಿ ಮಾಡಿಸಬೇಕು. ಆಹಾರ ಪದಾರ್ಥಗಳ ಉತ್ಪತ್ತಿ ಮಾರಾಟ ವಿತರಣೆ, ಜನ ಧರಿಸುವ ದಿನಚರಿಯ ಬಟ್ಟೆಗಳ ಬೆಲೆ, ವಿತರಣೆ ಜನಕ್ಕೆ ಹಿಂಸೆಯಾಗದಂತೆ ನಡೆಯುವ ವ್ಯವಸ್ಥೆಯನ್ನು ನೇರವಾಗಿಯೊ ಖಾಸಗಿಯವರ ಮೂಲಕವೊ ಹೇಗೋ ಕೈಕೊಳ್ಳಬೇಕು. ಒಂದು ಗೊತ್ತು ಮಾಡಿದ ಬೆಲೆಗೆ ಪ್ರತಿಯೊಂದು ಉದ್ಯೋಗ ಮಂಡಲಿಯವರೂ ಕಚೇರಿಯೂ ತನ್ನಲ್ಲಿ ಕೆಲಸಮಾಡುವವರ ಪ್ರಯೋಜನಕ್ಕಾಗಿ ಒಂದು ಪ್ರಕಾರದಲ್ಲಿ, ಗೊತ್ತಾದ ಪ್ರಮಾಣದಲ್ಲಿ ದೊರಕುವಂತೆ ಏರ್ಪಾಡು ಮಾಡುವುದನ್ನು ಕಡ್ಡಾಯವಾಗಿ ವಿಧಿಸಬೇಕು. ಅವರವರ ನೌಕರರಿಗೆಲ್ಲ ವಾಸದ ಮನೆಗಳನ್ನು ಅಗ್ಗವಾದ ಬಾಡಿಗೆಗೆ ಕಟ್ಟಿ ಕೊಡಬೇಕು. ಪೇಟೆಯ ಅನಿಶ್ಚಿತತೆಯಿಂದ ಧಾರಣೆವಾಸಿ ಸಿಕ್ಕಾಪಟ್ಟೆ ಹೆಚ್ಚು ಕಡಮೆಯಾಗುವ ಅವಕಾಶ ಆಗ ಇಲ್ಲವಾಗುವುದು. ತಮಗಿರುವ ಹಣಶಕ್ತಿಯಿಂದಲೂ ಬ್ಯಾಂಕುಗಳು ಅವರಿಗೆ ಒದಗಿಸುವ ಸಾಲ ಸೌಕರ್ಯಗಳಿಂದಲೂ ವರ್ತಕರು ಅತಿಯಾಗಿ ದಾಸ್ತಾನು ಮಾಡಿ ಹೆಚ್ಚಿನ ಲಾಭಗಳಿಕೆಯ ಉದ್ದೇಶದಿಂದ ಅಗತ್ಯ ಇರುವಾಗ ಸಾಮಗ್ರಿಗಳನ್ನು ಕೊಳ್ಳುವವರಿಗೆ ದೊರಕಿಸದೆ ಅಥವಾ ಹೆಚ್ಚಿನ ಬೆಲೆಗೆ ಮಾರಬಹುದು. ಅಂಥ ಸಂಭವಗಳ ಬಗೆಗೆ ಸರ್ಕಾರ ಎಚ್ಚರ ವಹಿಸಿ ಧಾರಣೆವಾಸಿಗಳನ್ನು ನಿಯಂತ್ರಿಸಬೇಕು.

❑

# 5. ಮಿತವ್ಯಯ - ವ್ಯಯ

'Inflation' ಎಂದರೆ ಹಣದ ಉಬ್ಬರ, ಅತಿಯಾಗಿ ಹಣವನ್ನು ಉತ್ಪತ್ತಿ ಮಾಡಿ ಹೊರಡಿಸುವುದು ಎಂದರ್ಥ. ಇದರಲ್ಲಿ ಜನದ ಮನಸ್ಸಿಗೆ ಭೀತಿ ತರುವ ಅಂಶವಿದೆ. ಇದಕ್ಕೆ ಪ್ರತಿಯಾದ್ದು 'Deflation'. ಸಂಚಾರದಲ್ಲಿರುವ ಹಣದ ಮೊತ್ತದಲ್ಲಿ ಸ್ವಲ್ಪವನ್ನು ಹಿಂದಕ್ಕೆ ತೆಗೆದುಕೊಂಡು ಅದರ ಪರಿಣಾಮವನ್ನು ಕಡಮೆ ಮಾಡುವುದು. ಉಬ್ಬರವನ್ನು ಕುರಿತು ಜನ ಮಾತಾಡುವಂತೆ ಇದನ್ನು ಕುರಿತು ಮಾತಾಡುವುದಿಲ್ಲ. ಆದರೂ ಹಣದ ಸಂಚಾರವನ್ನು ಅದರ ಅಧಿಕಾರಿಗಳು ಒಂದು ಹದದಲ್ಲಿ ನಡಸುತ್ತಾರೆ; ಯಾವುದೊ ಮಿತಿಯನ್ನು ಸಾಧಿಸುತ್ತಾರೆ. ಕೆಲವು ಸಲ ಮೊತ್ತವನ್ನು ಹೆಚ್ಚಿಸುವುದು, ಕೆಲವು ಸಲ ಕುಗ್ಗಿಸುವುದು; ಅದರ ಸಂಚಾರವನ್ನು ಸಮಧಾತುವನ್ನಾಗಿ ಮಾಡುವುದು ರೂಢಿ. ಉಬ್ಬರದ ಕಾಲದಲ್ಲಿ ಪದಾರ್ಥಗಳ ಬೆಲೆ ಏರುವುದೆಂದೂ ಜನಕ್ಕೆ ಪೀಡೆಯಾಗುವುದೆಂದೂ ಅದನ್ನು ಕಂಡು ಅಪ್ರೀತಿ ಉಂಟು. ಹಣದ ಮೊತ್ತ ಇಳಿದಾಗ ಅದರ ಬೆಲೆ ಸಾಮಾನ್ಯವಾಗಿ ಕಡಮೆಯಾಗಿ ಆ ಮಟ್ಟಿಗೆ ಪದಾರ್ಥದ ಬೆಲೆಗಳು ಇಳಿಯುವುದು ರೂಢಿ. ಕೊಂಡು ತಿನ್ನುವವರಿಗೆ ಇದರಿಂದ ಲಾಭ. ಉತ್ಪತ್ತಿ ಮಾಡುವವರಿಗೂ ಮಾರಾಟಗಾರರಿಗೂ ಇದು ಕ್ಲೇಶಕರ. ಮಾರಾಟಗಾರರಿಗೂ ಉತ್ಪತ್ತಿಕಾರರಿಗೂ ಯಾವಾಗ ಲಾಭ ಕಡಮೆಯಾಯಿತೊ ಅಥವಾ ನಷ್ಟವಾಯಿತೊ ಆಗ ಅವರು ತಮ್ಮ ವೆಚ್ಚವನ್ನು ಕಡಮೆ ಮಾಡಿಕೊಳ್ಳುತ್ತಾರೆ. ಉತ್ಪತ್ತಿ ಪರಿಮಾಣವನ್ನು ಕಡಮೆಮಾಡಿಕೊಂಡು ಅದಕ್ಕೆ ಪೇಟೆಯಲ್ಲಿ ಹೆಚ್ಚು ದರ ಬರುವಂತೆ ಮಾಡುತ್ತಾರೆ. ಅಥವಾ, ತಾವು ಕೆಲಸಕ್ಕಿಟ್ಟುಕೊಂಡಿದ್ದ ಹಲವಾರು ಮುಂದಿಯನ್ನು ಕೆಲಸದಿಂದ ತೆಗೆದುಹಾಕುತ್ತಾರೆ. ಅಥವಾ, ಶಕ್ಯವಾದ ಕಡೆ ಕೆಲಸ ಮಾಡುವವರಿಗೆ ಸಂಬಳ ಸಾರಿಗೆ ಕಡಮೆ ಮಾಡುತ್ತಾರೆ. ನಷ್ಟವೇ ಹೆಚ್ಚುವುದೆಂದು ತಿಳಿದರೆ ಆ ಕೆಲಸವನ್ನೇ ನಿಲ್ಲಿಸುತ್ತಾರೆ ಅಥವಾ ಲಾಭಕರವಾದ ಇನ್ನಾವುದೋ ಕೆಲಸಕ್ಕೆ ಕೈ ಹಾಕುತ್ತಾರೆ. ದುರದೃಷ್ಟಶಾಲಿಗಳಾದರೆ ದಿವಾಳಿಯಾಗುತ್ತಾರೆ. ಹೀಗೂ ಉತ್ಪತ್ತಿಕಾರರಿಗೂ ಕೆಲಸ ಮಾಡುವವರಿಗೂ ಇಬ್ಬರಿಗೂ ನಷ್ಟವುಂಟು ಎಂದು ಹೇಳಿದ ಹಾಗಾಯಿತು.

ಹಣದ ಉಬ್ಬರವಿರುವಾಗ ಬೆಲೆಗಳು ಏರುವುದೆಂದು ಹೇಳಿತಲ್ಲವೆ? ಉತ್ಪತ್ತಿ ಕಾರರಿಗೂ ಮಾರಾಟಗಾರರಿಗೂ ಲಾಭ ಹೆಚ್ಚುವುದು. ಆಗ ತಮ್ಮ ಉತ್ಪತ್ತಿ

ಪ್ರಮಾಣವನ್ನು ಅವರು ವಿಸ್ತರಿಸುವರು. ತಮ್ಮ ಗಿರಣಿ ಕಾರ್ಖಾನೆಯ ಕೆಲಸಗಾರರಿಗೆ ತಾವಾಗಿ ಸಂಬಳ ಸಾರಿಗೆ ಹೆಚ್ಚು ಮಾಡುವರು. ಹೆಚ್ಚಿಸಿದರೂ ನಷ್ಟ ಇಲ್ಲ. ಅವರು ಹೆಚ್ಚಿಸದಾದರೆ ಏರುತ್ತಿರುವ ಧಾರಣೆವಾಸಿಗೆ ಬಳಲಿದ ಕೆಲಸಗಾರರು ಹೆಚ್ಚು ಕೂಲಿ ಸಂಬಳ ಕೇಳಿ ಒತ್ತಾಯಗಳನ್ನು ಮಾಡಿ ಅವನ್ನು ಪಡೆಯುತ್ತಾರೆ. ಧಾರಣೆವಾಸಿ ಏರಿದಂತೆಲ್ಲಾ ಸಂಬಳ ಸಾರಿಗೆ ಏರುವುದಿಲ್ಲ ನಿಜ. ಹೆಚ್ಚು ಸಂಬಳ ಸಂಪಾದಿಸಿದಾಗ ಕೂಡ ಹಿಂದೆ ಕೊಳ್ಳುತ್ತಿದ್ದಷ್ಟು ಪದಾರ್ಥಗಳನ್ನು ಅವರು ಕೊಳ್ಳಲಾರರು. ಎಂದರೆ ಅವರ ಜೀವನದ ಸುಖ ಸೌಕರ್ಯ ಕಡಮೆಯಾದಾವು. ಇಂಥ ಸಂದರ್ಭದಲ್ಲೂ ಒಂದು ಸಲ ಏರಿದ ಕೂಲಿ ಸಂಬಳಗಳನ್ನು ಇಳಿಸುವುದು ಕಷ್ಟ. ಒಟ್ಟಿನಲ್ಲಿ ಯಾವುದೇ ಕಾರಣದಿಂದಾಗಲೀ ಧಾರಣೆವಾಸಿ ಏರಿದರೆ ಉತ್ಪತ್ತಿಕಾರರಿಗೆ ಉತ್ತೇಜನ. ಅದರ ಹಿಂದೆಯೇ ಉದ್ಯೋಗ ವರಮಾನ ಹೆಚ್ಚುತ್ತವೆ. ಬೆಲೆಗಳು ಇಳಿದರೆ ಉತ್ಪತ್ತಿ ಉದ್ಯೋಗ ಕಡೆಮೆಯಾಗುವುದು.  ಕೊಂಡು ತಿನ್ನುವವರಿಗೆ ಬೆಲೆಗಳು ಇಳಿದು ಆ ಮಟ್ಟಿಗೆ ಪದಾರ್ಥಗಳನ್ನು ಕೊಳ್ಳುವುದು ಸುಲಭವಾಗುವುದು ನಿಜ. ಆದರೆ ಹಲವರ ವರಮಾನಗಳು ಕಡಮೆಯಾಗುವುದು. ಹಲವರಿಗೆ ಉದ್ಯೋಗವಿಲ್ಲದಾಗಿ, ಹೊಸಬರಿಗೆ ಉದ್ಯೋಗ ದೊರಕದೆ ಸಮಾಜಕ್ಕೆ ಎರಡು ಬಗೆಯಲ್ಲೂ ಕಷ್ಟನಿಷ್ಠುರಗಳುಂಟು. ದೇಶದ ವ್ಯಾಪಾರಕ್ಕೆ ಎಷ್ಟು ಹಣ ಬೇಕೆಂಬ ಚಿಂತೆ ಹಣದ ಅಧಿಕಾರಿಗಳಿಗೆ ಇದ್ದೇ ಇರುತ್ತದೆಯಾದ್ದರಿಂದ ಅದಕ್ಕೆ ತಕ್ಕಂತೆ ಅವರು ನಾಣ್ಯ ನೋಟುಗಳ ಸಂಚಾರವನ್ನೂ ಬ್ಯಾಂಕ್ ಸಾಲಗಳ ಮೊತ್ತವನ್ನೂ ಒಂದು ಹಂತದಲ್ಲಿ ನಡಸುತ್ತಿರುತ್ತಾರೆ. ಅದೇ ಹಣ ಸಂಚಾಲಕೀಯ ನೀತಿ. ಕೊಳ್ಳುವ, ಮಾರುವ, ಸಾಲ ತೆಗೆಯುವ, ಸಾಲ ಕೊಡುವ ವ್ಯವಹಾರಕ್ಕೆ ಹೊಂದುವಂತೆ ಈ ಹಣದ ಸಂಚಾರ ಹೊಂದಿಕೊಂಡಿದ್ದರೆ ಅದರ ಮೊತ್ತ ಹೆಚ್ಚಲಿ, ಕುಗ್ಗಲಿ ಅದರಿಂದ ಮೊತ್ತದಲ್ಲಿ ಸಮಾಜಕ್ಕೆ ಗಾಸಿ ಇಲ್ಲ. ಅದಕ್ಕೆ ಮೀರಿ ಹೆಚ್ಚು ಕಡಮೆಯಾದಾಗ ಮಾತ್ರ ಗಾಸಿ, ಅಸಮತೆ ಉಂಟಾಗುವುದು.

ಲಾಭ, ವರಮಾನ ಹೆಚ್ಚಿರುವಾಗ ಜನರು ತಮ್ಮ ಕೈಗೆ ಬಂದುದನ್ನು ಪೂರ್ತಿ ವೆಚ್ಚ ಮಾಡಬಹುದು, ಅಥವಾ ಸ್ವಲ್ಪ ಭಾಗವನ್ನು ಉಳಿಸಿಡಬಹುದು. ಹೆಚ್ಚು ಬಂದವರು ಉಳಿಸುವುದು ಸುಲಭ. ಅವರು ಹೆಚ್ಚಾಗಿಯೂ  ಉಳಿಸಬಲ್ಲರು. ಸಣ್ಣ ವರಮಾನದವರು ಸಣ್ಣ ಉಳಿತಾಯವನ್ನು ಮಾತ್ರ ಮಾಡಬಲ್ಲರು. ಹೀಗೆ ಉಳಿತಾಯವಾದ ಹಣ ಹೆಚ್ಚಿದಷ್ಟೂ ದೇಶದ ಲೇವಾದೇವಿಗೂ ಉತ್ಪತ್ತಿ ಕೈಗಾರಿಕೆಗಳಿಗೂ ಬಂಡವಾಳವಾಗಬಲ್ಲ ಹಣ ಹೆಚ್ಚಾಗುವುದು. ಆ ಕಾರ್ಯಗಳಿಗೆ ಉಳಿತಾಯವನ್ನು ನೇರವಾಗಿಯೊ ಪರೋಕ್ಷವಾಗಿಯೊ ಹೂಡಬೇಕು ಮಾತ್ರ. ಹಣವನ್ನು ವೆಚ್ಚ ಮಾಡದೆ ಒಂದು ಕಡೆ ಹೂತಿಟ್ಟರೆ ವ್ಯಾಪಾರ, ಉದ್ಯೋಗಗಳಿಗೆ ಪ್ರಯೋಜನವಿಲ್ಲ. ಚಿನ್ನ ಬೆಳ್ಳಿ ವಜ್ರ ವೈಡೂರ್ಯಗಳ ಸಂಗ್ರಹಕ್ಕಾಗಿ ಉಳಿತಾಯವನ್ನು ವಿನಿಯೋಗಿಸಿದರೆ ಒಂದು ಬಗೆಯ ವಸ್ತು ಸಂಪತ್ತಿಯನ್ನು ಗಳಿಸಿದಂತಾಗುವುದು. ಆ ಪದಾರ್ಥದ ಬೆಲೆ ಏರುವುದು. ಆಪತ್ಸಮಯದಲ್ಲಿ ಅವನ್ನು ಮಾರಿ ಹಣ ಮಾಡಿಕೊಳ್ಳಬಹುದು. ಅದಕ್ಕೆ ಸಾಮಾಜಿಕ



ಪ್ರತಿಷ್ಠೆಯ ರೂಪವಾದ ಬೆಲೆಯುಂಟು. ಆದರೆ ಇತರ ಯಾವ ಬಗೆಯ ಆರ್ಥಿಕ ಪ್ರಯೋಜನವೂ ಇಲ್ಲ. ಒಡವೆ ವಸ್ತುಗಳ ಶಿಲ್ಪಕ್ಕೆ ಗಿರಾಕಿ ದೊರಕುವುದಾದರೂ ಅವು ಬಡ್ಡಿ, ಲಾಭ ದುಡಿಯವು. ಅವನ್ನು ಮಾರುವಾಗ ಮುಂದೆ ಅವುಗಳ ಮೇಲೆ ಹಾಕಿದಷ್ಟು ಹಣ ಬಾರದೆ ಹೋಗಬಹುದು. ಕೂಡಿಟ್ಟ ಹಣವನ್ನು ಬರೀ ಚಾಲ್ತಿ ಲೆಕ್ಕಗಳಲ್ಲಿ ಬ್ಯಾಂಕಿನಲ್ಲಿಟ್ಟರೂ ಹಾಗೆಯೇ. ಅದನ್ನು ಬಳಸದಿದ್ದರೆ ಒಂದು ರೀತಿ ಅದನ್ನು ಹೂತಿಟ್ಟಂತೆಯೇ ವ್ಯರ್ಥವಾಗುತ್ತದೆ. ಹೆಚ್ಚು ಕಾಲದ ಡಿಪಾಸಿಟ್ಟುಗಳಾಗಿ ಹಣವೂ, ಷೇರು ಬಾಂಡುಗಳನ್ನು ಕೊಂಡ ಹಣವೂ,  ವ್ಯಾಪಾರಕ್ಕೂ ಉತ್ಪತ್ತಿ ಕೈಗಾರಿಕೆ ವ್ಯವಸಾಯಾದಿಗಳಿಗೆ ಬಂಡವಾಳವಾಗಿ ಹೂಡಿದ ಹಣವೂ ಹೂಡಿದವರಿಗೆ ಬಡ್ಡಿ ಲಾಭ ಗಳಿಸಿಕೊಡುತ್ತವೆ. ಉತ್ಪತ್ತಿಕಾರರಿಗೆ, ಮಾರಾಟಗಾರರಿಗೆ ಬೆಂಬಲವಾಗುತ್ತದೆ. ದೇಶದ ಸಂಪತ್ತಿನ ನಿರ್ಮಾಣ ಕಾರ್ಯದಲ್ಲಿ ನೆರವಾಗುತ್ತದೆ. ಜನ ಮಾಡಿದ ಉಳಿತಾಯ ಹೀಗೆ ಫಲಿಸುವುದು. ವ್ಯಕ್ತಿಗಳ ಜೊತೆಗೆ ಸಂಸ್ಥೆಗಳೂ ದೊಡ್ಡ ಮೊತ್ತದಲ್ಲಿ ತಮ್ಮ ಕೈಯಲ್ಲಿರುವ ಹಣಗಳನ್ನು ಹೀಗೆ ಬಡ್ಡಿಗೂ ಉತ್ಪತ್ತಿಗೂ ಹೂಡಿದರೆ ಅದು ಸಂಪನ್ಮಂಡಲವನ್ನು ಪೋಷಿಸುತ್ತದೆ.  ಆದುದರಿಂದಲೇ ಕೂಡಿಡುವವನಿಗೆ ಲೋಕದಲ್ಲಿ ಕೀರ್ತಿ ಪ್ರತಿಷ್ಠೆ ಬಂದಿರುವುದು. ಅದೊಂದು ಸದ್ಗುಣವೆಂದು ಎಣಿಸಿರುವುದು. ಅಂಥವನೇ ಸಂಪತ್ತಿನ ಅಡಿಗಟ್ಟು ಭದ್ರತೆ ಎನ್ನುತ್ತಾರೆ. ಸತ್ಯದ ಈ ಮುಖ ಲೋಕಕ್ಕೆ ಬಹುಕಾಲದಿಂದ ಪರಿಚಿತವಾದ್ದು.

ಸತ್ಯಕ್ಕೆ ಇನ್ನೊಂದು ಮುಖವಿದೆ. ಎಲ್ಲೆಲ್ಲಿಯೂ 'Economy' ಹಾಳತದ, ವೆಚ್ಚ-ಮಿಗಿತಾಯದ ಮಿತವ್ಯಯ ಮಾಡಬೇಕೆನ್ನುತ್ತಾರೆ. ಇವೊತ್ತು ಅನಾವಶ್ಯಕವಾದ ಕೆಲಸಗಳು ಇಲಾಖೆಗಳು ಹುಟ್ಟಿಕೊಂಡಿವೆ.  ವೆಚ್ಚ ಅತೀವವಾಗುತ್ತಿದೆ. ಸಂಬಳ ಸಾರಿಗೆ ಇಳಿಸಬೇಕು. ಹೆಚ್ಚು ಜನರನ್ನು ಕೆಲಸದಿಂದ ತೆಗೆದು ಇರುವವರಿಂದ ಹೆಚ್ಚು ಕೆಲಸಮಾಡಿಸಬೇಕೆಂಬ ವಾದ ಒಂದಿದೆ. ದೇಶಕ್ಕಾಗಿ ಮಾಡಲು ಇಷ್ಟೆಲ್ಲ ಕೆಲಸವಿಲ್ಲವೆ? – ಎಂಬ ಪ್ರಶ್ನೆ ಅವರನ್ನು ಕಾಡದು. ಹಾಗೇ ನಮ್ಮ ಯೋಗ್ಯತೆಗೆ ಮೀರಿ ಉದ್ಯೋಗ, ವೆಚ್ಚ ಮಾಡುತ್ತಿದ್ದೇವೆ. ಅದನ್ನು ಕತ್ತರಿಸಿ ಕಡಮೆ ಮಾಡಬೇಕು ಎಂದು ‘ರಿಟ್ರೆಂಚ್‌ಮೆಂಟ್’ ಉದ್ಯೋಗದಿಂದ ಜನರನ್ನು ತೆಗೆದು ಹಾಕುವ ಮನೋವೃತ್ತಿಗೆ ಪಕ್ಷಪಾತ ಬಹಳ. ಹಾಗೆ ಮಾಡುವುದು ನ್ಯಾಯ, ವಿವೇಕ ಎಂಬ ದೃಷ್ಟಿಗೆ ಬೆಲೆ ಬಹಳ. ಆ ವಾದ ತಪ್ಪೆಂದಲ್ಲ. ಆದರೆ ದೇಶದ ಕೋಟ್ಯಂತರ ಜನಕ್ಕೆ ಸಂಪಾದನೆಯೇ ಇಲ್ಲದಿರುವಾಗ, ಉದ್ಯೋಗಕ್ಕೆ ಹೆಚ್ಚು ಜನರನ್ನು ತೆಗೆದುಕೊಳ್ಳದಾದಾಗ, ಇರುವವರ ವರಮಾನ ಹೆಚ್ಚದಿರುವಾಗ ಎಷ್ಟು ಪದಾರ್ಥ ಉತ್ಪತ್ತಿಮಾಡಿದರೆ ತಾನೇ ಅದರ ಪ್ರಯೋಜನ ಯಾರಿಗೆ? ಕೊಳ್ಳುವವರಿಲ್ಲವಾದರೆ, ಎಲ್ಲರೂ ಕೂಡಿಡುವವರೇ ಆದರೆ, ತಿನ್ನುವವರೂ ಭೋಗಿಗಳೂ ಪದಾರ್ಥಗಳನ್ನು ಕೊಳ್ಳದಾದರೆ ಉದ್ಯೋಗ, ಕೈಗಾರಿಕೆ, ಬಂಡವಾಳದ ಹೂಟ, ಮಿತವ್ಯಯ, ಉಳಿತಾಯ ಏತಕ್ಕೆ? ಆರ್ಥಿಕ ದೃಷ್ಟಿಯಿಂದ ವ್ಯರ್ಥ. ಇವೊತ್ತು ಭಾರತ ಸರ್ಕಾರದ ಅಭಿವೃದ್ಧಿ ಕಾರ್ಯದ ಮತ್ತು ವೆಚ್ಚಗಳ ಕಾರಣದಿಂದ ಒಂದು

ಕೋಟಿಗೆ ಕಡಮೆ ಇಲ್ಲದೆ ಜನಕ್ಕೆ ಉದ್ಯೋಗ, ಸಂಪಾದನೆ ಹೆಚ್ಚಾಗಿದೆ. ಇಕಾನಮಿ ಎಂಬ ಹೆಸರಿನಲ್ಲಿ 3-4 ಲಕ್ಷ ವಿದ್ಯಾವಂತರನ್ನು, ಬುದ್ಧಿಶಾಲಿಗಳನ್ನು ಕೆಲಸಗಳಿಂದ ತೆಗೆದು ಹಾಕಿ ನೋಡಿ; ದೇಶದ ಸ್ತಿಮಿತ ಹೇಗೆ ಫಲಿಸುವುದೊ ಕಂಡೀರ! ಅವರ ಗಿರಾಕಿಯಿಂದ ಹೊಸ ಹೊಸ ಪದಾರ್ಥಗಳು ಉತ್ಪತ್ತಿಯಾಗುತ್ತಿವೆ; ಹೊರಗಿಂದ ಆಮದಾಗುತ್ತಿವೆ; ಕೈಗಾರಿಕೆಗಳಿಗೆ ಅವಕಾಶ ದೊರೆಯುತ್ತಿದೆ; ಪೇಟೆಯಲ್ಲಿ ಮಾರಾಟವಾಗುತ್ತಿದೆ. ಧಾರಣೆವಾಸಿಗಳು ಏರಿದ್ದರೂ ಕೊಳ್ಳುವವರ ಕೊಳ್ಳುವ ಶಕ್ತಿಯೂ ಏರುತ್ತಿರುವುದರಿಂದ ಪೇಟೆಯ ಉತ್ಸಾಹ ಕುಗ್ಗದೆ ನಡೆಯುತ್ತಿದೆ. ಇದನ್ನು ಒಂದು ಜ್ವರ ಸ್ಥಿತಿ ಅಥವಾ ಮದ ಸ್ಥಿತಿ ಅಥವಾ ಭ್ರಾಂತಿಯ ಸ್ಥಿತಿ ಎನ್ನಿ ಬೇಕಾದರೆ. ಆದರೆ ಜನಜೀವನದ ಮಟ್ಟವನ್ನು, ದೇಶದ ಸಂಪತ್ತನ್ನು ಹೆಚ್ಚಿಸಬೇಕಾಗಿರುವಾಗ, ಅದಕ್ಕೆ ಸಾಧನ ಸಂಪತ್ತುಗಳನ್ನು ಉತ್ಪತ್ತಿ ಮಾಡಬೇಕಿರುವಾಗ, ದೇಶದಲ್ಲಿನ ನಿರುದ್ಯೋಗ ಕಡಮೆ ಮಾಡಬೇಕಿರುವಾಗ ಈ ಪ್ರಮಾಣ ಹೆಚ್ಚುವುದೇ ನ್ಯಾಯವಾದೀತು. ಎಲ್ಲವನ್ನೂ ಕುಗ್ಗಿಸಿ ಸೊರಗಿಸುವುದಲ್ಲ ಮಾರ್ಗ, ಧರ್ಮ. ಹಾಸಿಗೆ ಇದ್ದಷ್ಟು ಕಾಲು ಚಾಚು ಅಥವಾ ಹಾಸಿಗೆಗೆ ತಕ್ಕಂತೆ ಕಾಲು ಮುದುರಬೇಕು ಎಂದಾಗ, ದೇಹಕ್ಕಿಂತ ಹಾಸಿಗೆಗೆ ಹೆಚ್ಚು ಬೆಲೆ ಕೊಟ್ಟಂತಾಗುತ್ತದೆ. ಹಾಸಿಗೆಯನ್ನು ದೊಡ್ಡದು ಮಾಡಿಕೊಳ್ಳಬೇಕು. ಅದಕ್ಕೆ ವೆಚ್ಚ ಜಾಸ್ತಿಯಾಗುತ್ತದೆ ಹೌದು. ಒಂದು ದೇಶದ ಸಂಪನ್ಮೂಲಗಳನ್ನೆಲ್ಲ ರೂಢಿಸಿ ಅದರಿಂದ ನಾಡಿನ ಸಂಪತ್ತನ್ನು ಹೆಚ್ಚಿಸುವ ಎಲ್ಲ ಉದ್ಯೋಗವೂ ಕರ್ಮವೂ ಸಮಾಜ ಹಿತಸಾಧಕವಾಗುತ್ತದೆ.

ಇದನ್ನು ಇನ್ನೊಂದು ರೀತಿ ನೋಡೋಣ. ಇಷ್ಟು ಉತ್ಪತ್ತಿ, ಉದ್ಯೋಗ ಹೆಚ್ಚಿಂದು ಅಲ್ಲಿ ವ್ಯಯವನ್ನೆಲ್ಲ ಕಡಮೆ ಮಾಡಿದರೆ, ಆ ಕೆಲಸ ಮಾಡುತ್ತಿದ್ದವರಲ್ಲಿ ಅನೇಕರನ್ನು ಕೆಲಸದಿಂದ ತೆಗೆಯಬೇಕಾಗುತ್ತದೆ. ಅವರಿಗೆ ವರಮಾನ ಕಡಮೆಯಾಯಿತು ಅಥವಾ ಇಲ್ಲದೇ ಹೋಯಿತು. ಹಿಂದೆ ಅವರು ಕೊಳ್ಳುತ್ತಿದ್ದ ಪದಾರ್ಥಗಳನ್ನು ಅವರು ಕೊಳ್ಳಲಾಗುವುದಿಲ್ಲ. ಅದಕ್ಕೆ ಪೇಟೆ, ಗಿರಾಕಿ ಆ ಮಟ್ಟಿಗೆ ಕಡಮೆ ಅಥವಾ ಇಲ್ಲವಾಗುವುದು. ಸಂಪಾದಿಸುವರೊಬ್ಬೊಬ್ಬರ ಮೇಲೆ 3-4 ಜನ ಬದುಕಬೇಕಾಗಿದ್ದರೆ ಅಷ್ಟು ಜನಕ್ಕೆ ಕಷ್ಟ ಹೆಚ್ಚಾಗಿ ಅವರು ತಬ್ಬಲಿಗಳಾಗುವರು. ತಿಂಗಳಿಗೆ ರೂ. 500/- ಸಂಪಾದಿಸುತ್ತಿದ್ದವನಿಗೆ ರೂ.100/- ಸಂಪಾದನೆ ಕಡಮೆಯಾದರೆ ಅವನನ್ನು ಕೆಲಸಕ್ಕಿಟ್ಟುಕೊಳ್ಳುತ್ತಿದ್ದ ಮಕ್ಕಳಿಗೆ ವಿದ್ಯೆ ಕಲಿಸುವ ಉಪಾಧ್ಯಾಯ, ಒಬ್ಬ ಸಂಗೀತದ ಮೇಷ್ಟ್ರು, ಒಬ್ಬಿಬ್ಬರು ಸೇವಕರು, ಅಡಿಗೆಯವರಿಗೆ ಕೆಲಸ ಹೋಗುವುದು. ಮೋಟಾರು ನಡೆಸುವವನು ನಿವೃತ್ತಿಯಾಗುವನು. ಅವನು ಬಟ್ಟೆ ಕೊಳ್ಳುವುದು ಕಡಮೆಯಾಗುವುದು. ಅವನ ಉಳಿತಾಯ ವಿಮೆ ಕಡಮೆಯಾಗುವುದು. ಅವನು ಗಾಡಿಯಲ್ಲೊ ಮೋಟರಿನಲ್ಲೊ ತಿರುಗುವುದು ಆ ಉದ್ಯೋಗದಲ್ಲಿನ ಪೆಟ್ರೋಲಿಗೊ ಟೈರುಗಳಿಗೊ ಗಿರಾಕಿ ತಗ್ಗುವುದು. ಪುಸ್ತಕ, ಪತ್ರಿಕೆ ಕೊಳ್ಳುವುದು ನಿಲ್ಲುವುದು. ಬ್ಯಾಂಕಿನಲ್ಲಿ ಕೂಡಿಡಬಲ್ಲ ಹಣ ಕಡಮೆಯಾಗುವುದು. ಇವನನ್ನು ನಂಬಿದ್ದ ಎಲ್ಲರ ವರಮಾನಗಳೂ ಹೀಗೆ



ಕಡಮೆಯಾಗಿ ಅವರೆಲ್ಲರ ಕೊಳ್ಳುವ ಶಕ್ತಿ ಕುಗ್ಗುವುದು. ಆ ಪದಾರ್ಥದ ಗಿರಾಕಿ ಇಲ್ಲದೆ, ಮಾರಾಟಗಾರರಿಗೆ ಲಾಭವಿಲ್ಲದೆ ಹೋಗುವುದು. ಅವರು ಕೊಳ್ಳದಿದ್ದರೆ ಆ ಪದಾರ್ಥದ ಉತ್ಪತ್ತಿಕಾರರಿಗೆ ಗಿರಾಕಿ ಕಡಮೆಯಾಗುವುದು; ಅವರು ತಮ್ಮ ಕೈ ಹಿಡಿತ ಮಾಡುವರು. ಅವರು ಉತ್ಪತ್ತಿ ಕಡಮೆ ಮಾಡುವರು ಅಥವಾ ತಮ್ಮಲ್ಲಿ ಕೆಲಸದವರನ್ನು ಕೆಲಸದಿಂದ ತೆಗೆಯುವರು. ಈ ವಿಷಮ ಚಕ್ರ ಹೀಗೆ ಹೋಗಿ ನಾಡಿನ ಆರ್ಥಿಕ ಜೀವನವನ್ನು ಸೊರಗಿಸಿ ಎಲ್ಲೆಲ್ಲಿಯೂ ಉಬ್ಬಸ ಅತಿಯಾಗಿ ಹರಡುವುದು.

ಖರ್ಚು ಮಾಡುವವನು ಅತಿಯಾಗಿ ಅವಿವೇಕದಿಂದ ಖರ್ಚು ಮಾಡಿದಾಗಲೂ ಇನ್ನೊಬ್ಬರಿಗೆ ಅದರ ಪ್ರಯೋಜನ ದೊರೆಯುವುದು. ಇವನ ಅವಿವೇಕದಿಂದ ಇವನು ಮುರಿದು ಬೀಳಬಹುದು. ಆದರೆ ಇವನ ವೆಚ್ಚದಿಂದ ಎಷ್ಟೊ ಜನಕ್ಕೆ ಉದ್ಯೋಗ, ವರಮಾನ, ಗಿರಾಕಿ, ಜೀವನ ನಡೆಯುವುವು. ವೆಚ್ಚ ಮಾಡುವವನಿಲ್ಲದಿದ್ದರೆ ಲೋಕದ ಯಾವ ಸುಖ ಸಂತೋಷಗಳೂ ಇಲ್ಲ. ವ್ಯಕ್ತಿಯಾಗಲಿ ಸಂಸ್ಥೆಯಾಗಲಿ ಸರ್ಕಾರವಾಗಲಿ ವೆಚ್ಚದ ಕೇಂದ್ರವಾದರೆ, ಈ ವೆಚ್ಚದ ನೀತಿಯಿಂದ ಒಟ್ಟು ಜನ ಸಮುದಾಯಕ್ಕೆ ಆರ್ಥಿಕ ಪ್ರಯೋಜನ ಹೆಚ್ಚಬಲ್ಲದಾಗುವುದು. ವೆಚ್ಚವನ್ನು ತೆಗಳುವ ಮನೋಧರ್ಮ ಅನ್ಯಾಯವಾಗದೆ? ತಿನ್ನದೆ ಉಳಿಸಿದವನು ಸ್ವಪ್ರಯೋಜನವನ್ನು ಸಾಧಿಸುತ್ತಾನೆ. ಅವನಿಗೆ ಲಾಭ; ಅವನ ಪ್ರತಿಷ್ಠೆ, ಪ್ರಭಾವ ಹೆಚ್ಚುತ್ತದೆ. ಇಹವೂ ಅವನಿಗೆ, ಪರವೂ ಅವನಿಗೇ ಅಂತೆ! ಒಂದು ರೀತಿ ಲೋಕವನ್ನು ದುಡಿಸಿಕೊಳ್ಳುವವನು ಅವನು. ಅವನು ಯಜಮಾನ, ಮಾಲಕ ವರ್ಗಕ್ಕೆ ಸಂಬಂಧಿಸಿದವನು. ಅವನ ದರ್ಪದಿಂದ ಸಂಪತ್ತನ್ನು ನಿರ್ಮಾಣ ಮಾಡುವ ಕಾರ್ಯ ನಡೆದು ಅದರ ಪ್ರಯೋಜನದ ಭಾಗ ಅವನು ಪಡೆಯುವನು. ಉತ್ಪತ್ತಿಯಾಗದಿದ್ದರೆ ಯಾರೂ ಕೊಳ್ಳಲು ಏನೂ ಸುಖ, ಭೋಗ, ಸಾಮಗ್ರಿಗಳು ಇರವು, ಉದ್ಯೋಗ ವರಮಾನಗಳೂ ಇರವೆಂಬುದು ನಿಜವಾದರೂ ವೆಚ್ಚ ಮಾಡುವವರಿಂದಲೇ ಕೊಂಡು ತಿನ್ನುವವರಿಂದಲೇ ಜನತೆಯ ಸುಖ, ಭೋಗ, ಸಂತೋಷ, ಕ್ಷೇಮ. ಇವರೂ ಇವರ ಭೋಗಾಪೇಕ್ಷೆಯೂ ಇಲ್ಲದಿದ್ದರೆ ಎಲ್ಲ ಉದ್ಯೋಗವೂ ಎಲ್ಲ ಉತ್ಪಾದನೆಯೂ ವ್ಯರ್ಥ. ವೆಚ್ಚ ಮಾಡುವವರ ಮರ್ಯಾದೆ ಸಲ್ಲತಕ್ಕದ್ದು ಅಗತ್ಯ. ಅವರೂ ವಂದ್ಯರು. ಅವರ ಪರವಾಗಿ ಆಡಬೇಕಾದ ಮಾತು ಒಂದಿದೆ ಎಂದು ಇದನ್ನು ಹೇಳಿದೆ. ಎಲ್ಲ ಉತ್ಪತ್ತಿಯ, ವರಮಾನದ ಪರಮ ಪ್ರಯೋಜನ ನಾಡಿಗೆ, ಜನಕ್ಕೆ, ಜನದ ಸುಭಿಕ್ಷಕ್ಕೆ, ಸುಖ ಭೋಗ ಸಂತುಷ್ಟಿಗೆ–ಎನ್ನುವಾಗ ಮಿತವ್ಯಯದಷ್ಟೇ ವ್ಯಯಕ್ಕೂ ಸ್ಥಾನ ಮನ್ನಣೆ ದೊರೆಯಬೇಕೆಂಬ ಸತ್ಯದ ಇನ್ನೊಂದು ಮುಖವನ್ನು ನೆನಪಿನಲ್ಲಿಡುವುದು ಒಳ್ಳೆಯದು.

(4-3-1960)

❑

# 6. ಹಿಂದೀ ಭಾಷಾ ಹೇರಿಕೆ ವಿವೇಕವಲ್ಲ

ಭಾರತ ರಾಷ್ಟ್ರವನ್ನು ಭಾಷಾ ಪ್ರದೇಶಗಳಾಗಿ ವಿಂಗಡಿಸಬೇಕೆಂಬ ಚಳವಳಿ ನಡೆದು ಇಂದು ಆಯಾ ಭಾಷಾ ಪ್ರದೇಶಗಳಲ್ಲಿ ಬೇರೆ ಬೇರೆ ರಾಜ್ಯಗಳು ಏರ್ಪಟ್ಟಿವೆ. ಈ ದೇಶ ದೊಡ್ಡದು. ಭಾಷೆಯನ್ನು ಅನುಸರಿಸಿ ರಾಜ್ಯಗಳ ವಿಂಗಡಣೆಯಾದರೆ ಬೇರೆ ಬೇರೆ ಸಾಹಿತ್ಯಗಳು ಧಾರಾಳವಾಗಿ ಬೆಳೆಯುವುವು. ಆಯಾ ಭಾಗದ ಜನರು ತಮ್ಮ ಭಾಗದ ಆಡಳಿತ ಕ್ರಮವನ್ನು ಚೆನ್ನಾಗಿ ಅರ್ಥಮಾಡಿಕೊಂಡು ರಾಜ್ಯ ಕಾರ್ಯಗಳಲ್ಲಿ ಹೆಚ್ಚು ಚೆನ್ನಾಗಿ ಭಾಗವಹಿಸಬಹುದು. ನಾಡಿನ ಏಳಿಗೆಯ ದೃಷ್ಟಿಯಿಂದ ಇದು ಅವರ ಪೌರತ್ವಕ್ಕೆ ಶಕ್ತಿ ತರುವುದು. ನಾಡಿನಲ್ಲಿ ಸ್ವತಂತ್ರ ಚಿಂತನೆಯ ಅಗತ್ಯ ಬಹಳವಿದೆ. ಜನ ಸ್ವತಂತ್ರರಾಗಿ ಆಲೋಚನೆ ಮಾಡಬಲ್ಲವರಾಗುವರು - ಎಂಬುದು ಈ ವಿಂಗಡಣೆಯ ತತ್ವವಾಗಿತ್ತು. ವಿಂಗಡಣೆ ಆಯಿತು. ಆದರೆ ಅವನ್ನು ಬಯಸಿದ ಜನ ಸಾಮಾನ್ಯವಾಗಿ ಸಾಹಿತ್ಯ - ಸಂಸ್ಕೃತಿಗಳ ಆರಾಧಕರು. ರಾಜಕೀಯದವರು ಅದರ ಪ್ರಯೋಜನಗಳನ್ನು ತಮಗೆ ರೂಢಿಸಿಕೊಳ್ಳುವಾಗ ಈ ಆಕಾಂಕ್ಷೆಗಳನ್ನು ಎಲ್ಲಿಗೆ ಒಯ್ದು ಮುಟ್ಟಿಸುವರೊ ಕಾಣೆ. ಇದರ ಸತ್ಫಲಗಳು ಮಾತ್ರ ದೊರೆಯಬೇಕು, ದುಷ್ಫಲಗಳು ನಿವಾರಿತವಾಗಬೇಕು ಎಂಬುದು ಎಲ್ಲರ ಗುರಿಯಲ್ಲಿಯೂ ಇದ್ದ ಹೊರತು ಇದು ವಿಪರೀತಕ್ಕೆ ಎಡೆಕೊಟ್ಟೀತು. ನಾಡ ಬಿಗಿ ಸಡಿಲವಾದೀತು. ನಾಡೇ ಒಡೆದೀತು.

ಆಯಾ ರಾಜ್ಯಗಳಲ್ಲಿ ಆಯಾ ಭಾಷೆಯೇ ಶಾಸನದ ಭಾಷೆ, ಆಡಳಿತ ಭಾಷೆ, ನ್ಯಾಯ ವಿಚಾರಣೆಯ ಭಾಷೆ, ಶಿಕ್ಷಣದ ಭಾಷೆ ಎಂಬುದು ಇಂದು ಎಲ್ಲರೂ ಒಪ್ಪುವ ಸಂಗತಿಯಾದರೂ ಇವುಗಳಲ್ಲಿ ಎಲ್ಲವೂ ಇನ್ನೂ ಹೊಸ ಕಾಲದ ಅಗತ್ಯಕ್ಕೆ ತಕ್ಕಂತೆ ಬೆಳೆದಿಲ್ಲ. ಅಭಿಮಾನಿಗಳು ಏನೇ ಹೇಳಲಿ ಇನ್ನೂ ಪುಷ್ಟಿಗೊಳ್ಳಬೇಕಾಗಿದೆ. ಆ ಮುಂಚೆ ಅವುಗಳನ್ನು ಅಲ್ಲಲ್ಲಿ ಆಡಳಿತ ಭಾಷೆಯಾಗಿ ಮಾಡಬಹುದು. ಕೆಳಮಟ್ಟಗಳ ಶಿಕ್ಷಣ ಮಾಧ್ಯಮವಾಗಿಯೂ ಎಲ್ಲ ನ್ಯಾಯ ವಿಚಾರಣೆಗಳ ಮಾಧ್ಯಮವಾಗಿಯೂ ಮಾಡಬಹುದು: ಈ ರಾಜ್ಯಗಳು ಪೂರ್ತಿ ಪ್ರತ್ಯೇಕವಾದುವಾದರೆ, ಸ್ವತಂತ್ರವಾಗಿದ್ದಿದ್ದರೆ. ಆದರೆ ಅಖಿಲ ಭಾರತ ಪ್ರಯೋಜನವೂ, ಅಗತ್ಯವೂ ಇವಕ್ಕೆ ಮೇಲ್ಪಟ್ಟ ಅಂಶಗಳು. ಭಾರತದ ವ್ಯಾಪ್ತಿಯೂ ಪ್ರಾಧಾನ್ಯವೂ ಎಲ್ಲ ರಾಜ್ಯಗಳ ಜೀವನದ ಎಲ್ಲ ಅಂಶಗಳಲ್ಲಿಯೂ ಜಾಗ್ರತವಾಗಿ ಕಾರ್ಯಕಾರಿಯಾಗಿರಬೇಕಾಗುತ್ತದೆ. ರಾಜ್ಯರಾಜ್ಯಗಳ ಸಂಬಂಧ ರಚನೆ,



ಪತ್ರವ್ಯವಹಾರ ನಡೆಯಬೇಕಾಗಿರುತ್ತದೆ. ಭಾರತದ ಒಕ್ಕಟ್ಟು ಪ್ರಾಂತ ಭಕ್ತಿಗಳಿಗೆ ಮೀರಿದ ಅಗತ್ಯ; ಸರ್ವಥಾ ಸಾಧಿಸಬೇಕಾದ್ದು. ಕೇಂದ್ರದ ಶಾಸನ ಸಭೆಗಳಿಗೂ ಆಡಳಿತ ಅಧಿಕಾರ ಮಂಡಲಗಳಿಗೂ ಎಲ್ಲ ಭಾಗಗಳ ಜನರೂ ದುಡಿಯಬೇಕಾಗುತ್ತದೆ. ಬೇರೆ ಬೇರೆ ಭಾಗಗಳವರು ಕೂಡಿ ಮಾತನಾಡಲು ಒಂದು ಅಖಿಲ ಭಾರತ ಭಾಷೆ ಬೇಕು. ಅದು ನಮ್ಮ ಅಖಿಲಭಾರತೀಯತೆಯ ಲಾಂಛನ. ಆದುದರಿಂದ ಅದರ ವ್ಯಾಪ್ತಿ ಎಲ್ಲ ಕಡೆಯೂ ಇರತಕ್ಕದ್ದು, ಅದನ್ನು ಕಲಿಯಬೇಕು – ಎಂದು ರಾಜ್ಯಾಂಗ ರಚನಾ ಸಮಯದಲ್ಲಿ ಹಿಂದಿ ಭಾಷೆಗೆ ಆ ಸ್ಥಾನಮಾನ ಕಟ್ಟಿದರು. ಹಿಂದಿ ಭಾಷೆಯನ್ನು ಪ್ರಧಾನ ರಾಷ್ಟ್ರಭಾಷೆಯನ್ನಾಗಿ ಮಾಡಲು ಯಾವ ಯಾವ ಕಾರ್ಯಕ್ರಮಗಳನ್ನು ಕೈಕೊಳ್ಳತಕ್ಕದ್ದೆಂದು ನಿರ್ಣಯಿಸಿ ರಾಷ್ಟ್ರಾಧ್ಯಕ್ಷರು 1965ರೊಳಗಾಗಿ ಅದು ಕಾರ್ಯಗತವಾಗುವಂತೆ ಮಾಡತಕ್ಕದ್ದೆಂದು ನಿರ್ಣಯವಾಯಿತು. ಕಾಲದ ಈ ಮಿತಿ ಅಲ್ಪ, ಅವಧಿಯನ್ನು ಮುಂದಕ್ಕೆ ಹಾಕಬಹುದೆಂದು ಈಚೆಗೆ ತೀರ್ಮಾನ ವಾಗಿರುವುದಾದರೂ ಹಿಂದಿಯನ್ನು ಹೆಚ್ಚು ಹೆಚ್ಚಾಗಿ ಕೇಂದ್ರಭಾಷೆಯಾಗಿ ಬಳಸಲು ಪೂರ್ವಸಿದ್ಧತೆ ನಡೆಯಬೇಕೆಂದಾಗಿದೆ. ಇನ್ನು 10-20 ವರ್ಷಗಳಲ್ಲಿ ಪ್ರಾಂತ ಕಾರ್ಯಗಳೆಲ್ಲ ಪ್ರಾಂತ ಭಾಷೆಗಳಲ್ಲಿಯೂ ರಾಜ್ಯ ರಾಜ್ಯಗಳ ವ್ಯವಹಾರವೂ ಕೇಂದ್ರ ವ್ಯವಹಾರವೂ ಹಿಂದಿಯಲ್ಲಿಯೂ ನಡೆಯಲಿವೆ ಎಂದಾಗಿದೆ.

ಪ್ರದೇಶ ಭಾಷೆಗಳು, ಆಯಾ ಪ್ರದೇಶದಲ್ಲಿ ಎಲ್ಲ ಕೆಲಸಗಳಿಗೂ ಬಳಕೆಯಾಗಿ ಬೆಳೆಯಲಿ. ಆದರೆ ಹಿಂದಿ ಕಲಿತ ಹೊರತು ಅಖಿಲ ಭಾರತ ಪ್ರಪಂಚದಲ್ಲಿ ಪ್ರದೇಶಗಳವರಾರಿಗೂ ಗಣ್ಯತೆ, ಪ್ರಯೋಜನ ದೊರಕದು. ಭಾರತೀಯತೆಯ ಲಕ್ಷಣ ಅವರಲ್ಲಿಲ್ಲವಾಗುವುದು. ಆದುದರಿಂದ ವಿದ್ಯಾಶಾಲೆಗಳಲ್ಲಿ ಕಡ್ಡಾಯವಾಗಿ ಹಿಂದಿ ಅಭ್ಯಾಸ ಮಾಡತಕ್ಕದ್ದೆಂದು ವಿಧಾಯಕವಾಗುತ್ತದೆ. ಹಿಂದಿ ತಿಳಿಯದವರಿಗೆ ಕೇಂದ್ರದ ಯಾವ ಶಾಖೆಯ ಕಾರ್ಯಕಲಾಪಗಳಲ್ಲಿಯೂ ಉದ್ಯೋಗವಾಗಲಿ, ಸ್ಥಾನವಾಗಲಿ ಸಿಗವು. ಹಿರಿಮೆಯನ್ನು ಬಯಸುವ ಎಲ್ಲರೂ ಹಿಂದಿಯನ್ನು ಕಲಿಯಲು ಅಗತ್ಯವಾಗುವುದು. ಬುದ್ಧಿವಂತರೆಲ್ಲ ಅದನ್ನೇ ಕಲಿತು ಪ್ರಾಂತಭಾಷೆಯ ಸೇವೆಯನ್ನು ಹಿಂದಿನಂತೆಯೇ ನಿರ್ಲಕ್ಷ್ಯ ಮಾಡುವರು. ಇಂಗ್ಲಿಷ್ ಪ್ರಬಲಿಸಿದ್ದಾಗ ಪ್ರಾಂತಭಾಷೆಗಳ ಗತಿ ಯಾವುದಿತ್ತೋ ಈಗ ಆ ಗತಿ ಹಿಂದಿಯ ಕಾರಣದಿಂದ ಅವಕ್ಕೆ ಉಳಿಯುವುದು. ಹಿಂದಿ ಭರತ ಖಂಡದ ಎಲ್ಲ ಕಾರ್ಯಗಳಿಗೆ ಪಳಗುವಷ್ಟು ಸಂಪನ್ನವಾಗಿ, ಆಧುನಿಕವಾಗಿ ಇದ್ದಿದ್ದರೆ ಯಾವ ಅಡ್ಡಿಯೂ ಆಕ್ಷೇಪಣೆಯೂ ಇರುತ್ತಿರಲಿಲ್ಲ. ಆದರೆ ಹಲವು ಪ್ರದೇಶ ಭಾಷೆಗಳಷ್ಟು ಚೆನ್ನಾಗಿ ಆಥವಾ ವಿತರಣೆಯಿಂದ ಅದು ಇನ್ನೂ ಬೆಳೆದಿಲ್ಲ. ಉತ್ತರ ಪ್ರದೇಶದಲ್ಲಿಯೂ ಬಿಹಾರದಲ್ಲಿಯೂ ಇರುವ ಹಿಂದಿಗೂ ಆಗ್ರಾ–ದೆಹಲಿಗಳಲ್ಲಿ ಬಳಕೆಯಲ್ಲಿರುವ ಹಿಂದಿಗೂ ತುಂಬ ವ್ಯತ್ಯಾಸವಿದೆ. ಈ ಯಾರೂ ಪಂಜಾಬಿನ ಹಿಂದಿಯನ್ನು ಹಿಂದಿ ಎಂದೇ ಒಪ್ಪಲು ಹಿಂಜರಿಯುತ್ತಾರೆ. ಈ ನಡುವೆ ಕೆಲವು ಮಂದಿ ಅತ್ಯುತ್ಸಾಹಿಗಳು ದೊಡ್ಡ ದೊಡ್ಡ ಸಂಸ್ಕೃತ ಮಾತುಗಳನ್ನು ಹಿಂದಿಗೆ ಹಿಡಿದು

ಅದು ಸಾಮಾನ್ಯರಿಗೆ ಅರ್ಥವಾಗದಂತೆ ಮಾಡಿರುವುದಲ್ಲದೆ, ಅನೇಕ ಇತರ ಭಾಷೆಗಳಿಗೆ ಅನನುಕೂಲವೂ ಅಪ್ರಿಯವೂ ಅಗ್ರಾಹ್ಯವೂ ಆಗುವಂತೆ ಮಾಡಿದ್ದಾರೆ. ನಿಘಂಟುಗಳನ್ನು ಹೊಸದಾಗಿ ಕಲ್ಪಿಸಿ ಹಿಂದಿಯ ತುಂಬ ಪೆಡಂಭೂತಗಳನ್ನು ಹೊಸೆದು ನಿಲ್ಲಿಸಿ ಅವಕ್ಕೆ ಎಲ್ಲ ಭಾಷೆಗಳಲ್ಲಿಯೂ ಆಳ್ಕೆ, ಬಳಕೆ ಬರಬೇಕೆಂದು ಒತ್ತಾಯ ಮಾಡುತ್ತಿದ್ದಾರೆ. ದವಡೆ ಒಡೆಯುತ್ತದೆ, ಉಸಿರು ಸಿಕ್ಕಿಕೊಳ್ಳುತ್ತದೆ, ಅವುಗಳ ಉಚ್ಚಾರದ ಪ್ರಯೋಗದಿಂದ. ಇತರ ಕಾರಣಗಳಿಂದ ಮೊದಲೇ ಹಿಮ್ಮೆಟ್ಟುತ್ತಿದ್ದ ಜನ ಈ ಕಾರಣದಿಂದ ಅದಕ್ಕೆ ಪ್ರತಿಭಟಿಸುವಂತಾಗುತ್ತದೆ. ಉತ್ತರ ಭರತ ಖಂಡದ ಭಾಷೆಗಳು ಸಂಸ್ಕೃತಜನ್ಯಗಳು, ಪ್ರಾಕೃತಗಳು. ದಕ್ಷಿಣದ ಮೂರು ನಾಲ್ಕು ಭಾಷೆಗಳ ಮರ್ಯಾದೆ, ಸಂಪ್ರದಾಯ, ನುಡಿಗಟ್ಟು, ವಾಕ್ಯರಚನೆ, ಸುಶ್ರಾವ್ಯತೆ ಇವೆಲ್ಲ ಹಾಳಾಗುತ್ತವೆ, ಈ ಭೂತದ ಪ್ರವೇಶ ಕಡ್ಡಾಯವಾದರೆ. ರಾಜಕೀಯವಾಗಿ ಬಲತ್ಕಾರ ಫಲಿಸಬಹುದು. ಆದರೆ ಪ್ರದೇಶ ಭಾಷೆಗಳು ಈ ಪ್ರಯೋಗದಿಂದ ಸಹಜವಾಗಿ ಬಲಿತು ಬಾಳಲಾಗುವುದಿಲ್ಲ. ಎಲ್ಲ ಪ್ರದೇಶಗಳಲ್ಲಿ ಬಳಕೆಯಲ್ಲಿರುವ ಅರ್ಥವತ್ತಾದ ಮಾತುಗಳನ್ನು ತಂದುಕೊಂಡು ಹಿಂದಿಯನ್ನು 'ಸರ್ವಭಾಷಾ-ಮಯೀ ಭಾಷಾ' ಎಂಬಂತೆ ಸಹಜವೂ ಸರಳವೂ ಸುಂದರವೂ ಆಗಿ ಮಾಡಿದ ಹೊರತು ಈಗಿನ ಉತ್ಸಾಹಿಗಳ ಪ್ರಯತ್ನ ನಾಡಿಗೆ, ಇತರ ನುಡಿಗಳಿಗೆ ಹಿತಕರವಾಗದು.

ಹಿಂದೆ ಹಿಂದುಸ್ತಾನಿಯನ್ನು ಅಖಿಲಭಾರತ ಭಾಷೆಯಾಗಿ ಮಾಡಬೇಕೆಂದಿತ್ತು. ಹಿಂದುಗಳಿಗೂ ಮುಸ್ಲಿಮರಿಗೂ ಅದು ಗ್ರಾಹ್ಯವಾಗಬಲ್ಲದೆಂದೆಣಿಸಿತ್ತು. ಹಿಂದುಸ್ತಾನಿ ಉತ್ತರದ ಸಾಮಾನ್ಯರಿಗೂ ಸುಲಭವಾಗುತ್ತಿತ್ತು. ಮುಸ್ಲಿಮರು ಅದನ್ನು ಉರ್ದು ಲಿಪಿಯಲ್ಲಿ ಬರೆಯಲಿ, ಹಿಂದುಗಳು ದೇವನಾಗರಿ ಲಿಪಿಯಲ್ಲಿ ಬರೆಯಲಿ ಎಂಬ ನಿರೀಕ್ಷೆಯ ಧಾರಾಳವಿತ್ತು. ಹಿಂದಿ ಬಹುಜನ ಭಾಷೆ ಎನ್ನತೊಡಗಿದಾಗ ಇನ್ನೂ ಇಂಡಿಯ ಪಾಕಿಸ್ತಾನ ಒಡೆದಿರಲಿಲ್ಲ. ಎಂಟೊಂಬತ್ತು ಕೋಟಿ ಮುಸ್ಲಿಂ ಸಂಖ್ಯಾಮಾನ ಬಹುಮತದ ಎಣಿಕೆಗೆ ಒದಗಿತ್ತು. ಅವರಲ್ಲಿ 4-5 ಕೋಟಿ ಮುಸ್ಲಿಮರು ಈಗ ವಿದೇಶಿಗಳಾಗಿದ್ದಾರೆ. ಉಳಿದ ಮುಸ್ಲಿಮರಿಗೆ ಉರ್ದುವೊ ಪ್ರದೇಶ ಭಾಷೆಗಳೊ ಲಕ್ನೊ–ಆಗ್ರ, ಡೆಲ್ಲಿಗಳ ಹಿಂದೂಸ್ತಾನಿಯೊ ಸುಲಭವೂ, ಸಹಜವೂ ಆದೀತೇ ಹೊರತು ಸಂಸ್ಕೃತಭೂಯಿಷ್ಠವಾದ, ದೇವನಾಗರಿ ಲಿಪಿಯಲ್ಲಿ ಬರೆಯಬೇಕಾದ ರಾಷ್ಟ್ರಭಾಷಾ ಹಿಂದಿ ಸುತರಾಂ ಸಹಜವಾಗದು. ಈಗ ಅದಕ್ಕೆ ದೊರೆವ ಬಹುಮತದ ಬಲ ಒಂದು ಸ್ಥೂಲ ಜನಗಣತಿಯ ಸಾಧಾರಣ ಬಹುಮತ.

ಈವರೆಗೂ ನಾಡನ್ನು ಒಂದಾಗಿ ಆಡಳಿತದಲ್ಲಿ, ವಿದ್ಯಾಭ್ಯಾಸದಲ್ಲಿ ನಡಸುತ್ತಿದ್ದ ಭಾಷೆ ಇಂಗ್ಲಿಷ್. ಈ ನಾಡ ಭಾಷೆಯೆಂದು, ಹೊಸದಾಗಿ ಪಟ್ಟಕ್ಕೆ ಬರುವುದೆಂದಿರುವ ಹಿಂದಿಯಲ್ಲಿ ರಾಜ್ಯ ಶಾಸನಗಳನ್ನೂ ನ್ಯಾಯನಿರ್ಣಯವನ್ನೂ ಮಾಡುವುದೆಂದರೆ ಆ ಎಲ್ಲವನ್ನು ಭಾಷಾಂತರ ಮಾಡಬೇಕಾಗುತ್ತದೆ. ಅಕೌಂಟೆಂಟ್ ಜನರಲ್, ಆಡಿಟರ್ ಜನರಲ್ ಅವರ ಲೆಕ್ಕಗಳು, ತನಿಖೆಗಳು ಹೊಸತಾಗಿ ರಚಿತವಾಗಬೇಕಾಗುತ್ತದೆ. ಅವಸರ ಮಾಡದೆ ಇಂಗ್ಲಿಷನ್ನೂ ಹಿಂದಿಯನ್ನೂ ಇನ್ನೂ ಹತ್ತಿಪ್ಪತ್ತು ವರ್ಷಕಾಲ ಜೊತೆಯಲ್ಲಿ ನಡಸಿಕೊಂಡು ಹೋದರೆ, ಆ ನಡುವೆ ಎಲ್ಲರ ಭಕ್ತಿ, ಪ್ರೀತಿ, ಸಹಕಾರ ಗಳಿಸಿ ಹಿಂದಿಯನ್ನು ಸರ್ವಪ್ರಾತಿನಿಧಿಕವಾಗಿ ಬೆಳಸಿದರೆ - ಉತ್ತರೋತ್ತರ ಪೂರ್ತಿ ಹಿಂದಿಗೇ ಪ್ರಾಧಾನ್ಯ ತರಬಹುದು. ಆದರೆ ಅವಸರ ಉಳಿದೆಲ್ಲವನ್ನೂ ಮೆಟ್ಟುತ್ತಿದೆ. ಹಲವು ಜನದ ಮನಸ್ಸನ್ನು ಕರ್ಕಶವಾಗಿ ಮಾಡಬಲ್ಲದ್ದಾಗಿದೆ. ಭಾವತಃ ಭಾರತ ಏಕ ರಾಷ್ಟ್ರವಾಗಿ ಇನ್ನೂ ಸುಸಂಘಟಿತವಾಗಬೇಕಾಗಿದೆ. ರಾಷ್ಟ್ರಭಾಷೆ ಎಂಬ ಉತ್ಸಾಹ ದಕ್ಷಿಣ-ಉತ್ತರಗಳನ್ನು ಒಡೆಯುವಂತಾಗಬಾರದು.



ದೇಶಭಾಷೆಗಳು ಬೆಳೆಯಬೇಕೆನ್ನುವ ಈಗ ಸಂಸ್ಕೃತದ ಮತ್ತು ಇಂಗ್ಲಿಷಿನ ಎರವಲನ್ನು ಕಡಮೆ ಮಾಡಿ ತಮ್ಮ ಜಾಯಮಾನದಂತೆ ಬೆಳೆಯಲು ಯತ್ನಿಸುತ್ತವೆ. ಹೊರಗಿನ ಈ ಹೊಸ ಪ್ರಭಾವ ತನ್ನ ಮೇಲೆ ಆಧಿಪತ್ಯ ಮಾಡುವಂತೆ ಅವಕಾಶ ಕೊಡಲಾರವು. ಇತ್ತ ಪ್ರತಿ ರಾಜ್ಯದಲ್ಲಿಯೂ ಪ್ರಾಂತ ಭಾಷೆಯೇ ಎಲ್ಲಕ್ಕೂ ಬಳಕೆಯಾಗುವುದರಿಂದ ಆ ಭಾಷೆ ಬಾರದವರು ಇಲ್ಲಿ ಉಳಿಯಲಾಗುವುದಿಲ್ಲ, ಬೆಳೆಯಲಾಗುವುದಿಲ್ಲ. ಒಂದು ಅಂಗಡಿಯ ಹೆಸರ ಹಲಗೆ, ಒಂದು ಬಸ್ಸಿನ ಹೆಸರು, ಒಂದು ರಸ್ತೆಯ ಹೆಸರು ಹೊರಗಡೆಯವರಿಗೆ ತಿಳಿಯದಾಗುವುದು. ಹೊಸತಾಗಿ ಪ್ರಾಂತಗಳಾದ ಮಹಾರಾಷ್ಟ್ರ, ಗುಜರಾತ್ ಹುಟ್ಟಿದ ದಿನವೇ ಆ ಎರಡರಲ್ಲಿಯೂ ಮಹಾರಾಷ್ಟ್ರಿಯಲ್ಲಿ, ಗುಜರಾತಿಯಲ್ಲಿ ರಾಜಕಾರ್ಯ ನಡೆಯತಕ್ಕದೆಂದು ಧೋರಣೆಯನ್ನು ಹೊರಡಿಸಿದರು. ಇನ್ನು ಹತ್ತು ವರ್ಷಕಾಲ ಆ ಪ್ರದೇಶಗಳಲ್ಲಿರುವ ಇತರ ಭಾಷಾ ವರ್ಗಗಳವರಿಗೆಲ್ಲ ಉಬ್ಬಸ, ಕಷ್ಟ, ನಷ್ಟ ಉಂಟಾಗುತ್ತವೆ. ಅತ್ತ ರಾಜ್ಯಾಂಗ ಶಾಸನ, ಶಾಸನಗಳ ರಚನೆ, ಶಾಸನ ಮಂದಿರಗಳ ಕಾರ್ಯಕಲಾಪ, ನ್ಯಾಯನಿರ್ಣಯ, ಪತ್ರ ವ್ಯವಹಾರ ಎಲ್ಲ ಹಿಂದಿಯಲ್ಲಿಯೇ ನಡೆಯತಕ್ಕದೆಂದು ವಿಧಿಸಿಬಿಟ್ಟರೆ, ಪ್ರತಿ ಪ್ರಾದೇಶಿಕ ರಾಜ್ಯದಲ್ಲಿ ಅದಕ್ಕಾಗಿ ಒಂದು ಭಾಷಾಂತರಕಾರವರ್ಗ ಹುಟ್ಟಿಕೊಂಡು ಅದರ ಕೈ ಮೇಲಾಗುತ್ತದೆ. ಅದರ ಆರ್ಭಟ, ಅವಿವೇಕ, ಅಕುಶಲತೆ, ಅಸೂಕ್ಷ್ಮತೆಗಳಿಂದ ವ್ಯವಹಾರದ ಹದ ಕೆಡುವ ಸಂಭವವೂ ಇರದೆ ಇಲ್ಲ. ಹಿಂದಿಯನ್ನು ಆಡಳಿತ ಭಾಷೆಯನ್ನಾಗಿ ಕೆಲವು ದಿನ ಬಳಸಿದ ಉತ್ತರ ಪ್ರದೇಶದಲ್ಲಿಯೇ ಒಂದು ವರ್ಷ ಅದು ನಡೆಯದೆ ಇಂಗ್ಲಿಷಿಗೇ ಪುನಃ ತಿರುಗಿತೆಂದು ಕೇಳಿದ್ದೇನೆ.

ಈವರೆಗೂ ರಾಷ್ಟ್ರದ ಎಲ್ಲ ಕಾರ್ಯಗಳಿಗೂ ಇಂಗ್ಲಿಷನ್ನು ಬಳಸುತ್ತಿತ್ತು. ಇದನ್ನು ಕಲಿಯಲು ಈ ದೇಶ ನೂರು ವರ್ಷ ತುಂಬಾ ಕಷ್ಟ ನಷ್ಟ ಪಟ್ಟಿತು. ನಾಡೆಲ್ಲ ಇಂಗ್ಲಿಷಿನಿಂದ ಒಗ್ಗಟ್ಟಾಗಲೂ ಪರಸ್ಪರ ಪರಿಚಿತವಾಗಲೂ ಅವಕಾಶವಾಯಿತು. ಇನ್ನೂ ಆ ಅನುಕೂಲ ಬಹುಮಟ್ಟಿಗೆ ನಡೆಯುತ್ತಿದೆ. ಅದು ನಮ್ಮನ್ನು ಆಳುತ್ತಿದ್ದ ಪರದೇಶಿಯರ ಭಾಷೆಯಾದ್ದರಿಂದ, ಎಂದಿಗೇ ಆಗಲಿ ಭಾರತದ ರಾಷ್ಟ್ರಭಾಷೆಯಾಗಲಾರದೆನ್ನೋಣ. ಆದರೆ ಸರ್ವರ

ಬಳಕೆಯ ಭಾಷೆಯಾಗಿ ರಾಷ್ಟ್ರಭಾಷೆಯ ಜೊತೆಗೆ ಅದನ್ನೂ ನಡಸಿಕೊಂಡರೆ ರಾಷ್ಟ್ರ ಗೌರವಕ್ಕಾಗಲಿ, ಮಾನಕ್ಕಾಗಲಿ ಕೊರತೆ ಬರಲಾರದು. ಜೊತೆಯ ಭಾಷೆಯಾಗಿ ಅದನ್ನೂ ಬಳಸುವುದರಿಂದ ಎಲ್ಲಕ್ಕೂ ಪ್ರಯೋಜನವುಂಟು.

ಅಲ್ಲದೆ ಇಂದಿನ ವಿಜ್ಞಾನ, ಶಿಲ್ಪ ತಂತ್ರ, ಅಂತಾರಾಷ್ಟ್ರೀಯ ಜೀವನದ ಏರುತಗ್ಗುಗಳು, ಸೂಕ್ಷ್ಮ ಸಂಪರ್ಕ, ಹೊಸಕಾಲದ ವಿದ್ಯೆ ಎಲ್ಲವೂ ನಮ್ಮ ಜೀವನವನ್ನು ಪ್ರತಿದಿನವೂ ಮಾರ್ಪಡಿಸುತ್ತಿವೆ. ಅವನ್ನು ಬಿಟ್ಟು ಭಾರತ ಸುರಕ್ಷಿತವಾಗಿರಲಾರದು. ಎಷ್ಟು ಹೆಚ್ಚು ಜನರೆಂದರೆ ಅಷ್ಟು ಹೆಚ್ಚು ಜನ ಅಂತಾರಾಷ್ಟ್ರೀಯವಾದ ಇಂಗ್ಲಿಷಿನಂಥ ಒಂದು ಭಾಷೆಯ ಪೂರ್ಣ ಪರಿಚಯ ಉಳ್ಳವರಾಗಬೇಕು. ಸಂಧಾನಗಳಿಗೆ, ಸಂಚಾರಕ್ಕೆ, ವ್ಯವಹಾರಕ್ಕೆ, ಅರಿವಿನ ಸಂಗ್ರಹಕ್ಕೆ, ತಿಳಿವಳಿಕೆಯ ಶುದ್ಧಿಗೆ, ಸ್ವತಂತ್ರ ಚಿಂತನೆಯ ಪ್ರಚೋದನೆಗೆ ಎಲ್ಲಕ್ಕೂ ಇದು ಅಗತ್ಯ. ಅಂತಾರಾಷ್ಟ್ರೀಯ ರಂಗಗಳಲ್ಲಿ ಪ್ರವೇಶ ಮಾಡಲು ಬಯಸುವವರು ಇದನ್ನು ಕಲಿಯಲಿ, ಉಳಿದವರಿಗೇಕೆ?-ಎನ್ನುವುದು ದೇಶಹಿತವಲ್ಲ. ಹಿಂದೆ ಸಂಸ್ಕೃತದಲ್ಲಿ ಮಾತ್ರವೇ ಎಲ್ಲ ವಿದ್ಯೆಯಿದ್ದಾಗ ಸಂಸ್ಕೃತವನ್ನು ಬಲ್ಲ ಜನ ಒಂದು ಪ್ರತ್ಯೇಕ ವರ್ಗವಾಯಿತು. ಇಂಗ್ಲಿಷನ್ನೂ ಅಂತಾರಾಷ್ಟ್ರೀಯ ಭಾಷೆಗಳನ್ನೂ ಬಲ್ಲ ಒಂದು ವರ್ಗ ಎಲ್ಲೋ ಕೆಲವು ಮಂದಿಗೆ ದಕ್ಕುವ ಸೌಭಾಗ್ಯವಾಗಿ, ತಿಳಿವಳಿಕೆಯ ಎಲ್ಲ ಮಾರ್ಗಗಳೂ ಅವರ ಮೂಲಕವಾಗಿ ಹರಿವಂತೆ ಬಿಡಬಾರದು. ಎಲ್ಲಿ ತಾನೇ ಆಗಲಿ ಸರ್ವಮಾನ್ಯ ಏಕೆ? ಅಲ್ಲದೆ ಯಾರು ಯಾವ ವಯಸ್ಸಿನಲ್ಲಿ ಎಷ್ಟು ಅಂತಾರಾಷ್ಟ್ರೀಯ ಪ್ರವೇಶ ಉಳ್ಳವರಾಗುತ್ತಿದ್ದಾರೆ ಎಂಬುದನ್ನು ಪೂರ್ವಭಾವಿಯಾಗಿ ನಿರ್ಣಯಿಸುವುದು ಹೇಗೆ? ಒಂದು ವಿಶಾಲತೆ, ಒಂದು ಆಧುನಿಕತೆ, ಒಂದು ಚುರುಕಾದ ಅಂತಾರಾಷ್ಟ್ರೀಯ ಸ್ಪರ್ಧಾಶಕ್ತಿ - ಬುದ್ಧಿಯಲ್ಲಿ, ಚಿಂತನೆಯಲ್ಲಿ - ಈ ದೇಶಕ್ಕೆ ದೊರೆಯಬೇಕಾದರೆ, ಇಂಗ್ಲಿಷಿನಂತಹ ಒಂದು ಭಾಷೆಯ ಸಂತತ ಸಂಪರ್ಕ ಪರಿಶ್ರಮ ಎಷ್ಟು ಹೆಚ್ಚು ಜನಕ್ಕೆಂದರೆ ಅಷ್ಟು ಹೆಚ್ಚು ಮಂದಿಗೆ ಇರಬೇಕು. ದೇಶಭಾಷೆಗಳ ಬೆಳವಣಿಗೆಗೂ ಇದು ನೇರವಾಗಿ ಬೇಕು. ದೇಶಭಾಷೆಗಳು ಪ್ರಾಂತದ ಬೋಧನೆಯ ಭಾಷೆಯಾಗಿರುವಾಗ ಪ್ರದೇಶ ಸಾಹಿತ್ಯಗಳ ವ್ಯಾಸಂಗವನ್ನು ಐಚ್ಛಿಕ ಅಭ್ಯಾಸವನ್ನಾಗಿ ಮಾಡಿ ವಾರಕ್ಕೆ ಎರಡು ಗಂಟೆ – ಮೂರು ಗಂಟೆಯ ಮಿತಿಗೆ ಅವನ್ನು ಒಳಪಡಿಸಬಹುದು. ಭಾಷಾಬೋಧೆಗೆ ಮೀಸಲಾಗುವ ಉಳಿದ ಸುಮಾರು ಆರು ಗಂಟೆ ವ್ಯಾಸಂಗವನ್ನು ಸಮಸಮವಾಗಿ ಹಿಂದಿಗೂ ಇಂಗ್ಲಿಷಿನ ಸಾಧನೆಗೂ ಹಂಚಿಕೊಟ್ಟು ಎರಡನ್ನೂ ಚೆನ್ನಾಗಿ ಕಲಿಸುವ, ಕಲಿಯುವ ಏರ್ಪಾಡಾಗಬೇಕು. ಅವುಗಳಲ್ಲಿ ದಕ್ಷತೆ ಬರುವಂತೆ ಅಭ್ಯಾಸ ಮಾಡುವ ಪ್ರಯತ್ನ ಮುಂದುವರಿಯಬೇಕು. ಉತ್ತರದವರು ದಕ್ಷಿಣದ ಒಂದು ಭಾಷೆಯನ್ನು - ಕಡ್ಡಾಯವಾಗಿ - ವ್ಯಾಸಂಗ ಮಾಡುವ ಏರ್ಪಾಡು ಆಗಬೇಕು. ಹೀಗೆ ಮಾಡಿದರೆ ಭಾರತದ ಒಂದು ಪ್ರದೇಶದಿಂದ ಇನ್ನು ಯಾವ ಪ್ರದೇಶಕ್ಕಾದರೂ ಹೋಗಿ ಹಿಂದಿಯ ಮೂಲಕವೊ - ಇಂಗ್ಲಿಷಿನ ಮೂಲಕವೊ ಪ್ರವಾಸದ, ವ್ಯಾಸಂಗದ ಫಲವನ್ನು ಸುಲಭವಾಗಿ ಪಡೆಯಬಹುದಾಗುತ್ತದೆ. ಇಂಗ್ಲಿಷನ್ನು



ಎಲ್ಲರೂ ಈಗ ಚೆನ್ನಾಗಿ ಬಲ್ಲವರಾಗಿರುವುದರಿಂದ ಸಮಸ್ತ ಲೋಕದ ಸಂಪರ್ಕವನ್ನು ಉಳಿಸಿಕೊಳ್ಳಲಾಗುತ್ತದೆ. ಅವಸರ ಮಾಡಿ ಹಿಂದಿ ಭಾಷೆಯನ್ನು ಕೇಂದ್ರದ ಮಾಧ್ಯಮವಾಗಿ ಕಡ್ಡಾಯವಾಗಿ ವಿಧಿಸುವುದು ಒಟ್ಟು ದೇಶದ ಸರ್ವತೋಮುಖವಾದ ಬೆಳವಣಿಗೆಗೆ ಸಹಾಯಕವಾಗದು. ಅಸಹನೆ, ಆಕ್ರೋಶ ಬೆಳೆಯುವುವು. ಅಪಕ್ವವಾದ, ಅಸಿದ್ಧವಾದ ಒಂದು ಭಾಷೆಯನ್ನು ಎಲ್ಲರ ಮೇಲೂ ಹೇರಿ ಹೊರಿಸುವುದು ಅನ್ಯಾಯ. ಬಹುಕಾಲದಿಂದ ದೇಶದ ಏಕತೆಯನ್ನು ನಡಸಿಕೊಟ್ಟು, ಹೊಸಕಾಲದ ಎಲ್ಲ ಪ್ರಯೋಜನಗಳಿಗೂ ದುಡಿಯಬಲ್ಲ ಇಂಗ್ಲಿಷನ್ನು ಪದಚ್ಯುತವಾಗಿ ಮಾಡುವುದು ಒಂದು ಬಗೆಯ ಅಭಿಮಾನವನ್ನು ಸ್ಥಾಪಿಸಬಲ್ಲದಾದರೂ ಬಹುಕಾಲದ ಪ್ರಯೋಜನವನ್ನು ನಿರಾಕರಿಸುವಂತೆ, ಉಪೇಕ್ಷಿಸುವಂತೆ ಆದೀತು. ಇನ್ನಷ್ಟು ಕಾಲ ಈ ಹಿಂದಿ, ಇಂಗ್ಲಿಷ್ ನಡುವೆಯ ವಾದ ತಡೆದು ಕಾಲಕ್ರಮದಲ್ಲಿ ಹಿಂದಿಯ ಬೆಳವಣಿಗೆ ಸಹಜವಾಗಿ, ಸಂಪನ್ನವಾಗಿ ಆದ ಮೇಲೆ ಎಲ್ಲ ಜನದ ವಿಶ್ವಾಸ ತಾನೇ ಹಿಂದಿಯ ಕಡೆ ತಿರುಗಿ ಬಲಿಯುವಂತಾದರೆ ಹೆಚ್ಚು ಪ್ರಯೋಜನವಾದೀತು. ಅಂದಿಗೂ ಇಂಗ್ಲಿಷ್ ಭಾಷೆಯ ದುಡಿತ, ಪ್ರಯೋಜನ ದೇಶಕ್ಕೆ ಅಗತ್ಯವಾಗಿಯೇ ಇದ್ದೀತು. ಜೊತೆಗೆ ಫ್ರೆಂಚ್, ಜರ್ಮನ್, ರಷ್ಯನ್, ಚೀನಿ, ಜಪಾನಿ ಭಾಷೆಗಳ ವ್ಯಾಸಂಗವೂ ಹೆಚ್ಚು ಜನ ವಿದ್ಯಾರ್ಥಿಗಳಿಗೆ ದೊರಕುವಂತೆ ಅವುಗಳ ಶಿಕ್ಷಣವನ್ನು ನಮ್ಮ ಕಾಲೇಜುಗಳಲ್ಲಿ ಏರ್ಪಡಿಸಿದರೆ, ನಮ್ಮ ಜನರ ಲೋಕಸಂಪರ್ಕ ಹೆಚ್ಚು ಪ್ರಯೋಜನಕರವಾಗಿ ಈ ದೇಶದ ರಕ್ಷಣೆ, ಬೆಳವಣಿಗೆ ಹೆಚ್ಚು ಸ್ಥಿರಗೊಳ್ಳುವಂತಾದೀತು. ನಮ್ಮ ನಾಡಿನ ಪ್ರತಿನಿಧಿಗಳಾಗಿ ಎಲ್ಲ ಸ್ವತಂತ್ರ ರಾಷ್ಟ್ರಗಳಿಗೂ ನಮ್ಮ ರಾಯಭಾರಿಗಳವರು, ಕಾನ್ಸ್ಯುಲೇಟ್‌ಗಳವರು ಹೋಗಬೇಕಾಗುವುದರಿಂದ ಆ ನಾಡುಗಳ ಭಾಷೆ, ಚರಿತ್ರೆ, ಮರ್ಯಾದೆ, ಅಂತಾರಾಷ್ಟ್ರೀಯ ವ್ಯವಹಾರ ಸಂಸ್ಥೆಗಳ ಲಕ್ಷಣ ಪರಿಚಯವಾಗುವಂತೆ ವ್ಯಾಸಂಗಗಳು ಇನ್ನೂ ಎಷ್ಟೋ ರಚಿತವಾಗಬೇಕು. ಎಷ್ಟೋ ಹೆಚ್ಚಿನ ಅವಸರದ ಕಾರ್ಯಗಳು ಮೊದಲು ಆಗಬೇಕಾಗಿರುವಾಗ ಅನಿಶ್ಚಿತ ಫಲ ಪ್ರಯೋಜನವುಳ್ಳದನ್ನು ಮೊದಲು ಮಾಡಿ ಅಶಾಂತಿ, ಅಸಮಾಧಾನಗಳನ್ನು ಬಲಿಸುವುದು ವಿವೇಕವಾಗಲಾರದು.

24-5-1960

❑

# 7. ವಿಫಲಗೊಂಡ ಶೃಂಗಸಮ್ಮೇಳನ

ರಾಷ್ಟ್ರ ರಾಷ್ಟ್ರಗಳ ನಡುವೆ ಮಾತುಕತೆ ನಡೆದು ಒಪ್ಪಂದವಾಗಿ ದೊಡ್ಡ ಲೋಕ ನಾಶಕ ಯುದ್ಧಗಳು ನಡೆಯದಂತಾಗಬೇಕು; ಲೋಕಕ್ಕೆ ಯುದ್ಧದ ಭಯ ತಪ್ಪಬೇಕು, ಶಾಂತಿ ನೆಲೆಗೊಳ್ಳಬೇಕು; ಶಸ್ತ್ರಾಸ್ತ್ರ ಸಜ್ಜು ಅತಿಭಯಂಕರವಾಗಿರುವ ಕಾರಣದಿಂದ ಮೂಡಲ–ಪಡುವಲ ರಾಷ್ಟ್ರಗಳ ನಾಯಕರು ಸಭೆ ಸೇರಿ ಒಂದು ವಿಶ್ವಾಸದಲ್ಲಿ ತೀರ್ಮಾನಕ್ಕೆ ಬಂದರೆ ಇದೆಲ್ಲ ಶಕ್ಯವಾದೀತು – ಎಂದು ಒಂದು ಶೃಂಗಸಮ್ಮೇಳನ ಪ್ಯಾರಿಸ್ಸಲ್ಲಿ ನೆರೆಯಬೇಕೆಂದಾಗಿತ್ತು. ಅದು ನೆರೆಯಿತು; ಮುರಿದು ಬಿದ್ದಿತು. ರಷ್ಯ-ಅಮೇರಿಕಾಗಳವರಿಬ್ಬರೂ ಶಕ್ತರು, ಪುಷ್ಟರು, ಪ್ರಭಾವಶಾಲಿಗಳು. ಒಬ್ಬರ ಹಿಂದೆ ಮಧ್ಯ, ಪೂರ್ವ ಯೂರೋಪಿನ ಕಮ್ಯುನಿಸ್ಟ್ ರಾಷ್ಟ್ರಗಳೆಲ್ಲ ಇವೆ. ಹೊಸತಾಗಿ ಎಚ್ಚೆತ್ತು ದುರ್ಧರ್ಷವಾಗುವಂತಿರುವ ಚೀಣ ಇದೆ. ಇನ್ನೊಂದರ ಹಿಂದೆ, ಪಶ್ಚಿಮ ಯೂರೋಪಿನ ಪ್ರಜಾರಾಜ್ಯಗಳೂ ಸ್ವತಂತ್ರ ರಾಷ್ಟ್ರಗಳೂ ಇವೆ. ಇವೆರಡಕ್ಕೆ ಘರ್ಷಣೆ ಇರುವವರೆಗೂ ನಡುವೆ ಸುತ್ತ ಯಾರೂ ಬದುಕುವ ಹಾಗಿಲ್ಲ. ಇವರ ನಾಶವೂ ಖಂಡಿತ. ಇಬ್ಬರೂ ನಾಶವಾಗುವಾಗ ಗೆಲವಾರಿಗೆ? ಸೋಲಾರಿಗೆ? ಮುಂದಿನ ಬಹುಕಾಲದ ಪೀಳಿಗೆಯವರಿಗೆ ಭೂಮಿ ವಿಷವಾಗುವುದು. ಇವರ ನಡುವೆ ಇಷ್ಟು ಶಕ್ತಿ ಇಲ್ಲದ ಇತರ ರಾಷ್ಟ್ರಗಳೂ ಸ್ವತಂತ್ರವಾಗಿ ನೆಮ್ಮದಿಯಲ್ಲಿ ಉಳಿಯಲಾರವು. ತಟಸ್ಥವಾಗಿ ಬದುಕುವುದೂ ಕಷ್ಟ. ಏನೇ ಆಗಲಿ, ಹೇಗಾದರೂ ಮಾಡಿ ಈ ನಾಯಕರು ಅಣುಶಸ್ತ್ರದ ತಿಳಿವಳಿಕೆ, ಒದಗಣೆ ಇರುವ ಬ್ರಿಟನ್ನನ್ನೂ ಸೇರಿಸಿಕೊಂಡು ಸಂಧಾನ ನಡಸಿ, ಒಂದು ಒಪ್ಪಂದಕ್ಕೆ ಬರುವುದು ಕ್ಷೇಮಕರವೆಂದಾಗಿತ್ತು.

ಬ್ರಿಟನ್ ಸೇರಿ ಮೂವರು ಸದಸ್ಯರು ಇರಬೇಕೆಂದಾಗಿದ್ದ ಸಮ್ಮೇಳನಕ್ಕೆ ನಾಲ್ಕನೆಯದಾಗಿ ಫ್ರಾನ್ಸ್ ಕೂಡಿಕೊಳ್ಳಬೇಕೆಂದಾಯಿತು. ಉಳಿದವರಾರಿಗೂ ಅಲ್ಲಿ ಸದ್ಯಕ್ಕೆ ಪ್ರಾಧಾನ್ಯ ಬರುವಂತಿರಲಿಲ್ಲ. ಚೀಣ ಇಂದಿಗೂ ನಾಳೆಗೂ ಅತಿ ಪ್ರಬಲ ಅಂತಾರಾಷ್ಟ್ರೀಯ ಶಕ್ತಿಯಾಗಬಲ್ಲ ರಾಷ್ಟ್ರ. ಆದರೂ ಚೀಣವನ್ನು ಸೇರಿಸಲು ರಷ್ಯಕ್ಕೆ ತುಂಬಾ ಇಷ್ಟವಿದ್ದರೂ ಸೇರಿಸಿಕೊಳ್ಳಲು ಶಕ್ಯವಾಗುತ್ತಿರಲಿಲ್ಲ. ಚೀಣ ಸಮಸ್ಯೆ ಇಂದಿನಂತೆ ನಾಳೆಗೂ ಉಳಿಯುತ್ತದೆ. ಅದು ವಿಶ್ವಸಂಸ್ಥೆಯ ಸದಸ್ಯ ರಾಷ್ಟ್ರವಾಗದೆ ಇರುವಾಗ ಈ ಸಮ್ಮೇಳನದಲ್ಲಿ ಭಾಗವಹಿಸಲು ಕರೆದರೂ ತಾನು ಇಷ್ಟಪಡುವುದಿಲ್ಲವೆಂದಿದೆ. ಹಾಗೆಯೇ



ಈ ಕಾರ್ಯಮಂಡಲಕ್ಕೂ ತನಗೂ ಏನೂ ಸಂಬಂಧವಿಲ್ಲದಿರುವಾಗ ಇಲ್ಲಿ ಆಗುವ ಯಾವ ತೀರ್ಮಾನಕ್ಕೂ ತಾನು ಬದ್ಧವಾಗದೆಂದು ನುಡಿದಿದೆ. ಈ ಕತ್ತರಿಸಿಕ್ಕಿನಲ್ಲಿ ಒಂದು ಅತಂತ್ರ ಲೋಕಶಾಂತಿಗೆ ಎಂದಿಗೂ ಅಪಾಯವೇ.

ಕ್ರುಶ್ಚಾಫರು ರಷ್ಯದ ನಾಯಕರಾದಾಗಿಂದಲೂ ಇಂಥ ಸಮ್ಮೇಳನ ನಡೆದು ಪೂರ್ವ-ಪಶ್ಚಿಮ ರಾಷ್ಟ್ರಗಳವರು ಸುಸೂತ್ರವಾದ, ಶಾಂತವಾದ, ಸರ್ವರ ಯೋಗಕ್ಷೇಮ ಸಾಧಕವಾದ ಸಹಬಾಳ್ವೆ ನಡಸುವುದು ಅಗತ್ಯವೆಂದು ಅದಕ್ಕಾಗಿ ಸರ್ವಪ್ರಯತ್ನಗಳನ್ನು ಮಾಡಿದರು. ವಿಶ್ವಸಂಸ್ಥೆಯನ್ನು ಹೊರಪಡಿಸಿ ನಡಸುವ ಇಂಥ ವ್ಯವಹಾರ ಆ ಸಂಸ್ಥೆಯ ಗೌರವಕ್ಕೆ ಚ್ಯುತಿ ತರುವುದೆಂದು ಎಲ್ಲರಿಗೂ ಗೊತ್ತಿದ್ದರೂ ಸಂಧಾನ ಸಫಲ ವಾಗುವುದಾದರೆ ಆಗಲಿ ಎಂದು ಕಡೆಗೆ ಅಮೇರಿಕಾ ಒಪ್ಪಿತು. ಪಶ್ಚಿಮ ರಾಷ್ಟ್ರಗಳಿಗೆ ವಿರೋಧವಾಗಿದ್ದ ಸಹಬಾಳ್ವೆಗೆ ಒಡಂಬಡದ ಸ್ಟಾಲಿನ್ ಪಂಥಕ್ಕೂ, ಲೆನಿನ್ನರ ಅಂತಾರಾಷ್ಟ್ರೀಯ ಕಮ್ಯುನಿಸಂ ವ್ಯಾಪನೆಗೂ ಪಕ್ಷಪಾತವುಳ್ಳ ಎಷ್ಟು ಒಳ ಪಂಗಡಗಳು ರಷ್ಯದಲ್ಲಿಯೇ ಈ ಶಾಂತಿ ಸಂಧಾನಕ್ಕೆ ಪ್ರತಿಕೂಲರಾಗಿದ್ದಾರೊ ಅನುಕೂಲರಾಗಿದ್ದಾರೊ ಯಾರಿಗೂ ತಿಳಿಯದ ಸಂಗತಿ. ರಷ್ಯಾದಲ್ಲಿ ಬಲಿಯುವುದು ಒಂದೇ ಅಭಿಪ್ರಾಯ. ಅದನ್ನು ನುಡಿಯುವವರು ಪ್ರಧಾನಿ. ಸದ್ಯಕ್ಕೆ ಕ್ರುಶ್ಚಾಫರು ಒಬ್ಬರೇ. ಅದರ ಪತ್ರಿಕೆ ಪ್ರಾವ್ದಾ ಅಥವಾ / ಮತ್ತು ಇಸ್‌ವೆಸ್ಟಿಯಾ, ಅದರ ಏಕಮಾತ್ರ ವಾರ್ತಾ ಸಂಸ್ಥೆ ಟಾಸ್, ಇನ್ನು ಯಾರ ಯಾವ ಒಲವು, ವಿರೋಧ ಹೇಗಿದೆ ಎಂಬುದರ ಗಂಧ ಗಾಳಿ ಲೋಕಕ್ಕೆ ಗೊತ್ತಾಗದು. ಈ ಅಭಿಪ್ರಾಯವೇ ಸೋವಿಯತ್ ರಷ್ಯದಲ್ಲೆಲ್ಲಾ ಆಳುತ್ತದೆ. ಆದುದರಿಂದ ಕ್ರುಶ್ಚಾಫರ ಮುಂದಾಳ್ತನದಲ್ಲಿ ಶೃಂಗ ಸಮ್ಮೇಳನಕ್ಕೆ ಸಂಬಂಧಿಸಿದ ಎಲ್ಲ ಉತ್ಸಾಹವೂ ಸಿದ್ಧತೆಯೂ ನಡೆದವು. ಅವರೂ ಇಂಗ್ಲಂಡ್, ಅಮೇರಿಕಾಗಳಿಗೆ ಭೇಟಿ ಕೊಟ್ಟರು. ಸಮ್ಮೇಳನಕ್ಕೆ ಸ್ವಲ್ಪ ಮಂಚೆ ಫ್ರಾನ್ಸಿಗೂ ಹೋಗಿ ಬಂದರು. ತನ್ನ ಪಕ್ಷದ ಬೆಂಬಲ ತನಗೆ ರಷ್ಯದಲ್ಲಿ ಪೂರ್ಣವಾಗಿದೆ ಎಂದು ಸಾರಿದರು. ಈ ಪ್ರಕರಣದಲ್ಲಿ ಬ್ರಿಟನ್ ಪ್ರಧಾನಿ ಮ್ಯಾಕ್ಮಿಲನರು ಪೌರೋಹಿತ್ಯ ವಹಿಸಿ ರಷ್ಯಕ್ಕೂ ಅಮೇರಿಕಾಕ್ಕೂ, ಇವರೆಲ್ಲರಿಗೂ ಫ್ರಾನ್ಸ್ ಜರ್ಮನಿಗಳಿಗೂ ಹೆಚ್ಚು ವೈಮನಸ್ಯ ಬೆಳೆಯದಿರಲೆತ್ನಿಸಿದರು. ತಮ್ಮ ರಾಷ್ಟ್ರದಲ್ಲಿಯೇ ಕೆಲವರಿಗೆ ಅಸಮಾಧಾನ ಉಂಟುಮಾಡಿದುದಲ್ಲದೆ ಫ್ರಾನ್ಸಿನಲ್ಲಿಯೂ ಬಾನಿನಲ್ಲಿಯೂ ಒಂದೆರಡು ಸಲ ಸಂಶಯಗಳನ್ನುಂಟುಮಾಡಿದರು. ಆದರೂ ಪಶ್ಚಿಮ ರಾಷ್ಟ್ರಗಳೆಲ್ಲ ಅಮೇರಿಕದ ನಾಯಕತ್ವದಲ್ಲಿ ವಿಶ್ವಾಸವಿಟ್ಟು ಒಂದೇ ಕೊರಲಿಂದ ಈ ಪಕ್ಷದ ಪರ ಸಂಧಾನ ನಡೆಯಲು ಎಲ್ಲವನ್ನೂ ಸಿದ್ಧಪಡಿಸಿದರು. ಕ್ರುಶ್ಚಾಫರು ಅಮೇರಿಕಾಕ್ಕೆ ಹೋದಾಗ ಐಸನ್ ಹೊವರ್ ಅವರೊಡನೆ ಖಾಸಗಿಯಾಗಿ ಮಾತುಕತೆ ನಡಸಿದರು. ಯಾವ ಸಂಗತಿಗಳನ್ನು ಪರ್ಯಾಲೋಚಿಸಿ ಹೇಗೆ ನಿರ್ಣಯಕ್ಕೆ ಬರತಕ್ಕದ್ದೆಂದು ಪೂರ್ವಭಾವಿ ತೀರ್ಮಾನಗಳಿಗೆ ಬಂದಿದ್ದರು. ರಷ್ಯಕ್ಕೆ ಭೇಟಿ ಕೊಡ ಬೇಕೆಂದು ಐಸೆನ್ ಹೊವರ್‌ಗೆ ಆಹ್ವಾನವಿತ್ತು ಅವರನ್ನು ಒಪ್ಪಿಸಿ ಬಂದಿದ್ದರು.

ಇನ್ನೇನು ಸಮ್ಮೇಳನಕ್ಕೆ ಯಾವ ಅಡ್ಡಿಯೂ ಇರಲಾರದೆಂದಿರುವಾಗ, ಒಂದು ದುರ್ದೈವೀ ಪ್ರಕರಣ ಇದ್ದಕ್ಕಿದ್ದಂತೆ ಈ ಆಸೆ ಆಕಾಂಕ್ಷೆಗಳ ಮೇಲೆ ದೊಡ್ಡ ಮೋಡವನ್ನು ಕವಿಸಿತು. ಗುಡುಗು ಮಿಂಚು ಕಾರಿ ಶೃಂಗ ಸಮ್ಮೇಳನವನ್ನು ಮುರಿಯಿತು.

ಗುಪ್ತ ಪರೀಕ್ಷಣದ ಯು2 ವಿಮಾನವೊಂದು ಸೋವಿಯತ್ ರಷ್ಯದ ಮೇಲೆ ಹಾರಿ ಅದು ರಷ್ಯನರ ಏಟಿಗೆ ಸಿಕ್ಕಿ ಕೆಳಗೆ ಬಿದ್ದುದೂ, ಅದರ ಚಾಲಕ ಫ್ರಾನಿನ್ ಪವರ್ಸ್ ಅವರ ಕೈಗೆ ಸಿಕ್ಕಿ ತಾನು ರಹಸ್ಯವನ್ನು ಸಂಗ್ರಹಿಸುತ್ತಿದ್ದನೆಂದು ಒಪ್ಪಿಕೊಂಡದ್ದೂ ಅನರ್ಥಕಾರಿಯಾಯಿತು. ಅದು ನಡೆದ ಸಮಯ, ರೀತಿ, ಆ ಬಗ್ಗೆ ಬೆಳೆದ ಮಾತುಕತೆಯ ಪ್ರಪಂಚ ಅಮೇರಿಕಾದ ವಿವೇಕವನ್ನು ಸ್ಥಾಪಿಸಲಾರದಾಯಿತು. ಮೊದಲು ಇದು ವಾಯುವೀಕ್ಷಣದ ವಿಮಾನವೆಂದು ಹೇಳುತ್ತಿದ್ದು, ಪವರ್ಸ್ ಸಿಕ್ಕಿಬಿದ್ದು ನಿಜವನ್ನು ತಿಳಿಸಿದ ಮೇಲೆ ಅಮೇರಿಕಾ ಸರ್ಕಾರ ಆತನ ಹೇಳಿಕೆ ನಿಜವೆಂದು ಒಪ್ಪಿಕೊಂಡದ್ದು ವಿರಸಕ್ಕೆ ಎಡೆಕೊಟ್ಟಿತು. ಅಷ್ಟೇ ಅಲ್ಲ, ಇಂಥದು ಮೊದಲಿಂದಲೂ ನಡೆಯುತ್ತಿದೆ, ನಡೆಯಲೇಬೇಕಾಗಿದೆ ಎಂದೂ, ಎಲ್ಲ ರಾಷ್ಟ್ರಗಳೂ ಎಲ್ಲ ಸಂದರ್ಭದಲ್ಲಿ ಆತ್ಮ ರಕ್ಷಣೆಗಾಗಿಯೂ ಸ್ನೇಹಿತರ ಹಿತರಕ್ಷಣೆಗಾಗಿಯೂ ಇಂಥ ಕೆಲಸ ನಡಸುತ್ತವೆಯೆಂದೂ ಅಮೇರಿಕಾ ತಿಳಿಸಿದಾಗ ವಿರಸ ವಿಷಮಿಸಿತು. ಶೃಂಗ ಸಮ್ಮೇಳನ ಸಮೀಪಿಸಿರುವಾಗ ಅಮೇರಿಕಾ ರಷ್ಯದ ಮೇಲೆ ಇದನ್ನು ಬೇಕೆಂದು ಕಳುಹಿಸಿ, ಹಗೆತನದ ಕೃತ್ಯವನ್ನು ಮಾಡಿತೆಂದೂ ಶೃಂಗವನ್ನು ಮುರಿಯುವುದೇ ಇದರ ಉದ್ದೇಶವಾಗಿತ್ತೆಂದೂ, ಇದು ವಿಶ್ವಾಸಘಾತಕವೆಂದೂ, ಇಂಥ ಅಪರಾಧವನ್ನು ನಡಸಿದ ರಾಷ್ಟ್ರದೊಡನೆಯೂ ಆ ನಾಯಕರೊಡನೆಯೂ, ಹೇಗೆ ಸಂಧಾನ ನಡಸಿ ನಿರ್ಣಯಗಳಿಗೆ ಬರುವುದು ಎಂಬ ಮಾತುಗಳನ್ನು ಮೊದಲೇ ಆಡಿದ್ದರೂ ಕ್ರುಶ್ಚಾಫರು ಸಭೆಗೆ ಬಂದರು. ಸಭ್ಯರೂ ರಾಷ್ಟ್ರಗಳ ನಾಯಕರೂ ಒಬ್ಬರ ಪರವಾಗಿ ಇನ್ನೊಬ್ಬರು ಸಾಮಾನ್ಯವಾಗಿ ಆಡದ, ಬಳಸಕೂಡದ ಮಾತುಗಳನ್ನಾಡಿದರು. ಅಮೇರಿಕವನ್ನು ಬಯ್ಯುವುದು ಒತ್ತಟ್ಟಿಗಿರಲಿ, ವ್ಯಕ್ತಿಶವಾಗಿ ಐಸೆನ್ ಹೊವರನ್ನು ಕುರಿತು ದುರ್ಭಾಷೆ, ಅಪವಾದದ ಮಾತುಗಳನ್ನಾಡಿದ್ದು ಸರ್ವಥಾ ಬೇಸರ ತರುವಂಥದು. ವಿರಸ ಹೆಚ್ಚುವುದೆಂದು ಭಯಪಟ್ಟು ಮ್ಯಾಕ್ಮಿಲನರೂ ಪ್ಯಾರಿಸ್ಸಲ್ಲಿ ಆತಿಥ್ಯವಿತ್ತ ಅಧ್ಯಕ್ಷ ಡಿಗಾಲರೂ ಸಭೆ ಸಂಧಾನ ಮುರಿದುಬೀಳಬಾರದೆಂದು ಬಹುವಾಗಿ ಯತ್ನಿಸಿದರು. ಕ್ರುಶ್ಚಾಫ್ ಮಾತುಗಳಿಗೆ ಉದ್ರೇಕಗೊಳ್ಳದೆ ಐಸೆನ್ ಹೊವರ್ ಯು2 ವಿಮಾನದ ಪ್ರಸಂಗ ನಿಜವೂ ಅಗತ್ಯವೂ ಆದರೂ ಅಂಥದನ್ನು ನಿಲ್ಲಿಸಲಾಗಿದೆ ಎಂದೂ ತನ್ನ ಅಧ್ಯಕ್ಷತೆ ನಡೆಯುವವರೆಗೂ ಇಂಥ ಉದ್ರೇಕಗಳಿಗೆ ಅವಕಾಶವಾಗದಂತೆ ತಾವು ನೋಡಿಕೊಳ್ಳುವೆವೆಂದೂ ಹೇಳಿದರು. ನಡೆದದ್ದಕ್ಕೆಲ್ಲ ಸ್ವಂತ ಹೊಣೆಗಾರಿಕೆ ಯನ್ನೊಪ್ಪಿಕೊಂಡರು. (ಯುಧಿಷ್ಠಿರನ ಅಶ್ವತ್ಥಾಮ ಹತಃ ಕುಂಜರಃ ಎಂಬುದನ್ನು ನೆನಪಿಗೆ ತರುತ್ತಿತ್ತು ಈ ಪ್ರಸಂಗ). ಕ್ರುಶ್ಚಾಫರಿಗೆ ತೃಪ್ತಿಯಾಗಲಿಲ್ಲ. ಸಮ್ಮೇಳನ ಆರಂಭವಾಗುವ ಮುಂಚೆ ಅಧ್ಯಕ್ಷರು ತಮ್ಮ ಕ್ಷಮೆ ಬೇಡಬೇಕೆಂದೂ ಅದಕ್ಕೆ ಕಾರಣರಾದವರನ್ನು ಶಿಕ್ಷಿಸುತ್ತೇನೆಂದು ಮಾತು ಕೊಡಬೇಕೆಂದೂ ಹಟ ಹಿಡಿದರು. ಒಂದು ರಾಷ್ಟ್ರ ಇನ್ನೊಂದು



ರಾಷ್ಟ್ರವನ್ನೂ ಅದರ ಮುಂದಾಳುಗಳನ್ನೂ ಹೀಗೆ ಒತ್ತುವುದು ಸಂಪ್ರದಾಯವಲ್ಲ. ಇಂಥದಕ್ಕೆ ಯಾವ ಗೌರವಸ್ಥ ರಾಜ್ಯವೂ ಒಪ್ಪದು. ಕ್ರುಶ್ಚಾಫರೇನೊ ಅನಂತಕಾಲದ ವರೆಗೂ ತಾವೇ ಮಂತ್ರಿ ಪದವಿಯಲ್ಲಿದ್ದು ಅಷ್ಟು ಕಾಲವೂ ರಷ್ಯ ಸರಿಯಾಗಿಯೇ ನಡೆದುಕೊಳ್ಳುತ್ತದೆಂದು ಮಾತು ಕೊಡಬಹುದು. ಅದು ನಡೆಯುವುದೂ ಬಿಡುವುದು ನಾಳೆಯ ಕತೆ. ಕ್ರುಶ್ಚಾಫರ ಸ್ವಂತ ಸ್ಥಾನ ಮಾನ ಸ್ಥಿತಿಗತಿಗಳಿಗೆ ಸಂಬಂಧಿಸಿದ ಸಂಗತಿ. ಇತ್ತ ಇನ್ನಾರೆಂಟು ತಿಂಗಳೊಳಗಾಗಿ ಅಧ್ಯಕ್ಷ ಪದವಿಯಿಂದ ನಿವೃತ್ತವಾಗಲಿರುವ ಪ್ರಜಾರಾಜ್ಯವೊಂದರ ನಾಯಕರು ಮುಂದಿನವರ ಕೈಯನ್ನು ಕಟ್ಟುವುದಾದರೂ ಹೇಗೆ? ಆದರೆ ಅಂತಾರಾಷ್ಟ್ರೀಯ ಒಪ್ಪಂದ ಕರಾರುಗಳನ್ನು ಒಂದು ರಾಷ್ಟ್ರದ ಪರವಾಗಿ ಯಾರು ಮಾಡಿಕೊಂಡರೂ ಯಾವುದೇ ಪಕ್ಷ ಆಮೇಲೆ ಆಡಳಿತಕ್ಕೆ ಬರಲಿ, ಅದನ್ನು ಪರಿಪಾಲಿಸಬೇಕೆಂಬುದು ರಾಜಧರ್ಮ. ವ್ಯಕ್ತಿಶವಾಗಿ ವಾಗ್ದಾನ ಕೊಡಬೇಕೆಂದಾಗ ಪ್ರಜಾರಾಜ್ಯದ ನಾಯಕರಾದ ಐಸೆನ್ ಹೊವರಂಥವರು ತಾವು ಆಡಿದುದಕ್ಕಿಂತ ಹೆಚ್ಚಾಗಿ ವಾಗ್ದಾನ ಮಾಡುವ ಹಾಗಿರಲಿಲ್ಲ. ಜೊತೆಗೆ ತುಂಬ ಗಟ್ಟಿಯಾಗಿ ನುಗ್ಗಿ ಮಾತನಾಡುವ ಸ್ವಭಾವ - ಸಂಪ್ರದಾಯವಿಲ್ಲದ ಅವರಿಗೆ ಇನ್ನೇನು ಮಾಡಲೂ ಬಹುಶಃ ಶಕ್ಯವಿರಲಿಲ್ಲ. ಈ ಸ್ಥಿತಿಯನ್ನು ಅತಿ ಮಾಡಿ ರೂಕ್ಷ ಮಾತುಗಳನ್ನಾಡಿ, ಯಾರು ಯಾವ ಸಮಾಧಾನ ಕೊಟ್ಟರೂ ಒಪ್ಪದೆ ಭರವಸೆ ಇತ್ತಲ್ಲದೆ ಶೃಂಗ ಸಂಧಾನಕ್ಕೆ ತಾನು ಬರುವುದಿಲ್ಲವೆಂದೂ ಅದರಲ್ಲಿ ಭಾಗವಹಿಸಲು ಇಷ್ಟವಿಲ್ಲವೆಂದೂ ಹೇಳಿ, ಅಧ್ಯಕ್ಷರಿಗೆ ರಷ್ಯಕ್ಕೆ ಬರಲು ಕೊಟ್ಟಿದ್ದ ಆಹ್ವಾನವನ್ನು ಹಿಂದಕ್ಕೆ ತೆಗೆದುಕೊಂಡು ಸಮ್ಮೇಳನ ವಿಫಲವಾಗುವಂತೆ ಮಾಡಿ ಹೊರಟು ಹೋದರು.

ಈ ಕತೆಯೂ ಇದರ ವಿವರಗಳೂ ಅಲ್ಲಿಂದೀಚೆಗೆ ದಾರಿಯಲ್ಲಿ ಪೂರ್ವ ಜರ್ಮನಿಯಲ್ಲಿ, ಆಮೇಲೆ ಮಾಸ್ಕೋದಲ್ಲಿ ಕ್ರುಶ್ಚಾಫ್‌ರಾಡಿದ ಮಾತುಗಳಿಗೂ ಅವರ ಮತ್ತು ರಷ್ಯ ಪರವಾಗಿ ವಿಶ್ವಸಂಸ್ಥೆಯಲ್ಲಿ ಗ್ರಾಮಿಕೊ ಅವರು ಹೂಡಿದ ಅವೇ ಮಾತಿನ ಆಕ್ಷೇಪಣೆಯೂ ಎಲ್ಲರಿಗೂ ತಿಳಿದ ಸಂಗತಿಯೇ. ಈಚೆಗೆ ಪ್ರಧಾನಿ ಬುಲ್ಗಾನಿನ್ ನಿವೃತ್ತರಾಗಿ, ಅಧ್ಯಕ್ಷ ಮೊರೊಷಿಲೋಫ್ ರಾಜಿನಾಮೆಯಿತ್ತು, ಹಣಕಾಸಿನ ಮಂತ್ರಿಯೂ ಕೇಂದ್ರ ಪಕ್ಷದ ಕಾರ್ಯದರ್ಶಿಯೂ ರಾಜಿನಾಮೆ ಕೊಟ್ಟು, ಕ್ರುಶ್ಚಾಫರ ಜೊತೆಯಲ್ಲಿ ಸಂತತವಾಗಿ ಮಾರ್ಷಲ್ ಮಾಲಿನೋವ್‌ಸ್ಕಿ ಇರುತ್ತಿದ್ದು, ಎಲ್ಲ ಸಂಗತಿಗಳ ಲಕ್ಷಣ ಇನ್ನೇನು ಎಂಬುದನ್ನು ಈಗಲೇ ಯಾರೂ ಹೇಳುವ ಹಾಗಿಲ್ಲ.

ಮೊದಲಿನಿಂದಲೂ ಕ್ರುಶ್ಚಾಫ್ ಒಂದು ಹೆದರಿಕೆಯನ್ನು ಹಾಕುತ್ತಲಿದ್ದಾರೆ. ಎರಡನೆಯ ಯುದ್ಧಾಂತ್ಯದಲ್ಲಿ ಮಿತ್ರವರ್ಗಗಳವರು ಮಾಡಿಕೊಂಡಿದ್ದ ಒಡಂಬಡಿಕೆಯನ್ನು ಏಕಪಕ್ಷೀಯವಾಗಿ ಮಾರ್ಪಡಿಸುತ್ತೇನೆಂಬ ಸಂಗತಿ ಅದು. ಬರ್ಲಿನ್ ನಗರದಿಂದ ಎಲ್ಲ ಮಿತ್ರ ಸೈನ್ಯಗಳೂ ಹೊರತೆಗೆದು ಸ್ವತಂತ್ರ ನಗರ (Free City) ಆಗಬೇಕು, ಹಾಗೆ ಆಗದಿದ್ದರೆ ತಾನು ಪೂರ್ವ ಜರ್ಮನಿಯ ಅಧಿಕಾರಿಗಳೊಡನೆ ಬೇರೆ ಒಪ್ಪಂದ

ಮಾಡಿಕೊಂಡು ರಷ್ಯಾಕ್ಕಿರುವ ಅಧಿಕಾರವನ್ನು ಅವರಿಗೆ ಬಿಟ್ಟುಕೊಡುತ್ತೇನೆ. ಪೂರ್ವ ಜರ್ಮನಿಯ ಮಧ್ಯಭಾಗದಲ್ಲಿರುವ ಬರ್ಲಿನ್‌ನ ಮೇಲೂ ಅದಕ್ಕೆ ಪ್ರವೇಶ ಸೌಕರ್ಯ ಕಲ್ಪಿಸಲೂ ಇನ್ನು ಮುಂದೆ ಪೂರ್ವ ಜರ್ಮನಿಯೇ ಅಧಿಕಾರವುಳ್ಳದ್ದಾಗಿರುತ್ತದೆ. ಅದಕ್ಕೆ ಇಷ್ಟವಿಲ್ಲದ ಯಾವ ಕಾರ್ಯವನ್ನು ಬರ್ಲಿನ್‌ನವರಾಗಲೀ ಮಿತ್ರರಾಷ್ಟ್ರಗಳವರಾಗಲೀ ಮಾಡಿದರೆ ಪೂರ್ವ ಜರ್ಮನಿಯ ಅಧಿಕಾರಕ್ಕೆ ಭಂಗಬರುತ್ತದೆ. ಆಗ ತನ್ನ ಸರ್ವಶಕ್ತಿಯನ್ನು ಪ್ರಯೋಗಿಸಿ ತಾನು ಆ ಪಕ್ಷ ವಹಿಸಿ ನಿಲ್ಲುತ್ತೇನೆ – ಎಂಬುದು ಆ ಮಾತು. ಲೋಕದ ಅದೃಷ್ಟದಿಂದ ಸದ್ಯಕ್ಕೆ ಆ ನಿರ್ಧಾರವನ್ನು ಕಾರ್ಯರೂಪಕ್ಕೆ ತರಲು ಅವಸರಿಸುವುದಿಲ್ಲವೆಂದೂ ಇನ್ನೂ ಶಾಂತಿಸಂಧಾನಕ್ಕೆ ತಾನು ಒಲಿಯುವೆನೆಂದೂ ಕ್ರುಶ್ಚ್ಛೆವರು ಮಾತು ಕೊಟ್ಟಿರುವುದು ಆಶಾದಾಯಕವಾಗಿದೆ.

ಇನ್ನೊಂದು: ೠ ವಿಮಾನ ಪಾಕಿಸ್ತಾನದ ಪೇಷಾವರಿಂದ ಹೊರಟಿತು; ಇರಾನಿನ ವಾಯುನೆಲೆಗಳನ್ನು ಮುಟ್ಟಿತು; ಅವನ್ನು ಹಾದು ರಷ್ಯಾಕ್ಕೆ ಹೋಯಿತು. ಅಲ್ಲಿಂದ ನಾರ್ವೆಗೆ ಹೋಗಲಿತ್ತು. ಇವರೆಲ್ಲ ಅಮೇರಿಕದ ಉಪರಾಷ್ಟ್ರಗಳಂತೆ ರಷ್ಯದ ಮೇಲೆ ಶತ್ರು ಕೃತ್ಯ ನಡಸಿದಂತಾಗಿದೆ; ಇನ್ನು ಮುಂದೆ ಇಂಥ ವಿಮಾನಗಳನ್ನು ಕೂಡಲೇ ನಾಶಮಾಡುತ್ತೇವೆ; ಯಾವ ನೆಲೆಗಳಿಂದ ಇವು ಹಾರಿಬಂದುವೆಂಬುದನ್ನು ಗೊತ್ತು ಮಾಡಿ, ಆ ನೆಲೆಗಳನ್ನೂ ನಾಶ ಮಾಡುತ್ತೇವೆ – ಎಂಬುದು ಮೊದಲಿಂದಲೂ ಅವರು ಆಡುತ್ತಿರುವ ಮಾತೇ. ಜಪಾನಿಗೂ ಅಂಥದೇ ಎಚ್ಚರಿಕೆ ಕೊಟ್ಟಿದೆ. ಈ ರಾಷ್ಟ್ರಗಳಿಗೆಲ್ಲ ಇದರಿಂದ ಒಂದು ಅಶಾಂತಿ, ಭೀತಿ, ತಲ್ಲಣ ಉಂಟಾಗಿರುವುದಲ್ಲದೆ ಅಲ್ಲಿನ ಸರ್ಕಾರದ ವಿರುದ್ಧ ಪಕ್ಷಗಳವರಿಗೆ ಒಂದು ಪ್ರೋತ್ಸಾಹ ಕೊಟ್ಟಿದೆ. ಅಮೇರಿಕಾಕ್ಕೂ ಇದು ಉಗ್ರವಾದ ಸವಾಲೇ. ಇದೂ ಹೊಸದಲ್ಲ. ಉಗ್ರತೆಯ ಇಂಥ ಸಂದರ್ಭಗಳು ಬಲಿಯದಂತೆ ರಾಜಕೀಯ ವಾತಾವರಣವನ್ನು ತಹಬಂದಿಗೆ ತರಬೇಕೆಂದೇ ಶೃಂಗ ಸಮ್ಮೇಳನ ನಡೆಯಬೇಕಿದ್ದುದು. ಪರಸ್ಪರ ಸಂಶಯ, ಭೀತಿ, ಸ್ಪರ್ಧೆ, ಅನಿಶ್ಚಿಯಗಳ ಆವರಣ ಮುರಿಯಬೇಕು. ಎಲ್ಲ ದೊಡ್ಡ ರಾಷ್ಟ್ರಗಳವರೂ ತಮ್ಮ ಸೈನ್ಯಶಕ್ತಿಯನ್ನೂ ಅಣುಶಸ್ತ್ರಗಳ ಸಜ್ಜನ್ನೂ ಕಡಮೆ ಮಾಡಿಕೊಳ್ಳಬೇಕು. ಮೈತ್ರಿಯಿಂದ ಸಹಕರಿಸಬೇಕು. ಜರ್ಮನಿಯೊಡನೆ ಸಂಧಿಮಾಡಿಕೊಂಡು ಅದನ್ನು ತಟಸ್ಥವಾಗಿ ಮಾಡಿ ಅದರ ಐಕ್ಯತೆಗೆ ಅಗತ್ಯವಾದ ಕಾರ್ಯಗಳನ್ನು ಕೈಕೊಳ್ಳಬೇಕು. ಐಕ್ಯತೆ ಸಾಧ್ಯವಾಗದಿದ್ದರೆ ಇರುವ ಸ್ಥಿತಿ ಹದಗೆಡದಂತೆ ನೋಡಿಕೊಂಡು ಯೂರೋಪಿನಲ್ಲಿ ಶಾಂತಿ ನೆಲಸುವಂತೆ ಮಾಡಬೇಕು. ಯುದ್ಧ ಸಜ್ಜಿಗೂ ಕ್ಷಿಪಣಿ ಹಾರಾಟಕ್ಕೂ ವ್ಯಯವಾಗುವ ಅಗಾಧ ಧನವನ್ನು ಲೋಕದ ವಿಶೇಷವಾಗಿ ಹಿಂದುಳಿದ ಏಷ್ಯ, ಆಫ್ರಿಕ ಜನಾಂಗಗಳ ಏಳಿಗೆಗಾಗಿ ವಿನಿಯೋಗಿಸಬೇಕು. ವಾಯುಮಂಡಲದಲ್ಲಿಯೂ ಭೌತಾಕಾಶದಲ್ಲಿಯೂ ಖಗೋಳದಲ್ಲಿಯೂ ಸ್ನೇಹದಿಂದ ಸಂಚಾರ ಮಾಡಿ ವಿಜ್ಞಾನದ ಅನ್ವೇಷಣೆಗಳಲ್ಲಿ ಅನ್ಯೋನ್ಯವಾಗಿ ಸಹಕರಿಸಬೇಕು. ಇವನ್ನೆಲ್ಲ ನಿರ್ಣಯಿಸುವುದು ನೇರವಾಗಿ ಮಹಾರಾಷ್ಟ್ರಗಳ ನಾಯಕರಿಗೆ



ಮಾತ್ರವೇ ಶಕ್ಯ. ಆಯಾ ರಾಷ್ಟ್ರಗಳ ವಿದೇಶಾಂಗ ಸಚಿವರ ಸಮ್ಮೇಳನಗಳಿಗೆ ಕೂಡ ಶಕ್ಯವಲ್ಲ – ಎಂದೇ ಈ ಸಮಾರಂಭವನ್ನು ಕೈಕೊಂಡದ್ದು. ಸದ್ಯಕ್ಕೆ ಇನ್ನು ಆರೆಂಟು ತಿಂಗಳ ಕಾಲವಾದರೂ ಸ್ಥಿತಿ ಸುಧಾರಿಸಲಾರದು ಎಂಬುದು ವಿಷಾದದ ಸಂಗತಿ.

ಕಡೆಯದಾಗಿ ಒಂದು ಮಾತು. ಪ್ರಪಂಚ ಹುಟ್ಟಿದಂದಿನಿಂದ ರಾಜ್ಯಗಳಿಗೆಲ್ಲ ಗುಪ್ತವಾರ್ತಾ ಇಲಾಖೆಗಳು ಇದ್ದಿವೆ. ಎಲ್ಲರಿಗೂ ಹೀಗೇ. ರಷ್ಯದವರೂ ಇದನ್ನು ಯಥೇಚ್ಛವಾಗಿ ಮಾಡಿದ್ದಾರೆ. ಅಮೇರಿಕಾದವರು ಪಶ್ಚಿಮ ದೇಶಗಳ ನಾಯಕರಾಗಿ ಕಮ್ಯುನಿಸ್ಟ್ ರಾಷ್ಟ್ರಗಳ ಹೊರವಲಯದಲ್ಲಿ ಸೇನೆಯ ಮತ್ತು ವಿಮಾನ ನೆಲೆಗಳನ್ನು, ಬೇಹಿನ ವರ್ಗಗಳನ್ನು ನಡಸುತ್ತಿರುವುದು ಎಲ್ಲರಿಗೂ ತಿಳಿದಿದೆ. ಬಾಲ್ಟಿಕ್ ರಾಜ್ಯಗಳು, ಪೋಲೆಂಡ್, ಪೂರ್ವ ಜರ್ಮನಿ, ಹಂಗರಿ, ರುಮೇನಿಯಾ, ಬಲ್ಗೇರಿಯಾ, ಆಲ್ಬೇನಿಯಾ, ಜೆಕೋಸ್ಲೊವಾಕಿಯಗಳಲ್ಲಿ ತನ್ನ ಪ್ರಭಾವ ಮಂಡಲವನ್ನು ಸ್ಥಾಪಿಸಿ ಯೂರೋಪಿನ ಇತರ ರಾಷ್ಟ್ರಗಳಲ್ಲಿ ಕಮ್ಯುನಿಸ್ಟ್ ಪಕ್ಷಗಳನ್ನು ಬಲಿಸಿದಾಗ ಪಶ್ಚಿಮ ರಾಷ್ಟ್ರಗಳು ಎಚ್ಚೆತ್ತು ಸ್ವಹಿತ ರಕ್ಷಣೆಗಾಗಿ ಒಗ್ಗಟ್ಟಾದವು.

ಇವರ ಬಾನುಲಿ ಪ್ರಚಾರಗಳನ್ನು ಅವರೂ ಅವರವನ್ನು ಇವರೂ ತೆಗಳಿ, ಅಪವಾದವನ್ನು ಸ್ಥಾಪಿಸಲು ಆ ಯಂತ್ರವನ್ನು ಬಳಸುತ್ತಿರುವುದೂ ನಡದದ್ದೇ. ಇಂಥ ವಿಮಾನಗಳ ಹಾರಾಟ ಈ ಹಿಂದೆ ಎಷ್ಟೋ ನಡೆದಿದೆ. ಇನ್ನೂ ಎಷ್ಟೋ ನಡೆಯುತ್ತದೆ. ಪ್ರಜಾತಂತ್ರದ ತೆರೆದ ರಾಷ್ಟ್ರಗಳಲ್ಲಿ ಯಾವುದೂ ಗುಟ್ಟಲ್ಲ. ಸಾರ್ವಜನಿಕ ವಿಮರ್ಶೆಯೂ ಅಭಿಪ್ರಾಯಗಳೂ ನೂರಾರು ರೀತಿ ಕಟ್ಟುತ್ತವೆ. ಇಲ್ಲಿನದನ್ನು ಎಷ್ಟೋ ಬಗೆಯಾಗಿ ಇಲ್ಲಿನವರೂ ಕಮ್ಯುನಿಸ್ಟ್ ರಾಷ್ಟ್ರದವರೂ ಪ್ರತ್ಯಕ್ಷವಾಗಿ ಪರೋಕ್ಷವಾಗಿ ಭೇದಿಸಿಕೊಂಡು ಹೋಗಿದ್ದಾರೆ. ಮೂಲಭೂತವಾದ ಯಂತ್ರ ನಕ್ಷೆಗಳನ್ನೂ ತಂತ್ರ ರಹಸ್ಯಗಳನ್ನೂ ಕದ್ದು ಸಾಗಿಸಿರುವ ಪ್ರಕರಣಗಳು ಬೇಕಾದಷ್ಟು ನಡೆದಿವೆ. ಪ್ರಪಂಚದ ಎಲ್ಲ ಕಮ್ಯುನಿಸ್ಟ್ ಪಕ್ಷದವರೂ ರಷ್ಯಕ್ಕೆ ಗೂಢಚಾರರಾಗುವವರೇ. ಅವರಿಗೆ ಸ್ವದೇಶಕ್ಕಿಂತ ರಷ್ಯ ಹೆಚ್ಚು ಪ್ರೀತಿಯ ತವರು - ಎಂಬ ಮಟ್ಟಿಗೆ ಈ ಗುಪ್ತವಾರ್ತೆ ಸಾಗುತ್ತಿರುತ್ತದೆ. ರಷ್ಯಾದ ಕ್ರಾಂತಿ ನಡೆದಾಗಿನಿಂದ ಅಲ್ಲಿಯೂ – ಕಮ್ಯುನಿಸ್ಟ್ ರಾಷ್ಟ್ರದಲ್ಲಿಯೇ – ಮನೆ ಮನೆಗೂ ವ್ಯಕ್ತಿ ವ್ಯಕ್ತಿಗೂ ಏರ್ಪಟ್ಟಿರುವ ಗುಪ್ತ ವಾರ್ತಾಸಂಗ್ರಹ ದುಸ್ಸಹವಾದ್ದು. ಗೂಢಚರ್ಯೆಯಲ್ಲಿ ಪರಮ ನಿಷ್ಣಾತರಾದ ಆ ರಾಷ್ಟ್ರದ ನಾಯಕರು ಇತರರು ತಮ್ಮ ಮೇಲೆ ಆತ್ಮರಕ್ಷಣೆಗಾಗಿ ವಾರ್ತಾಸಂಗ್ರಹ ಮಾಡುತ್ತಿದ್ದೇವೆಂದಾಗ ಕೂಗೆಬ್ಬಿಸಿ ರಂಪು ಮಾಡಿ ಕರ್ಕಶವನ್ನಾಡುವುದು ವಿಚಿತ್ರ. ಅಧ್ಯಕ್ಷರು ಪ್ರಕಟವಾಗಿ ಒಪ್ಪಿಕೊಂಡದ್ದು ತಪ್ಪಾಯಿತು. ಬಹುಶಃ ಅವರು ಅಸತ್ಯ ನುಡಿದಿದ್ದರೆ ಬಚಾಯಿಸಿಕೊಳ್ಳಬಹುದಾಗಿತ್ತು. ಅವರಿಗೆ ಅಂಥ ಅವಕಾಶ ಕೊಟ್ಟೆವೆಂದರು ಕ್ರುಶ್ಚ್ಛೆವರು. ಅದನ್ನು ಅವರು ಮಾಡಲಿಲ್ಲ. ಎಲ್ಲರ ಕರ್ಮ ಅಕರ್ಮದ ಹೊಣೆಯನ್ನು ತಮ್ಮ ಮೇಲೆ ಹೊತ್ತುಕೊಂಡರು. ಅದರ ವಿಚಕ್ಷಣೆ

ಸರಿಯಾಗಲಿಲ್ಲವೇನೊ. ಒಂದೊಂದು ಸಂಧಾನದ ಮುಂಚೆಯೂ ರಷ್ಯ ಪಶ್ಚಿಮ ರಾಷ್ಟ್ರಗಳನ್ನು ಎದ್ದೇಳಿಸಿದಂತೆ ತೋಳು ತಟ್ಟಿಕೊಂಡು ತಮ್ಮ ನಾಶಕ ಶಕ್ತಿಯನ್ನು ಕೊಚ್ಚಿಕೊಂಡಿದೆ. ಸ್ಫುಟ್ನಿಕ್, ಲ್ಯೂನಿಕ್, ಸ್ಪೇಸ್‌ಷಿಪ್ ಮುಂತಾದುವನ್ನು ನಾಟಕೀಯವಾಗಿ ಹಾರಿಸಿ ಪವಾಡಗಳನ್ನು ಮೆರಸಿ ಹುಷಾರ್ ಎಂದಿದೆ. 90 ನಿಮಿಷಕ್ಕೊಂದು ಸಲ ಭೂ ಮಂಡಲದ ಸುತ್ತ ಸುತ್ತುವ ಇವರೆಲ್ಲ ವಿಮಾನಗಳೂ ಪ್ರಪಂಚದ ಎಲ್ಲ ಭಾಗದ ಫೋಟೊಗ್ರಾಫುಗಳನ್ನು ಸೂಕ್ಷ್ಮವಾಗಿ ಸಂಗ್ರಹಿಸಬಲ್ಲವು. ಇತ್ತ ರಷ್ಯಕ್ಕೆ, ಅತ್ತ ಅಮೇರಿಕಾಕ್ಕೆ ಇವೆಲ್ಲವನ್ನು ಇಂಗ್ಲೆಂಡಿಗೂ ತಿಳಿಸಬಲ್ಲವು. ಗ್ರಿ ವಿಮಾನದಂಥವು ಒಂದೋ ನಾಲ್ಕೋ ಹಾರಿದುದು ಈ ದೈತ್ಯಶಕ್ತಿಯ ಪ್ರಮಾಣದ ಎದುರು ದೊಡ್ಡ ಸಂಗತಿಯೇನಲ್ಲ. ಡಿಗಾಲರು ಹೇಳಿದಂತೆ ಇಂಥವೆಲ್ಲವುಗಳ ವಿರೋಧಕ್ಕಾಗಿಯೇ ಉಪಶಾಂತಿಗಾಗಿಯೇ ಶೃಂಗ ಸಮ್ಮೇಳನ ಅಗತ್ಯವಿದ್ದದ್ದು. ಇಂಥ ವಿಮಾನಗಳು ಸಂಶಯಾಸ್ಪದವಾಗಿ ಹಾರಾಡಿದಾಗ ಅವುಗಳನ್ನು ಕಡ್ಡಾಯವಾಗಿ ಇಳಿಸುವುದು, ಸುಡುವುದು, ಗುಪ್ತಚರರನ್ನು ಸೆರೆಹಿಡಿದು ದಂಡಿಸುವುದು ಬಹುಕಾಲದಿಂದ ನಡೆದು ಬಂದ ರೀತಿ. ಇದಕ್ಕೆ ಎಲ್ಲ ರಾಜ್ಯಗಳವರೂ ಸಿದ್ಧರಿರುತ್ತಾರೆ. ಆದರೆ ಅಣುಶಕ್ತಿ, ಅಣು ಕ್ಷಿಪಣಿಗಳು, ಮಹಾಸ್ತ್ರಗಳನ್ನು ತಮ್ಮ ಬತ್ತಳಿಕೆಗಳಲ್ಲಿಟ್ಟುಕೊಂಡು ನೀರ ಮೇಲೆ, ನೆಲದ ಮೇಲೆ, ಕಡಲೊಳಗೆ, ಆಕಾಶದಲ್ಲಿ 500-1000 ಮೈಲಿ ಎತ್ತರದಿಂದ, 6,000 ಮೈಲಿ ದೂರದಿಂದ ವರ್ಷಾಂತರಗಟ್ಟಳೆ ನೀರಿನಲ್ಲಿ ಮುಳುಗಿ ಹಡಗುಗಳನ್ನು ಸಿಡಿಸಿ ಮುಳುಗಿಸಿ, ಒಂದು ಕ್ಷಣದಲ್ಲಿ ಒಂದು ರಾಷ್ಟ್ರ ಇನ್ನೊಂದು ರಾಷ್ಟ್ರವನ್ನು ನಾಶಮಾಡುವ ಅವಕಾಶ ಇಂದು ಉಂಟಾಗಿದೆ. ಇವರು ಮಾಡಿದ್ದನ್ನು ಅವರೂ ಮಾಡಬಲ್ಲರು. ಇಬ್ಬರೂ ನಾಶವಾಗುತ್ತಾರೆಂಬ ಭಯವೊಂದು ಇಬ್ಬರ ಕೈಯನ್ನೂ ತಡೆದಿದೆ.

ರಷ್ಯನರೂ ಕಮ್ಯುನಿಸ್ಟ್ ರಾಜ್ಯಗಳವರೂ ತಮ್ಮ ತೆರೆಮರೆಗಳಿಂದ ಯಾವ ಸಮಯದಲ್ಲಿ ಏನು ಮಾಡಿ ಲೋಕಕ್ಕೆ ಆಪತ್ತು ಒಡ್ಡುತ್ತಾರೋ, ಇದು ತಿಳಿಯದು. ಶಸ್ತ್ರದ ಪ್ರಯೋಗಕ್ಕೂ ನಾಶಕ್ಕೂ ಕಾಲುಗಂಟೆಯ ಅಂತರವಿರುವುದಿಲ್ಲ. ರಷ್ಯಾ ನಿರಂತರವಾಗಿ ಪಶ್ಚಿಮ ರಾಷ್ಟ್ರಗಳನ್ನೂ ತಪ್ಪಿತಸ್ಥರ ಸಹಾಯಕ ರಾಷ್ಟ್ರಗಳನ್ನೂ ಬೆದರಿಸುತ್ತಿದೆ. ಎಲ್ಲ ರಾಷ್ಟ್ರಗಳ ಕಮ್ಯುನಿಸ್ಟ್ ಪಕ್ಷಗಳಿಗೆ ಉತ್ತೇಜನ, ಸಹಾಯ ಕೊಟ್ಟು ಅವರನ್ನು ಪ್ರಚೋದಿಸುತ್ತಿದೆ. ಪೊಲೀಸ್ ರಾಜ್ಯಗಳಾದ ಆ ರಾಜ್ಯಗಳೊಳಗೆ ಅಹಿತ ಕಾರ್ಯಗಳೇನೇನು ನಡೆಯುತ್ತಿವೆಯೋ? – ಅದನ್ನು ಅರಿಯುವುದು ಸುಲಭವಲ್ಲ. ಆದರೆ ಅರಿಯುವುದು ಸರ್ವಥಾ ಅಗತ್ಯ. ಮುನ್ನೆಚ್ಚರಿಕೆಗೆ ಈ ಭೀತಿ, ಈ ಅಗತ್ಯ ಎರಡೂ ಸಹಜ, ಪ್ರಾಮಾಣಿಕ ಎಂಬುದನ್ನು ರಷ್ಯದ ನಾಯಕರು ಅರಿಯಬೇಕು. ಇಷ್ಟರ ಮೇಲೆ ಆ ನಾಡಿನಲ್ಲಿ ಇಂದಿದ್ದ ನಾಯಕರು ನಾಳೆಗಿಲ್ಲ. ಇಂದು ಪರಮ ಧಾರ್ಮಿಕ, ಸತ್ಯವಂತರು, ಲೋಕಹಿತರತರು ಎಂಬ ಕೀರ್ತಿಯಿದ್ದವರು ನಾಳೆಗೆ ಮಾಯವಾಗುತ್ತಿರುತ್ತಾರೆ, ಪದಚ್ಯುತರಾಗುತ್ತಾರೆ. ಪ್ರಧಾನಿಗಳೂ ಅಧ್ಯಕ್ಷರೂ ವಿದೇಶ



ಸಂಧಾನ ಶಾಖೆಯ ಅಧ್ಯಕ್ಷರೂ ರಕ್ಷಣಾ ಮಂತ್ರಿಗಳೂ ದಂಡಾಧಿಕಾರಿಗಳೂ ಲೋಕಕ್ಕೆ ತಿಳಿಯದ ಕಾರಣದಿಂದ ಜೀವ ಕಳೆದುಕೊಳ್ಳುತ್ತಾರೆ, ಅಪಮಾನಕ್ಕೀಡಾಗುತ್ತಾರೆ; ಮೂಲೆಗೆ ಬೀಳುತ್ತಾರೆ. ಇದರಿಂದಾಗಿ ಕೂಡ ಇತರ ರಾಷ್ಟ್ರಗಳಿಗೆ ಭೀತಿ, ಶಂಕೆ ಹೆಚ್ಚಾಗಬಲ್ಲದು ಎಂಬುದನ್ನು ರಷ್ಯಾ ನಂಬಬೇಕು. ಹಾಗಾದರೆ ಮಾತ್ರ ಲೋಕಶಾಂತಿಗೆ ದೊಡ್ಡ ನೆರವನ್ನು ಕೊಟ್ಟ ಹಾಗಾಗುತ್ತದೆ.

30-5-1960

❑

# 8. ಆಲ್ಜೀರಿಯಾ ಪ್ರಶ್ನೆ

ಆಲ್ಜೀರಿಯಾ ಉತ್ತರ ಆಫ್ರಿಕಾದಲ್ಲಿನ ಒಂದು ಪ್ರದೇಶ; ಈಗ ಫ್ರಾನ್ಸಿಗೆ ಸೇರಿದ್ದು. ಫ್ರೆಂಚರು ಆಲ್ಜೀರಿಯಾಕ್ಕೆ ಸ್ವಾತಂತ್ರ್ಯ ಕೊಡಬೇಕೆಂಬ ಪ್ರಶ್ನೆ ದೊಡ್ಡದಾಗಿ ಎದ್ದಿದೆ. ಆರು ವರ್ಷಗಳಿಂದ ಅಲ್ಲಿ ಒಂದು ದಂಗೆ ನಡೆದು 5-6 ಲಕ್ಷ ಆಲ್ಜೀರಿಯನರು ಸತ್ತಿದ್ದಾರೆ. ಸುಮಾರು ಒಂದು ಲಕ್ಷ ಜನ ಫ್ರೆಂಚರೂ ಸತ್ತಿದ್ದಾರೆ. ಸ್ವಾತಂತ್ರ್ಯದ ದಳ ಕೂಡಿ ಇಲ್ಲಿ ಅಲ್ಲಿ ಹರಡಿ, ಮರೆಯಿಂದ ಯುದ್ಧಮಾಡುತ್ತಿದ್ದಾರೆ. ಆಲ್ಜೀರಿಯನ್ ನಾಯಕರು ಪ್ರತ್ಯೇಕವಾದ ಹಂಗಾಮಿ ಸರ್ಕಾರವೊಂದನ್ನು ರಚಿಸಿ ಆಲ್ಜೀರಿಯಾದಲ್ಲಿ ನಡೆಯುತ್ತಿರುವ ಸರ್ಕಾರವನ್ನು ತಾವು ಒಪ್ಪುವುದಿಲ್ಲವೆಂದಿದ್ದಾರೆ. ಫ್ರಾನ್ಸ್ ಒಪ್ಪಿಲ್ಲದ ಆ ಹಂಗಾಮಿ ಸರ್ಕಾರವನ್ನು 17 ರಾಷ್ಟ್ರಗಳು–ಏಷ್ಯದವು, ಕಮ್ಯುನಿಸ್ಟ್ ವರ್ಗದವು– ಒಪ್ಪಿವೆ. ಅವುಗಳಲ್ಲಿ ಪಶ್ಚಿಮ ಏಷ್ಯದ ಮತ್ತು - ಒಂದನ್ನು ಬಿಟ್ಟು? - ಆಫ್ರಿಕನ್, ಅರಬ್ ರಾಷ್ಟ್ರಗಳೆಲ್ಲ ಇವೆ. ಹೀಗಾಗಿ ಒಂದು ಕಡೆ ಒಂದು ಜನದ ಸ್ವಾಧೀನತೆಯ ಅಭಿಲಾಷೆಯ ನೆರವೇರಿಕೆಯಂತಿರುವ ಚಳವಳಿ ಸಕಲ ಆರಬ್ ಐಕ್ಯದ ಮತ್ತು ಸ್ವಾತಂತ್ರ್ಯದ ಒಂದು ಕುರುಹೂ ಆಗಿದೆ. ಇದಕ್ಕೆ ಪ್ರಚೋದಕರಾಗಿ, ಸಹಾಯಕರಾಗಿ ಐಕ್ಯ ಆರಬ್ ಗಣರಾಜ್ಯದ ನಾಯಕ ಅಧ್ಯಕ್ಷ ನಾಸ್ಸೆರ್ ನಿಂತಿದ್ದಾರೆ. ಸೋವಿಯತ್ ರಷ್ಯ ಪ್ರೋತ್ಸಾಹ ಕೊಡುತ್ತಿದೆ. ದೂರದಿಂದ ಚೀಣ ನೆರವನ್ನು ಕೊಡುತ್ತೇನೆ, ಯುದ್ಧಕ್ಕೆ ಸ್ವಯಂಸೇವಕರನ್ನು ಕಳಿಸುತ್ತೇನೆ ಎನ್ನುತ್ತಿದೆ.

ಆಲ್ಜೀರಿಯಾ ಒಂದು ಪಕ್ಕ ಮೊರಾಕ್ಕೊ, ಇನ್ನೊಂದು ಪಕ್ಕ ಟ್ಯೂನಿಸ್ ಇವೆ. ಎರಡೂ ಫ್ರೆಂಚರ ಆಧಿಪತ್ಯಕ್ಕೆ ಒಳಪಟ್ಟಿದ್ದು ಈಗ್ಗೆ ಕೆಲವು ವರ್ಷಗಳ ಹಿಂದೆ ತಾನೇ ಸ್ವಾತಂತ್ರ್ಯ ಪಡೆದ ರಾಷ್ಟ್ರಗಳು. ಫ್ರೆಂಚರ ಆಡಳಿತ ಕಾಲದಲ್ಲಿ ಈ ಮೂರು ಪ್ರದೇಶಗಳಲ್ಲಿಯೂ ಬೇಕಾದಷ್ಟು ಆರ್ಥಿಕ, ಸಾಂಸ್ಕೃತಿಕ ಅಭಿವೃದ್ಧಿ ನಡೆಯಿತು. ಈ ರಾಷ್ಟ್ರಗಳಿಗೆ ತಾವು ಹೊಸ ಕಾಲದ ಜನತಾ ರಾಷ್ಟ್ರಗಳಾಗಬೇಕೆಂದು ಆಸೆ ಉಂಟಾಯಿತು. ವಿದ್ಯೆಯ ಫಲದಿಂದ ಲೆಬನಾನ್, ಸಿರಿಯಾ, ಈಜಿಪ್ಟ್ ಮುಂತಾದ ಎಲ್ಲ ಪ್ರದೇಶ ಗಳಲ್ಲಿಯೂ ಫ್ರೆಂಚರ ಸಂಸ್ಕೃತಿ ಪ್ರಚಾರಕಾರ್ಯ ಪ್ರಭಾವಗೊಂಡಂತೆ, ಇಲ್ಲಿಯೂ ಫ್ರೆಂಚ್ ಚರಿತ್ರೆಯ ಗುಣ ಧರ್ಮಗಳಿಗೆ ಈ ನಾಡಿನಲ್ಲಿ ಓಲು, ಮೆಚ್ಚುಗೆ ಇವೆ. ಇಂಗ್ಲಿಷರಂತಲ್ಲದೆ ಫ್ರೆಂಚರು ಆಯಾ ಜನದೊಡನೆ – ಆಫ್ರಿಕಾದಲ್ಲಿ ವಿಶೇಷವಾಗಿ – ಸಾಮಾಜಿಕವಾಗಿ ಕೂಡ ಹೆಚ್ಚು ಆಪ್ತವಾಗಿ ಬೆರೆದರು. ಮೊರಾಕ್ಕೊ, ಟ್ಯೂನಿಸ್ ಸ್ವತಂತ್ರವೇ ಆದರೂ ಅವುಗಳಲ್ಲಿ ಇನ್ನೂ ಫ್ರೆಂಚ್ ಸೈನ್ಯಗಳಿವೆ, ಸೈನ್ಯದ ನೆಲೆಗಳಿವೆ. ಅವನ್ನು ಬಿಟ್ಟು ಹೋಗಿರೆಂದು ಅವರು ಫ್ರೆಂಚರನ್ನು ಕೇಳುತ್ತಿದ್ದಾರೆ. ಮೊರಾಕ್ಕೊಗೂ ಟ್ಯೂನಿಸ್ಸಿಗೂ ನಡುವೆ ಇರುವ ದೇಶ ಆಲ್ಜೀರಿಯಾ. ಈ ಮೂರೂ ಕಡೆ ಇರುವ ಜನವರ್ಗ ಸುಮಾರು ಒಂದೇ ಬಗೆಯದು. ಆದುದರಿಂದ ಆಲ್ಜೀರಿಯಾ ಸ್ವಾಧೀನತೆಯ ವಿಷಯದಲ್ಲಿ ನೆರೆಯ ಎರಡು ರಾಷ್ಟ್ರಗಳಲ್ಲಿಯೂ ತುಂಬಾ ಸಹಾನುಭೂತಿ ಉಂಟು. ಸರ್ಕಾರಗಳವರು ಫ್ರಾನ್ಸಿನೊಡನೆ ಮಾಡಿಕೊಂಡ ಒಪ್ಪಂದಗಳಿಗೂ ನಡಸಬೇಕಾದ ಕಾನೂನುಗಳಿಗೂ ಹೊಂದಿಕೊಂಡು ನಡೆಯಬೇಕಾದರೂ, ಜನ ಆಲ್ಜೀರಿಯಾದ ದೇಶಭಕ್ತರಿಗೆ ರಕ್ಷಣೆ ಪೋಷಣೆ ನೆರವು ಕೊಡುತ್ತಾರಾಗಿ, ಅವರನ್ನು ದಂಗೆಕಾರರೆಂದು ಅಟ್ಟಿಬರುವ ಫ್ರೆಂಚ್ ಸೈನ್ಯಗಳು ಉದ್ರೇಕಗೊಳ್ಳುತ್ತವೆ, ಅಟ್ಟಿ ಬರುತ್ತವೆ. ಆಗ ಆ ದೇಶಗಳ ಸ್ವಾಧೀನತೆಗೆ ಭಂಗ ತರುವುದು. ಆ ರಾಜ್ಯಗಳು ಫ್ರೆಂಚ್ ಸರ್ಕಾರಕ್ಕೆ ಪ್ರತಿಭಟನೆ ಸಲ್ಲಿಸುತ್ತವೆ. ಫ್ರೆಂಚ್ ಸೈನ್ಯಗಳು ಇನ್ನೂ ಆ ದೇಶದಲ್ಲಿ ಬಲದಲ್ಲಿ ಉಳಿದಿವೆ. ಆ ಭಯ ತಪ್ಪದಿದ್ದರೆ ಫ್ರೆಂಚ್ ಸಂಬಂಧವನ್ನೇ ಪೂರ್ತಿಯಾಗಿ ಕಡಿದುಕೊಳ್ಳುತ್ತೇವೆಂದು ಹೆದರಿಕೆ ಹಾಕಿರುವುದುಂಟು. ಫ್ರೆಂಚರು ಆ ದೇಶಗಳಲ್ಲಿರುವುದೂ ವ್ಯಾಪಾರ ಉದ್ಯೋಗದಲ್ಲಿ ತೊಡಗುವುದೂ, ಹಣ ಹೂಡುವುದೂ ವಿದ್ಯೆ ಆರೋಗ್ಯ ಮುಂತಾದುವುಗಳ ಸಾಧನೆಯಲ್ಲಿಯೂ ಕುಶಲ ಕರ್ಮ, ತಂತ್ರಗಳಲ್ಲಿಯೂ ಅವರಿಂದ ದೊಡ್ಡ ನೆರವು ದೊರೆಯುತ್ತಿದ್ದುವು. ಅವು ನಿಂತರೆ ಆರ್ಥಿಕವಾಗಿ ಇವಕ್ಕೆ ನಷ್ಟ. ಇವನ್ನು ಕಳೆದುಕೊಳ್ಳಲು ಇವರಿಗೂ ಇಷ್ಟವಿಲ್ಲ, ಫ್ರಾನ್ಸಿಗೂ ಇಷ್ಟವಿಲ್ಲ. ಈ ಸಮಯದಲ್ಲಿ ಒಂದು ಕಡೆ ಅಮೇರಿಕನ್ ಆರ್ಥಿಕ ನೆರವಿಗೆ ಈ ರಾಷ್ಟ್ರಗಳು ಎದುರು ನೋಡುತ್ತಿವೆ. ನೆರವನ್ನು ಕೊಡಲು ಕಮ್ಯುನಿಸ್ಟ್ ರಾಷ್ಟ್ರಗಳು ತಾನು ಸಿದ್ಧವೆನ್ನುತ್ತಿವೆ. ಅರಬ್ಬೀ ರಾಜ್ಯಗಳು ಈ ಪರಿಸ್ಥಿತಿಯನ್ನು ಉಪಯೋಗಿಸಿಕೊಂಡು ಐರೋಪ್ಯ ಪ್ರಭಾವವನ್ನೇ ಉತ್ತರ ಆಫ್ರಿಕದಿಂದ ಹೊರದೂಡಲು ಬಯಸುತ್ತಿವೆ.

ಆಲ್ಜೀರಿಯಾ ಸುಮಾರು 1830ರಿಂದ ಈಚೆಗೆ ಒಂದಾಗಿ ರೂಪಗೊಂಡ ಜನವರ್ಗ. ಅವರಲ್ಲಿ ಮುಸಲ್ಮಾನರಾದರೂ ಅರಬರಲ್ಲದ ಬರ್ಬರ ಜನತೆ ಒಂದಿದೆ. ಮೊರಾಕ್ಕೊ ಟ್ಯೂನಿಸ್‌ಗಳಲ್ಲಿ ಇರುತ್ತಿದ್ದುದಕ್ಕಿಂತ ಹೆಚ್ಚು ಸಂಖ್ಯೆಯ ಫ್ರೆಂಚ್ ವಲಸೆಗಾರರು ಇಲ್ಲಿ ಇದ್ದಾರೆ. ಈಗ್ಗೆ 30-35 ವರ್ಷಗಳ ಹಿಂದೆಯೇ ಈ ಫ್ರೆಂಚ್ ವಲಸೆಗಾರರ ಸಂಖ್ಯೆ ಒಟ್ಟಿನಲ್ಲಿ 15% ಇತ್ತು. ಇವರು ಆಸ್ತಿವಂತರು, ಉದ್ಯೋಗಸ್ಥರು, ಕೈಗಾರಿಕೆಯ ತಂತ್ರ ಬಲ್ಲವರು. ಮೇಲ್ಪಟ್ಟ ಮುಖ್ಯ ಅಧಿಕಾರಗಳೆಲ್ಲ ಅವರವೇ. ಗ್ರಾಮಾಂತರ ಪ್ರದೇಶದಲ್ಲಿ ಹರಡಿರುವ ಆ ಜನತೆಯ ಸುಮಾರು 3% ಇರುವ ಫ್ರೆಂಚರು 31% ಭೂಮಿಗೆ ಒಡೆಯರು. ಉತ್ತರ ಭಾಗದಲ್ಲಿ ಸಮುದ್ರ ತೀರದ ಸುಮಾರು ಎಲ್ಲ ಮುಖ್ಯ ಸ್ಥಳಗಳೂ ಫ್ರೆಂಚರ ಬಲ ಸ್ಥಾನಗಳಾಗಿವೆ. ಇಷ್ಟು ಸಂಖ್ಯೆಯ ಫ್ರೆಂಚ್‌ಜನ 100 ವರ್ಷಗಳಿಂದ ಅಲ್ಲಿ ನೆಲಸಿ ಅದನ್ನು ಫ್ರಾನ್ಸಿನ ಒಂದು ಭಾಗವೆಂದೇ

ಎಣಿಸಿ ಆಲ್ಜೀರಿಯಾವನ್ನು ಎಂದಿಗೇ ಆಗಲಿ ಬಿಟ್ಟು ಹೋಗುವುದಿಲ್ಲ, ಬಿಟ್ಟುಕೊಡುವುದಿಲ್ಲ ಎಂದು ಅಲ್ಲಿ ತಳವೂರಿದ್ದಾರೆ; ದಕ್ಷಿಣ ಆಫ್ರಿಕಾದಲ್ಲಿ ಬೋಯೆರ್ ಜನ ಇದ್ದಂತೆ. ಆಲ್ಜೀರಿಯನ್ನರಿಗೆ ಫ್ರಾನ್ಸಿನ ಪಾರ್ಲಿಮೆಂಟಿನಲ್ಲಿ ಫ್ರಾನ್ಸಿನ ಜನವರ್ಗಕ್ಕೆ ಇದ್ದಂತೆಯೇ ಪ್ರಾತಿನಿಧ್ಯವಿದೆ. ಆ ಪ್ರಾತಿನಿಧ್ಯದಲ್ಲಿ ಫ್ರೆಂಚ್ ಆಲ್ಜೀರಿಯನ್ನರ ಮತ್ತು ಅವರ ವಿಶ್ವಾಸಕ್ಕೆ ಪಾತ್ರರಾದವರ ಭಾಗ ಹೆಚ್ಚಾಗಿರುವುದು ಸಹಜವೇ. ಈ ಪರಿಸ್ಥಿತಿ ಕೊನೆಗೊಳ್ಳಬೇಕು. ಮೊರಕ್ಕೊ ಟ್ಯೂನಿಸ್‌ಗಳಂತೆ, ಈಚೆಗೆ ಮಾಲಿ ಗಾಸಿಗಳಂತೆ, ಪಶ್ಚಿಮ ಆಫ್ರಿಕಾದ ಇತರ ಫ್ರೆಂಚ್ ವಸತಿಗಳಂತೆ ತನಗೂ ಸ್ವಾಧೀನತೆ, ಸಮಾನತೆ ದೊರೆಯುವವರೆಗೂ ನಾವು ಒಪ್ಪುವುದಿಲ್ಲ – ಎಂಬುದು ಫರ್ಹಾತ್ ಅಬ್ಬಾಸ್ ನಾಯಕತ್ವದಲ್ಲಿ ನಡೆಯುತ್ತಿರುವ ಸ್ವಾತಂತ್ರ್ಯ ಸರಕಾರದ ನಿಲವು. ಫ್ರೆಂಚ್ ವಲಸೆಗಾರರ ಹಟ ಈ ಸ್ವಾತಂತ್ರ್ಯವಾದವನ್ನು ಪ್ರತಿಭಟಿಸುತ್ತಿದೆ. ವಲಸೆಗಾರರಿಗೆ ಅನುಕೂಲವಾಗಿ ಫ್ರಾನ್ಸಿನಲ್ಲಿ ಅನೇಕ ರಾಜಕೀಯ ಪಕ್ಷಗಳಿವೆ. ಸ್ವಾತಂತ್ರ್ಯ ಕೊಡುವೆನೆಂಬ ಪಕ್ಷ ಒಂದು ದಿನವೂ ಅಧಿಕಾರದಲ್ಲಿ ಉಳಿಯಲಾರದು. ಆ ಪಕ್ಷಗಳ ಮತ್ತು ಪಾರ್ಲಿಮೆಂಟಿನ ಜನಪ್ರತಿನಿಧಿಗಳ ನೆರವಿನಿಂದ ಇವರು ತಮ್ಮ ಪ್ರಾಬಲ್ಯವನ್ನು ರಾಜಕೀಯವಾಗಿಯೂ ಸಾಧಿಸುತ್ತಿದ್ದರು. ಈ ಫ್ರೆಂಚರೆಲ್ಲರು ಶಸ್ತ್ರ ಸಜ್ಜಿತರಾಗಿ ಸೈನ್ಯ ಶಿಸ್ತಿನಿಂದ ತಮ್ಮ ಹಕ್ಕಿನ ಸ್ಥಾಪನೆಗಾಗಿ ಹೋರಾಡಲು ಸಿದ್ಧ. ಅವರಲ್ಲಿ ತೀಕ್ಷ್ಣಪಂಥಗಳೂ ಮಂದಗಾಮಿ ಪಂಥಗಳೂ ಉಂಟು. ಮಂದಗಾಮಿಗಳು ದಕ್ಷಿಣ ಆಫ್ರಿಕಾದಲ್ಲಿನಂತೆಯೇ ಒಂದು ರೀತಿ ಉದಾರವಾಗಿಯೇ ಮಧ್ಯ ಮಾರ್ಗವನ್ನು ಹಿಡಿದೇ ಆಲ್ಜೀರಿಯಾದ ಸ್ವರಾಜ್ಯವನ್ನು ಸ್ವಲ್ಪಮಟ್ಟಿಗೆ ಒಪ್ಪಿಕೊಂಡಾರು. ಆದರೆ ಅವರೂ ಫ್ರೆಂಚರ ಸಂಖ್ಯೆಗಿಂತ ಹೆಚ್ಚು ಪ್ರಮಾಣದ ಪ್ರಭಾವವನ್ನಂತೂ ಆಲ್ಜೀರಿಯನ್ ದೇಶೀಯರಿಗೆ ಬಿಟ್ಟುಕೊಡಲು ಒಪ್ಪರೇನೊ. ಬಹುಮತ ಗಣನೆಯ ಮೇಲೆ ಯಾವ ಬಗೆಯ ಪ್ರಜಾಸರ್ಕಾರವೇರ್ಪಟ್ಟರೂ, ತಮ್ಮ ಸಂಖ್ಯಾಪ್ರಮಾಣ ಕಡಮೆಯಾಗಿರುವುದರಿಂದ, ತಮ್ಮ ಶಕ್ತಿ ಖಂಡಿತವಾಗಿ ಉಡುಗಿ ಕಾಲಕ್ರಮದಲ್ಲಿ ಕರಗಿ ಹೋಗುವುದೆಂದು ಅವರಿಗೆ ಭಯ ಇರುವುದರಿಂದ, ಸುಮಾರು ಅಂತಹ ಎಲ್ಲರೂ ಇಂದಿನ ಫ್ರೆಂಚ್ ಪ್ರಭಾವವನ್ನು ಉಳಿಸಬೇಕೆಂದಿರುವವರೇ. "ನಾವು ರಚಿಸಿ ಕಟ್ಟಿದ ದೇಶ, ನಾವು ಸಂಪನ್ನವಾಗಿ ಮಾಡುತ್ತಿರುವುದು ನಮಗಿರಬೇಕು" ಎಂಬುದು ಅವರ ವಾದ. ಯಾವ ಬಗೆಯ ಒಡಂಬಡಿಕೆಯನ್ನು ಒಂದು ಸಮ್ಮೇಳನ ಪದ್ಧತಿಯಡಿ ರಾಜಕೀಯವಾಗಿ ಮಾಡಿಕೊಂಡರೂ ಅದು ತಮಗೆ ಪ್ರತಿಕೂಲವಾಗುವುದೆಂದು ಎಣಿಸಿರುವವರು ಇವರು . ಇತ್ತ ರಾಷ್ಟ್ರೀಯ ಆಲ್ಜೀರಿಯನ್ ಕಡೆ ಆರಬ್ಬರೂ ಬರ್ಬರರೂ ಒಂದೊಂದು ಮನೆಯಿಂದಲೂ ಸ್ವತಂತ್ರ ಚಳವಳಿಗೆ ಸೈನಿಕರನ್ನು ಸೇರಿಸುತ್ತಿದ್ದಾರೆ; ಕದನಗಳಲ್ಲಿ ಸತ್ತಿದ್ದಾರೆ; ಗುಪ್ತವಾಗಿ ಅಡಗಿ ಕೆಲಸ ಮಾಡುತ್ತಿದ್ದಾರೆ; ಸೆರೆಗಳಲ್ಲಿ ಕೊಳೆಯುತ್ತಿದ್ದಾರೆ; ಬೇರೆ ದೇಶಗಳಿಗೆ ಗಡಿಪಾರಾದವರಿದ್ದಾರೆ. ಫ್ರೆಂಚ್ ಸರ್ಕಾರವೂ ಇಲ್ಲಿನ ಫ್ರೆಂಚ್ ವಲಸೆಗಾರರೂ ಆಡಳಿತದವರೂ ಸೈನ್ಯದವರೂ ಕೊಟ್ಟ ಅಪರಿಮಿತ ಹಿಂಸೆಗೆ ಬಲಿಯಾದವರಿದ್ದಾರೆ. ಪೂರ್ಣ ಸ್ವಾತಂತ್ರ್ಯದಿಂದಲ್ಲದೆ ಇಂಥವರ ಕೆರಳಿಕೆ



ಶಮನವಾಗುವ ಹಾಗಿಲ್ಲ. ಉಳಿದ ಎಲ್ಲ ಫ್ರೆಂಚ್, ಆಫ್ರಿಕನ್ ಜನತೆಗಳಿಗೂ ಸ್ವಾತಂತ್ರ್ಯಾವಕಾಶಗಳನ್ನು ಕೊಟ್ಟ ಜನರಲ್ ಡಿಗಾಲ್ ಸರ್ಕಾರ ತಮಗೆ ಅದನ್ನು ಕೊಡದಿರುವುದಕ್ಕಾಗಿ ಅವರು ಹೇವಗೊಂಡಿದ್ದಾರೆ. ಇಂದಲ್ಲ ನಾಳೆಯಾದರೂ ತಾವು ತಮ್ಮ ನೆರೆಯ ರಾಷ್ಟ್ರಗಳಂತೆ ಸ್ವತಂತ್ರರಾಗುತ್ತೇವೆಂದು ನಚ್ಚಿನ ದೃಢ ಸಂಕಲ್ಪರಾಗಿದ್ದಾರೆ.

ಇನ್ನೂ ಕೆಲವು ಕಾರಣಗಳು ಫ್ರಾನ್ಸಿಗೆ ಆಲ್ಜೀರಿಯಾವನ್ನು ಬಿಟ್ಟುಕೊಡಲು ಅಡ್ಡಿಯಾಗಿವೆ. (i) ಫ್ರೆಂಚರದೂ ಒಂದು ಸಾಮ್ರಾಜ್ಯವೆಂಬ ಅಭಿಮಾನವನ್ನು ಕಡೆಗೆ ಉಳಿಸಿಕೊಳ್ಳೋಣ ಎಂಬುದೊಂದು. ಅದು ಅವರ ಯೂರೋಪಿಯನ್ ಪ್ರತಿಷ್ಠೆಗೆ ಒಂದು ಊರೆ. ಅದಕ್ಕಾಗಿ ಲಕ್ಷಾಂತರ ಸೈನ್ಯವನ್ನು ಈವರೆಗೆ ಬಲಿಕೊಟ್ಟಿದ್ದಾರೆ. ಒಂದೂವರೆ ಲಕ್ಷಕ್ಕೆ ಮೇಲ್ಪಟ್ಟ ಸೈನ್ಯ ಇಂದೂ ಈ ಕೆಲಸದಲ್ಲಿ ಪ್ರವೃತ್ತವಾಗಿದೆ. ನಿನ್ನೆ ಮೊನ್ನೆಯವರೆಗೂ ದೇಶ ದಿವಾಳಿಯಾಗುವಷ್ಟು ಮಟ್ಟಿಗೆ ಅದಕ್ಕಾಗಿ ಹಣ ವೆಚ್ಚ ಮಾಡಬೇಕಾಯಿತು. ನೇಟೋ ಮಂಡಲಿಯಲ್ಲಿ ತಾನಿಡಬೇಕಾಗಿದ್ದಷ್ಟನ್ನೂ ಜರ್ಮನಿಯ ಆಕ್ರಮಣದಲ್ಲಿ ತಾನು ಉಳಿಸಬೇಕಾಗಿದ್ದಷ್ಟನ್ನೂ ಸೈನ್ಯಭಾಗವನ್ನೆಲ್ಲಾ ಆಲ್ಜೀರಿಯಾದ ನಿಗ್ರಹಣದಲ್ಲಿ ತೊಡಗಿಸಿ ಸ್ವತಂತ್ರ ಪ್ರಜಾಸರ್ಕಾರಗಳಾದ ಇಂಗ್ಲೆಂಡ್, ಅಮೆರಿಕಾ ಮುಂತಾದ ರಾಷ್ಟ್ರಗಳ ಆಕ್ಷೇಪಣೆಗೂ ಟೀಕೆಗೂ ಒಳಗಾಯಿತು. ಕಮ್ಯುನಿಸ್ಟರ ತಿರಸ್ಕಾರಕ್ಕೂ ಆರಬ್ ಗಣರಾಷ್ಟ್ರಗಳ ದ್ವೇಷಕ್ಕೂ ಈಡಾಯಿತು. ಇಷ್ಟು ಕಷ್ಟ ನಷ್ಟ ಪಟ್ಟದ್ದನ್ನು ಉಳಿಸಿಕೊಳ್ಳದಾದರೆ ಹೇಗೆ?

(ii) ಫ್ರೆಂಚ್ ಸಹಾರಾದಲ್ಲಿ ಅಮಿತವಾದ ಪೆಟ್ರೋಲ್, ಗ್ಯಾಸ್, ಕಬ್ಬಿಣ, ತಾಮ್ರ ಮುಂತಾದವನ್ನು ಸಂಗ್ರಹಿಸಲೂ ಫ್ರಾನ್ಸಿನ ಸಂಪತ್ತನ್ನು ಹೆಚ್ಚಿಸಲೂ ಅವಕಾಶವಿದೆ. ಅದಕ್ಕೆ ಆಲ್ಜೀರಿಯಾ ಬೇಕು.

(iii) ರಾಜಕೀಯ ಪಂಗಡಗಳ ಅಸ್ತಿಮಿತತೆ, ಅವರನ್ನು ಕಂಡರೆ ಫ್ರಾನ್ಸಿನ ಸೈನ್ಯಕ್ಕಿರುವ ತಿರಸ್ಕಾರ ಇನ್ನೊಂದು ಕಾರಣ. ಇವುಗಳ ಫಲವಾಗಿ ಫ್ರೆಂಚ್ ಸೈನ್ಯವರ್ಗಕ್ಕೆ ಇರುವ ಮೇಲ್ಗೈ ಸ್ಥಿತಿ. ಈ ಸಂಗತಿ ಫ್ರಾನ್ಸಿನ ರಾಷ್ಟ್ರಜೀವನ, ಆಲ್ಜೀರಿಯಾದ ಆಗು ಹೋಗುಗಳು ಎರಡನ್ನೂ ನಿರ್ಧರಿಸಲಿದೆ.

ಬಹುಮತದಲ್ಲಿದ್ದ ಕಮ್ಯುನಿಸ್ಟ್ ಪಕ್ಷವನ್ನು ತಡೆದಿಡಬೇಕೆಂದು ಇತರ ಎಲ್ಲಾ ರಾಜಕೀಯ ಪಕ್ಷಗಳೂ ಹಾಗೆ ಹೀಗೆ ಸೇರಿಕೊಂಡು 10-13 ವರ್ಷಗಳ ಕಾಲ ಫ್ರಾನ್ಸಿನಲ್ಲಿ ಆಳಿಕೆ ನಡಸಿದವು. ಸಂತತವಾಗಿ ಮಾರ್ಪಡುತ್ತಿದ್ದ ಈ ಪಕ್ಷಗಳ ಸ್ಪರ್ಧೆಯಿಂದ ಫ್ರಾನ್ಸ್ ಸರ್ಕಾರ ಅಸ್ತಿಮಿತವಾಯಿತು. ಅದು ಪೂರ್ತಿ ಮುರಿದು ಬೀಳದ್ದಕ್ಕೆ ಅಲ್ಲಿನ ಆಡಳಿತ ವರ್ಗದ ದಕ್ಷತೆಯೂ ಅಲ್ಲಿನ ಪ್ರೆಸಿಡೆಂಟರೂ ಕಾರಣ. ಅಲ್ಲಿನ ಮಂತ್ರಿ ವರ್ಗಗಳು ತಿಂಗಳಿಗೆ, ವರ್ಷಕ್ಕೆ ಬದಲಾಗುತ್ತಿದ್ದರೂ ಆ ತಳಮಳವೆಲ್ಲ ಪ್ಯಾರಿಸ್ಸಿಗೂ ಆಳುವ ವರ್ಗಗಳಿಗೂ ಮಾತ್ರ ಮಿತವಾದ್ದು. ಒಟ್ಟು ರಾಷ್ಟ್ರದ ಜೀವನವನ್ನು ಅದು ಹೆಚ್ಚಾಗಿ ಕೆಡಿಸದ್ದು. ರಾಜಕೀಯದವರನ್ನು ಕಂಡು ಸೈನ್ಯಕ್ಕೆ ತಿರಸ್ಕಾರ ಹುಟ್ಟಿದುದು ಸ್ವಾಭಾವಿಕ.

ಯುದ್ಧಕಾಲದಲ್ಲಿ ಸೈನ್ಯದ ನಾಯಕರಾದ ಮಾರ್ಷಲ್ ಪೇತಾ ಅಧ್ಯಕ್ಷರಾಗಿದ್ದರು. ಯುದ್ಧ ಮುಗಿದು ಜರ್ಮನರನ್ನು ಓಡಿಸಿದ ಮೇಲೆ ಅವರನ್ನು ಕೈ ಸೆರೆ ತೆಗೆದುಕೊಂಡು ಫ್ರಾನ್ಸಿಗೆ ಸ್ವತಂತ್ರ ಸರ್ಕಾರವನ್ನು ಜನರಲ್ ಡಿಗಾಲ್ ತಂದು ಕೊಟ್ಟರು. ಆ ವರೆಗೂ ಸ್ವತಂತ್ರ ಫ್ರಾನ್ಸಿನ ಪ್ರತಿನಿಧಿ ಸರ್ಕಾರವೊಂದನ್ನು ಇಂಗ್ಲಂಡಿನಲ್ಲಿ ಸಾಂಕೇತಿಕವಾಗಿ ನಡಸುತ್ತಿದ್ದವರೂ ಯುದ್ಧಕಾಲದಲ್ಲಿ ಹೆಸರಾದ ಇತರ ಸೈನ್ಯ ನಾಯಕರೂ ಡಿಗಾಲರೊಡನೆ ಪುನಃ ಫ್ರೆಂಚ್ ಸೈನ್ಯಕ್ಕೆ ಬಂದರು; ಅಧಿಕಾರಸ್ಥಾನ ಪಡೆದರು. 1958ರಲ್ಲಿ ರಾಜಕೀಯ ಪಕ್ಷಗಳವರು ನಡಸುತ್ತಿದ್ದ ಸರ್ಕಾರ ಕ್ರಮ ಮುರಿದುಬಿದ್ದಾಗ, ಖಾಸಗಿ ಪ್ರಜೆಯಾಗಿ ಆವರೆಗೂ ಇದ್ದ ಡಿಗಾಲರೇ ದೇಶವನ್ನು ಉದ್ಧಾರ ಮಾಡುವುದಕ್ಕಾಗಿ ಅಧ್ಯಕ್ಷರಾಗಿ ಆಯ್ಕೆಯಾದರು. ಆಯ್ದವರು ಆಲ್ಜೀರಿಯಾದ ಸೈನ್ಯವರ್ಗ. ಮೇ 1958ರಲ್ಲಿ ಆಲ್ಜೀರಿಯನ್ ರಾಜಕೀಯ ನೀತಿಗೆ ವಿರೋಧವಾಗಿ ಸೈನ್ಯದ ನಾಯಕರು ದಂಗೆ ಎದ್ದು ಅವರೂ, ಫ್ರಾನ್ಸಿನ ಸೈನ್ಯಾಧಿಕಾರಿಗಳೂ ತಾವು ಮೆಚ್ಚಿದ ಜ॥ ಡಿಗಾಲರನ್ನು ಅಧ್ಯಕ್ಷಸ್ಥಾನದಲ್ಲಿ ಸ್ಥಾಪಿಸಿದರು. ಫ್ರಾನ್ಸಿನ ರಾಜಕೀಯ ಸ್ತಿಮಿತವನ್ನು ಸಾಧಿಸಬೇಕೆಂದೂ ಯೂರೋಪಿನಲ್ಲಿಯೂ ಪ್ರಪಂಚದಲ್ಲಿಯೂ ಫ್ರಾನ್ಸಿನ ಹಿಂದಿನ ಪ್ರತಿಷ್ಠೆಯನ್ನು ಪುನಃ ಗಳಿಸಬೇಕೆಂದೂ ಅವರಿಗೆ ಆ ಕರ್ತವ್ಯ ವಹಿಸಿದರು. ಡಿಗಾಲರೂ ಸೈನ್ಯದವರೇ ಆದ್ದರಿಂದಲೂ ರಾಷ್ಟ್ರೋದ್ಧಾರಕರೆಂಬ ಕೀರ್ತಿ ಇದ್ದುದರಿಂದಲೂ ಅವರಿಗೆ ಎಲ್ಲ ವಿಧೇಯತೆಯನ್ನೂ ನೆರವನ್ನೂ ಭಕ್ತಿಯನ್ನೂ ಸಲ್ಲಿಸುವೆವೆಂದು ವಾಗ್ದಾನ ಮಾಡಿದರು. ಸೈನ್ಯದ ಈ ಕ್ರಿಯೆ ಶಾಸನಬದ್ಧವಲ್ಲ ನಿಜ. ಆದರೆ ಒಂದು ಕಡೆ ಅನಿವಾರ್ಯ; ಇನ್ನೊಂದು ಕಡೆ, ಇವರೊಬ್ಬರಿಂದಲೇ ರಾಷ್ಟ್ರದ ಮಂಗಳ ಸಾಧಿತವಾಗಬಲ್ಲದೆಂಬ ವಿಶ್ವಾಸ ಎಲ್ಲರಿಗೂ. ಆದ್ದರಿಂದಲೂ ದೇಶದ ಪಾರ್ಲಿಮೆಂಟ್ ತಾನೂ ಅವರ ಸರ್ವಾಧಿಕಾರವನ್ನು ಒಪ್ಪಿಕೊಂಡಿತು. ಅವರಿಗೆ ಬೇಕಾದಂತೆ ಹೊಸ ರಾಜ್ಯಾಂಗ ಶಾಸನ ರಚಿಸಲು ಅಧಿಕಾರ ಕೊಟ್ಟಿತು. ಸೈನ್ಯ ಸಾಧಿಸಿದ ಅಕ್ರಮವನ್ನು ಪಾರ್ಲಿಮೆಂಟ್ ಶಾಸನಬದ್ಧವಾಗಿ ಮಾಡಿ ಮುಂದುವರಿಯಲು ನಿರ್ಣಯವಾಯಿತು.

ಜ॥ ಡಿಗಾಲರು ಒಡನೆಯೇ ತಮ್ಮ ಕಾರ್ಯದಲ್ಲಿ ತೊಡಗಿದರು. ದೇಶದ ಸ್ಥಾನಮಾನ, ಆರ್ಥಿಕ ಭದ್ರತೆ ಮುಂತಾದುವನ್ನು ಫ್ರಾನ್ಸಿನಲ್ಲಿ ಸ್ಥಾಪಿಸಿದರು. ನೇಟೋದಲ್ಲಿ, ಯೂರೋಪಿನ ರಾಜಕೀಯ ವ್ಯವಹಾರದಲ್ಲಿ, ರಷ್ಯನರೊಡನೆ ಸಂಧಾನದಲ್ಲಿ ಫ್ರಾನ್ಸಿನ ಸಮಾನತೆ ಸ್ಥಾಪಿಸಿದರು. ಎಲ್ಲಿಯವರೆಗೂ ಫ್ರಾನ್ಸ್ ಜರ್ಮನಿ ಹಗೆಯೊ ಆವರೆಗೂ ಯೂರೋಪಿನಲ್ಲಿ ಪಶ್ಚಿಮ ರಾಷ್ಟ್ರಗಳವರು ಶಕ್ತರಾಗರು, ಯೂರೋಪಿನಲ್ಲಿ ಶಾಂತಿ ನೆಲಸದು ಎಂದು, ಜರ್ಮನಿಯ ಆಡೆನೊವರೊಡನೆ ಒಡಂಬಡಿಕೆ ಮಾಡಿಕೊಂಡರು. ಯೂರೋಪಿನಲ್ಲಿ ಆರು ರಾಷ್ಟ್ರಗಳ ಮಿತ್ರಮಂಡಲಿಯನ್ನು ಸ್ಥಾಪಿಸಿ ಒಂದು ಬಗೆಯ ಯೂರೋಪಿಯನ್ ಆರ್ಥಿಕ ಸಂಘಟನೆಯನ್ನು ರಚಿಸಿದರು. ಪಾಶ್ಚಿಮಾತ್ಯ ಮಿತ್ರ ಮಂಡಲಿಯಲ್ಲಿ ಇಂಗ್ಲಂಡ್, ಅಮೇರಿಕದೊಡನೆ ಸಮಾನತೆ ಪಡೆದುಕೊಂಡರು. ಪ್ರಪಂಚವೆಲ್ಲ ಬೇಡವೆಂದರೂ ಕೇಳದೆ ಆಫ್ರಿಕದವರು ಯಾರ ಮಾತನ್ನೂ ವಿಶ್ಲೇಷಿಸಿ



ಸಹಾರಾದಲ್ಲಿ ಅಣುಸ್ಫೋಟನೆ ಮಾಡಿ ಫ್ರಾನ್ಸನ್ನು ಅಣುಶಕ್ತಿಯುಳ್ಳ ರಾಷ್ಟ್ರವಾಗಬಲ್ಲೆನೆಂಬ ಪ್ರತಿಷ್ಠೆಯನ್ನು ಸಂಪಾದಿಸಿದರು. ಮೇ ತಿಂಗಳಲ್ಲಿ ನಡೆದ ಶೃಂಗ ಸಮ್ಮೇಳನಕ್ಕೆ ಪ್ಯಾರಿಸ್ಸಿನಲ್ಲಿ ಆಶ್ರಯಕೊಟ್ಟು ಮ್ಯಾಕ್ಮಿಲನರಿಗಿಂತ ಒಂದು ಕೈ ಮೇಲಾಗಿ ಎಂಬಂತೆ ಸಂಧಾನಕಾರ್ಯ ಗೌರವ ಪಡೆದರು.

ಇವರು ಬಿಡಿಸಿದರೆ ಮಾತ್ರ ಆಲ್ಜೀರಿಯಾ ಸಿಕ್ಕು ಬಿಡುವುದು ಎಂಬುದು ಫ್ರಾನ್ಸಿನ ರಾಜಕೀಯ ವರ್ಗಗಳ ನಂಬಿಕೆ. ಸ್ವಾತಂತ್ರ್ಯಗಾಮಿಗಳಿಗೂ ಡಿಗಾಲರೊಬ್ಬರಲ್ಲಿ ಮಾತ್ರ ವಿಶ್ವಾಸವಿದೆ. ಸಂಧಾನ ಅವರೊಡನೆ ನಡೆಯದಾದರೆ ಸಂಧಾನವೇ ನಡೆದೀತೊ ಇಲ್ಲವೊ. ಇವರು ಸೈನ್ಯದ ಅಧಿಕಾರಿಗಳಾದುದರಿಂದ ಸೈನ್ಯದವರ ಆಯ್ಕೆಯಿಂದ ಮಾತ್ರ ಅಧ್ಯಕ್ಷರಾದವರು; ಈಗಲೂ ಸ್ಥಾಪಿತರಾಗಿರುವವರು; ಆದುದರಿಂದ ತಮ್ಮ ಇಷ್ಟಕ್ಕೆ ವಿರೋಧವಾಗಿ ನಡೆಯಲಾರರು ಎಂದು ಸೈನ್ಯದವರಿಗೆ ನಂಬಿಕೆ. ಹಾಗೆ ನಡೆಯದಿದ್ದರೆ ಇವರನ್ನು ಅಧ್ಯಕ್ಷರಾಗಿ ಉರುಳಿಸುವ ಪ್ರಭಾವ ತಮಗಿದೆ ಎಂಬಂತೆ ವರ್ತಿಸುತ್ತಿದ್ದಾರೆ. ಕೆಲವು ಮಂದಿ ಡಿಗಾಲ್ = ಮೆಂಡೇಸ್ ಎಂದು ಬರೆವವರೆಗೂ ಹೋಗಿದ್ದಾರೆ. ಜ॥ ಈಲ್ಯೆ, ಜ॥ ಝೂವ್, ಜ॥ ವೇಗಾಸ್ ಮುಂತಾದ ಪ್ರಖ್ಯಾತ ಸೇನಾಪತಿಗಳು ಸೈನ್ಯದವರಿಗೆ ಈ ಸಂಬಂಧದಲ್ಲಿ ತಾವು ಮುಂದಾಳುಗಳಾಗಿ ನಿಲ್ಲುವರೆಂಬಂತೆ ಮಾತಾಡಿದ್ದಾರೆ. ಹಿಂದೆ ಆಲ್ಜೀರಿಯಾಕ್ಕೆ ಗೌರ್ನರ್ ಜನರಲ್ ಆಗಿದ್ದ ಸುಸ್ತೇಲ್ ಸದ್ಯಕ್ಕೆ ಮರೆಯಲ್ಲಿ ದುರ್ಬಲರಾಗಿದ್ದರೂ ಮಾಸ್ಸೆ ಮುಂತಾದ ಪ್ಯಾರಚೂಟ್ ಸೈನ್ಯದ ನಾಯಕರು ಪ್ರಭಾವ ಕಳೆದುಕೊಂಡಿದ್ದರೂ ಬಹು ಕಷ್ಟಪಟ್ಟು ಸಂಪಾದಿಸಿರುವ ಆಲ್ಜೀರಿಯಾ ಪ್ರಾಬಲ್ಯವನ್ನು ಸೈನ್ಯ ತಾನು ಉಳಿಸಿಕೊಳ್ಳುತ್ತದೆ – ಡಿಗಾಲರನ್ನು ಬಲಾತ್ಕರಿಸಿ ಬೇಕಾದರೆ, ಎಂಬುದು ಅವರಿಗೆ ನಂಬಿಕೆ. ಈ ನಂಬಿಕೆಯ ರಕ್ಷಣೆಯಲ್ಲಿ ಫ್ರೆಂಚ್ ಆಲ್ಜೀರಿಯಾದ ವಸಾಹತುದಾರರಿದ್ದಾರೆ.

ಸೆಪ್ಟಂಬರ್ 16, 1958ರಲ್ಲಿ ಆಲ್ಜೀರಿಯಾ ಸಮಸ್ಯೆಯನ್ನು ನಾನು ಬಿಡಿಸಲಿದ್ದೇನೆ; ಇತರ ಫ್ರೆಂಚ್ ವಸಾಹತುಗಳಂತೆ ಅಲ್ಲಿಯ ಜನರೂ ಸ್ವರಾಜ್ಯ ಪಡೆಯಲು ಚುನಾವಣೆ ನಡೆಸಲಾಗುತ್ತದೆ; ದಂಗೆ, ದ್ವೇಷ ಬೇಡ; ಫರ್ಹಾತ್ ಅಬ್ಬಾಸರ ಕಡೆಯವರೂ ಕದನ, ದ್ವೇಷಗಳಿಗೆ ವಿರಾಮವೆಂದುಕೊಂಡು ತಮ್ಮ ಸೈನ್ಯಗಳನ್ನು ರದ್ದು ಮಾಡಿ, ಯುದ್ಧ ಸಾಮಗ್ರಿಗಳನ್ನು ಸರ್ಕಾರಕ್ಕೆ ಒಪ್ಪಿಸಿ ಸಂಧಾನಕ್ಕೆ ಬರುವುದಾದರೆ ಅವರೊಡನೆ ಒಂದು ಒಡಂಬಡಿಕೆಗೆ ತಾನು ಬರಲು ಸಿದ್ಧ ಎಂದರು. ಡಿಗಾಲ್ ಒಂದು ಕಡೆ ಅವರಲ್ಲಿ ವಿಶ್ವಾಸ; ಇನ್ನೊಂದು ಕಡೆ ಆರು ವರ್ಷ ಯುದ್ಧ ಮಾಡಿದ ಆಯಾಸ ಕಷ್ಟ ನಷ್ಟ ಮುಗಿಯಲಿ, ರಾಷ್ಟ್ರಾಭಿವೃದ್ಧಿ ಕಾರ್ಯದಲ್ಲಿ ತೊಡಗೋಣ ಎಂಬ ಆಸೆ; ಮೊರಾಕ್ಕೊ ಟ್ಯೂನಿಸ್ಸುಗಳ ಹಿತಕರ ಸಲಹೆ; ಈ ಉದಾರ ನಿಲವಿಗೆ ಇಂಗ್ಲಿಷ್, ಅಮೇರಿಕಾ ಕೊಟ್ಟ ಹರಕೆ ಎಲ್ಲವೂ ಸೇರಿ ಫರ್ಹಾತ್ ಅಬ್ಬಾಸರು ತಮ್ಮ ಉಗ್ರಪಂಥದವರ ಅಸಮಾಧಾನವನ್ನು ಪರಿಹಾರ ಮಾಡಿ ಒಪ್ಪಿಕೊಂಡರು. ಚೀಣ – ಈಜಿಪ್ಟ್‌ಗಳವರು

ಈ ಸಂಧಾನವನ್ನು ಒಪ್ಪತಕ್ಕದ್ದಲ್ಲವೆಂದರೂ ಲಕ್ಷಿಸಲಿಲ್ಲ. ಸಂಧಾನಕ್ಕೆ ಪೂರ್ವಭಾವಿಯಾದ ವಿಧಾನಗಳನ್ನು, ಕ್ರಮಗಳನ್ನು ಸಮಯಗಳನ್ನು ಗೊತ್ತುಮಾಡಲು ಇವರ (GPRS) ಮುಖ್ಯ ಪ್ರತಿನಿಧಿಯಾಗಿ ಅಹಮದ್ ಬೂಮ್ಮೆಯಿಲ್ ಅವರು ಫ್ರಾನ್ಸಿಗೆ ಈಚೆಗೆ ಹೋಗಿಬಂದರು.

ಸಂಧಾನ ಆಲ್ಜೀರಿಯಾದ ಸ್ವಾತಂತ್ರ್ಯದ ಪರವಾಗಿ ಆಗದಿರುವಂತೆ ಫ್ರಾನ್ಸಿನ ಒಳರಾಜಕೀಯದಲ್ಲಿ ಬಿಡೋ ಅವರ ಪಕ್ಷ ತೊಡಗಿದೆ. ಸೈನ್ಯದ ಅಧಿಕಾರಿಗಳ ದುಷ್ಪ್ರಭಾವಗಳಿಂದ ಡಿಗಾಲರು ತೆಗೆದುಹಾಕಿದ ಮಾಸ್ಸೆ ಸುಸ್ತೇಲ್ ವರ್ಗ ಪಿತೂರಿ ಮಾಡುತ್ತಿವೆ. ಡಿಗಾಲರ ಮಂತ್ರಿ ಮಂಡಲದಲ್ಲಿಯೇ ಯಾರು ಯಾರು ಪೂರ್ತಿ ಇದಕ್ಕೆ ಅನುಕೂಲರೊ ಖಚಿತವಿಲ್ಲ. 3-4 ಜನ ಜನರಲ್‌ಗಳು ಇದು ಆಗದಿರುವಂತೆ ಸೈನ್ಯಕ್ಕೂ ಆಲ್ಜೀರಿಯಾದ ವಲಸೆಗಾರರಿಗೂ ಧೈರ್ಯ ಕೊಡುತ್ತಿದ್ದಾರೆ. ಇತ್ತ ಸೈನ್ಯದವರಿಗೇ ಆಲ್ಜೀರಿಯಾ ಸ್ವಾತಂತ್ರ್ಯ ಇಷ್ಟವಿಲ್ಲ. ಇಂಡೋ-ಚೀಣದಲ್ಲಿ, ಸೂಯೆಜ್ ಕಾಲುವೆ ವ್ಯವಹಾರದಲ್ಲಿ, ಟ್ಯೂನಿಸ್ ಮೊರಾಕ್ಕನ್ನು ಒಪ್ಪಿಸುವುದರಲ್ಲಿ ರಾಜಕೀಯದವರು ತಮಗೆ ಅಪಮಾನ ಮಾಡಿದ್ದರೂ ಇಲ್ಲಿ ಆ ಅಪಮಾನ ನಡೆಯದಂತೆ ನೋಡಿಕೊಳ್ಳಬೇಕೆಂಬುದು ಅವರಲ್ಲಿ ಅನೇಕರಿಗೆ ಮನಸ್ಸು. ಅಲ್ಲದೆ ಸೈನ್ಯದ ಅಧಿಕಾರಿಗಳಲ್ಲಿ ಅನೇಕರು ಜನವರ್ಗದ ಎಲ್ಲ ಮಟ್ಟಗಳಲ್ಲಿಯೂ ಹರಡಿಕೊಂಡು ಉಪಾಧ್ಯಾಯರಾಗಿ, ಡಾಕ್ಟರುಗಳಾಗಿ, ಎಂಜಿನಿಯರುಗಳಾಗಿ, ಈ ಜನತೆ ತಮ್ಮದೆಂಬಂತೆ ಋಣಾನುಬಂಧ ಬೆಳಸಿಕೊಳ್ಳಲು ದುಡಿದಿದ್ದಾರೆ. ಅವರ ನೆರವಿಲ್ಲದೆ ಆಲ್ಜೀರಿಯಾದಲ್ಲಿ ಒಂದು ದಂಗೆ ನಡೆಯುವುದಿಲ್ಲ, ಊರ್ಜಿತವಾಗದು; ಒಂದು ಚುನಾವಣೆ ಸುಸೂತ್ರವಾಗಿ ನೆರವೇರುವ ಹಾಗಿಲ್ಲ. ಸೈನ್ಯದವರು ಎಷ್ಟು ಮಟ್ಟಿಗೆ ಡಿಗಾಲರಿಗೆ ಭಕ್ತಿ ವಿಶ್ವಾಸ ತೋರಿಸಿಯಾರು? ಎಲ್ಲಿಯವರೆಗೆ ಅವರ ಜೊತೆಗೆ ನಿಲ್ಲುತ್ತಾರೆ? ಅವರನ್ನು ಹದ್ದಿನಲ್ಲಿ, ವಿಶ್ವಾಸದಲ್ಲಿ ಇಟ್ಟುಕೊಳ್ಳುವ ಅಧ್ಯಕ್ಷರ ಕುಶಲತೆ ಎಷ್ಟು ? ಎಂಬುದರ ಮೇಲೆ ಆಲ್ಜೀರಿಯದ ಪ್ರಶ್ನೆ ಒಂದೇ ಅಲ್ಲ, ಡಿಗಾಲರ ಸ್ಥಾನಮಾನ ಭವಿಷ್ಯವೂ ಐದನೇ ರಿಪಬ್ಲಿಕನ್ ಸರ್ಕಾರ ಮತ್ತು ಫ್ರಾನ್ಸಿನ ಅದೃಷ್ಟಗಳೂ ಹೊಂದಿಕೊಂಡಿವೆ. ಅವರು ಅದೃಷ್ಟವಂತರು. ಅವರಿಗಿಂತ ಉತ್ತಮರಾದ ವ್ಯವಹಾರ ತಜ್ಞರೂ ಸೇನಾನಾಯಕರೂ ಸಾಹಸಿಗಳೂ ಇಲ್ಲವಾದ ಕಾಲದಲ್ಲಿ, ದೇಶದಲ್ಲಿ ಇಂಥ ಪರಿಸ್ಥಿತಿಯಲ್ಲಿ ಫ್ರಾನ್ಸಿನ ಕೀರ್ತಿಯನ್ನು ನಿಲ್ಲಿಸಿರುವ ಅವರು ಆಲ್ಜೀರಿಯದ ಸಮಸ್ಯೆಯನ್ನು ಪರಿಹಾರ ಮಾಡುವ ಕಾರ್ಯದಲ್ಲಿಯೂ ಕೃತಾರ್ಥರಾಗಲಿ ಎಂದು ಮಾತ್ರ ಲೋಕ ಹಾರೈಸಬಹುದು.

❑

# 9. ಕೇರಳದಲ್ಲಿ ಮುಂದಿನ ಚುನಾವಣೆಗಳು

ಫೆಬ್ರವರಿ ತಿಂಗಳಲ್ಲಿ ಕೇರಳದಲ್ಲಿ ಹೊಸ ಚುನಾವಣೆ ನಡೆಯಲಿದೆ. ಹೊಸತಾಗಿ ಯಾವ ಪಕ್ಷಕ್ಕೆ ಬಹುಮತ ಬರುವುದೆಂಬುದನ್ನು ಆ ರಾಜ್ಯದ ಅದೃಷ್ಟ ನಿರ್ಣಯಿಸಲಿದೆ. ತುಂಬಾ ವಿದ್ಯಾವಂತರನ್ನುಳ್ಳ, ಅಕ್ಷರತೆ ಬಹುವಾಗಿ ಹರಡಿರುವ, ಜಾಣರೂ ಕುಶಲ ಕರ್ಮಿಗಳೂ ದೊಡ್ಡ ಸಂಖ್ಯೆಯಲ್ಲಿ ಬೆಳೆದಿರುವ ರಾಜ್ಯ ಅದು. ಹಾಗೆಯೇ ಚದರ ಮೈಲಿಗೆ ಅತಿ ಹೆಚ್ಚಿನ ಜನಸಂದಣಿ ಇರುವ ಪ್ರಾಂತ. ಸರ್ವಪ್ರಕಾರದಲ್ಲಿಯೂ ಚಲನೆ ಚಟುವಟಿಕೆ ಹೆಚ್ಚಾಗಿ ಸಾಹಸದಿಂದ ಎಲ್ಲಿಗೆಂದರಲ್ಲಿಗೆ ಸಂಚಾರ ಮಾಡುವ ಬುದ್ಧಿ, ಚಮತ್ಕಾರ, ಜನವರ್ಗ ಇರುವ ಪ್ರಾಂತ. ಎಲ್ಲಿ ಬುದ್ಧಿವಂತರ ಸಂಖ್ಯೆ ಜಾಸ್ತಿಯೊ ಅಲ್ಲಿ ಏಕಮತ ದೊರೆಯುವುದು ಕಷ್ಟವೆಂಬುದಕ್ಕೆ ಕೇರಳವೂ ಒಂದು ದೊಡ್ಡ ಉದಾಹರಣೆ. ಆರ್ಥಿಕವಾಗಿ ಅದು ನಿರುದ್ಯೋಗ ಪ್ರಬಲಿಸಿರುವ ಪ್ರದೇಶವಾದುದ ರಿಂದ ಆರ್ಥಿಕ ಸಂತುಷ್ಟಿ ಹೆಚ್ಚುವವರೆಗೂ ಎಲ್ಲ ಜನರ ಕೈ ತುಂಬ ಕೆಲಸ ಇದ್ದ ಹೊರತೂ ವ್ಯವಹಾರದಲ್ಲಿ ಅರಾಜಕತೆಯ ಕಡೆ ಮನಸ್ಸು ಹೋಗುವಂಥ ಸನ್ನಿವೇಶ ಅಂಥಲ್ಲಿ ಬೆಳೆಯುವುದು ಸುಲಭ. ಆದರೆ ಜನದ ಬುದ್ಧಿ ಚುರುಕಾಗಿರುವುದರಿಂದಲೂ ಯಾವುದಕ್ಕೆಂದರೆ ಅದಕ್ಕೆ ಹೊಂದಬಲ್ಲ ಮನಸ್ಸು ಇರುವುದರಿಂದಲೂ ಆ ಮನಸ್ಸನ್ನೂ ಸನ್ನಿವೇಶವನ್ನೂ ತಮ್ಮ ತಮ್ಮ ಪ್ರಯೋಜನಕ್ಕೆ ತಿರುಗಿಸಿಕೊಳ್ಳುವ ದುಡಿಸಿಕೊಳ್ಳುವ ಅವಕಾಶವೂ ಅಲ್ಲಿ ಹೆಚ್ಚಾಗಿದೆ. ರಾಜಕೀಯ ಪ್ರಭಾವಗಳಲ್ಲಿ ಯಾವ ಪಕ್ಷದ್ದು ಈ ಸಲ ಪುನಃ ಪ್ರಧಾನತೆ ಗಳಿಸುವುದು ಎಂಬುದು ಬಹು ಮುಖ್ಯ ಸಂಗತಿ.

ಚುನಾವಣೆಯಲ್ಲಿ ಗೆದ್ದು ಅಧಿಕಾರಕ್ಕೆ ಬರಲಿರುವ ಪಕ್ಷಗಳು ಕಾಂಗ್ರೆಸ್, ಪ್ರಜಾಸೋಷಲಿಸ್ಟ್ ಪಕ್ಷ, ಮುಸ್ಲಿಂ ಲೀಗ್ ಮತ್ತು ಕಮ್ಯುನಿಸ್ಟ್ ಪಕ್ಷ. ಇನ್ನೊಂದು ರ‍್ಯಾಡಿಕಲ್ ಸೋಷಲಿಸ್ಟ್ ಪಕ್ಷ. ಇವುಗಳಲ್ಲಿ ಸದ್ಯಕ್ಕೆ ಕಾಂಗ್ರೆಸ್, ಪಿ.ಎಸ್.ಪಿ., ಮತ್ತು ಮುಸ್ಲಿಂ ಲೀಗಿನವರು ಮೂವರೂ ಸೇರಿ ಚುನಾವಣೆಯಲ್ಲಿ ಕಮ್ಯುನಿಸ್ಟರನ್ನು ಎದುರಿಸಬೇಕೆಂದು ಒಂದು ಒಡಂಬಡಿಕೆ ಮಾಡಿಕೊಂಡಿದ್ದಾರೆ. ಒಟ್ಟಿಗೆ ಈ ಸಮ್ಮಿಳಿತ ಪಕ್ಷ ಗೆಲ್ಲುವುದಕ್ಕೆ, ಎಂದರೆ ಇವರು ನೇಮಿಸಿದ ಪ್ರತಿನಿಧಿಗಳೇ ಜನರಿಂದ ಚುನಾಯಿತರಾಗಲು, ಏರ್ಪಾಡು ನಡೆದಿವೆ. ಈ ಸಂಯುಕ್ತ ಪಕ್ಷ ಅಧಿಕಾರಕ್ಕೆ ಬಂದರೆ ಯಾವ ಯಾವ ಪಕ್ಷದಿಂದ ಅಧಿಕಾರದಲ್ಲಿ ಎಷ್ಟೆಷ್ಟು ಪ್ರಮಾಣದ ಪ್ರಯೋಜನ

ದೊರೆಯುವುದೆಂದು ಮಾತುಕತೆ, ನಿರ್ಣಯ ಮೊದಲೇ ನಡೆದಿವೆ. ಇವುಗಳ ಜೊತೆಗೆ ಆರ್.ಎಸ್.ಪಿ.ಯನ್ನು ಸೇರಿಸಿಕೊಂಡಿದ್ದರೆ ಇನ್ನೂ ಚೆನ್ನಾಗಿತ್ತು. ಅವರಿಗೆ ಒಪ್ಪುವಷ್ಟು ಸ್ಥಾನಮಾನ ದೊರಕಿಸಿಕೊಡಲಾಗಲಿಲ್ಲವೆಂಬ ಕಾರಣದಿಂದ ಅವರು ಬೇರೆ ಉಳಿಯುವಂತಾದರು. ಇದು ದುರದೃಷ್ಟಕರ ಸಂಗತಿ. ಏಕೆಂದರೆ, ಕೇರಳದಲ್ಲಿ ಕಮ್ಯುನಿಸ್ಟ್ ಪಕ್ಷ ಪ್ರಬಲವಾಗಿದೆ. ಅದಕ್ಕೆ ಎದಿರಾಗಿ ಸಮ್ಮಿಳನವಾದ ಒಂದೇ ಪಕ್ಷ ನಿಂತಲ್ಲದೆ ಅದನ್ನು ಸೋಲಿಸುವುದು ಕಷ್ಟ. ಮೂರನೆಯದಾದ ಇನ್ನೊಂದು ಪಕ್ಷ ತನ್ನ ಅಭ್ಯರ್ಥಿಗಳನ್ನು ಚುನಾವಣೆಗೆ ನಿಲ್ಲಿಸಿದರೆ ವೋಟುಗಳು ಇನ್ನಷ್ಟು ಒಡೆದು ಹೋದಾವು. ಒಬ್ಬರಿಗೆ ಬರದಿರುವುದು, ಮೂರನೆಯವರಿಗೆ ಬರುವುದು, ಇನ್ನೊಬ್ಬರಿಗೆ ಸಹಾಯವೊ ನಷ್ಟವೊ ಆದೀತು. ಈ ಮೂರು ಮೂಲೆಯ ಹೋರಾಟ ತಪ್ಪಿದ್ದಿದ್ದರೆ ಚೆನ್ನಾಗಿತ್ತು.

ಜೊತೆಗೆ ಸ್ವತಂತ್ರರೆಂಬ ಜನ (Independents) ಹಲವರು ಚುನಾವಣೆಗೆ ನಿಂತಿರುವುದುಂಟು. ಪ್ರಕಟವಾಗಿ ಕಮ್ಯುನಿಸ್ಟ್ ಪಕ್ಷಕ್ಕೆ ಕೇವಲ ಅನುಕೂಲವಾಗಿರುವವರು ಅವರಲ್ಲಿ ಹಲವರು. ಇನ್ನು ಕೆಲವರು ಹಾಗೂ ಹೀಗೂ ಇರುವವರು. ಯಾವ ಕಡೆಯೂ ಇಲ್ಲದೆ ತಮ್ಮಿಷ್ಟ ಬಂದಂತೆ ಶಾಸನ ಸಭೆಯಲ್ಲಿ ವರ್ತಿಸುವವರು. ವೋಟರುಗಳಲ್ಲಿ ಅವರು ಗೆಲ್ಲುವಾಗ ಸೋಲುವಾಗ ಇನ್ನಷ್ಟು ದೊಡ್ಡ ಸಂಖ್ಯೆಯ ವೋಟುಗಳ ಬಲವನ್ನು ಒಡೆಯುವರು; ಹೀರಿ, ಚೆದರಿಸುವರು. ಮುಖ್ಯ ಪಕ್ಷಗಳಿಂದ ಅಷ್ಟು ಸಂಖ್ಯೆ ಪುನಃ ವಿಕಿರಣವಾಗುವುದು. ಸ್ವತಂತ್ರರು ಎಷ್ಟು ಬುದ್ಧಿವಂತರಿರಲಿ, ಎಷ್ಟೇ ಯೋಗ್ಯರಿರಲಿ, ಒಂಟಿಯಾಗಿ ನಿಂತು ಶಾಸನಸಭೆಗಳಲ್ಲಿ ಹೆಚ್ಚು ಪ್ರಾಧಾನ್ಯವನ್ನು ಪಡೆಯಲಾರರು. ಅವರ ಅಭಿಮತ ಅನಿಶ್ಚಯವಾದ್ದು. ಶಾಸನಾದಿಗಳ ಸಂಬಂಧದಲ್ಲಿಯೂ ಟೀಕೆಯ ವಿಷಯದಲ್ಲಿಯೂ ಅವರ ಅನುಭವದ ಆಳ ವಿಸ್ತಾರ, ಅಭಿಪ್ರಾಯ ಗೌರವ, ವಿವೇಚನೆಯ ಸೂಕ್ಷ್ಮತೆ ತುಂಬಾ ಸಹಾಯಕವಾಗಿ ಉಪಕಾರಕವಾಗಬಲ್ಲದು. ಅವರೂ ಧರ್ಮಿಷ್ಠರಾಗಿರಬಹುದು. ಆದರೆ ವೋಟೆನ್ನುವ ಕಾಲದಲ್ಲಿ ಅವರ ನಿಲವಿನ ಅನಿಶ್ಚಿತತೆ, ಪಕ್ಷ ಪ್ರಭಾವಗಳು ಕಾರ್ಯಕಾರಿಯಾಗ ಬೇಕಾಗಿರುವಾಗ ಸ್ಥಿತಿಯನ್ನು ಸಡಿಲಗೊಳಿಸುತ್ತದೆ, ದುರ್ಬಲಗೊಳಿಸುತ್ತದೆ. ಕೇರಳದಂಥ ಸಣ್ಣ ಗಾತ್ರದ ರಾಜ್ಯದಲ್ಲಿ ಶಾಸನ ಮಂಡಲದ ಸ್ಥಾನಗಳಿಗಾಗಿ ಅಲ್ಲಿ ಸದ್ಯಕ್ಕೆ ನಿಂತಿರುವಷ್ಟು ಸ್ವತಂತ್ರರ ಸಂಖ್ಯೆ ಅತಿ ಹೆಚ್ಚೆನಿಸುತ್ತದೆ. ಆದರೆ ಅದನ್ನು ಕಂಡು ನಾವು ಇಲ್ಲಿ ವಿಷಾದಪಟ್ಟು ಫಲವೇನು? ರಾಜಕೀಯದ ಕೃಪಣತೆಗಳ ಸ್ವರೂಪವೇ ಹಾಗೆ.

ಕಮ್ಯುನಿಸ್ಟರು ಒಂದು ಕಡೆ, ಸಂಯುಕ್ತ ಕಾಂಗ್ರೆಸ್, ಪಿ.ಎಸ್.ಪಿ., ಮುಸ್ಲಿಂ ಲೀಗ್ ಇನ್ನೊಂದು ಕಡೆ - ತಮಗೇ ಜಯವಾಗುವುದೆಂದು ಹೇಳುತ್ತಿದ್ದಾರೆ. ಕಮ್ಯುನಿಸ್ಟ್ ಪಕ್ಷ ಭದ್ರವಾದ, ಸುಸಂಘಟಿತವಾದ, ತುಂಬಾ ಶಿಸ್ತಿನಿಂದ ವರ್ತಿಸುವ ಪಕ್ಷ. ಅದಕ್ಕೆ ಒಂದು ಮನಸ್ಸು, ಒಂದು ಕೊರಲು, ಒಂದು ನಿಶ್ಚಿತವಾದ ದಾರಿ.



ವ್ಯವಹಾರದಲ್ಲಿಯೂ ಪಕ್ಷದ ನಾಯಕರು ಹೇಳಿದಂತೆ ನಡೆಯುತ್ತಾರೆ. ಗೆರೆಯನ್ನು ದಾಟುವುದಿಲ್ಲ. ರಾಜ್ಯದ ಕಮ್ಯುನಿಸ್ಟ್ ಪಕ್ಷ ಅಖಿಲ ಭಾರತ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಆಡಳಿತ ಸಂಸ್ಥೆ ನಿರ್ಣಯಿಸಿದಂತೆ ನಡೆಯುತ್ತದೆ. ಅಲ್ಲಿಯೂ ಒಳಗೆ ಅಭಿಪ್ರಾಯ ಭಿನ್ನತೆ ಇದ್ದಾಗಲೂ ಅದರ ಶಿಸ್ತು, ನಡತೆ, ಅಪ್ಪಣೆ ಅಖಂಡವಾಗಿರುತ್ತವೆ. ಅದು ಮಾಸ್ಕೊ ಕಡೆ ತಿರುಗಿ ತನ್ನ ರೀತಿ ನೀತಿಗಳನ್ನು ಸಿದ್ಧಪಡಿಸಿಕೊಳ್ಳುತ್ತಿರುತ್ತದೆ. (ನೆಹ್ರು ಅವರ ರಾಜನೀತಿ ನಿಪುಣತೆಯಿಂದ ನಾವೂ ಸೋವಿಯಟ್ ರಷ್ಯಾವೂ ಸ್ನೇಹಿತರಾಗಿರುವುದರಿಂದ, ಈ ನಾಡಿನಲ್ಲಿ ಕಮ್ಯುನಿಸ್ಟರ ಕೀಟಲೆ, ಕಿರುಕುಳ ಸದ್ಯ ಅಡಗಿದೆ. ಇಲ್ಲವಾಗಿದ್ದರೆ ವೈಕೃತಿಯನ್ನು ನೋಡಬಹುದಾಗಿತ್ತು.)

ಕಮ್ಯುನಿಸ್ಟ್ ಪಕ್ಷ ಒಂದು ರೀತಿ ದಕ್ಷವಾಗಿ ಆಳಿತು. ವಿರೋಧ ಪಕ್ಷಗಳ ದೌರ್ಬಲ್ಯವನ್ನೂ ಒಡಕುಗಳನ್ನೂ ತನ್ನ ಪ್ರಯೋಜನಕ್ಕೆ ದುಡಿಸಿಕೊಂಡಿತು. ಅವುಗಳ ಒಡಕುಗಳನ್ನು ಹೆಚ್ಚಿಸಿತು. ಪ್ರತಿ ಹಳ್ಳಿಯಲ್ಲಿಯೂ ತನ್ನ ಅಂಗ ಸಂಸ್ಥೆಗಳನ್ನು ಸ್ಥಾಪಿಸಿ ತನ್ನ ಪ್ರಭಾವವನ್ನು ಸ್ಥಾಪಿಸಿಕೊಂಡು, ಭೀತಿ ಲಾಭಗಳ ವಿತರಣೆಯಿಂದ ಹಳ್ಳಿ ಹಳ್ಳಿಯನ್ನೂ ತನಗೆ ಅನುಕೂಲ ಮಾಡಿಕೊಳ್ಳಲು ಪ್ರಯತ್ನಿಸಿದೆ. ಅಲ್ಲದೆ ಬಡತನದಲ್ಲಿರುವ ಪ್ರಾಥಮಿಕ ಪಾಠಶಾಲೆಯ ಎಲ್ಲ ಉಪಾಧ್ಯಾಯರನ್ನೂ ತನ್ನ ಕಡೆಗೆ ತಿರುಗಿಸಿಕೊಂಡಿದೆ ಎಂಬ ಸುದ್ದಿ ಅದರ ಪ್ರಭಾವ ಎಷ್ಟು ಹೆಚ್ಚಿನದಾಗಬಲ್ಲದೆಂಬುದನ್ನು ತೋರಿಸುತ್ತದೆ. ಜೊತೆಗೆ ಎಜವರ್ ಎಂಬ ದೊಡ್ಡ ಸಂಖ್ಯೆಯ ಜನವರ್ಗವನ್ನು ತನ್ನ ಕಡೆಗೆ ಮಾಡಿಕೊಂಡಿದೆ. ನಾಯರ್ ಪಂಗಡಕ್ಕೂ ಎಜವರ್ ಪಂಗಡಕ್ಕೂ ಇರುವ ಸಾಮಾಜಿಕ ವೈಮನಸ್ಯವೆಲ್ಲಾ ಎಜವರ್ ವಿಶ್ವಾಸವನ್ನು ಕಮ್ಯುನಿಸ್ಟ್ ಪಕ್ಷದ ಕಡೆಗೆ ತಿರುಗಿಸಿದೆ. ದಲಿತವರ್ಗಕ್ಕೆ ಕಮ್ಯುನಿಸ್ಟ್ ಬಂಧು. ಉಳಿದವರೆಲ್ಲ ತಮ್ಮನ್ನು ದುಡಿಸುವವರು, ಶೋಷಿಸುವವರು. ದುರ್ಬಲರಿಗೆ, ನಿರ್ಗತಿಕರಿಗೆ ಕಮ್ಯುನಿಸ್ಟ್ ಪಕ್ಷ ಒಂದು ಬಂಧು ಎಂಬಂತೆ ಕೂಗು, ನಡತೆ, ಕ್ರಿಯಾಪ್ರಕಾರ, ಪಕ್ಷಪಾತಗಳನ್ನು ಆ ಪಕ್ಷ ಈವರೆಗೆ ಬೆಳಸಿದೆ. ಇದರ ಜೊತೆಗೆ ಕಾಮಗಾರರಲ್ಲಿ ಬಹುಭಾಗದವರನ್ನು ಕಮ್ಯುನಿಸ್ಟ್ ಪಾಲಿನ ಎಲ್ಲಿನಂತೆಯೇ ಇಲ್ಲಿಯೂ ತನ್ನ ಕೈಯಲ್ಲಿಟ್ಟುಕೊಂಡಿದೆ. ನಂಬೂದರಿಪಾಡ್‌ರಂಥ ಬುದ್ಧಿವಂತರೂ ದಕ್ಷರೂ ಮುಂದಾಳಾಗಿ ನಿಂತ ಆ ಪಕ್ಷ ಭಾರತದ ರಾಜ್ಯಾಂಗವನ್ನು ಅಕ್ಷರಶಃ ಮೀರದಂತೆ ನಡಸಿ, ಕಮ್ಯುನಿಸ್ಟ್ ಪಕ್ಷಪ್ರಯೋಜನವನ್ನೇ ಪ್ರಚಾರ ಸಫಲತೆಯನ್ನೇ ಸಂಪಾದಿಸಿದೆ. ತೆಂಗಿನ ಜುಂಜಿನ ಕೆಲಸಗಾರರೂ, ಹೆಂಡ ಇಳಿಸುವವರೂ, ಈಡಿಗರೂ, ದೋಣಿ ನಡಸುವವರೂ ಆ ಪಕ್ಷಕ್ಕೆ ನೆರವಾಗಿದ್ದಾರೆ. ಒಡೆಯರೂ ನ್ಯಾಯವಾಗಿ ವರ್ಷವೆಲ್ಲ ಬೆಳೆ ಬೆಳೆದವರೂ ಬೆಳೆದುದನ್ನು ಫಲಗಾಲದಲ್ಲಿ ತಮ್ಮ ಪ್ರಯೋಜನಕ್ಕೆ ಕತ್ತರಿಸಿಕೊಳ್ಳುವ ಪುಂಡರ ಮಹಾವರ್ಗವೂ ಆ ಕಡೆಗೇ ಇದೆ ಎಂದರೆ ಪ್ರಯೋಜನಾಂಶದ ಬಹುಭಾಗ ಕಮ್ಯುನಿಸ್ಟ್ ಪಕ್ಷಕ್ಕೆ ನೆರವಾಗಿದೆ. ಆದ್ದರಿಂದ ಅದು ಬಲವಾಗಿದೆ.

ಇದರ ಜೊತೆಗೆ ರೋಮನ್ ಕ್ಯಾಥೊಲಿಕ್ ಪ್ರಭಾವ ಅತಿಶಯವಾಗಿ ಬೆಳೆದಿರುವ ಕೇರಳ ಪ್ರದೇಶದಲ್ಲಿ ಅವರಿಗೆ ವಿರೋಧವಾದ ಎಲ್ಲ ಶಕ್ತಿಗಳನ್ನೂ ಬಲಿಸಿ, ಅವರ ದರ್ಪವನ್ನು ಮುರಿಯುವ ಸಾಹಸಗಳೆಲ್ಲಾ ಕಮ್ಯುನಿಸ್ಟ್ ಕಡೆಗೆ ಕೆಲಸಮಾಡುತ್ತಿವೆ. ಇಷ್ಟು ಕಾಲದವರೆಗೂ ಉಳಿದ ಭಾರತೀಯರಿಗಿಂತ ತಾವು ಬೇರೆ, ಮೇಲು ಎಂಬಂತೆ ಕ್ರಿಯಾವ್ಯಾಪಾರವನ್ನೂ ದರ್ಪ ಪ್ರಭಾವಗಳನ್ನೂ ಅವರು ಬೆಳಸಿದ್ದರು. ಕ್ಯಾಥೊಲಿಕ್ ಜನರೂ ಮಠಗಳೂ ಕಾಲ ಮೀರಿದ ವೇಳೆಯಲ್ಲಿ ಕಣ್ಣು ತೆರೆದಂತೆ ಅನುಭವ ಪಡೆಯುತ್ತಿದ್ದಾರೆ.

ಕೇರಳದಲ್ಲಿ ತಿರುವಾಂಕೂರು, ಕೊಚ್ಚಿ ಮುಂತಾದ ದೇಶೀಯ ರಾಷ್ಟ್ರಗಳಿಗೆ ಸೇರಿದ ಭಾಗಗಳಿವೆ. ಉತ್ತರಕ್ಕೆ ಉತ್ತರ ಮಲಬಾರ್ ಎಂಬ ಬ್ರಿಟಿಷ್ ಇಂಡಿಯಾದ ಆಳಿಕೆಯಲ್ಲಿ ಹಿಂದೆ ಬೆಳೆದ ಭಾಗವಿದೆ. ದೇಶೀಯ ಸಂಸ್ಥಾನಗಳಲ್ಲಿ ಅಸೂಯೆಗಳೂ ಅಸಾಮರಸ್ಯಗಳೂ ಅನೇಕವುಂಟು. ಅಲ್ಲಿನ ಜನವರ್ಗ, ನಡವಳಿಕೆ ಬೇರೆ ಬೇರೆ. ಅಧಿಕಾರವರ್ಗಗಳ, ಭೂಸ್ವತ್ತುಗಳ ಒಡೆಯರ ಮನಸ್ಸು ಇನ್ನೂ ಒಂದಾಗಿ ಬೆಸೆಯ ಬೇಕು. ಉತ್ತರದಲ್ಲಿ ಮುಸ್ಲಿಂ ಪಂಥದವರ ಪ್ರಾಬಲ್ಯ ಹೆಚ್ಚು. ಮುಸ್ಲಿಂ ಲೀಗ್ ಈವರೆಗೂ ಹಿಂದೂ ವಿರೋಧದಲ್ಲಿ, ಕ್ರಿಶ್ಚಿಯನ್ ವಿರೋಧದಲ್ಲಿ ಕೇವಲ ಕೋಮುವಾದವಾಗಿ ಬೆಳೆದ ಪಕ್ಷ. ಕಮ್ಯುನಿಸ್ಟರು ಪ್ರಬಲಿಸಿದರೆ ತಮಗೂ ಉಳಿವು, ಬಾಳು ಇಲ್ಲವೆಂಬ ಸಂಗತಿ ಒಂದು ಮಾತ್ರ ಅವರನ್ನು ಸಂಯಕ್ತ ಪಕ್ಷದ ಜೊತೆಗೆ ತಂದಿದೆಯೇ ಹೊರತು ಕ್ರಿಶ್ಚಿಯನ್, ಮುಸ್ಲಿಂರಂಥ ಕೋಮುವಾರು ಪಕ್ಷಗಳಿಗೂ ಕಾಂಗ್ರೆಸ್, ಪಿ.ಎಸ್.ಪಿಗಳಂಥ ಕೇವಲ ರಾಜಕೀಯ ಪಕ್ಷಗಳಿಗೂ ಇನ್ನಾವ ರೀತಿಯಲ್ಲಿಯೂ ಐಕಮತ್ಯ ಸಲ್ಲದು, ಹೊಂದದು. ಉತ್ತರ ಮಲಬಾರಿನ ಜನ ಕೈಗಾರಿಕೆ, ವ್ಯಾಪಾರ, ಉದ್ಯೋಗ ಇವುಗಳಲ್ಲಿ ತೊಡಗಿರುವವರು. ಹೆಚ್ಚು ಜನ ಹೊಸಕಾಲದ ನಾಗರಿಕತೆಗೂ ವ್ಯವಹಾರ ಪ್ರಪಂಚಕ್ಕೂ ಸುಮುಖರಾದವರು.

ಅಖಂಡವಾಗಿ, ಅಸ್ಖಲಿತವಾಗಿ ಇರುವ ಕಮ್ಯುನಿಸ್ಟ್ ಪಕ್ಷದ ಎದುರಿಗೆ ಎಂದಿಗೂ ಸೇರುವುದು ಅಶಕ್ಯವಾದಂತಿದ್ದ ಮೂರು ಪಕ್ಷಗಳ ಜನ ಅಸಹಜವೆನ್ನಬಹುದಾದ ಒಂದು ಸೇರ್ಪಡೆ ಮಾಡಿಕೊಂಡು ಸಂಯುಕ್ತ ಪಕ್ಷವಾಗಿದ್ದಾರೆ. ಕಮ್ಯುನಿಸ್ಟರದು ದಬ್ಬಾಳಿಕೆ; ಅದರಿಂದ ರಾಜಕೀಯ ಆರೋಗ್ಯ, ನಾಡ ಜೀವನದ ಹದ, ಒಟ್ಟು ದೇಶದ ಸುರಕ್ಷಣೆ, ರಾಜಕೀಯ ಪ್ರಜಾತಂತ್ರದ ಕ್ಷೇಮ ಎಲ್ಲ ಕೆಡುವುದು ನಿಜ. ಅದಕ್ಕಾಗಿ ಪ್ರಜಾತಂತ್ರವನ್ನು ನಂಬಿರುವ ಎಲ್ಲರೂ ನಿರಂತರವಾಗಿ ಜಾಗ್ರತವಾಗಿರಬೇಕಾದ್ದೇ. ಆದರೆ ಪರಸ್ಪರ ವಿರೋಧವಾದ ವೃತ್ತಿ, ರೀತಿನೀತಿ, ಚರಿತ್ರೆ ಉಳ್ಳ, ಸೌಹಾರ್ದ ವಿಶ್ವಾಸ ಸಾಮಾನ್ಯವಾಗಿ ಇಲ್ಲದ, ಹಿಂದೆ ಒಬ್ಬರಿಗೊಬ್ಬರು ವಿರೋಧ ಮಾಡಿ ಕ್ರೋಧ ಬೆಳಸಿದ್ದ ಪಕ್ಷಗಳನ್ನು ಕೂಡಿಸಿ ಒಂದು ಮಾಡುವುದು ಒಂದು ಅಶುದ್ಧ ಲಕ್ಷಣವೇ ಸರಿ! ಈ ಚುನಾವಣೆಯಲ್ಲಿ ಅವರಿಗೆ ಬಹುಮತದ ಬೆಂಬಲ ಬಂದರೆ ಅದು ದೊಡ್ಡ ಸಾಧನೆ.



ನಂಬೂದರಿಪಾಡರ ಮುಂದಾಳ್ತನದಲ್ಲಿ ನಡೆದ ಆಡಳಿತದ ಭೀತಿ, ದಬ್ಬಾಳಿಕೆಗೆ ಬೆದರಿ ಅದು ಪುನಃ ಅಧಿಕಾರಕ್ಕೆ ಬಾರದಂತೆ ಮಾಡಲು ಆ ರಾಜ್ಯದ ಜನರೆಲ್ಲ ಆಸೆಪಟ್ಟು ಈ ಸಂಯುಕ್ತ ಪಕ್ಷಕ್ಕೆ ಜಯವನ್ನು ಈ ಕ್ಷಣದಲ್ಲಿ ತರಬಹುದು. ಆದರೂ ಸ್ಥಿತಿಜ್ಞರಾದ ಅನುಭವಶಾಲಿಗಳಾದ ವಿ.ಪಿ.ಮೆನನ್‌ರಂಥವರ ಅಭಿಪ್ರಾಯದಲ್ಲಿ ಇನ್ನು ಕೆಲವು ಕಾಲ ಅಧ್ಯಕ್ಷರ ಆಡಳಿತವೇ ನಡೆದು, ಚುನಾವಣೆ ಇನ್ನಷ್ಟು ತಡವಾಗಿ ನಡೆದಿದ್ದರೆ ಪರಿಸ್ಥಿತಿ ಉತ್ತಮವಾಗುತ್ತಿತ್ತು ಎಂಬುದನ್ನು ನೆನಪಿನಲ್ಲಿಡಬೇಕು. ಅದೂ ಸಂತೋಷವೇ. ಆದರೆ ಇವರಿಂದ ಸೌಹಾರ್ದ ಸಹಕಾರ ಹೇಗೆ ಬೆಸೆಯುವುದೊ ನಡೆಯುವುದೊ ಮುಂದೆ ನೋಡಬೇಕಾದದ್ದು. ಮೊದಲು ಕಾಂಗ್ರೆಸ್ ಆಳಿ ಕೆಟ್ಟ ಹೆಸರು ಪಡೆಯಿತು. ಪಿ.ಎಸ್.ಪಿ. ಆಳಿ ಕೆಟ್ಟ ಹೆಸರು ಪಡೆಯಿತು. ಅಲ್ಪ ಸಂಖ್ಯೆಯ ಪಿ.ಎಸ್.ಪಿ. ಅವರಿಗೆ ಬೆಂಬಲ ಕೊಟ್ಟು ನಡಸಿ ಪುನಃ ಅವಿಶ್ವಾಸ ತೋರಿಸಿ ಅದನ್ನು ಕಾಂಗ್ರೆಸ್ ಮುರಿಯಿತು. ಕಾಂಗ್ರೆಸ್‌ನ ಸ್ವಂತ ಅವಿವೇಕದಿಂದ ಪಿ.ಎಸ್.ಪಿ ಪಕ್ಷ ಬಿದ್ದಿತು.

ಈಗ ಈ ಸಂಯಕ್ತ ಪಕ್ಷದ ಬಲಕ್ಕೆ ಕಾರಣವು ಎರಡೇ. ಕಮ್ಯುನಿಸ್ಟ್ ಅಧಿಕಾರ ಪುನಃ ಬಂದರೆ ರಾಜ್ಯದ ಆರ್ಥಿಕ, ರಾಜಕೀಯ ಜೀವನವೇ ಕೆಟ್ಟು ಹಾಳಾಗಿ ಪ್ರಜಾತಂತ್ರ ಮುರಿದು ಬೀಳುವುದು. ಎಲ್ಲರ ಹಿತದೃಷ್ಟಿಯಿಂದ, ಎಲ್ಲರ ಕ್ಷೇಮಲಾಭಕ್ಕಾಗಿ ಅದನ್ನು ತಡೆಯುವುದು ಅಗತ್ಯ ಎಂಬುದು ಮೊದಲನೆಯದು. ಎರಡನೆಯದಾಗಿ, ಚೀಣಾ-ಇಂಡಿಯಾ ಗಡಿಯ ವಿವಾದದಲ್ಲಿ ಭಾರತ ರಾಷ್ಟ್ರದ ವಿರೋಧಕರಂತೆಯೇ ಸುಮಾರು ಕಮ್ಯುನಿಸ್ಟರು ಚೀಣದ ಕಡೆಯವರಂತೆಯೇ ನಡೆದುಕೊಳ್ಳುತ್ತಿದ್ದಾರೆ; ಇವರಿಗೆ ಕಮ್ಯುನಿಸ್ಟ್ ಬೇಕೇ ಹೊರತು ಭಾರತ ರಾಷ್ಟ್ರದ ಹಿತ, ಯೋಗಕ್ಷೇಮ ಅಲ್ಲ ಎಂಬಂತೆ. “ಚೀಣ ಸೋಷಲಿಸ್ಟ್ ದೇಶ, ಅದೆಂದಿಗೂ ಇನ್ನೊಂದು ದೇಶದ ಮೇಲೆ ಬೀಳಲಾರದು; ನೆಹರು, ಚೌ-ಎನ್-ಲೈ ಯವರನ್ನು ಕಂಡು ಸಂಧಾನ ನಡಸಲಿ, ಒಪ್ಪಂದ ಮಾಡಿಕೊಳ್ಳಲಿ; ಒಂದು ಕಮ್ಯುನಿಸ್ಟ್ ರಾಷ್ಟ್ರ ಇನ್ನೊಂದು ರಾಷ್ಟ್ರದ ಮೇಲೆ ಎಂದಿಗೂ ಬೀಳುವುದಿಲ್ಲ” ಎಂಬಂತೆ ಕಮ್ಯುನಿಸ್ಟ್ ನಾಯಕರು ವಾದ ಮಾಡಿದುದು ಅವರ ಒಟ್ಟು ನಿಲವು ನಮಗೆ ವಿಪರೀತವಾಗಿದೆ. ಕಮ್ಯುನಿಸ್ಟರ ನಿಲವು ರಾಷ್ಟ್ರಹಿತಕ್ಕೆ ವಿರೋಧವಾದುದು ಎಂಬಂತೆ ಆಗಿರುವುದು ಅದಕ್ಕೆ ಜನಪ್ರೀತಿಯನ್ನು, ಭರತ ಖಂಡದ ಒಟ್ಟು ಪಕ್ಷಪಾತವನ್ನು ಅವರಿಗೆ ಕಡಮೆ ಮಾಡಿದೆ. ಇದರಿಂದ ಕೂಡ ಚುನಾವಣೆಯಲ್ಲಿ ಸಂಯುಕ್ತ ಪಕ್ಷಕ್ಕೆ ಸದ್ಯ ಸಹಾಯವಾದೀತು. ಇಷ್ಟಾದರೂ ಚುನಾವಣೆಯಲ್ಲಿ ಗೆದ್ದು ಸ್ವಂತ ಒಡಕು, ಅನೈಕಮತ್ಯಗಳಿಂದ ಈ ಸಂಯುಕ್ತ ಪಕ್ಷ ದುರ್ಬಲವಾದರೂ ಕೆಡುಕೇ. ಕಮ್ಯುನಿಸ್ಟರ ಪ್ರಭಾವದಿಂದ ಭೇದ ಹುಟ್ಟಿ ಒಡೆದರೂ ಕೆಡುಕೇ. ಚುನಾವಣೆಯಲ್ಲಿ ಕಮ್ಯುನಿಸ್ಟ್ ಕೈ ಮೇಲಾಗಿ ಅದು ಚುನಾವಣೆಯಲ್ಲಿ ಗೆದ್ದರೂ ಹಾಗೆಯೇ. ರಾಜ್ಯಾಂಗ ರಚನೆಯ ದೃಷ್ಟಿಯಿಂದ ಪುನಃ ನಾಜೂಕು ಪರಿಸ್ಥಿತಿ ಹುಟ್ಟಿಕೊಳ್ಳುವುದು. ಪುನಃ ಕೋಟಲೆ, ಪುನಃ ಅರಾಜಕತೆ. ಸರಿಯಾದ ಕ್ರಮದಲ್ಲಿ ಚುನಾವಣೆ ನಡೆದು ಕಮ್ಯುನಿಸ್ಟರಿಗೆ ಜಯವಾಗಿ ಅವರು ಆಳುತ್ತಾರೆಂದರೆ ಆಳಗೊಡಿಸದಿರುವುದು ಕೇಂದ್ರ

ಸರ್ಕಾರಕ್ಕೆ ಕಷ್ಟವಾಗುವುದು. ಆಳಲು ಅವಕಾಶವಿತ್ತರೆ ಕಮ್ಯುನಿಸ್ಟೇತರ ವರ್ಗಗಳ ದ್ವೇಷ, ಕ್ರೋಧ ಪುನಃ ಉಲ್ಬಣಗೊಂಡು ಅಧ್ಯಕ್ಷರ ಆಳ್ವಿಕೆಗೆ ಈಚೆಗೆ ಅಗತ್ಯ ಮಾಡಿದ ಪರಿಸ್ಥಿತಿ ಪುನಃ ಉಂಟಾಗುವುದು. ಪುನರಪಿ ಜಟಿಲಂ. ಪುನರಪಿ ವಿರಸಂ. ಕಮ್ಯುನಿಸ್ಟ್ ಪಂಥ ಗೆದ್ದು ಮೃದುವಾಗಿ ಸಾಧುವಾಗಿ ಸರ್ವಜನಹಿತದೃಷ್ಟಿಯಿಂದ ಆಳುವುದೊ, ಸಂಯುಕ್ತ ಪಕ್ಷ ಗೆದ್ದು ಸೌಹಾರ್ದ ಐಕಮತ್ಯದಿಂದ ಆಳುವುದೊ, ಅಧ್ಯಕ್ಷರ ಆಳ್ವಿಕೆ ಮುಂದುವರಿಯುವುದೊ, ಪುನಃ ಆಳಬರುವುದೋ ನೋಡಬೇಕಾಗಿದೆ.

ಈ ನಡುವೆ ಕೇರಳದ ಕಾಂಗ್ರೆಸ್ ಪಕ್ಷದವರು ಪಾಡರ ಸರ್ಕಾರಕ್ಕಿಂತ ಉತ್ತಮವಾದುದಲ್ಲ ಎಂದುದು ಅಷ್ಟೇನೂ ವಿವೇಕದ ಸಂಗತಿಯೆನ್ನಲಾಗದು.

(1960)

❑

# 10. ನಾನಾವತಿ ವ್ಯವಹಾರ

ನ್ಯಾಯವಾದಿಯಲ್ಲದವನು, ಕಾನೂನಿನ ಸೂಕ್ಷ್ಮಗಳನ್ನಾಗಲಿ ರಹಸ್ಯಗಳನ್ನಾಗಲಿ ತಂತ್ರ ವಿಧಾನಗಳನ್ನಾಗಲಿ ತಿಳಿಯದವನು ಕಮಾಂಡರ್ ಕೆ. ಎಂ. ನಾನಾವತಿ ವ್ಯವಹಾರದಲ್ಲಿ ಬಾಯಿ ಹಾಕುವುದು ಯುಕ್ತವಲ್ಲ. ಆದರೂ ಈ ಸಂಬಂಧದಲ್ಲಿ ಟೀಕೆ, ಸಾರ್ವಜನಿಕರ ಆಸಕ್ತಿ, ಟಿಪ್ಪಣಿ ತುಂಬಾ ಬೆಳೆದಿದೆ. ಆದ್ದರಿಂದ ಅದನ್ನು ಲೌಕಿಕವಾದ ಒಂದು ಒಟ್ಟು ದೃಷ್ಟಿಯಿಂದ ನೋಡಿ ಸಂಬಂಧಪಡುವ ಸಂಗತಿಗಳನ್ನು ಪರಿಶೀಲಿಸ ಬಹುದೆನ್ನಿಸುತ್ತದೆ. ತನ್ನ ಹೆಂಡತಿಯ ಕಾರಣದಿಂದ ಆಹುಜ ಎಂಬವನನ್ನು ಹುಡುಕಿಕೊಂಡು ಅವನ ಮನೆಗೆ ಹೋಗಿ ಗುಂಡು ಹೊಡೆದು ಕೊಂದರೆಂಬುದು ನಾನಾವತಿ ಮೇಲೆ ಹೊತ್ತಿರುವ ಆಪಾದನೆ ಆತನನ್ನು ವಿಚಾರಣೆಗೆ ಗುರಿಮಾಡಿದೆ. ಸೆಷನ್ಸ್ ನ್ಯಾಯಾಸ್ಥಾನದಲ್ಲಿ ಜ್ಯೂರಿಯವರ ಮುಂದೆ ವಿಚಾರಣೆ ನಡೆಯಿತು. ಇಂಥ ವಿಚಾರಣೆಯಲ್ಲಿ ಜ್ಯೂರಿಯವರ ನಿರ್ಣಯದಂತೆ ತೀರ್ಪಾಗುವುದು ವಾಡಿಕೆ. ವಿಚಾರಣೆಯ ಕೊನೆಯಲ್ಲಿ ನ್ಯಾಯಾಧೀಶರು ಸಂಬಂಧಪಟ್ಟ ಅಂಶಗಳನ್ನೆಲ್ಲ ಸಾಕ್ಷಿ, ರುಜುವಾತು ಯಾವ ರೀತಿ ಇದೆ, ಯಾವ ಪೀನಲ್ ಕೋಡಿನ ಕಲಮಿಗೆ ಸಂಬಂಧಿಸಿದಂತೆ ಆಪಾದನೆ ಹೊರಿಸುತ್ತಿದೆ ಎಂಬುದನ್ನು ಸಮಗ್ರವಾಗಿ ತಿಳಿಸಿದರು. ಇವರು ಕೊಲೆಗಾರನೇ ಅಲ್ಲವೇ ಎಂಬ ವಿಷಯದಲ್ಲಿ ಎಲ್ಲ ಸಾಕ್ಷ್ಯ ವಿಚಾರಗಳನ್ನೂ ಮೊದಲಿಂದಲೂ ಕೇಳಿದ್ದ ಜ್ಯೂರಿಗೆ ತಮ್ಮ ತೀರ್ಮಾನವನ್ನು ತಿಳಿಸಬೇಕೆಂದು ನ್ಯಾಯಾಧೀಶರು ಹೇಳಿದರು. ಜ್ಯೂರಿ ಸರ್ವಾನುಮತದಿಂದ ನಾನಾವತಿ ಕೊಲೆಗಾರರಲ್ಲವೆಂದು ತಿಳಿಸಿದರು. ಇದೊಂದು ಘಟ್ಟ.

ನ್ಯಾಯಾಧೀಶರು ಇದನ್ನು ನಿರೀಕ್ಷಿಸಿರಲಿಲ್ಲ. ಜ್ಯೂರಿ ವಕ್ರವಾಗಿ ವರ್ತಿಸಿದ್ದಾರೆಂದು ಈ ವ್ಯವಹಾರವನ್ನು ಹೈಕೋರ್ಟಿಗೆ ನಿರ್ಣಯಕ್ಕೆ ಕಳಿಸಿದರು. ಬೊಂಬಾಯಿ ಹೈಕೋರ್ಟಿನ ಇಬ್ಬರು ನ್ಯಾಯಾಧೀಶರು ಇದನ್ನು ಪುನಃ ವಿಚಾರಣೆ ಮಾಡಿದರು. ಇಲ್ಲಿ ಸರಕಾರದ ಪರವಾದ ವಾದ ಬಹುವಿಚಕ್ಷಣತೆಯಿಂದ ನಡೆಯಿತು. ಅಪರಾಧಿಯ ಪರವಾಗಿ ಅಷ್ಟು ಬಲವಾದ ವಾದ ನಡೆಯಲಿಲ್ಲ. ಎತ್ತಬಹುದಾಗಿದ್ದ ಎಲ್ಲ ಕಾನೂನು ಪರವಾದ ಕೆಲವು ವಾದಗಳನ್ನು ಎತ್ತಿದ ಹಾಗೆ ಕಾಣೆ. ಜ್ಯೂರಿಗೆ ಸೆಷನ್ಸ್ ನ್ಯಾಯಾಧೀಶರು ನಿವೇದಿಸಿದ ರೀತಿಯೇ ಅಸಮರ್ಪಕವಾದುದೆಂದೂ ನಾನಾವತಿ ಕೊಲೆಗಾರರೆಂದೂ

ಆದ್ದರಿಂದ ಆಜೀವ ಶಿಕ್ಷೆ ವಿಧಿಸಿದ್ದೇವೆಂದೂ ಹೈಕೋರ್ಟಿನ ನ್ಯಾಯಾಧೀಶರು ತೀರ್ಪಿತ್ತರು. ಇದು ಎರಡನೆಯ ಮಜಲು.

ಇದರ ಮೇಲೆ ಸುಪ್ರೀಂ ಕೋರ್ಟಿಗೆ ಅಪೀಲು ಹೋಗಲು ನಾನಾವತಿ ಕಡೆಯಿಂದ ಪ್ರಾರ್ಥನೆ ಹೋಯಿತು. ಈ ವ್ಯವಹಾರದಲ್ಲಿ ಕಾನೂನಿಗೆ ಸಂಬಂಧಿಸಿದ ತಂತ್ರಭಾಗ ಯಾವುದೂ ಇಲ್ಲವೆಂಬ ಕಾರಣದಿಂದ ಅಪೀಲನ್ನು ಹೈಕೋರ್ಟಿನ ಇಬ್ಬರೂ ನಿರಾಕರಿಸಿದರು. ಎಂದರೆ ಒಂದು ಕೋರ್ಟಿನಲ್ಲಿ ಜ್ಯೂರಿ ನಿರಪರಾಧಿಗಳೆಂದವರನ್ನು ಅದಕ್ಕೆ ಮೇಲ್ಪಟ್ಟ ಕೋರ್ಟು ಪೂರ್ತಿ ಅಪರಾಧಿಗಳೆಂದು ಶಿಕ್ಷೆ ವಿಧಿಸಿ ಅಪೀಲಿಲ್ಲ ವೆಂದರು. ಫಾಸಿ ಶಿಕ್ಷೆ ವಿಧಿಸಬಹುದಾಗಿದ್ದುದು ವಿಶೇಷ ಕಾರಣಗಳಿಂದಾಗಿ ಆಜೀವ ಕಾರಾಗಾರ – ಎಂದರೆ 20 ವರ್ಷಗಳ ಕಠಿಣ ಶಿಕ್ಷೆ – ಅವರು ಅನುಭವಿಸತಕ್ಕದೆಂದು ನಿರ್ಣಯವಾಗಿ ಅಪೀಲಿಗೆ ಅವಕಾಶವಿಲ್ಲವೆಂದು ಅನೇಕರಿಗೆ ಅಸಮಾಧಾನ ಕಾರಣವಾಯಿತು. ಅಪೀಲಿಗೆ ಹೋಗಲು ನ್ಯಾಯಾಲಯದಿಂದ ನಾನಾವತಿಗೆ ಯಾವ ನೆರವೂ ಸಿಕ್ಕದೆಂದಾಗಿ ಅವರು ಸರಕಾರಕ್ಕೆ ಮನವಿ ಮಾಡಿಕೊಂಡರು.

ಈ ಮಧ್ಯೆ ಒಂದು ಸಂಗತಿಯನ್ನು ನೆನಪಿಡಬೇಕು. ಇಷ್ಟೂ ವಿಚಾರಣೆ ನಡೆಯುವವರೆಗೂ ನಾನಾವತಿ ನ್ಯಾಯಾಲಯಗಳ ಅಪ್ಪಣೆಯ ಮೇರೆಗೆ ನೌಕಾದಳದ ಕಾವಲಿನಲ್ಲೇ ಇದ್ದರು. ಈಗ ಅವರು ಸರ್ಕಾರದ ಸೆರೆಗೆ ಎಲ್ಲ ಕೈದಿಗಳಂತೆ ಬರಬೇಕಾಯಿತು. ಹೈಕೋರ್ಟು ತೀರ್ಪು ಆದ ಕೂಡಲೇ ಅವರನ್ನು ಸೆರೆಗೆ ಒಪ್ಪಿಸಲು ಅಪ್ಪಣೆ ಹೋಯಿತು. ಇಷ್ಟರಲ್ಲಿ ಹೈಕೋರ್ಟಿನ ಆಜೀವ ಶಿಕ್ಷೆಯ ತೀರ್ಪು ಅವರ ಮೇಲೆ ಎರಗದೆ ತಡೆಯಬೇಕೆಂದೂ, ಅವರನ್ನು ಸೆರೆಗೆ ಒಪ್ಪಿಸುವ ವಿಷಯದಲ್ಲಿ ಅವರು ಅವರ ಅಪೀಲ್ ಸುಪ್ರೀಂ ಕೋರ್ಟಿನಲ್ಲಿ ನಿರ್ಣಯವಾಗುವವರೆಗೂ ನೌಕಾದಳದ ಕಾವಲಲ್ಲೇ ಇರುವಂತಾಗಬೇಕೆಂದೂ, ಬೊಂಬಾಯಿ ರಾಜ್ಯಪಾಲರಿಂದ ರಾಜಾಜ್ಞೆ ಹೊರಟಿತು. ಬೊಂಬಾಯಿ ಸರಕಾರ ಹೈಕೋರ್ಟಿಗೆ ವಿರೋಧವಾಗಿ ನಡೆದುಕೊಂಡಿದೆಯೆಂದೂ ಹೈಕೋರ್ಟು ಸರ್ಕಾರದ ಕಾರ್ಯನಿರ್ವಾಹಕ ಶಾಖೆ ಮೇಲೆ ಆಪಾದನೆ ಹೊರಿಸಿ, ಸರಕಾರದ ಈ ಅಸಾಧಾರಣ ವರ್ತನೆಗೆ ಕಾರಣವನ್ನು ಕೇಳಿತು. ಇದರಲ್ಲಿ ನ್ಯಾಯಶಾಖೆಗೆ ಅವಮರ್ಯಾದೆ ಏನೂ ಇಲ್ಲ; ನ್ಯಾಯಶಾಖೆಯ ಕಾರ್ಯವನ್ನು ಅದು ಮಾಡಿತು; ಸರಕಾರಕ್ಕೆ – ಎಂದರೆ ಗೌರ್ನರಿಗೆ, ಕ್ಷಮಿಸುವ, ಕರುಣೆ ತೋರುವ, ನ್ಯಾಯಾಂಗ ತೀರ್ಮಾನವನ್ನು ರದ್ದು ಮಾಡುವ ಇತ್ಯಾದಿ ಸರ್ವಾಧಿಕಾರ ರಾಜ್ಯಾಂಗ ಶಾಸನ ಪ್ರಕಾರ ಬಂದಿರುವುದರಿಂದ, ಸರಕಾರ ಯಾವ ಅಪರಾಧವನ್ನೂ ಮಾಡಿಲ್ಲ; ನ್ಯಾಯಾಂಗಕ್ಕೆ ಅವಮಾನ ಮಾಡುವ ಪ್ರಯತ್ನವಾಗಲಿ, ಇಷ್ಟವಾಗಲಿ ಸರ್ಕಾರಕ್ಕೆ ಸುತರಾಂ ಇಲ್ಲ; ತನ್ನ ಆಜ್ಞೆಗೆ ನ್ಯಾಯಾಲಯಕ್ಕೆ ಕಾರಣವನ್ನು ಕೊಡಬೇಕಾಗಿಯೂ ಇಲ್ಲ - ಎಂದು ಬೊಂಬಾಯಿ ಸರಕಾರ ವಾದಿಸಿತು. ಹೈಕೋರ್ಟಿನ ತೀರ್ಮಾನವನ್ನು ಈವರೆಗೆ ಇಬ್ಬರು ಡಿವಿಜನ್ ನ್ಯಾಯಾಧೀಶರು ಕೊಟ್ಟಿದ್ದರು. ಈಗ



ಐದು ಮಂದಿ ನ್ಯಾಯಾಧೀಶರ ಪೂರ್ತಿ ಮಂಡಲ ಇದನ್ನು ವಿಚಾರಿಸುತ್ತಿದ್ದಾರೆ. ಸುಪ್ರೀಂ ಕೋರ್ಟಿಗೆ ಅಪೀಲು ಹೋಗುವ ಅವಕಾಶವನ್ನು ಕುರಿತು ನಾನಾವತಿಯವರು ಅಲ್ಲಿಗೇ ವಿಶೇಷ ಪ್ರಾರ್ಥನೆಯನ್ನು ಮಾಡಿಕೊಳ್ಳಬೇಕು. ಅವರೊಪ್ಪಿದರೆ ಅಪೀಲು; ಇಲ್ಲವಾದರೆ ಹೈಕೋರ್ಟು ತೀರ್ಪು ನಿಲ್ಲುವುದು. ಅಪೀಲಲ್ಲಿ ಅವರು ಹೈಕೋರ್ಟು ತೀರ್ಮಾನವನ್ನು ಸ್ಥಿರಪಡಿಸಬಹುದು; ಜ್ಯೂರಿ ತೀರ್ಪನ್ನೇ ಒಪ್ಪಬಹುದು; ಇಲ್ಲವೆ, ಪುನಃ ಹೊಸದಾಗಿ ವಿಚಾರಣೆ ಆಗತಕ್ಕದೆಂದು ಸೆಷನ್ಸ್‌ಗೆ ಕಳಿಸಬಹುದೆಂದು ಕಾಣತ್ತದೆ. ನಾನಾವತಿ ಇನ್ನೂ ಸರಕಾರದ ಕಾವಲಲ್ಲೇ ಇದ್ದಾರೆ.

ಕಾನೂನು ಇರಲಿ, ಹೇಗೇ ಮಾಡಲಿ, ಈ ವ್ಯವಹಾರ ಮೊದಲಾದಂದಿನಿಂದ ಬಹುಜನ ಸಾಮಾನ್ಯರ ಪಕ್ಷಪಾತ ನಾನಾವತಿ ಕಡೆಗಿದೆ. ಆತನು ಚೆಲುವ, ಯೋಗ್ಯ, ದಕ್ಷ, ಅಪಮಾನದಿಂದ ನೊಂದವನು. ಆಹುಜ ದುಷ್ಟ, ಹೆಣ್ಣುಚಟವುಳ್ಳವನು; ಇವರ ಹೆಂಡತಿಯನ್ನು ಮೋಹಗೊಳಿಸಿದವನು. ಆಕೆ ಗಂಡನನ್ನು ಬಿಟ್ಟು ಆತನನ್ನು ಮದುವೆ ಮಾಡಿಕೊಳ್ಳಲು ಸಿದ್ಧವಾಗಿದ್ದರೂ ಆಕೆಯ ಸಂಸಾರಕ್ಕೆ ವಿರುದ್ಧವಾದ ಸಂಬಂಧವನ್ನು ಆಕೆಯಲ್ಲಿ ಬೆಳಸಿ, ಗಂಡನು ಹೋಗಿ ಇವಳನ್ನು ಮದುವೆಮಾಡಿಕೊಳ್ಳುವ ಹಾಗಿದ್ದರೆ ತಾನು ಅವಳನ್ನು ಮಕ್ಕಳನ್ನು ಅವನ ರಕ್ಷಣೆ ಪೋಷಣೆಗೆ ಬಿಟ್ಟುಕೊಡಲು ಒಪ್ಪುತ್ತೇನೆ ಎಂದಾಗ ಕೂಡ ಅಯೋಗ್ಯ ಮಾತನ್ನಾಡಿದವನು. ಯಾವ ಗಂಡನಿಗಾದರೂ ಕೆರಳಿಕೆ, ಕ್ರೋಧಾವೇಶ ಬರುವಂಥ ಅಸಭ್ಯ ಮಾತನ್ನಾಡಿದಾಗ, ಇಬ್ಬರಿಗೂ ಘರ್ಷಣೆ ನಡೆದಾಗ ಗುಂಡಿನ ಏಟಿನ ಕಾರ್ಯ ನಡೆಯಿತು. ಒಳ್ಳೆಯ ಗುರಿಕಾರನಾದ ಈತನು ಮನಸ್ಸು ಮಾಡಿದ್ದರೆ ನೂರು ಗುಂಡುಗಳನ್ನು ದಾರ ಹೊಲಿವಂತೆ ಅವನ ಮೈಯಲ್ಲಿ ಪೋಣಿಸ ಬಲ್ಲವನಾಗಿದ್ದವನು. ತಡೆದ! ಆಹುಜನಂಥ ಪಶು ಸಾಯತಕ್ಕದ್ದೇ ಸರಿ. ಯೋಗ್ಯನಾದಂಥ ಗಂಡ ಇನ್ನೆಷ್ಟು ತಾಳಿಕೊಳ್ಳಲು ಶಕ್ಯ ಎಂಬಂತೆ ಜನದ ಪಕ್ಷಪಾತ ಬೆಳೆಯಿತು. ನೌಕಾದಳ ಸದ್ಯ ತಮ್ಮ ಮೆಚ್ಚಿನ ಅಧಿಕಾರಿಯೊಬ್ಬನ ಪರವಾಗಿ ಆಸಕ್ತಿ ವಹಿಸಿತು. ಆದರೆ ಸರ್ವಥಾ ಎಂಥ ಸಂದರ್ಭದಲ್ಲೇ ಆಗಲಿ, ಇನ್ನೊಬ್ಬನ ಜೀವವನ್ನು ತೆಗೆಯಲು ಯಾರಿಗೂ ಅಧಿಕಾರವಿಲ್ಲ ಎಂಬುದು ಕಾನೂನು. ನಾನಾವತಿಯ ಗುಂಡು ಹಾರಿ ಆಹುಜ ಸತ್ತದ್ದು ನಿಜ. ಅವನಲ್ಲಿಯೂ ಪಿಸ್ತೂಲು ಇರಬಲ್ಲದಾಗಿರುವಾಗ ಆತ್ಮರಕ್ಷಣೆಗಾಗಿ ಪಿಸ್ತೂಲು ತೆಗೆದುಕೊಂಡು ಹೋದವನು ರೋಸಿದಾಗ ಗುಂಡು ಹಾರಿಸಿ ಹಗೆ ತೀರಿಸಿಕೊಳ್ಳಲು ಸಾಕಷ್ಟು ಕಾರಣವಿದ್ದಿರಬಲ್ಲದು ಎಂಬುದಂತೂ ಸ್ಥಾಪಿತವಾಗುತ್ತದೆ. ಕೊಲ್ಲುವುದು ಉದ್ದೇಶಪೂರ್ವಕವೆ ಅಥವಾ ಅವರಿವರಿಗೆ ನಡೆದ ಮಾತುಕತೆ ಘರ್ಷಣೆಗಳ ಪರಿಣಾಮವಾಗಿ ಇದು ನಡೆಯಿತೆ? – ಎಂಬುದು ವಿಚಾರಣಕ್ಕೆ ಈಡಾದ ಅಂಶ.

ಹೈಕೋರ್ಟಿನ ನ್ಯಾಯಾಧೀಶರು ನಾನಾವತಿ ಅಪರಾಧಿ ಎಂದು ನಿರ್ಣಯವಿತ್ತ ತಕ್ಷಣದಲ್ಲೇ ಶಿಕ್ಷೆಯನ್ನು ಕಾರ್ಯಗತ ಮಾಡುವುದರಲ್ಲಿ ಬೊಂಬಾಯಿ ರಾಜ್ಯಪಾಲರ ರಾಜಾಜ್ಞೆ ತಡೆಹಾಕಿದ್ದು ಯುಕ್ತವೆ? ನ್ಯಾಯಾಂಗಕ್ಕೆ ಹೀನಾಯ ತರುವಂಥದಲ್ಲವೇ? - ಎಂಬುದು ಚರ್ಚೆಗೆ ಬಂದ ಸಂಗತಿ. ತೀರ್ಮಾನವಾದ ಕೂಡಲೇ ಆಜ್ಞೆ ಬಂದದ್ದು

ಹಲವರಿಗೆ ವಿಚಿತ್ರವಾಗಿ ಕಾಣಿಸಿತಾದರೂ, ನ್ಯಾಯಾಂಗಕ್ಕೆ ಹೀನಾಯ ತರುವ ಉದ್ದೇಶವುಳ್ಳದ್ದೇನೂ ಆಗಿರಬೇಕಾದ್ದಿಲ್ಲ; ಕಾರ್ಯಾಂಗ ನ್ಯಾಯಾಂಗಗಳ ನಡುವೆ ಮರ್ಯಾದೆಗಳ ಸಂಗತಿ ಪ್ರಶ್ನೆಗೇ ಬರುವುದಿಲ್ಲವೆಂಬುದು ಅಡ್ವೊಕೇಟ್ ಜನರಲ್ಲರ ವಾದ. ನ್ಯಾಯಾಂಗದಿಂದ ಯಾವ ನೆರವೂ ಅಪೀಲ್ ವಿಷಯದಲ್ಲಿ ಬರಲಾಗದೆ ಕಾರ್ಯಾಂಗಕ್ಕೆ ನಾನಾವತಿ ಕಡೆಯಿಂದ ಪ್ರಾರ್ಥನೆ ಹೋಯಿತು. ಬೊಂಬಾಯಿ ಸರ್ಕಾರಕ್ಕೂ ಕೇಂದ್ರ ಸರಕಾರಕ್ಕೂ ನಡುವೆ ಮಾತುಕತೆ ನಡೆದು ಪ್ರಧಾನಿಯವರು ನಾನಾವತಿಗೆ ಅನುಕೂಲವಾಗಬಲ್ಲ ಸಲಹೆಯನ್ನು ಬೊಂಬಾಯಿ ಮುಖ್ಯಮಂತ್ರಿಗೆ ಕೊಟ್ಟಂತಿದೆ. ಬೊಂಬಾಯಿ ಮುಖ್ಯಮಂತ್ರಿಯವರು ಅದನ್ನು ಬಳಸಿಕೊಂಡು ಸಲಹೆಗಿಂತ ಒಂದು ಹೆಜ್ಜೆ ಮುಂದೆ ಹೋದಂತೆ ರಾಜ್ಯಪಾಲರು ಆಜ್ಞೆ ಹೊರಡಿಸಿದ ಸಂಗತಿಯೊಂದು ಟೀಕೆಗೆ ಬಂದಿದೆ. ಹಾಗೆಯೇ ನಾನಾವತಿ ಪರವಾಗಿ ವಾದದ ಖರ್ಚಿಗಾಗಿ ಸರ್ಕಾರ 17,000 ರೂಪಾಯಿ ಹಣದ ನೆರವನ್ನು ಒದಗಿಸಿರುವ ಸಂಗತಿ ಬಹುಬಗೆಯ ಚರ್ಚೆಗೆ ಅವಕಾಶ ಕೊಟ್ಟಿದೆ.

ಎರಡು ಕೋರ್ಟಿನ ನಿರ್ಣಯ ಪರಸ್ಪರ ಪೂರ್ತಿ ವಿರೋಧವಾಗಿರುವಾಗ ಅಪೀಲಿಗೆ ಅವಕಾಶ ಕೊಟ್ಟಿದ್ದರೆ ಚೆನ್ನಾಗಿತ್ತು ಎಂಬುದು ಸಾಧಾರಣ ಅಭಿಪ್ರಾಯ. ಆದರೆ ಹೈಕೋರ್ಟು ಈಗ ಕೊಟ್ಟಂತೆ ತೀರ್ಪು ಕೊಡಲು ಅಧಿಕಾರವುಂಟು. ಯಾವುದು ಕಾನೂನಿನ ಅಂಶ (Point of Law), ಯಾವುದಲ್ಲ, ಅಪೀಲಿಗೆ ಯಾವುದಕ್ಕೆ ಅವಕಾಶ ಕೊಡಬೇಕು, ಯಾವುದರಲ್ಲಿಲ್ಲ ಎಂಬುದನ್ನು ನಿರ್ಣಯಿಸುವ ಹಕ್ಕೂ ಅವರ ಸರ್ವಮಾನ್ಯ. ಆದರೆ ಹಾಗೆ ಒಮ್ಮೆ ನಿರ್ಣಯಿಸಿದ ಮೇಲೆ ಇತರರಿಗೆ ಅನ್ವಯವಾಗುವಂತಹ ಕಾನೂನು ಈ ಅಪರಾಧಿಗೂ ಅನ್ವಯಿಸಬೇಕಲ್ಲವೆ? ಅದನ್ನು ಜಾರಿ ಮಾಡುವುದು ಕಾರ್ಯಾಂಗ ಭಾಗದ ಕೆಲಸ. ಆದರೆ ರಾಜ್ಯಪಾಲರಿಗೆ ಯಾವುದಾದರೂ ಸಂದರ್ಭದಲ್ಲಿ ತಮ್ಮ ಕರುಣೆಯನ್ನೊ, ಕ್ಷಮೆಯನ್ನೊ ತೋರಿಸುವುದು ಸೂಕ್ತವೆನಿಸಿದರೆ ಯಾವ ಕಾರಣವನ್ನೂ ಕೊಡದೆ, ಯಾವ ನಿರ್ಬಂಧವನ್ನೂ ಹಾಕದೆ ಇನ್ನಾರಿಗೂ ಹೊಣೆಯಾಗದೆ, ಕ್ಷಮೆ-ಕರುಣೆಗಳನ್ನು ದಾನ ಮಾಡುವ, ನ್ಯಾಯಾಂಗದ ನಿರ್ಣಯಗಳನ್ನು ರದ್ದು ಮಾಡುವ, ತಡೆಯುವ ಮುಂತಾದ ಸ್ವಾತಂತ್ರ್ಯವುಂಟು. ಇದು ರಾಜ್ಯಾಂಗದತ್ತ ಅಧಿಕಾರ ರಾಜ್ಯಪಾಲರಿಗೆ. ಇಲ್ಲಿ ಕ್ಷಮೆ ಅಲ್ಲ, ಕರುಣೆ ಕೂಡ ಅಲ್ಲ. ಅಪೀಲಿನ ಪ್ರಸಂಗ ನಿರ್ಣಯವಾಗುವವರೆಗೂ ನಾನಾವತಿ ಮೇಲೆ ಸಾಮಾನ್ಯ ಕೈದಿಯ ಮೇಲೆ ಹೊರುವ ಸೆರೆಯಾಳ್ತನವನ್ನು ತಡೆಯುವುದು ಮಾತ್ರ ಉದ್ದೇಶವೆಂದು ಕಾಣುತ್ತದೆ. ಇದರಲ್ಲಿ ರಾಜಕಾರಣವೇನೂ ಇಲ್ಲ. ಮಾನಿಷ್ಠನೂ ಸೈನ್ಯದಲ್ಲಿ ದೊಡ್ಡ ಹುದ್ದೆಯಲ್ಲಿದ್ದು ಕೊಂಡು ದೇಶಕ್ಕೆ ದಕ್ಷಸೇವೆ ಸಲ್ಲಿಸಿರುವವನೂ ಆದ ಒಬ್ಬ ಅಧಿಕಾರಿಯ ಸ್ಥಾನಮಾನ ಕೈದಿಯಾದ ಕೂಡಲೆ ಪೂರ್ತಿ ನಷ್ಟವಾಗುತ್ತದೆ. ಒಂದು ವೇಳೆ ಸುಪ್ರೀಂ ಕೋರ್ಟಿನಲ್ಲಿ ಆತನು ನಿರಪರಾಧಿ ಎಂದು ಬಿಡುಗಡೆಯಾದರೆ ಕೆಳಗಿನ ಕೋರ್ಟಿನ ತೀರ್ಪಿನ ಫಲವಾಗಿ ಈತನು ಸೆರೆಬಿದ್ದು ಸರ್ವಥಾ ನಷ್ಟ ಪಡುವ ಪ್ರಸಂಗ ಬರಬಾರದು. ಉತ್ತಮ ಸೇವೆ



ಸಲ್ಲಿಸಿ ನೌಕಾದಳದ ದಕ್ಷನಾದವನೊಬ್ಬನ ಸೇವೆ ಇಲ್ಲವಾಗಿ ದೇಶಕ್ಕೆ ನಷ್ಟವಾಗಬಾರದು. ಅಂಥವರ ತಯಾರಿಗೂ ದಕ್ಷತೆ ಅನುಭವಗಳಿಗಾಗಿಯೂ ಲಕ್ಷಾಂತರ ರೂಪಾಯಿ ಸರ್ಕಾರ ಖರ್ಚು ಮಾಡಿರುವಾಗ ಅಂಥವರ ವಿಷಯದಲ್ಲಿ ದಾಕ್ಷಿಣ್ಯ ತೋರುವುದು ಅಧರ್ಮವಾಗಬಾರದು ಎಂಬುದು ನೌಕಾ ವಿಭಾಗದ ದೃಷ್ಟಿಯೂ ಹೌದು. ಒಬ್ಬ ಸಾಮಾನ್ಯ ನೌಕಾ ಸಿಪಾಯಿಯ ವಿಷಯದಲ್ಲಿ ಸರ್ಕಾರ ಹೀಗೆ ನಡೆಯುವುದೇ ಎಂಬ ಪ್ರಶ್ನೆ ಎದ್ದಾಗ, ತತ್ವಶಃ ಏಕಾಗಬಾರದು ಎಂದು ಉತ್ತರ ಬಂದಿದೆ. ಆದರೂ ಎಂಥ ಡೆಮಾಕ್ರೆಸಿಯಲ್ಲಿಯೇ ಆಗಲಿ ಒಬ್ಬ ರೇಟಿಂಗಿಗೂ ಒಬ್ಬ ಸೇನಾನಾಯಕನಿಗೂ ಬೆಲೆಯಲ್ಲಿ ವ್ಯತ್ಯಾಸವಿದ್ದೇ ಇರುತ್ತದೆಯೇನೊ. ಜನದ ತೆರಿಗೆಯಿಂದೆತ್ತಿದ ಹಣವನ್ನು ಇಂಥ ವ್ಯವಹಾರಗಳಲ್ಲಿ ಉಪಯೋಗಿಸಬಹುದೆ? - ಎಂಬ ಪ್ರಶ್ನೆಗೆ ಉತ್ತರ: ತನ್ನ ಪರವಾದ ವಾದಕ್ಕಾಗಿ ಅವನು ವೆಚ್ಚಮಾಡಲು ಅಸಮರ್ಥನಾಗಿರುವಾಗ ಆತನಿಗೆ ನೆರವಾಗುವುದು ಆತನ ಯಜಮಾನ ವರ್ಗದವರ ಮಾನವೀಯತೆಯಾಗುತ್ತದೆ ಎಂಬುದು. ಆತನು ಅಪರಾಧಿ ಎಂದು ಸುಪ್ರೀಂ ಕೋರ್ಟಿನಲ್ಲಿ ನಿರ್ಣಯವಾದರೆ ಅವನಿಗಾಗಿ ಮಾಡಿದ ಈ ವೆಚ್ಚ ಪೂರ್ತಿ ನಷ್ಟವಾಗುವುದು; ಇಲ್ಲ, ಅವನಿಗೆ ಬಿಡುಗಡೆಯಾದರೆ ಮುಂದೆ ಆತನ ಸಂಬಳದಿಂದ ವೆಚ್ಚವನ್ನು ತಿಂಗಳಿಗಿಷ್ಟು ಎಂಬಂತೆ ಪುನಃಸಂದಾಯ ಪಡೆಯಬಹುದು. ಸರ್ಕಾರದ ಅಧಿಕಾರಿಯೊಬ್ಬನು ಕೈಗಾರಿಕೆಯ ವ್ಯವಹಾರದಲ್ಲಿ ಹರತಾಳ ಸಂಪು ಮುಂತಾದ ಪ್ರಸಂಗದಲ್ಲಿ ಸಿಕ್ಕಿಕೊಂಡಾಗ ಸರಕಾರ ಹೀಗೆಯೇ ಅಂಥವರ ನೆರವಿಗೆ ಬರುವುದೇ? - ಎಂಬ ಪ್ರಶ್ನೆ ಎದ್ದಾಗ, ಸಂದರ್ಭಕ್ಕೆ ತಕ್ಕಂತೆ ನ್ಯಾಯ ಧರ್ಮ ಎಂದು ತೋರಿದ ಕಡೆ ಸರ್ಕಾರ ಈ ರೀತಿ ನಡೆಯಬಹುದು ಎಂದು ಉತ್ತರ ಬಂದಿದೆ. ದೇಶದಲ್ಲೆಲ್ಲಾ ಪ್ರಜಾಧಿಪತ್ಯ ನಡೆದಿರುವಾಗ ಒಬ್ಬ ಪ್ರಜೆಗೂ ಇನ್ನೊಬ್ಬ ಪ್ರಜೆಗೂ ವ್ಯತ್ಯಾಸ ಮಾಡತಕ್ಕದ್ದಲ್ಲ. ಕಾನೂನಿನ ದೃಷ್ಟಿಯಲ್ಲಿ ಎಲ್ಲರಿಗೂ ಸಮವಾದ ಮರ್ಯಾದೆ ಸಲ್ಲಬೇಕೆಂಬ ನಿಯಮವಿರುವಾಗ, ರಕ್ಷಣಾದಳದವರು ಆಡಳಿತ ವರ್ಗದವರು ಮುಂತಾದವರ ವಿಶೇಷ ಕಾರ್ಯಕಾರಣದಿಂದ, ಅವರನ್ನು ವಿಶೇಷ ಪ್ರಜೆಗಳಂತಲ್ಲದೆ ಬೇರೆಯಾಗಿ ಕಾಣಬಹುದೆ? - ಎಂಬ ರಾಜ್ಯಾಂಗದ ಪ್ರಶ್ನೆ ಬಂದಿದೆ. ಇಂಥ ಪ್ರಶ್ನೆ ಏಳುವುದು ಸಹಜ. ಇದು ವಾಡಿಕೆಯಾಗಬಾರದು. ಸರ್ಕಾರ ತನ್ನ ದೃಷ್ಟಿಗೆ ನೇರವಾಗಿ ನಡೆದವರ ಪರವಾಗಿಯೋ ಸೈನ್ಯಾದಿಗಳ ಪರವಾಗಿಯೋ ವಿಶೇಷ ದಾಕ್ಷಿಣ್ಯದಿಂದ ನಡೆಯುವುದನ್ನು ಅಭ್ಯಾಸ ಮಾಡಿದರೆ ಅದಕ್ಕೆ ಮಿತಿ, ತಡೆ ಇರುವುದಿಲ್ಲ. ರಾಜ್ಯಜೀವನದ ಹದಕ್ಕೇ ಧಕ್ಕೆಯುಂಟಾಗಬಹುದು, ಅನ್ಯಾಯಕ್ಕೆ ಬಾಗಿಲು ತೆರೆದ ಹಾಗಾಗಬಹುದು, ಕಾನೂನಿನ ರಕ್ಷಣೆ ಅಣಕವಾಗುವುದು. ಕಾನೂನಿನ ಎದುರಿಗೆ, ಕಾನೂನು ಸ್ಥಾಪಿಸುವ ಸರ್ವಸಮ ದೃಷ್ಟಿಗೆ ಲೋಪ ಬರುವುದು. ನಿಜ, ಆದರೆ ಅತಿ ವಿಶೇಷ ಸಂಬಂಧದಲ್ಲಿ ಕೂಡ ಇಂಥದು ಎಂದಿಗೇ ಆಗಲಿ ನಡೆಯಕೂಡದೆಂದು ಸರ್ವಥಾ ನಿರ್ಬಂಧ ಹಾಕುವುದು ಬಹುಶಃ ಸಲ್ಲದೇನೊ. ಅಂಥ ಸಂದರ್ಭ ತೀರ ಅಪರೂಪವಾಗಬೇಕಾದ್ದು ಅಗತ್ಯ. ಅದಕ್ಕೆ ಸರ್ಕಾರ ನ್ಯಾಯಾಂಗಕ್ಕಲ್ಲ, ಶಾಸನ

ಮಂಡಲಗಳಿಗೆ - ಎಂದರೆ ದೇಶದ ಪಾರ್ಲಿಮೆಂಟಿಗೆ, ಹೊಣೆಯನ್ನು ಬಿಟ್ಟರೆ, ದೊಡ್ಡ ಬಹುಮತದ ಪಕ್ಷ ರಾಜ್ಯಾಧಿಕಾರ ಸಮಯದಲ್ಲಿ ಅತಿ ನಿರಂಕುಶವಾಗುವ ಅವಕಾಶ ಹೆಚ್ಚಾಗುತ್ತದೆ. ಇಲ್ಲಿ ಅಂಥ ರಾಜ್ಯಹಿತಕ್ಕೆ ಸಂಬಂಧಿಸಿದ ಸಂದರ್ಭ ಒದಗಿತೆ ಎಂದು ಪ್ರಶ್ನೆ ಕೇಳಿದರೆ, ಅಂಥದೂ ಇಲ್ಲ. ಇಲ್ಲಿ ನಡೆದುದು ಇಷ್ಟೇ: ಹೈಕೋರ್ಟಿನ ತೀರ್ಮಾನದಂತೆ ಸಾಮಾನ್ಯ ಸೆರೆಗೆ ಇವರು ಹೋಗಿದ್ದಾರೆ. ಮುಂದೆ ಒದಗುವ ವ್ಯಕ್ತಿಶವಾದ ನಷ್ಟದಿಂದ ಪಾರುಮಾಡಲು ಅವರು ನೌಕೆಯ ತಮ್ಮ ಮೇಲಾಧಿಕಾರಿಯನ್ನು (Flag Officer) ಬೇಡಿಕೊಂಡರು. ಆವರ ಪ್ರಾರ್ಥನೆಯಂತೆ ನೌಕೆಯ ಶ್ರೇಷ್ಠಾಧಿಕಾರಿ ಅಡ್ಮಿರಲ್ ಕಠಾರಿಯವರು ಪ್ರಧಾನಿಯವರನ್ನು ಕಂಡರು. ಈ ವಿಷಯದಲ್ಲಿ ಬೊಂಬಾಯಿ ಸರ್ಕಾರ ನೇರವಾಗಿ ಕೇಂದ್ರದ ಅನುಮತಿ ಇಲ್ಲದೇ ತಾನು ಏನು ಮಾಡಲೂ ಮುಂದುವರೆಯಲೂ ಆಗುವುದಿಲ್ಲವೆಂದಿತು. ಪ್ರಧಾನಿಯವರ ಸಲಹೆಯನ್ನು ಕೇಳಿತು. ರಾಜ್ಯ ಸರ್ಕಾರಗಳಿಗೂ ಕೇಂದ್ರ ಸರ್ಕಾರಕ್ಕೂ ಇಂಥ ಸಲಹೆ ಪ್ರಾರ್ಥನೆಗಳು ದಿನವೂ ನೂರಾರು ಹೋಗುವುದು. ನೆಹರೂ ಅವರಿಗೆ ಆವರೆಗಾಗಲೇ ಅಡ್ಮಿರಲ್ ಕಠಾರಿಯವರ ಪ್ರಾರ್ಥನೆ ಸಂದಿತ್ತು. ಈ ಸಂದರ್ಭದಲ್ಲಿ ಅಲ್ಪಕಾಲದ ದಾಕ್ಷಿಣ್ಯವನ್ನು ತೋರಿಸಬಹುದೆನ್ನಿಸಿತು. ಅಪೀಲಿನ ಪ್ರಶ್ನೆ ತೀರ್ಮಾನವಾಗುವವರೆಗೂ ನಾನಾವತಿ ನೌಕಾದಳದ ಕಾವಲಲ್ಲಿಯೇ ಇರುವ ಅನುಕೂಲವಾಗುವಂತೆ ಮಾತ್ರ ಬೊಂಬಾಯಿ ರಾಜ್ಯಪಾಲರು, ಹೈಕೋರ್ಟು ಅಪ್ಪಣೆಯ ಜಾರಿಯ ತಡೆಯನ್ನು ನಿಲ್ಲಿಸುವಂತೆ ಅನೌಪಚಾರಿಕವಾಗಿ ಸಲಹೆ ಕೊಟ್ಟರು. ಸಲಹೆಯನ್ನು ಬೊಂಬಾಯಿ ಮುಖ್ಯಮಂತ್ರಿ ಸ್ವೀಕರಿಸಬಹುದಿತ್ತು, ಬಿಡಬಹುದಿತ್ತು. ಅವರ ಸಲಹೆಗಿಂತ ವಿಸ್ತಾರವಾಗಿ ಫಲದಲ್ಲಿ ರಾಜಾಜ್ಞೆ ವ್ಯಾಪಿಸಿತು. ಆದರೆ ಹಾಗೆ ಮಾಡುವುದರಲ್ಲಿ ನ್ಯಾಯಾಂಗಕ್ಕೆ ಯಾವ ಅವಮರ್ಯಾದೆಯನ್ನು ಯಾರೂ ಬಯಸಲಿಲ್ಲ, ನಡಸಲಿಲ್ಲ. ಕಾರ್ಯಾಂಗದ ಪಾಲಿಗೆ ರಾಜ್ಯಾಂಗಶಾಸನ ಕೊಟ್ಟಿರುವ ಮೇಲಧಿಕಾರವನ್ನು ಅದು ವಿನಿಯೋಗಿಸಿತು ಮಾತ್ರ. ಅದು ತಕ್ಷಣ ಮಾಡಿದ್ದು, ನಡೆದುದು ಅರಿಯದ ಕೆಲವು ಜನಕ್ಕೂ, ಆಡಳಿತದವರ ಇಂಥ ವರ್ತನೆಗಳಿಗಾಗಿ ಕಾದಿರುವವರಿಗೂ, ತತ್ವಸಾಧಕರಿಗೂ ಇದು ಪಕ್ಷಪಾತ, ರಹಸ್ಯ ಎಂಬಂತೆ ಭಾಸವಾಯಿತು. ಒಂದು ವಿಧದಲ್ಲಿ ಇದು ಲೋಪ. ಕಾನೂನು ನ್ಯಾಯವಾಗಿ ನೆರವೇರಬೇಕಾದುದು ಅಗತ್ಯ. ಅದು ನೆರವೇರುತ್ತಿಲ್ಲ ಎಂಬ ಭಾವ ಪ್ರಜೆಗಳಿಗೆ ಬರಬಾರದು. ಖಂಡಿತ ನೆರವೇರುತ್ತಿದೆ ಎಂಬ ವಿಶ್ವಾಸ ಎಲ್ಲ ಕಡೆಯೂ ಹರಡಿ ನೆಲಸಬೇಕು. ಇದು ರಾಜ್ಯದ ಸುಭದ್ರತೆಗೆ ಅಗತ್ಯವಾದ ಕ್ರಿಯಾಸೂತ್ರ.

ಪ್ರಧಾನಿಯವರಂಥ ಕೇಂದ್ರದ ಪ್ರಭಾವಶಾಲಿ ವ್ಯಕ್ತಿ ಸಲಹೆ ಇತ್ತರೆ ರಾಜ್ಯದ ಮುಖ್ಯಮಂತ್ರಿಯೊಬ್ಬರು ಅದನ್ನು ಸಲಹೆಗಿಂತ ಹೆಚ್ಚಾಗಿ ಇಷ್ಟವೆಂದೇ ನಿರ್ದೇಶನವೆಂದೇ ಅಪ್ಪಣೆಯೆಂದೇ ಎಣಿಸುತ್ತಾರೆ. ಈ ಸಲಹೆ ಅವರು ಕೊಡದಿದ್ದರೆ ಚೆನ್ನಾಗಿತ್ತು. ಹೈಕೋರ್ಟಿನ ತೀರ್ಪನ್ನು ಸ್ವಲ್ಪ ಮಟ್ಟಿಗೆ ರದ್ದು ಪಡಿಸುವ ಆಜ್ಞೆಯನ್ನು ಒಂದು ರಾಜ್ಯ ಸರ್ಕಾರದಿಂದ ಮಾಡಿಸುವಷ್ಟು ಅಗತ್ಯ ಇಂಥ ಸಂದರ್ಭದಲ್ಲಿರಲಿಲ್ಲ. ಅಲ್ಲದೆ ತೀರ್ಪನ್ನು



ತಾತ್ಕಾಲಿಕವಾಗಿ ಬದಿಗಿಡಿಸದೆ ನೌಕಾದಳದ ಕಾವಲಲ್ಲಿಡಲು ಅದು ಮಿತಗೊಳಿಸುವಂತೆ ಮಾಡುವುದೂ ತರವಾಗುತ್ತಿರಲಿಲ್ಲ. ಬೇಕಾಗಿದ್ದರೆ ನೌಕಾದಳದ ಸಿಬ್ಬಂದಿಯ ಸಂಬಳ ಸಾರಿಗೆ ಮರ್ಯಾದೆಗಳನ್ನು ನಿರ್ಣಯಿಸುವ ಕ್ರಮಪಾಳಿಗಳನ್ನೇ ಮಾರ್ಪಡಿಸಿ ನಾನಾವತಿ ಯಂಥವರಿಗೆ ತಾಂತ್ರಿಕ ಕಾರಣಗಳಿಂದ ಅನ್ಯಾಯವಾಗದಂತೆ ಏರ್ಪಡಿಸಬಹುದಿತ್ತು ಎಂದು ಟೀಕೆಯೂ ಎದ್ದಿದೆ. ಅವೆಲ್ಲಕ್ಕೂ ಹೆಚ್ಚು ಸಮಯ ಬೇಕಾಗುತ್ತದೆ. ಇದು ಅತಿ ಕಡಮೆ ತೊಡಕಿನದೆಂದು ಹೀಗೆ ಮಾಡಲಾಯಿತೆಂದು ಪ್ರಧಾನಿಯವರು ತಿಳಿಸಿದ್ದಾರೆ. ಈ ನಡುವೆ ತಕ್ಷಣದಲ್ಲಿಯೇ ಇವರನ್ನು ಕೈದಿಯಾಗಿ ಒಪ್ಪಿಸುವ ಅಗತ್ಯ ತಪ್ಪಿದರೆ ತಪ್ಪಲಿ, ರಾಜ್ಯಾಂಗದ ಯಾವ ಶಾಸನವನ್ನೂ ಇದರಿಂದ ಮುರಿಯಬೇಕಿಲ್ಲ. ನ್ಯಾಯಾಂಗಕ್ಕೆ ಅಗೌರವವಿಲ್ಲ ಎನ್ನಿಸಿತು.ಅದರೂ ರಾಜ್ಯಗಳು ವ್ಯಕ್ತಿಶವಾಗಿ ನಾನಾವತಿಯ ವಿಷಯದಲ್ಲಿ ಪಕ್ಷಪಾತ ವಹಿಸುತ್ತಿಲ್ಲ ಎಂದು ಕ್ರಿಯಾವಿಧಾನ ಕಾಣಿಸಿದ್ದರೆ ಚೆನ್ನಾಗಿತ್ತು.

ಅವರ ವ್ಯವಹಾರ ಸುಪ್ರೀಂ ಕೋರ್ಟಿಗೆ ಅಪೀಲಿಗಾಗಿ ಸ್ವೀಕೃತವಾಗುವುದೊ ಇಲ್ಲವೊ ನಿರ್ಣಯವಾಗಬೇಕಾಗಿದೆ. ಅಪೀಲ್ ಸ್ವೀಕಾರವಾದರೆ ನೌಕಾರಕ್ಷಣೆಯಲ್ಲಿಯೇ ಮುಂದುವರೆದುಬಿಡಬಹುದೆಂದು ಆ ನ್ಯಾಯಾಧೀಶರು ಒಪ್ಪಿಕೊಳ್ಳಬಹುದು, ಬಿಡಬಹುದು. ಅಪೀಲು ಸ್ವೀಕಾರವಾಗದಿದ್ದರೆ ಸಾಮಾನ್ಯ ಕೈದಿಯಂತೆ ಇವರೂ ಸರ್ಕಾರದ ವಶಕ್ಕೆ ಬರುತ್ತಾರೆ. ಎಲ್ಲರಂತೆ ಶಿಕ್ಷೆ ಅನುಭವಿಸುತ್ತಾರೆ. ಪ್ರಜಾತತ್ವದ ಎಲ್ಲ ಹಕ್ಕನ್ನು ಕಳೆದುಕೊಳ್ಳುತ್ತಾರೆ. ಕೊಲೆಗಾರರೆಂಬ ಅಪರಾಧಕ್ಕೆ ಪೂರ್ತಿ ಒಳಪಡುತ್ತಾರೆ. ಯಾರ ಕಾರಣದಿಂದ ಇಷ್ಟೆಲ್ಲ ನಡೆಯಿತೊ ಆ ಪ್ರಿಯರಲ್ಲಿ ಒಬ್ಬರಿಗೆ ಸಾವಾಯ್ತು; ಇನ್ನೊಬ್ಬರಿಗೆ ಒಂದು ಕಡೆ ಪ್ರಿಯನ ಮರಣ, ಇನ್ನೊಂದು ಕಡೆ ಮದುವೆಯಾದ ಗಂಡನಿಗೆ ಆಜೀವ ಶಿಕ್ಷೆ ಸಂಪಾದಿಸಿಕೊಟ್ಟದ್ದು ಮಾತ್ರ ಆಯಿತು.

ಎಲ್ಲಕ್ಕಿಂತ ವಿಶೇಷ ಇದರಲ್ಲಿ ಪ್ರಾಧಾನ್ಯಕ್ಕೆ ಬಂದ ಸಂಗತಿ : ರಾಜ್ಯಾಂಗ ಶಾಸನದ ಪ್ರಕಾರ ಕಾರ್ಯಾಂಗ, ನ್ಯಾಯಾಂಗಗಳಿಗೆ ಇರುವ ಸ್ವಾತಂತ್ರ್ಯ, ಅಧಿಕಾರಗಳ ವ್ಯಾಪ್ತಿ ನಿರ್ಣಯ. ರಾಜ್ಯಾಂಗ ಶಾಸನದ ಪ್ರಕಾರ ಅವರವರ ಕ್ಷೇತ್ರದಲ್ಲಿ ಅವರವರಿಗೆ ಸರ್ವ ಪ್ರಾಧಾನ್ಯವುಂಟು; ಒಬ್ಬರ ಅಧಿಕಾರ ವ್ಯಾಪ್ತಿಯಲ್ಲಿ ಇನ್ನೊಬ್ಬರು ನೆರೆಯುವುದಿಲ್ಲ. ಶಾಸನ ಪ್ರಕಾರ ಕಾರ್ಯಾಂಗದ ಮೇಲೆ ಮಿತಿಗಳಿರುವ ಕಡೆ ರಾಜಾಜ್ಞೆ ನ್ಯಾಯಾಂಗದ ವಿಚಾರಣೆ, ಟೀಕೆಗಳಿಗೆ ಒಳಪಡುವುದೇ ಹೊರತಾಗಿ 161ನೆಯ ಕಲಮಿನಂತೆ ಕಾರ್ಯಾಂಗಕ್ಕೆ ಎಂದರೆ ರಾಜ್ಯಾಧ್ಯಕ್ಷರಿಗೆ, ರಾಜ್ಯಪಾಲರಿಗೆ, ಸರ್ಕಾರಗಳಿಗೆ ಸರ್ವಪ್ರಾಧಾನ್ಯ ಸಲ್ಲುತ್ತದೆ. ಸರ್ಕಾರದ ಅನುಮತಿ ಸಲಹೆ ಪಡೆದೊ ಪಡೆಯದೆಯೊ ಕಾರಣ ಕೊಟ್ಟೊ ಕೊಡದೆಯೊ ರಾಜ್ಯಪಾಲರೂ ರಾಜ್ಯಾಧ್ಯಕ್ಷರೂ ಸ್ವಂತವಾಗಿ ವರ್ತಿಸಬಹುದು; ಅದಕ್ಕೆ ಅವರೇ ಹೊಣೆ. ಅವರು ತಮ್ಮ ಮೇಲಾಧಿಕಾರಿಗಳಿಗೆ, ಕಡೆಯಲ್ಲಿ ಪಾರ್ಲಿಮೆಂಟಿಗೆ ಮಾತ್ರ ಬಾಧ್ಯರು. ನ್ಯಾಯಾಂಗಕ್ಕೆ ವಹಿಸಿರುವ ಕ್ಷೇತ್ರದಲ್ಲಿ ನ್ಯಾಯಾಂಗದ್ದೇ ಕಡೆಯ ಮಾತು; ಯಾರ ಪ್ರಸನ್ನತೆ, ಭಯಗಳೂ ಅದಕ್ಕೆ ಅಡ್ಡಿಯಲ್ಲ;

ಪಾರ್ಲಿಮೆಂಟಿನ ಶಾಸನಾಧಿಕಾರ ರಾಜ್ಯಾಂಗವನ್ನೇ ಮಾರ್ಪಡಿಸಬಲ್ಲದು; ಸರ್ಕಾರಗಳನ್ನು ಉರುಳಿಸಬಲ್ಲದು; ನಿರಂತರವಾಗಿ ಅಧಿಕಾರಿಗಳಿಗೆ ಗ್ರಹಚಾರ ಬಿಡಿಸಬಲ್ಲದು; ಯಾರ ಮುಖದಿಂದಾದರೂ ನೀರಿಳಿಸಬಲ್ಲದು - ಎಂಬ ತತ್ವ ಬೊಂಬಾಯಿ ಅಟಾರ್ನಿ ಜನರಲ್ಲರ ವಾದದಲ್ಲಿ ಸ್ಫುಟವಾಗಿ ಎದ್ದು ನಿಂತಿದೆ. ಇದೆಲ್ಲ ರಾಜ್ಯಾಂಗ ತಜ್ಞರಿಗೆ ವೇದ್ಯವಾದ ರಹಸ್ಯ. ಕಾರ್ಯಾಂಗದ ಅಧಿಕಾರಕ್ಕೆ ಈ ಮೂಲಕ ಬರುವ ಸರ್ವ ಪ್ರಾಧಾನ್ಯ ಈ ಮಟ್ಟಿಗೆ ವ್ಯಾಪಿಸಬೇಕೆ? ವ್ಯಾಪಿಸುವಂತೆ ಬಿಡಬೇಕೆ? ಯಾವ ವರ್ಗದ ಅಧಿಕಾರಿಗೇ ಆಗಲಿ, ಸರ್ಕಾರ ವಿಶೇಷ ಸೌಕರ್ಯ ಕಲ್ಪಿಸಬಹುದೆ? ನಮ್ಮ ರಾಜ್ಯಾಂಗದಲ್ಲಿ ಅಮೇರಿಕದ ಅಧಿಕಾರಿಗಳ ಪೃಥಕ್ಕರಣದಲ್ಲಿ ಇಷ್ಟು ಖಡಾಖಂಡಿತವಾದ ವ್ಯಾಪನೆಯುಳ್ಳದ್ದೇ? ಅಂಗಗಳ ನಡುವೆ ವಾದವೆದ್ದರೆ ನಿರ್ಣಯ ಯಾರದು? ಹೇಗೆ? - ಎಂಬ ಮೂಲಾಂಶಗಳು ನಾಳೆ ಇತ್ಯರ್ಥವಾಗಬೇಕಾಗುತ್ತದೆ. ಒಬ್ಬರ ಒಂದು ವ್ಯವಹಾರ ರಾಜ್ಯಾಂಗ ಶಾಸನದ ಮೂಲತತ್ವಗಳನ್ನು ವಿಶದಪಡಿಸುವ ಪ್ರಭಾವವಾದ್ದು ಇದರ ವಿಶೇಷವಾಗಿದೆ.

19-3-1960

❑

# 11. ಸಂಪುಗಳು

ಇಂದು ನಮ್ಮ ಆರ್ಥಿಕ ವ್ಯವಸ್ಥೆಯನ್ನು ನೋಡಿ. ಅಲ್ಲಿ ಒಂದು ವಿಶೇಷ ಲಕ್ಷಣ ಕಾಣುತ್ತದೆ. ಹಿಂದಿನ ಕಾಲಗಳಲ್ಲಿ ಇದಿರುತ್ತಿರಲಿಲ್ಲ. ಎಲ್ಲ ಬಗೆಯ ಉತ್ಪತ್ತಿಯ ಪರಿಮಾಣವೂ ಇಂದು ದೊಡ್ಡದು. ಉತ್ಪತ್ತಿಯಲ್ಲಿ ತೊಡಗಿರುವ ಸಂಸ್ಥೆಗಳು ಬಹು ದೊಡ್ಡ ಗಾತ್ರದವು. ಅದನ್ನು ನಡಸುವ ಚಾಲಕರು ಲಕ್ಷಾಂತರ ರೂಗಳ ಬೆಲೆಬಾಳುವ ಯಂತ್ರಗಳನ್ನು ಕೂಡಿಸುತ್ತಾರೆ. ಮೂಲ ಸಾಮಗ್ರಿಗಳನ್ನು ಕೊಳ್ಳುತ್ತಾರೆ. ಯಂತ್ರಗಳನ್ನು ನಡಸಿ, ಉತ್ಪತ್ತಿಯನ್ನು ಒಪ್ಪಗೊಳಿಸಿ ಅದನ್ನು ಯಂತ್ರಶಾಲೆಗಳಿಗೆ ಸಾಗಿಸಲು ರೈಲ್ವೆ ಸೌಕರ್ಯ, ಟ್ರಕ್, ಲಾರಿ, ವ್ಯಾನ್ ಮುಂತಾದ ಮೋಟಾರ್ ವಾಹನಗಳ ಸೌಕರ್ಯ ಸಾಕಾದಷ್ಟು ಬೇಕಾಗುತ್ತದೆ. ಇದಕ್ಕೆಲ್ಲ ಹಣ ಬೇಕು. ಇಷ್ಟು ಹಣವನ್ನು ಯಾರೊಬ್ಬರೂ-ಇಬ್ಬರು- ಮೂವರು ಪಾಲುಗಾರರು ಹಾಕುವುದು ಕಷ್ಟ. ಕಂಪನಿಗಳು, ಕಾರ್ಪೊರೇಷನ್, ಸಿಂಡಿಕೇಟ್ ಎಂಬ ಬಗೆಬಗೆಯ ಹೆಸರಿನ ರಚನೆಯ ಸಂಸ್ಥೆಗಳು ಹುಟ್ಟಿಕೊಂಡು ಖಾಸಗಿಯಾಗಿಯೊ, ಸರ್ಕಾರದ ಪರವಾಗಿಯೊ ಈ ಉತ್ಪತ್ತಿ ಕಾರ್ಯವನ್ನು ಕೈಕೊಳ್ಳುತ್ತವೆ. ಇದಕ್ಕೆ ಬೀಳುವ ಬಂಡವಾಳವನ್ನು ಹತ್ತಾರು ಸಾವಿರ ಮಂದಿ ಷೇರುದಾರರಿಂದ ಚಂದಾ ಎತ್ತುತ್ತವೆ. ಷೇರನ್ನು ಕೊಳ್ಳಲು ಜನ ಸಾಮಾನ್ಯರಿಗೆಲ್ಲ ಅವಕಾಶವಿರುತ್ತದೆ. ಆದ್ದರಿಂದ ಷೇರುದಾರರು ದೇಶದ ಮೂಲೆಮೂಲೆಗಳವರೂ ಆಗಿರಬಹುದು. ಎಂದರೆ ಬಂಡವಾಳ ಹಾಕುವ ಕಂಪೆನಿಯ ಒಡೆಯರು ದೇಶದಲ್ಲೆಲ್ಲ ಚೆದರಿರುತ್ತಾರೆ. ಈ ಎಲ್ಲರೂ ವಾರ್ಷಿಕ ಸಭೆಗಳಿಗೂ ಸೇರುವುದಕ್ಕಾಗುವುದಿಲ್ಲ. ಈ ಷೇರುದಾರರು ತಮ್ಮ ತಮ್ಮಲ್ಲಿ ಪ್ರಬಲರಾದ, ದಕ್ಷರಾದ, ಹಣಸ್ಥಿತಿಯಲ್ಲಿ ಚೆನ್ನಾಗಿರುವವರನ್ನು ಚಾಲಕ ಮಂಡಲಿಗೆ, ನಿರ್ದೇಶಕ ಮಂಡಲಿಗೆ ಆಯುತ್ತಾರೆ. ಅವರಲ್ಲಿ ಒಬ್ಬರೊ ಅವರು ಸಂಬಳಕ್ಕಿಟ್ಟುಕೊಂಡ ಇನ್ನಾರೊ ಒಬ್ಬರೊ ದಿನದಿನದ ಕಾರ್ಯಚಾಲನೆ ವ್ಯವಸ್ಥೆಯನ್ನು ನೋಡಿಕೊಳ್ಳುತ್ತಾರೆ. ಹೀಗೆ ಒಡೆಯರು ಯಾರೊ, ಎಲ್ಲೆಲ್ಲಿಯವರೊ? ಕೆಲಸ ಮಾಡಿಸುವವರು? ಅವರೂ ಸಂಬಳಕ್ಕಿರುವವರು. ಇವರು ಯಂತ್ರ ಎಷ್ಟು ಬೇಕು, ಮೂಲ ಸಾಮಗ್ರಿ ಎಷ್ಟು ಬೇಕು, ಎಂಥೆಂಥ ಕೆಲಸಗಾರರು ಎಷ್ಟೆಷ್ಟು ಬೇಕು ಎಂಬುದನ್ನು ಯೋಚನೆ ಮಾಡಿ, ಒಳಗಿನ ಕೆಲಸ ವಿಚಕ್ಷಣೆಯಿಂದ ನಡೆಯುವಂತೆಯೂ ಯಾವುದೂ ಪೋಲಾಗದಂತೆಯೂ ಉತ್ಪತ್ತಿಗೆ ತಗಲುವ ವೆಚ್ಚ

ಅಧಿಕವಾಗದಂತೆಯೂ ಒಳಗೆ ಸಂವಿಧಾನವನ್ನು ಕಲ್ಪಿಸುತ್ತಾರೆ. ಪೇಟೆಯಲ್ಲಿ ತಮ್ಮ ಉತ್ಪತ್ತಿಗೆ ಎಲ್ಲಿ ಬೇಗ ಗಿರಾಕಿ ದೊರೆಯುವುದು, ಎಲ್ಲಿ ಹೆಚ್ಚು ಲಾಭ ಸಂಪಾದಿಸಬಹುದು ಎಂಬುದರ ಕಡೆ ಕಣ್ಣಿಟ್ಟು ಉತ್ಪತ್ತಿಯ ಲಾಭ ಹೆಚ್ಚುವಂತೆ ಮಾಡಿಕೊಳ್ಳುವರು. ಖರ್ಚು ಕಳೆದು, ಆಪದ್ಧನ ತೆಗೆದಿಟ್ಟಮೇಲೆ ಉಳಿದುದನ್ನು ಬಂಡವಾಳಗಾರರಿಗೆ ಡಿವಿಡೆಂಡ್ ರೂಪದಲ್ಲಿ ಹಂಚುವರು. ಹೆಚ್ಚು ಲಾಭ ಬಂದರೆ ಡಿವಿಡೆಂಡ್ ಹೆಚ್ಚಾಗುವುದು. ಕಡಮೆಯಾದರೆ ಅದಕ್ಕೆ ಬರುವ ಶೇಕಡಾ ಲಾಭ ಕಡಮೆ. ಈ ಎಲ್ಲ ಕಾರ್ಯ ಮಾಡುವಾಗ ಬಹುವಾಗಿ ಕೊಳ್ಳುವುದನ್ನೆಲ್ಲ ಅಗ್ಗಕ್ಕೆ ಕೊಳ್ಳುವುದೊ, ಮಾರುವುದನ್ನು ತಗ್ಗಿಗೆ ಮಾರುವುದೊ ಇಂಥ ಸಂಸ್ಥೆಗಳ ದೃಷ್ಟಿಯಾಗುತ್ತದೆ, ಕ್ರಿಯಾವಿಧಾನವಾಗುತ್ತದೆ.

ಕೊಳ್ಳುವ ಎಲ್ಲ ಬಾಬುಗಳೂ ಹೀಗೇ. ಯಂತ್ರಗಳನ್ನು ಹೇಗೆ ಕೊಳ್ಳುವರೊ ಹಾಗೆಯೇ ಮೂಲಸಾಮಗ್ರಿಗಳನ್ನು ಕೊಳ್ಳುವರು. ಕೆಲಸಗಾರರ ಶ್ರಮವನ್ನು ಕೊಳ್ಳುವರು. ಎಲ್ಲಿಯವರೆಗೆ ಬಗೆಬಗೆಯ ನಿಪುಣತೆ, ತಿಳಿವಳಿಕೆ, ಅನುಭವ, ದಕ್ಷತೆ ಈ ಉತ್ಪತ್ತಿ ಕಾರ್ಯಕ್ಕೆ ಆವಶ್ಯಕವೊ ಅಲ್ಲಿಯವರೆಗೆ ಕೆಲಸಕ್ಕೆ ಇಟ್ಟುಕೊಳ್ಳುವ ಕೆಲಸಗಾರರ ಮಟ್ಟ ಅಂತಸ್ತು ಬೇರೆಯಾಗುತ್ತದೆ. ಇವರಲ್ಲಿ ತಿಂಗಳಿಗೆ ಸಾವಿರಾರು ರೂ. ಸಂಬಳ ಪಡೆಯುವವರು ಇರುವಂತೆಯೇ ದಿನಕ್ಕೆ ಒಂದೆರಡು ರೂಪಾಯಿ ದರದಲ್ಲಿ ಕೆಲಸ ಮಾಡುವ ಸಾವಿರಾರು ಮಂದಿ ಕೆಲಸಗಾರರೂ ಇರುತ್ತಾರೆ. ಹೆಚ್ಚು ಸಂಬಳದವರ ಸಂಖ್ಯೆ ಕಡಮೆ, ಸಾಧಾರಣದವರದು ಹೆಚ್ಚು. ಈ ಎಲ್ಲ ಕೆಲಸಗಾರರೂ ತಮ್ಮ ತಮ್ಮ ದರ್ಜೆಯ ಸಂಘಗಳನ್ನು ಮಾಡಿಕೊಂಡು ತಮ್ಮ ಶಕ್ತಿಯನ್ನು ಹೆಚ್ಚಿಸಿಕೊಳ್ಳುವುದು ರೂಢಿ. ಇಂದು ಎಲ್ಲ ಮಟ್ಟದ ಕೆಲಸಗಾರರೂ ಈ ರೀತಿ ಕಾಮಗಾರ ಸಂಘಗಳನ್ನು ಮಾಡಿಕೊಳ್ಳುತ್ತಾರೆ. ಬೇರೆ ಬೇರೆ ಕಾಮಗಾರ ಸಂಘಗಳು ಸೇರಿ ಒಂದೊಂದು ದೇಶದಲ್ಲಿಯೂ ರಾಷ್ಟ್ರವ್ಯಾಪ್ತಿಯುಳ್ಳ ಸಂಸ್ಥೆಗಳನ್ನು ನಿರ್ಮಾಣ ಮಾಡಿಕೊಳ್ಳುತ್ತಾರೆ. ಇವುಗಳಲ್ಲಿ ಪಕ್ಷಗಳೂ ಬಣಗಳೂ ಉಂಟು. ಕೆಲವೇಳೆ ರಾಜಕೀಯ ಪಕ್ಷಗಳ ಪಕ್ಷಪಾತವೂ ರಂಗೂ ಇವಕ್ಕೆ ಬರುತ್ತವೆ. ಕೆಲವೇಳೆ ಇಂಥಾ ರಾಷ್ಟ್ರಸಂಸ್ಥೆಗಳವರು ಅಂತಾರಾಷ್ಟ್ರೀಯ ಸಮ್ಮೇಳನಗಳಿಗೆ ಸದಸ್ಯರಾಗುತ್ತಾರೆ. ಉತ್ಪತ್ತಿ ಮಾಡುವ, ಮಾಡಿಸುವ ಒಡೆಯ ವರ್ಗಕ್ಕೂ ಈ ಕೆಲಸಗಾರ ವರ್ಗಕ್ಕೂ ವ್ಯವಹಾರದಲ್ಲಿ ಶಕ್ತಿ ಸಮತೆ ಬರುವಂತೆ ಈ ವ್ಯವಸ್ಥೆ ಹುಟ್ಟಿಕೊಳ್ಳುತ್ತದೆ. ಇಂಥ ಸಂಸ್ಥೆಗಳ ಕೈಯಲ್ಲಿ ಸಂಗ್ರಹವಾದ ಹಣವೂ ತುಂಬಾ ಹೆಚ್ಚಾಗಿ ಬೆಳೆವಂತೆ ನೋಡಿಕೊಳ್ಳುತ್ತಾರೆ.

ಒಂದು ಹೆಚ್ಚು ಸಂಗತಿಯನ್ನು ನೆನಪಿನಲ್ಲಿಡಬೇಕು. ಯಂತ್ರಗಳದು ಮನುಷ್ಯರಂತಹ ಜೀವವಲ್ಲ. ಅವು ಸರಿಯಾಗಿ ಕೆಲಸ ಮಾಡುವವರೆಗೂ ಅದನ್ನು ಮಾಡಿಸಿಕೊಂಡು ಅವನ್ನು ಆಮೇಲೆ ಮಾರಿಬಿಡಬಹುದು, ತಿಪ್ಪೆಗೆಸೆಯಬಹುದು. ಈಗಿನ ಕಾಲದಲ್ಲಿ ಹೊಸ ಹೊಸ ಶಕ್ತಿಯ ಯಂತ್ರಗಳ ನಿರ್ಮಾಣವಾಗುತ್ತಿರುತ್ತದೆ. ಹಳೆಯದನ್ನು ಮಾಡಿ ಹೊಸದನ್ನು ಕೊಂಡರೆ ಒಂದಕ್ಕೆ ನಾಲ್ಕು ಪಟ್ಟು, ಹತ್ತು ಪಟ್ಟು ಉತ್ಪತ್ತಿ ಮಾಡಿಕೊಳ್ಳಬಹುದಾಗುತ್ತದೆ. ಹಿಂದೆ ಕೆಲಸಕ್ಕೆ ಇಟ್ಟುಕೊಳ್ಳುತ್ತಿದ್ದಷ್ಟು ಜನ ಕೆಲಸಕ್ಕೆ ಬೇಕಾಗದು. ಅದಕ್ಕಾಗಿ ಹೂಡಬೇಕಾದ ಬಂಡವಾಳವನ್ನು ಒದಗಿಸುವುದು ಕಂಪನಿಗೆ ದುಸ್ತರವಾಗದಿದ್ದರೂ ಹಾಗೆ ಮಾಡುವುದು ಅವರಿಗೆ ಪ್ರಯೋಜನವಿಲ್ಲದಿರಬಹುದು. ಹಾಗೆ ಮಾಡುವ ಧಾರಾಳ ಕೆಲಸಗಾರರಿಗೆ ವಿರೋಧವಾದ್ದು. ಆದ್ದರಿಂದ ಈ ವರ್ಗಗಳು ಅದಕ್ಕೆ ಅಡ್ಡಿ ಮಾಡುತ್ತಾರೆ. ಅಂದರೆ ಉತ್ಪತ್ತಿಯ ಪ್ರಗತಿಗೆ ಆ ಮಟ್ಟಿಗೆ ಕೆಲಸಗಾರ ವರ್ಗ ವಿರುದ್ಧವಾಗುತ್ತದೆ. ಹೊಸ ನಿರ್ಮಾಣ ವಿಧಾನವನ್ನುಳ್ಳ ಯಂತ್ರಗಳ ಪರಮ ಪ್ರಯೋಗಕ್ಕೂ ಈ ಕೆಲಸಗಾರ ವರ್ಗಕ್ಕೂ ಒಳಕೋಟಲೆ ಇದೆಯೆಂದಾಯ್ತು. ನಿರ್ಮಾಣ ಕಂಪನಿಗಳಿಗೂ ಕೆಲಸಗಾರ ಮಂಡಲಿಗೂ ನಡುವೆ ಮೂಲಭೂತವಾದ ಈ ಪ್ರಯೋಜನ ಭೇದ ನಟ್ಟು ನಿಂತಿರುವುದನ್ನು ಮರೆಯಬಾರದು.



ಕೆಲಸಗಾರ ಸಂಘಗಳು ಕೆಲಸಗಾರರಿಗೆ ಯಾವ ಬಗೆಯ ಪ್ರಯೋಜನವನ್ನು ಒದಗಿಸುತ್ತವೆ? ಕೆಲಸಗಾರರ ಪ್ರಯೋಜನ ಎಷ್ಟು ಕೆಲಸ ಕಡಮೆ ಮಾಡಿ, ಎಷ್ಟು ಹೆಚ್ಚು ಕೂಲಿ ಸಂಬಳ ಸಂಪಾದಿಸಬಹುದು ಎಂಬುದು. ದಿನಕ್ಕೆ ಎಷ್ಟು ಗಂಟೆ, ವಾರಕ್ಕೆ ಎಷ್ಟು ದಿನ ಕೆಲಸ? ರಜ, ವಿರಾಮ ದಿನ, ಕೆಲಸದಲ್ಲಿ ನಡುವೆ ವಿಶ್ರಾಂತಿ ಉಪಚಾರ ಇವುಗಳ ಏರ್ಪಾಡು; ಸಂಬಳ ಸಾರಿಗೆಗಳ ಸೌಕರ್ಯ ಕ್ರಮ ಹೇಗೆ? ಬಡ್ತಿ, ವಿಶ್ರಾಂತಿ ವೇತನಗಳ ಏರ್ಪಾಡು ಹೇಗಿವೆ? ಜೀವನದ ವೆಚ್ಚ ಹೆಚ್ಚು ಕಡಮೆಯಾದರೆ ಕೂಲಿ, ಸಂಬಳ ವ್ಯತ್ಯಾಸವಾಗುವ ಏರ್ಪಾಡಿದೆಯೆ? ಕೆಲಸಕ್ಕೆ ಸೌಕರ್ಯವುಳ್ಳ ಆವರಣದಲ್ಲಿ ಗಾಳಿ, ಬೆಳಕು, ನೀರು, ತಿಂಡಿ ತೀರ್ಥಗಳ ಒದಗಣೆಯ ಅನುಕೂಲಗಳಿವೆಯೆ? ಕೆಲಸಗಾರರಿಗೆ ಕಾಯಿಲೆ ಕಸಾಲೆಯಾದಾಗ, ಕಣ್ಣು ಕೈಕಾಲು ಹೋದಾಗ ನೆರವು ದೊರೆಯುವ ಏರ್ಪಾಡಿದೆಯೆ? ಕೆಲಸದ ವಯಸ್ಸು ಮುಗಿದು ಮನೆಗೆ ಹೋಗುವಾಗ ಯಾವ ಬಗೆಯ ನೆರವು ದೊರಕುವುದು? ಕೆಲಸಗಾರರ ಮಕ್ಕಳು ಮರಿಗಳ ವಿದ್ಯಾಭ್ಯಾಸಕ್ಕೂ ಕುಟುಂಬದ ಆರೋಗ್ಯ, ಕ್ಷೇಮಲಾಭ ಸಾಧನೆಗೂ ಕಂಪನಿಗಳವರು ಸೌಕರ್ಯ ಕಲ್ಪಿಸಿರುತ್ತಾರೆಯೆ? - ಎಂಬ ನೂರಾರು ಈ ಕೆಲಸಗಾರರ ಸಂಘಗಳವರು ನಿರಂತರವಾಗಿ ಯೋಚನೆ ಮಾಡುವ ಸಂಗತಿಗಳು. ಇವನ್ನು ದೊರಕಿಸುವುದಕ್ಕಾಗಿ ಕಂಪನಿಗಳೊಡನೆ ಅವರು ಸಂಧಾನ ನಡಸುತ್ತಲೂ ಇರುತ್ತಾರೆ. ಇನ್ನು ಕೆಲವು ಕಡೆ ಕಂಪನಿಯ ಲಾಭದಲ್ಲಿ ಇಷ್ಟು ಭಾಗ ಕೆಲಸಗಾರರಿಗೆ ಹೀಗೆ ಹೀಗೆ ಸಲ್ಲಿಸಬೇಕೆಂಬ ಒಪ್ಪಂದ ಆಗುತ್ತದೆ. ಸಂಘಗಳ ಶಕ್ತಿ ಎಷ್ಟಿದ್ದರೆ ಈ ಅನುಕೂಲದ ಆವರಣ ಅಷ್ಟು ಉತ್ತಮ ಪಡಬಲ್ಲದು. ಅನೇಕ ವೇಳೆ ಆಯಾ ದೇಶದ ಸರ್ಕಾರ ಈ ಈ ಕಾರ್ಯ ಹೀಗೇ ನಡೆಯತಕ್ಕದ್ದು, ಇಷ್ಟರವರೆಗೂ ತಾವು ಈ ಈ ವರ್ಗಗಳ ಪ್ರಯೋಜನಗಳನ್ನು ರಕ್ಷಿಸುತ್ತೇವೆ, ಸಾಧಿಸಿಕೊಡುತ್ತೇವೆ ಎಂದು ಹೇಳುತ್ತಾರೆ. ಸರ್ಕಾರ ಯಾವ ಪಕ್ಷದ್ದು ಎಂದು ಹೇಳಿದರೆ ಅವರ ಪಕ್ಷಪಾತ ಕಂಪನಿಗಳ ಕಡೆಗೋ ಕೆಲಸಗಾರರ ಕಡೆಗೋ ಎಂದು ಸ್ಥೂಲವಾಗಿ ಹೇಳಬಹುದು.

ಕೆಲಸಗಾರರ ಪರವಾಗಿ ಇನ್ನೊಂದು ಮಾತನ್ನು ನುಡಿಯುವುದು ಅಗತ್ಯ. ಇವರೂ ಮನುಷ್ಯರು ಎಂದೆ. ಜೀವವಿರುವ ಸಮಾಜ ಜನ. ಇವರ ಆರೋಗ್ಯ, ನಿಪುಣತೆ, ನೆಮ್ಮದಿ, ಉತ್ಸಾಹ ಬೆಳೆದಷ್ಟೂ ಕಂಪನಿಗೂ ಪ್ರಯೋಜನ, ಪ್ರಜಾಲೋಕಕ್ಕೂ ದೇಶಕ್ಕೂ ಹಿತ. ದುಡಿಯುವವರು ಮನುಷ್ಯರಾಗಿರುವಾಗ ಮನುಷ್ಯರ ಕಡೆ ಒಲವು ಸಮಾಜಕ್ಕೆ ಹೆಚ್ಚು. ಇಷ್ಟು ಮಂದಿಯೂ ಮನುಷ್ಯತ್ವದಲ್ಲಿ ಬೆಳೆದಷ್ಟೂ ರಾಜ್ಯದ ಸ್ತಿಮಿತ, ಪ್ರಗತಿ, ಜೀವನ ಸಂತೋಷ, ಉತ್ಸಾಹ ಹೆಚ್ಚಾಗಬಲ್ಲವು. ಎಲ್ಲ ಉತ್ಪತಿಯೂ ಜನಕ್ಕಾಗಿಯೇ ಅಲ್ಲವೆ? ಉತ್ಪತ್ತಿಯ ಪ್ರಯೋಜನ ದುಡಿಯುವವರಿಗಿಲ್ಲವಾದರೆ ಸಮಾಜಕ್ಕೆ ಏನು ಲಾಭ? ಜನರೇ ಉತ್ಪನ್ನಕ್ಕೆ ಗಿರಾಕಿ. ಇವರ ಸುಖ ಭೋಗಕ್ಕಾಗಿಯೇ ಉತ್ಪತ್ತಿ ಮಂಡಲದ ಎಲ್ಲ ಕಾರ್ಯ. ಈ ಹೆಚ್ಚು ಜನದ ಪ್ರಯೋಜನದೃಷ್ಟಿ ಹೀಗೆ ಒಟ್ಟು ಸಮಾಜ ಜೀವನಕ್ಕೆ ಸಂಬಂಧಿಸಿದ ಅಂಶ. ಬೇಡವಾದ ಯಂತ್ರವನ್ನು ತೆಗೆದು ಹಾಕಿದಂತೆ ಈ ಜೀವಿಗಳನ್ನು ಕೆಲಸದಿಂದ ತೆಗೆದು ಹಾಕಲಾಗದು. ಅವರಿಗೆ ಸೌಕರ್ಯಗಳನ್ನು ಕಡಮೆ ಮಾಡುವುದಕ್ಕಾಗುವುದಿಲ್ಲ. ಈ ಮಾನವೀ ದೃಷ್ಟಿ ಕಂಪನಿ ಸಂಘಗಳ ದೃಷ್ಟಿಯಲ್ಲಿ ಬಹು ಮುಖ್ಯವಾದ ಸಂಗತಿ.

ಆದರೆ ಉತ್ಪತ್ತಿ, ಲಾಭ ಹೆಚ್ಚುತ್ತಿದ್ದರಂತೂ ಕೆಲಸಗಾರರಿಗೆ ದೊರಕಿಸುವ ಪ್ರಯೋಜನ ಹೆಚ್ಚು ಮಾಡಬಹುದು. ಲಾಭ ಹೆಚ್ಚಾದಾಗಲೇನೆ ಇವರು ಹೆಚ್ಚು ಪ್ರಯೋಜನವನ್ನು ಕೇಳುವರು: ಅವರು ಕೊಡಬಲ್ಲರು. ಲಾಭ ಕಡಮೆಯಾದಾಗಲೂ ಪೇಟೆಯಲ್ಲಿ ನಷ್ಟವಾದಾಗಲೂ ಅದರಲ್ಲಿಯ ಭಾಗವನ್ನು ಹೊರಲು ಕೆಲಸಗಾರರು ಸಿದ್ಧರಾಗಿರುವುದಿಲ್ಲ; ಶಕ್ತರಾಗಿರುವುದಿಲ್ಲ. ಕೆಲಸಗಾರರ ಪ್ರಯೋಜನ ಒಂದು ಪಕ್ಷದ, ಒಂದು ವರ್ಗದ ಹಿತಸಾಧನೆ. ತಾವು ಕೆಲಸ ಮಾಡುವವರೆಗೂ ತಮಗೆ ಈ ಈ ಸೌಕರ್ಯ ಕಡ್ಡಾಯವಾಗಿ ಇದ್ದೇ ತೀರಬೇಕು ಎಂದು ಅವರು ಹಟ ಹಿಡಿಯುವರು. ಇಂತಿಂಥ ಸಂಬಂಧದಲ್ಲಿ ಹಟ ಮಾಡುತ್ತೇವೆ ಎಂದು ಎಚ್ಚರಿಕೆ ಕೊಟ್ಟು ಸಂಪುಗಳನ್ನು ಹೂಡುವುದು ಪ್ರಜಾತಂತ್ರವಿರುವ ಎಲ್ಲಾ ರಾಷ್ಟ್ರಗಳಲ್ಲಿಯೂ ವೇದ್ಯವಾಗಿದೆ. ಸಂಪು ಹೂಡುವ ಹಕ್ಕೂ ಆ ಮೂಲಕ ಕಂಪನಿಗಳ ಮೇಲೆ ಒತ್ತಾಯ ಹಾಕಿ ತಮ್ಮ ಪ್ರಯೋಜನಗಳನ್ನು ಸಾಧಿಸುವ ಅಧಿಕಾರವನ್ನೂ ಸರ್ಕಾರ ಉಂಟು ಮಾಡಿರುತ್ತದೆ. ಸಮತಾವಾದಿ ಕಮ್ಯುನಿಸ್ಟ್ ಸರ್ಕಾರದಲ್ಲಿ ಈ ಹಕ್ಕಿಲ್ಲ. ಅಲ್ಲಿ ಸಂಪು ಆಗುವ ಸಂಭವವೇ ಇಲ್ಲ. ಕೆಲಸಗಾರರದೇ ಸರ್ಕಾರ - ಅವರು ಏಕೆ ಸಂಪು ಹೂಡಬೇಕು ಎಂಬ ಮಂತ್ರ, ತಂತ್ರ ಅವರದು. ಅಂತೂ ಆ ಹಕ್ಕು, ಆ ಸ್ವಾತಂತ್ರ್ಯ ಇಲ್ಲ. ಕಮ್ಯುನಿಸ್ಟರಿಗೆ ಪರಮ ಸ್ವಾತಂತ್ರ್ಯವಿರುವುದು ಪ್ರಜಾತಂತ್ರ ರಾಷ್ಟ್ರಗಳಲ್ಲಿ.

ಇತ್ತ ಕಂಪನಿಗಳಿಗೆ ಉತ್ಪತ್ತಿಯನ್ನು ಹೆಚ್ಚು ಮಾಡುವುದೇ, ಲಾಭವನ್ನು ಹೆಚ್ಚಿಸುವುದೇ ಗುರಿ. ಎತ್ತಿದ ಬಂಡವಾಳಕ್ಕೆ ಬಡ್ಡಿ ತೆರಬೇಕು. ಉತ್ಪತ್ತಿ ಸಾಹಸ ಮಾಡಿರುವ ಸಣ್ಣ ದೊಡ್ಡ ಒಡೆಯರಿಗೆ ಸಾಹಸದ ಪ್ರಯೋಜನವನ್ನು ದೊರಕಿಸಬೇಕು. ಎಲ್ಲೆಲ್ಲಿಯೂ



ಕಣ್ಣಿಟ್ಟು ಮೂಲ ಸಾಮಗ್ರಿಗಳನ್ನು ಒದಗಿಸಬೇಕು. ಸಾಗಣೆ ಸಾರಿಗೆ ವ್ಯವಸ್ಥೆಗಳನ್ನು ನೋಡಿಕೊಳ್ಳಬೇಕು. ಉತ್ಪತ್ತಿ ಶಾಖೆಗಳಲ್ಲಿ ವಿಚಕ್ಷಣೆಯಿಂದ ಕೆಲಸ ನಡೆಯಲು ಶಿಸ್ತು ನೆಲಸಿರುವಂತೆ ನೋಡಿಕೊಳ್ಳಬೇಕು. ಹೊರ, ಒಳ ವಿಚಕ್ಷಣೆ ಇವರ ಕೆಲಸ. ಜೊತೆಗೆ ಗಿರಾಕಿಗಳ ಮರ್ಜಿ ವಿಚಿತ್ರವಾಗಿರುತ್ತದೆ. ಜನಕ್ಕೆ ಬೇಕಾಗುತ್ತವೆಯೆಂದು ತಯಾರಿಸಿದ ಪದಾರ್ಥಕ್ಕೆ ಗಿರಾಕಿ ಮಾಯವಾಗಬಹುದು. ಇವರಿಗಿಂತ ಅಗ್ಗವಾಗಿ, ಇವರಿಗಿಂತ ಮೇಲಾದ ಇವೇ ಪದಾರ್ಥಗಳನ್ನು ಮಾರುವವರಿಗೆ ಸಹಜವಾಗಿ ಹೆಚ್ಚು ಗಿರಾಕಿ ಸಿಕ್ಕುತ್ತದೆ. ಅವರ ಜೊತೆಯಲ್ಲಿ ಪೈಪೋಟಿ ಮಾಡುವ ಇವರ ಶಕ್ತಿ ಕಡಮೆಯಾಗ ಬಹುದು. ಹೊರಗಿನವರ ಅಗ್ಗದ ಬೆಲೆಗೆ ಇವರು ಮಾರಿದ ಹೊರತು ಇವರ ಪದಾರ್ಥಕ್ಕೆ ಪೇಟೆ ದೊರೆಯದಾದ್ದರಿಂದ ಇವರಿಗೆ ಲಾಭ ಕಡಮೆಯಾಗವುದು. ಇದರಿಂದ ಹೆಚ್ಚು ದಿನ ಕಂಪನಿ ನಡಸುವುದಕ್ಕೇ ದುಸ್ತರವಾಗುತ್ತದೆ. ಈ ಎರಡು ಕ್ರಿಯಾಕಾಂಡಗಳಿಗೆ ಹೊಂದುವಂತಹ ವಿಚಕ್ಷಣೆ ಇಲ್ಲಿ. ಈ ವ್ಯವಹಾರ ಪ್ರಪಂಚದಲ್ಲಿ ಕರ್ಮಯೋಗ.

ಯಾವುದೇ ಕಾರಣದಿಂದ ಸಂಪು ನಡೆದರೆ ಅಷ್ಟು ಜನರ ಕೆಲಸ ಕಂಪನಿಯ ಪಾಲಿಗಿಲ್ಲ. ಎಂದರೆ ಅಷ್ಟು ಜನರ ಅಷ್ಟು ಕಾಲದ ಉತ್ಪತ್ತಿಯನ್ನು ಯಂತ್ರಗಳು ಮಾಡದಂತಾಗುವುದು. ಹೀಗೆ ಉತ್ಪತ್ತಿ ಕಡಮೆಯಾಯಿತು. ಕಂಪನಿಗೂ ಲಾಭವಿಲ್ಲ ವಾದಂತಾಯ್ತು. ಆ ಮಟ್ಟಿಗೆ ಕೆಲಸಗಾರರ ಕೂಲಿ ಸಂಬಳ, ಇತರ ಸೌಕರ್ಯಗಳು ಕಡಮೆ. ಧರ್ಮಕ್ಕೂ ಕಾನೂನಿಗೂ ಕಟ್ಟುಬಿದ್ದು ಕಂಪನಿ ತುಂಬಿಕೊಂಡಿದ್ದಾರೆ ಎಂದರ್ಥ. ಉತ್ಪತ್ತಿಕಾರರಲ್ಲದ ಇನ್ನೆಷ್ಟೋ ಜನ ಕಾರಕೂನರು, ದಲಾಲರು, ಕಾರ್ಯಭಾರಿಗಳು, ಸಾಗಣೆಯವರು, ಬ್ಯಾಂಕುಗಳವರು ಸಾವಿರಾರು ಜನಕ್ಕೆ ದೊರಕಬಲ್ಲ ಪ್ರಯೋಜನ ಆ ಮಟ್ಟಿಗೆ ನಿಲ್ಲುವಂತಾಗುತ್ತದೆ. ಈಗ ಮುಷ್ಕರ ಮಾಡುವ ಕೆಲಸದವರಿಗೆ ಅವರು ಕೇಳುವುದನ್ನು ಒದಗಿಸಿಕೊಡುವುದು ಒಂದು ಮಾರ್ಗ. ಉತ್ಪತ್ತಿ ಪ್ರಯೋಜನ ಹೆಚ್ಚಾಗಿರುವಾಗ ಇದು ಸುಲಭ. ಪ್ರಯೋಜನ ಇಲ್ಲದಿರುವಾಗ ಸಂಪು ಮಾಡುವವರ ಬೇಡಿಕೆಗಳನ್ನು ಪೂರೈಸುವುದು ಕಷ್ಟ. ಇಂಥ ಸಮಯದಲ್ಲಿ ಅವರ ಬೇಡಿಕೆ ಸಲ್ಲಿಸಲಾಗುವುದಿಲ್ಲ. ಕಂಪನಿಯನ್ನು ಕೆಲವು ಕಾಲ ಮುಚ್ಚುವುದು ರೂಢಿ. ಇವರಿಗೆ ಬುದ್ಧಿ ಕಲಿಸುತ್ತೇವೆಂದು ಅವರೂ ಅವರಿಗೆ ಬುದ್ಧಿ ಕಲಿಸುತ್ತೇವೆಂದು ಇವರೂ ವಾರವಾರಗಳ ಕಾಲ ಸೆಟೆಯುವುದು, ಇಬ್ಬರೂ ಕಷ್ಟಪಡುವುದು. ತಿರುಗಿ ಪುನಃ ಕೋಟಲೆ. ವಿಷಮತೆಯಿಂದ ಕ್ರೋಧಕ್ಕೆ, ಆವೇಶಕ್ಕೆ ಬೆಳೆಯಬಹುದು. ಎಷ್ಟು ದಿನ ಅದು ನಡೆದರೆ ಅಷ್ಟೂ ಅಷ್ಟು ನಷ್ಟ. ಕಂಪನಿಗಳಿಗೂ ನಷ್ಟ. ಈ ನಡುವೆ ಈ ಉತ್ಪತ್ತಿಯನ್ನು ನೆಚ್ಚಿಕೊಂಡಿರುವ ಜನವರ್ಗಕ್ಕೆ ನಷ್ಟ. ಈ ಕೋಟಲೆಯ ದಾರುಣತೆಯನ್ನು ಕಡಮೆ ಮಾಡಬೇಕಾಗಿರುವ ಸರಕಾರಕ್ಕೆ ಕಷ್ಟ.

ಇಂಥ ಪ್ರಸಂಗಗಳಲ್ಲಿ ಸರಕಾರ ಕೈಗಾರಿಕೆಯ ಶಾಂತಿ ನೀತಿಗಳ ನಿರ್ಬಂಧವನ್ನು ಕೈಕೊಳ್ಳುತ್ತದೆ. ಹೀಗೆ ನಡೆದರೆ ಸಂಪು ನ್ಯಾಯವಾಗುತ್ತದೆ, ಸಂಪು ನಡೆದಾಗ ಕಂಪನಿ

ಜನರು ಸಂಘಗಳೊಡನೆ ಸಂಧಾನಗಳನ್ನು ಹೀಗೆ ಹೀಗೆ ನಡಸತಕ್ಕದ್ದು, ಅವರ ಪ್ರತಿನಿಧಿಗಳ ಮೂಲಕ ನಡೆವ ಸಂಧಾನ ಇತ್ಯಾದಿ ನೀತಿ ನಿಯಮಗಳಿವೆ. ಇಬ್ಬರೂ ಒಪ್ಪುವ ತೀರ್ಮಾನಕ್ಕೆ ಬಾರದಿದ್ದರೆ ಮಧ್ಯಸ್ಥಗಾರರನ್ನೊ ನಿರ್ಣಾಯಕರನ್ನೊ ಕಾನೂನು ವಿಧಿಸುವುದು. ಇಲ್ಲಿಯೂ ತೀರ್ಮಾನವಾಗದೆ ಹೋದರೆ ಸಂಪು ನಿಲ್ಲಿಸತಕ್ಕದ್ದು, ಮುಚ್ಚಿದ ಕಂಪನಿ ತೆರೆಯತಕ್ಕದ್ದು. ಸರ್ಕಾರ ನೇಮಕ ಮಾಡುವ ಇಂಥ ಒಬ್ಬರ ಅಥವಾ ಕೆಲವರ ತೀರ್ಮಾನಕ್ಕೆ ಈ ವ್ಯವಹಾರವನ್ನು ಒಪ್ಪಿಸಿ, ಅವರ ನಿರ್ಣಯದಂತೆ ಎರಡು ಕಡೆಯವರೂ ನಡೆಯತಕ್ಕದ್ದು. ಅಲ್ಲಿಯೂ ಏನಾದರೂ ಅನ್ಯಾಯ ನಡೆದರೆ ದೇಶದ ಶ್ರೇಷ್ಠ ನ್ಯಾಯಸ್ಥಾನಕ್ಕೆ ಅಪೀಲು ಹೋಗುವ ಅವಕಾಶವುಂಟು. ಅಲ್ಲಿಯದು ಪರಮ ನಿರ್ಣಯ ಎಂದು ನಾಡಿನ ಶಾಸನ ಗೊತ್ತುಮಾಡಬಹುದು. ಇಷ್ಟು ಜಟಿಲವಾದ ವ್ಯವಹಾರ ಎಲ್ಲ ಸಂದರ್ಭಗಳಲ್ಲಿಯೂ ಅಗತ್ಯವಾಗದು.

ಆರ್ಥಿಕವಾಗಿ ತುಂಬ ಮುಂದುವರಿದಿರುವ ಬಹು ದೊಡ್ಡ ಕಂಪನಿಗಳೂ ಬಹು ಶಕ್ತ ಸಂಘ ಸಮ್ಮೇಳನಗಳೂ ಉತ್ಕಟವಾದ ಛಲಗಳಿಗೆ ಮುಟ್ಟುವುದುಂಟು. ಇಲ್ಲಿ ವಾದಗಳು ಬೆಳೆಯುವುದು ಸುಲಭ. ಭರತ ಖಂಡದಲ್ಲಿ ಇಂಥ ಕೆಲವು ಪ್ರಸಂಗಗಳು ನಡೆದಿವೆ. ಇವರನ್ನು ನೋಡಿಕೊಂಡು ಅವರು, ಅವರ ಸಹಾನುಭೂತಿಗೆಂದು ಮತ್ತೂ ಒಬ್ಬರು ಕಾರ್ಮಿಕ ವರ್ಗಗಳು ಸಾರ್ವತ್ರಿಕವಾಗಿ ಸಂಪು ಹರಡುವ ಅವಕಾಶವುಂಟು. ಉದ್ಯೋಗವನ್ನೇ ನಿಲ್ಲಿಸಿಬಿಡುತ್ತೇವೆಂದು ಕಂಪನಿಗಳು ಅವನ್ನು ಪೂರ್ತಿ ಒಪ್ಪಲು ಮನಸ್ಸು ಮಾಡಬಹುದು. ಯಂತ್ರ, ಗಿರಣಿ, ಅವುಗಳ ಸಾಮಾನುಗಳ ನಾಶಕ್ಕೆ ಯತ್ನಗಳು ನಡೆಯಬಹುದು. ಇಂಥ ಸಮಯಕ್ಕೆ ಸರ್ಕಾರಕ್ಕೆ ಕೈಗಾರಿಕಾ ನಾಶವನ್ನು ತಡೆಯ ಬೇಕಾದ. ಅಗತ್ಯ ಬೀಳುವುದು. ಈಚೆಗೆ ಅಮೇರಿಕದಲ್ಲಿ ನಡೆದು ಈ ವಾರದಲ್ಲಿ ತಾನೇ ಶಾಂತವಾದಂತಿರುವ ಉಕ್ಕಿನ ಕೆಲಸಗಾರರ ಸಂಪು, ಇಂಗ್ಲಂಡಿನಲ್ಲಿ ಅಚ್ಚಿನ ಮನೆ ಉದ್ಯೋಗದವರ ಸಂಪು ದೊಡ್ಡ ಆವೇಶಗಳನ್ನೂ ಕೋಟಲೆಗಳನ್ನೂ ಉಂಟುಮಾಡಿದವು. ಇಂಗ್ಲಂಡಿನ ಸಂಪು ಮುಕ್ತಾಯವಾದರೂ ಅಮೇರಿಕದ್ದು ಇನ್ನೂ ಪೂರ್ತಿ ನಿರ್ಣಯಕ್ಕೆ ಬಂದಿಲ್ಲ. ಸುಮಾರು ಐದು ಲಕ್ಷಜನ ಕೆಲಸಗಾರರು ಈ ವಾದ ವಿವಾದಗಳ ಸಂಪು ಹೂಡಿದ್ದಾರೆ. ಅವರ ಸಂಘಗಳು ಸಂಪಿನ ಕಾಲದ ಜೀವನಾವಶ್ಯ ಕತೆಗಳನ್ನು ಒದಗಿಸಿಕೊಟ್ಟು ಛಲದಲ್ಲಿ ನಿಂತಿದ್ದಾರೆ. 3 ತಿಂಗಳಿಗೆ ಮೇಲ್ಪಟ್ಟು ಇದು ನಡೆದಿದೆ. ಇಂಥ ಸಂಗತಿಗಳು ಲೋಕ ಸಾಮಾನ್ಯವಾಗಿರುವುದರಿಂದ ನಮ್ಮ ದೇಶದ ಇಂಥ ಕೋಟಲೆಗಳ ಮೇಲೆಯೂ ಬೆಳಕು ಬೀರುತ್ತವೆ. ವಸ್ತುಸ್ಥಿತಿಯನ್ನು ಅರಿಯುವ ಜೊತೆಗೆ ಜಿದ್ದಿಗೆ ಬೀಳುವ ತತ್ವಗಳು ಯಾವುವು? ಘರ್ಷಣೆಯ ನಿವಾರಣೋಪಾಯಗಳು ಯಾವುದಿವೆ? ಪರಿಹಾರ ವಿಧಾನಗಳು ಯಾವುವು ತೆರೆದಿವೆ ಎಂಬುದರ ಪರಿಚಯವಾಗುವುದು.



ವಿಷಯದ ನೆಲಸು ಈ ಎಲ್ಲ ಕಡೆಯೂ ಮುಖವಾದ್ದು. ಉತ್ಪತ್ತಿಕಾರರ ದೃಷ್ಟಿ, ರೀತಿ, ಪ್ರಯೋಜನ ಒಂದಂಗ. ಕೆಲಸಗಾರರ ದೃಷ್ಟಿ, ರೀತಿ, ಸಂಘಶಕ್ತಿ, ಉಪಪತ್ತಿ ಇನ್ನೊಂದಂಗ. ಈ ಕೋಟಲೆಯಿಂದ ದೇಶದ ಜೀವನಕ್ಕೆ ಬೇಕಾದ ವಸ್ತುಗಳ ಒದಗಣೆಗೂ ಸರ್ಕಾರದ ತೆರಿಗೆ ಉತ್ಪತ್ತಿಗಳಿಗೂ ಜನಹಿತ ಸಾಧನೆಯ ಕಾರ್ಯಗಳಿಗೂ ಕೈಗಾರಿಕೆಯಲ್ಲಿ ಶಾಂತಿ ಸ್ಥಾಪನೆಯ ಅಗತ್ಯಕ್ಕೂ ಅವರು ಕೈಕೊಳ್ಳಬೇಕಾದ ಕಾರ್ಯಕಲಾಪಗಳೂ ಮಧ್ಯವರ್ತನೆಯದೂ ಮೂರನೆಯ ಭಾಗ. ಕಡೆಯದು ಜನ ಸಾಮಾನ್ಯದ ಪ್ರಯೋಜನ. ಲೌಕಿಕವಾದ ಎಲ್ಲ ಪ್ರಯೋಜನಗಳೂ ದೊರಕಬೇಕಾದ್ದು ಜನರಿಗಾದ್ದರಿಂದ ಅವರ ಕ್ಷೇಮ ಲಾಭದ ಗಮನ ಮುಖ್ಯವಾಗುವುದು.

ಮೊದಲ ಮೂರು ವರ್ಗಗಳ ಕ್ರಿಯಾ ವ್ಯಾಪಾರ ನಾಡಿನ ಜೀವನಕ್ಕೆ ಗಾಸಿ ತರಬಾರದು. ಈ ನಾಲ್ಕು ದೃಷ್ಟಿಗಳೂ ಸಮನ್ವಯ ಹೊಂದಿದಲ್ಲದೆ ರಾಷ್ಟ್ರದ ಸಮಾಜ ಹಿತಸಾಧನೆ ಆಗಲಾರದು.

6-6-1960

❑

# 12. ಕ್ಯೂಬಾ ಪ್ರಸಂಗ

ಎಂಟು–ಹತ್ತು ವರ್ಷಗಳಿಂದ ಈಚೆಗೆ ಬರ್ಲಿನ್, ಫಾರ್ಮೋಸ, ಇಂಡೋಚೀಣ, ಈಜಿಪ್ಟ್, ಇರಾನ್ ಮುಂತಾದ ಭಾಗಗಳಿಗೆ ಸಂಬಂಧಿಸಿದಂತೆ ಕಮ್ಯುನಿಸ್ಟ್ ರಷ್ಯಾಕ್ಕೂ ಅಮೇರಿಕಾಕ್ಕೂ ನಡುವೆ ಎದ್ದ ಮನಸ್ತಾಪ ಉಲ್ಬಣ ಸ್ಥಿತಿಗೆ ಬಂದಿತ್ತು. ಹೊತ್ತಿದ ಬೆಂಕಿ ಹೆಚ್ಚಾಗಿ ಉರಿಯದೆ ಸ್ವಲ್ಪ ಸ್ವಲ್ಪದಲ್ಲಿ ಶಮನವಾಯಿತು. ಈ ವರ್ಷದ ಮೇ ತಿಂಗಳಲ್ಲಿ ಪ್ಯಾರೀಸಿನಲ್ಲಿ ಶೃಂಗ ಸಮ್ಮೇಳನ ಮುರಿದು ಬಿದ್ದ ಮೇಲೆ ಪುನಃ ಉರಿ ಎದ್ದಿದೆ. ಈ ಸಲ ಪಾಶ್ಚಿಮಾತ್ಯರ ಸಹಾಯಕ ರಾಷ್ಟ್ರಗಳಿಗೆಲ್ಲಾ ರಷ್ಯ ಕಟ್ಟೆಚ್ಚರಿಕೆ ಕೊಟ್ಟಿದೆ. ಅಮೇರಿಕ ಪಕ್ಷ ವಹಿಸಿದರೆ ಅವರಿಗೆ ಸರ್ವನಾಶ ಸಂಭವ ಎನ್ನುವ ಭಯವನ್ನುಂಟು ಮಾಡಿದೆ. ನಾರ್ವೆ, ಪಾಕಿಸ್ತಾನ, ತುರ್ಕಿ ರಾಜ್ಯಗಳಿಗೆ ಕೊಟ್ಟಿರುವ ಎಚ್ಚರಿಕೆಯೂ ಜಪಾನಿನಲ್ಲಿ ಬೆಳಸಿದ ವಿರಸವೂ ಇದಕ್ಕೆ ಉದಾಹರಣೆ. ಈಚೆಗೆ ಕೆರಿಬಿಯನ್ ಸಮುದ್ರದ ಒಂದು ದ್ವೀಪವಾದ ಕ್ಯೂಬಾದಲ್ಲಿ ಪುನಃ ಈ ವಿರಸ ಭಗ್ಗನೆ ಉರಿದೆದ್ದಿದೆ. ದಿನದಿನಕ್ಕೆ ಕ್ಯೂಬಾಗೂ ಅಮೇರಿಕಾಗೂ ವೈಮನಸ್ಯ ಹೆಚ್ಚುವಂತೆ ಮಾಡುತ್ತಿರುವ ಪ್ರಭಾವಗಳಲ್ಲಿ ಕ್ಯೂಬಾ ಸುತ್ತಮುತ್ತಲಿನ ಜನತೆಗಳ ರಾಷ್ಟ್ರೀಯ ಸ್ವಾತಂತ್ರ್ಯ ಬುದ್ಧಿ ಬೆಳೆದಿರುವುದು ಎಷ್ಟು ಮುಖ್ಯವೊ ಅಷ್ಟೇ ಮುಖ್ಯವಾಗಿ ಅಲ್ಲಿಯೂ ಮಧ್ಯ ಮತ್ತು ದಕ್ಷಿಣ ಅಮೇರಿಕಗಳಲ್ಲಿಯೂ ಕಮ್ಯುನಿಸ್ಟ್ ಪ್ರಚೋದನೆ ಬೆಳೆಯುವಂತಾಗಿದೆ. ಮಿಕೇಯಾನ್ ಅವರು ಆ ಪ್ರದೇಶಗಳಲ್ಲಿ ಸಂಚಾರ ಮಾಡಿದಾಗಿನಿಂದ ಅವರಿಗೆ ರಷ್ಯದ ಒತ್ತಾಸೆ ಬಲಗೊಂಡಿದೆ. ಈ ವಾರದಲ್ಲಿ ನಡೆದ ಕಾರ್ಯಗಳ ಪರಿಣಾಮವಾಗಿ ಕ್ರುಶ್ಚಾಫರು ಅಮೇರಿಕಾದ ದರ್ಪವನ್ನು ಮುರಿದು ತಮ್ಮ ಕ್ಷಿಪಣಿಗಳಿಂದ ಕ್ಯೂಬಾವನ್ನು ರಕ್ಷಿಸುತ್ತೇನೆ ಎಂಬಂತೆ ಕ್ಯೂಬಾಕ್ಕೆ ನೆರವು ಮಾತಾಡಿದ್ದಾರೆ. ಈ ಬೆದರಿಕೆಗೆ ಅಮೇರಿಕಾ ಸಹಜವಾಗಿ ಸೊಪ್ಪು ಹಾಕದು. ಸುಮಾರು ಅರ್ಧ ಶತಮಾನಕ್ಕೆ ಮೀರಿ ಅಮೇರಿಕದ ಪ್ರಭಾವ ವಲಯವಾಗಿರುವ ಪ್ರದೇಶಗಳಲ್ಲಿ ಕಮ್ಯುನಿಸ್ಟ್ ಪ್ರತಿಷ್ಠೆ ಬೆಳೆಯಲು ತಾವು ಅವಕಾಶ ಕೊಡುವುದಿಲ್ಲವೆಂದು ನುಡಿದಿದೆ. ಇದರಿಂದ ಅಲ್ಲಿನ ರಾಜಕೀಯ ಹೇಗೆ ರೂಪುಗೊಂಡೀತೊ ಯಾವ ಚುರುಕಿನ ಬೇಗೆಗೆ ಮುಟ್ಟೀತೊ ಸದ್ಯಕ್ಕೆ ಹೇಳುವ ಹಾಗಿಲ್ಲ.



ಕೆರಿಬಿಯನ್ ಮಧ್ಯ ಅಟ್ಲಾಂಟಿಕ್ ಸಾಗರದಲ್ಲಿ ಮಧ್ಯ ಅಮೇರಿಕಾ ಹತ್ತಿರವಿರುವ ಸಮುದ್ರ. ಅದರ ಕೆಳಗೆ ಪಶ್ಚಿಮ ಇಂಡಿಯಾ ದ್ವೀಪಗಳಿವೆ. ಕೆರಿಬಿಯನಿನಲ್ಲಿ ಈಚೆಗೆ ಜನಪ್ರಿಯರಾದ ಸೆನಾರ್ ಫಿಡೆಲ್ ಕ್ಯಾಸ್ಟ್ರೋ ಎಂಬವರು ನಾಯಕರಾಗಿ ಅಧಿಕಾರಕ್ಕೆ ಬಂದಿದ್ದಾರೆ. ಈಜಿಪ್ಟಿನಲ್ಲಿ ನಾಸ್ಸೆರ್ ಹೇಗೆ ಪ್ರಭಾವಶಾಲಿಗಳಾದರೊ ಹಾಗೆ ಇಲ್ಲಿ ಈತ. ಹಿಂದೆ ದುರ್ಮದ, ಹಿಂಸಾಕೃತ್ಯ, ದಬ್ಬಾಳಿಕೆಗಳಿಂದ ಈ ರಾಜ್ಯವನ್ನು ಬ್ಯಾಟಿಸ್ಕ ಎಂಬಾತ ಆಳುತ್ತಿದ್ದನು. ಆತನೂ ಮೊದಲು ಜನಪ್ರಿಯನಾಗಿದ್ದು ಮೇಲೆದ್ದವನೇ. ಕಡೆಯ ಎರಡು ವರ್ಷಗಳಲ್ಲಿ ಆ ಉಪಟಳ ಜಾಸ್ತಿಯಾಗಿ ಜನರಿಗೆಲ್ಲ ಆ ಪೀಡೆ ತೊಲಗಬೇಕೆಂದು ಯತ್ನ ನಡೆಯಿತು. ಬಹು ಕಡಮೆ ಸಂಖ್ಯೆಯ ಜನರ ನಾಯಕನಾಗಿದ್ದರೂ ಕ್ಯಾಸ್ಟ್ರೋ ಜನರ ವಿಮೋಚನೆಗಾಗಿ ನುಗ್ಗಿ ಬಂದು ಬ್ಯಾಟಿಸ್ಕನನ್ನು ಉರುಳಿಸಿ ಅವನಿಗೆ ಸಂಬಂಧ ಪಟ್ಟ ಎಲ್ಲ ಅಧಿಕಾರವರ್ಗವನ್ನೂ ಜನವರಿ 1959ರಲ್ಲಿ ಮುರಿದರು. ಬ್ಯಾಟಿಸ್ಕನ ಕೈಗೂ ಆತನ ಕಡೆಯವರ ಕೈಗೂ ಅನ್ಯಾಯವಾಗಿ ಸೇರಿದ್ದ ಆಸ್ತಿ, ಹಣಗಳನ್ನೆಲ್ಲ ಹಿಂದಕ್ಕೆ ಕಿತ್ತುಕೊಂಡರು. ಅವನಿಗೆ ನೆರವು ಕೊಟ್ಟಿದ್ದ ನೆರೆಹೊರೆಯ ರಾಜ್ಯಗಳ ಮೇಲೆಲ್ಲಾ ಅಸಮಾಧಾನ ಬೆಳೆಸಿದರು. ಅವುಗಳಲ್ಲಿ ಅಮೇರಿಕಾವೂ ಸೇರಿತ್ತೆಂಬುದು ಕ್ಯಾಸ್ಟ್ರೋ ವಾದ. ಅವನಿಗೆ ಬೇಕಾದ ಮದ್ದು ಗುಂಡು, ವಿಮಾನವನ್ನು ಒದಗಿಸಿ ಆಗ ದಂಗೆಕಾರ ವರ್ಗವಾಗಿ ಸೀಯೆರ್ರಾ ಮೇಸ್ತ್ರದಲ್ಲಿದ್ದ ಕ್ಯಾಸ್ಟ್ರೋ ಗುಂಪಿನ ಮೇಲೆ ಅವು ಪ್ರಯೋಗವಾಗಲು ಅಮೇರಿಕಾ ನೆರವು ಆಯಿತೆಂಬುದೂ ಇಲ್ಲಿಂದ ತಪ್ಪಿಸಿಕೊಂಡು ಹೋದ ಬ್ಯಾಟಿಸ್ಕ ವಿಮಾನದಳದ ಮೇಜರ್ ಡಿಯೋಜ್ ಲ್ಯಾನ್ಸ್ ಎಂಬಾತನಿಗೆ ಅಮೇರಿಕಾ ಆಶ್ರಯವಿತ್ತಿದ್ದೂ ಒಂದು ಕಾರಣವಾಯಿತು. ಪಕ್ಕದಲ್ಲಿ ಡಾಮಿನಿಕನ್ ರಿಪಬ್ಲಿಕ್‌ನವರು ಕ್ಯಾಸ್ಟ್ರೋವನ್ನು ನಾಶಮಾಡುವ ಪ್ರತಿಜ್ಞೆ ತೊಟ್ಟಿದ್ದಾರೆ, ಅಂಥ ಸರಕಾರಕ್ಕೆ ಅಮೇರಿಕಾದ ಹಣದ ನೆರವು ದೊರೆಯುತ್ತಿದೆ, ಅದೂ ಆ ಗಣರಾಜ್ಯದ ಮತ್ತು ಇತರ ಸುತ್ತಮುತ್ತಲ ವಿರೋಧಿ ವರ್ಗಗಳಿಗೆ ಅಮೇರಿಕಾ ಅನೇಕ ಬಗೆಯ ನೆರವು ಕೊಡುತ್ತಿದೆ ಎಂಬುದು ಇನ್ನೊಂದು ಆಪಾದನೆ.

ಕ್ಯೂಬಾ ಹಾಗೆಯೇ ಮಧ್ಯ ಮತ್ತು ದಕ್ಷಿಣ ಅಮೇರಿಕದ ರಾಷ್ಟ್ರಗಳು ಸ್ಪೇನ್, ಪೋರ್ಚುಗಲ್, ಇಂಗ್ಲಂಡ್, ಫ್ರಾನ್ಸ್ ಮುಂತಾದ ಐರೋಪ್ಯ ರಾಷ್ಟ್ರಗಳ ಅಧೀನ ರಾಷ್ಟ್ರಗಳಾಗಿ ವಸಾಹತುಶಾಹಿಯ ಬಾಳಿಂದ ತಪ್ಪಿಸಿಕೊಂಡ ಮೇಲೆ ಅವುಗಳಲ್ಲಿ ಸ್ವಾಧೀನತೆಯುಳ್ಳ ಮತ್ತು ರಾಷ್ಟ್ರೀಯತೆಯ ಭಾವ ಬೆಳೆಯುತ್ತಿದೆ. ಈ ಎಲ್ಲಾ ರಾಷ್ಟ್ರಗಳಲ್ಲಿಯೂ ಸುಮಾರು ನಿರಂಕುಶರಾದ ನಾಯಕರು ಬಹುಮಟ್ಟಿಗೆ ಸೈನ್ಯದ ಸಹಾಯದಿಂದ ತಮ್ಮ ಅಧಿಕಾರಗಳನ್ನು ನಡಸುತ್ತಿದ್ದಾರೆ. ಈ 5-6 ವರ್ಷಗಳಲ್ಲಿ ಮೂವರು ಅಧ್ಯಕ್ಷರ ಕೊಲೆಯಾಯ್ತು, 6-8 ಕಡೆ ರಾಜಕೀಯ ಕ್ರಾಂತಿಗಳಾದವು. ಕೆಲವು ಕಡೆ ದಿನವೂ ಆಗುವುದರಲ್ಲಿದೆ. ಆದರೂ ಇವುಗಳ ಸ್ವಾಭಿಮಾನ, ಸ್ವಾಧೀನತಾಕಾಂಕ್ಷೆಗೆ ಯಾವ ಚ್ಯುತಿಯೂ ಇಲ್ಲ.

ಈ ಸ್ವಾಧೀನತಾಕಾಂಕ್ಷೆ ಅವರ ರಾಷ್ಟ್ರೀಯತ್ವದ ಒಂದು ಲಕ್ಷಣ. ಆದರೂ ಅದಕ್ಕಿಂತ ಹೆಚ್ಚಾಗಿ ಪರ ಪ್ರಭಾವದ ವಿರುದ್ಧ ಭಾವನೆಯಾಗಿ ರೂಪುಗೊಂಡಿದೆ. ಇದನ್ನು ಕ್ಯೂಬಾದಲ್ಲಿಯೂ ಕಾಣಬಹುದು. ವಯಸ್ಸಿನಲ್ಲಿ ಹೆಚ್ಚಿಲ್ಲದ ಕ್ಯಾಸ್ಟ್ರೋ ತನ್ನ ಯುವಕ ಸಹಚರರೊಡನೆ ಕ್ಯೂಬಾವನ್ನು ಸ್ವತಂತ್ರ ಮಾಡುತ್ತೇನೆ, ಸಂಪನ್ನವಾಗಿ ಮಾಡುತ್ತೇನೆ ಎಂದು ತೊಡಗಿದ್ದಾರೆ. ಜನರಲ್ಲಿ ಅತ್ಯಂತ ಉತ್ಸಾಹವನ್ನು ಹೊಮ್ಮಿಸಿ ಕಾರ್ಯ ಮಾಡುತ್ತಿದ್ದಾರೆ. ಅವರೇನು ಮಾಡಿದರೂ ಸರಿ; ಅವರು ಮಾಡದ್ದು ಸರಿಯಲ್ಲ; ಸರಿಯಲ್ಲದ್ದರಿಂದಲೇ ಮಾಡಲಿಲ್ಲ ಎಂಬಂತೆ ಜನದ ನಂಬಿಕೆ. ಕ್ಯೂಬಾ ತುಂಬ ಆತನದೇ ಕೀರ್ತಿ ಮತ್ತು ಕೀರ್ತನೆ. ಕ್ಯೂಬಾದ ಜನಸಂಖ್ಯೆ ಸುಮಾರು 60 ಲಕ್ಷ. ಇಂಡಿಯನರೂ ನೀಗ್ರೋ ಜನರೂ ಇದ್ದಾರೆ. ಕ್ಯೂಬಾದ ಮೂಲ ದೇಶೀಯರೊಡನೆ ಅಲ್ಲಿನ ಉತ್ಪತ್ತಿಯಾದ ಸಕ್ಕರೆ, ಕಾಫಿ, ಹೊಗೆಸೊಪ್ಪು ಮುಂತಾದವುಗಳನ್ನೆಲ್ಲ ಉತ್ಪತ್ತಿ ಮಾಡಿ, ಆ ರಫ್ತಿನಿಂದ ಜನದ ಜೀವನವನ್ನು ಉತ್ತಮಪಡಿಸಬೇಕೆಂಬುದು ಆತನ ಆಸೆ. ಇದು ಸ್ತುತ್ಯವಾದುದೆ. ಆದರೆ ಈ ವರೆಗೂ ಅಲ್ಲಿ ಯಾವ ಅಭಿವೃದ್ಧಿಕಾರ್ಯ ನಡೆದಿದ್ದರೂ ಅವೆಲ್ಲ ಅಮೇರಿಕಾದ ನೆರವಿನಿಂದ, ಹಣದಿಂದ, ಯಂತ್ರಕರ್ಮ, ಕುಶಲ ಕರ್ಮದಿಂದ, ನಿರ್ದೇಶನ ವ್ಯವಸ್ಥೆಗಳಲ್ಲಿ ಆದ್ದು. ಸುಮಾರು 400 ಕೋಟಿ ರೂ. ಬೆಲೆಯುಳ್ಳ ಅಮೇರಿಕನ್ ಬಂಡವಾಳ ಹೂಟದಿಂದ ಅಲ್ಲಿಯ ಸಕ್ಕರೆಯ ಉತ್ಪತ್ತಿ, ವ್ಯವಸಾಯ, ಕೈಗಾರಿಕೆಗಳು, ಸಾಗಣೆ ಕೆಲಸ, ಪ್ರಜೆಗಳ ಕ್ಷೇಮಾಭಿವೃದ್ಧಿ ಕೆಲಸ ಈವರೆಗೆ ನಡೆದಿದೆ. ಸುಮಾರು ವರ್ಷಕ್ಕೆ 30 ಲಕ್ಷ ಟನ್ ಎಂದರೆ ಅಮೇರಿಕಾಕ್ಕೆ ಬೇಕಾದುದರಲ್ಲಿ ಒಂದು ಭಾಗ ಸಕ್ಕರೆಯನ್ನು ಕ್ಯೂಬಾದಿಂದ ಕೊಂಡುಕೊಳ್ಳುತ್ತೇವೆಂದು ಮುಂದಾಗಿ ಒಪ್ಪಂದ ಮಾಡಿಕೊಂಡಿದ್ದಾರೆ. ಕ್ಯೂಬಾದ ಉತ್ಪತ್ತಿಯಲ್ಲಿ ಎರಡನೇ ಮೂರು (2/3) ಭಾಗ, ರಫ್ತಿನ 80% ಭಾಗ ಈ ಸಕ್ಕರೆಯಿಂದ ಬರುತ್ತಿರುವುದು. ಈ 30 ಲಕ್ಷ ಟನ್ನನ್ನು 1957ರ ಬೆಲೆಯಂತೆ ಕೊಳ್ಳುತ್ತೇವೆಂದಿದ್ದಾರೆ. ಆಗ ಪೌಂಡಿಗೆ 5 ಸೆಂಟ್ ಬೆಲೆ ಇತ್ತು. ಈಗ ಪ್ರಪಂಚದ ಬೆಲೆ 3 ಸೆಂಟಿಗೆ ಇಳಿದಿದೆ. ಆದರೂ ಕ್ಯೂಬಾಗೆ ನೆರವಾಗಲೆಂದು ಈ ಹೆಚ್ಚು ಬೆಲೆಯನ್ನೇ ಅಮೇರಿಕಾ ತೆರುತ್ತಿದೆ. ಲ್ಯಾನ್ಸ್ ಅಮೇರಿಕಾದಲ್ಲಿ ಆಶ್ರಯ ಪಡೆದರೂ ಆತನಿಗಾಗಲಿ, ಅಂಥವರಿಗಾಗಲಿ ಅಲ್ಲಿ ಒಂದು ದೇಶಭ್ರಷ್ಟ ಸರ್ಕಾರದ ಕೇಂದ್ರ ಸ್ಥಾಪಿತವಾಗಲು ಅವಕಾಶ ಕೊಡುವುದಿಲ್ಲವೆಂದು ಅಮೇರಿಕಾ ಹೇಳಿದೆ. ಸುತ್ತಮುತ್ತಿನ ಸರ್ಕಾರಗಳಿಗೆ ಸೈನ್ಯ ಸಾಮಗ್ರಿಗಳನ್ನು ಬೇಕಾದ ಕಡೆಯಿಂದ ಬೇಕಾದಷ್ಟು ತರಿಸಿಕೊಂಡು ಒಬ್ಬರನ್ನೊಬ್ಬರು ನಾಶಮಾಡದಂತೆ ತಡೆಯುವುದಕ್ಕಾಗಿ ತಾನೂ ಇವರಾರಿಗೂ ಶಸ್ತ್ರಸಜ್ಜು ಒದಗಿಸದೆ ಕಡಮೆ ಮಾಡಿದೆ. ಪಾಶ್ಚಾತ್ಯ ರಾಷ್ಟ್ರಗಳು - ಮುಖ್ಯವಾಗಿ ಇಂಗ್ಲಂಡ್ - ಕಳಿಸುವುದಕ್ಕೆ ಅವರಿಗೆ ಪ್ರಚೋದನೆ ಮಾಡುತ್ತಿದೆ. ಈಚೆಗೆ ಫ್ರೆಂಚ್ ಹಡಗೊಂದರಲ್ಲಿ ಡಚ್ ಶಸ್ತ್ರಾಸ್ತ್ರಗಳು ಕ್ಯೂಬಾಗೆ ಬಂದವು. ಆ ಹಡಗು ಮುಳುಗಿ ಹೋದುದಕ್ಕೆ ಅಮೇರಿಕಾ ಕಾರಣವೆಂದು ಕ್ಯಾಸ್ಟ್ರೊ ಆಪಾದನೆ ಮಾಡಿದ್ದಾರೆ. ಇಂಗ್ಲಂಡ್ ಅಮೇರಿಕಾ ಒದಗಿಸದಿದ್ದರೆ ತನಗೆ ಬೇಕಾದ ಶಸ್ತ್ರಾಸ್ತ್ರಗಳನ್ನು ರಷ್ಯ



ಚೀಣಗಳಿಂದ ತರಿಸಿಕೊಳ್ಳಲು ಯತ್ನಿಸುತ್ತಿದ್ದಾರೆ. ಅವರು ಕೊಡುವೆನೆಂದು ವಾಗ್ದಾನ ಮಾಡಿದ್ದಾರೆ.

ಇತ್ತ ಕ್ಯಾಸ್ಟ್ರೊ ಅಧಿಕಾರಕ್ಕೆ ಬಂದ ಕೂಡಲೆ ಅಮೇರಿಕಾದವರ ಒಡೆತನದಲ್ಲಿದ್ದ 10 ಲಕ್ಷ ಎಕರೆ ಭೂಮಿಯನ್ನು ಕಡ್ಡಾಯವಾಗಿ ಸರ್ಕಾರ ತನ್ನ ವಶ ಮಾಡಿಕೊಂಡಿತು. ಭೂಮಿ ಇಲ್ಲದವರಿಗೆ ಹಂಚಲಾಯಿತು. ಅದಕ್ಕಾಗಿ ತೆರಬೇಕಾದ ಪರಿಹಾರ ಧನವನ್ನು ಅದರ ನಿಜವಾದ ಬೆಲೆಯಲ್ಲದೆ ಅದರ ಮೇಲೆ ಹಾಕಿದ್ದ ತೆರಿಗೆಯ ಇಷ್ಟರಷ್ಟು ಎಂದು ಗೊತ್ತು ಮಾಡಿದರು. ಆ ಹಣವನ್ನು 20 ವರ್ಷಗಳಿಗೆ ತೀರಿಸುವೆನೆಂಬ ಸರ್ಕಾರಿ ಸಾಲ ಪತ್ರಗಳನ್ನು ಆ ಭೂಮಿಗಳ ಒಡೆಯರಿಗೆ ಕೊಟ್ಟಿದ್ದಾರೆ. ನಗದು ಹಣ ಬೇಕೆಂದು ಅಮೇರಿಕಾ ಕೇಳಿದರೆ ನಗದಿಲ್ಲವೆಂದಿದ್ದಾರೆ. ಇದು ನಿಜವಾದ ಸಂಗತಿಯೂ ಹೌದು.

ಹಾಗೆಯೇ ಕ್ಯೂಬಾದಲ್ಲಿದ್ದ ಎಲ್ಲ ಪೆಟ್ರೋಲ್ ಶುದ್ಧೀಕರಣ ಕಂಪನಿಗಳನ್ನೂ ಸರ್ಕಾರ ತನ್ನ ವಶಕ್ಕೆ ತೆಗೆದುಕೊಂಡಿದೆ. ರಷ್ಯದಿಂದ ಕಚ್ಚಾ ಪೆಟ್ರೋಲ್ ತರಿಸಿ ಅದನ್ನು ಇಲ್ಲಿ ಶುದ್ಧಿ ಮಾಡಬೇಕೆಂದು ಕ್ಯಾಸ್ಟ್ರೊ ಕೇಳಿದರು. ಈ ಕಂಪನಿಗಳೆಲ್ಲ ಅಮೇರಿಕನ್ ಕಂಪೆನಿಗಳು. ಇವರು ವೆನಿಸೂವೆಲಾ ಉತ್ಪತ್ತಿಕಾರರೊಡನೆ ಒಪ್ಪಂದ ಮಾಡಿಕೊಂಡಿರುವವರು. ಆ ಒಪ್ಪಂದಗಳು ನಡೆಯುತ್ತಿರುವಾಗ ಅವುಗಳನ್ನು ಬಿಡುವ ಹಾಗಿಲ್ಲ. ಒಪ್ಪಂದ ಮುರಿದರೆ ಅವಕ್ಕೆ ನಷ್ಟ. ಅಲ್ಲದೆ ಅಮೇರಿಕನ್ ಕಂಪೆನಿಗಳಲ್ಲಿ ರಷ್ಯನ್ ಪದಾರ್ಥವನ್ನು ಶುದ್ಧಿ ಮಾಡಲು ಅಮೇರಿಕನರು ಒಪ್ಪದಿರುವುದೂ ಸಹಜವೇ. (ಈಚೆಗೆ ಇಂಡಿಯಾದಲ್ಲೂ ಈ ಪ್ರಸಂಗ ಎದ್ದಿದೆ. ಆದರೆ ವಿದೇಶಿ ಶುದ್ಧಿಕಾರರನ್ನು ಬಲಾತ್ಕರಿಸಲು ಇಂಡಿಯಾ ಮುಂದುವರಿಯಲಿಲ್ಲ.) ಕ್ಯೂಬಾ ಅಮೇರಿಕಾಗೆ ಇಷ್ಟು ವಿರುದ್ಧವಾಗಿ ನಡೆದುಕೊಳ್ಳುತ್ತಿರುವುದನ್ನು ಕಂಡು ಅವರು ಕೊಳ್ಳುತ್ತಿದ್ದ ಸಕ್ಕರೆಯನ್ನು ಕೊಳ್ಳುವುದಿಲ್ಲವೆಂದೂ ತಮಗೆ ಬೇಕಾದ ಸಕ್ಕರೆಯನ್ನು ತಮಗೆ ಹೆಚ್ಚು ಸ್ನೇಹಿತರಾದಂತಹ ಪಶ್ಚಿಮ ಇಂಡೀಸ್ ಮತ್ತು ದಕ್ಷಿಣ ಅಮೇರಿಕಾದ ಸರಕಾರಗಳಿಂದ ತರಿಸಿಕೊಳ್ಳುತ್ತೇವೆಂದೂ ಅಮೇರಿಕಾ ಹೇಳಿದೆ. ಆ ಸ್ಥಾನಕ್ಕೆ ಈಗ ರಷ್ಯ ಕಾಲಿಟ್ಟಿದೆ. ಅಮೇರಿಕಾ ಕೊಳ್ಳುತ್ತಿದ್ದ ಸಕ್ಕರೆಯಲ್ಲಿ ಒಂದ ದೊಡ್ಡ ಅಂಶವನ್ನು ತಾವು ಕೊಳ್ಳುತ್ತೇವೆಂದು ರಷ್ಯ–ಚೀಣ ಹೇಳುತ್ತಿವೆ. 7 ಲಕ್ಷ ಟನ್ ಸಕ್ಕರೆಯನ್ನು 2.85 ಸೆಂಟ್‌ಗಳಿಗೆ ಲೋಕದ ಪೇಟೆಗಿಂತ 0.15 ಸೆಂಟ್ ಕಮ್ಮಿ ಕೊಳ್ಳಲು ಒಪ್ಪಂದಗಳಾಗಿವೆ. ಒಂದು ವಿಧದಲ್ಲಿ ಸಕ್ಕರೆಯು ಮಾರಾಟವಾಯಿತೆಂದರೂ ಬೆಲೆಯ ದೃಷ್ಟಿಯಿಂದ ಇದು ನಷ್ಟವೇ. ಹಾಗೆಯೇ ಅಮೇರಿಕಾದಿಂದ ಕ್ಯೂಬಾಗೆ ಹತ್ತಾರು ಸಾವಿರ ಮಂದಿ ಪ್ರಯಾಣಿಕರು ವರ್ಷ ವರ್ಷ ಬಂದು ಹೋಗುತ್ತಿದ್ದರು. ಈ ಪ್ರಯಾಣಿಕರಿಂದ ದೊಡ್ಡ ಸಂಪಾದನೆಯಾಗುತ್ತಿತ್ತು. ಕ್ಯಾಸ್ಟ್ರೋ ಅವರ ಅಮೇರಿಕನ್ ವಿರುದ್ಧವಾದ ಭಾಷಣಗಳಿಂದ, ಕಾರಣಗಳಿಂದ ಪ್ರವಾಸಿ ಉದ್ಯೋಗವೂ ಅದರ ಲಾಭವೂ ನಿಂತು ಹೋಗಿದೆ. ಇದೂ ಕ್ಯಾಸ್ಟ್ರೊ ಮನಸ್ಸು

ಸವಿಯಾಗುವ ಕಾರಣವಲ್ಲ. ಬ್ಯಾಟಿಸ್ಕ ಉರುಳಿದಾಗ ಕ್ಯೂಬಾ ಸಕ್ಕರೆ ಕಾರ್ಖಾನೆಗಳಲ್ಲಿ ಸುಮಾರು ಅರ್ಧ ಸಕ್ಕರೆ ಕಾರ್ಖಾನೆಗಳು, ಸುಮಾರು 80% ಸಾರ್ವಜನಿಕ ಹಿತದ ಉದ್ಯೋಗಗಳು, ಪಶು ಸಂಪತ್ತಿಗೆ ಸಂಬಂಧಿಸಿದ ಉದ್ಯೋಗದ 90%, ಪೆಟ್ರೋಲಿಯಂ ಉತ್ಪತ್ತಿ ಮತ್ತು ಮಾರಾಟದ ಎಲ್ಲ ಭಾಗವೂ ಅಮೇರಿಕನ್ ಸಂಸ್ಥೆಗಳ ವಶದಲ್ಲಿತ್ತು. ಇಲ್ಲಿನ 65 ಲಕ್ಷ ಜನ ಅಮೇರಿಕಾದ ರಫ್ತನ್ನು ತೆಗೆದುಕೊಳ್ಳುವುದರಲ್ಲಿ 7ನೆಯವರಾಗಿದ್ದರು. ಬಹುಶಃ ತಮಗೆ ಬೇಕಾಗಿದ್ದ ಎಲ್ಲ ಕೈಗಾರಿಕೆ ಸಾಮಾನುಗಳನ್ನು ಅಮೇರಿಕಾದಿಂದಲೇ ತರಿಸಿಕೊಳ್ಳುತ್ತಿದ್ದರು. 10 ಕೋಟಿ ಬೆಲೆಬಾಳುವ ಅಕ್ಕಿಯನ್ನು ಕೂಡ ಟೆಕ್ಸಾಸ್, ಲೂಸಿಯಾನ ರಾಜ್ಯಗಳಿಂದ ತೆಗೆದುಕೊಳ್ಳುತ್ತಿದ್ದರು.

ಈಗ ಅಮೇರಿಕನ್ ವಿರೋಧಿ ಬಲಗೊಂಡು ದೇಶದ ಒಳಗೆ ಕಮ್ಯುನಿಸ್ಟ್‌ರ ಪಂಥ ಬಲಪಡುತ್ತಿರುವಂತಿದೆ. ರಷ್ಯ, ಚೀಣಗಳ ಪ್ರಭಾವ ಮಂಡಲ ಅಲ್ಲಿ ಬೆಳೆಯುವಂತೆ ಕಾಣುತ್ತಿದೆ. ಇನ್ನು ಮುಂದೆ ಅಮೇರಿಕಾದ ನೆರವು ಇಲ್ಲವಾಗುವುದು. ಹಾಗಿರಲು ತಮಗೆ ಬೇಕಾದ ಎಲ್ಲವನ್ನೂ ತಾವೇ ಮಾಡಿಕೊಳ್ಳಬೇಕಾಗುತ್ತದೆ. ಅಮೇರಿಕದ ಸಾಮ್ರಾಜ್ಯಶಾಹಿಯನ್ನು ಎದುರಿಸಲು ಯತ್ನಿಸುತ್ತಿರುವ ಇಂಥ ಸಣ್ಣ ರಾಷ್ಟ್ರಗಳ ನೆರವಿಗೆ ಸರ್ವಥಾ ಬರಲು ಸಿದ್ಧನೆಂಬ ರಷ್ಯದ ಪ್ರಭಾವಮಂಡಲ ಅಲ್ಲಿ ಹೆಚ್ಚಾಗಿ ಬೆಳೆಯಲು ಯತ್ನಿಸುತ್ತಿದೆ.

ಕ್ಯೂಬಾದ ಹಣಸ್ಥಿತಿ ಚೆನ್ನಾಗಿಲ್ಲ. ಬ್ಯಾಟಿಸ್ಕ ಸರ್ಕಾರ ಮಾಡಿರುವ ಸಾಲ 1.5 ಬಿಲಿಯನ್ ಡಾಲರಿದೆ. (ಸುಮಾರು 65 ಕೋಟಿ ರೂ.) ಸರ್ಕಾರದ ವೆಚ್ಚ ವರಮಾನಕ್ಕಿಂತ 20-24 ಕೋಟಿ ರೂ. ಹೆಚ್ಚು. ಆದರೂ ಕ್ಯಾಸ್ಟ್ರೊ ಸರ್ಕಾರ ಮುಂದೆ ನುಗ್ಗಿ ಹೋಗಿ ಜನಕ್ಕೆ ಅನುಕೂಲವಾಗುವಂತೆ ಅರ್ಥ ಮತ್ತು ಕ್ಷೇಮ ಸಾಧನೆಯ ಕೆಲಸವನ್ನು ಕೈಗೊಳ್ಳುತ್ತಿದೆ. ಖಜಾನೆಯಲ್ಲಿ ಹಣವಿದೆಯೇ ಇಲ್ಲವೇ ಎಂಬುದನ್ನು ಲೆಕ್ಕಿಸದೆ 50 ಸಾವಿರಕ್ಕೆ ಹತ್ತು ಲಕ್ಷ ಡಾಲರಿಗೆ ಕ್ಯಾಸ್ಟ್ರೊ ಚೆಕ್ ಬರೆದುಕೊಡುತ್ತಾರೆಂಬ ಆಕ್ಷೇಪಣೆ ಇದೆ. ಹೊಸ ಶಾಲೆಗಳನ್ನು ತೆರೆವುದು, ರಸ್ತೆ ಸೇತುವೆ ಕಟ್ಟಿ ದೇಶದ ಬೇರೆ ಬೇರೆ ಭಾಗಗಳನ್ನು ಹತ್ತಿರ ತರುವುದು, ಹೊಸದಾಗಿ ವ್ಯವಸಾಯದ ಸಹಕಾರ ಸಂಘಗಳನ್ನು ಹುಟ್ಟುಹಾಕುವುದು, ಭೂಮಿ ಇಲ್ಲದವರಿಗೆ ಭೂಮಿ, ಉದ್ಯೋಗ ಇಲ್ಲದವರಿಗೆ ಉದ್ಯೋಗ ಕಲ್ಪಿಸುವುದು, ರೈಲ್ವೆ ಬಸ್ಸುಗಳಲ್ಲಿ ದರಗಳನ್ನು ಕಡಮೆ ಮಾಡುವುದು, ಟೆಲಿಫೋನ್ ರುಸುಮು, ವಿದ್ಯುಚ್ಛಕ್ತಿಯ ದರ ಕಡಮೆ ಮಾಡುವುದು, ಬಾಡಿಗೆ – ಕಂದಾಯಗಳನ್ನು ಕಡಮೆ ಮಾಡುವುದು, ಆಹಾರ ಪದಾರ್ಥಗಳನ್ನು, ದಿನ ಬಳಕೆಯ ಅಗ್ಗದ ಪದಾರ್ಥವನ್ನು ಪುಷ್ಕಳವಾಗಿ ಮಾರಾಟ ಮಾಡುವುದು – ಮುಂತಾದ ಸಾಮಾನ್ಯ ಪ್ರಯೋಜನದ ಕಾರ್ಯಗಳು ತುಂಬಾ ನಡೆಯುತ್ತಿವೆ. ಅಮೇರಿಕಾ ಅಸಹಕಾರದಿಂದ ಆಗುವ ನಷ್ಟದಿಂದ ಕ್ಯಾಸ್ಟ್ರೊ ಎದೆಗೆಡದೆ ಇದ್ದಾರೆ. ಆತನ ದೇಶಹಿತಬುದ್ಧಿ, ಧೈರ್ಯ ಜನಗಳ ಕಲ್ಪನೆಯನ್ನು ಕೆರಳಿಸಿವೆ. ಭೂ ಸುಧಾರಣೆಯಿಂದಲೂ ಸಹಕಾರ ತತ್ವದ



ಸಹಾಯದಿಂದಲೂ ಕ್ಯೂಬಾ ತನಗೆ ಬೇಕಾದ ಆಹಾರ ಧಾನ್ಯಗಳನ್ನೆಲ್ಲ ಬೆಳೆದುಕೊಂಡು ಸ್ವಸಂಪೂರ್ಣತೆಗೆ ಏರೀತೆಂಬ ನಿರೀಕ್ಷೆ ಕ್ಯಾಸ್ಟ್ರೋದು. ಹಾಗೆಯೆ ಹೊಗೆಸೊಪ್ಪು, ಕಾಫಿ, ಪೈನ್‌ಆಪಲ್‌ಗಳನ್ನು ಬೆಳೆದು ರಫ್ತು ಮಾಡಬೇಕೆಂದಿದ್ದಾರೆ. ಏಷ್ಯ ಯೂರೋಪ್ ದೇಶಗಳಿಂದಲೂ ಇತರ ಯಾರ್‍ಯಾರಿಂದ ಶಕ್ಯವಾದರೆ ಅವರಿಂದಲೂ ಬಂಡವಾಳ, ಶಸ್ತ್ರಾಸ್ತ್ರ ಸಜ್ಜು ಪಡೆಯಲು ಯತ್ನಿಸುತ್ತಿದ್ದಾರೆ. ನೆಲದಲ್ಲಿ ಹುದುಗಿರುವ ತಾಮ್ರ, ಕಬ್ಬಿಣ, ನಿಕ್ಕಲ್ ಮುಂತಾದವುಗಳನ್ನು ರೂಢಿಸಿ, ಕೈಗಾರಿಕೆಗಳನ್ನು ಸ್ಥಾಪಿಸಿ ಅಲ್ಲಿನ 5 ಲಕ್ಷ ನಿರಂತರ ನಿರುದ್ಯೋಗಿಗಳಿಗೆ ಉದ್ಯೋಗ ಕಲ್ಪಿಸಬೇಕೆಂಬುದು ದೇಶಭಕ್ತ ಕ್ಯಾಸ್ಟ್ರೊ ಹಟ. ಈತನ ಜನಪ್ರಿಯತೆ ಇದರಿಂದ ದಿನೇ ದಿನೇ ವೃದ್ಧಿಯಾಗಿ ತನ್ನ ಕ್ರಾಂತಿಯನ್ನು ಕ್ರಮಗೊಳಿಸಲು ಒಂದು ಚುನಾವಣೆಯಾಗಿ ಅದು ಸ್ಥಿರ ಪಡಬೇಕೆಂಬ ಅಗತ್ಯವುಳಿದಿಲ್ಲವೆಂದು ಆತನು ಹೇಳುವಂತಾಗಿದೆ. ಎಲ್ಲರೂ ಅವನ ಕಡಗೇ ಇದ್ದಾರೆ.

ಕ್ಯೂಬನ್ ಜನರಿಗೆ ಅಮೇರಿಕವನ್ನು ಕಂಡರೆ ವಿಶ್ವಾಸವೇ. ಕ್ಯಾಸ್ಟ್ರೊಗೂ ವಿಶ್ವಾಸವಿಲ್ಲದೆ ಇಲ್ಲ. ಸರ್ಕಾರದ ಯೋಜನೆಗಳಿಗೆ ಹೊಂದುವ ಹಾಗಿದ್ದರೆ, ಈಗಲೂ ಅಮೇರಿಕನ್ ಬಂಡವಾಳವನ್ನು ಸ್ವಾಗತಿಸುವವರೇ. ಕ್ಯೂಬನ್ನರಿಗೆ ತಮ್ಮ ರಾಜ್ಯದಲ್ಲಿ ತಾವು ಸ್ವತಂತ್ರವಾಗಿ ತಮ್ಮ ಅದೃಷ್ಟವನ್ನು ತಮ್ಮ ಕೈಗೆ ತೆಗೆದುಕೊಂಡು ಬೆಳೆಸಬೇಕೆಂದು ಉತ್ಸಾಹ ಬಂದಿರುವಾಗ, ಕ್ಯಾಸ್ಟ್ರೊ ಇದಕ್ಕೆ ಅಡ್ಡಿಯೆಂಬ ಸಂಶಯ ಸುಳಿದ ಕೂಡಲೆ ತನ್ನ ಸಂಶಯಗಳನ್ನು ಬಿಟ್ಟು ಕೊಡದೆ ತನ್ನದು ಸರಿಯೇ ಅಲ್ಲವೇ ಎಂದು ವಿಚಾರಿಸುವ ಮುಂಚೆಯೇ ರಾಷ್ಟ್ರಗಳನ್ನು ತನಗೆ ಹಗೆ ಎಂದು ಪತ್ರಿಕೆಗಳಲ್ಲಿ, ಆಕಾಶವಾಣಿ, ಟೆಲಿವಿಷನ್ ಮೂಲಕ ಆತ ನುಡಿವ ಉದ್ರೇಕ ವಿಪರೀತವನ್ನುಂಟುಮಾಡುತ್ತಿದೆ.

ಇತ್ತ ಇಲ್ಲಿದ್ದ ಅಮೇರಿಕದ ಬಂಡವಾಳವೆಲ್ಲ ಕೈಬಿಟ್ಟು ಹೋದರೂ ಅಮೇರಿಕಾಕ್ಕೆ ಇರುವೆ ಕಡಿದಷ್ಟೂ ನಷ್ಟ ಕಷ್ಟ ಆಗದು, ನಿಜ. ಆದರೆ ಈ ವರೆಗೂ ತಮ್ಮ ಸಹಕಾರದಿಂದ ಬೆಳೆಯುತ್ತಿದ್ದ ತಮ್ಮ ನೆರೆಯ ಸಣ್ಣ ರಾಷ್ಟ್ರವೊಂದು ತಮಗೆ ವಿರೋಧವಾಗಿ, ಹಗೆತನ ಬೆಳಸುತ್ತ ಅದನ್ನು ಕಮ್ಯುನಿಸ್ಟ್ ಪ್ರಭಾವ ಕೇಂದ್ರವಾಗಿ ಮಾಡುತ್ತಿರುವುದು ಬಹುದೊಡ್ಡ ಸಮಸ್ಯೆಯಾಗಿದೆ. ಫ್ಲಾರಿಡಾ ರಾಜ್ಯದ ದಕ್ಷಿಣದ ಒಂದು ಭಾಗಕ್ಕೆ – ಕ್ಯೂಬಾಕ್ಕೆ ಕೇವಲ 100 ಮೈಲಿ ದೂರದಲ್ಲಿ – ಸುಮಾರು 150-200 ಅಮೇರಿಕಾದ ವಿಮಾನ ನೆಲೆಗಳಿವೆ. ಅನೇಕ ಪರೀಕ್ಷಾ ಪ್ರಯೋಗಗಳನ್ನು ಅಮೇರಿಕಾ ಮಾಡುತ್ತಿರುವುದು ಅಲ್ಲಿ. ಈಚೆಗೆ ಅಮೇರಿಕಾ ಮೇಲೆ ತಿರಸ್ಕಾರದಿಂದ, ಅದಕ್ಕೆ ಅಪಮಾನ ಮಾಡುವ ರೀತಿ ವರ್ತಿಸುತ್ತಿರುವ ರಷ್ಯ, ಚೀಣಗಳ ಪ್ರಭಾವವನ್ನು ತನ್ನ ಮನೆಯ ಇಷ್ಟು ಹತ್ತಿರ ಬಲಿಯಗೊಡುವುದು ಅಮೇರಿಕಾಕ್ಕೆ ಕ್ಷೇಮವಲ್ಲ, ಇಷ್ಟವಲ್ಲ. ಅನೇಕ ಕಾರಣಗಳಿಂದ ಮಧ್ಯ ಮತ್ತು ದಕ್ಷಿಣ ಅಮೇರಿಕದ ಇತರ ಕೆಲವು ರಾಷ್ಟ್ರಗಳು ಕ್ಯೂಬಾದ ಈ ನಡತೆಯಿಂದ ಅಮೇರಿಕಾ ತಮಗೆ ಸಾಕಾದಷ್ಟು ಹಣದ ನೆರವನ್ನೊ ಕೈಗಾರಿಕಾ ನೆರವನ್ನೊ ಯುದ್ಧ ಸಜ್ಜಿನ ನೆರವನ್ನೊ ಕೊಡಲಿಲ್ಲವೆಂಬ ಕಾರಣದಿಂದ, ಆ ಈ

ನಿರಂಕುಶಾಧಿಕಾರಿಗಳಿಗೆ ಹೆಚ್ಚು ಪಕ್ಷಪಾತ, ಕಡಮೆ ವಿಶ್ವಾಸ ತೋರಿದ್ದಾರೆ ಎಂಬ ಕಾರಣದಿಂದ, ಎಲ್ಲಕ್ಕಿಂತ ವಿಶೇಷವಾಗಿ ಅಮೇರಿಕಾ ಮೇಲಿನ ಅಸೂಯೆಯಿಂದ - ಎಲ್ಲಿ ಕ್ಯೂಬಾದ ಮೇಲ್ಪಂಕ್ತಿಯನ್ನು ಅನುಸರಿಸಿಯಾರೋ ಎಂಬ ಚಿಂತೆ ಅಮೇರಿಕಕ್ಕೆ ಬರುವುದು ಅಸಹಜವಲ್ಲ. ಪನಾಮ ತನ್ನ ಕಾಲುವೆ ಭಾಗವನ್ನು ಅಮೇರಿಕಾ ತನಗೇ ಬಿಟ್ಟುಕೊಡಬೇಕೆಂದೂ ಅಲ್ಲಿ ಉತ್ಪತ್ತಿಯಾಗುವ ಹಡಗು ಸುಂಕದಲ್ಲಿ ಹೆಚ್ಚು ಭಾಗವನ್ನು ತನಗೇ ಕೊಡಬೇಕೆಂದೂ ತಾನು ತಯಾರಿಸುವ ಸ್ವಲ್ಪ ಬೀರನ್ನು ಅಮೇರಿಕಾ ಕೊಂಡುಕೊಂಡು ಕುಡಿಯಬೇಕೆಂದೂ ಬೇಡುತ್ತಿದೆ. ಆ ಕಾಲುವೆಯ ಆಡಳಿತವನ್ನು ಅಷ್ಟೇನೂ ಚುರುಕು ಜನರಿಲ್ಲದ ಅಷ್ಟು ಸಣ್ಣ ಸಂಸ್ಥಾನ ನಿರ್ವಹಿಸಲಾರದು. ಅಷ್ಟು ಪ್ರಧಾನವಾದ ಕಾಲುವೆಯನ್ನು ದುರ್ಬಲರ ವಶಕ್ಕೂ ಹಗೆಗಳ ಪ್ರಯೋಜನಕ್ಕೂ ದೊರಕುವಂತೆ ಬಿಡುವುದು ಅಮೇರಿಕಾಕ್ಕೆ ಶಕ್ಯವಿಲ್ಲ. ಅಟ್ಲಾಂಟಿಕ್, ಪೆಸಿಫಿಕ್ ಸಾಗರಗಳಿಗೆ ಸಂಬಂಧ ಕಲ್ಪಿಸುವ ಕಾಲುವೆ ಅದು. ಕೆಲವು ಆಕ್ರೋಶಗಳ ಕಾರಣದಿಂದಾಗಿ ಉಪಾಧ್ಯಕ್ಷ ನಿಕ್ಸನ್‌ರವರು ಭೇಟಿ ಕೊಟ್ಟಾಗ ಕೆಲವು ಸಣ್ಣ ರಾಷ್ಟ್ರಗಳು ಕಲ್ಲು ಹೊಡೆದುವಂತೆ. ಕ್ಯೂಬಾದ ಮೇಲೆ ಅಮೇರಿಕಾ ಹೆಚ್ಚು ಹಗೆತನವನ್ನೊ ಪ್ರತೀಕಾರವನ್ನೊ ಮಾಡುವ ಹಾಗಿದ್ದರೆ ತಾನು ಕ್ಯೂಬಾ ನೆರವಿಗೆ ಬರುತ್ತೇನೆಂದು ಮೆಕ್ಸಿಕೊ ಹೇಳುತ್ತಿದೆ! ಇವರೆಲ್ಲ ಒಟ್ಟಿಗೆ ಸೇರಿದರೂ ಅಮೇರಿಕಾದ ಶಕ್ತಿಯಾಗಲೀ ದರ್ಪವಾಗಲೀ ಚ್ಯುತಿಗೊಳ್ಳದು. ಆದರೂ ತಾನು ಸುಮಾರು 60 ವರ್ಷಗಳಿಗೆ ಮೇಲ್ಪಟ್ಟು ತನ್ನ ಪ್ರಭಾವ ವಲಯ ಎನ್ನಿಸಿದ್ದ ಪ್ರದೇಶದಲ್ಲಿ ಅಶಾಂತಿ, ಕೋಟಲೆ ಬೆಳೆಯುವುದಾಗಲಿ, ಅವೆಲ್ಲ ತಟಸ್ಥ ರಾಷ್ಟ್ರಗಳೋ ಕಮ್ಯುನಿಸ್ಟ್ ಪ್ರಭಾವಕ್ಕೆ ಒಳಪಡುವ ರಾಷ್ಟ್ರಗಳೋ ಆಗದಿರಲಿ, ಆದರೆ ಅದು ದೊಡ್ಡ ಅನಿಷ್ಟ, ಅಂತಹ ನಡತೆಯನ್ನು ತಡೆಯಬೇಕಾಗಿದೆ ಎನ್ನುವುದು ಅಮೇರಿಕದ ಆಲೋಚನೆ. ಈಚೆಗೆ ಅಮೇರಿಕಾ ಎಕ್‌ಸ್ಟಿಂಕ್ಟ್ ರಾಷ್ಟ್ರವೆಂಬಂತೆ ಅವರನ್ನು ಹಂಗಿಸಲು, ಭಂಗಿಸಲು ರಷ್ಯ–ಚೀಣ ನುಡಿಯತ್ತ ನಡೆಯುತ್ತ ಇರುವಾಗಲಂತೂ, ಅಮೇರಿಕಾ ಅಭಿಮಾನದಿಂದ ಪ್ರತಿಭಟಿಸುವುದು ಅಗತ್ಯವಾಗುವುದು.

ಕ್ರುಶ್ಚಾಫ್ ತನ್ನಲ್ಲಿ 30 ಸಾವಿರ ಕಿಲೋಮೀಟರ್ ದೂರ ಹೋಗಿ ಗುರಿ ಹೊಡೆಯುವ ಕ್ಷಿಪಣಿ ಇದೆ ಎಂದು ಹೇಳಿ, ತಕ್ಷಣದಲ್ಲಿಯೇ ಅದನ್ನು 30 ಅಲ್ಲ 13 ಎಂದು ತಿದ್ದಿಕೊಂಡು, 8 ಸಾವಿರ ಮೈಲಿ ಗುರಿಯುಳ್ಳದ್ದು ಸಾಕು ಅಮೇರಿಕಾದ ಶಕ್ತಿ ಮುರಿಯುವುದಕ್ಕೆ ಎಂಬಂತೆ ಬೆದರಿಕೆಯ ಮಾತನ್ನು ಹಾಕಿದರು. ಒಂದು ಪ್ರಬಲ ರಾಷ್ಟ್ರ ಇನ್ನೊಂದನ್ನು ಕುರಿತು ಹೀಗೆ ನುಡಿಯುವುದು ಶಿಷ್ಟವಲ್ಲ. ಹಿಂದೆ ರಷ್ಯಾದ ಕೈಯಲ್ಲಿ ಏನೂ ಇಲ್ಲದಿದ್ದಾಗ, ಅಮೇರಿಕಾ ಒಂದಕ್ಕೇ ಇದ್ದಾಗ, ಅಮೇರಿಕಾ ರಷ್ಯಾವನ್ನು ಬೆದರಿಸಿರಲಿಲ್ಲ. ಈ ರಾಷ್ಟ್ರದ ಕೈಯಲ್ಲಿಯೂ ಅವೇ ಖಂಡಾಂತರ ಕ್ಷಿಪಣಿಗಳಿವೆ, ಆಕಾಶಗಾಮಿ ಯಂತ್ರಗಳಿವೆ, ಜಲಾಂತರ್ಗಾಮಿ ಯುದ್ಧ ಹಡಗುಗಳಿವೆ. ರಷ್ಯದ ಸುತ್ತ ಇರುವ ರಾಷ್ಟ್ರಗಳ ಸ್ವಾತಂತ್ರ್ಯವನ್ನು ನುಂಗಿ, ಆ ಜನದ ಸ್ವಾತಂತ್ರ್ಯಕ್ಕೆ ನೆರವಾಗುವ ಯಾವ ಹೊರಗಿನ ಅವಕಾಶವನ್ನಾಗಲೀ ರಷ್ಯ ತೆರೆಯದಿರುವಾಗ, ಅಮೇರಿಕದ ಪ್ರಭಾವ



ವಲಯದಲ್ಲಿ ಸ್ವತಂತ್ರವಾಗಿ ಬೆಳೆಯಬೇಕೆನ್ನುವ ರಾಜ್ಯಗಳ ಒಳ ರಾಜಕೀಯದಲ್ಲಿ ಪ್ರವೇಶಮಾಡಿ ಅವನ್ನು ಅಮೇರಿಕಾಕ್ಕೆ ವಿರುದ್ಧವಾಗಿ ಬೆಳೆಸಲು ಯತ್ನಿಸುವ ರಷ್ಯದ ಪ್ರಯತ್ನವನ್ನು ಅಮೇರಿಕ ಎದುರಿಸಬೇಕಾಗುತ್ತದೆ. ಕ್ಯಾಸ್ಟ್ರೋ ಮಾತುಕತೆ ಕ್ಯೂಬಾವನ್ನು ಉಳಿಸುವುದೂ ಕಟ್ಟುವುದೂ ಹಾಗಿರಲಿ, ಎಲ್ಲಿ ದೊಡ್ಡ ಎರಡು ಕೋಣಗಳ ಹೋರಾಟಕ್ಕೆ ಅಗತ್ಯವನ್ನು ಅನಿವಾರ್ಯವನ್ನು ತಂದು ಲೋಕನಾಶಕವಾದ ಮೂರನೆಯ ಮಹಾಯುದ್ಧವನ್ನು ಹೊತ್ತಿಸೀತೊ ಎಂಬುದು ಸದ್ಯದ ಭಯ.

12–7–1960

❑

# 13. ಜಪಾನಿಗೆ ಐಸೆನ್ ಹೊವರ್ ಭೇಟಿ

ಈ ತಿಂಗಳು ಪ್ರೆಸಿಡೆಂಟ್ ಐಸೆನ್ ಹೊವರ್ ಪೂರ್ವ ರಾಷ್ಟ್ರಗಳಲ್ಲಿ ಕೆಲವಕ್ಕೂ 19 ರಂದು ಜಪಾನಿಗೂ ಹೋಗಿ ಅಲ್ಲಿ 3 ದಿನಗಳ ಪ್ರವಾಸ ಮಾಡುವವರು ಎಂದಾಗಿದೆ. ಅಲ್ಲಿನ ಸ್ಥಿತಿಗತಿಗಳನ್ನು, ಈಚಿನ ಘಟನೆಗಳನ್ನು ಓದಿ ಅರಿತವರು ಇದು ಅವರ ಭೇಟಿಗೆ ಸುಸಮಯವಲ್ಲ ಎನ್ನಬಹುದು. ಅಸಮಯ, ಸುಸಮಯ ಎಂಬ ಮಾತುಗಳ ನಿಜವನ್ನು ಜಪಾನಿನ ಒಟ್ಟು ಸನ್ನಿವೇಶವನ್ನು ಅರಿತು ನಿರ್ಣಯಿಸಬೇಕು. ಹಾಗೆಯೇ ಜಪಾನಿನ ಒಳರಾಜಕೀಯ ಅಮೇರಿಕಕ್ಕೆ ವಿರೋಧವಾಗಿದೆ, ಆದ್ದರಿಂದ ಅಧ್ಯಕ್ಷರು ಅಲ್ಲಿಗೆ ಹೋಗುವುದೇ ಸೂಕ್ತವಲ್ಲ, ಅಲೌಕಿಕವಾದೀತು, ಅಪಾಯಕರವಾದೀತು ಕೂಡ ಎನ್ನಬಹುದು. ಪರಿಸ್ಥಿತಿ ಪ್ರಕಟವಾಗಿ ವಿರಸದಿಂದ ಕೂಡಿದ್ದು, ವಿಕೃತಿಯದು. ಹತ್ತೆಂಟು ಸಾವಿರ ಮಂದಿ ಜಪಾನಿನ ಪ್ರಧಾನಿಗಳ ಮೇಲೆ ಪ್ರತಿಭಟನೆ ನಡಸಿದ್ದಾರೆ. ಅವರಿಗೆ ಮುತ್ತಿಗೆ ಹಾಕಿದ್ದಾರೆ. ಮೋಟರು ಮೇಲೆ, ಮನೆಯ ಮೇಲೆ ಕಲ್ಲೆಸೆದಿದ್ದಾರೆ. ಪಾರ್ಲಿಮೆಂಟಲ್ಲಿ ರಂಪು ಮಾಡಿದ್ದಾರೆ. ಅಧ್ಯಕ್ಷರಿಗೆ ಅಪ್ರಿಯವಾದ ಮಾತನ್ನಾಡಿದ್ದಾರೆ. ಅವರು ಜಪಾನಿಗೆ ಈಗ ಬಂದರೆ ಅವರಿಗೆ ಒಳ್ಳೆಯ ಸ್ವಾಗತ ದೊರೆಯುವುದಿಲ್ಲವೆಂದೂ ಮುಂದೆ ಅನುಕೂಲ ಸಮಯದಲ್ಲಿ ಮಾನ್ಯರಾಗಿ ಬರಬಹುದೆಂದೂ ಈಗ ಬರುವುದಾದರೆ ಆಡಳಿತ ವರ್ಗದವರ ಪ್ರಯೋಜನ ಸಾಧಿತವಾದೀತೇ ಹೊರತು ಅಮೇರಿಕಕ್ಕಾಗಲಿ ಜಪಾನಿಗಾಗಲಿ ಪ್ರಯೋಜನವಿಲ್ಲವೆಂದೂ ಆಡಿದ್ದಾರೆ. ಜಪಾನಿನ ಶಾಸನ ಸಭೆಗಳಲ್ಲಿ ಸುಮಾರು ಮೂರರಲ್ಲಿ ಒಂದು ಭಾಗವಿರುವ ಸೋಷಿಯಲಿಸ್ಟ್ ವಿರೋಧ ಪಕ್ಷದ 120 ಮಂದಿಯೆಲ್ಲರೂ ರಾಜೀನಾಮೆ ಕೊಟ್ಟು ಹೊರಕ್ಕೆ ಬಂದಿದ್ದಾರೆ. ಈಚೆಗೆ ಜಪಾನಿಗೂ ಅಮೇರಿಕಾಕ್ಕೂ ನಡೆದ ಸುರಕ್ಷಣೆಯ ಒಪ್ಪಂದಕ್ಕೆ ತಮ್ಮ ವಿರೋಧವಿದೆಯೆಂದೂ ಅದನ್ನು ಪಾರ್ಲಿಮೆಂಟ್ ಮಂಜೂರು ಮಾಡುವುದಾದರೆ ತಾವು ಬಲಾತ್ಕಾರದಿಂದಾದರೂ ಅದನ್ನು ಆಗದಂತೆ ಮಾಡಿಸುತ್ತೇವೆ ಎಂದಿದ್ದಾರೆ. ಈಚೆಗೆ ಅಧ್ಯಕ್ಷರ ಭೇಟಿಗೆ ಪೂರ್ವ ಸಿದ್ಧತೆಯ ಏರ್ಪಾಡು ನೋಡಿ ಬರಲು ಅಲ್ಲಿಗೆ ಹೋದ ಹ್ಯಾಗರ್ಟಿಯವರಿಗೂ ಡಗ್ಲಸ್ ಮೆಕಾರ್ಥರಿಗೂ ವಿರೋಧಗಳನ್ನು ಪ್ರದರ್ಶಿಸಿದ್ದಾರೆ. ಅಲ್ಲಿಗೂ ಹಟ ಮಾಡಿ ಅಧ್ಯಕ್ಷರು ಭೇಟಿ ಕೊಡುವುದಾದರೆ ಆ ಸಮಯದಲ್ಲಿ ವಿರೋಧ ಪ್ರದರ್ಶನಗಳನ್ನು ಮಾಡುತ್ತೇವೆಂದು ಬೆದರಿಕೆ ಹಾಕಿದ್ದಾರೆ. ಈ ಪ್ರದರ್ಶನಗಳಲ್ಲಿ ಒಟ್ಟಿಗೆ 2-3 ಲಕ್ಷ ಎಲ್ಲ ವರ್ಗದ ಚಿಕ್ಕ ದೊಡ್ಡ ಜನಗಳ ಬೆಂಬಲವಿರುವುದು ಕಂಡಿದೆ.

ಇದು ಭೇಟಿಗೆ ಒಡ್ಡಿದ ಬೆದರಿಕೆಯಾಗಬೇಕೆ, ತಡೆಯಾಗಬೇಕೆ ಎಂಬುದು ಪ್ರಶ್ನೆ. ಲಕ್ಷ ಸಂಖ್ಯೆ ದೊಡ್ಡದೇ ಆದರೂ ಈ ಮೂಲಕ ಬೆಳೆಯಬಹುದಾದ ವಿರಸವೂ ಒರಟುತನವೂ ಅಪ್ರಿಯವಾಗಬಲ್ಲದ್ದಾದರೂ ಕಿಷಿಯವರು ಇದಕ್ಕೆ ಯಾವ ಬೆಲೆ ಕಟ್ಟುತ್ತಿದ್ದಾರೆ ಎಂಬುದು ಸದ್ಯಕ್ಕೆ ಮುಖ್ಯ ಸಂಗತಿ. ಇವರು ಅಧ್ಯಕ್ಷರಿಗೆ ಬಹು ಹಿಂದೆ ಆಹ್ವಾನ ಕೊಟ್ಟರು. ಅವರು ಬರುತ್ತೇನೆಂದು ಒಪ್ಪಿಕೊಂಡರು. ಅಧ್ಯಕ್ಷರು ಭೇಟಿಯನ್ನು ರದ್ದು ಮಾಡಕೂಡದೆಂದೂ ಈ ಗಲಾಟೆಗಳನ್ನು ಅವರು ಲಕ್ಷ್ಯ ಮಾಡತಕ್ಕದ್ದಲ್ಲವೆಂದೂ ಅತಿಥಿಗಳ ಸುರಕ್ಷಣೆಗೂ ಸ್ವಾಗತಕ್ಕೂ ಯಾವ ದೊಡ್ಡ ಅಡಚಣೆಯೂ ಉಂಟಾಗಲಾರದೆಂದೂ ಭರವಸೆ ಕೊಟ್ಟಿರುತ್ತಾರಾದ್ದರಿಂದ ಅಧ್ಯಕ್ಷರು ಹಿಮ್ಮೆಟ್ಟುವಂತಿಲ್ಲ. ಅಲ್ಲದೆ ಯೂರೋಪಿನ ಯುದ್ಧರಂಗಗಳಲ್ಲಿ ಮಹಾರಾಷ್ಟ್ರಗಳನ್ನು ಸೋಲಿಸಿ ಶತ್ರು ರಾಜಧಾನಿಯನ್ನು ಪ್ರವೇಶಿಸಿ ಧೈರ್ಯದಿಂದ ಒಂದು ಜನತೆಯ ಶರಣಾಗತಿಯನ್ನು ಸ್ವೀಕರಿಸಿದವರಿಗೆ ಸಣ್ಣ ಪುಟ್ಟ ರಾಜಕೀಯ ಗಲಾಟೆಗಳು ಭಯ ಉಂಟು ಮಾಡಬೇಕಾಗಿಲ್ಲ. ಜೊತೆಗೆ ಜಪಾನಿನೊಡನೆ ಅಮೇರಿಕ ಮಾಡಿಕೊಂಡಿರುವ ಪರಸ್ಪರ ಮೈತ್ರಿ ರಕ್ಷಣೆಗಳ ಒಪ್ಪಂದವನ್ನು ತಾವೇ ಬಿಟ್ಟುಕೊಟ್ಟಂತಾಗುತ್ತದೆ. ಈಚೆಗೆ ಪ್ಯಾರಿಸ್ ಶೃಂಗ ಸಮ್ಮೇಳನದಲ್ಲಿ ಈಡಾಗಬೇಕಾದ ಅಗೌರವಕ್ಕೆ ಪುನಃ ಇನ್ನೊಂದು ಸಲ, ಇಷ್ಟು ಬೇಗ ತಮ್ಮ ಅಧ್ಯಕ್ಷತನದ ಕಡೆಕಡೆಯ ದಿನಗಳಲ್ಲಿ ವ್ಯಕ್ತಿಶಃ ಈಡಾಗಬೇಕಾಗುತ್ತದೆ. ಹೀಗಾಗುವುದು ಸರ್ವಥಾ ಎಂಥವರಿಗೂ ಮುಖಭಂಗದ ಪ್ರಸಂಗವೇ. ಲೋಕಮಾನ್ಯರಾದ ಐಸೆನ್ ಹೊವರಿಗಂತೂ ತಕ್ಕ ಪುರಸ್ಕಾರವಲ್ಲ. ಕಿಷಿಯವರಿಗೆ ಇವರ ಭೇಟಿಯನ್ನು ಸಮರ್ಪಕವಾಗಿ ನೆರವೇರಿಸುವ ವಿಶ್ವಾಸವಿದೆ. ಅಮೇರಿಕಕ್ಕೂ ಅಧ್ಯಕ್ಷರಿಗೂ ಧೈರ್ಯವಿದೆ - ಭೇಟಿಯನ್ನು ನೆರವೇರಿಸುವುದಕ್ಕೆ. ಬಹುತರ ಅದು ನಡೆಯುವುದು. ಜಪಾನಿನ ಎಂಥವರೇ ಆಗಲಿ ತಮ್ಮಲ್ಲಿಗೆ ದೊಡ್ಡ ಅತಿಥಿ ಬಂದಾಗ, ಹೀರೋ ಹಿಟೋ ಚಕ್ರವರ್ತಿಗಳ ಜೊತೆಯಲ್ಲಿ ಅಧ್ಯಕ್ಷರ ಮೆರವಣಿಗೆ ಹೋದಾಗ, ಇಬ್ಬರಿಗೂ ಅವಮಾನವಾಗದಂತೆ ಅವರ ಸಂಪ್ರದಾಯದ ಹಿರಿಮೆ ಪ್ರಚೋದಿಸೀತು. ಹಾಗೆಯೇ ಅಮೇರಿಕನ್ - ಜಪಾನಿ ಒಪ್ಪಂದ ಈ ಸಮಯದಲ್ಲಿಯೇ ಖಾಯಂ ಆಗಬೇಕೆಂಬ ಕಡ್ಡಾಯವನ್ನು ಸರ್ಕಾರ ಮುಂದಕ್ಕೆ ನೂಕುವಂತೆ ಮಾಡೀತು.

ಕಳೆದ ಮಹಾಯುದ್ಧದಲ್ಲಿ ಮಿತ್ರವರ್ಗದ ಮುಖಂಡ ರಾಷ್ಟ್ರವಾದ ಅಮೇರಿಕ ಜಪಾನಿಗೆ ಹಗೆ. ಹಿರೋಷಿಮಾ ಅಣುಬಾಂಬಿನ ಪ್ರಯೋಗದಿಂದ ಜಪಾನರನ್ನು ಅದು ಅಡಗಿಸಿತು. ಕೆಲವು ಕಾಲ ಅಮೇರಿಕನರ ಮೇಲಾಡಳಿತಕ್ಕೆ ಜಪಾನ್ ಒಳಪಟ್ಟು ಜ। ಮೆಕಾರ್ಥರ ಸರ್ವಾಧಿಕಾರದಲ್ಲಿ ಒಂದು ಹೊಸ ವ್ಯವಸ್ಥೆಗೆ ಬಂದಿತು. ಜಪಾನನ್ನು

ಸೋಲಿಸಿ ಆ ರಾಷ್ಟ್ರವನ್ನು ಆಳಿದ ಕಹಿ ನೆನಪು ಅಮೇರಿಕನರ ಮೇಲೆ ಜಪಾನಿನವರಿಗೆ ಇರುವುದು ಸಹಜವೇ. ಆದರೆ ಪಾಶ್ಚಿಮಾತ್ಯ ರಾಷ್ಟ್ರಗಳ ಮಿತ್ರ ಮಂಡಲಿಗೆ ವಿರೋಧವಾಗಿ ಜರ್ಮನಿಗೆ ಅನುಕೂಲವಾಗಿ ನಿಂತು ಅಮೇರಿಕಾಕ್ಕೆ ಸೇರಿದ ಪರ್ಲ್ ಹಾರ್ಬರ್ ಮೇಲೆ ಅಕ್ರಮವಾಗಿ ಬಿದ್ದು ಅದನ್ನು ವಶಪಡಿಸಿಕೊಂಡ ಹಗೆ ಕಾರ್ಯದಲ್ಲಿ ಮೊದಲು ತೊಡಗಿದವರು ಜಪಾನಿಯರು. ಅದು ಆದ ತರುವಾಯವೇ ಅಮೇರಿಕ ಯುದ್ಧಕ್ಕೆ ಸೇರಿದ್ದು. ಕಡೆಯವರೆಗೂ ಜಪಾನಿನ ಮೇಲೆ ಯುದ್ಧ ಘೋಷಣೆ ಕೂಡ ಮಾಡದೆ ಇನ್ನೊಂದು ವಾರದಲ್ಲಿ ಯುದ್ಧ ಮುಗಿಯುವುದೆಂದಿರುವಾಗ ಮಾತ್ರ ರಷ್ಯಾ ಸೇರಿಕೊಂಡಿತು. ಯುದ್ಧದ ಫಲ ಪ್ರಯೋಜನಗಳಲ್ಲಿ ರಷ್ಯಾ ತಕ್ಕಷ್ಟು ಪಾಲು ಪಡೆಯಿತು. ಮಂಚೂರಿಯ, ಕೊರಿಯ, ಉತ್ತರ ಚೀಣಾ, ಫಾರ್ಮೋಸ ಮುಂತಾದ ಕಡೆ ಜಪಾನಿಗೆ ದೊರೆತ ನಷ್ಟದಲ್ಲಿ ರಷ್ಯಾಕ್ಕೆ ಅನುಕೂಲವಾಯಿತು. ಈಗಲೂ ಕ್ಯುರೀಲ್ ದ್ವೀಪಗಳನ್ನು ಜಪಾನಿಗೆ ರಷ್ಯ ಬಿಟ್ಟು ಕೊಟ್ಟಿಲ್ಲ. ಕೇಳಿದರೆ, ಬೋನಿನ್, ರಿಯಾಕು ದ್ವೀಪಗಳೂ, ಓಕಿನಾವ, ಫಾರ್ಮೋಸ ಮುಂತಾದವೂ ಅಮೇರಿಕದ ಕೈಯಲ್ಲಿರುವಾಗ ತಮ್ಮ ಮೇಲೆ ಆಕ್ಷೇಪಣೆ ಸಲ್ಲದೆನ್ನುತ್ತಿದ್ದಾರೆ. ತಾವೂ ಚೀಣಾದವರೂ ಆರ್ಥಿಕ ರಾಜಕೀಯ ವಿಚಾರಗಳಲ್ಲಿ ಜಪಾನಿನ ಮೇಲೆ ಉದಾಸೀನರಾಗಿ, ಕೆಲವೇಳೆ ಮುಖಭಂಗವಾಗುವಂತೆ ನಡೆದುಕೊಂಡಿದ್ದಾರೆ. ಆದರೂ ಜಪಾನಿನಲ್ಲಿರುವ ಕಮ್ಯುನಿಸ್ಟ್ ಪಂಥದವರಿಗೆ ಕಮ್ಯುನಿಸ್ಟ್ ಪರ ಪಕ್ಷಪಾತ ಈ ಸಂಗತಿಗಳನ್ನೆಲ್ಲ ಮರೆಯುವಂತೆ ಮಾಡಿದೆ.

ಇತ್ತ ಜಪಾನನ್ನು ಒಂದು ಹೊಸ ರಾಜಕೀಯ ವ್ಯವಸ್ಥೆಗೆ ತಂದು ಅದನ್ನು ಒಂದು ರೀತಿ ಪ್ರಜಾಸತ್ತಾತ್ಮಕವಾದ ರಾಷ್ಟ್ರವನ್ನಾಗಿ ಮಾಡಿದ ಉಪಕಾರ ಅಮೇರಿಕದ್ದು. ಆ ಜನಕ್ಕೆ ಸ್ವಾತಂತ್ರ್ಯವನ್ನೂ ಕಾರ್ಖಾನೆಗಳ ಕೆಲಸಗಾರರಿಗೆ ಅಧಿಕಾರವನ್ನೂ ಹಕ್ಕುಗಳನ್ನೂ ದೊರಕಿಸಿಕೊಟ್ಟವರು ಅವರು. ಹಿಂದೆ ಪ್ರಬಲಿಸಿದ್ದ ಚಕ್ರವರ್ತಿಗಳ ಸರ್ವಸ್ವಾಮ್ಯವೂ ಸೈನ್ಯದವರ ಮತ್ತು ಶ್ರೀಮಂತರ ಪ್ರಭಾವವೂ ರಾಜಕೀಯದಲ್ಲಿ ಉಡುಗುವಂತೆ ಮಾಡಿದವರೂ ಅವರೇ. ಪುನಃ ಈ ದೇಶದ ಸೈನ್ಯಸಜ್ಜು ಬೆಳೆದು ರಾಕ್ಷಸಶಕ್ತಿ ಪಡೆಯದಂತೆ ಏರ್ಪಡಿಸಿದವರೂ ಅವರೇ. ಆದ್ದರಿಂದ, ಒಳಗೆ ಜಪಾನಿನ ರಾಜಕೀಯ ಜೀವನಕ್ಕೂ ಹೊರಗೆ ಅಂತಾರಾಷ್ಟ್ರೀಯ ಜೀವನಕ್ಕೂ ಜಪಾನಿನ ರಾಷ್ಟ್ರಶಕ್ತಿ ವಿಷಮ ಪ್ರಭಾವವಾಗ ದಂತೆ ಅವರೇ ಏರ್ಪಡಿಸಿದಂತಾಯಿತು. ಸುರಕ್ಷಣೆಯಲ್ಲಿ ಇದು ದುರ್ಬಲತೆ ತಂದಿರುವಾಗ ಇದನ್ನು ಇತರರು ಯಾರೂ ದುರುಪಯೋಗಪಡಿಸಿಕೊಳ್ಳದಂತೆ ಜಪಾನಿಗೆ ಸುರಕ್ಷಣೆ ಕೊಡುತ್ತೇನೆಂದೂ ಜಪಾನಿನ ಮೇಲೆ ಬೀಳುವ ಎಲ್ಲರಿಂದಲೂ ಜಪಾನನ್ನು ಪಾರುಮಾಡಿ ರಕ್ಷಿಸಲು ಸೈನ್ಯದ ನೆರವನ್ನು ಅಮೇರಿಕನರು ಕೊಟ್ಟಿದ್ದಾರೆ. ಇದೆಲ್ಲವನ್ನೂ ರಷ್ಯಾ ಒಪ್ಪದೆನ್ನುವುದು ಯಾರಿಗೂ ಅರ್ಥವಾದೀತು.

ಜಪಾನಿನ ಸೈನ್ಯಶಕ್ತಿ ಈ ವರ್ಷದ (1960ರ) ಹೊತ್ತಿಗೆ ಭೂಸೇನೆ ಒಂದು ಲಕ್ಷ ಸಂಖ್ಯೆಯಾಗುತ್ತದೆ. 384 ಹಡಗುಗಳು (ಅವುಗಳಲ್ಲಿ 2 ವಿನಾಶಕ ಹಡಗುಗಳು) ಮಾತ್ರವಿರುತ್ತದೆ. ವಿಮಾನ ದಳದಲ್ಲಿ 1300 ವಿಮಾನಗಳು ಮಾತ್ರವಿರುತ್ತವೆ. ಉತ್ತರ



ಕೊರಿಯಾ, ಚೀಣ, ಸೋವಿಯತ್ ರಷ್ಯದ ಪೂರ್ವ ಸೈನ್ಯಗಳು ಮೂರೂ ಸೇರಿದರೆ ಜಪಾನಿಗೆ ವಿರುದ್ಧವಾಗಿ 1957ರ ಹೊತ್ತಿಗೆ 42 ಲಕ್ಷ ಭೂಸೈನ್ಯ, 1075 ಹಡಗುಗಳು (ಅವುಗಳಲ್ಲಿ 7 ಕ್ರೂಯಿಸರುಗಳು, 50 ನಾಶಕಾರಿಗಳು), 8000 ವಿಮಾನಗಳು ಇದ್ದುವು. ಜಪಾನಿಗೆ ವಿರೋಧವಾಗಬಹುದಾದ ಈ ಎಲ್ಲ ಸೈನ್ಯಶಕ್ತಿಗೆ ಎದುರಾಗಿ ಜಪಾನನ್ನು ಸದ್ಯಕ್ಕೆ ರಕ್ಷಿಸಬಲ್ಲ ಶಕ್ತಿ ಅಮೇರಿಕದ್ದೊಂದೇ. ಜಪಾನಿಗೆ ಹೆಚ್ಚು ಖರ್ಚಿಲ್ಲದೆ ಈ ರಕ್ಷಣೆಯ ನೆರವು ದೊರೆತಂತಾಗಿದೆ. ಈ ರಕ್ಷಣೆ ಇಲ್ಲದಿದ್ದರೆ ಜಪಾನಿನ ರಾಜಕೀಯ ಮತ್ತು ರಾಷ್ಟ್ರ ಜೀವನಗಳು ಅತಂತ್ರವಾಗಿ ಬೇಗ ಒಳಗಿನ ಕಮ್ಯುನಿಸ್ಟರ ತಂತ್ರದಿಂದ ಕಮ್ಯುನಿಸ್ಟ್ ಪ್ರಭಾವವಲಯಕ್ಕೆ ಜಪಾನ್ ಸೇರಿ ಕರಗಿ ಹೋಗಬೇಕಾಗುತ್ತದೆ.

ಇಂಥ ಪರಿಣಾಮವನ್ನು ತಡೆಯಲೆಂದೇ ಕಿಷಿ ಪಂಗಡ ಅಮೇರಿಕಾ – ಜಪಾನ್ ರಕ್ಷಣಾ ಒಪ್ಪಂದವನ್ನು ಮುಂದುವರಿಸಬೇಕೆಂದು ನಿರ್ಣಯಿಸಿರುವುದು. ಕಿಷಿ ಪಕ್ಷ ಶುದ್ಧ ಪ್ರಜಾಪಕ್ಷವಲ್ಲದಿದ್ದರೂ ಸೋಷಿಯಲ್ಸ್ ಪಂಗಡವೂ ಆ ಧರ್ಮದ್ದೇನಲ್ಲ. ಆದರೆ ಅದು ದೇಶದ ಬಹುಮತದ ಪಕ್ಷ. ಶೇಕಡಾ 65-70 ಭಾಗದ ಜನತೆಯ ಪ್ರಾತಿನಿಧ್ಯ ಉಳ್ಳದ್ದು. ಸಂಪ್ರದಾಯಸ್ಥರ, ಇತರ ಎಲ್ಲ ಪಂಗಡಗಳ, ರಾಜಕೀಯ ವರ್ಗಗಳ, ವ್ಯವಸಾಯಗಾರರ, ವರ್ತಕರ ಪ್ರತಿನಿಧಿಯಾಗಿದೆ. ದೇಶದಾದ್ಯಂತವೂ ಅದರ ಪ್ರಭಾವ ಹರಡಿ ಸ್ಥಾಪಿತವಾಗಿದೆ. ಆ ಪಕ್ಷದ ಹೆಸರು ಲಿಬರಲ್ ಡೆಮೋಕ್ರಾಟಿಕ್ ಎಂದು 1958-59ರಲ್ಲಿ ನಡೆದ ಮಹಾಚುನಾವಣೆಗಳಲ್ಲಿ ಪಾಶ್ಚಿಮಾತ್ಯ ರಾಷ್ಟ್ರಗಳ ಮೈತ್ರಿಯನ್ನು ಉಳಿಸಿಕೊಳ್ಳಬೇಕು, ಅಮೇರಿಕದೊಡನೆ ರಕ್ಷಣೆ ಒಪ್ಪಂದ ಮುಂದುವರಿಸಬೇಕು ಎಂಬ ಮುಖ್ಯ ತತ್ವದ ಮೇಲೆಯೇ ಶಾಸನ ಸಭೆಯ ಆಯ್ಕೆಗಳು ನಡೆದದ್ದು. ಲಿಬರಲ್ ಡೆಮೊಕ್ರಾಟಿಕ್ ಪಕ್ಷ ಬಹುಮತದಿಂದ ಗೆದ್ದು ವಿರೋಧ ಸೋಷಿಯಲಿಸ್ಟ್ ಪಕ್ಷ ಪೂರ್ತಿ ಸೋತಿತು. ತನಗೆ ಹಿಂದೆ ಇದ್ದ ಬಹುಮತ ಭಾಗದಿಂದ ದೊಡ್ಡ ಸಂಖ್ಯೆಯನ್ನು ಕಳೆದುಕೊಂಡಿತು. ಅಂದಿನಿಂದಲೂ ಕಿಷಿ ಸರ್ಕಾರವನ್ನು ಭಂಗಪಡಿಸಲೂ ಪಾರ್ಲಿಮೆಂಟರಿಯಲ್ಲದ ಇತರ ನೇರ ಕಾರ್ಯಗಳನ್ನಾದರೂ ಕೈಕೊಂಡು ಅದನ್ನು ಮುರಿಯಲೂ ಅಮೇರಿಕಾದೊಡನೆ ಒಪ್ಪಂದಕ್ಕೆ ಶಾಸನಸಭೆಯ ಸಹಿ ಬೀಳದಂತೆ ತಡೆಯಲೂ ಈ ಪಕ್ಷ ಪಣ ತೊಟ್ಟಿದೆ.

ಈ ಪಕ್ಷ ಈಚಿನ ಘಟನೆಗಳಲ್ಲಿ ಒಮ್ಮನಸ್ಸಿನಿಂದ ನಡೆಯುವಂತೆ ಕಾಣುತ್ತದೆ. ಅದರ ಐಕ್ಯತೆಗೆ ಇದು ಸದವಕಾಶವಾದ್ದು ಅಪೂರ್ವ ಘಟನೆಯೆನ್ನಬೇಕು. ಇಷ್ಟಾದರೂ ಇದರಲ್ಲಿ ಎಡಬಲ ಒಟ್ಟು ಏಳು ಪಂಗಡಗಳುಂಟೆಂದು ಹೇಳುತ್ತಾರೆ. ಈ ಪಕ್ಷದ ಒಟ್ಟು ಸದಸ್ಯ ಸಂಖ್ಯೆ ಸುಮಾರು 65,000. ಇದಕ್ಕೆ ದೊರೆತ ಮತದಾರರ ಬಲ 13,00,000. ದೇಶದಲ್ಲೆಲ್ಲ ಇರುವ ಸುಮಾರು 4100 ಚಿಲ್ಲರೆ ರಾಜಕೀಯ ಕೇಂದ್ರ ಪ್ರದೇಶಗಳಲ್ಲಿ ಇವರ ಕೇಂದ್ರಗಳಿರುವುದು ಸುಮಾರು 1300ರಲ್ಲಿ ಮಾತ್ರ. ನಗರ ಸಂಸ್ಥೆಗಳಿಗೆ 30ಕ್ಕಿಂತ ಹೆಚ್ಚು ಸಂಖ್ಯೆ ಸದಸ್ಯವರ್ಗ ಬೇಕಾಗಿಲ್ಲ. ಗ್ರಾಮ ಸಂಸ್ಥೆಯ ಸದಸ್ಯತ್ವ 20ಕ್ಕೆ ಮೇಲಿರಬೇಕಿಲ್ಲ. ಆದರೂ ಈ ಪಕ್ಷ ದೇಶದಲ್ಲೆಲ್ಲ ವ್ಯಾಪಕವಾಗಿ

ಪ್ರಭಾವಪೂರ್ಣವಾಗಿ ಹರಡಿಲ್ಲ. ದೇಶದ ಮುಖ್ಯ ಪಟ್ಟಣಗಳಲ್ಲಿ ಇದರ ಸಂಖ್ಯಾಬಲ ದೊಡ್ಡದು. ಆದುದರಿಂದ ಟೋಕಿಯೊ, ಒಸಾಕ ಮುಂತಾದ ಮುಖ್ಯ ಪಟ್ಟಣಗಳಲ್ಲಿ ಇದರ ಶಕ್ತಿ ಹೆಚ್ಚಾಗಿದೆ. ಇದಕ್ಕೆ ಎಡ ಪಕ್ಷದ ಕಮ್ಯುನಿಸ್ಟ್ ಸದಸ್ಯರ ಪ್ರಬಲವಾದ ಸಂಖ್ಯಾವರ್ಗ ಸೇರಿದೆ. ಸೋಹ್ಯೊ ಕಾಮಗಾರ ಸಂಘ ಸಮ್ಮೇಳನದ ಅಂಗವಾಗಿದೆ. ಜಪಾನ್ ಉಪಾಧ್ಯಾಯರುಗಳ ಸಂಘ ಸೇರಿದೆ. ಇವುಗಳಲ್ಲಿ ಕಾರ್ಮಿಕ ಸಂಘದ ಭಾಗ ತುಂಬಾ ಹೆಚ್ಚು ಸಂಖ್ಯೆಯದು. ಅದರ ಸಂಖ್ಯಾಪ್ರಭಾವದಿಂದಾಗಿ ಅದರ ಅಭಿಪ್ರಾಯಭಾರ ದಿನೇ ದಿನೇ ಹೆಚ್ಚಾಗುತ್ತಿದೆ. ಸಾಧಾರಣ ಸೋಷಿಯಲಿಸ್ಟ್ ಗುಂಪಿನಲ್ಲಿ ಸೌಮ್ಯರಿಂದ ಹಿಡಿದು ಅತಿ ಕರ್ಕಶ ಸಮಾಜವಾದದವರೆಗೂ ಅಭಿಪ್ರಾಯ ಭಿನ್ನತೆ ಇದೆ. ಕಮ್ಯುನಿಸ್ಟ್ ಚೀನ, ಸೋವಿಯತ್ ಪ್ರಭಾವಕ್ಕೆ ಅನುಗುಣವಾಗಿ ಇಲ್ಲಿ ಕಮ್ಯುನಿಸ್ಟರು ಜಪಾನ್ ತೂಗಿ ನಡೆಯಬೇಕು ಎನ್ನುತ್ತಿದ್ದರೆ, ಸಾಧಾರಣ ಸೋಷಿಯಲಿಸ್ಟರು ನಮಗೆ ಕಮ್ಯುನಿಸ್ಟ್ ಪ್ರಭಾವವೂ ಬೇಡ, ಪಾಶ್ಚಿಮಾತ್ಯರ ಪ್ರಭಾವವೂ ಬೇಡ; ಬಣಗಳ ಪಕ್ಷಪಾತಕ್ಕೆ ನಾವು ಸೇರತಕ್ಕದ್ದಲ್ಲ; ನಾವು ತಟಸ್ಥರಾಗೋಣ ಎಂಬ ಭಾಗವಿದೆ. ಇದು ಪಕ್ಷದ ಒಳಗೆ ಲಕ್ಷಾಂತರ ಮಂದಿಯ ಅಭಿಪ್ರಾಯವಿರುವಂತಿದೆ. ಸೋಷಿಯಲಿಸ್ಟ್ ಪಕ್ಷಕ್ಕೆ ಸೇರದಿದ್ದರೂ ರಾಷ್ಟ್ರದ ಬಹುಭಾಗದ ಜನ ನೆಹ್ರೂ ನಾಯಕತ್ವದಲ್ಲಿನ ಭರತ ಖಂಡದ ತಟಸ್ಥ ನೀತಿಯನ್ನು ಅನುಸರಿಸುವುದು ಜಪಾನಿಗೆ ಒಳ್ಳೆಯದೆಂದು ಬಹು ಜನಾಭಿಪ್ರಾಯವಿದೆ. ಮೂರು ವರ್ಷಗಳ ಹಿಂದೆ ನೆಹ್ರೂ ಅವರಿಗೆ ದೊರೆತ ಸ್ವಾಗತದ ಸ್ನಿಗ್ಧತೆ ಅದಕ್ಕೆ ಬಹುದೊಡ್ಡ ಸಾಕ್ಷಿಯೆನ್ನುತ್ತಾರೆ ವೀಕ್ಷಕರು.

ಇತ್ತ ಅಮೇರಿಕಾದ ರಕ್ಷಣೆಯನ್ನೂ ಸೈನ್ಯದ ನೆರವನ್ನೂ ನಿರಾಕರಿಸಿ ಜಪಾನ್ ತಟಸ್ಥವಾಗಿರಲು ಬಯಸಿದರೆ, ಬಹು ಬೇಗ ಇಂದಿನ ದುರ್ಬಲ ಸ್ಥಿತಿಯಲ್ಲಿ ಜಪಾನ್ ಕಮ್ಯುನಿಸ್ಟ್ ಕವಳವಾಗುವುದು ಖಂಡಿತ ಎಂದು ದೇಶದ ಅರ್ಧಕ್ಕಿಂತ ಹೆಚ್ಚು ಜನಕ್ಕೆ ಖಾತರಿ. ಅಲ್ಲದೆ, ಇಂದಲ್ಲ ನಾಳೆ ಸ್ವಶಕ್ತಿಯಿಂದ ಜಪಾನ್ ಮೊದಲ ದರ್ಜೆಯ ರಾಷ್ಟ್ರವಾಗಿ ಪುನಃ ಬೆಳೆದು ಪ್ರಪಂಚ ರಾಜಕೀಯದಲ್ಲಿ ಇತರರಂತೆ ಪ್ರಾಧಾನ್ಯಗಳಿಸ ಬೇಕೆಂಬ ಆಕಾಂಕ್ಷೆ ಜಪಾನಿಗಿದೆ. ಚೀಣ, ರಷ್ಯಾಗಳನ್ನು ಕಂಡರೆ ಜಪಾನಿಗೂ ಜಪಾನ್ ಕಂಡರೆ ಅವರಿಗೂ ಅಂತಹ ವಿಶ್ವಾಸವಿಲ್ಲ. ಆಗ್ನೇಯ ಮತ್ತು ದಕ್ಷಿಣ ಏಷ್ಯಾ ರಾಜ್ಯಗಳಲ್ಲಿ ಜಪಾನಿಗೆ ಹಿಂದಿನ ಯುದ್ಧದ ಕಾರಣದಿಂದಾಗಿ ಅಂತಹ ವಿಶ್ವಾಸವಿಲ್ಲ, ಪುರಸ್ಕಾರವಿಲ್ಲ; ಸಂಶಯಗಳೇ ಇವೆ. ಅಲ್ಲದೆ ಅವುಗಳಿಗಿಂತ ದೊಡ್ಡ ಪ್ರಭಾವವನ್ನು ಪುನಃ ತಾನು ಬಯಸಿ ಪಶ್ಚಿಮ ಯೂರೋಪಿನ ರಾಷ್ಟ್ರಗಳೊಡನೆ ಆರ್ಥಿಕ, ರಾಜಕೀಯ ಮತ್ತು ಸಮಾಜ ಜೀವನದಲ್ಲಿ ಸಹಕರಿಸಿ ಅವರೊಡನೆ ಸಮ ಪ್ರಮಾಣದಲ್ಲಿ ಬೆರೆಯ ಬೇಕೆಂದಿದೆ. ಕಿಷಿ ಸರಕಾರದ ಗಮ್ಯ ಐಸೆನ್ ಹೊವರಿಗೆ ಔತಣ ಕೊಟ್ಟು ಆಹ್ವಾನಕ್ಕೆ ಎಷ್ಟೇ ವಿರೋಧವಿರಲಿ ತಾನು ನಿರ್ವಹಿಸುತ್ತೇನೆಂಬ ಅದರ ವಿಶ್ವಾಸದ ಹಿನ್ನೆಲೆ.

ಭೇಟಿ ರದ್ದಾದರೆ ಅಧ್ಯಕ್ಷರಿಗೆ ಸೋಲು. ಅಮೇರಿಕನ್ನರ ನೆರವನ್ನು ನೆಚ್ಚಿ ಬಹುಮತದಿಂದ ಆಡಳಿತ ಮಾಡುತ್ತಿರುವ ಪಕ್ಷದ ಕೈಬಿಟ್ಟಂತಾಗುವುದು. ಅವರ



ರಾಜೀನಾಮೆಗೂ ಸೋಲಿಗೂ ಅಮೇರಿಕ ಕಾರಣವಾದಂತೆ ಒಪ್ಪಿಕೊಂಡಂತೆ ಆಗುತ್ತದೆ. ಎರಡೂ ತರವಲ್ಲ. ಅಮೇರಿಕವನ್ನು ಈಚೆಗೆ ಅಪಮಾನಗೊಳಿಸಿ, ಹಂಗಿಸಿ ಕುಚೋದ್ಯ ಮಾಡುತ್ತಿರುವ ರಷ್ಯಾಕ್ಕೆ ಮಾತ್ರ ಉಂಟಾಗುವ ಸಂತೋಷ. ದಕ್ಷಿಣ ಕೊರಿಯಾದಲ್ಲಿ ರ್‍ಹೀಯವರನ್ನೂ ತುರ್ಕಿಯಲ್ಲಿ ಮೆಂಡೆರೀಸರ ಆಡಳಿತವರ್ಗದವರನ್ನೂ ಪದಚ್ಯುತವನ್ನಾಗಿ ಮಾಡಿದಂತೆ ಇಲ್ಲಿಯೂ ವಿದ್ಯಾರ್ಥಿಗಳ ತಂಡವೂ ಕಾಮಗಾರರ ತಂಡವೂ ಮುಂದೆ ನುಗ್ಗುತ್ತಿವೆ. ಕಾಮಗಾರ ತಂಡದಲ್ಲಿ ಕಮ್ಯುನಿಸ್ಟ್ ಭಾಗ ಏಕಕಂಠದಿಂದ ಇಂಥಲ್ಲಿ ನುಗ್ಗುವುದು ಸಹಜ. ವಿದ್ಯಾರ್ಥಿ ವರ್ಗಗಳನ್ನು ಉದ್ರೇಕಗೊಳಿಸಿ ಇಂಥ ಸಂದರ್ಭಗಳಲ್ಲಿ ಛೂ ಬಿಡುವುದು ಎಲ್ಲಿಯೂ ಹೊಸತಲ್ಲ. ಆಗ ಇವರು 2 ಲಕ್ಷ ಜನವನ್ನು ವಿರೋಧ ಪ್ರದರ್ಶನಕ್ಕಾಗಿ ಜಮಾಯಿಸುವೆವೆಂದರೆ ಸರ್ಕಾರದ ಅಧಿಕಾರಿಗಳು ಅದರ ಎರಡರಷ್ಟನ್ನು ಜಮಾಯಿಸುವ ಭರವಸೆ ಉಳ್ಳವರ ಹಾಗೆ ಇದ್ದಾರೆ. ಗಲಾಟೆ ಪ್ರದರ್ಶನ ನಡಸುತ್ತೇನೆಂಬ ಪಕ್ಷಗಳನ್ನು ಬಹುಮತದಿಂದ ಆಳುವ ಸರ್ಕಾರಗಳು ತಡೆಯಬೇಕಾಗುತ್ತದೆ. ಅಗತ್ಯವಾದ ರೀತಿಯಲ್ಲಿ ಅಂಕೆಯಲ್ಲಿಡಬೇಕಾಗುತ್ತದೆ. ಬೇಕಾದರೆ ಪಂಜಾಬಲ್ಲಿ ಈಚೆಗೆ ನಡೆದ ಪ್ರಸಂಗಗಳನ್ನು ನೆನೆಯಬಹುದು. ಚೀಣ ಪ್ರಧಾನಿ ಬಂದಾಗ 'ಹಿಂದೀ ಚೀನೀ ಭಾಯಿ ಭಾಯಿ' ಎಂದು ಘೋಷಣೆಗಳಿರಲಿಲ್ಲ. ನಮ್ಮ ರಾಷ್ಟ್ರಕ್ಕೆ ಅಹಿತರೆಂಬ ಅತಿಥಿಗೆ ನಡೆವ ಮರ್ಯಾದೆಗೆ ಊನ ಬರಲಿಲ್ಲ. ಶಾಂತಿಯ ಮಾತುಕತೆಗಳಿಗಾಗಿ ಅವರು ಬಂದಿದ್ದರು. ಕ್ರುಶ್ಚಾಫರು ಅಮೇರಿಕಾಕ್ಕೆ ಹೋದಾಗ ಅಲ್ಲಿನ ಅರ್ಧ ಜನ ಉದಾಸೀನ ವಾಗಿತ್ತು. ಕಾಲು ಭಾಗ ಪೂರ್ತಿ ವಿರೋಧವಾಗಿತ್ತು. ಪೂರ್ವ ಯೂರೋಪಿನ ರಷ್ಯಾ ಶತ್ರು ವರ್ಗವಿತ್ತು. ನೆಹ್ರೂ ಅವರು ಈಚೆಗೆ ತುರ್ಕಿಗೆ ಭೇಟಿ ಕೊಟ್ಟಾಗ ಅವರಿಗೆ ಆಹ್ವಾನ ಕೊಟ್ಟ ಸರ್ಕಾರ ಜ್ವಾಲಾಮುಖಿಯ ಮೇಲೆ ನಿಂತದ್ದು ಮೂರು ದಿನಗಳಲ್ಲಿ ಉರುಳಿತು. ಆದರೂ ಆ ಭೇಟಿಗಳು ನಡೆದವು. ಜಪಾನಿಂದ ಅಧ್ಯಕ್ಷರಿಗೆ ಪ್ರತಿಬಂಧಕ ಪತ್ರಗಳು ಹೋಗಿವೆ ಎಂಬುದು ನಿಜ. ಅಂಥ ವರ್ಗ ಜಪಾನಿನ ಸದ್ಯದ ಪರಿಸ್ಥಿತಿಯಲ್ಲಿ, ಪೂರ್ವ ದೇಶಗಳ ಪರಿಸ್ಥಿತಿಯಲ್ಲಿ ಅಸಹಜವಲ್ಲ, ಆಶ್ಚರ್ಯಕರವೂ ಅಲ್ಲ. ಸಣ್ಣದಾಗಿ ನಮ್ಮಲ್ಲಿಯೇ ಒಂದು ಸಂಘದ ಕಾರ್ಯದರ್ಶಿ ಒಂದು ಉತ್ಸವವನ್ನು ಏರ್ಪಡಿಸಿ ಅತಿಥಿಗಳಿಗೆ ಆಹ್ವಾನ ಕೊಟ್ಟಾಗ, ಕಾರ್ಯದರ್ಶಿಗೆ ವಿರೋಧವಾದ ಒಬ್ಬರೊ ಇಬ್ಬರೊ ಅತಿಥಿಗಳಿಗೆ ಬರಬೇಡಿರೆಂದು ನೇರವಾಗಿ ಕಾಗದ, ತಂತಿ ಕಳಿಸುವುದು ನಮ್ಮಲ್ಲಿ ದಿನವೂ ನಡೆಯುತ್ತಿದ್ದು ಕರೆದವರು ಕಾರ್ಯಕ್ರಮವನ್ನು ನಡೆಸುವುವೆನ್ನುವಾಗ, ಅತಿಥಿಗಳಾಗಿ ಬರಲು ಒಪ್ಪಿದವರು ವಿರೋಧಿಗಳು ಬೆಳಸುವ ರಾಜಕಾರಣದಿಂದ ಭೇಟಿಯನ್ನು ಹಿಂದಕ್ಕೆ ತೆಗೆದುಕೊಳ್ಳುವುದು ಆಹೂತರಿಗೂ ಯಜಮಾನರಿಗೂ ಇಬ್ಬರಿಗೂ ಗೌರವ ತರುವ, ಗೌರವ ಉಳಿಯುವ ಸಂಗತಿಯಾಗುವುದಿಲ್ಲ.

12-6-1960

❑

# 14. ಕಾಮನ್‌ವೆಲ್ತ್ ರಾಜಕೀಯ

ಮೇ ತಿಂಗಳಲ್ಲಿ ಲಂಡನಿನಲ್ಲಿ ಕಾಮನ್‌ವೆಲ್ತ್ ಸಮ್ಮೇಳನ ಸೇರಿತ್ತು. ಸದಸ್ಯ ರಾಷ್ಟ್ರಗಳ ಪ್ರಧಾನಿಗಳು ಸಭೆ ಸೇರಿ ಒಟ್ಟು ಕಾವನ್‌ವೆಲ್ತ್ ಸಂಘಕ್ಕೆಲ್ಲ ಸಾಮಾನ್ಯವಾದ ಯೋಗಕ್ಷೇಮವನ್ನು ಕುರಿತು ಮಾತುಕತೆ ನಡಸಿದರು. ಕಾಮನ್‌ವೆಲ್ತಿನ ಹಿರಿಯ ರಾಷ್ಟ್ರವಾಗಿ ಬ್ರಿಟನ್ ಇದೆ. ಸಮಾನರಲ್ಲಿ ಮೊದಲಿಗನಾಗಿ ಅದರ ಮಾತು ಮನೆಯ ಯಜಮಾನನಂತೆ. ಕಾಮನ್‌ವೆಲ್ತ್ ಒಂದು ಸಂಸ್ಥೆ ಎನ್ನುವುದಕ್ಕೆ ಅದೇ ಸಂಕೇತ. ಈ ಯಾಜಮಾನ್ಯ ಬರಿಯ ಎಣಿಕೆ. ಒಪ್ಪಿಕೆಯ ಸನ್ಮಾನ. ಯಾವ ಕ್ಲಪ್ತವಾದ ಕಾರ್ಯಕ್ರಮ, ನಿರ್ಬಂಧ ಅಲ್ಲಿನ ನಡವಳಿಕೆಯಲ್ಲಿ ಇರುವುದಿಲ್ಲ. ಯಾವುದೂ ಹೀಗೆಯೇ ನಡೆಯ ಬೇಕೆಂದು ಕಡ್ಡಾಯವಿರುವುದಿಲ್ಲ. ಪ್ರತಿ ಪ್ರತಿನಿಧಿಗಳು ಒಬ್ಬರು ಇನ್ನೊಬ್ಬರಿಗೆ ಸಮಾನರು. ಯಾರೇ ಆಗಲಿ ಇನ್ನೊಂದು ರಾಷ್ಟ್ರದ ಆಂತರಿಕ ವಿಷಯಗಳಲ್ಲಿ, ಸ್ವಾಧೀನತೆಯ ಸಂಬಂಧದಲ್ಲಿ, ತನ್ನ ರಾಜ್ಯದ ಪರಮಾಧಿಕಾರದ ವಿಷಯದಲ್ಲಿ, ಅಂತಾರಾಷ್ಟ್ರೀಯ ಸಂಬಂಧದಲ್ಲಿ ಇನ್ನೊಬ್ಬರನ್ನು ಅನುಸರಿಸಬೇಕಾಗಿಲ್ಲ. ಆದರೂ ಸುಮಾರು ಮೊದಲ ಪ್ರಪಂಚ ಯುದ್ಧ ಕಾಲದಿಂದ ಹಿಡಿದು ಈವರೆಗೂ ಸಮಾಧಾನದಲ್ಲಿ ಸಂಪ್ರದಾಯಗಳು ಬೆಳೆದುಕೊಂಡು ಈವೊತ್ತಿನ ಈ ಸ್ಥಿತಿಗೆ ಕಾಮನ್‌ವೆಲ್ತನ್ನು ಬೆಳಸಿಕೊಂಡು ಬಂದಿವೆ. ನಾಳೆಗೆ ಸಂಪ್ರದಾಯ ಹೇಗೆ ಬೆಳೆಯುತ್ತದೆಯೊ ಯಾರೂ ಹೇಳುವ ಹಾಗಿಲ್ಲ. ಲೋಕದ ರಾಷ್ಟ್ರಗಳಲ್ಲಿ ಸುಮಾರು 70 ಕೋಟಿ ಜನಸಂಖ್ಯೆ ಉಳ್ಳ ಇದರಲ್ಲಿ ಸದಸ್ಯರಾಷ್ಟ್ರವಾಗಿ ಸೇರಿಯೂ ಅಮೇರಿಕಾ, ಏಷ್ಯಾ, ಆಫ್ರಿಕಾ ಜನಾಂಗಗಳ ಸಣ್ಣ ದೊಡ್ಡ ರಾಷ್ಟ್ರಗಳು ನೆಮ್ಮದಿಯಲ್ಲಿ ಅನಿರ್ಬಂಧವಾಗಿ ಸೇರಿ ತಮ್ಮ ಲೌಕಿಕ ಅಸಮತೆಗಳ ಎಣಿಕೆಯಿರದೆ ಒಂದು ಕುಟುಂಬಕ್ಕೆ ಸೇರಿದ ಸೋದರ ವರ್ಗದಂತೆ ಕಾಮನ್‌ವೆಲ್ತ್‌ನಲ್ಲಿ ನಡೆಯುವರು. ಹಿಂದಿನ ದಬ್ಬಾಳಿಕೆ ಕಹಿಯಾಗಿದ್ದರೂ ಭಾರತದಂತಹ ರಾಷ್ಟ್ರ ಕೂಡ ಈ ಸಂಸ್ಥೆಯಲ್ಲಿ ಒಂದಾಗಿ ಸೇರಿ ಉಳಿಯಲು ಬಯಸಿದೆ, ತನ್ನ ಸ್ವಂತ ಇಚ್ಛೆಯಿಂದ. ಅಲ್ಲಿ ಯಾರ ಸದಸ್ಯತನವೂ ಮುಂದುವರಿಯಬೇಕೆಂಬ ಅಗತ್ಯವಿಲ್ಲ. ಐರ್ಲಂಡಿನಂತಹ ಒಂದು ದೇಶ ಕಾಮನ್‌ವೆಲ್ತ್‌ಗೆ ಹೊರಗಿದ್ದರೂ ಅದೊಂದು ಪರದೇಶವೆಂದು ಎಣಿಕೆ ಸಲ್ಲದೆ ಇದೆ. ಈ ನಡುವೆ ಬಲಾತ್ಕಾರದಿಂದ ಯಾರನ್ನೂ ಈ ಸಂಸ್ಥೆಯಿಂದ ಸಾಮಾನ್ಯವಾಗಿ



ಹೊರಗೆ ಕಳಿಸಿಲ್ಲ. ಕಳಿಸುವುದಕ್ಕೆ ಅಧಿಕಾರವಿದೆಯೆ, ಆ ಸಂಬಂಧದಲ್ಲಿ ವಿಧಾನಗಳೊ ಸಮಯಗಳೊ ಗೊತ್ತಾಗಿವೆಯೇ ಎಂಬುದಕ್ಕೂ ಸೂತ್ರ, ಆಧಾರವಿಲ್ಲ.

ಕಾಮನ್‌ವೆಲ್ತ್‌ನ ಗುರಿಯೇನು? ಈ ವಿಚಿತ್ರ ರಾಷ್ಟ್ರಗಳ ಮಂಡಲ ಮುಂದೆ ಹೀಗೇ ನಡೆಯುತ್ತದೆಯೆ? – ಎಂಬುದು ಅನೇಕರನ್ನು ಕೆರಳಿಸಿರುವ ಪ್ರಶ್ನೆ. ಅಂದರೆ, ಪ್ರಪಂಚದಲ್ಲಿ ಒಂದು ವಿಶೇಷ ರಾಜಕೀಯ ಜೀವನ ಪ್ರಕಾರವನ್ನು ಕುರಿತ ಪ್ರಶ್ನೆ ಅದು. ಯೂರೋಪಿನಲ್ಲಿ, ಪ್ರಬಲ ಬ್ರಿಟನ್ ಪ್ರಖ್ಯಾತ ರಾಷ್ಟ್ರ. ಒಂದು ಸಾವಿರ ವರ್ಷ ಗಳಿಂದ ಯಾವ ಹೊರ ರಾಷ್ಟ್ರಗಳಿಗೂ ಅದು ಬಾಗಿಲ್ಲ. ಅನ್ಯರಿಂದ ಆಕ್ರಮಣಗೊಳ್ಳದ ಬ್ರಿಟನ್ ಇಂದೂ ಮೂರು ಮುಖವಾಗಿಯೇ ಬದುಕಬೇಕಾಗಿದೆ. ಅದಕ್ಕೆ ಮೂರು ಮುಖಗಳುಂಟು. (1) ಅಟ್ಲಾಂಟಿಕ್ ಸಾಗರದ ಆಚೆಯ ಅಮೇರಿಕ ಸಂಯುಕ್ತ ಸಂಸ್ಥಾನದ ಮೈತ್ರಿಯ, ಅದಕ್ಕೆ ಸಂಬಂಧಿಸಿದ ಮಿತ್ರ ಮಂಡಳಿಯ ಕ್ರಿಯಾಸಂಸ್ಥೆಯಾಗಿ. (2) ಯೂರೋಪಿನ ರಾಜಕೀಯ, ಆರ್ಥಿಕ ಸಂಬಂಧಗಳಲ್ಲಿ (3) ಕಾಮನ್‌ವೆಲ್ತ್ ಸಂಬಂಧದಲ್ಲಿ. ಇಂದು ಅಮೇರಿಕಾ ಸಂಬಂಧ ಅದರ ಆತ್ಮರಕ್ಷಣೆಗೂ ಸರ್ವಾಗತ್ಯ ವಾಗಿದೆ. ಆ ಗೆಳೆತನವನ್ನು ಬ್ರಿಟನ್ ಉಳಿಸಿಕೊಂಡು ಬದುಕಬೇಕಾಗಿದೆ. ಬಹುಕಾಲ ದಿಂದ ಯೂರೋಪಿನ ರಾಷ್ಟ್ರಗಳು ಇಂಗ್ಲಂಡನ್ನು ಹೆಚ್ಚು ಆಪ್ತವಾಗಿ ಯೂರೋಪಿನ ರಾಜಕೀಯ, ಆರ್ಥಿಕ ಜೀವನದಲ್ಲಿ ಬೆರೆಯಬೇಕೆಂದು ಕೇಳುತ್ತಿದ್ದವು. ಯೂರೋಪಿನ ಎಲ್ಲ ದೊಡ್ಡ ಸನ್ನಿವೇಶಗಳಲ್ಲಿಯೂ, ಯುದ್ಧ ಮುಂತಾದ ಉತ್ಕಟ ಸಮಯಗಳಲ್ಲಿಯೂ ತನಗೆ ನ್ಯಾಯ, ಸರಿ ಎಂದು ತೋರಿದ ರೀತಿಯಲ್ಲಿ ಅಲ್ಲಿನ ರಾಷ್ಟ್ರಗಳ ಸ್ನೇಹಸಂಬಂಧ ಗಳನ್ನು ಬೆಳಸಿ ಎರಡು ಮಹಾಯುದ್ಧಗಳಲ್ಲಿ ತಮ್ಮ ಒಲವು ಓಲುಗಳನ್ನು ಸ್ಥಾಪಿಸಿತು. ಯೂರೋಪಿನ ಪ್ರಜಾಸತ್ತಾತ್ಮಕ ರಾಷ್ಟ್ರಗಳ ನಾಯಕನಾಗಿ, ರಕ್ಷಕನಾಗಿ ಅದು ನಿಂತಿದೆ.

ಆದರೆ ಕಾಮನ್‌ವೆಲ್ತ್ ಸಂಬಂಧ ಇಂಗ್ಲಂಡಿಗೆ ಯೂರೋಪಿಯನ್ ಸಂಬಂಧ ಕ್ಕಿಂತ ಹೆಚ್ಚು ಆಪ್ತವಾಗಿರುವಂತೆ ಅದನ್ನು ನೆಪಮಾಡಿಕೊಂಡು ಯೂರೋಪಿನ ರಾಜಕೀಯಕ್ಕೆ ಸಿಕ್ಕಿ ಬಳಲಲೊಲ್ಲೆನೆಂಬಂತೆ ಬ್ರಿಟನ್ ನಡೆದಿದೆ. ಸ್ವಂತ ಹಿತರಕ್ಷಣೆಯ ಸಂಬಂಧದಲ್ಲಿ ಯಾವ ಯೂರೋಪಿಯನ್ ರಾಷ್ಟ್ರಗಳ ಕೈಗೂ ಸಿಕ್ಕಿಕೊಳ್ಳದಂತೆ ನಡೆದಿದೆಯೆಂದೂ ಅದರ ಆರ್ಥಿಕ ಜೀವನ ಯೂರೋಪಿಗಿಂತ ಹೆಚ್ಚಾಗಿ ಯೂರೋಪೇತರ ಮತ್ತು ಕಾಮನ್‌ವೆಲ್ತ್ ಜನತೆಯೊಡನೆ ಹೆಚ್ಚು ಬಿಗಿಯಾಗಿ, ಏನನ್ನು ಮಾಡಬೇಕಾದರೂ ಈ ಆಪ್ತವರ್ಗದ ಮುಖ್ಯಸ್ಥರ ತಿಳಿವಳಿಕೆಗೆ ತಂದು, ಶಕ್ಯವಾದರೆ ಅವರ ಒಪ್ಪಿಗೆಯಂತೆ, ಬ್ರಿಟನ್ ನಡೆಯುವುದು ರೂಢಿಯಾಗಿತ್ತು. ಕಡೆಗೆ 8ನೆಯ ಎಡ್ವರ್ಡ್ ರಾಜ್ಯತ್ಯಾಗ ಮಾಡಬೇಕಾದಾಗ ಕೂಡ ಈ ಒಪ್ಪಿಗೆ ಒಂದು ರೀತಿ ಮುಂದಕ್ಕೆ ಬಂದಿತು. ಹೀಗಾಗಿ ಯೂರೋಪಿನವರನ್ನು ಸಂಶಯಗ್ರಸ್ತರಾಗಿಯೇ ಇರಿಸುವ ಪರಿಸ್ಥಿತಿ ನಡೆದು ಈಚೆಗೆ ಬಹುಕಾಲದ ವೈರಿಗಳಂತಿದ್ದ ಫ್ರಾನ್ಸ್ ಮತ್ತು ಪಶ್ಚಿಮ ಜರ್ಮನಿ ರಾಜ್ಯಗಳು ಸೇರಿ ಇತರ ನಾಲ್ಕು ರಾಷ್ಟ್ರಗಳೊಡನೆ ಒಪ್ಪಂದಕ್ಕೆ ಬಂದು ಒಂದು ಆರ್ಥಿಕ

ಕೆಳೆ ಮಂಡಲಿಯನ್ನು ರಚಿಸಿಕೊಳ್ಳುವಂತಾಗಿದೆ. ಯೂರೋಪಿನ ವಿಶ್ವಾಸವನ್ನು ಕಳೆದುಕೊಂಡು ಬಾಳುವುದು ಬ್ರಿಟನ್ನಿಗೆ ಶಕ್ಯವಲ್ಲ; ಹಿತವೂ ಅಲ್ಲ. ಇಂಥಲ್ಲಿ ನಾಳೆ ಈ ಎರಡು ಸಂಬಂಧಗಳ ನಡುವೆ ಖಂಡಿತವಾಗಿ ತೀರ್ಮಾನ ಮಾಡಬೇಕಾದ ಅಗತ್ಯ ಬ್ರಿಟನ್ನಿಗೆ ಬಿದ್ದೀತು. ಫ್ರಾನ್ಸ್, ಜರ್ಮನಿ ಮುಖ್ಯ ರಾಷ್ಟ್ರಗಳಾಗಿರುವ ಒಳ ಆರು ರಾಷ್ಟ್ರಗಳ ಮಂಡಲಿಗೆ ಸಮತೂಗುವಂಥ ಇನ್ನಿತರ ಆರು ರಾಷ್ಟ್ರಗಳೊಡನೆ ಪಶ್ಚಿಮ ಯೂರೋಪಿನಲ್ಲಿ ತಮ್ಮ ಹೊರ ಏಳು ಮಂದಿಯ ಆರ್ಥಿಕ ಮಂಡಲವನ್ನು ಇವರು ರಚಿಸಿಕೊಂಡಿದ್ದಾರೆ. ಇವೆರಡರ ಹೊರಗೆ ಸೋವಿಯತ್ ವಾರ್ಸಾ ರಾಷ್ಟ್ರಗಳ ವರ್ಗವಿದೆ. ಈ 13 ರಾಷ್ಟ್ರಗಳು ಪೈಪೋಟಿಯಲ್ಲಿ, ವಿರೋಧದಲ್ಲಿ ಬೆಳೆಯುವಂತಿಲ್ಲ. ಬೆಳೆಯದಂತೆ ನೋಡಿಕೊಳ್ಳುವುದು ಬ್ರಿಟನ್ನಿನ ಹಿತವಾಗುತ್ತದೆ. ಆದರೆ ಪ್ರತಿ ಸಂಬಂಧದಲ್ಲಿಯೂ ಕಾಮನ್‌ವೆಲ್ತ್‌ನ ನೆವವನ್ನು ಹೇಳಿ ಯೂರೋಪಿನ ಕಡೆ ಒಂದು ಕಣ್ಣಿನ ನೋಟವನ್ನು ಮಾತ್ರ ಹರಿಸುವುದು ಬ್ರಿಟನ್ನಿನ ಈ ವರೆಗಿನ ನಡವಳಿಕೆಯಾಗಿದೆ. ಮುಂದಿನ ದಶಕಗಳಲ್ಲಿ ಸ್ವಲ್ಪವಾದರೂ ಈ ನಡತೆ ಮಾರ್ಪಡಬೇಕಾದೀತು. ಇದಕ್ಕೆ ಭೌಗೋಳಿಕವಾದ ಮತ್ತು ರಾಜಕೀಯವಾದ ಕಾರಣಗಳುಂಟು. ಬ್ರಿಟನ್ನಿನ ಪ್ರಾಕೃತಿಕ ಸ್ಥಿತಿಲಕ್ಷಣ ಮುಖ್ಯ ಕಾರಣ. ಎಷ್ಟೇ ಆಗಲಿ, ಬ್ರಿಟನ್ ಬಿಳಿಯರ ರಾಷ್ಟ್ರ, ಪಾಶ್ಚಿಮಾತ್ಯ ಪ್ರಜಾತತ್ವಗಳಿಗೂ ಮಿತ್ರಮಂಡಲಿಗೂ ಲಗ್ನವಾಗಿ ನಿಲ್ಲಬೇಕಾದ ರಾಷ್ಟ್ರ. ಆ ಸಂಬಂಧ ಸಡಿಲವಾದರೆ ಅದರ ವಾಸ್ತವ ಬದುಕಿಗೇ ಎಡರು ತೊಡರು ಬಂದಾವು. ಯೂರೋಪಿನ ಪಾಶ್ಚಿಮಾತ್ಯ ರಾಷ್ಟ್ರಗಳನ್ನು ವಿರೋಧ ಮಾಡಿಕೊಂಡು ಅವುಗಳ ಸಂಶಯಗಳನ್ನು ಕೆರಳಿಸಿದರೆ ಅದು ಬದುಕುವ ಹಾಗಿಲ್ಲ. ಅದು ವಿರೋಧವಾದರೆ ಅದು ಅತಂತ್ರ, ಪೋರ್ಚುಗಲ್‌ನಿಂದ ರಷ್ಯಾದವರೆಗೂ ಯೂರೋಪಿನ ಎಲ್ಲರ ಕೋವಿಗಳೂ ಸುಲಭವಾಗಿ ನೇರವಾಗಿ ಬ್ರಿಟನ್ನಿಗೆ ಗುರಿಯಿಟ್ಟು ಅದನ್ನು ಹಾರಿಸಿಬಿಡುವುದು ಸುಲಭ. ಆ ಸಂಭವವಿಲ್ಲದಿದ್ದರೂ ಅದು ಇಂಗ್ಲಂಡಿನ ಸ್ವಸಂರಕ್ಷಣೆಯ ಚಿಂತನೆಯಲ್ಲಿ ಸುಳಿಯದೆ ಇಲ್ಲ.

ಇತ್ತ ಕಾಮನ್‌ವೆಲ್ತ್ ಸಂಬಂಧವನ್ನು ಇಂಗ್ಲಂಡ್ ಬಲಪಡಿಸಿಕೊಳ್ಳಬೇಕೇ ಹೊರತು ದುರ್ಬಲಗೊಳಿಸಲು ಆಗುವುದಿಲ್ಲ. ಆ ಇಷ್ಟವೂ ಅದಕ್ಕಿಲ್ಲ. ಆದರೆ ಕಾಮನ್ ವೆಲ್ತಿನ ತೊಡಕುಗಳು ವಿಚಿತ್ರವಾಗಿ ಬೆಳೆಯುತ್ತಿವೆ. ಅದನ್ನು ಹೊಂದಿಸಿಕೊಂಡು ನಿಭಾಯಿಸುವ ರಾಜಕೀಯ ಜಾಣತನ ಬ್ರಿಟನ್ನಿಗೆ ಇನ್ನೂ ಇರುವುದರಿಂದ ಬ್ರಿಟನ್ನಿನ ವಿವೇಕ ಕಾಮನ್‌ವೆಲ್ತಿನ ಹಿರಿಯ ಸೋದರನಂತೆ ಮುಂದೆಯೂ ನಡೆಯಲು ಅವಕಾಶ ಕೊಟ್ಟಿತು. ಸುಮಾರು 1926ರ ಸಾಮ್ರಾಜ್ಯ ಸಮ್ಮೇಳನದಲ್ಲಿ (Imperial Conference) 'ಬಾಲ್ಫರ್ ಡಿಕ್ಲರೇಷನ್' ಎನ್ನುವ ಘೋಷಣೆಯಲ್ಲಿ ಕಾಮನ್‌ವೆಲ್ತಿನ ಸ್ವರೂಪ ಲಕ್ಷಣವನ್ನು ಸೂತ್ರೀಕರಿಸಲಾಯಿತು. ಬ್ರಿಟಿಷ್ ಕಾಮನ್‌ವೆಲ್ತಿನ ಸದಸ್ಯರು ಸ್ವಂತ ಇಷ್ಟದಿಂದ ಈ ಸಂಸ್ಥೆಯಲ್ಲಿ ಸೇರಿದ್ದಾರೆ; ಅವರ ಸ್ಥಾನಮಾನಗಳು ಸರ್ವಸಮಾನವಾದವು; ಸದಸ್ಯರು ತಮ್ಮ ಒಳ ಆಡಳಿತ ಸ್ವಾಮ್ಯಗಳಲ್ಲೇ ಆಗಲಿ, ಹೊರ ಅಂತಾರಾಷ್ಟ್ರೀಯ



ಕಾರ್ಯಗಳಲ್ಲೇ ಆಗಲಿ, ಯಾವ ರೀತಿಯಲ್ಲಿಯೂ ಒಬ್ಬರು ಇನ್ನೊಬ್ಬರಿಗೆ ಕೀಳಲ್ಲ, ಅಧೀನವಲ್ಲ ಎಂದು ವಿಧೇಯಕವಾಯಿತು. ಮೊದಲು ಬ್ರಿಟನ್ ಚಕ್ರಾಧಿಪತ್ಯವಾಗಿದ್ದದ್ದು ಕ್ರಮ ಕ್ರಮವಾಗಿ ತನ್ನ ಡೊಮಿನಿಯನ್‌ಗಳ ಸ್ವಾತಂತ್ರ್ಯವನ್ನು ಒಪ್ಪಿಕೊಂಡು ಅವಕ್ಕೆ ಸ್ವಾಧೀನತೆಯನ್ನು ಕೊಟ್ಟಾಗ ಈ ಬ್ರಿಟಿಷ್ ರಾಜಕೀಯ ವಲಯದ ಧಾತು ಬದಲಿತು. ಕ್ಯಾನಡಾ, ಆಸ್ಟ್ರೇಲಿಯಾ, ನ್ಯೂಸಿಲೆಂಡ್, ದಕ್ಷಿಣ ಆಫ್ರಿಕ ರಾಜ್ಯಗಳು ಮಾತ್ರ ಮೊದಲು ಈ ಡೊಮಿನಿಯನ್‌ಗಳಾಗಿದ್ದವು. ಉಳಿದವು ಅಧೀನ ಅಥವಾ ರಕ್ಷಕರಾಷ್ಟ್ರಗಳು, ಗೆದ್ದು ನಡೆಸುವವು, ಪ್ರಭಾವ ವಲಯಗಳ ಸ್ವಾಸ್ಥ್ಯಗಳು ಮುಂತಾದವಾಗಿದ್ದವು. ಅಲ್ಲಿ ಬ್ರಿಟಿಷರು ತಮ್ಮ ಇಷ್ಟಬಂದಂತೆ ಆಳಬಹುದಾಗಿತ್ತು. ಟ್ರಸ್ಟೀ ರಾಜ್ಯಗಳಲ್ಲಿ ವೆಸ್ಟ್ ಮಿನಿಸ್ಟರ್ ಶಾಸನ ಬ್ರಿಟಿಷ್ ಮೇಲ್ತನವನ್ನು ಹೆಸರಿಗೆ ಒಪ್ಪಿದರೂ ಡೊಮಿನಿಯನ್‌ಗಳು ಎಲ್ಲ ರೀತಿಯಲ್ಲಿಯೂ ಸ್ವತಂತ್ರರೆಂಬಂತೆ ಏರ್ಪಾಡಾಯಿತು. ಬ್ರಿಟನಿನ ಅಂಕೆ ಯಾವ ರೀತಿಯಲ್ಲಿಯೂ ಅವರ ಮೇಲೆ ನಡೆಯಬೇಕಾಗಿರಲಿಲ್ಲ. ಅಲ್ಲಿನ ಗೌರ್ನರ್ ಜನರಲ್ಲುಗಳನ್ನು ಆಯುವಾಗ, ನೇಮಿಸುವಾಗ ಕೂಡ ಅವರನ್ನು ಕೇಳಿಯೇ - ಎಂದರೆ ಅವರ ಪ್ರಧಾನಿಗಳು ಒಪ್ಪಿದವರನ್ನೇ - ಕಳಿಸಬೇಕಿತ್ತು. ಅಲ್ಲಿನ ಹಿತಕ್ಕೂ ಇಂಗ್ಲಂಡಿನ ಹಿತಕ್ಕೂ ವಿರೋಧ ಎದ್ದರೆ ಆಯಾ ರಾಷ್ಟ್ರಗಳಲ್ಲಿ ಅಲ್ಲಿನ ಹಿತವೇ ಗೆಲ್ಲಬೇಕೆಂಬ ಸಂಪ್ರದಾಯವಾಗಿತ್ತು. ಇಂಗ್ಲಂಡಿನಲ್ಲಿದ್ದ ಪರಮ ನ್ಯಾಯಸ್ಥಾನಕ್ಕೆ (Privy Council) ಅಪೀಲು ಕಳಿಸುವ ಸಂಪ್ರದಾಯ ಕೂಡ ಕಡ್ಡಾಯವಾಗಲಿಲ್ಲ. ಯುದ್ಧಾದಿಗಳು ಸಂಭವಿಸಿದರೆ ತಟಸ್ಥವಾಗಿರುವ ಸ್ವಾತಂತ್ರ್ಯ ಕೂಡ ಡೊಮಿನಿಯನ್‌ಗಳಿಗೆ ಇದ್ದಿತಾದರೂ ಸುಮಾರು ಇಂಗ್ಲಂಡಿಗೆ ವಿರೋಧವಾಗದ ರೀತಿಯಲ್ಲಿ ಸಂಧಿ ವಿಗ್ರಹಗಳಲ್ಲಿ ವ್ಯವಹಾರ ರೂಪಗೊಂಡಿತು. ಆಸ್ಟ್ರೇಲಿಯ ಒಂದು ಸಲ ಇಂಗ್ಲಂಡಿನ ಸಲಹೆ ಕೇಳದೆ ಅಮೇರಿಕದೊಡನೆ ರಾಜಕೀಯ ಒಪ್ಪಂದ ಮಾಡಿಕೊಂಡ ಸಂದರ್ಭದಲ್ಲಿ ಇನ್ನೊಂದಷ್ಟು ಇಂಗ್ಲಂಡ್ - ಡೊಮಿನಿಯನ್ ಸಡಿಲತೆ ಬಂದಿತು. ಇಷ್ಟಾದರೂ ಇವರೆಲ್ಲ ಬಿಳಿಯ ಜನ. ಇಂಗ್ಲಿಷ್ ರಾಜರಾಣಿಯರನ್ನು ಗೌರವದ ಒಡೆಯರೆಂಬಂತೆ ಒಪ್ಪಿ ನಡಸುವ ಮರ್ಯಾದೆಯನ್ನು ಸಲ್ಲಿಸುವವರು.

ಈಚಿನ 20-30 ವರ್ಷಗಳಲ್ಲಿ ಈ ಸಡಿಲತೆ ಇನ್ನಷ್ಟು ಮುಂದುವರಿದಿದೆ. ಐರಿಷ್ ಫ್ರೀ ಸ್ಟೇಟ್ ರಿಪಬ್ಲಿಕ್ ಆಯಿತು. ಅದು ಕಾಮನ್‌ವೆಲ್ತಿಗೆ ಸೇರಲಿಲ್ಲ. ರಾಜರಾಣಿಯರ ಪಾರಮ್ಯ ತತ್ವವನ್ನು ಒಪ್ಪಲಿಲ್ಲ. ಆದರೂ ಇದು ಪರರಾಷ್ಟ್ರದಂತಾಗದೆ ಇಂಗ್ಲಂಡಿನ ಹಗೆಗಳಿಗೆ ಯುದ್ಧ ಕಾಲದಲ್ಲಿ ನೆಲೆ ಅವಕಾಶಗಳನ್ನು ಕೊಡದೆ ನಡೆದುಕೊಂಡಿತು. ಇಂಡಿಯಾ, ಪಾಕಿಸ್ತಾನ್ ಸ್ವತಂತ್ರವಾದಾಗ ಇಂಡಿಯಾ ರಿಪಬ್ಲಿಕ್ ಆಯಿತು. ಬ್ರಿಟನ್ ಚಕ್ರಾಧಿಪತ್ಯಕ್ಕೆ ಸೇರಿದ ಒಂದು ಅಧೀನ ಸರ್ಕಾರ ಸ್ವಾಧೀನವಾಗಿ ಈ ಹೊಸ ಗಣರಾಜ್ಯವನ್ನು ರಾಜಮಾನ್ಯಕ್ಕೆ ಒಳಪಟ್ಟ ಕಾಮನ್‌ವೆಲ್ತಿನಲ್ಲಿ ಇರಗೊಡುವದು ಹೇಗೆ ಎಂಬ ಯೋಚನೆ ಬಂದಿತು. ಡೊಮಿನಿಯನ್ ತತ್ವ ಕಾಮನ್ ವೆಲ್ತ್ ತತ್ವವಾಗಿ ರೂಪಾಂತರಗೊಂಡಿತು, ವಿಸ್ತಾರಗೊಂಡಿತು. ಈ ವರೆಗೂ

ಪಾರ್ಲಿಮೆಂಟರಿ ಪ್ರಜಾಪ್ರಭುತ್ವ ಈ ರಾಜಕೀಯ ಮಂಡಲದ ವೈಶಿಷ್ಟ ಎಂದಿತ್ತು. ಈಗ ಪಾಕಿಸ್ತಾನದಲ್ಲಿ, ಸ್ವಲ್ಪ ಹಿಂದೆ ಬರ್ಮಾದಲ್ಲಿ, ಕೆಲವು ಕಾಲ ಇತರ ಕಡೆಗಳಲ್ಲಿ ಹಾಗೆ ಹೀಗೆ ನಿರಂಕುಶ ಸೈನ್ಯಾಧಿಕಾರಿಗಳು ರಾಜ್ಯಸೂತ್ರಗಳನ್ನು ವಹಿಸಿಕೊಂಡಾಗ ಕಾಮನ್‌ವೆಲ್ತ್ ಪ್ರಜಾತತ್ವದ ಲಕ್ಷಣವೂ ಮುರಿದುಬಿತ್ತು. ದಕ್ಷಿಣ ಆಫ್ರಿಕಾದ ಪ್ರಜಾವರ್ಗದಲ್ಲಿ ಹತ್ತರಲ್ಲಿ ಒಂದು ಭಾಗ ಮಾತ್ರ ಬಿಳಿಯರದು. ಬಿಳಿಯರು ಮಾತ್ರಾ ಬೋಯರ್ ಮತ್ತು ಬ್ರಿಟಿಷ್ ಜನರಿಗೆ ಮಾತ್ರ ರಾಜಕೀಯ ಹಕ್ಕುಗಳನ್ನು ಕೊಟ್ಟು ಉಳಿದ 9 ಭಾಗದವರನ್ನು ದಾಸರೆಂಬಂತೆ ನಡಸುತ್ತಿರುವಾಗ ಕೂಡ ಒಂದು ರೀತಿ ಈ ಪ್ರಜಾಪ್ರಭುತ್ವದ ಕುತ್ತಿಗೆ ಹಿಸುಕಿದಂತಾಗಿತ್ತು. ಇಂಡಿಯಾ, ಬರ್ಮಾ ಮುಂತಾದ ರಾಷ್ಟ್ರಗಳ ಜನವರ್ಗ ಕಾಮನ್‌ವೆಲ್ತ್ ಮಂಡಲಕ್ಕೆ ಸೇರಿದಾಗ ಬಿಳಿಯರಿಗೆ ಮಾತ್ರ ಸಲ್ಲುತ್ತಿದ್ದ ಸ್ಥಾನಮಾನ, ಸಮಾನತೆ ಬಣ್ಣದ ಜನರಿಗೂ ವಿಸ್ತರಿಸುವಂತಾಯಿತು. ಈಚೆಗೆ ಈ ಧಾರಾಳ ಆಫ್ರಿಕದ ಕರಿಯ ಜನಕ್ಕೂ ವಿಸ್ತರಿಸಿದೆ. ನಾಗರಿಕತೆ, ರಾಜಕೀಯ ವಿಚಕ್ಷಣೆ, ಆರ್ಥಿಕ ಅಸಮತೆ, ವರ್ಣ, ಭಾಷೆ, ಬುಡಕಟ್ಟು, ಸೈನ್ಯಶಕ್ತಿ, ಲೌಕಿಕ ಪ್ರಭಾವ - ಇವು ಯಾವುವೂ ಕಾಮನ್‌ವೆಲ್ತಿನ ಸದಸ್ಯತ್ವಕ್ಕೆ ಅಡ್ಡಿಯಲ್ಲವೆಂದು, ಲೋಪವಲ್ಲವೆಂದು ಆಯಿತು. ಘಾನಾ ಸ್ವತಂತ್ರವಾಯಿತು. ಪಶ್ಚಿಮ ಇಂಡೀಸ್ ಸಮ್ಮೇಳನ ಹಾಗೂ ಹೀಗೂ ಅತಂತ್ರವಾಗಿ, ಒಳ ಅನೈಕಮತ್ಯಗಳಿಂದ ಕೂಡಿದ್ದರೂ ಕಾಮನ್‌ವೆಲ್ತಿಗೆ ಸೇರ ಬಲ್ಲದ್ದೆಂದಾಯಿತು. ನಿನ್ನ ಮೊನ್ನೆ ಮಲಯ ಸ್ವತಂತ್ರವಾಯಿತು. ಅಲ್ಲಿನ ರಾಜ ಆಯ್ಕೆಯ ತತ್ವದ ಮೇಲೆ ಆಳಬೇಕಾದವರು. ಸಿಂಗಪುರಕ್ಕೆ ಹೊಸದಾಗಿ ಬಂದ ಸ್ವಾಧೀನತೆ ಇನ್ನಷ್ಟು ವಿಶೇಷದ್ದು. Independent dependence – ಸ್ವತಂತ್ರವಾದ ಅಧೀನತೆ ಎಂಬ ವಿಚಿತ್ರ ಹೆಸರಿನಲ್ಲಿ ನಿರ್ದೇಶಿಸುತ್ತಿದ್ದರೂ ಈ ಮಂಡಲದಲ್ಲಿ ಅದಕ್ಕೂ ಸ್ಥಾನವುಂಟು. ನ್ಯಾಸಲ್ಯಾಂಡ್, ಟಾಂಗನೀಕ, ರೊಡೀಸಿಯಾ ಮುಂತಾದವೆಲ್ಲ ಹೊಸದಾಗಿ ಈ ಸ್ಥಾನವನ್ನು ಕೆಲವು ಪಡೆದಿವೆ; ಇನ್ನು ಕೆಲವು ಪಡೆಯಲಿವೆ. ಈ ವಾರದಲ್ಲಿ ಮಾಲಿಲ್ಯಾಂಡ್ ಸ್ವತಂತ್ರವಾಯಿತು. ನಾಳೆ ಮಾಲ್ಟಾಕ್ಕೆ, ಸೈಪ್ರೆಸ್ಸಿಗೆ ಕಾಮನ್‌ವೆಲ್ತ್ ಸದಸ್ಯತ್ವ ಬಂದೀತು. ಸೈಪ್ರೆಸ್ಸಿನ ರೋಮನ್ ಕ್ಯಾಥೊಲಿಕ್ ಮತಾಚಾರ್ಯನಾದ ಆರ್ಚ್ ಬಿಷಪ್ ಮೆಕಾರಿಯೋಸ್‌ಗೆ ಕಾಮನ್‌ವೆಲ್ತಿನ ಸಭೆಗಳಲ್ಲಿ ಸ್ಥಾನ ದೊರಕಬೇಕಾದೀತು. ನೈಜೀರಿಯಾ ಮೂರುವರೆ ಕೋಟಿ ಪ್ರಜಾಸಂಖ್ಯೆಯ ಬಹುದೊಡ್ಡ ದೇಶ. ಫ್ರೆಂಚ್ ಚಕ್ರಾಧಿಪತ್ಯದ ಎಲ್ಲ ಜನಸಂಖ್ಯೆಗಿಂತ ಹೆಚ್ಚಿನದು ಆಫ್ರಿಕದ ಈ ಒಂದು ರಾಜ್ಯದಲ್ಲಿದೆ. ಇವೆಲ್ಲಾ ಸ್ವತಂತ್ರ ರಾಷ್ಟ್ರವಾಗಿ ಕಾಮನ್‌ವೆಲ್ತಿಗೆ ಸೇರಬೇಕಾಗಿ ಬಂದಾಗ ಇವೆಲ್ಲಕ್ಕೂ ಸಮಾನವಾದ ಸ್ಥಾನ ಕೊಡುವುದು ಕಷ್ಟವಾಗಬಲ್ಲದು. ರಾಣಿಯವರು ಕೊಡುವ ಔತಣ ಕೂಟಗಳಲ್ಲಿ ಬಂಕಿಗ್‌ಹ್ಯಾಮ್ ಅರಮನೆಯಲ್ಲಾಗಲಿ, ಪ್ರಪಂಚ ಸಂಸ್ಥೆಯ ಸಭಾ ಮಂಡಲದಲ್ಲಾಗಲಿ ಇಷ್ಟು ಸ್ವತಂತ್ರ ರಾಷ್ಟ್ರಗಳಿಗೆ ಸ್ಥಾನ ಕೊಡಲು ಸ್ಥಳವೆಲ್ಲಿದೆ ಎಂದು ಚೇಷ್ಟೆಯಿಂದ ಮಾತಾಡಿರುವುದುಂಟು. ಇಂದಿನ 10-11 ಮುಖ್ಯ ಕಾಮನ್‌ವೆಲ್ತ್ ರಾಷ್ಟ್ರಗಳೊಡನೆ ಸರಿ ತೂಗುವಂತೆ ಆಫ್ರಿಕನ್ ರಾಷ್ಟ್ರಗಳ ಸಮ್ಮೇಳನಗಳನ್ನೊ ಒಡಂಬಡಿಕೆಗಳನ್ನೊ ಮಾಡಿಸಿ ಪ್ರಾತಿನಿಧ್ಯವನ್ನು ಕಲ್ಪಿಸಬಹುದು.



ಅದು ನಾಳೆಯ ಕಲ್ಪ. ಆಫ್ರಿಕ ಇಂದು ದೊಡ್ಡ ತಳಮಳದಲ್ಲಿದೆ. ಎಲ್ಲಕ್ಕಿಂತ ಹೆಚ್ಚಾಗಿ ಪಾಶ್ಚಿಮಾತ್ಯರಿಂದ ಹಿಂದುಳಿದ ಲೋಕ ಕಲಿತದ್ದು ಮೂರು ಅಂಶಗಳು. ಒಂದು, ಅವರ ವಿಜ್ಞಾನ ಮತ್ತು ಯಂತ್ರ ಪ್ರಪಂಚ; ಎರಡು, ಅವರ ರಾಷ್ಟ್ರೀಯ ತತ್ವ; ಮೂರು, ಪ್ರಜಾಪ್ರತಿನಿಧಿ ಪದ್ಧತಿಯಲ್ಲಿ ಎದ್ದು ಕಾಣುವ ವ್ಯಕ್ತಿ ಸಮಾನತೆ. ಈ ಮೂರೂ ಏಷ್ಯಾ ಖಂಡವನ್ನೂ ಆಫ್ರಿಕಾವನ್ನೂ ರೂಪಾಂತರಗೊಳಿಸಲಿವೆ. ಅಲ್ಲಿನ ಕಪ್ಪು ಜನ ವಿದ್ಯಾವಂತರಾಗುತ್ತಿದ್ದಾರೆ, ಸ್ವತಂತ್ರರಾಗಲು ಬಯಸುತ್ತಿದ್ದಾರೆ. ಇನ್ನು 10-20 ವರ್ಷಗಳಲ್ಲಿ ಈ ಜನಾಂಗಗಳೆಲ್ಲ ಪರಾಧೀನತೆಯನ್ನು ಕಳೆದುಕೊಂಡು ಸ್ವಾಧೀನರಾಗಲಿದ್ದಾರೆ. ಫ್ರಾನ್ಸ್, ಬೆಲ್ಜಿಯಂ, ಇಂಗ್ಲಂಡ್ ಎಲ್ಲರೂ ಇದನ್ನು ನೆರವೇರಿಸಲಿದ್ದಾರೆ. ಇಂಥ ಸ್ಥಿತಿಯಲ್ಲಿ ಕಾಮನ್‌ವೆಲ್ತಿಗೆ ಸೇರಿದ ದಕ್ಷಿಣ ಆಫ್ರಿಕಾದಂಥ ಒಂದು ರಾಜ್ಯ ತನ್ನ ಪ್ರಜೆಗಳಲ್ಲಿ ಒಂಭತ್ತನೆಯ ಒಂದು ಭಾಗ ದೇಶೀಯರನ್ನು ನಿಗ್ರಹಿಸಿ ಅವರಿಗೆ ಯಾವ ಸಮಾನತೆಯ ಹಕ್ಕುಗಳನ್ನೂ ಕೊಡದೆ ಅವರನ್ನು ಗುಲಾಮರಿಗಿಂತ ಕೀಳಾಗಿ ಕಂಡು ಪ್ರತ್ಯೇಕತಾ ತತ್ವವನ್ನು ಸ್ಥಾಪಿಸಿರುವುದು ಕಾಮನ್‌ವೆಲ್ತ್ ಪ್ರಜೆಗಳ ಸರ್ವತ್ರ ಸಮಾನತೆಯ ಹಕ್ಕಿಗೆ ಧಕ್ಕೆ ತಂದಿದೆ. ಕಾಮನ್‌ವೆಲ್ತ್ ಪ್ರಜೆ ಎಲ್ಲಿದ್ದರೂ ಸಮಾನ ಎಂದಾಗ ಆಫ್ರಿಕನ್ ಜನಕ್ಕೆ ಬೆಲೆ ಗೌರವ ಸಮಾನತೆ ಕೊಡೆನೆನ್ನುವ ವಿಪರೀತ ದಕ್ಷಿಣ ಆಫ್ರಿಕಕ್ಕೆ ಸಲ್ಲದಾಗುವುದು. ಕಾಮನ್‌ವೆಲ್ತಿನಲ್ಲಿ ಅದರ ಸ್ಥಿತಿ ಇಂದು ಅಭದ್ರವಾಗಿದ್ದು ಅವರ ಮೇಲೆ ಸಾರ್ವತ್ರಿಕ ವಿರೋಧ ಬೆಳೆಯುವಂತಾಗಿದೆ. ಈಚೆಗೆ ಎಥಿಯೋಪಿಯಾದ ಅಡಿಸ್‌ಅಬಾಬದಲ್ಲಿ ಸೇರಿದ್ದ ಆಫ್ರೊಏಸಿಯನ್ ಸಮ್ಮೇಳನ ಉಗ್ರವಾದ ನಿರ್ಣಯಗಳನ್ನು ಈ ಬಗ್ಗೆ ಮಾಡಿ ಪ್ರತಿಭಟನೆಯ ವ್ಯವಸ್ಥೆಯನ್ನು ಮಾಡಲಿದೆ. ಕಾಮನ್‌ವೆಲ್ತ್ ನಿಂದ ಅವರನ್ನು ಹೊರಗೆ ಹಾಕಬೇಕಾದ ಪ್ರಮೇಯವೂ ಹುಟ್ಟಬಹುದು. ಈ ಪ್ರಸಂಗ ಕ್ರಾಂತಿಕರವಾದದ್ದು. ಕಾಮನ್‌ವೆಲ್ತನ್ನು ಕದಲಿಸಿ ಅಲ್ಲಾಡಿಸುವ ಸಂಘಟನೆಯಾಗುವುದು. ಅದರ ಸ್ವರೂಪವನ್ನು ಸರ್ವಥಾ ಮಾರ್ಪಡಿಸುವ ಪ್ರಭಾವವಾದೀತು.

ಇಂಗ್ಲಂಡಿಗೂ ಈಜಿಪ್ತಿಗೂ ಸೂಯೆಜ್ ಕಾಲುವೆಯ ವಾದವೆದ್ದಾಗ, ಇಂಡಿಯಾಕ್ಕೂ ಪಾಕಿಸ್ತಾನಕ್ಕೂ ನಡೆಯುತ್ತಿರುವ ಕಾಶ್ಮೀರ ವಿವಾದ ಸಂಬಂಧದಲ್ಲಿ, ಹಿಂದಿನ ಪ್ರಪಂಚ ಯುದ್ಧ ಸಂಬಂಧದಲ್ಲಿ, ರಷ್ಯಾ ಪಾಶ್ಚಿಮಾತ್ಯ ಶಕ್ತಿ ಬಣಗಳ ನಡುವೆಯ ಸಂಬಂಧಗಳಲ್ಲಿ ಕಾಮನ್‌ವೆಲ್ತಿನ ಸದಸ್ಯರು ಯಾವುದೇ ರೀತಿ ಇಂಗ್ಲಂಡಿಗೆ ಪಕ್ಷಪಾತ ತೋರದೆ ನಡೆಯಬಹುದಿತ್ತು. ಇಂಗ್ಲಂಡೂ ಸ್ವತಂತ್ರವಾಗಿ ವರ್ತಿಸುತ್ತಿತ್ತು. ತಟಸ್ಥವಾಗಿ ಇರಬಹುದಿತ್ತು. ಆ ಸ್ವಾತಂತ್ರ್ಯ ಕಾಮನ್‌ವೆಲ್ತ್‌ನಲ್ಲಿ ಇದ್ದೇ ಅವಕ್ಕೆ ಮಾನ್ಯತೆ ಬಂದದ್ದು. ದಕ್ಷಿಣ ಆಫ್ರಿಕ ಸರಕಾರದ ಇಂದಿನ ನೀತಿಯನ್ನು ಒಪ್ಪಿಕೊಳ್ಳಲು ಕಾಮನ್‌ವೆಲ್ತ್‌ನ ಬಹುಸಂಖ್ಯೆಯ ರಾಷ್ಟ್ರಗಳು ಒಪ್ಪದೇ ಹೋದರೆ ನಾಳೆ ದಕ್ಷಿಣ ಆಫ್ರಿಕಾ ಕಾಮನ್‌ವೆಲ್ತಿನಿಂದ ಹೊರಕ್ಕೆ ಹೋಗಬೇಕಾಗುತ್ತದೆ. ಇಲ್ಲವಾದರೆ ಕಾಮನ್‌ವೆಲ್ತ್ ಸ್ವರೂಪ ಕೆಟ್ಟು ಅದು ಇಲ್ಲವಾಗುತ್ತದೆ. ದಕ್ಷಿಣ ಆಫ್ರಿಕವನ್ನು ಹೊರಗೆ ಹಾಕುವುದಾದರೆ

ಆ ಗುಣಾವಗುಣ ಪರಿಶೀಲನೆ ಬ್ರಿಟನ್ನಿಗೆ ತುಂಬಾ ಇಕ್ಕಟ್ಟಿನದು. ಆದರೆ ವರ್ಣದ್ವೇಷ ನೀತಿಯನ್ನು ಬಿಟ್ಟುಕೊಟ್ಟು ತಾನು ಕಾಮನ್‌ವೆಲ್ತಿನಲ್ಲಿ ಉಳಿಯುವುದೇ, ಉಳಿಯ ಬೇಕೇ ಎಂಬುದನ್ನು, ಅದರ ಲಾಭ ನಷ್ಟಗಳನ್ನು, ಮಾನಾಪಮಾನಗಳನ್ನು ನಿರ್ಣಯಿಸಿ ಅದರ ಫಲಾಫಲಗಳನ್ನು ಎದುರಿಸಬೇಕಾದ ಅಗತ್ಯ ದಕ್ಷಿಣ ಆಫ್ರಿಕಾದ್ದು.

26–6–1960

❑

# 15. ನಮ್ಮ ವಿಶ್ವವಿದ್ಯಾನಿಲಯದ ಗುರಿ, ಗಮ್ಯಗಳು

1917ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಸ್ಥಾಪಿತವಾಗುವ ಮುಂಚೆ ನಮ್ಮಲ್ಲಿ ಪಾಶ್ಚಿಮಾತ್ಯ ವಿದ್ಯಾಶಿಕ್ಷಣ ಪಡೆದಿದ್ದ ಕೆಲವರು ವಿದ್ವಾಂಸರು ಬೇರೆ ಬೇರೆ ದೇಶಗಳಿಗೆ ಹೋಗಿ ನಾಲ್ಕಾರು ಬಗೆಯ ವಿಶ್ವವಿದ್ಯಾಲಯಗಳನ್ನು ನೋಡಿಕೊಂಡು ಬಂದು ವರದಿ ಮಾಡಿದರು. ಆವರೆಗೆ ಮದ್ರಾಸು, ಬೊಂಬಾಯಿ, ಕಲ್ಕತ್ತಾ ಮುಂತಾದ ವಿಶ್ವವಿದ್ಯಾನಿಲಯಗಳು ಖ್ಯಾತಿಗೊಂಡಿದ್ದವು. ಮೈಸೂರಿನ ವಿದ್ಯಾರ್ಥಿಗಳು ಮದ್ರಾಸು ವಿಶ್ವವಿದ್ಯಾನಿಲಯಕ್ಕೇ ಬಹುಮಟ್ಟಿಗೆ ಹೋಗಿ ಅಲ್ಲಿನ ಪದವೀಧರರಾಗುತ್ತಿದ್ದರು. ಬೊಂಬಾಯಿಗೆ ಹೋಗುತ್ತಿದ್ದವರು ಹೆಚ್ಚು ಮಂದಿ ಇರಲಿಲ್ಲ. ಆ ವಿಶ್ವವಿದ್ಯಾನಿಲಯಗಳು ಡಿಗ್ರಿ ಪರೀಕ್ಷೆ ನಡಸುವ ಸಂಸ್ಥೆಗಳು. ಈಚಿನ ಕಾಲಗಳಲ್ಲಿ ಸಂಶೋಧನೆಗೆ ಬಂದಿರುವ ವಿಶೇಷ ಗಣ್ಯತೆ ಆಗ ಇರಲಿಲ್ಲ. ಮದ್ರಾಸಿನಂತಹ ವಿಶ್ವವಿದ್ಯಾನಿಲಯಕ್ಕೆ ಸಂಬಂಧಿಸಿದಂತೆ ಎಷ್ಟೊ ಕಾಲೇಜುಗಳು ಪ್ರಾಂತದ ಮೇಲೆಲ್ಲ ಇದ್ದರೂ ಮದ್ರಾಸ್ ಸರಕಾರ ನಡಸುತ್ತಿದ್ದ ಕಾಲೇಜುಗಳು ಒಟ್ಟಿಗೆ ರಾಜಮಹೇಂದ್ರಿ, ಮದರಾಸ್, ಕುಂಭಕೋಣಂ, ಪಾಲಘಾಟ್ ಮುಂತಾದ 5-6ಕ್ಕಿಂತ ಹೆಚ್ಚಾಗಿರಲಿಲ್ಲ. ಉಳಿದುವೆಲ್ಲ ಖಾಸಗಿಯಾಗಿ ಸಾರ್ವಜನಿಕರು, ವಿಶೇಷವಾಗಿ ಕ್ರಿಶ್ಚಿಯನ್ ಪಾದ್ರಿಗಳು ನಡಸುತ್ತಿದ್ದ ಕಾಲೇಜುಗಳು. ಸಾಧಾರಣ ಡಿಗ್ರಿ ಪರೀಕ್ಷೆಗಳಿಗೆ ಅವುಗಳಲ್ಲಿ ಪಾಠ ಪ್ರವಚನ ನಡೆಯುತ್ತಿದ್ದುವು. ಒಂದೆರಡು ಕಾಲೇಜುಗಳಲ್ಲಿ ಮಾತ್ರ – ಒಂದೇ ಏನೊ – ಆನರ್ಸ್ ವ್ಯಾಸಂಗಕ್ಕೆ ಏರ್ಪಾಡಿತ್ತು. ಬಿ.ಎ. ಆನರ್ಸ್ ಡಿಗ್ರಿ ತೆಗೆದುಕೊಂಡ 2-3 ವರ್ಷಗಳ ತರುವಾಯ ಪದವೀಧರರು ಎಂ.ಎ.ಆನರ್ಸ್ ಎಂದು ಹಾಕಿಕೊಳ್ಳಬಹುದಿತ್ತು. ವಿಶ್ವವಿದ್ಯಾನಿಲಯ ಡಿಗ್ರಿ ಪಡೆಯುವ ಪರೀಕ್ಷೆ ನಡಸಿ ಪದವೀಧರರನ್ನು ತಯಾರು ಮಾಡುತ್ತಿತ್ತು. ಭಾರತದಲ್ಲೆಲ್ಲ ಸುಮಾರು ಪದ್ಧತಿ ಹೀಗೇ ಇತ್ತು.

ನಮ್ಮ ವಿಶ್ವವಿದ್ಯಾಲಯ ಬರಿಯ ಪರೀಕ್ಷಕ ಸಂಸ್ಥೆಯಾಗಿ ಮುಗಿಯಲು ಬಯಸಲಿಲ್ಲ. ಹಿಂದೆ ನಮ್ಮ ಎರಡು ಕಾಲೇಜುಗಳಲ್ಲಿಯೂ ಆನರ್ಸ್ ವ್ಯಾಸಂಗಕ್ಕೆ ಅವಕಾಶವಿದ್ದರೂ ಇವರು ಮದ್ರಾಸಿನ ವಿಶ್ವವಿದ್ಯಾನಿಲಯದಿಂದಲೇ ಮದ್ರಾಸಿನ ಇತರ ಮೊದಲನೆಯ ದರ್ಜೆ ಕಾಲೇಜುಗಳಂತೆ ಆ ಪದವಿ ಪಡೆಯಬೇಕಾಗಿತ್ತು. ಹಿಂದೆ ಮೆಟ್ರಿಕ್ಯುಲೇಷನ್ ಅಥವಾ S.S.L.C. ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿದವರು F.A., ಆಮೇಲೆ ಇಂಟರ್‌ಮೀಡಿಯೆಟ್ ಪರೀಕ್ಷೆಗೆ 2 ವರ್ಷ ಓದಿ, ಅಲ್ಲಿ ತೇರ್ಗಡೆ

ಹೊಂದಿ 2 ವರ್ಷ ಬಿ.ಎ., 3 ವರ್ಷ ಆನರ್ಸ್ ಪರೀಕ್ಷೆಗಳಿಗೆ ಕುಳಿತು ಉತ್ತೀರ್ಣರಾಗ ಬೇಕಾಗಿತ್ತು. ಎಂ.ಎ.ಗೆ ಪ್ರತ್ಯೇಕವಾಗಿ ಪರೀಕ್ಷೆಯೊಂದು - ಹೊಸ ಕಾಲದಲ್ಲಿ - ಇರಲಿಲ್ಲ.

ನಮ್ಮ ವಿಶ್ವವಿದ್ಯಾನಿಲಯದಲ್ಲಿ ಆದ ಮುಖ್ಯ ಏರ್ಪಾಡು ಎಂದರೆ: ಇದನ್ನು ವ್ಯಾಸಂಗದ ಮತ್ತು ಬೋಧನೆಯ ಸಂಸ್ಥೆಯನ್ನಾಗಿ ಮಾಡಿದ್ದು, ಸಂಶೋಧನೆಗಳಿಗೂ ಪ್ರಾಧ್ಯಾಪಕರ ಸ್ವತಂತ್ರ ಚಿಂತನೆಗೂ ಪುರಸ್ಕಾರ ಕೊಡುವ ಬೆಲೆಯನ್ನು ಮುಂದು ಮಾಡಿದ್ದು. ಇದ್ದ ಎರಡು ಕಾಲೆಜುಗಳಲ್ಲಿ ಸಾಹಿತ್ಯ, ಮಾನವಶಾಸ್ತ್ರಗಳಿಗೆ (Humanities) ಸಂಬಂಧಿಸಿದ ಬೋಧನೆ ಮೈಸೂರಲ್ಲಿಯೂ ವಿಜ್ಞಾನದ ಭಾಗ ಬೆಂಗಳೂರಲ್ಲಿಯೂ ಏರ್ಪಾಡಾಯಿತು. ಮೊದಲು ಇದನ್ನು ವಸತಿ ಪದ್ಧತಿಗೆ (Residential) ಒಳಪಟ್ಟ ಸಂಸ್ಥೆಯನ್ನಾಗಿ ಮಾಡಬೇಕು; ವಿಜ್ಞಾನಭಾಗ, ಕಲಾಭಾಗ ಎರಡೂ ಮೈಸೂರಿನಲ್ಲಿಯೇ ಸ್ಥಾಪಿತವಾಗಬೇಕು; ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯದ ಬೀಡಿನಲ್ಲಿಯೇ ವಾಸ ಮಾಡಬೇಕು; ಅಧ್ಯಾಪಕರೂ ಅದೇ ಆವರಣದಲ್ಲಿಯೇ ಇರಬೇಕು; ಬೋಧಕರಿಗೂ ವಿದ್ಯಾರ್ಥಿಗಳಿಗೂ ಹೆಚ್ಚು ಆಪ್ತವಾದ ಸಂಬಂಧ ಕಲ್ಪಿತವಾಗುವಂತೆ ಒಂದು ಟುಟೋರಿಯಲ್ ಪದ್ಧತಿ ಏರ್ಪಡಬೇಕು; ಕುಕ್ಕರಹಳ್ಳಿ ಕೆರೆಯ ಆಚೆಯಿದ್ದ ಕಾಂತರಾಜ ಅರಸರ Mansion ಎಂಬ ಹೆಸರಿನ ಮಂದಿರವನ್ನೂ ವಿಸ್ತಾರವಾದ ಭೂಭಾಗವನ್ನೂ ಇದಕ್ಕಾಗಿ ತೆಗೆದುಕೊಳ್ಳಬೇಕು ಎಂದಾಗಿತ್ತು. ಕಾರಣಾಂತರ ಗಳಿಂದ ಈ ಸಲಹೆ ಬಿದ್ದು ಹೋಗಿ, ವಿಶ್ವವಿದ್ಯಾನಿಲಯದ ಅಂಗವಾಗಿ ಪ್ರಧಾನವಾದ ಡಿಗ್ರಿ ಕಾಲೆಜುಗಳು ಕಲಾಭಾಗಕ್ಕೆ ಮೈಸೂರಲ್ಲಿಯೂ ವಿಜ್ಞಾನಕ್ಕೆ ಬೆಂಗಳೂರಲ್ಲಿಯೂ ವಿಶ್ವವಿದ್ಯಾನಿಲಯದ ಕಾರ್ಯ ವಿಭಕ್ತವಾಯಿತು. ಆರಂಭದಲ್ಲಿ SSLC ಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು ಒಂದು ವರ್ಷ ವಿಶ್ವವಿದ್ಯಾನಿಲಯದ ಪ್ರವೇಶ ಪರೀಕ್ಷೆಯಲ್ಲಿ – University Entrance ಪರೀಕ್ಷೆಯಲ್ಲಿ – ತೇರ್ಗಡೆಯಾಗಬೇಕಿತ್ತು. ಆ ಒಂದು ವರ್ಷದ ವ್ಯಾಸಂಗವನ್ನು ಬೆಂಗಳೂರು – ಮೈಸೂರಿನಲ್ಲಿ, ಶಿವಮೊಗ್ಗದಲ್ಲಿ ನಡಸುತ್ತಿದ್ದ ಸರ್ಕಾರದ ಹೈಸ್ಕೂಲುಗಳಲ್ಲಿಯೂ ಇತರ ಕೆಲವು ಖಾಸಗೀ ಹೈಸ್ಕೂಲ್‌ಗಳಲ್ಲಿ ಬೆಂಗಳೂರು – ಮೈಸೂರುಗಳಲ್ಲಿ ಮಾತ್ರವೂ ನಡೆಯಬೇಕೆಂಬ ಅವಕಾಶವಿತ್ತು. ಆಡಳಿತ ತಕ್ಷಣಕ್ಕೆ ಆ ತರಗತಿಗಳನ್ನು ನಡಸುವ ಕೊಲಿಜಿಯೇಟ್ ಹೈಸ್ಕೂಲುಗಳು ಸರ್ಕಾರಿ ವಿದ್ಯಾಭ್ಯಾಸದ ಇಲಾಖೆಯ ವಶದಲ್ಲಿದ್ದರೂ ಅಲ್ಲಿನ ಉಪಾಧ್ಯಾಯರನ್ನೂ ಅವರ ಸಂಬಳ ಸಾರಿಗೆಗಳನ್ನೂ ವಿದ್ಯಾ ಇಲಾಖೆಯ ಮತ್ತು ಆಯಾ ಸಂಸ್ಥೆಗಳ ಮುಖ್ಯಸ್ಥರು ನೇಮಕ ಮಾಡುತ್ತಿದ್ದರು. ಆದರೆ ವ್ಯಾಸಂಗ ಪದ್ಧತಿ, ಪಾಠ ನಿರ್ಣಯ, ಪರೀಕ್ಷೆಗಳು, ಮೌಲ್ಯ ನಿರ್ಣಯ ಎಲ್ಲವೂ ವಿಶ್ವವಿದ್ಯಾನಿಲಯಗಳ ಅಧಿಕಾರಕ್ಕೆ ಒಳಪಟ್ಟದ್ದು. ಹೀಗೆ ಒಂದು ಬಗೆಯ ದುಗುಣಿ ವ್ಯವಹಾರ ಆ ಸಂಬಂಧದಲ್ಲಿ ನಡೆಯುವಂತಾಗಿತ್ತು. ಅದರ ಅನನುಕೂಲಗಳು ಬೇಗ ಮನದಟ್ಟಾದವು. ಆ ಪದ್ಧತಿ ತಪ್ಪಿಸಿ, ಎರಡು ವರ್ಷಗಳ ಇಂಟರ್‌ಮೀಡಿಯೆಟ್ ಪರೀಕ್ಷೆಯ ವ್ಯವಸ್ಥೆಗೆ ಕೆಲವು ಕಾಲದ ಮೇಲೆ – ಸುಮಾರು 1928ರಲ್ಲಿ – ಪುನಃ ತಿರುಗಿತು.



1928ರ ವರೆಗೂ ಪ್ರವೇಶ ಪರೀಕ್ಷೆ ಆದ ಮೇಲೆ ಬಿ.ಎ., ಬಿ.ಎಸ್ಸಿ., ಮೂರು ವರ್ಷಗಳ ವ್ಯಾಸಂಗ ವ್ಯವಸ್ಥೆವುಳ್ಳದ್ದಾಗಿತ್ತು. ಬೇಕಾದವರು ಮೊದಲ ವರ್ಷ ಒಂದು ಗಟ್ಟಿ ಪರೀಕ್ಷೆಗೆ ಕುಳಿತು ತೇರ್ಗಡೆಹೊಂದಿ ಬೇರೆ ಶಿಕ್ಷಣಗಳಿಗೆ ಹೋಗಬಹುದಿತ್ತು. ಬೇಡದವರು ಮೂರು ವರ್ಷ ಪೂರ್ತಿ ವಿಶ್ವವಿದ್ಯಾನಿಲಯ ಆವರಣಗಳಲ್ಲಿ ತನಿಯಾಗಿ ವಿದ್ಯಾರ್ಜನೆ ಮಾಡಬಹುದಿತ್ತು. ಆ ಕಾಲದಲ್ಲಿದ್ದ ಕಾಲೆಜ್ ಜೀವನದ ಆವರಣ, ಅದನ್ನು ಬಲ್ಲವರಿಗೆ, ನಿಜವಾದ ಒಂದು ವಿದ್ಯಾಸೌಭಾಗ್ಯದ ಅವಕಾಶವನ್ನು ಒದಗಿಸಿತ್ತು. ಭರತಖಂಡದಲ್ಲಿಯೇ ವಿದ್ವತ್ತಿಗೆ ಹೆಸರಾದ ಪ್ರಾಧ್ಯಾಪಕರು ನಮ್ಮಲ್ಲಿ ಇದ್ದುದರಿಂದ ದೊಡ್ಡ ಸ್ಫೂರ್ತಿಯನ್ನೂ ಆದರ್ಶವನ್ನೂ ಕೊಟ್ಟರು. ಇಲ್ಲಿ ಕಲಿತು ಶಾಸ್ತ್ರಕಲೆಗಳ ವ್ಯಾಸಂಗ ಮಾಡಿ ಆಯಾ ವಿದ್ಯಾರ್ಜನೆ ಮಾಡಿದವರಿಗೆ ಆ ಸಂತೋಷ ಮರೆಯಲಾಗದ್ದು. ನಿರಂತರವಾಗಿ ಬೆಳಗುವ ಜ್ಯೋತಿಯಂತೆ ಆ ನೆನಪು, ಆ ಕಾಂತಿ. ಬಿ.ಎ., ಬಿ.ಎಸ್ಸಿ., ಮುಗಿದ ಮೇಲೆ 2 ವರ್ಷ ವ್ಯಾಸಂಗ ಮಾಡಿದ ಮೇಲೆ ಎಂ.ಎ., ಎಂ.ಎಸ್ಸಿ.,ಗಳಿಗೆ ಕೂಡಬಹುದಿತ್ತು. ಅವು ಕ್ರಮವಾಗಿ ಪ್ರಾಧ್ಯಾಪಕರ ಪಾಠ ಪ್ರವಚನಗಳಲ್ಲಿಯೇ ಪ್ರಯೋಗ ನಿರ್ದೇಶನಗಳಲ್ಲಿಯೇ ನಡೆಯಬೇಕಾದದ್ದು! 1928ರಿಂದೀಚೆಗೆ 2 ಕಾಲೆಜುಗಳಲ್ಲಿ ಡಿಗ್ರಿ, ಆನರ್ಸ್ ಎಂಬ ವಿಭೇದಗಳು ಕವಲೊಡೆದು ಡಿಗ್ರಿಗೆ 2 ವರ್ಷ, ಆನರ್ಸ್‌ಗೆ 3 ವರ್ಷ ವ್ಯಾಸಂಗವೆಂದು ಗೊತ್ತಾಯಿತು. ಆನರ್ಸ್ ಪರೀಕ್ಷೆಗೆ ಅತ್ಯಂತ ಮೇಧಾವಿ ಗಳೆಂದು ಆಯ್ದ ವಿದ್ಯಾರ್ಥಿಗಳು ಮಾತ್ರ ಅಧಿಕಾರ ಪಡೆಯುತ್ತಿದ್ದರು. ಆನರ್ಸ್‌ನಲ್ಲಿ ಮೇಲ್ತರದಲ್ಲಿ ಉತ್ತೀರ್ಣರಾದವರಿಗೆ ಮಾತ್ರ ಎಂ.ಎ., ಎಂ.ಎಸ್ಸಿ., ವ್ಯಾಸಂಗಕ್ಕೆ ಪ್ರವೇಶ ದೊರೆಯುತ್ತಿತ್ತು. ಸುಮಾರು ಕಳೆದ ದಶಕದವರೆಗೂ ನಮ್ಮಲ್ಲಿ ಡಾಕ್ಟರೇಟುಗಳ ಸಂಭ್ರಮ ಹೆಚ್ಚಾಗಿರಲಿಲ್ಲ. ಪಾಸ್‌ಮಾಡಿ ಪಡೆದವೂ ಇರಲಿಲ್ಲ. ಗೌರವಾರ್ಥವಾಗಿ ದತ್ತವಾದವೂ ಇರಲಿಲ್ಲ. ಇಂಟರ್‌ಮೀಡಿಯೆಟ್ ಮಟ್ಟದಲ್ಲಿ ಇನ್ನೊಂದು ವರ್ಗದ ತುಂಬ ಬುದ್ಧಿವಂತರಾದ ವಿದ್ಯಾರ್ಥಿಗಳನ್ನು ಆರಿಸಿಕೊಂಡು, ಎಂಜಿನಿಯರಿಂಗ್, ಮೆಡಿಕಲ್ ಪರೀಕ್ಷೆಗಳಿಗೆ ಪ್ರವೇಶ ದೊರೆಯುವಂತೆ ಶಿಕ್ಷಣ ಕೊಡುತ್ತಿದ್ದರು. ಇದು ಹಿಂದಿನ ಪದ್ಧತಿ.

ಕ್ರಮಕ್ರಮವಾಗಿ ಇಲ್ಲಿಯೂ ಎಲ್ಲಿಯೂ ವಿದ್ಯಾಸಾಧನೆಗಿಂತ ಹೆಚ್ಚಾಗಿ ಪರೀಕ್ಷೆ ಗಳಲ್ಲಿ ಉತ್ತೀರ್ಣರಾಗುವ ಅಭ್ಯಾಸ, ಮೋಹ ಮೊದಲಾದವು ಆ ಶಾಸ್ತ್ರಗಳನ್ನೂ ಅವುಗಳ ಮರ್ಮ – ಮಾರ್ಗ – ಸತ್ವಗಳನ್ನೂ ಗ್ರಹಿಸುವ, ಅನುಸಂಧಾನ ಮಾಡುವ ಮಾರ್ಗಕ್ಕಿಂತ, ಪರೀಕ್ಷೆಗಳಲ್ಲಿ ಮೇಲಾಗಿಯೊ, ಬೀಳಾಗಿಯೊ ಉತ್ತೀರ್ಣರನ್ನಾಗಿ ಮಾಡುವ ಉತ್ಸಾಹಕ್ಕೆ ಬೋಧನೆಯ ಅವರಣವೂ ಇಳಿದವು. ಪ್ರಜಾವರ್ಗಗಳ ಪ್ರಾತಿನಿಧ್ಯ ವಿಶ್ವವಿದ್ಯಾನಿಲಯಕ್ಕೂ ತಟ್ಟಿತು. ಬರಿಯ ಮೇಧಾವಿತೆಗಿಂತ ಬೇರೆ ಬೇರೆ ಜನ ವರ್ಗಗಳ ಪ್ರಾತಿನಿಧ್ಯಕ್ಕೆ ಹೆಚ್ಚು ಪ್ರಾಬಲ್ಯ ದೊರೆಯುವಂತಾಯಿತು. ಕಾಲೆಜುಗಳಿಗೆ ವಿದ್ಯಾರ್ಥಿ ಪ್ರವೇಶ ಆ ತತ್ವಗಳ ಮೂಲಕ. ಉಪಾಧ್ಯಾಯರನ್ನು ನೇಮಿಸುವುದು ಆ ತತ್ವಗಳ ಅನುಸಾರವಾಗಿ. ಪರೀಕ್ಷೆಗಳಲ್ಲಿ ಉತ್ತೀರ್ಣತೆಯನ್ನು ನಿರ್ಣಯಿಸುವಾಗ – ಅದರಲ್ಲಿಯೂ ಎಂ.ಎ., ಎಂ.ಎಸ್ಸಿ.ಗಳಲ್ಲಿ ಕೂಡ – ಆ ಪಕ್ಷಪಾತ. ವಿಶ್ವವಿದ್ಯಾನಿಲಯದ ಅಧಿಕಾರಿಗಳು ಎಂದರೆ ರೆಜಿಸ್ಟ್ರಾರರು, ಉಪಸ್ಥಾನಪತಿಗಳ – ಆಯ್ಕೆಗೂ ಆ ಎಣಿಕೆ

ಬರಲು ತೊಡಗಿತು. ಪ್ರಾಧ್ಯಾಪಕರು ತಮ್ಮ ವ್ಯಾಸಂಗ, ಚಿಂತನ, ಬರವಣಿಗೆ, ಅಧ್ಯಾಪನಗಳ ಕಡೆ ಮಾತ್ರ ಗಮನವಿಡುತ್ತಿದ್ದ ಸನ್ನಿವೇಶ ಕ್ರಮವಾಗಿ ಮಾಯವಾಗಿ, ವಿಶ್ವವಿದ್ಯಾನಿಲಯದ ಸಭಾಸದಸ್ಯರ ಮರ್ಜಿ ಅನುಸರಿಸುವುದು, ಅವರಿಗೆ ಚಾಡಿ ಕ್ಷುದ್ರ ಒಯ್ಯುವುದು, ಪಿತೂರಿ ನಡಸುವುದು, ಸರ್ಕಾರದ ಕಾರ್ಯದರ್ಶಿವರ್ಗದ ಅಧಿಕಾರಿಗಳ ಪ್ರೀತಿ, ನೆರವು ಸಂಪಾದಿಸುವುದು – ಇವುಗಳ ಕಡೆ ಅಧಿಕತರವಾದ ಪ್ರವೃತ್ತಿಯುಳ್ಳವರಾಗುತ್ತ ಬಂದುದು ವಿಶ್ವವಿದ್ಯಾನಿಲಯದ ಜೀವನದ ಒಂದು ಕುತ್ತವೇ ಆಯಿತು.

ಸುಮಾರು 1942ರಿಂದೀಚೆಗೆ ಈ ಸ್ಥಿತಿ ಇನ್ನಷ್ಟು ವಿಷಮಿಸಿ ವಿಶ್ವವಿದ್ಯಾನಿಲಯದ ವಿದ್ಯೆಯ ಆವರಣ ಒಂದು ಉಬ್ಬಸ ತರುವ ಪ್ರಪಂಚವಾಗಿರುವುದು ಹೊರಗಿನವರಿಗೂ ಒಳಗಿನವರಿಗೂ ಎಲ್ಲರಿಗೂ ತಿಳಿದ ಸಂಗತಿ. ಅದಿಲ್ಲವೆನ್ನುವವರು ಸಾಹಸಿಗಳು.

ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಜೀವನದ ಎಲ್ಲ ರಂಗಗಳಲ್ಲಿಯೂ ಸುಧಾರಣೆ, ಸಂಸ್ಕರಣಗಳ ಬಯಕೆ ಉಂಟಾಯಿತು. ಈಚೆಗೆ ವಿಶ್ವವಿದ್ಯಾನಿಲಯದ ದತ್ತಿಯ ಆಯೋಗ – 'U.G.C.' – ಸ್ಥಾಪಿತವಾಯಿತು. ಪ್ರವೇಶ, ಪರೀಕ್ಷೆ, ವಿದ್ಯೆಯ ವಿನ್ಯಾಸ, ಅವಧಿಗಳು, ಶಿಕ್ಷಣ, ಪ್ರಾಧ್ಯಾಪಕರ ಆಯ್ಕೆ, ಬಡ್ತಿ, ಅವರ ಸಂಬಳ ಸಾರಿಗೆ ಇವುಗಳ ಪರವಾಗಿ ನಡಸಬೇಕಾದ ನಿಯಮಗಳನ್ನು ಭಾರತದಲ್ಲಿ ಸಾರ್ವತ್ರಿಕವಾಗಿ ಬಳಕೆಗೆ ತರಬೇಕೆಂಬ ಪ್ರಯತ್ನವಿದೆ. ಅದರಿಂದ ವಿಶ್ವವಿದ್ಯಾನಿಲಯದ ವಿದ್ಯಾರ್ಜನೆಯ ಆವರಣ ಉತ್ತಮಪಡಬಲ್ಲದು, ಎರಡು ಬಗೆಯ ಪ್ರಭಾವಗಳು ಬಲಿಯದಿದ್ದರೆ.

**ಒಂದು:** ಎಲ್ಲ ವಿಶ್ವವಿದ್ಯಾನಿಲಯಗಳನ್ನು ಸುಮಾರು ಒಂದೇ ತೆರನಾಗಿ ಪರೀಕ್ಷೆ ಕಾರ್ಖಾನೆಗಳಾಗಿ ಮಾಡಿ, ಡಿಗ್ರಿ ಪರೀಕ್ಷೆಗಳಿಗೆ ವಿದ್ಯಾರ್ಥಿಗಳನ್ನು ತಯಾರು ಮಾಡುವ ಕಾಲೆಜುಗಳನ್ನೆಲ್ಲ ಗುಣಹೀನವನ್ನಾಗಿ ಮಾಡಿ ಅಲ್ಲಿನ ವ್ಯಾಸಂಗಮಟ್ಟಗಳನ್ನು ಇಳಿಸದಿದ್ದರೆ. ಹಾಗೆಯೇ ಅವನ್ನು ಆಯಾ ರಾಜ್ಯ ಸರ್ಕಾರಗಳ ವಿದ್ಯಾ ಇಲಾಖೆಗಳಿಗೆ ಒಪ್ಪಿಸತಕ್ಕದ್ದೆಂಬ ಕಡ್ಡಾಯ ಸರ್ವಥಾ ಕೂಡದಾಗಿತ್ತು. ಆದರೆ ನಿರ್ಣಯ ನಿಷ್ಫಲವಾಗಿ ಹಾಗಾಗಿರುವ ಹಾಗಿದೆ. ಸಂಶೋಧನೆಯ ಭಾಗ, ಡಿಗ್ರಿ ಉತ್ತರದ ಎಂ.ಎ., ಎಂ.ಎಸ್ಸಿ., ಮುಂತಾದ ವ್ಯಾಸಂಗದ ಭಾಗ ವಿಶ್ವವಿದ್ಯಾನಿಲಯದ ಏಕಮಾತ್ರ ಆಡಳಿತಕ್ಕೆ ಒಪ್ಪಿಸುವುದೇನೊ ಸರಿಯೇ. ಆದರೂ ಇಲ್ಲಿಂದ ಅಲ್ಲಿಗೆ ಹೋಗುವ ವಿದ್ಯಾರ್ಥಿಗಳು ಸರ್ವಥಾ ಯೋಗ್ಯರಾದವರೇ ಆಗುತ್ತಾರೆಂಬ ನಂಬಿಕೆಯಿಲ್ಲ. ಅಧ್ಯಾಪಕರಲ್ಲಿ ಇಲ್ಲಿಗೆ ಅಲ್ಲಿಗೆ ಆಯುವಾಗಲೆ ಕೈವಾಡಗಳೂ ರಾಜಕೀಯಗಳೂ ಅತೀವವಾಗಿ ನಡೆವುವು. ಬಹುಜಾಣತನದಿಂದ ತುಂಬ ಯೋಗ್ಯರಾದವರು ಡಿಗ್ರಿ ಕಾಲೆಜುಗಳಲ್ಲಿಯೇ ಉಳಿಯುವರು, ಕೊಳೆಯುವರು. ಮಧ್ಯಮರು, ಇತರರು ಲೌಕಿಕ ಪ್ರಭಾವಗಳಿಂದಾಗಿ ಯೂನಿವರ್ಸಿಟಿ ವಲಯಗಳಲ್ಲಿ ಪ್ರಬಲಿಸುವರು, ವಿಜೃಂಭಿಸುವರು. ಇದು ಆಗದಿರಬೇಕು. ಗ್ರಾಂಟ್ಸ್ ಕಮಿಷನ್‌ನ ಇಷ್ಟದಂತೆ, ನಿಯಮದಂತೆ ಆಯುವುದಕ್ಕೆ ಮಂಡಲಿಗಳನ್ನು ನಿಯಮಿಸುತ್ತಾರಲ್ಲವೆ ಎಂದೀರಿ. ರಾಜ್ಯಗಳ ಚುನಾವಣೆಗಳನ್ನು ತಲೆಕೆಳಗು ಮಾಡಬಲ್ಲ ಜನ ಈ ಸಣ್ಣ ಆಯ್ಕೆಗಳನ್ನು ತಮ್ಮ ಇಷ್ಟಗಳಿಗೆ



ತೀರಿಸಿಕೊಳ್ಳಲಾರರೆಂದರೆ ಅವರ ಚಳಕವನ್ನು ಮೊದ್ದುತನವೆಂದೇ ಹೇಳಬಹುದು. ರೆಜಿಸ್ಟ್ರಾರ್, ಉಪಸ್ಥಾನಪತಿ ಅಂಥ ಜನವೇ ಕೋಮುವಾರು ಒಲವಿಗೆ, ರಾಜಕೀಯಕ್ಕೆ ಒಳಪಟ್ಟು ಲೌಕಿಕರಿಗೆ ಅನುಕೂಲವಾಗಿ ಒಗ್ಗುವ ಪರೀಕ್ಷಕ ಮಂಡಲಿಗಳನ್ನು ಏರ್ಪಡಿಸಿಕೊಳ್ಳಲಾರರೆ? 'ನಮ್ಮವರಿಗೆ ನೀವು ಡಾಕ್ಟರೇಟ್ ಕೊಟ್ಟರೆ, ನಿಮ್ಮ ಇಷ್ಟದವರಿಗೆ ನಾವು ಕೊಡುತ್ತೇವೆ'. ಇಂಗ್ಲಿಷಿನಲ್ಲಿ ಒಂದು ನಾಣ್ಣುಡಿ ಇದೆ. 'ನಮ್ಮ ಬೆನ್ನು ನೀವು ಕೆರೆದರೆ ನಿಮ್ಮದನ್ನು ನಾವು ಕೆರೆಯುತ್ತೇವೆ' ಎಂದಂತೆ ಅದು. 'ನಾವು ನಿಮ್ಮನ್ನು ನಮ್ಮ ಪರೀಕ್ಷಕ ಮಂಡಲಿಗಳಿಗೆ ಪರೀಕ್ಷಕರಾಗಿ ಕೋರುತ್ತಿರುವಾಗ ನೀವು ದೆಹಲಿ, ಬೊಂಬಾಯಿ, ಲಕ್ನೊ, ಕಲ್ಕತ್ತ, ಮದರಾಸುಗಳಿಗೆ ನಮ್ಮನ್ನು ಕೋರುವುದು ನ್ಯಾಯವಲ್ಲವೇ' ಎಂಬುದು ನಡಾವಳಿ! ಹೀಗೆ ಒಂದು ವ್ಯಾಪಕವಾದ ಪರೀಕ್ಷಕ ಸರಪಣಿ ಕೊಂಡಿಗಳ ಪ್ರಪಂಚ ಬಹುಕಾಲದಿಂದ ವಿಶ್ವವಿದ್ಯಾನಿಲಯಗಳಲ್ಲಿ ಪ್ರಬಲಿಸಿದೆ.

ವಿಶ್ವವಿದ್ಯಾನಿಲಯವನ್ನೂ ಅದರ ಅಧಿಕಾರಿಗಳನ್ನೂ ರಾಜ್ಯ ಸರಕಾರಕ್ಕೆ ಬಾಗ ಬೇಕಾಗಿಲ್ಲವೆಂದು ಬಾಯಿ ಮಾತಿನಲ್ಲಿ ಹೇಳಿದರೂ ಮುಖ್ಯಮಂತ್ರಿಗಳ, ಮಂತ್ರಿ ಸಂಪುಟಗಳ ಇಷ್ಟಕ್ಕೆ ಅದು ತೂಗುವಂತೆ ಇವರನ್ನು ಎಲ್ಲ ಪ್ರಕಾರದಲ್ಲಿ ಒಳಗಿಂದಲೇ ಹಿಸುಕುವ, ಮಣಿಯುವಂತೆ ಮಾಡುವ ರೀತಿನೀತಿ ಎಲ್ಲಿನಂತೆ ಇಲ್ಲಿಯೂ ಘಾತಕ ವಾಗುವುದು. ಎಲ್ಲಿಯವರೆಗೆ ರಾಜಕೀಯದ ಪ್ರಭಾವ ವಿದ್ಯೆಯನ್ನೂ ವಿಶ್ವವಿದ್ಯಾನಿಲಯದ ಜೀವನವನ್ನೂ ಕದಡು ಮಾಡುತ್ತದೆಯೋ ಅಲ್ಲಿಯವರೆಗೂ ವಿದ್ಯೆಯಲ್ಲಿನ ವಿರಸ, ವಿಷಮತೆ ಹೋಗುವುದಿಲ್ಲ. ಎಂಥ ರಾಜ್ಯದಲ್ಲಿಯೇ ಆಗಲಿ ವಿದ್ಯಾಸ್ಥಾನ, ನ್ಯಾಯಸ್ಥಾನ, ರೋಗ ಚಿಕಿತ್ಸೆ ನಡಸುವ ಆಸ್ಪತ್ರೆಗಳು ರಾಜಕೀಯ ಪ್ರಭಾವದಿಂದ ಕಲುಷಿತವಾಗದೆ ಚೊಕ್ಕವಾಗಿರಬೇಕು. ಅವನ್ನು ಚೊಕ್ಕವಾಗಿಡದಿದ್ದರೆ ಬಾಳು ಅಶುಚಿಯಾಗುವುದು. ವಿದ್ಯೆ ಕಲುಷಿತವಾಗುವುದು. ಒಳ ಹೊರ ರೋಗ ರುಜಿನ ಬಲಿತು ಸಮಾಜಕ್ಕೆ ಗಾಸಿಯಾಗುತ್ತದೆ. ಅದರ ಸತ್ವ, ಸತ್ಫಲ ಪ್ರಪಂಚ ಹದಗೆಡುವುದು. ಅದು ರಾಷ್ಟ್ರಕ್ಕೆ ಕೇಡು ತರುವ ದಾರಿ.

**ಎರಡು** : ಎಷ್ಟೆಷ್ಟು ಬಗೆಯ ವಿದ್ಯಾಸಂಪ್ರದಾಯ ವಿಶಿಷ್ಟವಾಗಿ ಬೆಳೆಯುವ ಹಾಗಿದ್ದರೆ ಅಷ್ಟನ್ನೂ ಆ ಆ ರೀತಿಯಲ್ಲಿ ಬೆಳಸುವುದಕ್ಕೆ ತಕ್ಕಂತೆ ವಿಶ್ವವಿದ್ಯಾನಿಲಯದ ವ್ಯವಸ್ಥೆಯೂ ಆವರಣವೂ ಅನುಕೂಲವೂ ಕಲ್ಪಿತವಾಗಬೇಕು.* ಒಂದೊಂದು ಬಗೆಯ ವಿಶೇಷ ವ್ಯಾಸಂಗಕ್ಕೆ, ಸಂಶೋಧನೆಗೆ ಏರ್ಪಟ್ಟ ಮಹಾಸಂಸ್ಥೆ, ಉಪಸಂಸ್ಥೆಗಳನ್ನು

* ಈಗ ನಡೆಯುತ್ತಿರುವ ಸುಧಾರಣೆ ಪುನಃ ನಮ್ಮನ್ನು 1917ರಲ್ಲಿ ಕಲ್ಪಿಸಬೇಕೆಂದಿದ್ದ ಪದ್ಧತಿಗೆ ಸುಮಾರು ತರುತ್ತಿದೆ. ವ್ಯತ್ಯಾಸ ಮಾತ್ರ ಹೊಡೆದು ಕಾಣುತ್ತದೆ. ಕಾಂತರಾಜ ಪ್ರಾಸಾದದಲ್ಲಿ ವಿಶ್ವವಿದ್ಯಾನಿಲಯ ಬೀಡು ಮಾನಸಗಂಗೋತ್ರಿಯಾಗಿದೆ. ಕಲೆ, ವಿಜ್ಞಾನ ಶಾಖೆಗಳೆರಡೂ ಅಲ್ಲಿಯೇ ರಚಿತವಾಗುವುವು. ಆದರೆ ಬೋಧನಾಪ್ರಧಾನವಾಗಬೇಕೆಂದಿದ್ದ ತತ್ವ ಮಾತ್ರ ಮಾಯವಾಗಿದೆ. ನಮ್ಮ ವಿದ್ಯಾಪದ್ಧತಿಯ ಭಾಗ್ಯ ಚಕ್ರಾರ ಪಂಕ್ತಿಯೆ ಒಂದು ಪೂರ್ತಿ ಉರುಳು ಉರುಳಿ ಆರಂಭದ ಗತಿಗೆ ಮುಟ್ಟಿದೆ.

ಒಂದೊಂದು ವಿಶೇಷ ಬಗೆಯ ವಿಶ್ವವಿದ್ಯಾನಿಲಯವಾಗಿ ನಡಸಬೇಕು. ವಿಶ್ವಭಾರತಿ, ಟಾಟಾ ಇನ್‌ಸ್ಟಿಟ್ಯೂಟ್ ಮುಂತಾದವುಗಳನ್ನು ಒಪ್ಪಿರುವ ಸರ್ಕಾರಕ್ಕೆ ಇದು ಅಶಕ್ಯವಾಗ ಬಾರದು. ಎಲ್ಲಕ್ಕೂ ಏಕರೂಪ, ಏಕವಿಧಾಯಕತೆ ಎಲ್ಲವನ್ನೂ ಮದಡು ಮಾಡುತ್ತದೆ. ಮರಳು ಕಲ್ಲು ಹಾಕಿ ಉರುಳು ಗುಂಡಾಡಿಸಿ ಗಟ್ಟಿಮಾಡಿದ, ಸಮಮಾಡಿದ ನೆಲ ನೋಡುವುದಕ್ಕೆ ಸಮವಾಗಿ, ಚೊಕ್ಕವಾಗಿಯೇನೊ ಇರುತ್ತದೆ. ಅಲ್ಲಿ ಯಾವ ಜೀವವೂ ಸಸ್ಯವೂ ಬೆಳೆಯಲಾರದು. ವಿದ್ಯಾಪ್ರಪಂಚ ಜೀವ ಚಿಗಿವ, ಹೂ ಬಿಡುವ, ಹಣ್ಣು ಬಿಡುವ ಪ್ರಪಂಚ.

ಇಂದು ತಜ್ಞರೂ ತಂತ್ರಜ್ಞರೂ ಹತ್ತಾರು ಸಾವಿರ ಜನ ಬೇಕಾಗಿದ್ದಾರೆ. ಅವರ ರೆಜಿಸ್ಟರನ್ನು ಬರೆದಿಡಲು ಪ್ರಧಾನಿಯವರನ್ನು ಕೇಳುತ್ತಲೇ ಇದ್ದಾರೆ. ನಿಷ್ಣಾತರಾಗಬಲ್ಲ ಸಾವಿರಾರು ಮಂದಿ ವಿದ್ಯಾರ್ಥಿಗಳಿಗೆ ರಾಜಕೀಯ, ಜಾತೀಯ ಕಾರಣಗಳಿಂದಾಗಿ ಅಭ್ಯಾಸಕ್ಕೆ ಪ್ರವೇಶ ಸಿಕ್ಕದು. ಯೋಗ್ಯತೆ ಪಡೆದವರಿಗೆಲ್ಲ ವಿದ್ಯಾರ್ಜನೆ ಮಾಡುವ ಅವಕಾಶ ದೊರೆವಂತೆ ಕೇಂದ್ರ ಸರಕಾರವೇ ನಾಲ್ಕಾರು ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಿ, ಈ ಕಾರ್ಪಣ್ಯಗಳು ತಪ್ಪಿ ಶಿಕ್ಷಣದ ಅವಕಾಶವನ್ನು ಕಲ್ಪಿಸಬೇಕು. ಉನ್ನತ ವ್ಯಾಸಂಗ ಯೋಗ್ಯತೆ ಪಡೆದವರು ಉನ್ನತ ವ್ಯಾಸಂಗ ಬೇಕೆಂದು ಬೇಡಿದರೆ, ಅವರಿಗೆ ಧಾರಾಳವಾಗಿ ಪ್ರವೇಶ ದೊರೆಯಬೇಕು. ಯಂತ್ರ ವಿದ್ಯೆ, ನಾನಾ ಬಗೆಯ ಶಿಲ್ಪಗಳು, ರೇವು ಬಂದರುಗಳ–ವಾರ್ತಾ ಸಾರಿಗೆಗಳ ಶಾಸ್ತ್ರ, ವೈದ್ಯ – ಶಸ್ತ್ರ ಚಿಕಿತ್ಸೆಗಳ ವಿಶೇಷ, ಶುದ್ಧ ಶಾಸ್ತ್ರಾನುಸಂಧಾನ – ಇವುಗಳಿಗೆ ಎಷ್ಟು ಹೆಚ್ಚು ಸೌಕರ್ಯಗಳನ್ನು ಕಲ್ಪಿಸಿದರೂ ಕಡಮೆಯೇ. ಜೊತೆಗೆ ಭರತ ಖಂಡದ ರಾಯಭಾರ ವರ್ಗ, ಕಾನ್ಸುಲೇಟ್, ಹೈ ಕಮೀಷನ್ ಮುಂತಾದವಕ್ಕೆ ನೂರಾರು ಜನಗಳ ತರಬೇತಿ ನಡೆಯಬೇಕಾಗಿದೆ. ಮುಖ್ಯವಾದ ವಿದೇಶಿ ಭಾಷೆಗಳ, ಜನತೆಯ ಇತಿಹಾಸ, ಸಂಸ್ಕೃತಿಗಳ ಪರಿಚಯ ದೊರೆಯುವಂತೆ, ಅಂತಾರಾಷ್ಟ್ರೀಯ ಕಾನೂನು ಪರಿಚಿತವಾಗುವಂತೆ ಅವುಗಳಿಗೆ ಶಿಕ್ಷಣ ಕೊಡುವ ಸಂಸ್ಥೆಗಳು ವಿಶ್ವವಿದ್ಯಾನಿಲಯಗಳಲ್ಲಿ – ಶಕ್ಯವಾದರೆ, ಕೇಂದ್ರ ವಿಶ್ವವಿದ್ಯಾನಿಲಯಗಳ ಆಶ್ರಯದಲ್ಲಿ – ರಚಿತವಾಗಬೇಕು. ಇಂಥವು ಲಕ್ಷಾಂತರ ಕೆಲಸ ಕಾದಿವೆ. ಲಕ್ಷಾಂತರ ಜನ ಆತುರರಾಗಿ ಕಾತರರಾಗಿ ಇದ್ದಾರೆ. ಆಸೇತು ಹಿಮಾಚಲದ ವರೆಗಿನ ಭಾರತದ ಜೀವನದಲ್ಲಿ ಎಲ್ಲ ಶಕ್ತಿಗಳೂ ಎಲ್ಲ ರೀತಿಯಲ್ಲಿಯೂ ಬೆಳೆದು ದೇಶಹಿತ ಕಾರ್ಯಗಳಲ್ಲಿ ತೊಡಗುವುದಕ್ಕೂ ತಕ್ಕ ಯೋಗ್ಯತೆ, ತಿಳಿವಳಿಕೆ, ಮಾರ್ಗ ವಿಧಾನಗಳನ್ನು ಕಲಿಯುವುದಕ್ಕೂ ಅನಂತವಾದ ಅಗತ್ಯವಿದೆ. ಲಕ್ಷಕ್ಕೆ, ಕೋಟಿಗೆ ಅಗತ್ಯ ತೆರೆದಿರುವಾಗ ಯಾವುದೇ ಕಾರಣಗಳಿಂದಾಗಲಿ ನೂರಕ್ಕೆ, ಸಾವಿರಕ್ಕೆ ಅವನ್ನು ಏಕೆ ಮಿತಿಗೊಳಿಸಬೇಕು? ಮಿತಿಗೊಳಿಸುವ ಉದ್ಯಮ ರಾಜ್ಯಕ್ಕೆ ಅಹಿತವಾದ ಕಾರ್ಯ. ಅದು ಬುದ್ಧಿ ಯೋಗ್ಯತೆಗಳ ಕೊಲೆ ಮಾಡಿದಂತೆ.

6-6-1960

❑

# 16. ಇತ್ತೀಚಿನ ಐತಿಹಾಸಿಕ ಪ್ರಸಂಗಗಳು

ಹನ್ನೆರಡು ವರ್ಷಗಳ ಕಾಲ ಅಧ್ಯಕ್ಷರಾಗಿದ್ದ ಭಾರತರತ್ನ ಡಾ॥ ರಾಜೇಂದ್ರ ಪ್ರಸಾದರು ರಾಜ್ಯತಂತ್ರದ ಪರಮ ಪ್ರಜ್ಞೆಯನ್ನುಳ್ಳವರಾಗಿ ಪ್ರಜಾಧಿಪತ್ಯದ ಸಮಯಗಳನ್ನು ತುಂಬಾ ವಿಚಕ್ಷಣೆಯಿಂದ ನಡಸಿಕೊಟ್ಟರು. ಅವರ ಲೋಕಜ್ಞಾನ, ದೇಶ ಸೇವೆ, ರಾಜ್ಯಾಂಗ ರಚನಾ ಸಭೆಯಲ್ಲಿ ಪಡೆದ ಅನುಭವ ದೊಡ್ಡವು. ಮೊದಲ ಭಾರತೀಯ ರಾಷ್ಟ್ರಾಧ್ಯಕ್ಷರಾಗಿ ಅವರು ಉತ್ತಮ ಆದರ್ಶಗಳನ್ನು ಎತ್ತಿ ಹಿಡಿದರು; ಸತ್ಸಂಪ್ರದಾಯಗಳನ್ನು ಸ್ಥಾಪಿಸಿದರು. ಸ್ವತಃ ಶಾಂತರು, ಲೋಕಶಾಂತಿ ಪ್ರಿಯರು. ಒಂದೆರಡು ಸಂದರ್ಭಗಳಲ್ಲಿ ಉದಾ: ರಾಷ್ಟ್ರಾಧ್ಯಕ್ಷರ ಅಧಿಕಾರವ್ಯಾಪ್ತಿ ವಿಷಯವಾಗಿ ಎಲ್ಲಿ ಸರ್ಕಾರಕ್ಕೂ ಅವರಿಗೂ ಮನಸ್ತಾಪ ಬೆಳೆದೀತೊ ಎಂಬ ಭೀತಿಯಿದ್ದರೂ, ಹಿಂದಿಭಾಷೆಯ ಸಂಬಂಧದಲ್ಲಿಯಾಗಲಿ, ನಿಚ್ಚಳ ಭಾರತೀಯತೆಯ ಸಾಧನೆಯಲ್ಲಿಯಾಗಲಿ ಅವರ ಮನಸ್ಸು ಖಚಿತವಾದು ದಾದರೂ, ಯಾವ ಆಧುನಿಕ ಮಾರ್ಗವನ್ನು ಹಿಡಿದು ಭಾರತ ಇಂದು ಮುಂದು ವರೆಯಲು ಬಯಸಿದೆಯೊ ಆ ಬಗೆಗೆ ಉದಾರ ನೀತಿಯಿಂದ ಪ್ರೋತ್ಸಾಹ ಕೊಟ್ಟಿದ್ದಾರೆ.

ಸಕಲ ಪಕ್ಷಗಳ ಮೇಲೆ ನಿಂತು, ಸಮಸ್ತ ಪಕ್ಷಗಳವರಿಗೂ ಸಲ್ಲಬೇಕಾದ ಮರ್ಯಾದೆಯನ್ನು ನಡಸಿಕೊಟ್ಟು, ಎಲ್ಲ ವರ್ಗಗಳಿಂದಲೂ ಗೌರವವನ್ನೂ ಪ್ರೀತಿಯನ್ನೂ ಸಂಪಾದಿಸಿದರು. ದೇಹದ ಆರೋಗ್ಯ ಅಷ್ಟಕ್ಕಷ್ಟೇ ಆಗಿದ್ದಾಗಲೂ ಎಂದಿಗೇ ಆಗಲಿ ಆ ಕಾರಣದಿಂದ ತಮ್ಮ ಹೊಣೆಯ ನಿರ್ವಹಣೆಯಲ್ಲಿ ಉದಾಸೀನರಾದುದಿಲ್ಲ. ಅಂಥವರ ಅಧಿಕಾರಾವಧಿ ಸಹಜವಾಗಿ ಸರ್ವಜನ ಪ್ರೀತಿಯೊಡನೆ ಮುಗಿಯುತ್ತಿದೆ.

ಸುತ್ತಣ ದೇಶಗಳಲ್ಲಿ ಕ್ರಾಂತಿಗಳು ನಡೆದು, ಸೈನ್ಯಾಧಿಕಾರಿಗಳು ತಮ್ಮ ಕೈಗೆ ಬಲಾತ್ಕಾರದಿಂದ ರಾಜ್ಯಸೂತ್ರಗಳನ್ನು ಕೈಕೊಂಡ ಕಾಲದಲ್ಲಿ, ಪ್ರಜಾಧಿಪತ್ಯಕ್ಕೆ ತಿಲಾಂಜಲಿ ಕೊಟ್ಟು ನಡೆದುಕೊಂಡಿರುವ ಸಂದರ್ಭದಲ್ಲಿ, ಭಾರತದ ಸ್ವಾತಂತ್ರ್ಯೋತ್ತರ ಕಾಲದಲ್ಲಿ ಸುಸೂತ್ರವಾದ ರಾಜ್ಯಕಾರ್ಯ ನಡೆದಿದೆ. ಚುನಾವಣೆಗಳು ಏರ್ಪಟ್ಟು, ಅಧ್ಯಕ್ಷರನ್ನು ಪ್ರೀತಿ ಗೌರವಗಳಿಂದ ಬೀಳ್ಕೊಡುವ ಸದವಕಾಶ ದೊರೆತದ್ದು ಒಂದು ದೊಡ್ಡ ಘಟನೆಯೇ ಸರಿ. ಏನೇ ಕಷ್ಟ ನಷ್ಟ ಅನುಭವಿಸಿದರೂ ಶಾಂತವಾಗಿ ಸುಮನಸದಿಂದ ನಮ್ಮ ಸಮಸ್ಯೆಗಳು ಬಗೆಹರಿದು ನಮ್ಮ ರಾಜ್ಯಾಂಗಶಾಸನಕ್ಕೂ, ನಾವು ಒಲಿದು ರಚಿಸಿಕೊಂಡಿರುವ ಶಾಸನ

ಪದ್ಧತಿ, ಆಡಳಿತ ಕ್ರಮಗಳಿಗೂ ಧಕ್ಕೆ ಬಾರದಂತೆ ಕ್ರಮರೀತ್ಯ ಇಲ್ಲಿನ ಅಧಿಕಾರಾಂತ್ಯಗಳೂ ವರ್ಗಾವಣೆಗಳೂ ನಡೆಯುತ್ತಿರಲಿ; ದಿನದಿನಕ್ಕೆ ಈ ಸಂಬಂಧದಲ್ಲಿ ದೊಡ್ಡ ನಡತೆಗಳೂ ಮರ್ಯಾದೆಗಳೂ ಏರ್ಪಟ್ಟು ಜನದ ಮನಸ್ಸು, ರೀತಿ, ಕ್ರಿಯೆಗಳು ರಚನಾತ್ಮಕವಾಗಿ ರೂಪಿತಗೊಳ್ಳಲಿ ಎಂದು ಆಶಿಸಬಹುದು.

ಹೊಸ ರಾಷ್ಟ್ರಾಧ್ಯಕ್ಷರಾಗಿ ಚುನಾವಣೆಗೊಂಡ ಡಾ॥ ಎಸ್. ರಾಧಾಕೃಷ್ಣನ್ ತುಂಬಾ ಮೇಧಾವಿಗಳು. ಬುದ್ಧಿಯ ಸರಸ ವಿಲಾಸ, ಮಾನವತೆ ಉಳ್ಳವರು. ಲೋಕದ ಅನೇಕ ರಾಷ್ಟ್ರಗಳ, ಸಂಸ್ಕೃತಿ ಸಂಪ್ರದಾಯಗಳ ಬಗ್ಗೆ ಅರಿವುಳ್ಳವರು. ನಿಶಿತವಾದ ಪಾಂಡಿತ್ಯದ ಜೊತೆಗೆ ಧರ್ಮದ ಪ್ರಭಾವ ಮಾತ್ರವೇ ಮಾನವನ ಮಾನವನ್ನೂ ಸ್ಥಿತಿಯನ್ನೂ ಉಳಿಸೀತು, ಬೆಳಸೀತು ಎಂಬ ನಂಬಿಕೆಯುಳ್ಳವರು. ಸಂಪತ್ತಲ್ಲ, ಶಕ್ತಿಯಲ್ಲ, ಬುದ್ಧಿವಂತಿಕೆಯಲ್ಲ ಮುಖ್ಯ; ಧರ್ಮ, ಆಧ್ಯಾತ್ಮಿಕತೆ ಅಗತ್ಯ ಎನ್ನುವವರು. ಒಂದು ಕುಟುಂಬದಂತೆ ರಾಜ್ಯಸಭೆಯನ್ನು ನಡಸಿಕೊಂಡರೆಂದು ಅಲ್ಲಿ ಮಾತನಾಡಿದವರು ಅವರಿಗೆ ಎದೆಗಾಣಿಕೆ ಕೊಟ್ಟರು. ಅಧ್ಯಕ್ಷ ಪೀಠದಿಂದಲೂ ಅವರು ಹಾಗೆಯೇ ನಡೆದು ಕೊಳ್ಳುವವರು. 'ದುಃಖೇಷು ಅನುದ್ವಿಗ್ನ ಮನಾಃ ಸುಖೇಷು ವಿಗತಸ್ಪೃಹಃ ವೀತರಾಗ ಭಯಕ್ರೋಧಃ, ಎಂದು ಮುಂತಾದ ಗುಣಗಳನ್ನು ನಮ್ಮ ಹಿರಿಯರು ನಮ್ಮ ನಾಡಿನ ಇದಿರಿಗೆ ಇಟ್ಟಿದ್ದಾರೆ. ಭಯ ಕ್ರೋಧಗಳಿಲ್ಲದೆ, ಉದ್ವೇಗಗಳಿಲ್ಲದೆ ನಾಡಿನ ಹಿತದೊಡನೆ ಮಾನವ ಕಲ್ಯಾಣಕ್ಕಾಗಿ ದುಡಿಯಬಲ್ಲ ಶಕ್ತಿ ಅವರದು. ಶುಚಿ, ಶೀಲ, ಪ್ರೀತಿ ವಾತ್ಸಲ್ಯಗಳು ಅವರ ಸ್ವಭಾವ ಲಕ್ಷಣ. ವಿದ್ಯಾರ್ಥಿಗಳೊಡನೆ ಅವರು ನಡೆದುಕೊಳ್ಳುತ್ತಿದ್ದ ರೀತಿಯೇ ಇಂದಿಗೂ ಅವರಲ್ಲಿ ಮುಂದುವರಿದಿದೆ. ಅವರು ಒಂದು ಸಲ ಹೇಳಿದ್ದರು: "The students are every where a generous lot" 'ವಿದ್ಯಾರ್ಥಿವರ್ಗ ಎಲ್ಲಿಯೂ ಉದಾರ ಮನಸ್ಸಿನವರದು' ಎಂದು. ಆ ಔದಾರ್ಯವನ್ನು ಅವರೂ ದಾನಮಾಡಿದರು. ಅದೇ ಔದಾರ್ಯ, ಮಾನವೀಯ ಮೌಲ್ಯಗಳು, ದೇಶಪ್ರೀತಿ, ಧರ್ಮಶ್ರದ್ಧೆ ಅವರ ಅಧ್ಯಕ್ಷ ಸ್ಥಾನದಿಂದಲೂ ದೇಶವನ್ನು ನಡಸಲಿ. ನೆಹರೂ ಅವರೂ ರಾಧಾಕೃಷ್ಣನ್ ಅವರೂ ಒಂದು ಉಸಿರಿನ ಜೀವದಂತೆ ನುಡಿದು ನಡೆದು ಇರುವುದುಂಟು. ಇವರ ಕಾಲದಲ್ಲಿ ಭಾರತಕ್ಕೆ ಅತ್ಯಗತ್ಯವಾದ ಶಾಂತಿ ಸುಭಿಕ್ಷ ಐಕ್ಯತೆ ಸಾಧಿತವಾಗಲಿ.

ಉಪರಾಷ್ಟ್ರಪತಿ ಸ್ಥಾನಕ್ಕೆ ಇನ್ನೊಬ್ಬ ವಿದ್ಯಾಭಿಮಾನಿಗಳು ಆಯ್ಕೆಯಾಗಿರುವುದೂ ಸಂತೋಷ. ಜಕೀರ್ ಹುಸೇನರು ಅನ್ಸಾರಿ, ಅಜಮಲ್ ಖಾನ್, ಅಬುಲ್ ಕಲಾಂ ಅಜಾದ್ ಮುಂತಾದವರಂತೆ ನಾಡಿನ ಸ್ವಾತಂತ್ರ್ಯಕ್ಕಾಗಿ ದುಡಿದವರು. ಅವರ ಭಾರತ ನಿಷ್ಠೆಯು ಅದ್ವಿತೀಯವಾದುದು. ಅಲಿಘರ್ ವಿಶ್ವವಿದ್ಯಾನಿಲಯವನ್ನು ಒಂದು ಉತ್ತಮ ಮಟ್ಟಕ್ಕೆ ತಂದರು. ಗಾಂಧೀಜಿಯವರ ವಿದ್ಯಾ ಪ್ರಚಾರ ಕಾರ್ಯಗಳಲ್ಲಿ ನೆರವಾದರು. ಎಷ್ಟೋ ವಿಶ್ವವಿದ್ಯಾನಿಲಯ ಶಿಕ್ಷಣ ಪದ್ಧತಿಗಳನ್ನು ವ್ಯಾಸಂಗಮಾಡಿ, ಸಲಹಾ ಮಂಡಲಿಗಳಲ್ಲಿ ಶ್ರಮಿಸಿ ನಮ್ಮ ಹುಡುಗರ ಬುದ್ಧಿ ಮನಸ್ಸು ಹೇಗೆ ಮಾಡಿದರೆ



ಕುದುರಿ ಫಲಕಾರಿಯಾದಾವೆಂದು ನಿರಂತರವಾಗಿ ಯೋಚಿಸುತ್ತಿದ್ದವರು. ಬಿಹಾರದ ರಾಜ್ಯಪಾಲರಾಗಿ ಆ ರಾಜ್ಯದ ಹಿತವನ್ನು ಸಾಧಿಸಿದವರು. ಭಾರತದಲ್ಲಿ ಹಿಂದು, ಮುಸ್ಲಿಂ, ಕ್ರೈಸ್ತ, ಪಾರ್ಸಿ ಎಂಬ ಭೇದಗಳಿಲ್ಲದೆ ಯಾವ ಮತಧರ್ಮಗಳವರಾದರೂ ನಾಡಿನ ಅತಿ ಹಿರಿಯ ಸ್ಥಾನಗಳಿಗೆ ಬರಲುಳ್ಳವರು ಎಂಬ ಅಮಿತ ಧಾರಾಳಕ್ಕೆ ಇದು ಒಂದು ನಿದರ್ಶನ. ಇಂಗ್ಲಂಡಿನಲ್ಲಿ ಇಂದಿಗೂ ಒಂದು ಮನೆತನದವರು ರಾಜರಾಣಿಯ ರಾಗುವ ಹಾಗಿಲ್ಲ, ಪಾಕಿಸ್ತಾನದಲ್ಲಿ ಮುಸ್ಲಿಂರನ್ನು ಬಿಟ್ಟು ಉಳಿದವರು ಅಧ್ಯಕ್ಷರಾಗುವ ಹಾಗಿಲ್ಲ ಎಂದಿರುವಾಗ, ಯೋಗ್ಯರಾದ ಹಿರಿಯರನ್ನು ಜಾತಿ ಮತಗಳನ್ನು ಎಣಿಸದೆ, ಕೇವಲ ರಾಜಕೀಯದಲ್ಲಿ ಖ್ಯಾತಿಗೊಂಡವರಿಗೇ ದೇಶದ ಅತ್ಯುನ್ನತ ಹುದ್ದೆಗಳನ್ನು ಮೀಸಲಿರಿಸದೆ, ರಾಜಕೀಯ ಪಕ್ಷದ ವಿಶೇಷ ಕ್ರಿಯಾಮಂಡಲಿಗಳಿಗೆ ಸೇರದ ವಿದ್ಯಾವಂತರೂ ಆ ಸ್ಥಾನಗಳಿಗೆ ಆಯ್ಕೆಯಾದರೆ ಅಂಥ ಸಂತೋಷ ಸಾಮಾನ್ಯವಲ್ಲ.

ತುಂಬಾ ಸಂತೋಷದ ಇನ್ನೊಂದು ಸಂಗತಿ ಈಚೆಗೆ ತಾರಾಸಿಂಗರ ಘೋಷಣೆ. ಪಾಕಿಸ್ತಾನ, ಚೀಣಗಳ ಕೀಟಲೆ, ಕೋಟಲೆಗಳಿಂದ ದೇಶದ ಭದ್ರತೆಗೆ ಪೆಟ್ಟು ಬೀಳ ಬಹುದಾದ ಸಮಯದಲ್ಲಿ ಏಕದೇಶವಾದ ಯಾವ ಭಕ್ತಿಯಾಗಲಿ ವಾದವಾಗಲಿ ಮುಂದಾಗಿ ದೇಶವನ್ನು ತಳಮಳಕ್ಕೆ ಈಡು ಮಾಡಬಾರದು. ಕರ್ಕಶಕಾಂಡಗಳು ಮುಗಿಯುವವರೆಗೂ ಇಲ್ಲಿ ಭಿನ್ನಭಾವ, ಅನೈಕ್ಯತೆಗಳನ್ನು ಹೆಚ್ಚಿಸುವ ಯಾವ ಚಳವಳಿಗಳನ್ನೂ ನಡಸತಕ್ಕದ್ದಲ್ಲವೆಂದು ತಾರಾಸಿಂಗರು ತಮ್ಮ ಪಂಜಾಬಿ ಸುಭಾ ಚಳವಳಿಯನ್ನು ನಿಲ್ಲಿಸಿದ್ದಾರೆ. ಈಗಾಗಲೆ ದೇಶದ ವಿಭಜನೆಯಿಂದ ಚಿಕ್ಕದಾಗಿದ್ದ ಪಂಜಾಬು ಇನ್ನಷ್ಟು ಚಿಕ್ಕದಾಗಬಹುದಾಗಿದ್ದ ಪ್ರಸಂಗ ಈ ಮೂಲಕ ಕೊನೆಗೊಳ್ಳುತ್ತದೆ. ಅಕಾಲಿ ಸಿಖ್, ಕುಲಿನ ಸಿಖ್, ಹಿಂದೂ ಮುಂತಾದ ಒಡಕುಗಳು ಯಾವುವೂ ಆ ರಾಜ್ಯದ ಅಖಂಡತೆಯನ್ನು ಮುರಿಯದಂತೆ ಕಾರ್ಯಜ್ಞರೂ ಶ್ರಮಜೀವಿಗಳೂ ಆದ ಪಂಜಾಬಿಗಳು ಶಕ್ತಿಯಿಂದ ಶಕ್ತಿಗೆ ಒಂದು ಮನಸ್ಸಿನಿಂದ ಮುಂದವರಿಯಲು ಶಕ್ಯವಾಗುತ್ತದೆ. ಪಾಕಿಸ್ತಾನದ ಪ್ರಬಲ ಗಡಿಪ್ರಾಂತವಾದ ಆ ರಾಜ್ಯದ ರಕ್ಷಣೆಯ ಶಕ್ತಿಯಾಗಿ ದೃಢ ಬಲವಾಗಿ ಪಂಜಾಬಿಗಳು ನಿಲ್ಲುವಂತಾಗುತ್ತದೆ. ಈ ನಿರ್ಣಯ ನಿಜವಾಗಿಯೂ ಸರ್ದಾರ್ ತಾರಾಸಿಂಗರಿಗೆ ಅದ್ಭುತ ಕೀರ್ತಿಯನ್ನು ತರುವಂಥದು. ಕೆಲವು ದಿನಗಳ ಹಿಂದೆ ಈ ನಡತೆ ದುರ್ನಿರೀಕ್ಷ್ಯವಾಗಿತ್ತು. ದೇವರು ದೊಡ್ಡವನು. ಆತನ ಕೃಪೆಯಲ್ಲಿ ತಿಳಿಯಾಗದ ಮನಸ್ಸಿಲ್ಲ, ನಯವಾಗದ ಸಂಸ್ಕಾರವಿಲ್ಲ, ಫಲಿಸಲಾರದ ಸೌಭಾಗ್ಯವಿಲ್ಲ. ಮುಂದಿನ ಅವರ ಆಯುರ್ಮಾನವನ್ನು ಪಂಜಾಬನ್ನು ಇನ್ನಷ್ಟು ಬಲವಾಗಿ ಕಟ್ಟುವ ಕೆಲಸಕ್ಕೆ ವಿನಿಯೋಗಿಸಿ ಆ ರಾಜ್ಯ ಭಾರತದ ಶಕ್ತಿಕೇಂದ್ರವನ್ನಾಗಿ ಮಾಡಲಿ. ಶಕ್ತರ ಶಕ್ತಿ ಸಾರ್ಥಕವಾಗಬೇಕಾದರೆ ಅಂಥುದೇ ಮಾರ್ಗ.

ಮಾಲ್ಡಾ, ಮುರ್ಷಿದಾಬಾದ್ ಮುಂತಾದ ಒಂದೆರಡು ಪಶ್ಚಿಮ ಬಂಗಾಳ ಜಿಲ್ಲೆಗಳಲ್ಲಿ ಹಿಂದೂ ಮುಸ್ಲಿಮರಿಗೆ ಘರ್ಷಣೆ ನಡೆಯಿತೆಂದು ವರದಿಯಾಯಿತು. ನಿಜವಾಗಿ ಹೆಣ್ಣಿಗಾಗಿ ಯಾರೊ ಮುಸ್ಲಿಮರಿಗೂ ಸಂತಾಲರೊಬ್ಬರಿಗೂ ಅಲ್ಪ ವಿರಸ

ಉಂಟಾಯಿತು. ಹೆಣ್ಣಿನ ಕಪಾಳಕ್ಕೆ ಹೊಡೆದದ್ದರಿಂದ ಸಂತಾಲ ಬಣಗಳವರು ರೊಚ್ಚಿಗೆದ್ದು ಗಲಭೆಗಳನ್ನೂ ಅತ್ಯಾಚಾರವನ್ನೂ ನಡಸಿದ್ದಾರೆ. ಬಹು ಜನ ಅಲ್ಲಿ ಅಲ್ಪಸಂಖ್ಯಾತರಾದ ಹಿಂದೂಗಳು ಪಶ್ಚಿಮ ಬಂಗಾಳಕ್ಕೆ ವಲಸೆ ಬಂದಿದ್ದಾರೆ. ಪುನಃ ಆ ಕಡೆಯ ಉಪ ಹೈ ಕಮಿಷನರಿಗೆ ಮಾಲ್ದಾಕ್ಕೆ ಭೇಟಿ ಕೊಡಲು ಅವಕಾಶ ಕೊಟ್ಟಿತ್ತು. ಅವಕಾಶವನ್ನು ದುರುಪಯೋಗ ಪಡಿಸಿಕೊಂಡು ಅಲ್ಲಿ ಉದ್ರೇಕಗಳು ಹೆಚ್ಚುವಂತೆ ಆಯಿತು. ಪಾಕಿಸ್ತಾನದ ಸರ್ಕಾರವೇ ಢಾಕಾ ರಾಜಷಾಹಿ ಜಿಲ್ಲೆಗಳಲ್ಲಿ ಸುರಕ್ಷಣೆಯನ್ನು ಸ್ಥಾಪಿಸಲು ಕಾರ್ಯಕ್ರಮ ಗಳನ್ನು ಕೈಗೊಳ್ಳುವಂತಾಯಿತು. ಸಾವನಾ, ಖುಲ್ನ, ರಂಗಪುರ, ಮೈಮೆನ್‌ಸಿಂಗ್ ಜಿಲ್ಲೆಗಳಲ್ಲಿ ಜನದ ಅತ್ಯಾಚಾರಗಳು ಹರಡಿದವು. ಹಿಂದೆ ಜಬ್ಬಲ್ಪುರ, ಅಲಿಘರ, ಕಾನ್ಪುರಗಳಲ್ಲಿಯೂ ಘರ್ಷಣೆಗಳು ನಡೆದಾಗ ಅಲ್ಲಿ ನಡೆದ ಅತ್ಯಾಚಾರಗಳನ್ನು ತೇಲಿಸಿ ನುಡಿದರು. ನಮ್ಮಲ್ಲಿರುವ 5-6 ಕೋಟಿ ಮುಸ್ಲಿಮರ ಹಿತರಕ್ಷಕರು ತಾವೆಂಬಂತೆ, ಒಳನಾಡು ಹೊರನಾಡುಗಳಲ್ಲಿ ಭಾರತದ ಮೇಲೆ ಅಪಪ್ರಚಾರ ಮಾಡಿದ್ದುಂಟು. ಇದರಿಂದ ಲಾಭವಿಲ್ಲ, ಕೀರ್ತಿಯಿಲ್ಲ; ಯಾರಿಗೂ ಸುಖವಿಲ್ಲ. ಬಹುಕಾಲದಿಂದ ಬಂದಿರುವ ವೈಮನಸ್ಯ ಹರಿಯುವಂತೆ ಸರ್ಕಾರಗಳೂ ಜನತೆಗಳೂ ನೀತಿ ನಿಯಮಗಳನ್ನು ಏರ್ಪಡಿಸಬೇಕು. ಅಲ್ಲಿ ಇಲ್ಲಿ ಅವಿವೇಕ ನಡೆದರೆ ನಿಷ್ಪಕ್ಷಪಾತದಿಂದ ತಪ್ಪಿತಸ್ಥರನ್ನು ಹಿಡಿದು ಶಿಕ್ಷೆಗೆ ಈಡುಮಾಡಿ ಅಂಥ ಪ್ರಸಂಗಗಳು ಮುಂದೆ ನಡೆಯದಂತೆ ಎಚ್ಚರದಿಂದಿರಬೇಕು. ಎರಡೂ ಕಡೆಯ ಜನನಾಯಕರು ತಮ್ಮ ಕೋಮಿನವರಿಗೆ ಬುದ್ಧಿಯನ್ನೂ ಸಮಾಧಾನವನ್ನೂ ಬೋಧಿಸಿ ಎಲ್ಲವೂ ಬೇಗ ತಹಬಂದಿಗೆ ಬರುವಂತೆ ನೋಡಿಕೊಳ್ಳಬೇಕು. ಅದು ಬಿಟ್ಟು ಇಲ್ಲಿನ ಅಲ್ಪ ಸಂಖ್ಯಾತರನ್ನು ಅವರು, ಅಲ್ಲಿನವರನ್ನು ನಾವು ರಕ್ಷಿಸುತ್ತೇವೆಂದು ಅತಿಚಾರ ಮಾಡುವುದು ಸುತರಾಂ ಒಳ್ಳೆಯದಲ್ಲ. ಒಂದು ಮಾತನ್ನು ವಿಶ್ವಾಸದಲ್ಲಿ ಹೇಳಬಹುದೇನೊ: ದುರ್ಮಾರ್ಗರು ಎಲ್ಲಿಯೇ ಆಗಲಿ ಹೆಣ್ಣು ಮಕ್ಕಳ ಮೇಲೆ ಕೈ ಹಾಕದಂತೆ ನೋಡಿಕೊಳ್ಳುವ ಹೊಣೆ ಒಂದು ಪಕ್ಷದ ಮೇಲೆ ವಿಶೇಷವಾಗಿ ಹೊತ್ತರೆ ಮೇಲು; ಅರ್ಥಕ್ಕಿಂತ ಹೆಚ್ಚಿನ ಆಕ್ರೋಶ, ಕ್ರೋಧಕಾರಣ ಆ ಮೂಲಕ ನಿವಾರಣೆ ಆಗುತ್ತದೆಯಾದ್ದರಿಂದ.

ನಾಗಾ ದಂಗೆಕೋರರ ನಾಯಕರಾದ ಫಿಜೋ ಅವರು ಪಾಕಿಸ್ತಾನದ ಮಾರ್ಗವಾಗಿ ಇಂಗ್ಲೆಂಡಿಗೆ ಹೋಗಿ ಅಲ್ಲಿ ಬ್ರಿಟಿಷ್ ಪ್ರಜಾತ್ವವನ್ನು ಪಡೆದರು. ಬಗೆ ಬಗೆಯಾಗಿ ಭಾರತದ ಮೇಲೆ ಅಪಪ್ರಚಾರ ಮಾಡಿದರು. ಪುನಃ ಭಾರತಕ್ಕೆ ಬರಲು ಅವಕಾಶ ಕೇಳಿದರು. ನಾಗಾ ಜನರು ಭಾರತದ ಹೊರಗೆ ಸ್ವತಂತ್ರ ರಾಷ್ಟ್ರವಾಗಲು ಅವಕಾಶ ಬೇಕೆಂದು ಬೇಡಿದರು. ತಮ್ಮ ಕಡೆಯ ಉಗ್ರಪಂಥಿಗಳ ಹಲವಾರು ಹಿಂಸಾಕೃತ್ಯಗಳಿಗೆ ಪ್ರೋತ್ಸಾಹ ಕೊಟ್ಟರು. ಅವರ ತಲೆ ಮೇಲೆ ದಂಡದ ಹೊರೆ ಇದೆ. ಅವರು ಪೂರ್ವ ಪಾಕಿಸ್ತಾನಕ್ಕೆ ಬರುವವರಿದ್ದಾರೆ. ಅಲ್ಲಿಗೆ ಹೋಗಿ ಅವರನ್ನು ಇದಿರುಗೊಳ್ಳಬೇಕೆಂದೊ ಅಥವಾ ಅಸ್ಸಾಮಿನಲ್ಲಿ ಇನ್ನು ತಾವು ಎಂದಿನಂತೆ ಬಾಳುವುದು ಅಶಕ್ಯವೆಂದೊ ಸಶಸ್ತ್ರರಾದ ಸುಮಾರು 200 ಮಂದಿ ನಾಗರು ನಿರ್ಣಯಿಸಿದರಂತೆ. ಇದನ್ನು ಅರಿತ ಭಾರತ ಸೈನ್ಯದಳ ಅದನ್ನು ತಡೆಯುವಾಗ ಪೂರ್ವ ಪಾಕಿಸ್ತಾನ ಸೈನ್ಯದ ಮರೆಯಲ್ಲಿ, ರಕ್ಷಣೆಯಲ್ಲಿ ಆ ನಾಗರು ಅಲ್ಲಿಗೆ ಹೋದಂತೆ ವರದಿಯಾಗಿದೆ. ಎಂದರೆ ಅವರು ಅಲ್ಲಿಗೆ ಬರುವುದು ಪಾಕಿಸ್ತಾನಕ್ಕೆ ಗೊತ್ತಿದ್ದು ಅವರ ಸೈನ್ಯ ಬಲ ಇದಕ್ಕೆ ಒತ್ತಾಸೆ, ರಕ್ಷಣೆ ಕೊಟ್ಟಂತಾಯಿತು. ಆಶ್ರಯ ಬೇಡುವಂಥವರನ್ನು ನಿಶ್ಶಸ್ತ್ರರನ್ನಾಗಿ ಮಾಡಿ ಅವರನ್ನು ಸ್ವೀಕರಿಸುವ ಸಂಪ್ರದಾಯ ರಾಜಕೀಯದಲ್ಲಿ ಉಂಟು; ಹೀಗೆ ಸಶಸ್ತ್ರರನ್ನು ಬರಮಾಡಿಕೊಂಡು, ನಾಳೆ ಶಕ್ಯವಾದರೆ ಅವರ ಪ್ರಭಾವ ಮಂಡಲಗಳು ಪಾಕಿಸ್ತಾನದಲ್ಲಿ ಏರ್ಪಡುವಂತೆ ಅವಕಾಶ ಕೊಡುವುದು ಶತ್ರುಕಾರ್ಯ. ಅಂಥದಕ್ಕೆ ಪಾಕಿಸ್ತಾನ ಒತ್ತಾಸೆ ಕೊಡಬಾರದು.



ಈಗಾಗಲೇ ನಾಗಾ ಜನ ಬಹುಮಟ್ಟಿಗೆ ಸ್ವಯಮಾಡಳಿತವನ್ನು ನಡಸುತ್ತಿದ್ದಾರೆ. ತಮ್ಮ ಶಾಸನಸಭೆ, ಅಧಿಕಾರ ಮಂಡಲಗಳನ್ನು ಸ್ಥಾಪಿಸಿಕೊಂಡು ಒಂದು ಬಗೆಯ ಸ್ವಾಧೀನತೆಯನ್ನು ಪಡೆದಿದ್ದಾರೆ. ಅವರಿಗೆ ಗೊತ್ತಾಗಿದೆ, ಭಾರತದಲ್ಲಿ ತಮ್ಮ ಹಿತರಕ್ಷಣೆಯಾಗುತ್ತದೆ ಎಂದು. ಆದರೆ ಎಲ್ಲೋ ಕೆಲವು ಮಂದಿ ದುರಾರಾಧ್ಯರಾಗಿ ದಂಗೆ, ಸುಲಿಗೆ, ಕೊಲೆ, ಅಗ್ನಿ ಕ್ರಿಯೆಗಳಲ್ಲಿ ತೊಡಗಿ ತಮ್ಮ ಜನರನ್ನೇ ಹಿಂಸಿಸುತ್ತಾ ಬೆದರಿಸಿ ಮುಯ್ಯಿ ತೀರಿಸಿಕೊಳ್ಳುತ್ತಾ ಇದ್ದಾರೆ. ಅವರಲ್ಲಿಯೂ ಎರಡು ಬಣಗಳಿರುವ ಹಾಗಿದೆ. ಫಿಜೋ ಕಡೆಯವರು ಪೂರ್ಣ ಸ್ವಾಧೀನತೆಯ ಕಡೆಗೆ ಒಲಿದರೆ ಕೈಟೊಸೇಮಾ ಎಂಬಾತನ ನಾಯಕತ್ವದಲ್ಲಿ ಇನ್ನೊಂದು ಪಂಗಡದವರು ಈ ಅವಕಾಶದಲ್ಲಿ ಹಿಂಸಾಕೃತ್ಯಗಳ ಪ್ರಯೋಜನವನ್ನು ಮಾತ್ರ ಸಾಧಿಸುತ್ತಿರುವಂತಿದೆ. ಏನೇ ಆಗಲಿ ನಾಗಾ ಜನ ವೈರ ಸಂಶಯಗಳನ್ನು ಭಾರತ ರಾಜ್ಯಮಂಡಲದಲ್ಲಿ ಮರೆತು ಸೇರಿಕೊಂಡು, ತಮ್ಮ ಭಾಗದ ಪ್ರದೇಶದಲ್ಲಿ ನೆಮ್ಮದಿಯಿಂದ ಅಭಿವೃದ್ಧಿಗೊಂಡರೆ ಅವರಿಗೂ ನಾಡಿಗೂ ಕ್ಷೇಮ. ಇಂದು ಪಾಕಿಸ್ತಾನ, ನಾಳೆ ಬರ್ಮಾ, ನಾಡಿದ್ದು ಚೀಣಗಳಲ್ಲಿ ಭಾರತ ವಿರುದ್ಧ ಪ್ರಭಾವಗಳನ್ನು ದುಡಿಸಿಕೊಂಡು ಯಾವುದೇ ರೀತಿಯಲ್ಲಾಗಲಿ ಆ ಗಡಿ ಪ್ರಾಂತದಲ್ಲಿ ಅಶಾಂತಿ ಉಂಟುಮಾಡಿದರೆ ಅದನ್ನು ನಿಷ್ಠುರವಾಗಿ ಅಡಗಿಸಬೇಕಾಗುತ್ತದೆ. ಈ ನಡುವೆ ನಾಗಾ ವಿರೋಧಿಗಳು ಕೈವಶ ಮಾಡಿಕೊಂಡಿದ್ದ ನಾಲ್ವರು ಭಾರತೀಯ ವೈಮಾನಿಕರನ್ನು ಬರ್ಮಾಕ್ಕೆ ಒಪ್ಪಿಸಿ, ಬರ್ಮಾ ಸರಕಾರ ಅವರನ್ನು ನಮಗೆ ಹಿಂತಿರುಗಿಸಿರುವುದು ನೆಮ್ಮದಿಯನ್ನುಂಟು ಮಾಡಿರುವ ಸಂಗತಿ. ಇಂಥ ಹಿತಕಾರ್ಯ ಗಳು ಬೆಳೆಯಲಿ.

❑

# 17. ಅಧ್ಯಕ್ಷ ಐಸೆನ್ ಹೊವರರ ಭಾರತ ಭೇಟಿ

ಈ ವಾರ ಅಮೇರಿಕದ ಅಧ್ಯಕ್ಷ ಐಸೆನ್ ಹೊವರರ ಭೇಟಿ ಕಾರಣದಿಂದ ಭರತಖಂಡಕ್ಕೆ ಒಂದು ಸಂಭ್ರಮದ ಕಾಲ. ಬಹುದಿನಗಳಿಂದ ಅವರು ಇಲ್ಲಿಗೆ ಬರಬೇಕೆಂದು ನಾವು ಹಾರೈಸಿದುದು ಇಂದು ನೆರವೇರುವಂತಾಯಿತು. ಇದರಲ್ಲಿ ರಾಜಕೀಯ ಪ್ರಯೋಜನಗಳ ದೃಷ್ಟಿ ಮಾತ್ರ ಮುಖ್ಯವಲ್ಲ. ಅಂತಾರಾಷ್ಟ್ರೀಯ ವ್ಯವಹಾರಗಳ ಚಿಂತೆಯೂ ಪ್ರಮುಖವಾಗಬೇಕಿಲ್ಲ. ತಕ್ಷಣದ ಕ್ಲೇಶಗಳ ಪರಿಹಾರಕ್ಕೆ ದಾರಿ ಕಾಣುವ ಅಗತ್ಯವೂ ಮುಖ್ಯವಾಗಬೇಕಿಲ್ಲ. ಇವೆಲ್ಲಾ ಹೇಗೋ ಆಗುತ್ತವೆ. ನಾವು ದೃಢವಾಗಿದ್ದರೆ ನಮ್ಮ ಬಲವೇ ನಮ್ಮನ್ನು ನಿಲ್ಲಿಸುತ್ತದೆ; ಕಾಪಾಡುತ್ತದೆ. ಇಲ್ಲಿ ಮುಖ್ಯವಾದ ಸಂಗತಿ: ಪ್ರಪಂಚದ ಒಂದು ಬಹುದೊಡ್ಡ ಪ್ರಜಾರಾಜ್ಯದ ಮುಖ್ಯಾಧಿಕಾರಿಗಳು – ಅದರಲ್ಲಿಯೂ ಐಸೆನ್ ಹೊವರಂಥ ಮಹಾವ್ಯಕ್ತಿಗಳು– ಇನ್ನೊಂದು ದೊಡ್ಡ ಪ್ರಜಾರಾಜ್ಯವಾದ – ಆದರೆ ಈಚೆಗೆ ತಾನೇ ಸ್ವತಂತ್ರವಾದ ಭಾರತಕ್ಕೆ ಭೇಟಿಕೊಟ್ಟು, ಎರಡು ನಾಡುಗಳ ಕೆಳೆ ಇನ್ನಷ್ಟು ಆಪ್ತವಾಗಿ ಬೆಸೆಯುವಂತಾಗುವ ಸಂದರ್ಭ. ಮೂರು ವರ್ಷಗಳ ಹಿಂದೆ ನಮ್ಮ ಪ್ರಧಾನಿ ನೆಹರು ಅವರು ಅಮೇರಿಕಕ್ಕೆ ಭೇಟಿಕೊಟ್ಟು ಅಲ್ಲಿನ ಮೈತ್ರಿಯನ್ನು ಸವಿದು ಬಂದಿರುವರು. ಅಲ್ಲಿನ ಅಧ್ಯಕ್ಷರು ನಮ್ಮಲ್ಲಿಗೆ ದಯಮಾಡಿಸಬೇಕೆಂದು ಆಹ್ವಾನಿಸಿ ಅವರ ಆಶ್ವಾಸನೆ ಪಡೆದು ಹಿಂದಿರುಗಿದರು. ಐಸೆನ್ ಹೊವರರು ಸ್ಥಾನಪತಿಗಳಾದ ಕೊಲಂಬಿಯಾ ವಿಶ್ವವಿದ್ಯಾನಿಲಯದಲ್ಲಿ ನೆಹರು ಗೌರವ ಡಾಕ್ಟರೇಟ್ ಪ್ರಶಸ್ತಿ ಪಡೆದು ತಂದರು. ಅಮೇರಿಕದಲ್ಲಿ ಎಲ್ಲಿ ಹೋಗಲಿ, ಯಾರು ಅಧ್ಯಕ್ಷರನ್ನು ಕಾಣಲಿ, "I like Ike" ಎಂಬುದು ಐಸೆನ್ ಹೊವರರಿಗೆ ಜನರಿತ್ತ ಪ್ರೀತಿಯ ಹೆಸರು – ಅವರನ್ನು ಕಂಡರೆ ಎಲ್ಲರಿಗೂ ಪ್ರೀತಿಯೇ: ಅವರಲ್ಲಿಯೇ ಡೆಮೋಕ್ರಾಟಿಕ್ ಪಂಥದವರಿಗಾಗಲಿ, ರಿಪಬ್ಲಿಕನರಿಗಾಗಲಿ.

ಇದಕ್ಕೆ ಕಾರಣ ಅಮೇರಿಕಾ ಬಹುದೊಡ್ಡ ದೇಶ, ಸಂಪತ್ತಿನಲ್ಲಿ ಓಲಾಡುತ್ತಿದೆ, ಶಾಂತಿಕಾಲದ ಸಹಾಯದಲ್ಲಿ, ಯುದ್ಧಕಾಲದ ನೆರವಿನಲ್ಲಿ ಅಮೇರಿಕದ ಬಲ ದೊಡ್ಡ ಬೆಂಬಲ ಎಂಬುದು ಮಾತ್ರವಲ್ಲ, ಅದೆಲ್ಲ ನಿಜ. ಆದ್ದರಿಂದಲೇ ರಷ್ಯ, ಚೀಣಗಳಿಗೆ ಕೂಡ ಅಮೇರಿಕದ ಕೈ ಭಯ ಬಲವಾದ ತಡೆಯಾಗಿರುವಂತಿದೆ. ಅದರ ವಿಷಯವಲ್ಲ



ನಾನು ಮಾತನಾಡುತ್ತಿರುವುದು. ಜII ಐಸೆನ್ ಹೊವರ್ ಬಹು ದೊಡ್ಡ ವ್ಯಕ್ತಿ. ವ್ಯಕ್ತಿಶವಾಗಿ ಮನುಷ್ಯರಾಗಿ, ಹಿಂದಿನ ಯುದ್ಧ ಕಾಲದಲ್ಲಿ ಪಶ್ಚಿಮ ರಾಷ್ಟ್ರಗಳ ಮಹಾ ಸೇನಾನಿಯಾಗಿ, ಅಂತಾರಾಷ್ಟ್ರೀಯ ಜೀವನದಲ್ಲಿ ಮೈತ್ರಿ ಔದಾರ್ಯ ಶಾಂತಿಗಳ ಒಂದು ಸಂಕೇತವಾಗಿ ಭರತಖಂಡದ ಬಹುಪ್ರೀತಿಯ ಗಣ್ಯವ್ಯಕ್ತಿಗಳಾಗಿದ್ದಾರೆ ಅವರು. ಇವನ್ನು ಕುರಿತು ಎರಡೆರಡು ಮಾತನ್ನು ಹೇಳಿ ಭರತಖಂಡದೆಲ್ಲರ ಸ್ವಾಗತದ ಜೊತೆಗೆ ಪ್ರಜಾಮತದ ಈ ಲೇಖನ ತನ್ನ ಸ್ವಾಗತವನ್ನೂ ಅವರಿಗೆ ಅರ್ಪಿಸುತ್ತದೆ.

ಐಸೆನ್ ಹೊವರ್ ತುಂಬ ಬಡತನದಿಂದ ಮೇಲಕ್ಕೆ ಬಂದವರು. ಅವರ ಇತರ ನಾಲ್ವರು ಸಹೋದರರೂ ಹಾಗೆಯೇ, ಅವರ ಮಕ್ಕಳೂ ಹಾಗೆಯೇ – ಸ್ವಂತ ಯೋಗ್ಯತೆಯಿಂದ, ಕಾರ್ಯದಕ್ಷತೆಯಿಂದ ತಮ್ಮ ನಾಡಿನ ಜೀವನದಲ್ಲಿ ದೊಡ್ಡ ಹುದ್ದೆ, ಸ್ಥಾನಮಾನ ಗಳಿಸಿರುವವರು. ಕ್ರಿಶ್ಚಿಯನ್ ಮತದಲ್ಲಿ ಆಸ್ಥೆ, ಶ್ರದ್ಧೆ ಉಳ್ಳವರು. ದೈವಭಕ್ತರು. ಭಯ ಭಕ್ತಿಯಿಂದ ಕೂಡಿದ ಅವರ ಮನಸ್ಸು ಉತ್ತಮ ಸಂಸ್ಕಾರ ಪಡೆದುದು. ಮನುಷ್ಯ ಶಕ್ತಿಗೆ ಮೀರಿದ ದೈವೀ ಶಕ್ತಿಯೊಂದು ಪ್ರಪಂಚದ ಅದೃಷ್ಟವನ್ನು ನಡಸುತ್ತದೆ, ಅದಕ್ಕೆ ಬಾಗಿ ಸೌಜನ್ಯದಿಂದಲೂ ಶೀಲ ಸಂಪತ್ತಿಯಿಂದಲೂ ವಿನಯದಿಂದಲೂ ಮಾನವನು ನಡೆಯಬೇಕು ಎಂದರಿತು, ಆ ರೀತಿ ನಡೆಯುವವರು. ಎಂದಿಗೇ ಆಗಲಿ, ಆತ್ಮಸಾಕ್ಷಿಗೆ ವಿರೋಧವಾಗಿ ನಡೆಯದವರು. ತಮಗೆ ಒಪ್ಪಿತವಾಗದಾದರೆ ಸ್ಟಾಲಿನಿಗೆ ಬೇಕಾದ ಎರಡನೆಯ ರಂಗವನ್ನು ಯೂರೋಪಿನಲ್ಲಿ ತೆರೆಯದವರು. ಚರ್ಚ್ ಇಷ್ಟದಂತೆ ಕೂಡ ನಡೆಯಲೊಪ್ಪದವರು. ಆದರೆ ಸ್ನೇಹಪರರು. ತಮ್ಮ ನೆಚ್ಚಿಕೆ ಪಡೆದವರ ಕೈಬಿಡದೆ ಅವರ ಮೇಲೆ ಕವಿದ ನಿಷ್ಠುರಗಳಲ್ಲಿ, ಅಪವಾದಗಳಲ್ಲಿ ಅವರನ್ನು ಹಿಡಿದು ಸಲಹುವವರು. ಅವರು ಡಲೆಸ್ ಅವರಿಗೆ ಇತ್ತ ವಿಶ್ವಾಸ, ಸಲ್ಲಿಸಿದ ಗೌರವವೇ ಇದಕ್ಕೆ ನಿದರ್ಶನವಾಗಿದೆ. ಯಾವ ಸಮಯದಲ್ಲಿಯೂ ಅಧಿಕಾರದ ದರ್ಪದಿಂದ ಅವರು ನುಡಿದವರಲ್ಲ, ನಡೆದವರಲ್ಲ. ಹೆಚ್ಚು ಮಾತನಾಡದೆ ತಮ್ಮ ಕೈಯಲ್ಲಾದ ಮಟ್ಟಿಗೆ ಲೋಕದ ಕಲ್ಯಾಣಕ್ಕೆ ದುಡಿದಿರುವವರು. ಸಮಸ್ತ ವಿಷಯಗಳಲ್ಲಿಯೂ ಅಮೇರಿಕದ ವಿದೇಶಾಂಗ ನೀತಿಯ ಕರ್ತವ್ಯದಲ್ಲಿ ತಾವೇ ನಿಯೋಜಿಸಿದ ಡಲೆಸಂಥವರ ಕೈ ತಡೆಯದೆ ಸ್ವಾತಂತ್ರ್ಯ ಕೊಟ್ಟಿದ್ದರೂ ಕಡೆಯ ಶಾಂತಿಯ ಮಾತನ್ನೂ ಸಮಾಧಾನದ ಮಾತನ್ನೂ ತಾವು ನುಡಿದು ಲೋಕವನ್ನು ಅನೇಕ ಬಾರಿ ಆಪತ್ತಿನಿಂದ ಉದ್ಧಾರ ಮಾಡಿದವರು. ತಮ್ಮ ಅಧಿಕಾರ ತಮ್ಮ ದರ್ಪ ಹೆಚ್ಚಿನದೆಂದು ಸೆಟೆಯದೆ, ತಮಗಿಂತ ಗಾತ್ರದಲ್ಲಿ ಶಕ್ತಿಯಲ್ಲಿ ಸಣ್ಣ ರಾಷ್ಟ್ರಗಳ ಸಂಪರ್ಕದಲ್ಲಿಯೂ ತಮ್ಮ ಜೊತೆಯವರೊಡನೆ ಹೇಗೆ ನಡೆದುಕೊಳ್ಳುತ್ತಾರೆಯೋ ಅದೇ ವಿಶ್ವಾಸ ಗೌರವಗಳಿಂದ ನಡೆವವರು. ಪ್ರತಿಯೋಧಿಗಳೊಡನೆಯೂ ಹಾಗೆಯೇ ಮರ್ಯಾದೆಯಲ್ಲಿ ನಡೆಯಬಲ್ಲರು. ವೈಟ್ ಹೌಸ್ (ಅಧ್ಯಕ್ಷರ ಮಹಾಮನೆ), ಸ್ಟೇಟ್ ಡಿಪಾರ್ಟ್‌ಮೆಂಟ್, ಸೈನ್ಯ ಇಲಾಖೆ, ವಿದೇಶಿ ವ್ಯವಹಾರ ಮಂಡಲ, ಜೊತೆಗೆ ಕಾಂಗ್ರೆಸ್ – ಈ ಎಲ್ಲ ಸಂಪರ್ಕಗಳಲ್ಲಿಯೂ ಒಂದು ಸಾಮರಸ್ಯ ವ್ಯವಹಾರವನ್ನು ಬೆಳಸಿರುವವರು. ಎಲ್ಲಕ್ಕಿಂತ ಹೆಚ್ಚಾಗಿ ಯುದ್ಧವೆಂದರೇನು, ಅದರ ಕಷ್ಟ ನಿಷ್ಠುರ, ಪಶುತನ, ರಾಕ್ಷಸತೆ,

ಎಷ್ಟೆಂದು ಸ್ವಂತ ಅನುಭವದಿಂದ ಕಂಡು, ಮಾನವಕರುಣೆಯಿಂದ ಲೋಕಕ್ಕೆ ಆ ಕೇಡು ತಪ್ಪಲಿ ಎಂದು ನಿರಂತರವಾಗಿ ಹಾರೈಸುವವರು. ಯುದ್ಧವೇ ನಡೆಯಬೇಕಾದಾಗ ಹೇಗೆ ಕೃತಸಂಕಲ್ಪರಾಗಿ, ನಿಷ್ಠರಾಗಿ ಸಜ್ಜುಗಳನ್ನು ಯಾವ ರೀತಿ ಮಾಡಿಕೊಳ್ಳುತ್ತಿದ್ದರು, ನಡೆದರು ಎಂಬುದನ್ನು ಚೆಸ್ಟರ್ ವಿಲ್‌ಮೊರ್ ಅವರ Struggle for Europe ನಲ್ಲಿ ಯಾರೂ ಕಾಣಬಹುದು, ಓದಬಹುದು. ಅದು ಅವರ ಕೆಲಸವೆನ್ನಿ. ಆದರೆ ಅವರ ಯುದ್ಧದ ಅನುಭವ ವಾಸ್ತವವಾದ್ದು, ಕಲ್ಪನೆಯ ಪ್ರಪಂಚದ್ದಲ್ಲ. ಕೈಯಲ್ಲಾಗದವರ ಶಾಂತಿ ವಾಕ್ಯವಲ್ಲ.

ನೋಯೆಲ್ ಕವರ್ಡ್ ಎಂಬ ನಾಟಕಕಾರರೂ ನಟರೂ ಅವರು ಯೂರೋಪಿನಲ್ಲಿದ್ದಾಗ ಯುದ್ಧದ ನಡುವೆ ಅವರ ಶಿಬಿರದಲ್ಲಿ ಒಂದು ಸಲ ಅತಿಥಿಯಾಗಿದ್ದರಂತೆ. ಅವರ ಅನುಭವವನ್ನು ಹೇಳುತ್ತ "ಐಸೆನ್ ಹೊವರ್ ಸೈನಿಕ ಮಾತ್ರವೇ ಅಲ್ಲ. ಇಂಥ ದೊಡ್ಡ ವ್ಯಕ್ತಿ ರಾಷ್ಟ್ರ ರಾಷ್ಟ್ರಗಳ ಸ್ನೇಹ ಸಂಬಂಧಗಳನ್ನು ಬೆಳಸುವುದಕ್ಕೆ ಉಳಿಸುವುದಕ್ಕೆ ಸ್ನೇಹಯುತ ಸಂಧಾನಗಳಿಗೆ ಪರಮ ಪ್ರಭಾವವುಳ್ಳವರಾಗಬಲ್ಲರು" ಎಂದು ಹೇಳಿದರು. ಅದು ಅಕ್ಷರಶಃ ನಿಜವಾಗಿದೆ. ಅಂಥ ವ್ಯಕ್ತಿಯಾಗಿಯೇ ಇಂದು ಅವರು ಭಾರತಕ್ಕೆ ಮಾನ್ಯರಾಗಿರುವುದು. ವಿದ್ಯೆಗೂ ಬುದ್ಧಿಗೂ ಗುರಿ ಶಕ್ತಿ ಸಾಧನೆ, ಸ್ಥಾನ ಸಂಪಾದನೆ ಮಾತ್ರವಲ್ಲ, ದಕ್ಷತೆ ಮಾತ್ರವಲ್ಲ, ಎಂಥ ಮನುಷ್ಯರು ಇವರು ಎಂಬುದು ಅಲ್ಲಿ ಎಣಿಕೆ, ಬೆಲೆ. ಲೋಕದ ಮಹಾನಾಯಕರ ಸಾಲಿನಲ್ಲಿ ತಮ್ಮ ಸಂಸ್ಕಾರ ಬಲದಿಂದ ಸುಮನಸರಾಗಿ ಮಹಾವ್ಯಕ್ತಿಗಳಾಗಿರುವವರು ಐಸೆನ್ ಹೊವರ್.

ಇಂದು ಅಂತಾರಾಷ್ಟ್ರೀಯ ಜೀವನದಲ್ಲಿ ಪರಸ್ಪರ ವಿರೋಧಗೊಂಡು ನಿಂತಿರುವ ರಾಷ್ಟ್ರಗಳಿಗೆ ಒಂದು ಕಡೆಯ ನಾಯಕರು ಐಸೆನ್ ಹೊವರ್, ಇನ್ನೊಂದು ಕಡೆಗೆ ಯೂರೋಪಿನಲ್ಲಿ ಕ್ರುಶ್ಚಾಫ್, ಚೀಣದಲ್ಲಿ ಮಾವೊತ್ಸೆ ಟುಂಗ್. ಚೀಣದ ಮಾತು ವಿಷಮತೆಯ ಮಾತಾದ್ದರಿಂದ ಅದರ ಗೊಡವೆ ಈಗ ಬೇಡ. ಈಚೆಗೆ ಕ್ರುಶ್ಚಾಫರೂ ಐಸೆನ್ ಹೊವರರೂ ಅಮೇರಿಕಾದಲ್ಲಿ ಭೇಟಿ ಮಾಡಿ, ಲೋಕಕ್ಕೆ ಶಾಂತಿಮಾರ್ಗ ದಕ್ಕಬೇಕೆಂದು ಸಂಧಾನಗಳನ್ನು ನಡಸಿದರು. ಕೆಲವು ಅನೌಪಚಾರಿಕವಾದ ಒಪ್ಪಂದಗಳಿಗೆ ಬಂದರು. ಹಗೆಗಳಂತೆ ಇರಬಹುದಾದವರು ಒಂದು ಕಡೆ ಸೇರಿ, ಇಬ್ಬರಿಗೂ ಹಿತಕರವಾದ, ಲೋಕಕ್ಷೇಮಸಾಧಕವಾದ ಮಾತುಕತೆಗಳನ್ನಾಡಲು ಒಪ್ಪುವುದೇ ದುಸ್ಸಾಧ್ಯವಾಗಬಲ್ಲ ಸಂಗತಿ. ದೀಪಗಳು ಉರಿಯುತ್ತಿರಲಿ, ಅವನ್ನು ಆರಿಸಬೇಡಿ ಎಂಬುದೂ ಮುಖಮುರಿಯುವಂತೆ ಬಾಗಿಲು ಹಾಕಿ ಅಗುಳಿ ಬಿಗಿಯಬೇಡಿ ಎಂಬುದೂ ಲೋಕ ಹಿತದ ಮಾತುಗಳು. ರಷ್ಯ ಮಹಾಪ್ರಬಲ ನಾಯಕರಾದ ಕ್ರುಶ್ಚಾಫ್ ತಮ್ಮ ಹೆಂಡತಿ ಮಕ್ಕಳೊಡನೆ ಅಮೇರಿಕಾಕ್ಕೆ ಹೋದುದು ಅವರ ದೊಡ್ಡತನ. ಹೆಂಡತಿ ಮಕ್ಕಳು ಮೊಮ್ಮಕ್ಕಳೊಡನೆ ಐಸೆನ್ ಹೊವರ್ ರಷ್ಯಾಕ್ಕೆ ಮುಂದಿನ ವರ್ಷದಲ್ಲಿ ಭೇಟಿಕೊಡುತ್ತೇನೆಂದು ಒಪ್ಪಿದುದು ಇವರ ದೊಡ್ಡತನ. ಇವರ ಹಿಂದೆ ಅಮೇರಿಕದ



ಸರ್ವಶಕ್ತಿ ಇದೆ ಎಂಬುದನ್ನು ಲೋಕ ಬಲ್ಲದು. ಪ್ರಪಂಚದ ಎರಡೂ ಮಹಾಯುದ್ಧಗಳು ತೋರಿಸಿವೆ. ಹಿಂದಿನ ಯುದ್ಧದಲ್ಲಿ ರಷ್ಯವೇ ಅರಿತಿದೆ, ಉಪಕಾರವುಂಡಿದೆ. ಅವರ ಬೆಂಬಲದಿಂದಲೇ ಇಂಗ್ಲಂಡ್, ಫ್ರಾನ್ಸ್, ಜರ್ಮನಿಗಳಿಗೆ ಬೆಂಬಲ ಎಂಬುದನ್ನು ಅರಿತು ನಯ ಭಯಗಳಲ್ಲಿ ನಡೆದಿದೆ. ಯುದ್ಧ ಸಜ್ಜಿನಲ್ಲಿ, ಶಸ್ತ್ರದ ಉತ್ಪತ್ತಿಯಲ್ಲಿ, ನಭೋಮಂಡಲದ ರಹಸ್ಯವನ್ನು ಭೇದಿಸುವುದರಲ್ಲಿ, ಆಕಾಶದಲ್ಲಿ ಅಮೋಘವಾದ ಶಸ್ತ್ರ ಸಂಧಾನ ಮಾಡಿ ಸಾವಿರಾರು ಮೈಲಿ ದೂರದ ಗುರಿಗಳನ್ನು ಮುಟ್ಟುವ ತಟ್ಟುವ ಮುರಿಯುವ ವಿದ್ಯೆಯಲ್ಲಿ ನಿಷ್ಣಾತರಾದ ಜನ ಸದ್ಯಕ್ಕೆ ರಷ್ಯನರು ಎಂಬುದನ್ನು ಲೋಕಕ್ಕೆ ಹೊಸದಾಗಿ ತೋರಿಸಿಕೊಟ್ಟಿರುವ ಕ್ರುಶ್ಚಾಫ್ ಶಕ್ತಿಯಿಂದಲೇ ತಾವು ಸಂಧಾನ ನಡಸಿದ್ದಾರೆ. ಅಖಂಡ ಪೌರುಷದ ಮತ್ತು ಶಕ್ತಿಯ ಬೆಂಬಲದಿಂದ ಸಂಧಾನ ನಡಸಿದ ಹೊರತು ರಷ್ಯ, ಚೀಣ ಸಗ್ಗುವುದಿಲ್ಲ, ಮರ್ಯಾದೆಗಳನ್ನು ನಡಸಲಾರರು ಎಂದು ಪಶ್ಚಿಮದ ವಿದೇಶಿ ರಾಜ್ಯತಂತ್ರವನ್ನು ನಡಸಿದ ಅಮೇರಿಕಾ ದೇಶವೂ ತನ್ನ ಆರ್ಥಿಕ ರಾಜಕೀಯ ಸೈನ್ಯ ಶಕ್ತಿಗಳನ್ನು ವಿರೋಧಿ ಮಂಡಲಗಳಿಗೆ ಮನವರಿಕೆ ಮಾಡಿಕೊಟ್ಟಿದೆ. ತನ್ನೀ ಪ್ರಭಾವ ಮಂಡಲಿಗಳಲ್ಲಿ ಶಕ್ತಿಸ್ಥಾನಗಳನ್ನು ಸಿದ್ಧ ಮಾಡಿಟ್ಟುಕೊಂಡಿದೆ.

'ಮೃದುಪೂರ್ವಂ ಕಠೋರಂ' ಎಂದು ಕೃಷ್ಣನು ಮಾತನ್ನು ಆಡಿದನೆಂದು ವ್ಯಾಸರು ವರ್ಣಿಸಿರುವುದುಂಟು. ಮೃದುವೋ ನುಣುಪೋ; ಕಠೋರವಾದ್ದನ್ನು ಪ್ರಿಯವಾಗಿ, ಮರ್ಯಾದೆಯಿಂದ ನುಡಿಯುವುದು ಸಜ್ಜನರ ಲಕ್ಷಣ. ಹೃದಯ ತಿಳಿಯಬೇಕು; ಮರ್ಯಾದೆ ಮಾತು ಬಿಡಬಾರದು ಎಂಬುದು ನಯ. ರಷ್ಯದ, ಅಮೇರಿಕದ ಶಕ್ತಿ ಎಷ್ಟು ಕಠೋರವಾಗಿರಬಲ್ಲವಾದರೂ ಅದರ ಸಜ್ಜನತೆ ಅವರನ್ನು ಲೋಕವನ್ನು ಕಾಪಾಡುತ್ತದೆ. ಭಯಪಡಿಸಬೇಕಾದ್ದನ್ನು ಭಯಪಡಿಸುತ್ತ, ಅನ್ಯಾಯದ ಕಡೆ ಬಾಗದೆ ಸೋಲದೆ, ಏನೇ ಕಷ್ಟವಾಗಲಿ ನಷ್ಟವಾಗಲಿ, ನ್ಯಾಯವಂತರ ದುರ್ಬಲರ ನೆರವಿಗೆ ನಿಲ್ಲುತ್ತೇನೆಂಬ ಐಸೆನ್ ಹೊವರರ ನಿಲವು ಶ್ಲಾಘ್ಯವಾದ್ದು. ಆಗದವರು ಲೆಬನಾನ್ ಸಂಬಂಧದಲ್ಲಿ ಈ ನಿಲವನ್ನು ಹೇಗೇ ಅರ್ಥಮಾಡಿಕೊಳ್ಳಲಿ, ಅದರ ತಾತ್ವಿಕ ಧರ್ಮಕ್ಕೆ ಚರಿತ್ರಕಾರರು ಹೇಗೇ ನಾಳೆ ಬೆಲೆ ಕಟ್ಟಲಿ, ಅದು ಆ ಸಮಯದಲ್ಲಿ ಅರಬ್ಬೀ ದೇಶದ ರಾಜಕೀಯವನ್ನು ದೊಡ್ಡ ನಾಶದಿಂದ ಪಾರುಮಾಡಿತು. ಪ್ರಬಲರು ಪ್ರಧಾನ ಮಿತ್ರರು ಎಂದು ಲಕ್ಷ್ಯಮಾಡದೆ ಸೂಯೆಸ್ ಕಾಲುವೆಯ ಸಂಬಂಧದಲ್ಲಿ ತಮಗೆಲ್ಲ ವಿರೋಧವಾಗಿ ನಡೆದುಕೊಂಡಿದ್ದ ಈಜಿಪ್ಟ್‌ನ ಅಧ್ಯಕ್ಷ ನಾಸ್ಸೆರರಿಗೆ ಅನುಕೂಲವಾಗಿ ತಮಗೆ ನ್ಯಾಯವೆಂದು ತೋರಿದಂತೆ ಧೀರವಾಗಿ ನಿಂತರು; ಇಂಗ್ಲಂಡ್, ಫ್ರಾನ್ಸ್ ನಡೆದ ರೀತಿ ತಪ್ಪೆಂದರು. ತಮ್ಮ ಧಾರ್ಮಿಕ ನೆರವನ್ನು ನಟ್ಟು ಅವರನ್ನು ಹಿಮ್ಮೆಟ್ಟಿಸಿದರು. ಎಷ್ಟೋ ಸಂದರ್ಭಗಳಲ್ಲಿ ಅವರ ನೀತಿ, ಮಾತು, ನಿಲವು ವಸಾಹತುಗಳ ಒಡೆಯ ರಾಷ್ಟ್ರಗಳ ವಿರೋಧವಾಗಿ ದುರ್ಬಲರ ನೆರವಿಗೆ ನಿಂತಿದೆ. ಅದೇ ಇಂದಿನ ಪ್ರಪಂಚದ ರಾಜಕೀಯದಲ್ಲಿ ಇನ್ನೂ ದೊಡ್ಡ ಭರವಸೆ. ಎಲ್ಲ ಸಮಯದಲ್ಲಿಯೂ ನ್ಯಾಯವೇ ಧರ್ಮವೇ ನಡೆಯುವುದೆಂಬ ಮಾತು ರಾಜಕೀಯ ರಂಗದಲ್ಲಿ ಬಹುಶಃ ನಿರೀಕ್ಷಿಸಲಾಗದ

ಸಂಗತಿ. ಎಲ್ಲರ ಎಲ್ಲ ನಡತೆಯನ್ನೂ ಒಪ್ಪುವುದು ಯಾರಿಗೂ ಶಕ್ಯವಾಗದು. ಆದರೆ ನಡತೆಯ ಮೂಲಧಾತು ನ್ಯಾಯಕ್ಕೂ ನಿಷ್ಠೆಗೂ ಒಲಿದರೆ ಲೋಕದ ಶಾಂತಿಯೂ ಸ್ತಿಮಿತವೂ ಸಾಧಿತವಾಗುತ್ತದೆ. ಹಾಗೆ ನಡೆಯಲು ಐಸೆನ್ ಹೊವರ್ ಶ್ರಮಿಸಿದ್ದಾರೆ.

ಇನ್ನೂರು ವರ್ಷಗಳಿಗೆ ಹಿಂದೆ ಅಮೇರಿಕವೇ ಇಂಗ್ಲಂಡಿನ ವಸಾಹತುವಾಗಿತ್ತು. ಇಂಗ್ಲಂಡಿಂದ ಸ್ವಾಧೀನ ಪಡೆದುಕೊಂಡ ರಾಷ್ಟ್ರ ಅಮೇರಿಕ. ಆ ನೆನಪು ಅವರಿಗೆ ಚಿರವಾಗಿದೆ. ಆದುದರಿಂದ ಪ್ರಬಲ ರಾಷ್ಟ್ರಗಳ ಕಾಲೊನಿಗಳಾಗಿರುವುದು ಎಂಥ ಇಕ್ಕಟ್ಟು, ಅಪಮಾನಕರ ಎಂಬುದು ಅವರಿಗೆ ಗೊತ್ತು. ಆದ್ದರಿಂದ ಅಮೇರಿಕಾಕ್ಕೆ ಸ್ವಾತಂತ್ರ್ಯ ಬಯಸುವ ಎಲ್ಲಾ ವಸಾಹತುಗಳ ಮೇಲೆಯೂ ಪಕ್ಷಪಾತ, ಸೌಹಾರ್ದ ಉಂಟು. ವಾಷಿಂಗ್‌ಟನ್, ಲಿಂಕನ್ ಅವರ ಜೀವನದ ಅರ್ಥವೇ ಅದು. ಭಾರತ ಬ್ರಿಟಿಷರಿಂದ ಬಿಡುಗಡೆಗಾಗಿ ಹೋರಾಡುತ್ತಿದ್ದ ಸಮಯದಲ್ಲಿ ಅಧ್ಯಕ್ಷ ರೂಸೆವೆಲ್ಟರು ನಮಗೆ ತುಂಬ ಸಹಾನುಭೂತಿ ಉಳ್ಳವರಾಗಿದ್ದರು. ಮೊದಲ ಯುದ್ಧ ಮುಗಿದ ಕಾಲದಲ್ಲಿ ಸರ್ ಸುಬ್ರಹ್ಮಣ್ಯ ಅಯ್ಯರವರು ಮದರಾಸಿನಿಂದ ಅಮೇರಿಕದ ಅಧ್ಯಕ್ಷರಿಗೆ ಕಾಗದ ಬರೆದರೆ ಎರಡನೆಯ ಮಹಾಯುದ್ಧ ಸಮಯದಲ್ಲಿ ಕಾಂಗ್ರೆಸ್ಸಿನ ಅಧ್ಯಕ್ಷ ಅಬುಲ್ ಕಲಂ ಅಜಾದರು ರೂಸೆವೆಲ್ಟರಿಗೆ ಭಾರತದ ಬಿಡುಗಡೆಗಾಗಿ ವಿಜ್ಞಾಪನೆ ಮಾಡಿಕೊಂಡುದುಂಟು. ಆ ಅಧ್ಯಕ್ಷರುಗಳು ನಮಗೆ ಒಲವು, ಸೌಹಾರ್ದ ತೋರಿದುದುಂಟು. ಯುದ್ಧ ಮುಗಿದು ಶಾಂತಿ ಸಮಾಧಾನ ನೆಲಸಿರುವ ಈ ಕಾಲದಲ್ಲಿ ಭಾರತಕ್ಕೆ ಬೇಕಾದ ಆರ್ಥಿಕ ನೆರವನ್ನೆಲ್ಲಾ ಅಮೇರಿಕ ದೊರಕಿಸುವುದಾದರೆ ಇದು ನಮ್ಮ ನಮ್ಮ ನಾಡುಗಳಿಗೆ ಪರಸ್ಪರವಾಗಿ ನಡೆದು ಬಂದಿರುವ ಸವಿನಂಟಿನ ಚರಿತ್ರೆ.

ಗೋಧಿ, ಅಕ್ಕಿ ಮುಂತಾದ ಆಹಾರ ಪದಾರ್ಥ ದೊರಕಿಸುವುದೊ ಯಂತ್ರ ಬಂಡವಾಳ ಒದಗಿಸುವುದೊ, ತಂತ್ರಜ್ಞರ ಶಿಕ್ಷಣಗಳ ನೆರವನ್ನು ಏರ್ಪಡಿಸುವುದೊ – ಎಲ್ಲ ಬಗೆಯಲ್ಲಿಯೂ ಅಮೇರಿಕದ ಒತ್ತಾಸೆ ಭಾರತಕ್ಕೆ ದೊರಕಿದೆ. ಮುಂದೆಯೂ ದೊರೆಯುವುದೆಂಬ ಉದಾರ ಭರವಸೆಯಿದೆ. ಸೈನ್ಯ ಸಹಾಯವನ್ನು ಸಜ್ಜನ್ನು ನಮಗೆ ಬೇಕಾದಷ್ಟು ಒದಗಿಸುತ್ತೇವೆ ತಮ್ಮ ಮಿತ್ರಮಂಡಲಿಗೆ ಸೇರಿಕೊಳ್ಳಿರೆಂದು ಇತರರನ್ನು ಕೇಳಿದಂತೆ ನಮ್ಮನ್ನೂ ಕೇಳಿದರು. ನಾವು ಯಾವ ಮಿತ್ರ ಮಂಡಲಗಳಿಗೂ ಸೇರಲು ಇಷ್ಟಪಡೆವೆಂದಾಗ ಮಾತ್ರ ಆ ನೆರವು ನಮಗೆ ದೊರೆಯಲಿಲ್ಲವೇ ಹೊರತಾಗಿ ಅವರಿಗೆ ಅವನ್ನು ಕೊಡಲು ಇಷ್ಟವಿಲ್ಲವೆಂದಲ್ಲ. ಆ ಬಣಕ್ಕೆ ನಾವು ಸೇರಿದ್ದರೆ ಪಾಕಿಸ್ತಾನಕ್ಕೆ ದೊರೆವುದಕ್ಕಿಂತ ನಾಲ್ಕು-ಐದರಷ್ಟು ಪಟ್ಟು ನೆರವನ್ನು ನಾವು ಪಡೆಯಬಹುದಿತ್ತು. ಈಗಲೂ ಬೇಕೆಂದರೆ ಪಡೆಯಬಹುದು. ನಾವು ಬೇಡವೆಂದಿದ್ದೇವೆ. ನಾವು ಬೇಡಿದುದು ಯುದ್ಧ ಬಣಗಳಲ್ಲಿ ಮೈತ್ರಿಯನ್ನಲ್ಲ, ಸಮಾನರ, ಸ್ವತಂತ್ರರ ಮೈತ್ರಿಯನ್ನು, ಗೌರವವನ್ನು. ಅದನ್ನು ಅಮೇರಿಕಾ ಅರ್ಥಮಾಡಿಕೊಂಡಿದೆ. ನ್ಯಾಯಯುತವಾದ ಎಲ್ಲ ನಿಲವಿನಲ್ಲೂ ಭಾರತಕ್ಕೂ ಅಮೇರಿಕಾಕ್ಕೂ ಅಂತರಂಗಗಳು ಅರ್ಥವಾಗಿದೆ. ಆಗೊಂದು ಈಗೊಂದು ಸಲ ಆಗೊಬ್ಬರ ಈಗೊಬ್ಬರ ಮಾತು ಎರಡೂ ಕಡೆ ವಿರಸವಾಗಿ ಕರ್ಕಶವಾಗಿ



ಕೇಳಿಬಂದಿದೆಯಾದರೂ ಮೂಲಧಾತುವಿನಲ್ಲಿ ಸ್ನೇಹ ಪರಸ್ಪರವಾಗಿ ರೂಢವಾಗಿದೆ. ನ್ಯಾಯದ ನೆಲೆಗಟ್ಟಿನ ಮೇಲೆ ಕಟ್ಟಿನಿಂತುದಾಗಿ ಯಾರ ಸ್ವಾತಂತ್ರ್ಯಕ್ಕಾದರೂ ಧಕ್ಕೆ ಬಂದಾಗ, ನ್ಯಾಯಕ್ಕೆ ಎಲ್ಲಿಯಾದರೂ ಪೆಟ್ಟು ಬೀಳುವಾಗ ಭಾರತದ ನಿಲವು ಸ್ವಾತಂತ್ರ್ಯದ ಕಡೆಗೇ, ನ್ಯಾಯದ ಕಡೆಗೇ, ಶಾಂತಿಯ ಕಡೆಗೇ, ದುರ್ಬಲರ ಕಡೆಗೇ ಇರುವುದೆಂದು ಅಮೇರಿಕಾಕ್ಕೆ ಅರ್ಥವಾಗಿದೆ. ಪಾಕಿಸ್ತಾನ ತಮಗೆ ಅಮೇರಿಕದಿಂದ ಬಂದ ಆಯುಧಗಳನ್ನೂ ಯುದ್ಧ ಸಜ್ಜನ್ನೂ ಭಾರತದ ಮೇಲೆ ಪ್ರಯೋಗಿಸಕೂಡದೆಂದು ಅಮೇರಿಕಾ ತಿಳಿಸಿದೆ. ಪಾಕಿಸ್ತಾನವೇನಾದರೂ ಭಾರತದ ಮೇಲೆ ಬಿದ್ದರೆ ತಾವು ಪಾಕಿಸ್ತಾನಕ್ಕೆ ವಿರೋಧವಾಗಿ ಭಾರತದ ರಕ್ಷಣೆಗಾಗಿ ನಿಲ್ಲುತ್ತೇವೆಂದು ಎಚ್ಚರಿಸಿದ್ದಾರೆ. ಚೀಣ–ಭಾರತಗಳ ಗಡಿಯ ವಿಚಾರದಲ್ಲಿ ನ್ಯಾಯ ಒಪ್ಪಂದಗಳ ಖಚಿತವಾದ, ವಾಸ್ತವ ಸ್ಥಿತಿ ಅರಿಯದ ಹರ್ಟರ್ ಅವರು ನಮಗೆ ಅನುಕೂಲವಲ್ಲದಂತೆ ಕಾಣುವ ಒಂದು ಮಾತನಾಡಿ ನಮಗೆ ಅಸಮಾಧಾನ ಉಂಟಾಗಿದೆ. ಚೀಣ–ಭಾರತ ವಿವಾದಗಳಲ್ಲಿ ಹರ್ಟರ್, ಐಸೆನ್ ಹೊವರ್ ಅಮೇರಿಕಾ ಯಾವ ಕಡೆಗೆ ನಿಲ್ಲುವುದೆಂದು ನಮಗೂ ಗೊತ್ತು, ಚೀಣಕ್ಕೂ ಗೊತ್ತು, ಎಲ್ಲರಿಗೂ ಗೊತ್ತು. ನಾವು ಸೈನ್ಯ ಸಹಾಯ ಕೋರದಿರಬಹುದು. ನಮ್ಮ ಸ್ವಾಧೀನತೆಯನ್ನು ಕಾಪಾಡಿಕೊಳ್ಳುವುದಕ್ಕಾಗಿ ಸಜ್ಜಿನ ಒದಗಣೆಯನ್ನು ಎಷ್ಟು ಮಟ್ಟಿಗಾದರೂ ಮಾಡಿಕೊಳ್ಳುವ ಅವಕಾಶ ನಮಗೆ ಇದ್ದೇ ಇದೆ. ಮೊದಲನೆಯ ಯುದ್ಧದಲ್ಲಿ, ಎರಡನೆಯ ಯುದ್ಧದಲ್ಲಿ ಅಮೇರಿಕಾ ಇಂಗ್ಲಂಡಿನ, ಫ್ರಾನ್ಸಿನ ಜೊತೆ ಸೇರಲಿಲ್ಲ. ಅವರು ಕರೆಯುವವರೆಗೂ ಯೂರೋಪಿಗೆ ಕಾಲಿಡಲಿಲ್ಲ. ಆದರೂ ಸ್ವಾತಂತ್ರ್ಯಕ್ಕಾಗಿ ಹೋರಾಡುವ ಆ ರಾಷ್ಟ್ರಗಳ ಪರವಾಗಿ ಅಮೇರಿಕಾಕ್ಕೆ ಸೌಹಾರ್ದವಿತ್ತು. ಎಲ್ಲ ಸಲಕರಣೆ ಸಹಾಯಗಳನ್ನು ಆ ರಾಷ್ಟ್ರಗಳಿಗೆ ಮೊದಲಿಂದಲೂ ಒದಗಿಸಿತ್ತು. ನಮ್ಮ ನಡತೆ ನ್ಯಾಯವಾಗಿರುವವರೆಗೂ ಅಂಥ ಒದಗಣೆ ನಮಗೂ ದೊರೆಯುವುದೆಂಬುದರಲ್ಲಿ ಸಂದೇಹವಿಲ್ಲವೆಂದು ನಮ್ಮ ಪ್ರಧಾನಿಗಳ ಮನಸ್ಸಿನಲ್ಲಿ ಖಚಿತವಾಗಿದೆ. ಹೀಗಿರುವಾಗ ನಾವು ಬಣಗಳಿಗೆ ಸೇರಬೇಕಾಗಿಲ್ಲ. ಬಹುಶಃ ಐಕ್–ನೆಹರು ಮಾತುಕತೆಗಳಲ್ಲಿ ಇನ್ನೊಂದು ಸಲ ಈ ನಂಬಿಕೆಯ ನೆರವು ಖಚಿತಗೊಂಡು ಬಲಪಟ್ಟೀತು.

ಇಪ್ಪತ್ತು ಸಾವಿರ ಮೈಲಿ ಪ್ರವಾಸ ಕೈಗೊಂಡಿರುವ ಐಕರ ವಿಶ್ವಾಸದ ಪ್ರಯಾಣ ಭರತ ಖಂಡಕ್ಕೆ ದಾರಿಯಲ್ಲಿರುವ ಇತರ ಮಿತ್ರರನ್ನು ಕಾಣತಕ್ಕದ್ದು ಮರ್ಯಾದೆ. ಅವರನ್ನು ಕಾಣದೆ ಅವರ ಮಂಡಲದ ಆಚೆಗಿರುವ ನಮ್ಮನ್ನು ಮಾತ್ರ ಕಂಡು ಹೋಗುತ್ತೇನೆಂದು ಬರುವುದು ನಯವಲ್ಲ. ಅಲ್ಲದೆ ಅವರನ್ನು ಉಪೇಕ್ಷೆ ಮಾಡಿದಂತಾದೀತು ಎಂದು, ಬಹುತರ, ಅಧ್ಯಕ್ಷರು ಅಲ್ಲಿ ಇಲ್ಲಿ ಭೇಟಿಕೊಟ್ಟು ಯಾವುದು ಒಳ್ಳೆಯದೋ, ಯಾವುದು ನ್ಯಾಯವೋ, ಯಾವುದು ಸಭ್ಯವೋ ಅದರ ಜೊತೆಗೆ, ಅದರ ಕಡೆ ನಿಲ್ಲುತ್ತೇವೆಂದು (The good, the just, and the decent) ಭರವಸೆ ಕೊಟ್ಟು ನಡೆದಿದ್ದಾರೆ. ಭಾರತದಲ್ಲಿ ಅವರಿಗೆ ಸರ್ವ ಸೌಹಾರ್ದದ ಸ್ವಾಗತ ತೆರೆದಿದೆ. ಇಲ್ಲಿನ ಕಮ್ಯುನಿಸ್ಟ್ ಪಾರ್ಟಿಯವರೂ ಕೂಡ ಅವರಿಗೆ ಸ್ವಾಗತ ಬಯಸಿದ್ದಾರೆ. ಸದ್ಯಃ

ಕ್ರುಶ್ಚಾಫ್ ನಮ್ಮ ಮಿತ್ರರಾಗಿರುವುದು ನಮಗೆ ಈ ಉಪಕಾರವನ್ನು ದಾನ ಮಾಡಿದೆ. ಇಲ್ಲಿ ನಿಲ್ಲುವಷ್ಟು ದಿನವೂ ನಾಡನ್ನು ನೋಡುವ, ಇಲ್ಲಿನ ಸಮಾರಂಭಗಳಲ್ಲಿ ಭಾಗವಹಿಸುವ, ತಮ್ಮ ಇಷ್ಟ ಬಂದ ಜನರೊಡನೆ ಬೇರೆಯುವ, ನಮ್ಮ ನಾಯಕರೊಡನೆ ಸ್ನೇಹ ಸಂವಾದಗಳನ್ನು ಮಾಡುವ ಅನೇಕ ಬಗೆಯ ಅವಕಾಶಗಳು ವ್ಯಕ್ತಿಶವಾಗಿ, ಉತ್ಸವಗಳಲ್ಲಿ, ಸಂಸ್ಥೆಗಳಲ್ಲಿ ಏರ್ಪಟ್ಟಿವೆ. ಭರತ ಖಂಡದ ಪ್ರಾಚೀನ ವೈಭವಗಳನ್ನೂ ಇಂದಿನ ಭರತ ಖಂಡದ ಆಶೋತ್ತರಗಳನ್ನೂ ಮನಃಸ್ಥೈರ್ಯವನ್ನೂ ಅರಿಯುವ ಅವಕಾಶ ಅವರಿಗೆ ಹೀಗೆ ದೊರೆಯುವುದು. ನಮ್ಮ ನಾಡಿನ ಸಂಸ್ಕಾರವೆಲ್ಲ ಅವರಿಗೆ ಸೌಹಾರ್ದವನ್ನು ಕಾಣಿಕೆಯಾಗಿ ಅರ್ಪಿಸುವಂತಾಗಲಿ. ಈ ಮೈತ್ರಿಯ ಫಲ ಇಹದ ಕಾಮಧೇನುವಾಗಿ ನೂರು ಕಾಲ ನಡೆದು ಇಬ್ಬರನ್ನೂ ಲೋಕಕ್ಷೇಮವನ್ನೂ ಸಾಧಿಸುವ ಶಕ್ತಿಯಾಗಲಿ.

❑

# 18. ಅಧ್ಯಕ್ಷ ಅಯೂಬರ ಯುದ್ಧದ ಮಾತು

ಕೆಲವು ತಿಂಗಳ ಹಿಂದೆ ಪಾಕಿಸ್ತಾನದ ಅಧ್ಯಕ್ಷರಾದ ಆಗ ಜನರಲ್, ಈಗ ಫೀಲ್ಡ್ ಮಾರ್ಷಲ್, ಅಯೂಬ್‌ಖಾನರು ತಮ್ಮ ದೇಶದ ರಾಜಕಾರಣಿಗಳನ್ನು ಕುರಿತು ಒಂದು ಮಾತು ಹೇಳಿದರು. ಭಾರತದ ಮೇಲಿನ ಕ್ರೋಧದಿಂದ ಕೆಲವರು ಭಾರತದ ಮೇಲೆ ಯುದ್ಧ ಮಾಡೋಣವೆನ್ನುತ್ತಿದ್ದಾರೆ. ಯುದ್ಧವೇನಾದರೂ ಸಂಭವಿಸಿದರೆ ಇಂಥವರಾರೂ ಗುಂಡು ಹಾರುವ ಪ್ರದೇಶಗಳಿಗೆ ಹತ್ತು ಮೈಲಿಯ ದೂರದಲ್ಲಿ ಕೂಡ ಇರುವವರಲ್ಲ ಎಂದು. ಎಲ್ಲ ರಾಜಕಾರಣಿಗಳನ್ನು ಕುರಿತಲ್ಲ ಬಹುಶಃ ಆಡಿದ್ದು ಈ ಮಾತು. ಕೆಲವರಿಗೆ ಅತಿಭಕ್ತಿ, ಕೆಲವರಿಗೆ ಸುಲಭ ಕೋಪ, ಕೆಲವರಿಗೆ ರಾಜಕೀಯವಾದ ಇನ್ನಾವುದೋ ಆಸೆ ಆಕಾಂಕ್ಷೆ, ಕೃಪಣತೆ ಇಂಥ ಮಾತನಾಡಲು ಕಾರಣವಾಗಬಲ್ಲದು. ನಮಗೆ ಅನ್ಯಾಯವೋ ಅಪರಾಧವೋ ಆಯಿತು ಎಂದು ಕಲ್ಪನೆ ಬಂದರೆ ಸಾಕು, ಲಡಾಯಿ ಮಾಡೋಣ ಎಂಬುದೇ ಮಾನವನ ಮೊದಲ ಪ್ರವೃತ್ತಿ. ಅವರ ಸ್ವಭಾವ ಹಾಗೆ. ಸ್ವದೇಶ ಪಕ್ಷಪಾತದಲ್ಲಿ ಇಂಥ ಮಾತುಗಳು ಸುಲಭ. ಶೌರ್ಯವಾಗಿ, ಧರ್ಮವಾಗಿ, ಕರ್ತವ್ಯವಾಗಿ ಕೂಡ ಜನರ ಕಿವಿಗೆ ಕೇಳುವಂತೆ ಆಡಬಹುದು. ಆ ದಾರಿಯನ್ನು ಒಲ್ಲದವರನ್ನು ಹೇಡಿಗಳೆಂದೂ ಕೀಳರೆಂದೂ ನುಡಿಯುವ ಅವಕಾಶವುಂಟು. ಆದರೆ ಯುದ್ಧವೆಂದರೆ ಏನೆಂಬುದನ್ನು ಅಧ್ಯಕ್ಷ ಅಯೂಬರು ಬಲ್ಲವರು. ಅದರ ನಾಶ, ಕಷ್ಟ, ದೌರ್ಜನ್ಯ ಎಷ್ಟು ಕೇಡಿನದು ಎಂದು ನೋಡಿ, ಮಾಡಿ, ಅನುಭವಿಸಿ ಬಲ್ಲರು. ಅಂಥವರನ್ನು ಧೈರ್ಯವಿಲ್ಲದವರೆಂದು ಯಾರು ಹೇಳುವುದಕ್ಕಾದೀತು? ಯುದ್ಧವೇ ಅಗತ್ಯವಾದಾಗ, ಯುದ್ಧ ಮಾಡಬಲ್ಲರು. ಅಭಿಮಾನಶಾಲಿಗಳು. ಆದರೆ ಯುದ್ಧದ ಮಾತೆತ್ತದೆ ಸಂಧಾನ ರೀತಿಯಲ್ಲಿ ಎಲ್ಲ ವಿವಾದಗಳನ್ನು ಬಗೆ ಹರಿಸುವುದು ಒಳ್ಳೆಯದು ಎಂದು ನಂಬಿದವರು. ಅದನ್ನು ಈಚೆಗೆ ಭಾರತ-ಪಾಕಿಸ್ತಾನ ಗಡಿ ವಿವಾದದ ಸಂಬಂಧದಲ್ಲಿ, ಸಿಂಧೂ ಉಪನದಿಗಳ ನೀರಿನ ಹಂಚಿಕೆ ಸಂಬಂಧದಲ್ಲಿ ತೋರಿದ್ದಾರೆ. ವಿವೇಕದಿಂದ ನಡೆದುಕೊಳ್ಳುವುದು ಸರ್ವಥಾ ಮೇಲೆಂದು ಹೇಳಿದ್ದಾರೆ.

ಹಿಂದೆ ಹರಿವಂಶದ ಒಂದು ಪ್ರಸಂಗದಲ್ಲಿ ಜರಾಸಂಧನು ಹತ್ತಾರು ಸಲ ಮಧುರೆಯ ಮೇಲೆ ಬಂದು ಯುದ್ಧ ಮಾಡಿದ್ದಾಗ ಅವನ ಸೈನ್ಯವನ್ನು ಸೋಲಿಸಿ

ಹಿಂದಕ್ಕೆ ಅಟ್ಟಿದವನು ಕೃಷ್ಣ. ಕಡೆಯ ಒಂದು ಸಲ ಪ್ರಚಂಡ ಸೈನ್ಯದೊಂದಿಗೆ ಜರಾಸಂಧನು ಪುನಃ ಬರುವನೆಂದು ತಿಳಿದಾಗ ಊರ ಹಿರಿಯರ ಮಾತಿನಂತೆ, ಊರಿಂದ ತಾನೂ ಬಲರಾಮನೂ ಕೆಲವು ಕಾಲ ಹೊರಗಿರಲು ಒಪ್ಪಿದರು; ಊರನ್ನೂ ಜನರನ್ನೂ ಕಾಪಾಡಿದರು. ಕೃಷ್ಣನಿಗೆ ಸೋಲಿನ ಭಯ ಇರಲಿಲ್ಲ. ಗೆಲವಿನ ವಿಶ್ವಾಸವಿತ್ತು. ಹಿಂದಿನ ಸಲಗಳಂತೆಯೇ ಗೆಲ್ಲುವೆನೆಂಬ ಧೈರ್ಯವಿತ್ತು. ಯುವಕರೆಲ್ಲರ ಬೆಂಬಲವಿತ್ತು. ರಾಜಸಭೆಯಲ್ಲಿ ಯಾರೂ ಅವನ ಮಾತಿಗೆ ವಿರೋಧವಾಗಬಲ್ಲವರಿರಲಿಲ್ಲ. ರಾಜನೇ ಅವನು ಸಿಂಹಾಸನದ ಮೇಲೆ ಕೂಡಿಸಿದ ಮುದುಕ. ಆದರೂ ವಿವೇಕವೂ ರಾಜ್ಯ ಕ್ಷೇಮದ ವಾದವೂ ಅವನನ್ನು ಯುದ್ಧದಿಂದ ತಡೆದವು. ಮಧುರಾ ಪಟ್ಟಣ ಉಳಿದು ಕೊಂಡಿತು. ಇನ್ನೊಂದು ಪ್ರಸಂಗದಲ್ಲಿ "ಮೇಲ್ಪು ಬಲ್ಪನಳಿಗುಂ.... ಸಾಮದಿಂದೆ ಯುದ್ಧಮನ್ ಮುಂತಿಕ್ಕುವನ್ ಮಂತ್ರಿಯೆ?" ಎಂದು ಕೃಷ್ಣನ ಬಾಯಲ್ಲಿ ಆಡಿಸಿದ ಪಂಪ ಕವಿಯ ಮಾತೂ ಸುಮಾರು ಇದೇ ಅರ್ಥ, ಧಾತು ಉಳ್ಳದ್ದು.

ಇಂದು ನಮ್ಮಲ್ಲಿ ಕೆಲವು ಜನವರ್ಗಗಳವರೂ ಗಣ್ಯ ವ್ಯಕ್ತಿಗಳೂ ಪಾಕಿಸ್ತಾನದ ಮೇಲೆ, ಗೋವಾದ ಪೋರ್ಚುಗೀಸರ ಮೇಲೆ, ಹಿಮಾಲಯದ ಆಚೆಯಿಂದ ದುರ್ನಯವನ್ನು ನಡಸುತ್ತಿರುವರೆಂಬ ಚೀಣದವರ ಮೇಲೆ ಯುದ್ಧ ಮಾಡಬೇಕೆಂದು ಆವೇಶ ಆಕ್ರೋಶ ಮಸೆವುದನ್ನು ಕಾಣುತ್ತಿದ್ದೇವೆ. ಯುದ್ಧದ ಅನುಭವವಿಲ್ಲದೆಯೊ, ವೇದಿಕೆಗಳ ಮೇಲಿಂದಲೂ, ಅಚ್ಚಾದ ಪ್ರತಿಷ್ಠೆಯುಳ್ಳ ಬರವಣಿಗೆಗಳ ಮೇಲಿಂದಲೂ ಆಡುವ ಅವರ ಮಾತು ತಿಳಿಯದವರ ಮನಸ್ಸಿಗೆ ಉದ್ರೇಕ ತರುತ್ತದೆ. ಅಂಥ ಮಾತನ್ನು ಆಡುವುದು ದೇಶಾಭಿಮಾನ, ಶೌರ್ಯ ಎಂದು ಹೆಸರಿಡುವುದೂ ಆಳುವ ಅಧಿಕಾರ ವರ್ಗವನ್ನು ನಾಲಗೆಯ ಕಟು ಶೌರ್ಯದಿಂದ ಭರ್ತ್ಸನೆ ಮಾಡುವುದೂ ಓದುವುದಕ್ಕೆ, ಕೇಳುವುದಕ್ಕೆ ಚೆನ್ನಾಗಿರುತ್ತದೆ. ಮನಸ್ಸು ಲೋಕಾನುಭವದಿಂದ ಪಕ್ವವಾದವರ ಮಾತೂ ನಡತೆಯೂ ಇದಾಗದಿರಬಹುದು. ಎಂದೇ ಆಗಲಿ ಯುದ್ಧದಿಂದ ಯುದ್ಧವೇ ಮರಿಯಾಗಿ ಹುಟ್ಟುತ್ತದೆ. ಲೋಕದ ಕ್ರೋಧಾವೇಶಗಳು ಕಡಮೆಯಾಗಬೇಕು. ಯುದ್ಧವನ್ನು ನಂಬಿ ಐದಾರು ಸಾವಿರ ವರ್ಷಗಳ ಮಾನವ ಚರಿತ್ರೆಯಲ್ಲಿ ಯಾರೂ, ಏನೂ, ಯಾವ ಬಗೆಯ ಶಾಂತಿ, ಮೈತ್ರಿ, ನ್ಯಾಯ, ಹಿತವನ್ನು ಸಂಪಾದಿಸಿಲ್ಲ. ಗೆದ್ದವರು ಸೋತವರ ಮೇಲೆ ನಷ್ಟವನ್ನು, ಅಪಮಾನವನ್ನು, ಕ್ರೌರ್ಯವನ್ನು ಹೊರಿಸಿ ತಕ್ಷಣಕ್ಕೆ ಶತ್ರುಗಳನ್ನು ಅಡಗಿಸಬಲ್ಲರೇನೊ. ಸೋತವರು ತಮ್ಮ ಸಮಯ ಕಾಯುತ್ತಿದ್ದು ರೆಕ್ಕೆ ಪುಕ್ಕ ಬಲಿಸಿಕೊಂಡು ಸೇಡನ್ನು ತೀರಿಸುವರು. ಪುನಃ ಯುದ್ಧ; ಅವರು ಗೆದ್ದರೆ ಇವರಿಗೆ ಪ್ರಾಣಹಾನಿ, ಮಾನಹಾನಿ, ವಸ್ತುಹಾನಿ; ತಬ್ಬಲಿ ಮಕ್ಕಳು, ಹೆಣ್ಣುಗಳ ವೈಧವ್ಯ; ಮಾನಭಂಗ – ಹೀಗೆ ನಡೆದಿದೆ ಲೋಕಚರಿತ್ರೆ. ಕರ್ಮ ವ್ಯಕ್ತಿಗಳ ಜೀವನದಲ್ಲಿ ಹೇಗೊ ರಾಜ್ಯಗಳ ಜೀವನದಲ್ಲಿಯೂ ರಾಷ್ಟ್ರ ರಾಷ್ಟ್ರಗಳ ವ್ಯವಹಾರದಲ್ಲಿಯೂ ಮರಿಗೆ ಮರಿ ಇಡುತ್ತದೆ. "ಓ ತಾಯಿ ಶಾಂತಿಯೇ ಎಂದು ಗೆಲ್ವೈ, ಓ ಪೊಲ್ಲ ಯುದ್ಧಮೇ, ಎಂದು



ನಿಲ್ವೈ" ಎಂದು ಹಾತೊರೆದವರುಂಟು. ಏನೇ ಆಗಲಿ, ಯುದ್ಧದ ಮಾತು ಬೇಡ. ಶಾಂತಿ ಸಮಾಧಾನಗಳಿಂದಲೇ ಎಲ್ಲವನ್ನೂ ಬಗೆಹರಿಸೋಣ. ಅದು ಸರ್ವಥಾ ಶಕ್ಯವಾಗದ ಪಕ್ಷದಲ್ಲಿ ಶಸ್ತ್ರವೆತ್ತಿದವರ ಎದುರು ನಿಂತು ನಾವು ಅನ್ಯಾಯಕ್ಕೆ ಬಾಗುವುದಿಲ್ಲವೆಂದು ಸಾವಿರ, ಲಕ್ಷ ಮಂದಿ ಅಹಿಂಸೆಯ ನಿಷ್ಠೆಯಿಂದ ಸಾಯೋಣ. ಎಷ್ಟು ಜನರನ್ನು ಶತ್ರು ಕೊಂದಾನು? ಸೋಲದವರನ್ನು, ಸಗ್ಗದವರನ್ನು? ಅವನ ರಾಕ್ಷಸತೆಗೆ, ಅವನ ಕೊಲೆಗೆ ಅವನಿಗೇ ಸಿಗ್ಗು, ಹೇಸಿಕೆಯುಂಟಾಗುವುದು. ಅವನ ರೌದ್ರ ಖಂಡಿತ ತಂಪುವುದು ಎಂದು ಗಾಂಧೀಜಿಯಂಥವರು, ಯೇಸುವಿನಂಥವರು ಎಂದುದುಂಟು.

ಅಷ್ಟು ದೂರ ಶಾಂತಿ ಅಹಿಂಸೆಗಳನ್ನು ಪಾಲಿಸಲು ಶಕ್ಯವಾಗದೆ ಕಟ್ಟಕಡೆಯ ವರ್ತನೆಯಾಗಿ ಯುದ್ಧಕ್ಕೆ ಸಿದ್ಧರಾಗಿ ಆತ್ಮರಕ್ಷಣೆಗೂ ದೇಶರಕ್ಷಣೆಗೂ ನಿಲ್ಲಬಹುದು, ನಿಲ್ಲತಕ್ಕದ್ದು ಎಂಬ ವಾದ ಉಂಟು. ಎಲ್ಲ ಸಂಧಾನಗಳೂ ವಿಫಲವಾದಾಗ, ತಮ್ಮ ಮೇಲೆ ಶತ್ರು ಉರುಬಿ ನುಗ್ಗಿದಾಗ ಯುದ್ಧ ಅನಿವಾರ್ಯವಾಗಿ, ಹೋರಾಡುವುದು ಕರ್ತವ್ಯ ಆಗುತ್ತದೆ. ಅಲ್ಲಿನವರೆಗೂ ನ್ಯಾಯಮಾರ್ಗವನ್ನು ಅನುಸರಿಸೋಣ. ಅದೇ ಧರ್ಮ, ಅದೇ ಯುಕ್ತ. ಇದು ಭಾರತ ಸಂಸ್ಕಾರದ ವಿಶೇಷ ಲಕ್ಷಣ ಎಂದು ಇಂದಿನ ನಮ್ಮ ಪ್ರಧಾನಿಗಳು ಕೈ ತಡೆಹಿಡಿದಿರುವುದು ಕೆಲವು ಸಲ ಪರಿಹಾಸ್ಯಕ್ಕೆ, ಕೆಲವು ಸಲ ರಭಸದ ನುಡಿಗೆ, ಕೆಲವು ಸಲ ಹೇಡಿತನದ ಆರೋಪಣೆಗೆ ಗುರಿಯಾಗಿದೆ. ಸರ್ವರಿಗೂ ಸರ್ವವಿಷಯದಲ್ಲಿಯೂ ಸ್ವಾತಂತ್ರ್ಯವಿರುವ ಈ ದೇಶದಲ್ಲಿ ಯಾರ ಮಾತನ್ನು ಯಾರು ತಡೆಯಬಹುದು? ಇದರಿಂದ ಕೃದ್ಧರಾಗದೆ ಎತ್ತಬಲ್ಲ ತಮ್ಮ ಕೈ ತಡೆಯುತ್ತ ಶಾಂತಿ ಮಾರ್ಗವನ್ನು ಆಯುವುದು ರಾಜ್ಯದ ಮುಖ್ಯನಾಯಕರ ಪುಣ್ಯವಾಗಬೇಕಾಗುತ್ತದೆ.

ಇಂದಿನ ಯುದ್ಧಗಳು ಹಿಂದಿನಂತಲ್ಲ. ಇವಕ್ಕೆ ಶೂರರಾದ ಸೈನಿಕರು ಮಾತ್ರ ಇದ್ದರೆ ಸಾಲದು. ದೇಶಾಭಿಮಾನ ಸಾಲದು. ಪೋಪರು ತಮ್ಮ ಮೇಲೆ ಅಸಮಾಧಾನ ಗೊಂಡಿದ್ದಾರೆ ಎಂದಾಗ ಅವರು ರಣರಂಗಕ್ಕೆ ಎಷ್ಟು ಬೆಟ್ಟಾಲಿಯನ್ ಕಳಿಸಬಲ್ಲರು, ಎಂದ ಮಹಾತ್ಮರುಂಟು. ಒಂದು ಬೆಟ್ಟಾಲಿಯನ್ ಸರ್ವ ಸಜ್ಜಾಗಿ ಯುದ್ಧದ ಕಳದಲ್ಲಿ ಹೋರಾಡಬೇಕಾದರೆ ಅದರ ಆರರಷ್ಟು, ಹತ್ತರಷ್ಟು ಸಂಖ್ಯೆಯ ಜನ ಅವರಿಗೆ ಬೇಕಾದ ಸಲಕರಣೆಗಳನ್ನು ಒದಗಿಸಬೇಕಾಗುತ್ತದೆ. ಮದ್ದು ಗುಂಡು, ಕೋವಿ, ಬಟ್ಟೆ, ಆಹಾರ, ಚಿಕಿತ್ಸಕ ವರ್ಗ, ರೋಗದಲ್ಲಿ ಉಪಚಾರ ಮಾಡುವ ಸಿಬ್ಬಂದಿ – ಈ ಎಲ್ಲವನ್ನೂ ಸ್ಥಳದಿಂದ ಸ್ಥಳಕ್ಕೆ ಸಾಗಿಸುವ ವಾಹನಗಳ ಏರ್ಪಾಡು, ಈ ಪದಾರ್ಥಗಳನ್ನು ತಯಾರಿಸುವ ಗಿರಣಿಗಳು ಯಂತ್ರಗಳು, ಮುಂದೆ ನುಗ್ಗಿ ಹೋಗಿ ರಕ್ಷಣಾಸಾಧನಗಳನ್ನು ಅಗೆವ ಕಟ್ಟುವ, ಮುಳ್ಳು ಬೇಲಿಗಳನ್ನು ಒಡ್ಡಿ ಆತಂಕಗಳನ್ನು ರಚಿಸುವ ಕಲಾಸಿದಳ ದೊಡ್ಡ ಪ್ರಮಾಣದಲ್ಲಿ ಏರ್ಪಡಬೇಕಾಗುತ್ತದೆ, – ನಿದ್ರೆ ನಿಲುಗಡೆ ಇಲ್ಲದೆ. ಇದಕ್ಕೆ ಇನ್ನೊಂದು

ದೇಶದವರ ಕೈ ಕಾಯದೆ, ಅವರ ನೆರವಿಗೆ ಹಲ್ಲು ಕಿರಿಯುತ್ತ ಕೂತಿರದೆ ಸ್ವಂತವಾಗಿ ಆಯುಧಗಳನ್ನು, ಸಜ್ಜನ್ನು ಆಹಾರಾದಿಗಳನ್ನು ಒದಗಿಸಿಕೊಡಬಲ್ಲ ಶಕ್ತಿ ಬೇಕಾಗುತ್ತದೆ. ಇವೊತ್ತು ಬರಿಯ ಜನ ಏನೂ ಮಾಡುವ ಹಾಗಿಲ್ಲ. ಸಾವಿರ ಮೈಲಿ ದೂರದಿಂದ ಕಣ್ಣಿಗೆ ಕಾಣದ ಹತ್ತಾರು ಸಾವಿರ ಅಡಿ ಎತ್ತರದ ನೀಲಿ ಬಾನಲ್ಲಿ ಬಾಂಬುಗಳನ್ನು ಗುರಿ ತಪ್ಪದಂತೆ ಯಂತ್ರಗಳ ಸಹಾಯದಿಂದ ಪಟ್ಟಣಗಳ ಮೇಲೆ, ಮಳಿಗೆಗಳ ಮೇಲೆ, ಸಾಗಣೆ ವಾಹನಗಳ ಮೇಲೆ, ಉತ್ಪತ್ತಿಯ ಕಾರ್ಖಾನೆಗಳ ಮೇಲೆ ಸುರಿದು, ಆ ನಾಶವನ್ನಾಗಲಿ, ಗೋಳನ್ನಾಗಲಿ, ಆ ಘೋರವನ್ನಾಗಲಿ ಕಾಣಬೇಕಾದಾಗ, ಅಗತ್ಯವಿಲ್ಲದೆ ತಾವಿಕ್ಕಿದ ಉರಿಯನ್ನು, ಅದರ ಹೊಗೆಯನ್ನು ನೋಡದೆ ಗಂಟೆಗೆ ಐನೂರು ಮೈಲಿ ವೇಗದಲ್ಲಿ ತಪ್ಪಿಸಿಕೊಂಡು ಹೋಗಬಹುದು. ನೆಲದ ಮೇಲಿನವರ ಶೌರ್ಯ ಎಷ್ಟಿದ್ದರೂ ಇಂಥ ನಾಶಕರ ವ್ಯಾಪಾರಕ್ಕೆ ಪ್ರತೀಕಾರ ಮಾಡಲಾಗುವುದಿಲ್ಲ.

ಈಗಿನ ಯುದ್ಧಗಳಿಗೆ ಉಕ್ಕು ಬೇಕು. ಅಪಾರವಾದ ಯಂತ್ರ ಸಂಪತ್ತಿ ಬೇಕು. ಅವುಗಳ ಉತ್ಪತ್ತಿ ಬೇಕು. ರಾಸಾಯನಿಕ ದ್ರವ್ಯಗಳು ಬೇಕು. ಅಮೋಘವಾದ ಶಸ್ತ್ರಾಸ್ತ್ರಗಳು ಬೇಕು. ತಂತ್ರಜ್ಞರು ಬೇಕು. ಗಣಿತ ಬೇಕು. ಯುದ್ಧ ಶಿಲ್ಪ ಬೇಕು. ವಾಹನಗಳು, ವಿಮಾನಗಳು ನಡೆಯುವುದಕ್ಕೆ ಪೆಟ್ರೋಲ್ ಬೇಕು. ರಬ್ಬರ್ ಬೇಕು. ನೂರಾರು ಮೈಲಿ ದೂರವುಳ್ಳ ಪ್ರದೇಶದಲ್ಲಿ ಇಂದಿಗೂ ನಮ್ಮಲ್ಲಿ ಒಂದು ರೈಲುಮಾರ್ಗವಿಲ್ಲ. ರಸ್ತೆ ಮೇಲಿನವೂ ರೈಲು ಮಾರ್ಗದವೂ ಎರಡೂ ಸೇತುವೆಗಳು ನಾಶವಾದರೆ, ತಂತಿ ಕತ್ತರಿಸಿದರೆ ನಾವು ಸೋತೆವು. ಆ ಸುದ್ದಿ ನಮಗೆ ಮುಟ್ಟುವುದರೊಳಗೆ ಹಗೆ ಇಳಿದು ಆಕ್ರಮಿಸೀತು. ವಾಹನ ಓಡಿಯಾಡಲು ನಮಗೆ ಪೆಟ್ರೋಲ್ ಒದಗಿಸುವವರು, ವಿಮಾನ ಒದಗಿಸುವವರು, ಮೋಟಾರ್ ಯಂತ್ರ ಒದಗಿಸುವವರು ನಮಗೆ ಒದಗಿಸುವುದಿಲ್ಲ ವೆಂದರಾಯಿತು; ತಡ ಮಾಡಿದರಾಯಿತು; ಶತ್ರುಗಳಿಗೆ ಹೆಚ್ಚಾಗಿ, ಹೆಚ್ಚು ಬೇಗ ಒದಗಿಸಿದರಾಯ್ತು – ನಮ್ಮ ಉದ್ಯಮ ಉತ್ಸಾಹ ಮುರಿದು ಬೀಳುವುವು.

ಇವೆಲ್ಲಕ್ಕೂ ಹಣ ಬೇಕು. ಜನ ಬೇಕು. ಐಕಮತ್ಯ ಬೇಕು. ಜನದಲ್ಲಿ ಶಿಸ್ತು ಬೇಕು. ಶಿಸ್ತು ಐಕಮತ್ಯಗಳಿಲ್ಲದೆ, ಫ್ರಾನ್ಸಿನಂಥ ಪ್ರಧಾನ ರಾಜ್ಯವೇ ಎರಡನೆ ಯುದ್ಧದಲ್ಲಿ 8-10 ದಿನದಲ್ಲಿ ಸೋತು ಜರ್ಮನಿಗೆ ಶರಣಾಯಿತು. ದೇಶದಲ್ಲಿ ಯಾರಿಗೂ ಹೆಚ್ಚಾಗಿ ಇಂದಿನ ಕಾಲದ ಯದ್ಧದ ಸ್ವರೂಪದ ಕಲ್ಪನೆಯಿಲ್ಲ. ಕತ್ತಿ ಗುರಾಣಿ ಹಿಡಿದು ಯುದ್ಧಕ್ಕೆ ನುಗ್ಗಿದರೆ ಯಾರೂ ಉಳಿಯುವ ಹಾಗಿಲ್ಲ. ಹೆಚ್ಚಾಗಿರುವ, ಹೆಚ್ಚೆಂದು ಕೂಗೆದ್ದಿರುವ ಜನಸಂಖ್ಯೆಯನ್ನು ಕಡಮೆ ಮಾಡಿ, ಆಹಾರದ ಮೇಲೆ ಜನದ ಒತ್ತಡವನ್ನು ಕಡಿಮೆ ಮಾಡಬಹುದೇನೊ. ಅಷ್ಟೇ ಹೊರತು ಇಂದಿನ ಯುದ್ಧ ಕಾರ್ಯದಲ್ಲಿ ಎದುರು ನಿಲ್ಲಬಲ್ಲ ಕಾರ್ಯಕ್ಷಮರಾದ ಜನವರ್ಗ ಇಲ್ಲಿ ಇನ್ನೂ ತಯಾರಾಗಬೇಕಾಗಿದೆ. ಒಂದು ಉದಾ: ಎಷ್ಟು ಬಗೆಯ ವಿಮಾನಗಳನ್ನು ಕೊಂಡು ನಮಗೆ ಬೇಕಾದಷ್ಟು ಸಂಖ್ಯೆಯ



ವಿಮಾನಗಳಲ್ಲಿ ಅವುಗಳ ಭಾಗಗಳೂ ಸಮಯಕ್ಕೆ ಸಿಕ್ಕದೆ, ಈಗ ತಾನೆ ನಮ್ಮದೇಶದ ಆವ್ರೋ-748 ಎಂಬ ಒಂದು ವಿಮಾನದ ಮಾದರಿಯನ್ನು ನಮ್ಮಲ್ಲಿಯೇ ತಯಾರು ಮಾಡಿಕೊಳ್ಳುವ ಸಂಘಟನೆಯ ಯತ್ನ ನಡೆಯುವುದಿದೆ. ಸಾಮಾನ್ಯ ಶಾಂತಿ ಕಾಲದಲ್ಲಿಯೇ ಜನಕ್ಕೆ ಅನ್ನ ಬಟ್ಟೆ ಸಾಲದು; ಸೈನ್ಯದ ವೆಚ್ಚವೂ ರಕ್ಷಣಾಕಾರ್ಯಕ್ಕೆ ಹಿಡಿಯುವ ಈಗಿನ ವೆಚ್ಚವೂ ದೇಶದ ಜುಟ್ಟು ಮೀರಿದುದು ಎನ್ನುವುದುಂಟು ಸಭೆಗಳಲ್ಲಿ, ಪೇಪರುಗಳಲ್ಲಿ. ಹೋರಾಡುವ ವಿಮಾನಕ್ಕೂ ಹಡಗುಗಳಿಗೂ ಹತ್ತಾರು ಲಕ್ಷ, ಹತ್ತು ಕೋಟಿಯಂತೆ ವೆಚ್ಚ ಮಾಡಬೇಕಾಗುವುದು. ಒಂದು ಯುದ್ಧದ ಹಡಗಿಗೆ ಒಂದು ಮದ್ದುಗುಂಡಿನ ದಳದ ಸಜ್ಜಿಗೆ ಹತ್ತಾರು ಕೋಟಿ ರೂ. ವೆಚ್ಚ ಬೇಕಾಗುವುದು. ಈ ಯಾವ ಕಡೆಯೂ ಗಮನ ಕೊಡದ ಜನ ಮಾತಿಗೆ ಮುಂಚೆ ಯುದ್ಧ ಯುದ್ಧ ಎಂದು ಕೂಗುವುದು ಯಾವ ವಿವೇಕವೊ, ದೇವರೇ ಬಲ್ಲ. ಅವರ ಅಜ್ಞತೆ ಅವರನ್ನು ಕಾಪಾಡುತ್ತಿದೆ. ಅದರಿಂದ ದೇಶವನ್ನು ಅದರ ದೈವಗಳು ಕಾಪಾಡಬೇಕು.

ಸದ್ಯಕ್ಕೆ ಪಾಕಿಸ್ತಾನದ ತೊಂದರೆ ಇಲ್ಲ. ಪೋರ್ತುಗೀಸರು ನಮ್ಮ ಮೇಲೆ ಬೀಳುವ ಹಾಗಿಲ್ಲ. ಆದ್ದರಿಂದ ಪಾಕಿಸ್ತಾನದ ಎರಡೂ ಕಡೆಯ ಸಾವಿರ–ಸಾವಿರ ಮೈಲಿ ಗಡಿಯಲ್ಲಿ ಯಾವ ಅನಾಹುತವೂ ಸಂಭವಿಸುವ ಭಯವಿಲ್ಲ. ಪೋರ್ತುಗೀಸರಿಂದ ನಮಗೆ ಇರುವ ಭಯಕ್ಕಿಂತ ನಾವು ಅವರ ಮೇಲೆ ಬಿದ್ದರೆ ಅವರು ಗೋವಾದಲ್ಲಿ ಉಳಿಯಲಾರರೆಂಬ ಭಯ ಅವರಿಗಿದೆಯಾಗಿ, ಅಲ್ಲಿಯೂ ಯಾವ ಚಿಂತೆ ಕಳವಳಗಳಿಗೆ ಅವಕಾಶವಿಲ್ಲ. ಉಳಿದುದು ಚೀಣೀಯರ ಕೀಟಲೆ. ಅದು ತುಂಬಾ ಈಚಿನದು. ದಲೈಲಾಮ ಅವರಿಗೆ ನಾವು ಆಶ್ರಯ ಕೊಟ್ಟದ್ದು ಈಚೆಗೆ. ಅದು ವಿಭೀಷಣ ಶರಣಾಗತಿಯನ್ನು ಒಪ್ಪಿಕೊಂಡದ್ದರಿಂದ ರಾವಣನಿಗೆ ರಾಮನ ಮೇಲೆ ಕೋಪ ಹೆಚ್ಚುವಂತೆ ಚೀಣಕ್ಕೆ ನಮ್ಮ ಮೇಲೆ ಕೋಪದ ವೇಗ ಹೆಚ್ಚಾಗಿರಬಹುದು. ಆದರೆ ವಿಭೀಷಣ ಧರ್ಮಿಷ್ಠನಲ್ಲವೆಂದಾಗಲಿ, ರಾಮನು ಅವನಿಗೆ ಆಶ್ರಯವಿತ್ತಿದ್ದು ತಪ್ಪೆಂದಾಗಲಿ, ರಾವಣನ ನಡತೆ ಸರಿಯೆಂದಾಗಲಿ ನಮ್ಮವರು ಒಪ್ಪಬಲ್ಲರೇ? ಆ ಸಮಯದಲ್ಲಿ ರಾಮನ ಸೈನ್ಯದವರು ಎಷ್ಟು ಚಡಪಡಿಸಲಿಲ್ಲ?

ಅದು ಹಾಗಿರಲಿ. ಚೀಣಾದವರು ಟಿಬೆಟ್ ನಮಗೆ ಸೇರಿದ್ದೆಂದು ಬಹುಕಾಲದಿಂದ ಹೇಳುತ್ತಿದ್ದಾರೆ. ಸೇರಿದ್ದೇ ಅಲ್ಲವೇ ಎಂಬುದು ಇನ್ನೂ ನಿರ್ಣಯವಾಗಬೇಕು ಅದನ್ನು ಕೇವಲ ನಾವು ನಿರ್ಣಯಿಸುವ ಹಾಗಿಲ್ಲ. ಅಂತಾರಾಷ್ಟ್ರೀಯ ವ್ಯವಹಾರದಲ್ಲಿ ಬ್ರಿಟಿಷರ – ಚೀಣಾದವರ ವ್ಯವಹಾರದಲ್ಲಿ, ಬ್ರಿಟಿಷ್ ಆಳ್ವಿಕೆಯ ಉತ್ತರಾಧಿಕಾರಿಗಳಾಗಿ ಭಾರತದ ಮೇಲಿನ ಸರ್ವಾಧಿಕಾರವನ್ನು ಪಡೆದ ನಮಗಾಗಲಿ, ಅದರ ನಿರ್ಣಯ ಸುಲಭವಲ್ಲ. ಟಿಬೆಟ್ ಚೀಣದ ಸಾರ್ವಭೌಮತ್ವಕ್ಕೆ ಒಳಪಟ್ಟ ರಾಜ್ಯ. ಅವರು ಟಿಬೆಟ್ಟನ್ನು ಬಹುಕಾಲ ಚೆನ್ನಾಗಿ ನಡಸಿಕೊಂಡರು. ನಡಸಿಕೊಳ್ಳುವೆವೆಂದು ನಮ್ಮ ನಾಯಕರಿಗೂ ಮಾತಿತ್ತರು.

ಟಿಬೆಟ್ಟನ್ನು ಸರಿಯಾಗಿಯೇ ನಡಸುತ್ತಿದ್ದೇವೆಂದು ಇಂದಿಗೂ ಹೇಳುತ್ತಿರುವ ಮಾತು ಅವರದು. ಅಲ್ಲಿ ಏನೇ ನಡೆಯಲಿ, ಅವರ ಸರ್ವಾಧಿಕಾರಕ್ಕೆ ಒಳಪಟ್ಟ ಸಂಗತಿ ಅದು. ಅದರಲ್ಲಿ ಯಾವ ಇತರರೂ ಕೈ ಇಡುವ ಹಾಗಿಲ್ಲ. ಒಡಂಬಡಿಕೆಗೆ ತಕ್ಕಂತೆ ಅದು ನಡೆಯಬೇಕು. ಗಡಿ ಸಂಪ್ರದಾಯಗಳ ಪಾಲನೆ ಎರಡೂ ಕಡೆಯಿಂದ ನಡೆಯಬೇಕು. ಇಲ್ಲಿ ಮನಸ್ತಾಪಗಳಿಗೆ ಅವಕಾಶವುಂಟು.

ಇಲ್ಲಿ ಚೀಣಾಕ್ಕೆ ಸೇರಿದ ಟಿಬೆಟ್ಟಿನ ದಕ್ಷಿಣ ಗಡಿ ಯಾವುದು ಎಂಬುದು ಪ್ರಶ್ನೆ. ಯಾವುದನ್ನು ಈವರೆಗೂ ಟಿಬೆಟ್ಟಿನ ಗಡಿ ಎಂದು ಟಿಬೆಟ್ ದುರ್ಬಲವಾಗಿದ್ದಾಗ, ಚೀಣ ದುರ್ಬಲವಾಗಿದ್ದಾಗ ನಡಸುತ್ತಿದ್ದಿತೋ ಅದನ್ನು ನಡಸಿಕೊಡಿರೆಂದು ನಾವು ಕೇಳುತ್ತಿದ್ದೇವೆಂಬುದು ಅವರ ವಾದ. ನಾವು ಅದನ್ನು ಮೊದಲಿಂದಲೂ ಒಪ್ಪಿಲ್ಲವೆಂದು ಚೀಣ ಹೇಳುತ್ತಿದೆ. ಚೈಯಾಂಗ್-ಕೈ-ಷೇಕರ ಕಾಲದಲ್ಲಿ ಈ ಮೇರೆಯನ್ನು ಒಪ್ಪಿರಲಿಲ್ಲ. ಅವರು ದೇಶಭ್ರಷ್ಟರಾಗಿ ಹೋದ ಮೇಲೆ, ಅಖಂಡ ಚೀಣಾದ ಮೇಲೆ ಮೊದಲ ಬಾರಿಗೆ ಅಧಿಕಾರ ಸ್ಥಾಪಿಸಿ ಚೀಣವನ್ನು ಒಂದು ಪ್ರಬಲ ರಾಷ್ಟ್ರವನ್ನಾಗಿ ಮಾಡಿ ಶಕ್ತಿಯಲ್ಲಿ, ದಕ್ಷತೆಯಲ್ಲಿ, ಸೈನ್ಯ ಬಲದಲ್ಲಿ, ಉತ್ಪತ್ತಿಯಲ್ಲಿ, ಮಹತ್ವಾಕಾಂಕ್ಷೆಯಲ್ಲಿ ದಿನದಿನವೂ ರಾಕ್ಷಸ ಪ್ರಮಾಣದಲ್ಲಿ ಬೆಳೆಯುತ್ತಿರುವ ಚೀಣ ಈ ಹತ್ತು ವರ್ಷಗಳಿಂದ ಈ ಕಡೆ ಹೆಚ್ಚಾಗಿ ಲಕ್ಷ್ಯ ಕೊಡದೆ ಇದ್ದರೂ, ಮೂದಲಿಸುತ್ತಲೇ ಇದ್ದಾರೆ. ತಮ್ಮ ಗಡಿ ಎಂಬ ಭೂಮಿಗಳನ್ನೂ ತಮ್ಮ ಭೂಪಟಗಳಿಂದ ಅಳಿಸಲು ಒಪ್ಪದೆ ಇದ್ದಾರೆ. ತಾವು ಸಹಿ ಹಾಕದ ಮೆಕ್‌ಮಹನ್ ರೇಖೆಯ ಮಿತಿಯನ್ನು ನಾವು ಒಪ್ಪುವುದಿಲ್ಲವೆಂದಿದ್ದಾರೆ. ಲಡಖ್, ಉತ್ತರ ಪ್ರದೇಶ ಭಾಗಗಳಲ್ಲಿ ತಮ್ಮದೆಂದು ತಮ್ಮ ಭೂಪಟ ತೋರುವ ಪ್ರದೇಶವನ್ನು ಸಾಮದಿಂದಲಾದರೆ ಸಾಮದಿಂದ, ದಂಡ ಅನಿವಾರ್ಯವಾದರೆ ದಂಡ ಪ್ರಯೋಗದಿಂದ ವಶಮಾಡಿಕೊಳ್ಳುವೆವೆಂಬ ಮನಸ್ಸಿನಲ್ಲಿದ್ದಾರೆ.

ಏಷ್ಯ ಖಂಡದ ಭೂಪಟವನ್ನು ನೋಡಿದವರಿಗೆ ಚೀಣದ ವಿಸ್ತಾರ ಎಷ್ಟು ದೊಡ್ಡದು, ಟಬೆಟ್ಟನ್ನು ಅವರು ಆಕ್ರಮಿಸಿಕೊಂಡರೆ ವಿವಾದಗ್ರಸ್ತವಾದ ಟಿಬೆಟ್ಟಿನ ದಕ್ಷಿಣದ ಮೇರೆಯಲ್ಲಿ – ಅಂದರೆ ಭರತ ಖಂಡದ ಉತ್ತರ ಮೇರೆಯಲ್ಲಿ – ಅವರಿಗೆ ಎಷ್ಟು ಅನುಕೂಲಗಳಿವೆ, ಅವುಗಳ ರಕ್ಷಣೆ ನಮಗೆ ಎಷ್ಟು ದುಸ್ತರ ಎಂಬುದು ವೇದ್ಯವಾದೀತು. ನಮಗೆ ಭೂಪಟ ಬೇಕಿಲ್ಲ. ಅನುಕೂಲ ಪ್ರತಿಕೂಲದ ತಿಳಿವಿಲ್ಲ. ಪರಸ್ಪರ ಸಜ್ಜು ಸಲಕರಣೆಗಳ ವ್ಯತ್ಯಾಸದ ಅರಿವಿಲ್ಲ. ಇಂದಿನ ಚೀಣ ಎಷ್ಟು ಮಹತ್ವದ ತೃಷೆಯಿಂದ ನುಗ್ಗಿ ತನ್ನ ಪ್ರಾಬಲ್ಯವನ್ನು ಅಂತಾರಾಷ್ಟ್ರೀಯ ಪ್ರಭಾವವನ್ನು ಲೆಕ್ಕಿಸದೆ ಮೆರೆಯುತ್ತಿದೆ ಎಂಬುದರ ಪರಿವೆಯಿಲ್ಲ. ಅವರಿಗೆಷ್ಟು ಉದಾರವಾಗಿ ಕಮ್ಯುನಿಸ್ಟ್ ರಾಷ್ಟ್ರಗಳು ಯುದ್ಧ ಸಲಕರಣೆಗಳನ್ನು ಒದಗಿಸಬಲ್ಲರು ಎಂಬ ಚಿಂತೆ ಇಲ್ಲ. ಅಲ್ಲದೆಯೆ ನೂರಾರು ವರ್ಷಗಳಿಂದ ಈ ನಮ್ಮ ಉತ್ತರ ಮೇರೆಯ ಪ್ರದೇಶದಲ್ಲಿ ಗಡಿ ರೇಖೆ



ಊರ್ಜಿತವಾಗಿ ಗುರುತಾಗಿಲ್ಲ. ವರ್ಷದಲ್ಲಿ ನಾಲ್ಕಾರು ತಿಂಗಳು ಮಂಜು ಬಿದ್ದು ಯಾವ ಭಾಗ ಯಾರದು ಎಂಬ ಗುರುತಾಗದು. ವಿರೋಧದ ಸೆಲೆಯಿಲ್ಲದ ನೂರಾರು ವರ್ಷದಲ್ಲಿ ಭಾರತದಿಂದ ಟಿಬೆಟ್ಟಿಗೆ ಜನ ನಿರಾತಂಕವಾಗಿ ಹೋಗಿ ಬರುತ್ತಿತ್ತು. ಅಲ್ಲಿ ಇಲ್ಲಿ ಗಡಿಯ ಸುಂಕದವರೊ ಸಾಮಾನ್ಯ ಪೊಲೀಸ್ ದಳವೊ ಇದ್ದಿತೇ ಹೊರತು ಸೈನ್ಯದವರು ಆ ಭಾಗದಲ್ಲಿ ಠಾಣೆಗಳನ್ನು ಹೂಡಬೇಕಾಗಿರಲಿಲ್ಲ.

ಆ ಅಗತ್ಯ ಈಗ ಬಂದು ಭಾರತದ ಸೈನ್ಯ ನಮ್ಮ ಭಾಗವನ್ನು ಆಕ್ರಮಿಸಿ ಯಾವ ಅದೃಷ್ಟಕ್ಕೂ ಸಿದ್ಧವಾಗಿ, ಸಜ್ಜಾಗಿ ನಿಂತಿದೆ. ಹೀಗಾಗಿದೆ ಎಂದು ಪ್ರಧಾನಿಯವರೂ ಸೈನ್ಯದವರೂ ಹೇಳಿದ್ದಾರೆ. ನೆಹರೂ ಅವರು ಹೇಳಿದಂತೆ, ಈ ವರೆಗೂ ಸೈನ್ಯದ ಶಾಖೆಯ ಪ್ರಯೋಗವಿರಲಿಲ್ಲ. ವಿದೇಶಿ ವ್ಯವಹಾರದ ಇಲಾಖೆಯ ಮೂಲಕ ಮಾತ್ರ ಕಾರ್ಯ ವ್ಯವಹಾರ ನಡೆಯುತ್ತಿತ್ತು. ಮನಸ್ತಾಪ ಬಂದಾಗ ಅವುಗಳನ್ನು ಪತ್ರವ್ಯವಹಾರದ ಮೂಲಕ, ರಾಯಭಾರಿಗಳ ಮೂಲಕ ನಡಸಲಾಗುತ್ತಿತ್ತು. ಬಂಗಾಳದಲ್ಲಿ ಯಾವ ಸೈನ್ಯದ ಬಲವೂ ಇಲ್ಲದೆ ಹಿಂದೂ-ಮುಸ್ಲಿಮರಿಗೆ ಘರ್ಷಣೆ ಉಂಟಾದ 1946ರ ಕಾಲದಲ್ಲಿ ಭಾರತದ ಸ್ವಾಸ್ಥ್ಯವನ್ನು ಕಾಪಾಡಿ ಮುಸ್ಲಿಮರಿಂದ ಹಿಂದೂಗಳನ್ನು, ಹಿಂದೂಗಳಿಂದ ಮುಸ್ಲಿಮರನ್ನು ರಕ್ಷಿಸಿದವರು ಶಸ್ತ್ರರಹಿತರಾದ ಮನುಷ್ಯರು ಗಾಂಧೀಜಿಯವರು. The one man boundary force – ಒಬ್ಬ ವ್ಯಕ್ತಿಯಿಂದಾದ ಗಡಿ ಸೈನ್ಯವೆಂದು ಆ ಮಹಾಶಕ್ತಿಯನ್ನು ಮೌಂಟ್‌ಬ್ಯಾಟನ್ ಕರೆದು ಕೊಂಡಾಡಿದರು. ಅದು ಸಾಕಾಯಿತು, - ಧರ್ಮಕ್ಕೆ, ವ್ಯಕ್ತಿತ್ವಕ್ಕೆ ಬೆಲೆ ಬಂದಾಗ. ಅಮೇರಿಕಾಕ್ಕೂ ಕೆನಡಾಕ್ಕೂ ನಡುವೆ ನಾಲ್ಕು ಸಾವಿರ ಮೈಲಿ ಗಡಿಯಿದೆ. ಅದನ್ನು ಕಾಯಲು ಗುಂಡಿಲ್ಲ, ಕೋವಿಯಿಲ್ಲ, ಸೈನ್ಯವಿಲ್ಲ. ಬಹುಕಾಲದ ಮೈತ್ರಿ, ಆ ರಾಜ್ಯಗಳನ್ನು ನಡಸಿದೆ. ಈವರೆಗೂ ಭಾರತದ ಉತ್ತರ ಮೇರೆಯಲ್ಲಿ ಇಂಥ ಮೈತ್ರಿ ಇಂಥ ಧರ್ಮಬಾಂಧವ್ಯ ವ್ಯವಹಾರವನ್ನು ನಡಸಿತ್ತು. ಇಂದು ಒಂದು ಕಡೆ ಟಿಬೆಟ್ಟಿನಲ್ಲಿ ಇನ್ನೊಬ್ಬರ ಗೋಜಿಗೂ ಅವಕಾಶ ಕೊಡದಂತೆ ಮುದ್ರೆ ಹಾಕಬೇಕೆಂದು ಚೀಣದವರು ಈ ಗಡಿಯ ಬಿಗಿಪನ್ನು ಹೆಚ್ಚಿಸುತ್ತಿರಬಹುದು. ತಮ್ಮದೆಂಬ ಭಾಗ ನಮ್ಮ ಕೈಯಲ್ಲಿರುವಾಗ ಅದನ್ನು ತಮ್ಮ ವಶಕ್ಕೆ ತೆಗೆದುಕೊಳ್ಳಲು ಅಗತ್ಯ ತೋರಿರಬಹುದು. ಆದರೆ ಸಂಧಾನದ ಮೂಲಕ, ಶಾಂತಿ ಸೌಹಾರ್ದದ ಮೂಲಕ ನಡೆಯಬಹುದಾಗಿದ್ದ ಕಾರ್ಯ ವಿರಸಕ್ಕೂ ಅಮೈತ್ರಿಗೂ ಅವಕಾಶ ಕೊಟ್ಟಿದೆ. ಅವರಿಗೆ ಅಲ್ಲಿ ಬಂದು ನೆಲೆಸಲು ಸಕಲ ಸೌಲಭ್ಯಗಳಿವೆ. ಹತ್ತು ಕೋಟಿ ಜನ ಸತ್ತರೂ ಅವರಿಗೆ ನಷ್ಟವಿಲ್ಲ. ಇನ್ನೂ ನಲವತ್ತು ಕೋಟಿ ಜನದ ಸಂಖ್ಯಾಬಲ ಚೀಣಕ್ಕಿರುತ್ತದೆ. ತಮಗೆ ಬೇಕಾದ ಎಲ್ಲವನ್ನೂ ಸುಲಭವಾಗಿ ಅಲ್ಲಿ ಜಮಾಯಿಸಿ ನಮ್ಮನ್ನು ಬೆದರಿಸಬಲ್ಲ ಅನುಕೂಲವಿದೆ.

ನಮಗೋ ನೂರಾರು ಮೈಲಿಗಳ ದೂರ ಎತ್ತರವಾದ ಬೆಟ್ಟ, ಕಣಿವೆ, ಕಾಡುಗಳನ್ನು ದಾಟಿ ಆ ಗಡಿಯ ಪ್ರದೇಶವನ್ನು ಸಾರಬೇಕಾದ ಅಸೌಲಭ್ಯವಿದೆ. ಅಲ್ಲಿಗೆ ಜನರನ್ನು,

ಸಾಮಗ್ರಿಗಳನ್ನು ಸಾಗಿಸಲು ಸಂಪತ್ತಿ, ಸೌಕರ್ಯಗಳಿಲ್ಲ. ಹಿಮಾಲಯ ದಕ್ಷಿಣದಲ್ಲಿನ ಭರತ ಖಂಡದವರು ಯಾರೂ ಹಿಮಾಲಯದ ಆ ಚಳಿಯಲ್ಲಿ ಬದುಕಲು ಕೂಡ ಅರಿಯರು! ಸರಾಸರಿ 10-14,000 ಅಡಿ ಎತ್ತರಕ್ಕೆ ಮೀರಿದ ಈ ಪ್ರದೇಶದಲ್ಲಿ ಸಂಚಾರ ಮಾಡಿ ಸೈನ್ಯಗಳನ್ನು ಹಂಚುವುದೂ, ಒಟ್ಟುವುದೂ, ಯುದ್ಧ ಕಾರ್ಯವನ್ನು ಯಶಸ್ವಿಯಾಗಿ ನೆರವೇರಿಸವುದೂ ಬಾಯಿ ಮಾತಿನ ಕೆಲಸವಲ್ಲ. ಪತ್ರಿಕೆಗಳಿಗೆ ಈ ಲೇಖನ ಬರೆವಷ್ಟೂ ಸುಲಭವಲ್ಲ. ಪ್ರಧಾನಿ ನೆಹರು ಅವರು ದುರ್ಭರ ಕಾರ್ಯವನ್ನು ಕೈಕೊಂಡು ರಕ್ಷಣೆಗೆ ಮಾಡಿರುವ ಈ ಏರ್ಪಾಡಿಗೆ ಜನ ಹೆಚ್ಚು ದೊಡ್ಡತನದಿಂದ ಒಲಿದು ಬೆಂಬಲಿಗರಾಗಬೇಕು.

ಖಚಿತವಾಗಿ ಗುರುತಾಗದ, ವಿವಾದಗ್ರಸ್ತವಾದ, 2,500 ಮೈಲಿ ನೆಲಸಿನ ಆ ಗಡಿ ಪ್ರದೇಶದಲ್ಲಿ ಉದ್ದಕ್ಕೂ ಸೈನ್ಯ ನಿಲ್ಲಿಸಿ ಯುದ್ಧಕಾರ್ಯದಲ್ಲಿ ನಿಷ್ಣಾತರಾಗುತ್ತೇವೆ ಎಂಬ ಮಂಕುತನವನ್ನೂ ಅತಿಬೋಧಗಳನ್ನೂ ಅರ್ಥಮಾಡಿಕೊಳ್ಳುವುದು ಅಗತ್ಯ. ಈ ನಡುವೆ ನಮ್ಮ ಸೈನ್ಯವನ್ನು ತರಬೇತು ಮಾಡಿ, ಯುದ್ಧ ತಂತ್ರ ಬೆಳಸೋಣ. ಯಂತ್ರೋದ್ಯೋಗದ ಉತ್ಪತ್ತಿಯನ್ನು ಬೃಹತ್ ಪ್ರಮಾಣದಲ್ಲಿ ತಯಾರಿಸೋಣ. ಭಾರತದ ಶಿಸ್ತನ್ನು ಐಕಮತ್ಯವನ್ನು ಬೆಳಸಿ, ರಾಷ್ಟ್ರರಕ್ಷಣೆ ಕಾರ್ಯದಲ್ಲಿ ನೆರವಾಗಿ, ಸಂಧಾನ ಮಾರ್ಗದಿಂದ ನಿರ್ಣಯವಾಗುವುದಾದರೆ ಆ ರೀತಿಯಲ್ಲಿ ಆಪತ್ತನ್ನು ನಿವಾರಿಸೋಣ. ಹಿಂದೆ ಒಂದು ಸಲ ಲೋಕಸಂಸ್ಥೆಯಿಂದ ಪ್ರಯೋಜನವೇನಾಗಿದೆ ಎಂದು ಯಾರೋ ಪ್ರಶ್ನಿಸಿದಾಗ ಲೋಕದಲ್ಲಿ ಯುದ್ಧದ ಭಯಗಳನ್ನು ಅದು ತಪ್ಪಿಸಿದೆ, ಇಲ್ಲಿ ಕಲಹ ಮಾಡುತ್ತ ಒಪ್ಪಿಗೆ ಬರದೆ ವಾದಗಳನ್ನು ಮುಂದುವರಿಸಿದ್ದಾದರೆ ಲೋಕದ ಕೋಟ್ಯಂತರ ಯುವಕ ಜನರ ಕೊಲೆಯನ್ನು ತಪ್ಪಿಸಿದ್ದೇವೆ ಎಂದು ಉತ್ತರ ಹೇಳಿದ್ದುಂಟು. ಎರಡು ರಾಷ್ಟ್ರದ ಯುವಕರ ಕೊಲೆಯಾಗದೆ ಈ ವಿವಾದ ಪರಿಹಾರವಾಗುವುದಾದರೆ, ಎರಡು ರಾಷ್ಟ್ರವೂ ನೆಮ್ಮದಿಯಲ್ಲಿ ಉಳಿಯುವುದು.

ಇನ್ನೊಂದು ಮಾತು. ಈ ಸಂಬಂಧದಲ್ಲಿ ಧನಬಲ, ಜನಬಲ, ಶಿಕ್ಷಣಗಳಿಗೆ ಸರ್ಕಾರ ಕೋರಿದರೆ, ಅದನ್ನು ಒದಗಿಸುವ ನೆರವನ್ನು ಭಾರತೀಯರು ಕೊಡಬೇಕು. ಭಾರತವನ್ನು ರಕ್ಷಿಸುವುದು ಎಲ್ಲ ಪ್ರಜೆಗಳ ಆದ್ಯ ಕರ್ತವ್ಯ. ಎಲ್ಲ ಯುವಕರಿಗೂ ಸೈನ್ಯ ಶಿಕ್ಷಣ ಕೊಡುವ ಮಾತು ಹಾಗಿರಲಿ, ಕೊಡುತ್ತೇನೆ ಎಂದಾಗ ತೆಗೆದುಕೊಳ್ಳುವುದು ಅಗತ್ಯ. ಇಲ್ಲವಾದರೆ ಮನೆಗೊಬ್ಬರಂತಾದರೂ ಸೈನ್ಯದ ಮೂರು ಭಾಗಕ್ಕೂ, ಶಿಲ್ಪ ತಂತ್ರ ಸಾಗಾಣಿಕೆ ಮುಂತಾದವುಗಳಿಗೂ ಯುವಕರು ಧಾವಿಸಬೇಕು. ಇಷ್ಟು ಜನ ಮುಂದುವರಿದರೆ ಅವರಿಗೆ ಶಿಕ್ಷಣ ದೊರೆಯುವಂತೆ ಸರ್ಕಾರದ ಉತ್ಪತ್ತಿ ಹೆಚ್ಚಬೇಕು. ಇಂಗ್ಲಂಡಲ್ಲಿ ಒಂದು ಆಪನ್ನ ಸಮಯದಲ್ಲಿ ಹೆಚ್ಚು ಜನರಿಗೆ ಯುದ್ಧ ಶಿಕ್ಷಣ ಕೊಡಿ, ಹೆಚ್ಚು ಮಂದಿಯನ್ನು ಯುದ್ಧಕ್ಕೆ ಕಳುಹಿಸಿ ಎಂದಾಗ, ಇಷ್ಟು ಜನಕ್ಕೆ ಚಡ್ಡಿಗಳೆಲ್ಲಿ



ಎಂದುದುಂಟು. ಇನ್ನೊಂದು ಸಲ ನೆಲದಲ್ಲಿ, ಜಲದಲ್ಲಿ, ಇಂಗ್ಲಂಡಲ್ಲಿ, ಆಫ್ರಿಕದಿಂದ ಕೆನಡಾದಿಂದ ಆಸ್ಟ್ರೇಲಿಯಾದಿಂದ ಎಲ್ಲೆಲ್ಲಿಂದಲೂ ಯುದ್ಧ ಮಾಡುತ್ತೇವೆ ಎಂಬ ಮಾತನ್ನು ಸ್ಫೂರ್ತಿಯುತವಾಗಿ ಭಾಷಣ ಮಾಡಿ, ಜನರನ್ನು ಹುರಿದುಂಬಿಸಿ, ವೇದಿಕೆಯಿಂದ ಇಳಿದು ಬಂದು ಚರ್ಚ್‌ಹಿಲರು ಪ್ರಖ್ಯಾತವಾದ ತಮ್ಮ ಚುಟ್ಟ ಹಿಡಿದು 'Ha,ha, ha, ha with soda water bottle & kitchen knives I suppose, Ha, ha' – ‘ಸೋಡಾ ಸೀಸೆಗಳಿಂದಲೂ, ಅಡಿಗೆ ಮನೆಯ ಚಾಕುಗಳಿಂದಲೂ ಎದುರಿಸಬೇಕಲ್ಲವೆ’ – ಎಂದು ತಾವೇ ನಕ್ಕರಂತೆ! ಸಜ್ಜಿನ ಅಗತ್ಯ ಎಷ್ಟು ದೊಡ್ಡದೆಂದೂ ಬರಿಯ ಬಾಯ ಶೌರ್ಯವಾಗದೆಂದೂ ಇದರಿಂದ ತಿಳಿಯಬಹುದಾದೀತು.

❑

# III. ಸಂಕೀರ್ಣ ಬರೆಹ

## 1. ಹಣ–ನಾಣ್ಯಗಳು

ಹಣವೆಂದರೇನು? ನಾಣ್ಯವೆಂದರೇನು? ಇವುಗಳಿಂದ ನಮಗೆ ಉಪಯೋಗ ವೇನು? ಯಾವುದಾದರೂ ದೇಶದ ಹಣ-ನಾಣ್ಯಗಳ ಪದ್ಧತಿಯು ಹೇಗಿರಬೇಕು? – ಎಂಬೀ ವಿಷಯಗಳನ್ನು ತಿಳಿದುಕೊಳ್ಳುವುದು ಎಲ್ಲರಿಗೂ ಅವಶ್ಯಕ. ಆದರೆ ಅತಿಸಾಮಾನ್ಯವಾಗಿ ಪ್ರತಿಯೊಂದು ದೇಶದಲ್ಲಿಯೂ, ಪ್ರತ್ಯಹದಲ್ಲಿಯೂ, ಪ್ರತಿಯೊಬ್ಬನೂ ಚಲಾವಣೆಗೆ ತರುತ್ತಿರುವ ಹಣ-ನಾಣ್ಯಗಳ ವಿಷಯವಾಗಿ ಯಾರು ತಾನೆ ಹೆಚ್ಚಾಗಿ ಏನನ್ನು ಹೇಳಬಲ್ಲರು? - ಎಂದು ಅನೇಕರಿಗೆ ಆಶ್ಚರ್ಯತೋರಬಹುದು. ಆದರೂ ವಿಚಾರದಿಂದ ನೋಡುವವರಿಗೆ ಇದರಲ್ಲಿ ಅನೇಕ ವಿಷಯಗಳಿವೆಯೆಂಬುದು ಗೊತ್ತಾಗುವುದು. ಆ ವಿಶೇಷಾಂಶಗಳನ್ನು ಸಾಧ್ಯವಿರುವಮಟ್ಟಿಗೂ ತಿಳಿದುಕೊಳ್ಳುವುದು ನಮ್ಮ ಕರ್ತವ್ಯ. ಅದನ್ನು ತಿಳಿಯುವುದರಿಂದ ನಮ್ಮ ಲೌಕಿಕ ಜ್ಞಾನವು ಹೆಚ್ಚುವುದು. ಮಾತ್ರವಲ್ಲದೆ, ಅನೇಕ ಸಮಯಗಳಲ್ಲಿ ನಮಗೆ ಲಾಭವೂ ಆಗುವುದು. ಈ ಜ್ಞಾನವು ನಮ್ಮ ದೇಶದ ಪ್ರಜೆಗಳಿಗೆ ಇರಬೇಕಾದುದು ಅತಿಮುಖ್ಯ.

ಬೇರೆ ಬೇರೆ ದೇಶಗಳಲ್ಲಿ ಬೇರೆ ಬೇರೆ ತೆರನಾದ ನಾಣ್ಯಗಳು ಪ್ರಚಾರದಲ್ಲಿವೆ. ನಮ್ಮಲ್ಲಿ ಬಳಕೆಯಲ್ಲಿರುವುವು ರೂಪಾಯಿ-ಆಣೆಗಳು; ಇಂಗ್ಲೆಂಡ್ ದೇಶದಲ್ಲಿಯೂ ಮಿಕ್ಕ ಕೆಲವು ದೇಶಗಳಲ್ಲಿಯೂ ಪೌಂಡು-ಷಿಲಿಂಗುಗಳು; ಅಮೆರಿಕಾ ದೇಶದಲ್ಲಿ ಡಾಲರು-ಸೆಂಟುಗಳು; ಫ್ರಾನ್ಸ್‌ನಲ್ಲಿ ಫ್ರ್ಯಾಂಕುಗಳು, ಜರ್ಮನಿ ದೇಶದಲ್ಲಿ ಮಾರ್ಕುಗಳು; ಜಪಾನಿನಲ್ಲಿ ಯೆನ್ನುಗಳು ಇತ್ಯಾದಿ. ಪ್ರತಿಯೊಂದು ನಾಣ್ಯಕ್ಕೂ, ಒಳದೇಶದಲ್ಲಿಯೂ ದೇಶದ ಹೊರಗಿನ ವ್ಯಾಪಾರಗಳ ಸಂಬಂಧದಲ್ಲಿಯೂ ಬೆಲೆಯಿರುವುದು. ನಾಣ್ಯಗಳಲ್ಲಿ ಕೆಲವು ಬೆಳ್ಳಿಯವು, ಕೆಲವು ಚಿನ್ನದವು, ಮತ್ತೆ ಕೆಲವು ಕಾಗದದ ನಾಣ್ಯಗಳು, ಇನ್ನು ಕೆಲವು ಕೀಳು ಲೋಹಗಳ ನಾಣ್ಯಗಳು. ಆದುದರಿಂದ ಕೆಲವಕ್ಕೆ ಬೆಲೆ ಹೆಚ್ಚು; ಕೆಲವಕ್ಕೆ ಬೆಲೆ ಕಡಿಮೆ. ಒಂದೇ ಕಾಲದಲ್ಲಿ ಕೆಲವು ದೇಶಗಳ ನಾಣ್ಯಗಳಿಗೆ ಮಿಕ್ಕವುಗಳಿಗಿಂತಲೂ ಬೆಲೆ ಗೌರವಗಳು ಜಾಸ್ತಿಯಾಗುತ್ತವೆ. ಒಂದೇ ದೇಶದಲ್ಲಿ ಆ ದೇಶದ ನಾಣ್ಯಗಳಿಗೇ ಕೆಲವು ಕಾಲಗಳಲ್ಲಿ ಹೆಚ್ಚು ಬೆಲೆಯಿರುವುದು. ಮಿಕ್ಕ ಕಾಲಗಳಲ್ಲಿ ಹೀಗಿಲ್ಲ. ಈ ವಿಧಾನ ವ್ಯತ್ಯಾಸಗಳು ಉಂಟಾಗಲು ಕಾರಣವೇನು? ಇವು ಸ್ವಾಭಾವಿಕವೆ?



ಇವುಗಳಿಂದೇನಾದರೂ ಹಾನಿಯುಂಟೆ? ಅಂಥಾ ಹಾನಿಯಿದ್ದಲ್ಲಿ ಅದು ನಿವಾರ್ಯವೆ? – ಎಂಬುದನ್ನೂ ನಾವು ಪರ್ಯಾಲೋಚಿಸಬೇಕು.

ಸಾಮಾನ್ಯವಾಗಿ ಪ್ರತಿದಿನದಲ್ಲಿಯೂ ದೇಶ ದೇಶಗಳವರಿಗೆ ಯಾವುದಾದರೊಂದು ವಿಧವಾದ ವ್ಯಾಪಾರವು ನಡೆಯುತ್ತಲೇ ಇರುತ್ತದೆ. ಅನ್ಯದೇಶಗಳಿಂದ ಸಾಮಾನುಗಳನ್ನು ತರಿಸುವುದೂ ಅನ್ಯದೇಶಗಳಿಗೆ ಸಾಮಾನುಗಳನ್ನು ಕಳುಹಿಸುವುದೂ ಎಲ್ಲರೂ ಕಂಡಿರುವ ವಿಷಯ. ಆದರೆ ಸಾಮಾನುಗಳನ್ನು ತರಿಸಿಕೊಳ್ಳುವವರು ಕಳುಹಿಸಿದವರಿಗೆ ಹಣ ಕೊಡಬೇಕು; ತಾವು ಕಳುಹಿಸಿದ ಸಾಮಾನುಗಳಿಗೆ ಹಣ ಪಡೆಯಬೇಕು; ಎಂದರೆ ಅವರಿಗೆ ಬೇಕಾದ ನಾಣ್ಯಗಳಲ್ಲಿ ಅವರಿಗೆ ಸುಲಭವಾದ ರೀತಿಯಲ್ಲಿ ಮೌಲ್ಯಗಳನ್ನು ಪಡೆಯಬೇಕು. ಆದರೆ ಅನೇಕ ಸಂದರ್ಭಗಳಲ್ಲಿ ಇತರ ದೇಶದ ನಾಣ್ಯಗಳು ನಮಗೆ ಕೆಲಸಕ್ಕೆ ಬರುವುದಿಲ್ಲ. ನಮ್ಮ ನಾಣ್ಯಗಳು ಇತರರಿಗೆ ಉಪಯುಕ್ತವಾಗುವುದಿಲ್ಲ. ಹೀಗಿರುವಲ್ಲಿ ಕ್ರಯ ವಿಕ್ರಯಗಳು ನಡೆಯುವ ಬಗೆ ಹೇಗೆ? ಒಬ್ಬರ ನಾಣ್ಯಗಳನ್ನು ಮತ್ತೊಬ್ಬರೊಲ್ಲದಿದ್ದರೆ ಪರಸ್ಪರ ಋಣಗಳನ್ನು ತೀರಿಸುವುದು ಹೇಗೆ? ಹಾಗೆ ಮಾಡುವುದಕ್ಕೆ (ಋಣ ವಿಮೋಚನೆ) ಸಹಾಯ ಸಾಮಗ್ರಿಗಳಾವುವು? ನಮ್ಮ ನಾಣ್ಯಗಳನ್ನೆಷ್ಟು ಕೊಟ್ಟರೆ ಅವರ ನಾಣ್ಯಗಳು ನಮಗೆಷ್ಟು ದೊರೆಯುವುವು? ನಾಣ್ಯಗಳ ಪರಸ್ಪರ ಯೋಗ್ಯತೆಗಳನ್ನು ನಿರ್ಣಯಿಸುವುದು ಹೇಗೆ-ಯಾವ ಸೂತ್ರ ಪದ್ಧತಿಯ ಆಧಾರದ ಮೇಲೆ? – ಎಂಬುವೂ ವಿಚಾರಾರ್ಹವಾದ ವಿಷಯಗಳು.

ಅದೂ ಅಲ್ಲದೆ ಪ್ರತಿಯೊಂದು ದೇಶದಲ್ಲಿಯೂ ಧಾರಣೆವಾಸಿಗಳು ಏರುತ್ತ ತಗ್ಗುತ್ತ ಇರುತ್ತವೆ. ಒಂದೊಂದು ಸಲ ರೂಪಾಯಿಗೆ 8 ಸೇರು ಅಕ್ಕಿ ದೊರೆಯುವುದು; ಮತ್ತೊಂದು ಸಲ ಸಿಕ್ಕುವುದು ಮೂರೇ ಸೇರು. ಮಾಸವೊಂದಕ್ಕೆ 25 ರೂಪಾಯಿಗಳ ಸಂಬಳ ತರುತ್ತಿದ್ದ ನಮ್ಮ ಪೂರ್ವಿಕರಲ್ಲನೇಕರು 10-15 ಜನರಿದ್ದ ಕುಟುಂಬಗಳನ್ನು ತೊಂದರೆಯಿಲ್ಲದೆ ಸುಖವಾಗಿ ನಡೆಯಿಸುತ್ತಿದ್ದರೆಂದು ಹೇಳುವುದನ್ನು ನಾವು ಕೇಳುತ್ತಿರುವೆವು. ಈಗ ನಮ್ಮ ಕಾಲದಲ್ಲಿ ತಿಂಗಳೊಂದಕ್ಕೆ 150 ರೂಪಾಯಿಗಳ ಸಂಬಳ ತೆಗೆಯುವ ದೊಡ್ಡ ಮನುಷ್ಯನಿಗೂ 8-10 ಜನರ ಉದರ ಪೋಷಣೆ ಮಾಡುವುದು ದುಸ್ತರವಾಗಿರುವುದು. ಒಂದಕ್ಕಾರರಷ್ಟು ಸಂಪಾದನೆಯಿರುವವನಿಗೆ ಕಷ್ಟವೇಕೆ? ಹಿಂದಿನ ಕಾಲದ 25 ರೂಪಾಯಿಗಳ ಹೆಚ್ಚಿಗೆಯೇನು? ಈಗಿನ 150 ರೂಪಾಯಿಗಳ ಕಡಿಮೆಯೇನು? - ಎಂಬ ವಿಚಾರಗಳೂ ಸ್ವಾಭಾವಿಕವಾಗಿ ಮನಸ್ಸಿಗೆ ಬರಲೇ ಬರುವುವು. ವೃದ್ಧರಾರಾದರೂ ನಮ್ಮ ಇದಿರಿನಲ್ಲಿರುವಾಗ ನಮ್ಮ ಮನಸ್ಸಿನಲ್ಲಿ ಮೇಲೆ ಮೇಲೆ ಉದಯಿಸುತ್ತಿರುವ ಪ್ರಶ್ನೆಗಳಿಂಥವೆಂಬುದನ್ನು ನಾವು ಅವರಿಗೆ ತಿಳುಹಿಸಿದರೆ, ಅವರು ನಮ್ಮನ್ನು ಕುರಿತು "ಅಯ್ಯಾ, ನಮ್ಮ ಕಾಲದಲ್ಲಿ ಈಗಿರುವಷ್ಟು ಹಣವೇ ಇರಲಿಲ್ಲ. 100 ರೂಪಾಯಿಗಳಿದ್ದವನು ಭಾರಿ ಧನಿಕನೆಂದು ಗಣ್ಯನಾಗಿರು

ತ್ತಿದ್ದನು. ಈಗ ಹಾಗಿದೆಯೇನು? ಎಲ್ಲಿ ನೋಡಿದರೂ ರೂಪಾಯಿಗಳೇ. ನಮಗೆ ಭೋಗ್ಯವಸ್ತುಗಳಿಗೇನೂ ಕೊರತೆಯಿರಲಿಲ್ಲ. ನಿಮ್ಮ ಕಾಲಕ್ಕೂ ನಮ್ಮ ಕಾಲಕ್ಕೂ ಒಂದೇ ವ್ಯತ್ಯಾಸ: ನಮ್ಮ ಕಾಲದಲ್ಲಿ ಬೇಕಾದಷ್ಟು ಭೋಗ ಸಾಮಗ್ರಿಗಳಿದ್ದವು, ಇಷ್ಟು ಹಣವಿರಲಿಲ್ಲ, ನಿಮ್ಮ ಕಾಲದಲ್ಲಿ ಬೇಕಾದಷ್ಟು ಹಣವಿದೆ, ಆ ಸಾಮಗ್ರಿಗಳಿಲ್ಲ, ಅಷ್ಟೇ" ಎನ್ನುವರು. ಇವುಗಳ ವಿಷಯವಾಗೆಲ್ಲ ಯೋಚನೆ ಮಾಡುತ್ತ ಕುಳಿತಲ್ಲಿ ಅತಿ ಸಾಮಾನ್ಯವಾಗಿ ಅಲ್ಪವಾಗಿ ಕಾಣುತ್ತಿದ್ದ ಒಂದೊಂದು ವಿಷಯವೂ ಮಹತ್ತರವಾದ ಆಶ್ಚರ್ಯಕರವಾದ ಚರಿತ್ರೆಯನ್ನೂ ಗುಣವಿಶೇಷಗಳನ್ನೂ ಒಳಗೊಂಡಿರುವಂತೆ ತೋರಿ ಬರುವುದು.

**ವಿನಿಮಯ –** ಯಾವ ನಾಣ್ಯಗಳ ಪ್ರಚಾರವೂ ಇಲ್ಲದೆಯೇ ಸಾಮಾನುಗಳನ್ನು ಪಡೆಯುವ ಪದ್ಧತಿಯೂ ಒಂದುಂಟು. ಹಳ್ಳಿಗಳಲ್ಲಿಯೂ, ಪಟ್ಟಣಗಳಲ್ಲಿ ಕೆಲವು ವಿಷಯಗಳಲ್ಲಿಯೂ, ಈ ರೀತಿಯಾದ ವ್ಯಾಪಾರ ವ್ಯವಹಾರಗಳು ಈಗಲೂ ಕಂಡು ಬರುವುವು. ಅಕ್ಕಿ ರಾಗಿಗಳನ್ನು ಹಾಕಿ ಸೌದೆ ತರಕಾರಿಗಳನ್ನು ಪಡೆಯುವುದು ಸಾಮಾನ್ಯ; ಬಟ್ಟೆ ಜರತಾರಿಗಳನ್ನು ಕೊಟ್ಟು ಪಾತ್ರೆ ಪದಾರ್ಥಗಳನ್ನು ತೆಗೆದುಕೊಳ್ಳುವುದೂ ಹಾಗೆಯೇ. ಈ ಬದಲಾಬದಲಿಯ ಪದ್ಧತಿಗೆ 'ವಿನಿಮಯ' ವೆಂದು ಹೆಸರು. ಆದರೆ ನವನಾಗರಿಕ ಪ್ರಪಂಚದಲ್ಲಿ ಈ ವಿಧವಾದ ವ್ಯವಹಾರಗಳು ಕಮ್ಮಿ. ಇದರಲ್ಲಿ ಅನಾನುಕೂಲಗಳು ಬಹಳ. ಈ ವಿನಿಮಯಕ್ಕಿರಬೇಕಾದ ಸಂಗತಿಗಳಾವುವೆಂದರೆ : ಎರಡು ವಸ್ತುಗಳನ್ನುಳ್ಳ ಇಬ್ಬರಾದರೂ ಒಂದೆಡೆ ಸೇರಬೇಕು; ಒಬ್ಬನಲ್ಲಿರುವ ಪದಾರ್ಥವು ಮತ್ತೊಬ್ಬನಿಗೆ ಬೇಕಾಗಿರಬೇಕು; ತನ್ನಲ್ಲಿರುವ ಪದಾರ್ಥಗಳನ್ನು ಅವನಿಗೆ ಕೊಟ್ಟು ಅವನಲ್ಲಿರುವುದನ್ನು ಪಡೆಯಲು ಇವನಿಗೆ ಇಷ್ಟವಿರಬೇಕು. ಇಬ್ಬರ ದೃಷ್ಟಿಯಲ್ಲಿಯೂ ವಸ್ತುಗಳ ಪರಸ್ಪರ ಬೆಲೆ ಸುಮಾರು ಸಮವೆಂದು ತೋರಿ ಒಬ್ಬನಲ್ಲಿರುವುದನ್ನು ಮತ್ತೊಬ್ಬನು ಪಡೆಯಬೇಕು.

ಇಷ್ಟು ಅನನುಕೂಲಗಳಿರುವಲ್ಲಿ ನಮ್ಮ ಕಾಲದ ಅದ್ಭುತ ಪರಿಮಾಣದ ವ್ಯಾಪಾರಗಳಿಗೆ ಶುದ್ಧವಿನಿಮಯ ಪದ್ಧತಿಯಿಂದ ಅಡ್ಡಿಬರುವುದು ಸ್ವಾಭಾವಿಕವಾಗಿದೆ. ಈ ತೊಂದರೆಗಳನ್ನು ನಿವಾರಿಸುವುದಕ್ಕಾಗಿಯೇ ಎಲ್ಲ ದೇಶಗಳಲ್ಲಿಯೂ ಯಾವುದಾದ ರೊಂದು ವಿಧವಾದ ಹಣದ ಪದಾರ್ಥವನ್ನು ಉಪಯೋಗಿಸುವುದಕ್ಕೆ ಪ್ರಾರಂಭಿಸಿದರು. ಆ ಪದಾರ್ಥವು ಸರ್ವಸಮ್ಮತವಾದಲ್ಲಿ ಎಲ್ಲಾ ವ್ಯಾಪಾರಗಳಿಗೂ ವಸ್ತುಗಳ ಪರಸ್ಪರ ಮೌಲ್ಯವನ್ನು ನಿರ್ಧರಿಸತಕ್ಕ ಪ್ರಮಿತಿ (standard) ಯಾಗಿಯೂ, ವಿನಿಮಯಕ್ಕೆ ತಕ್ಕ ಸಾಧನವಾಗಿಯೂ ಇರುವುದು. ಇದನ್ನು ಜನರು ತಿಳಿದು, ತಮ್ಮಲ್ಲಿ ಬಳಕೆಯಲ್ಲಿರುವ ಯಾವ ವಸ್ತುವಿಗೆ ಜನರಲ್ಲಿ ಹೆಚ್ಚು ಲೋಭವಿದೆಯೋ, ಯಾವುದನ್ನು ಕೊಟ್ಟಲ್ಲಿ ಇತರೆಲ್ಲರೂ ತಮ್ಮಲ್ಲಿರುವ ವಸ್ತುಗಳನ್ನು ಕ್ರಯಕ್ಕೆ ಕೊಡಲು ಸಿದ್ಧರಾಗಿರುತ್ತಿದ್ದರೋ, ಅಂಥಾ ಪದಾರ್ಥವನ್ನು 'ಹಣ'ವಾಗಿ ಉಪಯೋಗಿಸುತ್ತಿದ್ದರು. ಚರ್ಮ, ಕವಡೆ,



ದನ, ಬಿಲ್ಲು, ಅಂಬುಗಳು, ಹೊಗೆಸೊಪ್ಪು, ಧಾನ್ಯಗಳು, ಬಟ್ಟೆ – ಈ ವಿಧವಾಗಿ ನಾನಾ ಪ್ರದೇಶಗಳಲ್ಲಿ ನಾನಾ ವಿಧವಾದ ವಸ್ತುಗಳು ಜನರಿಂದ ಗಣ್ಯವಾಗಿದ್ದು ಚಲಾವಣೆ ಯಲ್ಲಿರುತ್ತಿದ್ದುವು. ಹಾಗೂ ಅನನುಕೂಲಗಳು ತೋರಿಬರಲು, ಸರ್ವದಾ ಸರ್ವರಿಂದಲೂ ಬಯಸಲ್ಪಡುತ್ತಲೇ ಇರುವ, ಸರ್ವಕಾಲದಲ್ಲಿಯೂ ಬೆಲೆಗೊಡುವ, ಯಾವುದಾದ ರೊಂದು ಪದಾರ್ಥವನ್ನು ಹಣವಾಗಿ ಉಪಯೋಗಿಸುವುದಕ್ಕೆ ಪ್ರಯತ್ನಗಳು ನಡೆಯುತ್ತಲೇ ಇರಲಾಗಿ, ಕೊನೆಗೆ ಸರ್ವಸಮ್ಮತವಾಗಿ ಬೆಳ್ಳಿ ಬಂಗಾರಗಳು ಚಲಾವಣೆಗೆ ಬಂದವು.

ಮಿಕ್ಕ ಹಣದ ವಸ್ತುಗಳಲ್ಲಿಲ್ಲದ ಅನೇಕ ಸುಗುಣಗಳು ಈ ಲೋಹಗಳಲ್ಲಿರುವುವು. ಎಷ್ಟು ಕಾಲ ಒಂದೆಡೆ ಮುಚ್ಚಿಟ್ಟಿದ್ದರೂ, ಭೂಮಿಯಲ್ಲಿ ಹೂತಿಟ್ಟರೂ, ಇವು ಕೆಡುವುದಿಲ್ಲ. ಎಲ್ಲ ದೇಶಗಳ ಜನರೂ ಇವನ್ನು ಬಹಳವಾಗಿ ಅಪೇಕ್ಷಿಸುವುದಲ್ಲದೆ ತಮಗೆ ಬೇಕಾದುದೆಲ್ಲವನ್ನೂ ಇವುಗಳ ರೂಪದಲ್ಲಿ ತೆಗೆದುಕೊಳ್ಳಲು ಸಿದ್ಧರಾಗಿರುವರು. ಬೆಳ್ಳಿ ಬಂಗಾರಗಳಿದ್ದರೆ ಯಾವನಾದರೂ ಯಾವಾಗ ಬೇಕಾದರೂ ತನಗೆ ಬೇಕಾದುದನ್ನು ಪಡೆಯಬಹುದೆಂದು ಜನರಿಗೆ ದೃಢವಾಗಿ ನಂಬುಗೆ. ಇವು ಅಲ್ಪಪರಿಮಾಣದಲ್ಲಿ ಹೆಚ್ಚು ಬೆಲೆಬಾಳುವುವು; ಹೆಚ್ಚು ಬೆಲೆ ತರುವುವು. ಇವನ್ನು ಸುಲಭವಾಗಿ ಪರದೇಶಗಳಿಗೆ ಸಾಗಿಸಬಹುದು. ಎಲ್ಲಾ ದೇಶಗಳಲ್ಲಿ ಸಿಕ್ಕುವ ಚಿನ್ನ ಬೆಳ್ಳಿಗಳೂ ಸುಮಾರು ಒಂದೇ ಬಣ್ಣ ಯೋಗ್ಯತೆಗಳುಳ್ಳವುಗಳಾಗಿರುವುದರಿಂದ ಅವನ್ನು ಸುಲಭವಾಗಿ ಗುರುತಿಸ ಬಹುದು. ಅವುಗಳನ್ನು ಸುಲಭವಾಗಿ ಕರಗಿಸಿ ಯಾವ ರೀತಿಯಲ್ಲಾದರೂ ಎಳೆದು, ಬಡಿದು, ಮುದ್ರೆಯೊತ್ತಿ, ಯಾವ ರೂಪಕ್ಕಾದರೂ ತರಬಹುದು. ಇಷ್ಟೇ ಅಲ್ಲ, ಜನ ಸಾಮಾನ್ಯರು ತಮಗೆ ಬೇಕಾದ – ತಮಗೆ ಪ್ರತಿಷ್ಠೆಯನ್ನು ತರುವ – ಉತ್ತಮ ಬೆಲೆಯ ಪಾತ್ರೆ, ಪದಾರ್ಥ, ಒಡವೆ, ಆಭರಣಗಳೆಲ್ಲವನ್ನೂ ಬೆಳ್ಳಿ ಬಂಗಾರಗಳಿಂದಲೇ ಮಾಡಿಸುವುದರಿಂದ, ಈ ಲೋಹಗಳು ಎಷ್ಟು ಪರಿಮಾಣದಲ್ಲಿ ದೊರೆತರೂ ಅದಕ್ಕೆ ಗಿರಾಕಿ ಇದ್ದೇ ಇರುವುದಲ್ಲದೆ, ಅವನ್ನು ನಾಣ್ಯರೂಪದಲ್ಲಿ ಸರ್ಕಾರದವರು ಪ್ರಚಾರಕ್ಕೆ ತರದಿದ್ದರೂ ಕೂಡ ಅವು ಸಮಸ್ತ ಜನರ ಮನಸ್ಸನ್ನೂ ಆಕರ್ಷಣೆ ಮಾಡಿ, ಅವರ ಆದರ ವಿಶ್ವಾಸಗಳನ್ನು ಗಳಿಸಿರುವುದರಿಂದ, ಅವುಗಳ ಬೆಲೆ ಗೌರವಗಳಿಗೆ ಚ್ಯುತಿಯೇ ಇರುವುದಿಲ್ಲ. ಇದಲ್ಲದೆ, ಹೆಚ್ಚು ಬೆಲೆಯ 'ಪ್ಲಾಟಿನಂ' ಮೊದಲಾದ ಲೋಹಗಳಂತೆ ಚಿನ್ನ ಬೆಳ್ಳಿಗಳು ಅತಿ ಅಪೂರ್ವವೂ ಅಲ್ಲ, ಕಬ್ಬಿಣ ಕಲ್ಲಿದ್ದಲುಗಳಷ್ಟು ಹೇರಳವೂ ಅಲ್ಲ. ಎಲ್ಲರ ಮೆಚ್ಚಿಗೆಯನ್ನೂ ಸಂಪಾದಿಸಿ ಪರಿಗಣಿತವಾಗಿರುವುದರಿಂದಲೇ ಈ ಲೋಹಗಳು ಹಣದ ರೂಪದಲ್ಲಿ ಎಲ್ಲೆಲ್ಲಿಯೂ ಪ್ರಚಾರಕ್ಕೆ ಬಂದಿರುವುದು. ಹಿಂದಿನ ಕಾಲದ ಹಣದ ವಸ್ತುಗಳಲ್ಲೆಲ್ಲಾ ಏನೊ ಕುಂದುಕೊರತೆಗಳು ಕಂಡು ಬಂದಿರುವುದ ರಿಂದಲೇ ಅವುಗಳಿಗೆ ಪ್ರಾಶಸ್ತ್ಯ ಕಡಿಮೆಯಾಗಿ ಚಿನ್ನ ಬೆಳ್ಳಿಗಳಿಗೆ ಉತ್ಕರ್ಷೆ ಬಂದದ್ದು.

ಬೆಳ್ಳಿ ಬಂಗಾರಗಳನ್ನು ನಾಣ್ಯರೂಪದಲ್ಲಿ ಉಪಯೋಗಿಸುವುದಕ್ಕೆ ಮೊದಲು ಮಾಡಿದ ಕಾಲದಿಂದಲೂ ನಾಣ್ಯಗಳ ಆಕಾರದಲ್ಲಿ ಬದಲಾವಣೆಗಳು ಆಗುತ್ತಲೇ

ಇರುವುವು. ಹಣವೂ ಸಂಪತ್ತೂ ಎಲ್ಲರ ಆಸೆಗೂ ಲಕ್ಷ್ಯಗಳು. ಎಲ್ಲರಿಗೂ ಅವು ಬೇಕು. ಸನ್ಮಾರ್ಗದಲ್ಲಿಲ್ಲದಿದ್ದರೆ ಕುಟಿಲ ಮಾರ್ಗದಲ್ಲಿಯಾದರೂ ಅವನ್ನು ಪಡೆಯುವುದು ಅವಶ್ಯಕವೆಂದು ತಿಳಿದವರು ಎಲ್ಲಾ ಕಾಲಗಳಲ್ಲಿಯೂ ಇದ್ದೇ ಇರುವರು. ದುರಾಶೆಗಳ ಬಲದಿಂದ ಸುಳ್ಳು ಹಣವನ್ನು ಚಲಾವಣೆಗೆ ತರುವ ಪ್ರಯತ್ನಗಳು ಆಗಾಗ್ಗೆ ಕಂಡು ಬರುತ್ತಲೇ ಇರುವುದರಿಂದ, ಸರ್ಕಾರದ[1] ಟಂಕಸಾಲೆಗಳಲ್ಲಿ ಮುದ್ರೆಗಳ ಬಗ್ಗೆ ಹೊಸಹೊಸ ಮಾದರಿಗಳೂ ಅಚ್ಚುಗಳೂ ತಯಾರಾಗುತ್ತಲೇ ಇರುವುವು. ಮೊದಲು ಮೊದಲು ಈ ಲೋಹಗಳ ಗಟ್ಟಿಗಳೇ ಚಲಾವಣೆಯಲ್ಲಿದ್ದುವು. ವ್ಯಾಪಾರಿಗಳು ಸಣ್ಣ ಸಣ್ಣ ತ್ರಾಸು ಒರೆಗಲ್ಲುಗಳನ್ನು ಇಟ್ಟುಕೊಂಡು ಲೋಹದ ತೂಕ ಬಣ್ಣಗಳ ಮೇಲೆ ತಮ್ಮ ಮೌಲ್ಯ ಗಳನ್ನು ತೆಗೆದುಕೊಳ್ಳುತ್ತಿದ್ದರು. ಈ ಪದ್ಧತಿಯೂ ಅಸಮರ್ಪಕವಾಗಿ ತೋರಿಬಂದದ್ದರಿಂದ ಲೋಹವನ್ನು ತಗಡು ಬಡಿದು, ಸುಮಾರು ಬಿಲ್ಲೆಯ ಆಕಾರದಲ್ಲಿ ನಾಣ್ಯಗಳನ್ನು ರೂಢಿಗೆ ತಂದರು.  ಕಾಲಕ್ರಮದಲ್ಲಿ ಈ ನಾಣ್ಯಗಳ ಮೇಲೆ ಸಂಕ್ಷೇಪವಾಗಿ ಅದರ ಹೆಸರು, ಮುದ್ರಿಸಿದ ವರ್ಷ, ದೇಶದ ಹೆಗ್ಗುರುತು ಇತ್ಯಾದಿ ಮುದ್ರಾವಿಶೇಷಗಳು ಜಾರಿಗೆ ಬಂದವು. ಅಲ್ಲಿಗೂ ತುಂಟರ ಹಾವಳಿ ನಿಲ್ಲದೆ, ಕೆಲವರು ನಾಣ್ಯದ ಸ್ವಲ್ಪ ಭಾಗವನ್ನು ಕತ್ತರಿಸಿಕೊಳ್ಳುತ್ತಿದ್ದುದರಿಂದಲೂ, ಗಟ್ಟಿಯಾದ ವಸ್ತುವಿನ ಮೇಲೆ ಅದನ್ನುಜ್ಜಿ ಸವೆಯಿಸಿ ಲೋಹವನ್ನು ತೆಗೆದುಕೊಳ್ಳುವ ಯತ್ನಗಳನ್ನು ನಡೆಯಿಸುತ್ತಿದ್ದುದರಿಂದಲೂ, ನಾಣ್ಯಕ್ಕೆ ನಮ್ಮ ಕಾಲದಲ್ಲಿಯ ಆಕಾರವು ಕ್ರಮವಾಗಿ ಚಾಲ್ತಿಗೆ ಬಂತು. ಎಂದರೆ ನಾಣ್ಯದ ಒಳ ಅಂಗಳದಲ್ಲಿ ಚಪ್ಪಟೆ, ಇರ್ಕಡೆಗಳಲ್ಲಿಯೂ ವಿಶೇಷ ಗುರುತುಗಳು, ಹೊರ ಅಂಚಿನಲ್ಲಿ ಏರು, ನಾಣ್ಯದ ಹೊರಸುತ್ತಿನಲ್ಲಿ ಒಂದೇ ಸಮನಾದ ಗೆರೆಗಳು – ಈ ಲಕ್ಷಣಗಳೊಡನೆ ನಾಣ್ಯಗಳು ಅಚ್ಚಾಗುತ್ತಾ ಬಂದವು.

ಪ್ರಪಂಚದಲ್ಲಿ ನಾನಾ ವಿಧವಾದ ನಾಣ್ಯಗಳಿರುವುವೆಂದು ಮೇಲೆ ಸೂಚಿಸಿದೆಯಷ್ಟೆ. ಈ ನಾಣ್ಯಗಳಲ್ಲಿ ಕೆಲವು ಮಾತ್ರ ಪ್ರಧಾನ ನಾಣ್ಯಗಳು; ಮಿಕ್ಕವು ಅಂಶ ಅಥವಾ ಸಹಾಯಕ ನಾಣ್ಯಗಳು. ಪ್ರಧಾನ  ನಾಣ್ಯಗಳೆಲ್ಲವೂ ಒಂದೇ ಲೋಹದವುಗಳಾಗಿದ್ದರೆ, ಈ ಪದ್ಧತಿಯಿರುವ ದೇಶಕ್ಕೆ ಏಕಲೋಹಪ್ರಮಿತಿಯ (ಮಾನೋ ಮೆಟಲಿಸ್ಟ್) ದೇಶವೆಂದೂ, ಎರಡು ಲೋಹಗಳ ಪ್ರಧಾನ ನಾಣ್ಯಗಳನ್ನುಳ್ಳ ದೇಶಕ್ಕೆ ಲೋಹದ್ವಯಪ್ರಮಿತಿಯ (ಬೈ ಮೆಟಲಿಸ್ಟ್) ದೇಶವೆಂದೂ ಹೆಸರು.[2]

1. ಅತಿ ಪ್ರಾಚೀನಕಾಲದಿಂದಲೂ ನಾಣ್ಯಗಳನ್ನು ಮುದ್ರಿಸಿ ಪ್ರಚಾರಕ್ಕೆ ತರುವ ವಿಷಯದಲ್ಲಿ ಎಲ್ಲಾ ಸರ್ಕಾರಗಳವರೂ ಸರ್ವಸ್ವತಂತ್ರವಹಿಸುವುದು ಪದ್ಧತಿ. ಹಾಗೆ ಮಾಡುವುದರಿಂದ ಸರ್ಕಾರಕ್ಕೆ ಲಾಭವೂ ಪ್ರಜೆಗಳಿಗೆ ಕ್ಷೇಮವೂ ಉಂಟು.
2. ಇಂಡಿಯಾ ದೇಶದ ನಾಣ್ಯ ಪದ್ಧತಿಗೆ ಈ ಎರಡು ಹೆಸರುಗಳೂ ಒಪ್ಪುವುದಿಲ್ಲ. ಈ ಎರಡು ಪದ್ಧತಿಗಳ ವಿಶೇಷಗುಣಗಳೂ ನಮ್ಮ ಪದ್ಧತಿಯಲ್ಲಿದ್ದರೂ ನಮ್ಮ ಪದ್ಧತಿಗೆ ಸುವರ್ಣ ವಿನಿಮಯ ಪ್ರಮಿತಿ (ಉಡಟಜ ಇಘಛಿಚಿಟಿರಿಜಖಣಚಿಟಿಜಚಿಡಿಜ) ಯೆಂದು ಹೆಸರಿದೆ.



ಪ್ರಧಾನ ನಾಣ್ಯಗಳು ಮಾತ್ರ ಬೆಳ್ಳಿ ಬಂಗಾರದವುಗಳು. ಇತರ ಚಿಲ್ಲರೆ ನಾಣ್ಯಗಳನ್ನು ಕೀಳು ಲೋಹಗಳಾದ ತಾಮ್ರ ಹಿತ್ತಾಳೆ ನಿಕ್ಕಲ್ ಮೊದಲಾದವುಗಳಿಂದ ಮಾಡುತ್ತಾರೆ. ಎಲ್ಲಾ ಚಿಲ್ಲರೆ ನಾಣ್ಯಗಳನ್ನೂ ಪ್ರಧಾನ ನಾಣ್ಯಗಳ ಯಾವುದೊ ಒಂದು ಗೊತ್ತಾದ ಅಂಶವಾಗಿ ತಯಾರುಮಾಡುವುದು ವಾಡಿಕೆ. ಉದಾಹರಣೆ : ಇಂಡಿಯಾ ದೇಶದಲ್ಲಿ ಒಳದೇಶದ ಚಲಾವಣೆಯಲ್ಲಿರುವುವು ರೂಪಾಯಿಗಳು. ಮಿಕ್ಕ ನಾಣ್ಯಗಳೆಲ್ಲವೂ ರೂಪಾಯಿಯ[3] ಅಂಶಗಳು: – ಅರ್ಧರೂಪಾಯಿ, ಪಾವಲಿ, ದೊಡ್ಡಾಣೆ, ಒಂದಾಣೆ, ಕಾಲಾಣೆ, ಕಾಸು.[4] ಆದರೆ ಒಂದೇ ಸರ್ಕಾರದವರೇ ಈ ಎಲ್ಲಾ ನಾಣ್ಯಗಳನ್ನೂ ಮುದ್ರಿಸಿ ಪ್ರಚಾರಕ್ಕೆ ತಂದಿದ್ದರೂ ಕೂಡ, ಎಲ್ಲಕ್ಕೂ ಒಂದೇ ತರಹದ ಗೌರವವಿಲ್ಲ. ರೂಪಾಯಿಗಿರುವ ಗೌರವವು ಚಿಲ್ಲರೆ ನಾಣ್ಯಗಳಿಗಿಲ್ಲ. ರೂಪಾಯಿಗಿರುವ ಮರ್ಯಾದೆ ಬಲದಿಂದಲೂ, ಸರ್ಕಾರದವರ ಹೇಳಿಕೆಯಿಂದಲೂ ಈ ಚಿಲ್ಲರೆ ನಾಣ್ಯಗಳಿಗೆ ಜೀವನ; ಇಲ್ಲದಿದ್ದರೆ ಅವಕ್ಕೆ ಅಷ್ಟು ಬೆಲೆಯಿರುತ್ತಿರಲಿಲ್ಲ. ಅಲ್ಲದೆ, ನಾವು ಸಾಲತೆರಬೇಕಾದವರಿಗೆ ಎಷ್ಟು ಲಕ್ಷ ರೂಪಾಯಿ ನಾಣ್ಯಗಳನ್ನಾದರೂ ಪರಿಮಿತಿಯಿಲ್ಲದೆ ಕೊಡಬಹುದು. ಅವರು ಅದನ್ನು ತೆಗೆದುಕೊಳ್ಳಲೇಬೇಕೆಂಬ ಸರ್ಕಾರದ ನಿಯಮವಿದೆ. ತೆಗೆದು ಕೊಳ್ಳುವುದಿಲ್ಲವೆಂದು ಅವರು ಮೂರ್ಖತನ ಮಾಡಿದರೆ ನಡೆಯದು. ಸಣ್ಣ ನಾಣ್ಯಗಳ ವಿಚಾರ ಹೀಗಲ್ಲ. ಅವುಗಳನ್ನು ಗೊತ್ತಾದ ಒಂದು ಪರಿಮಿತಿಯಲ್ಲಿ ಮಾತ್ರ ಕೊಡಬಹುದು. ಅದಕ್ಕೆ ಹೆಚ್ಚಾಗಿ ಕೊಡ ಹೋದರೆ ಸಾಲಕೊಟ್ಟವನು ತೆಗೆದುಕೊಳ್ಳದೆ ಹಟಮಾಡ ಬಹುದು. ನಾನು ಯಾರಿಗಾದರೂ ಒಂದು ಲಕ್ಷ ರೂಪಾಯಿಗಳನ್ನು ತೆರಬೇಕಾಗಿದ್ದರೆ, ಆ ಮೊಬಲಗೆಲ್ಲವನ್ನೂ ಕಾಲಾಣೆಗಳಲ್ಲಿಯೇ ಕೊಡುವೆನೆಂದರೆ ಅದನ್ನು ಅವನು ಬೇಡವೆನ್ನಲು ಅಧಿಕಾರವುಂಟು. ಈ ವಿಷಯದಲ್ಲಿ ಅವನನ್ನು ಬಲಾತ್ಕರಿಸುವುದಕ್ಕೆ ಹೋದರೆ ಅದು ವ್ಯರ್ಥವಾಗುವುದು. ಸಣ್ಣ ನಾಣ್ಯಗಳನ್ನು ಮಾಡಿರುವುದು ಚಿಲ್ಲರೆ ವ್ಯಾಪಾರಗಳ ಸಲುವಾಗಿ. ಅವುಗಳಲ್ಲಿರುವ ಲೋಹಕ್ಕೆ ಅವುಗಳ ಮೇಲೆ ಹಾಕಿರುವಷ್ಟು ಸ್ವತಂತ್ರ ಬೆಲೆಯಿಲ್ಲ. ಆದುದರಿಂದಲೇ ಅವಕ್ಕೆ ಮನ್ನಣೆ ಕಡಿಮೆ.

ಕೆಲವು ದೇಶಗಳ ಪ್ರಧಾನ ನಾಣ್ಯ ವಿಷಯದಲ್ಲಿಯೂ ವಿಶೇಷಾಂಶಗಳಿವೆ. ಇಂಡಿಯ, ಚೀಣಾ, ಫಿಲಿಪ್ಪೈನ್ಸ್, ಮಲಯ ದ್ವೀಪಗಳು, ಅಬಿಸ್ಸೀನಿಯಾ ಮುಂತಾದ ಕೆಲವು ದೇಶಗಳನ್ನು ಬಿಟ್ಟರೆ, ಮಿಕ್ಕ ಭಾರಿ ದೇಶಗಳಲ್ಲೆಲ್ಲಾ ಪ್ರಧಾನ ನಾಣ್ಯವು ಬಂಗಾರದ್ದು. ಬಂಗಾರದ ನಾಣ್ಯಗಳು ಸಾಮಾನ್ಯವಾಗಿ ಎಲ್ಲಾ ಕಡೆಯಲ್ಲಿಯೂ ತಮ್ಮ ಮೇಲೆ

3. ಜನರಿಗೆ  ಖುಷಿ ಬಂದರೆ ತಮ್ಮ ಪೆಟ್ಟಿಗೆಗಳಲ್ಲಿರುವ ಸವರನ್ನುಗಳೆಲ್ಲವನ್ನೂ ಬೇಕಾದ ಹಾಗೆ ಪ್ರಚಾರಕ್ಕೆ ತರಬಹುದು. ಅದಕ್ಕೆ ಸರ್ಕಾರದವರ ಅಡ್ಡಿಯೇನೂ ಇಲ್ಲ. ಆದರೆ ಸರ್ಕಾರದವರು ತಾವಾಗಿಯೇ ಸವರನ್ನುಗಳನ್ನು ಚಲಾವಣೆಗೆ ಕೊಡಬೇಕೆಂಬ ನಿರ್ಬಂಧವೇನೂ ಇರುವುದಿಲ್ಲ.
4. ಕೆಲವು ಕಡೆಗಳಲ್ಲಿ ಇನ್ನೂ ಒಂದೂವರೆ ಕಾಸು ಪ್ರಚಾರದಲ್ಲಿದ್ದರೂ ಅದನ್ನೂ ಅರ್ಧಾಣೆಯ ತಾಮ್ರದ ನಾಣ್ಯಗಳನ್ನೂ ಸರ್ಕಾರದವರು ಹೊಸದಾಗಿ ಮುದ್ರಿಸುತ್ತಿಲ್ಲ.

ಬರೆದಿರುವಷ್ಟು ಖಾಸಗಿ ಬೆಲೆಯುಳ್ಳವುಗಳಾಗಿರುತ್ತವೆ ಮತ್ತು ಇಂಗ್ಲೆಂಡ್ ದೊದಲಾದ ದೇಶಗಳಲ್ಲಿ ನ್ಯಾಯಪ್ರಕಾರ ಯಾವ ಪ್ರಜೆಯಾದರೂ ತನಗೆ ತೋರಿದಷ್ಟು ಬಂಗಾರದ ಗಟ್ಟಿಯನ್ನು ತೆಗೆದುಕೊಂಡು ಹೋಗಿ ಟಂಕಸಾಲೆಗೆ ಕೊಟ್ಟರೆ, ಆ ಬಂಗಾರವನ್ನು ಸವರನ್ನುಗಳಾಗಿ ಖರ್ಚಿಲ್ಲದೆ ಮುದ್ರಿಸಿಕೊಡುತ್ತಾರೆ.[5] ನಮ್ಮ ದೇಶದಲ್ಲಿ ಈ ತರಹದ ಪದ್ಧತಿಗಳಾವುವು ಇಲ್ಲ. ನಮ್ಮ ಬೆಳ್ಳಿಯ ರೂಪಾಯಿಗೆ ಸ್ವತಂತ್ರವಾಗಿ 16 ಆಣೆಯ ಲೌಕಿಕ ಯೋಗ್ಯತೆಯಿಲ್ಲ. ಹಾಗಿಲ್ಲದಿದ್ದರೂ ಅದು ಸರ್ಕಾರದ ವಿಧಿಯಿಂದಲೂ ಜನರ ಸಮ್ಮತಿಯಿಂದಲೂ ಆ ಬೆಲೆಯದೆಂದು ಹೇಳಿಸಿಕೊಳ್ಳುತ್ತಿದೆ. ರೂಪಾಯಿಯಲ್ಲಿ ಸುಮಾರು 11 ಆಣೆಯಷ್ಟು ಮಾತ್ರ ಬೆಳ್ಳಿಯಿದೆ. ಒಂದೊಂದು ರೂಪಾಯಿಯನ್ನು ಮುದ್ರಿಸುವುದರಿಂದಲೂ 5 ಆಣೆಯ ಸುಮಾರಿನ ಲಾಭವು ಬರುವುದು. ರೂಪಾಯಿಗೆ ಒದಗಬಹುದಾದ ಆಪತ್ತುಗಳಿಂದ ಅದನ್ನು ಕಾಪಾಡಿ ಅದರ ಬೆಲೆಯನ್ನು ಸಮನಾಗಿಟ್ಟಿರುವುದಕ್ಕೋಸ್ಕರ ಈ ಲಾಭವನ್ನು ಸರ್ಕಾರದವರು ಒಂದೆಡೆ ಶೇಖರಿಸಿಕೊಳ್ಳುತ್ತಿದ್ದಾರೆ.

ಹಣದ ರೂಪದಲ್ಲಿ ಈಗ ಪ್ರಚಾರದಲ್ಲಿರುವ ವಸ್ತುಗಳಲ್ಲಿ ಲೋಹದ ನಾಣ್ಯಗಳಲ್ಲದೆ ಕಾಗದದ ನಾಣ್ಯಗಳೂ ಉಂಟಲ್ಲವೆ? ಈ ಕಾಗದದ ನಾಣ್ಯಗಳಿಗೆ ಲೋಹದ ನಾಣ್ಯಗಳಿಗಿರುವಂತೆಯೇ ಬೆಲೆಯುಂಟಾಗಿದೆ. ನಾವು ಈಗ ಯಾರಿಗಾದರೂ 100 ರೂಪಾಯಿಗಳನ್ನು ಕೊಡಬೇಕಾಗಿದ್ದಲ್ಲಿ ಅವರಿಗೆ ಬೆಳ್ಳಿಯ ರೂಪಾಯಿಗಳನ್ನಾಗಲಿ ಅಥವಾ ಕಾಗದದ ‘ನೋಟು’ಗಳನ್ನಾಗಲಿ ಕೊಡಬಹುದು. ಕೊಟ್ಟರೆ ಅವರು ಅದನ್ನು ತೆಗೆದುಕೊಂಡು ತಮ್ಮ ಸಾಲ ತೀರಿತೆನ್ನುವರು. “ನೋಟು”ಗಳೆಂದರೆ ಒಂದು ಮಾದರಿಯ ಕಾಗದದ ತುಂಡುಗಳು. ಲೋಹದ ನಾಣ್ಯಗಳ ಮೇಲೆ ರೇಖೆಗಳಿರುವಂತೆಯೇ ಇವುಗಳ ಮೇಲೂ ಹಲವು ವಿಧವಾದ ಹೆಗ್ಗುರುತುಗಳೂ ಚಿತ್ರಗಳೂ ಕಂಡುಬರುವುವು ಮತ್ತು ನೋಟು ಎಷ್ಟರದು, ಅದರ ನಂಬರೇನು, ಯಾವ ತಾರೀಖಿನಲ್ಲಿ ಮುದ್ರಿತವಾದುದು[6] ಇವೇ ಮೊದಲಾದ ಸಮಾಚಾರಗಳೂ ನಮಗೆ ಅಲ್ಲಿ ಕಾಣಬರುವುದಲ್ಲದೆ, ನೋಟುಗಳನ್ನು ಯಾರು ಪ್ರಚಾರಕ್ಕೆ ತಂದಿರುವರೊ ಅವರ ಒಪ್ಪಂದದ ಬರಹವೂ, ಮುಖ್ಯಾಧಿಕಾರಿಯೊಬ್ಬನ ರುಜುವೂ ಅಲ್ಲಿ ಇರುತ್ತವೆ. ಜನರ

5. ಹೀಗೆ ಮುದ್ರಿಸಿರುವುದರಲ್ಲಿ ಒಂದು ವಿಶೇಷ. ಸವರನ್ನಿನ ಬೆಲೆಯೂ ಗಟ್ಟಿ ಬಂಗಾರದ ಒಂದು ನಿಯತ ಪರಿಮಾಣದ ಬೆಲೆಯೂ ಸಮನಾಗಿಲ್ಲದಿದ್ದರೆ ಯಾರೂ ಗಟ್ಟಿಯನ್ನು ಟಂಕಸಾಲೆಗೆ ತೆಗೆದುಕೊಂಡು ಹೋಗುತ್ತಿರಲಿಲ್ಲ. ಈ ಪದ್ಧತಿಯಿಂದ ಜನರಿಗೆ ಸವರನ್ನಿನಲ್ಲಿ ನಂಬಿಕೆ ಬರುವುದೊಂದಲ್ಲದೆ ವ್ಯಾಪಾರಾದಿಗಳಿಗೆ ಹೆಚ್ಚು ಹಣಬೇಕಾದವರು ಈ ರೀತಿಯಾಗಿ ವಿಶೇಷ ಹಣವನ್ನು ಚಲಾವಣೆಗೆ ತಂದು ವರ್ತಕರಿಗೆ ಸಹಾಯ ಮಾಡಬಹುದು.

6. ಭಾರೀ ನೋಟಿನ ವಿಷಯದಲ್ಲಿ ಇನ್ನೂ ಒಂದು ಹೆಚ್ಚಿನ ಸಂಗತಿ ತಿಳಿಯಬರುವುದು. ಅದು ದೇಶದ ಯಾವ ಧನವಲಯ (ಸರ್ಕಲ್ ಆಫ್ ಇಷ್ಯೂ) ದಲ್ಲಿ ಮುದ್ರಿತವಾದುದು ಎಂಬುದು ಗೊತ್ತಾಗುವುದು. ಧನ ವಲಯವೆಂದರೆ ಹಣದ ಗುರುತುಗಳನ್ನು ಪ್ರಚಾರ ಮಾಡುವ ವಿಷಯದಲ್ಲಿ ಸರ್ಕಾರದವರು ಮಾಡಿಕೊಂಡಿರುವ ದೇಶವಿಭಾಗ.



ನಂಬಿಕೆಯೇ ಹಣಕ್ಕೆ ಜೀವನಾಧಾರವೆಂದು ಹಿಂದೆ ತಿಳಿಸಿರುವೆವಷ್ಟೆ. ಕಾಗದದ ನಾಣ್ಯಗಳ ವಿಷಯದಲ್ಲಿ ಆ ಅಂಶವು ಇನ್ನೂ ಹೆಚ್ಚು ಸಿದ್ಧವಾಗಿದೆ. ಏಕೆಂದರೆ ಜನರಿಗೆ ಲೋಹದ ನಾಣ್ಯಗಳಲ್ಲಿ ಎಷ್ಟು ವಿಶ್ವಾಸ ನಂಬಿಕೆಗಳಿವೆಯೋ ಈ ನೋಟುಗಳಲ್ಲಿಯೂ ಸಾಮಾನ್ಯವಾಗಿ ಅಷ್ಟೇ ಇರುತ್ತವೆ. ಅವರು ಎಷ್ಟು ರೂಪಾಯಿಗಳವರೆಗಾದರೂ ಪರಿಮಿತಿಯಿಲ್ಲದೆ ನೋಟುಗಳನ್ನು ಪಡೆಯಲು ಸಿದ್ಧರಾಗಿರುವುದಲ್ಲದೆ, ಅನೇಕ ವೇಳೆ ನಾಣ್ಯಗಳಿಗೆ ಬದಲಾಗಿ ನೋಟುಗಳನ್ನೇ ಬೇಕೆನ್ನುತ್ತಾರೆ. ಲೋಹದ ನಾಣ್ಯಗಳ ಮುಖ್ಯ ಗುಣಗಳೇ ಇವುಗಳಲ್ಲಿಯೂ ಇಲ್ಲದಿದ್ದರೆ ಹೀಗಾಗುತ್ತಿತ್ತೇ? ವಸ್ತುತಃ ಇವುಗಳಿಗೆ ಬೆಲೆಯಿಲ್ಲದಿದ್ದರೂ - ಇವುಗಳ ಕಾಗದದ ಬೆಲೆಯು ಅತ್ಯಲ್ಪವಾಗಿದ್ದರೂ - ಇವಕ್ಕೆ ಸರ್ವತ್ರ ಮಾನ್ಯತೆಯುಂಟಾಗಿರುವುದಕ್ಕೆ ಕಾರಣವು ನಾಣ್ಯಗಳಲ್ಲಿಲ್ಲದ ಒಂದು ಅನುಕೂಲವು ಇವುಗಳಲ್ಲಿರುವುದೇ. ಇವನ್ನು ಸುಲಭವಾಗಿ ಎಲ್ಲರೂ ಎಲ್ಲಿಗಾದರೂ ತೊಂದರೆಯಿಲ್ಲದೆ ತಮ್ಮ ಜೇಬುಗಳಲ್ಲಿಟ್ಟುಕೊಂಡು ಹೋಗಬಹುದು; ಹಿಡಿದರೆ ಭಾರ ಕಾಣುವುದು; ಮತ್ತು ಜೇಬಿನಲ್ಲಿ ಹಣವಿದೆಯೆಂಬ ಯಾವ ಸೂಚನೆಯೂ ಹೊರಗಿನವರಿಗೆ ತೋರುವುದಿಲ್ಲ. ಅಲ್ಲದೆ ಭಾರೀ ನೋಟುಗಳ ನಂಬರು ಮೊದಲಾದವುಗಳ ಸಹಾಯದಿಂದ ಅವು ಎಲ್ಲಿಯಾದರೂ ಕಳೆದು ಹೋದರೂ, ಕಳವಾದರೂ, ಅದನ್ನು ಸರ್ಕಾರದವರಿಗೆ ತಿಳಿಸಿ, ಅವುಗಳನ್ನು ಪತ್ತೆ ಹಚ್ಚಲು ಸಾಧ್ಯವಾಗಿರುವುದು. ನೋಟುಗಳನ್ನು ಎರಡು ಅರ್ಧಗಳಾಗಿ ಹರಿದು ಅವುಗಳನ್ನು ಬೇರೆ ಬೇರೆಯಾಗಿ ಹೊರಗೆ ಕಳುಹಿಸಬಹುದು. ನಮ್ಮಲ್ಲಿ ಹಳೆಯ ನೋಟುಗಳಿದ್ದರೆ, ಅವು ಬಹಳವಾಗಿ ಕೆಟ್ಟು ಹೋಗದೆಯೂ ಎಣ್ಣೆ ಮೊದಲಾದ ಪದಾರ್ಥಗಳ ಸಂಪರ್ಕದಿಂದ ಮಾಲಿನ್ಯವನ್ನು ಹೊಂದದೆಯೂ ಇರುವ ಪಕ್ಷಕ್ಕೆ, ಅವನ್ನು ಪ್ರಚಾರಕ್ಕೆ ತಂದಿರುವ ಅಧಿಕಾರಿಗಳಿಗೆ ಕಳುಹಿಸಿಕೊಟ್ಟಲ್ಲಿ, ಅವರು ನಮಗೆ ಪ್ರತಿಯಾಗಿ ಹೊಸ ನೋಟುಗಳನ್ನು ಕಳುಹಿಸುವರು[7]. ಈ ರೀತಿಯಾಗಿರುವುದರಿಂದಲೇ ಜನರಿಗೆ ನೋಟುಗಳಲ್ಲಿ ನಂಬಿಕೆ ಬಂದು, ಅವು ಚಲಾವಣೆಯಲ್ಲಿ ನಿಂತು, ಲೋಹದ ನಾಣ್ಯಗಳಿಗಿಂತ ಇತೋಪ್ಯಧಿಕವಾಗಿಯೇ ಅವು ಬಳಕೆಯಲ್ಲಿರುವಂತೆ ತೋರುವುದು. ಜನರಿಗೆ ಮುಖ್ಯವಾಗಿ ಬೇಕಾದದ್ದು ಹಣದ ಕೆಲಸವನ್ನು ಸುಲಭವಾಗಿ ಮಾಡುವ ಒಂದು ಪದಾರ್ಥ. ಅದು ಕಾಗದವಾಗಲಿ, ಬಳಪದ ತುಂಡಾಗಲಿ, ಚರ್ಮದ ಚೂರಾಗಲಿ, ಲೋಹದ ತುಕಡಿಯಾಗಲಿ, ಏನಾಗಿದ್ದರೆ ತಾನೆ ಏನು? ಮತ್ತು ಜನರಿಗೆ ಬೇಕಾದದ್ದು ವಸ್ತು ಸಾಮಗ್ರಿಗಳು. ‘ಹಣ’ವನ್ನು ಕೊಟ್ಟಾಗ ತಮಗೆ ಆ ಸಾಮಾನುಗಳು ದೊರೆತರೆ ಅವರಿಗೆ ಅಷ್ಟೇ ಸಾಕು. ಹಾಗೆ ವಸ್ತುಗಳು ದೊರೆಯಲಾರವೆಂಬ ಭಾವನೆಯು ಅವರಲ್ಲುದಯಿಸಿದ ಕೂಡಲೆ ‘ಹಣವು’ ಅತ್ಯುತ್ತಮವಾದ ಪದಾರ್ಥದಿಂದ ಮಾಡಲ್ಪಟ್ಟಿದ್ದರೂ ಅದನ್ನು ಅವರು ತೆಗೆದುಕೊಳ್ಳರು. ಅವರಿಗೆ ಕಾಗದದ

7. ಮತ್ತು ನೋಟುಗಳ ಬಳಸುವಿಕೆಯಿಂದ, ಬೆಳ್ಳಿ ಬಂಗಾರಗಳು ನಾಣ್ಯ ರೂಪದಲ್ಲಿ ಸವೆದು ಹೋಗುವುದು ನಿಂತು ಮಿತವ್ಯಯವಾಗುವುದು.

ನಾಣ್ಯಗಳಲ್ಲಿರುವ ವಿಶ್ವಾಸಕ್ಕೆ ಮತ್ತೊಂದು ಕಾರಣವೂ ಉಂಟು. ಜನರು ಯಾವಾಗ ಎಲ್ಲಿ ಕೇಳಿದರೂ ಅವಕ್ಕೆ ಬದಲಾಗಿ ಸಮ ಬೆಲೆಯ ಪದಾರ್ಥಗಳು ಸಿಕ್ಕುವುವೆಂಬ ಭರವಸೆಯ ಜೊತೆಗೆ, ಅವುಗಳಿಗೆ ಬದಲಾಗಿ ಸರ್ಕಾರಿಯ ಲೋಹದ ನಾಣ್ಯಗಳು ದೊರಕುವುವೆಂಬ ಧೈರ್ಯವೂ ಇರುವುದು. ಈ ಧೈರ್ಯವಿಲ್ಲದಿದ್ದರೆ ನೋಟುಗಳಿಗೆ ಪ್ರಾಶಸ್ತ್ಯ ಬರುತ್ತಿರಲಿಲ್ಲ. ಈ ಧೈರ್ಯವು ಸರ್ವದಾ ಬಲವತ್ತರವಾಗಿರಬೇಕೆಂಬ ಇಚ್ಛೆಯಿಂದಲೇ, ಕಾಗದದ ನಾಣ್ಯಗಳನ್ನು ಪ್ರಚಾರಕ್ಕೆ ತರುವ ಅಧಿಕಾರಿಗಳು ಅದಕ್ಕೆ ಆಧಾರವಾಗಿ ಒಂದು ಗೊತ್ತಾದ ಪರಿಮಾಣದಲ್ಲಿ ಯಾವಾಗಲೂ ಒಂದೆಡೆ "ಕಾಗದದ ನಾಣ್ಯಗಳ ಲೋಹ ಕೋಶ" (ಪೇಪರ್ ಕರೆನ್ಸಿ ರಿಸರ್ವ್) ಒಂದನ್ನು ಇಟ್ಟಿರುವರು.

ಎಲ್ಲಾ ದೇಶಗಳಲ್ಲಿಯೂ ಚಲಾವಣೆಗೆ ತಂದಿರತಕ್ಕ ಈ ಕಾಗದದ ನಾಣ್ಯಗಳ ಒಟ್ಟು ಪರಿಮಾಣದಲ್ಲಿ ಸ್ವಲ್ಪ ಭಾಗವನ್ನುಳಿದು ಮಿಕ್ಕ ಎಲ್ಲಾ ಭಾಗಕ್ಕೂ ಅಷ್ಟು ಬೆಲೆ ಬಾಳುವ ಲೋಹವ (ಬೆಳ್ಳಿ ಬಂಗಾರಗಳ) ನ್ನಾಗಲಿ, ಸುಲಭವಾಗಿ ಹಣವನ್ನು ತರತಕ್ಕ ಲೇವಾದೇವಿಯ ಪತ್ರಗಳನ್ನಾಗಲಿ, ಹುಂಡಿ ಅಥವಾ ವ್ಯಾಪಾರ ಪತ್ರಗಳನ್ನಾಗಲಿ ಪ್ರತಿಯಾಗಿ ಆ ಕೋಶದಲ್ಲಿ ಇಟ್ಟುಕೊಂಡೇ ಇರುವರು. ಹೀಗೆ ಯಾವಾಗಲೂ ಜಾಗರೂಕತೆಯಿಂದಿರುವುದು ಅತ್ಯಾವಶ್ಯಕ. ನೋಟುಗಳನ್ನು ಚಲಾವಣೆಗೆ ತಂದು, ಜನರಿಗೆ ನಂಬಿಕೆ ಹುಟ್ಟಿಸಿ, ಅವರು ಯಾವಾಗ ಲೋಹದ ನಾಣ್ಯಗಳು ಬೇಕೆಂದರೆ ಆಗ ಅವರಿಗೆ ಬೇಕಾಗುವಷ್ಟನ್ನು ಕೊಡಲು ಒಪ್ಪಿಕೊಂಡಿರುವ ಕರಾರಿನ ಬರವಣಿಗೆಯು ನೋಟಿನ ಮೇಲಿರುವುದರಿಂದ, ಆ ನಂಬಿಕೆಯನ್ನು ಸ್ಥಿರೀಕರಿಸಿ ಕಾಪಾಡಬೇಕಾದದ್ದು ಸರ್ಕಾರದ ಕರ್ತವ್ಯ. ಲೇವಾದೇವಿಯ ಪತ್ರಗಳೇಕೆಂದರೆ: ಅವುಗಳನ್ನು ಕೊಂಡು ಕೂಡಿಡುವುದರಿಂದ ಲಾಭವುಂಟು. ಸಾಮಾನ್ಯವಾಗಿ ಯಾವ ಯಾವ ವಿನಿಮಯದ ಅಥವಾ ಭಾರೀ ಸಾಲದ (ಸ್ಟಾಕ್ ಅಂಡ್ ಷೇರ್) ಪತ್ರಗಳಿಗೆ ಪೇಟೆಯಲ್ಲಿ ಸುಮಾರು ಸರ್ವದಾ ಗಿರಾಕಿಯಿದ್ದೇ ಇರುವುದೊ ಆ ಪತ್ರಗಳನ್ನು ಕೊಂಡು ಕೋಶದಲ್ಲಿಟ್ಟು ಕೊಂಡಿದ್ದರೆ ಅವುಗಳ ಮೇಲೆ ಬಡ್ಡಿ ಬರುವುದು. ಅವಸರವಾಗಿ ಹಣ ಬೇಕಾದರೆ ಅವನ್ನು ಪೇಟೆಯಲ್ಲಿ ಮಾರಿ ಅವುಗಳ ಬೆಲೆಯಷ್ಟು ಹಣವನ್ನಾದರೂ ಸುಲಭವಾಗಿ ಪಡೆಯಬಹುದು. ಹೀಗಲ್ಲದೆ ಬರೀ ಬೆಳ್ಳಿಬಂಗಾರಗಳನ್ನೇ ಪೂರ್ತಿ ಆ ನಿಧಿಯಲ್ಲಿಡುವು ದೆಂದರೆ, ಅದು ಸುಲಭವಲ್ಲ. ಅದರಿಂದ ಲಾಭವು ಬಾರದು; ಶ್ರಮವು ಜಾಸ್ತಿ; ಜವಾಬುದಾರಿಯು ಮತ್ತೂ ಹೆಚ್ಚು.

ನೋಟುಗಳಲ್ಲಿ (1) ಸರ್ಕಾರಿಯ 'ಚಾಲತಿ' (ಕರೆನ್ಸೀ) ನೋಟುಗಳೆಂದೂ (2) ಬ್ಯಾಂಕು ನೋಟುಗಳೆಂದೂ ಎರಡು ವಿಧಗಳಿವೆ. ಎಲ್ಲಾ ನೋಟುಗಳೂ ಸಾಮಾನ್ಯವಾಗಿ ಉಂಡೆ ಮೊತ್ತಗಳ ರೂಪದಲ್ಲಿರುತ್ತವೆ; ಚಿಲ್ಲರೆಯಾಗಿರುವುದಿಲ್ಲ. ಉದಾಹರಣೆ: ನಮ್ಮ ದೇಶದಲ್ಲಿರುವ ಮೂಲ ನಾಣ್ಯವು ರೂಪಾಯಿ. ನಮ್ಮ ನೋಟುಗಳು 1, 5, 10, 50,



100, 500, 1,000, 10,000 – ಈ ರೀತಿಯಾಗಿ ಪೂರ್ಣ ಸಂಖ್ಯೆಗಳಾಗಿಯೇ ಇರುತ್ತವೆ. ಒಂದೂವರೆ ರೂಪಾಯಿ, ಐದೂ ಕಾಲು ರೂಪಾಯಿ, ಹತ್ತೂ ಮುಕ್ಕಾಲು ರೂಪಾಯಿ – ಈ ರೀತಿ ಇರುವುದಿಲ್ಲ. ಮತ್ತು ನೋಟು ಎಲ್ಲಿಯೇ ಆಗಲಿ ದೇಶದಲ್ಲಿಯ ಪ್ರಧಾನ ನಾಣ್ಯಕ್ಕೆ ಕಡಿಮೆಯ ಬೆಲೆಯದೂ ಆಗಿರುವುದಿಲ್ಲ. ತತ್ವದಲ್ಲಿ ಎಲ್ಲಾ ತರಹದ ನಾಣ್ಯಗಳೂ ಒಂದೇ ಆಗಿದ್ದರೂ ಲೋಹ ಮತ್ತು ಕಾಗದಗಳ ನಾಣ್ಯಗಳಲ್ಲಿ ಕೆಲವು ತಾರತಮ್ಯಗಳನ್ನೆಣಿಸಬಹುದು. ಒಂದು ದೃಷ್ಟಿಯಿಂದ ನೋಡಿದರೆ ನಾಣ್ಯಗಳ ಗೌರವ ಕ್ರಮದಲ್ಲಿ ಮೊದಲು ಸರ್ಕಾರಿಯ ಲೋಹದ ನಾಣ್ಯಗಳೂ, ಎರಡನೆಯ ಸ್ಥಾನದಲ್ಲಿ ಸರ್ಕಾರಿಯ ನೋಟುಗಳೂ, ಕೊನೆಯಲ್ಲಿ ಬ್ಯಾಂಕು ನೋಟುಗಳೂ ಬರುವುವು[8].

ನೋಟುಗಳನ್ನು ಪ್ರಚಾರಕ್ಕೆ ತರುವವರು ಯಾರೇ ಆಗಿರಲಿ, ಅವರು ಸರ್ಕಾರ ದವರಾಗಲಿ ಅಥವಾ ಸಾಮಾನ್ಯ ಸಾಹುಕಾರಿ ಬ್ಯಾಂಕುಗಳವರಾಗಲಿ, ಎಲ್ಲರೂ ಒಂದು ಪರಿಮಾಣದ ಲೋಹ ನಿಧಿಯನ್ನು ಇಟ್ಟೇ ಇರಬೇಕು. ಇಲ್ಲದಿದ್ದರೆ ಅವರಿಗೆ ಅನೇಕ ವೇಳೆ ಆಪತ್ತೂ, ಜನರಿಗೆ ತೊಂದರೆಯೂ ಅನರ್ಥಗಳೂ ಸಂಭವಿಸುವುವು. ಆದುದರಿಂದಲೇ ಸುಮಾರು ಎಲ್ಲಾ ದೇಶಗಳಲ್ಲಿಯೂ ಸರ್ಕಾರದವರೇ ನೋಟನ್ನು ಚಲಾವಣೆಗೆ ತರುವ ಕೆಲಸವನ್ನು ಸ್ವಂತವಾಗಿ ಇಟ್ಟುಕೊಂಡಿರುವುದು ಅಥವಾ ಬೇರೆ ಬ್ಯಾಂಕುಗಳವರು ಈ ಕೆಲಸವನ್ನು ಮಾಡುತ್ತಿದ್ದರೆ, ಸರ್ಕಾರವು ಅವರಿಗೆ ಅನೇಕ ವಿಧವಾದ ನಿಬಂಧನೆಗಳನ್ನು ಗೊತ್ತು ಮಾಡಿ, ಅರಿಯದ ನಾಡಾಡಿ ಜನರಿಗೆ ಮೋಸ ನಷ್ಟಗಳನ್ನು ತಪ್ಪಿಸುವ ಪ್ರಯತ್ನಗಳನ್ನೂ ಮಾಡುವುದು.

ನೋಟುಗಳನ್ನು ಪ್ರಚಾರಕ್ಕೆ ತರುವ ವಿಧಾನಗಳಲ್ಲಿಯೂ ಬೇರೆ ಬೇರೆ ದೇಶಗಳಲ್ಲಿ ಬೇರೆ ಬೇರೆ ವಾಡಿಕೆ ಕಟ್ಟಳೆಗಳಿವೆ. ಕೆಲವು ದೇಶಗಳಲ್ಲಿ ಸರ್ಕಾರಕ್ಕೆ ಮಾತ್ರವೇ ಈ ಅಧಿಕಾರವಿರುವುದು. ಮತ್ತು ಈ ವಿಷಯದಲ್ಲಿ ಅವರಿಗೆ ಸರ್ವಸ್ವಾತಂತ್ರ್ಯವಿರುವುದು. ಮಿಕ್ಕ ಸಂಸ್ಥೆಗಳವರಾರಾದರೂ ಈ ಕೆಲಸದಲ್ಲಿ ಪ್ರವರ್ತಿಸುವುದು ಕಂಡು ಬಂದರೆ ಅವರಿಗೆ ಸರ್ಕಾರದಿಂದ ಕಠಿಣ ದಂಡನೆಯಾಗುವುದು. ಇನ್ನೊಂದು ವಿಷಯ : ಸರ್ಕಾರದವರು ಈ ಕಾರ್ಯವನ್ನು ತಾವೇ ತಮ್ಮ ಸ್ವಂತ ಖಜಾನೆಯ ಮುದ್ರಣ ಶಾಲೆಗಳಲ್ಲಿ ಮಾಡಬಹುದು. ಇಲ್ಲವಾದರೆ ಸರ್ಕಾರದ ಕೆಲಸಕ್ಕೆ ಧನ ಸಹಾಯಗಳನ್ನು ಕಲ್ಪಿಸಿಕೊಡುತ್ತ, ಸ್ವಲ್ಪ ಹೆಚ್ಚು ಕಡಿಮೆ ಸರ್ಕಾರದ ಎಲ್ಲಾ ಲೇವಾದೇವಿಗಳನ್ನೂ ಮಾಡುತ್ತ,

8. ಈ ಕ್ರಮವನ್ನು ಏತಕ್ಕೆ ಹೇಳಿದೆವೆಂದರೆ, ಯಾವ ನೋಟೇ ಆಗಲಿ ಲೋಹದ ನಾಣ್ಯಕ್ಕೆ ವಿನಿಮಯವಾಗದಿದ್ದರೆ ಅದರಲ್ಲಿ ಜನರ ವಿಶ್ವಾಸವು ಕಡಿಮೆಯಾಗುವುದು. ಬ್ಯಾಂಕು ಮತ್ತು ಸರ್ಕಾರಿ ನೋಟುಗಳೆರಡೂ ವಸ್ತುತಃ ಒಂದೇ ತರಹದವುಗಳಾದರೂ ಬ್ಯಾಂಕು ನೋಟುಗಳಿಗೆ ಬದಲಾಗಿ ಯಾವಾಗ ಬೇಕೆಂದರೆ ಆಗ ಸರ್ಕಾರದ ಲೋಹನಾಣ್ಯವಾಗಲಿ, ನೋಟಾಗಲಿ ದೊರೆವ ಭರವಸೆಯು ಇದ್ದರೇನೇ ಅವುಗಳಿಗೆ ಕೀರ್ತಿ ಬರುವುದು. ಇಲ್ಲವಾದರೆ ಬಾರದು.

ಅರ್ಧ ಸರ್ಕಾರಿಯಾಗಿಯೇ ಇರುವ ಬ್ಯಾಂಕುಗಳಿಂದ ಅದನ್ನು ಮಾಡಿಸಬಹುದು. ಅಥವಾ ಸರ್ಕಾರದವರು ಈ ತರಹದ ಬ್ಯಾಂಕುಗಳಿಗೆ ಮಾತ್ರ ನೋಟುಗಳನ್ನು ಚಲಾವಣೆಗೆ ತರುವ ಸರ್ವಾಧಿಕಾರವನ್ನೂ ಕೊಟ್ಟಿರಬಹುದು. ಅದೂ ಅಲ್ಲದಿದ್ದರೆ, ದೇಶದ ಎಲ್ಲಾ ಉತ್ತಮ ತರಹದ ಬ್ಯಾಂಕುಗಳಿಗೂ ನೋಟುಗಳ ಮೊತ್ತ, ಅದರ ಲೋಹಕೋಶದ ಪ್ರಮಾಣ ಮೊದಲಾದುವನ್ನು ಕಾನೂನು ಪ್ರಕಾರ ನಿರ್ಧರಿಸಿ, ಆ ಬ್ಯಾಂಕುಗಳವರು ಸರ್ವದಾ ತಮ್ಮ ನೋಟುಗಳಿಗೆ ಪ್ರತಿಯಾಗಿ ಸರ್ಕಾರದ ಹಣವನ್ನು ಕೊಡಲು ಸಿದ್ಧರಾಗಿರುವಂತೆ ಏರ್ಪಾಡುಮಾಡುತ್ತಾರೆ. ನಮ್ಮ ಇಂಡಿಯಾ ದೇಶದಲ್ಲಿ 1865ನೆಯ ಇಸವಿಯಿಂದೀಚೆಗೆ ಯಾವ ಬ್ಯಾಂಕಿಗೂ ನೋಟನ್ನು ಪ್ರಚಾರಕ್ಕೆ ತರುವ ಅಧಿಕಾರವಿರುವುದಿಲ್ಲ. ನಮ್ಮಲ್ಲಿ 1921ರಲ್ಲಿ ಸ್ಥಾಪಿತವಾಗಿ, ಬಹು ಭಾರಿಯಾಗಿ, ಹೆಚ್ಚು ಕಡಿಮೆ ಸರ್ಕಾರಿ ಬ್ಯಾಂಕಿನಂತೆಯೇ ಇರುವ ಇಂಪೀರಿಯಲ್ ಬ್ಯಾಂಕಿಗೂ ಕೂಡ ಈ ಅಧಿಕಾರವಿರುವುದಿಲ್ಲ. ಸರ್ಕಾರದವರು ಸ್ವಂತವಾಗಿ ಈ ಕೆಲಸವನ್ನು ಮಾಡುತ್ತ, ತಮ್ಮ ಲೋಹಕೋಶದಲ್ಲಿ ಸ್ವಲ್ಪ ಭಾಗವನ್ನು ಇಂಡಿಯಾ ದೇಶದಲ್ಲಿಯೂ, ಉಳಿದ ಭಾಗವನ್ನು ಇಂಗ್ಲೆಂಡಿನಲ್ಲಿಯೂ (ಕೆಲವು ಸಂದರ್ಭಗಳಲ್ಲಿ ಮಾತ್ರ ಹೊರಗೂ) ಇಟ್ಟುಕೊಂಡಿರುವರು[9]. ಇಂಗ್ಲೆಂಡ್ ದೇಶದಲ್ಲಿ ಬ್ಯಾಂಕ್ ಆಫ್ ಇಂಗ್ಲೆಂಡ್ (Bank of England) ಎಂಬ ದೊಡ್ಡ ಬ್ಯಾಂಕೊಂದು ತನಗೆ ಬೇಕಾದಷ್ಟು ನೋಟುಗಳನ್ನು ತಯಾರಿಸಬಹುದೆಂದೂ, ಆದರೆ ಎಷ್ಟು ನೋಟು ಮೊಬಲಗು ಪ್ರಚಾರಕ್ಕೆ ಬಂದರೂ, 185 ಲಕ್ಷ ಪೌಂಡುಗಳಷ್ಟು ಹಣಕ್ಕೆ ಮೇಲಿನ ಪ್ರತಿಯೊಂದು ಪೌಂಡು ನೋಟಿಗೂ ಕ್ರಮವಾಗಿ ಬಂಗಾರದ ಗಟ್ಟಿಯನ್ನೊ ಸವರನ್‌ಗಳನ್ನೊ ಇಟ್ಟಿರಬೇಕೆಂದೂ ವಿಧಿಯಿದೆ. ಅಲ್ಲದೆ ಇಂಗ್ಲಿಷ್ ಸರಕಾರದವರು ತಮಗೆ ಬೇಕಾದಾಗ ಬೇಕಾದಷ್ಟು ಖಜಾನೆ ನೋಟುಗಳನ್ನು (Treasury Notes) ಪ್ರಚಾರಕ್ಕೆ ತರುವ ಅಧಿಕಾರವನ್ನು ಇಟ್ಟುಕೊಂಡಿರುವರು. ಇಷ್ಟೂ ಅಲ್ಲದೆ ಬ್ಯಾಂಕ್ ಆಫ್ ಇಂಗ್ಲೆಂಡಿನ ಎಲ್ಲಾ ಕಡೆಯ ಸುತ್ತು ಸರಹದ್ದಿನ 60-65 ಮೈಲಿ ದೂರದಲ್ಲಿರುವ ಮಿಕ್ಕ ಯಾವ ಸಾಹುಕಾರಿ ಬ್ಯಾಂಕಿಗೂ ಈ ಅಧಿಕಾರವನ್ನು ಕೊಡಲಾರರು. ಈ ಸರಹದ್ದಿಗೆ ಮೇಲ್‌ಪಟ್ಟವರು ತಮ್ಮ ನೋಟುಗಳನ್ನು ಬೇಕಾದವರಿಗೂ, ತಮ್ಮ ಖಾಸ್ ಗಿರಾಕಿಗಳಿಗೂ ಕೊಡಬಹುದು. ಅಮೆರಿಕಾ ದೇಶದ ಪದ್ಧತಿಯೇ ಬೇರೆ. ಸಾಮಾನ್ಯವಾಗಿ ಅಲ್ಲಿನ ಎಲ್ಲಾ ಬ್ಯಾಂಕುಗಳವರೂ

9. 1922ನೇ ಇಸವಿಯ ಕೊನೆಯಲ್ಲಿ ನಮ್ಮ ದೇಶದಲ್ಲಿ ಚಾಲತಿಯಲ್ಲಿದ್ದ ಒಟ್ಟು ನೋಟುಗಳ ಮೊಬಲಗು ಮತ್ತು ಲೋಹಕೋಶ ರಚನೆ (ಲಕ್ಷಗಳಲ್ಲಿ):

| ಒಟ್ಟು ಮೊಬಲಗು | ಬೆಳ್ಳಿ | ಬಂಗಾರ | ಗಿರಣಿ ಪತ್ರಗಳು |
|---|---|---|---|
| ರೂ 17,418 | ರೂ. 8,204 | 240 ಪೌಂಡುಗಳು (1923ನೇ ಮಾರ್ಚಿ ತಿಂಗಳಲ್ಲಿ | 57 ಪೌಂಡುಗಳು |



ಸಂಯುಕ್ತ ಸಂಸ್ಥಾನಗಳ ನಿಬಂಧನೆಗೊಳಪಟ್ಟು, ತಮ್ಮ ಶಕ್ತಿಗೆ ತಕ್ಕಂತೆಯೂ ಅದನ್ನು ಮೀರದಂತೆಯೂ ತಮಗೆ ಲಾಭಕರವಾಗಿ ತಮ್ಮ ಗಿರಾಕಿಗಳಿಗೆ ತೊಂದರೆ ಬಾರದೆ ಉಪಯೋಗವಾಗುವಷ್ಟು ಮಟ್ಟಿಗೆ ನೋಟುಗಳನ್ನು ತಯಾರಿಸಿ ಪ್ರಚಾರಕ್ಕೆ ತರಬಹುದು.

ಈ ತರಹದ ನೋಟುಗಳಲ್ಲದೆ ಕೆಲವು ಸಮಯಗಳಲ್ಲಿ, ವಿಪರೀತ ಪ್ರಸಂಗಗಳೊದಗಿದಾಗ, ಸರ್ಕಾರದವರು ತಮಗೆ ಬೇಕಾದಷ್ಟು ನೋಟುಗಳನ್ನು ಯಾವ ನಿರ್ಬಂಧವೂ ಇಲ್ಲದಂತೆ ತಯಾರುಮಾಡಿ, ಅವಕ್ಕೆ ಬದಲಾಗಿ ಲೋಹದ ನಾಣ್ಯಗಳನ್ನು ಕಡ್ಡಾಯವಾಗಿ ಕೊಡುತ್ತೇವೆಂಬ ಭರವಸೆ ಕೊಡದೆಯೇ ಪ್ರಚಾರಿಸುತ್ತಾರೆ. ಹಿಂದೆ ನಮೂದಿಸಿದ ನೋಟುಗಳಿಗೂ ಇವಕ್ಕೂ ಹೊರಗಣ ರೂಪದಲ್ಲಿ ವ್ಯತ್ಯಾಸವಿಲ್ಲದಿದ್ದರೂ ತತ್ವದಲ್ಲಿ ಉಂಟು. ಸರ್ಕಾರದವರು ನಿರಂಕುಶರಾಗಿ ಜನರ ಸೌಕರ್ಯಗಳನ್ನು ನೋಡದೆ, ದುಂದುವ್ಯಯ ಮಾಡುವುದಕ್ಕೊ, ಪ್ರಜೆಗಳಿಗೂ ಹೊರಗಣವರಿಗೂ ಕೊಡಬೇಕಾದ ಸಾಲದ ಭಾರವನ್ನು ಕಡಿಮೆ ಮಾಡಿಕೊಳ್ಳುವುದಕ್ಕಾಗಿಯೊ ಅಥವಾ ಯುದ್ಧ ಮೊದಲಾದ ಹಲವು ಕಾರಣಗಳಿಂದ ವಸ್ತು ಸಾಮಗ್ರಿಗಳನ್ನು ಜಾಗ್ರತೆಯಲ್ಲಿ ಪಡೆಯುವುದಕ್ಕಾಗಿಯೊ ಈ ವಿಧವಾದ ನೋಟುಗಳನ್ನು ತಯಾರು ಮಾಡುತ್ತಾರೆ. ಸರ್ಕಾರದವರ ಸ್ಥಿತಿಯು ಉತ್ಕಟಾವಸ್ಥೆಗೆ ಬಂದಾಗ ಇವುಗಳು ಪ್ರಚಾರಕ್ಕೆ ಬರುವುವಲ್ಲದೆ ಎಲ್ಲ ಕಾಲಗಳಲ್ಲಿಯೂ ಹೀಗಾಗುವುದಿಲ್ಲ. ಈ ನೋಟುಗಳಿಗೆ ಬದಲು ನಾಣ್ಯಗಳು ಸಿಕ್ಕುವುವೆಂಬ ನಂಬಿಕೆಯೇನೂ ಇರುವುದಿಲ್ಲ. ನಾಣ್ಯಗಳನ್ನು ಕೊಡಲೇಬೇಕೆಂಬ ನಿರ್ಬಂಧವೂ ಸರ್ಕಾರದವರಿಗಿರುವುದಿಲ್ಲ. ಆ ನೋಟುಗಳಿಗೆ ಸಂಬಂಧಪಟ್ಟಹಾಗೆ ಯಾವ ವಿಧವಾದ ಲೋಹಕೋಶವಾಗಲಿ ಇರುವುದಿಲ್ಲ. ಕೇವಲ ಸರ್ಕಾರದವರು ಮಾತ್ರ ತಮ್ಮ ವ್ಯವಹಾರಗಳಿಗೆ ಇವನ್ನು ಕೊಟ್ಟು ತೆಗೆದುಕೊಳ್ಳುತ್ತಾರೆ; ಹಾಗೆ ಮಾಡುತ್ತೇವೆಂದು ಸಾರಿ ಪ್ರಕಟಿಸುತ್ತಾರೆ. ಈ ತರಹದ ನೋಟುಗಳ ಪ್ರಚಾರದಿಂದ ಜನಸಾಮಾನ್ಯಕ್ಕೆ ಅನಾನುಕೂಲಗಳುಂಟಾಗುವುವು. ವ್ಯಾಪಾರವಿನಿಮಯಗಳಿಗೆ ಬಹಳ ಅಡಚಣೆ ಬರುವುದು. ಧಾರಣೆ ವಾಸಿಗಳು ಏರಿ ಜನರಿಗೆ ಹೇಳಲಶಕ್ಯವಾದ ಕಷ್ಟನಷ್ಟಗಳು ಸಂಭವಿಸುವುವು; ದೇಶದಲ್ಲಿ ಎರಡು ವಿಧವಾದ ಧಾರಣೆಗಳು ಕಂಡುಬಂದು, ನಾಣ್ಯಗಳ ಬೆಲೆಯೇರಿ, ನೋಟುಗಳ ಬೆಲೆಯು ಬೀಳುವುದು; ಮೋಸ ಕೃತ್ರಿಮಗಳು ಹೆಚ್ಚುವುವು; ವರ್ತಕ ಮಂಡಲಿಯಲ್ಲಿಯೂ ಬಂಡವಾಳಸ್ಥರಲ್ಲಿಯೂ ಜೂಜುಗಾರ ಬುದ್ಧಿಯು ತಲೆಗೇರಿ ಒಂದು ತೆರನಾದ ದುಸ್ಸಹವಾದ ಉನ್ಮಾದಾವಸ್ಥೆಯು ತಲೆದೋರುವುದು; ಹೊರದೇಶ ವ್ಯಾಪಾರ ಸಂಬಂಧದಲ್ಲಿ ವಿಪರೀತವಾಗಿ ನಷ್ಟಗಳಾಗಿ, ಒಳದೇಶದಲ್ಲಿಯೂ ಹೊರದೇಶಗಳಲ್ಲಿಯೂ ಈ ಹಣದ ಗೌರವ ಬೆಲೆಗಳು ಕಡಿಮೆಯಾಗಿ, ದೇಶದಲ್ಲಿರುವ ಬೆಳ್ಳಿ ಬಂಗಾರಗಳು ರಫ್ತಾಗಿ ಹೋಗಬೇಕಾದ ಸ್ಥಿತಿಯು ಬರುವುದು. ಹಣದ ಬೆಲೆಯು ಒಳಗೂ ಹೊರಗೂ ಕಮ್ಮಿಯಾದ ಹಾಗೆಲ್ಲ ಸರ್ಕಾರದವರ ಅವಶ್ಯಕತೆಗಳು ನೂರ್ಮಡಿಯಾಗಿ, ಅವರು ಇನ್ನೂ ಹೆಚ್ಚಾಗಿ ಈ ತೆರನಾದ ಕಾಗದದ ನಾಣ್ಯಗಳನ್ನು

ಪ್ರಚಾರಕ್ಕೆ ತರಲು ಯತ್ನಿಸುವರು. ಅಪಥ್ಯ ಸೇವನೆಯಿಂದ ರೋಗವು ಜಾಸ್ತಿಯಾಗುವಂತೆ, ಸ್ವಲ್ಪಕಾಲದಲ್ಲೇ ಎಲ್ಲೆಲ್ಲಿಯೂ ಅವ್ಯವಸ್ಥೆಯು ತೋರಿ, ಸಂಪದಭಿವೃದ್ಧಿಗೆ ಕುಂದು ಬಂದು, ಜನರಿಗೆ ಬಹುವಾಗಿ ಅಪದೆಸೆಯು ಪ್ರಾಪ್ತವಾಗುವುದು. ಆದರೆ ಎಲ್ಲ ಸಂದರ್ಭಗಳಲ್ಲಿಯೂ ಹೀಗೆಯೇ ಆಗುವುದೆಂದು ಸಿದ್ಧಾಂತಮಾಡಲಾಗದು. ಈ ತರಹದ ನೋಟು ಹಣವನ್ನು ನಿಯತ ಪ್ರಮಾಣದಲ್ಲಿ ತಯಾರುಮಾಡಿ ಕಷ್ಟ ಕಾಲಗಳನ್ನು ಬುದ್ಧಿವಂತಿಕೆಯಿಂದಲೂ ದೂರಾಲೋಚನೆಯಿಂದಲೂ ಕೈ ಹಿಡಿತದಿಂದಲೂ ಕಳೆದು, ಆ ಕಾಲವು ತೀರಿದ ಬಳಕ ಸ್ವಲ್ಪ ಸ್ವಲ್ಪವಾಗಿ ಆ ನೋಟುಗಳನ್ನು ಹಿಂದಕ್ಕೆ ತೆಗೆದುಕೊಂಡು ಬಿಟ್ಟರೆ ಅವುಗಳಿಂದ ಯಾವ ಕೆಡುಕೂ ಆಗದು. ಆದರೆ ಶೇಕಡ 95 ಸಂದರ್ಭಗಳಲ್ಲಿ ಹೀಗೆ ಮಾಡುವುದು ಅಸಾಧ್ಯವಾಗಿ, ಮೇಲೆ ಹೇಳಿದಂತೆ ಕಷ್ಟನಷ್ಟಗಳು ಬರುವುದು. ಇದಕ್ಕೆ ಜರ್ಮನಿ, ರಷ್ಯಾ, ಆಸ್ಟ್ರಿಯಾ ಈ ದೇಶಗಳ ಪ್ರಕೃತ ದುರವಸ್ಥೆಯೇ ನಿದರ್ಶನ.

(ಕರ್ನಾಟಕ ಜನಜೀವನ ಮತ್ತು ಅರ್ಥಸಾಧಕ ಪತ್ರಿಕೆ)
ಸೆಪ್ಟೆಂಬರ್ - ಡಿಸೆಂಬರ್ ಸಂಚಿಕೆಗಳು, 1923

❑

## 2. ಸಮಾಜದಲ್ಲಿ ವ್ಯಾಪಾರಸ್ಥರ ಸ್ಥಾನವೇನು?

ಸಮಾಜದಲ್ಲಿ ವ್ಯಾಪಾರಸ್ಥರ ಸ್ಥಾನವೇನು? ಅವರ ಕಾರ್ಯ ಯಾವುದು? ಭರತ ಖಂಡದ ಒಳವ್ಯಾಪಾರ, ಹೊರವ್ಯಾಪಾರ, ಅದರ ಸ್ವರೂಪವೇನು? - ಎಂಬ ಅಂಶಗಳಲ್ಲಿ ಕೆಲವನ್ನು ಕುರಿತು ನಾನು ಈ ದಿನ ಮಾತನಾಡುವವನಿದ್ದೇನೆ. ಈ ಪದವಿಗೆ ನನ್ನನ್ನು ಎತ್ತಿ ಕೂಡಿಸಿದವರಲ್ಲಿ ಒಬ್ಬರು ನಾನು ಉಪಾಧ್ಯಾಯನಾಗಿಯೂ ಅರ್ಥಶಾಸ್ತ್ರವನ್ನು ಬಲ್ಲವನಾಗಿಯೂ ಇರುವುದರಿಂದ, ದೇಶದಲ್ಲಿನ ನಿರುದ್ಯೋಗ ಸಮಸ್ಯೆಯನ್ನು ನಿವಾರಣೆ ಮಾಡುವ ಸಲಹೆಗಳನ್ನು ಕೊಟ್ಟು ಉಪಕಾರ ಮಾಡಬೇಕೆಂದು ಸೂಚಿಸಿದರು. ಆ ಶಕ್ತಿ ನನಗಿಲ್ಲ. ದೇಶದ ವ್ಯಾಪಾರದಲ್ಲಿಯಾಗಲಿ, ಕೈಗಾರಿಕೆಗಳಲ್ಲಿಯಾಗಲಿ ನೇರವಾಗಿ ಪರಿಶ್ರಮವಿಲ್ಲದೆ ಇರುವ ನನಗೆ ಅವುಗಳ ಒಳಮರ್ಮವೇನು, ಕಷ್ಟ ನಿಷ್ಠುರಗಳೇನು ಎಂಬುದು ಚೆನ್ನಾಗಿ ತಿಳಿಯದು. ಅಲ್ಲಿ ಇಲ್ಲಿ ಪುಸ್ತಕಗಳಿಂದ, ಚರ್ಚೆಗಳಿಂದ ತಿಳಿದಿರುವ ಕೆಲವು ಅಂಶಗಳನ್ನು ಮಾತ್ರ ನಾನು ತಮ್ಮಲ್ಲಿ ವಿಜ್ಞಾಪನೆ ಮಾಡಿಕೊಳ್ಳಬಯಸುತ್ತೇನೆ.

ನಮ್ಮ ದೇಶದ ವ್ಯಾಪಾರಗಾರರು ಯಾವ ಕೆಲಸ ಮಾಡಲಿ, ಯಾವ ಕೆಲಸ ಮಾಡದೆ ಇರಲಿ, ಅವರಿಂದ ಅವರಾಗಿ ಮಾಡುತ್ತಿರುವ ವ್ಯಾಪಾರದ ರೀತಿಯಲ್ಲಿ ಅವರ ಪ್ರಯೋಜನಕ್ಕೆ ಅವರು ಹೆಚ್ಚು ಗಮನ ಕೊಡುತ್ತಿರುವರೇ ಹೊರತು ಇತರರಿಗೂ ಹೇಗೆ ಲಾಭ ಹೆಚ್ಚೀತು, ನಷ್ಟ ಹೇಗೆ ಕಡಮೆ ಆದೀತು ಎಂಬುದರ ಕಡೆಗೆ ಅವರ ಗಮನ ಹೆಚ್ಚು ಹೋಗುತ್ತಿಲ್ಲ. ಅಲ್ಲದೆ ದೇಶದ ಉದ್ಯೋಗ ಹೇಗೆ ಹೆಚ್ಚೀತು, ಪ್ರಬಲವಾಗಿರುವ ನಿರುದ್ಯೋಗ ಹೇಗೆ ಕಡಮೆಯಾದೀತು ಎಂಬುದರ ಕಡೆ ಅವರ ದೃಷ್ಟಿ ಹೋಗದೆ ಇದೆ. ನಮ್ಮ ದೇಶದಲ್ಲಿಯೇ ಏನು? ವ್ಯಾಪಾರಸ್ಥರ ಕಾರ್ಯಗಳೆಲ್ಲ ಹೀಗೇ. ಎಲ್ಲೆಲ್ಲಿ ತಮ್ಮ ಕೊಳ್ಳಾಟ ಮಾರಾಟ ಇವು ಹೆಚ್ಚಿದುವೊ ಆಗ ಅವರು ಹೆಚ್ಚು ಜನರನ್ನು ತಮ್ಮ ಕೆಲಸಕ್ಕೆ ಸಹಾಯ ಮಾಡಲು ನಿಯಮಿಸಿಕೊಳ್ಳುವರು. ಯಾವ ಕಾರಣದಿಂದಲೇ ಆಗಲಿ ತಮ್ಮ ಸಂಪಾದನೆ ಕಡಮೆಯಾದೀತೆಂದು ತೋರಿದರೆ, ಆಗ ಅವರು ತಮ್ಮಲ್ಲಿ ಕೆಲಸಕ್ಕೆ ನಿಂತಿರುವ ಜನರಿಗೆ ಕೆಲಸದಿಂದ ನಿವೃತ್ತಿ ಮಾಡುವರು. ಸಾಮಾನ್ಯವಾಗಿ ಎಲ್ಲ ರಂಗಗಳಲ್ಲಿಯೂ ಹೀಗೆಯೇ ಆಗಬಹುದು ಎನ್ನಬಹುದಾದರೂ

ವ್ಯಾಪಾರಸ್ಥರಲ್ಲಿ ಈ ಸಂಗತಿಯ ಪ್ರಭಾವ ಹೆಚ್ಚು. ಅದಕ್ಕೆ ಕಾರಣ ಉಂಟು. ವ್ಯಾಪಾರಸ್ಥರುಗಳೂ ಸಂಸ್ಥೆಗಳೂ ನೇರವಾಗಿ ಉತ್ಪತ್ತಿ ಮಾಡುವವರಲ್ಲ. ಉತ್ಪತ್ತಿಯಾದ ಪದಾರ್ಥಗಳನ್ನು ಭೋಗಿಸುವ ಭೋಕ್ತೃಗಳೂ ಅಲ್ಲ. ತಮ್ಮ ವ್ಯಾಪಾರದ ಸಾಮಗ್ರಿಗಳನ್ನು ಈ ಕೈಲಿ ಕೊಂಡು ಆ ಕೈಲಿ ಮಾರುವವರು. ಅದೇ ಅವರ ಉದ್ಯೋಗ. ಉತ್ಪತ್ತಿ ಮಾಡುವವರಿಂದ ಕೊಂಡು ಬೇಕಾದವರಿಗೆ ಅದನ್ನು ಹೆಚ್ಚಿಕೆಯ ದರದಲ್ಲಿ ಮಾರುವ ಕೆಲಸ ಅವರದು. ಪದಾರ್ಥಗಳನ್ನು ಸ್ಥಳದಿಂದ ಸ್ಥಳಕ್ಕೆ, ಕೈಯಿಂದ ಕೈಗೆ, ದೇಶದಿಂದ ದೇಶಕ್ಕೆ ಸಾಗಿಸುವ ಕೆಲಸದಲ್ಲಿ ತೊಡಗಿರುವವರು ಅವರು. ಈ ಕಾರ್ಯದಲ್ಲಿ ಅವರಿಗೆ ಲಾಭ ಹೆಚ್ಚು ಬರಬೇಕಾದರೆ ಎಷ್ಟು ಅಗ್ಗಕ್ಕೆ ಕೊಂಡರೆ, ಎಷ್ಟು ತಗ್ಗಿಗೆ ಮಾರಿದರೆ ಅಷ್ಟು ಅವರಿಗೆ ಅನುಕೂಲ. ಆದುದರಿಂದ ಉತ್ಪತ್ತಿಗಾರರಿಂದಲೂ ಕೊಂಡು ತಿನ್ನುವವರಿಂದಲೂ ಅವರಿಗೆ ಆಕ್ಷೇಪಣೆ, ಶಾಪ ಬರುವ ಅವಕಾಶ ಹೆಚ್ಚು. ವ್ಯಾಪಾರವೆಂದರೆ 'ದ್ರೋಹ ಚಿಂತನ' ಎಂಬ ಮಹಾವಾಕ್ಯ ಬೇರೆ ನಮ್ಮ ದೇಶದಲ್ಲಿ ಬಳಕೆಯಲ್ಲಿದೆ. ವಸ್ತುಸ್ಥಿತಿಯಲ್ಲಿಯೂ ಎಲ್ಲ (ಕಡೆ) ವ್ಯಾಪಾರ(ಸ್ಥರ) ಸಂಬಂಧದಲ್ಲಿಯೂ ಉತ್ಪತ್ತಿಗಾರರ ಮೇಲೆ ತಿನ್ನುವವರ ಆಕ್ಷೇಪಣೆ ಅತಿಯಾಗಿಯೇ ಇರುವುದು. ಮುಂದಿನ ಕಾಲಗಳಲ್ಲಿ ಖಾಸಗಿ ವ್ಯಾಪಾರಸ್ಥರಿಗೆ ಸಮಾಜದಲ್ಲಿ ಬಹು ಮಾನ್ಯವಾದ ಸ್ಥಾನ ಸಲ್ಲದೆಂದು ಅನೇಕರು ಎಣಿಸಿದ್ದಾರೆ. ಬೇರೆ ಬೇರೆ ದೇಶಗಳಲ್ಲಿ ಪ್ರಬಲಿಸುತ್ತಿರುವ ಸಮಾಜ ಸಮತಾವಾದಿಗಳೂ ಈಗ ಪ್ರಪಂಚದಲ್ಲಿ ಹರಡಿರುವ ಸಹಕಾರ ಪದ್ಧತಿಯೂ ಇವೆರಡೂ ಒಂದರೊಡನೊಂದು ಘರ್ಷಣವಾಗಿ ವ್ಯಾಪಾರಗಾರರು ತಕ್ಕ ಸ್ಥಾನವನ್ನು ಆಕ್ರಮಿಸಿ ಕೊಳ್ಳಲೆಂದೊ ಅವರಿಗೆ ನೇತೃತ್ವವನ್ನು ಕಲ್ಪಿಸಲೆಂದೊ ಅವರಿಗಾಗಿಯೇ ಏರ್ಪಟ್ಟಿರುವುದು. ವ್ಯಾಪಾರಸ್ಥರ ಲಾಭ ಹಿಂದೆ ಹೇಳಿದಂತೆ ಒಂದು ಬಗೆಯ ದಲಾಲಿಯಿಂದ ಬರುವುದರಿಂದಲೂ, ಮಾರುವವರಿಗೆ ಹೆಚ್ಚು ಪ್ರಯೋಜನ ಬಾರದೆ ಕೊಳ್ಳುವವರಿಗೆ ಪದಾರ್ಥ ಅಗ್ಗವಾಗದೆ ನಡುವಿನವರು ಬೆಲೆಯ ಬಹುಭಾಗವನ್ನು ತಮ್ಮ ಕಬಳವನ್ನಾಗಿ ಮಾಡಿಕೊಳ್ಳುವುದರಿಂದಲೂ, ವ್ಯಾಪಾರಸ್ಥರ ಲಾಭ ಕಡಮೆಯಾದರೆ ಉತ್ಪತ್ತಿಗಾರರ ಕ್ಷೇಮವನ್ನಾಗಲೀ ಕೊಂಡುತಿನ್ನುವವರ ಅನುಕೂಲವನ್ನಾಗಲೀ ಲಕ್ಷಿಸದೆ ತಮ್ಮ ಕೈಕೆಳಗೆ ಕೆಲಸ ಮಾಡುವವರನ್ನು ಕೆಲಸದಿಂದ ತೆಗೆದು ಹಾಕುವುದರಿಂದಲೂ ವ್ಯಾಪಾರಗಾರರಿಂದ ನಿರುದ್ಯೋಗ ಸಮಸ್ಯೆ ಬಗೆ ಹರಿಯುವುದಿಲ್ಲವೆಂದು ಹೇಳಬಲ್ಲೆನು.

ಭರತಖಂಡದಲ್ಲಿ 10 ಕೋಟಿ 8 ಲಕ್ಷ ಜನ ವ್ಯವಸಾಯದಿಂದ ಜೀವಿಸುವರು. ಈ ಜನರು ಬಡವರು. ವರ್ಷ ಒಂದಕ್ಕೆ ಅವರ ವರಮಾನ 50-60 ರೂಪಾಯಿಗಳಿಗೆ ಮೀರಿಲ್ಲ. ವ್ಯವಸಾಯಗಾರರ ಮೇಲೆ ಹೊತ್ತಿರುವ ಸಾಲದ ಹೊರೆ ಒಟ್ಟಿಗೆ ಕಡಮೆ ಎಂದರೆ 900 ಕೋಟಿ ರೂಪಾಯಿಗಳಷ್ಟಾದರೂ ಆಗುವುದು. ಅವರ ಉತ್ಪತ್ತಿಯನ್ನು ಒಳ್ಳೆಯ ಸ್ಥಿತಿಯಲ್ಲಿ ಮಾರಿದರೆ ಹೆಚ್ಚೆಂದರೆ 1500 ಕೋಟಿ ರೂಪಾಯಿಗಳಷ್ಟು ಬೆಲೆ ಬರುವುದೂ ಕೂಡ ಕಷ್ಟವಾಗುವುದು. ಇಂಥವರ ಉತ್ಪತ್ತಿಯನ್ನು ಹೆಚ್ಚು ಮಾಡಿ ಅದಕ್ಕೆ ಮೇಲ್ತರದ ಪ್ರಯೋಜನ ಬರುವಂತೆ ಪದಾರ್ಥಗಳನ್ನು ಮಾರಿ ಅವರ ಸುಭಿಕ್ಷವನ್ನು



ಸಾಧಿಸುವ ಕಾರ್ಯವನ್ನು ದೇಶದವರೆಲ್ಲ ಕೈಕೊಳ್ಳಬೇಕಾಗಿರುವಾಗ, ವ್ಯಾಪಾರಸ್ಥರು ಅದಕ್ಕೆ ಹೆಚ್ಚಿನ ಗಮನ ಕೊಡಬೇಕಾದದ್ದು ಅಗತ್ಯವಾಗುವುದು. ಈ ಬಗೆಯ ನೆರವು ದೊರೆಯುತ್ತಿಲ್ಲ. ಹಲವು ವೇಳೆ ವ್ಯಾಪಾರಗಾರರು ದುರ್ಬಲರಾದ, ಸಂಘಕಟ್ಟುಗಳಿಲ್ಲದ ವ್ಯವಸಾಯಗಾರರ ತಬ್ಬಲಿತನವನ್ನು ತಮ್ಮ ಪ್ರಯೋಜನಕ್ಕೆ ತಿರುಗಿಸಿಕೊಳ್ಳುವರು. ತೂಕ, ರುಸುಮು, ಬಾಡಿಗೆ, ದಲಾಲಿ ಮುಂತಾದ ಹಲವು ಬಗೆಯ ಖರ್ಚುಗಳನ್ನು ಅವರ ಮೇಲೆ ಹಾಕಿ ಅವರಿಗೆ ಬರಬಹುದಾದ ಪ್ರಯೋಜನವನ್ನು ಕಡಮೆ ಮಾಡುತ್ತಿರುವುದು ಎಲ್ಲರಿಗೂ ತಿಳಿದಿರುವ ಸಂಗತಿ. ಹಲವು ವೇಳೆ ವ್ಯಾಪಾರಸ್ಥರು ವ್ಯವಸಾಯಗಾರರನ್ನು ತಮ್ಮ ಸಾಲಗಾರರನ್ನಾಗಿ ಮಾಡಿಕೊಂಡು ಅವರು ಉತ್ಪತ್ತಿ ಮಾಡಿದ ಪದಾರ್ಥಗಳನ್ನು ತಮಗೆ ಕಡಮೆ ಬೆಲೆಗೆ ಮಾರುವಂತೆಯೂ ಬಡ್ಡಿಗೆ ಅಸಲಿಗೆ ಜಮ ಮಾಡಿಕೊಳ್ಳುವಂತೆಯೂ ಮಾಡುವುದರಿಂದ ವ್ಯವಸಾಯಗಾರರ ಭಾರವು ಕಡಮೆ ಆಗುತ್ತಿದೆ. ಇತ್ತ ಕಡೆ ಕೊಂಡು ತಿನ್ನುವವರ ಪ್ರಯೋಜನವಾದರೂ ದೊರಕುವಂತೆ ಆದರೆ ಎಷ್ಟೋ ಸಾಧಕವುಂಟಾಗುವುದು. ಅದೂ ಇಲ್ಲ, ಒಂದು ರೂಪಾಯಿ ಬೆಲೆ ತೆರಬೇಕಾದ ಪದಾರ್ಥದಲ್ಲಿ ಎರಡಾಣೆ ಭಾಗ ಉತ್ಪತ್ತಿಗಾರರಿಗಾದರೆ ಉಳಿದ ಹದಿನಾಲ್ಕು ಆಣೆಯ ಅಂಶದ ಭಾಗ ನಡುವೆ ನಿಂತಿರುವ ವ್ಯಾಪಾರಿಗಳ, ದಲಾಲಿಗಳ ಭಾಗವಾದರೆ ಸಮಾಜದ ಮಂಗಳವನ್ನು ಸಾಧಿಸುವ ಉದ್ಯಮದಲ್ಲಿ ವ್ಯಾಪಾರಸ್ಥರ ಭಾಗ ಅಷ್ಟೇನೂ ದೊಡ್ಡದಾಗುವುದಿಲ್ಲವೆಂಬ ಸಂಗತಿಯನ್ನು ನಾನು ತಮ್ಮಲ್ಲಿ ಬಿನ್ನವಿಸಿಕೊಳ್ಳಬೇಕಾಗಿದೆ. ಇದು ಕಟುವಾದ ಮಾತಾದರೆ ತಾವು ಕ್ಷಮಿಸಬೇಕೆಂದು ಬೇಡುತ್ತೇನೆ.

ಭರತ ಖಂಡದ ವ್ಯಾಪಾರದಲ್ಲಿ ಹೊರದೇಶದ ವ್ಯಾಪಾರವೆಲ್ಲಾ ಸುಮಾರು 500 ಕೋಟಿ ರೂಪಾಯಿಗೆ ಮೀರಿದಷ್ಟು ವ್ಯಾಪಾರವನ್ನು ನಮ್ಮ ದೇಶದವರಲ್ಲದ ಇತರರು ಮಾಡುತ್ತಿದ್ದಾರೆ. ಇವರಲ್ಲಿ ನಮ್ಮವರೇ ಹೆಚ್ಚಾಗಿ ವ್ಯಾಪಾರವನ್ನು ನಡಸಿದ ಹೊರತು ಹೊರದೇಶದ ವ್ಯಾಪಾರದ ಲಾಭಗಳಿಂದ ಆಗಬಹುದಾದ ನಮ್ಮ ಸಂಪದಭಿವೃದ್ಧಿಯ ಮಾರ್ಗಗಳ ಉಪಯೋಗಗಳಾವುವೂ ನಮಗೆ ದೊರೆಯುವಂತಿಲ್ಲ. ಹಂಪೆಯಲ್ಲಿ ಆಳುತ್ತಿದ್ದ ಸಾಮ್ರಾಟರು ದೇಶವಿದೇಶಗಳಿಂದ ಪದಾರ್ಥಗಳನ್ನು ತರಿಸಿಕೊಂಡು, ದೇಶವಿದೇಶಗಳಿಗೆ ತಮ್ಮ ಸಾಮಾನುಗಳನ್ನು ಕಳುಹಿಸಿ ಕೀರ್ತಿಯನ್ನು ಗಳಿಸಿಕೊಂಡರು. ಅವುಗಳ ವೃತ್ತಾಂತವು ಚರಿತ್ರೆಯಲ್ಲಿ ಪೂರ್ಣವಾಗಿ ವರ್ಣಿತವಾಗಿದೆ. ಇಂಥ ಪ್ರದೇಶದಲ್ಲಿ ನಿಂತಿರುವ ನಾವು ಆ ಸಾಮ್ರಾಜ್ಯದ ಅಳಿದ ಮುರಿದ ಅವಶೇಷಗಳನ್ನು ಇಲ್ಲಿ ಹೇಗೆ ಕಾಣುತ್ತಿದ್ದೇವೊ ಹಾಗೆಯೇ ಅವರ ಮಹತ್ವವನ್ನು ಮಹಿಮೆಯನ್ನು ಉಳಿಸಿಕೊಳ್ಳದೆ ನಿರ್ವೀರ್ಯರಾಗಿರುವ ಇದೇ ಭಾರತದವರನ್ನು ನೋಡುತ್ತಿದ್ದೇವೆ. ಅಂದಿನ ವೈಭವವೂ ಅವುಗಳಿಂದ ತೋರುವ ಸಂಪತ್ತೂ ಕ್ಷೇಮಾಭಿವೃದ್ಧಿಗಳು ಪುನಃ ಈ ನಾಡಿಗೆ ಎಂದು ಬಂದಾವು? ಹೊರದೇಶದ ವ್ಯಾಪಾರಗಳ 10-15 ರಷ್ಟು ಹೆಚ್ಚು ಪ್ರಮಾಣವುಳ್ಳದ್ದು ಭರತಖಂಡದ ಒಳ ವ್ಯಾಪಾರ. ಅದರಲ್ಲಿ

ಈಗಲೂ ಒಂದು ವ್ಯವಸ್ಥೆ, ಒಂದು ಧರ್ಮ, ಒಂದು ದೇಶಹಿತ ಬುದ್ಧಿ, ಒಂದು ಸಮಾಜ ಮಂಗಳದ ಆಕಾಂಕ್ಷೆ, ಗೊತ್ತಾದ ನಂಬಲರ್ಹವಾದ ಒಂದು ಸದ್ವರ್ತನೆ ಇವುಗಳಿದ್ದರೂ ಜನರು ಮನಸ್ಸಿನಲ್ಲಿ ವ್ಯಥೆಪಟ್ಟಿದ್ದಾರೆ. ಕರ್ಣಾಟಕ ಪ್ರಾಂತದವರಾದ ನಾವು ಈ ಒಳ ದೇಶದ ವ್ಯಾಪಾರದಲ್ಲಿಯಾಗಲಿ, ಇಲ್ಲಿನ ಕೈಗಾರಿಕೆ ಅಭಿವೃದ್ಧಿಗಳಲ್ಲಿಯಾಗಲಿ, ಯಾವ ಬಗೆಯ ಆರ್ಥಿಕ ರಾಜ್ಯ ಸಾಹಸದಲ್ಲಿಯಾಗಲಿ ಪ್ರಬಲಿಸಿಲ್ಲ. ಕರ್ಣಾಟಕರು ಇಂದು ಭರತ ಖಂಡದಲ್ಲಿ ಒಂದು ದೊಡ್ಡ ಸೊನ್ನೆ. ಭರತಖಂಡದಲ್ಲಿ ಪ್ರಬಲರಾಗಿರುವ ಉದ್ಯೋಗಿಗಳು ವ್ಯಾಪಾರಗಾರರು ಧನಿಕರು ಸಾಹಸಿಗಳು ಗುಜರಾತಿಗಳು, ಸಿಂಧಿಗಳು, ಮಾರವಾರಿಗಳು, ಸಂಯುಕ್ತ ಪ್ರಾಂತಗಳವರು, ಮದರಾಸಿಗಳು, ಇವರಲ್ಲದ ಪಾಶ್ಚಾತ್ಯ ಜನಾಂಗದವರು. ಕನ್ನಡ ದೇಶದಲ್ಲಿ ದೊಡ್ಡ ರಾಜ್ಯಗಳು ಹುಟ್ಟಿದುವು, ಬೆಳೆದುವು. ಒಳ್ಳೆಯ ಕಲೆ, ಸಂಸ್ಕೃತಿ, ಧರ್ಮ ಇವು ಹುಟ್ಟಿ ಬೆಳೆದವು. ದೊಡ್ಡ ಸಾಧನೆಗಳು ಈಗಿಗೂ ನಮ್ಮ ಕಣ್ಣೆದುರಿಗೆ ನಿಲ್ಲುವಂತೆಯೂ ಆಯಿತು. ಆದರೆ ಇಂಗ್ಲಿಷ್ ಕವಿಯೊಬ್ಬನು ಹೇಳುವಂತೆ,

> What are monuments of bravery where no public virtues bloom,
> What avail in lands of slavery trophied temples, arch and tombs!

ಇಂದಿನ ಜೀವನಕ್ಕೆ ಹಿಂದಿನ ವೈಭವ ಸ್ಫೂರ್ತಿ ಕೊಡದಿದ್ದರೆ ಅದರ ಪ್ರಯೋಜನವಾದರೂ ಏನು? ಕನ್ನಡ ದೇಶದ ವರ್ತಕರು ಮುಂದೆ ಬಂದು ಈ ನಾಡಿನ ಉತ್ಪತ್ತಿಯನ್ನು ಮುಂದರಿಸಿ, ದೇಶದ ಸಂಪತ್ತನ್ನು ಒಂದು ಬಗೆಯಾಗಿ ಕೂಡಿಸಿ ಅದಕ್ಕೆ ಪ್ರಪಂಚದ ಪೇಟೆಗಳಲ್ಲಿ ಸ್ಥಾನಮಾನಗಳನ್ನು ತಂದುಕೊಟ್ಟು, ವರ್ತಕ ಗಣ್ಯವರ್ಗಗಳಲ್ಲಿ ತಾವೂ ಮಾನ್ಯವಾದ ಸ್ಥಾನವನ್ನು ಪಡೆದುಕೊಂಡು, ಒಂದು ಕಡೆ ತಾವು ಯಾವ ಕಾರ್ಯವನ್ನು ಮಾಡುತ್ತಿರುವರೋ ಅದರ ಕರ್ತವ್ಯದಲ್ಲಿ ಪ್ರಾಮಾಣಿಕತೆಯನ್ನು ಹಬ್ಬಿಸಿ, ಇನ್ನೊಂದು ಕಡೆ ಉತ್ಪತ್ತಿಗಾರರ ಪ್ರಯೋಜನವನ್ನು ಹೆಚ್ಚುಮಾಡಿ, ವರ್ಷದ ಆದಾಯ ಅವರ ಪದಾರ್ಥ ಬೆಲೆ ಹೆಚ್ಚಿ ಹೆಚ್ಚು ಲಾಭ ತೋರುವಂತೆ ಹೆಚ್ಚು ಸುಖ ತೋರುವಂತೆ ಅವರಿಗೆ ಮಾಡಿಕೊಟ್ಟು, ಇತರ ಕೊಂಡು ತಿನ್ನುವ ಜನರಿಗೆ ಆದಷ್ಟು ಅಗ್ಗವಾದ ಬೆಲೆಗಳಿಗೆ ದೇಶವಿದೇಶಗಳ ಪದಾರ್ಥಗಳನ್ನು ಒದಗಿಸಿಕೊಟ್ಟು ಸಮಾಜದಲ್ಲಿ  ತಮ್ಮ ಕಾರ್ಯಕ್ಕೆ ಅನುಗುಣವಾಗಿ ಲಾಭವನ್ನು ತಾವೂ ಸಂಪಾದಿಸಿ, ಇಲ್ಲಿನ ವರ್ತಕ ಮಂಡಲಿಯಿಂದ ಜನದ ಕಲ್ಯಾಣವನ್ನು ನಡಸುವುದರಲ್ಲಿ ದೀಕ್ಷೆಗೊಂಡರೆ ಅಂದು ಅವರು ತಮ್ಮ ಬದುಕನ್ನು ಸಾರ್ಥಕಗೊಳಿಸಿಕೊಂಡ ಹಾಗೆ ಆಗುತ್ತದೆ. ಕಡಿಮೆ ವಸ್ತುಗಳ ಮೇಲೆ ಹೆಚ್ಚು ದರದ ಲಾಭವನ್ನು ಸಂಪಾದಿಸಿಕೊಂಡು, ಪದಾರ್ಥಗಳ ಬೆಲೆಯನ್ನು ಹೆಚ್ಚಿಸಿ ತಮ್ಮ ಪೋಷಣೆಯನ್ನು ತಾವು ಮಾಡಿಕೊಳ್ಳುವ ಉದ್ಯಮಗಳಿಗಿಂತ ಹೆಚ್ಚು ಪ್ರಮಾಣದ ವ್ಯಾಪಾರವನ್ನು ಕೈಗೊಂಡು, ಲಾಭದ ದರ ಬಹಳ ಕಡಮೆಯಾದರೆ ಒಟ್ಟಿನಲ್ಲಿ ಹೆಚ್ಚು ಲಾಭ ತಮಗೆ ಬರುವಂತೆ



ತಮ್ಮ ವ್ಯಾಪಾರದ ಪ್ರಮಾಣವನ್ನು ಹೆಚ್ಚು ಮಾಡಿಕೊಳ್ಳುವುದು ಭಾರಿ ವರ್ತಕರ ಮತ್ತು ಸಮಾಜದ ಮಂಗಳಗಳೆರಡನ್ನೂ ಸಾಧಿಸೀತೆಂದು ನಾನು ಎಣಿಸಿದ್ದೇನೆ. ಈ ದೇಶದ ವ್ಯಾಪಾರವಾಗಲಿ ಉದ್ಯೋಗವಾಗಲಿ ಕೋಟ್ಯಂತರ ರೂಪಾಯಿಗಳಾಗಬೇಕಾಗಿರುವುದರಿಂದ ಜನ ದೊಡ್ಡ ವ್ಯಾಪಾರಗಳನ್ನು ಕೈಗೊಳ್ಳುವುದಕ್ಕೆ ಹಿಂದೆಗೆಯಬಾರದು. ಸಣ್ಣ ವ್ಯಾಪಾರಗಳಲ್ಲಿ ಮೊದಲು ಮಾಡಿದರೂ ಅಷ್ಟಕ್ಕೇ ನಿಲ್ಲದೆ ಮುಂದುವರೆಯಬೇಕು. ಆದರೆ ಸಣ್ಣ ಸಂಪತ್ತುಗಳು ಬಂದ ಕೂಡಲೆ ಎಚ್ಚರಿಕೆ ತಪ್ಪಬಾರದು. ವ್ಯಾಪಾರಸ್ಥ ಸಂಘ ಸಂಸ್ಥೆಗಳೂ ಉದ್ಯೋಗ ಸಂಸ್ಥೆಗಳೂ ನೂರಾರು ವರ್ಷ ನಿಲ್ಲುವ ಏರ್ಪಾಟುಗಳನ್ನು ಮಾಡಿಕೊಳ್ಳಬೇಕು. ಇತರರಿಗೆ ಸಮನಾಗಿ ಮುಂದೆ ಬರುವುದಕ್ಕೆ, ನಮ್ಮ ಸಂಪತ್ತನ್ನು ನಾವು ರೂಢಿಸಿಕೊಳ್ಳುವುದಕ್ಕೆ ಒಮ್ಮುಖವಾಗಿ ಐಕಮತ್ಯದಿಂದ ಶ್ರದ್ಧೆಯಿಂದ ಹುರುಪಿನಿಂದ ನಿಲ್ಲಬೇಕು. ಇದಾದ ಹೊರತು ನಮ್ಮ ದೇಶದ ವ್ಯಾಪಾರಕ್ಕೆ, ಉದ್ಯೋಗಕ್ಕೆ ಮಂಗಳವನ್ನುಂಟುಮಾಡುವ ಗುಣ ಬಾರದು.

ಅಖಿಲ ಕರ್ನಾಟಕ ಮೂರನೆಯ
ವ್ಯಾಪಾರಿ ಪರಿಷತ್ತಿನ ಅಧ್ಯಕ್ಷ ಭಾಷಣ, ಹಂಪಿ, 1936

❑

# 3. ನಮ್ಮೆದುರಿಗೆ ಇರುವ ಪ್ರಮುಖ ಸಮಸ್ಯೆಗಳು

ನಮ್ಮೆದುರಿಗೆ ಇಂದು ಪ್ರಾಮುಖ್ಯತೆಯಿಂದಿರುವ ಸಮಸ್ಯೆಗಳು ಎರಡು. ಒಂದು ಆರ್ಥಿಕ ದುರ್ದಶೆ, ಎರಡನೆಯದು ನಿರುದ್ಯೋಗ. ವಿಜಯನಗರದ ಘನತೆಗೆ ಇವೆರಡೂ ಕುತ್ತುಗಳಿಲ್ಲದ್ದೆ ಕಾರಣವು. ಈ ಮಾತಿನಿಂದ ಪಾಠವನ್ನು ಕಲಿಯುವಂತಿದೆ. ಕರ್ನಾಟಕದಲ್ಲಿ ಮಾಡಬೇಕಾದ ಮುಖ್ಯ ಕಾರ್ಯವೆಂದರೆ ನಮ್ಮ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವುದು.

ನಮ್ಮ ದೇಶದಲ್ಲಿ ನೂರಕ್ಕೆ 70 ಜನರು ಒಕ್ಕಲುತನವನ್ನೇ ಅವಲಂಬಿಸಿರುತ್ತಾರೆ. ಸಾವಿರಾರು ಜನರ ವ್ಯಾಪಾರದ ಸ್ಥಿತಿಯು ಸರಿಯಾಗಿಲ್ಲ. ಬಡತನವು ವಿಶೇಷವಾಗಿದೆ. ವ್ಯಾಪಾರಿಗಳು ಉತ್ಪತ್ತಿದಾರನಿಗೂ ಇತರರಿಗೂ ಮಧ್ಯೆ ಇರುವ ಕೊಂಡಿಯು. ಉತ್ಪತ್ತಿಯಾದ ಸಾಮಾನನ್ನು ಮಾರಾಟಕ್ಕೆ ತರುವಾಗ ಆತನಿಗೆ ಅನೇಕ ಕಷ್ಟ ನಷ್ಟಗಳು ಉಂಟಾಗುತ್ತವೆ. ನಮ್ಮ ವ್ಯಾಪಾರವು ಸುಸಂಘಟಿತವಾಗಿಲ್ಲ. ವ್ಯಾಪಾರದ ಬಗ್ಗೆ ಹೆಚ್ಚಿನ ಸಂಗತಿಗಳು ನಮ್ಮ ಜನರಿಗೆ ಇನ್ನೂ ತಿಳಿದಿಲ್ಲ. ನಮ್ಮ ಪರಿಸ್ಥಿತಿಯು ಅತಿ ಶೋಚನೀಯವಾಗಿದೆ. ಹೊಟ್ಟೆಗಿಲ್ಲದೆ ಹೊಡೆದಾಡುತ್ತಿರುವವರಿಗೆ ಧರ್ಮಬೋಧೆ ಮಾಡುವುದು ಅಧರ್ಮ. ಹೊಟ್ಟೆಗಿಲ್ಲದವರಿಗೆ ಧರ್ಮಬೋಧೆಯೇಕೆ? ಮೊದಲು ಬದುಕು ಚನ್ನಾಗಿದ್ದರೆ ಎಲ್ಲವೂ ಚನ್ನಾಗಿರುವುದು. ಆಹಾರ, ಬಟ್ಟೆ, ಸುಖ ಮೊದಲಾದವು ಪ್ರತಿಯೊಬ್ಬನಿಗೂ ಬೇಕಾಗಿವೆ. ಆದರೆ ಅವುಗಳನ್ನು ಪಡೆಯುವುದು ಮಾತ್ರ ಸುಲಭ ಸಾಧ್ಯವಲ್ಲ. ಕಟ್ಟು ಕುಟುಂಬ ಪದ್ಧತಿ, ಆಸ್ತಿ ವಿಭಾಗ ಮೊದಲಾದವು ಪ್ರಗತಿವಿಘಾತಕಗಳಾಗಿವೆ. ನಮ್ಮ ದೇಶದ ಜನರಿಗೆ ಸುಮಾರು 900 ಕೋಟಿ ರೂ. ಸಾಲವಿದೆಯೆಂದು ತಿಳಿಯುತ್ತದೆ. ಆದರೆ ಉತ್ಪತ್ತಿ ಮಾತ್ರ 150 ಕೋಟಿ ಇರುವುದು. ಅಂದರೆ ಪ್ರತಿಯೊಬ್ಬನಿಗೂ ಕೇವಲ 5 ರೂ. ಮಾತ್ರ ಇದೆ.

ನಮ್ಮ ದೇಶದ ವ್ಯಾಪಾರಸ್ಥರ ಸ್ಥಿತಿ ಬಹಳ ಕೆಟ್ಟಿರುವುದು. ಅವರಲ್ಲಿ ಅವ್ಯವಸ್ಥೆ ಬಹಳ ಇದೆ. ಅನೈಕಮತ್ಯ, ಅಸೂಯೆ, ಅಸಂತೋಷ, ಅತೃಪ್ತಿಗಳು ಅವರಲ್ಲಿ ವಿಶೇಷವಾಗಿವೆ. ಪರದೇಶದಿಂದ ಅನೇಕರು ಬಂದು ನಮ್ಮ ವರ್ತಕರ ಸಂಘಟನೆಯನ್ನು ಜರೆದಿರುತ್ತಾರೆ. ಮೈಸೂರು ಬ್ಯಾಂಕಿನ ವ್ಯವಹಾರ ಕೇವಲ 5 ಕೋಟಿ ರೂ. ಗಳಷ್ಟು ಮಾತ್ರ ಇದೆ. ಆದರೆ ಗುಜರಾತೀ ಜನರು ಸುಮಾರು 71.3 ಕೋಟಿ ವ್ಯವಹಾರವನ್ನು ಮಾಡುತ್ತಿದ್ದಾರೆ. ನಮ್ಮ ಮೈಸೂರಿನ ವ್ಯಾಪಾರಿಗಳು ಈಗ ಎಲ್ಲಿರುವರು? ಏನು ಮಾಡುತ್ತಿರುವರು? ಹತ್ತಿ, ಕಬ್ಬಿಣ, ಗೋಧಿ ಮೊದಲಾದವುಗಳ ವ್ಯಾಪಾರವನ್ನು ನಿಮ್ಮದನ್ನಾಗಿ ಏಕೆ ಮಾಡಿಕೊಳ್ಳಬಾರದು? ನಮ್ಮ ವರ್ತಕರು ಈ ಬಗ್ಗೆ ಯಾಕೆ ವಿಚಾರಿಸುವುದಿಲ್ಲ? ಈಗ 6-7 ವರ್ಷಗಳಿಂದ ಆರ್ಥಿಕ ಮುಗ್ಗಟ್ಟು ಇದೆಯೆಂಬುದನ್ನು ಎಲ್ಲರೂ ಒಪ್ಪುವರು. ಕೊಳ್ಳುವ ವಸ್ತು ಇದೆ, ಕೊಡುವ ಜನರಿದ್ದಾರೆ, ಆದರೆ ಕೊಳ್ಳತಕ್ಕ ಜನರು ಮಾತ್ರ ಇಲ್ಲ. ಇಂತಹ ಶಕ್ತಿಯನ್ನು ಉಂಟು ಮಾಡುವುದು ಸಮಾಜದವರ, ಸರಕಾರದವರ ಕರ್ತವ್ಯ. ಇನ್ನು ಬಹುಸಂಖ್ಯಾತ ಬ್ಯಾಂಕುಗಳು ಪರದೇಶದ ಜನರಿಗೆ ಸೇರಿದವು. ನಮ್ಮ ದೇಶದ ಜನರು – ಅದರಲ್ಲಿಯೂ ವರ್ತಕರು – ಇವುಗಳನ್ನು ತಮ್ಮ ಕೈಯಲ್ಲಿ ತೆಗೆದುಕೊಳ್ಳಲು ಯಾಕೆ ಪ್ರಯತ್ನಿಸುವುದಿಲ್ಲ? ಇನ್ನು ಮಾರ್ಗ ಸೌಕರ್ಯಗಳ ವಿಷಯಕ್ಕೂ ಇದೇ ಮಾತನ್ನೇ ಹೇಳಬೇಕಾಗಿದೆ. ಸೊಲ್ಲಾಪುರದಿಂದ ಮುಂಬಯಿಗೆ 283 ಮೈಲು ದೂರ ಇರುವುದು. ಆದರೆ ಸೊಲ್ಲಾಪುರದಿಂದ ಮುಂಬಯಿಗೆ ಒಂದು ಸಾಮಾನು ತೆಗೆದುಕೊಂಡು ಹೋಗಲು ಎಷ್ಟು ಖರ್ಚಾಗುವದೋ ಅದಕ್ಕಿಂತ ಕಡಿಮೆ ಖರ್ಚಿನಲ್ಲಿ ಆ ವಸ್ತುವನ್ನು ಜಪಾನಿಗೆ ತೆಗೆದುಕೊಂಡು ಹೋಗಿ ಮತ್ತೆ ಹಿಂದಕ್ಕೆ ತೆಗೆದುಕೊಂಡು ಬರಲು ಸಾಧ್ಯವಿದೆ. ಈ ರೀತಿ ಉತ್ಪತ್ತಿಯ ವೆಚ್ಚವು ಒಂದಕ್ಕೆ ನಾಲ್ಕರಷ್ಟು ಆಗಿ, ನಮ್ಮ ವ್ಯಾಪಾರವನ್ನು ಹೆಚ್ಚಿಸಿಕೊಳ್ಳಲು ನಮಗೆ ಅವಕಾಶವಿಲ್ಲ. ನಮ್ಮ ದೇಶದಲ್ಲಿ ವಿದೇಶದವರು 1000 ಕೋಟಿ ಬಂಡವಾಳವನ್ನು ಹಾಕಿದ್ದಾರೆ. ನಮ್ಮ ಜನರದು ಕೇವಲ 3 ಕೋಟಿ ಬಂಡವಾಳ ಮಾತ್ರ ಇದೆ. ಅಂತೂ ನಮ್ಮ ದೇಶದ ಮೇಲೆ ಪರದೇಶದವರ ಕೈವಾಡವು ಹೆಚ್ಚುತ್ತಿದೆ. ರಾಜಕೀಯ ಗುಲಾಮಗಿರಿಯು ಆರ್ಥಿಕ ದಾಸ್ಯಕ್ಕೆ ಕಾರಣವಾಗುತ್ತದೆಂಬ ಮಾತು ಸುಳ್ಳಲ್ಲ. ನಾವು ಬ್ರಾಹ್ಮಣ–ಬ್ರಾಹ್ಮಣೇತರ ಮೊದಲಾದ ಭೇದಭಾವದ ಬೀಜಗಳನ್ನು ಬಿತ್ತಿ, ನಮ್ಮ ಆರ್ಥಿಕ ಜೀವನವನ್ನು ಹಾಳುಮಾಡಿಕೊಂಡಿದ್ದೇವೆ. ನಮ್ಮ ಕತೆಯೆಲ್ಲವೂ ದ್ರೋಹದ ಕತೆಯಾಗಿದೆ. ಆದ್ದರಿಂದ ಇದನ್ನೆಲ್ಲ ಸರಿಪಡಿಸಿ ಆರ್ಥಿಕ ಸುಧಾರಣೆ ಮಾಡುವುದು ನಮ್ಮ ವರ್ತಕರ ಕರ್ತವ್ಯವು.

ನಮ್ಮ ಆರ್ಥಿಕ ದುರ್ದಶೆಗೆ ನಮ್ಮ ಪಾರತಂತ್ರ್ಯವೆ ಮುಖ್ಯ ಕಾರಣವಾಗಿದೆ. ವಿಜಯನಗರ ಕಾಲದ ಆರ್ಥಿಕ ಘನತೆಯ ಭವ್ಯ ಮಂದಿರವನ್ನು ನಾವು ಕಟ್ಟದೆ ಹೋದರೆ ನಾವು ಉತ್ಸವವನ್ನು ಇಷ್ಟು ವಿಜೃಂಭಣೆಯಿಂದ ಜರುಗಿಸಿಯೂ ವ್ಯರ್ಥವೇ ಸರಿ. ನಮ್ಮ ಆರ್ಥಿಕ ಉದ್ಧಾರಕ್ಕಾಗಿ ದೊಡ್ಡ ಬಂದರುಗಳನ್ನು, ಕಾರ್ಖಾನೆಗಳನ್ನು, ಮಾರಾಟಕ್ಕೆ ಯೋಗ್ಯ ಅನುಕೂಲತೆಗಳನ್ನು ಕಲ್ಪಿಸಬೇಕು. ವ್ಯಾಪಾರವು ಸರಿಯಾಗಿ ಸಾಗುವುದಕ್ಕಾಗಿ ಒಂದು ಮಧ್ಯವರ್ತಿಮಂಡಲವನ್ನು ಏರ್ಪಡಿಸಬೇಕು. ಕರ್ನಾಟಕದ ವ್ಯವಹಾರಸ್ಥರೆಲ್ಲರೂ ಪರಸ್ಪರ ಸಹಕಾರದಿಂದ ವ್ಯಾಪಾರ-ಉದ್ದಿಮೆಗಳ ಪುನರುಜ್ಜೀವನವನ್ನು ಮಾಡಿಕೊಳ್ಳಬೇಕು.

ಅಖಿಲ ಕರ್ನಾಟಕ ಮೂರನೆಯ ವ್ಯಾಪಾರಿ ಪರಿಷತ್ತಿನ
ಅಧ್ಯಕ್ಷ ಭಾಷಣದ ಸಾರಾಂಶ, ಹಂಪಿ, 1936

# 4. ನಮ್ಮ ಪತ್ರಿಕೋದ್ಯಮ

*(20-02-1944ರ ಬೆಳಗ್ಗೆ ಹತ್ತು ಗಂಟೆಗೆ ಒಂದು ವಿಚಾರ ಗೋಷ್ಠಿ ಏರ್ಪಟ್ಟಿತ್ತು. ಶ್ರೀ ವಿ. ಸೀತಾರಾಮಯ್ಯನವರು ವೃತ್ತಪತ್ರಿಕಾ ವೃತ್ತಿಗೆ ಸಂಬಂಧಿಸಿದ ವಿಶೇಷ ವಿಚಾರ ವಿನಿಮಯ ಕೂಟದ ಆರಂಭ ಭಾಷಣ ಮಾಡಿದರು. ಯಾವ ಪತ್ರಿಕೆಯೇ ಆಗಲಿ ತನ್ನ ವೈಶಿಷ್ಟ್ಯವನ್ನು ಉಳಿಸಿಕೊಳ್ಳಬೇಕಾದರೆ ಅದರ ಸಂಚಾಲಕರು ಮೊದಲಾದವರು ಯಾವ ರೀತಿ ಯತ್ನಿಸಬಹುದು ಎಂದು ಮಾತನಾಡುತ್ತಾ ಸಭಿಕರ ಮುಂದೆ ಹಲವು ಉಪಯುಕ್ತ ಸಲಹೆಗಳನ್ನಿಟ್ಟರು. ಆಮೇಲೆ ಶ್ರೀಗಳಾದ ಪಿ. ಆರ್. ರಾಮಯ್ಯನವರು, ಕಡೆಂಗೋಡ್ಲು ಶಂಕರಭಟ್ಟರು, ಕೋ.ಶಿ.ಕಾರಂತರು ಮತ್ತು ನಂಜುಂಡರಾಯರು ಪತ್ರಿಕೆಗಳ ಒಂದೊಂದು ವಿಶೇಷ ಲಕ್ಷಣಗಳನ್ನು ಕುರಿತು ಮಾತನಾಡಿದರು. ಸಂಪಾದಕರ ಸಮಸ್ಯೆಗಳು ಮತ್ತು ಕಾರ್ಯ ಎಂಬುದನ್ನು ಕುರಿತು ರಾಮಯ್ಯನವರು, ಸುದ್ದಿಗಾರರ ಪ್ರಪಂಚವನ್ನು ಕುರಿತು ಕಡೆಂಗೋಡ್ಲು ಅವರು, ಪತ್ರಿಕೆಗಳನ್ನು ಹೆಚ್ಚು ಆಕರ್ಷಕವಾಗಿಯೂ ಉಪಯುಕ್ತವಾಗಿಯೂ ಮಾಡುವ ಬಗೆಗಳಾವುವು ಎಂಬ ಬಗೆಗೆ ನಂಜುಂಡರಾಯರು ಸ್ವಾರಸ್ಯವಾಗಿ ಮಾತನಾಡಿದರು. ಆರಂಭದಲ್ಲಿಯೂ ಕಡೆಗೂ ಸೀತಾರಾಮಯ್ಯನವರು ಆಡಿದ ಮಾತುಗಳನ್ನು ಹೀಗೆ ಸಂಗ್ರಹಿಸಬಹುದು.)*

ಒಳದೇಶ-ಹೊರದೇಶ ಪತ್ರಿಕೆಗಳನ್ನು ಓದುವುದರಲ್ಲಿ ಆಸಕ್ತನಾದವನೆಂದು ಕಾರಣ ಹೇಳಿ ವೃತ್ತಿಯಲ್ಲಿ ಬೇರೆಯಾದವನೊಬ್ಬನು ನಮ್ಮ ಪತ್ರಿಕೆಗಳನ್ನು ಕುರಿತು ಏನು ಹೇಳಬಹುದು ಎಂದು ತಿಳಿಯಲು ನನ್ನನ್ನು ಈ ಗೌರವಕ್ಕೆ ಆರಿಸಿದುದಕ್ಕಾಗಿ ಋಣಿಯಾಗಿದ್ದೇನೆ. ನನ್ನ ಅಧಿಕಾರದ ಸ್ವರೂಪ ಹೀಗೆ ವಿಶದವಾಯಿತು, ಖಚಿತ ವಾಯಿತು. ವೃತ್ತಪತ್ರಿಕೆಗಳ ಕಷ್ಟ ಸುಖ ಏನೆಂಬುದನ್ನು ಬಲ್ಲ ಮಾನ್ಯರು ಮುಂದೆ ಮಾತನಾಡುವವರಿದ್ದಾರೆ. ಆ ವಿವರಗಳಿಗೆ ನಾನು ಹೋಗೆ. ಶಿಕ್ಷಣ ಮಂದಿರಗಳು, ಮತಸಂಸ್ಥೆಗಳು, ರೇಡಿಯೊ, ಚಲಚ್ಚಿತ್ರಗಳು, ಸರಕಾರಿ ಪ್ರಕಟನೆಗಳು ಇವುಗಳ ಜೊತೆಗೆ ಇಂದು ವೃತ್ತಪತ್ರಿಕೆಯ ಪ್ರಾಬಲ್ಯ ಬೆಳೆದಿದೆ. ಪ್ರಜಾಸತ್ತೆ ಇರುವ ನಾಡುಗಳಲ್ಲಿ ಒಂದು



ರೀತಿ, ಇಲ್ಲದಿರುವಲ್ಲಿ ಮತ್ತೊಂದು ರೀತಿ:- ಸ್ವತಂತ್ರದಲ್ಲಿ, ಅತಂತ್ರದಲ್ಲಿ, ಪರತಂತ್ರದಲ್ಲಿ, ಹೇಗೇ ನಡೆಯಲಿ, ವೃತ್ತ ಪ್ರಚಾರ ಕೈಗಾರಿಕೆಯಲ್ಲಿ ಅವು ಸುದ್ದಿಯ ಗಿರಣಿಗಳು, ಅಭಿಪ್ರಾಯದ ಕಾರ್ಖಾನೆಗಳು. ಆಯಾ ದೇಶದ ಚರಿತ್ರೆ, ಜನಗುಣ, ರಾಜಕೀಯ ಆರ್ಥಿಕ ಪರಿಸ್ಥಿತಿ, ವೃತ್ತಾಂತ ಸಂಗ್ರಹದಲ್ಲಿ ಜನಕ್ಕಿರುವ ಆತುರ ಮತ್ತು ಬುದ್ಧಿ ಲವಲವಿಕೆ – ಇವಕ್ಕೆ ತಕ್ಕಂತೆ ಪತ್ರಿಕೆಗಳ ವ್ಯವಸ್ಥೆಯೂ ಪ್ರಭಾವ ಲಕ್ಷಣಗಳೂ ರೂಪುಗೊಳ್ಳುತ್ತವೆ. ಒಂದು ಕಡೆ ನಾಗರಿಕತೆಯ ಮತ್ತು ಅಭಿರುಚಿಯ ಮಟ್ಟವನ್ನು ತೋರಿಸಿದರೆ ಇನ್ನೊಂದು ಕಡೆ ಅದರ ಅಗತ್ಯಗಳನ್ನು ತೋರಿಸುತ್ತವೆ. ಒಂದು ಕಡೆ ಇದೊಂದು ದೊಡ್ಡ ಕೈಗಾರಿಕೆ; ಇನ್ನೊಂದು ಕಡೆ ಅನಧಿಕೃತವಾದ ಒಂದು ಪ್ರತ್ಯೇಕ ರಾಜ್ಯಾಂಗವೆಂಬುದು ಗೌರವ ಯುತವಾಗಿ ಬುದ್ಧಿವಂತರಾದ ಹಲವರ ಮಹಾವೃತ್ತಿಯೂ ಪ್ರಭಾವ ಮಂಡಲವೂ ಆಗುತ್ತದೆ. ಎಂಥ ಪತ್ರಿಕೆಗಳು ಒಂದು ನಾಡಿನಲ್ಲಿ ಹೆಚ್ಚು ಮಾರಾಟವಾಗುವುದು ಎಂಬುದು ಸಾಧಾರಣ ಅಭಿರುಚಿಯನ್ನು ತಿಳಿಸುವಂತೆ ಎಂಥವಕ್ಕೆ ಗೌರವ, ವ್ಯಾಪಕತೆ ಇದೆ ಎಂಬುದರಿಂದ ಜೀವನದ ಮಟ್ಟ ಎಲ್ಲಿಯವರೆಗೂ ಏರಬಲ್ಲದು ಎಂಬುದು ಗೊತ್ತಾಗುತ್ತದೆ. ಕೈಗಾರಿಕೆಯಾದ್ದರಿಂದ ಬಂಡವಾಳವ್ಯವಸ್ಥೆ, ಮುದ್ರಣಾದಿ ಯಂತ್ರ ಯೋಜನೆ, ವಾರ್ತಾಸಂಗ್ರಹ ದಕ್ಷತೆ, ವಿಚಕ್ಷಣೆ, ಪ್ರಕಟನೆಯ ವಿತರಣೆ, ಅಚ್ಚುಕಟ್ಟು, ವೈವಿಧ್ಯ, ಪತ್ರಿಕೆ ಹಂಚಲು ಸೌಕರ್ಯ ಸಲಕರಣೆಗಳ ಕಲ್ಪನೆ, ಕೆಲಸಗಾರ ವರ್ಗ, ಕಾರ್ಯಾಲಯದ ವ್ಯವಸ್ಥೆ ಇರುವುವು. ಆ ಭಾಗಕ್ಕೇ ವಿಶೇಷವಾದ ಶಾಸ್ತ್ರಗಳೂ ಕಾರ್ಯ ತಂತ್ರವೂ ಉಂಟು. ಹೊರಗಿನವನಿಗೆ ಆ ಅನೇಕ ಸಂಗತಿಗಳು ತಿಳಿಯವು. ಸಂಪಾದಕನ ಸುತ್ತ ಹರಡುವ ಪ್ರಪಂಚವೂ ಒತ್ತಾಯ ಮಂಡಲವೂ ಎಂಥವೆಂಬುದು ಅಲ್ಲಿ ಹದವನ್ನು ನಿಯಮಿಸುವುದು. ಅದು ಅನಂತ ರಹಸ್ಯ ಭೂಮಿ. ಪತ್ರಿಕೆ ದೊಡ್ಡದಾದಷ್ಟೂ ಅಲ್ಲಿನ ವೇಗವೂ ಬಣ್ಣ ಬಣ್ಣಗಳ ಮಿರುಗೂ ಸಂಯಮ ದರ್ಪಗಳೂ ಅಂಗಾಂಗಳಲ್ಲಿಯೂ ವ್ಯಾಪಿಸಿ ಕಾಣುವುವು. ದೇಶದ ಹಲವು ಮಂದಿ ಜಾಣರೂ ಕಾರ್ಯಜ್ಞರೂ ಈ ವೃತ್ತಿಯಲ್ಲಿ ತೊಡಗಿ ಇದರಿಂದ ಜನಪ್ರಯೋಜನವನ್ನು ಸಾಧಿಸಲು ಬಯಸಿದ್ದಾರೆ. ಜನ ಜೀವನದಲ್ಲಿ ತಮಗೂ ತಮ್ಮ ಪತ್ರಿಕೆಗೂ ಒಂದು ಪ್ರಭಾವ ಸ್ಥಾನವನ್ನು ದೊರಕಿಸಿ ಕೊಳ್ಳುತ್ತಾರೆ. ದಾರಿ ತಪ್ಪುವವರಿಗೆಲ್ಲ ಎಚ್ಚರಿಕೆ ಕೊಡುತ್ತಿರುತ್ತಾರೆ. ಆ ಕೆಲಸ ಎಷ್ಟು ಅಗತ್ಯವೂ ಪ್ರಯೋಜನಕಾರಿಯೋ ಅಷ್ಟೇ ಹೊಣೆಗಾರಿಕೆಯುಳ್ಳದ್ದೂ ಆಗುತ್ತದೆ. ಏಕೆಂದರೆ ಪತ್ರಿಕೆಗಳನ್ನು ನಡಸಲು ಸ್ವಾತಂತ್ರ್ಯವಿರುವ ಕಡೆ ಬಗೆಬಗೆಯ ಶಕ್ತಿ, ಶೀಲ, ಉದ್ದೇಶಗಳುಳ್ಳ ಜನ ಅವುಗಳ ಚಾಲಕರಾಗಬಹುದಾಗುತ್ತದೆ. ವ್ಯಕ್ತಿಯ ಯೋಗ್ಯತೆ, ಲಾಭ ದೃಷ್ಟಿ, ಹಣಶಕ್ತಿಗಳಿಗೆ ತಕ್ಕಂತೆ ಪತ್ರಿಕೆಯನ್ನು ದುಡಿಸುವ ಅನುಕೂಲ ಹೆಚ್ಚು ಕಡಮೆಯಾಗುತ್ತದೆ; ಅದು ಸಮಾಜದ ಮೇಲೆ ಪರಿಣಾಮಕಾರಿಯಾಗಬಲ್ಲುದಾಗುತ್ತದೆ.

ಇಲ್ಲಿ ಕೆಲಸ ಕಡಮೆಯೆಂದರೆ ಎರಡು ಬಗೆಯದು: 1) ವೃತ್ತಾಂತ ಮತ್ತು ಅಭಿಪ್ರಾಯದ ಸಂಚಯನ ರೂಪಣ; 2) ಅದರ ಪ್ರಚಾರ ಸ್ವರೂಪ ಮತ್ತು ದಕ್ಷತೆ.

ವೃತ್ತಾಂತವೆಂದರೆ ಎಲ್ಲ ಬಗೆಯದೂ. ಅಭಿಪ್ರಾಯವೂ ಹಾಗೇ – ಆ ಎಲ್ಲಕ್ಕೂ ಸಂಬಂಧಿಸಿದ್ದು. ಜಾಹಿರಾತುಗಳಿಂದ ಹಿಡಿದು ದಿನದ ಸುದ್ದಿಗಳ ಮಾರ್ಗವಾಗಿ ಅಭಿಪ್ರಾಯ ಪ್ರಸಾರಣದವರೆಗೂ. ಸುದ್ದಿ ಅಭಿಪ್ರಾಯಗಳನ್ನು ಯಾರು, ಹೇಗೆ, ಏತಕ್ಕಾಗಿ ಸಂಗ್ರಹಿಸುತ್ತಾರೆ? ಯಾವುದನ್ನು ಎತ್ತಿ ತೋರಿಸುತ್ತಾರೆ? ಯಾವುದನ್ನು ಓರೆ, ಕೋರೆ, ಮರೆ ಮಾಡುತ್ತಾರೆ? ತೋರಿಸುವುದನ್ನು ಯಾವ ಬಣ್ಣ, ಬೆಳಕು, ಪ್ರಧಾನತೆಗಳಲ್ಲಿ ಕಾಣಿಸುತ್ತಾರೆ? ಈ ಎಲ್ಲದರ ಹಿಂದೆಯೂ ಯಾವ ವಿಶೇಷ ಪ್ರಯೋಜನವೂ ರೀತಿ, ನೀತಿಗಳೂ ದೃಷ್ಟಿಯೂ ಬಲಿದಿರುತ್ತದೆ? – ಎಂಬುದು ಪ್ರತಿ ಪತ್ರಿಕೆಯ ಜೀವ ಲಕ್ಷಣಕ್ಕೆ ಸಂಬಂಧಿಸಿದ್ದು. ಅದರ ಚರಿತ್ರೆಯಿಂದ ಈ ಅಂಶಗಳೂ ಅಂಶಗಳಿಂದ ಅದರ ಚರಿತ್ರೆಯೂ ರೂಪುಗೊಳ್ಳುತ್ತಿರುತ್ತವೆ ಮತ್ತು ಜನದ ಮೇಲೆ ಅದರ ಪ್ರಭಾವ ಎಂಥದಾಗುವುದೆಂಬುದನ್ನು ನಿರ್ಧರಿಸುತ್ತಿರುತ್ತದೆ. ಹೊತ್ತುಹೊತ್ತಿಗೆ ಸರಿಯಾದ ಸಮಾಚಾರಗಳನ್ನು ಖಚಿತವಾಗಿ ಆಕರ್ಷಕವಾಗಿ ತಿಳಿಸುವ ಪತ್ರಿಕೆಗಳಿಗೆ ಓದುಗರ ಸಂಖ್ಯಾವರ್ಗ ಒಲಿಯುವುದು. ಇಂದಿನ ಹೊಸ ವೃತ್ತ ನಾಳೆಗೆ ಹಳಸು. ಒಂದು ಸಲ ಒಂದು ಕಡೆ ನೋಡಿದರೆ ಉತ್ತರ ಕ್ಷಣಕ್ಕೇ ಅದರ ಮೊನೆ ಮೊಂಡು. ಇದರ ಜೊತೆಗೆ ಅಭಿಪ್ರಾಯಗಳನ್ನು ತಿಳಿಸುವ ಪ್ರಯತ್ನ ನಡೆದರೆ ಒಂದು ದಿನಕ್ಕೇ ಹಳತಾಗದ ಇತರ ಸಂಗತಿಗಳನ್ನು - ಇತರ 'ಫೀಚರ್ಸ್' ಅನ್ನೊ ವಿಶೇಷ ಲಕ್ಷಣಗಳು - ಎಷ್ಟೆಷ್ಟು ಬಗೆಯಾಗಿ ಪತ್ರಿಕೆ ಕೊಡಬಲ್ಲುದೋ ಅಷ್ಟು ವಿವಿಧ ವರ್ಗಗಳವರಲ್ಲಿ ಹರಡಲು ಶಕ್ತವಾಗಿ ಅದರ ಪ್ರಯೋಜಕತೆಯೂ ಆಕರ್ಷಣೆಯೂ ಹೆಚ್ಚಾಗುತ್ತದೆ. ಈ ಎರಡು ಬಗೆಯಲ್ಲಿ ವೃತ್ತಪತ್ರಿಕೆಗಳೆಂದರೆ, ನಾವು ಸದ್ಯಕ್ಕೆ ದಿನಪತ್ರಿಕೆ, ವಾರಪತ್ರಿಕೆ ಎಂದಿಟ್ಟುಕೊಳ್ಳಬಹುದು. ದಿನಪತ್ರಿಕೆಗಳಲ್ಲಿ ಸುದ್ದಿಗೇ ಅಗ್ರಸ್ಥಾನ; ಸುದ್ದಿಯಲ್ಲಿ ಒಂದು ವಾರದಷ್ಟಾದರೂ ಗಟ್ಟಿಜೀವವುಳ್ಳ ಸಂಗತಿಗಳನ್ನು ಕುರಿತ ಟೀಕೆ, ವ್ಯಾಖ್ಯಾನ, ಪ್ರಚಾರ ವಾರಪತ್ರಿಕೆಗಳ ಪ್ರಪಂಚ. ಒಂದು 'ನ್ಯೂಸ್' (ವೃತ್ತಾಂತ), ಇನ್ನೊಂದು 'ವ್ಯೂಸ್' (ಸಿದ್ಧಾಂತ?) ಎನ್ನಬಹುದು. ಎರಡರಲ್ಲಿಯೂ ಎರಡೂ ಅಂಗಗಳಿದ್ದರೂ ಅವುಗಳ ಮುಖ್ಯತೆ, ಹರಹು, ಒತ್ತಡ, ಪ್ರಚಾರ ರೀತಿ ಬೇರೆ ಬೇರೆ. ಅವುಗಳನ್ನು ಕೊಳ್ಳುವವರ ಮತ್ತು ಅವುಗಳಲ್ಲಿ ರುಚಿಯುಳ್ಳವರ ವರ್ಗವೂ ಬೇರೆ ಬೇರೆ. ಕಡೆಗೆ ಅವುಗಳಲ್ಲಿ ಅಚ್ಚಾಗುವ ವ್ಯಾಪಾರದ ಜಾಹಿರಾತುಗಳ ಸ್ವರೂಪವೂ ಜಾಹಿರಾತಿನ ಹಣ ಸಂಪಾದನೆಯೂ ಬೇರೆ ಬೇರೆ ಪ್ರಮಾಣದವು.

ವೃತ್ತಾಂತ ಸಂಗ್ರಹ ತಕ್ಷಣಕ್ಕೆ ಬೆಲೆಯುಳ್ಳದ್ದು, ಕೂಡಲೆ ಮುಗಿಯ (ಮರೆಯ?) ತಕ್ಕದ್ದು ಬರೆಯತಕ್ಕದ್ದು ಆಗುವಂತೆ. ಆಯಾ ದಿನದ ಉದ್ಯೋಗದ ಕನ್ನಡಿಯಾಗಿಯೇ ಅಲ್ಲಿ ಅಭಿಪ್ರಾಯ ಬಿಂಬಿತವಾಗುತ್ತದೆ. ಬಿಸಿ ಬಿಸಿ, ಹಸಿ ಹಸಿ, ಕಾರ ಕಾರ, ಚೇಷ್ಟೆಯಲ್ಲಿ ವ್ಯಂಗ್ಯದಲ್ಲಿ ಸಂದೇಹದಲ್ಲಿ ಭ್ರಾಂತಿಯಲ್ಲಿ, ದಪ್ಪಕ್ಷರ ಸಣ್ಣಕ್ಷರಗಳ ಬಡವಾಡೆಯಲ್ಲಿ ಹಿರಿದಾಗಿ ಕಿರಿದಾಗಿ ಆಕಾರಗೊಳ್ಳುವುದು; ಮುಖಪತ್ರದಲ್ಲಿ - ಪುಟದ ಮೇಲೆ,



ಕೆಳಗೆ ಎಲ್ಲೋ ಮೂಲೆಯಲ್ಲಿ ಸಂಗತಿಗಳು ಅಚ್ಚಾಗುವುವು. ಹೀಗೆ ಪತ್ರಿಕೆಗಳು ಕೆಲವು ಸಂಗತಿಗಳನ್ನೂ ಜನರನ್ನೂ ಸಂಸ್ಥೆಗಳನ್ನೂ ಎತ್ತಿ ತೋರಿಸಬಹುದು; ಕೆಲವನ್ನು ಉಪೇಕ್ಷೆ ಮಾಡಿಬಿಡಬಹುದು. ತಮಗೆ ಬೇಕಾದುದನ್ನು ಮೇಲೆ ಕಾಣಿಸಿ ಅದಕ್ಕೆ ಪ್ರಭಾವ ಮತ್ತು ಪ್ರಾಮುಖ್ಯತೆ ಗಳಿಸಿಕೊಡಬಹುದು. ಅಲಕ್ಷ ಮಾಡಿ ಅಥವಾ ಅಪಪ್ರಚಾರ ಮಾಡಿ ಜನದ ಕಣ್ಣಿಗೂ ಕಿವಿಗೂ ಮನಸ್ಸಿಗೂ ಬರದಂತೆ ಸ್ವಲ್ಪ ಕಾಲದ ಮಟ್ಟಿಗಾದರೂ ಮರೆಮಾಡಬಹುದು. ಲಾಭ ನಷ್ಟ, ಕೀರ್ತಿ ಅಪಕೀರ್ತಿ ತರಬಹುದು. ಆದುದರಿಂದಲೇ ಮಹತ್ವಾಕಾಂಕ್ಷಿಗಳಿಗೂ ಶಕ್ತರಿಗೂ ಪತ್ರಿಕೆಗಳ ಬೆಂಬಲವೂ ನಂಟೂ ಅಗತ್ಯ. ಪದವಿಗಳಲ್ಲಿ ಅಧಿಕಾರಗಳಲ್ಲಿ ಇರುವವರಿಗೆ ಅವನ್ನು ಕಂಡರೆ ಒಂದು ಬಗೆಯ ಅರಕ್ತಿ, ಅಸಹನೆ, ಪೀಡೆಯೆಂಬ ಭಾವನೆ, ಈ ಕಾರಣಗಳಿಂದೆಲ್ಲ ಹುಟ್ಟಿದ ಒಂದು ಹೊರ ಮರ್ಯಾದೆಯ ನಡತೆ. ಅವನ್ನು ಎದುರು ಹಾಕಿಕೊಳ್ಳಬಾರದು, ಶಕ್ಯವಾದರೆ ಸಹಾಯಕ್ಕೆ ಸ್ನೇಹಕ್ಕೆ ಒಲಿಸಿಕೊಳ್ಳಬೇಕು ಎಂಬ ವೃತ್ತಿ. ಈ ಸಂಗತಿಯೇ ಪತ್ರಿಕೆಗಳ ಪ್ರಾಬಲ್ಯದ ಮರ್ಮ. ತಕ್ಷಣಕ್ಕಾದರೂ ಅವುಗಳ ಶಕ್ತಿ ಪ್ರಚಂಡವಾದ್ದು – ಎಷ್ಟೋ ಬಗೆಯ ಜನರ, ಎಷ್ಟೋ ಪ್ರಯೋಜನಗಳನ್ನು ಪೂರೈಸಬಲ್ಲವಾದ್ದರಿಂದ. ಆಟ, ನೋಟ, ವ್ಯಾಪಾರ, ವ್ಯವಹಾರ, ವಿನೋದ, ಸುಖ ಸೌಕರ್ಯ ಎಲ್ಲಕ್ಕೂ ಆಶ್ರಯವನ್ನೂ ಪ್ರಚಾರವನ್ನೂ ಕೊಡಬಲ್ಲ, ಕಣ್ಣೆದುರಿಗಿಲ್ಲದುದನ್ನೂ ಪ್ರಾತಿನಿಧಿಕವಾಗಿ ಬಣ್ಣಿಸಿ ರೂಪಿಸಿ ಪರಿಚಯ ಮಾಡಿ ಉದ್ವೇಗ, ಅಭಿಲಾಷೆ, ರಾಗದ್ವೇಷಾದಿಗಳನ್ನು ಹುಟ್ಟಿಸಬಲ್ಲ ಶಕ್ತಿ ಅವಕ್ಕಿದೆ. ರೇಡಿಯೋ ಅಲ್ಲಿ ಶ್ರೀ ತಲಯಾರು ಖಾನರವರ ಕ್ರಿಕೆಟ್ ವರ್ಣನೆ ಕೇಳಿದವರಿಗೆ ಹೆಚ್ಚು ವಿವರ ಬೇಕಿಲ್ಲ. ಅಂತಹ ಆಪ್ತ ಬಾಂಧವ್ಯ ಕೂಡ ಏರ್ಪಡಬಲ್ಲದು. ಅಲ್ಲಿ ಆಡುವ ಮಾತು; ಇಲ್ಲಿ ಬರೆದ ಮಾತು ಅಷ್ಟೇ ವ್ಯತ್ಯಾಸ. ಈ ಎಲ್ಲ ಸಂಬಂಧಗಳಲ್ಲಿಯೂ ಯಾವುದರ ಕಡೆ ಜನಮನವನ್ನು ಸೆಳೆಯುತ್ತಿದೆ, ಯಾವ ಪಕ್ಷ ಪ್ರಭಾವಗಳನ್ನು ಮುಂದುವರಿಸುತ್ತಿದೆ, ಯಾವ ಸೌಮನಸ್ಯ ವಿಷಗಳನ್ನು ತುಂಬುತ್ತಿದೆ ಎಂಬುದರಿಂದ ಪತ್ರಿಕೆಯ ಶೀಲ ಗೊತ್ತಾಗುತ್ತದೆ. ಮಾರಾಟ ಹೆಚ್ಚಿಸುವುದೇ ಅದರ ಗುರಿಯಾದರೆ ಒಂದು ಬಗೆ; ರಾಜಕೀಯ, ಮತ, ಆರ್ಥಿಕಾದಿ ಪ್ರಯೋಜನಗಳು ದೃಷ್ಟಿಯಾದರೆ ಒಂದು ಬಗೆ; ಜನಾಭಿಪ್ರಾಯ, ಇದ್ದುದನ್ನು ಇದ್ದಂತೆ ಕಾಣಿಸುವೆನೆಂದರೆ ಒಂದು ಬಗೆ; ಅಭಿಪ್ರಾಯ ಹೇಗೇ ಇರಲಿ – ಹತ್ತಿರದ, ದೂರದ – ಹಿತವನ್ನೇ ಸಾಧಿಸುವೆನೆಂದರೆ ಒಂದು ಬಗೆ; ವ್ಯಕ್ತಿ, ಸಂಸ್ಥೆ, ಪಕ್ಷ ಪ್ರಯೋಜನಗಳೇ – ಪ್ರತಿಷ್ಠೆಗಳೇ ಗುರಿಯಾದರೆ ಒಂದು; ನೂರು ವರ್ಷ ಉಳಿದು ವಿಶಿಷ್ಟ ಅಥವಾ ಸತ್‌ಸಂಪ್ರದಾಯಗಳನ್ನು ಸ್ಥಾಪಿಸಿ ಕೀರ್ತಿಗಳಿಸ ಬೇಕೆಂದರೆ ಒಂದು ಬಗೆ – ಈ ರೀತಿ, ರಚಿತವಾಗುತ್ತದೆ ಅದರ ಕಾರ್ಯಮಂಡಲ.

ಸುದ್ದಿಯಲ್ಲಿ ಹೇಗೋ ಅಭಿಪ್ರಾಯ ಸಂಗ್ರಹದಲ್ಲಿಯೂ ಅವುಗಳ ರೂಪಣ ಪ್ರಚಾರಗಳಲ್ಲಿಯೂ ಹಾಗೇ : ದೃಷ್ಟಿಭೇದದಿಂದ ಕಾರ್ಯರೀತಿ ಬೇರೆಯಾಗುವುದು. ಪ್ರಕಾಶಕರು, ಚಾಲಕರು ಯಾರು ಹೇಳಿ, ಪತ್ರಿಕೆ ಇಂಥದೆಂದು ಹೇಳುತ್ತೇನೆ – ಎಂದು

ಧಾರಾಳವಾಗಿ ಅರಿಯಬಹುದು. ಅಭಿಪ್ರಾಯ ಯಾರದು? ಗುರಿ ಯಾವುದು? ವಾದ ಎಂಥದು? ಜನವರ್ಗಗಳಲ್ಲಿ ಎಷ್ಟು ಬಗೆ ಮಟ್ಟಗಳಿವೆ? ಅಲ್ಲಿ ತಿಳಿದವರೆಷ್ಟು ಮಂದಿ, ತಿಳಿಯದವರು ಎಷ್ಟು ಮಂದಿ? ಅವರಲ್ಲಿ ಎಷ್ಟು ಮಂದಿಗೆ ಈ ಪತ್ರಿಕೆಗಳ ಮೂಲಕವೇ ವಿದ್ಯೆ, ಮತ, ಪಕ್ಷಪಾತ? ಎಷ್ಟು ಮಂದಿಗೆ ಸ್ವಂತ ತಿಳಿವಳಿಕೆ, ಅಭಿಪ್ರಾಯ, ತೀರ್ಮಾನ ಶಕ್ತಿ ಇವೆ? ಚಾಲಕರಿಗೆ ಸ್ವಪ್ರತಿಷ್ಠೆಯ ಅಥವಾ ಲಾಭದ ದೃಷ್ಟಿ ಎಷ್ಟು? ಜನದ ಸಾಮೂಹಿಕ ಹಿತದ್ದು ಎಷ್ಟು? – ಎಂಬುವು ಮಾತ್ರ ಸಮಾಜದ ಮಂಗಳದ ಎಣಿಕೆಯಲ್ಲಿ ಮುಖ್ಯ. ಇಷ್ಟೇ ಅಲ್ಲ, ಚಾಲಕ ಅಥವಾ ಸಂಪಾದಕನು ಇರುವುದನ್ನು ನೋಡುತ್ತಾ ನೋಡಿಸುತ್ತಾ ಕೇವಲ ಸಾಕ್ಷಿಯಂತೆ ತಟಸ್ಥನಂತೆ ಇರುತ್ತಾನೆಯೋ; ಸುತ್ತಲ ಆವೇಗ ಆಕ್ರೋಶಗಳನ್ನೆಲ್ಲ ಬಳಸಿಕೊಳ್ಳುತ್ತ ಯಾವುದಾದರೊಂದು ಬಗೆಯಾಗಿ ಎಲ್ಲವನ್ನೂ ತಿರಿಚುತ್ತಾ ಎಲ್ಲಕ್ಕೂ ಕೈ ಹಾಕುತ್ತಾ ವಾದಗಳನ್ನೂ ಭೇದಗಳನ್ನೂ ಬೆಳಸುತ್ತಾ ಹೋಗುತ್ತಾನೆಯೋ; ಅಥವಾ ಬೇರೆ ಬೇರೆ ವರ್ಗಗಳ ಅಭಿಪ್ರಾಯವನ್ನೆಲ್ಲ ಸಂಚಯಿಸಿ, ಕೊಡಬೇಕಾದ ಬೆಲೆಕೊಟ್ಟು ಸಮಷ್ಟಿಯಲ್ಲಿ ಯೋಚಿಸಿ, ಹೆಚ್ಚು ಜನರ ಹೆಚ್ಚು ಪ್ರಯೋಜನ, ಕಡಮೆ ಜನರ ಕಡಮೆ ನಷ್ಟ ಆಗುವ ರೀತಿ ಪ್ರಚಾರ ನಡಸುತ್ತಾನೆಯೋ – ಹೀಗೆ ಮೂರಾದರೂ ಮುಖ್ಯ ಮಾರ್ಗಗಳುಂಟು. ಇವುಗಳಲ್ಲಿ ಕಡೆಯ ಮಾರ್ಗ ಕಠಿನ, ಹೆಚ್ಚು ಜನಕ್ಕೆ ಒದಗದು, ಫಲಿಸದು, ಅಪ್ರಿಯ. ಇದರಲ್ಲಿ ಬಿಸಿ ಇಲ್ಲ, ಹಸಿ ವೇಗ ಇಲ್ಲ. ಓದಿ, ಕೇಳಿ, ನೋಡಿ, ಯೋಚಿಸಿ, ತಿಳಿದು, ಹದವರಿತು ಪ್ರಮಾಣ ಕೆಡಿಸದೆ ಬರೆಯುವ ತಾಳ್ಮೆ, ಶಕ್ತಿ ಎಷ್ಟು ಸಂಪಾದಕರಿಗೆ ಶಕ್ಯ? ಸಂಪಾದಕರೇ ಏನು, ಯಾವ ವರ್ಗದಲ್ಲಿಯೇ ಆಗಲಿ, ಎಷ್ಟು ಜನರಿಗಿದೆ? ಆದರೂ ಇದೇ ಉತ್ತಮ ಮಾರ್ಗ. 'ಮ್ಯಾಂಚೆಸ್ಟರ್ ಗಾರ್ಡಿಯನ್', 'ಇಕಾನಮಿಸ್ಟ್', 'ನ್ಯೂ ಸ್ಟೇಟ್ಸ್‌ಮನ್ ಅಂಡ್ ನೇಷನ್' ಮುಂತಾದ ಪತ್ರಿಕೆಗಳಂತೆ ಧೈರ್ಯವಾಗಿ, ಗಂಭೀರವಾಗಿ, ವಸ್ತುಸ್ಥಿತಿಯ ತಿಳಿವಳಿಕೆಯಿಂದ ಟೀಕೆ ಮಾಡುವ, ಜನಾಭಿಪ್ರಾಯವನ್ನು ತಿದ್ದುವ, ಹಿತ ಪ್ರಚಾರ ಮಾಡುವ ಪತ್ರಿಕೆಗಳು ಲೋಕದಲ್ಲಿ ಎಲ್ಲಿಯೇ ಆಗಲಿ ಸಂಖ್ಯೆಯಲ್ಲಿ ಕಡಮೆಯೇ. ಇಂಥವಕ್ಕೆ ಜಾಹಿರಾತುಗಳು ದೊರಕುವುದು ಕಷ್ಟವಾಗಬಹುದು. ಪ್ರಬಲರ ಇಷ್ಟಕ್ಕೆ ವಿರೋಧವಾದರೆ ಕೊಟ್ಟ ಜಾಹಿರಾತುಗಳನ್ನು ಹಿಂದಕ್ಕೆ ತೆಗೆದುಕೊಳ್ಳುವೆವೆನ್ನುವುದೋ, ಸಂಪಾದಕನ ಜೀವ–ಜೀವಿಕೆಗಳಿಗೆ ಸಂಚಕಾರ ಬೆದರಿಕೆ ಉಂಟು ಮಾಡುವ ತಂತ್ರವೋ ಅಪರೂಪವಾದ್ದೇನೂ ಅಲ್ಲ. ದುಡ್ಡುಳ್ಳ ಅಥವಾ ಅಧಿಕಾರದಲ್ಲಿರುವ ಪ್ರಬಲರ ಸಹಾಯವೂ ಪೋಷಣೆಯೂ ದೊರಕಬೇಕಾದರೆ ಅವರಿಗೆ ಪ್ರತಿಭಟನೆ ತಡೆಯದು; ಆದರೆ ಸಿ.ಪಿ.ಸ್ಕಾಟ್ ಅಂತೆ ಋಜುತೆಯನ್ನು ಕುರಿತು ಓದುವ ಆಸಕ್ತಿ ಹುಟ್ಟುವಂತೆ ಬರೆಯಬಲ್ಲ ('Making righteousness readable') ಮೇಧಾವಿಗಳೂ ಧೀರರೂ ಬೇಕು. ಅಂಥ ಸಂಪಾದಕನನ್ನುಳ್ಳ ಪತ್ರಿಕೆ ಕೃತಾರ್ಥ; ಒಂದು ದೇಶದ ಸೌಭಾಗ್ಯ, ಸಂಪತ್ತು. ಅದರಿಂದ ಪತ್ರಿಕೆಗೂ ಜನತೆಗೂ ಗೌರವ



ಬರುವುದು. ಜನತೆಯೂ ಪತ್ರಿಕಾ ಪ್ರಪಂಚವೂ ಅಂಥವರ ಏಳ್ಗೆಗೆ ಎಡೆ ಕೊಡಬೇಕು. ಅಂಥವರು ತಯಾರಾಗುವಂತೆ ಆವರಣವನ್ನೂ ಅವಕಾಶವನ್ನೂ ಕಲ್ಪಿಸಬೇಕು. ಜನಗಳಲ್ಲಿ ವಿಮರ್ಶಾ ಸ್ವಾತಂತ್ರ್ಯವೂ ಸೌಹಾರ್ದವೂ ಸಹನೆಗಳೂ ಒಂದು ವಿನೋದದಿಂದ ಟೀಕೆಯನ್ನು ಮಾಡುವ, ಸ್ವೀಕರಿಸುವ ಬುದ್ಧಿಯೂ ಬೆಳೆದ ಹೊರತು ಇದು ಶಕ್ಯವಾಗುವುದಿಲ್ಲ. ಆಯಾ ಜನತೆಯ ಯೋಗ್ಯತೆ ಚರಿತ್ರೆಗಳಿಗೆ ತಕ್ಕಂತೆಯೇ ಅಲ್ಲಿನ ಪತ್ರಿಕೆಗಳು ಏರುವುದು. ಎರಡೂ ಕಡೆಗೂ ಇಲ್ಲಿ ಹೊಣೆ ದೊಡ್ಡದು. ಯಾವ ಪತ್ರಿಕೆ ಸರಿಯಾದ ಸುದ್ದಿಗಳನ್ನು ಪ್ರಕಟಿಸಿ, ನಚ್ಚಾಗಬಹುದಾದ ಅಭಿಪ್ರಾಯಗಳನ್ನೂ ಜಾಹಿರುಗಳನ್ನೂ ಪ್ರಚುರಗೊಳಿಸುವುದೊ, ಯಾವುದು ಸ್ವಾಧೀನತೆಯನ್ನು ಕಳೆದುಕೊಳ್ಳದೆ ಅಯೋಗ್ಯ ಅಥವಾ ಎಳಸು ಟೀಕೆಗಳಿಗೆ ಅವಕಾಶ ಕೊಡದೆ ತನ್ನ ಗೌರವವನ್ನು ಕಾಪಾಡಿಕೊಳ್ಳುವುದೊ, ಯಾವುದು ಸಾರ್ವಜನಿಕ ಹಿತಕ್ಕಾಗಿಯೇ ಉದಾರರೀತಿಯಲ್ಲಿ ನಡೆಯುವುದೊ ಅದೇ ಮೇಲ್ತರದ ಪತ್ರಿಕೆ.

ಹಣವುಳ್ಳ ಪ್ರಬಲರು, ಪ್ರಭಾವ ಮಂಡಲಗಳು ಎಂದೆ. ಹಣಬಲವಿಲ್ಲದ ಪತ್ರಿಕೆಗೆ ಸ್ವಾಧೀನತೆ ಇರುವುದಿಲ್ಲ. ತಾನೇ ಅತಂತ್ರವಾದರೆ ಅದರ ಅಭಿಪ್ರಾಯಕ್ಕೆ ಬಲ ಹೇಗೆ ಬಂದೀತು? ದೇವಪಕ್ಷ ತಮ್ಮದು ಎಂಬುದೂ ಹಣದ ಮೋಹಕತೆಯೂ ಪ್ರಯೋಜನವೂ ಯಾರಿಗೇ ಆಗಲಿ ಹೆಚ್ಚು. ಆದರೆ ಆ ಬಲಕ್ಕೆ ಮಣಿದು ಮೋಹಕ್ಕೆ ಒಳಗಾಗಿ ಪರತಂತ್ರವಾದ ಪತ್ರಿಕೆ ಯಾವಾಗಲೂ ಸಾರ್ವಜನಿಕ ಹಿತಕ್ಕೆ ದುಡಿಯುವುದು ಶಕ್ಯವಾಗುವುದಿಲ್ಲ. ಹೆಚ್ಚು ಹಣಬಲವಿಲ್ಲದ ಪತ್ರಿಕೆಗೆ ಒಂದೇ ಒಂದು ಸಂದರ್ಭದಲ್ಲಿ ಮಾತ್ರ ಅದು ಶಕ್ಯವಾದೀತು: ಸಂಪಾದಕನು ಮಹನೀಯನಾದಾಗ. ಅಂಥ ಸಂದರ್ಭದಲ್ಲಿ ಆತನ ಯೋಗ್ಯತೆ, ಶೀಲ, ತಿಳಿವಳಿಕೆ, ಜ್ಞಾನ, ಕಾರ್ಯವಿಚಕ್ಷಣೆ, ತಿಳಿದವರ ಸಮಾಜ ದಲ್ಲಿ ಆತನ ಸ್ಥಾನ ಇವುಗಳಿಗೆ ಮಾನ್ಯತೆ ಬಂದೀತು. ಪತ್ರಿಕೆ ಎಲ್ಲಿನವರೆಗೆ ಏತಕ್ಕೆ ನಿಲ್ಲುತ್ತದೆ ಎಂಬುದು ಅದರ ಚಂದಾದಾರರ ಸಂಖ್ಯೆ ಎಷ್ಟು ಎಂಬುದಕ್ಕಿಂತ ಹೆಚ್ಚಾಗಿ ಆಗ ಪ್ರಭಾವಯುತವಾಗಬಲ್ಲುದು*......

ಹೀಗೆ ತಾನು ಹಿಡಿದ ಹಟವೇ ಸರಿ, ಪ್ರತಿ ಪಕ್ಷದಲ್ಲಿ ಸತ್ಯ ಪ್ರಾಮಾಣಿಕತೆಗಳೇ ಇಲ್ಲ ಎಂದು ಸೆಡೆದು ನಿಲ್ಲುವ ಮತ್ತು ಯಾವ ಮಧ್ಯಸ್ಥಿಕೆಗೂ ಒಪ್ಪದ ರೀತಿ ಒರಟುತನ; ವ್ಯರ್ಥ, ಕರ್ಕಶ. ಸಾಧಾರಣ ಶಾಸನಗಳ ಮಿತಿಯಲ್ಲೇ ಬೇಕಾದಷ್ಟು ಕೆಲಸ ಮಾಡಬಹುದು; ಅಯುಕ್ತವಾದ ಶಾಸನ ಮಾರ್ಪಡುವಂತೆಯೂ ಜನಾಭಿಪ್ರಾಯ ಅನುಲ್ಲಂಘನೀಯವಾಗುವಂತೆಯೂ ಪುಷ್ಟಿಗೊಳಿಸಿ ಒಂದು ಪ್ರಗತಿ ಚೈತನ್ಯವಾಗಬಹುದು.

* ಹಸ್ತಪ್ರತಿಯಲ್ಲಿ ಇಲ್ಲಿಂದ ಒಂದೆರಡು ಪ್ಯಾರಾ ತ್ರುಟಿತವಾಗಿದೆಯಾಗಿ ಅದನ್ನು ಇಲ್ಲಿ ಬಿಡಲಾಗಿದೆ.

ಆದರೆ ಆಯುಧವನ್ನು ಬೀಸಾಟು ಯುದ್ಧರಂಗಕ್ಕೆ ನುಗ್ಗುವ ಯೋಧನಂತೆ ಕುರುಡು ನುಗ್ಗು ನುಗ್ಗುವುದು ವಿವೇಕವಾದೀತೊ ಇಲ್ಲವೊ ಆಯಾ ಸಂದರ್ಭವೇ ನಿರ್ಣಯಿಸಬೇಕು. ಹಿತ, ಮಿತ, ಧೈರ್ಯ, ಗಾಂಭೀರ್ಯಗಳಿಗೆ ಒಲಿದರೆ ಸ್ವಾತಂತ್ರ್ಯಕ್ಕೆ ಬೆಲೆ. ಇದನ್ನು ಸ್ವಪ್ರಯೋಜನ ಅಥವಾ ಸ್ವರಕ್ಷಣೆಯ ಮಾರ್ಗದಂತೆ ಎಣಿಸುವುದು ಧೈರ್ಯವಾಗದು. ಧೀರನ ಲಕ್ಷಣ ಸಂಯಮ. ಶಕ್ತಿಯಿರುವವನ ತಾಳ್ಮೆ ಸೊಗಸು. ಪ್ರತಿಯೊಂದಕ್ಕೂ ಅವಕಾಶ ಕೊಟ್ಟು, ಅವನು ಆರಿಸುವ ಆಯುಧ, ಕಳಗಳಲ್ಲಿಯೇ ಅವನೊಡನೆ ಕಾದಿ ಗೆಲ್ಲಬೇಕು, ನಿಲ್ಲಬೇಕು. ಇದು ಸಾಧಾರಣ ಕಾಲದ ತತ್ವ. ವಿಶೇಷ  ಕಾಲಗಳಲ್ಲಿಯೂ ತೀವ್ರವಾಗಿ ಜನದ ಮತಿ ಬದಲಾಗುತ್ತಿರುವಾಗಲೂ ಮಾರ್ಪಾಡುಗಳ ಹೃದಯವನ್ನು ಹಿಡಿದು ಸರಿಯಾದ ಬೆಲೆಗಳನ್ನು ಕಟ್ಟಿ ಹೊಸತನ್ನು ಸ್ವಾಗತಿಸಿ ಹೊಂದಿಕೊಳ್ಳುವ ಶಕ್ತಿಯು ಮೇಲ್ತರದ ಪತ್ರಿಕೆಗಳಿಗೆಲ್ಲ ಅಗತ್ಯ. ಈ ಸಂಬಂಧದಲ್ಲಿ ಎಲ್ಲರೂ ಆಡುವ ಮಾತುಗಳನ್ನು ಆಡುತ್ತಾ ಅವಕ್ಕೆ ಬಂದಿಯಾಗಬಾರದು. ಎಂದೇ ಆಗಲಿ ಪ್ರತಿಗಾಮಿ ಯಾಗಬಾರದು. ಸತ್ಯ, ಧರ್ಮ,  ಅಂತಃಸಾಕ್ಷಿ, ಜನತೆಯ ಸೇವೆ, ಸ್ವಾತಂತ್ರ್ಯ ಇವೆಲ್ಲ ದೊಡ್ಡ ಮಾತುಗಳು, ನಿಜ. ಆದರೆ ಇವನ್ನು ನೂರಾರು ಬಗೆಯ ಜನ ನೂರಾರು ಕೆಲಸಗಳಿಗೂ ಪಕ್ಷಲಾಭಗಳಿಗೂ ದುಡಿಸಿಕೊಳ್ಳಲು ಬರುವುದು. ಆಡುವವರು ಯಾರು, ಹೇಗೆ ಬಳಸಿಕೊಳ್ಳಲು ಬಯಸುತ್ತಾರೆ, ವಿಧಾನಗಳಾವುವು ಎಂಬುದರ ಮೇಲೆ ಅವು ಸಾರ್ಥಕವೇ, ತಂತ್ರವೆ ಎಂಬುದು ಗೊತ್ತಾಗುತ್ತದೆ. ಬರಿಯ ಈ ಮಾತುಗಳನ್ನು ಬಳಸಿದ ಕಾರಣದಿಂದಲೇ ದೊಡ್ಡದಾಗಲಿಲ್ಲ; ಈ ಮಾತುಗಳ ಅರ್ಥವ್ಯಾಪ್ತಿಯನ್ನೂ ಸೂಕ್ಷ್ಮಗಳನ್ನೂ ಅರಿತಷ್ಟೂ ಅವಕ್ಕೆ ಸಂಬಂಧಿಸಿದ ತತ್ವ ಎಷ್ಟು ಗಹನವೆಂಬುದೂ ಎಷ್ಟು ಬಗೆಯ ಹೊಣೆಗಾರಿಕೆಗಳು ಹುಟ್ಟಿಕೊಳ್ಳುವುವೆಂಬುದೂ ತಿಳಿದೀತು.

ನಮ್ಮ ಪತ್ರಿಕೆಗಳವರು ಜನಕ್ಕೆ ಅಗತ್ಯವಾದ ಅನೇಕ ಸುದ್ದಿ ಸಮಾಚಾರಗಳನ್ನೂ ವರದಿಗಳನ್ನೂ ಒದಗಿಸುತ್ತಿದ್ದಾರೆ; ಅಭಿಪ್ರಾಯಗಳನ್ನು ತಿಳಿಸುತ್ತಿದ್ದಾರೆ. ಆದರೂ ಜನಕ್ಕೆ ಹೆಚ್ಚು ತಿಳಿವಳಿಕೆ ಬರುವಂತೆ ಬಗೆಬಗೆಯ ಹಿನ್ನೆಲೆ ಅಥವಾ ವಿವರಣೆಯ ಬರಹಗಳನ್ನು ಇನ್ನೂ ಬರಸಬೇಕೆನಿಸುತ್ತದೆ.  ಭೂಪಟ, ಚಿತ್ರ, ವಿಷಯ ಸಂಗ್ರಹ ಉಳ್ಳ ಲೇಖನಗಳನ್ನು ಬರಸಿದರೆ ಸುದ್ದಿ ಅಭಿಪ್ರಾಯಗಳು ಇನ್ನೂ ಚೆನ್ನಾಗಿ ಅರ್ಥವಾಗುತ್ತದೆ. ಅವಕ್ಕೆ ಹೇಗೆ ಬೆಲೆ ಕಟ್ಟಬೇಕೆಂಬ ಬುದ್ಧಿ ಅವರಲ್ಲೇ ಮೊಳೆಯುವಂತಾಗುತ್ತದೆ. ಯುದ್ಧರಂಗ, ಮಸೂದೆಗಳು, ಮತ, ತತ್ವ, ವಿಜ್ಞಾನ, ಕಲೆ, ಸಾಹಿತ್ಯ, ಪೇಟೆಯ ಲಘು ಬಿಗಿ ಮುಂತಾದ ವಿಷಯಗಳಲ್ಲಿ ತಿಳಿದವರಿಂದ ಸಹಾಯಕ ವಿವೇಚಕ ವಿಮರ್ಶೆಗಳೂ, ಸ್ಥಿತಿ ಪರಿಚಾಯಕ ಲೇಖನಗಳೂ ಬರಬೇಕು.

ಆಯಾ ಭಾಗಗಳಲ್ಲಿ ವಿದ್ಯಾವಂತರಾದ ಲೇಖಕರನ್ನು ನೇಮಿಸಿಕೊಂಡು ಅವರ ಮೂಲಕ ಪ್ರಪಂಚ ಪರಿಚಯ ಮಾಡಿಸಿಕೊಡುವುದಾದರೆ ಪ್ರಯೋಜನ ಹೆಚ್ಚು. ವಿಶ್ವವಿದ್ಯಾನಿಲಯಗಳಲ್ಲಿ ಶಿಕ್ಷಣ ಹೊಂದಿ ನಾಲ್ಕಾರು ವಿಷಯಗಳ ವ್ಯಾಸಂಗ



ಮಾಡಿದವರಿಗೆ ಈ ವೃತ್ತಿಯೂ ಶಿಕ್ಷಣವೂ ದೊರೆವಂತಾಗಿ ಅವರನ್ನು ಉಪಯೋಗಿಸಿ ಕೊಂಡರೆ ಇಂಥ ಪ್ರಯೋಜನ ದೊರೆತೀತು.

ಬೇರೆ ದೇಶಗಳಲ್ಲಿ ವ್ಯಂಗ್ಯಚಿತ್ರಾದಿಗಳ ಮೂಲಕ ಪರಿಸ್ಥಿತಿಯ ವಿಮರ್ಶೆ ನಡೆಯುವುದು. ಅಂಥ ಕಲೆಗೂ ನಮ್ಮಲ್ಲಿ ಬೇಕಾದಷ್ಟು ಅಗತ್ಯವೂ ಅವಕಾಶವೂ ಇವೆ. ಕತ್ತಲಿರುವ ಕಡೆ ಬೆಳಕು ಬೀಳುವಂತೆ, ಜನಾಹಿತಕರ ವಾದ, ಮರೆಮೋಸ ಹರಡದಂತೆ, ಎಲ್ಲ ರಹಸ್ಯಗಳನ್ನೂ ಭೇದಿಸಿ, ಅನ್ಯಾಯ ಅಸಾಮಾಜಿಕ ವೃತ್ತಿಗಳನ್ನು ಹೊರಗೆ ಹಾಕುವ ಕೆಲಸ ಪತ್ರಿಕೆಗಳದು.

ತಮ್ಮ ಕೈಯಲ್ಲಾದವರೆಗೂ ನ್ಯಾಯದಿಂದ, ಧೈರ್ಯದಿಂದ, ಜನಹಿತೈಕ ದೃಷ್ಟಿಯಿಂದ ಎಲ್ಲರಿಗೂ ಬೇಕಾಗುವಂತೆ ಚಾಣಾಕ್ಷತೆ, ಮುಂಜಾಗ್ರತೆ, ಎಚ್ಚರಗಳಿಂದ ದುಡಿವ ಹೆಮ್ಮೆಯೂ ಸಂತೋಷವೂ ಸ್ವಾತಂತ್ರ್ಯವೂ ಕೀರ್ತಿ ಪ್ರಯೋಜನಗಳೂ ನಮ್ಮ ನಾಡಿನ ಪತ್ರಿಕೆಗಳ ಪಾಲಿಗೂ ಬರಲಿ.

❑

# 5. ಮೈಸೂರು ಚಿನ್ನ

ನಮ್ಮ ಹಣಕಾಸಿನ ಮಂತ್ರಿಗಳು ವಿಧಾನ ಸಭೆಯಲ್ಲಿ ನಮ್ಮ ಚಿನ್ನವನ್ನು ಕೇಂದ್ರ ಸರಕಾರಕ್ಕೆ ಮಾರುವ ಸಂಬಂಧದಲ್ಲಿ ಕಾಗದ ಪತ್ರಗಳು ನಡೆಯುತ್ತಿವೆಯೆಂದೂ, ಕೇಂದ್ರ ಸರಕಾರ ನಮಗೆ ಸರಿಯಾದ ಬೆಲೆಯನ್ನು ಕೊಡುತ್ತಾರೆಂದೂ, ನಮ್ಮ ಉತ್ಪತ್ತಿಯ ವೆಚ್ಚ ಹೆಚ್ಚಾಗಿರುವುದರಿಂದ ನಮಗೆ ರಿಯಾಯಿತಿ ದರ ದೊರಕುವಂತೆ ನಮಗೆ ನಷ್ಟವಾಗದಂತೆ ನೋಡಿಕೊಳ್ಳಲು ಅನುಗ್ರಹ ಮಾಡುತ್ತಾರೆಂದೂ ತಿಳಿಸಿ ಎಂ. ಪಿ. ಎಲ್. ಶಾಸ್ತ್ರಿಗಳನ್ನು ಸಮಾಧಾನಪಡಿಸಿದರು. ಈ ನಡುವೆ ಈ ಪ್ರಶ್ನೆಯನ್ನು ಈ ಹಂತದಲ್ಲಿ ಎತ್ತಿ ಪರಿಸ್ಥಿತಿಯನ್ನು ಯಾರೂ ತೊಡಕು ಮಾಡಬಾರದೆಂದು ಬೇಡಿದರು.

ಇಲ್ಲಿ ಎರಡು ಮಾತಿವೆ : ಒಂದು ನಮ್ಮ ಚಿನ್ನಕ್ಕೆ ಸರಿಯಾದ ಬೆಲೆ ಎಂಬುದು. ಆ ಮಂತ್ರಿಗಳೂ ಇವರೂ ಹೇಳುವ ರೀತಿ ಒಪ್ಪಿದರೆ ಸರಿಯಾದ ರಿಯಾಯಿತಿ ದೊರೆಯುವುದು ಎಂಬುದು.

ಇಂಡಿಯಾ ಸರ್ಕಾರ ಖಒಈ ಸದಸ್ಯ ಸಂಸ್ಥೆಯಾಗಿರುವುದರಿಂದ ಅದು ಅಧಿಕೃತ ದರಕ್ಕಿಂತ ಹೆಚ್ಚಿನ ಬೆಲೆಗೆ ಚಿನ್ನವನ್ನು ಕೊಳ್ಳಲಾಗದು, ನಿಜ. ಅಧಿಕೃತ ದರ ತೊಲೆ ಒಂದಕ್ಕೆ ರೂ. 62-50. ಇದು ಇಂಡಿಯಾ ಪೇಟೆಯ ದರವಲ್ಲ. ಹೊರಗಿನದು. ಹೊರಗಿನ ದರವೇ ಆಗಲಿ, ಒಳಗಿನದೇ ಆಗಲಿ, ಇಂಡಿಯಾ ಸರಕಾರ ಆ ದರಕ್ಕಿಂತ ಹೆಚ್ಚಿನದಕ್ಕೆ ಹೊಸ ಚಿನ್ನವನ್ನು ಕೊಳ್ಳುವ ಹಾಗಿಲ್ಲವೆಂದರೆ ನಮ್ಮ ಚಿನ್ನವನ್ನು ತಾನೇ ಕೊಳ್ಳುವ ಅಗತ್ಯ ಈಗೇನಿದೆ? ಒಟ್ಟು ವರ್ಷಕ್ಕೆ ನಮ್ಮಲ್ಲಿ ಸುಮಾರು 5 ಕೋಟಿ ರೂ. ಚಿನ್ನ ಉತ್ಪತ್ತಿಯಾಗುತ್ತದೆ. ಇದು ಭಾರತದ ಸರ್ಕಾರದ ಅಗತ್ಯಕ್ಕೆ ಯಾವ ಮೂಲೆಗೆ ಸಾಲುತ್ತದೆ? ಈಗ ನಮ್ಮ ಚಿನ್ನವನ್ನು ಯಾರು ಎಲ್ಲಿ ಎಷ್ಟಕ್ಕೆ ಮಾರುತ್ತಿದ್ದಾರೋ ತಿಳಿಯದು. ಟೇಲರ್ ಕಂಪೆನಿ ಅದಕ್ಕೆ ಒಡೆಯರಾಗಿರುವವರೆಗೂ ಅವರು ಲಂಡನ್ನಲ್ಲಿ ಮಾರುತ್ತಿದ್ದರು. ಬಹುಶಃ ನಮ್ಮ ಸರಕಾರಕ್ಕೆ ಬರುತ್ತಿದ್ದುದು ಗೊತ್ತಾದ ರಾಯಮಾನ ಮಾತ್ರ. ನಮ್ಮ ಸರಕಾರವೇ ಗಣಿಗಳ ಒಡೆಯನಾಗಿದೆ. ಚಿನ್ನದ ಉತ್ಪತ್ತಿ ನಮ್ಮದೆಂದಾಯಿತು. ಅದನ್ನು ಹೆಚ್ಚು ಬೆಲೆ ಬರುವಂತೆ ಮಾರುವ ಹಕ್ಕು ನಮಗಿದೆ. ಎಲ್ಲಿಯವರೆಗೂ ಚಿನ್ನಕ್ಕೆ ಪೇಟೆಯಲ್ಲಿ ಕೊಳ್ಳಲು ಮಾರಲು ಅವಕಾಶವಿದೆಯೊ ಹಾಗೆ



ಮಾಡುವುದು ವಿರೋಧವಲ್ಲವೊ ಅಲ್ಲಿನವರೆಗೂ ನಮ್ಮ ಚಿನ್ನಕ್ಕೆ ಪೇಟೆಯ ದರ ದೊರಕಬೇಕು. ಪೇಟೆಯ ದರ ಹೆಚ್ಚಾಗಿರುವಾಗ ಅಧಿಕೃತ ದರ ತೊಲೆ ರೂ. 62.50 ಇದ್ದು, ಇಂಡಿಯಾ ಸರಕಾರಕ್ಕೆ ಮಾರಬೇಕೆಂದು ಕೇಳುವುದೂ, ಆ ಕಡಮೆ ದರಕ್ಕೆ ಮಾರುವುದೂ ಎರಡೂ ಸರಿಯಲ್ಲ. ಕೇಂದ್ರ ಸರಕಾರ ನಮ್ಮನ್ನು ಒಪ್ಪಿಸುವುದೇನು? ನಾವು ನಷ್ಟಕ್ಕೆ ಕೃತಜ್ಞತೆಯಿಂದ ಒಪ್ಪುವುದು ಎಂದರೇನು?

ಈಗ ನಮ್ಮ ಮ್ಯಾಂಗನೀಸ್, ಕಬ್ಬಿಣ, ಯಾಲಕ್ಕಿ, ಅಡಕೆ, ಕಾಫಿ, ಹತ್ತಿ, ಎಣ್ಣೆಯ ಬೀಜ, ಗೋಡಂಬಿ ಮುಂತಾದವುಗಳನ್ನು ಎಲ್ಲಿ ಹೆಚ್ಚು ಬೆಲೆ ಬರುತ್ತದೆಯೊ ಅಲ್ಲಿ ಮಾರುವುದಿಲ್ಲವೆ? ಹೆಚ್ಚು ಬೆಲೆ ಬರುವ ವಿದೇಶಗಳಿಗೆ ಕಳಿಸಿ ಹೆಚ್ಚು ವಿದೇಶಿ ವಿನಿಮಯ ಸಂಪಾದಿಸುವುದಿಲ್ಲವೆ? ಆ ಲಾಭ ತೊಲೆ ಒಂದಕ್ಕೆ 65 ರೂ (127–62. 80) ದೊರೆಯುವುದು. ಆ ಹಣ ಮೈಸೂರು ರಾಜ್ಯದ ಅಭಿವೃದ್ಧಿ ಕಾರ್ಯಗಳಿಗೆ, ಎಂದರೆ ಅಷ್ಟು ಮಟ್ಟಿನ ಭಾರತದ ಏಳ್ಗೆಗೆ, ಉಪಯೋಗವಾಗುವುದಿಲ್ಲವೆ? ಭಾರತದ ಕಾರ್ಯಗಳೆಂದರೆ, ಎಲ್ಲ ರಾಜ್ಯ ಸರ್ಕಾರಗಳಿಗೂ ಪ್ರಯೋಜನವಾದ ಕಾರ್ಯಗಳೇ ಅಲ್ಲವೆ? ತಕ್ಷಣದ ಹಣ ಕೊಡಬೇಕಿಲ್ಲ, ಲೆಕ್ಕದಲ್ಲಿ ಪೂರ್ತಿ ಬೆಲೆ ಕೊಟ್ಟು ತೆಗೆದುಕೊಳ್ಳುವುದು ನ್ಯಾಯವಾದ ವ್ಯವಹಾರ.

ಇಂಡಿಯಾ ಸರಕಾರ ಈಗ ಚಿನ್ನವನ್ನು ಏಕೆ ಕೊಳ್ಳಬೇಕು? ರಿಸರ್ವ್ ಬ್ಯಾಂಕಿನಲ್ಲಿ ತಮ್ಮ ನಿಧಿಯ ಭಾಗವಾಗಿ ಇಡುವುದಕ್ಕೊ? ಅಥವಾ, ಬೇರೊಂದು ಚಿನ್ನದ ನಿಧಿಯನ್ನು ನಿರ್ಮಿಸಿ ರಫ್ತಿನ ಕೊರತೆಗಳನ್ನು ತುಂಬಲು ಆ ಮಟ್ಟಿಗೆ ನೆರವಾಗುವುದಕ್ಕೊ? ಚಲಾವಣೆ ನಾಣ್ಯದ ಬೆಂಗಾವಲಿಗೆ ಒಂದು ಕಾಸಿನ ಬೆಲೆಯ ಚಿನ್ನ ಕೂಡ ಇರಬೇಕಾದ್ದಿಲ್ಲ. ಚಲಾವಣೆ ಹಾಳಾದ ಬೆಲೆ ಕಾಪಾಡುವುದು ಚಿನ್ನವಲ್ಲ. ಅದು ತಾನೇ ಈಗ ಇರುವುದೆಷ್ಟು: 115 ಕೋಟಿ ರೂ! ಚಲಾವಣೆಯಲ್ಲಿರುವ ನೋಟಿನ ಮೊತ್ತ 1600 ಕೋಟಿ. ಎಂದರೆ, ಚಿನ್ನದ್ದು ಅದರ 14ರಲ್ಲಿ ಒಂದು ಭಾಗ. (ಬ್ರಿಟನಿನಲ್ಲಿ 2600 ಕೋಟಿ ರೂ. ಸುಮಾರು ಬೆಲೆಯ ನೋಟಿನ ಚಲಾವಣೆ ಹಿಂದೆ ಒಂದೇ ಒಂದು ನಯಾಪೈಸೆ ಚಿನ್ನವಿಲ್ಲ ಎಂಬುದನ್ನು ಗಮನಿಸಬೇಕು.) ಜನ ಎದೆಕೆಡದಿದ್ದರೆ ಆ ಚಿನ್ನವನ್ನು ರಫ್ತಿನ ಕೊರೆಗಳನ್ನು ತುಂಬಲು ಬಳಸಬಹುದು. ನಮ್ಮ ಜನ ಪ್ರಾಚೀನ ಕಾಲದಿಂದಲೂ ಚಿನ್ನದ ನಿಧಿಗೂ ನಾಣ್ಯನೋಟುಗಳ ಚಲಾವಣೆಗೂ ಗಂಟು ಹಾಕುತ್ತಿರುವುದನ್ನು ನಂಬುವುದರಿಂದ, ಹೆಸರಿಗಾದರೂ ಅಷ್ಟು ಚಿನ್ನ ಇಟ್ಟಿರುವುದು ಅವರ ಧಾತೋಪಶಮನಕ್ಕೆ, ಒಣ ಅಭಿಮಾನಕ್ಕೆ, ವಿಶ್ವಾಸಕ್ಕೆ ಕಾಣಿಕೆಯಾಗಿ, ಅಷ್ಟೇ. ಆ 115 ಕೋಟಿ ರೂ. ಚಿನ್ನವನ್ನು ಕೊಟ್ಟರೂ ಒಂದು ವರ್ಷದ ವಿದೇಶಿ ವಿನಿಮಯದ ಕೊರೆಯಲ್ಲಿ– ಸುಮಾರು ರೂ.300 – 350 ಕೋಟಿ – ಒಂದು ಭಾಗವೂ ತುಂಬುವುದಿಲ್ಲ. ಮೈಸೂರಿನ ಸುಮಾರು 5 ಕೋಟಿ ರೂ. ಬೆಲೆಯ ಚಿನ್ನ ಎಷ್ಟು ಮಟ್ಟಿಗೆ ಆ ಕೊರೆಯನ್ನು ತುಂಬೀತು? ಹೀಗಿರುವಾಗ ಮೈಸೂರಿಗೇಕೆ ನಷ್ಟವಾಗಬೇಕು? ಹಿಂದೆ (1925ರಿಂದ

1956ರವರೆಗೂ) ನಮ್ಮ ನಿಧಿಗಳಲ್ಲಿದ್ದ ಚಿನ್ನವನ್ನು ರೂ. 21ರಂತೆ ಬೆಲೆ ಕಟ್ಟುತ್ತಿದ್ದರು. 1956ರಲ್ಲಿ ಅದನ್ನು ಅಂತಾರಾಷ್ಟ್ರೀಯ ಬೆಲೆಯಾದ ರೂ. 62ರಂತೆ ಕಟ್ಟಿದ್ದಾರೆ. ಹಿಂದೆ 40 ಕೋಟಿ ರೂ. ಬೆಲೆಯದು ಎನ್ನುತ್ತಿದ್ದ ಚಿನ್ನಕ್ಕೆ ಈಗ 117.7 ಕೋಟಿ ರೂ. ಎಂದು ಬೆಲೆ ಕಟ್ಟಿದರು. ನಿಧಿಯಲ್ಲಿ 115 ಕೋಟಿಯಷ್ಟು ಚಿನ್ನವಿರಬೇಕೆಂಬುದು ಶಾಸನವಾದ್ದರಿಂದ, ಇದ್ದ ಬೆಲೆಯಾದ 40ಕ್ಕೆ 75 ಕೋಟಿ ಸೇರಿಸಿ ಅದನ್ನು 115 ಕೋಟಿ ಮಾಡಿ, 2.3 ಕೋಟಿಯಷ್ಟು ಬೆಲೆಯನ್ನು ಸರಕಾರದ ವಶಕ್ಕೆ ತೆಗೆದುಕೊಂಡರು. ಇದು ತಪ್ಪೇನಲ್ಲ. ಇನ್ನಷ್ಟು ಮುಂದಕ್ಕೆ ಹೋಗಬೇಕಾಗಿದ್ದಿತು ಮಾತ್ರ.

ಚಿನ್ನದ ಬೆಲೆ ತೊಲೆ ಒಂದಕ್ಕೆ ರೂ. 100ಕ್ಕಿಂತ ಕಡಮೆಯಾಗಲು ಇನ್ನೂ ಬಹುದಿನ ಹಿಡಿದೀತು. 62.50 ರೂ. ಎಂದಿಗಾಗುವುದೊ ಯಾರು ಹೇಳಿಯಾರು? 62.50ಕ್ಕೆ ಇಳಿದರೆ ಒಂದು ಲಕ್ಷ ಮಂದಿ ಬಳೆ, ಸರ, ಸರಿಗೆ ಮಾಡಿಸಿಕೊಳ್ಳಬಲ್ಲರು; ಚಿನ್ನದ ಹಲ್ಲು ಕಟ್ಟಿಸಿಕೊಳ್ಳಬಲ್ಲರು; ಚಿನ್ನದ ಕನ್ನಡಕ, ಗಡಿಯಾರ ಸರಪಳಿ ಹಾಕಿಕೊಂಡಾರು; ಚಿನ್ನದ ಭಸ್ಮ, ಲೇಹ, ಎಲೆ ತಿಂದಾರು. ಮೈಗೆ ಬೇಕಾದರೆ ಮುಲಾಮು ಹಾಕಿಕೊಂಡಾರು. ಎಷ್ಟು ಜನ ಅದಕ್ಕಾಗಿ ಹಾತೊರೆಯುತ್ತಿರುವಾಗ ಏಕೆ 62.50ಗೆ ಪೇಟೆಯ ಧಾರಣೆ ಇಳಿಯಬಾರದು? ಇಳಿಸಬಾರದು? ಆವರೆಗಾದರೂ ನಮ್ಮ ನಿಧಿಯ ಚಿನ್ನವನ್ನು 100 ರಂತೆ ಬೆಲೆಕಟ್ಟಿದರೆ 70 ಕೋಟಿ ರೂಪಾಯಿನ ಬೆಲೆಹೆಚ್ಚುವುದು. ಅದು ಹೊಸ ಹಣ ನಿರ್ಮಾಣವಾದಂತಾಗುವುದು. ಅದನ್ನು ಚಲಾವಣೆಗೆ ತರಬೇಕಾಗುವುದಿಲ್ಲ. ಈ ವರೆಗೆ ನಿಧಿಗಳಲ್ಲಿ ಇರುವ 70 ಕೋಟಿ ರೂ. ಸಾಲಪತ್ರಗಳನ್ನು ರದ್ದುಮಾಡಿ ಸಾಲ ಹರಿಸಬಹುದು, ಅಥವಾ ಆ ಮಟ್ಟಿಗೆ ಹೊಸ ಸಾಲವನ್ನು ಎತ್ತದೆ ತಡೆಯಬಹುದು. ಮೈಸೂರು ಚಿನ್ನದ ಈ ಜುಜುಬಿ ಬೆಲೆಗೆ ಅಡ್ಡಿ ಬರದೆ ಅದರ 14 ವರ್ಷದ ಬೆಲೆಯಷ್ಟರ ಬೆಲೆಯನ್ನು ಒಂದೇ ಗಂಟಿನಲ್ಲಿ ಲಾಭ ಪಡೆಯಬಹುದಾಗಿರುವಾಗ ಅವರು ನಮ್ಮಿಂದ ಏಕೆ ಚಿನ್ನ ಕೊಳ್ಳುವುದು? ನಮಗೆ ಸರಿ ಮಾಡುವುದು? ರಿಯಾಯಿತಿ ಕೊಡಿಸುವುದು? ಇಷ್ಟೆಲ್ಲ ಏಕೆ ಗಾಸಿ? ಇದು ನೇರವಾದ ವ್ಯವಹಾರವಲ್ಲ.

ಮೇಲಧಿಕಾರದಲ್ಲಿರುವ ಕೇಂದ್ರ ಸರಕಾರ ಆಧೀನ ರಾಜ್ಯದವರನ್ನು ಯಾಕೆ ಹೀಗೆ ಕೇಳಬೇಕೊ ತೋರದಾಗಿದೆ. ನಾವು ರಿಯಾಯಿತಿ ಬೇಡುವುದೇನು? ಅವರು ದಯಮಾಡಿ ಅನುಗ್ರಹಿಸುತ್ತೇನೆಂದು ಭರವಸೆ ಕೊಡವುದೇನು? ಪರಿಸ್ಥಿತಿಯನ್ನು ತೊಡಕುಗೊಳಿಸಬಾರದೆಂದು ನಮ್ಮ ಮಂತ್ರಿಗಳು ನಮ್ಮನ್ನು ಕೇಳುವುದೇನು? ವಿಚಿತ್ರ ಪ್ರಪಂಚ!

1959

❑

# 6. ಧಾರಣೆವಾಸಿಗಳ ಏರಿಕೆ

ಧಾರಣೆವಾಸಿಗಳು ಏರಿ ಜನಕ್ಕೆ ಕಷ್ಟ ನಷ್ಟ ಸಂಭವಿಸಿವೆಯೆಂಬ ಕೂಗು ಎಲ್ಲೆಲ್ಲಿಯೂ ಇದೆ. ಇದರ ಸ್ವರೂಪವೇನು? ಇದು ಸಮಸ್ಯೆಯಾಗಿದ್ದರೆ ಪರಿಹಾರವೇನು? ಎಂಬುದರ ನೆಲಸನ್ನು ಕುರಿತು ಇಲ್ಲಿ ನಾಲ್ಕು ಮಾತುಗಳಿವೆ. ಸಾಮಾನ್ಯವಾಗಿ ಆಹಾರ ಪದಾರ್ಥಗಳ ಬೆಲೆಗಳಿಗೆ ಧಾರಣೆವಾಸಿ ಎಂಬುದು ರೂಢಿ. ಜನರ ದಿನಬದುಕಿಗೆ ಕೊಳ್ಳಬೇಕಾದ ಎಲ್ಲದರ ಬೆಲೆಗಳು ಇದಕ್ಕೆ ಸೇರಬೇಕು. ಒಂದು ಆಹಾರ ಪದಾರ್ಥಗಳ ಬೆಲೆಯಾದರೆ, ಇನ್ನೊಂದು ಜೀವನದ ವೆಚ್ಚ. ಆಹಾರ ಪದಾರ್ಥಗಳು ಎಂದರೆ ಅಕ್ಕಿ, ಗೋಧಿ, ರಾಗಿ, ತಿನ್ನುವವರಿಗೆ ಜೋಳ, ಸಜ್ಜೆ, ಮಾಂಸ, ಮೀನು–ಇವುಗಳ ಜೊತೆಗೆ ಹಾಲು, ಮೊಟ್ಟೆ, ಕಾಯಿಪಲ್ಯ, ಮೆಣಸು, ಎಣ್ಣೆ, ತುಪ್ಪ, ಉಪ್ಪು ಮುಂತಾದವು. ಇವುಗಳಲ್ಲಿ ಕೆಲವರಿಗೆ ಕೆಲವು ಪ್ರಧಾನ ಆಹಾರ ಸಾಮಗ್ರಿಗಳು, ಇನ್ನು ಕೆಲವು ಜೊತೆಗೆ ತಿನ್ನುವುವು. ಅಥವಾ ಮುಖ್ಯ ಧಾನ್ಯ ಆಹಾರ, ಪದಾರ್ಥ ಸಿಕ್ಕಿದಾಗ ಬಳಸುವವು. ಹಣ್ಣು ಹಂಪಲು ಇನ್ನೊಂದು ಬಗೆಯ ಆಹಾರ ಪದಾರ್ಥ. ಜೀವನದ ವೆಚ್ಚವೆನ್ನುವಾಗ ಬಟ್ಟೆ, ವಸತಿ, ದೀಪ, ನೀರು, ಬಾಡಿಗೆ, ಮಕ್ಕಳ ವಿದ್ಯಾಭ್ಯಾಸದ ಮತ್ತು ರೋಗ ಚಿಕಿತ್ಸೆಗಳ ವೆಚ್ಚಗಳು ಸೇರುವವು. ಧಾರಣೆವಾಸಿ ಎನ್ನುವಾಗ ಈ ಎರಡರ ಕಷ್ಟಗಳನ್ನೂ ಜನ ಎಣಿಸುತ್ತಾರೆ. ಪ್ರತಿ ಮನೆತನಕ್ಕೂ ಒಂದು ಬಗೆಯ ವೆಚ್ಚ, ಜೀವನದ ಮಟ್ಟ ವಾಡಿಕೆಯಾಗಿರುವುದರಿಂದ ಅದನ್ನು ನಡಸಲು ಕಷ್ಟವಾದಾಗ ಈ ಏರಿಕೆಯ ಗಾಸಿ ತಟ್ಟುತ್ತದೆ. ಸಂಪಾದನೆ ಹೆಚ್ಚಾಗದೆ ಇದ್ದರೆ ಈ ಮಟ್ಟ ಕುಗ್ಗಬೇಕಾಗುವುದು. ಇದರಲ್ಲೂ ಕೆಲವರಿಗೆ ಅತ್ಯಾವಶ್ಯಕವಾದ ಸಾಮಗ್ರಿ ಇನ್ನೊಬ್ಬರಿಗೆ ನೆಮ್ಮದಿ ಅಥವಾ ಭೋಗ ಸಾಮಗ್ರಿ ಎನಿಸುವುದು. ಕಾಫೀ, ಸಕ್ಕರೆ, ತಾಂಬೂಲ, ಮೋಟಾರು ಕಾರು, ಇಸ್ತ್ರಿ ಮಾಡಿದ ಬಟ್ಟೆ, ರೇಡಿಯೊ, ತುಪ್ಪ, ಪಾನದ್ರವ್ಯ, ಸಿಗರೇಟು ಮುಂತಾದ ಸಾಮಗ್ರಿಗಳು ಇವು. ಆದುದರಿಂದ ಬಗೆಬಗೆಯ ಜನರಿಗೆ ಬಗೆಬಗೆಯ ಅಗತ್ಯಗಳು; ಇವಿಲ್ಲದೆ ಕೊರತೆ ಕಾಣುವುದು ಸಹಜ. ಬೆಲೆಗಳೆಂದಾಗ ಸರ್ಕಾರಿ ಲೆಕ್ಕಗಳಲ್ಲಿ ಮಂಡಿಪೇಟೆಯ ಸರಾಸರಿ ಸಗಟು ಧಾರಣೆವಾಸಿಗಳ ಲೆಕ್ಕವೇ ಎಣಿಕೆಗೆ ಬರುವವು. ಅದು ವಾರದ ಅಥವಾ ತಿಂಗಳ ಸರಾಸರಿ. ಒಟ್ಟು ಒಂದೊಂದು ಊರಿನ ಅಥವಾ ಇಂಥಾ ದೊಡ್ಡ ದೇಶದ ಎಲ್ಲ ದೊಡ್ಡ ಪಟ್ಟಣಗಳ ಸರಾಸರಿ. ಸರಾಸರಿ ಎಂದಾಗ ಯಾವ

ಊರಿನಲ್ಲಿಯೂ ಎಂದೂ ಇಲ್ಲದೇ ಇರಬಹುದಾದ, ಆದರೆ ಒಟ್ಟಿನಲ್ಲಿ ಪೇಟೆಯ ಲಕ್ಷಣವನ್ನು ತೋರಿಸುವ ಅಂಕಿ ಅಂಶಗಳು ಅವು. ಸಗಟು ಧಾರಣೆವಾಸಿಗಳು ಒಟ್ಟಿನಲ್ಲಿ ಕೊಳ್ಳುವವರಿಗೆ ಬೀಳುವ ದರಗಳು. ಅಲ್ಲಿ ಮಾರುವವರು ಒಟ್ಟು ಮಾರುವರು. ಕೊಳ್ಳುವವರು ಒಟ್ಟು ಕೊಳ್ಳುವರು. ಅವರು ಬಹುಶಃ ತರಗಿನ ದಲ್ಲಾಲರು. ಸಾಮಾನ್ಯರು ಕೊಳ್ಳುವುದು ಚಿಲ್ಲರೆ ಅಂಗಡಿಗಳಲ್ಲಿ. ಮಂಡಿಗಳಲ್ಲಿ ಕೊಂಡುದನ್ನು ಬಗೆಬಗೆಯಾಗಿ ವಿಂಗಡಿಸಿ ಒಪ್ಪ ಮಾಡಿ ಮಾರುವರು. ಅಥವಾ, ಇನ್ನೂ ಸಣ್ಣ ಅಂಗಡಿಗಳವರು. ಒಂದೇ ಬಗೆಯ ಪದಾರ್ಥಕ್ಕೆ ಒಂದು ದಿನ ಒಂದೇ ಬಗೆಯ ಬೆಲೆಯಿರುವುದು ರೂಢಿಯಾದ್ದರಿಂದ, ಪೇಟೆಯಲ್ಲಿ ಒಂದೇ ದರ ಇರುವುದರಿಂದ, ಧಾರಣೆವಾಸಿ ಒಂದು ಸ್ತಿಮಿತದಲ್ಲಿರುತ್ತದೆ. ಇವರೆಲ್ಲ ತಾವು ಮಾರುವ ಪ್ರತಿ ಪದಾರ್ಥದ ಮೇಲೆ ತಮ್ಮ ಖರ್ಚು ಲಾಭ ಸೇರಿಸಿ ಮಾರುತ್ತಾರೆ. ಇಲ್ಲವೇ, ಒಟ್ಟಿನಲ್ಲಿ ಎಲ್ಲದರ ಮೇಲೂ ಲಾಭ ಹಂಚುವಂತೆ ವ್ಯಾಪಾರ ಮಾಡಬಹುದು. ಸಗಟು ಬೆಲೆಗಿಂತ ಈ ಬೆಲೆಯು ಯಾವಾಗಲೂ ಹೆಚ್ಚೇ. ಜೊತೆಗೆ ಪದಾರ್ಥದ ಮೇಲೆ ಹಾಕಿರುವ ಹಣದ ಮೇಲೆ ಒಬ್ಬೊಬ್ಬರು ಒಂದೊಂದು ರೀತಿ ಶೇಕಡಾ ಬಡ್ಡಿಯನ್ನು ಸೇರಿಸುವರು. ತಾವೇ ಕುಳಿತು ವ್ಯಾಪಾರ ಮಾಡಿದ್ದಕ್ಕೆ ಸಂಪಾದನೆ ಸೇರಿಸಿಕೊಳ್ಳುವರು. ಈ ಚಿಲ್ಲರೆ ವ್ಯಾಪಾರದ ಧಾರಣೆವಾಸಿಯೇ ಸಾಮಾನ್ಯ ಜನದ ಮೇಲೆ ಬೀಳುವ ಖರೀದಿಗಳು. ಇದರ ಜೊತೆಗೆ ಚಿಲ್ಲರೆ ಅಂಗಡಿ ಸಾಮಾನುಗಳನ್ನು ಉದ್ದರಿಗೆ–ಲೆಕ್ಕದ ಸಾಲಕ್ಕೆ–ತೆಗೆದುಕೊಳ್ಳುವ ಜನದ–ಮಧ್ಯಮ ವರ್ಗದ–ಮೇಲೆ ಬೀಳುವ ಬೆಲೆ. ಅದು ಇನ್ನಷ್ಟು ಭಾರವಾಗುವುದು.

ಐದು ಜನ ಇರುವ ಒಂದು ಸಂಸಾರದಲ್ಲಿ ಒಬ್ಬರ ಸಂಪಾದನೆ ಇರುವಾಗ ಎರಡು ಊಟಕ್ಕೆ ಮಾತ್ರ ಮಧ್ಯಮ ವರ್ಗದಲ್ಲಿ ತಲಾ ಎಂಟು ಆಣೆ ವೆಚ್ಚವಿಲ್ಲದೆ ನಡೆಯಲಾರದು. ಇಲ್ಲಿ ಕಾಫೀ ತಿಂಡಿ ಸ್ನಾನ ದೀಪ ಇವುಗಳ ವೆಚ್ಚವನ್ನು ಸೇರಿಸಿಲ್ಲ. ಇಷ್ಟಕ್ಕೇ ತಿಂಗಳಿಗೆ 75 ರೂ. ಆಗುವುದು. ತಿಂಗಳಿಗೆ 100 ರೂ. ಸಂಪಾದನೆ ಮಾಡುವವರು ಒಟ್ಟು ನಮ್ಮ ದೇಶದಲ್ಲಿ ಹೆಚ್ಚು ಮಂದಿಯಿಲ್ಲ. 100/- ರೂ. ಸಂಪಾದಿಸುವವರು ಬಾಡಿಗೆ ರೂ. 10/- ಸರ್ಕಾರಿ ಕೆಲಸದಲ್ಲಿದ್ದರೆ ವಿಮೆ ರೂ. 10-, ದೀಪ ನೀರು ರೂ. 2/-, ಚಿಲ್ಲರೆ ರೂ. 2-3 ಖರ್ಚು ಮಾಡಿದರೆ ಈ 100/- ಮುಗಿದು ಹೋಯಿತು. ಮಕ್ಕಳಿರುವ ಮನೆಯಲ್ಲಿ ದಿನಾ ಒಂದು ಪಾವು ಹಾಲು ಕೊಂಡರೆ ತಿಂಗಳಿಗೆ ಏಳೂವರೆ ರೂ. ಆಯಿತು. ಅದೇತಕ್ಕೆ ಸಾಕು? ಆದರೆ ಎಷ್ಟು ಜನ ಇಷ್ಟನ್ನಾದರೂ ಕೊಂಡಾರು? ಎರಡು ಹೊತ್ತು ಬಿಸಿ ಊಟ, ಒಂದೊಂದು ಚಮಚ ತುಪ್ಪ ಎಷ್ಟು ಜನಕ್ಕೆ ಶಕ್ಯ? ಬಟ್ಟೆ, ವಿದ್ಯೆ, ಚಿಕಿತ್ಸೆಗಳು, ಇತರ ಸೌಕರ್ಯಗಳು ಇಲ್ಲಿ ಯಾವುದನ್ನೂ ಎಣಿಸುತ್ತಿಲ್ಲ. ಈ ಸ್ಥಿತಿ ದಿನದಿನಕ್ಕೂ ವಿಷಮತೆಗೆ ಬರುತ್ತಿರುವುದು ಎಲ್ಲರ ಅನುಭವ. ದೇಶದ ಯೋಜನೆಯನ್ನು ಮುಂದುವರಿಸುತ್ತಿರುವಾಗ ಇದು ಹೀಗಾಗಿರುವುದು ವಿಷಾದಕರ ಸಂಗತಿಯೂ ಹೌದು.



ಸರ್ಕಾರದ ಅಂಕೆಗಳನ್ನು ನೋಡಿದರೆ ಧಾರಣೆವಾಸಿಗಳು ಹೆಚ್ಚು ಏರಿದಂತೆಯೇ ಕಾಣುವುದಿಲ್ಲ. ಅವರು 1952-53ನ್ನು ಮೂಲವರ್ಷವಾಗಿ ಎಣಿಸಿ ಈಚೆಗೆ ಅಂಕಿಗಳನ್ನು ಕೊಡುತ್ತಿದ್ದಾರೆ. ಆಗ ಸಗಟು ಧಾರಣೆ (1957ರಲ್ಲಿ) ಶೇಕಡಾ 7 ರಷ್ಟು, ಡಿಸೆಂಬರ್ 58ರಲ್ಲಿ 11 ರಷ್ಟು – ಎಂದರೆ ಶೇಕಡ 4 ರಷ್ಟು ಮಾತ್ರ ಏರಿರುವಂತೆ ಲೆಕ್ಕ ಕಾಣುತ್ತದೆ. ಇನ್ನು ಕೆಲವು ಲೆಕ್ಕಗಳಲ್ಲಿ 1939ನ್ನು ಮೂಲವರ್ಷವಾಗಿ ಎಣಿಸಿರುವುದುಂಟು. ಆ ಲೆಕ್ಕ 1952-53ಕ್ಕೆ 100 ರಿಂದ 380.6ರವರೆಗೆ, ಎಂದರೆ ಸುಮಾರು 1ಕ್ಕೆ 4 ರಷ್ಟು ಬೆಲೆಗಳು ಏರಿರುವುದು ಕಾಣುತ್ತದೆ. ಈ 30 ವರ್ಷದಿಂದ ಸಂಸಾರ ನಿರ್ವಹಣ ಮಾಡಿರುವವರಿಗೆ ಕಷ್ಟ ಕಾಣುವುದು. ಎಲ್ಲ ಬೆಲೆಗಳೂ ಅಂದಿನಿಂದ ಇಂದಿಗೆ ನಾಲ್ಕರಷ್ಟಾದರೂ ಏರಿರುವುವು. ಆ ಮಟ್ಟಿಗೆ ಎಲ್ಲರಿಗೂ ಸಂಪಾದನೆ ಏರಿದ್ದರೆ ಕಷ್ಟ ತೋರಬೇಕಾದ್ದಿರಲಿಲ್ಲ. ಸಮಸ್ಯೆ ಇರುವುದು ಇಲ್ಲೇ. ಏರಿರುವ ಬೆಲೆಗಳ ಸಮಕ್ಕೆ ತೂಗದ ವರಮಾನ ಜನದ ಕಷ್ಟಕ್ಕೆ ಕಾರಣವಾಗಿದೆ. ಜೊತೆಗೆ ಜನಸಂಖ್ಯೆ ಶೇಕಡ 2 ರಂತೆ ಹೆಚ್ಚಾಗುತ್ತಿರುವ ಸಂಗತಿ ತೊಡಕನ್ನು ಹೆಚ್ಚು ಮಾಡುತ್ತಿದೆ. ಬೇರೆ ಯೂರೋಪಿಯನ್ – ಅಮೇರಿಕನ್ ದೇಶದಲ್ಲಿ ಇಂಥದು ನಡೆದಿದ್ದರೆ ಎಷ್ಟೋ ದಂಗೆಗಳು ಆಗುತ್ತಿದ್ದವು.

ಜನದ ಸಂಪಾದನೆಯೇನೊ ಒಟ್ಟಿನಲ್ಲಿ ಹೆಚ್ಚಿದೆ. ಹಿಂದೆ ಇಲ್ಲದಿದ್ದವರಿಗೆ ಹಿಂದಿಗಿಂತ ಅತಿ ಹೆಚ್ಚಾಗಿ ಹೆಚ್ಚು ಜನಕ್ಕೆ ಕೆಲಸ ದೊರಕಿದೆ. ಒಟ್ಟು ಸಂಪಾದನೆಯ ಮೊತ್ತ, ಒಟ್ಟು ತಿನ್ನುವವರ ಸಂಖ್ಯೆ ಎರಡೂ ಹೆಚ್ಚಾಗಿವೆ. ಅಲ್ಲದೆ ಹೆಚ್ಚು ಜನ ಹಿಂದೆ ತಿನ್ನದಿದ್ದವರು ಅಕ್ಕಿ, ಗೋಧಿ, ಸಕ್ಕರೆ, ಕಾಫಿ, ಟೀ, ತರ್ಕಾರಿ, ಹಾಲು, ತುಪ್ಪ ತಿನ್ನುತ್ತಿದ್ದಾರೆ. ಹೆಚ್ಚು ಬಟ್ಟೆ ಉಡುತ್ತಿದ್ದಾರೆ. ಮೋಟಾರು, ಸಿನಿಮಾ, ಸಿಗರೇಟು ಬಳಸುತ್ತಿದ್ದಾರೆ. ಪ್ರಯಾಣ ಮಾಡುತ್ತಿದ್ದಾರೆ. ರೋಗದ ಚಿಕಿತ್ಸೆಗಳಿಗೆ ಹೆಚ್ಚು ಗಮನವಿತ್ತಿದ್ದಾರೆ. ಪುಸ್ತಕ, ಪತ್ರಿಕೆ ಕೊಳ್ಳುತ್ತಿದ್ದಾರೆ. ಬಟ್ಟೆ ಮಡಿ ಮಾಡುವ ಅಂಗಡಿಗಳಲ್ಲಿ ವುಲ್ಲನ್, ಸಿಲ್ಕ್, ಜರತಾರಿ ಬಟ್ಟೆಗಳು ಕಣ್ಣು ಕುಕ್ಕುವಂತೆ ಓರಣವಾಗಿ ಕಾಣುತ್ತವೆ. ಸೋಪು, ಹಲ್ಲು ತಿಕ್ಕುವ ಅಂಟು, ಕ್ಷೌರ ಕ್ರೀಮ್ ಹೆಚ್ಚಾಗಿ ಬಳಕೆಯಾಗುತ್ತವೆ. ಹೆಚ್ಚು ಜನ ಹಣ್ಣು ತಿನ್ನುತ್ತಿದ್ದಾರೆ. ಹೊಟೇಲುಗಳ ಸಂಖ್ಯೆ ಹೆಚ್ಚಿ, ಹೆಚ್ಚು ಜನ ದಿನಾ 8-10 ಆಣೆ ವೆಚ್ಚ ಮಾಡುತ್ತಿದ್ದಾರೆ. ಪಟ್ಟಣಗಳಲ್ಲಿ ವಿದೇಶಿ ಪಾನದಂಗಡಿಗಳು ಹೆಚ್ಚಾಗಿವೆ. ಧಾರಾಳ ಗಳಿರುವಾಗ ಧಾರಣೆವಾಸಿಗಳ ಏರಿಕೆ ದುರ್ಭರವೆನ್ನುವುದು ಹೇಗೆ ಎಂದು ಕೇಳಬಹುದು.

ಧಾರಣೆವಾಸಿಯ ಏರಿಕೆಗೆ ಕಡೆಯ ಪಕ್ಷ ನಾಲ್ಕು ಮುಖಗಳುಂಟು. ಮಾರುವವರದು, ಕೊಂಡು ತಿನ್ನುವವರದು, ಹಣಕಾಸಿನ ಒದಗಣೆಯದು, ಸರ್ಕಾರದ ಕೈವಾಡ – ಇವು ಆ ನಾಲ್ಕು.

ಮಾರುವವರು ಎಂದರೆ ಉತ್ಪತ್ತಿಕಾರರು ಮತ್ತು ವರ್ತಕರು. ಇವರು ಒಳ ದೇಶದಲ್ಲಿ ಉತ್ಪನ್ನವಾದ ಅಥವಾ ತಯಾರಾದ ಪದಾರ್ಥವನ್ನು ಒದಗಿಸುವರಾಗಿರ

ಬಹುದು. ಹೊರಗಿಂದ ಆಮದು ಮಾಡಿಕೊಂಡವರಾಗಿರಬಹುದು. ಈ ಎರಡೂ ಸೇರಿ ಪದಾರ್ಥಗಳ ಸರಬರಾಯಿ (supply). ಒಳಗಿನ ಸಾಮಾನು ಜನರ ಬೇಡಿಕೆಗೆ ಸಾಲದಾದಾಗ ಹೊರಗಿನದನ್ನು ತರಿಸಿಕೊಳ್ಳಬೇಕು. ಅಕ್ಕಿ ಗೋಧಿಯಂಥ ಪದಾರ್ಥವಾದರೆ ಏನಾದರೂ ಮಾಡಿ ತರಿಸಿಕೊಳ್ಳಬೇಕಾಗುತ್ತದೆ. ಭಾರತಕ್ಕೆ ಎಂದಿಗೂ ಬರ್ಮಾ ಪೂರ್ವ ದೇಶಗಳಿಂದ ಇದು ಬರಬೇಕಿತ್ತು. ಹಡಗುಗಳಿದ್ದ ಬ್ರಿಟಿಷರು ಅದನ್ನು ಸುಲಭವಾಗಿ ತರುತ್ತಿದ್ದರು. ಖಾಸಗಿಯವರು ಒದಗಿಸುವುದು ಶಕ್ಯವಾದರೆ ಜನಕ್ಷೇಮವನ್ನು ಸಾಧಿಸಬೇಕಾದ ಸರ್ಕಾರ ಈ ಕೆಲಸವನ್ನು ಮಾಡಬೇಕಾಗುತ್ತದೆ. ಮಳೆ ಇಲ್ಲದೆಯೊ, ಮಳೆ-ನೆರೆ ಹೆಚ್ಚಾಗಿಯೊ, ಪೀಡೆ ಬಡಿದೊ ಉತ್ಪತ್ತಿ ಕಡಮೆಯಾದಾಗ, ಒದಗಣೆ ಕಡಮೆಯಾದಾಗ ಒದಗಣೆ ಕಷ್ಟವಾಗುವುದು. ಜನದ ಅಗತ್ಯ ಎಂದಿನಂತೆಯೇ ಇರುವುದರಿಂದ ಬೆಲೆಗಳು ಏರುವುದು ಸಾಧಾರಣ. ಹೆಚ್ಚು ಹಣ ವರಮಾನ ಉಳ್ಳವರು ಬೆಲೆ ಎಷ್ಟೇ ಇರಲಿ ಕೊಳ್ಳುತ್ತಾರೆ. ಇಲ್ಲದವರು ಗಾಸಿ ಪಡುತ್ತಾರೆ, ಕಂಗೆಡುತ್ತಾರೆ. ಹೆಚ್ಚು ಮಂದಿ ಕೆಲಸ ಮಾಡುವ ಮನೆಗಳಲ್ಲಿ ಗಾಸಿ ಸ್ವಲ್ಪ ಕಡಮೆ. ಹೊರಗಿಂದ ಆಮದು ಮಾಡಿಕೊಳ್ಳಬೇಕಾದರೆ ಇಲ್ಲಿನ ಬೆಲೆ ಆ ದೇಶದಲ್ಲಿ ದೊರಕುವುದಕ್ಕಿಂತ ಹೆಚ್ಚಾಗಿರಬೇಕು. ಖಾಸಗಿಯವರು ಅದನ್ನು ತರಿಸಿಕೊಳ್ಳದಿದ್ದರೆ ಇಲ್ಲವಾದ್ದನ್ನು ಎರವಲಾಗಿಯೊ ದಾನವಾಗಿಯೊ ಸರ್ಕಾರ ತರಿಸಿಕೊಳ್ಳಬೇಕಾದೀತು. ಒಪ್ಪಂದದ ದರಗಳಿಗೆ ಕೊಂಡು ಬೇಕಾದಂತೆ ಹಂಚಿ ಮಾರಬೇಕಾದೀತು. ಉತ್ಪತ್ತಿಕಾರರ ಉತ್ಪತ್ತಿ ವೆಚ್ಚದಷ್ಟಾದರೂ ಪೇಟೆಯಲ್ಲಿ ಖರೀದಿ ಬಾರದಾದರೆ, ಅವರಿಗೆ ಮಾರಾಟ ಗಿಟ್ಟುವುದಿಲ್ಲ. ಬತ್ತ, ಗೋಧಿ, ಜೋಳ ಬೆಳೆಯುವುದರಿಂದ ಲಾಭವಿಲ್ಲವೆಂದು ತೋರಿದರೆ ಕಬ್ಬು, ಎಣ್ಣೆಯ ಬಿತ್ತ, ಹೊಗೆಸೊಪ್ಪು ಮುಂತಾದ ವ್ಯಾಪಾರದ ಬೆಳೆಗಳನ್ನು ರೈತರು ಬೆಳೆಯುತ್ತಾರೆ. ಅಥವಾ, ತಮ್ಮ ಜೀವನಕ್ಕೆ ಬೇಕಾದಷ್ಟನ್ನು ಮಾತ್ರ ಬೆಳೆದುಕೊಂಡು ಉಳಿದ ಭೂಮಿಯನ್ನು ಲಾಭದ ಬೆಳೆಗಳಿಗೆ ಇಟ್ಟಾರು, ಅಥವಾ ಬೇಸರವಾದರೆ ಬಂಜರಾಗಿ ಬಿಟ್ಟಾರು. ಅವರನ್ನು ಬಲಾತ್ಕಾರ ಮಾಡುವವರಾರು! ಮಾಡುವುದು ಸರಿಯೆ? ಸದ್ಯದ ಕಾನೂನಿನಲ್ಲಿ ಮಾಡುವುದಕ್ಕಾಗುತ್ತದೆಯೆ? ಉತ್ಪತ್ತಿ ಮಾಡುವವರಿಗೆ ಸರಿಯಾದ ಬೆಲೆ ಬರುವಂತೆ ಉತ್ಪತ್ತಿಕಾರ ಸಂಘಗಳೇರ್ಪಡುತ್ತಿವೆ. ಸರ್ಕಾರ ಇದಕ್ಕೆ ನೆರವಾಗುತ್ತದೆ.

ನಮ್ಮಲ್ಲಿ ಎಲ್ಲಿನಂತೆಯೇ ವರ್ತಕರ ಸಾಹಸದಿಂದ ಪ್ರದೇಶದಿಂದ ಪ್ರದೇಶಕ್ಕೆ ಸಾಮಗ್ರಿಗಳು ಮಾರಾಟವಾಗಬರುತ್ತವೆ. ಇವರ ಚಟುವಟಿಕೆ ಸಾಹಸಗಳ ಮೇಲೆ ಪೇಟೆಗಳಲ್ಲಿ ಪದಾರ್ಥಗಳ ಒದಗಣೆ ಆಗುತ್ತದೆ. ಆದರೆ ಇವರಿಗೆ ಎಷ್ಟು ಲಾಭ ಬಂದರೆ ಇವರ ಚಟುವಟಿಕೆ, ಸಾಹಸ ಅಷ್ಟು ಹೆಚ್ಚುತ್ತವೆ. ಲಾಭ ಬಾರದಾದರೆ ಅವರಿಗೆ ಆಸಕ್ತಿ ಕಡಮೆ. ಉತ್ಪತ್ತಿಕಾರರು ಹೇಗೆ ಉತ್ಪತ್ತಿಯನ್ನು ಕಡಮೆ ಮಾಡುವರೊ ಬೇರೆ ಉತ್ಪತ್ತಿಗೆ ತೊಡಗುವರೊ ಹಾಗೆಯೇ ಮಾಡುವವರು ಈ ವರ್ತಕರೂ. ಕೊಳ್ಳದೆ, ಮಾರದೆ ಬೆಲೆಗಳನ್ನೇರಿಸಲು ಪ್ರಯತ್ನಿಸುವರು. ಅಥವಾ ಬೇಕಾದಷ್ಟು ಕೊಂಡು



ಪದಾರ್ಥವನ್ನು ಮರೆಮಾಡಿ ಹೆಚ್ಚು ಲಾಭಕ್ಕಾಗಿ ಕಾಯುವರು ಅಥವಾ ಪದಾರ್ಥಗಳನ್ನು ಬೆರಸಿ ಲಾಭ ಕಾಣುವರು. ಇಂಥ ಬೆಲೆಗೇ ಮಾರಬೇಕೆಂಬ ನಿಯಮವಿದ್ದಾಗ ಕಳ್ಳಪೇಟೆಯಲ್ಲಿ ಮಾರಿ ಲಾಭ ಪಡೆಯುವರು. ಇಂದಿನ ಪೇಟೆಯಲ್ಲಿ ಇವೆಲ್ಲಾ ಉಂಟು. ಒಂದು ರೂ. ಕಡಮೆ ಬೆಲೆಗೆ ಮಾರಿದರೆ ಒಂದು ಕೋಟಿ ಜನ ಕೊಂಡು ಬದುಕಬಲ್ಲವರಾಗಿರುವಾಗ ಒಂದು ರೂ. ಹೆಚ್ಚಾಗಿ ಬರಲಿ ಎಂದು ಉತ್ಪತ್ತಿ ಕಡಮೆ ಮಾಡುವ, ಮಾರಾಟ ತಡೆಯುವ ವಿದ್ಯೆ ಉತ್ಪತ್ತಿಕಾರರಿಗೂ ಮಾರಾಟಕಾರರಿಗೂ ಬೇಕೆನ್ನಿಸುತ್ತದೆ. ಅದು ಅಸಾಮಾಜಿಕ ನಿಜ. ಆದರೆ ಸಾಮಾಜಿಕರಾಗಿ ಲಾಭ ಕಡಮೆ ಮಾಡಿಕೊಳ್ಳುವುದಕ್ಕಾಗುತ್ತದೆಯೇ? ಊರ ಚಿಂತೆ ಕಟ್ಟಿಕೊಂಡು ಯಾವ ವೀರಶೆಟ್ಟಿ ಬಡವನಾಗುವನು? ಇದಲ್ಲದೆ ದಲ್ಲಾಳಿಗಳು, ದೊಡ್ಡ ವರ್ತಕರು ಉತ್ಪತ್ತಿ ಆಗುವ ಮುಂಚೆಯೇ ಅಂದಾಜನ್ನು ಮಾಡಿ ಇಷ್ಟಕ್ಕೆ ಕೊಳ್ಳುವೆವು, ಇಷ್ಟಕ್ಕೆ ಮಾರುವೆವು ಎಂದು ಒಪ್ಪಂದಗಳನ್ನು ಮಾಡಿಕೊಂಡಿರುತ್ತಾರೆ, ಸಂಚಕಾರಗಳನ್ನು ಕೊಟ್ಟಿರುತ್ತಾರೆ. ಆ ಬೆಲೆಗಳ ಮೇಲೆ ಲಾಭ ಗಳಿಸುವುದಕ್ಕೆ ಯೋಚಿಸಿರುತ್ತಾರೆ. ಅವರ ದೃಷ್ಟಿ ಲಾಭದ ಕಡೆ. ಇದು ಬಲಿತಷ್ಟೂ ಪದಾರ್ಥಗಳ ಒದಗಣೆ ಮಿತವಾಗುವದೇ ಸಂಭವ. ಅದೂ ಧಾರಣೆವಾಸಿ ಏರಲು ಕಾರಣವೇ. ಧಾರಣೆ ಏರಿದಷ್ಟೂ ಆ ಮಟ್ಟದಲ್ಲಿ ಅದನ್ನು ನಿಲ್ಲಿಸುವ ಪ್ರವೃತ್ತಿ, ಕಾರ್ಯಕಲಾಪ, ಒಪ್ಪಂದಗಳು ನಡೆಯುತ್ತವೆ. ಏರಿದಷ್ಟೂ ಇವರಿಗೆ ಲಾಭ ಹೆಚ್ಚು.

ಇದರ ಜೊತೆಗೆ ಪದಾರ್ಥಗಳು ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಾಗಣೆಯಾಗಬೇಕಾಗುತ್ತದೆ. ರೈಲು, ಲಾರಿ, ಸೌಕರ್ಯಗಳು ಹೆಚ್ಚಿದಂತೆಲ್ಲಾ ಈ ಸಾಗಣೆಯ ಸೌಲಭ್ಯ ಹೆಚ್ಚುವುದು. ಸಾಗಣೆ ವೆಚ್ಚ ಹೆಚ್ಚಾದರೆ ದರಗಳೂ ಆ ಮಟ್ಟಿಗೆ ಏರುವುವು. ಅವು ದೊರಕುವುದು ಕಷ್ಟವಾದರೆ, ತಡವಾದರೆ ಅವು ಬರಬೇಕಾದ ಪೇಟೆಗಳಿಗೆ ಸರಕುಬಾರದೆ ಒದಗಣೆ ಕಡಮೆಯಾಗಿ ಬೆಲೆ ಏರುವುದು. ಅನೇಕ ಸಂದರ್ಭಗಳಲ್ಲಿ ಈ 8-10 ವರ್ಷಗಳಲ್ಲಿ ಸಾಗಣೆ ಸೌಕರ್ಯಗಳ ಕಷ್ಟ ನಿಷ್ಠುರ, ತೊಡಕು ಆಲಸ್ಯ, ಅಸಾಮಾಜಿಕತೆಗಳು ಸ್ಥಿತಿಯನ್ನು ಕೆಡಿಸಿವೆ. ಇದಕ್ಕೆಲ್ಲ ಸಂಬಂಧಪಟ್ಟಂತೆ ಸಾಹುಕಾರಿಯಾಗಿಯೊ ಸಾರ್ವಜನಿಕವಾಗಿಯೊ ಹಣ ಒದಗಬೇಕಾಗುವುದು. ತೆರಿಗೆ ಸುಂಕಗಳ ಪದ್ಧತಿ ತಮ್ಮ ಪಾಲಿನ ಪೀಡೆಯನ್ನೊ ಸೌಕರ್ಯವನ್ನೊ ಒದಗಿಸಬಹುದು. ಒಟ್ಟಿನಲ್ಲಿ ಉತ್ಪತ್ತಿಕಾರರ ಮತ್ತು ವರ್ತಕರ ಈ ಭಾಗಕ್ಕೆ ಧಾರಣೆವಾಸಿ ಏರಿದಷ್ಟು ಪ್ರಯೋಜನ ಜಾಸ್ತಿ. ಮಾರುವವರಿಗೆ ಅನುಕೂಲ ಸಂದರ್ಭ. ಇವರ ಕೈ ಸಾಮಾನ್ಯವಾಗಿ ಮೇಲಾಗಿಯೇ ಇರುತ್ತದೆ. ಧನಿಕ ವರ್ಗದ ಬಹುಭಾಗ ಈ ಪ್ರಪಂಚಕ್ಕೆ ಸೇರಿದ್ದು. ಇವರು ತೋರಿಸುವ ಆಸಕ್ತಿಯಿಂದ, ಇವರು ಕೊಡುವ ಹಣ ಪ್ರಯೋಜನದಿಂದ ಲಂಚ ರುಷುವತ್ತುಗಳು ಬೆಳೆಯುವುದು. ಇದು ಜನಜೀವನದ ಎಲ್ಲ ಮಟ್ಟಗಳಲ್ಲೂ ವ್ಯಾಪಿಸಿದೆ. ಬ್ಯಾಂಕ್‌ಗಳಿಂದ ಮುಂಗಡ ಉದ್ದರಿ ಇಂಥವರಿಗೆ ಧಾರಾಳವಾಗಿ ದೊರಕುವುದು. ಅದನ್ನು ಒದಗಿಸಿಕೊಟ್ಟವರಿಗೆ ಕೈ ತುಂಬಾ ಪ್ರಯೋಜನವಾಗುವುದು. ಇಲ್ಲಿ ಉತ್ಪತ್ತಿಕಾರರ ಪ್ರಯೋಜನ ಎಷ್ಟು ಭಾಗ, ಬೇರೆ ಬೇರೆ ಮಟ್ಟಗಳ ಮತ್ತು

ಮಜಲಿನ ವರ್ತಕರದೆಷ್ಟು ಭಾಗ, ಹಣವನ್ನು ಒದಗಿಸಿದವರದು ಎಷ್ಟು ಭಾಗ, ಸಾಗಣೆಯ ಸೌಲಭ್ಯ ಸುಗಮತೆಗಳದು ಎಷ್ಟು? ಎಂಬುದನ್ನೆಲ್ಲಾ ಪ್ರತಿಸಂದರ್ಭಗಳಲ್ಲೂ ಅಳೆದು ಹಿತಗಳನ್ನು ನಿರ್ಣಯಿಸಬೇಕಾಗುವುದು. ಇದು ಬಹು ಅಚ್ಚರಿಯನ್ನುಂಟುಮಾಡುವ ಸಂಗತಿ.

ಆದರೆ ಪದಾರ್ಥಗಳ ಬೆಲೆ ಕಡಮೆಯಾದಷ್ಟು ಕೊಂಡು ತಿನ್ನುವವರ ಪ್ರಯೋಜನ ಹೆಚ್ಚು. ವರಮಾನ ಹೆಚ್ಚಾದಷ್ಟು ಈ ಕೊಂಡು ತಿನ್ನುವ ಸೌಕರ್ಯ, ಜೀವನ ಮಟ್ಟ ಹೆಚ್ಚಿಸಿಕೊಳ್ಳಬಹುದು. ಜೀವನದ ಮಟ್ಟವನ್ನು ಏರಿಸಿಕೊಳ್ಳುವ ಉತ್ಸಾಹ, ಅವಕಾಶ ಹೆಚ್ಚಾದಂತೆಲ್ಲಾ ಅವುಗಳಿಗೆ ಸಜ್ಜನ್ನು ಮಾಡಿಕೊಳ್ಳುವ ಪ್ರಯತ್ನ ಹೆಚ್ಚಾದೀತು. ವರಮಾನವೆಂದರೆ ಕೊಳ್ಳುವ ಶಕ್ತಿ, ಗಿರಾಕಿಯ ಒದಗಣೆ. ಒಂದು ದೃಷ್ಟಿಯಿಂದ ನೋಡಿದರೆ ಕೊಂಡು ತಿನ್ನುವವರೇ ಎಲ್ಲ ಉತ್ಪತ್ತಿಗೂ ಅಗತ್ಯ. ಇವರ ವರಮಾನ ಹೆಚ್ಚಿದಷ್ಟೂ ಉತ್ಪತ್ತಿಯೂ ವರ್ತಕತನದ ಸಾಧನ ಸೌಕರ್ಯಗಳ ಪ್ರಯೋಜನವೂ ಸಫಲತೆಯೂ ಹೆಚ್ಚುವುದು. ಕೊಳ್ಳುವವರು ಕೊಳ್ಳದಾದರೆ ಏನು ಉತ್ಪತ್ತಿ ಮಾಡಿದರೆ ಏನು ಪ್ರಯೋಜನ? ಉತ್ಪತ್ತಿ ನಷ್ಟ. ಹಿಂದೆ ಇಲ್ಲದಿದ್ದಷ್ಟು ಜನ ಇಂದು ನಾಡಿನಲ್ಲಿ ಕೊಂಡು ತಿನ್ನುವವರ ಸಂಖ್ಯೆಯನ್ನು ಹೆಚ್ಚಿಸಿದ್ದಾರೆ. ವರಮಾನಗಳು ಸರ್ವತೋಮುಖವಾಗಿ, ವಿವಿಧವಾಗಿ ಬೆಳೆದಿವೆ. ಹೆಚ್ಚು ಗಾತ್ರದ ವರಮಾನಗಳು ಹೆಚ್ಚು ಜನರಿಗೆ ಬರುತ್ತಿವೆ. ಕೂಡು ಕುಟುಂಬಗಳು ಬೇರೆ ಬೇರೆಯಾಗುತ್ತಿವೆ. ಹಲವು ಮನೆಗಳಲ್ಲಿ ಸಂಪಾದಿಸುವವರ ಸಂಖ್ಯೆ ಈಚೆಗೆ ಹೆಚ್ಚಾಗುತ್ತಿದೆ. ಆದರೂ ಕೆಲಸಗಾರರ ವರ್ಗ ಬಲಿಷ್ಠವಾಗಿ ಬೆಳೆದು ಹಿಂದೆ ಕನಸು ಕಾಣದಷ್ಟು ಮಟ್ಟಿಗೆ ಪ್ರಯೋಜನಗಳನ್ನು, ಅನುಕೂಲಗಳನ್ನು ದೊರಕಿಸಿಕೊಂಡಿವೆ. ಬಹುತರ ಉತ್ಪತ್ತಿಕಾರರಿಗೆ ಸಮವಾದ ಪ್ರಭಾವ ಈ ಕೆಲಸಗಾರ ವರ್ಗಕ್ಕೆ ದೊರಕುತ್ತಿದೆ. ಇನ್ನು ಮುಂದೆಯೂ ದೊರಕಲು ನೆಲಗಟ್ಟೂ ಕಟ್ಟುಪಾಡುಗಳೂ ರಚಿತವಾಗುವಂತೆ ಕಾಣುತ್ತದೆ. ದೊಡ್ಡ ಉದ್ಯೋಗ, ದೊಡ್ಡ ವರಮಾನ, ದೊಡ್ಡ ಲಾಭ ದೊರಕಿಸಿಕೊಂಡವರ ಸಂಖ್ಯೆಯೂ ಹೆಚ್ಚುತ್ತಿದೆ. ಈ ಎರಡು ವರ್ಗದ ಪುಷ್ಟಿಯೂ ಆಗಬೇಕಾದುದೇ. ಆದರೂ ಇವರೆಲ್ಲರೂ ಪೇಟೆಯಲ್ಲಿ ಒದಗುವ ಪದಾರ್ಥಗಳಿಗೆ ಗಿರಾಕಿಗಳಾಗುವುದರಿಂದಲೂ, ಇವರ ಸಂಪಾದನೆ ಏರುತ್ತಿರುವುದರಿಂದಲೂ ಪದಾರ್ಥಗಳ ಬೆಲೆಯನ್ನು ಏರಿಸುವ ಪ್ರಭಾವಗಳಾಗುತ್ತಾರೆ. ಇವರು ಬಳಸುವ ಪದಾರ್ಥಗಳನ್ನು ಅವರು ಬಳಸದಿರಬಹುದು. ಅವರ ಪ್ರಯೋಜನಗಳು ಇವರಿಗಾಗದಿರಬಹುದು. ಎರಡೂ ಸೇರಿ ಪೇಟೆ ಒದಗಿಸುವ ಬಹುತರ ಎಲ್ಲಕ್ಕೂ ಹರಡುತ್ತದೆ. ಆದರೆ ಪೇಟೆಯಲ್ಲಿ ಮಾರಾಟವಾಗುವ ಆಹಾರ ಪದಾರ್ಥಗಳ ಬೆಲೆ ಎಷ್ಟೇ ಹೆಚ್ಚಿರಲಿ, ಅದನ್ನು ಸುಲಭವಾಗಿ ಕೊಳ್ಳುವವರಿರುವಾಗ ಬೆಲೆಗಳು ಇಳಿದ ಹೊರತು ಮಾರಾಟವಾಗದು ಎಂಬ ಯೋಚನೆಗೆ ಅಗತ್ಯವಿರುವುದಿಲ್ಲ.

ನಡು ಮಟ್ಟಗಳವರ ಕಷ್ಟ ಮಾತ್ರ ತುಂಬಾ ಹೆಚ್ಚು. ಪದಾರ್ಥಗಳ ಬೆಲೆ ಏರಿದ ಪ್ರಮಾಣದಲ್ಲಿ ಇವರ ಸಂಪಾದನೆ ಏರಿಲ್ಲ. ಅತಿಯೆಂದರೆ 1939ರಿಂದ ಒಂದಕ್ಕೆ



ಎರಡಾಗಿರಬಹುದು ಈ ಮಟ್ಟಗಳವರ ಸಂಬಳ ಸಾರಿಗೆ. ಇವರ ಜೀವನ ಮಟ್ಟಕ್ಕೆ ಬೀಳುವ ವೆಚ್ಚ ಕಡಮೆ, ಎಂದರೆ 4 ಮೀರಿದ್ದ ದುರ್ದೈವ. ಇವರ ಸಂಸಾರಗಳು ದೊಡ್ಡವು. ಸಂಪಾದಿಸುವವರ ಸಂಖ್ಯೆ ಕಡಮೆ. ಇವರ ಆಸೆ ಆಕಾಂಕ್ಷೆ ಇವರ ಮೇಲಿನ ಅಂತಸ್ತಿನವರನ್ನು ಅನುಸರಿಸುವುದು. ಇವರ ವಾಸದ ಮನೆ, ವಿದ್ಯಾಗತ್ಯ, ಚಿಕಿತ್ಸೆಯ ಬೇಡಿಕೆ ಬಹಳ. ಸಾಮಾನ್ಯ ಜೀವನದ ದುರ್ಭರತೆ ಹೀಗಿದ್ದರೆ, ಸರ್ಕಾರದ ಮತ್ತು ಖಾಸಗಿ ಸಂಸ್ಥೆಗಳ ಎಲ್ಲ ಕೆಲಸದ ಬಹು ಭಾಗದ ಹೊರೆ ಇವರ ತಲೆಯ ಮೇಲೆ ಹೊರುವುದರಿಂದ ಇವರ ಜೀವನ ಕಷ್ಟ. ಏರಿದ ಧಾರಣೆವಾಸಿಗಳ ಧಕ್ಕೆ ವರ್ಗದ ಮೇಲೆ ಬಿದ್ದು ಇವರನ್ನು ದೀನಗೊಳಿಸಿದೆ. ಈ ವರ್ಗ ನಾಳೆಗೆ ನಾಶವಾದರೂ ಒಂದು ರೀತಿಯೆ? ಆದರೆ ಅದು ಸಮಾಜದ ಸ್ತಿಮಿತಕ್ಕೆ ಕ್ಷೇಮವೆ ಎಂಬುದನ್ನು ಯೋಚಿಸಬೇಕು. ಇವರ ಜೊತೆಗೆ ಖಚಿತವಾದ ವರಮಾನಗಳನ್ನು ಪಡೆವ ಎಲ್ಲರೂ ಸೇರುತ್ತಾರೆ. ಬಡ್ಡಿಯಿಂದ, ದೀರ್ಘಕಾಲದ ಒಪ್ಪಂದಗಳಿಂದ ಇಷ್ಟು ರೂಪಾಯಿ ತಿಂಗಳಿಗೆಂದೊ ವರ್ಷಕ್ಕೆಂದೊ ಗೊತ್ತಾಗಿ ಪೂರ್ವನಿರ್ಣೀತವಾದ ವಿಶ್ರಾಂತಿ ವೇತನ ಪಡೆದಂಥವರು ಜೀವನ ಮಾಡಬೇಕೆಂದವರ ಸಂಖ್ಯೆ ಇದಕ್ಕೆ ಸೇರಿ ನೋವುಗಳನ್ನು ಹೆಚ್ಚಿಸುತ್ತದೆ.

ದೇಶದಲ್ಲಿ ಹಣದ ಒದಗಣೆಯೂ ಸಂಚಾರವೂ ಹೆಚ್ಚಾದಷ್ಟೂ ಧಾರಣೆವಾಸಿ ಹೆಚ್ಚುತ್ತದೆನ್ನುವುದುಂಟು. ಇದು ಸ್ವಲ್ಪಮಟ್ಟಿಗೆ ನಿಜ. ಪದಾರ್ಥದ ಉತ್ಪತ್ತಿ ಹೆಚ್ಚಾಗದೆ ಅದನ್ನು ಕೊಳ್ಳುವವರು ಹೆಚ್ಚು ಹಣ ಕೊಟ್ಟು ಗಿರಾಕಿಯಲ್ಲಿ ಪೈಪೋಟಿ ಹುಟ್ಟಿದರೆ ಹಣದ ಬೆಲೆ ಕಡಮೆಯಾಗುವುದು. ಎಂದರೆ ಧಾರಣೆವಾಸಿ ಏರಿಯೇ ಏರುವುದು. ಇಂಡಿಯಾದಲ್ಲಿ 1939ರಿಂದ ಈವರೆಗೆ ಸಂಚಾರಕ್ಕೆ ಸರ್ಕಾರ ಒದಗಿಸಿರುವ ಹಣ ಒಂದಕ್ಕೆ 9ರಷ್ಟು 10ರಷ್ಟು ಹೆಚ್ಚಿದೆ. 1939ರಲ್ಲಿ ಚಲಾವಣೆಯಲ್ಲಿ ಇದ್ದ ನಗದು ಹಣ 180 ಕೋಟಿ. ಈಗ ಸುಮಾರು ಅದು 1660 ಕೋಟಿ ರೂಪಾಯಿ. ಇದರ ಜೊತೆಗೆ ಬ್ಯಾಂಕುಗಳು ಒದಗಿಸುವ ಹಣದ ಸಾಲ ಸೇರಿ ಈಗ ಒಟ್ಟಿಗೆ ಹಣವಾಗಿ ಒದಗುವ ಮೊತ್ತ 2,300 ಕೋಟಿಗೆ ಮೀರುತ್ತದೆ. ಆದರೆ ಇಷ್ಟು ಹಣ ಜನದ ಎಲ್ಲ ಕಾರ್ಯಗಳಿಗೂ ಒದಗಬೇಕಾಗಿರುವುದರಿಂದ ಇದೇನು ಹೆಚ್ಚು ಹಣವಲ್ಲ. ಇಂದಿಗೂ ನಮ್ಮ ದೇಶದ ಹಣದ ಚಲಾವಣೆ ಒಟ್ಟಿನಲ್ಲಿ ಈ ಜನಸಂಖ್ಯೆಯ ದೃಷ್ಟಿಯಿಂದ ನೋಡಿದರೆ ಬಹು ಕಡಮೆಯೇ. ತಲಾ ವರ್ಷಕ್ಕೆ 50-55ರೂ ಆಗುವುದಿಲ್ಲ. 1 ರೂಪಾಯಿ 4 ರೂ. ನಷ್ಟು ಚುರುಕಾಗಿ ಸಂಚಾರ ಮಾಡಿ ಪ್ರಯೋಜಕವಾಗುವುದೆಂದೆಣಿಸಿದರೆ ವರ್ಷಕ್ಕೆ 200-240 ರೂ. ನಷ್ಟು – ಎಂದರೆ ತಲಾ ತಿಂಗಳಿಗೆ 18-20 ರೂ. ಮಾತ್ರ – ಪ್ರಯೋಜನ ತರುವುದೆಂದಾಯಿತು. ಇದೇನೂ ಹೆಚ್ಚಲ್ಲ. ಹೆಚ್ಚು ಉತ್ಪತ್ತಿಯಾಗಿದೆ. ಮಾರಾಟವಾಗಿದೆ. ಜನಕ್ಕೆ ಉದ್ಯೋಗಗಳು ನಿರ್ಮಿತವಾಗಿವೆ. ಸಂಪಾದನೆ ಹೆಚ್ಚಿವೆ. ಹೆಚ್ಚು ಜನರ ಕೈಯಲ್ಲಿ ಹೆಚ್ಚು ಹಣ ಆಡುತ್ತಿದೆ. ಹಿಂದಿನ ಕಾಲದಲ್ಲಿ ಹೆಚ್ಚು ಹಣ ಸಂಪಾದನೆಯಾಗದಿದ್ದ ಬೇಸಾಯಗಾರರಂಥವರ ಕೈಗೆ ಹೆಚ್ಚು ಹಣ ಹೋಗಿದೆ. ಒಂದು ಕಡೆ ಹಣದ ಪ್ರಮಾಣ 9-10 ರಷ್ಟು ಹೆಚ್ಚಿರುವಾಗ, ಪದಾರ್ಥಗಳ ಬೆಲೆ 4ರಷ್ಟು ಮಾತ್ರ ಏರಿರುವುದನ್ನು

ಕಾಣುವಾಗ, ಹಣದ ಚಲಾವಣೆಯಿಂದಾಗಿ ಧಾರಣೆವಾಸಿಗಳು ಅತಿಯಾಗಿಲ್ಲವೆಂಬುದೂ ಕೇವಲ ಹಣದ ಮೊತ್ತವೇ ಬೆಲೆಗಳನ್ನು ಹೆಚ್ಚಿಸುವುದಿಲ್ಲವೆಂಬುದೂ ಈ ಸಂಗತಿಯಿಂದ ಹೊರಪಟ್ಟಿತು. 1/- ರೂ. ನಾಲ್ಕು ಬೇಡ, ಮೂರು ರೂ. ನಷ್ಟಾದರೂ ಕೆಲಸ ಮಾಡುತ್ತದೆ ಎಂದಿಟ್ಟುಕೊಂಡರೆ, ಚಲಾವಣೆಯ ಹಣ 5-6 ಸಾವಿರ ಕೋಟಿ ರೂಪಾಯಿಯಷ್ಟಾದರೂ ಪೇಟೆಯ ಕೆಲಸವನ್ನು ಮಾಡಿದಂತಾಯಿತು. 1958ರಲ್ಲಿ ಚೆಕ್ಕುಗಳ ಮೂಲಕವಾಗಿ ಹರಿದ ಸಾಲಗಳು 9,500 ಕೋಟಿಗೂ ಹೆಚ್ಚಿದ್ದು (1939ರಲ್ಲಿ 2,000 ಕೋಟಿ ರೂ.), ಇವೆರಡೂ ಸೇರಿ ನಾಡಿನ ಕೆಲಸ, ಹಣಕಾಸಿನ ಕೆಲಸದ ಪ್ರಮಾಣವನ್ನು ಸೂಚಿಸುತ್ತದೆ. ಅಂದರೆ ಸುಮಾರು 15,000 ಕೋಟಿ ರೂಪಾಯಿ ಹಣದ ಕಾರ್ಯ, ವ್ಯಾಪಾರ ವ್ಯವಹಾರ ನಡೆದಂತಾಯಿತು. ಒಟ್ಟು ನಾಡಿನ ಉತ್ಪತ್ತಿ ಆ ವರ್ಷಕ್ಕೆ ಅಷ್ಟಾಯಿತೋ ಇಲ್ಲವೋ. ಧಾರಣೆವಾಸಿಗಳೇರಿನ ಮೇಲೆ ಬೆಳಕನ್ನು ಬೀರುವ ಈ ಒಂದು ಸಂಗತಿಯನ್ನೂ ಗಮನದಲ್ಲಿ ಇಟ್ಟುಕೊಳ್ಳಬಹುದು.

ಈಚೆಗೆ ಭಾರತ ಸರ್ಕಾರದವರು ತಮ್ಮ ಯೋಜನೆಗಳ ಪರಿಣಾಮವಾಗಿ ದೇಶದ ಉತ್ಪತ್ತಿಯನ್ನೂ ಜನರ ವರಮಾನವನ್ನೂ ಸಂಪದಭಿವೃದ್ಧಿಯನ್ನೂ ಈಗಾಗಲೇ 50,600/- ಕೋಟಿ ರೂ.ಗೆ ಹೂಡಿ ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆ. ಇದರಲ್ಲಿ ಎಷ್ಟು ಭಾಗ ಹೊಸ ಉತ್ಪತ್ತಿಗೆ ಕಾರಣವಾಗಿದೆ ಎಂಬುದನ್ನು ಗೊತ್ತುಮಾಡಿದರೆ ಅದು ಜನ ಬಳಸುವ ಪದಾರ್ಥದ ಒದಗಣೆಯ ಭಾಗಕ್ಕೆ ಸೇರುತ್ತದೆ. ಅದು ಕಲ್ಪಿಸುವ ವರಮಾನಗಳು, ವೃತ್ತಿ ಉದ್ಯೋಗಗಳು ಪದಾರ್ಥಗಳಿಗಿರುವ ಗಿರಾಕಿಯನ್ನು ಹೆಚ್ಚಿಸುತ್ತದೆ, ಎಂದರೆ, ಧಾರಣೆವಾಸಿಗಳನ್ನು ಏರಿಸುತ್ತದೆ. ಯಾವ ಭಾಗದ ಹಣ ಯಂತ್ರ ನಿರ್ಮಾಣಕ್ಕೆ, ಯಂತ್ರ ರೂಪದ ಬಂಡವಾಳ ಹೂಟಕ್ಕೆ, ನೀರಾವರಿ, ವಿದ್ಯುತ್‌ಶಿಲ್ಪಗಳ ಸ್ಥಾಪನೆಗೆ ಒದಗಿರುತ್ತದೆಯೋ, ಅದು ಇಂದಿನಿಂದ ಹಿಡಿದು ಅನೇಕ ವರ್ಷಗಳ ಕಾಲ ಒಂದು ಕಡೆ ಉತ್ಪನ್ನವನ್ನು ಹೆಚ್ಚಿಸುತ್ತದೆ; ಇನ್ನೊಂದು ಕಡೆ ಉದ್ಯೋಗವನ್ನೂ ವರಮಾನವನ್ನೂ ಕಲ್ಪಿಸಿಕೊಡುತ್ತದೆ. ಶಾಸನಗಳ ಕುಶಲತೆಗಳನ್ನು, ನಿರ್ಮಾಣ ಸಾಹಸವನ್ನು ಹೆಚ್ಚಿಸುವ ಸತ್ವವಾಗಿ ಉಳಿಯುತ್ತದೆ. ಈ ಕಾರ್ಯಗಳಿಂದ ತಯಾರಾದ ಭೂಸಾರ ಪೋಷಕಗಳು ಭೂಮಿಯ ಸಾರವಂತಿಕೆಯನ್ನು ಹೆಚ್ಚಿಸುತ್ತದೆ. ಶಾಸ್ತ್ರ ಸಂಶೋಧನೆಗಳು ಎಲ್ಲ ಬಗೆಯ ಉತ್ಪನ್ನವನ್ನು ಪೋಷಿಸುವ ಶಕ್ತಿಯಾಗುತ್ತದೆ. ತಯಾರಿಸಿದ ಉಕ್ಕು, ಸಿಮೆಂಟ್, ಕಾಗದ ಮುಂತಾದವು ಪೇಟೆಗೆ ಮಾರಾಟದ ಸಾಮಗ್ರಿಗಳನ್ನು ಹೆಚ್ಚಿಸುತ್ತದೆ. ಸರಕಾರದವರು ಕೈಕೊಂಡ ಕೆಲವು ಕಾರ್ಯಗಳ ಪರಿಣಾಮವಾಗಿ ಈ 15-20 ವರ್ಷಗಳಿಂದ ರೈತರು– ಅದರಲ್ಲಿಯೂ ದೊಡ್ಡ ಆಸ್ತಿ ಉಳ್ಳ ರೈತರ ಹಣ ಸಂಪತ್ತಿಯೂ ವರಮಾನವೂ ಹೆಚ್ಚಾಗಿವೆ. ಸಾವಿರಾರು ವರ್ಷಗಳಿಂದ ಕಡಮೆ ಬೆಲೆಗೆ ತಮ್ಮ ದವಸವನ್ನು ಪೇಟೆಗೆ ಹಾಕುತ್ತಿದ್ದ ಈ ವರ್ಗಕ್ಕೆ ರಾಜಕೀಯವಾಗಿಯೂ ಪ್ರಯೋಜನ ದೊರಕಿಸುವುದು ಫಲಕಾರಿಯೇ ಎಂದು ರಾಜಕಾರಣಿಗಳು ಅರಿತಿದ್ದಾರೆ. ಅವರ ವೋಟಿನಿಂದ ಇವರ ಪ್ರಾಬಲ್ಯ ಆದ್ದರಿಂದ. ಕೈಗೆ ಬರುವ ಹಣ ಹೆಚ್ಚೇನೋ ಹೌದು. ಆದರೆ ಕೈಯಿಂದ ಹೋಗುವ



ಹಣ ಅದಕ್ಕೆ ಮೂರರಷ್ಟು – ನಾಲ್ಕರಷ್ಟು ಆಗಿ ರೈತ ಬಡವನಾದನೇನೋ ಎನ್ನಿಸುತ್ತದೆ. ಆದರೂ ಹಿಂದೆ ಸ್ವ ಸಂಪೂರ್ಣರಾಗಿ ಇರುತ್ತಿದ್ದ ಅವರ ಜೀವನದಲ್ಲಿ ಮಾರ್ಪಾಡುಗಳುಂಟಾಗಿ ಅವರು ಕೊಳ್ಳುವ ಇತರ ಸಾಮಾನುಗಳ ಬೆಲೆ ಹೆಚ್ಚಿದೆಯಾದ್ದರಿಂದ ಅವರ ಜೀವನದ ವೆಚ್ಚಗಳು ಹೆಚ್ಚುತ್ತಿವೆ. ತಮ್ಮ ಮಕ್ಕಳ ವಿದ್ಯೆ, ರೋಗಗಳ ಚಿಕಿತ್ಸೆ, ಪ್ರಯಾಣ, ವಿನೋದಗಳಿಗಾಗಿ ಅವರ ವೆಚ್ಚವೂ ದೊಡ್ಡ ಪ್ರಮಾಣದಲ್ಲಿಯೇ ಬೆಳೆಯುತ್ತಿದೆ. ಅವರ ಮಕ್ಕಳು, ಮರಿ ಪೇಟೆ, ಪಟ್ಟಣಗಳಲ್ಲಿ ವಿದ್ಯೆಗೂ ಉದ್ಯೋಗಕ್ಕೂ ಇತರ ಪ್ರಯೋಜನಗಳಿಗಾಗಿಯೂ ಹೋಗಿ ನೆಲಸುತ್ತಿದ್ದಾರೆ. ಈ ಮಟ್ಟಿಗೆ ಅತಿಯಾಗಬಹುದಾಗಿದ್ದ ರೈತ ಸಂಖ್ಯೆ ಭೂಮಿಯಿಂದ ಬೇರೆ ನಡೆಯುತ್ತಿದೆ, ಬೇರೆ ವೃತ್ತಿಗಳಿಗೆ ಹರಿಯುತ್ತದೆ ಎಂಬುದು ಪ್ರಯೋಜನವೇ ಆದರೂ ಭೂಮಿಯ ಸಾಗುವಳಿಗೆ ಸರಿಯಾಗಿ ನಿಲ್ಲುವ ಅವಕಾಶ ಕಡಮೆಯಾಗುತ್ತಿದೆ. ವ್ಯವಸಾಯ ಜೀವನದ ಮಮತೆ, ಆಸಕ್ತಿ ಕಡಮೆಯಾಗುತ್ತದೆ. ಆದುದರಿಂದ ವ್ಯವಸಾಯ ಉತ್ಪನ್ನ ಎಷ್ಟು ಹೆಚ್ಚಬಹುದೋ ಅಷ್ಟು ಹೆಚ್ಚಲು ಆಗಿಲ್ಲ. ವ್ಯವಸಾಯದ ಉತ್ಪನ್ನಕ್ಕೆ ಇಷ್ಟಕ್ಕೆ ಕಡಮೆ ಬೀಳದಂತೆ ಆಗಲಿ ಎಂದು ಧಾನ್ಯದ ಬೆಲೆ ಗೊತ್ತು ಮಾಡುವುದರಿಂದ, ಆ ಮಟ್ಟಿಗೆ ಆ ಪ್ರಮಾಣದಲ್ಲಿ ತಿನ್ನುವವರಿಗೆ, ಕೊಳ್ಳುವವರಿಗೆ ಅವುಗಳ ಧಾರಣೆ ಏರುವುದು. ಅಥವಾ ಕಡಮೆ ಬೀಳಲಾರದು. ಅವನ್ನು ಬೆಳಸಿ ಇತರ ಪದಾರ್ಥಗಳನ್ನು ಮಾರುವವರಿಗೂ ಅದನ್ನು ಕಚ್ಚಾ ಪದಾರ್ಥಗಳಾಗಿ ಬಳಸಿ ಕೈಗಾರಿಕೆ ಉದ್ಯೋಗಗಳನ್ನು ನಡಸುವವರಿಗೂ ಉತ್ಪತ್ತಿ ವೆಚ್ಚ ಹೆಚ್ಚಾಗಿ ಅವನ್ನು ಕೊಂಡು ತಿನ್ನುವುದರಿಂದ ಧಾರಣೆ ಏರುತ್ತದೆ. ಆ ಪದಾರ್ಥಗಳ ಉದಾ: ಹತ್ತಿ, ಸೆಣಬು, ಎಣ್ಣೆ ಬೀಜಗಳು, ಹೊರಗೆ ರಫ್ತಾಗುವ ಪದಾರ್ಥಗಳಾಗಿಯೊ ಅಥವಾ ಮೂಲ ಸಾಮಗ್ರಿಗಳಾಗಿದ್ದರೆ ಅವಕ್ಕೆ ತೆರಬೇಕಾದ ಹಣ ಹೆಚ್ಚುವುದರಿಂದಲೊ ಅವನ್ನು ಹೆಚ್ಚು ಬೆಲೆಗೆ ಮಾರಬೇಕಾಗುತ್ತದೆ. ಈ ಕಾರಣಗಳಿಂದ ಹೊರಪೇಟೆಯಲ್ಲಿ ಅವೇ ಸಾಮಾನನ್ನು ಮಾರುವ ಇತರರೊಡನೆ ನಮ್ಮ ಸ್ಪರ್ಧಾಶಕ್ತಿ ಕಡಮೆ ಆಗುತ್ತದೆ. ಅಥವಾ ಇದಕ್ಕೆ ಪೇಟೆ ಗಿರಾಕಿಯೇ ಕಡಮೆಯಾಗಿ ನಷ್ಟವಾಗಬಹುದು. ಇಲ್ಲಿ ಉತ್ಪತ್ತಿ ಸಾಲದೆ ಹೊರಗಿಂದ ಸರ್ಕಾರದವರು ಅದನ್ನು ಆಮದು ಮಾಡಿದರೆ ಆ ಪದಾರ್ಥದ ಬೆಲೆ, ಅದನ್ನು ಮಾರುವ ವೆಚ್ಚ, ಹಂಚುವ ವೆಚ್ಚಗಳನ್ನು ಒಂದೋ ಜನದ ಮೇಲೆ ಹಾಕಬೇಕು, ಇಲ್ಲವೇ ಸರ್ಕಾರದ ಮೇಲೆ ಬೀಳುವುದು. ಹೇಗೆ ಮಾಡಿದರೂ ಪ್ರತ್ಯಕ್ಷವಾಗಿಯೊ ಪರೋಕ್ಷವಾಗಿಯೊ ಜನದ ಮೇಲೇ ಹೇರಿ ಬೀಳುವ ವೆಚ್ಚ ಇದು. ಒಳಕೈಗಾರಿಕೆ ಅಭಿವೃದ್ಧಿಯಾಗಲೆಂದು, ಹೊರಗಿನ ವ್ಯಾಪಾರದ ಪೈಪೋಟಿ ಇಲ್ಲಿ ತಪ್ಪಲೆಂದು, ಆಮದಿಗಾಗಿ ತೆರುವ ಹಣವನ್ನು ಕಡಮೆ ಮಾಡಬೇಕೆಂದು, ಬೇರೆ ಬಂಡವಾಳಗಳನ್ನು ತರಿಸಿಕೊಳ್ಳಬೇಕೆಂದು ಕೆಲವು ಆಮದನ್ನು ಸರ್ಕಾರದವರು ನಿಲ್ಲಿಸಿದ್ದಾರೆ ಅಥವಾ ಕಡಮೆ ಮಾಡಿದ್ದಾರೆ. ಇಲ್ಲಿ ಉತ್ಪತ್ತಿ ಹೆಚ್ಚಿದರಂತೂ ಸರಿ, ಇಲ್ಲವಾದರೆ ಅವುಗಳ ಬೆಲೆ ಅತಿಯಾಗಿ ಏರುವ ಅವಕಾಶವುಂಟು. ಅಲ್ಲದೆ, ನಮಗೆ ವಿದೇಶಿ ವಿನಿಮಯದ ನೆರವು ಬೇಕು ಎಂಬುದರಿಂದ ನಮ್ಮ

ಕೆಲವು ಪದಾರ್ಥಗಳನ್ನು ರಫ್ತಿಗೆ ಪ್ರೋತ್ಸಾಹಿಸಿ ಮೀಸಲಿಟ್ಟಾಗ – ಅವು ಒಂದೋ ನಮಗೆ ದೊರೆಯದಾಗುವುದು, ಅಥವಾ ಅದಕ್ಕೆ ಹೆಚ್ಚು ಬೆಲೆ ಬೀಳುವುದು, ಅಥವಾ ಕೀಳು ದರ್ಜೆಯ ಸಾಮಾನು ಮಾತ್ರ ನಮಗೆ ಸಿಕ್ಕುವುದು. ಸದ್ಯದ ಕಾಲಕ್ಕೆ ಈ ಮೂರು ವಿಧಗಳಿಂದಲೂ ಕೊಂಡು ಬಳಸುವವರಿಗೆ ನಷ್ಟವೇ, ಅನನುಕೂಲವೇ. ರಷ್ಯಾ, ಚೀಣ, ಪೂರ್ವ ಯೂರೋಪ್ ರಾಷ್ಟ್ರಗಳು ಮುಂತಾದ ಕೆಲವು ದೇಶಗಳೊಡನೆ ನಮ್ಮ ಸರಕಾರವೇ ವ್ಯವಹಾರ ನಡಸಬೇಕಾಗಿದೆ. ಇನ್ನು ಕೆಲವು ಕಡೆ ಸಾರ್ವಜನಿಕರ ಹಿತದ ಪ್ರತಿನಿಧಿಯಾಗಿ ಸಾಮಾನುಗಳನ್ನು ಕೊಳ್ಳುವುದು, ಮಾರುವುದು, ಹಂಚುವುದು ಅಗತ್ಯವಾಗಿ ಕಂಡುಬರುವುದರಿಂದ ಸರ್ಕಾರ ವರ್ತಕತನವನ್ನು ಕೈಕೊಂಡಿದೆ. ಕಳ್ಳಪೇಟೆಯ ವರ್ತಕರನ್ನು ಹದ್ದಿನಲ್ಲಿಡಬೇಕಾಗಿಯೂ ಕ್ಷಾಮ ಪೀಡೆಗಳಿಂದ ಉತ್ಪನ್ನ ಕಡಮೆಯಾದಾಗ ಅಗತ್ಯವಾದ್ದನ್ನು ಒದಗಿಸಿ ಜೀವನವನ್ನು ಸುಗಮವಾಗಿ ಮಾಡಬೇಕಾಗಿಯೂ ಅದನ್ನು ದಾಸ್ತಾನು ಮಾಡಬೇಕಾದ ಕಾರ್ಯಗಳನ್ನು ಸರ್ಕಾರ ಕೈಕೊಂಡಿದೆ. ಅದಕ್ಕಾಗಿ ಮಳಿಗೆ, ಕೋಠಿ, ಅಂಗಡಿಗಳನ್ನು ತೆರೆದಿದೆ. ಈ ಪ್ರಯತ್ನದಿಂದ ಪದಾರ್ಥದ ಒದಗಣೆ ಸ್ವಲ್ಪ ಹೆಚ್ಚಾದರೂ ಅವರು ಮಾರುವುದರ ದರವೂ ಪೇಟೆಯ ದರಕ್ಕಿಂತ ತುಂಬ ಕಡಮೆ ಬೀಳುವ ಸಂಭವವಿಲ್ಲ. ಜೊತೆಗೆ ನಿರಂತರವಾಗಿ ಹಣವುಳ್ಳ ಖಾಸಗೀ ಜನ ಸರ್ಕಾರ ತಮ್ಮೊಡನೆ ಪೈಪೋಟಿ ಮಾಡಿ ತಮ್ಮ ಸ್ವಾತಂತ್ರ್ಯವನ್ನು ಬಗ್ಗು ಬಡಿಯುತ್ತಿದೆ ಎಂಬ ಕೂಗೆತ್ತಿ ರಂಪು ಮಾಡಬಲ್ಲವರಾಗುತ್ತಾರೆ. ಆದರೆ ಅವುಗಳಿಂದ ಪದಾರ್ಥಗಳ ಒದಗಣೆ ಒಂದು ರೀತಿಯಲ್ಲಿ ಕ್ಷೇಮಸಾಧಕವಾಗಬಲ್ಲದು. ಪೇಟೆಯಲ್ಲಿ ಪದಾರ್ಥಗಳಾದರೂ ಸಿಕ್ಕವುದು. ಆದರೆ ಒಂದು ಬೆಲೆಗೆ ಅವರೂ ಪದಾರ್ಥಗಳನ್ನು ಕೊಳ್ಳುವೆವೆಂದು ಬೆಲೆ ಗೊತ್ತು ಮಾಡುವುದರಿಂದ, ಉತ್ಪತ್ತಿಕಾರರಿಗೆ ನಷ್ಟವಾಗಬಾರದೆಂಬ ಗಮನವಿರುವುದರಿಂದ, ಏರಿದ ಬೆಲೆ ಇಳಿಯಲು ಕಷ್ಟವಾಗುತ್ತದೆ. ಯಾವ ಬೆಲೆಯೇ ಆಗಲಿ ಏರುವುದು ಸುಲಭ, ಇಳಿಯುವುದು ಕಷ್ಟತರ. ಚಿಲ್ಲರೆ ಪೇಟೆಯಲ್ಲಿ ಏರುತ್ತದೆಂಬ ಸುದ್ದಿಗೆ ಮುಂಚೆಯೇ ಬೆಲೆ ಏರಿರುವುದು. ಉದಾ: ವೀಸೆಗೆ 6 ನಯಾಪೈಸೆ ಬೆಲೆ ತೆರಿಗೆ ಹಾಕುತ್ತಾರೆಂದರೆ ಆ ತಾರೀಖಿನ ಮುಂಚೆಯೇ ಸೇರಿಗೆ 2 ಆಣೆ ಬೆಲೆ ಹೆಚ್ಚಿರುವುದು. ಕಡಮೆಯಾಗುತ್ತದೆಂಬ ಸುದ್ದಿ ಮುಟ್ಟಿದ ಬಹುಕಾಲದ ಮೇಲೆ ಅಲ್ಪ ಸ್ವಲ್ಪ ಎರಡಾಣೆಯಿಂದ ಒಂದೂವರೆಯವರೆಗೆ ಇಳಿವುದು. ಸರ್ಕಾರದ ಅಪ್ಪಣೆ ಇಲ್ಲದೆ ಸಿಮೆಂಟ್, ಉಕ್ಕು, ರಾಸಾಯನಿಕ ದ್ರವ್ಯಗಳು ಮುಂತಾದವು ಸಿಕ್ಕದಿರುವುದರಿಂದ ಕೊಳ್ಳಾಟ ಮಾರಾಟ ಎರಡಕ್ಕೂ ಹಲವು ಬಗೆಯ ಅಡ್ಡಿ ಆತಂಕ ನಿರ್ಬಂಧಗಳು ಹುಟ್ಟಿ, ಒಂದು ಕಡೆ ಅವುಗಳ ಒದಗಣೆ ತಡೆಯುವುವು; ಇನ್ನೊಂದು ಕಡೆ ಬೆಲೆ ಹೆಚ್ಚುವುದು; ಮತ್ತೊಂದು ಕಡೆ ಲಾಭ, ಲಂಚಖೋರತನ ಹೆಚ್ಚಾಗಿ ಇದರ ಪರಿಣಾಮವೂ ಬಳಸುವ ಜನರ ಮೈಮೇಲೆಯೇ ಬೀಳುತ್ತದೆ. ಎಲ್ಲಕ್ಕೂ ದೆಹಲಿಗೆ ಹತ್ತಿ ಅಧಿಕಾರಿಗಳಿಗೆ ಸಲಾಂ ಕಾಣಿಕೆ ಸಲ್ಲಿಸಬೇಕಾದ ಅಗತ್ಯ ಬೀಳುವುದು. ಆ ಖರ್ಚೆಲ್ಲಾ ಯಾರ ಮೇಲೆ? ಬಹುಭಾಗ ತಿನ್ನುವವರ ಮೇಲೆ ತಾನೆ? ಸರ್ಕಾರ ಒಂದು ಸಮಯದಲ್ಲಿ ಒಂದು



ಸಟ್ಟಾ ಬುದ್ಧಿಯಿಂದ ವರ್ತಕರು ಅಕ್ಕಿ ಭತ್ತ ಶೇಖರಿಸದಿರಲಿ, ಕೊಂಡು ಅದನ್ನು ಅಡಗಿಸದಿರಲಿ ಎಂಬ ದೃಷ್ಟಿಯಿಂದ ಅವುಗಳ ಮೇಲೆ ಬ್ಯಾಂಕುಗಳು ಕೊಡುವ ಮುಂಗಡಗಳನ್ನು ಕಡಮೆ ಮಾಡಬೇಕೆಂದು ಕಾರ್ಯಕ್ರಮ ಕೈಕೊಂಡಿತು; ಸ್ವಲ್ಪಮಟ್ಟಿಗೆ ಆ ಕೇಡು ತಪ್ಪಿಸಲು ನೆರವಾಯಿತು. ಆದರೆ ಅಷ್ಟು ಪ್ರಯೋಜನ ಕೊಂಡು ತಿನ್ನುವವರಿಗೆ ಆದ ಹಾಗೆ ಕಾಣಲಿಲ್ಲ. ಉಳ್ಳವರು ಮಾರದೆ, ಪೇಟೆಗಿಡದೆ, ಸರ್ಕಾರದವರು ಮಾರುವ ಪದಾರ್ಥಗಳನ್ನೆಲ್ಲಾ ತಾವೇ ನೇರವಾಗಿಯೊ ಪರೋಕ್ಷವಾಗಿಯೊ ಕೊಂಡದ್ದುಂಟು. ಕೆಲವು ಕಡೆ ಅದು ಅಲ್ಪ ಪ್ರಮಾಣದಲ್ಲಿ ಜನರಿಗೆ ಸಿಕ್ಕಿ ಮುಗಿದ ಕೂಡಲೆ ತಾವು ದಾಸ್ತಾನು ಮಾಡಿರುವ ಪದಾರ್ಥದ ಮೇಲೆ ಹೆಚ್ಚು ಬೆಲೆ ದೊರಕಿಸಿಕೊಳ್ಳುತ್ತಾರೆ. ಎಲ್ಲಕ್ಕಿಂತ ಹೆಚ್ಚಾಗಿ ಸರ್ಕಾರದ ಇನ್ನೊಂದು ಕಾರ್ಯಕ್ರಮ ಬೆಲೆಗಳ ಏರಿಕೆಗೆ ನೆರವಾಗಿದೆ. ಕೂಲಿ ಸಂಬಳಗಳು ಇಷ್ಟಕ್ಕೆ ಕಡಮೆಯಾಗತಕ್ಕದ್ದಲ್ಲ, ಸಂಬಳ ಸಾರಿಗೆಗಳು, ಕೆಲಸದ ಸೌಖ್ಯವಿಧಾನ ಹೀಗೆ ಖಂಡಿತವಾಗಿ ಹೆಚ್ಚಬೇಕು ಎಂಬುದಾಗಿ ಕೈಗೊಂಡದ್ದು. ಮಾನವೀಯವಾಗಿ ಆಯಾ ಜನವರ್ಗಕ್ಕೆ ಅದರಿಂದ ಉಪಕಾರಕವಾಗಿದೆ. ಅಂಥದನ್ನು ಸಾಧಿಸುವುದಕ್ಕೇ ಸರ್ಕಾರವಿರುವುದು. ಆದರೆ ಸಂಪುಗಳನ್ನು ಮಾಡಿಯೊ, ಇತರ ಅಸಾಮಾಜಿಕ ರೀತಿಯಲ್ಲಿಯೊ ನಡೆದುಕೊಂಡು, ದುಡಿಯುವ ವರ್ಗ ಪ್ರಯೋಜನವನ್ನು ಜಾಸ್ತಿ ಪಡೆದು, ಕೆಲಸ ಕಡಮೆ ಮಾಡಿ ಉತ್ಪನ್ನ ಹೆಚ್ಚಾಗದಂತೆಯೂ ಇದು ಮಾಡಿದೆ. ಇದರಿಂದಲೂ ಉತ್ಪತ್ತಿಯ ವೆಚ್ಚ ಹೆಚ್ಚಿದೆ. ಇದರ ಪರಿಣಾಮ: ಪುನಃ ಏರಿದ ಧಾರಣೆವಾಸಿ. ಯಾವ ಪ್ರಯತ್ನದಿಂದ ಆಗಲಿ ವೆಚ್ಚಕ್ಕೆ, ಶ್ರಮಕ್ಕೆ, ಕೆಲಸಕ್ಕೆ, ಸೌಕರ್ಯ ಕಲ್ಪನೆಗೆ ತಕ್ಕ ಪ್ರಮಾಣದಲ್ಲಿ ಉತ್ಪನ್ನ ಹೆಚ್ಚದಾದರೆ ಎಷ್ಟು ಉದ್ಯೋಗ ಕಲ್ಪನೆಯಾಗಲಿ, ಎಷ್ಟು ವರಮಾನ ಹೆಚ್ಚಲಿ ಜೀವನ ಸೌಕರ್ಯ ಹೆಚ್ಚುವುದಿಲ್ಲ. ವ್ಯವಸಾಯರಂಗದಲ್ಲಿ, ಗಣಿಯ ಕೆಲಸಗಳಲ್ಲಿ, ಕಾಡು ತೋಟಗಳ ಉತ್ಪನ್ನದಲ್ಲಿ, ಕೈಗಾರಿಕೆಗಳಲ್ಲಿ, ಸಾಗಣೆಯಲ್ಲಿ, ಯಂತ್ರ ಶಿಲ್ಪ, ವಿದ್ಯುತ್ ಶಿಲ್ಪಗಳಲ್ಲಿ ಸರ್ವಥಾ ದೇಶದ ಉತ್ಪತ್ತಿ ಹೆಚ್ಚುವಂತಾಗಬೇಕು. ದುಡಿಯುವವರೆಲ್ಲ ತಮ್ಮ ದುಡಿಮೆಯ ಪರಮಾವಧಿಯನ್ನು ಉತ್ಪತ್ತಿಗೆ ಎರೆಯದಾದರೆ ಧಾರಣೆವಾಸಿ ಏರುತ್ತಲೇ ಹೋಗುವುದು.

ಮಾನವೀ ದೃಷ್ಟಿಯಿಂದ ಹೇಗೆ ಕೆಲಸಗಾರರ ವರಮಾನ ಸೌಕರ್ಯವನ್ನು ಹೆಚ್ಚಿಸಲು ಸರ್ಕಾರ ಪ್ರಯತ್ನಿಸುತ್ತದೆಯೊ ಹಾಗೆಯೇ ಅನ್ನ ಬಟ್ಟೆ ವಸತಿ ಇವುಗಳ ಒದಗಣೆಗೆ ಸರ್ಕಾರದೊಡನೆ ಜನವರ್ಗವೆಲ್ಲ ದುಡಿಯಬೇಕು. ಅನ್ನ ಸುಲಭವಾಗಿ ದೊರಕುತ್ತಿದ್ದ ರಿಂದ ಈ ದೇಶದಲ್ಲಿ ಕ್ರಾಂತಿ ಉಂಟಾಗಲಿಲ್ಲ. ಅನ್ನ ಒದಗದೆ ಮಾರುವ ಅಕ್ಕಿ, ಗೋಧಿ, ರಾಗಿ ರೂ.ಗೆ ಒಂದು ಸೇರಾಗಿ ಅದರಲ್ಲಿ ಮೋಸ ಕಲ್ಲು ಮಣ್ಣೆಲ್ಲ ಬಿದ್ದು, ಜೀವನ ದುರ್ಭರವಾದರೆ ಎಷ್ಟು ಸಾವಿರ ಕೋಟಿ ರೂ ಬಂಡವಾಳ ಹೂಡಿ ಏನು ಯೋಜನೆ ನಡೆದರೂ ಕ್ಷೋಭೆ ಸಂಕಟ ಹೆಚ್ಚುವುದು ಖಂಡಿತ. ಈ ನಾಡಿನಲ್ಲಂತೂ ಎಲ್ಲಿಯೂ ಯಾರಿಗೂ ಒಂದು ಹಿಡಿ ಅನ್ನ ಸಿಕ್ಕುತ್ತಿತ್ತು. ಇಂದು ಅದಕ್ಕೆ ನಾನಾ

ಕಾರಣಗಳಿಂದ ಕಷ್ಟ ಉಂಟಾಗುತ್ತದೆ. ಆಹಾರ ಪದಾರ್ಥಗಳ ಬೆಲೆ ಎಷ್ಟು ಕಡಮೆಯಾದರೆ ಅಷ್ಟಷ್ಟು ನೆಮ್ಮದಿ ಸಜ್ಜನಿಕೆ ಬೆಳೆಯಲು ಅವಕಾಶವಾಗುವುದು. ತುಂಬಿದ ಹೊಟ್ಟೆ ಎಲ್ಲ ನಾಗರಿಕತೆ, ಸಭ್ಯತೆಗಳಿಗೂ ಮೂಲ. ಅಲ್ಲದೆ ಧಾರಣೆವಾಸಿಗಳು ಹೆಚ್ಚಿದಂತೆಲ್ಲ ಕುಂಟುತ್ತ ತಡೆಯುತ್ತ ಜನದ ಕೂಲಿ ಸಂಬಳ ಸಾರಿಗೆ ಹೆಚ್ಚಿಸುತ್ತಾ ಹೋಗದೆ ಧಾರಣೆ ಇಳಿಸಿ ಜನಕ್ಕೆ ಸುಭಿಕ್ಷ ಕಲ್ಪಿಸುವ ಮಾರ್ಗ ಹೆಚ್ಚು ಪ್ರಯೋಜನಕಾರಿಯಾದೀತು. ಎಂದಿಗೇ ಆಗಲಿ ಏರುವ ಧಾರಣೆಗಳನ್ನು ಅಟ್ಟಿ ಸಂಬಳಗಳು ಏರಿ ಗೆಲ್ಲಲಾರವು. ಕೆಲವು ಜನರ ಪ್ರಯೋಜನಕ್ಕಿಂತ ಎಲ್ಲ ಕೊಂಡು ತಿನ್ನುವವರ ಹಿತಸಾಧನೆ ಮೇಲ್ತರದ ಸಾಧನೆಯಾಗಬಲ್ಲದು. ಅದಕ್ಕೆ ಮೂಲ ಭೂತವಾದ ಮೊದಲ ಅಗತ್ಯ ಒಂದೇ: ಎಲ್ಲ ರಂಗಗಳಲ್ಲಿಯೂ ಉತ್ಪತ್ತಿ ಹೆಚ್ಚಾಗಿ ಅದರ ಪರಿಣಾಮವಾಗಿ ಧಾರಣೆವಾಸಿಗಳು ಇಳಿಯುವಂತಾದರೆ ಇಂದಿನ ಸ್ಥಿತಿಯಲ್ಲಿ ದುಷ್ಕರತೆ ಕಡಮೆಯಾಗುತ್ತದೆ. ಇಂದು ನಮ್ಮ ದೇಶದಲ್ಲಿ ಇದು ಜನರ ಶೀಲವನ್ನು ಅವಲಂಬಿಸಿದೆ. ರಾಜಕೀಯದವರಲ್ಲಿ, ಶಿಲ್ಪಿಗಳಲ್ಲಿ, ತಂತ್ರಜ್ಞರಲ್ಲಿ, ರೈತರಲ್ಲಿ, ವರ್ತಕರಲ್ಲಿ, ಸಾಗಣೆಯವರಲ್ಲಿ, ಸರ್ಕಾರದ ನೌಕರರಲ್ಲಿ, ಈ ಎಲ್ಲರ ಔದಾರ್ಯದಲ್ಲಿ, ಅವರ ಜನಹಿತ ಬುದ್ಧಿಯಲ್ಲಿ ಈ ಶೀಲ ರೂಪಗೊಂಡು ಜನ ಬದುಕಬೇಕೆಂದು ಉತ್ಪತ್ತಿಗೆ ನಡೆಯಬೇಕು ಮಾತ್ರ.

(1959)

❑

# 7. ಯೋಜನೆ, ರಕ್ಷಣೆಗಳಿಗೆ ಹಣಪೂರೈಕೆ

ಎರಡು ಪಂಚವಾರ್ಷಿಕ ಯೋಜನೆಗಳಿಗಾಗಿ 10,000 ಕೋಟಿ ರೂಗಳ ಕಾರ್ಯಕ್ರಮವನ್ನು ಭಾರತ ಸರ್ಕಾರ ಗೊತ್ತು ಮಾಡಿತ್ತು. ಮೂರನೆಯದಕ್ಕೆ 10,000 ಕೋಟಿ ಸುಮಾರು ವೆಚ್ಚ ಮಾಡತಕ್ಕದ್ದೆಂದೂ ಸಾರ್ವಜನಿಕ ಭಾಗದಲ್ಲಿಯೂ ಖಾಸಗಿ ಯತ್ನಗಳ ಫಲವಾಗಿಯೂ 1967ರ ಹೊತ್ತಿಗೆ ದೇಶಕ್ಕೆ ಅದು ಸ್ವಸಂಪೂರ್ಣತೆ ತೆರೆದೀತೆಂದೂ ವಿಶ್ವಾಸವಿತ್ತು.

ಮೂಲಭೂತವಾದ ಉದ್ಯೋಗ, ಯಂತ್ರ ನಿಕ್ಷೇಪ ಆಗಿ ನಮಗೆ ಬೇಕಾದ್ದನ್ನೆಲ್ಲಾ ನಾವೇ ನಿರ್ಣಯ ಮಾಡಿಕೊಳ್ಳುವ ಶಕ್ತಿ ಆಗ ಬರುತ್ತದೆ. ಹೊರಗಿನವರ ಕೈ ಕಾಯದಂತೆ ನಾವು ನಾಳಿನ ಕ್ಷೇಮ ಸಾಧನೆಯನ್ನೂ ಶಕ್ತಿಯನ್ನೂ ಸಾಧಿಸಬಹುದು ಎಂದಿತ್ತು. ಅದಕ್ಕಾಗಿಯೇ ವಿದೇಶಿ ಸಹಕಾರ ಕೇಳಿದ್ದು. ಆ ಬಗ್ಗೆ ಕಚ್ಚಾ ಸಾಮಗ್ರಿ, ವಿದ್ಯಾ ಶಿಕ್ಷಣ, ಯಂತ್ರ ತಂತ್ರ, ಮೂಲಯಂತ್ರ ಸ್ಥಾಪನೆ ಮುಂತಾದವಕ್ಕಾಗಿ ಬಂಡವಾಳವನ್ನು ಹೊರಗಿನವರಿಂದ ಭಾರತ ಕೇಳಿತು. ಬಹುತರ ಅದು ದೊರೆತೀತೆಂದೂ ಕಂಡಿತು. (ಮೂರನೆಯ ಯೋಜನೆಯಲ್ಲಿ ಬಳಸಲು ಸಿದ್ಧವಾಗಿ ಇನ್ನೂ 845 ಕೋಟಿ ರೂ. ಇದೆ.) ನಾಡಿನ ಒಂದು ಭಾಗದ ಜನ ಈ ತಿರಿಪೆ ಬೇಡವೆಂದಿತು. ಇನ್ನೊಂದು ಈ ಸಾಲ ತೀರದ ಹೊರೆಯಾಗುತ್ತದೆ ಎಂದಿತು. ಇಷ್ಟು ಅವಸರವೇಕೆ, ನಮ್ಮ ಸಂಪತ್ತು ಒದಗಿಸಿದಷ್ಟು ಅವಕಾಶದಲ್ಲಿ ನಾವು ಏಳ್ಗೆಯ ಕಾರ್ಯವನ್ನು ಮಾಡಿಕೊಳ್ಳೋಣ ವೆಂದಿತು. ಇನ್ನೊಂದು ಭಾಗ, ಇದೆಲ್ಲ ಇನ್ನಷ್ಟು ಬೇಗ, ಹೆಚ್ಚು ಪ್ರಮಾಣದಲ್ಲಿ ಆಗಲೆಂದಿತು. ಇನ್ನೊಂದು ಭಾಗ ಸಾರ್ವಜನಿಕ ಮುಂಡಲದವರು ಇದರಲ್ಲಿ ಬಹ್ವಂಶವನ್ನು ಕೈಕೊಳ್ಳುವುದಕ್ಕಿಂತ ಖಾಸಗಿಯವರಿಗೇ ಇದನ್ನು ಬಿಡುವುದು ಮೇಲೆಂದಿತು. ಇದೆಲ್ಲ ಹೇಗೇ ಇರಲಿ, ಸಾರ್ವಜನಿಕ, ಖಾಸಗಿ ಈ ಎರಡೂ ಮಂಡಲಗಳು ಸೇರಿ ಈ ಕಾರ್ಯವನ್ನು ಹಂಚಿಕೊಂಡು ಸಾಧಿಸತಕ್ಕದ್ದು: ಈ ನಿಯಮಗಳಿಗೂ ಸಮಯಗಳಿಗೂ ಒಳಪಟ್ಟು, ಈ ಚೌಕಟ್ಟಿನಲ್ಲಿ, ನಿಯಂತ್ರಣದಲ್ಲಿ ಎಂದು ನಿರ್ಣಯವಾಯಿತು. ಇಷ್ಟಕ್ಕೆ ಕೂಡ ಸರಕಾರದ ಹಣಶಕ್ತಿ ಸಾಲದು; ನಮ್ಮ ರಫ್ತುಗಳು ನಮಗೆ ಬೇಕಾದ ಆಮದುಗಳನ್ನು ತರಿಸಲಾರದಿರುವಾಗ ಅನ್ಯರಿಂದ ಬರಬೇಕಾದ ಸಜ್ಜು, ಸಾಮಗ್ರಿ, ನೆರವುಗಳಿಗೆ

ಇತರರಿಂದ ಎರವಲು ತೆಗೆದುಕೊಳ್ಳಲೇಬೇಕಾಗಿದೆ. ವಿದೇಶಿ ವಿನಿಮಯದ ಭಾಗ ವರ್ಷಕ್ಕೆ 300-400 ಕೋಟಿಗಳಷ್ಟಾಗುತ್ತದೆ. ಇದನ್ನು ಹೊರಗಿನವರು ಅಷ್ಟು ದಾನ ಕೊಟ್ಟರು, ಅಷ್ಟು ಸಾಲ ಕೊಟ್ಟರು. ವಿದೇಶದ ಖಾಸಗಿ ಮಂಡಲಗಳವರು ನಮ್ಮ ಅಂಥ ಮಂಡಲದವರೊಂದಿಗೆ ಸೇರಿ ಇಲ್ಲಿನ ಕೆಲವು ಕಾರ್ಯಗಳಲ್ಲಿ ಪಾಲುದಾರರಾದರು. ಹೀಗೆ ನಡೆಯಿತು ಈ 10-20 ವರ್ಷಗಳ ವ್ಯವಸ್ಥೆ.

ಇದನ್ನೆಲ್ಲ ನೋಡಿಕೊಳ್ಳಬೇಕಾದ ಸರ್ಕಾರದ ಆಯವ್ಯಯ ಸ್ಥಿತಿಯೂ ಮಿತವಾದ್ದು. ಇಷ್ಟು ಕಾರ್ಯಗಳನ್ನು ಕೊಳ್ಳುವಾಗ ಆಡಳಿತ ವ್ಯವಸ್ಥೆಯೂ ಸಂಸ್ಥೆಗಳ ರಚನೆಯೂ ವಿಶೇಷವಾಗಬೇಕು. ಉತ್ಪತ್ತಿ ಕಾರ್ಯಗಳ ಜೊತೆಗೆ ವಿದ್ಯೆ, ವಸತಿ ಕಲ್ಪನೆ, ಆರೋಗ್ಯ, ನೈರ್ಮಲ್ಯ, ನೀರು ಸರಬರಾಜು, ಸಾಮಾಜಿಕ ಏಳಿಗೆ, ರಾಷ್ಟ್ರೀಯ ವಿಮೆ, ಸಮತಾ ಸೌಲಭ್ಯಗಳು ಮುಂತಾದುವನ್ನು ಸರಕಾರ ಬೇಗ ಸ್ಥಾಪಿಸಬೇಕಾಯಿತಾಗಿ ನೇರ ಉತ್ಪತ್ತಿಗೇ ಅಷ್ಟು ಹಣ ಒದಗದಾದ್ದು ಒಂದು ಲೋಪವೆಂದು ಕೆಲವರಿಗೆ ಕಾಣಿಸಿತು, ನಿಜ. ಆದರೆ ಈ ಜನತೆಯನ್ನು ಆಧುನಿಕಗೊಳಿಸಲು ಅದು ಅಗತ್ಯದ ಪೂರ್ವಭಾವಿ ಸಂಗತಿ. ಜೊತೆಗೆ ಪೂರ್ವ-ಪಶ್ಚಿಮ ಪಾಕಿಸ್ತಾನಗಳಿಂದ ಇಲ್ಲಿಗೆ ನೆಲೆಸಲು ಬಂದವರಿಗೆ ಅನ್ನ, ಬಟ್ಟೆ ಕೆಲಸ ದೊರಕಿಸಲೂ ಕೊರತೆ ತುಂಬಿಕೊಡಲೂ ಸುಮಾರು 400 ಕೋಟಿ ರೂ. ವೆಚ್ಚ ಹಿಡಿಯಿತು. ಏನೋ ಹೇಗೊ ದುಡಿದು, ನೆರವು ಬೇಡಿ ಇದನ್ನೆಲ್ಲ ಸಾಧಿಸಬಹುದಾದೀತೆನ್ನುವಾಗ, ನಾಡಿನ ಮೇಲೆ ಚೀಣದ ದಾಳಿ ನಡೆದು ನಮ್ಮ ಸೈನ್ಯದ ದೌರ್ಬಲ್ಯವನ್ನು ಸ್ಪಷ್ಟಪಡಿಸಿತು. ದುರ್ಭೇದ್ಯವೆಂದಣಿಸಿದ್ದ 2500-2800 ಮೈಲಿ ಉದ್ದದ ಹಿಮಾಲಯ ಪ್ರದೇಶದ ರಕ್ಷಣೆಯನ್ನು ಇನ್ನು ಮುಂದೆ ದಕ್ಷವಾಗಿ ಮಾಡಬೇಕಾಗಿದೆ. ಅದನ್ನು ಮಾಡಿಕೊಂಡರೆ ತಮಗೆ ಅರಕ್ಷಣೆ ಎಂದು ಪಾಕಿಸ್ತಾನ ವಾದಿಸುತ್ತಿದೆಯಾಗಿ ಅದರ ಆಕ್ರೋಶವನ್ನು ಹೀಗೊ ಹಾಗೊ ನಿವಾರಿಸಬೇಕಾದೀತು. ಈಗಾಗಲೆ ಕಾಶ್ಮಿರ ಕಾರಣದಿಂದಾಗಿಯೂ ಇತರ ಬಗೆಯ ಬೇಡಿಕೆಗಳಿಂದಲೂ ಅವರು ನಮ್ಮ ಮೇಲೆ ಚಲ ತೀರಿಸಲಿದ್ದಾರೆಂದು ಕಾಣುತ್ತಿದೆಯೇ ಹೊರತು ಶಾಂತಿ ಸಂಧಾನಕ್ಕೆ ಅವರು ಒಳಪಡುವವರಲ್ಲ ಎಂಬಂತಿದೆ. ಪಾಶ್ಚಿಮಾತ್ಯರು ನಮಗೆ ಅಷ್ಟಿಷ್ಟು ನೆರವು ಕೊಟ್ಟರೆ ಅವರು ಚೀಣದೊಡನೆ ಸೇರುತ್ತೇವೆನ್ನುತ್ತಾರೆ. ಕೆಲವರು ಸಲಹೆ ಕೊಡುವಂತೆ ನಾವು ಪಶ್ಚಿಮದ ಬಣಕ್ಕೆ ಸೇರಿಕೊಂಡರೆ ಸುಮ್ಮನಿರುತ್ತಾರೆಯೆ? ತಕ್ಷಣವೇ ರಷ್ಯ ಚೀಣಗಳ ಕಡೆ ಸೇರುವುದು ಖಂಡಿತ. ಎಂದರೆ, ಅಗತ್ಯ ಬಿದ್ದರೆ ಚೀಣ-ಪಾಕಿಸ್ತಾನ ಇಬ್ಬರ ಉಪಟಲವನ್ನೂ ಎದುರಿಸಿ ನಿಲ್ಲುವ, ಗೆಲ್ಲುವ ಸಾಮರ್ಥ್ಯವನ್ನು ಭಾರತ ಪಡೆಯಬೇಕಾಗಿದೆ. ಅದು ದೀರ್ಘಾವಧಿ ಅಗತ್ಯ. ನಾಳೆ ಅಂಥ ಸಂದರ್ಭದಲ್ಲಿ ರಷ್ಯ ಏನು ಮಾಡುವುದೊ ಹೇಳುವ ಹಾಗಿಲ್ಲ. ಇಂದು ಅದಕ್ಕೂ ಚೀಣಕ್ಕೂ ವೈಮನಸ್ಯವಿದ್ದರೂ ನಾಳೆಗೂ ಹಾಗೇ ಉಳಿವುದೆನ್ನಲಾಗದು. ಎಷ್ಟಾದರೂ ಅವರೆಲ್ಲ ಅಂತಾರಾಷ್ಟ್ರೀಯ ಕಮ್ಯುನಿಸ್ಟ್ ಕುಟುಂಬ. ಪಾಶ್ಚಿಮಾತ್ಯರು ಭಾರತಕ್ಕೆ ನೇರ ನೆರವಾಗಿ ಸಖರಾಗಿ ನಿಂತರೆ ಕಮ್ಯುನಿಸ್ಟರ ರಾಷ್ಟ್ರಗಳು ನಮಗೆ ವಿರುದ್ಧವಾಗಿಯೇ ಕೂಡಿಯಾವು.



ಒಳಗೆ ಪಾಕಿಸ್ತಾನ ಪಕ್ಷಪಾತಿಗಳೂ ಕಮ್ಯುನಿಸ್ಟರೂ ಏನು ಗೊಂದಲ ಬೆಳಸಿಯಾರೊ! ನಾವು ಟಿಬೆಟ್ಟನ್ನು ಚೀಣಕ್ಕೆ ಸೇರಿದ್ದೆಂದು ಒಪ್ಪದೆ ಇದ್ದಿದ್ದರೆ ನಮಗೆ ಈ ಅತಂತ್ರ ಉಂಟಾಗುತ್ತಿರಲಿಲ್ಲವೆಂಬವರದು ಬರಿಯ ಭ್ರಮೆ. ನಾವು ಒಪ್ಪಲಿ ಬಿಡಲಿ, ಚೀಣ ಅದನ್ನು ತನ್ನ ವಶ ಮಾಡಿಕೊಳ್ಳುತ್ತಿತ್ತು. ಬ್ರಿಟಿಷರೇ ಅದಕ್ಕೆ ಒಪ್ಪಿದರು. ಅಲ್ಲದೆ ನಮ್ಮ ಗಡಿಯನ್ನು ಕಾಯಲೇ ಸಾಮರ್ಥ್ಯವಿಲ್ಲದ ನಾವು ಹಿಮಾಲಯವನ್ನು ದಾಟಿ, ಚೀಣಕ್ಕೆ ಸರ್ವ ಅನುಕೂಲವಿರುವ ಆ ಪ್ರದೇಶದಲ್ಲಿ ಟಿಬೆಟ್ಟಿನ ಸ್ವಾತಂತ್ರ್ಯವನ್ನು ಕಾಯುತ್ತಿದ್ದೆವೆಂಬುದು ಬಂಜೆ ಮಾತು: ಅಣಕ.

ಯೋಜನೆಯ ಸಾಧನೆಗೇ ವಿದೇಶಿ ಸಾಲ ಬೇಕಾಗಿರುವಾಗ ಈ ಯುದ್ಧ ರಕ್ಷಣ ಸಿದ್ಧತೆಗೆ ನಾವು ಏನು ಮಾಡಿಕೊಳ್ಳಬಲ್ಲೆವು ಎಂಬ ಪ್ರಶ್ನೆ ಏಳುತ್ತವೆ. ಒಬ್ಬಿಬ್ಬರು ಚೀಣದ ವೈರವನ್ನು ಎತ್ತಿ ಹೇಳುತ್ತಿದ್ದಾರೆ. ಹೌದು, ಆ ಬಣ ಹಾಗೆ ಕಾಣಿಸಿತು ಎಂಬುದು ಸರ್ಕಾರಕ್ಕೂ ಗೊತ್ತಿತ್ತು. ದೌರ್ಜನ್ಯವನ್ನು ಬಳಸಿ ಅವರನ್ನು ಮೇಲೆ ಹಾಕಿಕೊಳ್ಳುವುದಕ್ಕಿಂತ ಮೃದುವಾಗಿ ಸಂಧಾನ ಮೂಲಕವೇ ಒಡಂಬಡಿಕೆಗಳನ್ನು ಮಾಡಿಕೊಳ್ಳಬೇಕು ಎಂದು ನೆಹ್ರೂ ಹಲವಾರು ವರ್ಷಗಳಿಂದ ನುಡಿದಿದ್ದಾರೆ. ಅವರ ಮಾತಿನ ನಯ ಹಲವರಿಗೆ ದೌರ್ಬಲ್ಯದಂತೆ ತೋರಬಲ್ಲದಾದರೂ 'ಮೃದುಪೂರ್ವಂ ಕಠೋರಂ' ಎಂಬುದನ್ನು ಅರಿಯಬಲ್ಲವರು ಅರಿಯಬಹುದು. ಆದರೆ ಇಂದು ಹಟಾತ್ತಾಗಿ ನೇಫಾ ಗಡಿಯನ್ನು ಮೀರಿ ಚೀಣದವರು ದೊಡ್ಡ ದಾಳಿ ಮಾಡುವರೆಂದು ಯಾರೂ ಎಣಿಸಿರಲಿಲ್ಲ. ಹಿಂದೆ ಯಾವ ಕಾಲದಲ್ಲಿಯೂ ಹಿಮಾಲಯದ ಗಡಿಯನ್ನು ರಕ್ಷಿಸುವ ಅಗತ್ಯವಿರಲಿಲ್ಲ. ಬ್ರಿಟಿಷರು ಅದನ್ನು ಯೋಚಿಸಲಿಲ್ಲ. ನೇಫಾ ಒಂದು ಪ್ರದೇಶವಾಗಿ ವಿಂಗಡವಾದ್ದೇ ಈ ಒಂದೆರಡು ವರ್ಷಗಳಲ್ಲಿ. ಈಗಲೂ ಸಿಕ್ಕಿಂ-ಪಶ್ಚಿಮ ಬಂಗಾಳ ನಡುವೆ ಅತಿ ಇಕ್ಕಟ್ಟಾದ ಪ್ರದೇಶವನ್ನು ಹಗೆ ಆಕ್ರಮಿಸಿಕೊಂಡರೆ ಅಸ್ಸಾಂ ಪೂರ್ತಿ ಬೇರೆಯಾಗಿ ಅರಕ್ಷಿತವಾಗುತ್ತದೆ. ಒಂದು ಕಡೆ ಪಾಕಿಸ್ತಾನಕ್ಕೂ ಅದು ಇಕ್ಕಟ್ಟೇ, ಬರ್ಮಾಕ್ಕೂ ಇಕ್ಕಟ್ಟೇ.

ನಮ್ಮ ಇಷ್ಟ, ಕಷ್ಟ ಹೇಗೇ ಇರಲಿ, ದೇಶ ನಿಶ್ಚಯಿಸಿದೆ: ಸ್ವತಂತ್ರ ಭಾರತದ ಸ್ವಾಸ್ಥ್ಯವನ್ನು ಅದು ರಕ್ಷಿಸಬೇಕೆಂದು; ಈ ಜನವೇ ಅದಕ್ಕೆ ಸಿದ್ಧವಾಗಬೇಕೆಂದು; ಇಲ್ಲಿನ ಗಂಡೆಲ್ಲ ಗಂಡಾಗಬೇಕೆಂದು; ಬೇಕಾದ ಸಜ್ಜನ್ನೆಲ್ಲ ಬೇಗ ಮಾಡಿಕೊಳ್ಳಬೇಕೆಂದು. ಆಚಾರ್ಯ ಕೃಪಲಾನಿಯವರು ವರ್ಷ ವರ್ಷದ 400 ಕೋಟಿ ರೂ ಏನಾಯಿತೆಂದವರು ಪಾರ್ಲಿಮೆಂಟಿನಲ್ಲಿ ತಾವೇ ಇದ್ದು ಏಕೆ ಆಗಲೇ ರಂಪ ಮಾಡಲಿಲ್ಲವೊ ಕಾಣೆ. ರಂಪು ಅವರಿಗೆ ಹೊಸದಲ್ಲ. ಈ ವರೆಗೂ ಸುಮಾರು ವರ್ಷ ಸರಾಸರಿ 200-250 ಕೋಟಿಗಳ ಹಣ ಆ ಬಗ್ಗೆ ಇಡಲಾಗುತ್ತಿತ್ತು. 1962-63ರ ಆಯವ್ಯಯ ಪಟ್ಟಿಯ ಅಂದಾಜಿಗೂ 343 ಕೋಟಿ ತೆಗೆದಿಟ್ಟಿತೇ ಹೊರತು 1950-51ರಿಂದ ಈ ವರೆಗೆ ನಿವ್ವಳವಾಗಿ 164,

172, 192, 256, 251, 231, 248, 283, 302 ಕೋಟಿ ರೂ.ಗಳಂತೆ ವೆಚ್ಚ ಮಾತ್ರ ಕಾಣಿಸಿದೆ. ಇನ್ನಷ್ಟು ಅದಕ್ಕೆ ಇದಕ್ಕೆ ವೆಚ್ಚವಾಗಿರಬಲ್ಲುದು.

ನಮ್ಮ ದೇಶದಂತೆ ವರಮಾನವುಳ್ಳ ದೇಶದಲ್ಲಿ – ಗಾಂಧಿ ರಾಷ್ಟ್ರದಲ್ಲಿ – ರಕ್ಷಣೆಗಾಗಿ ಇಷ್ಟು ಹಣವೇಕೆ ಎಂದು ನಿನ್ನೆ ವಾದಿಸಿದ ಅಂಥವರೇ ಮಂದಿ ಇಂದು ಸರಕಾರ ಯುದ್ಧಕ್ಕೆ ಸಿದ್ಧವಾಗದೆ ಕೋಟೆ ಕೊಟ್ಟಿತೆಂದು ಆಕ್ಷೇಪಿಸುತ್ತಿರುವುದು ವಿಚಿತ್ರ. ನಮ್ಮ ಸೈನ್ಯ ಸಣ್ಣದು. 5 ಲಕ್ಷ ಬಲವುಳ್ಳದ್ದು. ವಾಯು ಬಲ, ನೌಕಾ ಬಲ ಶಾಂತಿ ಕಾರ್ಯಗಳಿಗೆ ರಚಿತವಾದ್ದು. ಕೆಲವು ಮದ್ದು ಗುಂಡುಗಳ, ಸಣ್ಣ ಸಾಧನಗಳ ಕಾರ್ಖಾನೆಗಳು ಆಗಿವೆ. ಟ್ಯಾಂಕ್, ಟ್ರಕ್, ಫೈಟರ್ ವಿಮಾನ ಮುಂತಾದವುಗಳನ್ನು ಮಾಡಿಕೊಳ್ಳಲು ಅವಕಾಶವಿಲ್ಲ, ಶಕ್ತಿಯಿಲ್ಲ, ಹಣವಿಲ್ಲ, ತರಬೇತಿಯಿಲ್ಲ. ಇವನ್ನೆಲ್ಲ ಹೊರಗಿನವರು ಮಾತ್ರ ಒದಗಿಸಬಲ್ಲರು; ಅವರ ಇಷ್ಟದಂತೆ, ಅನುಕೂಲದಂತೆ, ಅವರ ಕಾಲದಲ್ಲಿ, ಅವರ ನಿರ್ಬಂಧಗಳಿಗೆ ಒಳಪಡಿಸಿ. ಅದಕ್ಕೆಲ್ಲ ಮಾತುಕತೆ ವಿಶೇಷವಾಗಿ ನಡೆಯಬೇಕಾಗುತ್ತದೆ. ಅಲ್ಲದೆ ಶಾಂತಿಗೆ ದುಡಿದ ದೇಶ ಸೈನ್ಯ ಸಜ್ಜಿಗೆ ಅತಿಯಾಗಿ ತ್ವರೆ ಮಾಡುವುದು ಅಯುಕ್ತವಾಗುತ್ತಿತ್ತು. ಶಾಂತಿ ಕಾಲದಲ್ಲಿ ಅಮೇರಿಕಾ ಆಗಲಿ, ಬ್ರಿಟನ್ ಆಗಲಿ, ಇನ್ನಾವ ದೊಡ್ಡ ದೇಶವಾಗಲಿ ನಮ್ಮ ಯುದ್ಧ ಸಜ್ಜಿನ ಒದಗಣೆಗೆ ಹೇಗೆ ಒಪ್ಪಿಯಾವು? ಅದಕ್ಕೆ ತೆರಲು ಹಣ ಎಲ್ಲಿದೆ? ಜೊತೆಗೆ ಇಂಥ ಸಂಕಷ್ಟದಲ್ಲಿಯೇ ಪಾಕಿಸ್ತಾನ ಕಾದಾಡುವಾಗ ಆಗ ಸುಮ್ಮನಿರುತ್ತಿತ್ತೇ? ಆ ಬಣಗಳಿಗೆ ಸೇರಿದ ಕಾರಣದಿಂದ ಅವರಿಗೆ ವರ್ಷಕ್ಕೆ 47-50 ಕೋಟಿ ರೂಪಾಯಿಗಳ (100 ಮಿಲಿಯನ್) ಬೆಲೆಯ ಯುದ್ಧ ಸಜ್ಜು ದೊರಕಿದೆ. ತಮ್ಮಲ್ಲಿರುವ ಸಜ್ಜನ್ನು ತಮಗೆ ಬೇಕಾದವರ ಮೇಲೆ ಬಳಸಲು ತಮಗೆ ಹಕ್ಕಿದೆಯೆಂದು ಅವರು ಅಂದಿದ್ದಾರೆ. ಅಲ್ಲದೆ ಆರ್ಥಿಕಾಭಿವೃದ್ಧಿಗಾಗಿ ಈವರೆಗೆ ಸುಮಾರು 900 ಕೋಟಿ ರೂ.ಗೆ ಮೀರಿದ ಸಹಾಯವನ್ನು ವಿದೇಶಗಳವರು ಅವರಿಗೆ ಮಾಡಿದ್ದಾರೆ.

ಅದಕ್ಕೆ ನಾಲ್ಕರಷ್ಟಿರುವ ಭಾರತಕ್ಕೆ ದೊರಕಿರುವುದು 1200 ಕೋಟಿಗಿಂತ ಕಮ್ಮಿ. ನಮಗೆ ಯುದ್ಧ ಸಜ್ಜು ಯಾವುದೂ ಆಗಿಲ್ಲ. ಕೊಂಡರೆ ಅವನ್ನು ಹಣ ಕೊಟ್ಟು ಕೊಳ್ಳ ಬಹುದು. ಒಂದು ಟ್ಯಾಂಕಿಗೆ, ಒಂದು ಫೈಟರಿಗೆ ಹತ್ತಾರು ಲಕ್ಷ ರೂ. ಬೆಲೆ ಬೀಳುವಾಗ 2,000–2,800 ಮೈಲಿ ಗಡಿ ರಕ್ಷೆಯನ್ನು ಮಾಡಿಕೊಳ್ಳಲು ಇನ್ನೆಷ್ಟು ಬೇಡ? ಪೂರ್ವ ಪಾಕಿಸ್ತಾನದಲ್ಲಿ, ಪಶ್ಚಿಮದಲ್ಲಿ 1,000–1000 ಮೈಲಿಯ ಹತ್ತೂ ಹತ್ತು ಕಡೆ ಭಾರತವನ್ನು ದಾಳಿ ಮಾಡಬಹುದು. ಚೀಣ 20 ಕಡೆ ದಾಳಿಮಾಡಿ ನಮ್ಮ ಶಕ್ತಿಯನ್ನು ಒಡೆದು ಚೆದರಿಸಬಹುದು. ಈ ನಡುವೆ ನೇಪಾಳವೇನು ಮಾಡುವುದೊ ಉರಿವ ಸೂರ್ಯನೇ ಬಲ್ಲ. ಬ್ರಿಟಿಷರು ತಮ್ಮ ಗೂರ್ಖ ಬ್ರಿಗೇಡನ್ನು ರದ್ದು ಮಾಡುತ್ತೇವೆಂದಿದ್ದಾರೆ. ಅವರು ಮನೆಗೆ ಹಿಂತಿರುಗಿದರೆ ಅದರ ಪ್ರಭಾವ ಇನ್ನೇನಾಗುವುದೊ?



ವಿದೇಶಿ ವ್ಯವಹಾರದಲ್ಲಿಯೂ ಯುದ್ಧಗಳಲ್ಲಿಯೂ ಇತರರ ನಡವಳಿಕೆ ನಮ್ಮ ನಡವಳಿಕೆಯನ್ನು ನಿರ್ಬಂಧಿಸುತ್ತದೆ; ನಿರ್ಣಯಿಸುತ್ತದೆ. ಅವರನ್ನು ಸರಿತೂಗಲು, ಎದುರಿಸಲು ನಮ್ಮ ಶಕ್ತಿ ಒಡ್ಡಬೇಕು. ನಮ್ಮ ಧರ್ಮ ಕರ್ಮಗಳಲ್ಲ ಮುಖ್ಯ, ಸ್ವತಂತ್ರ. ಸ್ವಾಯತ್ತ ವಿದೇಶಿ ವ್ಯವಹಾರಗಳಲ್ಲಿ ನಮಗೆ ಅನುಭವ ಸಾಲದು: ಯುದ್ಧ ಕಾರ್ಯಗಳಿಗೆ ಬೇಕಾದ ಅನ್ನ, ಬಟ್ಟೆ, ಯಾನವಾಹನ, ವಾರ್ತಾವಾಹನ, ಮದ್ದುಗುಂಡು, ಫಿರಂಗಿ, ವಿಮಾನಾದಿಗಳು, ಪೆಟ್ರೋಲ್ ಎಣ್ಣೆ ಮುಂತಾದವುಗಳನ್ನು ಒದಗಿಸಲೂ ನಮ್ಮ ಯೋಜನೆಯ ಕಾರ್ಯಗಳನ್ನು ಸರ್ವಾಗತ್ಯವೆಂಬಂತೆ ಸಾಧಿಸಬೇಕು. ಅಲ್ಲಿ ಇಲ್ಲಿ ಸಾಮಾಜಿಕ ಭಾಗದ ವೆಚ್ಚವನ್ನು ಸ್ವಲ್ಪ ಕಡಮೆ ಮಾಡಬಹುದೇನೊ. ಬಹುಮಟ್ಟಿಗೆ ದೊರಕಬಹುದಾದ್ದನ್ನೆಲ್ಲ ಆ ಇಲಾಖೆಗಳಲ್ಲಿಯೇ ವಿನಿಯೋಗಿಸಿದಲ್ಲದೆ ಯುದ್ಧ ಸಜ್ಜೇ, ಸ್ವರಕ್ಷಣೆಯೇ ಶಕ್ಯವಾಗದು. ವ್ಯಕ್ತಿಗಳಿಗೆ ಆತ್ಮರಕ್ಷಣೆ ಪ್ರಥಮ ಗಮ್ಯವಾಗುತ್ತದೆಯಂತೆ. ರಾಷ್ಟ್ರದ ಸ್ವರಕ್ಷಣೆ ಅದಕ್ಕಿಂತಲೂ ಪ್ರಾಥಮಿಕವಾದ್ದು.

ಸರಕಾರಕ್ಕೆ ಹಣವೆಂದರೆ ಜನ ಒದಗಿಸಿದ್ದು ಮಾತ್ರ. ನೇರವಾಗಿ ತೆರಿಗೆ ತೆತ್ತೊ, ಸಾಮಾನುಗಳ ಮೇಲೆ ಸಾಗಣೆಕೆಯ ಮೇಲೆ ಬೀಳುವ ಪರೋಕ್ಷ ತೆರಿಗೆ ತೆತ್ತೊ, ಜನಕ್ಕೆ ಸರ್ಕಾರ ಮಾಡಿಕೊಡುವ ಕೆಲಸಗಳಿಗೆ ರುಸುಮು ತೆತ್ತೊ, ಸರ್ಕಾರದ ಅಗತ್ಯಗಳಿಗೆ ಸಾಲ ಒದಗಿಸಿಯೊ, ಕಡೆಯದಾಗಿ, ಹಣಕಾಸಿನ ಮೊತ್ತವನ್ನು ಏರಿಸಿಯೊ ದೊರೆಯ ಬೇಕು. ಇವೆಲ್ಲಕ್ಕೂ ಮಿತಿಯಿದೆ. ನಮ್ಮ ಜನಕ್ಕೆ ತೆರಿಗೆ ತೆರುವ ಶಕ್ತಿ ಕಡಮೆ; ಅದನ್ನು ಹೆಚ್ಚಿಸುವುದಕ್ಕಾಗಿಯೇ ತಮ್ಮ ಆರ್ಥಿಕ ಪ್ರಯತ್ನ. ಸಾಹುಕಾರರ ಎಲ್ಲ ಸಂಪತ್ತನ್ನೂ ಎಲ್ಲರಿಗೂ ಹಂಚಿದರೂ ವ್ಯಕ್ತಿಗಳ ಭಾಗ ಕಡಮೆಯಾಗುವುದು. ನಮ್ಮ ನೇರ ತೆರಿಗೆ ಇರುವುದು – ಆಸ್ತಿಯದು – ಅಧಿಕ ಲಾಭದ್ದು – ತುಟ್ಟಿಯಾಗಿಯೇ ಇದೆ. ಅದೆಲ್ಲ ಸೇರಿ 160 ಕೋಟಿ ಉತ್ಪತ್ತಿಯಾಗುತ್ತಿಲ್ಲ. ಬಹುಶಃ ತೆರಿಗೆ ತಪ್ಪಿಸಿಕೊಂಡವರಿಂದ ನಿಷ್ಠುರವಾಗಿ ತೆಗೆದರೆ 180 ಕೋಟಿ ಬಾಕಿ ಒಟ್ಟಿಗೆ ಸಿಕ್ಕೀತು. ಅದನ್ನು ದಾಕ್ಷಿಣ್ಯ ತೋರಿಸದೆ ಸಂಗ್ರಹಿಸಬೇಕೆನ್ನಿಸುತ್ತದೆ. ಅಂಥವರು ಪ್ರಬಲರು; ತಂತ್ರಿಗಳು; ಹತ್ತಾರು ಬಗೆಯಲ್ಲಿ ತಪ್ಪಿಸಿಕೊಳ್ಳುತ್ತಾರೆ; ಹೆಂಡತಿಗೆ, ಮಕ್ಕಳಿಗೆ ಆಸ್ತಿ, ವರಮಾನ ಹಂಚುತ್ತಾರೆ; ದಾನಧರ್ಮ ಮಾಡುತ್ತಾರಂತೆ; ಇತರ ಬಗೆ ಬಗೆಯ ಭೋಗಗಳಿಗೆ ವಿನಿಯೋಗಿಸು ತ್ತಾರೆ; ಯಾವುದನ್ನು ಸರ್ಕಾರ ಆಸ್ತಿ, ವರಮಾನ ಎನ್ನಲಾರದೊ ಅಂಥದನ್ನು ಕೂಡಿಸಿ ಕೊಳ್ಳಲು ಲಕ್ಷಾಂತರ ರೂಪಾಯಿ ವೆಚ್ಚಮಾಡುತ್ತಾರೆ. 5 ಸಾವಿರ ರಕ್ಷಣಾ ಚಂದಾ ತೆತ್ತು, 5 ಲಕ್ಷದ ತೆರಿಗೆಯನ್ನು ಮುಂದಕ್ಕೆ ಹಾಕುತ್ತಾರೆ.

ಸರ್ಕಾರದ ವೆಚ್ಚಗಳನ್ನು ಅತಿಯಾಗಿ ಕೊರೆಮಾಡುವ ಅವಕಾಶ ಕಡಮೆ. ಆದರೆ 10-20 ಕೋಟಿ ಕಡಮೆ ಮಾಡಿಕೊಳ್ಳಬಹುದೆನ್ನಿಸುತ್ತದೆ. ಕೆಲಸಕ್ಕೆ ಇದ್ದವರು ಆ ಕೆಲಸವನ್ನು ಮಾಡಿದರಾದರೂ ಆ ವೆಚ್ಚದಿಂದ ಪ್ರಯೋಜನವಾದೀತು. ಮಂತ್ರಿಗಳು

ತಿಂಗಳಿಗೆ 20 ದಿನವಾದರೂ ಕಚೇರಿಗಳಲ್ಲಿ ಕೆಲಸಮಾಡಿದರೆ, ಫೈಲುಗಳನ್ನು ಫೈಸಲು ಮಾಡುವುದಕ್ಕಿಂತ ಆಯಾ ಕೆಲಸವನ್ನು ಮಾಡಿ ಮುಗಿಸಿದರೆ ಆದೀತು.

ಇವೊತ್ತಿನ ಪರಿಸ್ಥಿತಿಯಲ್ಲಿ ನೇರವಾದ ತೆರಿಗೆಗಳನ್ನು ಇನ್ನಷ್ಟು ಹೇರುವುದು ಕಷ್ಟ. ಪದಾರ್ಥಗಳ ಬೆಲೆಗಳ ಮೇಲೆ ತೆರಿಗೆ ಎತ್ತಿದರೆ ಸಾಮಾನ್ಯರ ಜೀವನ ದುರ್ಭರ ವಾಗುತ್ತದೆ. ಧಾರಣೆವಾಸಿ ಏರಿ ಈಗಾಗಲೆ ಪೀಡೆಯಾಗಿರುವ ಜನಕ್ಕೆ ಬದುಕು ಮತ್ತಷ್ಟು ಗಾಸಿಯಾಗುತ್ತದೆ. ಸರ್ಕಾರದ ವೆಚ್ಚಗಳೇ ಹೆಚ್ಚು. ಅದಕ್ಕೆ ಇನ್ನಷ್ಟು ಹಣದ ಅಗತ್ಯ ಬೀಳುತ್ತದೆ. ಹಣದ ಮೊತ್ತವನ್ನು ಏರಿಸುವುದು ಸುಲಭವಾದರೂ ಸುಲಭವಲ್ಲ. 1939ರಲ್ಲಿ 189 ಕೋಟಿ ಇದ್ದ ಹಣ 1949-50ಕ್ಕೆ 1400 ಕೋಟಿ ಆಯಿತು. ಎಂದರೆ 8 ರಷ್ಟು ಹೆಚ್ಚಾಗಿತ್ತು. ಬ್ರಿಟಿಷರು ನಮ್ಮ ಕೈಗೆ ರಾಜ್ಯವನ್ನು ಒಪ್ಪಿಸುವ ಹೊತ್ತಿಗೇ 100 ಇದ್ದ ಧಾರಣೆವಾಸಿ 375 ಆಗಿತ್ತು. ಈ 10-12 ವರ್ಷಗಳಲ್ಲಿ ಯೋಜನೆಗೆ 10,000 ಕೋಟಿ ರೂ. ಹೂಡಿದ ಮೇಲೆಯೂ ಇನ್ನಷ್ಟು ಉದ್ಯೋಗ ನಿರ್ಮಾಣ, ಸಂಬಳ ಸಾರಿಗೆ ಏರ್ಪಾಡು, ಸಾಮಾಜಿಕಾದಿ ವೆಚ್ಚಗಳು, ಪೋಲುಗಳು ಮಾಡಿದ ಮೇಲೆಯೂ ಹಣದ ಮೊತ್ತ 2200 ಕೋಟಿ ರೂ. ಮಾತ್ರ ಇದೆ. ಎಂದರೆ ಆ ಮೊತ್ತ ಎಂಟು ನೂರು ಕೋಟಿ ಮಾತ್ರ. ಬ್ಯಾಂಕುಗಳ ಡಿಪಾಸಿಟ್ ಸೇರಿದರೆ ಇನ್ನೂ 700-800 ಕೋಟಿ ಆದರೂ ಅದೂ ಈ ದೇಶದ ಅಗತ್ಯಕ್ಕೆ ಕಡಮೆಯೇ. 43 ಕೋಟಿ ಜನಕ್ಕೆ 3000 ಕೋಟಿ ರೂ. (ತಲಾ 80) ಚಲಾವಣೆ ಹೆಚ್ಚಲ್ಲ. ಧಾರಣೆವಾಸಿ ಈ ಹತ್ತು ಹನ್ನೆರಡು ವರ್ಷಗಳಲ್ಲಿ ಒಟ್ಟು 415-20 ಎಂದರೆ 50 ಮಾತ್ರ (ವರ್ಷಕ್ಕೆ 5 ಪಾಯಿಂಟಿಗೆ ಕಡಮೆ) ಆಗಿದೆ. ಈಗ 20 ವಯಸ್ಸಿನವರಿಗೆ ಬೆಲೆಗಳೆಲ್ಲ, ಧಾರಣೆವಾಸಿಯೆಲ್ಲ ಒಂದೇ ಮಟ್ಟದ್ದೆಂದೇ ಕಂಡೀತು. ಹೆಚ್ಚಾಗಿ ಅಗ್ಗದ ಸ್ಥಿತಿಯನ್ನು ಅವರು ಕಂಡವರೇ ಅಲ್ಲ. ಇನ್ನು ಸಾಲದ ಬಾಬು: ಸಾಲವನ್ನು ಸರ್ಕಾರವಾಗಲಿ, ಖಾಸಗಿ ವರ್ಗವಾಗಲಿ, (1) ಸ್ವಂತ ನಿಧಿಗಳಿಂದ ಹಂಚದ ಲಾಭಗಳಿಂದ, ಸಂಪಾದನೆಗಳಿಂದ ಮಾಡಿಕೊಳ್ಳಬೇಕು. (2) ಜನ ಕೂಡಿಟ್ಟ ಹಣವನ್ನು ಅವರಿಗೆ ಎರವಲು ಕೊಡಬೇಕು. ಜನ ಕೂಡಿಟ್ಟ ಹಣ ವರ್ಷಕ್ಕೆ ಇನ್ನೂ ಸರಾಸರಿ 100 ಕೋಟಿ ಒದಗುತ್ತಿಲ್ಲ. ಧಾರಣೆವಾಸಿ ಏರಿದರೆ, ಅವರು ಹೆಚ್ಚು ವೆಚ್ಚ ಮಾಡಿದರೆ, ಕೂಡಿಡದಿದ್ದರೆ ಈ ಅಂಶ ಕಡಮೆಯಾಗುತ್ತದೆ. ಇದೇ ಹೊಸ ಬಂಡವಾಳ ಸರ್ಕಾರಕ್ಕೂ, ಖಾಸಗಿ ಉದ್ಯೋಗಪ್ರಪಂಚಕ್ಕೂ ಮೂಲ.

ಯೋಜನೆಗೂ ರಕ್ಷಣಾಸಿದ್ಧತೆಗೂ ಬೇಕಾದ ಹಣ ನೂರಾರು, ಸಾವಿರಾರುಗಟ್ಟಲೆ ಕೋಟಿ ರೂ.ಗಳ ಪ್ರಮಾಣದ್ದು. ಆ ಬಗ್ಗೆ ಅವರೂ ಬಾಯಿ, ಕೈ, ಕಲ್ಪನೆ ಬಿಗಿ ಹಿಡಿಯುವ ಹಾಗಿಲ್ಲ. ಅದು ಬದುಕಿಸುವ, ಸಾಯಿಸುವ ಪ್ರಪಂಚ. ನಮ್ಮ ಸೈನ್ಯ 10-15 ಲಕ್ಷವಾದರೂ ಒಡನೆಯೇ ಆಗಬೇಕು; ಅದಕ್ಕೆ ಸಜ್ಜು ಅದರ 10-20 ರಷ್ಟಾಗುತ್ತದೆ. ತಿಂಗಳಿಗೆ ಒಬ್ಬ ಸೈನಿಕನಿಗೆ 100 ರೂ. ಕೊಟ್ಟರೆ ವರ್ಷಕ್ಕೆ 12,000 ಆಯಿತು. 15 ಲಕ್ಷ ಜನಕ್ಕೆ? 180 ಕೋಟಿ ಆಯಿತು! ಬರಿಯ ಸಂಬಳ! ಇನ್ನು ಸಾಗಣೆ ಏನು? ಸಾಮಗ್ರಿಗಳೇನು? ಮದ್ದುಗುಂಡು ಏನು? ವಿಮಾನ, ಲಾರಿಗಳೇನು? ಇತರ ಸೌಕರ್ಯ ಕಲ್ಪನೆಗಳೇನು?



– ಊಹಿಸಿಕೊಳ್ಳಬಹುದು. ಜನ ಖಚಿತವಾಗಿ ಯೋಚನೆ ಮಾಡುವುದನ್ನು ಅಭ್ಯಾಸ ಮಾಡುವುದು ಒಳ್ಳೆಯದು. ದೇಶ ನಮ್ಮದು, ನಮ್ಮೆಲ್ಲರದು, ಅದರ ಹೊಣೆ ಎಲ್ಲರ ಮೇಲೆ, ಎಂದರೆ ಪ್ರತಿಯೊಬ್ಬರ ಮೇಲೆಯೂ ಬಿದ್ದಿದ್ದು. ಇಲ್ಲಿ ಕಕ್ಷಿಗಳಿಲ್ಲ, ಪಕ್ಷಗಳಿಲ್ಲ; ಆ ರೀತಿ ಆಳುವ ಪಕ್ಷದವರು ಎಣಿಸಿದರೆ ಘಾತಕವಾದೀತು. ರಕ್ಷಣೆಗೆ, ಸಂಪತ್ಸಾಧನೆಗೆ ರಾಷ್ಟ್ರ ಒಂದು ಅಖಂಡ ಅವಿಭಕ್ತ ಮಂಡಲ.

ನಾಡಿನಲ್ಲಿ 100 ಮಿಲಿಯ ಔನ್ಸು ಚಿನ್ನವಿದೆ ಎಂದು ಲೆಕ್ಕವಿದೆ. ನಮ್ಮ ಪೇಟೆಯಲ್ಲಿ 3,000-4,000 ಕೋಟಿ ಬೆಲೆಬಾಳುವ ಅದನ್ನು, ಅದರಲ್ಲಿ ಅರ್ಧವನ್ನು ನಾಡಿನ ಆಪತ್ ಸಮಯಕ್ಕೆ ಒದಗಿಸಿದರೆ ಎಷ್ಟೋ ಪ್ರಯೋಜನವಾದೀತು. ಆದರೆ ಚಿನ್ನವನ್ನು ಮುಟ್ಟಲು ಯಾರೂ ಒಪ್ಪರು. ತಡೆದು ತಡೆದು ಮೊರಾರ್ಜಿಯವರು ಈಚೆಗೆ ಏನೇನೋ ತಂತ್ರ ಹುಡುಕಿದ್ದಾರೆ. ಸ್ವದೇಶ ಪ್ರೀತಿ $6^{1}/_{4}$ ರ ಬಡ್ಡಿ ಎಂದು ಒಬ್ಬರು ವರ್ಣಿಸಿದಂತೆ ಆಸೆ ತೋರಿಸಿದರೂ ಈ ಎರಡು ತಿಂಗಳಲ್ಲಿ 70 ಲಕ್ಷ ಬೆಲೆಯ ಚಿನ್ನ ಹೊರಗೆ ಬರಲಿಲ್ಲ. ಕಳ್ಳಪೇಟೆಯ ಚಿನ್ನವನ್ನು ತಡೆಯಲು ಈಗಿನ ನಿರ್ಬಂಧಗಳನ್ನು ಹಾಕಿದ್ದಾರೆನ್ನುತ್ತಾರೆ. ಅದು ಸರಕಾರದ ಕೈಗೆ ಬರಬೇಕು. ಈ 15 ವರ್ಷಗಳಿಂದ ದೇಶದೊಳಕ್ಕೆ ಬಂದು ಸರ್ಕಾರದ ಕೈಗೆ ಸೇರಿರಬೇಕಾದ ಚಿನ್ನವನ್ನು ಯಾವ ರಿಸರ್ವ್ ಲೆಕ್ಕದಲ್ಲಿಯೂ ಸೇರಿಸಿಲ್ಲ. ಅದನ್ನು ಹೇಗೆ, ಯಾವ ಬೆಲೆಗೆ ಸರ್ಕಾರ ನಮ್ಮ ಒಳಪೇಟೆಯಲ್ಲಿ ವಿಲೇವಾರಿ ಮಾಡಿದ್ದಾರೊ ಯಾರೂ ಹೇಳರು. ಒಡವೆಗಳನ್ನು ಮುಟ್ಟುವುದಿಲ್ಲವಂತೆ. ಯಾರಲ್ಲಿಯೂ ಇರುವ 40-50 ತೊಲೆವರೆಗಿನ ಬಂಗಾರವನ್ನು ಮುಟ್ಟುವುದಿಲ್ಲವಂತೆ, ಎಂದ ಮಾತ್ರದಿಂದ ಚಿನ್ನ ಸರ್ಕಾರದ ಬಳಕೆಗೆ ಬರುವುದೆನ್ನಲಾಗದು. ಈ ಮೂಲಕವೆಲ್ಲ ಚಿನ್ನದ ಒಳಪೇಟೆ ಧಾರಣೆ ಒಂದು ಸಮಯ ತೊಲೆ 129 ರೂ. ಆಯಿತು. ಅದು $62^{1}/_{2}$ಗೆ ಇಳಿಯುವುದು ಕಷ್ಟ.

ನನಗನ್ನಿಸುತ್ತದೆ : ಒಂದು ಪೇಟೆಯಲ್ಲಿ ಜನರ ಕೈಯಲ್ಲಿ ಒಡವೆ ರೂಪದಲ್ಲಿ ಕೂಡ ಇರುವ 1 ಸೇರು ತೂಕಕ್ಕಿಂತ ಹೆಚ್ಚಿನದನ್ನು ಪ್ರಕಟಪಡಿಸಿ ಸರ್ಕಾರದಿಂದ ರಸೀತಿ, ಲೈಸನ್ಸ್ ಪಡೆಯಬೇಕೆಂದೂ ರಿಜಿಸ್ಟರ್ ಮಾಡಿಸಬೇಕೆಂದೂ ಕೇಳಬಹುದು. ಚಿನ್ನದ ಒಡವೆ 14 ಕ್ಯಾರೆಟ್ ಮಾಡಬೇಕಿಲ್ಲ. 24 ಕ್ಕೇ ಇರಲಿ. ಯಾವ ಚಿನ್ನದ ವ್ಯಾಪಾರವೇ ಇರಲಿ, ತೊಲೆಗೆ 62 ರೂ. ಗಿಂತ ಹೆಚ್ಚಾದರೆ - ಎಂದರೆ 75 ಆದರೆ - ಶೇ.25; 85 ಆದರೆ ಶೇ. 40; 100 ಆದರೆ ಶೇ. 50; ಅದಕ್ಕೆ ಮೇಲಾದರೆ ಶೇ. 75 ಅಥವಾ ಶೇ. 100 ತೆರಿಗೆ ತೆರಬೇಕೆಂದರೆ, ತಾನಾಗಿಯೇ ಇಳಿಯುತ್ತದೆ. ಇಳಿಯುವ ವರೆಗೂ ಸರ್ಕಾರಕ್ಕೆ ಸಂಪಾದನೆಯಾಗುತ್ತದೆ.

ವೆಚ್ಚದ ಉಳಿತಾಯ, ಆಡಳಿತದಲ್ಲಿ ಒಪ್ಪ, ಹಾಳತ, ದಕ್ಷತೆ ಮುಂತಾದವುಗಳ ಜೊತೆಗೆ ಧನಮಂತ್ರಿಗಳು ಈ ವರ್ಷ ಇನ್ನೂ 100 ಕೋಟಿ ರೂ. ತೆರಿಗೆ ಮುಂತಾದವನ್ನು

ಹೆಚ್ಚಿಸಿಕೊಳ್ಳುತ್ತೇವೆಂದಿದ್ದಾರೆ. ಮಾರ್ಚ್ ಒಳಗಾಗಿ ಮುಂದಿನ ವರ್ಷದ ಬಜೆಟ್ ಪ್ರಕಟವಾಗುತ್ತದೆ. ಅದರಲ್ಲಿ ಯೋಜನೆಗೂ ಯುದ್ಧಸಜ್ಜಿಗೂ ಸಾಲುವ ವ್ಯವಸ್ಥೆ ಹೇಗೆ ಮಾಡುವರೋ ನೋಡೋಣ. ನನಗೆ ಒಂದೆರಡು ತಿಕ್ಕಲು ಸೂಚನೆಗಳನ್ನು ಮಾಡಬಹುದೆನ್ನಿಸುತ್ತದೆ. ಅವುಗಳಿಂದ ಸರ್ಕಾರದ ವೆಚ್ಚ ಅತಿಯಾಗಿ ಹೆಚ್ಚದು; ಉಳಿತಾಯವಾದೀತು, ದಕ್ಷತೆ ಹೆಚ್ಚೀತು, ಲಂಚ ರುಷುವತ್ತು ಕಡಮೆಯಾದೀತು ಎನ್ನಿಸುತ್ತದೆ. ಬೆದರಬಾರದು ಅಷ್ಟೇ. ಹಿಂದೆ ಇಲ್ಲಿ ಆ ಬಗೆಯ ಕ್ರಮವನ್ನು ಕೈಗೊಳ್ಳದ್ದರಿಂದ ವಿಚಿತ್ರವಾಗಿ ಕಾಣಿಸೀತು. ಆದರೆ ಅದು ಅಶಾಸ್ತ್ರೀಯವೂ ಅಲ್ಲ, ಬೇರೆಯವರು ಮಾಡದ್ದೂ ಅಲ್ಲ.

(1) 20 ರೂ.ಗೆ ಮೇಲ್ಪಟ್ಟು 10 ನಯೆಪೈಸೆ ಹಣ ಸಂದಾಯವಾದರೂ 10 ನ.ಪೈ. ರಸೀತಿ ಸ್ಟಾಂಪ್ ತೆರಬೇಕು; 10 ಕೋಟಿ ಸಂದಾಯವಾದರೂ ಹತ್ತು ನಯೆ ಪೈಸೆಯೇ. ಇದು ಅನ್ಯಾಯ; ಅಸಹ್ಯ. 100 ರವರೆಗೆ 12 ನ.ಪೈ., 500 ವರೆಗೆ 15, 1,000 ವರೆಗೆ 25, ಹೀಗೆ ದಾಮಾಷಾ ಯಾವುದಾದರೂ ಕ್ರಮದಲ್ಲಿ ಶೇಕಡಾವಾರು ಲೆಕ್ಕದಲ್ಲಿಯೊ ಸ್ಲಾಬ್ ಲೆಕ್ಕದಲ್ಲಿಯೊ ಅಲ್ಪಾವಧಿಗೆ ಹೆಚ್ಚಿಸಬಹುದು. ಇದನ್ನು ನಗದು ವ್ಯವಹಾರ, ಚೆಕ್ ವ್ಯವಹಾರ, ಸಾಲ ಕೊಳ್ಳುವ, ಕೈ ಬದಲಾಯಿಸುವ – ಮುಂತಾದ ಎಲ್ಲ ವ್ಯವಹಾರಗಳಿಗೂ ಅನ್ವಯಿಸಬೇಕು. ಚಲಾವಣೆಯಲ್ಲಿನ 3000 ಕೋಟಿ ರೂ. ಹಣ ವರ್ಷಕ್ಕೆ ಸುಮಾರು 10,000 ಕೋಟಿಯಷ್ಟಾದರೂ ಕೆಲಸ ಮಾಡುವುದೆನ್ನುತ್ತಾರೆ. ಬ್ಯಾಂಕ್ ಸಾಲಗಳು ಚೆಕ್ಕುಗಳ ಮೂಲಕ ಹರಿಯುವುದು ವರ್ಷಕ್ಕೆ ಈಗ ಸುಮಾರು 13,000 ಕೋಟಿ. ಎರಡೂ ಸೇರಿ 23,000 ಕೋಟಿ ವ್ಯವಹಾರ. ಇವುಗಳಲ್ಲಿ ಇಪ್ಪತ್ತಕ್ಕೆ ಕಡಮೆಯ ಮೊತ್ತ 10,000 ಕೋಟಿ ರೂಗಳಿಗೆ ಕಡಮೆಯೆಂದರೂ ಅಷ್ಟಿಲ್ಲ. ಇನ್ನು 13,000 ಕೋಟಿಗಳ ಲೆಕ್ಕದ ಮೇಲೆ ಈ ವರಮಾನ ಬರುತ್ತದೆ.

(2) ಚಲಾವಣೆಯಲ್ಲಿರುವ ಹಣವೆಲ್ಲ ಸಂಚಾರವಾಗುವಂತೆ, ಅಡಗಿ ಮರೆಯಾಗದಂತೆ ನೋಡಿಕೊಳ್ಳುವುದು ಅಗತ್ಯ. 5, 10, 100, 1000 ರೂ. ನೋಟುಗಳನ್ನು ಎತ್ತಿಟ್ಟು ಮರೆಮಾಡುವುದು ರೂಢಿ, 100, 1000ದ್ದಂತೂ ಹೆಚ್ಚು. ಪದಾರ್ಥಗಳನ್ನೂ ಸೇವಾಸೌಕರ್ಯಗಳನ್ನೂ ಕೊಳ್ಳಲು, ಮಾರಲು, ವರಮಾನವಾಗಲು ಅಷ್ಟು ಹಣ ಒದಗದಾದರೆ ಅದು ಅಸಾಮಾಜಿಕ. ಅವು ಸಂಚಾರದಲ್ಲಿರುವಂತೆ ಮಾಡಲು ತಿಂಗಳಿಗೊ ಮೂರು ತಿಂಗಳಿಗೊ ಒಂದು ಸಲ ಐದರ ಮೇಲೆ 5 ನ.ಪೈ., 10ರ ದರದ ಮೇಲೆ, 10 ನ.ಪೈ., 100ರ ದರದ ಮೇಲೆ 25 ನ.ಪೈ., 1000 ದರದ ಮೇಲೆ 50 ನ.ಪೈ., ಹೀಗೆ ಒಂದು ಸ್ಟಾಂಪ್ ತೆರಿಗೆ ಎತ್ತಿದರೆ ಅವು ನಿರಂತರ ಸಂಚಾರದಲ್ಲಿರುತ್ತವೆ. ಇಲ್ಲವಾದರೂ ಎಂದರೂ ತಪ್ಪಲ್ಲ. ನೋಟುಗಳಿಗೆ ಎಂದೇ ಆಗಲಿ ಬೆಲೆ ಬರಬೇಕಾದರೆ ಬಾಕಿ ಸ್ಟಾಂಪ್ ತೆರಿಗೆ ತೆರಲೇಬೇಕು.

ಹೊಸ ನೋಟುಗಳಲ್ಲಿ ಹಿಂದುಗಡೆ ಒಂದು ಪೆನ್ಸಿಲ್ ಅಗಲದ ಸಣ್ಣ ಉಂಗುರಗಳಂತಹ 10-15 ಸ್ಥಳ ನಿರ್ದೇಶಿಸಿ ಸ್ಟಾಂಪ್ ತೆರಿಗೆ ತೆತ್ತುದಕ್ಕೆ ಸ್ಟಾಂಪ್



ಹಾಕಲೊ ಮುದ್ರೆಯೊತ್ತಲೊಅವಕಾಶ ಮಾಡಿಕೊಟ್ಟರಾಯಿತು. ಚೆಕ್ ಚಲಾವಣೆಗೆ ಬಂದ ತಾರೀಖು ಖಚಿತವಾಗಿರಬೇಕು. ರೈಲ್ವೇ ನಿಲ್ದಾಣಗಳಲ್ಲಿ ಪ್ಲಾಟ್‌ಫಾರ್ಮ್ ಟಿಕೆಟ್ಟಿಗೆ ಹಾಕುವಂತೆ ಎಲ್ಲ ಪೋಸ್ಟಾಫೀಸುಗಳಲ್ಲಿ ಅಷ್ಟು ನ.ಪೈ., ನೀಡಿದರೆ ಸ್ಟಾಂಪೊ, ಮುದ್ರೆಯೊ ಸಿಕ್ಕುವಂತಾದರೂ ಸರಿಯೆ. ಈ ಸ್ಟಾಂಪನ್ನು / ತೆರಿಗೆಯನ್ನು ಕೊಟ್ಟು ನೋಟನ್ನು ಚಾಲ್ತಿಯಾಗಿಡುವ ಅವಕಾಶವಿದ್ದರಾಯಿತು. ಬ್ಯಾಂಕುಗಳಲ್ಲಿ, ಅಂಗಡಿಗಳಲ್ಲಿ, ಖಜಾನೆಗಳಲ್ಲಿ ಸ್ಟಾಂಪಿದೆಯೊ / ಮುದ್ರೆಯಿದೆಯೊ, ಇಲ್ಲವೊ ಎಂದು ನೋಡಿಕೊಳ್ಳುತ್ತಾರೆ. ಬಹು ಸ್ವಲ್ಪ ತೊಂದರೆಗೆ, ಅಲ್ಪ ವೆಚ್ಚಕ್ಕೆ ಈ ಪ್ರಯೋಜನ ದೊರಕುತ್ತದೆ. ಸರಕಾರಕ್ಕೆ ಯಾವ ಸಿಬ್ಬಂದಿಯಾಗಲಿ, ಇಲಾಖೆಯ ನಿರ್ಮಾಣವಾಗಲಿ ಅಗತ್ಯವಿಲ್ಲ. ಒಂದು ನೋಟು ಮುರಿಸಬೇಕಾದರೆ ಎಷ್ಟು ಕೇಳುತ್ತಾರೆ; ಒಂದು ಮನಿಯಾರ್ಡರಿನ ಖರ್ಚನ್ನು ಯಜಮಾನರು ಪಡೆದುಕೊಳ್ಳುವವರ ಮೇಲೆ ಹೇರುತ್ತಾರೆ; ಚೆಕ್ಕನ್ನು ಮುರಿಸಬೇಕಾದರೆ ತರಗಿನ ಹಣ ತೆರಬೇಕು. ಹಾಗೇ ಈ ಅಪತ್ ಸಮಯ ದಾಟುವವರೆಗೂ ಸರ್ಕಾರ ಇದನ್ನು ಜಾರಿಗೆ ತರಬಹುದು. ನಮ್ಮಲ್ಲಿ 5ರೂ. ನೋಟು ಮೊತ್ತ ರೂ. 201 ಕೋಟಿ, 10 ರದ್ದು 840 ಕೋಟಿ, 100 ರದ್ದು 933 ಕೋಟಿ, 1000ದ್ದು 63 ಕೋಟಿ ಇದೆ. 5 ರೂ. ಕೆಡದೆ 2 ವರ್ಷ ಸಂಚಾರ ಮಾಡೀತು; 10 ರದ್ದು 3-4 ವರ್ಷ; ನೂರರದು 5-10 ವರ್ಷ. ಎಂದರೆ ಅವು ಕೆಟ್ಟು ಅವಕ್ಕೆ ಬದಲು ಬೇರೆಯವನ್ನು ಚಲಾವಣೆಗೆ ತರುತ್ತಾರಾದರೂ 5 ರೂ.ನದು 10 ಸಲವಾದರೂ ಸ್ಟಾಂಪ್ ತೆರಬೇಕಾಗುತ್ತದೆ.

ಹೀಗೇ ಉಳಿದವನ್ನು ಲೆಕ್ಕ ಮಾಡಬಹುದು. 2-3 ಗುಮಾಸ್ತರೊ, ಅಟೆಂಡರೊ ದಿನಕ್ಕೆ ನಾಲ್ಕು ಗಂಟೆ ಇದನ್ನು ಪರೀಕ್ಷಿಸಲು ನೇಮಿತರಾದರಾಯಿತು. ಇದರಿಂದ ಸುಮಾರು 50 ಕೊಟಿ ಉತ್ಪತ್ತಿಯಾಗಬಲ್ಲದು.

ಇದರಂತೆಯೇ ಇನ್ನೊಂದು ಲೆಕ್ಕವನ್ನು ಮಾಡಬಹುದು. ಹಲವಾರು ದೊಡ್ಡ ಬ್ಯಾಂಕ್‌ಗಳ ಚಾಲ್ತಿ ಡಿಪಾಜಿಟ್ ಲೆಕ್ಕಗಳಲ್ಲಿ ಕ್ಯಾಷ್ ಹಣ ಬ್ಯಾಂಕಲ್ಲಿಯೇ ಉಳಿದು ಜಡವಾಗುತ್ತದೆ. ಮೂರು ವರ್ಷ ಸರಾಸರಿ ಪ್ರತಿ ಲೆಕ್ಕದಲ್ಲಿಯೂ ಎಷ್ಟನ್ನು ಬಳಸುತ್ತಾನೆಯೊ ಅದಕ್ಕಿಂತ ಹೆಚ್ಚಿನ ಅವನ ಹೆಸರಿನ ಡಿಪಾಸಿಟ್ ಮೇಲೆ ಸಣ್ಣ ಶೇಕಡ ಕಮಿಷನ್ ಹಾಕಬಹುದೆನ್ನಿಸುತ್ತದೆ. ಅದು ಖಜಾನೆ ಹುಂಡಿಯ ಮೇಲಿನ ದರದಂತೆ ಇರಬಹುದು. ಜಡವಾಗಿ ನಿಂತ ಆ ಹಣದ ಪ್ರಯೋಜನವೂ ನಾಡಿಗೆ, ಉತ್ಪತ್ತಿಗೆ ಆದೀತು; ರಕ್ಷಣೆಗೆ ನೆರವಾದೀತು.

3) ಇನ್ನೊಂದನ್ನು ಸದ್ಯಕ್ಕೆ ಕೈಗೊಳ್ಳಬೇಕಿಲ್ಲ. ವಿದೇಶಿಯರ ಲೆಂಡ್–ಲೀಸ್ ಲೆಕ್ಕ ಒಂದು ರೀತಿ ನೆರವು ಕೊಡುತ್ತದೆ. ಇಲ್ಲಿ ಜನರೆಲ್ಲ ಎಲ್ಲ ಕೊಳ್ಗೊಡೆಗಳಲ್ಲಿಯೂ ಶೇ 10-15, 20-40 ಇನ್ನು ಮುಂದೆ ತೆರುವ ಹಣವೆಂಬಂತೆ (Defered pay-

ment) ಆಗಿ ಕಡ್ಡಾಯವಾಗಿ ಬಡವಾಡೆ ಮಾಡಬಹುದು. ಇಂಗ್ಲೆಂಡಿನಲ್ಲಿ ಕಳೆದ ಯುದ್ಧದಲ್ಲಿ ಹಾಗೆ ಮಾಡಿದರು. ಸಂಬಳ ಸಾರಿಗೆ, ಕಾಂಟ್ರಾಕ್ಟ್, ವ್ಯಾಪಾರ ಎಲ್ಲದರಲ್ಲಿಯೂ 200 ರೂ.ಗೆ ಮೇಲ್ಪಟ್ಟ ಎಲ್ಲ ತೆರಾಣೆಗಳನ್ನು ಹೀಗೆ ವ್ಯವಸ್ಥೆ ಮಾಡಬಹುದು. ಯುದ್ಧ ಅಥವಾ ಆಪತ್ ಸಮಯ ಮುಗಿದ 5 ವರ್ಷದ ಮೇಲೆ ಈ ಉಳಿತಾಯದ ಮೇಲೆ ಬಡ್ಡಿಯನ್ನು ಉದಾ: ಸೇವಿಂಗ್ಸ್ ಬ್ಯಾಂಕ್ ದರವನ್ನು– ಸೇರಿಸಿ, ಅವರೆಲ್ಲರಿಗೂ ಸಂದಾಯ ಮಾಡುತ್ತೇವೆನ್ನಬಹುದು. ಇದು ಒಂದು ಬಗೆಯ ಕಡ್ಡಾಯದ ಉಳಿತಾಯ ವಿಮೆ ಇವರಿಗಾಯಿತು; ಇತ್ತ ಸರ್ಕಾರಕ್ಕೆ ಅಷ್ಟು ಪ್ರಯೋಜನ, ಕಡಮೆ ವೆಚ್ಚ ಆದಂತಾಯಿತು.

4) ಈಗ ಖಜಾನೆ ಹುಂಡಿಗಳನ್ನೂ ಕಾಂಟ್ರಾಕ್ಟುಗಳನ್ನೂ ಟೆಂಡರ್ ಮೂಲಕ ಗೊತ್ತು ಮಾಡುತ್ತಾರೆ. ಯಾರು ಗಟ್ಟಿ ಕುಳ ಎಂದು ತಿಳಿದ ಯೋಗ್ಯರೊ ಅವರು ಗುಪ್ತವಾಗಿ ಟೆಂಡರ್ ಹಾಕಿ ಅವ್ಯವಸ್ಥೆಗಳಾಗುವುದಕ್ಕಿಂತ ಪ್ರಕಟವಾಗಿ ಇವೆಲ್ಲವನ್ನೂ ಹರಾಜು ಮಾಡಬಹುದು. ಸರ್ಕಾರ ಲಾಟರಿಯನ್ನೇ ಮಾಡಿದೆಯಂತೆ. ಟೆಂಡರೆಂದರೆ ಗುಪ್ತ ಹರಾಜೇ. ಆಗ ಸ್ಫುಟವಾಗಿ ಬೆಲೆಗಳು ಗೊತ್ತಾಗುತ್ತೆ. ನೇರ ಬೇಗ, ಅಗ್ಗವಾಗಿ ಕೆಲಸವಾಗುತ್ತದೆ. ಲಂಚ ರುಷುವತ್ತುಗಳಿಗೂ ಕೈವಾಡಗಳಿಗೂ ಅವಕಾಶ ನಿಂತು ಹೋಗುತ್ತದೆ. ಇದನ್ನು ಬ್ರಿಟಿಷ್ ಅರ್ಥಶಾಸ್ತ್ರಜ್ಞರೊಬ್ಬರು ಡೆಲ್ಲಿಯಲ್ಲಿ ಹೇಳಿದರು. ಬಿ.ಬಿ.ಸಿ.ಯಲ್ಲಿ ಭಾಷಣದಲ್ಲಿಯೂ ತಿಳಿಸಿದರು.

ನನ್ನ ಅಭಿಪ್ರಾಯದಲ್ಲಿ ಅತಿ ವೆಚ್ಚಕ್ಕೆ ಎಡೆ ಕೊಡದೆ 100 ಕೋಟಿ ರೂಪಾಯಿಗಳ ಉತ್ಪತ್ತಿಯಾದರೂ ಜನಕ್ಕೆ ಹಾಹಾಕಾರ ಉಂಟುಮಾಡದೆ ಸರ್ಕಾರದ ಕೈಗೆ ಈ ಮೂಲಕ ಬಂದೀತೆನ್ನಿಸುತ್ತದೆ. ಈ ಎಲ್ಲದರ ಜೊತೆಗೆ ಅಕ್ಕಿ, ರಾಗಿ, ಜೋಳ, ಗೋಧಿ, ಸಕ್ಕರೆ, ಹಾಲು, ಸೀಮೆಎಣ್ಣೆ, ಸೌದೆ, ಇದ್ದಲು, ಸಾಧಾರಣ ಸೀರೆ, ಪಂಚೆ, ಲಾಂಗ್‌ಕ್ಲಾತ್, ಮಕ್ಕಳ ಆಹಾರ, ಔಷಧಗಳ ಬೆಲೆಗಳನ್ನು ಇಳಿಸಿದರೆ ಅಥವಾ ಏರದಂತೆ ನೋಡಿಕೊಂಡರೆ, ಜನ ಬದುಕಿಕೊಂಡೀತು. ಆಗ ಇದಕ್ಕಿಂತ ಹೆಚ್ಚಿನ ತ್ಯಾಗವನ್ನು ಮಾಡಲು ಸಂತೋಷದಿಂದ ಜನ ಸಿದ್ಧರಾದಾರು.

ಸರ್ಕಾರ ಹಣವನ್ನು ಪೋಲು ಮಾಡುವುದಿಲ್ಲ, ದಕ್ಷವಾಗಿದೆ, ಆಯಾ ಕಾರ್ಯಗಳಿಗೇ ಹಣ ವಿನಿಯೋಗವಾಗಿ ಕೆಲಸ ನಡೆಯುತ್ತಿದೆ. ಇದರಿಂದ ದೇಶದ ಸ್ವಾಸ್ಥ್ಯ ಸಂರಕ್ಷಣೆ, ಆಗುತ್ತದೆ; ಅವನ್ನು ಸಾಧಿಸಲು ಇಂಥ ಮಾರ್ಗಗಳು ಅಗತ್ಯ ಎಂದು ಜನಕ್ಕೆ ತಿಳಿಯುವಂತೆ ಸರ್ಕಾರವೂ ನಾಡಿನ ನಾಯಕರೂ ರಾಜಕೀಯದ ಪುಢಾರಿಗಳೂ ನಡೆದುಕೊಂಡರೆ. ಇವೆಲ್ಲ ಅಲ್ಪ ತೊಂದರೆಗಳು. ಒಟ್ಟಿನಲ್ಲಿ ಜನಕ್ಕೆ ಕಷ್ಟವಾಗಬಾರದು.

ಪ್ರಜಾವಾಣಿ, 26 ಜನವರಿ, 1963

❑

# 8. ರಾಮರಾಜ್ಯದ ರೀತಿನೀತಿ

ರಾಮರಾಜ್ಯವೆಂದರೆ ಆದರ್ಶ ರಾಜ್ಯವೆಂದು ಎಲ್ಲರ ಕಲ್ಪನೆ. ರಾಮನು ರಾಜ್ಯವನ್ನು ಹೇಗೆ ಆಳುತ್ತಿದ್ದನೊ, ವ್ಯವಸ್ಥೆಯ ವಿವರಗಳು ಯಾವುವೋ ಖಚಿತವಾಗಿ ಗೊತ್ತಿಲ್ಲ. ಆಳ್ವಿಕೆಯ ರಚನೆ ವಿಧಾನಗಳ ತಿಳಿವಳಿಕೆ ಯಾರಿಗೂ ಇಲ್ಲ. ಆರ್ಯ ಧರ್ಮವನ್ನು 'ಏಷ ಧರ್ಮಃ ಸನಾತನಃ' ಎಂದು ನಡಸಿದವರು ಅವನ ವಂಶದ ರಾಜರೆಲ್ಲ. ಲೋಕದಲ್ಲಿ (ಎಂದರೆ ಕೋಸಲದಲ್ಲಿ) ಯಾವ ಫಲ ಪ್ರಯೋಜನ ಅವರ ಆಳಿಕೆಯಲ್ಲಿ ದೊರೆಯಿತು ಎಂಬುದನ್ನು ಕುರಿತು ರಾಮಾಯಣದ ಕಡೆಯ ಭಾಗದಲ್ಲಿ ನಾಲ್ಕಾರು ಶ್ಲೋಕಗಳಿವೆ. ಆ ಮನೆತನದ ರಾಜರ ಲಕ್ಷಣವನ್ನು ಕುರಿತು ರಘುವಂಶದ ಮೊದಲ ಸರ್ಗದಲ್ಲಿ ನಾಲ್ಕೈದು ಪದ್ಯಗಳಿವೆ. ತಂದೆ ದಶರಥನು ಆಳುತ್ತಿದ್ದಾಗ ಮನುನಿರ್ಮಿತವಾದ ಅಯೋಧ್ಯೆ ಹೇಗಿತ್ತು; ಅದರ ಚೆಲುವು, ಸಮೃದ್ಧಿ, ಓರಣ ಹೇಗಿದ್ದುವು ಎಂಬುದಿದೆ. ರಾಮನನ್ನು ಎದುರುಗೊಳ್ಳಲು ಭರತ ಹೋಗುವುದೆಂದಾದಾಗ, ರಾಮನು ಕಾಡಿನಿಂದ ಹಿಂತಿರುಗುತ್ತಿದ್ದಾನೆಂದು ತಿಳಿದಾಗ ಯಾವ ಬಗೆಯ ಸಂಭ್ರಮ, ರಸ್ತೆ ದಾರಿಗಳ ದುರಸ್ತು, ವರ್ಣರಂಜನೆ ಏರ್ಪಾಡು ನಡೆಯಿತೆಂಬುದರ ವರ್ಣನೆ ಇದೆ. ಅರಾಜಕವಾದ ರಾಜ್ಯದ ದುಃಸ್ಥಿತಿಯ ವರ್ಣನೆಗಾಗಿ ಒಂದು ಸರ್ಗವೇ ಮೀಸಲಾಗಿದೆ. ಆಗ ಈಗ ರಾಜಧರ್ಮ ಇಂಥದು, ಇದರಲ್ಲಿ ಸ್ವೀಕಾರಭಾಗ ಇದು, ವರ್ಜ್ಯ ತ್ಯಾಜ್ಯ ಇಂಥದು, ಇಂಥ ಅಂಶ ಪರ್ಯಾಲೋಚ್ಯ ಎಂಬ ಸಂಗತಿಗಳಿವೆ. ಆರ್ಯರು ವಾನರರೊಡನೆ, ರಾಕ್ಷಸರೊಡನೆ ನಡೆದುಕೊಳ್ಳುತ್ತಿದ್ದ ರೀತಿಗೂ ಅಲ್ಲಲ್ಲಿ ವಿಶೇಷ ತಿಳಿವಳಿಕೆ ದೊರೆಯುತ್ತದೆ.

ವಾಲಿಯನ್ನು ಕೊಂದಾಗ, ವಿಭೀಷಣನ ಶರಣಾಗತಿಯನ್ನು ಒಪ್ಪಿದಾಗ, ರಾವಣನಿಗೆ ಪ್ರೇತಕಾರ್ಯ ನಡೆಸಲು ಒಪ್ಪಿಗೆಯಿತ್ತಾಗ, ಸೀತೆಯ ಶುಚಿಯನ್ನು ಪರಿಶೀಲಿಸಿ ಪ್ರಕಟಿಸಬೇಕಾಗಿ ಬಂದಾಗ ರಾಜನ ಧರ್ಮ ಯಾವುದು, ದೃಷ್ಟಿ ಯಾವುದಿದ್ದರೆ ಮೇಲು ಎಂಬುದರ ದ್ಯೋತಕವಾಗುತ್ತದೆ. ಹನುಮಂತನ ಯೋಗ್ಯತೆಯನ್ನು ಮೆಚ್ಚುತ್ತ, ಆತನ ಗುಣಗಳನ್ನು ವಿವರಿಸುತ್ತ ಇಂಥ ದೂತನು ಯಾರ ಕಾರ್ಯಭಾರಿಯಾಗುತ್ತಾನೆಯೋ ಅಂಥ ರಾಜನ ಕಾರ್ಯಸಿದ್ಧಿಯಾಗದೆ ಹೋದೀತೆ ಎಂಬ ಮೆಚ್ಚುಗೆ ಕಾಣಿಸುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ರಾಮನ ಚಾರಿತ್ರ್ಯದಲ್ಲಿ, ಆತನ ಪಕ್ಷಪಾತದಲ್ಲಿ,

ಆತನು ಒಪ್ಪದಿದ್ದ ಸಂಗತಿಗಳಲ್ಲಿ ಆರ್ಯನಾದ ಆತನು ಯಾವ ರಾಜ-ಕ್ಷತ್ರಿಯ ಧರ್ಮಕ್ಕೆ ಓಲುತ್ತಿದ್ದನು ಎಂಬುದರ ಅರಿವಾಗುತ್ತದೆ. ರಾಮನ ರಾಜ್ಯಭಾರದಲ್ಲಿ ಇಂಥ ಲಕ್ಷಣಗಳಿದ್ದುವು, ಈ ತುಷ್ಟಿ, ದೃಷ್ಟಿ, ಸಂಪತ್ತಿ, ಲೋಕಹಿತಕಾರ್ಯ ಸ್ಥಾಪಿತವಾದವು ಎಂಬ ಫಲಭಾಗ ಕಣ್ಣಿಗೆ ಬಿದ್ದು, ರಾಜ್ಯಕಾರ್ಯದ ಸಿದ್ಧಿ ಎಂಥದಾಗಬೇಕೆಂಬುದು ಗೊತ್ತಾಗುತ್ತದೆ. ರಾಜನಂತೆ ಪ್ರಜೆ; ರಾಜನು ನಡಸಿದಂತೆ ರಾಜ್ಯಕಾರ್ಯ; ಆತನ ಧರ್ಮಬುದ್ಧಿಗೆ ಒಳಪಟ್ಟು ರಾಜ್ಯಧರ್ಮ ನೆಲಸುವುದು ಎಂಬ ಸೂತ್ರ ನಡೆವಾಗ, ಅವನ ಗುಣಗಳಲ್ಲಿ ನಿಷ್ಠವಾಗುತ್ತದೆ ಆ ರಾಜ್ಯದಲ್ಲಿ ನಿಲ್ಲುವ ಧರ್ಮ. ಅವರ ವ್ಯಕ್ತಿಗುಣಗಳೂ, ತನ್ನ ಕಾರ್ಯ ಸ್ಥಾನಮಾನ ಇಂಥವೆಂದು ನಡಸುವ ರೀತಿಗೆ ಸಂಬಂಧಿಸಿದುದೆಲ್ಲವೂ ಅವನ ಸಾರ್ವಜನಿಕ ನಡತೆಯ ಗುಣಗಳು. ಅವು [illegible] [illegible] ಕಾರ್ಯಕಾರಿಯಾಗುವಂಥವು. ಗಿಡ ಬಿಡುವ ಹಣ್ಣುಗಳಿಂದ ಅದರ ಜಾತಿ, ಗುಣ, ಫಲವಂತಿಕೆ ನೋಡಬೇಕು ಎನ್ನುತ್ತಾರೆ.

*ರಾಮೇ ರಾಜ್ಯಂ ಪ್ರಶಾಸತಿ –*
*ನ ಪರ್ಯದೇವನ್ ವಿಧವಾ ನ ಚ ವ್ಯಾಲಕೃತಂ ಭಯಂ ।*
*ನ ವ್ಯಾಧಿಜಂ ಭಯಂ ವಾಪಿ ರಾಮೇ ರಾಜ್ಯಂ ಪ್ರಶಾಸತಿ ॥*
*ನಿರ್ದಸ್ಯುರಭವಲ್ಲೋಕೋ ನಾನರ್ಥಃ ಕಂಚಿದಸ್ಪೃಶತ್ ।*
*ನ ಚ ಸ್ಮ ವೃದ್ಧಾ ಬಾಲಾನಾಂ ಪ್ರೇತಕಾರ್ಯಾಣಿ ಕುರ್ವತೇ ॥*
*ಸರ್ವಂ ಮುದಿತಮೇವ ಆಸೀತ್ ಸರ್ವೋ ಧರ್ಮಪರೋಽಭವತ್ ।*
*ರಾಮಮೇವ ಅನುಪಶ್ಯಂತೋ ನಾಭ್ಯಹಿಂಸನ್ ಪರಸ್ಪರಮ್ ॥*
*ಆಸನ್ ವರ್ಷಸಹಸ್ರಾಣಿ ತಥಾ ಪುತ್ರಸಹಸ್ರಿಣಃ ।*
*ನಿರಾಮಯಾ ವಿಶೋಕಾಶ್ಚ ರಾಮೇ ರಾಜ್ಯಂ ಪ್ರಶಾಸತಿ ॥*
*ರಾಮೋ ರಾಮೋ ರಾಮ ಇತಿ ಪ್ರಜಾನಾಂ ಅಭವನ್ ಕಥಾಃ ।*

* * *

*ನಿತ್ಯ ಪುಷ್ಪಾ ನಿತ್ಯ ಫಲಾಸ್ತರವಃ ಸ್ಕಂಧವಿಸ್ತೃತಾಃ ।*
*ಕಾಲೇ ವರ್ಷೀ ಚ ಪರ್ಜನ್ಯಃ ಸುಖಸ್ಪರ್ಶಶ್ಚ ಮಾರುತಃ ॥*
*ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾಃ ಶೂದ್ರಾ ಲೋಭವಿವರ್ಜಿತಾಃ ।*
*ಸ್ವಕರ್ಮಸು ಪ್ರವರ್ತಂತೆ ತುಷ್ಟಾಃ ಸ್ವೈರೇವ ಕರ್ಮಭಿಃ* ॥ – ಇತ್ಯಾದಿ.

ಎಲ್ಲರೂ ಧರ್ಮರತರು: ಧರ್ಮ ಪರಾಯಣರು. ಹೀಗೆ 11,000 ವರ್ಷ ರಾಮನು ಆಳಿದನಂತೆ. ಮಂತ್ರಿವರ್ಗ, ಸಲಹಾಕಾರ ಸುಹೃದ್‌ವರ್ಗ, ವಸಿಷ್ಠ, ಸುಮಂತ್ರರುಳ್ಳದ್ದು; ತಮ್ಮಂದಿರು ಭರತ, ಲಕ್ಷ್ಮಣ, ಶತ್ರುಘ್ನರಂಥವರು; ನೆರವಿಗೆ ಆದವರು ಗುಹ, ಜಟಾಯು, ಹನುಮಾನ್, ಸುಗ್ರೀವ, ವಿಭೀಷಣರಂಥವರು; ಹೆಂಡತಿ ಸೀತೆ. ಇದು ಸೀತೆಯ ಶುಭ ಚರಿತೆಯೇ ಎಂಬ ಮೆಚ್ಚಿಗೆ ಹೃದ್ಯವಾಗಿದೆ.



ಇಂತಹ ಮಂತ್ರಿಗಳಿಗೂ ಅರಮನೆಯಲ್ಲಿ, ರಾಜನ ಕಡೆಯ ನಿರ್ಣಯಗಳಲ್ಲಿ, ಕೆಲವು ನಡೆಯುತ್ತಿರಲಿಲ್ಲವೇನೋ; ತಮಗೆ ಅನ್ಯಾಯವೆಂದು ಕಾಣಿಸುವುದನ್ನು ತಿದ್ದಲು ಶಕ್ಯವಿದ್ದಂತಿಲ್ಲ. ಗ್ರಹಚಾರ ಕಡಮೆಯಾಗಿ ಜಾಬಾಲಿಯಂಥವರು ಪ್ರಯೋಜನವಾದ ಒಂದನ್ನು ಹಿತಾಕಾಂಕ್ಷೆಯಿಂದಲೇ ನುಡಿದರೂ ರಾಮನಂಥವನ ಅಸಮಾಧಾನ ಎರಗುತ್ತಿತ್ತು.

ರಾಮನದು ಶೀಘ್ರ ನಿರ್ಣಯ; ಅದರ ಸಾಧನೆಯಲ್ಲಿ ಅವನು ನಿಷ್ಠುರ. ಅವನ ನಿಶ್ಚಯವನ್ನು ಕದಲಿಸಲು ತಂದೆ, ತಾಯಿ, ಮಂತ್ರಿವರ್ಗ, ಹೆಂಡತಿ, ತಮ್ಮ ಯಾರೂ ಕೃತಕಾರ್ಯರಾಗುತ್ತಿರಲಿಲ್ಲ. ಕಾರಣ ಕೇಳಿದರೆ ವಾದದ ಒಂದು ಶಾಸ್ತ್ರಶಾಲೆಯೇ ತೆರೆಯುತ್ತಿತ್ತು. ಬೇಕಾದರೆ ಎಲ್ಲ ಹೊಣೆ, ಹೊರೆ ಆತನದು. ಅವನೊಬ್ಬನು ಸಕಲ ವಿಧಾತಾರ. ಸಾಮಾನ್ಯವಾಗಿ ದರ್ಪವಿರುತ್ತಿರಲಿಲ್ಲವಾದರೂ ದರ್ಪದ ಮಾತನ್ನು ಅವನು ಆಡಬಲ್ಲನೆಂಬುದಕ್ಕೆ ವಾಲಿಗೆ ಕೊಟ್ಟ ಉತ್ತರ ಸಾಕ್ಷಿ. ಅದರಲ್ಲಿ ಆರ್ಯ ಸಾರ್ವಭೌಮ ವಾದವಿದೆ. ವಾನರರನ್ನು ಕೀಳೆಣಿಸುವ, ಬಹುಶಃ ಉದ್ಧಟತೆಯೇ ಇದೆ. 'ನೀನು ಶಾಖಾಮೃಗ; ಮೃಗದ ಬೇಟೆಯನ್ನು ರಾಜರು ಬೇಕಾದ ಹಾಗೆ ಆಡಬಹುದು. ಪಾಶವೊ; ಬಲೆಯೊ ಕೂಟವೊ ಬಳಕೆಯಾಗಬಹುದು. ಕಣ್ಣೆದುರಿಂದಲೇ ಮೃಗವನ್ನು ಕೊಲ್ಲ ಬೇಕೆಂಬ ನಿಯಮವಿಲ್ಲ' ಎಂದು ಉತ್ತರ ಕೊಡುತ್ತಾನೆ. ಈ ಕಾಲದ ಮನಸ್ಸಿಗೆ ಇದು ಸೊಗಸದಿರಬಹುದು. ಆಳುವವರ ದರ್ಪ ಎಂದಿಗೂ ಎಲ್ಲಿಯೂ ಹಾಗೇ ನಡೆದಿರುವುದು. ತನ್ನ ಧರ್ಮಬುದ್ಧಿಗೆ, ಕರ್ತವ್ಯನಿಷ್ಠೆಗೆ ತೂಗಿದರೆ ಸರಿ; ಉಳಿದವರ ಅಭಿಪ್ರಾಯಕ್ಕೆ ಅವನು ಮಾನ್ಯತೆ ಕೊಡುವವನಲ್ಲ. Executive – ಕಾರ್ಯನಿರ್ವಹಣ ಪಟುವಾದ ಶೀಲ, ಶಕ್ತಿ, ಪ್ರವೃತ್ತಿ, ಧೋರಣೆ ಆತನದು. ಯಾವ ಕಷ್ಟನಷ್ಟವನ್ನಾದರೂ ಅದಕ್ಕಾಗಿ ಅವನು ಅನುಭವಿಸಿಯಾನು. ಆದರೂ ಅವನ ಸಂಯಮ, ವಶಿತ್ವ, ಶುಚಿ, ಸಾತ್ವಿಕತೆ ಸ್ಫುಟವಾಗಿದ್ದವು. ಯಾವ ಕರ್ಮವೂ ಅವನಿಗೆ ಅಕ್ಲಿಷ್ಟ. 'ನಾಹಂ ಅರ್ಥಪರೋದೇವಿ; ನನ್ನನ್ನು ಋಷಿಕಲ್ಪನೆಂದು ತಿಳಿ; ರಾಮನು ಎರಡನ್ನಾಡುವುದಿಲ್ಲ; ಸತ್ಯ ನಿಷ್ಠ' ಎಂದು ಮುಂತಾದವು ಅವನವೇ ಮಾತುಗಳು. 'ಲಕ್ಷ್ಮಣನನ್ನೂ, ಸೀತೇ ನಿನ್ನನ್ನೂ - 'ತ್ವಾಂ ವಾ ಸೀತೇ - ಕಡೆಗೆ ನನ್ನ ಪ್ರಾಣವನ್ನು – ಬಿಟ್ಟಾದರೂ ಈ ಕಾರ್ಯವನ್ನು ನಾನು ಮಾಡತಕ್ಕವನು' ಎಂಬುದೇ ಅವನ ನಿಲವು. ಇಂಥವನದು ರಾಮರಾಜ್ಯ. ಅವನ ಸ್ವಭಾವ, ಶೀಲ ಧರ್ಮಗಳಿಗೆ ಒಳಪಟ್ಟು ನಡೆದುದು; ಆ ಫಲವನ್ನು ಸಾಧಿಸಿದುದು. ಜನಾಭಿಪ್ರಾಯವೇ ಪ್ರಧಾನ; ಅದಕ್ಕೆ ರಾಜನು ಹೊಣೆ. ರಾಜ್ಯ ಜನರದು; ಅದನ್ನು ಎಂಥ ರಾಜನೂ ಇನ್ನೊಬ್ಬರಿಗೆ ದ್ಯೂತವಾಗಿ ಆಡಿ ಸೋಲತಕ್ಕದ್ದಲ್ಲ, ಮಾರತಕ್ಕದ್ದಲ್ಲ, ದಾನ ಮಾಡತಕ್ಕದ್ದಲ್ಲ ಎಂಬ ಪ್ರಜಾಸತ್ತವಾದ ರಾಮನದಲ್ಲ; ಬಹುಶಃ ಆ ಕಾಲದ್ದೂ ಅಲ್ಲವೇನೋ! ರಘುವಂಶದಲ್ಲಿ ವರ್ಣಿತವಾಗುವ ಅಗ್ನಿವರ್ಣನಂಥ ಹುಳು ಆಳುತ್ತಿದ್ದಾಗಲೂ ಜನ, ಮಂತ್ರಿವರ್ಗ ತಾಳಿಕೊಂಡಿತು ಎಂಬುದು

ಗೊತ್ತಾಗುತ್ತದೆ. ಇನ್ನು ನಳ, ಹರಿಶ್ಚಂದ್ರ, ಯುಧಿಷ್ಠಿರರಂಥವರ ಕ್ರಿಯೆ ಯಾವ ಪ್ರಜಾತಂತ್ರ ಸೂಚಕವೂ ಅಲ್ಲ.

ಆ ರಾಜ್ಯಗಳ ವಿಸ್ತಾರ ನಮಗೆ ತಿಳಿಯದು. ರಾಜಕೀಯ, ಆರ್ಥಿಕ, ಸಾಮಾಜಿಕ, ಧಾರ್ಮಿಕ, ವ್ಯಾವಹಾರಿಕ, ಅಂತಾರಾಷ್ಟ್ರೀಯ ಪ್ರಸಂಗಗಳ ರಚನೆ ಎಂಥವೋ? ಇಂದಿನಷ್ಟು ಕ್ಲಿಷ್ಟ, ಗೋಜಿನವು ಅಲ್ಲ. ಆಗಿನ ಜೀವನ ಸರಳ: ಜನಕ್ಕೆ ಧರ್ಮವನ್ನು ಕಂಡರೆ ಭಯ, ಭಕ್ತಿ ಇದ್ದವು. ಸ್ವರ್ಗ ನರಕಗಳ ಶಾಸನ, ಕರ್ಮ ಫಲದ ಸ್ವರೂಪ ತಿಳಿದಿತ್ತಾಗಿ ಸ್ವಕರ್ಮಗಳಲ್ಲಿ ನಿರತರಾಗಿ ಲೋಕಯಾತ್ರೆ ಮಾಡುತ್ತಿದ್ದರು. ಶ್ವೇತಚ್ಛತ್ರಿಯ ಕೆಳಗೆ ನಡೆಸಿದ್ದುದು, ನಡೆದುದು ನೀತಿ. ಶ್ರುತಿ, ಸ್ಮೃತಿ, ಶಿಷ್ಟಾಚಾರ, ಕುಲಾಚಾರ, ಆತ್ಮತುಷ್ಟಿ ಇವುಗಳಿಗೆ ಒಳಪಟ್ಟು ವ್ಯಕ್ತಿಜೀವನ, ರಾಜ್ಯಜೀವನ ನಡೆಯುತ್ತಿರುವಾಗ, ರಾಜನನ್ನು ನಿಯಮಿಸುವ ಧರ್ಮವೊಂದಿತ್ತು. ಅದನ್ನು ನಡಸಿದರೆ ಧೃತಿಯಿಂದ, ನಿಯಮದಿಂದ ಅದೇ ತನ್ನನ್ನು ಪೊರೆಯುವುದು ಎಂಬುದು ಆ ರಾಜರೆಲ್ಲರ ನಂಬಿಕೆಯಾಗಿದ್ದುದರಿಂದ, ಅವಕ್ಕೆ ಕಟ್ಟುಬಿದ್ದು ಅವರಲ್ಲಿ ಉತ್ತಮರು ನಡೆದುಕೊಂಡರು. ವರ್ಣಾಶ್ರಮ ಧರ್ಮ ಪ್ರಬಲವಾಗಿತ್ತು. ಆಯಾ ಕರ್ತವ್ಯ ವಿನಯ ವಿಭಿನ್ನತೆ ಸುಪರಿಚಿತವಾಗಿದ್ದುವು. ಅವುಗಳ ಪಾಲನೆ ರಾಜನ ಧರ್ಮ. ಅಸದನುಶಾಸನ, ಶರಣಾಗತ ರಕ್ಷಣೆ, ದೀನರ ರಕ್ಷಣೆ, ಲೋಕಹಿತದಲ್ಲಿ ರತ – ಇವು ರಾಜನ ಕ್ರಿಯಾಮಂಡಲ. ಇವುಗಳನ್ನು ಸಾಧಿಸುವುದರಲ್ಲಿ ಅವನು ತತ್ಪರನಾಗಿರಬೇಕಿತ್ತು. ರಾಮನ ಜೀವನದಲ್ಲಿ ಈ ಅಂಶಗಳೆಲ್ಲ ಹೇಗೆ ಮೈತಳೆದಿವೆ ಎಂಬುದನ್ನು ಕಾಣಬಹುದು. ತಮ್ಮ ಉತ್ಪತ್ತಿಯಲ್ಲಿ ಆರನೆಯ ಒಂದು ಭಾಗವನ್ನು – ಯೋ ಹರೇತ್ ಬಲಿ ಷಡ್ಭಾಗಂ –, ತಪಸ್ವಿಗಳ ತಪೋಪುಣ್ಯದಲ್ಲಿ ಚತುರ್ಭಾಗವನ್ನು ಪಡೆವ ರಾಜನು ಆಯಾ ಬಗೆಯ ಪ್ರಜೆಗಳನ್ನು ಪುತ್ರವತ್ ಕಾಯಬೇಕಿತ್ತು. ಆ ಮೂಲಕವೇ ಅವನಿಗೆ ಸದ್ಗತಿ, ಕೀರ್ತಿ. ಅವನೇ ತಿಳಿದು ಮಾಡಬೇಕಾಗಿದ್ದಾಗ 'ಪರಾತ್ವತ್ತೋ ಗತಿರ್ವೀರ ಪೃಥಿವ್ಯಾಂ ನೋಪಪದ್ಯತೇ' ಎಂದು ಅವರು ಬೇಡಿಕೊಂಡಾಗ ಅದು ಆಜ್ಞೆಯೇ ಸರಿ.

ರಾಜನ ಹಿರಿಯ ಮಗ ರಾಜನಾಗತಕ್ಕದ್ದು ಎಂಬುದು ನೀತಿ, ಸಂಪ್ರದಾಯ. ಆದರೂ ರಾಜನು ಇನ್ನಾವುದೋ ಆ ಸಂಬಂಧದಲ್ಲಿ ಮಾತು ಕೊಟ್ಟಿದ್ದಾಗ ಅದು ನಡಸತಕ್ಕದ್ದು; ಅದು ಸತ್ಯದ ಕಟ್ಟು. ಯಾರಿಗೆ ಕಷ್ಟವಾದರೂ ನಡಸಿಕೊಡಬೇಕಾದದ್ದು ಎಂದಿದ್ದುದರಿಂದಲೇ ಕೈಕೆಯಿಯ ಮಾತು ಕಿವಿಗೆ ಬಿದ್ದ ಕೂಡಲೇ ಸತ್ಯವ್ರತನಾದ ರಾಮನು ಸತ್ಯಋಣದಿಂದ ತಂದೆಯನ್ನು ಪಾರು ಮಾಡಲು ನಿಶ್ಚಯಿಸಿ, 'ಏವಮಸ್ತು ಕರಿಷ್ಯಾಮಿ' ಎಂದು ಒಡನೆಯೇ ನುಡಿದುದು. ರಾಜ್ಯವನ್ನು ತಾನು ಆಳುವುದೂ ಯಾರಿಗಾಗಿ? ತಮ್ಮಂದಿರಿಗಾಗಿ. ಅವರಿಲ್ಲದ, ಅವರಿಗಿಲ್ಲದ ಸುಖ, ವೈಭವ, ಇಂದ್ರ ಪದವಿ ಆತನಿಗೆ ಸರ್ವಥಾ ಬೇಡ ಎಂಬುದು ಭರತನು ಚಿತ್ರಕೂಟಕ್ಕೆ ಬಂದಾಗ ರಾಮನಾಡುವ ಮಾತು.



ಕೊಟ್ಟ ಮಾತನ್ನು ನಡಸುವುದೊಂದೇ ಅಲ್ಲ; ಕ್ಷತ್ರಿಯನು ಎಲ್ಲಿದ್ದರೂ ಕ್ಷತ್ರಿಯನೇ; 'ಕ್ಷತ್ರಿಯೈರ್ಧಾರ್ಯತೇ ಚಾಪಂ ನಾರ್ತಶಬ್ದೋ ಭವೇದಿತಿ'. ಭಯಾಪನ್ನರಿಗೆ ಧರ್ಮ ಸಾಗುವುದಿಲ್ಲ; ಶಕ್ಯವಿಲ್ಲ ಎಂಬುದು ಈಚಿನ ಅಟ್ಲಾಂಟಿಕ್ ಘೋಷಣೆಯಲ್ಲಿ ಅಂತಾರಾಷ್ಟ್ರೀಯ ಧರ್ಮಧ್ಯೇಯವಾಗಿಯೇ ರೂಪುಗೊಂಡಿದೆ. ಆದ್ದರಿಂದಲೇ ಋಷಿಗಳಿಗೆ ಕಾಟ ಕೊಡುತ್ತಿದ್ದ ರಾಕ್ಷಸರನ್ನು-ಸಹ ಭ್ರಾತಯಾ-ಅವನ ಅಭಿಪ್ರಾಯವನ್ನು ಕೇಳದೆ – ಕೇಳಬೇಕಾಗಿಯೂ ಇರಲಿಲ್ಲವೆನ್ನಿ – ಕೊಲ್ಲುತ್ತೇನೆಂದುದು. ಆ ನಿರ್ಣಯ ಮೋಹದಿಂದಾದದ್ದಲ್ಲ; ಅದು 'ವಿನಾ ವೈರಂಚ ರೌದ್ರತಾ' ಅಲ್ಲ; ಕೇವಲ 'ಪರಪ್ರಾಣಾಭಿ ಹಿಂಸನ'ವಲ್ಲ; ವ್ಯಸನವಲ್ಲ; ಧರ್ಮ. ಇದನ್ನು ನಡಸಿಯೇ ತೀರುವವನು ನಾನು ಎಂದು ಅವನು ಸೀತೆಗೆ ನುಡಿದುದು. ಎಷ್ಟೋ ಕಾಲ ಪಶ್ಚಾತ್ತಾಪದಗ್ಧಳಾಗಿ ಯಾರ ಕಣ್ಣಿಗೂ ಬೀಳದೆ ಕಲ್ಲಾಗಿದ್ದ ಅಹಲ್ಯೆಗೆ ಆತನು ಕಾರುಣ್ಯ ತೋರಿಸಿದ್ದು ಮಹಾ ಮಾನವತೆ ಅಲ್ಲ. ಸೀತೆಯಂಥ ಶುಚಿ ಹೆಂಡತಿಯನ್ನು ಹತ್ತು ಜನರೆದುರಿಗೆ ಅಗ್ನಿಪರೀಕ್ಷೆಗೆ ಈಡು ಮಾಡಿದ ನಿಷ್ಠುರತೆಯೂ ಇದರದೇ ಒಂದು ಮುಖ. 'ವಜ್ರಾದಪಿ ಕಠೋರಾಣಿ ಮೃದೂನಿ ಕುಸುಮಾದಪಿ'. ಇದು ಉದಾರಚರಿತರ ಲಕ್ಷಣ. ಸ್ವಂತ ಸುಖದಲ್ಲಿ ಅಲ್ಲ ಅವರ ಮನಸ್ಸು; ಪ್ರಕಟವಾಗಿ ಧರ್ಮವನ್ನು ಸ್ಥಾಪಿಸುವುದರಲ್ಲಿ ತನ್ನ, ತನ್ನವರ ನೋವಲ್ಲ ಮುಖ್ಯ; ತನ್ನ ತಿಳಿವಳಿಕೆ, ವಿಶ್ವಾಸವಲ್ಲ ಪ್ರಮಾಣ. ಸಾರ್ವಜನಿಕವಾಗಿ ರಾಜಪತ್ನಿಯ ಪಾತಿವ್ರತ್ಯ ಸಿದ್ಧವಾಗಿ ಪ್ರಮಾಣಕೊಡಬೇಕು. ಆ ಸಮಯದಲ್ಲಿ ರಾಮನ ಮುಖ ಮುದ್ರೆ, ಉಸಿರು, ನೋಟ, ಮಾತು, ನಡೆ ಎಷ್ಟು ಭೀಷಣವಾಗಿದ್ದುವೆಂಬುದನ್ನು ಕವಿ ತಿಳಿಸುತ್ತಾನೆ. ಕೃಷ್ಣಸರ್ಪದಂತೆ ಬುಸುಗುಟ್ಟುತ್ತಿದ್ದನಂತೆ.

ಇನ್ನೊಬ್ಬರ ಅಂತರಂಗವನ್ನು ತಿಳಿಯುವುದು ಯಾವ ಕಾರ್ಯಕರ್ತೃವಿಗೂ ಅಗತ್ಯ ಎಂದಾಗ ರಾಜನಿಗೆ ಮತ್ತೂ ಅಗತ್ಯ ಅದು. ಭರತನ ಮನಸ್ಸು, ಲಕ್ಷ್ಮಣನ ಮನಸ್ಸು ಎರಡೂ ಅವನಿಗೆ ಗೊತ್ತಿವೆ. ಎಂದಿಗೇ ಆಗಲಿ ಭರತ ಸಂಬಂಧದಲ್ಲಿ ಲಕ್ಷ್ಮಣ ವಿಶಂಕೆ ಸರಿಯಲ್ಲ ಎಂಬುದು ಗೊತ್ತು. ರಾಮಪ್ರೀತಿ ಪಕ್ಷಪಾತಗಳಿಂದಾಗಿ ಲಕ್ಷ್ಮಣನಿಗೆ ಕ್ರೋಧಾವೇಶವುಂಟಾದಾಗ, ಅವನಿಗೂ ತಿಳಿಯಹೇಳಬೇಕಾಗಿ ಬಂತು. 'ರಾಜ್ಯ ಮೋಹದಿಂದ ಏನಾದರೂ ಹೀಗೆ ಮಾತನಾಡುತ್ತಿದ್ದೀಯಾ? ಅದು ನಿನ್ನ ಇಷ್ಟವಾಗಿದ್ದರೆ ಹೇಳು: ನಾನು ಹೇಳಿದರೆ ಭರತನು ಅದನ್ನು ನಡಸಿಕೊಡುತ್ತಾನೆ' ಎಂಬಷ್ಟು ಕಟುತರವಾಗಿ ನುಡಿಯಬೇಕಾಯಿತು. ಲಜ್ಜೆಗೊಂಡ ಲಕ್ಷ್ಮಣನ 'ಸ್ವಗಾತ್ರ ಪ್ರವಿಶನ್ನಿವ' ಆಯಿತಂತೆ. ಇದೇ ಲಕ್ಷ್ಮಣನಿಗೆ ಇನ್ನೊಮ್ಮೆ ಆ ಮುಂಚೆ ತಾನು ಮೇಲೆಂದು ಎಣಿಸಿದ ಧರ್ಮವನ್ನು ತಿಳಿಸಬೇಕಾಗಿತ್ತು. ಕೌಸಲ್ಯೆಗೆ ಪ್ರೀತಿ, ಭರವಸೆ ಉಂಟಾಗುವಂತೆ ಕೂಡ ಲಕ್ಷ್ಮಣನ ಕೋಪ ಆಕೆಯ ಅರಮನೆಯಲ್ಲಿ ವಿಜೃಂಭಿಸುತ್ತದೆ. 'ಅಯೋಧ್ಯೆಯಲ್ಲಿ ಕಿರಿಯ ಹೆಂಡತಿಯ ಮಾತು ಕೇಳಿ ತಂದೆ ರಾಮನನ್ನು ಕಾಡಿಗೆ ಅಟ್ಟುತ್ತಿದ್ದಾನೆ; ಇವರು ಶಿಕ್ಷಾರ್ಹರು; ತಂದೆ, ಕೈಕೆಯಿಯನ್ನು ಕೊಲ್ಲುತ್ತೇನೆ; ಅಯೋಧ್ಯೆಯನ್ನು ಸುಡುತ್ತೇನೆ; ಯಾರು ರಾಮನ ಒಡೆತನಕ್ಕೆ ಅಡ್ಡಿ ಬರುತ್ತಾರೋ ನೋಡುತ್ತೇನೆ' ಎಂದು ಉಗ್ರವಾಗಿ

ಉನ್ಮತ್ತನಂತೆ ನುಡಿಯುತ್ತಿದ್ದಾಗ - ಅಂಥ ಶಕ್ತಿ ಲಕ್ಷ್ಮಣನಿಗೆ ಉಂಟೆಂದು ತಿಳಿದಿದ್ದರೂ ಅವನಿಗೆ ಮಾಡುವ ಉಪದೇಶ ಧರ್ಮಜ್ಞನದು; ಸಾತ್ವಿಕನದು. ತನಗೂ ಆ ಶಕ್ತಿ ಉಂಟು. ಲಕ್ಷ್ಮಣನೊಬ್ಬನಿಗೇ ಅಲ್ಲ. ಇದು ಕ್ಷಾತ್ರಕ್ಕೆ ತಕ್ಕ ಸನ್ನಿವೇಶ ಅಲ್ಲ. ತನ್ನ ತಂದೆಯ ಮಾತು ನಡೆಯಬೇಕು. ತನ್ನ ವನವಾಸದಿಂದಲೇ ಅದು ನೆರವೇರಬೇಕು. ಆದ್ದರಿಂದ ಯಾರ ಮೇಲೆಯೂ ಆಕ್ರೋಶ ಸಲ್ಲದು. ರಾಜ್ಯತನ ತನಗಾದರೇನು? ಭರತನಿಗಾದರೆ ಏನು?– ಎಂದವನೇ, 'ತದೇನಾಂ ವಿಸೃಜ ಅನಾರ್ಯಾಂ ಕ್ಷತ್ರಧರ್ಮಾಶ್ರಿತಾಂ ಮತಿಂ । ಧರ್ಮಮಾಶ್ರಯ ಮಾ ತೈಕ್ಷ್ಣ್ಯಂ ಮದ್ಬುದ್ಧಿರನುಗಮ್ಯತಾಂ'॥ 'ಇದು ಅನಾರ್ಯ ರೀತಿ. ನಿನ್ನ ಬುದ್ಧಿ ಕ್ಷಾತ್ರವನ್ನು ಆಶ್ರಯಿಸಿದೆ. ಸರಿಯಲ್ಲ. ಧರ್ಮವನ್ನು ಅನುಸರಿಸು. ತೀಕ್ಷ್ಣತೆ ಬೇಡ. ನಾನು ಯೋಚಿಸಿ ತೀರ್ಮಾನ ಮಾಡಿದ್ದೇನೆ. ಅದರಂತೆ ನಡೆದುಕೋ' ಎನ್ನುತ್ತಾನೆ. ಅಲ್ಲಿಯೂ ಅಷ್ಟೆ, ಇಲ್ಲಿಯೂ ಅಷ್ಟೆ. ಸ್ವಪ್ರಯೋಜನ ಬುದ್ಧಿಯೂ ಲಕ್ಷ್ಮಣನನ್ನು ನಡಸುತ್ತಿಲ್ಲ. ರಾಮನ ಮೇಲಿನ ಪ್ರೀತಿ, ಭಕ್ತಿಗಳಿಂದ ಅವನ ಜೀವಕ್ಕೆ, ಪ್ರಾಧಾನ್ಯಕ್ಕೆ ಚ್ಯುತಿ ಬಂದಂತೆ ಅವನಿಗೆ ಕಂಡಾಗ ಕೆರಳಿದ ಕೋಪ ಲಕ್ಷ್ಮಣನದು. ರಾಮನು ಇದನ್ನು ಬಲ್ಲ. ಸೀತೆಗಿಂತ ಲಕ್ಷ್ಮಣನಲ್ಲಿಯೇ ರಾಮನಿಗೆ ಪ್ರೀತಿ ಹೆಚ್ಚು ಎಂದು ಮುಂತಾಗಿ ಒಮ್ಮೆ ಸೀತೆಯೇ ನುಡಿದಿರುವುದುಂಟು.

ಭರತನ ಮನಸ್ಸು ಈ ಹದಿನಾಲ್ಕು ವರ್ಷವಾದ ಮೇಲೆ ಹೇಗಿದೆಯೊ ತಿಳಿಯಬೇಕು. ರಾಜ್ಯವನ್ನಾಳುವುದಕ್ಕೆ ತೊಡಗಿದ ಮೇಲೆ ಆ ಬಗೆಗೆ ಅವನಲ್ಲಿ ಲೋಭವೋ ಕೃಪಣತೆಯೋ ಬೆಳೆದಿರಬಲ್ಲದು. ಯಾವ ರೀತಿಯಲ್ಲಿಯಾದರೂ ಅಂಥ ಲಕ್ಷಣ ಸುಳಿದುದಾದರೆ, ತಾನು ಭರತನ ಬಳಿಗೆ ಹೋಗುವುದು ಬೇಡ ಎಂದು ಕೊಂಡವನೇ ರಾಮ ಅದನ್ನು ತಿಳಿದು ಬರಲು ಹನುಮಂತನನ್ನು ಕಳುಹಿಸುತ್ತಾನೆ. ಭರತನ ಇಂಗಿತವನ್ನು ಅರಿತು ಬಾ –

*ತತ್ತ್ವೇ ನ ಮುಖವರ್ಣೇನ ದೃಷ್ಟ್ಯಾ ವ್ಯಾಭಾಷಣೇನ ಚ ।*
*ಸರ್ವಕಾಮಸಮೃದ್ಧಂ ಹಿ ಹಸ್ತ್ಯಶ್ವರಥಸಂಕುಲಂ ॥*
*ಪಿತೃಪೈತಾಮಹಂ ರಾಜ್ಯಂ ಕಸ್ಯ ನಾವರ್ತಯೇನ್ ಮನಃ ।*
*ಸಂಗತ್ಯಾ ಭರತಃ ಶ್ರೀಮಾನ್ ರಾಜ್ಯಾರ್ಥೀಚೇತ್ ಸ್ವಯಂ ಭವೇತ್ ॥*
*ಪ್ರಶಾಸ್ತು ವಸುಧಾಂ ಕೃತ್ಸ್ನಾಂ ಅಖಿಲಾಂ ರಘುನಂದನಃ ।*
*ತಸ್ಯ ಬುದ್ಧಿಂ ಚ ವಿಜ್ಞಾಯ ವ್ಯವಸಾಯಂ ಚ ವಾನರ ॥*
*ಯಾವನ್ನ ದೂರಂ ಯಾತಾಃ ಸ್ಮ ಕ್ಷಿಪ್ರಮಾಗಂತುಮರ್ಹಸಿ* –

ಸಂದೇಹ ಸುಳಿದರೆ ಅಲ್ಲಿಗೆ ಹೋಗುವುದೇ ಬೇಡ ಎಂಬ ಸೂಕ್ಷ್ಮ ದೃಷ್ಟಿಯಿದೆ ಇಲ್ಲಿ. ಅಷ್ಟು ಒಳಹೊಕ್ಕು ಭರತನಂತಹ ತಮ್ಮನ ಮನಸ್ಸನ್ನು ರಾಮನು ಪರೀಕ್ಷಿಸತೊಡಗಿದ್ದಾನೆ – ಹೇಗೊ ಏನೊ ಎಂದು. ಇದು ಅಗತ್ಯ.



ಅತ್ತ ಭರತನ ಸ್ಥಿತಿಯನ್ನು ಮುಂದಿನ ಸರ್ಗ ವರ್ಣಿಸುತ್ತದೆ. ಆ ವ್ರತ, ನೇಮ, ಆ ದೀಕ್ಷೆ, ಜಟಾಭಾರ, ಜಟಿಲಂ ಮಲ ದಿಗ್ಧಂಗಂ-ಭ್ರಾತೃ ವ್ಯಸನಕರ್ಶಿತ; ದೀನ, ಕೃಶ, ಆಶ್ರಮವಾಸಿ; ಬ್ರಹ್ಮರ್ಷಿ ಸಮತೇಜಸ. ಪಾದುಕೆಗೆ ನಮಸ್ಕಾರ ಮಾಡುತ್ತ ಅದರ ಹೆಸರಿನಲ್ಲಿ ವಸುಂಧರೆಯ ಶಾಸನದಲ್ಲಿದ್ದಾನೆ. ಆ ಭಾಗವನ್ನು ಓದಬೇಕು. ರಾಮ ಬರುವ ಸುದ್ದಿಯನ್ನು ಹನುಮಂತ ತಿಳಿಸಿದ ಕೂಡಲೇ ಹರ್ಷದಿಂದ ಕೆಳಗೆ ಬಿದ್ದನಂತೆ. ಹನುಮಂತನನ್ನು ತಬ್ಬಿಕೊಂಡನಂತೆ. 'ದೇವನೋ ಮನುಷ್ಯನೋ ನೀನು, ಸೌಹಾರ್ದ ದಿಂದ ಬಂದಿದ್ದೀಯೆ, ಪ್ರಿಯ ಸುದ್ದಿಯನ್ನು ತಂದೆ. ಸೌಮ್ಯ, 10,000 ಆಕಳನ್ನು ಕೊ; 100 ಹಳ್ಳಿಗಳು ನಿನ್ನವು; ಸುಕುಂಡಲಾಃ, ಶುಭಾಚಾರಾ ಭಾರ್ಯಾಃ ಕನ್ಯಾಶ್ಚ ಷೋಡಶ' ಹನುಮಂತನಿಗೆ! 'ಹೇಮವರ್ಣಾಃ ಸುನಾಸೋರೂಃ ಶಶಿಸೌಮ್ಯಾನನಾಃ ಸ್ತ್ರಿಯಃ। ಸರ್ವಾಭರಣಸಂಪನ್ನಾಃ ಸಂಪನ್ನಾಃ ಕುಲಜಾತಿಭಿಃ॥ ತೆಗೆದುಕೊ' ಎಂದನಂತೆ. ರಾಮನನ್ನು ಕಂಡು ತನ್ನಲ್ಲಿ ನ್ಯಸ್ತವಾದ ರಾಜ್ಯವನ್ನು ಅವನಿಗೆ ಅರ್ಪಿಸುವಾಗ್ಗೆ ಭರತನಾಡುವ ಮಾತು ರಾಮಶೀಲಕ್ಕೆ ಸದೃಶವಾದ್ದು. ಈ ತ್ಯಾಗ, ಸ್ವಪ್ರಯೋಜನ, ನಿರಭಿಲಾಷೆ ಅನನ್ಯವಾದುದು. ಪಾದುಕೆಯನ್ನು ತಾನೇ ತಂದು ರಾಮನ ಕಾಲಿಗೆ ತೊಡಿಸಿದನಂತೆ,

*ಏತತ್ತೇ ರಕ್ಷಿತಂ ರಾಜನ್ ರಾಜ್ಯಂ ನಿರ್ಯಾತಿತಂ ಮಯಾ ।*
*ಅದ್ಯ ಜನ್ಮ ಕೃತಾರ್ಥಂ ಮೇ ಸಂವೃತ್ತಶ್ಚ ಮನೋರಥಃ ॥*
*... ಅವೇಕ್ಷತಾಂ ಭವಾನ್ ಕೋಶಂ ಕೋಷ್ಠಾಗಾರಂ ಪುರಂ ಬಲಂ ।*
*ಭವತಃ ತೇಜಸಾ ಸರ್ವಂ ಕೃತಂ ದಶಗುಣಂ ಮಯಾ ॥*

ಎಂದು ಹೇಳಿ ರಾಮನಿಗೆ ಒಪ್ಪಿಸಿದನಂತೆ. ರಾಮನ ರಾಜತ್ವದ ಹಿರಿಮೆಯ ಪ್ರಭಾವವಲ್ಲ ಇದು; ಅವನಿಗೆ ಸದೃಶವಾದ ತೇಜಸ್ಸು ಬೆಳೆದಿತ್ತು ಭರತನಲ್ಲಿ.

ಶರಣಾಗತ ರಕ್ಷಣೆಯಲ್ಲಿಯೂ ಹಾಗೇ. ಕ್ಷತ್ರಿಯನು ತನಗೆ ಶರಣಾದವನನ್ನು ಕಾಪಾಡಬೇಕು. ಎಷ್ಟು ಜನ ಎಷ್ಟು ವಿಧಾನವಾಗಿ ವಿರೋಧ ಮಾಡಿದರೂ ರಾಮನು ವಿಭೀಷಣನನ್ನು ಸ್ವೀಕರಿಸಿದ. Right of Asylum ಪುರಾತನ ಹಕ್ಕು. ವೀರರು ದೊರಕಿಸ ಬೇಕಾದ್ದು. ವಿಭೀಷಣನೇ ಏನು, ರಾವಣನೇ ಬಂದು ಶರಣು ಬೇಡಿದರೆ ಅವನನ್ನು ಒಪ್ಪಿಕೊಳ್ಳುವವನು ನಾನು ಎನ್ನುತ್ತಾನೆ.... ರಾವಣನು ಸತ್ತುಬಿದ್ದಾಗ ಅವನ ಪ್ರೇತ ಕರ್ಮಕ್ಕೆ ಅಪ್ಪಣೆ ಕೊಡಬೇಕೆಂದು ವಿಭೀಷಣನು ಬೇಡಿದರೆ "ಅಗತ್ಯವಾಗಿ: ಮರಣಾಂತಾನಿ ವೈರಾಣಿ ನಿರ್ವೃತ್ತಂ ನಃ ಪ್ರಯೋಜನಂ । ಕ್ರಿಯತಾಂ ಅಸ್ಯ ಸಂಸ್ಕಾರೋ ಮಮಾಪಿ ಏಷ ಯಥಾ ತವ" ಎನ್ನುತ್ತಾನೆ. ಶತ್ರುವಿನ ಮೃತದೇಹಕ್ಕೆ ಸಂಸ್ಕಾರಾಧಿ ಕಾರವನ್ನು ಕೊಡದೆ ಅದನ್ನು ಅಪಮಾನಕ್ಕೆ ಈಡು ಮಾಡುವ ನಡತೆ ರಾಜಕೀಯದಲ್ಲಿ ಕಂಡದ್ದು. ರಾಮರಾಜ್ಯದಲ್ಲಿ ಅಂಥದು ಶಕ್ಯವಿರಲಿಲ್ಲ.... ಅವನ ಗುಣಗಳಲ್ಲಿ ಬಹು ಭಾಗ ಲೋಕಹಿತಸಾಧಕವಾದ್ದು. ಅವನು ಧರ್ಮಜ್ಞ, ಕೃತಜ್ಞ, ಸತ್ಯವ್ರತ, ಅಮತ್ಸರ,

ಅಪ್ರಮತ್ತ, ಜಿತಕ್ರೋಧ. ಎಲ್ಲಕ್ಕಿಂತ ಅಪರೂಪವಾಗಿ ಸ್ವದೋಷ ಪರದೋಷವಿತ್. ಲೋಕದಲ್ಲಿ ಎಷ್ಟು ಜನರಲ್ಲಿದೆ ಈ ಗುಣ! ರಾಜ್ಯದ ಪರಮಾಧಿಕಾರಿಗೆ ಸಾಮಾನ್ಯವಾಗಿ ಇರದ ಮಧುರಭಾಷೀ, ಸ್ಮಿತಭಾಷೀ, ಪೂರ್ವಭಾಷೀ ಎಂಬ ರಂಜನಾ ಲಕ್ಷಣಗಳು ಲೋಕೋತ್ತರವಾದವು. ಸ್ವಶಕ್ತಿಯಲ್ಲಿ ಅವನಿಗೆ ವಿಶ್ವಾಸವಿತ್ತು; ತನ್ನ ಧರ್ಮನಿಷ್ಠೆ ತನ್ನನ್ನು ಕಾಪಾಡುವುದೆಂಬ ನಂಬಿಕೆಯಿತ್ತು. ಕೌಸಲ್ಯೆಯೇ ಅದನ್ನು ನುಡಿದಿದ್ದಾಳೆ. ಆದ್ದರಿಂದ ಯಾವ ಭೀತಿ, ಸಂದೇಹಗಳ ತಡೆ ಕಾರ್ಪಣ್ಯವಿರಲಿಲ್ಲ. ಆದ್ದರಿಂದಲೇ 'ಸ್ವಕಾರ್ಯಕ್ಕಾಗಿ ದಂಡಕಾರಣ್ಯಕ್ಕೆ ಬಂದೆ; ಯದೃಚ್ಛೆಯಾ ಋಷಿಸೇವೆ ಮಾಡುವ ಪುಣ್ಯ ನನಗೆ ಲಭಿಸಿತು. ತಮ್ಮ ಕಾರ್ಯ ಮಾಡಿಕೊಡುತ್ತೇನೆ; ನನ್ನ ಪರಾಕ್ರಮವನ್ನು ನೋಡುವಿರಂತೆ' – ಎಂದು ಸುತೀಕ್ಷ್ಣನ ಆಶ್ರಮದ ದಾರಿಯಲ್ಲಿ ಅವನು ನುಡಿದ.

ಇವೆಲ್ಲದರ ಜೊತೆಗಿದ್ದ ಇನ್ನೊಂದು ಭಾವನೆ – ತಾನು ಆರ್ಯನೆಂಬುದು; ತನಗೆ ಪಿತೃಪೈತಾಮಹವಾಗಿ ಬಂದ ಕರ್ತವ್ಯಗಳುಂಟೆಂಬುದಿತ್ತು. ಆ ಕೀರ್ತಿ ಸಂಪ್ರದಾಯಕ್ಕೆ ತನ್ನಿಂದ ಚ್ಯುತಿ ಸಲ್ಲದೆಂಬ ಭಾವನೆಯಿತ್ತು. ವಾಲಿಗೆ ಉತ್ತರ ಕೊಡುತ್ತ 'ಈ ರಾಜ್ಯ ಇಕ್ಷ್ವಾಕುಗಳಿಗೆ ಸೇರಿದ್ದು; ಭರತನು ಇದಕ್ಕೆ ರಾಜ; ನಾನು ಆತನ ಕಾರ್ಯ ಭಾರಿ; ದುಷ್ಟನಾದ ನಿನ್ನನ್ನು ಕೊಂದೆ' ಎನ್ನುತ್ತಾನೆ. ಇಕ್ಷ್ವಾಕುಗಳದೆಂದು ಯಾರು ಒಪ್ಪುತ್ತಿದ್ದರೊ ಕಾಣೆ. ಹಾಗೆ ತಾನೆಂದು ತನ್ನ ಸಾಮರ್ಥ್ಯದಿಂದ ಅದನ್ನು ಸ್ಥಾಪಿಸುತ್ತೇನೆಂಬ ಭಾವನೆಯಿತ್ತು ಅವನಿಗೆ. ಅಲ್ಲದೆಯೆ ಆರ್ಯ ರಾಜ ವಾನರರನ್ನು ಕೊಲ್ಲುವುದಕ್ಕೆ ಯಾವ ನೇಮ, ಯಾವ ರೀತಿ, ನೀತಿ ತನ್ನನ್ನು ನಿರ್ಬಂಧಿಸಬೇಕು ಎಂಬ ಡಂಭವಿದೆ ಕೂಡ. ಆ ಮಾತನ್ನಾಡುವವನು ರಾಮನಾದ್ದರಿಂದ ಇದು ದುರ್ಮದವಲ್ಲ ಎನ್ನಬೇಕಾಗುತ್ತದೆ, ಅಷ್ಟೇ. ವಾಲಿ ರಾಮನನ್ನು ಕುರಿತು ಮಾಡಿದ ಅವಹೇಳನಕ್ಕಿಂತ ಮೇಲಾಗಿ ಯಾರಿತರರೂ ಮಾಡಲಾರರು. ರಾಮನ ಮಾತಿನಿಂದ ವಾಲಿಗೆ ಕ್ರೋಧವಿಳಿದ ಹಾಗೆ ಕಾಣುತ್ತದೆ. ಅವನಿಗೇ ನೆಮ್ಮದಿಯಾಗಿ ಅವನು ಮಗನನ್ನೂ ಹೆಂಡತಿಯನ್ನೂ ರಾಮನಲ್ಲಿ ನ್ಯಾಸ ಮಾಡಿದ ಎಂದಾಗ ಉಳಿದವರು ಏಕೆ ಅತಿಯಾಗಿ, ವಿಪರೀತವಾಗಿ ಧರ್ಮಾಧರ್ಮ ವಿವೇಚನೆಗೆ ತೊಡಗಬೇಕು ಎನ್ನುವವರೆಗೆ ಆ ಸಂಬಂಧದಲ್ಲಿ ಮಾತು ಬೆಳೆದಿದೆ. ಬಹುಶಃ ರಾಮನ ಕೀರ್ತಿ, ತಾರೆ ಅವನಿಗೆ ಆ ಮುಂಚೆ ಆಡಿದ್ದ ಮಾತು, ತಮ್ಮನಲ್ಲಿ ರುಮೆಯಲ್ಲಿ ತಾನು ನಡೆದುಕೊಂಡಿದ್ದರಲ್ಲಿ ಸ್ವಂತ ನಡವಳಿಕೆಯ ವಿಷಯದ ಲಜ್ಜೆ – ಅದಕ್ಕಾಗಿ ರಾಮನ ಭರ್ತ್ಸನೆಯನ್ನು ಕೇಳಿದ್ದಾನೆ – ಎದುರಿಗೆ ನಿಂತ ರಾಮನ ಮೂರ್ತಿತ್ವ, ನಿಲವು, ಆಡಿದ ಮಾತಿನ ಪ್ರಭಾವ ಅಷ್ಟು ಪರಿಣಾಕಾರಿಯಾದವೆನ್ನಿಸುತ್ತದೆ.

ದೇವಕಲ್ಪಂ, ಋಜುಂ, ದಾನ್ತಂ, ರಿಪೂಣಾಮಪಿ ವತ್ಸಲಂ ಎಂದು ಎಷ್ಟೋ ಮುಂಚೆ ತಮ್ಮ ಲಕ್ಷ್ಮಣ ಅವನನ್ನು ಕುರಿತು ಆಡಿದ ಮಾತು ಪ್ರತ್ಯಂಶದಲ್ಲಿಯೂ ರಾಮಚಾರಿತ್ರದ ಲಕ್ಷಣ. ಅಂತಹವನು ರಾಜನಾದಾಗ ಅವನು ರಾಜಧರ್ಮದ ಸ್ವರೂಪನಾಗುತ್ತಾನೆ; ಅದರ ಕೈ, ನುಡಿ ಆಗುತ್ತಾನೆ. ಅಂಥವನ ಪರಿಪಾಲನೆಯ ರಾಜ್ಯ



ರಾಮರಾಜ್ಯವಾಗುತ್ತದೆ.

ರಾಜನ ಸ್ಥಾನದಲ್ಲಿರುವವರು ಯಾರೇ ಆಗಲಿ, ಆಯಾ ಸನ್ನಿವೇಶವನ್ನರಿತು ಧರ್ಮದಿಂದ ನಡೆದರೆ ಲೋಕಹಿತ ಸಾಧಿತವಾಗುತ್ತದೆ. ಲೋಕಕ್ಕೆ ತುಷ್ಟಿ, ಪುಷ್ಟಿ, ಶಕ್ತಿ ಬರುತ್ತವೆ ಎಂಬುದು ಇಂಥ ರಾಜ್ಯ ಭಾವನೆ. ಗಾಂಧೀಜಿ ಅವರು ರಾಮರಾಜ್ಯವೆಂದರೆ The Kingdom of Righteousness ಎಂದರು. ಆ ಮಾತು ಕ್ರಿಸ್ತರ ಧರ್ಮ ಗ್ರಂಥದಲ್ಲಿಯೂ ಬರುತ್ತದೆಯಾಗಿ ಸರ್ವಧರ್ಮಸಮ್ಮತವಾದ್ದೇ ಆಗಬಲ್ಲದು. ಆದರೆ ಅವರಾಡುವ Right ಯಾವುದು? ಯಾರು ಅದನ್ನು ಇಂದು ನಿರ್ಣಯಿಸಬೇಕು? ಅದನ್ನು ಶಾಸನಗಳಲ್ಲಿ, ಅಧಿಕಾರದಲ್ಲಿ, ಆಯಾ ವ್ಯಾಪಾರಗಳಲ್ಲಿ ಹೇಗೆ ರೂಪಿಸಬೇಕು? ಇಂದಿನಂಥ ವಿಸ್ತಾರವಾದ, ವಿವಿಧ ವಿರಸ ಜಟಿಲತಾ ಕ್ಲಿಷ್ಟವಾದ ರಾಜ್ಯಗಳಲ್ಲಿ Right, Just ಎಂಬ ಮಾತುಗಳ ವ್ಯಾಪ್ತಿ ಯಾವ ಮಂತ್ರ, ಯಂತ್ರ, ತಂತ್ರಗಳನ್ನು ಬೇಡುತ್ತದೆ? Equal Rights for the prince and the peasant ಎಂಬುದನ್ನು ಸಾಧಿಸುವ ಮಾರ್ಗಗಳಾವುವು ಎಂಬುದನ್ನು ಪ್ರಚಾರತಂತ್ರನಿಷ್ಠವಾದ ರಾಜ್ಯಗಳಲ್ಲಿ, ನಿರಂಕುಶ ರಾಜ್ಯಭಾರಗಳಲ್ಲಿ, ಇಂದು, ಎಂದೆಂದಿಗೂ–ಸ್ಥಾಪಿಸಬೇಕಾಗಿದೆ. ಎಂಥವರು ರಾಮ ರಾಗುತ್ತಾರೆ ಎಂಬುದೂ ಕಠಿಣ ನಿರ್ಣಯದ ಸಂಗತಿಯೇ. ಇಂದು ರಾಜರಿಲ್ಲ, ವಂಶ ಪಾರಂಪರ್ಯವಾದಕ್ಕೆ ಬೆಲೆಯಿಲ್ಲ. ವರ್ಣಾಶ್ರಮ ವ್ಯವಸ್ಥೆ ಸಲ್ಲದು. ಹೀಗಾಗಿ ಸ್ಮೃತಿಗಳು ಯಾವುವೇ ಆಗಲಿ, ಅವುಗಳಿಂದ ನೀತವಾಗುವುದು ಕಷ್ಟ, ರಾಜನೀತಿ ಸರ್ವಸಮ್ಮತವಾದ್ದು. ಇಷ್ಟು ಆದರೂ ಇದು ಹಿಂದೂ. ಭಾರತ ಧರ್ಮ ಇಂದು ಕ್ರೈಸ್ತ, ಮುಸ್ಲಿಂ, ಪಾರಸಿ ಮುಂತಾದ ಎಷ್ಟೋ ಬೇರೆ ಬೇರೆ ಮತ ಧರ್ಮಗಳಿಗೂ ದಕ್ಷಿಣ ವಾಮವಾದ ಘರ್ಷಣೆಗಳಿಗೂ ಸುರಸವಾಗಿ ಹೊಂದಬೇಕಾಗಿರುವಾಗ ರಾಜ್ಯಧರ್ಮ ಬಹು ಸಿಕ್ಕಿನದಾಗುತ್ತದೆ. ಆದರೂ ವಾಲಿ ಪ್ರಸಂಗ ಹೇಗಾದರಾಗಲಿ, ಸೀತಾ ಪರಿತ್ಯಾಗ – ಉತ್ತರ ಕಾಂಡ ವಾಲ್ಮೀಕಿಯದಾಗಿದ್ದರೆ - ಯಾವ ಧಾತುವಿನದೇ ಆಗಲಿ, ರಾಮನಂಥವನ ಚಾರಿತ್ರ, ದೃಷ್ಟಿ, ರೀತಿ, ಪ್ರವೃತ್ತಿ, ನಿಸ್ವಾರ್ಥತೆ, ಸಕಲ ಪ್ರವೃತ್ತಿಗಳಿಗೂ ಸಮವಾದ ಕ್ಷೇಮಸಾಧನೆಯ ಮನಸ್ಸು, ಕಾರುಣ್ಯ, ಕ್ಷಮೆ, ಸತ್ಯ, ಪರಾಕ್ರಮ ರಾಷ್ಟ್ರಗಳ ನಾಯಕರಿಗೆ ಉಂಟಾಗುವಂತಾದರೆ ಅಂಥ ರಾಜ್ಯ ರಾಮರಾಜ್ಯವಾದೀತೆಂದು ಮಾತ್ರ ಹೇಳಬಹುದು.

ಪ್ರಜಾವಾಣಿ, ದೀಪಾವಳಿ ವಿಶೇಷಾಂಕ, 1965

❑

# 9. ನಿರುದ್ಯೋಗ ಸಮಸ್ಯೆ

ಒಂದು ಕಡೆ ಉದ್ಯೋಗದ ಸಮಸ್ಯೆ ಎದ್ದರೆ ಇನ್ನೊಂದು ಕಡೆ ನಿರುದ್ಯೋಗದ ಸಮಸ್ಯೆ ಏಳುತ್ತದೆ. ಮುಖರಚನೆ ಬೇರೆ ಬೇರೆಯಾದರೂ ಗಮ್ಯ, ಅರ್ಥ ಒಂದೇ.

ಇರುವ ಜನರನ್ನು ಹೇಗೆ ದೇಶದ ಉದ್ಯೋಗಗಳಿಗೆ ನಿಯೋಜಿಸಬೇಕು? ಹೊಸ ಉದ್ಯೋಗಗಳನ್ನು ಕಲ್ಪಿಸಬೇಕು?–ಎಂಬುದು ಒಂದು ಕಡೆಯ ಪ್ರಶ್ನೆ. ಕೆಲಸ ಮಾಡಬಲ್ಲವರು ಎಷ್ಟು ಮಂದಿ ಇದ್ದಾರೋ ಅಷ್ಟು ಜನಕ್ಕೆ ಕಲಸವಿದೆಯೆ? ಇಲ್ಲದವರಿಗೆ ಉದ್ಯೋಗ ಕಲ್ಪಿಸುವುದು ಹೇಗೆ?–ಕೆಲಸ ಕಳೆದುಕೊಂಡವರಿಗೆ ಪುನಃ ಉದ್ಯೋಗ ಒದಗಿಸುವುದು ಹೇಗೆ–ಎಂಬುದನ್ನು ಸದ್ಯ ಎಣಿಸಿಲ್ಲ. ಎರಡಕ್ಕೂ ಸಂಬಂಧಿಸಿದಂತೆ ಈ ನಾಡಿನಲ್ಲಿ ಸಮಸ್ಯೆ ಇದೆ. ಕೆಲಸ ಮಾಡಬಲ್ಲವರೆಲ್ಲ ಕೆಲಸ ಮಾಡುತ್ತಿಲ್ಲ. ಉತ್ಪತ್ತಿ ತರುವಷ್ಟು ಕೆಲಸಗಳೂ ನಾಡಿನಲ್ಲಿ ಇನ್ನೂ ಇಲ್ಲ. ಉತ್ಪತ್ತಿ ತರುವುದು ಎಂದರೆ ಪದಾರ್ಥಗಳನ್ನು ತಯಾರು ಮಾಡುವುದು; ತಯಾರು ಮಾಡುವ ಯಂತ್ರಾದಿ ಸಲಕರಣೆಗಳನ್ನೂ ಸಂಸ್ಥೆಗಳನ್ನೂ ಏರ್ಪಡಿಸುವುದು; ಪದಾರ್ಥಗಳನ್ನೂ ಜನರನ್ನೂ ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಾಗಿಸುವುದು; ಮನೆ, ನಿಲ್ದಾಣ, ಆಸ್ಪತ್ರೆ, ಸ್ಕೂಲು, ಸೇತುವೆ, ಯಂತ್ರಾಗಾರ ಕಟ್ಟುವುದು; ಎಲ್ಲ ಬಗೆಯ ಎಲ್ಲರಿಗೂ ಸುದ್ದಿ ಕೊಡುವುದು ಇತ್ಯಾದಿ. ಕೆಲವು ಸೇವಾಕಾರ್ಯಗಳನ್ನು ಒದಗಿಸುವ ಕೆಲಸಗಳು. ಈ ಎಲ್ಲವೂ ಉತ್ಪತ್ತಿಕಾರ್ಯಗಳೇ. ಎಲ್ಲ ಭಾಗಗಳಲ್ಲಿ ತೊಡಗಿ ಸಂಪಾದನೆ ಮಾಡುತ್ತಿರುವವರದು ಈ ಸಂಖ್ಯೆ. ಇದಕ್ಕೆ ಪೊಲೀಸ್ ಮುಂತಾದ ರಕ್ಷಣಾದಳ ಸೇರುತ್ತಾರೆ. ಸೈನ್ಯದಳ ಸೇರುತ್ತದೆ. ಮೇಷ್ಟರು, ಕಲೆಗಾರ, ಜಾದು ಜನ, ದಾದಿಯರು, ಡಾಕ್ಟರುಗಳು ಸೇರುತ್ತಾರೆ. ವಿದೇಶಗಳಲ್ಲಿಗೆ ಹೋಗಿ ನಮ್ಮ ದೇಶದ ಕೆಲಸ ಮಾಡುವವರ ಸಂಖ್ಯೆ ಸೇರುತ್ತದೆ.

ಭೂಮಿಯ ಕೃಷಿ ಮತ್ತು ಅದಕ್ಕೆ ಸೇರಿದ ಇತರ ಕಸುಬುಗಳಲ್ಲಿ ನಿರತರಾಗಿರುವವರ ಸಂಖ್ಯೆ ನಮ್ಮ ಜನಸಂಖ್ಯೆಯಲ್ಲಿ ಶೇ. 60-70ಕ್ಕಿಂತ ಹೆಚ್ಚು. ಅವರಲ್ಲಿಯೂ ಬಹು ಮಂದಿಗೆ ಕೆಲಸ ಸಾಲದು. ವರ್ಷವೆಲ್ಲ ಎಂದಲ್ಲ; - ಇನ್ನೂರ ಐವತ್ತು ದಿನ ಕೆಲಸ ಮಾಡುತ್ತೇವೆ ಎಂದರೂ 85-90 ದಿನಕ್ಕಿಂತ ಹೆಚ್ಚು ಕೆಲಸ ದೊರೆಯದ ಸ್ಥಿತಿ ಹಳ್ಳಿಗಳ ಕಡೆ. ಜನಸಂಖ್ಯೆಯ ಇನ್ನಷ್ಟು ಭಾಗ ಎಣಿಕೆಗೆ ಮಾತ್ರ ಮನುಷ್ಯರು, ಕೆಲಸಕ್ಕೆ ಮನುಷ್ಯರಲ್ಲ. ಅವರು ಲೋಕವನ್ನು ಅರಿಯದವರು; ಉತ್ಪತ್ತಿ ಕಾರ್ಯಗಳು ಅವರಿಗೆ ಬಾರವು. ಅವರ ಕೈಯಲ್ಲಾಡುವ ಹಣ ಬಹು ಕಡಮೆ. ಅವರು ಮನುಷ್ಯರೆಂದು ಅವರಿಗೆ ಮೊದಲು ತಿಳಿಸಿ, ಅವರಿಗೆ ಪ್ರಜಾತ್ವದ ಅರಿವನ್ನು ಉಂಟುಮಾಡಬೇಕಾಗಿದೆ. ಅದಕ್ಕೆ ನೂರಾರು ಕೋಟಿ ರೂಪಾಯಿಗಳ ವೆಚ್ಚ ಹಿಡಿದೀತು. ಲಕ್ಷಾಂತರ ಮಂದಿ ಅದಕ್ಕಾಗಿ ದುಡಿಯಬೇಕಾಗುತ್ತದೆ. ಅಷ್ಟು ಹಣವಿಲ್ಲ; ಅಂಥ ಕೆಲಸದ ಕಡೆಗೆ ಗಮನವುಳ್ಳ ಜನ ದೊರಕರು.

ಗ್ರಾಮ ಭಾಗಗಳಲ್ಲಿ ಇರುವ ಉದ್ಯೋಗಗಳ ಜೊತೆಗೆ ಅವುಗಳ ಉತ್ಪತ್ತಿಯನ್ನು ಹೇಗೆ ಹೆಚ್ಚಿಸಬೇಕು; ಅದಕ್ಕಾಗಿ ಎಷ್ಟು ಜನರನ್ನೂ ಯಂತ್ರಗಳನ್ನೂ ವಿಜ್ಞಾನಕಲ್ಪಗಳನ್ನೂ ಬಳಸುವುದು ಎಂಬ ಕಾರ್ಯವಿದೆ. ಕೆಲಸ ಇರುವವರಿಗೆ ತಕ್ಕ ಸಂಪಾದನೆ ಗೊತ್ತು ಮಾಡುವುದೂ ಅದಕ್ಕೆ ತಕ್ಕಂತೆ ಉತ್ಪತ್ತಿ ಹೆಚ್ಚು ಮಾಡುವುದೂ ದೊಡ್ಡ ಕೆಲಸ. ಗದ್ದೆ, ತೋಟ, ಹೊಲ, ಪಶುಪಾಲನೆ, ಮೀನುಗಾರಿಕೆ, ಕಾಡಿನ ಉದ್ಯೋಗ - ಇವುಗಳಲ್ಲಿ ಇನ್ನಷ್ಟು ದಕ್ಷವಾಗಿ ದುಡಿದು ದೇಶದ ಉತ್ಪತ್ತಿಯನ್ನೂ ಅಲ್ಲೆಲ್ಲ ಕೆಲಸ ಮಾಡುವ ಜನರ ವರಮಾನವನ್ನೂ ಉತ್ತಮಪಡಿಸಲಿದೆ.

ಆ ಆ ಹಳ್ಳಿಯ ಜನರೇ ತಮ್ಮ ಊರಿನ ರಸ್ತೆ, ನೈರ್ಮಲ್ಯ, ದೀಪವ್ಯವಸ್ಥೆ, ಕುಡಿಯುವ ನೀರಿನ ಏರ್ಪಾಡು, ಕೆರೆ ಕಾಲುವೆಗಳ ಕಾಮಗಾರಿ ಮುಂತಾದುವನ್ನು ಮಾಡಿಕೊಂಡು ಊರಿನ ಪರಿಸ್ಥಿತಿಯನ್ನು ಮೇಲ್ಪಡಿಸಿಕೊಳ್ಳುವುದಾದರೆ, ಅವರು ಮಾಡಿದ ಕೆಲಸಕ್ಕೆ ಸ್ಥಳಮಂಡಲಿಗಳೊ ಪಂಚಾಯತಿಗಳೊ ಸರ್ಕಾರವೊ ನೇರವಾಗಿಯೊ ಸಹಕಾರ ಸಂಘಗಳ ಮೂಲಕವೊ ಹಣ ಒದಗಿಸಬಹುದು. ಆಯಾ ಊರಿನ ಮುಂದೆ ರಸ್ತೆಗಳನ್ನು ಹಾಕಿ ಹೆದ್ದಾರಿಗಳಿಗೆ ಮಾರ್ಗ ರಚಿಸಲು ಅಲ್ಲಿನ ಗಟ್ಟಿಮುಟ್ಟಾದ ಜನವೇ ದುಡಿವಂತೆ ಮಾಡಿ, ಅವರಿಗೆ ಉದ್ಯೋಗ ಸಂಪಾದನೆ ಕಲ್ಪಿಸಬಹುದು. ರಾಷ್ಟ್ರದ ಹೆದ್ದಾರಿಗಳನ್ನು ಮಾಡುವಾಗಲೂ ಆಯಾ ಭಾಗದ ನೆಲಸಿನಲ್ಲಿ ಇರುವ ದಷ್ಟಪುಷ್ಟರಾದ ವಯಸ್ಕರನ್ನೇ ನಿಯೋಜಿಸಿ ಮೇಸ್ತ್ರಿಗಳು, ಕಂಟ್ರಾಕ್ಟರುಗಳು ಕೆಲಸಗಳನ್ನು ನಿರ್ವಹಿಸುವಂತೆ ಮಾಡಬಹುದು.

ಹಿಂದಿನ ಕಾಲದಲ್ಲಿ ಕೆರೆ ಒಣಗಿದ ಕಾಲದಲ್ಲಿ ಗೋಡು ತೆಗೆದು ಗೊಬ್ಬರವಾಗಿ ಬಳಸುತ್ತಿದ್ದರು. ಕೆರೆಯ ಅಂಗಳವನ್ನು ಆಳ ಮಾಡುತ್ತಿದ್ದರು. ಕೆರೆ, ಕಟ್ಟೆ, ತೂಬು, ಕಾಲುವೆಗಳ ಮೇಲ್ಪಾಡನ್ನು ಹಳ್ಳಿಯವರೇ ಮಾಡಿಕೊಳ್ಳುತ್ತಿದ್ದರು. ನೂರು ವರ್ಷಗಳಿಂದ ಒಂದೇ ನೆರೆಯ ಹಾವಳಿ ಕತೆ ಹೇಳುವ ಬ್ರಹ್ಮಪುತ್ರಾದಿಗಳಲ್ಲಿ ಬೇಸಗೆಯಲ್ಲಿ ಮರಳು ತೆಗೆದು ಪಾತ್ರವನ್ನು ಆಳ ಮಾಡಿ, ಅಲ್ಪಸ್ವಲ್ಪ ನದಿಯ ಜಾಡನ್ನು ಮಾರ್ಪಡಿಸಿ ಹಳ್ಳಿಗಳ ಕಡೆ ಕಟ್ಟೆಗಳನ್ನು ಕಟ್ಟಿಕೊಂಡರೆ ಮಳೆಗಾಲದ ನೆರೆಯ ನಾಶ ತಪ್ಪುತ್ತದೆ. ಎಲ್ಲಕ್ಕೂ ಸರ್ಕಾರಕ್ಕೆ ಕಾಯುವ ಜನ ತಾನು ಸತ್ತೀತೇ ಹೊರತು ಅದಕ್ಕಾಗಿ ದುಡಿಯದು.

ಕ್ಯಾಲಿಫೋರ್ನಿಯದಲ್ಲಿ, ಇಸ್ರೇಲಲ್ಲಿ ಬಂಜರು ಮರಳುಕಾಡಾಗಿದ್ದ ನೆಲವನ್ನು ನಗುವ ನಂದನ ಮಾಡಿದರು; ಡೆನ್ಮಾರ್ಕ್‌ಲ್ಲಿ ನೆಲವನ್ನು ಸ್ಫೋಟಿಸಿ ಫಲಸಾರಗಳನ್ನು ನೆಲದಲ್ಲಿ ಹುಗಿಸಿ ಹೊಸ ಹೊಲ ಗದ್ದೆ ತೋಟಗಳನ್ನು ಮಾಡಿಕೊಂಡರು; ಹಾಲಂಡಲ್ಲಿ ಕಟ್ಟೆಗಳನ್ನು ಕಟ್ಟಿಕೊಂಡರು; ಬೇರಲ್ಲಿಗೆ ಕಡಲನ್ನು ನೂಕಿ ಭೂಮಿ ಮಾಡಿಕೊಂಡರು. ಎಷ್ಟು ಹೊಸ ಭೂಮಿಯನ್ನು ಭಾರತದಲ್ಲಿ ಹೊಸತಾಗಿ ಬೇಸಾಯಕ್ಕೆ ಹೀಗೆ ತರಲಾಗದು? ಕಾಡು ಕಡಿದು ತಾನೇ ನಾಡಾದ್ದು? ಅಂಥದು ಕೆಲಸ! ಹೊಸದಾಗಿ ಜಲವಸತಿಗಳನ್ನು ನಿರ್ಮಾಣ ಮಾಡಿರುವ ಕಡೆ ಸಾವಿರಾರು ಮೈಲಿ ಕಾಲುವೆಗಳ ಆಸರೆ ಇದೆ. ಹತ್ತಾರು ಸಾವಿರ ಎಕರೆ ಭೂಮಿ ಅವಕಾಶವಿದೆ. ಬಗೆಬಗೆಯ ಕೃಷಿ ಬೆಳಸನ್ನೂ ಇತರ ಉದ್ಯೋಗಗಳನ್ನೂ ಕೈಕೊಂಡು ಫಲಕಾರಿ ಮಾಡಿದ ಹೊರತು ಪದವೀದಾನ ಇಲ್ಲವೆಂದು ನಿಗದಿ ಮಾಡಿ ಕೃಷಿವಿದ್ಯೆ ವ್ಯಾಸಂಗದಲ್ಲಿ ಒಂದು ವರ್ಷದ, ಎರಡು ವರ್ಷದ ಕಾರ್ಯ-ಅಭ್ಯಾಸ ಅಲ್ಲಿ ಏರ್ಪಡಿಸಿ ಡಿಗ್ರಿ ಕೊಡಿಸಬಹುದು. ಆಮೇಲೆ ಅವರಲ್ಲಿ ಹಲವರಿಗೆ ಅಲ್ಲಿಯೇ ಉದ್ಯೋಗ, ಭೂಮಿ ಒಡೆತನ ಕಲ್ಪಿಸಿ ಕೊಡಬಹುದು. ಹೊಸ ರೈಲ್ವೇ ಸಂಪರ್ಕಗಳ ನಿರ್ಮಾಣದಲ್ಲಿ ಇನ್ನಷ್ಟು ಮಂದಿಗೆ ಉದ್ಯೋಗ ಕಲ್ಪಿಸಬಹುದು. ಹಿಂದೆ ಇಂಥ ಲೋಕೋಪಯೋಗಿ ಕಾರ್ಯಗಳಿಗೆ ಜನ ಹಣ ಕೇಳುತ್ತಿರಲಿಲ್ಲ; ಈಗ ಅವರಿಗೆ ಹಣ ಕೊಡಬಹುದು. ಎಲ್ಲರ ಕೆಲಸವೂ ಯಾರ ಕೆಲಸವೂ ಅಲ್ಲವಾದ್ದರಿಂದ ಪ್ರತಿಯೊಬ್ಬನೂ ತಾನು ಮಾಡುವ ಕೆಲಸಕ್ಕೆ ಪ್ರಯೋಜನ ಕೇಳುತ್ತಾನೆ... ಹಾಗೆಯೇ ಕುಡಿಯವ ನೀರಿನ ಸೌಕರ್ಯವನ್ನೂ ಆಯಾ ಹಳ್ಳಿಯವರೇ ಮಾಡಿಕೊಂಡು, ನೀರು ಬಂತೆಂದು ಅವರೇ ಒಪ್ಪಿಕೊಂಡ ಮೇಲೆ ಸರಕಾರ ಅದಕ್ಕೆ ಹಣವನ್ನು ಒದಗಿಸಿ, ಆ ಬಗೆಯ ಕೆಲಸ ಮಾಡಿದವರಿಗೆ ವರಮಾನ ಹಂಚಬಹುದು. ಇಂಥವು ಸಾವಿರಾರು ಕೆಲಸಗಳಿವೆ. ವ್ಯವಸಾಯದ ಜೊತೆಗೆ ಕೆಲಸವಿಲ್ಲದ ದಿನಗಳಲ್ಲಿ ಬೇರೆ ಕೆಲಸ ದೊರಕಿಸಲಿದೆ.

ಉಪಕಸುಬುಗಳನ್ನು ಹೆಚ್ಚಿಸಿಕೊಂಡು ಅವಕ್ಕೆ ಬೇಕಾದ ಸಜ್ಜು, ಸಲಕರಣೆ, ಕಚ್ಚಾ ಸಾಮಾನು, ಬೇಕಾದರೆ ವಿದ್ಯುಚ್ಛಕ್ತಿ ಮುಂತಾದುವನ್ನು ಒದಗಿಸಿ ಕೆಲಸದ ಸಂಖ್ಯೆಗಳನ್ನೂ ವಿವಿಧತೆಯನ್ನೂ ಉತ್ಪತ್ತಿಯನ್ನೂ ಹೆಚ್ಚು ಮಾಡುವ ಕೆಲಸವಿದೆ. ಪ್ರತಿ ಕುಟುಂಬವೂ ಗೃಹ ಕೈಗಾರಿಕೆಯ ಕೇಂದ್ರ, ಪ್ರತಿ ಎಕರೆ ಭೂಮಿಯೂ ಹಸಲೆ ಹಣ್ಣು ತರಕಾರಿಗಳ ಬೀಡು ಆದಾಗ ನಾಡಿಗೆ ಚೆಲುವು, ಸೌಭಾಗ್ಯ ಬರುತ್ತವೆ ಎಂದ ಶ್ರೀ ಗಿರಿಯವರ ಮಾತು ಸತ್ಯವಾಗುತ್ತದೆ. 5-6 ಲಕ್ಷಕ್ಕಿಂತ ಹೆಚ್ಚಿನದು ನಮ್ಮ ಹಳ್ಳಿಗಳ ಸಂಖ್ಯೆ. ಅವುಗಳಲ್ಲಿ 5.5 ಲಕ್ಷ ಹಳ್ಳಿಯ ಜನಸಂಖ್ಯೆ 5,000ಕ್ಕೆ ಕಡಮೆ; ಎಂದರೆ, ಸಾವಿರ ಕುಟುಂಬಗಳಿಗೆ ಕಡಮೆಯವು. ಇಂಥಲ್ಲಿ ಜೀವನ ಸಂಪತ್ತಿ ಹೆಚ್ಚು ಮಾಡಬೇಕಾದ ಅಗತ್ಯ ತ್ವರೆಯದು. ಹತ್ತು ಹಳ್ಳಿಗಳಿಗೆ ಒಬ್ಬ ಡಾಕ್ಟರಂತೆ, ಒಬ್ಬ ನರ್ಸ್, ಒಬ್ಬರಿಬ್ಬರು ಮಿಡ್‌ವೈಫ್ ಅಂತೆ ಸೇವೆಗಾಗಿ ದುಡಿಯುವ ಹಾಗಾದರೆ – ಇಷ್ಟು ಜನಕ್ಕೆ ಉದ್ಯೋಗ, ಸೌಕರ್ಯ ದೊರೆಯುತ್ತವೆ. ಹಾಗೆ ಕೆಲಸ ಮಾಡುವವರ ಸಂಖ್ಯೆ ಎಷ್ಟು ಎಂಬುದು



ವಿಚಾರಯೋಗ್ಯ. ಹಳ್ಳಿಗಳ ಬದುಕು ಆಕರ್ಷಕವಾದರೆ ಅಂಥವರು ಒದಗುತ್ತಾರೆ. ಅದನ್ನು ಕೈಗೊಳ್ಳುವ ಕಾರ್ಯ ನಾಡ ಹಿತಕಾರ್ಯ, ಸಂಪದುತ್ಪತ್ತಿಯ ದೃಷ್ಟಿಯಿಂದ ಕೂಡ ಅವಸರದ್ದು... ಇದು ಗ್ರಾಮಭಾಗದ ಚಿತ್ರ.

ಸಾಮಾನ್ಯವಾಗಿ ಅಲ್ಲಿ ಉದ್ಯೋಗ ಇರುವವರ ಅಥವಾ ಅಲ್ಪ ಪ್ರಮಾಣದ ಕೆಲಸವಿರುವವರ ಸಂಖ್ಯೆ 10-15 ಕೋಟಿ. ಪಟ್ಟಣಗಳಲ್ಲಿ ನಡೆಯುವ ಮಧ್ಯಗಾತ್ರದ ಅಥವಾ ದೊಡ್ಡ ಗಾತ್ರದ ಕೈಗಾರಿಕೆ, ಕಾರ್ಖಾನೆ ಕೆಲಸಗಳ ಪ್ರಪಂಚದಲ್ಲಿ ಒಂದರಿಂದ ಐದು ಕೋಟಿಯವರೆಗೂ, ಅಷ್ಟಾದರೂ ಕೆಲಸವಿಲ್ಲದವರ ಅಥವಾ ಸಾಕಷ್ಟು ಕೆಲಸವಿಲ್ಲದವರ ಸಂಖ್ಯೆ ಇದೆ. ಕೆಲಸ ಇಲ್ಲದಿರುವವರ ಸಂಖ್ಯೆಯೆಂದಾಗ ಸುಮಾರು ಒಂಬತ್ತು ಲಕ್ಷ ಮೆಟ್ರಿಕ್ಯುಲೇಷನ್ ಪಾಸಾದವರು, ಎರಡು ಲಕ್ಷ ಪದವೀಧರರು, 53,000 ಎಂಜಿನಿಯರುಗಳು ಇದ್ದಾರೆಂದು ರಾಷ್ಟ್ರಾಧ್ಯಕ್ಷರು ಈಚೆಗೆ ಹೇಳಿದ್ದಾರೆ. ವಿಶ್ವವಿದ್ಯಾಲಯದಲ್ಲಿ ಪದವೀಧರರಾದವರು ಶಾಸ್ತ್ರದಲ್ಲಿ, ಯಂತ್ರತಂತ್ರಗಳಲ್ಲಿ, ಚಿಕಿತ್ಸೆಯಲ್ಲಿ, ವಾಣಿಜ್ಯ ವ್ಯಾಪಾರದಲ್ಲಿ, ವ್ಯವಸಾಯ-ನೀರಾವರಿ ಕಾರ್ಯಗಳಲ್ಲಿ, ಅನಿಲ ತೈಲ ಖನಿಜಾದಿಗಳನ್ನು ರೂಢಿಸುವುದರಲ್ಲಿ, ರೇವು ಬಂದರು ಮುಂತಾದವುಗಳ ನಿರ್ಮಾಣದಲ್ಲಿ ವಿದ್ಯಾ ಪ್ರಚಾರಕರೂ ತಜ್ಞರೂ ನಿಷ್ಣಾತರೂ ಬಹುಮಂದಿ ಇರುತ್ತಾರೆ. ಅವರಲ್ಲಿ ಕೆಲಸವಿಲ್ಲದವರಿಗೆ ಅವರು ಒಪ್ಪುವ ಕೆಲಸವನ್ನು ಒದಗಿಸಬೇಕು. ಮೊದಲು ಈ ಸಂಖ್ಯೆ ಇಷ್ಟೆಂದು ಖಚಿತವಾಗಿ ತಿಳಿಯುವುದು; ಕೆಲಸವಿರುವಲ್ಲಿಗೆ ಅವರು ಹೋಗುವಂತೆ ಮಾಡುವುದು; ಅವರ ತಜ್ಞತೆಯನ್ನು ಬಳಸಿಕೊಳ್ಳುವ ಸಂಸ್ಥೆಗಳನ್ನು, ಕಾರ್ಯ ವಿಧಾನಗಳನ್ನು ಏರ್ಪಡಿಸುವುದು ದೊಡ್ಡ ಕೆಲಸ.

ಆಯಾ ಕೆಲಸದ ಅಗತ್ಯ ಬೀಳುವ ಕೈಗಾರಿಕೆ, ಸಂಸ್ಥೆಗಳಲ್ಲಿ, ವಿದ್ಯಾಶಾಲೆಗಳಲ್ಲಿ ಅಂಥವರ ತರಬೇತಾಗಬೇಕು. ಇದಕ್ಕಾಗಿ ಖಾಸಗಿ ಉತ್ಪತ್ತಿದಾರರ ಜೊತೆಗೆ ಸರ್ಕಾರ ದುಡಿಯಬೇಕಾಗುತ್ತದೆ. ಖಾಸಗಿಯವರಿಗೆ ಏನು ಹಿಡಿದಿದೆ? ದಿನಾ ಹೀನಮಾನ ಬಯಿಸಿಕೊಂಡಾದರೂ ಈ ದೇಶದಲ್ಲಿಯಂತೂ ಸರ್ಕಾರವೇ ಕೈಹಾಕಬೇಕು. ಖಾಸಗಿ ಬಂಡವಾಳಗಾರರಿಗೆ ಎಲ್ಲ ಅನುಕೂಲ ಬೇಕು, ಲಾಭ ಬೇಕು, ಉತ್ಪತ್ತಿ, ಬೆಲೆ ಬೇಕು. ತೆರಿಗೆ ಹಾಕಬಾರದು! ಅವರಿಗೆ ಬೇಕಾದ್ದು ಅನಿರ್ಬದ್ಧ ಸ್ವಾತಂತ್ರ್ಯ.

ಹೊಸ ಕಾಲದ ಯಂತ್ರಾಭಿವೃದ್ಧಿ ಬೇಡುವ – ಬಳಸುವ ಕಾರ್ಖಾನೆಗಳಲ್ಲಿಯೂ ಕಾರ್ಯಾಲಯಗಳಲ್ಲಿಯೂ ಹೂಡಿದ ಬಂಡವಾಳ ಹೆಚ್ಚಿದಂತೆಲ್ಲ ಅದರ ಸಮ ಪ್ರಮಾಣಕ್ಕೆ ಕೆಲಸಗಾರರ ಸಂಖ್ಯೆ ಹೆಚ್ಚುತ್ತದೆನ್ನುವ ಹಾಗಿಲ್ಲ. ತಕ್ಷಣದಲ್ಲಿ ಕಡಮೆಯೇ ಆಗುತ್ತದೆ. ಆದ್ದರಿಂದ ಯಂತ್ರೀಕರಣ ಹೆಚ್ಚಿಸಿ ನಿರುದ್ಯೋಗ ಸಮಸ್ಯೆಯನ್ನು ನಿವಾರಿಸುತ್ತೇವೆನ್ನುವುದು ಪೂರ್ತಿ ಸತ್ಯವಾಗದು. ಇನ್ನು ಕೆಲವು ಕಡೆ ಕೆಲಸಗಳು ಹೆಚ್ಚು ಸಂಖ್ಯೆಯಲ್ಲಿವೆ. ಮಾಡುವ ಕೆಲಸ ನಿಗದಿಯಾಗಿ ಎಂಟು ಗಂಟೆ ಎಂದಿದ್ದರೆ ಮೂರು ಗಂಟೆಯಷ್ಟನ್ನೂ ಮಾಡದಿರುವುದು ರೂಢಿ. ಕಚೇರಿಗಳಲ್ಲಿ, ಬ್ಯಾಂಕುಗಳಲ್ಲಿ ಅವರವರ ಕೆಲಸ ಮಾಡಿ

ಮನೆಗೆ ಹೋಗಬಹುದೆಂದು ಎಲ್ಲರಿಗೂ ಹೇಳಿದರೆ ಬೆಳಿಗ್ಗೆ ಹತ್ತು ಗಂಟೆಗೆ ಬಂದವರು ಒಂದು ಗಂಟೆಗೆ ಮನೆಗೆ ಹೋಗಬಹುದಾಗುತ್ತದೆ. ಆದರೆ ಅಂಥಲ್ಲಿ ಭಯ-ಅರ್ಧಕ್ಕಿಂತ ಹೆಚ್ಚು ಜನರನ್ನು ಕೆಲಸದಿಂದ ತೆಗೆದುಹಾಕುತ್ತಾರೆ ಎಂಬುದು. ನಿಗದಿಯಾದ ಗಂಟೆಯಲ್ಲಿ ಮಾಡಬೇಕಾದ ಕೆಲಸ ನಿಲ್ಲಿಸಿದರೆ 'ಓವರ್‌ಟೈಮ್' ಸಂಬಳ ದುಡಿಯಬಹುದೆಂಬ ಆಕಾಂಕ್ಷೆ ಇರುತ್ತದೆ. ಸಂಪು, ಹರತಾಳ, ಧರಣ ಇತ್ಯಾದಿಗಳಿಂದಲೂ ಕೆಲಸಗಾರರನ್ನು ಹೊರಗೆ ಹಾಕಿ ಬೀಗ ಜಡಿಯುವ ಮಾಲಕರ ವೃತ್ತಿಯಿಂದಲೂ ಈ 2-3 ವರ್ಷಗಳಲ್ಲಿ ಪ್ರತಿವರ್ಷ 170 ಲಕ್ಷ ಕೆಲಸದ ಗಂಟೆಯ ಕಾಲ (man-hours) ವ್ಯರ್ಥವಾಗಿದೆಯೆಂದು ಲೆಕ್ಕವಾಗಿದೆ. ಇದು ಉದ್ಯೋಗದ ಆಭಾಸ, ಅಪಯೋಗ; ನಿರುದ್ಯೋಗ ಅಲ್ಲ. ಉದ್ಯೋಗ ಸಮಸ್ಯೆ ಇವೆರಡಕ್ಕೂ ಸಂಬಂಧಿಸಿದ್ದು, ರೀತಿ ನೀತಿಗಳಿಗೆ ಸಂಬಂಧಿಸಿದ್ದು.

ನಿರುದ್ಯೋಗವೆಂಬುದು ಒಟ್ಟು ಒಂದು ಹೆಸರು. ಆದರೆ ಇದರಲ್ಲಿ ಹಲವಾರು ಮಟ್ಟಗಳುಂಟು. ಸಾವಿರ ರೂಪಾಯಿಗಿಂತ ಹೆಚ್ಚು ಸಂಬಳ – ತಿಂಗಳಿಗೆ ಎಂಟು-ಹತ್ತುಸಾವಿರದವಕ್ಕೆ ಪ್ರಾರ್ಥನಾ ಪತ್ರಗಳನ್ನು ಕರೆದರೆ ಅರ್ಜಿ ಹಾಕುವ ಜನ, ಧೈರ್ಯ ಕಡಮೆ. ಕೆಲಸಗಳಲ್ಲಿ ನೂರಾರು ವರ್ಗಗಳಿವೆ. ಒಂದರೊಡನೆ ಇನ್ನೊಂದಕ್ಕೆ ಸ್ಪರ್ಧೆ ಇಲ್ಲ. Non-competing groups ಎನ್ನುತ್ತಾರೆ ಅವನ್ನು. ಕಡಮೆಯ ಸಂಬಳಗಳಿಗೆ ಅಭ್ಯರ್ಥಿಗಳು ಹೆಚ್ಚು. ಅವು ಸಾವಿರದಷ್ಟು ಸಣ್ಣ ಸಂಬಳಗಳ ಮತ್ತು ಹೆಚ್ಚು ಕುಶಲತೆ ಬೇಡದ ಕೆಲಸಗಳು. ಅಲ್ಲಿ ಅಭ್ಯರ್ಥಿಗಳ ಸಂಖ್ಯೆ ಸಾಕಾದ್ದಕ್ಕಿಂತ ಹೆಚ್ಚು. ಇರುವ ಕೆಲಸಗಳಿಗೆ ತಕ್ಕ ಯೋಗ್ಯತೆಯ ಜನ ಸಿಕ್ಕದೆ ಯೋಗ್ಯತೆಗೆ ತಕ್ಕ ಕೆಲಸ ದೊರೆಯದೆ ಬೇರೆ ಜಟಿಲತೆ ಹುಟ್ಟುತ್ತದೆ. ಶಿಕ್ಷಣದ ಸಂಸ್ಥೆಗಳಿಗೂ ಉದ್ಯೋಗ ಕಲ್ಪನೆಯ ಪ್ರಪಂಚಕ್ಕೂ ಹೆಚ್ಚು ಅನುಕೂಲವಾದ ಸಂಪರ್ಕ ಏರ್ಪಡಬೇಕು. ಇದು ಆರ್ಥಿಕ ಜೀವನದ ಎಲ್ಲ ಇಲಾಖೆಗಳಿಗೂ ಸಂಬಂಧಪಟ್ಟ ಸಂಗತಿ. ಯಾವ ಯಾವ ವಿಷಯಗಳಲ್ಲಿಯೊ ವಿದೇಶಿ ವ್ಯಾಸಂಗ ಮಾಡಿಕೊಂಡು ನಾಡಿಗೆ ಹಿಂದಿರುಗಿ ಬಂದವರ ಮತ್ತು ವಿಜ್ಞಾನ ಮತ್ತು ಇತರ ತಂತ್ರವೇತ್ತರ ವಿಷಯದಲ್ಲಿ ಇದರ ವಿರಸತೆ, ವ್ಯರ್ಥ ನಾಜೂಕಿನವು. ನಾಡಿನ ಸಂಪದುತ್ಪತ್ತಿ ಸಂಬಂಧದಲ್ಲಿಯಂತೂ ಇದರ ನಷ್ಟ, ಕ್ಲೇಶ ದೇಶಕ್ಕೆ ಅತೀವವಾದ್ದು. ಯಾವ ವಸ್ತು ವಿಜ್ಞಾನ, ಕ್ರಿಯಾ ಕುಶಲತೆಗಳನ್ನೂ ಕಲಿಯದೆ ಕೇವಲ ಪಾಸು ಮಾಡಿಕೊಂಡ ಪದವೀಧರರಿಗೆ ಕೆಲಸ ಒದಗಿಸುವುದರ ಕಷ್ಟ ಕಾರ್ಪಣ್ಯವಂತೂ ಹೇಳತೀರದ್ದು.

ಯಾವುದಕ್ಕೂ ಹಣ ಬೇಕು. ಇದರ ಪ್ರಮಾಣ ಬಹು ದೊಡ್ಡದು. ಇವೊತ್ತಿನ ಆರ್ಥಿಕ ಸ್ಥಿತಿಯಲ್ಲಿ ಖಾಸಗಿ ಮಂಡಲಿಗಳಾಗಲಿ, ಸರ್ಕಾರವಾಗಲಿ ಸಾಕಷ್ಟು ಉಪಪನ್ನವಾಗಿಲ್ಲ. ಖಾಸಗಿ ಕಂಪನಿಗಳದು ಸುಮಾರು 3,000 ಕೋಟಿ ರೂಪಾಯಿಗಳ ಹಾಕು-ಬಂಡವಾಳ. ಪುಸ್ತಕದ ಲೆಕ್ಕದಲ್ಲಿ (book value) 6000 ಕೋಟಿ ಎನ್ನುತ್ತಾರೆ. ವರ್ಷಕ್ಕೆ ಕೇಂದ್ರ-ರಾಜ್ಯ ಸರಕಾರಗಳದು 6000 ಕೋಟಿ ರೂಪಾಯಿಗಳ ವೆಚ್ಚ; ಸರ್ಕಾರ



ಹೊರಗಿಂದ ತೆಗೆಯುವ ಸಾಲ - ಈ ಎಲ್ಲ ಸೇರಿದರೂ ಸಾಲದು. ಈಗ ಆಗಿರುವ ಮೂರು ಪಂಚವಾರ್ಷಿಕ ಯೋಜನೆಗಳ ಒಟ್ಟು 18-19 ವರ್ಷಗಳ ಕಾರ್ಯಭಾರದಲ್ಲಿ 20,000 ಕೋಟಿ ರೂಪಾಯಿಗಳಿಗಿಂತ ಹೆಚ್ಚು ಬಂಡವಾಳ ಹೂಡಿ ಒಂದೂಕಾಲು ಕೋಟಿ ಜನಕ್ಕಿಂತ ಹೆಚ್ಚು ಮಂದಿಗೆ ಉದ್ಯೋಗ ಕಲ್ಪಿಸುವುದು ಕಷ್ಟವಾಗಿದೆಯೆಂದು ಕಂಡಿದೆ. 20,000 ಕೋಟಿ ರೂಪಾಯಿ ಇವೊತ್ತು ದೇಶದ ವರ್ಷದ ಉತ್ಪತ್ತಿಯ ಒಟ್ಟು ಘನ ಮೌಲ್ಯದ್ದು (G.N.P. Gross National Product). ಜೊತೆಗೆ ದೊಡ್ಡ ಪ್ರಮಾಣದಲ್ಲಿ ಬಂಡವಾಳ ಹೂಡಿ ಕೆಲಸ ಕೈಕೊಳ್ಳುವುದೊ! ಒಂದೊಂದು ಕೆಲಸ ಕೈಗೆ ಬರುವುದಕ್ಕೂ 6-7 ವರ್ಷ ಕಾಲ ಹಿಡಿಯುತ್ತದೆ. ಲಾಭ ಬರುವಂತೆ ಅವು ಕೆಲಸ ಮಾಡಬೇಕಾದರೆ ಇನ್ನು 2-3 ವರ್ಷಗಳಾದರೂ ಬೇಕು. ಈ ಉದ್ಯೋಗ ಸಫಲವಾಗ ಬೇಕು. ಇದು ನಾಡಿನ ಲಕ್ಷ್ಮೀಕ್ಷೇತ್ರ, ಎಲ್ಲರಿಗೂ ಸೇರಿದ ಸಂಪತ್ತು ಎಂದು ದುಡಿಯುವ ಶ್ರದ್ಧೆ, ಭಕ್ತಿ, ಶೀಲ ಅಲ್ಲಿ ಕೆಲಸ ಮಾಡುವವರೆಲ್ಲರಿಗೆ ಅಗತ್ಯ. ಇದನ್ನು ಆರ್ಥಿಕವಾಗಿ ಅಳೆಯಲಾಗುವುದಿಲ್ಲ. ಹಣ ಹೂಡಬಹುದು, ಕೆಲಸ ನಿರ್ಮಿಸಬಹುದು, ಸ್ಥಾವರ ಯಂತ್ರಾದಿಗಳನ್ನು ಸ್ಥಾಪಿಸಬಹುದು, ಕೆಲಸಗಾರರನ್ನು ಕೆಲಸಕ್ಕೆ ನಿಯೋಜಿಸಬಹುದು. 10,000 ಜನ ದಿನಕ್ಕೆ ಕೆಲಸ ಮಾಡುವ ಒಂದು ಕಾರ್ಖಾನೆಯಲ್ಲಿ ಒಂದು ದಿನ ತಪ್ಪಿದರೆ 80,000 ಗಂಟೆಯ ಕೆಲಸವನ್ನು ಯಂತ್ರಗಳು ಮಾಡದೆ ತಡೆದಂತೆ, ತಪ್ಪಿಸಿದಂತೆ ಆಗುತ್ತದೆ. ಆ ಮಟ್ಟಿಗೆ ಉತ್ಪತ್ತಿ ಇಲ್ಲ, ಉದ್ಯೋಗ ಮಂಡಲಕ್ಕೆ ಸಂಪಾದನೆ ಇಲ್ಲ, ಕೆಲಸಗಾರರಿಗೆ ಸಂಬಳ ಕೊಡಲು ಒದಗುತ್ತಿದ್ದ ಅಷ್ಟು ಉಪಪತ್ತಿ ಕಡಮೆಯಾಗುತ್ತದೆ ಎಂಬುದನ್ನು ನಾಡಿನ ಎಲ್ಲರೂ ಅರಿಯಬೇಕು. ಎಲ್ಲ ಶಾಖೆಗಳವರೂ–ಕೆಲಸಗಾರರು, ಮಾಲಕರು, ಸರ್ಕಾರ, ಜನ–ಅರಿತ ಹೊರತು ಉದ್ಯೋಗ–ನಿರುದ್ಯೋಗಗಳ ಸಮಸ್ಯೆ ತೀರ್ಮಾನವಾಗದು.

ಇನ್ನೊಂದು ರೀತಿ ಇದನ್ನು ತಿಳಿಸುತ್ತೇನೆ. ನಮ್ಮ ಜನಸಂಖ್ಯೆ 50 ಕೋಟಿ ಎಂದರೆ, ಸುಮಾರು 20-25 ಕೋಟಿ ಮಂದಿ ವಯಸ್ಕರು – ಅಷ್ಟು ಮಂದಿ ವೋಟರುಗಳಿದ್ದರು ಹಿಂದಿನ ಚುನಾವಣೆ ಕಾಲದಲ್ಲಿ – 20 ರಿಂದ 45 ವರ್ಷಗಳ ವಯಸ್ಸಿನವರು: ಗಂಡು, ಹೆಣ್ಣು ಎನ್ನೋಣ. ಇವರಲ್ಲಿ ಹೆಂಗಸರಾರನ್ನೂ ಕೆಲಸಕ್ಕೆ ತೊಡಗಿಸದೆ ಹೂವಿನಂತೆ ನೋಡಿಕೊಳ್ಳುತ್ತೇವೆನ್ನಿ. ಇನ್ನೂ 10-12 ಕೋಟಿ ಜನ ಕೆಲಸ ಮಾಡಬಲ್ಲ ಗಂಡಸರಿರುತ್ತಾರೆ. ನಾಡಿನಲ್ಲಿ ನಡುಮಟ್ಟದ ದೊಡ್ಡ ಪ್ರಮಾಣದ ಕೆಲಸಗಳಲ್ಲೆಲ್ಲ ತೊಡಗಿರುವವರ ಸಂಖ್ಯೆ ಒಂದು ಕೋಟಿಗೆ ಮೀರಿಲ್ಲ. ಮೂರು ಯೋಜನೆಗಳ ಫಲವಾಗಿ ಉದ್ಯೋಗ ದೊರೆತವರ ಸಂಖ್ಯೆ ನಾಲ್ಕೂವರೆ ಕೋಟಿ; ಕೃಷಿ ಕೆಲಸಗಳಲ್ಲಿ 120 ಲಕ್ಷ; ಕೃಷಿಯೇತರ 330 ಲಕ್ಷ. ಉಳಿದ 9 ಕೋಟಿಯಲ್ಲಿ ಒಂದು ಕೋಟಿ ಜನಕ್ಕೆ ಉದ್ಯೋಗ ಕಲ್ಪಿಸೋಣ – ಎಂದರೆ ಗ್ರಾಮ ಪ್ರದೇಶಗಳವರನ್ನು ಬಿಡೋಣ – ಪಟ್ಟಣಗಳಲ್ಲಿ, ನಗರಗಳಲ್ಲಿ, ದೊಡ್ಡ ಉದ್ಯೋಗ ಕೇಂದ್ರಗಳಲ್ಲಿ – ತಲಾ ತಿಂಗಳಿಗೆ ನೂರಕ್ಕೆ ಕಡಮೆ ಯಾರಿಗೂ ಸಂಬಳ ಕೊಡುತ್ತೇವೆಂದು ಹೇಳುವ ಹಾಗಿಲ್ಲ – ಇಷ್ಟಕ್ಕೆ ದುಡಿಯುವವರು ಸಿಕ್ಕಿದರೆ–

ತಿಂಗಳಿಗೆ ನೂರು ಕೋಟಿ ರೂ. ಅಗತ್ಯ. ವರ್ಷಕ್ಕೆ 1200 ಕೋಟಿ ರೂಪಾಯಿ ಆಯಿತು. ಸಂಬಳ, ಕೂಲಿಗೆ ಮಾತ್ರ. ಉಳಿದ ಎಲ್ಲ ವೆಚ್ಚವನ್ನು ಬಿಟ್ಟರೂ! ಇಷ್ಟನ್ನು ದುಡಿಯಬಲ್ಲ ಬಂಡವಾಳ ಸತತವೂ ಶೇ. 6 ರಂತೆ ಹಣ ದುಡಿಯುವುದೆಂದು ಲೆಕ್ಕ ಹಾಕಿದರೆ – 20,000 ಕೋಟಿ ರೂಪಾಯಿಗಳು. ಇದನ್ನು ಹೇಗೆ ಒದಗಿಸುವುದು? ಯಾರು? ಮೂರು ಪಂಚವಾರ್ಷಿಕ ಯೋಜನೆಗಳಲ್ಲಿ ಹೂಡಿದ್ದು ಅಷ್ಟು ಹಣ. ಅದಕ್ಕೆ 15 ವರ್ಷ ಹಿಡಿಯಿತು. 18 ವರ್ಷಕ್ಕೆ 1.20 ಕೋಟಿ ಜನಕ್ಕೆ ಯಂತ್ರಕಾರ್ಯಾಲಯಗಳಲ್ಲಿ ಉದ್ಯೋಗವೆಂದು ಈಚೆಗೆ ಪ್ರಧಾನಿಯವರು ಹೇಳಿದರು.

ಈ ಹೂಟ ಕಾರ್ಯರೂಪಕ್ಕೆ ಬರಬೇಕಾದರೆ ಎಷ್ಟು ಯೋಜನೆ ನಡೆಯಬೇಕು? ಎಷ್ಟು ಸಮಿತಿಗಳು, ತಜ್ಞರು ಕೆಲಸ ಮಾಡಬೇಕು? ರಾಜಕೀಯ ಪಕ್ಷಗಳು, ಸರ್ಕಾರ, ವೃತ್ತ ಪತ್ರಿಕೆಗಳವರು ಎಷ್ಟು ಸಮಾಲೋಚನೆ ಮಾಡಬೇಕು? ಪಾರ್ಲಿಮೆಂಟಿನಲ್ಲಿ ಎಷ್ಟು ಸಾವಧಾನವಾಗಿ, ಕಹಿಯಾಗಿ, ಕರ್ಕಶವಾಗಿ ಚರ್ಚೆ ಆಗಿ ಮಂಜೂರಾತಿ ಪಡೆಯಬೇಕು? ಮಂಜೂರಾಯಿತು. ಯಾವ ಯಾವುದನ್ನು ಎಲ್ಲೆಲ್ಲಿಂದ ಹೇಗೆ ಹೇಗೆ ಒದಗಿಸಿಕೊಳ್ಳುವುದು? ಟೆಂಡರುಗಳನ್ನು ಹೇಗೆ ತರಿಸುವುದು? ಕಟ್ಟಡ, ಯಂತ್ರಸ್ಥಾವರಗಳು, ಮೂಲಸಾಮಗ್ರಿಗಳ ಒದಗಣೆ, ಚಾಲಕಶಕ್ತಿಯ ಸರಬರಾಜು, ಕೆಲಸಗಾರ ವರ್ಗದ, ಆಡಳಿತ ವರ್ಗದ ಹಣಕಾಸಿನ ಮೇಲ್ವಿಚಾರಣೆಯ ಏರ್ಪಾಡು–ಎಷ್ಟು ಕಾಲ ಹಿಡಿಯುತ್ತದೆ? ಇವೆಲ್ಲ ಎಷ್ಟು ತೊಡಕು – ಎಂಬುದನ್ನು ಊಹಿಸಿ.

ಕಡೆಯದಾಗಿ ಇನ್ನೊಂದು ಸಂಗತಿ: ನಮ್ಮ ಜನಸಂಖ್ಯೆ ವರ್ಷಕ್ಕೆ ಶೇಕಡ ಎರಡರಂತೆ ಹೆಚ್ಚುತ್ತಿದೆ. ನಮ್ಮ ದೇಶಗಳಿಗೂ ಇತರ ದೇಶಗಳಿಗೂ – ಉದಾ: ಜರ್ಮನಿ, ಜಪಾನ್ – ಹೋಲಿಕೆ ಏರ್ಪಡಿಸಿ ನಮ್ಮನ್ನು ತೆಗಳುವವರು ಈ ಸಂಖ್ಯೆಯ ಉತ್ಕರ್ಷೆಯನ್ನು ಗಮನಿಸಬೇಕು. ಈ ನಾಡುಗಳು ಚಿಕ್ಕವು, ಒಂದೇ ಬಣದವು, ತಂತ್ರಜ್ಞರ ಶಾಸ್ತ್ರಗಳಲ್ಲಿ ನುರಿತವು, ದೇಶಭಕ್ತಿಯುಳ್ಳವು ಎಂಬುದನ್ನು ನೆನಪಿನಲ್ಲಿ ಇಡಬೇಕು. ಹೊಸದಾಗಿ ಹುಟ್ಟುವ ಮಕ್ಕಳ ಜೊತೆಗೆ ಶಾಲೆಯ ವಯಸ್ಸಿನ ಒಂದೊಂದು ಕೋಟಿ ಮಕ್ಕಳು ವಿದ್ಯಾಶಾಲೆಗಳಿಗೆ ಹೆಚ್ಚು ಹೆಚ್ಚಾಗಿ ಸೇರುತ್ತಾರೆ. ಅವರ ವಿದ್ಯಾಶಿಕ್ಷಣಕ್ಕಾಗಿ, ಶಿಕ್ಷಣ ಪಡೆದವರಿಗೆಲ್ಲ ಉದ್ಯೋಗ ಕಲ್ಪನೆಗಾಗಿ ವೆಚ್ಚ ಮಾಡಬೇಕಲ್ಲವೆ? ಎಂದರೆ ಅವರಿಗೆ ಅವಕಾಶ ಕಲ್ಪಿಸಿ ಸಂಬಳ ಕೊಡಬೇಕಾಗುತ್ತದೆ. ಶಿಕ್ಷಣ ನಿಲ್ಲಿಸುವ ಹಾಗಿಲ್ಲ; ಉದ್ಯೋಗ ಕೊಡುವ ಹಾಗಿಲ್ಲ; ಕೊಡದಿರುವ ಹಾಗಿಲ್ಲ; ಅದು ಮಾಡದೆ ದೇಶಕ್ಕೆ ಉಳಿಗಾಲವಿಲ್ಲ, ಕ್ಷೇಮವಿಲ್ಲ.

1967-68ರಲ್ಲಿ ಅಮೇರಿಕದ ಅಧ್ಯಕ್ಷ ಜಾನ್‌ಸನ್ ಅವರು ಎಂದರು: ಯು.ಎಸ್.ಎ. ಆಯವ್ಯಯಪಟ್ಟಿ 18,600 ಕೋಟಿ ಡಾಲರ್ ಎತ್ತಿದೆವು. (ಡಾಲರಿಗೆ ಏಳೂ ಮುಕ್ಕಾಲು ಬೆಲೆ) ಈ ನಾಲ್ಕು ವರ್ಷಗಳಲ್ಲಿ ನಮ್ಮ ಅರ್ಥಮಂಡಲ (Economy) 75 ಲಕ್ಷ ಮಂದಿಗೆ ಉದ್ಯೋಗ ಒದಗಿಸಿದೆ - ಎಂದರೆ ವರ್ಷಕ್ಕೆ 17 ಲಕ್ಷದಂತೆ ಉದ್ಯೋಗಗಳನ್ನು ಕಲ್ಪಿಸಿ ಕೃತಾರ್ಥವಾಗಿದೆ ಎಂದರು. ಅವರ ಉದ್ಯೋಗವೆಂದರೆ ತಲಾ ವಾರ್ಷಿಕ ವರಮಾನ ಅವರಲ್ಲಿ ತುಂಬಾ ಹೆಚ್ಚು ಎಂಬುದನ್ನು ಮರೆಯಬಾರದು.



ಎಷ್ಟು ದೊಡ್ಡ ಪ್ರಮಾಣದ್ದು ಈ ಸಮಸ್ಯೆ ಎಂಬುದನ್ನು ದೇಶದ ಹಿತವರಾದ ಎಲ್ಲರೂ ಆಲೋಚನೆ ಮಾಡುವ ಸೌಭಾಗ್ಯ ದೊರೆಯಲಿ. ಈ ಜನತೆಯ ಹೊಣೆಗಾರಿಕೆ ಗುರುತರವಾದುದು. ನಿರುದ್ಯೋಗ ನಿವಾರಣೆ ಬರಿಯ ಮಾತಿಂದ ಆಗುವ ಅಥವಾ ಆಕ್ಷೇಪಣೆಯ ಕೆಲಸವಲ್ಲ ಎಂಬುದು ಗೊತ್ತಾಗುತ್ತದೆ.

'ಸುಧಾ', ಯುಗಾದಿ ವಿಶೇಷಾಂಕ, 1970

❑

# 10. ಅನಾಣ್ಯೀಕರಣ : ಸಂಪಾದಕರಿಗೊಂದು ಪತ್ರ

ಮಾನ್ಯ ಸಂಪಾದಕರಿಗೆ, ಪ್ರಜಾವಾಣಿ ದೈನಿಕ

ಹಣದ ಚಲಾವಣೆಯನ್ನು ಕುರಿತು 100 ರೂ. ನೋಟುಗಳ ಅನಾಣ್ಯೀಕರಣ ಆಗಲಿದೆ ಎಂಬಂಶದಲ್ಲಿ ದೊಡ್ಡ ಪಟ್ಟಣಗಳಲ್ಲಿ ಕಳವಳ ಉಂಟಾಗಿದೆ. ಎಂಬತ್ತು-ಎಂಬತ್ತೈದು ರೂ.ಗಳಿಗೆ ನೂರು ರೂಪಾಯಿಗಳ ನೋಟುಗಳನ್ನು ಮಾರುತ್ತಿರುವುದು ಅಗತ್ಯವಿಲ್ಲವೆಂದೂ ಅವನ್ನು ಅನಾಣ್ಯೀಕರಣ ಮಾಡುವುದಿಲ್ಲವೆಂದೂ ಹಣಕಾಸಿನ ಮಂತ್ರಿಗಳು ಪ್ರಕಟಿಸಿದ್ದಾರಂತೆ.

Demonatise ಎಂಬುದನ್ನು ಕೇಳಿಯೇ ಜನಕ್ಕೆ ಭೀತಿ ಬಂದಿದೆ. ಆ ಮಾತನ್ನು ಬಳಸಬೇಕಿಲ್ಲ. ಅದರ ಬೆಲೆಯನ್ನೇನೂ ಕಡಮೆ ಮಾಡಬೇಕಾದ್ದಿಲ್ಲ. 'ನೂರು ರೂಪಾಯಿ ನೋಟಿನ ಮೌಲ್ಯವನ್ನು ಕುಗ್ಗಿಸಲೇಬೇಕು, ಒಂದು ಗೊತ್ತಾದ ದಿನದೊಳಗಾಗಿ ಎಲ್ಲ ಹಳೆಯ ನೋಟುಗಳಿಗೆ ಬದಲಾಗಿ ಅದೇ ಮೌಲ್ಯದ ಹೊಸ ನೋಟುಗಳನ್ನು ಕೊಡುತ್ತೇವೆ, ಉಳ್ಳವರು ಯಾರೂ ನಷ್ಟ ಮಾಡಿಕೊಳ್ಳಬೇಕಾಗಿಲ್ಲ, ಈಗ ತಮ್ಮ ಕೈಯಲ್ಲಿರುವ ಹಳೆ ನೋಟುಗಳು ಚಲಾವಣೆಯಿಂದ ಹೋಗುತ್ತವೆ ಅಷ್ಟೇ; ಎಂದರೆ, ಅವಕ್ಕೆ ಬೆಲೆ ಇಲ್ಲವಾಗುತ್ತದೆ' ಎಂದರಾಯಿತು. ಹೊಸದಾಗಿ ಚಲಾವಣೆಗೆ ತಂದ ನೋಟುಗಳಿಗೆ ಮಾತ್ರ ಅಲ್ಲಿ ಬೆಲೆ ಎಂದು ಜನತೆಗೆ ಗೊತ್ತಾದರಾಯಿತು. ಹಳೆಯ ನೋಟುಗಳಿಗೆ ಬದಲು ಹೊಸ ನೋಟುಗಳು. ಆಗ ಸುಳ್ಳು ನೋಟು, ಕಳ್ಳ ನೋಟು ಎಲ್ಲ ಹೊರಗೆ ಬರುತ್ತವೆ. ಯಾರು ಯಾರು ಎಷ್ಟೆಷ್ಟು ಕಳ್ಳತನದಿಂದ ಲೆಕ್ಕವಿಡದೆ ದಾಸ್ತಾನು ಮಾಡಿದ್ದಾರೊ ಅವರು ಇಂಥವರು ಎಂದೂ ಗೊತ್ತಾಗುತ್ತದೆ. ಅವರು ವರಮಾನ ತೆರಿಗೆ ತೆರುತ್ತಿದ್ದಾರೆಯೆ, ಇಷ್ಟು ಹೆಚ್ಚಿನ ನೋಟುಗಳನ್ನು ಹೇಗೆ ಸಂಗ್ರಹಿಸಿದರು? – ಎಂದು ಕೂಡ ಅವರನ್ನು ಕೇಳಬೇಕಿಲ್ಲ. ಸರ್ಕಾರಕ್ಕೆ ಬಿಟ್ಟ ವಿಷಯ ಅದು. ಅನೇಕ ಜನ ಲಂಚ–ರುಷುವತ್ತು ತೆಗೆದುಕೊಳ್ಳುವವರು 100, 500, 1000ದ ಮೇಲ್ಪಟ್ಟ ರೂಪದಲ್ಲಿ ಅವನ್ನು ದಾಸ್ತಾನು ಮಾಡಿರುತ್ತಾರೆ. ಅವರಿಂಥವರು, ಇಷ್ಟಿಷ್ಟರವರೆಂದು ಗೊತ್ತಾಗುತ್ತದೆ. ಆ ಅವಕಾಶದಲ್ಲಿ ಚಿನ್ನ, ಬೆಳ್ಳಿ ರತ್ನಾದಿಗಳನ್ನು



ಕೊಂಡದ್ದಕ್ಕೆ ಕಡ್ಡಾಯವಾಗಿ ರೆಜಿಸ್ಟರ್ ಮಾಡಿಸಬೇಕು, ಕೊಟ್ಟ–ಸಂದ ರಸೀತಿ ತೆಗೆದುಕೊಳ್ಳಬೇಕು, ಅಷ್ಟು ಜನ ಮಾತ್ರ ಲೆಕ್ಕ ಇಡಬೇಕೆಂದು ನಿರ್ಣಯಿಸಬಹುದು.

1972ರಲ್ಲಿ ಭಾರತದಲ್ಲಿ ಒಟ್ಟು 4932 ಕೋಟಿ ರೂ. ಚಿಲ್ಲರೆ ನೋಟು ಸಂಚಾರದಲ್ಲಿದ್ದವು. 1 ರೂ. ದು 277 ಕೋಟಿ (5.6%), 2 ರೂ. ದು 66 ಕೋಟಿ (1.3%), 5 ರೂ.ನವು ಸು. 355 ಕೋಟಿ (6.6%). ಈ ಮೂರೂ ಸೇರಿ 13.5% ಆಗುತ್ತದೆ. ಆದರೆ 10 ರೂ.ನೋಟು 172.5 ಕೋಟಿ (34.7%), ನೂರು ರೂ.ನವು 2482 ಕೋಟಿ (50.3%). ಎಂದರೆ ಒಟ್ಟು ಚಲಾವಣೆಯ 85% ಭಾಗ 10 ರೂ. ಹಾಗೂ 100 ರೂ.ಪಾಯಿನ ಪ್ರಕಾರದಲ್ಲಿವೆ. ಇನ್ನು ಇದಕ್ಕಿಂತ ಹೆಚ್ಚಿನವು ಎಲ್ಲ ಸೇರಿ 1.4%. ಚಿಲ್ಲರೆ ನಾಣ್ಯ 148 ಕೋಟಿ ರೂ. ಗಳಿವೆ. ಎಂದರೆ 56 ಕೋಟಿ ಜನದಲ್ಲಿ ಎಷ್ಟು ಜನ 100 ರೂ. ನೋಟುಗಳನ್ನು ಬಳಸಬಲ್ಲರು, 10 ರೂಪಾಯನ್ನೇ ಉಂಡೆಯಾಗಿ ಖರ್ಚುಮಾಡಬಲ್ಲವರು? – ಎಂಬುದನ್ನು ಜನ ಪರ್ಯಾಲೋಚಿಸಬೇಕು. 56 ಕೋಟಿಯಲ್ಲಿ ಸುಮಾರು 50 ಕೋಟಿ ಮಂದಿ ಜನಕ್ಕೆ ಒಟ್ಟು ನೋಟುಗಳ ಮೊತ್ತ ದೊರೆಯುವ ಕಾಗದದ ಹಣ 13.5% ಮಾತ್ರ. ದೊಡ್ಡ ನೋಟುಗಳ ಸ್ವಾಮ್ಯ ಶ್ರೀಮಂತರದು. ಪೇಟೆಯಲ್ಲಿ, ಬ್ಯಾಂಕುಗಳಲ್ಲಿ ಎಲ್ಲ ವ್ಯಾಪಾರಗಳಿಗೆ ತೆರುವುದೂ ಕೊಡುವುದೂ ಇವೇ ನೋಟುಗಳ ಮೂಲಕ. ನೋಟುಗಳಿಗೆ ಬದಲಾಗಿ ಸಣ್ಣ ನಾಣ್ಯ, ಚಿಲ್ಲರೆ ಹಣ ಸಿಕ್ಕದೆ ಜನ ಪೇಚಾಡುತ್ತಾರೆ. ಚೆಕ್ ಮೂಲಕ ಸುಮಾರು ಅರ್ಧ ಮಂದಿ ದೊಡ್ಡ ವರ್ತಕರು, ಡಾಕ್ಟರುಗಳು, ಲಾಯರುಗಳು, ಅಂಗಡಿಗಳವರು ಹಣ ತೆಗೆದುಕೊಳ್ಳುವುದಿಲ್ಲ. ಕೈ ಬೆಚ್ಚಗೆ ಮಾಡಿದ ಹೊರತೂ ಯಾವ ಕೆಲಸವನ್ನು ಮಾಡಿ ಕೊಡದವರೂ ಹಾಗೇ. 10 ರೂ. ರುಸುಮು ತೆಗೆದುಕೊಂಡು 5ಕ್ಕೆ ರಶೀದಿ ಕೊಡುವ ಮಂದಿಯೂ ಹಲವರು. ಸರ್ಕಾರದವರಿಗೆ, ರಾಜಕೀಯ ಪುಢಾರಿಗಳಿಗೆ ಧೈರ್ಯ ಬೇಕು ಮಾತ್ರ. ಅವರ ರಹಸ್ಯ ಹೊರಗೆ ಬರುತ್ತದೆಂದು ತಡೆದರೆ ಮಾತ್ರ ಇದನ್ನು ಆಗಗೊಡಿಸುವುದಿಲ್ಲ. ಅಲ್ಲದೆ 5,000 ಕೋಟಿ ರೂ. ಚಲಾವಣೆ 56 ಕೋಟಿ ಜನವುಳ್ಳ ದೇಶಕ್ಕೆ ಹೆಚ್ಚು ಮೊತ್ತದ ಹಣವಲ್ಲ. ತಲಾ 100 ರೂ. ಆಗದು. ವರ್ಷಕ್ಕೆ 2 ರೂ. 3 ರೂ. ಕೆಲಸ ಒಟ್ಟಿನಲ್ಲಿ ಮಾಡುತ್ತದೆಂದು ಲೆಕ್ಕ ಮಾಡಿದರೆ, ತಲಾ 400 ಬಳಕೆ ಆಯಿತು. ಎಂದರೆ ತಿಂಗಳಿಗೆ 30-35 ರೂ. ದಿನಕ್ಕೆ 1 ರೂ ಬಳಕೆಯಿಲ್ಲ. ಒಂದು ನಾಯಿ ಖರ್ಚಲ್ಲ, ಒಂದು ರೂಪಾಯಿಗೆ ಇಂದು ಏನು ಬರುತ್ತದೆ? ಒಂದು ಕಿಲೋ ಅಕ್ಕಿ ಕೂಡಾ ಬರುವುದಿಲ್ಲ ಎಂಬುದನ್ನು ಮನಗಂಡರೆ, ಹಣದುಬ್ಬರ ಮುಂತಾದ್ದನ್ನು ಅತಿ ಮಾಡಿ ಅಬ್ಬರಿಸುವುದು ಕಡಮೆಯಾಗುತ್ತದೆ.

❑

# 11. ಪರಿಷತ್ತಿನ ಕಟ್ಟಡ ಕಾರ್ಯಕಲಾಪ ಬೆಳೆದು ಬಂದ ಬಗೆ

ಇಂದು ಪರಿಷನ್ಮಂದಿರ ಇರುವ ಕಟ್ಟಡಕ್ಕೆ ಮುಂಚೆ ಅದರ ಕಚೇರಿ ಶಂಕರಪುರದ ನಾಲ್ಕನೆಯ ರಸ್ತೆಯಲ್ಲಿತ್ತು. ನಾನು ಪರಿಷತ್ತಿನ ಮಂದಿರದೊಳಕ್ಕೆ ವೆಂಕಣ್ಣಯ್ಯನವರ ಜೊತೆಯಲ್ಲಿ ಅಲ್ಲಿಗೆ ಹೋದುದು 1923ರ ಸುಮಾರಿನಲ್ಲಿ. ಆ ಮಂದಿರಕ್ಕೆ ಬಾಡಿಗೆ ಕೊಡುತ್ತಿತ್ತು. ಅಲ್ಲಿಯೇ ತನ್ನ ಪತ್ರಿಕೆಯ ಕಾರ್ಯವನ್ನೂ ಪುಸ್ತಕ ಸಂಪಾದನಾ ಕಾರ್ಯವನ್ನೂ ನಡಸುತ್ತಿತ್ತು. ಅಲ್ಲಿಗೆ ಯಾವಾಗ ಹೋಯಿತೊ ನಾನರಿಯದ ಸಂಗತಿ. ಅದಕ್ಕೆ ಮೊದಲು ಚಾಮರಾಜಪೇಟೆ ನಾಲ್ಕನೆ ರಸ್ತೆಯಲ್ಲಿ ಈಗಿನ ಜ್ಯೂಬಿಲಿ ನರ್ಸಿಂಗ್ ಹೋಂ ಎದುರಿಗಿರುವ ನಾನಾರಾಯರ ಬಂಗಲೆಯ ಸಣ್ಣ ಕೊಠಡಿಯಲ್ಲಿ ಅದರ ಕೆಲಸ ನಡೆಯುತ್ತಿತ್ತು. ಅದು ಈಗಲೂ ಅಂದಿನಂತೆಯೇ ಇದೆ. ಶಂಕರಪುರದ ಮಂದಿರದಲ್ಲಿ ಕಚೇರಿಯಿರುವಾಗಲೇ ಪಂಪಭಾರತದ ಕೆಲಸ ನಡೆಯುತ್ತಿತ್ತು. ಕಡಬದ ನಂಜುಂಡಶಾಸ್ತ್ರಿಗಳು, ತೋಗೆರೆ ನಂಜುಂಡ ಶಾಸ್ತ್ರಿಗಳು ಸಂಪಾದಕೀಯ ಕೆಲಸಗಳನ್ನೂ ಗ್ರಂಥ ಸಂಪಾದನೆಯ ಕೆಲಸಗಳನ್ನೂ ನಡಸಿಕೊಂಡು ಹೋಗುತ್ತಿದ್ದರು. ಪರಿಷತ್ತಿಗೆ ಒಂದು ಸ್ವತಂತ್ರ ಮಂದಿರವನ್ನು ದೊರಕಿಸಬೇಕೆಂದು ಅಧಿಕಾರಿಗಳು ಪ್ರಯತ್ನಿಸುತ್ತಿದ್ದರು. ಆಗ ಮಿರ್ಜಾ ಸಾಹೇಬರು ದಿವಾನರು. ನೆರವು ಕೊಡುತ್ತೇವೆಂದು ಶಂಕರಪುರದ 1-2ನೇ ಅಡ್ಡ ರಸ್ತೆಯ ನಡುವೆ, ಶಂಕರ ಮಠದ ರಸ್ತೆಯಲ್ಲಿ ಈಗಿನ ಪ್ರೈಮರಿ ಸ್ಕೂಲಿನ ವಠಾರವನ್ನು ಅದಕ್ಕೆ ಒದಗಿಸಿ ಕೊಡುತ್ತೇನೆಂದರು. ಅದೂ ಒಳ್ಳೆಯ ಸ್ಥಳವೇ. ಆಗ ನಿಶ್ಶಬ್ದವಾದ ವಿವಿಕ್ತವಾದ ಸ್ಥಳವೂ ಆಗಿತ್ತು. ಕಾರ್ಯಾರಂಭವಾಗಿರಲಿಲ್ಲ.

ಭಾರತೀಯ ಸ್ವಾತಂತ್ರ್ಯಕ್ಕಾಗಿ ಕಾಂಗ್ರೆಸ್ಸಿನ ಚಳವಳಿ ಇಲ್ಲಿಗೂ ಹಬ್ಬಿ ಬಂದಾಗ ಸಭೆಗಳು ಭಾಷಣಗಳು ಟಿಪ್ಪುಸುಲ್ತಾನರ ಅರಮನೆಯ ಮುಂದೆ ಕೆಲಕಾಲ ನಡೆಯುತ್ತಿದ್ದು ಅದನ್ನು ಮೈಸೂರು ಸರ್ಕಾರ ತಡೆಯಬೇಕಾಗಿ ಬಂದಿತು. ಅಂತಹ ಸಭೆಗಳಿಗೆ ಭಾಷಣಗಳಿಗೆ ಅಡ್ಡಿ ಬಂದ ಮೇಲೆ ಆ ಭಾಷಣಗಳನ್ನು ನಿರ್ವಹಿಸಿದ ಸಂಸ್ಥೆಗಳು ಈಗ ಪರಿಷತ್ತಿರುವ ಖಾಲಿ ನಿವೇಶನದಲ್ಲಿ ಅವನ್ನು ನಡಸುತ್ತಿದ್ದರು. ಈಗ ಶ್ರೀಕಂಠಯ್ಯ ಅಚ್ಚುಕೂಟವಿರುವ ಕಡೆ ಮೊನ್ನೆ ಮೊನ್ನೆಯವರೆಗೂ ಒಂದು ಹೊಂಗೆ ಮರವಿತ್ತು. ಅದರ ಕೆಳಗೆ ಸರದಾರ ವಲ್ಲಭಭಾಯಿ ಪಟೇಲರಂಥವರು, ಮುದವೀಡು ಕೃಷ್ಣರಾಯರು,



ಕಡಪ ರಾಘವೇಂದ್ರರಾಯರು ಭಾಷಣ ಮಾಡುತ್ತಿದ್ದುದನ್ನು ಕೇಳಿದ್ದೇನೆ. ಇದನ್ನು ತಪ್ಪಿಸಲು ಸರ್ಕಾರದಲ್ಲಿ ಬಹುಶಃ ಬ್ರಿಟಿಷ್ ರೆಸಿಡೆಂಟ್ ಒತ್ತಾಯದಿಂದಲೂ ಪ್ರಯತ್ನಗಳು ನಡೆಯುತ್ತಿದ್ದುದರಿಂದ ಮಿರ್ಜಾ ಸಾಹೇಬರು ಆಲೋಚನೆ ಮಾಡಿದರೆಂದು ಕಾಣುತ್ತದೆ. ಶಂಕರಪುರದಲ್ಲಿ ಕೊಟ್ಟಿದ್ದ ಖಾಲಿ ನಿವೇಶನಕ್ಕೆ ಬದಲಾಗಿ ಇನ್ನೂ ಮೇಲಾದ ಈ ಸೈಟನ್ನು ಪರಿಷನ್ಮಂದಿರಕ್ಕೆ ಕೊಡುತ್ತೇವೆಂದು ಪರಿಷತ್ತಿನ ಪ್ರಮುಖರಾಗಿದ್ದ ಬೆಳ್ಳಾವೆ ವೆಂಕಟನಾರಾಯಣಪ್ಪ, ಕರ್ಪೂರ ಶ್ರೀನಿವಾಸರಾವ್, ನಂಗಪುರಂ ವೆಂಕಟೇಶ ಅಯ್ಯಂಗಾರ್ ಮುಂತಾದವರಿಗೆ ತಿಳಿಸಿದರು. ಶ್ರೀ ಡಿ.ವಿ. ಗುಂಡಪ್ಪನವರೂ ಅದನ್ನು ಸ್ವೀಕರಿಸುವುದರಲ್ಲಿ ಪರಿಷತ್ತಿಗೆ ನೆರವಾದರು. ಎಲ್ಲ ರೀತಿಯಿಂದಲೂ ಈ ಪ್ರದೇಶ ಹೆಚ್ಚು ಪ್ರಶಸ್ತವಾಗಿದ್ದಿತು.

ಕರ್ಪೂರ ಶ್ರೀನಿವಾಸರಾಯರಿಗೂ ವೆಂಕಟನಾರಾಯಣಪ್ಪನವರಿಗೂ ಮಂದಿರವನ್ನು ಕಟ್ಟಲು ತುಂಬಾ ಉತ್ಸಾಹವಿದ್ದಿತು. ಮಂದಿರದ ನಕ್ಷೆಯನ್ನು ಹಾಕಿ ಅದಕ್ಕೆ ಬೇಕಾದ ಹಣವನ್ನು ಸಿದ್ಧಗೊಳಿಸಲು ಎಲ್ಲರೂ ಪ್ರಯಾಸಪಟ್ಟರು. ಮೈಸೂರು ಅರಮನೆಯ ಕಡೆಯಿಂದ ಅದಕ್ಕೆ ದ್ರವ್ಯದ ನೆರವೂ ಬಂದಿತೆಂದುಕೊಂಡಿದ್ದೇನೆ. ಕಟ್ಟಡವನ್ನು ಕಟ್ಟುವಾಗ, ಚಾಮರಾಜಪೇಟೆ ಮೊದಲನೆ ರಸ್ತೆಯಲ್ಲಿ ವಾಸವಾಗಿದ್ದ ಕರ್ಪೂರ ಶ್ರೀನಿವಾಸರಾಯರು, ಮೂರನೆ ರಸ್ತೆಯಲ್ಲಿಯೇ ಇದ್ದ ನಂಗಪುರಂ ವೆಂಕಟೇಶ ಅಯ್ಯಂಗಾರ್‌ರವರು ಪ್ರತಿ ದಿನ ಅಲ್ಲಿಗೆ ಬಂದು ಹೋಗುತ್ತಿದ್ದರು. ಯಾರು ಬರಲಿ, ಬಾರದಿರಲಿ ಪರಿಷತ್ತಿನ ಸಮಸ್ತ ಕಾರ್ಯಕಲಾಪಗಳನ್ನೂ ತಾಯಂತೆ, ಬಂಟನಂತೆ ನಡಸಿಕೊಂಡು ಹೋಗುತ್ತಿದ್ದ ಬೆಳ್ಳಾವೆ ವೆಂಕಟನಾರಾಯಣಪ್ಪನವರು ಬಸವನಗುಡಿಯಲ್ಲಿದ್ದ ತಮ್ಮ ಮನೆಯಿಂದ ತಪ್ಪದೆ ಎಂಟು ಗಂಟೆಗೊ ಎಂಟೂವರೆಗೊ ಬಂದು ಕಟ್ಟಡ ಏಳುವುದನ್ನು ನೋಡಿಕೊಂಡು ಕಟ್ಟಡಕ್ಕೆ ಬೇಕಾದ ಕಲ್ಲು, ಇಟ್ಟಿಗೆ, ಗಾರೆ ಇತ್ಯಾದಿ ಪ್ರತಿಯೊಂದನ್ನೂ ಪರೀಕ್ಷಿಸುತ್ತಿದ್ದರು. ಗಾರೆ ಅರೆಯುವುದಕ್ಕೆ ಮುಂಚೆ ಮರಳೆಷ್ಟು, ಸುಣ್ಣವೆಷ್ಟು ಹಾಕಬೇಕು, ಎಷ್ಟು ನುಣ್ಣಗೆ ಅರೆಯಬೇಕು ಎಂಬುದನ್ನು ಪ್ರತಿಮಜಲಲ್ಲಿಯೂ ಪರೀಕ್ಷೆ ಮಾಡಿ ಆ ಕಟ್ಟಡ ನೂರು ವರ್ಷಕಾಲ ಗಟ್ಟಿಯಾಗಿರುವಂತೆ ಮಾಡಲು ಸರ್ಪದಂತೆ ಕಾದು ನೋಡಿಕೊಂಡರು. ಅದರ ರಚನೆ ತುಂಬ ಕಷ್ಟಪಟ್ಟಾಗ ಬೇಕಾಯಿತು. ಇನ್ನಾರೂ ಮೇಲ್ಪಡಿಸಲೊ ಕೀಳ್ಪಡಿಸಲೊ ಆಗದಂತೆ ಕಟ್ಟಿದ್ದು. ಅದನ್ನು ಮಾರ್ಪಡಿಸಲು ಇತರರ ಸಲಹೆಗಳಿಗೆ ಅವಕಾಶ ಕೊಡಲಾಗದಷ್ಟು ಭದ್ರವಾದದ್ದು ಆ ಮಂದಿರ.

ಆ ಸಮಯದಲ್ಲಿ ಪರಿಷತ್ತಿನ ಈಗಿನ ಸಭಾ ಮಂದಿರಕ್ಕೆ ಬದಲಾಗಿ ಎರಡು ಕೋಣೆಗಳನ್ನು ಕಟ್ಟಿರುವುದನ್ನು ಕಟ್ಟಡ ಏಳುವಾಗ ಆಗಾಗ ಬಂದು ನೋಡುತ್ತಿದ್ದ ಮಿರ್ಜಾ ಸಾಹೇಬರು ತಮ್ಮ ಗುರುಗಳಾದ ವೆಂಕಟನಾರಾಯಣಪ್ಪನವರನ್ನು ಕಂಡು 'ನಿಮಗೆ ಸಭೆ ಸಮಾರಂಭಗಳಿಗಾಗಿ ಒಂದು ಹಾಲ್ ಬೇಡವೆ? ಈ ಭಾಗವನ್ನು

ಎರಡು ರೂಮುಗಳಾಗಿ ಒಡೆಯಬೇಡಿ; ಒಂದು ಹಾಲ್ ಮಾಡಿಕೊಳ್ಳಿ' ಎಂದು ಬೋಧನೆ ಮಾಡಿ, ಹಾಲ್ ವ್ಯವಸ್ಥೆ ಮಾಡಿದರು. ಹೆಚ್ಚು ಜನ ಪರಿಷತ್ತಿಗೆ ಸದಸ್ಯರಾಗಿರಲಿಲ್ಲ. ಆಗ ಅಲ್ಲಿ ಉಪನ್ಯಾಸಾದಿಗಳು ಹೆಚ್ಚಾಗಿ ಆಗುತ್ತಿರಲಿಲ್ಲ. ಪರಿಷತ್ತಿನ ಕಾರ್ಯವ್ಯಾಪ್ತಿಯೇ ಮಿತವಾಗಿದ್ದು ಗ್ರಂಥ ಪ್ರಕಟನೆ, ಪರಿಷತ್ಪತ್ರಿಕೆಯ ಪ್ರಕಟನೆ, ಆಗ ಈಗ ಹೊರಗಿನಿಂದ ಬಂದ ಕರ್ನಾಟಕ ವಿದ್ವಾಂಸರ ಭೇಟಿ - ಇಷ್ಟು ಮಾತ್ರ ಅಲ್ಲಿನ ಕೆಲಸವಾಗಿತ್ತು. ಬಹುಮಟ್ಟಿಗೆ ಮೊದಲ ಕೆಲವು ವರ್ಷಗಳಲ್ಲಿ ಹೊರತು ಉಳಿದಂತೆ ಮೊನ್ನೆ ಮೊನ್ನೆಯವರೆಗೆ - ಶ್ರೀ ನಾರಾಯಣ ಅವರು ಸ್ವರ್ಣಮಹೋತ್ಸವ ಏರ್ಪಡಿಸಿ ಜೊತೆಗೆ ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನವನ್ನು ನಡಸುವವರೆಗೂ – ಪರಿಷತ್ತಿನ ಸಮ್ಮೇಳನವಾವುದೂ ಬೆಂಗಳೂರಲ್ಲಿ ನಡೆಯಲಿಲ್ಲ. ಸುಮಾರು 1932-33 ರಲ್ಲಿ ಮಂದಿರ ಮುಗಿದು ಬಳಸಿಕೊಳ್ಳತೊಡಗಿದ ಮೇಲೆ, 1933ರಲ್ಲಿ ಹುಬ್ಬಳ್ಳಿಯ ಸಾಹಿತ್ಯ ಸಮ್ಮೇಳನ ಆದ ಮೇಲೆ, ಶ್ರೀ ಗುಂಡಪ್ಪನವರು ಅದರ ಉಪಾಧ್ಯಕ್ಷರಾದ ಮೇಲೆ, ಪರಿಷತ್ತಿನ ಕಾರ್ಯಪ್ರಪಂಚ ವಿಸ್ತಾರವಾಗಿ ಅದಕ್ಕೆ ಒಂದು ಹೊಸ ನೆಲಸು, ನಿಲವು ಬಂದವು. ಹೆಚ್ಚು ಜನರನ್ನು ಆಕರ್ಷಿಸಿ ವಸಂತ ಸಾಹಿತ್ಯೋತ್ಸವ, ಗಮಕ ಪಾಠಕ್ರಮ, ಸಾಹಿತ್ಯ ಪರೀಕ್ಷೆಗಳ ವ್ಯವಸ್ಥೆ, ಪುಸ್ತಕ ಮತ್ತು ಕಲಾಪ್ರದರ್ಶನ, ವಿಶೇಷೋಪನ್ಯಾಸಗಳು ಮುಂತಾದುವನ್ನು ಅವರು ಕೈಕೊಳ್ಳಲು ಪರಿಷತ್ತಿನ ಕಾರ್ಯ ವಿಸ್ತಾರಗೊಂಡಿತು. ಬಂದವರಿಗೆ ಜಲಮಲಗಳಿಗೆ ಮರೆಯಾಗಿ ಅವಕಾಶವಿರುವಂತೆ ಹೊರಗೆ ಹಿತ್ತಿಲು ಬಚ್ಚಲಾಗುವಂತೆ ಎರಡು ಸಣ್ಣ ವಿಸ್ತರಣಗಳನ್ನು ಹಿಂದೆ ಹೊಂಗೆ ಮರವಿದ್ದ ಕಡೆ ಕಟ್ಟಿಸಿದರು. ಸ್ಥಳ ಇಕ್ಕಟ್ಟೆನ್ನಲು ತಾವೇ ಹೋಗಿ ಕುಳಿತು ಸಾಕಾದೀತು ಎಂದು ಹೇಳಿ ಗುಂಡಪ್ಪನವರೇ ಇದ್ದುದರಲ್ಲಿ ಮುಗಿಸಿದರು. ಪರಿಷತ್ತಿನ ಅತಿಥಿಗಳು ಉಳಿಯಲು ಅವಕಾಶವಾಗಲೆಂದು ಅವರಿಗೆ ಅಡಿಗೆ–ಸ್ನಾನಗಳಿಗೆ ಅವಕಾಶ ಪಡೆದುಕೊಳ್ಳುವಂತೆ ಈಗ ಅಚ್ಚುಕೂಟವಿರುವಲ್ಲಿ ಏರ್ಪಾಡಾಯಿತು. ಮುಂದೆ 1938ರಿಂದ ಬಿ.ಎಂ.ಶ್ರೀಯವರ ಉಪಾಧ್ಯಕ್ಷತೆಯ ಕಾಲದಲ್ಲಿ ಒಂದು ಅಚ್ಚುಕೂಟವನ್ನೇರ್ಪಡಿಸಿದಾಗ ಆ ಭಾಗ ಪೂರ್ತಿಯಾಗಿ ಅಚ್ಚಿನ ಮನೆಯಾಯಿತು. ಉತ್ತರ ಕಾಲದಲ್ಲಿ ಇತರ ಆಧಿಪತ್ಯದಲ್ಲಿ ಅದು ವಿಸ್ತಾರಗೊಂಡು, ನಿಘಂಟಿನ ಕಾರ್ಯ ಬೆಳೆದಂತೆ ಅದಕ್ಕೆ ಒಂದು ಉಪ್ಪರಿಗೆಯೂ ಇತರ ವಿಶೇಷ ಸಜ್ಜೂ ಅಲಂಕರಣಗಳೂ ಉಂಟಾದವು.

ಪರಿಷತ್ತಿನ ಬೆಳ್ಳಿಯ ಹಬ್ಬದ ಸಮಾರಂಭ ಸಮಯದಲ್ಲಿ ಪರಿಷತ್ತಿನ ಸಭಾ ಮಂದಿರದಲ್ಲಿ ವೇದಿಕೆಯನ್ನು ಒಂದು ಸಣ್ಣ ರಂಗಮಂಟಪವಾಗಿ ಮಾರ್ಪಡಿಸಬೇಕೆಂದು ಹಿಂದಿನ ಹಿರಿಯರು ಒಪ್ಪದಿದ್ದರೂ ಆಗ ಕಾರ್ಯದರ್ಶಿಗಳಾಗಿದ್ದ ಬಿ. ವೆಂಕೋಬರಾಯರೂ ನಾನೂ ಸದ್ದು ಮಾಡದೆ ಸ್ಟೀಲ್ ಕನ್‌ಸ್ಟ್ರಕ್ಷನ್ ಕಂಪನಿಯ ಶ್ರೀ ಸೀತಾರಾಂ ಅವರನ್ನು ಪ್ರಾರ್ಥಿಸಿ ಚೌಕಟ್ಟುಗಳನ್ನು, ಹಿಡಿಗೊತ್ತುಗಳನ್ನು (clamp) ಪರದೆಗಳಿಗೆ ಗೊತ್ತು ಏರ್ಪಾಡುಗಳನ್ನು ಕಟ್ಟಿಸಿದೆವು. ಅವರು ಅದನ್ನು ಉಚಿತವಾಗಿ ಮಾಡಿಕೊಟ್ಟರೆಂದು ನನ್ನ ನೆನಪು. ಎರಡು ಸಾಲಿನ ಒಳಪರದೆಗಳಿಗಾದರೂ ಅವಕಾಶಗೊಂಡಂತೆ



ಒಳಮಾಳಿಗೆಯಲ್ಲಿ ಏರ್ಪಾಡಿರುವಂತೆ ಬಣ್ಣದ ಬಟ್ಟೆಗಳನ್ನು ಹೊಲಿಸಿ ಸಜ್ಜು ಮಾಡಿದೆವು. ಅಂಕದ ಪರದೆ, ಒಂದೊಂದು ಇಕ್ಕಡೆಯ ಹೊರ ಪಕ್ಕಕ್ಕೆ ಅಂಕದ ಪರದೆಯ ರಚನೆಗೆ ಪ್ರೊ. ಕೆ. ವಿ. ಅಯ್ಯರವರನ್ನು ಪ್ರಾರ್ಥಿಸಿದೆವು. ಅದಕ್ಕೆ ಸಂಬಂಧಿಸಿದ ಸಮಸ್ತ ಏರ್ಪಾಡುಗಳನ್ನೂ ವಹಿಸಿ ಅಂಕದ ಪರದೆ ಸ್ವತಂತ್ರವಾಗಿ ಆಡಿ ತೆರೆದು ಎರಡೂ ಕಡೆ ಸರಿಯುವಂತೆ ಮಾಡಲು ಬೇಡಿಕೊಂಡೆವು. ಅವರು ಪೂರ್ತಿ ಒಂದು ದಿನ ಇದಕ್ಕಾಗಿ ದುಡಿದು ಅದು ಲಕ್ಷಣವಾಗುವಂತೆ ಮಾಡಿಕೊಟ್ಟರು. ಪರಿಷತ್ತಿನ ಕೈಯಲ್ಲಿ ಹಣವಿಲ್ಲದ ಕಾಲ; ಹಬ್ಬದ ಸಂಭ್ರಮಕ್ಕೆ ಅಗತ್ಯವಾದ ಉಪಪತ್ತಿಯೆಲ್ಲಾ ಕೂಡಿದರೂ ಹೆಚ್ಚಿನದೇನಲ್ಲ. ಅಂಥ ಸಂದರ್ಭದಲ್ಲಿ 251- 300 ರೂ. ವೆಚ್ಚ ಹಿಡಿಯಿತು. ಈ ಕೆಲಸವನ್ನು – ಹೊಸಗನ್ನಡ ರಂಗ ವಿಸ್ತಾರವಾದಲ್ಲಿ ಅವರಿಗೆ ಒಳಗೆ ತುಂಬಾ ಅಭಿಮಾನವಿದ್ದರೂ ಸದ್ಯಃ – ಸುಮಾರು ಶ್ರೀಯರ ಕಣ್ಣು ತಪ್ಪಿಸಿ ಎಂಬಂತೆ ಮಾಡಿದ್ದು ಎಲ್ಲರಿಗೂ ಪೂರ್ಣ ತೃಪ್ತಿ ತರಲಿಲ್ಲ.

ಆಗ ಮಾಡದಿದ್ದರೆ ಅದು ನೆರವೇರಲು ಬಹುಕಾಲ ಹಿಡಿಯುತ್ತಿತ್ತು. ಪರಿಷತ್ತಿನ ಒಂದು ನಾಟಕ ಶಾಖೆ ತೆರೆದು ಅದರ ನಾಟಕಗಳನ್ನು ಆಡುವುದಕ್ಕಾಗಲಿ, ಅಥವಾ ಪ್ರಯೋಗಗಳಾಗಿ ವಿಲಾಸೀ ತಂಡಗಳವರು ತಮ್ಮ ನಾಟಕಗಳನ್ನಾಡುವುದಕ್ಕಾಗಲಿ ಒಂದು ಸಣ್ಣ ರಂಗಮಂಟಪ ಏರ್ಪಡಬೇಕೆಂದು, ಬೇಕಾದರೆ ಅಂಥವರಿಂದ ಒಂದು ಸಣ್ಣ ರುಸುಮನ್ನು ಪಡೆದು ಅದನ್ನು ಬಾಡಿಗೆಗೆ ಕೊಟ್ಟರೆ ಒಂದು ವರ್ಷದಲ್ಲಿ ನಾವು ಖರ್ಚುಮಾಡಿದ ಹಣ ನಮಗೆ ಹಿಂದಕ್ಕೆ ಬರುತ್ತದೆಂದು ಹೇಳಿ ಹಿರಿಯರನ್ನು ಹೇಗೋ ಸಮಾಧಾನ ಮಾಡಿದೆವು. ಅವರಿಗೆ ನಮ್ಮ ಮೇಲಿದ್ದ ಪ್ರೀತಿಯಿಂದ ಅದನ್ನು ಒಪ್ಪಿಕೊಂಡರು. ನಮ್ಮ ತರ್ಕ ಹಣ ಹೀಣ ಹಿಡಿಯಿತು. ಎರಡು ಕಡೆಯೂ ಇದ್ದ ಕೊಠಡಿಗಳು ನೇಪಥ್ಯ ಗೃಹಗಳಾಗುವುದಕ್ಕೆ ಅನುಕೂಲವೆಂದು ತಿಳಿಸಿದೆವು. ದೊಡ್ಡವರು ಒಪ್ಪದಿದ್ದರೆ ಎರಡೂ ಕಡೆಯ ಗೋಡೆಗಳಲ್ಲಿ ತೆರೆಯುವ ಕಿಟಿಕಿಗಳಂತಹ ಸ್ಥಳಗಳನ್ನು ವಿಂಗಡಿಸಿಕೊಂಡು ಎರಡೂ ಕಡೆಗಳಿಂದ ದೀಪಗಳ ವಿಶೇಷ ಸಲಕರಣೆಗಳನ್ನು ಮಾಡಿಕೊಳ್ಳಬಹುದೆಂದು ಮಾಡಿದ ಪ್ರಯತ್ನವೂ ನೆರವೇರಲಿಲ್ಲ. ಬಾಗಿಲವರೆಗೂ ವೇದಿಕೆಯನ್ನು ವಿಸ್ತರಿಸಲು ಆಗಲಿಲ್ಲ. ಎರಡೂ ಕೊಠಡಿಗಳಲ್ಲಿ ನೀರಿನ ವ್ಯವಸ್ಥೆಯನ್ನು ಮಾಡಿಕೊಂಡರೆ ವೇಷ ಸಜ್ಜಿಕೆ ಅನುಕೂಲಗಳನ್ನು ಮಾಡಿಕೊಳ್ಳುವ ಅವಕಾಶವೂ ಉಂಟಾಗಿಲ್ಲವೇನೋ.

ಅಲ್ಲಿಂದೀಚೆಗೆ ಬಂದ ಪರಿಷದಧ್ಯಕ್ಷರು ಕೆಲವರು ರಂಗಸ್ಥಳವನ್ನು ಉತ್ತಮಪಡಿಸಲು ಕೆಲವು ಕಾರ್ಯಗಳನ್ನು ಕೈಗೊಂಡರು; ಸಭಾ ಮಂದಿರಕ್ಕೆ ಪೀಠೋಪಕರಣಗಳನ್ನು ಒದಗಿಸಿದರು. ಆ ಮುಂಚೆ ತೂಬುಗೆರೆ ನಂಜಪ್ಪನವರು, ಇನ್ನೊಬ್ಬರಿಬ್ಬರು ಸಭಾಮಂದಿರಕ್ಕೆ ಬೇಕಾದ ಜಮಖಾನೆಗಳನ್ನು ಒದಗಿಸಿದ್ದರು. ಶ್ರೀ ಶಿವಮೂರ್ತಿ ಶಾಸ್ತ್ರಿಗಳ ಕಾಲದಲ್ಲಿ ಮೇಯರ್ ಸೀತಾರಾಂ, ಕೋಶಾಧಿಕಾರಿಗಳಾದ ಶ್ರೀ ವರದರಾಜನ್

ಮುಂತಾದವರು ಇನ್ನಷ್ಟು ಸಜ್ಜು ಒದಗಿಸಿದರು. ಆ ಬೆಳ್ಳಿ ಹಬ್ಬದ ಸಮಯದಲ್ಲಿಯೇ ಒಂದು 'ನಿಯಾನ್ ಸೈನ್' ದೀಪದ ವ್ಯವಸ್ಥೆಯ ಸಂಬಂಧದಲ್ಲಿ 'ಕರ್ಣಾ(ರ್ನಾ)ಟಕ'ದ 'ನ' 'ಣ' ಕೋಲಾಹಲ ಎದ್ದು, ಕಡೆಗೆ ಕನ್ನಡ ಸಾಹಿತ್ಯ ಪರಿಷತ್ತಾಯಿತು. 'ಣ' ಹೋಗಿ 'ನ' ಆಗಿ, ಕಡೆಗೆ 'ಕನ್ನಡ' ಎಂಬ ಹೆಸರಿಗೆ ಸರ್ವಸದಸ್ಯರ ಸಾರಸ್ವತ ಅಂಗೀಕಾರ ದೊರೆತದ್ದು ಬಳ್ಳಾರಿ ಸಮ್ಮೇಳನದಲ್ಲಿ. ಆಗ ಪರಿಷದುಪಾಧ್ಯಕ್ಷರು 'ಶ್ರೀ'; ಸಮ್ಮೇಳನದ ಅಧ್ಯಕ್ಷರು ಶ್ರೀ ದಿವಾಕರ ರಂಗರಾಯರು. ಜಮಖಂಡಿಯಲ್ಲಿ ಒಂದು ಕಾರಣದಿಂದ, ಬಳ್ಳಾರಿಯಲ್ಲಿ ಈ ಕಾರಣದಿಂದ, ನೆರೆದ ಸದಸ್ಯರ ಕೂಟಗಳು ಪರಿಷತ್ತಿನ ಮೈಲಿಗಲ್ಲುಗಳೆನ್ನಬೇಕು. ಶ್ರೀ ಜಿ. ನಾರಾಯಣರು ಅಧ್ಯಕ್ಷರಾದ ಮೇಲೆ ಪಂಪಮಹಾಕವಿ ರಸ್ತೆಯ – ಆಗಿನ್ನೂ ಹಾರ್ಡಿಂಗ್ ರಸ್ತೆ – ಕಡೆಗೆ ಇರುವ ಒಂದು ಕೊಠಡಿ ವಿಸ್ತರಣವನ್ನು ಮಾಡಿಕೊಂಡದ್ದಾಗಿದೆ. ಪರಿಷತ್ತಿನಲ್ಲಿ ನಡೆವ ಪ್ರದರ್ಶನಗಳನ್ನು ಕಾರ್ಯಕ್ರಮಗಳನ್ನು ಪ್ರಕಟಿಸಲು ಒಂದು ಕಬ್ಬಿಣದ ಕೊಕ್ಕರೆ ಚೌಕಟ್ಟನ್ನು ಗೇಟಿನ ಬಳಿ ಸ್ಥಾಪಿಸಿದೆ. ಆ ಚೌಕಟ್ಟನ್ನು ಮಾಡಿಕೊಟ್ಟವರೂ ಶ್ರೀ ಸೀತಾರಾಂ ಅವರೇ. 1935ರಿಂದ ಅದನ್ನು ಹಾಗೆಯೇ ಉಳಿಸಲಾಗಿದೆ. ಅಷ್ಟೇನೂ ಚೆಲುವಲ್ಲದ ಅದರ ಮೇಲೆ ಸಣ್ಣ ಕಪ್ಪು ಹಲಗೆಯನ್ನಿಟ್ಟು ಸುದ್ದಿಯನ್ನು ಪ್ರಕಟಿಸಬೇಕಾದ ಆ ಏರ್ಪಾಡು ಈ 34 ವರ್ಷಗಳ ಉಳಿಕೆ. ಅದರ ರೂಪಾಂತರ, ವಿಸ್ತಾರ, ಚೆಲುವು ನಿಲವು ನಾಡಿನ ಅದೃಷ್ಟಕ್ಕೆ ತೆರೆಯಬೇಕು.

ಮೊದಮೊದಲು ನಾಲ್ಕನೇ ರಸ್ತೆ ಕಡೆಯ ಯಾವುದೋ ಸೈಟಿನ ಒಂದು ಸ್ಥಳ ಸಂಕೋಚವನ್ನು ಸರಿಪಡಿಸಿಕೊಳ್ಳುವುದು ಕಷ್ಟವಾಗಿತ್ತು. ನೆರೆಮನೆಯ ಒಡೆಯರಿಗೆ ಹೇಳಿ ಅದನ್ನು ಸರಿಪಡಿಸಿಕೊಳ್ಳಲಾಯಿತು. ಇಲ್ಲವಾದರೆ ಅಲ್ಲೊಂದು ಕೋಚುಭಾಗ ಮತ್ತೊಬ್ಬರದಾಗಿಯೊ ಮುನಿಸಿಪಲ್ ಹಿತ್ತಲ ರಸ್ತೆಯಾಗಿಯೊ ಉಳಿದುಕೊಂಡು ಉದ್ದ ಒಂದು ಸೀಳುಭೂಮಿಗೆ ಕೋರ್ಟು ಕಚೇರಿ ಹತ್ತಬೇಕಾದ ಅಗತ್ಯ ತಪ್ಪಿತು. 'God fulfils himself in many ways' - ಎನ್ನುತ್ತಾರಲ್ಲವೆ! ಅವನ ಕ್ರಿಯಾವಿಲಾಸ ದೊಡ್ಡದು. ಹಳೆಯ ಕಟ್ಟಡದ ಹಿಂಭಾಗದಲ್ಲಿದ್ದ 4ನೆಯ ರಸ್ತೆಯ ಕಡೆ ನೇರ ನಡುವಿದ್ದ ಒಂದು ದೊಡ್ಡ ಬೇವಿನ ಮರ ಅನೇಕ ಜನಾರ್ದನ ಕಚೇರಿಗಳಿಗೆ ಆಶ್ರಯವಾಗಿದ್ದು– 'The good is the enemy of the better' ಎನ್ನುತ್ತಾರೆ – ಹೊಸ ಕಟ್ಟಡದ ಹುಟ್ಟಿಗೆ ಅದು ಆತ್ಮಾರ್ಪಣ ಮಾಡಿತು.

ಸ್ವರ್ಣೋತ್ಸವ ಸ್ಮಾರಕವಾಗಿ ಹೊಸ ಮಂದಿರದ ಪ್ರಾರಂಭೋತ್ಸವ ನಡೆಯುವ ಈ ಸಮಯದಲ್ಲಿ ಪರಿಷತ್ತಿನ ಕಟ್ಟಡ ಕಾರ್ಯಕಲಾಪಗಳು ಎಷ್ಟು ಶ್ರೀಮಂತವಾಗಿ ಬೆಳೆದಿವೆ ಎಂಬುದನ್ನು ತಾರತಮ್ಯ ಸೂಚಿಕೆಯಾಗಿ ಸಂಕ್ಷೇಪವಾಗಿ ಇಲ್ಲಿ ತಿಳಿಸಲು ಯತ್ನಿಸಿದೆ. ಶ್ರದ್ಧೆ ಭಕ್ತಿಗಳು ಕುದುರಿದರೆ ವಿಪುಲತೆ ಸಂಪನ್ನತೆ ಒದಗುತ್ತವೆ. ಸರ್ವಲಬ್ಧಿಃ ಕಾಲಮಪೇಕ್ಷತೆ ಎನ್ನುತ್ತಾರೆ. ಕಾಲಲಬ್ಧಿ ಅದಕ್ಕೆ ಈಗ ದೊರೆತಿರುವುದು ನಾವು ಕಾಣುವ ಸೌಭಾಗ್ಯ: ನಮ್ಮ ಕಾಲದ್ದು.



ಕನ್ನಡ ಕೆಲಸ ನಾಡಿನ ಕೆಲಸ; ಕನ್ನಡವೆಂದರೆ ದೇಶ ಮಾತ್ರವಲ್ಲ, ಭಾಷೆ ಮಾತ್ರವಲ್ಲ; ಸಾಹಿತ್ಯ, ಕಲೆ, ಜನತೆ – ಇವನ್ನೆಲ್ಲ ಒಟ್ಟಿನಲ್ಲಿ ಕೂಡಿಸಿಕೊಂಡ ಸರ್ವತೋಮುಖವಾದ ಬೆಳವಣಿಗೆ. ಅದು ಉಂಟಾಗಲೆಂದೂ, ಅಖಿಲಭಾರತ ಜೀವನಕ್ಕೆ ತಮ್ಮ ಕಾಲದಲ್ಲಿ ಉತ್ತಮವಾದ ಕೊಡುಗೆ ರೂಪಗೊಂಡು ಭಾರತದ ಕೀರ್ತಿಯಲ್ಲಿ, ಪ್ರಗತಿಯಲ್ಲಿ ಕರ್ನಾಟಕವು ತನ್ನದಾದ ಒಂದು ವಿಶಿಷ್ಟ ಕೊಡುಗೆಯನ್ನು ಈ ಕಾಲದಲ್ಲಿಯೂ ಕೊಡುವಂತಾಗಲಿ ಎಂದೂ, ಅದಕ್ಕೆ ಪರಿಷತ್ತು ಸಲ್ಲಿಸುವ ಸೇವೆ ಅತಿಶಯವೂ ವಿಶಿಷ್ಟವೂ ಆಗಲಿ ಎಂದೂ ಹಾರೈಸುತ್ತೇನೆ.

ಕನ್ನಡ ನುಡಿ, ಜನವರಿ 1, 1974

❑

# 12. ರಾಜ್ಯೋತ್ಸವ ಚಿಂತನೆ

ರಾಜ್ಯೋತ್ಸವ ಸಂಬಂಧದಲ್ಲಿ ಒಂದೆರಡು ಮಾತು ನನ್ನದಾಗಬೇಕೆಂದಾಗ ಮುಂದಿನದನ್ನು ಹೇಳುತ್ತಿದ್ದೇನೆ. ರಾಜ್ಯ ನಮ್ಮ ಕರ್ನಾಟಕ ರಾಜ್ಯ. ಇದು ಭರತ ಖಂಡದ 23-23 ರಾಜ್ಯಗಳಲ್ಲಿ ಒಂದು. ಹಿಂದೆ ಕರ್ನಾಟಕ ಎಂಬ ಹೆಸರಿಂದಲೇ ರಾಜ್ಯ ಸ್ವತಂತ್ರವಾಗಿ ಇಂದಿನ ಅಖಂಡತೆಯನ್ನು ತೋರಿಸುವಂತೆ ಇದ್ದಿತೊ ಇಲ್ಲವೊ ಕಾಣೆ. ಇದರ ಭಾಗಗಳು ವಾನವಾಸಿಕ, ಕುಂತಳ, ಪುನ್ನಾಟ, ಮಹಿಷಮಂಡಲ ಮುಂತಾದ ಹೆಸರುಗಳಲ್ಲಿ ನೆಲಸಿತ್ತು; ಕರ್ನಾಟ ರಾಜ್ಯಲಕ್ಷ್ಮೀ ಎಂದು ಹೇಳಿದ ಆಂಧ್ರ ಶ್ರೀನಾಥನ ಮಾತಲ್ಲಿ ಅದು ದೊರೆಯುತ್ತಿದ್ದರೂ. ಇಂದಿನ ಬೀದರ್, ಚತ್, ಜಮಖಂಡಿ ಮುಂತಾದವೂ ಬೆಳಗಾಂ, ಬಿಜಾಪುರ, ಉತ್ತರ-ದಕ್ಷಿಣ ಕನ್ನಡ ಜಿಲ್ಲೆಗಳು, ಅನಂತಪುರ, ಕೊಳ್ಳೇಗಾಲ, ಹಳಗಾಲದಲ್ಲಿ ಮೈಸೂರೆಂದೂ ಉತ್ತರ ಕರ್ನಾಟಕವೆಂದೂ ಸೇರಿದ್ದ ಇತರ ಭಾಗ ಬೊಂಬಾಯಿ ಆಧಿಪತ್ಯ, ಮದ್ರಾಸ್ ಆಧಿಪತ್ಯ, ಹೈದರಾಬಾದ್ ರಾಜ್ಯಗಳಲ್ಲಿ ಹಂಚಿಹೋಗಿದ್ದ ರಾಜ್ಯವೆಲ್ಲ ಸೇರಿ ಕರ್ನಾಟಕ ಎಂಬ ಈ ರಾಜ್ಯವಾದ್ದು 1956ರಲ್ಲಿ. ಇಲ್ಲಿಗೂ ಇನ್ನಷ್ಟು ಭಾಗ ಇದಕ್ಕೆ ಸೇರಬೇಕಾದ್ದಿದೆ. ಆದರೂ ಇಷ್ಟು ಮಟ್ಟಿನ ತುಂಬು, ವಿಸ್ತಾರ, ಜನಸಂಪತ್ತಿ ಆಸ್ಥೆಯ ಬೀಡಾಗಿ ಕರ್ನಾಟಕವಾದುದು ನಮಗೆ ಹೆಮ್ಮೆಯ ವಿಷಯ. ಭರತ ಖಂಡಕ್ಕೆ ವಿರೋಧಿಯಾಗಿ ಅಲ್ಲ. ಅದು ತಾಯಿ, ಅದರ ಮಕ್ಕಳು ಈ ಎಲ್ಲ ರಾಜ್ಯಗಳು. ಅದು ಒಟ್ಟು ಒಂದು ಒಡಲು, ಅದರ ಅಂಗಾಂಗಗಳು ನಾವು. ಇವುಗಳಲ್ಲಿ ಯಾವುದಕ್ಕೆ ಕುಂದು ಕೊರತೆ, ಲೋಪ ದೋಷ ಬಂದರೂ ಒಡಲಿಗೆ ಕುಂದು. ಆ ಒಡಲೇ ಸ್ವಸಂಪೂರ್ಣವಾಗಿ ಒಂದು ಕೀರ್ತಿ ಮತ್ತು ವರ್ಚಸ್ಸಿನ ಜೀವವಾಗಿ ಉಳಿಯದಾದರೆ, ಇವುಗಳೆಲ್ಲ ಚೆದರಿದರೆ ಒಟ್ಟು ನಾಡಿನ ಜೀವ ಶಿಥಿಲವಾದೀತು.

ಒಂದು ಊರಿನ ಪ್ರತಿ ಮನೆಯೂ ಒಂದೊಂದು ಸ್ವತಂತ್ರ ಭೂಭಾಗ; ವಠಾರ ನೆಲಸು. ಇಂಥ ಮನೆ, ಅಲ್ಲಿರುವ ಜನ, ಮನೆತನ, ಅಲ್ಲಿನ ಜೀವಾಂಶಗಳು, ಅಲ್ಲಿನ ಏಳ್ಗೆ ಪ್ರಯತ್ನಗಳಿಂದ ಒಟ್ಟು ಒಂದು ದೊಡ್ಡ ಊರಿನ ತುಂಬು ಹೊಮ್ಮುತ್ತದೆ. ಇವು ಊರಿಗೆ ವಿರುದ್ಧವಲ್ಲ. ಅದರ ಸಂಪತ್ತಿಯನ್ನು, ರಸವಂತಿಕೆಯನ್ನು ಪೋಷಿಸುವ,



ಅದಕ್ಕೆ ದುಡಿಯುವ ಅಂಶಗಳು. ಒಂದು ಮನೆಗೂ ಇನ್ನೊಂದು ಮನೆಗೂ ನಡುವೆ ಗೋಡೆ ಪ್ರಾಕಾರಗಳಿರುತ್ತವೆಯಲ್ಲವೆ! ಲೌಕಿಕವಾಗಿ ಅವು ಇದು ಬೇರೆ, ಅದು ಬೇರೆ ಎಂದು ಎಣಿಕೆ ಮಾಡುತ್ತವೆ, ನಿಜ. ಪ್ರತಿಯೊಂದು ಮನೆಯೂ ತನ್ನ ಹಿರಿಮೆ ಸಂಪತ್ತು ಸೌಂದರ್ಯಗಳನ್ನು ಬೆಳಸಿಕೊಳ್ಳಬಲ್ಲ ಕ್ರಿಯಾಸ್ಥಾನ, ಜೀವಸ್ಥಾನಗಳಾಗುತ್ತವೆ. ಇವಕ್ಕೆ ವೈರ, ಪೈಪೋಟಿ ಇಲ್ಲ. ಏನು ಬೆಳವಣಿಗೆ ಬಂದರೂ ಒಬ್ಬರು ಇನ್ನೊಬ್ಬರ ಪರವಾಗಿ ಹಿರಿದಾಗಿ ಕೀರ್ತಿಯಲ್ಲಿ ದೊಡ್ಡತನದಲ್ಲಿ ತೂಗಬೇಕು, ಸ್ನೇಹದಲ್ಲಿ ಕೂಡಬೇಕು ಎಂಬ ಆಸೆಯಿಂದ ಮಾಡುವ ಕಾರ್ಯವಾಗುತ್ತದೆ. ಹಾಗೆ ಆದರೆ ಮಾತ್ರ ಊರಿಗೆ ಹಿತ, ಕೀರ್ತಿ; ಪರಸ್ಪರ ಕೋಟಲೆಗಳಿಂದಲ್ಲ. ಹಾಗೆಯೆ ಕರ್ನಾಟಕ ರಾಜ್ಯ ಎಂಬುದು ಇತರರಿಗೆ ಸರಿಸಾಟಿಯಾಗಿ ಸರ್ವಥಾ ಕೀರ್ತಿ ಮೆರೆವಂತೆ ಬೆಳೆದಾಗ ಈ ರಾಜ್ಯಕ್ಕೆ ಉತ್ಸವ ಉಂಟಾಗುತ್ತದೆ. ಆ ಉತ್ಸವವನ್ನು ಅಲ್ಲಿನ ಪ್ರತಿದಿನವೂ ಪ್ರತಿಯೊಬ್ಬರೂ ಸ್ಥಾಪಿಸ ಬೇಕಾದ್ದು; ಕುಶಲತೆ ಶಕ್ತಿಗಳಿಂದ, ಪೌರಹಿತಕಾರ್ಯಗಳಿಂದ ಸಾಧಿಸಬೇಕಾದ್ದು. ಅದು ಪೌರಧರ್ಮ.

ಇದು ಕರ್ನಾಟಕದ ವಿಶೇಷವೂ ಹೌದು. ಇದು ಆಂಧ್ರ, ಇದು ಕೇರಳ, ಇದು ತಮಿಳುನಾಡು, ಇದು ಮಹಾರಾಷ್ಟ್ರ ಎಂಬಂತೆ ಒಂದು ವಿಶಿಷ್ಟ ಗುಣ ಅಲ್ಲಿ ರೂಪಗೊಂಡು ಬೆಳೆದರೆ, ಅದು ವಿಧವಿಧವಾದ ಸಾಧನೆಗಳ ಪ್ರಕಾಶಕವಾಗುತ್ತದೆ. ಅವರ ಕಾಣಿಕೆ ನಾಡಿಗೆ; ನಮ್ಮ ಸಂಸ್ಕೃತಿಗೆ. ಸೀಕರಣೆಯಲ್ಲಿ ಹಲವಾರು ಹಣ್ಣುಗಳು ಸೇರಿ ಒಂದು ಸಂಯುಕ್ತ ರಸ, ರುಚಿ ಬರುವಂತೆ. ಒಂದೇ ಹಣ್ಣಿನಲ್ಲಿ ಅಲ್ಲಿ ಪ್ರಾಮುಖ್ಯ. ಹದವಾಗಿ ಹೊಂದಬೇಕು ಮಾತ್ರ. ಹಿಂದಿನ ಕಾಲದಲ್ಲಿ ಇತರರಂತೆಯೇ ನಮ್ಮಲ್ಲಿಯೂ ವೀರರು, ರಕ್ತಪಾತ ಮಾಡಿದವರು, ದುರ್ದಮ್ಯವಾದ ಯೋಧಗಣದವರು ಇದ್ದರು. ಅನೇಕ ಯುದ್ಧಗಳಲ್ಲಿ ರಾಜ್ಯವನ್ನು ವಿಸ್ತರಿಸಿದವರು ಕೆಲವೇಳೆ ಸೋತರೂ ಶತ್ರುಗಳಾಗಿ ಬಂದವರನ್ನು ಎದುರಿಸಿದರು. ಆದರೂ ಈ ಜನಕ್ಕೆ ಒಂದು ಸಮರಸ ಜೀವನ, ಯಾವ ಅತಿಗೂ ಹೋಗದೆ ತನ್ನ ಮಿತಿಯಲ್ಲಿ ತಾನು ಶಾಂತಿ, ಸೌಹಾರ್ದ, ಶಾಸ್ತ್ರಕಲೆ, ದರ್ಶನ, ವಿಜ್ಞಾನ, ಧರ್ಮಾಭಿಲಾಷೆ ಬೆಳೆಯುವಂತೆ ಗೋದಾವರಿಯಿಂದ ಕಾವೇರಿಯ ವರೆಗೂ ನೆಲಸಿದ್ದೆಂದು 9ನೇ ಶತಮಾನದಿಂದಲೇ ಪ್ರಖ್ಯಾತವಾದದ್ದು. ಅಲ್ಲಿಂದ ಕೃಷ್ಣೆಗೆ ತುಂಗಭದ್ರೆಗೆ ಇತ್ತೀಚೆಗೆ ಒತ್ತಿ, ಇಳಿದು ಬಂದು, ಸೊರಗಿ ಸಂಕೋಚಗೊಂಡ ಕಾಲ ಇತ್ತು. ಈ ಮಾತು ಬೋಧನದವರೆಗೆ ಎಂದಾಗ ಗೋದಾವರಿಯ ತಡಿಗೆ ಇದೆ ಎಂದೇ ಎಣಿಕೆಯಾದೀತು. ಕೃಷ್ಣೆಯನ್ನು ಇನ್ನೂ ಪೆರ್ದೊರೆ ಎಂದು ಸಾಧಿಸಿರುವ ನಾಡು ನಮ್ಮದು. 'ಇದೆನ್ನ, ಕರ್ನಾಟಕಮಾಯಿಪೋಚೆ' ಎಂದು ಆಕ್ಷೇಪಣೆಗೆ, ಲಘುತೆಗೆ ಈಡು ಮಾಡುವವರೂ, ಹೀಗಳೆಯುವವರೂ ಇದ್ದರು. ಕರ್ನಾಟಕದ ಠಂಕಾರ ಎಂದು ರಾಜಶೇಖರನು ಹೇಳಿದ್ದುಂಟು. ಅದು ಕರ್ನಾಟಕದ್ದೇ. ಒಂದು ಕಾಲದಲ್ಲಿ ಕರ್ನಾಟಕ ಎಂದು ವಿಸ್ತರಿಸಿದ್ದ ಒಟ್ಟು ಕರ್ನಾಟಕ ಆಂಧ್ರ ವಿಜೃಂಭಣದ ಕಾಲಕ್ಕೆ ಸಂಬಂಧಿಸಿದ್ದೊ? ರಾಜಶೇಖರನ ಕಾಲ ಯಾವುದೇ ಇರಲಿ, ಹೆಚ್ಚಾಗಿ ಈಗಿನ ಮಿತಿಗಳಿಗೆ ಸಲ್ಲದ,

ಇದಕ್ಕಿಂತ ವಿಸ್ತಾರವಾದ ಭಾಗವಾದ – ಉದಾ : ವಿಜಯನಗರದ ಉತ್ತರ ಕಾಲಗಳಲ್ಲಂತೆ – ಕರ್ನಾಟಕಕ್ಕೆ ಒಂದು ಬಗೆಯ ಹೆಸರನ್ನು ತಂದಿರಬಹುದು. ಮೃಚ್ಛಕಟಿಕದಲ್ಲಿ 'ಕರ್ನಾಟಕ ಕಲಹ' ಎಂಬ ಮಾತು ಬರುತ್ತದೆ. ಈ ಜನ ಜಗಳಗಂಟಿಗಳು ಎಂಬುದು ಅಪಪ್ರಥೆಯೆನ್ನಿಸುತ್ತದೆ. ಇವರ ಸಾಧುಗುಣ ಕರ್ನಾಟಕಕ್ಕೆ ಒಂದು ಬಗೆಯ ಹೆಸರನ್ನು ತಂದಿರಬಹುದು. ಆದರೆ ಇವರನ್ನು ತುಳಿದಿರುವುದು; ಉಪೇಕ್ಷೆ ಮಾಡಿರುವುದೇ ಹೆಚ್ಚು. ದಕ್ಷಿಣದ ಸಂಗೀತವನ್ನು ಇನ್ನೂ ಕರ್ನಾಟಕ ಸಂಪ್ರದಾಯವೆಂಬ ಹೆಸರಿನಿಂದಲೇ ಕರೆಯುತ್ತಿರುವುದು ನಮಗೆ ಸಂತೋಷ. ಕಲೆ, ಶಾಂತಿ, ಸಂತೋಷ, ಉದಾರವಾದ ಜೀವನ ರೀತಿ ಎಲ್ಲವನ್ನೂ ಸೇರಿಸಿಕೊಂಡು ಒಂದು ಘಟಕ ಮಾಡಿಕೊಳ್ಳಬೇಕು ಎಂಬ ಹಿರಿಯಾಸೆ, ಶಾಂತಿ ಸಂಧಾನಗಳಿಗೆ ಪ್ರೀತಿ – ಇವು ಕನ್ನಡಿಗರು ಒಂದು ಸಾವಿರ ವರ್ಷದಿಂದ ಬಯಸುವ ಲಕ್ಷಣವಾಗಿದೆ. ನಾನೇ ಒಮ್ಮೆ ಬರೆದ ಪದ್ಯಗಳಲ್ಲಿ ಒಂದು ಚರಣ ಹೀಗಿದೆ :

ಕಂಡಲ್ಲಿ ಗುಣಕೆ ಕೈಮುಗಿದು ಕೊಂಡಾಡಿ ಕರೆವ,
ಎತ್ತಿ ಮಡಿಲಲಿ ತೂಗಿ ಜಗಕೆಲ್ಲ ತೋರಿ ತಣಿವ,
ಹಾಲ್ ಬೆಣ್ಣೆ ಹೆಜ್ಜೇನು ಕೆನೆಮೊಸರನೂಡಿ
ಒಳ್ಪನುಪಚರಿಸಿ, ಉಪಚರಿಸಿ ಮಣಿವ
ಧನ್ಯದಾನದ ನೆಲೆಯು ನಮ್ಮ ಹೊನ್ನಾಡು.

ಎಂದು ಹೇಳಲು ನನಗೆ ಇಂದಿಗೂ ಸಂತೋಷವಾಗುವುದು.

ರಾಜಕೀಯ ವರ್ಗಗಳವರು ಈ ಹೊಸ ಕರ್ನಾಟಕ ರಾಜ್ಯವನ್ನು ಸ್ಥಾಪಿಸುವ ಮುಂಚೆ ಈಗಿನ ಮೇರೆ ಒಂದು ರಾಜಕೀಯದಲ್ಲಿ ಆಗುತ್ತದೆಯೊ ಇಲ್ಲವೊ ಎಂದವರಿದ್ದರು. ಆಗಬೇಕೆ, ಬೇಡವೆ ಎಂಬವರಿದ್ದರು. ಅವರೊಡನೆ ನಾವೇಕೆ ಸೇರ ಬೇಕು ಎನ್ನುವವರೊಡನೆ, ಈಗ ಕೂಡ ಏಕೆ ಸೇರಿದೆವೊ ಎನ್ನುವವರಿದ್ದಾರೆ. ಆದರೆ ಕರ್ನಾಟಕ ಎಂದಾಗ ನಾಡು, ಜನ, ಭಾಷೆ, ಸಾಹಿತ್ಯಗಳು, ಜನಜೀವನ, ಇವರು ಬೆಳೆದ ಸಂಸ್ಕೃತಿ, ನಾಗರಿಕತೆ – ಹಿಂದೆ ಕವಿ ವರ್ಣಿಸಿದಂತೆ – ಇವರ 'ಸಂಸಾರಸಾರ ಸರ್ವಸ್ವಫಲ' ಆಗಬೇಕು. 1956ರಲ್ಲಿ ಕರ್ನಾಟಕ ರಾಜ್ಯೋದಯವಾಯಿತು. ಆಗಿ ಇನ್ನೂ 20 ವರ್ಷವಾಗಿಲ್ಲ. ಸಾಹಿತಿಗಳು ಮುಖ್ಯವಾಗಿ ಕನಸು ಕಂಡ, ಬಯಸಿ ದುಡಿದ ಕರ್ನಾಟಕ ಯಾವ ರಾಜ್ಯಕ್ಕೂ ಕಡಮೆಯಾಗದಂತೆ ಇದರ ಧಾತು, ರಸ, ಇದರ ಮೇಲ್ಮೆ ಬೆಳೆಯುವಂತೆ, ಇದರ ಮನಸ್ಸು ಒಂದು ಜೀವದ ಲಕ್ಷಣದಂತೆ, ಅಖಂಡ ಭರತಖಂಡದ ವ್ಯವಹಾರ ಜೀವನದಲ್ಲಿ ಇದು ಒಂದು ಮಹಾಸತ್ತ್ವವಾಗುವಂತೆ ಇಲ್ಲಿನ ಜನವರ್ಗ – ಎಂದರೆ ನಾವೆಲ್ಲ, ನಾಡೆಲ್ಲ – ನಮ್ಮ ಗೈಮೆಯಲ್ಲಿ ದುಡಿವುದಾದರೆ, ರಾಜ್ಯದ ಉತ್ಸವವಾಗುತ್ತದೆ. ಅಂಥ ಉತ್ಸವ ನೆರವೇರಲಿ.

1974

❑

# 13. ಆಕಾಶವಾಣಿಗೆ ಸ್ವಾಯತ್ತತೆ

ಹಲವು ವರ್ಷಗಳಿಂದ ಆಕಾಶವಾಣಿ ಸ್ವಾಯತ್ತವಾಗಬೇಕು ಎಂಬ ಬೇಡಿಕೆ ಇತ್ತು. ನಾನಾ ಕಾರಣಗಳಿಂದ ಈವರೆಗೂ ಅದು ಕಾರ್ಯಕಾರಿಯಾಗುವುದೆಂಬ ಭರವಸೆ ಇರಲಿಲ್ಲ. ವರ್ಘೀಸ್ ಸಮಿತಿಯನ್ನು ರಚಿಸಿ ಅದರ ಸಲಹೆಗಳ ಆಧಾರದ ಮೇಲೆ ಆಕಾಶವಾಣಿಯಾಗಿದ್ದುದನ್ನು ಆಕಾಶಭಾರತಿಯಾಗಿ ಮಾರ್ಪಡಿಸಬೇಕೆಂಬ ಯತ್ನ ನಡೆದಿದೆ. ಯಾವಾಗ ಭಾರತದಲ್ಲಿ ದೂರದರ್ಶನ ಬಂದಿತೊ ಆಗಿಂದ ವಾರ್ತಾ ಮತ್ತು ಪ್ರಸಾರ ಮಂತ್ರಿ ಖಾತೆಯ ಈ ಕಾರ್ಯರಂಗಕ್ಕೆ ಒಂದು ಹೊಸ ಪರಿಣತಿ ಉಂಟಾಯಿತು; ಪ್ರಕಾರ, ತಿರುವು ಬಂದಿತು. ಆಕಾಶವಾಣಿಯಲ್ಲಿ ಈವರೆಗೂ ಶ್ರವ್ಯವಾಗಿ ಮಾತ್ರ ಪ್ರಸಾರವಾಗುತ್ತಿದ್ದ ಕಾರ್ಯಕ್ರಮ ದೃಶ್ಯವಾಗಿ ರೂಪಿಸುವ ವ್ಯವಸ್ಥೆ ಸಿದ್ಧಿಸಿತು. ಒಂದು ಕಾಲದಲ್ಲಿ ಮೂಕ ಚಲಚ್ಚಿತ್ರವಾಗಿ ಇದ್ದುದು ವಾಕ್‌ಚಿತ್ರವಾಗಿ ಎರಡರಲ್ಲಿಯೂ ಬಗೆಬಗೆಯ ವರ್ಣಸಂಯೋಜನೆ ಸೇರಿತು. ಅದು ದೂರದರ್ಶನಿಯಾಗಿ ಮಾರ್ಪಟ್ಟಾಗ ಪ್ರಚಾರದ ಮಾರ್ಗವೇ ವ್ಯತ್ಯಾಸಗೊಂಡಿತು. ಕಿವಿಗೆ ಕೇಳಿಸಿಯೇ ನಡೆಯಬೇಕಾದ ವಾರ್ತಾ, ನಾಟಕ ಸಮಾರಂಭಗಳು ಕೇವಲವಾಗೇ ಘಟಿತವಾಗಬೇಕಿತ್ತು. ಅಲ್ಲಿನ ರಚನಾ ತಂತ್ರವೇ ಒಂದು. ನಾಟಕಗಳು ಎಂಬುದರಲ್ಲಿ ಇದು ವಿಶೇಷ ವಿಧಾನವಾಗಿತ್ತು. ಈಗ ಅವನ್ನೂ ಸಮಾರಂಭಗಳನ್ನೂ ಸಾಕ್ಷ್ಯಚಿತ್ರಗಳನ್ನೂ ಕಣ್ಣೆದುರಿಗೇ ನಡೆದ ಹಾಗೆ ತೋರಿಸುವ ಅಗತ್ಯ ದೂರದರ್ಶನಿಯದು. ಒಟ್ಟಿಗೆ ಚಲಚ್ಚಿತ್ರ, ಆ ಸಮಯದಲ್ಲಿಯೇ ನಡೆವ ಮಾತುಕತೆ ಎರಡನ್ನೂ ಒಟ್ಟಿಗೆ ಧ್ವನಿಮುದ್ರಣದಲ್ಲಿ, ಕ್ಯಾಮರಾಗಳಲ್ಲಿ ಹಿಡಿದು ರೂಪಿಸಬೇಕಾದ ಯಂತ್ರಶಿಲ್ಪ ಆಕಾಶವಾಣಿಯ ತಂತ್ರಶಿಲ್ಪಕ್ಕೆ ಹೊಸ ನೆಲಸನ್ನು ತಂದಿದೆ. ಎಂದರೆ, ಎಂಜಿನಿಯರಿಂಗ್ ಭಾಗ ಆಕಾಶವಾಣಿಯಲ್ಲಿ ಬೇರೆ, ಭಾರತಿಯಲ್ಲಿ ಬೇರೆ ಬಗೆಯ ಜವಾಬ್ದಾರಿಯದು. ತಂತ್ರನಿಪುಣತೆ ಇನ್ನಷ್ಟು ವಿಶಿಷ್ಟ. ಎರಡಕ್ಕೂ ಸುಸೂತ್ರವಾದ ವ್ಯವಸ್ಥೆ, ಕಾರ್ಯಕ್ರಮ ನಡೆಯುವಂತೆ, ವಿರೋಧ ಬಾರದಂತೆ, ವಿರಸ ಮೇಲ್ಪೋಟಿ ಬೀಳದಂತೆ ಕಾರ್ಯ ಮಾಡುವುದು ಅಗತ್ಯವಾಗುತ್ತದೆ. ಇನ್ನು ಮುಂದೆ ಇದನ್ನು ನಿರ್ವಹಿಸಬೇಕಾದ್ದು ಯಾರು ಎಂಬ ಪ್ರಶ್ನೆ ಆಕಾಶ ಭಾರತಿಯ ರಚನೆಯ ಜೊತೆಗೆ ಅನ್ವಯಿಸುವ ಏರ್ಪಾಡು. ಅದನ್ನು ಸರಕಾರದ ಮಂತ್ರಿಮಂಡಲದ ಕೈಯಿಂದ

ವರ್ಗಾಯಿಸಿ ಒಂದು ಸ್ವಾಯತ್ತ – ಸ್ವತಂತ್ರವೆನ್ನಿ, ಸ್ವಾಧೀನತೆ ಎನ್ನಿ – ಸ್ವಯಮಾಡಳಿತ ಖಾಸಗಿ ಮಂಡಲಿಗೆ ಕೊಡುವ ಯೋಜನೆಯಾಗುತ್ತಿದೆ.

ನನಗೆ ವರ್ಘೀಸ್ ಸಮಿತಿಯ ವರದಿ ದೊರಕಿಲ್ಲ. ಇಂಗ್ಲಿಷಲ್ಲಿ ಮೊನ್ನೆ ಜೂನ್ 29 ರಂದು ಡಾ. ಆದ್ಯರು ಮಾಡಿದ ಭಾಷಣದಿಂದ ಅದರ ಮೂಲ ರೇಖೆಗಳು ತಿಳಿದು ಬಂದಿವೆ. ಆದ್ಯರ ವಿಮರ್ಶೆಯಲ್ಲಿನ ಖಚಿತತೆಯ ಬಹುಭಾಗ ನಾನು ಒಪ್ಪುವಂಥದು. ವಿಶೇಷವಾಗಿ ಆಡಳಿತದ ವಿಷಯದಲ್ಲಿ ಅವರು ಕಾಣಿಸಿರುವ ವಾದ ಗಮನಾರ್ಹವಾದ್ದು. ರಾಜಕೀಯದಲ್ಲಿ ಹೇಗೆ ಸಮತೋಲನ ಸಮಾಧಾನಗಳನ್ನು ಸಾಧಿಸುವುದು, ಪ್ರೋತ್ಸಾಹಗಳನ್ನು ರಚಿಸುವುದು ಎಂಬ ಕಡೆಗೆ ಹೆಚ್ಚು ಗಮನ ಕೊಡಬೇಕಾಗುತ್ತದೆ. Ministry of Information & Broadcasting ಎಂಬ ಮಂಡಲದಲ್ಲಿ ಸರ್ಕಾರಕ್ಕೆ ಹೊಣೆಗಾರಿಕೆ ಹೊತ್ತವರು ಆಯಾ ಕಾಲದ ಮಂತ್ರಿಗಳು. ಸರ್ಕಾರದ ಪಕ್ಷ ನೇಮಿಸಿದ ಅವರು ಪ್ರಬಲಸ್ಥಾನದಲ್ಲಿರುತ್ತಿದ್ದರು. ಆ ಇಲಾಖೆಯ ಸರ್ಕಾರಿ ಅಧಿಕಾರಿವರ್ಗದವರ ಕಾರ್ಯಕ್ಕೆಲ್ಲ ಮಂತ್ರಿಗಳೇ ಕೇಂದ್ರ ಸರ್ಕಾರಕ್ಕೆ – ಎಂದರೆ ಪಾರ್ಲಿಮೆಂಟಿಗೆ – ಜವಾಬ್ದಾರಿ ಹೊತ್ತಿರುತ್ತಿದ್ದರು. ಅಲ್ಲಿ ಎರಡು ಬಗೆಯ ನಿರ್ಬಂಧವಿದ್ದಿತು. ಒಂದು, ಸರ್ಕಾರದ ದೃಷ್ಟಿ ರೀತಿ, ಧೋರಣೆ ಇವಕ್ಕೆ ಅನುಸರಿಸಿ- ಎಂದರೆ ಒಳಪಟ್ಟೇ – ಕಾರ್ಯ ನಡೆಯಬೇಕಾಗಿತ್ತು. ಮೇಲಧಿಕಾರಿಗಳು, ನಿರ್ದೇಶಕರು, ಕಾರ್ಯದರ್ಶಿಗಳು ಇತ್ಯಾದಿ ಅಧಿಕಾರವರ್ಗಗಳ ನೇಮನದಿಂದ ಹಿಡಿದು ಆಡಳಿತದ ಎಲ್ಲ ವರ್ಗಗಳೂ ಸರ್ಕಾರದ ಯೋಚನೆಗೆ ಸರಿತೂಗಬೇಕಿತ್ತು. ಧೋರಣೆ, ಸರ್ಕಾರದ ಧೋರಣೆ, ಎಂದರೆ ಆಳುವ ಪಕ್ಷದ್ದು. ಇತರ ಪಕ್ಷಗಳು ಸಮಗಣನೆ ಪಡೆಯುತ್ತಿರಲಿಲ್ಲ. ಅವರ ವಾಣಿ, ಕ್ರಿಯಾಪ್ರಪಂಚ, ಕೇಳ್ಮೆ, ಕಾಣ್ಕೆ ಕಡಮೆ. ವಿರೋಧ ಪಕ್ಷಗಳಿಗೆ ಸಂಬಂಧಪಟ್ಟ ನಾಯಕರೂ ಜನವೂ ಕ್ರಿಯಾವ್ಯಾಪಾರಗಳೂ ಸರ್ಕಾರಕ್ಕೆ ಒಪ್ಪದಿದ್ದರೆ, ಹೊಂದದಿದ್ದರೆ ಆಕಾಶವಾಣಿಯಲ್ಲಿ ಪ್ರಚಾರವಾಗುತ್ತಿರಲಿಲ್ಲ. ವೃತ್ತಪತ್ರಿಕಾ ಪ್ರಪಂಚಗಳಿಗೂ ಇತರ ಬಗೆಯ ಎಲ್ಲ ಪ್ರಕಟಣೆಗಳಿಗೂ ವೇದಿಕೆಯ ಮೇಲಿನ ಎಲ್ಲ ಭಾಷಣಗಳಿಗೂ ಸಂಸ್ಥೆಯ ಕಾರ್ಯಗಳಿಗೂ ಇರುತ್ತಿದ್ದ ನಿರ್ಬಂಧ, ಅನಾದರಗಳು ಅವಕ್ಕಿಂತ ಇಲ್ಲಿ ಇನ್ನೂ ಹೆಚ್ಚು. ಪೂರ್ತಿ ಸರಕಾರದ ಕೈಯಲ್ಲಿದ್ದ ಆಕಾಶವಾಣಿ ಅವನ್ನು ಪುರಸ್ಕರಿಸಬೇಕಾಗಿತ್ತು. ಈಗ ಸ್ವಾಯತ್ತವಾದ ಸಂಸ್ಥೆಯೂ ಕೇವಲ ಹಿಂದಿನಂತೆಯೇ ಉಳಿದುಕೊಂಡು ಆ ಇಲಾಖೆಯ ಅಧಿಕಾರಿವರ್ಗವೂ ಮತ್ತು ಉಳಿದ ಕಾರ್ಯವಿಶೇಷಗಳ ಏರ್ಪಾಡೂ ಎಂದಿನಂತೆಯೇ ನಡೆಯುವುದು ಮಾತ್ರವಾದರೆ, ಅದು ಖಾಸಗಿ ಆದರೆ ತಾನೆ ಏನು ಬೆಲೆ, ಲಾಭ? – ಎನ್ನುವ ಸಂಗತಿ ನಾಳೆಗೆ ಬಹು ಮುಖ್ಯವಾಗುತ್ತದೆ. ಇದು ಉಂಟುಮಾಡುವ ಜಟಿಲತೆ ಬಹುಮುಖ್ಯವಾದ್ದು. ಇಂದಿನ ಸರಕಾರ ಒಂದು ಅಧಿಕಾರ ಘೋಷಣಾ ಪತ್ರವನ್ನು (charter) ಸಮಯ, ವಿಧಿ ನಿಷೇಧಗಳುಳ್ಳ ಒಂದು ಲೈಸೆನ್ಸ್ ಅನ್ನು ಕೊಟ್ಟು ಈ ಸಂಸ್ಥೆಗೆ ತನ್ನ ಕಾರ್ಯಕ್ರಮಗಳ ಮೇಲೆ ಬಹುಮಟ್ಟಿಗೆ ಸಮಸ್ತ



ಪ್ರಭಾವವೂ ಉಳ್ಳದ್ದಾಗಿ ಮಾಡಬಹುದು. ಈಗ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ, ಲೈಲ್ವೆ ಬೋರ್ಡ್ ಇರುವಂತೆ. ಅಥವಾ ನಗರಗಳ ಪುರ/ನಗರಸಭೆಗಳಲ್ಲಿರುತ್ತಿದ್ದಂತೆ ಒಂದು ಕಾರ್ಪೊರೇಷನ್ – ಉದಾ: ಇಂಗ್ಲಂಡಿನ ಬಿಬಿಸಿ ಅಂತೆ – ಆಗುವಂತಾಗಿ ಅದರ ಕಾರ್ಯಕ್ರಮಗಳು ನಡೆಯಬೇಕಾಗುತ್ತದೆ. ಅಲ್ಲಿಯೂ ಆಳುವ ಅಧಿಕಾರವರ್ಗ ಕೆಲವಂಶಗಳಲ್ಲಿ ನಿರ್ಬಂಧಗಳನ್ನು ತನ್ನ ಕೈಯಲ್ಲಿಟ್ಟುಕೊಳ್ಳುವುದು. ವೃತ್ತ ಪತ್ರಿಕಾ ಪ್ರಪಂಚದಲ್ಲಿ, ಇತರ ಮತ್ತದೇ ವರ್ಗಗಳಲ್ಲಿರುವಂತೆ, ಪಕ್ಷಗಳಲ್ಲಿರುವಂತೆ ಅವುಗಳ ಒಳ ಆಡಳಿತಕ್ಕೆ ಕೈ ಹಾಕದೆ ಅವು ದೇಶದ ಸ್ವಾಸ್ಥ್ಯ, ಶಾಂತಿ, ಅತ್ಯಾಚಾರಗಳ ಸಂಬಂಧದಲ್ಲಿಯೂ ಪರಸ್ಪರ ಕೋಟಲೆಗಳನ್ನು ಬೆಳಸದಿರುವಂತೆಯೂ ನೋಡಿಕೊಳ್ಳಬೇಕಾದ ಅಗತ್ಯವನ್ನು ವಹಿಸಿರುತ್ತದೆ. ಬಿಬಿಸಿ ಅಲ್ಲಿ ವಾರವಾರವೂ ಅಲ್ಲಿನ ಕಾರ್ಯಕ್ರಮಗಳ ಪರ್ಯಾಲೋಚನೆ, ವಿಮರ್ಶೆಯ ಏರ್ಪಾಡಿದೆ. ಕಾಲಕಾಲಕ್ಕೆ ಅಗತ್ಯವಾಗುವ ಮಾರ್ಪಾಡುಗಳಾಗಲು ಆಯೋಜನೆಗಳು ಏರ್ಪಟ್ಟು ಲೋಪ ದೋಷಗಳನ್ನು ಸರಿಪಡಿಸುವ ಕ್ರಮ ಏರ್ಪಟ್ಟಿದೆ. ಪತ್ರಿಕೆಗಳಿಗೆ, ಸಂಘ ಸಂಸ್ಥೆಗಳಿಗೆ, ಖಾಸಗಿ ವ್ಯಕ್ತಿಗಳಿಗೆ ಇರುವಂತೆಯೇ ದೇಶದ ನ್ಯಾಯಮಂಡಲಿಗಳು ವ್ಯಕ್ತಿನಿಂದೆ, libel, Indecency, ಅಸಭ್ಯತೆ, ಅಶ್ಲೀಲತೆ, crime – ಅಪರಾಧ ಭಾಗ, ಹಿಂಸಾಕೃತ್ಯ, ಕೊಲೆ, ಅತ್ಯಾಚಾರ ಎಂಬ ಹೆಸರುಗಳಲ್ಲಿಯಾದರೂ ಮರೆಹೊಕ್ಕು ನ್ಯಾಯವನ್ನು ಪಡೆಯುವ ಅವಕಾಶವಿರುತ್ತದೆ. ಸರ್ಕಾರವೇ ಇಲ್ಲಿಯೂ Treason ಎಂಬ ಸ್ವದೇಶ ಘಾತಕ ವ್ಯಾಪಾರವನ್ನು ತಡೆಯಬೇಕಾಗುತ್ತದೆ. ಈ ಮಿತಿಗಳಿಗೆ ಒಳಪಟ್ಟು ಈ ಸಂಸ್ಥೆಗಳಿಗೆ ಸ್ವಾಯತ್ತತೆ ಉಳಿಯುತ್ತದೆ. ಅವುಗಳ ಮೇಲೆ ಆಪಾದನೆಗಳನ್ನು ಹೊರಿಸುವುದಕ್ಕೂ ನ್ಯಾಯ ಪಡೆದುಕೊಳ್ಳುವುದಕ್ಕೂ ಅನ್ಯಾಯ ನಿವಾರಣೆ ಮಾಡುವುದಕ್ಕೂ ಒಳಗೆ ವ್ಯವಸ್ಥೆ ಇದ್ದು, ಇಲ್ಲಿನ ತೀರ್ಮಾನ ತೃಪ್ತಿಕರವಲ್ಲದಿದ್ದರೆ ಮೇಲಿನ ನ್ಯಾಯಾಲಯಗಳಿಗೆ ಅವನ್ನು ಅಪೀಲು ಒಯ್ದು ನಷ್ಟಕಷ್ಟಗಳನ್ನು ಪರಿಹರಿಸಿಕೊಳ್ಳುವುದಕ್ಕೆ ಅನುಕೂಲವಿದೆ. ನಮ್ಮ ರಾಜಕೀಯ ಪ್ರಪಂಚದಲ್ಲಿ ಸಂವಿಧಾನ ಪ್ರಕಾರ ಸೆಕ್ಯುಲರ್ ಎಂಬ ಒಂದು ಮಾತನ್ನು ಬಳಸುತ್ತಾರೆ. ನಾಡಿನಲ್ಲಿ ಹಲವು ಮತಗಳು, ಧರ್ಮಗಳು ಇವೆಯಲ್ಲವೆ: ಆ ಯಾವೊಂದೂ ಸರ್ಕಾರದ ಮತಧರ್ಮವಲ್ಲ. ಸರ್ವಧರ್ಮ ಸಮದೃಷ್ಟಿ ವ್ಯವಹಾರ ಪ್ರಪಂಚದಲ್ಲಿ ಲೌಕಿಕವಾಗಿ ನಡಸುವುದು ಸರ್ಕಾರದ ಕಾರ್ಯ, ವಿಧಾನ. ಹಾಗೆ ಒಂದು ಸಮಾನದೃಷ್ಟಿ ಖಾಸಗಿಯಾಗಲಿರುವ ಆಕಾಶಭಾರತಿಗೂ ಎಲ್ಲ ಮತ ಧರ್ಮಗಳ ಸಂಬಂಧಗಳಲ್ಲಿಯೂ ಕ್ಷೇಮಗಳ ಸಂಬಂಧಗಳಲ್ಲಿಯೂ ಪಕ್ಷ–ರಾಜ್ಯ–ಭಾಷೆ–ಪ್ರಯೋಜನ ಕಾಂಡ–ಸಂಸ್ಥೆ ಸಮಾರಂಭಗಳ ವಿಷಯದಲ್ಲಿಯೂ ತಾಳಬೇಕಾಗುತ್ತದೆ. ಎಷ್ಟು ಸಿಕ್ಕುಗಳು ಇಲ್ಲಿ ಏಳಬಹುದು ಎಂಬುದನ್ನು ಊಹಿಸಬಹುದು.

ಕಾರ್ಯಕ್ರಮಗಳು ಈಗಿಗಿಂತ ವಿಧಗಳಲ್ಲಿ, ಗುಣದಲ್ಲಿ, ದೃಷ್ಟಿಯಲ್ಲಿ, ಉಕ್ತಿ ಸ್ವಾತಂತ್ರ್ಯದಲ್ಲಿ ಹೆಚ್ಚಾಗಿ ನಡೆಯಬೇಕಾದೀತು. ಸರಕಾರದ ಪ್ರಕಟನಾ ಭಾಗ, ಪ್ರಚಾರ ಎಷ್ಟು ಪ್ರಮಾಣದ್ದು ಎಂಬುದರ ಮೇಲೆ ಉಳಿದ ಭಾಗಗಳಿಗೆ ಮೀಸಲಾಗುವ ಕಾಲಗಳು

ಆಗ ನಿರ್ಧಾರವಾಗಬೇಕಾದೀತು. ಭಾರತದ ರಾಜಕೀಯದಲ್ಲಿ ಕೇಂದ್ರದ ಭಾಗ, ರಾಜ್ಯಗಳ ಭಾಗ ಎಂದು ಹೇಗೆ ಏರ್ಪಾಡಿದೆಯೊ, ಅವುಗಳ ನಡುವೆ ಧೋರಣೆ ಮತ್ತು ಕಾರ್ಯ ವಿಂಗಡಣೆ ಇದೆಯೊ, ಹಾಗೆಯೇ ಆ ಮಟ್ಟಿಗಾದರೂ ವಿಕೇಂದ್ರೀಕರಣ ಇಲ್ಲಿ ಶಕ್ಯವಾಗ ಬೇಕು. ದೆಹಲಿಯಲ್ಲಿಂದಲೇ, 70-80 ಆದರೂ ಇರುವ ಪ್ರಸಾರ ಕೇಂದ್ರಗಳಿಂದ ಬರುವ ಕಾರ್ಯಕ್ರಮಗಳು ಎಲ್ಲ ಅಂಶಗಳಲ್ಲಿಯೂ ಕೇಂದ್ರದ ಅಂಕೆಗೆ ಒಳಪಟ್ಟು ನಡೆಯಬೇಕೆಂದು ಹಿಂದಿನಂತೆಯೇ ಏರ್ಪಡಿಸುವುದು ಸಡಿಲಗೊಳ್ಳಬೇಕು. ಆಯಾ ರಾಜ್ಯಗಳ ಕ್ರಾಂತಿ ವಿಶೇಷಗಳು, ಅಗತ್ಯಗಳು ಬೇರೆ ಬೇರೆ. ಅಲ್ಲಲ್ಲಿನ ಜನವರ್ಗ, ಅವರ ಆಶೋತ್ತರಗಳು, ಆಸಕ್ತಿ, ಆಡುಭಾಷೆ, ಬಳಸುವ ಭಾಷೆ, ಪ್ರಯೋಜನ ಅವಕ್ಕೇ ವಿಶೇಷ. ಅಲ್ಲಿಯೂ ಎಲ್ಲ ಕುಶಲತೆ ಉಳ್ಳ ಜನರಿಂದಲೂ ವರ್ಗಗಳಿಂದಲೂ ಆಕಾಶ ಭಾರತಿಯ ರೂಪಣಕ್ಕೂ ಅವಕಾಶ ಕೊಟ್ಟು ಏರ್ಪಡಿಸುವ ಸ್ವಾತಂತ್ರ್ಯ ಅವಕ್ಕೆ ಇರಬೇಕು. ಇಂಥದಕ್ಕೆ ಮಾತ್ರವೇ, ಇಂಥ ಬಗೆಯವರಿಗೆ ಮಾತ್ರವೇ ಅವಕಾಶ, ಉಳಿದವರ ಬಗೆಗೆ ಎಚ್ಚರವಿರತಕ್ಕದ್ದು, ಶಕ್ಯವಾದರೆ ಹೆಚ್ಚು ಅವರ ಗೋಜಿಗೆ ಹೋಗದೆ ಅವರು ಇದಕ್ಕೆ ಭಿನ್ನವಾಗಿ ನಡೆದುಕೊಳ್ಳದಂತೆ ನಡಸಿಕೊಳ್ಳಬೇಕು ಎಂಬ ಪ್ರಯತ್ನ ಕಡಮೆ ಯಾಗಬೇಕೇನೊ. ಇದಕ್ಕೆ ತಕ್ಕ ಸಂಘಟನೆಯ ವ್ಯವಸ್ಥೆ, ಕಾರ್ಯಕ್ರಮಗಳ ವಿನ್ಯಾಸ ನಡೆಯಬೇಕು. ಅದು ಅತಿ ಸೂಕ್ಷ್ಮವಾದ, ನಾಜೂಕಿನ ಕಾರ್ಯರಂಗ. ಎಷ್ಟು ಧಾರಾಳದಿಂದ ಈ ಖಾಸಗಿ ಸಂಸ್ಥೆಯ ಅಧಿಕಾರಿಗಳು ಇದನ್ನು ಸಾಧಿಸುತ್ತಾರೆಯೋ ಅದು ನಾಳೆಯ ಕಾಂಡ.

ಜೊತೆಗೆ, ಈ ವ್ಯವಸ್ಥೆಯಲ್ಲಿ ನಮಗೂ ಹೊರ ರಾಜಕೀಯ ಮಂಡಲಿಗಳಿಗೂ ಸಂಪರ್ಕ ಹೇಗಿರಬೇಕು ಎಂಬ ಸಂಗತಿ ಬರುತ್ತದೆ. ಬೇರೆ ದೇಶಗಳಿಂದ ತರಿಸಿಕೊಳ್ಳುವ, ಅವರಲ್ಲಿಗೆ ಕಳಿಸುವ, ಕಾಣಿಸುವ ಕಥೆ, ಚಿತ್ರಗಳಾವುವು? ಕಾರ್ಯಕ್ರಮ ಯಾವುವು?– ಎಂಬಲ್ಲಿ ಎಷ್ಟು ಸ್ವಾತಂತ್ರವಿದೆಯೆಂದರೂ ಅವೂ ಸರ್ಕಾರದ ಧೋರಣೆಗೆ ಒಳಪಟ್ಟೇ ನಡಯಬೇಕಾದ್ದು ಸೂಕ್ತ. ನಾಳೆ ಬಾಹ್ಯಾಕಾಶದಿಂದ ದೂರದರ್ಶನಿ ವ್ಯವಸ್ಥೆಯನ್ನು ಮಾಡಿಕೊಳ್ಳುವಾಗ ಈ ಅಂಶ ಇನ್ನಷ್ಟು ವ್ಯಾಪ್ತಿಗೊಳ್ಳುತ್ತದೆ. ಈಗಾಗಲೇ ನಮ್ಮ ನಾಡಿನ ಸ್ವಾತಂತ್ರ್ಯ ಸಂಬಂಧದಲ್ಲಿ ಒಂದು ಕಡೆ ಪಾಶ್ಚಾತ್ಯ ರಾಷ್ಟ್ರಗಳನ್ನೂ ಇನ್ನೊಂದು ಕಡೆ ಯಾವುದನ್ನು ಪಾಶ್ಚಿಮಾತ್ಯರು democracies ಎನ್ನುವುದಿಲ್ಲವೊ ಅಂಥ ರಾಷ್ಟ್ರಗಳನ್ನೂ ಕಂಡಿದ್ದೇವೆ. ಆದರೆ ಯಾವುದು ನಮಗೆ ಹಿತವಲ್ಲವೊ ಅಂಥ ರಾಷ್ಟ್ರಗಳ ಸಂಬಂಧದಲ್ಲಿ ನಮ್ಮ ವಿಶ್ವಾಸ ಯಾವುದಕ್ಕೂ ಮಿತಿಗೊಂಡುದಲ್ಲ, ಯಾವ ಬಣವರ್ಗಗಳಿಗೂ ಅಮಿತ್ರರಲ್ಲ ಎಂಬ ಜಾಗರೂಕತೆಯಿಂದ ನಡೆದುಕೊಳ್ಳುವ ಅಗತ್ಯ ಹೊಸ ಹೊಣೆಗಾರಿಕೆಯಲ್ಲಿ ಸೇರುತ್ತದೆ. ಕೆಲವು ಪಕ್ಷಗಳು ಯೂರೋಪ್-ಅಮೇರಿಕ ಕಡೆಗೆ, ಇನ್ನು ಕೆಲವು ರಷ್ಯಾ-ಚೈನಾಗಳ ಕಡೆಗೆ – ಈ ಎರಡರ ವೈಮನಸ್ಯಗಳ ಕಡೆಗೆ ತಿರುಗಿವೆ. ಇಂಥ ಪಕ್ಷಪಾತಗಳಿಗೆ ಸಂಬಂಧಿಸಿದಂತೆ ನಮ್ಮಲ್ಲಿಯೇ ರಾಜಕೀಯ ಪಕ್ಷಗಳಿವೆ. ಇವನ್ನು ನಿವಾರಿಸುವುದು ಯಾವ ದೇಶದಲ್ಲಿಯೂ ಶಕ್ಯವಿಲ್ಲ. ಆದರೂ



ಒಳದೇಶದ ಶಾಂತಿ, ಸುರಕ್ಷಣೆ, ಶಕ್ತಿಗಳಿಗೆ ವಿರೋಧವಾಗದಂತೆ ಇಲ್ಲಿನ ಮಾತು, ನಡತೆ, ವ್ಯವಹಾರ ನಡೆದುಕೊಳ್ಳುವವರೆಗೂ ಅವೆಲ್ಲಕ್ಕೂ ಅವಕಾಶ ಕೊಡಬೇಕಾಗುತ್ತದೆ. ಇವೆಲ್ಲಕ್ಕೂ ಪ್ರಮಾಣಗಳನ್ನು – ಯಾವುದಕ್ಕೆ ಹೆಚ್ಚು, ಯಾವುದಕ್ಕೆ ಕಡಮೆ ಎಂಬ ವಿವರವಾದ ಕಾರ್ಯಕ್ರಮ – ಕೇಂದ್ರ ಸರಕಾರಕ್ಕೆ ಒಳಪಟ್ಟು ಗೊತ್ತಾಗಬೇಕಾಗುತ್ತದೆ. ಸರ್ಕಾರಕ್ಕೆ, ವಿರೋಧ ಪಕ್ಷಗಳೆನ್ನುವ ಎಲ್ಲರಿಗೆ ಉಕ್ತಿ, ಧರ್ಮ, ನ್ಯಾಯ ಸಲ್ಲುವಂತೆ, ಸ್ವಾತಂತ್ರ್ಯ ಸಮಾನತೆ ಇರುವಂತೆ, ಸರ್ವಜನ ಸಮ್ಮತವಾದ ಸಂಸ್ಥೆಯಾಗಿ ನಡೆಯಬೇಕಾಗುತ್ತದೆ. ಇದು ಒಂದು ಕಡೆ ಆಡಳಿತ ವ್ಯವಸ್ಥೆಯ ದೃಷ್ಟಿಯಿಂದಲೂ ಕಾರ್ಯಕ್ರಮಗಳ ವಿಚಕ್ಷಣೆ, ದಕ್ಷತೆಯ ದೃಷ್ಟಿಯಿಂದಲೂ ಒಂದು ಸಮತೋಲವನ್ನು ಸ್ಥಾಪಿಸುವ ಮಹಾಗತ್ಯವಾದೀತು. ಮೇಲೆ ಕುಳಿತು ಧೋರಣೆಯನ್ನೂ ನಿಯಮ ನಿರ್ಬಂಧಗಳನ್ನೂ ಅವಕಾಶಗಳನ್ನೂ ಕಲ್ಪಿಸುವ ವರ್ಗದಲ್ಲಿ ಸರಕಾರದ ಕೈ, ಪಾವಿತ್ರ್ಯ ಎಷ್ಟರ ಮಟ್ಟಿಗಿರತಕ್ಕದ್ದು ಎಂಬುದು ಸೂಕ್ಷ್ಮವಾಗಿ ಪರಿಶೀಲಿಸಬೇಕಾದ್ದು. ಪಕ್ಷಗಳ ನಾಯಕರೂ ಸರ್ಕಾರದ ಅಧಿಕಾರಿಗಳೂ ಮೇಲಿನ ಸಂಸ್ಥೆಯಲ್ಲಿ ಎಷ್ಟು ಮಂದಿ ಇರುತ್ತಾರೆ, ಅವರ ಸ್ಥಾನಮಾನ ಏನು ಎಂಬುದರಲ್ಲಿ ನಾಳಿನ ಕಾರ್ಯ ರೂಪಗೊಳ್ಳಲಿದೆ.

ಈವರೆಗೆ ಇದಕ್ಕೆ ಒದಗುತ್ತಿದ್ದ, ಇದು ತೆರಬೇಕಾಗಿದ್ದ ಹಣವೆಲ್ಲ ಸರ್ಕಾರದಿಂದಲೇ ಆಗುತ್ತಿತ್ತು. ಈ ಭಾಗಕ್ಕೆ ಸಂಬಂಧಿಸಿದ ಎಲ್ಲವನ್ನೂ ಬಳುವಳಿಯಾಗಿ ಅಥವಾ ಮೂಲಧನವಾಗಿ ಎಂಬಂತೆ ಸರ್ಕಾರ ಈ ಸಂಸ್ಥೆಗೆ ಒಪ್ಪಿಸಿರುತ್ತದಾದೀತು. ಇದು ವಿಸ್ತಾರಗೊಳ್ಳಲೂ ಬೆಳೆಯಲೂ ಅವಕಾಶಗೊಳ್ಳಲೂ ಬೇಕಾದ ಇನ್ನಷ್ಟು ಹಣದ ನೆರವನ್ನು ಕೆಲವು ವರ್ಷಗಳ ಕಾಲ ಅದಕ್ಕೆ ಸಹಾಯಧನವಾಗಿ ಕೊಟ್ಟರೆ ಯಂತ್ರ ತಂತ್ರಾದಿಗಳನ್ನು ಉತ್ತಮಪಡಿಸಿಕೊಳ್ಳಲು ನೆರವಾಗುವುದು. ಅಂಚೆ, ವಾರ್ತಾವಾಹನ, ವಾರ್ತಾಸಂಸ್ಥೆಗಳು, ವಿದ್ಯುಚ್ಛಕ್ತಿಯ ಒದಗಣೆ ಸಂಸ್ಥೆಗಳಿಗೆ ಸಲ್ಲಿಸಬೇಕಾದ ಹಣ, ಧ್ವನಿಮುದ್ರಿಕೆಗಳ ಶೇಖರಣೆಯಲ್ಲಿ ಬೇಕಾಗುವ ಟೇಪ್‌ಗಳ ಸಂಚಯ ಇತ್ಯಾದಿಗೆ ಅಂಥ ಸಹಾಯಧನವನ್ನು ಬಳಸಬೇಕಾಗುತ್ತದೆ. ಈ ಸಂಸ್ಥೆಯಿಂದ ಸಂಪಾದನೆಯಾಗುವ ಎಲ್ಲ ರೇಡಿಯೋ ಸೆಟ್, ಟೆಲಿವಿಷನ್ ಸೆಟ್ ಮುಂತಾದ್ದನ್ನು ಕೊಳ್ಳುವಂಥವರಿಂದ ಎಲ್ಲ ರುಸುಮುಗಳು, ವಾಣಿಜ್ಯಗಳ ತೆರವುಗಳು, ಸರ್ಕಾರವೂ ಇತರ ವ್ಯಾಪಾರ ಉದ್ಯೋಗ ಮಂಡಳಿಗಳೂ ಕಳಿಸುವ ಪ್ರಕಟಣೆಗಳ ರುಸುಮು ಎಲ್ಲವೂ ಇದಕ್ಕೆ ಹಣ ಸಂದಾಯ. ಮುಂದೆ ಎಷ್ಟು ಬಗೆಯ ಜನರಿಗೆ ಪ್ರಿಯವಾಗುವ, ಜನರಂಜನೆಗೆ ಅವಕಾಶ ಕೊಡುವ ಪ್ರಪಂಚವಾಗುತ್ತದೆಯೊ ಅಷ್ಟು ಸಂಖ್ಯೆಯ ಜನ ಇದಕ್ಕೆ ಪ್ರೋತ್ಸಾಹ ಕೊಟ್ಟರೆ ಅಷ್ಟು ಹಣ ಸಂಸ್ಥೆಗೆ ದೊರೆತು ಲಾಭ ಬರುತ್ತದೆ. ಸರ್ಕಾರವೇ ನಾಳೆ ಇಲ್ಲಿನ ಲಾಭದಲ್ಲಿ ಅಂಶವನ್ನು ಕೇಳಬಹುದು: ರೈಲ್ವೆಯಲ್ಲಿ, ಆರ್.ಬಿ. ಐ., ಅಲ್ಲಿ, ಪಿ ಅಂಡ್ ಟಿ. ಸಂಸ್ಥೆಯಲ್ಲಿ ಇರುವಂತೆ. ಲಾಭ ಭಾಗವನ್ನು ಸರ್ಕಾರ ಕೇಳುವುದು ನ್ಯಾಯವೇ ಆಗುವುದು.

ಏನೇ ಆಗಲಿ, ಇದು ಸ್ವಾಯತ್ತ ಸಂಸ್ಥೆ ಆಗುವುದು ಬಹುಕಾಲದ ಆಸೆ. ಅದು ನೆರವೇರುವುದಾದರೆ ಸಂತೋಷ. ವರ್ಷವರ್ಷಕ್ಕೂ ಅದರ ಕಾರ್ಯ ನಿರ್ವಹಣೆ, ವಿದ್ಯಾ ಪ್ರಚಾರ, ಮನೋರಂಜನೆ ಹೆಚ್ಚು ಸಂಖ್ಯೆಯ ಜನರಿಗೆ ಪ್ರಿಯವಾದರೆ ಅಷ್ಟೂ ಅಷ್ಟು ದೇಶದ ಸಂಸ್ಕೃತಿಯೂ ತಿಳಿವಳಿಕೆಯೂ ಸಂತೋಷವೂ ಹೆಚ್ಚುವುದು. ನೂರಕ್ಕೆ 70 ಮಂದಿ ಅಕ್ಷರಸ್ಥರಿಲ್ಲದಿರುವ ಜನಕ್ಕೆ ದೂರದರ್ಶನಿ ಮಾಡಲಾಗದ ಕೆಲಸವೇ ಇಲ್ಲ. ಇದೇ ನಾಳೆ ಶಾಲೆಗಳ, ವಿಶ್ವವಿದ್ಯಾನಿಲಯಗಳ ಕಾರ್ಯವನ್ನು ಮಾಡುವುದು ಶಕ್ಯವಾಗಬಲ್ಲದು. ಅಷ್ಟು ಅವಕಾಶ ತೆರೆವ ಸಾಧನವಾಗಿ – ಕೈಗಾರಿಕೆ, ಶಾಸ್ತ್ರ ಪ್ರಯೋಗ ಪರೀಕ್ಷೆಗಳು, ಆರೋಗ್ಯ ಸಂಸ್ಥೆ, ಸಮಾರಂಭಗಳ ಕ್ರಿಯಾಕಲಾಪ, ದೇಶವಿದೇಶಗಳ ದರ್ಶನ ಎಲ್ಲವೂ ಕಣ್ಣಿಗೆ ಕಟ್ಟುವಂತಾಗಿ ಆಯಾ ಪ್ರಾಂತ ಭಾಷೆಯಲ್ಲಿ ಅವು ನಡೆಯವಂತಾದರೆ, ಇದಕ್ಕಿಂತ ದೊಡ್ಡ ವಿದ್ಯಾಪ್ರಚಾರ, ಸಂತೋಷದ ಹರವು, ಕ್ರಿಯಾವಿಧಾನ ಇನ್ನೊಂದಿರುವುದಿಲ್ಲ. ಇದು ಪ್ರೋತ್ಸಾಹ ಕೊಡುವ, ಧನ ವಿತರಣೆ ಮಾಡುವ ರೀತಿ ವಿಧಾನ, ಧಾರಾಳವಾಗಿ ಸಂಗತಿಗಳನ್ನು ಜನರನ್ನು ಆಯುವ ಸ್ವಾತಂತ್ರ್ಯ ತುಂಬಾ ನಾಜೂಕಿನದು. ಆದ್ದರಿಂದ ಎಲ್ಲ ಕಡೆಗೂ ನಿಗಾ ಇಟ್ಟೇ, ಅವಿವೇಕಗಳಿಗೆ ಎಡೆಕೊಡದೆ ನಡೆಯಬೇಕು ಮಾತ್ರ. ಭಾರತ ಜೀವನದ ಸಮಸ್ತವೂ ವಿವಿಧ ವಿಪುಲವಾಗಿ ವ್ಯಕ್ತಪಡಿಸುವಂತೆ ಈ ಸಂಸ್ಥೆಯ ಒಂದು ಹೊಸ ತಂತ್ರದಿಂದ ಒಳನಾಡಿಗೂ ಹೊರದೇಶಗಳಿಗೂ ಪ್ರತಿಬಿಂಬಿತವಾಗುವಂತೆ ಆಗುತ್ತದೆ.

ಒಂದು ಮಾತನ್ನು ಹೇಳಬಹುದು : ಈ ವರೆಗೂ ಈ ಸಂಸ್ಥೆ ಸರ್ಕಾರಕ್ಕೆ, ಪಾರ್ಲಿಮೆಂಟಿಗೆ ನೇರವಾಗಿ ಸಂಬಂಧಿಸಿತ್ತು. 'ಭಾರತಿ'ಯಾಗಿ ಸ್ವಾಯತ್ತವಾದಾಗ ಮಂತ್ರಿಮಂಡಲ ಇದಕ್ಕೆ ಹೊಣೆಯಾಗುವುದಿಲ್ಲ. ಇದು ನಾಡಿನ ಸಮಸ್ತ ವರ್ಗಗಳವರಿಗೂ ತೆರೆಯುತ್ತದೆ, ಆದರೆ ಟೀಕೆಗೆ ಗುರಿಯಾಗಬೇಕಾಗುತ್ತದೆ. ಈ ಸಂಸ್ಥೆಯ ಮೇಲಧಿಕಾರಿ ಮಂಡಲಿ ಇದನ್ನು ಹೇಗೆ ಸಮರ್ಪಕವಾಗಿ ನೆರವೇರಿಸುತ್ತದೆ ಎಂಬುದನ್ನು ಪರಿಶೀಲಿಸ ಬೇಕಾಗುತ್ತದೆ. ಎಂಟು ದಿಕ್ಕುಗಳಲ್ಲ, ಹತ್ತು ದಿಕ್ಕುಗಳು ಎಂದು 'ದಶರಥ' ಎಂಬ ಮಾತಿನಲ್ಲಿದೆ. 8ರಲ್ಲಿ ಎರಡು ಊರ್ಧ್ವ–ಅಧರ. ನಾನು ಇನ್ನೆರಡನ್ನು ಸೇರಿಸುತ್ತೇನೆ– ಅಂತರ, ಅವಾಂತರ ಎಂದು. ಈ ಎಲ್ಲ ಕಡೆಯ ಗಾಳಿಗಳಿಗೂ ಟೀಕೆ ಆಕ್ಷೇಪಣೆಗಳಿಗೂ ಈ ಸಂಸ್ಥೆ ತೆರೆದು ನಿಲ್ಲಬೇಕಾಗುತ್ತದೆ. ಇಲ್ಲಿ ಕೆಲಸ ಮಾಡುವವರು ಯಾವ ಉದ್ಯೋಗ ಸುರಕ್ಷತೆಯಿಂದ ನಾಳೆಗೆ ಹೇಗೆ ಕೆಲಸ ಮಾಡುತ್ತಾರೆ, ಅವರು ಅನ್ಯಾಯವನ್ನು ಹೇಗೆ ಸಹಿಸಬೇಕಾಗುತ್ತದೆ ಎಂಬ ಸಂಗತಿಯೂ ಹಾಗೇ ಪರ್ಯಾಲೋಚ್ಯ.

ಜುಲೈ 1, 1978

❑

# 14. ಪೊಲೀಸ್ ದಳ: ಜನ ರಕ್ಷಕರು, ಸ್ನೇಹಿತರು

ಬೆಂಗಳೂರು ನಗರ ಬೆಳೆಯುತ್ತಿದೆ. 2-3 ಲಕ್ಷ ಜನ ಸಂಖ್ಯೆಯಿರುತ್ತಿದ್ದುದು 10-15 ಲಕ್ಷ ಜನವರ್ಗ ಇಲ್ಲಿ ವಾಸ ಮಾಡುತ್ತಿದೆ. ಇತರ ಭಾಗಗಳ ಕನ್ನಡ ಪ್ರದೇಶಗಳು ಕೂಡಿ ಮೈಸೂರು ದೊಡ್ಡ ರಾಜ್ಯವಾದಾಗಿಂದ, ಈ 14 ವರ್ಷಗಳಲ್ಲಿ ಆಗಿರುವ ಸಂಖ್ಯೆ, ಸಂಚಾರಗಳ ಸಮಸ್ಯೆ ಬಹು ದೊಡ್ಡದು. ಮಲ್ಲೇಶ್ವರ, ಬಸವನಗುಡಿ, ಹಳೆಯ ಕಾಲದ ದಂಡಿನ ಪ್ರದೇಶಗಳಲ್ಲಿ ಸ್ವತಂತ್ರ ಪೇಟೆಗಳು, ಅನುಕೂಲಗಳು ಇವೆ. ಆದರೂ ಬಹು ಮಟ್ಟಿಗೆ ಹಳೆಯ ಬೆಂಗಳೂರಲ್ಲಿ ಪೇಟೆಗೆ ಜನ ಬರಬೇಕಾದ ಆವಶ್ಯಕತೆ ಕಡಮೆಯಾಗಿಲ್ಲ. ದಕ್ಷಿಣದಿಂದ ಪೇಟೆ, ಆಫೀಸುಗಳಿಗೆ ಆ ಮೂಲಕ ಹೋಗಬೇಕು. ಉತ್ತರದಿಂದ ಪೇಟೆಗೆ, ಆಸ್ಪತ್ರೆಗಳಿಗೆ ಬರಬೇಕು. ಚಿಕ್ಕಪೇಟೆಯಿಂದ ಕೆಂಪೇಗೌಡ ರಸ್ತೆಯನ್ನು ಸೇರಿಸುವ ರಸ್ತೆಯೊಂದನ್ನು ಬಿಟ್ಟರೆ ಹಳೆಯ ಪಟ್ಟಣ ಸುಮಾರು ಇದ್ದಂತೆಯೇ ಇದೆ. ಅಲ್ಲಿನ ಜನದ ಸಾಂದ್ರತೆ ಒಂದಕ್ಕೆ ಹತ್ತರಷ್ಟು ಹೆಚ್ಚಿದೆ. ಸಂಚಾರವೂ ಹಾಗೆಯೇ. ಇವೊತ್ತಿನ ಕಷ್ಟ ವಾಹನಗಳ ಸಂಚಾರದ್ದು. ಇವುಗಳ ವ್ಯವಸ್ಥೆ ಮೊದಲಿಗಿಂತ ಹೆಚ್ಚು ವಿಚಕ್ಷಣೆಯಿಂದ ನಡೆಯುತ್ತಿರುವುದೂ ಹೆಚ್ಚು ಸಂಖ್ಯೆಯ ಪೊಲೀಸ್ ಮಂದಿ ಇದರಲ್ಲಿ ತೊಡಗಿರುವುದೂ ನಿಜ. ಆದರೂ ಇಲಾಖೆಗಳು ಕೆಲಸಗಳನ್ನು ಹಂಚಿಕೊಂಡಿವೆ. ಶಾಂತಿ ಮತ್ತು ಸುರಕ್ಷಣೆ ಕಾಪಾಡುವ ಭಾಗ; ಅಪರಾಧ, ಹಿಂಸೆ, ದೌರ್ಜನ್ಯ ತಡೆಯುವ ಭಾಗ; ಸಂಚಾರ ವ್ಯವಸ್ಥೆಗೆ ಏರ್ಪಟ್ಟಿರುವುದು; ಗುಪ್ತ ನೌಕರವರ್ಗ, ಮೇಲ್ವಿಚಾರಣೆಯ ಭಾಗ ಇತ್ಯಾದಿ. ಇವು ಬೇರೆ ಬೇರೆ ಸ್ಥಳಗಳಲ್ಲಿ ಆ ಆ ಕೆಲಸಗಳನ್ನು ನಿರ್ವಹಿಸುತ್ತಿವೆ. ಹೀಗಾಗಿ ಜನಕ್ಕೆ, ಸಂಚಾರಕ್ಕೆ, ವ್ಯಾಪಾರಕ್ಕೆ ಹೆಚ್ಚು ನೆಮ್ಮದಿ ಬಂದಿದೆ. ಇಲ್ಲದಿದ್ದರೆ ಈ ಊರು ಗೊಂದಲ - ನರಕ ಆಗುತ್ತಿತ್ತು. ಈ ಮಟ್ಟಿಗೆ ಸುವ್ಯವಸ್ಥೆಯನ್ನು ಏರ್ಪಡಿಸಿರುವ ಪೊಲೀಸ್ ಇಲಾಖೆ ನಮಗೆ ವಂದ್ಯವಾದ್ದು.

ಅವರ ಕಷ್ಟಗಳು ಸಾವಿರವಿರಬೇಕು. ನಾನು ಹೇಳುತ್ತಿರುವುದನ್ನು ಅವರು ಸಾವಿರ ಸಲ ಯೋಚಿಸಿ ಈವರೆಗೇ ಕಾರ್ಯಗಳನ್ನು ಕೈಗೊಳ್ಳುತ್ತಿರಬೇಕು. ಕಟ್ಟುನಿಟ್ಟು ಅವರನ್ನು ಸದಾ ನಡಸುತ್ತದೆ. ಅದಕ್ಕೆ ಜನದ ಹಿತವೇ ಗುರಿಯಾದರೂ, ಆ ಕಟ್ಟುನಿಟ್ಟಿನಿಂದ ಜನಕ್ಕೆ ತೊಂದರೆ ಆಗದಿರುವಂತೆ ಅದನ್ನು ಏರ್ಪಡಿಸುವ ಹೊಣೆ, ಸಂತೋಷ

ಅವರದಾದರೆ ಉಪಕಾರ. ಆದರೆ ಬಹುಕಾಲದಿಂದ ಪೊಲೀಸರನ್ನು ಕಂಡರೆ ಸಾಮಾನ್ಯ ಜನಕ್ಕೆ ಸ್ನೇಹಬುದ್ಧಿ ಇಲ್ಲ. ಜನ ತಮ್ಮ ಅಂಕೆಯಲ್ಲಿ ನಡೆಯಬೇಕಾದವರು, ಇಲ್ಲವಾದರೆ ಹೊಡೆದೇವು, ಬಡಿದೇವು ಎಂಬ ಭಾವನೆ ಪೊಲೀಸರಲ್ಲಿ ಇನ್ನೂ ಇದೆ. ಇವರ ಸಂಶಯ ಕಡಮೆಯಾಗಬೇಕು. ಅವರ ಮರ್ಯಾದೆಯ ನಡತೆ ಇನ್ನಷ್ಟು ಹೆಚ್ಚಬೇಕು.

ಸಾಮಾನ್ಯವಾಗಿ ಪೊಲೀಸ್ ಪ್ಯಾದೆಗಳು ಹೆಚ್ಚು ಓದಿ ಸುಶಿಕ್ಷಿತರಾದವರಲ್ಲ. ಅವರ ಕವಾಯತ್ತು ಅವರನ್ನು ಶಿಸ್ತಿನಿಂದ ನಡೆಯುವುದಕ್ಕೂ, ದಂಡಿಸುವುದಕ್ಕೂ, ದಸ್ತಗಿರಿ ಮಾಡುವುದಕ್ಕೂ, ಜನಗಳ ಕೈಗೆ ಸಿಕ್ಕಿದರೆ ಪೀಡೆಗೆ ಒಳಗಾಗುವುದಕ್ಕೂ, ಅವರ ಕೈ ನಡೆಯುವವರೆಗೂ ಜನದ ಮೇಲೆ ಜಬರ್‌ದಸ್ತ್ ಮಾಡುವುದಕ್ಕೂ ತರಬಿಯತ್ತಾಗಿ ಪಳಗಿದ ಪ್ರಪಂಚ. ಈಗ ಬಹುಮಟ್ಟಿಗೆ ಮೇಲಧಿಕಾರಿ ವರ್ಗದವರು ಓದಿದವರೂ ಪದವೀಧರರೂ ಆಗುತ್ತಿರುವುದು ತುಂಬಾ ಶುಭದ ಸಂಗತಿ. ಅವರಲ್ಲಿ ಬಹುಜನಕ್ಕೆ ಪ್ರಜಾಸತ್ತೆಯ ನೇಮ, ಆಶೋತ್ತರ, ವಿಧಾನ, ರೀತಿ ಗೊತ್ತಿವೆ. ಎರಡು ಕಡೆಯವರೂ ಮರ್ಯಾದೆ ಕೊಟ್ಟು ಮರ್ಯಾದೆ ತೆಗೆದುಕೊಳ್ಳಬೇಕೆಂಬ ಮನಸ್ಸು ಬೆಳೆದಿದೆ. ಹೀಗಿದ್ದರೂ ಇಲಾಖೆಗೆ ಸಂಬಂಧಪಟ್ಟ ಕೂಡಲೆ ಒಂದು ದರ್ಪ, ಒರಟುತನ ಸುಸಂಸ್ಕೃತರಿಗೂ ಬರಬಲ್ಲದು. ಓದು ಕಲಿತು ಪಾಸು ಮಾಡಿದರೆ ಸಜ್ಜನಿಕೆ ಬರುತ್ತದೆಯೆಂದು ನಂಬಿಕೆಯಿಲ್ಲ ನನಗೆ. ಖಾಕಿ ಹಾಕಿದ ಕೂಡಲೇ ಒಂದು ಸೆಡೆತ ಬರುತ್ತದೆ. ಬಿಸಿಲಲ್ಲಿ ಮಳೆಯಲ್ಲಿ ಖಾಕಿ ಧರಿಸುವ ಕಷ್ಟ ಅವರಿಗೂ ಅವರ ಪಾಲಿನ ಭಗವಂತನಿಗೂ ಗೊತ್ತು. ಬೇರೆ ಬೇರೆ ಋತುಮಾನಕ್ಕೆ ಪೋಷಾಕು ಬದಲಾಗುವಂತಾದರೆ ಅವರ ಕಷ್ಟ ಕಡಮೆಯಾದೀತೇನೊ. ಇಲಾಖೆಯ ಖರ್ಚಿನಿಂದ ದಿನಾ ಕೆಲಸದ ಮೊದಲಲ್ಲಿಯೊ ನಡುವೆಯೊ ಒಂದು ಬಟ್ಟಲು ಕಾಫಿ, ಸ್ವಲ್ಪ ತಿಂಡಿ ದೊರೆಯುವಂತೆ ಮಾಡಿದರೆ ಅವರ ಸ್ಥಿತಿ ಹೆಚ್ಚು ವಿಶ್ವಾಸದ್ದಾದೀತು. ಇಂಥ ಸಲಹೆಯನ್ನು ಕೊಡುವುದು ಬುದ್ಧಿವಂತರ ಲಕ್ಷಣವಲ್ಲ. ಖಜಾನೆಗೆ ತಕರಾರಿನದು. ಆದರೆ ಇಷ್ಟು ಕೆಲಸಗಳನ್ನು ಅವರಿಂದ ಮಾಡಿಸಿಕೊಳ್ಳುವ ನಗರ ಕಾರ್ಪೊರೇಷನ್‌ನವರು ಆ ಬಗೆಗೆ ನೆರವು ಕೊಟ್ಟರೆ ಆದೀತು. ಅವರ ಪರಿಸ್ಥಿತಿ, ಉಪಪತ್ತಿ, ಮನಸ್ಸು ಹೇಗೊ.....

ಹಳೆಯ ಊರೆಂದೆ: ರಿಸರ್ವ್ ಪೊಲೀಸ್ ಕಚೇರಿಯಿಂದ ಹಿಡಿದು ಮೈಸೂರು ರೋಡು ನಗರಸಭೆ ಕಟ್ಟಡದವರೆಗಿನ ಭಾಗ; ಅಲ್ಲಿಂದ ಮೈಸೂರು ಬ್ಯಾಂಕ್, ಹಳೆಯ ಧರ್ಮಾಂಬುಧಿ ಕೆರೆಯ ಭಾಗ; ಅರಳೇಪೇಟೆ ಚೌಕದಿಂದ ಯುನೈಟೆಡ್ ಇಂಡಿಯಾ ಕಟ್ಟಡದ ವರೆಗಿನ ಭಾಗ. ಆ ಸುತ್ತಲ ಪ್ರಪಂಚ ಬಹುಮಟ್ಟಿಗೆ ಹಣವುಳ್ಳ ಶ್ರೀಮಂತರು, ದೊಡ್ಡ ಅಧಿಕಾರಿಗಳು, ದೊಡ್ಡ ಕಾರುಗಳಲ್ಲಿ ತಿರುಗುವವರದು. ಈ ಭಾಗದ ಕಷ್ಟ ಅರಿಯಲು ವಾರಕ್ಕೊಂದು ಸಲ ಬೇಡ, ತಿಂಗಳಿಗೊ ಆರು ತಿಂಗಳಿಗೊ ಒಂದು ಸಲ ಸರ್ಕಾರದ ಅಧಿಕಾರಿಗಳು, ಮೋಟಾರು ಕಾರು ಒಡೆಯರು ಇಲ್ಲಿ ಒಂದು ಗಂಟೆ ಕಾಲುನಡಿಗೆಯಲ್ಲಿ ತಿರುಗಾಡಿದರೆ ಸಂಚಾರದ ಕಷ್ಟ ಗೊತ್ತಾಗುತ್ತದೆ. ಆ ಪುಣ್ಯವನ್ನು



ಅವರು ಕಟ್ಟಿಕೊಳ್ಳಬಾರದೆ? ಊರಿನ ಕಷ್ಟ ಹಾಗಲ್ಲದೆ ಕಡಮೆಯಾಗುವುದಿಲ್ಲ. ಮೈಸೂರು ರೋಡಿನಿಂದ ಸ್ಟೇಷನ್‌ಗೆ ಹೋಗಲು ಎರಡು ರಸ್ತೆಗಳುಂಟು. ಒಂದು ಗೂಡ್ಸ್‌ಷೆಡ್ ದಾರಿ, ಇನ್ನೊಂದು ಚರ್ಚಿನ ಮುಂದೆ ಅರಳೆಪೇಟೆಯದು. ಮಾರ್ಕೆಟ್ ಚೌಕ, ಮಾರ್ಕೆಟಿಂದ ಗುಂಡೋಪಂತ್ ರಸ್ತೆಯ ಮೂಲಕವಾಗಿ ದೊಡ್ಡಪೇಟೆಗೆ, ಆರ್ಕಾಟ್ ಶ್ರೀನಿವಾಸಾಚಾರ್ ಬೀದಿಗೆ ಹೋಗುವ ದಾರಿ. ಆ ನಡುವೆಯ, ಪುಡಿ ಪುಟ್ಟರೆ ರಸ್ತೆಗಳು, ಬಳೇಪೇಟೆ, ನಗರ್ತರಪೇಟೆ, ಕಬ್ಬನ್‌ಪೇಟೆ ಭಾಗ, ಕೆಂಪೇಗೌಡ ರಸ್ತೆ, ಸ್ವಲ್ಪಮಟ್ಟಿಗೆ ಟೌನ್‌ಹಾಲಿಂದ ಸಜ್ಜನ್ ರಾವ್ ಸರ್ಕಲ್‌ವರೆಗೆ ಬರುವ ಭಾಗ, ಇಷ್ಟು ಭಾಗವನ್ನು ಇವರು ತಿರುಗಬೇಕು. ಇವುಗಳಲ್ಲಿ ಫುಟ್‌ಪಾತ್ ಕಡಮೆ, ತಿರುಗುವ ಜನ ಜಾಸ್ತಿ. ಈಗ ಓಡಿಯಾಡುವ, ಅಟ್ಟುವ, ತರುಬುವ, ದಾಟುವ ಆಟೋರಿಕ್ಷಾ, ಕಾರುಗಳ ಸಂಖ್ಯೆ ಇರುವೆ ಪಂಕ್ತಿ. ವಾಹನಗಳು ಎರಡು ಕಡೆ – ನಾಲ್ಕು ಕಡೆಯಿಂದ ತಿರುಗುವುದನ್ನು ಕಡಮೆ ಮಾಡಿದರೆ, ಜನ ಬದುಕಿಕೊಂಡಾರು. ಇದ್ದಕ್ಕಿದ್ದಂತೆ ಅಲ್ಲಲ್ಲಿ ನಿಂತುಬಿಡುವ ಗಾಡಿಗಳು, ಹೇಗೆ ನಿಲ್ಲುವುವೊ, ತಿರುಗುವುವೊ ಎಂಬ ಭಯ, ಜೀವ ಭಯ. ಸತ್ತರೆ ಕಷ್ಟವಿಲ್ಲ; ನಷ್ಟ ಕಷ್ಟ ಹೊಣೆಗಾರಿಕೆ ಇನ್ನೊಬ್ಬರ ಮೇಲೆ ಬೀಳುತ್ತದೆ. ಕೈಯೊ ಕಾಲೊ ಮುರಿದು ಊನವಾಗಿ ಕೂತರೆ ಮಿಕ್ಕವರಿಗೂ ಕಷ್ಟ, ಊನಗೊಂಡವರಿಗೂ ಕಷ್ಟ. ಇದಕ್ಕೆ ವಾಹನ ಸಂಚಾರದ ನಿಯಂತ್ರಣವನ್ನು ಇನ್ನಷ್ಟು ಸಲೀಸುಗೊಳಿಸಬೇಕು. ಒಳಕ್ಕೆ ಬರುವ, ಹೊರಕ್ಕೆ ಹೋಗುವ ಒಂದೇ ಅವಕಾಶವನ್ನು ಹಲವು ಕಡೆ ಮಾಡಿರುತ್ತಾರೆಯಾದರೂ ಅದು ಸಾಲದು. ಅದು ಎರಡು ತಿಂಗಳು ಒಂದೇ ಸಮನೆ ನಡೆಯಬೇಕು. ವಾಹನಗಳು ಒಂದನ್ನೊಂದು ಹಿಂದೆ ಹಾಕುವ ಆತುರವಂತೂ ಪ್ರಾಣಾಪಾಯಕರ. ಹೆಂಗಸರು ಮಕ್ಕಳು, ಮುದುಕರು, ಕಿವಿ ಕೇಳದವರು ತಿರುಗಾಡಬೇಕಾಗುತ್ತದೆ. ಅವರ ರಕ್ಷಣೆ ವ್ಯವಸ್ಥೆಯ ಪ್ರಥಮ ಕಲ್ಪ. ತುಂಬ ವಿರತಣೆಯಿಂದ ಹಿಂದಿಗಿಂತ ಈಗ ವ್ಯವಸ್ಥೆ ನಡೆಯುತ್ತಿದೆ. ಆದರೆ ಸಾಲದು. ಇದನ್ನು ನೋಡಿಕೊಳ್ಳುತ್ತಿರುವವರ ಸಂಖ್ಯೆ ಹೆಚ್ಚಾಗಬೇಕು. ಇಲ್ಲಿ ಸರ್ವರೂ ಸರ್ವಥಾ ಎಡಕ್ಕೊ ಬಲಕ್ಕೊ ನಡೆಯಬೇಕು, ಸಂಚರಿಸಬೇಕು ಎಂಬ ನಿಯಮ ನಿಷ್ಠುರವಾಗಿ ಸಾಧಿಸಬೇಕು. ಮೇಲುಸ್ತುವಾರಿ ಪರೀಕ್ಷಕ ದಳ ಕಾಲು ಗಂಟೆಗೆ, ಅರ್ಧ ಗಂಟೆಗೆ ಒಮ್ಮೆ ತಿರುಗಾಡುತ್ತಿದ್ದರೆ ಮೇಲು.

ಚೌಕದಲ್ಲಿ ನಿಂತಿರುವ ಪೊಲೀಸರಿಗೆ ಯಾವ ಕಷ್ಟವನ್ನೂ ಹೇಳಿಕೊಳ್ಳಲಾಗುವುದಿಲ್ಲ. ಪಕ್ಕದಲ್ಲಿ ತೊಂದರೆಯಾದರೆ ಅವರು ಸ್ಥಾನ ಬಿಟ್ಟು ಬರುವುದಿಲ್ಲ. ಕಂಪ್ಲೇಂಟ್ ತೆಗೆದುಕೊಂಡು ಹೋಗಬೇಕಾದರೆ ಮೈಲು ದೂರ ಎಲ್ಲಿಯೊ ಇರುವ ಠಾಣೆಗಳಿಗೆ ಹೋಗಬೇಕು. ಅಲ್ಲಲ್ಲಿ ಪೊಲೀಸ್ ಟೆಲಿಫೋನ್ ಬೂತ್ ಇಟ್ಟು ಇದಕ್ಕೆ ಅವಕಾಶ ಮಾಡಿಕೊಟ್ಟರೆ ಮೇಲು. ಇಲಾಖೆಗಳಲ್ಲಿ ಸಾಗಣೆ ಸಂಚಾರ ವ್ಯವಸ್ಥೆಗೊಬ್ಬರು, ಗಲಾಟೆ ವ್ಯವಸ್ಥೆಯ ವರ್ಗ ಇನ್ನೊಂದು ಆಗಿರುವುದರಿಂದ ಇವರನ್ನೊ ಅವರನ್ನೊ ಬೇರೆ ಕೆಲಸಕ್ಕೆ ಕೇಳಿಕೊಳ್ಳುವ ಹಾಗಿಲ್ಲ. ಹಣವಿದ್ದ ಹೊರತು ಪೊಲೀಸರ ಪ್ರವೇಶ ಕಷ್ಟ.

ಪೊಲೀಸ್ ಸ್ಟೇಷನ್‌ಗಳಲ್ಲಿ ಕಂಪ್ಲೇಂಟ್‌ಗಳನ್ನು ತೆಗೆದುಕೊಳ್ಳುವುದು ಅನೇಕ ನಾಜೂಕುಗಳಿಗೆ, ಸಮಯಗಳಿಗೆ, ನಿರ್ಬಂಧಗಳಿಗೆ, ಭಯ ಸಂಗತಿಗಳಿಗೆ ಒಳಪಟ್ಟದ್ದು ಎಂದು ಕೇಳಿದ್ದೇನೆ. ಪೊಲೀಸ್ ಸ್ಟೇಷನ್ ಒಳಗೆ ಕಾಲಿಡದ, ಇಡುವುದಕ್ಕೆ ಸರ್ವಥಾ ಭಯಪಟ್ಟಿರುವ, ನಾನು ಅದನ್ನು ಕುರಿತು ಏನೂ ಹೇಳಲಾರೆ. ಹೊಸ ತರಗುಪೇಟೆ, ಹಳೆಯ ತರಗು ಪೇಟೆಗಳಲ್ಲಿ ರಸ್ತೆ ಯಾವುದೊ, ಮಂಡಿಗಳಾವುವೊ! ಲಾರಿ, ಟ್ರಕ್, ಗಾಡಿ, ಕೂಲಿಯವರ ಸಂದಣಿ ಜೇನುಗೂಡು; ಪಂಪ ಮಹಾಕವಿ ರಸ್ತೆ ಉದ್ದಕ್ಕೂ ಮೀನು ಎಲುಬು ತುಂಬಿದ ಲಾರಿ ಸಾಲು! ಸಂಸಾರದ ಬೀದಿಗಳಲ್ಲಿ ಸಾಗಣೆ ಏಜೆನ್ಸಿಗಳು! ಇವುಗಳ ಕಾಟವನ್ನು ಕಡಮೆ ಮಾಡಲು ದೊಡ್ಡ ಯತ್ನ ನಡೆಯಬೇಕಿದೆ.

ವಾಹನಗಳ ಸಂಚಾರದ ಬಗ್ಗೆ ಒಂದು ಮಾತು: ಜನಗಳನ್ನು ಒಯ್ಯುವವು ಕೆಲವು; ರಿಕ್ಷಾ, ಸಣ್ಣ ಮೋಟಾರ್, ದೊಡ್ಡವು ಇರುತ್ತವೆ. ಪ್ರಯಾಣಿಕರನ್ನು ಬಾಡಿಗೆಗೆ ಕೊಂಡು ಹೋಗುವವರಿಗೆ ಒಂದು ಅವಸರ. ಸಣ್ಣ ಕಾರುಗಳಲ್ಲಿ ಹೋಗುವವರಿಗೆ ಉದ್ದಿಷ್ಟ ಸ್ಥಾನಗಳಿಗೆ ಬೇಗ ಹೋಗಬೇಕು. ದೊಡ್ಡ ಕಾರುಗಳಿಗೆ ಪ್ರತಿಷ್ಠೆಯ ಅವಸರ. ಈ ಮೂರಕ್ಕೂ ಕಾಲ ಮೇಲೆ ನಡೆಯಬೇಕಾಗಿರುವವರು ತುತ್ತು. ಕಾಲು ನಡಿಗೆಯವರ ಸಂಖ್ಯೆ, ಕಾರಿಲ್ಲದವರ ಸಂಖ್ಯೆ ಒಂದು ಸಾವಿರ ಪಟ್ಟು ಹೆಚ್ಚು. ಊರಿನ ರಸ್ತೆ ಎಷ್ಟು ದೊಡ್ಡದಾಗಲಿ, ಅಷ್ಟೂ ಅಗಲ ಉದ್ದದ ಕಾರುಗಳ ಅಬ್ಬರ ಮಾರಕವಾಗುತ್ತದೆ. ಸದ್ದು ಮಾಡದೆ ಗಂಟೆಗೆ 40-50 ಮೈಲಿ ವೇಗದಲ್ಲಿ ಧಾವಿಸುವುದು ರೂಢಿ. 40-50 ಅಡಿ ಅಗಲವಿರುವ ರಸ್ತೆಗಳಲ್ಲಿ ಅವರದೇ ಪ್ರಭಾವ. ನಡೆಯುವ ಸಾವಿರ ಮಂದಿ ಫುಟ್ ಪಾತ್‌ಗೆ ಬರಬೇಕು. ಕಾರಲ್ಲಿ ಹೋಗುವವರಿಗೆ ಇವರ ಲಕ್ಷ್ಯವೇನು? ಸಿಕ್ಕಿಹಾಕಿಕೊಂಡರೆ ಸಾಯುತ್ತಾರೆ. ಕಾರುಗಳಿಗೆ ಸಿಕ್ಕಿ ಸಾಯದಂತೆ ನಿಮ್ಮನ್ನು ಕಾಪಾಡುತ್ತೇವೆಂದು ಪೊಲೀಸರು ಫುಟ್‌ಪಾತ್‌ನಲ್ಲಿ ನಡೆಯಿರಿ ಎನ್ನುತ್ತಾರೆ. ಫುಟ್‌ಪಾತ್ ಇದ್ದಾಗ ಇಕ್ಕಟ್ಟು. ಕೆಲವು ಕಡೆ ಮರಗಳು, ದನ, ನಾಯಿಗಳ ಸಂಸಾರ, ಸಾರವಯಸ್ಸು ಮುಗಿದು ಹೋದ ಜಟಕಾ ಕುದುರೆಗಳು, ತೊಂಡು ಬಿದ್ದ ಹಸು, ಎಮ್ಮೆಗಳ ಮೆರವಣಿಗೆ; ಊರೆಲ್ಲಾ 8-10 ದಿನ ತೆಗೆಯದ ಕಸ, ಕೊಳೆ; ಬೇರೆ ಕಡೆ ರಸ್ತೆ ಸರಿಮಾಡಲು ವರ್ಷಗಟ್ಟಲೆ ರಾಸಿಹಾಕಿರುವ ಜಲ್ಲಿ, ಡಾಂಬರದ ಡಬ್ಬ, ಮನೆ ಕಟ್ಟುವವರ ಸಾಮಗ್ರಿ; ರಸ್ತೆ - ನೀರು - ದೀಪ ಹಾಕುವವರ ಸಾಮಾನು ರಾಸಿ, – ಹೀಗೆ ಇರುವ ಕಡೆ ಸಾವಿರ ಜನ ಹೇಗೆ ಸಂಚಾರ ಮಾಡುವುದು? ಸಾಧಾರಣ ದಿನದಲ್ಲಿ ಹೀಗಾದರೆ, ಮಳೆಯ ದಿನಗಳಲ್ಲಿ ಇದು ಯಾತನೆಯ ಪ್ರಸಂಗ. ದೊಡ್ಡವರೆನಿಸಿಕೊಳ್ಳುವವರು, ಅಧಿಕಾರಿಗಳು ಮಳೆಯ ದಿನಗಳಲ್ಲಿ, ಜಾತ್ರೆಯ ಕಾಲಗಳಲ್ಲಿ ಒಂದು ಗಂಟೆ ಸಂಚಾರ ಮಾಡಿ ನೋಡಲಿ; ಈ ಕಷ್ಟ ಗೊತ್ತಾಗುತ್ತದೆ. ಮೊಳಕಾಲ ಮೇಲೆ ನೀರು ಹರಿಯುತ್ತಿರುತ್ತದೆ. ಅದನ್ನು ಸೀಳಿಕೊಂಡು ಬೈಸಿಕಲ್, ಸ್ಕೂಟರ್, ರಿಕ್ಷಾ ಬರುತ್ತವೆ. ಇದಕ್ಕೆ ಸೂಕ್ತ ವ್ಯವಸ್ಥೆ ಆಗಬೇಕು. ಪೂರ್ತಿಯಾಗಿ ಕೆಲವು ಊರೊಳಗಿನ ರಸ್ತೆಗಳನ್ನು ವಾಹನಗಳಿಗೆ ರದ್ದು ಮಾಡುವುದು ಶಕ್ಯವೇ ನೋಡಬೇಕು. ಸರಕು ಲಾರಿಗಳು ಬೇರೆ ದೊಡ್ಡ ಪಟ್ಟಣಗಳಲ್ಲಿರುವಂತೆ



ರಾತ್ರಿ 9-10 ಗಂಟೆಗಳ ಮೇಲೆ ನಿರ್ದಿಷ್ಟ ಪ್ರದೇಶಗಳಿಗೆ ಪ್ರವೇಶ ಮಾಡಲಿ, ನಿರ್ಗಮಿಸಲಿ. ಲಾರಿಗಳ ವೇಗ ಶ್ರೀಮಂತರ ಕಾರು ಮತ್ತು ಆಟೋರಿಕ್ಷಗಳ ವೇಗಕ್ಕಿಂತ ಹೆಚ್ಚು ಭಯಾವಹ. ಸಹಪ್ರಯಾಣಿಕರನ್ನು ಊರಿನ ಒಂದು ಜಾಗದಿಂದ ಇನ್ನೊಂದು ಕಡೆ ಒಯ್ಯುವ ಬಸ್ಸುಗಳ ಓಡಾಟ ಸಾಲದು. ಸ್ಟ್ಯಾಂಡುಗಳಲ್ಲಿ ಗಂಟೆಗಟ್ಟಲೆ ಜನಸಂದಣಿ ಇದ್ದು ನೂಕುನುಗ್ಗಲಾಗುತ್ತದೆ. ಕೆಲವೇಳೆ ಒಳಗೆ ಸ್ಥಳವಿದ್ದರೂ ಬಸ್ಸುಗಳು ನಿಲ್ಲದೆ ಹೊರಟುಹೋಗುತ್ತವೆ. ಬಲ ರಸ್ತೆಗೆ ತಿರುಗಲಿರುವಾಗ ಎಡದಲ್ಲಿ ಸುತ್ತಿ ಹೋಗಬೇಕು ಎಂಬ ಕ್ರಮವನ್ನು ಮರೆತು ಬಸ್ಸುಗಳು ಬಲಕ್ಕೆ ತಿರುಗಿ ರಸ್ತೆಯ ಆ ಕಡೆ ನಡೆಯುತ್ತಿದ್ದವರನ್ನು ತಲ್ಲಣಗೊಳಿಸುತ್ತವೆ. ಆ ಬಗೆಯ ಬಂದೋಬಸ್ತ್ ಚಾಮರಾಜಪೇಟೆ 5ನೇ ರಸ್ತೆಗೆ ತಿರುಗುವ, ಅಲ್ಲಿಂದ ಶಂಕರ ಮಠದ ಕಡೆ ಬಸವನಗುಡಿಯತ್ತ ತಿರುಗುವ, ಸಜ್ಜನ್‌ರಾವ್ ಸರ್ಕಲಿನಲ್ಲಿ ವಾಸವಿ ದೇವಸ್ಥಾನದ ಕಡೆಗೆ ಬರುವ ಬಸ್ಸುಗಳ ಓಡಾಟ ಇದಕ್ಕೆ ಸಣ್ಣ ಉದಾಹರಣೆ. ಇದು ಎಂಥ ಎಚ್ಚರಿಕೆ ಉಳ್ಳವರನ್ನೂ ತಲ್ಲಣಗೊಳಿಸುತ್ತದೆ. ಎಲ್ಲರೂ ಖಚಿತವಾಗಿ ಎಡಕ್ಕೆ ಮಾತ್ರವೇ ಹೋಗಬೇಕು - ಗಾಡಿಯವರು, ನಡೆಯುವವರು - ಎಂದು ದಾರಿ ತಿರುಗುವ ಪ್ರತಿ ರಸ್ತೆಯಲ್ಲಿಯೂ ಒಂದು ಸಣ್ಣ ಕಲ್ಲನ್ನೊ ಸಂಕೇತವನ್ನೊ ಮಾಡಿಸಿ, ಹಾಗೆ ನಡೆಯದವರಿಗೆ 2 ಸಲ ಬಲವಾದ ಶಿಕ್ಷೆ ವಿಧಿಸಿದರೆ ಆದೀತು. ಎರಡೂ ನಡೆಯುವುದಿಲ್ಲ. ಬಸವನಗುಡಿ ಕಡೆಯಿಂದ ಬರುವವರು ಮಾರ್ಕೆಟ್ ಚೌಕಕ್ಕೆ ಬಂದು ದಂಡಿನ ಮಾರ್ಕೆಟ್, ಅಲಸೂರು ಬಸ್ ಹಿಡಿಯಬೇಕಾದರೆ ಸಂಚಾರ ವ್ಯವಸ್ಥೆ, ವಾಹನ ವ್ಯವಸ್ಥೆ ತುಂಬ ಪ್ರಯಾಸಕರವಾಗುತ್ತದೆ. ಜನಕ್ಕೆ ಒಂದು ಪಕ್ಕದಲ್ಲಿ ಸರಿಯಾಗಿ ನಡೆವ ಬುದ್ಧಿ ಇನ್ನೂ ಕುದುರಿಲ್ಲ. ವಾಹನಗಳವರಿಗೆ ಜನದ ಲೆಕ್ಕವಿಲ್ಲ. ಶಿಕ್ಷಣ ಪಡೆಯುತ್ತಿರುವ 3-4 ಮಂದಿ ಪೊಲೀಸರನ್ನು ಮಾರ್ಕೆಟ್ ಮುಂದೆ, ಕಾರ್ಪೊರೇಷನ್ ಬಿಲ್ಡಿಂಗ್ ಹತ್ತಿರ ನಿಲ್ಲಿಸುವುದು, ವಾರಕ್ಕೆ ಎಂಟುಸಲ ದಾಟುಗಳನ್ನು – ಸರ್ಕಲ್‌ಗಳನ್ನು ಮಾರ್ಪಡಿಸಿ ತಿರುಗುವ ವಿಧಿ ನಿಯಮಗಳನ್ನು ವ್ಯತ್ಯಾಸ ಮಾಡುವುದು ಇನ್ನಷ್ಟು ಸ್ಥಿತಿಯನ್ನು ಜಟಿಲ ಮಾಡುತ್ತಿದೆ. ಇಂಥವೆಲ್ಲ ಏನೆಂದು ಬೆಳಸಿ ಹೇಳುವುದು? ಪೊಲೀಸ್ ಇಲಾಖೆಯವರು ತುಂಬ ಪ್ರಾಮಾಣಿಕತೆಯಿಂದ, ಶಿಸ್ತು ವಿಚಕ್ಷಣೆಗಳಿಂದ ನಡೆದುಕೊಂಡಾಗಲೂ ಇಂಥವು ಉಳಿಯುತ್ತವೆ. ಸಣ್ಣ ಸಂಬಳದ ಪೊಲೀಸರನ್ನು ಹೆಚ್ಚು ಕಟ್ಟುನಿಟ್ಟಾದ ವಿಧಿನಿಯಮಗಳಿಗೆ ಒಳಪಡಿಸಿ, ಅವರ ಆಶೋತ್ತರಗಳಿಗೆ ಗಮನ ಕೊಡದಂತೆ ಇಡುವುದು ಇನ್ನೊಂದು ಕಷ್ಟ. ಅಥವಾ ಅವರೇ ಕೆಲಸ ಮಾಡದೆ ಕೂತರೆ ಊರಿನ ಜೀವನ ನಡೆದೀತೆ?

ಶಾಂತಿ, ಸಮಾಧಾನ ಕಾಲಗಳಿಗೆ ಸಂದ ಮಾತು ಇದು. ದಿನ ಬೆಳಗಾದರೆ ಧರಣಿ, ಮುಷ್ಕರ, ಬಂದ್, ಕಲ್ಲೆಸತ, ಬಸ್ ಸುಡುವಿಕೆ, ಅಂಗಡಿ ಸಿನಿಮಾ ಮಂದಿರಗಳ ಮೇಲೆ ಹಲ್ಲೆ, ಪೀಡೆ ಹೆಚ್ಚಾಗುತ್ತಿರುವಾಗ ಪ್ರಶ್ನೆ ಹೆಚ್ಚು ಕಷ್ಟಕರವಾದ್ದು. ವಿದ್ಯಾರ್ಥಿಗಳಿದ್ದಾಗ ಒಂದು ತರಹ, ಕೆಲಸಗಾರರ ತಂಡ ಬಂದಾಗ ಇನ್ನೊಂದು ತರಹ, ರಾಜಕೀಯ ಪಕ್ಷಗಳು ಏರ್ಪಡಿಸಿದರೆ ಬೇರೆ ತರಹ, ಶಾಸನ ಮಂಡಲಿಗಳ ಸದಸ್ಯರೇ ಮುಂದಾಳಾಗಿ

ನಡಸಿದರೆ ಮತ್ತೊಂದು ವಿಚಿತ್ರ ತೆರ! ಇಂಥ ಪ್ರದರ್ಶನಗಳು ಊರಿಗೆ ತುಂಬ ಹಿಂಸೆಯನ್ನು ನಷ್ಟವನ್ನು ಕಾಟವನ್ನು ಉಂಟುಮಾಡುತ್ತವೆ. ಶಾಸನ ಸಭೆಗಳಲ್ಲಿ ಸರ್ವಸ್ವಾತಂತ್ರ್ಯ ವಹಿಸಿ ಮಾತನಾಡುವ ಜನ, ಸಾಮಾನ್ಯರಿಗೆ ದೊರೆಯದ ಅಧಿಕಾರ, ವಿಶೇಷ ಮರ್ಯಾದೆ ಇತರರಾರಿಗೂ ಸಲ್ಲದೆಂದು ಬೊಬ್ಬೆ ಇಡುವವರು ವಿವೇಕದಿಂದ ನಡೆದು ಊರ ಸುರಕ್ಷಣೆಯ, ಶಾಂತಿಯ ನಿಯಮವನ್ನು ಮುರಿದಾಗ ವಿಶೇಷ ಬಗೆಯ ಮರ್ಯಾದೆಗಳನ್ನು ಬೇಡುವುದು ತಪ್ಪು. ಶಾಸನ ಉಲ್ಲಂಘನೆ ಮಾಡುವಾಗ ಇತರರಂತೆ ಅವರೂ ಶಿಸ್ತಿಗೆ, ನಿರ್ಬಂಧಕ್ಕೆ, ಪೋಲೀಸರ ಅಂಕೆ, ದಂಡನೆಗಳಿಗೆ ಈಡಾಗಬೇಕು. ಪೋಲೀಸರಿಗೆ ಬೇರೆ ಮಾರ್ಗವಿಲ್ಲ. ಅಕ್ರಮ ಕೂಟ ಅತಿಗೆ ಹೋದಾಗ, ಅವರನ್ನು ತಡೆಯಬೇಕು, ಚೆದುರಿಸಬೇಕು ಎಂಬುದು ಅಗತ್ಯವೆಂದಾದಾಗ ಲಾಠಿಯ ಚುರುಕು, ಕಣ್ಣೀರುಗುಂಡು ಬಳಸುವುದು ರೂಢಿಯಾಗಿದೆ. ಇದು ಅಗತ್ಯವಾಗಬಾರದು. ಅಗತ್ಯ ಮಾಡಿಕೊಂಡಾಗ ಫಲವನ್ನು ವೀರರಂತೆ ಸಹಿಸಬೇಕಾದುದು ನಾಯಕರ ಕರ್ತವ್ಯ.

ಯಾವುದೊ ಒಂದು ವಿಶೇಷ ದಿವಸದ ಸಂಬಂಧದಲ್ಲಿ ನಾಲ್ಕು ಮಾತನ್ನು ಬರೆಯಬೇಕೆಂದು ಕರೆ ಕೊಟ್ಟಾಗ, ನಾನು ಈ ಮಾತುಗಳನ್ನು ಬರೆಯಲು ಸಂಕೋಚವಾಗುತ್ತದೆ. ಎಷ್ಟೋ ದೊಡ್ಡ ಶಿಸ್ತಿನಿಂದ, ವಿಚಕ್ಷಣೆಯಿಂದ ಈಗ ಪೋಲೀಸ್ ದಳ ಕಾರ್ಯ ನಿರ್ವಹಿಸುತ್ತಿದೆ. ಅವರು ಜನದ ರಕ್ಷಕರು, ಸ್ನೇಹಿತರು; ಜನರಿಗೆ ನೆರವು ಕೊಡುವ, ಊರ ದಾರಿ ತಿಳಿಸುವ, ಹಾಯಿಸುವ ಹಿತಚಿಂತಕರು. ಅವರನ್ನು ಟೀಕಿಸುವುದು ಸುಲಭದ ಕೆಲಸ. ಆದರೆ ಒಂದೇ ಒಂದು ದಿನ, ವಿದ್ಯುಚ್ಛಕ್ತಿಯ ಸರಬರಾಜಿಲ್ಲದ ರಾತ್ರಿ, ಪೋಲೀಸರಿಲ್ಲದಿದ್ದರೆ ಏನೆಲ್ಲ ಅನಾಹುತಗಳಾದೀತೆಂದು ಊಹಿಸುವುದೂ ಭಯಾನಕವೇ. ಅವರ ಶಿಸ್ತು, ದಕ್ಷತೆ, ಪ್ರಾಮಾಣಿಕತೆ ಇನ್ನಷ್ಟು ಹೆಚ್ಚಲಿ; ಅವರಿಂದ ಜನತೆಗೆ ಹೆಚ್ಚಿನ ರಕ್ಷಣೆ ದೊರೆಯುವಂತಾಗಲಿ.

❑

# 15. ವೃದ್ಧಾಪ್ಯದ ಎರಡು ಹಂತಗಳು

ವೃದ್ಧಾಪ್ಯ ಎಂಬುದು ಸಂಸ್ಕೃತದ ಪದದಂತೆ ಕಾಣುತ್ತಿದ್ದರೂ ದೇವಭಾಷೆಯಲ್ಲಿ ಅದಕ್ಕೆ ಶಬ್ದಸಿದ್ಧಿ, ಶಬ್ದಶುದ್ಧಿ ದೊರಕುತ್ತದೆಯೊ ಇಲ್ಲವೊ ಕಾಣೆ. ಆದರೆ ವ್ಯಾಕರಣಕಾರರು ಯಾವಾಗಲೂ ಪ್ರಯೋಗಶರಣರು ಎನ್ನುತ್ತಾರೆ. ಸಂಸ್ಕೃತದ ಪ್ರಯೋಗವನ್ನು ಕಟ್ಟಿಕೊಂಡು ಕನ್ನಡಿಗರಿಗೆ ಏನು ಆಗಬೇಕಾಗಿದೆ? ಕನ್ನಡದಲ್ಲಂತೂ ನನಗೆ ಬುದ್ಧಿ ಬಂದಾಗಿನಿಂದ ಆ ಮಾತು ಕೇಳಿದ್ದೇನೆ. ಈಗಲೂ ಬುದ್ಧಿ ಬಂದಿದೆಯೆ? ಗೊತ್ತಿಲ್ಲ. ಆದರೆ ಕನ್ನಡದಲ್ಲಿ ಆ ಮಾತು ರೂಢಿ. ಆದ್ದರಿಂದ ಕನಿಷ್ಠ ಪಕ್ಷ 70 ವರ್ಷಗಳ ಪ್ರಯೋಗ ಪರೀಕ್ಷೆ ಆ ಮಾತಿಗಾಗಿದೆ. ಮಕ್ಕಳು ಮರಿ ಹೆರುವುದೇತಕ್ಕೆ? ನಮ್ಮ ವೃದ್ಧಾಪ್ಯದಲ್ಲಿ ನಮಗೆ ಆಗುತ್ತಾರೆ ಎಂದು ತಾನೆ? – ಎಂದು ಮಾತನ್ನು ನಾನು ಕೇಳಿದ್ದು ನನ್ನ 10 ವರ್ಷದ ವಯಸ್ಸಿನಲ್ಲಿ; ಹಳ್ಳಿಯಲ್ಲಿ. ಆದ್ದರಿಂದ ಈ ಶಬ್ದ ಸಾಧು ಎಂದು ಎಂಥವರೂ ಒಪ್ಪಬೇಕು. ಅಂಥ ವೃದ್ಧಾಪ್ಯ ಬಹುಶಃ ನನಗೆ ಬಂದು ಬಹುಕಾಲ ಆಯಿತು. ಅದರ ಎರಡು ಹಂತಗಳು ಎಂದುದನ್ನು ಕುರಿತು ನಾನು ಈಗ ಮಾತನಾಡಬೇಕಿದೆ. ಸುಮಾರು ವೃದ್ಧಾಪ್ಯ ಬರುವುದು ಯಾವಾಗ ಎಂದು ಆಲೋಚನೆ ಮಾಡಿದೆ. ನನಗೆ ಹುಡುಗತನವಿತ್ತು; ಯೌವನ ಬಂತೊ ಇಲ್ಲವೊ! ಮದುವೆ ಆಗಿ ಮಕ್ಕಳು ಮರಿ ಆದರೂ ನನಗೆ ದೊರಕಿದ ಸ್ನೇಹಿತರೆಲ್ಲ 40ಕ್ಕೆ ಮೇಲ್ಪಟ್ಟವರೇ; 50-60ರ ವರೆಗೂ ಆದವರೇ. ಆದ್ದರಿಂದ ನನಗೆ ವೃದ್ಧಾಪ್ಯ ಆಗಲೇ ಬಂದಿತು ಎಂದುಕೊಂಡಿದ್ದೆನಾಗಿ ಬಹುಕಾಲವೇ ಆಗಿರಬೇಕು. ಆದರೆ ಎಷ್ಟನೆಯ ಹಂತ ಈಗಿನದು ಎಂಬುದು ಗೊತ್ತಿಲ್ಲ. ಈ ಭಾಷಣಕ್ಕೆ ಈ ತಲೆಬರಹವನ್ನು ಕೊಟ್ಟವರು ಎರಡು ಹಂತಗಳನ್ನು ನಿರ್ದೇಶಿಸಿ ಅದರ ಅನುಭವಗಳನ್ನು ವೃದ್ಧರು ವರ್ಣಿಸಲಿ ಎಂದಿದ್ದಾರು. ನನಗೂ ಆ ಸಿದ್ಧಿ ಆಗಿರುವುದರಿಂದ ನಾನು ಯತ್ನಿಸುತ್ತೇನೆ.

ಗಂಡಸಿಗೆ ಬಹುತೇಕ 40-45 ವರ್ಷಕ್ಕೆ ವೃದ್ಧಾಪ್ಯ ಬರುತ್ತದೆ ಎಂದು ಕಾಣುತ್ತದೆ. 1916-17ರಲ್ಲಿ ಬೆಂಗಳೂರಿಗೆ ಬಂದು ನಮ್ಮ ಪೇಟೆಯ ರಾಮೇಶ್ವರ ದೇವಸ್ಥಾನದ ಮಹಾಮಂದಿರದಲ್ಲಿ ಯು. ಪಿ. ಕೃಷ್ಣಮಾಚಾರ್ಯರೆಂಬವರಿಂದ – ಆಗ ನನಗೆ 16-17 ವಯಸ್ಸು – ನಮ್ಮ ಹಿಂದೂ ಸಂಪ್ರದಾಯಕ್ಕಿಂತ ಉತ್ತಮವಾದದ್ದನ್ನು

ಪ್ರಪಂಚದಲ್ಲಿ ಯಾರೂ ಕಂಡುದಿಲ್ಲ ಎಂದು ಧಾರಾಕಾರವಾಗಿ – ನಮ್ಮ ವಿದ್ವಾಂಸರು ಹೇಳುವಂತೆ, ಗಂಗಾ ಪ್ರವಾಹದಂತೆ – ಭಾಷಣ ನಡೆಯುತ್ತಿದ್ದಿತು. ಹುಡುಗರು, ದೊಡ್ಡವರು, ಹೈಸ್ಕೂಲು ಶಾಲೆಯ ಉಪಾಧ್ಯಾಯರು ಬಂದು ಕೇಳುತ್ತಿದ್ದರು. ಒಂದು ವಾಕ್ಯ ಇನ್ನೂ ಜ್ಞಾಪಕದಲ್ಲಿದೆ : "Orthodoxy is not responsible for the Spiritual degeneration of India, Intellectual degeneration of India and Spiritual degeneration of India" ಎಂದು ಮಾತುಗಳನ್ನು ವಾಕ್‌ಝುರಿಯಲ್ಲಿ ಉರುಳಿಸುತ್ತ ಅವಕ್ಕೆ ಪೋಷಕವಾದ – ಪೋಷಕ ಏನು? ಸ್ಥಾಪಕವಾದ – ಉದಾಹರಣೆಗಳನ್ನು, ಪ್ರಸಿದ್ಧ ಪಾಶ್ಚಿಮಾತ್ಯ ಅಧಿಕಾರಿಗಳ ಉದ್ಧಾರ ಮಾಡಿ ಬಳಸುತ್ತಿದ್ದರು. ನನಗೆ ಆಮೇಲೆ ಗೊತ್ತಾಯಿತು : ನಮ್ಮವರೇ ಆದ ಹರವಿಲಾಸ ಶಾರದಾ ಅವರು Hindu Superiority ಎಂಬ ಪುಸ್ತಕವನ್ನು ಬರೆದು ಅದರಲ್ಲಿ ಇದಕ್ಕೆಲ್ಲ ಉಪಷ್ಟಂಭಕವಾದ ಇಂಥ ಪ್ರಮಾಣ ವಾಕ್ಯಗಳನ್ನು ಅಚ್ಚು ಮಾಡಿಸಿದ್ದರು ಎಂದು. ಅದನ್ನು ನಮ್ಮ ಪಬ್ಲಿಕ್ ಲೈಬ್ರರಿಯಲ್ಲಿ ಓದಿದೆ. ಅಲ್ಲಿ ಇಲ್ಲದವುಗಳನ್ನೂ ಕೃಷ್ಣಮಾಚಾರ್ಯರು ಹೇಳುತ್ತಿದ್ದರಾದರೂ ಆ ಒಂದು ಪುಸ್ತಕ ಓದಿಬಿಟ್ಟರೆ ನಮ್ಮನ್ನು ಯಾರೂ ಹಿಡಿಯುವವರೇ ಇಲ್ಲ ಎಂಬಷ್ಟು ಯಾರಿಗೂ ಚತುರ್ಭುಜವಾಗುತ್ತಿತ್ತು. ಈ ಚತುರ್ಭುಜದ ಪ್ರಕರಣ ಬಗೆಬಗೆಯಾಗಿ ಮುಂದಿನ ಕಾಲಗಳಲ್ಲಿ ವರ್ಣನೆ, ವ್ಯಾಖ್ಯಾನ, ಲೇವಡಿ ಪಡೆದಿದ್ದಕ್ಕೆ ಅವರು ನಿಜವಾಗಿ ಚತುರ್ಭುಜವೇ! ಸಾಮಾನ್ಯ ಮನುಷ್ಯನಿಗೆ ಕಡೆಯ ಪಕ್ಷ ವಿಷ್ಣುವಿನ ಅವತಾರವಾದರೂ ಆದಂತೆ ಎನ್ನಿಸುತ್ತಿತ್ತು. ಅವರು ಉದಾಹರಿಸಿದ ಪುಸ್ತಕಗಳೂ ಲೇಖಕರ ಹೆಸರೂ ಈಗ ಮರೆತು ಹೋಗಿದೆ. What a man of 45 ought to know? What a woman of 45 ought to know? ಎಂಬವು. ಎಂದರೆ – 45ಕ್ಕೆ ಅವರ ವಯೋಮಿತಿ ಯಾವುದೊ ಒಂದು ಘಟ್ಟ ದಾಟಿ ಹೋಗುತ್ತದೆ; ಯೌವನ ಕಳೆದುಹೋಗುತ್ತದೆ; ಬಹುತರ ಮಧ್ಯವಯಸ್ಸು ಮುಗಿದು ಹೋಗುತ್ತದೆ; ವೃದ್ಧಾಪ್ಯದ ಮೊದಲ ಹಂತ ತೊಡಗುತ್ತದೆ ಎಂಬ ಅರ್ಥ ಬರುತ್ತಿತ್ತು. ಸರಿಯಾದ ಮಾತು. ಏಕೆಂದರೆ ಅಷ್ಟು ಹೊತ್ತಿಗಾಗಲೇ ಗಂಡಸು ಕಡೆಯ ಪಕ್ಷ ಅಜ್ಜ, ಹೆಂಗಸು ಮುತ್ತಜ್ಜಿ ಆಗಿರುತ್ತಾರೆ. ಅದಕ್ಕೆ ಆಗ ಅತಿಶಯ ಅವಕಾಶವಿತ್ತು. ಆ ಕಾಲದಲ್ಲಿ ಭರತ ಖಂಡದ ವಿವಾಹ ವಯಸ್ಸುಗಳ ಅತಿ ಕಿರಿಯತನವನ್ನು ಬಿಟ್ಟು ಇಂದಿನ ಭಾರತ ಶಾಸನದ ಪ್ರಕಾರವಾಗಿ 21ಕ್ಕೆ ಗಂಡು, 18ಕ್ಕೆ ಹೆಣ್ಣು ವಯಸ್ಸಿಗೆ ಬಾರದವರು ವಿವಾಹವಾಗತಕ್ಕದ್ದಲ್ಲ ಎಂಬುದಿದ್ದರೂ, ಈ ಮದುವೆ ಆದವರೂ ಮೊದಲು ಹೆಣ್ಣು ಮಗಳನ್ನು ಹಡೆದರೆ 40ರ ಹೊತ್ತಿಗೇ ಈ ವೃದ್ಧಾಪ್ಯವು ಇಬ್ಬರಿಗೂ ಬಂದುಬಿಡುತ್ತದೆ, ಖಂಡಿತ. ನನಗೆ ಈಗ ಅದರ ಎರಡರಷ್ಟು ಸುಮಾರು ಆಗಿ ಬಿಟ್ಟಿದೆ. ಈಗ ಇದು ಎರಡನೆ ಹಂತ ಎಂದುಕೊಳ್ಳುತ್ತೇನೆ.

ಮೊದಲ ಹಂತದಲ್ಲಿ ಆ ಬಿರುದಿಗೆ ತಕ್ಕ ಆರೋಗ್ಯ ಅಧಿಕಾರ ನನಗೆ ಬಂದಂತೆ. ಒಂದು ವರ್ಷ ಹೆಚ್ಚು ಕಡಮೆ ಎಂದುಕೊಳ್ಳಿ. ಆದ್ದರಿಂದ ಇನ್ನೇನು ವೃದ್ಧಾಪ್ಯ ಬಂದಿತು, ಇಹದ ವ್ಯಾಪಾರಗಳನ್ನು ಕುರಿತು ಚಿಂತೆ ಕಡಮೆ ಮಾಡಿ ಪರದ ಯೋಚನೆ ಮಾಡಿಕೊಂಡ ಹೊರತು ನಾಳೆಯ ಗತಿ ಏನು? – ಎಂಬ ಆಲೋಚನೆ ಬರಬೇಕಿತ್ತು; ಬರಬೇಕು ಕೂಡ. 40ರ ಒಳಗಾದರೂ ಗಂಡು ವಿವೇಕಶಾಲಿಯಾಗಿಲ್ಲದಿದ್ದರೆ ಹೇಗೆ? ಆ ವಿವೇಕ ಅವರಿಗೆ ಬಾರದಿದ್ದರೆ ಇನ್ನೆಂದೂ ಆಮೇಲೆ ಬರುವುದಿಲ್ಲ. ಈಗಲೂ ನನಗೆ ಬಂದಿದೆಯೊ ಇಲ್ಲವೊ ಎಂಬ ನಿರ್ಣಯ ನನಗೆ ಸಾಧಿಸಿಲ್ಲ. ಬಂದಿರಬೇಕಿತ್ತು. ಬರಲಿ, ಬಿಡಲಿ, ಈ ಎರಡನೇ ಹಂತ ಮುಟ್ಟಿಯೇ ಸಹಜವಾಗಿ ಬಹುಕಾಲ ಆಗಿರಬೇಕು ಎಂದುಕೊಳ್ಳುತ್ತೇನೆ.



ಮೊದಲ ಹಂತದಲ್ಲಿಯೇ ಗಂಡು ಮಕ್ಕಳ ಬೆಳವಣಿಗೆ, ಅವರ ಮದುವೆ ಪ್ರಸ್ತದ ವಿಚಾರಗಳನ್ನು ಚಿಂತಿಸುವುದಕ್ಕೆ ತೊಡಗಬೇಕು. ಆರ್ಥಿಕವಾಗಿ ಮಧ್ಯಮ ಮಟ್ಟದವರು ಕೂಡ ಅಲ್ಲದ ನಮ್ಮಂಥವರು, ನಮ್ಮ ತಲೆ, ಅದರ ಯೋಚನೆ ಮಾಡುವುದು ಹೇಗೆ? ದಿನನಿತ್ಯದ ಜೀವನಕ್ಕೆ ಬೇಕಾದ ಉಪಪತ್ತಿಯೇ ಸಾಲದೆ ಸಾಲಸೋಲವೋ, ಸೋಲಸಾಲವೋ ಮಾಡಿಕೊಂಡಿರುವಾಗ, ಇನ್ನೂ 10-15 ವರ್ಷಗಳಲ್ಲಿ ನಡೆಯಬೇಕಾಗಿರುವ ಖರ್ಚು ವೆಚ್ಚಗಳಿಗೆಲ್ಲ ವಿಮೆ ಆಗುವಂತೆ ಏನು ಆಲೋಚನೆ ಮಾಡಬಲ್ಲೆವು? ಅಷ್ಟು ಹೊತ್ತಿಗೆ ಹೊಟ್ಟೆಯಲ್ಲಿ ಹುಟ್ಟಿದ ಗಂಡು ಮಕ್ಕಳು ದೊಡ್ಡವರಾದಾರು; ಅವರ ತಲೆ ಪಾಡದು, ಮಾಡಿಕೊಳ್ಳಲಿ. ನಮ್ಮ ತಲೆ ಲೋಕಯಾತ್ರೆ ಮುಗಿಸಿದ ಮೇಲೆ ಅವರದು ತಾನೆ? ಇದ್ದರೆ ನಮ್ಮ ಆಸ್ತಿ, ನಮ್ಮ ಋಣ ಎಲ್ಲ ಅವರಿಗೆ ತಾನೆ? ನಮ್ಮ ಕಾಲದಲ್ಲಿ ನಮ್ಮ ಪಾಲಿನದನ್ನು ಮಾಡಿದೆವು, ಇನ್ನು ಅವರ ತಲೆಯ ಮೇಲೆ ಹೊರಲಿ – ಎಂಬುದು ಯುಕ್ತ. ನಾವು ನಿವೃತ್ತರಾಗುತ್ತೇವೆ ಕೂಡ. ಕಾಲ ಓಡಿ ಬರುತ್ತದೆ. ಇದನ್ನು ವಿವೇಕ ಎನ್ನುತ್ತಾರೊ ಇಲ್ಲವೊ. ಆದರೆ ಅಂಥ ಯೋಚನೆ ಬರತಕ್ಕದ್ದು ಅಸಹಜ, ಅನ್ಯಾಯ, ಸಾಂಸಾರಿಕ ಜೀವನದಲ್ಲಿ ಅಧರ್ಮ ದೃಷ್ಟಿ ಕೂಡ ಎನ್ನುವವರು ಎಂದುಕೊಳ್ಳಲಿ. ಆದರೂ ನನ್ನಂಥವನಿಗೆ ಸರ್ಕಾರದ ಚಾಕರಿಯಲ್ಲಿ ಇನ್ನೂ 13-14 ವರ್ಷಗಳ ಸೇವಾವಧಿ ಇರುವುದರಿಂದ – ಆ ಒಳಗೆ ಜೀವದಿಂದಲೇ ಮುಕ್ತಿ ಬಾರದಿದ್ದರೆ – ಅದನ್ನು ವಿದೇಹ ಮೋಕ್ಷ ಎನ್ನಲೆ? – ಆಮೇಲೆ ತಾನೆ ಅದನ್ನೆಲ್ಲ ಕುರಿತು ಚಿಂತೆ ಬರುವುದು? ಅಲ್ಲದೆಯೊ, ನನ್ನ ಪಂಥದ ಮಹಾಚಾರ್ಯರಾದ ಶಂಕರಾಚಾರ್ಯರೇ 'ಲೋಕಂ ಶೋಕ ಹತಂ ಚ ಸಮಸ್ತಂ' – ಲೋಕವೆಲ್ಲ ಶೋಕದಿಂದ ಹತವಾಗುತ್ತದೆ – ಶೋಕ ಎಂದರೆ ಚಿಂತೆ, Care, Worry – ಎಂದಿರುವಾಗ, ಈ ಚಿಂತೆ ಕಟ್ಟಿಕೊಂಡು ಏಕೆ ಸಾಯಬೇಕು? ಲೋಕಗುರುಗಳ ಮಹಾವಚನವನ್ನು ಮಾರ್ಗದರ್ಶಕವಾಗಿ ಇಟ್ಟುಕೊಂಡು ಶೋಕ ಕಟ್ಟಿಕೊಳ್ಳದೆ – ಇದನ್ನು ವೀರವೃತ್ತಿ ಎನ್ನುವವರು ಅನ್ನಲಿ – ಕಾಲ ಹೀಗೇ ಕಳೆದರಾಯಿತು. ಸಂಬಳ ವರ್ಷಕ್ಕೆ 10 ರೂ. ನಂತೆ ಅಲ್ಲಿಂದಾಚೆ ಸಂದುದರಿಂದ,

ಹಾಗೂ ಹೀಗೂ ಪದಾರ್ಥಗಳ ಬೆಲೆ ಒಂದಕ್ಕೆ ದುಪ್ಪಟ್ಟು-ಮುಪ್ಪಟ್ಟು ಏರಿದರೂ ಹಣದ ಸಂಪಾದನೆ 10 ರೂ. ಹೆಚ್ಚಿತಲ್ಲ ಎಂಬ ಹುಮ್ಮಸ್ಸು ಈ ಮೊದಲ ಹಂತದ ವೃದ್ಧಾಪ್ಯದಲ್ಲಿ ಧೈರ್ಯವನ್ನು ಸ್ಥೈರ್ಯವನ್ನು ತಂದುಕೊಟ್ಟಿತು. ನನ್ನಂಥವರೆಲ್ಲರಿಗೂ ತಂದುಕೊಡಬೇಕು. ತಂದುಕೊಡದಿದ್ದರೆ ಅವರನ್ನು ಮನುಷ್ಯರೆನ್ನೋಣವೇ? ಅಂಥ ಅಪಪ್ರಥೆಗೆ ಈಡಾಗದಂತೆ ಪ್ರತಿಯೊಬ್ಬರೂ ತಮ್ಮನ್ನು ಕಾದುಕೊಂಡು ಕೃತಾರ್ಥರಾಗತಕ್ಕದ್ದು.

ಆದರೆ ಎಷ್ಟು ಧೈರ್ಯ ಉಂಟಾಗಲಿ, ಸಂಸಾರ ಬೆಳೆದ ಹಾಗೆಲ್ಲ ಅದರ ಹೊಣೆಗಾರಿಕೆಗಳು ಅಗತ್ಯಗಳು ಸ್ಥಾನಮಾನಗಳು ಪರ್ಯಾಲೋಚನೆಯಲ್ಲಿ ಬೆಳೆಯುತ್ತವೆಯಾಗಿ ಚಿಂತೆ, ಶೋಕ ಒಳಗಿಂದಲೇ ಒತ್ತುತ್ತದೆ. ಜೊತೆಗೆ ದೇಹದ ಶಕ್ತಿಗಳು ಕ್ರಮಕ್ರಮವಾಗಿ ಬೇಡವೆಂದರೂ ಒಲ್ಲೆ ಎಂದರೂ ಬಿಡದೆ ಕಡಮೆ ಆಗುತ್ತ ಬರುತ್ತದೆ. ನನಗೆ ನೆನಪಿದೆ: ನನ್ನ ಮಗಳ ಮದುವೆ ಮಾಡಬೇಕಾದ ಸುಮಾರು 1943-44 ರಲ್ಲಿ ನನ್ನ 2 ಹಲ್ಲುಗಳು ಬಿದ್ದವು. ಆಚಾರ್ಯರ ಮಾತು ಪುನಃ ನೆನಪಿಗೆ ಬಂತು. ಹಾಗೇ, 'ಅಂಗಂ ಗಲಿತಂ ಪಲಿತಂ ಮುಂಡಂ ದಶನವಿಹೀನಂ ಜಾತಂ ತುಂಡಂ। ವೃದ್ಧೋ ಯಾತಿ ಗೃಹೀತ್ವಾ ದಂಡಂ...' ಇತ್ಯಾದಿ. ಎರಡು ಪದ್ಯಪಂಕ್ತಿಗಳ ಹೀನತೆ ಬಂತು. ಅಂಗಸೌಷ್ಠವ ಎಂದಿಗೂ ಏನು ಮಾಡಿದರೂ ಸಾಧಿಸಲಾಗದಿದ್ದ ಸ್ಥಿತಿ ಸುಮಾರು ಮೊದಲಿಂದಲೂ ನನ್ನ ಲಕ್ಷಣವೇ. ನನಗೆ ಇನ್ನು ಗಳಿತವಾಗುವುದೇನು ಬಂತು? ತಲೆಕೂದಲು ನೆರೆಯಿತೊ ಇಲ್ಲವೊ – ಆ ಗೋಜಿಗೆ ಹೋಗಲಿಲ್ಲ. ಹಲ್ಲುಗಳೆಲ್ಲ ಬೀಳದಿದ್ದಾಗ ತುಂಡ ಬರಲಿಲ್ಲ. ಆದರೆ ನನಗೆ ಎಚ್ಚರಿಕೆ ಕೊಡುವಂತೆ ನನಗೆ ಬಹುಮಾನ ಮಾಡಿದ ಯಾವುದೋ ಪ್ರೋತ್ಸಾಹಕ ವರ್ಗದವರು ಒಂದು ಸಭೆಯಲ್ಲಿ ಸನ್ಮಾನವನ್ನು ಅರ್ಪಿಸಿ ಕೈಗೆ ಒಂದು ಶ್ರೀಗಂಧದ ಕೋಲನ್ನು ತಂದುಕೊಟ್ಟರು. ಓಹೋ ವೃದ್ಧಾಪ್ಯದ ಲಕ್ಷಣಗಳಲ್ಲಿ ಎರಡು ಸಿದ್ಧಿಸಿದವು ಎಂದುಕೊಂಡೆ! ಇನ್ನೆರಡು ತಾನೆ; ಬರುತ್ತೆ. ಆಚಾರ್ಯರ ಮಾತು ಸುಳ್ಳಾಗುತ್ತದೆಯೆ? ತಾವೇ ವೃದ್ಧಾಪ್ಯ ಅನುಭವಿಸಿದವರಲ್ಲ; ಆದರೆ ಅಂಥ ಲಕ್ಷ ಲಕ್ಷ ಜನರನ್ನು ಕಂಡಿದ್ದರಲ್ಲ. 3-4 ಬಾರಿ ಆಸೇತು ಹಿಮಾಚಲ ಸಂಚಾರ ಮಾಡಿ ಮಠಗಳನ್ನು ಸ್ಥಾಪಿಸಿದ್ದ ಬಾಲ ಬ್ರಹ್ಮಚಾರಿ ಸನ್ಯಾಸಿಗೆ ಲೋಕದರ್ಶನ ಆಗಿತ್ತಲ್ಲ. ಅಧ್ಯಾತ್ಮ ಸಂಪತ್ತಿ ಎಲ್ಲ ಕರಗತ ಮಾಡಿಕೊಂಡು ಎಲ್ಲಿನವರೆಗೆ ಬಂದಿದ್ದರು ಅವರು. ಬಹುಶಃ ಬೇರೆ ಇನ್ನಾವುದೂ ನಿಜವಲ್ಲ ಬ್ರಹ್ಮಸ್ಸತ್ಯಂ ಜಗನ್ಮಿಥ್ಯಾ, ಆತ್ಮಾಬ್ರಹ್ಮೈವ ನ ಅಪರಃ ಎಂದರು ಅವರು. ಆತ್ಮ ಎಂದರೆ ನಾನು; ನಾನೇ ಬ್ರಹ್ಮ ಎಂಬ ಪದವಿ ಜ್ಞಾನ ಗೋಚರವಾಗಿಯಾದರೂ ಆಗಬೇಕಾದ್ದೇ. ಆಗಲಿಲ್ಲ. ಕಿವಿಗೆ ಬಿದ್ದಿರುತ್ತದೆ. ವೇದಾಂತದ ಒಂದು ಪ್ರಶ್ನೆಪತ್ರಿಕೆಗೆ ಉತ್ತರ ಕೊಟ್ಟು ಬಿ.ಎ. ಉಪಾಧಿ ಸಂಪಾದಿಸಿದವನು ನಾನು, ಆ ಉಪಾಧಿ ಸಂಪರ್ಕ ನನಗೆ ಮಾಯವಾಗದೆ ಅಡ್ಡಿಯಾಗದೆ ತಿಳಿ ತಿಳಿವಳಿಕೆಯನ್ನು ತಂದುಕೊಟ್ಟಿತ್ತು.



ಜೊತೆಗೆ, ನನ್ನ ಕರ್ಮಕ್ಕೆ ತಕ್ಕ ಹಾಗೆ ನಮ್ಮ ದಾಸರಾಯರ ಮಾತುಗಳು ಅಷ್ಟು ಹೊತ್ತಿಗೆ – ಇಷ್ಟವಿರಲಿ, ಇಲ್ಲದಿರಲಿ – ನಾನು ಓದಿದ ಪುಸ್ತಕಗಳಲ್ಲಿ, ಕೇಳಿದ ಹರಿಕಥೆಗಳಲ್ಲಿ, ಉಪನ್ಯಾಸ ಮಾಡಬಂದ ವಾಗ್ಮಿಗಳ ಮಾತುಗಳಲ್ಲಿ ನನ್ನ ಕಿವಿಗೆ ಬೀಳುತ್ತಿತ್ತು; ನನ್ನ ಬಾಯಿಂದ ಪ್ರವಹಿಸುತ್ತಿತ್ತು. 'ವಾಸುದೇವನ ನೆನೆದು ಸುಖಿಯಾಗು ಮನವೆ ಈ ಶರೀರದ ಭ್ರಾಂತಿ ಇನ್ಯಾಕೊ ನಿನಗೆ?' ಎಂದು. ಸರಿಯೆ. ಆದರೆ ನನಗೆ ಸಲ್ಲದಿರುವ – ಆದರೆ ಎಷ್ಟೋ ಜನಕ್ಕೆ ಸಲ್ಲುವ – ಇದನ್ನು ಅಹಂಕಾರ ಎಂದು ಹೇಳುತ್ತಿಲ್ಲ, ಲೋಕಸ್ವರೂಪದ ದರ್ಶನ ಎಂದು ಹೇಳುತ್ತಿದ್ದೇನೆ – ದಂತಗಳು ಸಡಿಲಿದವು – ಸರಿ, ಒಪ್ಪಿಕೊಂಡಿದ್ದೇನೆ; ಧಾತುಗಳು ಕುಂದಿದವು - ಯಾವ ಗಂಡಸು ಇದನ್ನು ಒಪ್ಪಿಕೊಂಡಾನು? – ಕಾಂತೆಯರು ಜರಿದು ಓಕರಿಸುವರು ಇತ್ಯಾದಿ ಬರುತ್ತದೆ. ಒಂದು ಕಾಂತೆಗೆ ಲಗ್ನವಾಗಿ ಇನ್ನೊಂದು ಕಾಂತೆಯನ್ನು ಸ್ವಪ್ನಾಪಿ ನ ಚಿಂತಯಾ ಎಂಬ ಮನುಷ್ಯನಿಗೆ ಕಾಂತೆಯರು ಹೇಗೆ ಓಕರಿಸಿಯಾರು? ನಮ್ಮ ಸತ್ಯ ನಮ್ಮ ಮಡದಿಯರಿಗೆ ಗೊತ್ತಿದ್ದರೂ ಅವರ ಕಿವಿಗೆ ಬೀಳುವಂತೆ ನಾವೇ ಹೇಳುವುದು ಸರಿಯೆ? ನಾವು ಲಘುವಾಗಿ, ಮೂರು ಕಾಸಾದೀತು ನಮ್ಮ ಬೆಲೆ. ನಮ್ಮನ್ನು ಕಂಡು ಇನ್ನಾವ ಕಾಂತೆಯರಿಗೂ ಎಂದೂ ರೋಮಾಂಚಕಾರಿಯಾದ ಆಕರ್ಷಣೆ, ಪ್ರೀತಿ ಬೆಳದುದಿಲ್ಲ; ಶಕ್ಯವೂ ಇರಲಿಲ್ಲ. ಧನವೆ? ಐಶ್ವರ್ಯವೆ? ಯೌವನವೆ? ಮನ್ಮಥತ್ವವೆ? ಎಂದರೆ, ನಾವು ಮದನರೆ? 'In those lips lie my fate' ಎಂದಳಂತೆ ಬೈರನ್ ಅನ್ನು ಕುರಿತು ಒಬ್ಬ ಚೆಲುವೆ. ಯಾವುದರಲ್ಲಿ ನಾವು ಅಂಥ ಆಕರ್ಷಣೆಗೆ ಆಶ್ಚರ್ಯವಾದೇವು. ಇನ್ನು ಇರುವ ಒಬ್ಬ ಕಾಂತೆ, ಆ ಕಾಂತೆ ಮದುವೆ ಮಾಡಿಕೊಂಡ ಹೆಂಡತಿ. ಆಕೆ ಓಕರಿಸುವುದು ಸತೀಧರ್ಮವಲ್ಲ. ಮದುವೆಯ ಕಾಲದಲ್ಲಿ ನಮ್ಮ ಮನೆಯವರು ಆಕೆಗೆ ಬೇರೆ ಹೆಸರು ಕೊಟ್ಟಿದ್ದರೂ ಆಕೆಯ ಹೆಸರು ನಮ್ಮ ಮಹಾಕಾವ್ಯದಲ್ಲಿ ಸತ್ಯವಾನನನ್ನು ಮೃತ್ಯುವಿನಿಂದ ಬದುಕಿಸಿದ್ದ ವೀರಸಾಧ್ವಿ. ಆದ್ದರಿಂದ ತನ್ನ ಗೃಹಿಣೀ ಧರ್ಮವನ್ನು ಆಕೆ ಒಪ್ಪಿಕೊಂಡಿದ್ದಳು. ಆಕೆಯ ಹೆಸರನ್ನು ಸಾರ್ಥಕ ಮಾಡಿಕೊಳ್ಳಬೇಕಿತ್ತು. ಅಲ್ಲದೆ ಹೆಚ್ಚು ಪ್ರಪಂಚ ತಿಳಿಯದವಳು. ಸಿನೆಮಾಗಳನ್ನು ಕೂಡ ನೋಡದವಳು. ಹೊಸ ಕಾಲದ ಸ್ತ್ರೀ ಸ್ವಾತಂತ್ರ್ಯದ ಮಹಾಕಾಂಕ್ಷೆಗಳೊಂದನ್ನೂ ಭಾವಿಸಲಾಗದವಳು. ಒಬ್ಬ ಹಳ್ಳಿ ಹುಡುಗಿ. ಹೇಗೆ ಕೈಹಿಡಿದ ಗಂಡನನ್ನು ಕುರಿತು ಓಕರಿಸಿಯಾಳು? ಉಹುಂ, ಶಕ್ಯವಿಲ್ಲ. ಕರ್ಮ ಧರ್ಮ, ಎಂದಾದರೂ ಅಂಥ ಭಾವ ಬಂತೊ ಇಲ್ಲವೊ. ಆದರೆ ಇನ್ನು ಯಾವುದೊ ಒಂದು ದೇಹಾಲಸ್ಯಕ್ಕೆ ಈಡಾದ ಆಕೆಗೆ ಅದಕ್ಕೆ ವ್ಯವಧಾನವೂ ಇರಲಿಲ್ಲ. ಅವಕಾಶ ತಪ್ಪಿ ಹೋಗಿತ್ತು. ಆದ್ದರಿಂದ ದಾಸರಾಯರ ಈ ಮಾತು ನನ್ನ ಪರವಾಗಿ ಸತ್ಯವಲ್ಲ. ಆದರೆ ವಾಸುದೇವನನ್ನು ನೆನೆಯಬೇಕು ಎಂದಿದ್ದಾರೆ.

ಅಷ್ಟು ಹೊತ್ತಿಗೆ ವಾಸುದೇವ ಯಾರು? ಪಾಂಚರಾತ್ರ, ಸಾತ್ವತ ಮುಂತಾದ ಧರ್ಮದ ಮಹಾದೇವತೆಯಾದ ಮೂಲ ವಾಸುದೇವನೆ? ಕೃಷ್ಣನ ಅಪ್ಪ ವಸುದೇವನೆ?

– ಎಂಬ ವಿಷಯದಲ್ಲಿ ನನಗೆ ಸಂದೇಹ ಉಂಟಾಗಿತ್ತು. ಇವನನ್ನು ವಾಸುದೇವ ಎಂದು ಕರೆದದ್ದರಿಂದ ವ್ಯಾಕರಣ ಪ್ರಕ್ರಿಯೆಯಲ್ಲಿ ಅಪ್ಪ ವಸುದೇವನಾಗಬೇಕಾಯಿತೆ? ನಿಜವಾಗಿಯೂ ಅಂಥವನೊಬ್ಬನಿದ್ದನೆ? – ಎಂಬ ದೊಡ್ಡ ಸಂಶಯಗಳೆದ್ದಿದ್ದವು. ಗೀತಾಚಾರ್ಯನಾದ ಭಗವಾನನು ಕೂಡ ಮನುಷ್ಯನಾದವನನ್ನೇ ಕುರಿತು 'ವೃಷ್ಣೀನಾಂ ವಾಸುದೇವೋಽಸ್ಮಿ' ಎಂದು ಹೇಳಿದ್ದುದರಿಂದ ಈ ಕೃಷ್ಣನಲ್ಲಿಯೇ ಆ ಪಿತೃತ್ವವನ್ನು ಆರೋಪಣೆ ಮಾಡಿ – ಅವನಲ್ಲಿ ಏನು ಗುಣವಿತ್ತೊ ಇಲ್ಲವೊ – ಕೃಷ್ಣನ ತಂದೆಯಾದ್ದರಿಂದ ಅವನನ್ನು ನೆನೆಯಬೇಕೆನ್ನಿಸಿತು. ಪಾಪ, ತನ್ನ ಎಂಟನೆಯ ಮಗ ಸೋದರಮಾವನಿಗೆ ಮಾರಕನಾಗುತ್ತಾನೆ ಎಂದು ಕೇಳಿ, ಚೆಲುವನಾಗಿ ಚೆಲುವೆ ಹೆಂಡತಿಗೆ ಗಂಡನಾಗಿ, ಅರಸುಕುಮಾರ ಆತ ಸೆರೆಯಲ್ಲಿರಬೇಕಾದಾಗ ಕನಿಕರ ಬರಬಹುದೇ ಹೊರತು ಅವನನ್ನು ಕುರಿತು ಪೂಜ್ಯಭಾವ ಹೆಚ್ಚಾಗುವುದಕ್ಕೆ ಕಾರಣವಿರಲಿಲ್ಲ. ಜೈಲಿನಲ್ಲಿಯೇ ಎಂಟು ಮಕ್ಕಳ ತಂದೆಯಾದ ಆತನ ವೀರ್ಯವಂತಿಕೆಗೆ ಕಾಣಿಕೆ ಕೊಡಬಹುದು. ಎಂಟನೆಯ ಮಗುವಾಗುವವರೆಗಾದರೂ ಇರಬೇಕಾಗಿತ್ತಲ್ಲ – ಆ ಕಾರಣದಿಂದ. ದೇವರ ದಯದಿಂದ ಅವನು ಈ ಕಾಲದಲ್ಲಿರಲಿಲ್ಲ; ಕುಟುಂಬ ಯೋಜನೆಯ ಯಾವ ನಿರ್ಬಂಧವೂ ಅವನನ್ನು ಕಾಡಲು ಅವಕಾಶವಿರಲಿಲ್ಲ.

ಇಷ್ಟು ಮಟ್ಟಿಗೆ ಹೇಳಬಹುದು: ನಿಜವಾಗಿ ಆ ಹೊತ್ತಿಗೆ ಮನಸ್ಸು ಒಂದು ಜೀವನದ ವಿಷಯದಲ್ಲಿ ಸ್ತಿಮಿತತೆ ತಂದುಕೊಳ್ಳುವುದಕ್ಕೆ ಪ್ರಯತ್ನ ಪಡಬೇಕು ಎಂಬ ಒಂದು ಮನಸ್ಸು ತುಡಿಯುತ್ತಿದ್ದಿತು. ಅದಕ್ಕೆ ತಕ್ಕ ಹಾಗೆ ಇದ್ದ ಅಲ್ಪಸ್ವಲ್ಪ ರಕ್ತದ ಕುದಿ ತಂಪಿ ಅದು ನೆರವಾಗಿತ್ತು. ದೇಹ ಕ್ರಮಕ್ರಮವಾಗಿ ಗಳಿತವಾಗುತ್ತಿತ್ತು. ಅತ್ಯಾಸೆಗಳಿಗೆ ಮಹಾತ್ವಾಕಾಂಕ್ಷೆಗಳಿಗೆ ಹಾರೈಕೆ ಬರುವುದು ಅಶಕ್ಯವಾಗಿತ್ತು. ಎಂದರೆ ಎರಡನೆಯ ಹಂತ ಅವನು ಮುಟ್ಟಿದ್ದ ಹಾಗಾಗಿತ್ತು. ಈ ಸಂದರ್ಭದಲ್ಲಿ ಇನ್ನೊಂದು ದಾಸರಾಯರ ಪದ್ಯ–ನಾನೊಂದು ಪುರಂದರದಾಸರನ್ನು ಕುರಿತು ಗ್ರಂಥ ಬರೆಯಬೇಕಾಗಿ ಬರಲು– ನನ್ನ ಗಮನಕ್ಕೆ ಬಂದಿತು. ಕಾಂತೆಯರ ಓಕರಿಕೆ ಎಂದರೆ ಏನು ಎಂಬುದರ ಅರ್ಥ ಸ್ಪಷ್ಟವಾಗಿ ಬೇರೊಂದು ರೂಪವನ್ನು ತಾಳಿ ಆ ವಿದ್ಯೆ ಕಂಗಾಣಿಸುತ್ತಿದ್ದಿತು, ಕಿವಿಗೇಳಿಸುತ್ತಿದ್ದಿತು; ಅಲ್ಲಿ ಚಿತ್ರ ಇದೆ. ಆ ಪದ್ಯವನ್ನು ಕೇಳಿ, ಮುದಿಯ ಗಂಡನ ಒಲ್ಲೆನೆ ಎಂಬುದು ನನಗೆ ಕಣ್ತೆರೆಸಿತು. ಉಳಿದ ಎಲ್ಲರಿಗೂ ಹಿಂಸೆಯಾಗುವ ಸ್ಥಿತಿಯ ಒಂದು ಪರಿಸ್ಥಿತಿ ಅಲ್ಲಿ ವರ್ಣಿತವಾಗುತ್ತದೆ. ಯಾರೊ ಬಡ ಮುತ್ತೈದೆಯ ಕಷ್ಟವನ್ನು ಇದು ವಿವರಿಸುವಂತಿದೆ. ಬಡವರು, ಸಿರಿವಂತರು ಅಲ್ಲ ಸಂಗತಿ; ಆಕೆಯ ಕಷ್ಟ ಯಾವ ಬಗೆಯವು ಎಂಬುದು. ಈಗ ಬಜೆ ಅರೆದಿಡಬೇಕಿಲ್ಲ: ಎಲೆ ಅಡಿಕೆಯನ್ನು ಕುಟ್ಟಿಡುವ ರೂಢಿ ಹೋಗಿದೆ. ಬಹುಶಃ ಈಕೆ ಮೈಸೂರು ಕಡೆಯವಳೇ; ಉತ್ತರ ಕರ್ನಾಟಕದವರು, ಕನ್ನಡ ಜಿಲ್ಲೆಗಳವರು ಮುದ್ದೆ ತಿನ್ನುವುದಿಲ್ಲ. ಮುದ್ದೆ ಸಾಮಾನ್ಯವಾಗಿ ರಾಗಿಯಿಂದ ಮಾಡುವುದು. ಈಗ ರಾಗಿ ತಿನ್ನುವವರೇ ಬಹು ಮಂದಿ ಅದನ್ನು



ಬಿಡುತ್ತಿದ್ದಾರೆ. ಜೊತೆಗೆ ಒಡೆಯ ಶ್ರೀ ಪುರಂದರವಿಠಲ ಎಂದು ಅಂಕಿತ ಇದೆ. ನಮ್ಮ ಪಾಠ ಸಂಶೋಧನೆಯ ಧುರೀಣರು ಇದು ಪುರಂದರದಾಸರದಲ್ಲವೇ ಅಲ್ಲ, ಇನ್ನಾರದೋ ಎಂದು ಇದನ್ನು ತಳ್ಳಿಬಿಡಬಹುದು. ಅವರ ಕೃತಿಯೆಂದೇ ಜಮಾ ಹಾಕಿಕೊಳ್ಳುತ್ತಿದ್ದೇನೆ. ಯಾವ ಸ್ಥಿತಿಗೆ ವೃದ್ಧಾಪ್ಯ ಬಂದಿದೆ ಎಂಬುದರ ಚಿತ್ರ ಇಲ್ಲಿ ಕಂಡೀತು. ಇಷ್ಟು ಕಷ್ಟಗಳನ್ನು ನಾವು ಅನುಭವಿಸದಿದ್ದರೂ ಈ ವಯಸ್ಸಿಗೆ ಬರಬಹುದಾದ – ಇದಕ್ಕೆ ಕಟ್ಟಿಟ್ಟುದು ಎಂದು ವೈದ್ಯರೇ ಹೇಳುವ – ಕೆಲವು ಬೇನೆಗಳು ಈ ವಯಸ್ಸಿಗೆ ಕಾಡಿಸುವುವು. ಹೆಜ್ಜೆ ತತ್ತರಿಸುವುದು, ಜಂಘಾಬಲ ಉಡುಗುವುದು, ಕಣ್ಣು, ಕಿವಿ ಇತರ ಅಂಗಾಂಗಗಳು ಶಸ್ತ್ರ ಚಿಕಿತ್ಸೆಗೆ ಈಡಾಗುವುದು, ರಕ್ತದ ಅಥವಾ ಶ್ವಾಸಕೋಶದ ಕ್ಲೇಶಗಳು ಎಲ್ಲ ಕಾಡಿಸುತ್ತಿದ್ದರೂ, ಸಾಮಾನ್ಯವಾಗಿ ಎಲ್ಲರೂ ದಿನಾ ಪ್ರಾರ್ಥನೆ ಮಾಡುವುದೇನೊ 'ವಿನಾ ದೈನ್ಯೇನ ಜೀವನಂ' ಎಂದು ಪ್ರಯತ್ನ ಪಡುತ್ತಿದ್ದರೂ 'ಜೊತೆಗೆ ಯಾರಾದರೂ ಇರಲಿ ಸ್ವಾಮಿ' ಎಂದು ಡಾಕ್ಟರುಗಳಾದಿಯಾಗಿ ಎಲ್ಲರೂ ಅಪ್ಪಣೆ ಮಾಡುತ್ತಾರೆ. ಜೊತೆ ಇಲ್ಲದೆ ಹೊರಗೆ ಹೋಗುವ ಹಾಗಿಲ್ಲ. ಕೈಯಲ್ಲಿ ದಂಡವಿದ್ದರೆ ಮೇಲು. ಈಗಲೇ ಎಷ್ಟು ಅಗಲವಾಗಿದ್ದರೂ ನಮ್ಮ ರಸ್ತೆಗಳು ಕಾಲ್ನಡಿಗೆಯವರಿಗೆ ಪ್ರಾಣಹರಣವೇ ಆಗಿವೆ. ಲಾರಿ, ಮೋಟಾರು, ಆಟೊ, ಸ್ಕೂಟರು ನಮ್ಮ ಹಿಂದೆ ನಮ್ಮ ಅನುಕೂಲಕ್ಕೆ ತಕ್ಕಂತೆ ಹಾದು ಹೋದಾವೆ? ಗಂಟೆಗೆ 40-50 ಮೈಲಿಗೆ ಮೇಲ್ಪಟ್ಟು ಅವು ಬರುತ್ತವೆ. ಅವರವರಲ್ಲಿ ಮೇಲ್‌ಪೋಟಿ. ಅವರಲ್ಲಿ ಹಲವರು ನಮ್ಮ ಜನ ಕೂಡ ಅಲ್ಲ. ನಮ್ಮ ರಾಜ್ಯದವರೂ ಅಲ್ಲ. ನಮ್ಮ ದಾಕ್ಷಿಣ್ಯ ಏನವರಿಗೆ? ಆದುದರಿಂದ ನಮ್ಮ ದೇಹದ ಅಗತ್ಯದ ಜೊತೆಗೆ ಕಿವಿ ಕೇಳದ ಕಷ್ಟಕ್ಕೂ ದೃಷ್ಟಿಪಾಟವ ಹಾಗೂ ಹೀಗೂ ಇರುವುದರಿಂದಲೂ ಯಾರನ್ನಾದರೂ ಜೊತೆಯಲ್ಲಿ ಕರೆದುಕೊಂಡೇ ಹೋಗಬೇಕಾದ್ದು ದೈನ್ಯವೇ. ಅನಾಯಾಸದ ಮರಣ ಇನ್ನೊಂದು ಬೇಡಿಕೆ. ಅದು ಆ ಸಮಯಕ್ಕೆ ನಿಶ್ಚಯವಾಗಬೇಕೇ ಹೊರತು ಪ್ರಾರ್ಥಿಸಿದರಿಲ್ಲ, ಆಸೆ ಬಲಿಸಿದರೆ ಇಲ್ಲ. ಎಷ್ಟು ಸಂಯಮ ತಂದುಕೊಂಡರೂ ನಿಶ್ಚಯವಲ್ಲ. ಆ ಗಳಿಗೆ ಅದನ್ನು ನಿರ್ಣಯಿಸಬೇಕು. ಆದರೆ ಒಂದನ್ನು ಮಾತ್ರ ಮಾಡಬಹುದೇನೊ. ನಮ್ಮ ಗುರುಗಳೊಬ್ಬರು ಹೇಳಿದ ಹಾಗೆ, 'ಸ್ಟೇಷನ್‌ಗೆ ಬಂದಾಗಿದೆ, ಟಿಕೆಟ್ ಕೊಂಡಾಗಿದೆ, ರೈಲೊ, ಪ್ಲೇನೊ ಸಿದ್ಧವಾದ ಕೂಡಲೇ ಹೋಗಲು ಸಿದ್ಧರಾಗಿದ್ದೇವೆ.' ಎಂಬಷ್ಟು ನಿರಾಳವಾದ ಮನಸ್ಸು, ಬುದ್ಧಿಯಲ್ಲಿ ಎಷ್ಟೇ ತೀರ್ಮಾನ ಮಾಡಿಕೊಂಡು-ವಾಗ್ಧೀರರಾಗಿ – ಇದ್ದರೂ ಕಾರ್ಯತಃ ಆ ಸಮಯದಲ್ಲಿ ಇದು ನಮ್ಮ ಜೊತೆಯಲ್ಲೇ ಸಲ್ಲುವುದಾದರೆ ಒಂದು ಪುಣ್ಯವೇ ಎನ್ನಬಹುದು. ಮರಣದ ಚಿಂತೆ ಏನೊ, ಬದುಕಿನ ಚಿಂತೆಗಿಂತ ಹೆಚ್ಚಾಗಿ ಮೇಲೆ ಮೇಲೆ ಒತ್ತಿ ಬರುತ್ತಿರುವ ಕಾಲ ಈ ಎರಡನೆಯ ಮಜಲು. ಏರುತ್ತ ಏರುತ್ತ ಊರುತ್ತ ಊರುತ್ತ ಏನೇ ಆಗಲಿ, ಮನಸ್ಸಿನ ಶಕ್ತಿ ಕುಗ್ಗದಿದ್ದರೆ ಅಥವಾ ಓದೊ ಬರಹವೊ ಶಕ್ಯವಿದ್ದರೆ, ಬಂದ, ಕಂಡ ಗೆಳೆಯರೊಡನೆ ಹೊಂದಿ ಮಾತಾಡಬಲ್ಲವರಾದರೆ

ಅಷ್ಟಕ್ಕೆ ತೃಪ್ತಿಪಟ್ಟುಕೊಳ್ಳಬೇಕಾದ ಸಂದರ್ಭ ಅದು. ಇದನ್ನು ಸಾಧಿಸುವ ಹಾಗೆ ಬದುಕು ನೇರ್ಪಡಬೇಕು. ಮೊದಲ ಹಂತದಿಂದಲೇ ಅದಕ್ಕೆ ಅಭ್ಯಾಸ ಬೆಳೆದರೆ ಒಳ್ಳೆಯದು. ನೆನಪು ಸಡಿಲವಾಗುತ್ತಿರುತ್ತದೆ. ಹೇಳಬೇಕೆಂದು ಇರುವಾಗ ನಾಲಿಗೆಯ ಮೇಲಿದ್ದ ವಾಕ್ಯವೊ ಗ್ರಂಥದ ಹೆಸರೊ ನುಡಿಯುವ ಹೊತ್ತಿಗೆ ಮರೆತು ಹೋಗುತ್ತದೆ. ವಿಚಿತ್ರ: ಸ್ವಲ್ಪ ಹೊತ್ತಿನ ಮೇಲೆ ಅಥವಾ ಅದರ ಅಗತ್ಯ ಮುಗಿದ ಮೇಲೆ ತಕ್ಷಣ ಪ್ರಕಾಶವಾಗುತ್ತದೆ. ಮನಸ್ಸಿನ ಈ ಜಾಣತನ ಎನ್ನಲೆ, ಕಳ್ಳತನ ಎನ್ನಲೆ- ಅಚ್ಚರಿ, ಬೆರಗು ಮೂಡಿಸುತ್ತದೆ.

ಒಂದು ಪ್ರಶ್ನೆ ಮರ್ಯಾದಸ್ಥನಿಗೆ ಎದ್ದು ಕಾಣುತ್ತದೆ. ಇಷ್ಟು ದಿನ ಬದುಕಿ ಉಳಿಸಿ ಹೋಗುವುದೇನು? ಗಳಿಸಿದುದು ಏನು? ಹಣದ ಮಾತಲ್ಲ, ಮಕ್ಕಳು ಮರಿ ವಿಚಾರವಲ್ಲ, ಅವರ ಏಳ್ಗೆ ಬೀಳುಗಳಲ್ಲ, ನಷ್ಟ ಕಷ್ಟ ಕಾರ್ಪಣ್ಯ ಅಲ್ಲ. ನಮ್ಮ ಬದುಕಿನಲ್ಲಿ ಸಾಧಿಸಿದ್ದೇನು? ಮಾಡಿದುದೆಲ್ಲ ನೆಟ್ಟಗಾಯಿತೆ? ನುಡಿ ನೇರವಾಯಿತೆ? ಬಗೆದುದು ಸಾಧುವೆ? ನೆರವಾಗದಿದ್ದರೆ ಕೆಡುಕಾಯಿತೆ? ಈ ಸಮಯದಲ್ಲಾದರೂ ಈ ಪ್ರಶ್ನೆ ಬಾರದೆ ಹೋದರೆ ಇಷ್ಟು ದಿನ ಬದುಕಿದ ಬಾಳು ದನದ ಬಾಳು. ತಿಂದೆವು, ಕೊಂಡೆವು, ಬಿಟ್ಟೆವು; ದಿನದ ಅರ್ಧಭಾಗ ನಿದ್ದೆ ಮಾಡಿದೆವು; ಉಳಿದರ್ಧ ಹೇಗೊ ಕಳೆದೆವು. Glut the devouring grave, die, persih ಎಂದರು ಆರ್ನಲ್ಡ್ - ಯಾವ ಗೆರೆಯನ್ನೂ ಉಳಿಸದೆ ಎಂಬಂತಾಗಬಾರದಲ್ಲ. ಆದರೆ ಮಾಡಿದುದೆಷ್ಟು? ಮಾಡ ಬಹುದಾಗಿದ್ದುದೆಷ್ಟು? ಎಷ್ಟು ಮಾಡಬೇಕೆಂದಿದ್ದುದು ಎಷ್ಟು ಅಲ್ಪ, ನಿರ್ಘೃಣ ಆಯಿತು? ಇನ್ನೆಷ್ಟನ್ನು ಮಾಡುವ ಹುಮ್ಮಸ್ಸು, ಆಕಾಂಕ್ಷೆ ಇಂಗಿ ಹೋಯಿತು? ಬದುಕಿ ಯಾರಿಗೆ ಸಂತೋಷ, ಪ್ರಯೋಜನವಾಯಿತು? – ಎಂಬ ಪ್ರಶ್ನೆ ಸಾಮಾನ್ಯವಾಗಿ ಏಳಬೇಕು. ಎಷ್ಟು ಜನ ತಾವು ಈ ಬಗೆಗೆ ಕೃತಾರ್ಥರಾಗುತ್ತೇವೆ ಎನ್ನುತ್ತಾರೆ? ಆ ಸಂಖ್ಯೆ ಸಾವಿರಗಟ್ಟಲೆ ಎಣಿಕೆಗೆ ಬರಬೇಕು. ಬಹು ದೊಡ್ಡದನ್ನು ಸಾಧಿಸಿದೆವೆಂಬ ಅಭಿಮಾನ ಡೊಳ್ಳಾಗಿರಬಹುದು. ಕಾಲ ಇವರ ಎಷ್ಟನ್ನು ಉಳಿಸಿ ಇನ್ನೆಷ್ಟನ್ನು ಜಳ್ಳೆಂದು ತೂರುತ್ತದೆಯೊ ಯಾರು ಹೇಳಬಹುದು? ಆದರೆ ನಿರ್ವಂಚನೆಯಿಂದ ನಮ್ಮ ಶಕ್ತಿ ಇರುವವರೆಗೂ ಮಾಡಿದ್ದನ್ನು ಮಾಡಿದೆವು ಎಂಬ ಒಂದು ತೃಪ್ತಿ ಇದ್ದರೆ ಬದುಕು ಸಾರ್ಥಕ. ಅಲ್ಲದೆ ನಾವಿದ್ದರೆ ಸಂತೋಷ ಯಾರಿಗೆ? ಹೋದೆವು, ಅಳುವವರಾರು? ಹಾಯ್ ಹಾಯ್!– ಎಂದುಕೊಳ್ಳುವ ಜೀವದಷ್ಟು ತಬ್ಬಲಿ ಆಗಬಾರದು. ಆ ಒಂದು ಆಸೆಯನ್ನೊ ಪ್ರಾರ್ಥನೆಯನ್ನೊ ಇಟ್ಟುಕೊಳ್ಳುವಂತಾದರೆ ಸಂತೋಷ. ಕಾಲದ ಕರೆ ಬಂದಾಗ ಒಬ್ಬನ ಮನಸ್ಸಿನ ಸ್ಥಿತಿಯನ್ನು ಕುರಿತು ನನ್ನ ಒಂದು ಪದ್ಯವನ್ನು ಹೇಳಿ, ವೃದ್ಧಾಪ್ಯದ ಎರಡನೆಯ ಹಂತ ಮುಗಿದರೆ ನೆಮ್ಮದಿ ಎಂದು ಹೇಳಿ, ಇದನ್ನು ಮುಗಿಸುತ್ತೇನೆ:



ನಿಮ್ಮಲೆನ್ನ ನೆನಪನುಳಿಸ
ಲೇನನಿಟ್ಟು ಹೋಹೆನೊ
ಲಕ್ಷ ಕೆಳೆಯ ಸಾಲ ಹೊತ್ತು
ಹೋಹ ಪುಣ್ಯವೆನಗಿರೆ,

ಇರುಳು ಕಳೆಯೆ ಗಾಳಿ ಬೀಸಿ
ಹೆಜ್ಜೆ ಜಾಡನಳಿಸಿ
ನಾಳೆ ಕಣ್ಣು, ನಾಳೆ ಮನಸು
ಹೊಸತ ಕಂಡು ನಲಿವುದು.

ಆಯ್ತು ನೋವೊ ಆಯ್ತು ನಲಿವೊ
ಜೊತೆಗೆ ಬಾಳ ಬಾಳ್ದೆವು;
ಇತ್ತವರಿಗೆ ನಮೋ ಎನುವೆ
ಉಳಿದವರಿಗು ಅದುವೇ.

ಒಳಿತ ನೆನೆವಿರಾದರೆನಗೆ
ತಣಿವು ಹರುಷವೆನ್ನಲೆ
ವಿರಸವನೇ ಬಡಿಸುವರಿಗೆ
ಬೇಡವೆಂದರಪ್ಪುದೆ?

ಯಾರನಾರು ಸಂತೈಸಲು
ಏನಗತ್ಯವುಳಿದಿದೆ?
ಇಂದು ನಾವು, ನಾಳೆ ನೀವು
ಎಲ್ಲರವಧಿ ಕಾದಿದೆ.

ಇಲ್ಲಿ ಕೆಳೆಯರಲ್ಲಿ ಕೆಳೆಯ
ರೆಲ್ಲೆಲ್ಲಿಯು ಕೆಳೆಯರೇ;
ಇಲ್ಲಿ ಕೆಳೆಯ ನೀಡದವರು
ಅಲ್ಲಿ ಅದನು ಕಲಿಯರೆ?

ಹೋಗಿ ಬರಲು ಬೇಡುತಿರುವೆ
ಕಳುಹಿಕೊಡಿರಿ ನಲ್ಲರೇ;
ಕಣ್ಣ ತೇವವೊರಸಿ ನಗುತೆ
ನೆಮ್ಮದಿಯನು ನುಡಿಯುತೆ.

ನನ್ನ ಕಿರಿಯ ಸೊಡರು ತೇಲಿ
ಕಡಲ ಕಾಣ ಹೊರಟಿದೆ;
ನಿಮ್ಮ ಕಣ್ಣು ಕಾಣುವರೆಗು
ಆರದಿರಲು ಸೈಪದೇ.

(1978)

❏

# IV. ನೆನಪುಗಳು

## ಹಳೆಯ ಬೆಂಗಳೂರಿನ ನೆನಪುಗಳು.....

ನಾನು ನೋಡಿರುವ ನಾಲ್ಕೈದು ಪಟ್ಟಣಗಳನ್ನು ಕುರಿತು ಏನಾದರೂ ಬರೆಯಬಹುದೇನೊ ಎಂದು ಮನಸ್ಸಿಗೆ ಬಂದಿದೆ. ಅಷ್ಟನ್ನೂ ಕುರಿತು ಬರೆಯುವುದು ಸುಲಭವಲ್ಲ. ನನಗೆ ಹೆಚ್ಚಾಗಿ ಬಳಕೆಯಾಗಿರುವ ಊರುಗಳು ಎರಡು : ಬೆಂಗಳೂರು, ಮೈಸೂರು. ಆದರೆ ಎಲ್ಲಿ ಶುರು ಮಾಡುವುದು, ಹೇಗೆ ಪ್ರಾರಂಭಿಸುವುದು ಎಂಬುದು ಕಷ್ಟವಾಗಿದೆ. ಇದೇ ಅದರ ಮಹಾಲಕ್ಷಣ. ಮಹಾ ಅಂದರೂ ಅನ್ನಿ; ವಿಶೇಷ ಅಂದರೂ ಅನ್ನಿ. ಮಹಾ ಎಂದರೆ, ಈ 60-70 ವರ್ಷದಲ್ಲಿ ಅದು ಬೆಳೆದು ಹೆಸರುಗೊಂಡಿರುವ ರೀತಿ. ವಿಶೇಷವೆಂದರೆ, ಇದನ್ನು ಬೇರೆ ಊರುಗಳಿಂದ ಭಿನ್ನವೆನಿಸುವ ಲಕ್ಷಣ. ಒಂದು ಅದರ ಸ್ವರೂಪ, ಹರಡು: ಎಂದರೆ, ರಚನೆಗೆ ಸಂಬಂಧಿಸಿದ್ದು; ಅದಕ್ಕೆ ಸೌಭಾಗ್ಯವನ್ನು ತಂದಿರುವಂಥದು. ಇನ್ನೊಂದು, ಇದು ಬೆಂಗಳೂರೇ ಸರಿ, ಬೇರೊಂದಲ್ಲ; ಇಲ್ಲಿನದು ಬೇರಲ್ಲಿಲ್ಲ ಎಂದು ಮಾಡಿರುವ ಲಕ್ಷಣ. ಎಲ್ಲದರ ಕತೆಯಲ್ಲಿಯೂ ಈ ಎರಡಂಶಗಳೂ ಸೇರಿರುತ್ತವೆ. ಒಂದು ಸ್ವರೂಪ ಲಕ್ಷಣ; ಒಂದು ವ್ಯಕ್ತಿ ಲಕ್ಷಣ. ಒಂದು ನಾಣ್ಯದ ಅಥವಾ ಸಣ್ಣದಾದ ಸೀಮೆ ಸುಣ್ಣದ ಕೋಪನ್ನು ವರ್ಣಿಸಬೇಕಾಯಿತೆನ್ನಿ. ಇದಕ್ಕೆ ಇಂಥ ಎರಡೂ ನೆಲಸುಗಳು ಉಂಟು. ಇನ್ನೂ ಹೆಚ್ಚಿನವು ಸೇರಿಯಾವು. ನಾಣ್ಯವೆಂದಾಗ ಎಷ್ಟು ಬೆಲೆಯದು, ಯಾವ ಆಕಾರದ್ದು, ಯಾವ ಪದಾರ್ಥದಿಂದ ಮಾಡಿದ್ದು, ಇದರ ಆಕೃತಿ ರಚನೆ ಹೇಗೆ, ಚೌಕವೆ, ಗುಂಡೆ, ಸರಪಣಿಯಂತಿರುವ ಸುತ್ತಲ ಆಕೃತಿಯೆ ಎಂದು ಕೇಳುವುದರ ಜೊತೆಗೆ, ಅದರ ಎರಡು ಮುಖಗಳು ಹೇಗೆ ಅಚ್ಚಾಗಿವೆ, ಯಾವ ಯಾವ ನಾಣ್ಯಗಳು ಯಾವ ಯಾವ ರೀತಿಯಲ್ಲಿ ಮುಖ ಭಾಗ, ಹಿಂಭಾಗ ಅಚ್ಚು ಆಗಿರುವ ರೀತಿ ಹೇಗೆ ಎಂಬುದೆಲ್ಲ ಸೇರುತ್ತದೆ. ಇವನ್ನು ಬೇರೆ ಮಾಡುವುದಕ್ಕಾಗುತ್ತದೆಯೆ ?– ಇದು ಈ ಭಾಗ, ಇದು ಇನ್ನೊಂದು ಭಾಗ; ಇದು ಆಕೃತಿ, ಇದು ಬೇರೆ ಎಂದೂ ವಿವೇಚನೆ ಮಾಡಬಹುದು. ಕಣ್ಣಿಗೆ ಕಾಣುತ್ತದೆ, ಬುದ್ಧಿಗೆ ತಟ್ಟುತ್ತದೆ, ಪೇಟೆಯಲ್ಲಿ ಸಾರ್ಥಕವಾಗುತ್ತದೆ. ಒಂದೊಂದಕ್ಕೂ ತನ್ನದೇ ಆದ ಬೆಲೆ, ರೂಪ, ಗುಣ, ರಚನೆ, ವಸ್ತು ತಾರತಮ್ಯ ಇರುತ್ತದೆ. ಹಿಂದಿನ ಕಾಲದಲ್ಲಿ ಹಳ್ಳಿ ಸ್ಕೂಲುಗಳಲ್ಲಿ ಬರೆಯುವ ಸುಣ್ಣವೆಂದು ಉಂಡೆಗಳನ್ನೇ ಕೊಡುತ್ತಿದ್ದರು. ಆ ಕಾಲ ಹೋಗಿ ಮಾಟವಾಗಿ ಮಾಡಿದ ಸೀಮೆ ಸುಣ್ಣದ ಕೋಪುಗಳು ಬಂದವು. ಮೇಷ್ಟ್ರು, ಹುಡುಗರು ಮನೆಗಳಿಗೆ

ಅವನ್ನು ಕದ್ದುಕೊಂಡು ಹೋಗುವುದೂ ಇತ್ತು. ಈಗಲೂ ಅನೇಕರು ಮಾಡುತ್ತಾರೊ ಏನೊ. ಆ ಉಂಡೆ ಸುಣ್ಣ ಸುಲಭವಾಗಿ ಒಡೆಯುತ್ತಿರಲಿಲ್ಲ. ನಾಜೂಕಾಗಿ ಹಿಡಿಯದಿದ್ದರೆ, ಸ್ವಲ್ಪ ಹೆಚ್ಚಾಗಿ ಒತ್ತಿದರೆ ಈ ಕೋಪು ಒಡೆದು ಹೋಗುತ್ತದೆ. ಅದರ ಆಕೃತಿಯೂ ಹಾಗೇ. ಅಡಿ ಭಾಗ ಸ್ವಲ್ಪ ಹೆಚ್ಚು ಅಗಲ, ತುದಿ ಸ್ವಲ್ಪ ಕಡಮೆ; ನಡುವೆ ಎರಡೂ ಕಡೆ ಉದ್ದಕ್ಕೆ ಪಕ್ಕೆಲುಬುಗಳು ಇದ್ದಂತೆ, ಎರಡು ಭಾಗಗಳು ಸೇರಿಸಿದಂತೆ ಹೊರಕ್ಕೆ ಕಾಣಿಸಿ ನಿಲ್ಲುವ ರೇಖೆಗಳು. ನೋಡಲು ಇದು ಚೆನ್ನ; ಬಳಸುವುದು ಇನ್ನೊಂದು. ಜಾಕಾಯಿ ಪೆಟ್ಟಿಗೆಗಳಲ್ಲಿ ಮರದ ಪುಡಿ ಹಾಕಿ ನೂರುನಲವತ್ತನಾಲ್ಕನ್ನು ನಿಲ್ಲಿಸಿ ಒಂದೇ ಸಮನೆ – ಭೀಷ್ಮನ ಶರಶಯ್ಯೆ ಎನ್ನುತ್ತಾರಲ್ಲ – ಅಂಥ ಒಂದು ಸೀಮೆಸುಣ್ಣದ ಹಕ್ಕೆ ನೋಡಲು ಬಹು ಸೊಗಸು. ಗುಣ, ರೂಪ, ಆಕಾರ ಎಲ್ಲಿಯೂ ಮನಸ್ಸಿಗೆ ಬರುವುದೇ. ಹಾಗೇ ಬೆಂಗಳೂರಿನದು.

ಎಲ್ಲ ಊರುಗಳ ಹಾಗೇ ಬೆಂಗಳೂರು. ಇದನ್ನು ಪಟ್ಟಣ ಎನ್ನುವುದೆ, ನಗರ ಎನ್ನುವುದೆ ಎಂದು ಯೋಚಿಸಿ ಯೋಚಿಸಿ ಕಾಲ ಕಳೆದೆ. ನಗರ ಈಗ ಸದ್ಯ ಈ ಊರಿನ ಒಂದು ಭಾಗವಾಗುತ್ತದೆ: ಯಾವುದೇ ನಗರ – ನಾವು ಅರಿಯದಿದ್ದ ಭಾಗ, ನಾವು ಕಾಣದ್ದು, ಹೋಗದ್ದು ಇಂಥ ನಗರ ಭಾಗಗಳು, ಕೇಂದ್ರ ಭಾಗಗಳು ಸೇರಿ ಪಟ್ಟಣ. ಆ ಪಟ್ಟಣ ಎಂಬ ಹೆಸರಿನಲ್ಲಿ ದೊಡ್ಡ ಯಾವುದೊ ಒಂದು ಭಾವ ಕಲ್ಪಿತವಾಗುತ್ತದೆ. ಪಟ್ಟಣವೆಂಬ ಹೆಸರಿನ ಒಂದು ಊರು ಮೌರ್ಯರ ಮುಂಚಿನ ಕಾಲದಿಂದಲೂ ಪಾಟಲೀಪುತ್ರದ್ದು. ಈಗಿಗೂ ಮದರಾಸಿನವರಿಗೆಲ್ಲ ಮದರಾಸು ಪಟ್ಟಣ. ಬೆಂಗಳೂರನ್ನು ಪಟ್ಟಣ ಎಂದು ಕರೆಯುತ್ತಾರೊ ಇಲ್ಲವೊ ನನಗೆ ಗೊತ್ತಿಲ್ಲ. ಕರೆಯದಿದ್ದರೆ ಅದಕ್ಕೇನು ನಷ್ಟ? ಅದು ಪಟ್ಟಣವೇ.

ಒಂದು ಕಾಲದಲ್ಲಿ ಇದಕ್ಕೆ ಒಂಭತ್ತು ಬಾಗಿಲುಗಳಿದ್ದವು ಎಂದು ಹೇಳುತ್ತಾರೆ. ನಾನು ಈ ಊರಿಗೆ ಬಂದ ಸಮಯದಲ್ಲಿ ಸ್ಪಷ್ಟವಾಗಿ ಬಾಗಿಲುಗಳನ್ನು ನೋಡಿರಲಿಲ್ಲ. ಎಲ್ಲ ಹೆಸರುಗಳನ್ನೂ ಕೇಳಿದ್ದೆನೊ ಇಲ್ಲವೊ. ಯಾರಿಗಾದರೂ ಕೋಪ ಬಂದಾಗ 'ಅವನೇನು ಸಾಮಾನ್ಯನೆ? ಪಕ್ಕದ ಮನೆ ನರಸಿಂಹಯ್ಯನ್ನ ಒಂಭತ್ತು ಬಾಗಿಲು ಸುತ್ತಿಸಿ ಬಿಟ್ಟ: ಬುಯ್ಯೋ ಬುಯ್ಯೋ ಎನ್ನಿಸಿದ' ಎನ್ನುವುದನ್ನು ಕೇಳಿದ್ದೇನೆ ಈಗಲೂ. ಆಗಿನಷ್ಟಿಲ್ಲ. ಆ ಹೆಸರಿನ ಪೊಲೀಸ್ ಸ್ಟೇಷನ್‌ಗಳಿವೆ : ಕೆಂಗೇರಿ ಗೇಟ್, ಯಲಹಂಕ ಗೇಟ್, ಉಪ್ಪಾರ ಪೇಟೆ, ಅಲಸೂರು ಗೇಟ್ ಎಂಬ ನಾಲ್ಕು ಹೆಸರಿನ ಬಾಗಿಲುಗಳು. ಅಷ್ಟಕ್ಕೆ ಮಿತಿಗೊಂಡಿದ್ದಿರಬೇಕು ಪೇಟೆ. ಕೋಟೆ ಅದರ ಈಚಿನದು. ಒಂದು ರೀತಿ ಮೊದಲಿಂದ ಊರುಗಳಲ್ಲಿನ ಭಾಗವನ್ನು ನಿರ್ದೇಶಿಸುವುದರಲ್ಲಿ ಕೋಟೆ, ಪೇಟೆ ಎಂದೇ ಇದ್ದುದು. ಪೇಟೆ, ಪಟ್ಟಣ ಎಂದೇ ಜೊತೆಗೆ ಸಲ್ಲುವ ಹೆಸರು. ಈಗಿನ ಮಾರ್ಕೆಟ್ ಇರುವ ಕಡೆಯೇ ಹಿಂದೆ ಮಾರ್ಕೆಟ್ ಇದ್ದುದು. ಆ ಸುಮಾರು ಮುಗಿಯುತ್ತಿತ್ತು ಪೇಟೆ. ಕೋಟೆ ಈಗಲೂ ಎಲ್ಲಿ ಬ್ರಿಟಿಷರು ಈ ಊರನ್ನು ಟಿಪ್ಪೂಸುಲ್ತಾನನಿಗೆ ವಿರೋಧವಾಗಿ



ಮುತ್ತಿ ಒಡೆದರೊ ಆ ಸುಮಾರಿನಿಂದ – ಅಲ್ಲಿನ್ನೂ ಒಂದು ಕೋಟೆಯ ಬಾಗಿಲಿದೆ. – ಅದು ಇಂದಿನ ಬಸ್‌ಸ್ಟಾಂಡ್ ಪಕ್ಕದಿಂದ ಸುತ್ತಿಕೊಂಡು, ಮೆಡಿಕಲ್ ಕಾಲೆಜ್ ಪ್ರದೇಶವನ್ನು ಆವರಿಸಿಕೊಂಡು, ಕೋಟೆ ಹೈಸ್ಕೂಲನ್ನು ಸುತ್ತಿ, ಕಣ್ಣಾಸ್ಪತ್ರೆಯ ಸುಮಾರಿಗೆ ಮುಗಿಯುತ್ತಿತ್ತು. ಸುತ್ತ ಕೆಲವು ಭಾಗಗಳಲ್ಲಿದ್ದ ಕಂದಕಗಳನ್ನು ನಾವು ಕಂಡಿದ್ದೆವು. ಈಗ ಕೋಟೆ ಎಂಬ ಭಾಗದ ಹೊರಭಾಗದಲ್ಲಿ ಕಲಾಸಿಪಾಳ್ಯವಿದೆ. ಬಹುಶಃ ಧರ್ಮರಾಯನ ಕರಗ ಇಂದಿಗೂ ಈ ಒಂಭತ್ತು ಬಾಗಿಲುಗಳನ್ನು ಸುತ್ತುತ್ತದೆ ಎಂದುಕೊಳ್ಳುತ್ತಿದ್ದೇನೆ. ಕಾಲಕ್ರಮದಲ್ಲಿ ಟಿಪ್ಪೂಸುಲ್ತಾನನೂ ಹೋದ. ಕೋಟೆಯೂ ಒಡೆಯಿತು. ಅವನ ಅರಮನೆಗೆ ದಿಕ್ಕಿಲ್ಲವಾಯಿತು. ಧ್ವಜಸ್ತಂಭ ನೆಲಸಮವಾಯಿತು. ಮದ್ದುಗುಂಡುಗಳು ಸಂಗ್ರಹವಾಗುತ್ತಿದ್ದ ಉಗ್ರಾಣಗಳು ಮಾಯವಾದುವು. ಯಾವುದೂ ಬಯಲಾಗಲಿಲ್ಲ ವಾದರೂ ಇನ್ನೇನೇನೊ ಅಲ್ಲಿ ಬಂದಿವೆ. ಕಲ್ಲು ಗಾರೆಗಳಿಂದ ಕಟ್ಟಿದ್ದು ಕೋಟೆ. ಆ ಇಟ್ಟಿಗೆ ಎಷ್ಟು ಹದವಾಗಿ ಬೆಂದದ್ದು, ಎಷ್ಟು ಗಟ್ಟಿಯಾದ್ದು: ಈಗಲೂ ಆ ಸುತ್ತಿನಲ್ಲಿ ಎಲ್ಲಿಯಾದರೂ ಅಗೆದರೆ ಸಿಕ್ಕುತ್ತದೆ ನೆಲದಲ್ಲಿ ಹೂತು ಹೋಗಿರುವುದು. ಅಲ್ಲಿ ಎಲ್ಲಿಯಾದರೂ ಗ್ರಹಚಾರವಶಾತ್ ಬಿದ್ದರೆ ಪೆಟ್ಟು ಬಲವಾಗಿ ಬಿದ್ದು ರಕ್ತ ಕಾರುತ್ತದೆ.

ಮಾರ್ಕೆಟಿಂದ ಆಚೆಯದು ಈಗಿನ ಹಾಗೆ ದೊಡ್ಡಪೇಟೆ. ಅಲ್ಲಿ ತೊಡಗಿ ಚೌಕದವರೆಗೂ ಹೋಗಿ ಪೂರ್ವ ಪಶ್ಚಿಮ ಉತ್ತರ ಒಡೆಯುತ್ತದೆ. ರಸ್ತೆ ನಡುವೆ ಸಣ್ಣ ಭಾಗಗಳನ್ನು ಬಿಟ್ಟರೂ ಎಡಗಡೆಯ ಭಾಗ ಚಿಕ್ಕಪೇಟೆ, ಬಳೇಪೇಟೆ ಬರುವವರೆಗೂ ಮೂಡಲಿಗೆ ಕಾಳಮ್ಮನ ಗುಡಿಯವರೆಗೂ ನಗರ್ತಪೇಟೆ. ಆನಂತರ ಗಾಣಿಗರಪೇಟೆ, ಅಲಸೂರ್‌ಪೇಟೆ, ಕಬ್ಬನ್‌ಪೇಟೆ ಎಂಬ ಹೆಸರುಗಳನ್ನು ಇಟ್ಟುಕೊಂಡು ಉದ್ದಕ್ಕೆ ದಂಡಿಗೆ ಹೋಗಿಬಿಡುತ್ತದೆ. ದಂಡಿಗೆ ಹೋದ ದಾರಿಯನ್ನು ಕೇಳುವವರಾರು? ಈ ದೊಡ್ಡಪೇಟೆ ಚೌಕದ ವಿಶೇಷ ಇಲ್ಲಿನ ಬಗೆಬಗೆಯ ವ್ಯಾಪಾರದ್ದು. ದೊಡ್ಡಪೇಟೆಯ ಅಂಗಡಿಗಳ ತೀರು ಒಂದು ರೀತಿ. ಅದರಲ್ಲಿ ಒಂದು ಭಾಗ ಎರಡೂ ಕಡೆ ಚೌಕದ ಹತ್ತಿರ ಹತ್ತಿರ ನೆಲಸಿದ್ದ ಗ್ರಂಥಿಗೆ ಅಂಗಡಿಗಳು. ಮೈಸೂರಲ್ಲಿ ಇಂಥ ಅಂಗಡಿಗಳನ್ನು ಪನ್ಸಾರೆ ಅಂಗಡಿಗಳು ಎನ್ನುತ್ತಾರೆ. ಅಲ್ಲಿ ಮೂಲಿಕೆಗಳು, ಸುಗಂಧ ದ್ರವ್ಯಗಳು ಮುಂತಾದ ವಿಶೇಷ ಪದಾರ್ಥಗಳನ್ನು ಮಾರುವ ವರ್ತಕರು ಇರುತ್ತಿದ್ದರು. ಬಹುಮಟ್ಟಿಗೆ ಎಲ್ಲ ನಮ್ಮ ನಗರ್ತರು, ಬಣಜಿಗರು. ನಗರ್ತಪೇಟೆಗೆ ತಿರುಗುವಾಗ ಚೌಕವನ್ನು ದಾಟಿ ಮುಂದೆ ಹೋಗುತ್ತ ಬಳ್ಳಾಪುರದ ಪೇಟೆಯವರೆಗೂ ಚಿನ್ನ-ಬೆಳ್ಳಿಯ ಒಡವೆ ಅಂಗಡಿಗಳು. ಚೌಕದ ಹತ್ತಿರ ಹತ್ತಿರ ದೊಡ್ಡಪೇಟೆಯಲ್ಲಿಯೇ ಅವು ತೊಡಗುತ್ತಿದ್ದರೂ ಅಲ್ಲಿ ವಿಶೇಷ. ಅದು ಚೌಕ ತಾನೇ? ಅದರ ನಾಲ್ಕೂ ಕಡೆಗಳಲ್ಲಿ ಚಿನ್ನ ಬೆಳ್ಳಿ ಅಂಗಡಿ ಬೇಡವೆ? ಚಿಕ್ಕಪೇಟೆಯಲ್ಲೆಲ್ಲ ವಿಶೇಷವಾಗಿ ಬಟ್ಟೆಯ ಅಂಗಡಿಗಳು. ಉತ್ತರಕ್ಕೆ ಹೋದ ಹಾಗೆಲ್ಲ ತುಪ್ಪದ ಆಂಜನೇಯನ ಗುಡಿ, ಹುಚ್ಚಾಸ್ಪತ್ರೆ. ಅಲ್ಲಿಂದ ಮುಂದೆ ಲಂಡನ್ ಮಿಷನ್ ಹೈಸ್ಕೂಲು. ಮುಂದೆ ಸೆಂಟ್ರಲ್ ಕಾಲೆಜ್. ಗಡಿಯಾರದ ಗೋಪುರ ಅದಕ್ಕೊಂದಕ್ಕೇ ಇದ್ದದ್ದು. ಮುಂದೆ ಬಹುಕಾಲ ನಮ್ಮ ಕಣ್ಣಿಗೆ ಬೀಳುತ್ತಿದ್ದುದು

ಬಲಗಡೆಯ ಅಠಾರಾ ಕಚೇರಿ ಮಾತ್ರ. ಅದಕ್ಕೆ ಎದುರು ಬ್ರಿಟಿಷ್ ರೆಸಿಡೆಂಟ್ ವಾಸ ಮಾಡುತ್ತಿದ್ದ ಬಂಗಲೆಯ ಸುತ್ತ – ಇವೊತ್ತಿನ ವಿಧಾನ ಸೌಧದ ಮುಂಭಾಗದ ರಸ್ತೆ ವರೆಗೂ – ಮುಳ್ಳು ಜಾಲಿ ಕಾಡು. ಅಲ್ಲಿಂದ ಮುಂದೆ ಬ್ರಿಟಿಷರ ದಂಡೇ ತಿರುಗುತ್ತಿದ್ದ ನಾಡಾಡಿ ಬೆಂಗಳೂರು. ಪಟ್ಟಣಿಗರ ಭಯಕ್ಕೆ ಕಾರಣವಾಗಿದ್ದ ಅವರ ಸಿಪಾಯ್ ಸಂಚಾರ. ಹೊಟೇಲುಗಳು, ಬರಾಕುಗಳು ಎಲ್ಲ ಅವರವೇ. ಇಲ್ಲಿ ರಸ್ತೆಯ ಈಚೆ ಕಡೆ ಬೆಂಗಳೂರಿಗೆಲ್ಲ ದೊಡ್ಡದಾದ ಮುಖ್ಯ ಅಂಚೆ ಕಚೇರಿ ಮತ್ತು ಟೆಲಿಗ್ರಾಫ್  ಕಚೇರಿ. ಅಠಾರಾ ಕಚೇರಿಯ ಪೂರ್ವ-ದಕ್ಷಿಣ ಭಾಗ ಕಬ್ಬನ್ ಪಾರ್ಕ್.  ಮೈಸೂರು ಸಂಸ್ಥಾನವನ್ನು ಸುಮಾರು 50 ವರ್ಷ ಕಾಲ ಬ್ರಿಟಿಷ್ ರೆಸಿಡೆಂಟರು ಆಳುತ್ತಿದ್ದು ಒಡೆಯರ ಆಡಳಿತಕ್ಕೆ ಪುನಃ ಒಪ್ಪಿಸಿದರಷ್ಟೆ? ಆ ಕಾಲದ ರೆಸಿಡೆಂಟರಲ್ಲಿ ಪ್ರಖ್ಯಾತನಾದವನು ಸರ್ ಮಾರ್ಕ್ ಕಬ್ಬನ್. ಅವನ ಶಿಲ್ಪಾಕೃತಿ ಕುದುರೆಯ ಮೇಲೆ ನಿಂತಂತೆ ಆ ಮುಂದೆ ಇದೆ. ಉತ್ತಮವಾಗಿ ಕಣ್ಣುಮನಸ್ಸುಗಳನ್ನು ಸೆಳೆಯುವಂತೆ– ಉದ್ದಕ್ಕೆ ಉತ್ತರ-ದಕ್ಷಿಣ ಒಂದು ಜಗಲಿಯ ಮೇಲೆ ಎಂಬಂತೆ– ಹೂ ಗಿಡಗಳ ಉದ್ಯಾನವನ ಭೂಮಿ. ಜನ ಬಂದು ಕೂಡುವುದಕ್ಕೆ ಮರದ ಒರಗು ಬೆಂಚುಗಳಿವೆ. ಎರಡು ಸ್ತರ ಮೆಟ್ಟಿಲುಗಳನ್ನು ಇಳಿದು ಸ್ವಲ್ಪ ಮುಂದೆ ಹೊರಟರೆ ಒಂದು ಬ್ಯಾಂಡ್ ಸ್ಟ್ಯಾಂಡ್. ವಾರಕ್ಕೊಂದು ಬಾರಿ ಭಾನುವಾರ ಅಲ್ಲಿ ವಾದ್ಯಮೇಳ ಏರ್ಪಡುತ್ತಿತ್ತು. ಹೆಚ್ಚು ನಯನಾಕರ್ಷಕವಾಗಿದ್ದುದು ಕಬ್ಬನ್ ವಿಗ್ರಹದ ಎಡಗಡೆಗೆ  ಪ್ರತಿ ಶನಿವಾರವೂ ನಡೆಯುತ್ತಿದ್ದ ಸ್ಕಾಟಿಷ್ ಹೈಲ್ಯಾಂಡ್ ಅವರ ವಾದ್ಯಮೇಳ, ಅವರ ಪೋಷಾಕು. ಟೋಪಿ, ರಗ್ಗುಗಳ ಹಾಗಿದ್ದ ಉಲ್ಲನ್ ಚೌಕಳಿಯ ಲಂಗದಂತಹ ಮೊಳಕಾಲುವರೆಗಿನ ಉಡೆ ಉಟ್ಟು, ಸೊಂಟದಿಂದ ಇಳಿದ ನಡುಕಟ್ಟಿನ ಕುಚ್ಚು ಇಳಿದು ಬೀಳುತ್ತಿದ್ದ ಆ ಜನ ಒಂದೊಂದು ಸಲ ಸ್ಕಾಟ್ಲೆಂಡಿನ ವಾದ್ಯಗಳಾದ ಬ್ಯಾಗ್‌ಪೈಪ್ ಮೇಳವನ್ನೊ ಅಥವಾ ಲೋಹ ವಾದ್ಯಗಳ ಮೇಳವನ್ನೊ ನಡಸುತ್ತಿದ್ದರು. 18-20ಕ್ಕೆ ಕಡಮೆಯಿಲ್ಲದ ವಾದ್ಯಗಾರರು. ದೊಡ್ಡ ಮದ್ದಳೆ ಕೆಲವುಗಳ ಜೊತೆಗೆ ಪಿಳ್ಳಂಗೋವಿ ತರಹದ ಕೊಳಲು ವಾದ್ಯಗಳು. ಪ್ರತಿಯೊಬ್ಬ ವಾದ್ಯಗಾರನ ಮುಂದೆಯೂ ಆ ದಿನ ಬಾಜಿಸಬೇಕಾಗಿರುವ ಗೇಯಗಳ ರೇಖನವುಳ್ಳ ಹಾಳೆಗಳು. ಒಂದು ಕಡೆ ಎತ್ತರದಲ್ಲಿ ನಿಂತು ಈ ಸಂಗೀತವನ್ನು ಪ್ರತ್ಯಂಶದಲ್ಲಿಯೂ ಲಯದಲ್ಲಿಯೂ ಪ್ರತಿವಾದ್ಯದ ಸ್ತರವನ್ನೂ ಸ್ವರವನ್ನೂ ಸೂಚಿಸುವ ನಿರ್ದೇಶಕ. ಈ ಚಿತ್ರ ನಮ್ಮ ದೇಶಕ್ಕೆ ಅಸಾಧಾರಣವಾದದ್ದು. ಅನೇಕ ಪಾಶ್ಚಾತ್ಯ ಸಂಗೀತಗಾರರ ಹೆಸರುಗಳನ್ನೂ ಅವರ ಗಾನದ ಸ್ವರೂಪವನ್ನೂ ಹುಡುಗರಾದ ನಾವು ತಿಳಿದುಕೊಳ್ಳುತ್ತಿದ್ದುದು ಆಗ, ಅಲ್ಲಿ. ದಂಡಿನಿಂದ ಬಹುಜನ ಪರಂಗಿಯವರು ಧಾರಾಳವಾಗಿ ಬಂದು ಕೂತೊ ತಿರುಗುತ್ತಲೊ ಇರುತ್ತಿದ್ದರು. ಶುಭ್ರವಾದ ಬಟ್ಟೆ ಉಟ್ಟ ಸಣ್ಣ  ಸಣ್ಣ ಹೆಣ್ಣು ಹುಡುಗರ ತಂಡ ಒಟ್ಟಿಗೆ ಕುಣಿದಾಡುತ್ತ ಕಾಣುತ್ತಿದ್ದ ಸನ್ನಿವೇಶ. ವಿಗ್ರಹದ ಈಚೆ ಕಡೆ ಬೆಂಗಳೂರಿನ ಕೆಲವರು 10-15 ಜನ ಒಟ್ಟು ಅಲ್ಲಿ ಇಲ್ಲಿ ಬೆಂಚುಗಳ ಮೇಲೆ ಕುಳಿತು ವೀಕ್ಷಕರಾಗಿರುತ್ತಿದ್ದರು. ಬಹುಶಃ ವಿದೇಶಿ ಆಕರ್ಷಣೆಯಿಂದ ನಮ್ಮಂಥ ಶಾಲೆಯ ಹುಡುಗರು ಧೈರ್ಯಮಾಡಿ



ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋಗುತ್ತಿದ್ದುದುಂಟು. ಅಷ್ಟೇ ಹೊರತು ಅದು ಬೆಂಗಳೂರು ಸಿಟಿಗೆ ಬಂದ ಮಿಲಿಟರಿ ಬ್ಯಾಂಡ್ ತಂಡದವರ ಪ್ರದರ್ಶನ. ಮೆಟ್ಟಿಲು ಇಳಿದು ಕೆಳಗಿನ ಬ್ಯಾಂಡ್ ಸ್ಟ್ಯಾಂಡ್ ದಾಟಿ ಉದ್ದಕ್ಕೆ ಹೋದರೆ ತಮಾಷೆ ಬಂಗಲೆ. ಅದರ ಹಿಂಭಾಗ  ಅಠಾರಾ ಕಚೇರಿ ಕಡೆ; ಮುಂಭಾಗ ಅಲಸೂರು ಗೇಟ್ ಪೊಲೀಸ್ ಸ್ಟೇಷನ್‌ನಿಂದ ಹಿಡಿದು ದಂಡಿಗೆ ನಡೆಯುವ ದೊಡ್ಡ ರಸ್ತೆ. ರಸ್ತೆಯ ಮುಂಭಾಗ ಇನ್ನೇನು ದಂಡಿಗೆ ಮುಟ್ಟುತ್ತದೆ ಎಂಬಲ್ಲಿಗೆ ಸಿಟಿ ಪೊಲೀಸರ ಅಧಿಕಾರ ನಿಂತು ದಂಡಿನ ಪೊಲೀಸರ ವ್ಯಾಪ್ತಿ ಅಧಿಕಾರ ತೊಡಗಿತು ಎಂಬುದನ್ನು ಸೂಚಿಸುವಂತೆ ಅಲ್ಲಿನ ಪೊಲೀಸ್ ಸ್ಟೇಷನ್. ಕಬ್ಬನ್ ಪಾರ್ಕಿನ ಕೊನೆಗೆ ದಂಡನ್ನು ಸಂಧಿಸುವ ಹತ್ತಿರ ಅಮೃತ ಶಿಲೆಯಲ್ಲಿ ಮಾಡಿದ ವಿಕ್ಟೋರಿಯಾ ಮಹಾರಾಣಿಯ ದೊಡ್ಡ ವಿಗ್ರಹ. ಈ ಕೊನೆಗೆ ವಿಕ್ಟೋರಿಯಾ ಮಹಾರಾಣಿ ಆದರೆ, ಕಬ್ಬನ್ ಪಾರ್ಕಿನ ಉತ್ತರದ ಕೊನೆಗೆ ಚಕ್ರವರ್ತಿ ಎಡ್ವರ್ಡ್‌ನ ಅಂಥದೇ ಅಮೃತಶಿಲೆಯ ಇನ್ನೊಂದು ವಿಗ್ರಹ. ಬ್ರಿಟಿಷರ ಅಧಿಕಾರ ಭಾರತದಲ್ಲೆಲ್ಲ ಇದ್ದು, ಅವರ ಪರಮಾಧಿಕಾರ ನಮ್ಮ ಸಂಸ್ಥಾನಗಳಲ್ಲಿ ನಡೆಯುತ್ತಿದ್ದುದರ ಸೂಚಿಕೆ ಅದು.

ಇತ್ತ ಅಠಾರಾ ಕಚೇರಿಯಿಂದ ಸಿಟಿಗೆ ಬರುವ ದಾರಿಯಲ್ಲಿ  ಸ್ವಲ್ಪ ದಕ್ಷಿಣಕ್ಕೆ ಬೆಂಗಳೂರಿನ ಪಬ್ಲಿಕ್ ಲೈಬ್ರರಿ. ಶೇಷಾದ್ರಿ ಅಯ್ಯರ್ ಸ್ಮಾರಕ ಮಂದಿರ ಅದು. ಪೂರ್ತಿ ಪಾಶ್ಚಿಮಾತ್ಯ ಸಂಪ್ರದಾಯದ ವಾಸ್ತುಶಿಲ್ಪ. ಹೈಸ್ಕೂಲಿಗೆ ಆಗ ತಾನೆ ಸೇರಿದ್ದ ನಾವು ಅಷ್ಟು ದೊಡ್ಡ ಪುಸ್ತಕಾಲಯವನ್ನು ಆ ಮುಂಚೆ ನೋಡಿರಲಿಲ್ಲ.  ದಿನಪತ್ರಿಕೆ, ವಾರಪತ್ರಿಕೆ ಎಲ್ಲರಿಗೂ ದೊರೆಯುತ್ತಿದ್ದರೂ ಒಂದು ಸ್ಪೆಷಲ್ ರೂಮಲ್ಲಿ ವಿಶೇಷ ಸಂಗತಿಗಳುಳ್ಳ ಮಾಸ ಪತ್ರಿಕೆ, ತ್ರೈಮಾಸಿಕಗಳು, ಇಂಗ್ಲಂಡಿನ ವಾರಪತ್ರಿಕೆಗಳು ಇರುತ್ತಿದ್ದವು. ಅವು ಚಂದಾದಾರರಿಗಾಗಿ ಮೀಸಲಿಟ್ಟವು. ಪ್ರಶಾಂತವಾದ ಆ ಆವರಣದಲ್ಲಿ ಓದಲು, ಹೊರಲೋಕದ ಸಂಗತಿಗಳನ್ನು ಅರಿತುಕೊಳ್ಳಲು ಇದ್ದ ಸಾರ್ವಜನಿಕ ಅವಕಾಶ ದೊಡ್ಡದು. ಮೊದಲಿಂದಲೂ ನೆಲಮಾಳಿಗೆಯಂಥ ಸ್ಥಳದಲ್ಲಿ ಒಂದು ಹೊಟೇಲ್. ಮೊದ ಮೊದಲಿನ ಕಾಲದ್ದು ಜ್ಞಾಪಕವಿಲ್ಲ. 1914ರಿಂದ ಈಚೆಯ ಬಹುಕಾಲ ನಮಗೆ ಅದರ ನೆನಪು, ಗುರುತು ಇರುವುದು ಹನುಮಂತರಾಯರ ದೋಸೆ, ಕಾಫಿಯಿಂದ. ಮುಂದೆ ವಿಶಾಲವಾಗಿ ಹರಡಿರುವ ಪಾಶ್ಚಿಮಾತ್ಯ ರೀತಿಯ ಕ್ಯಾನ, ಡೈಸಿ ಮುಂತಾದ ಹೂಗಿಡಗಳ ನೆಲಸು. ಒಪ್ಪವಾಗಿ ಕತ್ತರಿಸಿದ ಹುಲ್ಲು ಹಾಸಲೆ. ಅಲ್ಲಿಂದ ಶೇಷಾದ್ರಿ ಅಯ್ಯರ್ ಅವರ ಶಿಲಾಮೂರ್ತಿ. ಸುಮಾರು ಅಂಡಾಕಾರದ ಈ ಹಸಲೆಯ ಸುತ್ತ 2 ಸಣ್ಣ ಸಣ್ಣ ರಸ್ತೆಗಳು ಉದ್ದಕ್ಕೆ ಜನವನ್ನು  ಕರೆದುಕೊಂಡು ಬಂದು ಸಿಟಿಗೊ ದಂಡಿಗೊ ಅಲಸೂರು ಕಡೆಯ ಸಂಪಿಗೆ ರಸ್ತೆಗೊ ಲಾಲ್‌ಬಾಗ್ ಕಡೆಗೊ ಒಯ್ಯುವುದು.

ದಂಡಿನವರು ವಾಸ ಮಾಡುವ ಸ್ಥಳಕ್ಕೂ ಪಟ್ಟಣದ ಜನರಿದ್ದ ಪ್ರದೇಶಕ್ಕೂ ನಡುವೆ ವಿಸ್ತಾರವಾದ ಕಬ್ಬನ್ ಪಾರ್ಕ್‌ನಂತಹ ಉದ್ಯಾನ ಇರತಕ್ಕದ್ದೆಂಬುದೂ  ಅದನ್ನು

ಎಚ್ಚರಿಕೆಯಿಂದ ನೋಡಿಕೊಳ್ಳಬೇಕೆಂಬುದೂ ಪಟ್ಟಣದಿಂದ ದಂಡಿಗೆ ನಡುವೆ ಇರುವ ಸ್ಥಳವನ್ನು ಚೊಕ್ಕಟವಾಗಿಟ್ಟುಕೊಂಡು ನಡೆಸಬೇಕೆಂಬುದೂ ಒಂದು ಶಾಸನಾತ್ಮಕವಾದ ನಿಬಂಧನೆಯೇ ಆಗಿದ್ದ ಹಾಗೆ ಕಾಣುತ್ತದೆ. ರಾಜಕೀಯವಾಗಿ ಅದು ಏನೇ ಇರಲಿ, ಕಬ್ಬನ್ ಪಾರ್ಕಿನ ವಿಸ್ತಾರವಾದ ಗಂಡುರಂಜನೆ ಬೆಂಗಳೂರಿಗೇ ವಿಶೇಷವಾದ್ದು.

* * *

ಪಟ್ಟಣಕ್ಕೇ ತಿರುಗಿ ಬರೋಣ : ಮೂರು – ನಾಲ್ಕು ಕೆರೆಗಳು ಬೆಂಗಳೂರಿಗೆ ವಿಶೇಷವಾದುವು. ಒಂದು, ದಂಡಿನ ಕಡೆಗೆ ನಡೆದು ಹೋಗುವಾಗ ಸಿಗುವ ಸಂಪಂಗಿ ಕೆರೆ. ಇನ್ನೊಂದು, ಚಿಕ್ಕಪೇಟೆಯಿಂದ ಉತ್ತರಕ್ಕೆ ನೆಲಸಿದ್ದ ಬಳೇಪೇಟೆ, ಸುಬೇದಾರ್ ಛತ್ರ, ಅಲ್ಲಿಂದಾಚೆಗೆ ಈಗ ಶೇಷಾದ್ರಿಪುರಂ ಮುಂತಾದವಕ್ಕೆ ನಡೆಯುವ ರಸ್ತೆ ಇದ್ದರೆ, ಬಳೇಪೇಟೆ ದಾಟಿ ಎಡಕ್ಕೆ ತಿರುಗಿದರೆ ಸಿಟಿ ರೈಲ್ವೆ ಸ್ಟೇಷನ್‌ಗೆ ನಡಸುವ ದಾರಿಯಲ್ಲಿದ್ದ ಧರ್ಮಾಂಬುಧಿ ಕೆರೆ. ಅದು ದೊಡ್ಡಕೆರೆ. ಹಿಂದಿನ ಕಾಲದಲ್ಲಿ ಕೆರೆಯ ಒಂದು ಕಡೆ ಕಟ್ಟುತ್ತಿದ್ದಂತಹ ಒಂದು ಮಂಟಪ. ನೀರು ವಿಶೇಷವಾಗಿರುತ್ತಿದ್ದುದರಿಂದ ಇಳಿದು ಹೋಗಲು ಮೆಟ್ಟಿಲುಗಳು. ವರ್ಷಕ್ಕೊಂದು ಬಾರಿ ಅಲ್ಲಿ ದೇವರುಗಳ ತೆಪ್ಪೋತ್ಸವ ನಡೆಯುತ್ತಿದ್ದುದು. ಕೆರೆಯ ದಂಡೆಯ ಕೆಳಗಡೆ ಬೆಂಗಳೂರಿನ ಮುನಿಸಿಪಲ್ ಗಾರ್ಡನ್ ಎಂಬ ಚಿಕ್ಕಲಾಲ್‌ಬಾಗ್. ಊರಿನ ಸಾಧಾರಣರೆಲ್ಲ ಅಲ್ಲಿಗೆ ಹೋಗಿ ಸಂಜೆಯ ವಿಹಾರಕ್ಕೆ ಕಳೆಯುತ್ತಿದ್ದ ಪ್ರದೇಶ ಅದು. ಅಲ್ಲಿಯೂ ಭಾನುವಾರದಂದು ಊರಿನ ಪ್ರಖ್ಯಾತ ನಾಗಸ್ವರ ತಂಡದವರು ಸಂಜೆ ವಾದನ ಮಾಡಿ ಜನಕ್ಕೆ ಸಂತೋಷ ಕೊಡುತ್ತಿದ್ದರು. ಚಿಕ್ಕಲಾಲ್‌ಬಾಗ್‌ಗೆ ಕೆರೆಯಿಂದ ಇಳಿಯುವುದಕ್ಕೆ 2-3 ಕಡೆಗಳಲ್ಲಿ ಮೆಟ್ಟಿಲುಗಳ ಸಾಲು. ಒಂದು ಕಡೆಗೆ ಇನ್ನೂ ಕೆಳಗೆ ಬಳೇಪೇಟೆಗೆ ಹೋಗುವ ದಾರಿಯಲ್ಲಿ ತುಳಸೀತೋಟ, ದೇವಾಲಯ, ಅದರ ಸುತ್ತಲ ಉಪವನ. ಇನ್ನೊಂದು ಕಡೆ ಪೂರ್ಣಯ್ಯನವರ ಛತ್ರ. ವಿವೇಕಾನಂದರು ಬೆಂಗಳೂರಿಗೆ ಬಂದಾಗ ಒಬ್ಬ ಸಾಧು ಸಂತರಾಗಿಯೇ ಯಾರಿಗೂ ಗೊತ್ತಿಲ್ಲದೆ ಬಂದ ಅವರು ಅಲ್ಲಿ ಇದ್ದರಂತೆ. ದಿನಕ್ಕೊಂದು ಬಾರಿಯೊ ಕೆಲವು ದಿನಗಳಿಗೊಮ್ಮೆಯೊ ಊರಿನ ಕೆಲವು ಶೆಟ್ಟಿ ವರ್ತಕರು ಅಲ್ಲಿಗೆ ಬಂದು ಅವರನ್ನು ವಿಚಾರಿಸಿಕೊಳ್ಳುವುದು ವಾಡಿಕೆ. ಬಿ. ಕೆ. ಗರುಡಾಚಾರ್ಯರು, ಮಂಡಿ ಹರಿಯಣ್ಣನವರು, ಸಜ್ಜನರಾಯರು, ಅವರಿದ್ದ ಕಾಲದಲ್ಲಿ ಮಲ್ಲಪ್ಪನವರು, ಬಹುಶಃ ಅವರ ಕಾಲದಲ್ಲಿ ದೊಡ್ಡಣ್ಣನವರು ಇಂಥ ಗುಂಪುಗಳಲ್ಲಿದ್ದು, ಹೊರಗಿಂದ ಬಂದ ಸಾಧುಗಳಿಗೆ ತಮಗೆ ತೋರಿದ ನೆರವನ್ನೊ ಅನುಕೂಲವನ್ನೊ ಒದಗಿಸುತ್ತಿದ್ದ ರೆಂದು ಕೇಳಿದ್ದೇನೆ. ಈ ಎರಡಕ್ಕೂ ನಡುವೆ ಹಾದು ಪಟ್ಟಣದೊಳಕ್ಕೆ ಬರುವಾಗ ತುಳಸೀತೋಟದ ನಾಟಕ ಮಂದಿರ. ಅಲ್ಲಿಯೇ ನಾವು ಮೊದಲು ಅಮೆಚೂರು ಕಂಪನಿಯವರ ಇಂಗ್ಲಿಷ್-ತೆಲುಗು ನಾಟಕಗಳನ್ನು ನೋಡಿದ್ದು. ಅಲ್ಲಿಯೇ ವರದಾಚಾರ್ಯರು ಬಂದು ನಾಟಕಗಳನ್ನಾಡುತ್ತಿದ್ದುದು. ಪಟ್ಟಣದಲ್ಲಿ ಈ ಕಡೆ ಬೇರೆ ಯಾವ ನಾಟಕ ಶಾಲೆಯೂ ಇರಲಿಲ್ಲ.



ರೈಲ್ವೆಸ್ಟೇಷನ್ನಿಂದ ಉದ್ದಕ್ಕೆ ಊರೊಳಗೆ ಬರುವಾಗ ಅರಳೇಪೇಟೆಯ ರಸ್ತೆ, ಈಗಿನ ಬ್ರಿಯಾಂಡ್ ಸ್ಕ್ವೇರ್‌ವರೆಗೂ. ಅಲ್ಲಿನ ಚರ್ಚ್ ಮೊದಲಿಂದಲೂ ಇತ್ತು. ಈ ಅರಳೇಪೇಟೆಯಿಂದ ಹಿಡಿದು ಪೂರ್ವದಲ್ಲಿ ಸಾಂದ್ರವಾಗಿ ನೆಲಸಿದ್ದುದು ಅಕ್ಕಿಪೇಟೆ; ಅಡ್ಡವಾಗಿ ಒಂದು ಕಡೆ ಸುಲ್ತಾನ್‌ಪೇಟೆ, ಅದನ್ನು ಮುಂದುವರೆಸುವ ಹಳೇ ತರಗು ಪೇಟೆ. ಹಾಗೆಯೇ ಗುಂಡೋಪಂತರ ಛತ್ರದ ಮೂಲಕ ದೊಡ್ಡಪೇಟೆಗೆ ನಡಸುವ ಅಡ್ಡ ರಸ್ತೆ ಆದರೆ, ಉತ್ತರ-ದಕ್ಷಿಣ ನೆಲಸಿದ್ದ ಆರ್ಕಾಟ್ ಶ್ರೀನಿವಾಸಾಚಾರ್ ಬೀದಿ. ಅಲ್ಲಿಯೇ ಒಂದು ಭಾಗಕ್ಕೆ ಸೀಗೇಬೇಲಿ, ಸಿದ್ದಿಕಟ್ಟೆ : ಬಹುಪ್ರಖ್ಯಾತವಾದ ಬ್ರಾಹ್ಮಣ ವರ್ಗ ನೆಲಸಿದ್ದ ಸಣ್ಣ ಸಣ್ಣ ಸಂಸಾರಗಳ ಬೀಡು. ಸ್ವಲ್ಪ ಮುಂದೆ ಸುಮಾರು ಯುದ್ಧ ಆರಂಭಕ್ಕೆ ಪೂರ್ವದಲ್ಲಿ ಆಗ ತಾನೇ ಕಟ್ಟಿದ ಸೆಂಟ್ರಲ್ ಮುಸ್ಲಿಂ ಹಾಲ್. ಅಲ್ಲಿಯೇ ಹುಡುಗರಾದ ನಾವು 'ಡೈಲಿ ಪೋಸ್ಟ್', 'ಹಿಂದೂ' ಮುಂತಾದ ಪತ್ರಿಕೆಗಳನ್ನು ಓದುತ್ತಿದ್ದುದು. ಇನ್ನು ಸ್ವಲ್ಪ ಮುಂದೆ ಆರ್ಯ ಬಾಲಿಕಾ ಪಾಠಶಾಲೆ. ಎಡಕ್ಕೆ ಸ್ವಲ್ಪ ಮುಂದೆ ಶ್ರೀವ್ಸ್ ಅಂಡ್ ಕಂಪನಿ ಎಂಬ ಔಷಧಿಗಳನ್ನು ಮಾರುವ ಅಂಗಡಿ. ಅದರ ಎದುರು ಗುಂಡೋಪಂತರ ಛತ್ರಕ್ಕೆ ಹೋಗುವ ದಾರಿಯ ಮೂಲೆಯಲ್ಲಿ ಕಳ್ಳೇಗುಗ್ಗರಿ, ಉದ್ದನೆಯ ಬಾಳೆಕಾಯಿ ಬೋಂಡಾ, ಇವೊತ್ತು ಬೊಂಬಾಯಿ ಬೋಂಡಾ ಎಂದು ಕರೆಯುವ ಆಲೂಗಡ್ಡೆ ಬೋಂಡಾ, ಪಕೋಡಾ ಮಾರುತ್ತಿದ್ದ ಅಂಗಡಿಗಳು.

ಆ ಭಾಗ ದಾಟಿ ಹೋದರೆ ಎಡಕ್ಕೆ ಸುಲ್ತಾನ್‌ಪೇಟೆ, ಬಲಕ್ಕೆ ಹಳೇ ತರಗುಪೇಟೆ ಎಂದೆ. ಸುಲ್ತಾನ್‌ಪೇಟೆಗೆ ತಿರುಗುವ ಮೂಲೆಯಲ್ಲಿಯೇ ಪಟ್ಟಣದಲ್ಲಿ ಪ್ರಖ್ಯಾತರಾದ ಡಾ. ಗುಂಡಣ್ಣನವರ ರಿಲಯನ್ಸ್ ಮೆಡಿಕಲ್ ಹಾಲ್. ಈ ಸುಲ್ತಾನ್‌ಪೇಟೆ ರಸ್ತೆ ಅರಳೇಪೇಟೆಯ ಒಂದು ಚೌಕದಿಂದ ಹಿಡಿದು ವಾಜಪೇಯಂ ಕೃಷ್ಣಂ ಅವರ ಮನೆ, ಅವರ ಬಿ. ಬಿ. ಡಿ. ಪ್ರೆಸ್ ದಾಟಿ, ಅಕ್ಕಿಪೇಟೆ ಹಾದು, ಸುಲ್ತಾನ್‌ಪೇಟೆಯ ಶೃಂಗೇರಿ ಮಠ ಮತ್ತು ಲಾಯರ್ ಶಾಮಣ್ಣನವರ ಬಂಗಲೆಯನ್ನು ದಾಟಿ, ಎಸ್. ಆರ್. ನಂಜುಂಡಯ್ಯನವರ ಹಿಂದೂ ಎ. ವಿ. ಸ್ಕೂಲನ್ನು ಹಾದು – ಅಲ್ಲಿಯೇ ಮೊದಮೊದಲು 'ಫ್ರೆಂಡ್ಸ್ ಯೂನಿಯನ್' ಎಂಬ ಒಂದು ಜಿಜ್ಞಾಸುಗಳ ವರ್ಗ ಸೇರುತ್ತಿದ್ದುದು, ಅಲ್ಲಿಯೇ ಕೆ.ಟಿ.ಭಾಷ್ಯಂ, ಎಚ್.ವಿ. ಭಾಷ್ಯಂ., ಎಲ್.ರಾಮರಾವ್ ಮುಂತಾದವರು ಸೇರುತ್ತಿದ್ದುದು. – ಹಳೆಯ ತರಗುಪೇಟೆ ದಾಟಿ ದೊಡ್ಡಪೇಟೆಗೆ ಸೇರುತ್ತಿತ್ತು. ಇವೊತ್ತು ದೊಡ್ಡ ಅಡ್ಡ ರಸ್ತೆಗಳು. ಒಟ್ಟು ಆರ್ಕಾಟ್ ಶ್ರೀನಿವಾಸಾಚಾರ್ ಬೀದಿಯಿಂದ ಉದ್ದಕ್ಕೆ ಸ್ವಲ್ಪ ದೂರ ಬಾಣೇಶ್ವರನ ಗುಡಿ ದಾಟಿಕೊಂಡು ಮೊನ್ನೆ ಮೊನ್ನೆಯವರೆಗೂ ಇರುತ್ತಿದ್ದ ಗಂಜಾಂ ನಾಗಪ್ಪನವರ ರತ್ನಪಡಿ ಅಂಗಡಿ ದಾಟಿಕೊಂಡು, ಹಿತ್ತಾಳೆ – ತಾಮ್ರ

ಪಾತ್ರೆಗಳನ್ನು ಮಾರುವ ರಜಪೂತಾನಿಯವರ ಅಂಗಡಿಗಳನ್ನು ದಾಟಿಕೊಂಡು ಚಿಕ್ಕಪೇಟೆಗೆ ಹೋಗಿ ಸೇರುತ್ತಿತ್ತು.

ಚಿಕ್ಕಪೇಟೆಯನ್ನು ಚಿಕ್ಕಪೇಟೆ ಎಂದು ಕರೆದರೂ ಅಲ್ಲಿ ಅನೇಕ ದೊಡ್ಡ ಅಂಗಡಿಗಳು ಇನ್ನೂ ನಮ್ಮವರದಾಗಿದ್ದವು. ಶ್ರೀನಿವಾಸಾಚಾರ್ ಬೀದಿ ದಾಟಿ ಬಲಗಡೆಗೆ ಚಿಕ್ಕಪೇಟೆಗೆ ತಿರುಗಿದ ತಕ್ಷಣ ಉದ್ದವಾದ ಹಲಗೆಗಳಲ್ಲಿ ಮರದ ಅಕ್ಷರಗಳಿಂದ ಹಾಕಿದ್ದ ಎಂ. ನಂಜುಂಡಪ್ಪ ಅಂಡ್ ಸನ್ಸ್ ಅಂಗಡಿ. ಎದುರಿಗೆ ಒಂದು ಈಶ್ವರನ ಗುಡಿ. ಅಲ್ಲಿ ಕೈಗಾಡಿಯಲ್ಲಿ ಮೈಸೂರು ವೀಳೆಯದೆಲೆ, ನಂಜನಗೂಡಿನ ಬಾಳೆಹಣ್ಣು ಮಾರುತ್ತಿದ್ದ, ಕೈಗೆ ಬಂಗಾರದ ಸರಿಗೆಯನ್ನು ಹಾಕಿಕೊಂಡು ಕೂಡುತ್ತಿದ್ದ ವರ್ತಕ. ಮಲ್ ಬನಿಯನ್ ಮೇಲೆ ಅರ್ಧ ಸಡಿಲಾಗಿ ಅಲ್ಲಿಂದ ಜಾರಿಬಿದ್ದ ಒಂದು ಬಗೆಯ ಮಳವಳ್ಳಿ ವಸ್ತ್ರ. ಆತನು ಹಾಕುತ್ತಿದ್ದುದು ಚಡಾವೇ. ವೀಳೆಯದೆಲೆಯಲ್ಲಿಯೂ ದೊಡ್ಡೆಲೆ, ಸಣ್ಣೆಲೆ. ಸಣ್ಣೆಲೆಯಲ್ಲಿ ಒಬ್ಬಿಬ್ಬರು ಗಿರಾಕಿಗಳಿಗೆ ಬುತ್ತಿ ಚಿಗುರು ತರಿಸಿಕೊಡುತ್ತಿದ್ದ. ನೂರಕ್ಕೆ ಒಂದಾಣೆ ಹೆಚ್ಚು ಬೆಲೆ. ಮೈಸೂರು ವೀಳೆಯದೆಲೆ ಕಟ್ಟಿನ ಪ್ರಮಾಣಕ್ಕೂ ಬೆಂಗಳೂರಿನ ದಕ್ಕೂ ವ್ಯತ್ಯಾಸ ಇಷ್ಟೆ : ಅಲ್ಲಿ ಕಟ್ಟಿಗೆ 10 ಕವಳಿಗೆಗಳ 200 ಎಲೆ. ಆ ಕವಳಿಗೆಗಳನ್ನು ರಚಿಸುವ ಚಾತುರಿ ಮೈಸೂರಿಗೇ ಸಂದದ್ದು. ಬೆಂಗಳೂರಿನ ಕಟ್ಟು ನೂರೆಲೆಯದು. ಮೈಸೂರೆಲೆಯ ಒಂದು ಲಕ್ಷಣ – ಅದು ಒಳ್ಳೆಯದಾಗಿದ್ದಾಗ – ಬಗೆಬಗೆಯದಾಗಿ ತೆಳು ದಪ್ಪಗಿರುತ್ತಿದ್ದರೂ ಬೆಳ್ಳಗಿರುತ್ತಿದ್ದುದು. ತೊಟ್ಟು ಚಿಕ್ಕದಾಗಿರುತ್ತಿತ್ತು. ಮೈಸೂರಿನ ದೆಂದು ಮಾರುತ್ತಿದ್ದ ಇನ್ನೊಂದು ಅಂಗಡಿಯಲ್ಲಿ, ಇಲ್ಲಿಗೆ ಬಂದ ಮೇಲೆ ಕೊಡಿಗೆ ಹಳ್ಳಿಯದೊ ಬೇರೆಯದೊ ಚಿಗುರನ್ನು ತಂದು ಅದಕ್ಕೆ ತೊಟ್ಟು ಕತ್ತರಿಸಿ ಮೈಸೂರೆಲೆ ಬೆರಸಿಯೊ ಅದೇ ಮೈಸೂರೆಂದು ಹೇಳಿಯೊ ಮಾರುವ ಸಂಪ್ರದಾಯವಿತ್ತು. ಇದು ಸಂಪ್ರದಾಯವೊ ದುಷ್ಪ್ರದಾಯವೊ – ಬಹುಕಾಲದಿಂದ ಬಂದದ್ದು. ಮಾಮೂಲ್. ಆದರೆ ಈತ ಅಪ್ಪಟ ಮೈಸೂರೆಲೆಯನ್ನೇ ಮಾರುತ್ತಿದ್ದ. ಅಲ್ಲಿನ ಹಾಗೆಯೇ ಪರಂಗಿ ಎಲೆಯಲ್ಲಿ ಕಟ್ಟಿ, ಬಾಳೆಯ ನಾರಿನ ಸೀಳಿಂದ ಸುತ್ತಿಕೊಡುತ್ತಿದ್ದ. ಬಹುಕಾಲದ ಪರಿಚಯದಿಂದ ನಮ್ಮ ಮನೆಗೂ ಆತನ ಅಂಗಡಿಗೂ ವಿಶ್ವಾಸವಿತ್ತು. ಚೌಕದ ಕಡೆ ಸರಿದಂತೆಲ್ಲ ಹೊಸದಾಗಿ ಆಗ ತಾನೇ ಬಂದಿದ್ದ ಅಲ್ಯೂಮಿನಿಯಂ ಪಾತ್ರೆಗಳ ಮಾರಾಟಗಳವರು. ಬಲಗಡೆ ಸಿಟಿ ಬುಕ್ಸ್, ಶೆಟ್ಟರ ಪುಸ್ತಕದ ಅಂಗಡಿ. ಪ್ರಾಚೀನಗಳೆಲ್ಲ ಅಲ್ಲಿರುತ್ತಿದ್ದವು. ಪುಸ್ತಕಗಳನ್ನು ಅಚ್ಚು ಮಾಡುವ ಕಾಗದ, ಅದಕ್ಕೆ ಹಾಕುವ ರಟ್ಟು ನೋಡುವಂಥವು. ಈಗ ಯಾರಾದರೂ ಮುಟ್ಟುತ್ತಾರೆಯೊ ಇಲ್ಲವೊ ಅವನ್ನು! ಆದರೆ ಅಚ್ಚು ಸ್ಫುಟವಾಗಿ ಇರುತ್ತಿತ್ತು. 'ಇಥೆ' 'ಅಂಥಾವನಾಗಿ' 'ಒಪಾದಿಯಲ್ಲಿ' 'ಮುಸ್ತೈದೆ ಮಾಡಿ' ಮುಂತಾದ ಮಾತುಗಳ ಪ್ರಾಚುರ್ಯ ಆ ಕಾಲದ ಗದ್ಯ ಪುಸ್ತಕಗಳಲ್ಲಿ ವಿಶೇಷ. ಎಲ್ಲ ಪುಸ್ತಕಗಳೂ 'ಪಂಡಿತರಿಂದ ಪರಿಷ್ಕೃತವಾದ್ದು'. ಸ್ವಲ್ಪ ಮುಂದೆ ಟೋಪಿ, ಕೊಡೆಗಳ ಮಾರಾಟದ ಅಂಗಡಿಗಳು - ಎರಡೂ ಕಡೆ. ಇನ್ನೂ ಸ್ವಲ್ಪ ಮುಂದೆ ಸಂಕಪ್ಪ ಬಸಪ್ಪ ಅವರ ಜವಳಿ ಅಂಗಡಿ. ಮೈಸೂರಿನ ನಮ್ಮ ರಾಯರಿಗೆ ತುಂಬಾ ನಚ್ಚಿನ ಸ್ನೇಹಿತ



ಆತ. ಯಾವ ಹೊಸ ನೆಯ್ಗೆಯ ಸೀರೆ ಬಂದರೂ ಜರತಾರಿ ವಲ್ಲಿ ಅಥವಾ ರುಮಾಲು ಬಂದರೂ ಅವರಿಗೆ ಸುದ್ದಿ ಕೊಡುತ್ತಿದ್ದ. ಅಂಗಡಿ ಯಜಮಾನರು ಆ ಕಾಲದಲ್ಲಿ ಇನ್ನೂ ಅಂಗಡಿಯ ಗಾದಿ ಮೇಲೆ ಕುಳಿತುಕೊಂಡು ವ್ಯಾಪಾರ ಮಾಡುತ್ತಿದ್ದರು. ಅಡ್ವೊಕೇಟ್ ನರಸಿಂಹ ಅಯ್ಯಂಗಾರ್ಯರ ಮನೆ ಅದೇ ಪಕ್ಕದಲ್ಲಿಯೇ. ಎದುರಿಗೆ ಬೆಣ್ಣೆ ಗೋವಿಂದಪ್ಪನವರ ಒಡವೆ - ಜವಾಹಿರಿಗಳ ಅಂಗಡಿ. ಅವರೇ ಗಡಿಯಾರಗಳನ್ನು ಮಾರುತ್ತಿದ್ದರೊ ಅಥವಾ ಆ ಪಕ್ಕದಲ್ಲಿ ಇನ್ನಾರಾದರೂ ಮಾರುತ್ತಿದ್ದರೊ ನೆನಪಿಲ್ಲ. ಪಕ್ಕದಲ್ಲಿ ಎತ್ತರವಾದ ಜಗುಲಿಯ ಮೇಲೆ ಮಹಡಿಯಂತೆ ಕಟ್ಟಿದ ಬಿ. ಕೆ. ಗರುಡಾಚಾರ್ ಕಟ್ಟಡ. ಕೆಳಗಡೆ 2-3 ಬಟ್ಟೆ ಅಂಗಡಿಗಳು. ಆ ಕಾಲದಲ್ಲಿ ಹಾಸನ್ ಟೋಪಿಯ ಬಳಕೆ ಹೋಗಿ ಲಂಡನ್ನಿನ 'ಕ್ರಿಸ್ಟೀಸ್ ಫೆಲ್ಟ್‌ಕ್ಯಾಪ್' ಎಂಬ ಒಂದು ಟೋಪಿ ಬರುತ್ತಿತ್ತು. ಹಾಸನ ಟೋಪಿ ಬಣ್ಣಗಳ ವುಲ್ಲನ್ ದಾರದಿಂದ ಹೊಲೆದದ್ದು. ಇವು 'ಫೆಲ್ಟ್' – ಒಂದು ಬಗೆಯ ರಟ್ಟು ಮಾಡಿದಂತೆ ಮಾಡಿದ್ದ ಉಣ್ಣೆ: ಲಂಡನ್ನಿಂದ ಬರುತ್ತಿತ್ತು. ತಲೆಯ ಅಳತೆಗೆ ತಕ್ಕಂತೆ ಬೇರೆ ಬೇರೆ ಪ್ರಮಾಣದ ಟೋಪಿಗಳು. ನುಣುಪಾಗಿ ಒಪ್ಪವಾಗಿ ತಲೆಯ ಮೇಲೆ ಕೂರುತ್ತಿತ್ತು. ಅವುಗಳ ಪಕ್ಷಪಾತವೂ ಹಾಗೇ – ನೋಡುವುದಕ್ಕೆ ಚೆನ್ನಾಗಿರುವವರ ತಲೆಯ ಮೇಲೆ ಬಹು ಚೆನ್ನಾಗಿ ಕೂಡುತ್ತಿತ್ತು. $3^{3}/_{4}$ ರೂ. ನಿಂದ 5 ರೂ. ಬೆಲೆಯವು. ಆ ಕಾಲದಲ್ಲಿ ತುಟ್ಟಿಯೇ. ಮುಂದೆ ಹೆಚ್. ದಾಸಪ್ಪನವರ ಅಂಗಡಿ. ಅದು 'Shop' – ಎಂದರೆ, ವಿದೇಶೀ ಸಾಮಾನುಗಳನ್ನು – ಗಾಜು, ಪೋರ್ಸೆಲೀನ್ ಸಾಮಾನುಗಳು, Made in Austria Lampಗಳು – ಇವು ಬಗೆಬಗೆಯವು, ಗೋಡೆಗೆ ತೂಗು ಹಾಕುವುವು, ಮಾಳಿಗೆಗೆ ನೇತು ಹಾಕುವುವು; ಚಿಮಣಿಗಳ ಆಕೃತಿಯೂ ರಂಜಕವಾದುವು – ಮಾರುವ ಅಂಗಡಿ. ಚಿಕ್ಕಪೇಟೆಯಲ್ಲಿ ಅಲ್ಲಿಯೇ ಥರ್ಮಾಸ್ ಫ್ಲಾಸ್ಕನ್ನು ಮೊದಲು ನೋಡಿದ್ದು. ಅಪರೂಪವಾಗಿ ಅದು ಬ್ರಾಹ್ಮಣರ ಅಂಗಡಿ. ಅಲ್ಲಿಂದ ಮುಂದೆ ಗೌಡರು ವೀರಭದ್ರಪ್ಪನವರ ಛತ್ರ. ಮುಂದೆ ಹೋಗುತ್ತ ಹೋಗುತ್ತ ಬಲಗಡೆಗೆ ದಂಡಿನ ಕಮರ್ಷಿಯಲ್ ರಸ್ತೆಯಲ್ಲಿ ಪದಾರ್ಥಗಳನ್ನು ಪ್ರದರ್ಶನ ಮಾಡಿ ತೋರಿಸುವಂತೆ – ವೈಟ್‌ಅವೆ ಲೇಡ್‌ಲಾ, ರೆಂಡ್ ಬೆನೆಟ್ ಮುಂತಾದವುಗಳಂತೆ – ಗಾಜಿನ ಕಿಟಕಿಗಳಲ್ಲಿ ಹರಡಿ ತೋರಿಸುತ್ತಿದ್ದ ಬೆಡಗಿನ ಅಂಗಡಿ 'ಎಲ್. ಎ. ಪೌಲವಾ'. ದಾಸ್ತಾನಿನ ಪ್ರಮಾಣದಲ್ಲಿ ಇನ್ನೂ ಹೆಚ್ಚಾಗಿದ್ದರೂ ಹೆಚ್ಚಾಗಿ ಗಿರಣಿ ಜವಳಿಗಳನ್ನು ಮಾರುತ್ತಿದ್ದ ಜವಾನ್‌ಮಲ್ ಸ್ವಲ್ಪ ಈಚೆಯವರು. ಅದೂ ಗಡಂಗಿನ ತರಹದ್ದೇ. ಗಜಗಟ್ಟಲೆ ವ್ಯಾಪಾರ ಸಾಮಾನ್ಯ; ಆದರೆ ಥಾನ್‌ಗಟ್ಟಲೆ ಎಂಬುದು ಅಲ್ಲಿನ ವ್ಯಾಪಾರ. ಇನ್ನು ಸ್ವಲ್ಪ ಆಚೆ ಹಳೆಯ ಕಾಲದ ದೊಡ್ಡ ಮನೆ. ಮುಂದಕ್ಕೆ ಉದ್ದಕ್ಕೆ ಸಣ್ಣ ಜಗುಲಿ. ಅದನ್ನು ಬ್ಯಾಂಕ್ ಸುಬ್ಬರಾಯರ ಮನೆ ಎನ್ನುತ್ತಿದ್ದರು. ಆತನಿಗೆ ಬಹು ದೊಡ್ಡ ಪುರಾತನ ಚರಿತ್ರೆ. ಬಂದವರಿಂದ ಎಲ್ಲ ತರಕಾರಿ, ಮೊಸರು ವ್ಯಾಪಾರ ಮಾಡುತ್ತಿದ್ದರು. ಒಂದು ಕತೆ ಹೇಳುತ್ತಾರೆ. ಎಲ್ಲ ಕಾಲದಲ್ಲೂ ಚೌಕಾಸಿ. ಹತ್ತು ಜನರಲ್ಲಿ ವ್ಯಾಪಾರ ಮಾಡಿದರೆ 3 ಕಾಸಿನ ಕೊತ್ತಂಬರಿ, 3 ಕಾಸಿಗೆ ಹಸಿಮೆಣಸು,

ಎಣಿಸಿ ಬದನೆಕಾಯಿಯೊ ಬೆಂಡೆಕಾಯಿಯೊ ಕೊಳ್ಳುತ್ತಿದ್ದಾತ. ಎಷ್ಟು ಜನರೊಡನೆ ವ್ಯಾಪಾರ! ಮೊಸರಿನವರೂ ಹಾಗೇ. ಗಟ್ಟಿಯಾಗಿದೆಯೆ, ಇಲ್ಲವೆ? ಹುಳಿಯೆ? ನೀರೆಷ್ಟು ಹಾಕಿದ್ದೀ? ಮಡಕೆ ತೊಳೆದಿದ್ದೀಯ? ಮೇಲೆ ಏಕೆ ಚಟ್ಟಿ ಮುಚ್ಚಳ ಇಲ್ಲ? – ಎಂದೆಲ್ಲ ತಕರಾರು ಮಾಡಿ, ಆರು ಕಾಸು, ಒಂದಾಣೆಗೆ ಸೇರು ಎಂಬಂತೆ ಅಳಸಿಕೊಳ್ಳಬೇಕಾಗಿ ಬಂದಾಗ, ಅಳತೆಗೆ ತಕರಾರು ಮಾಡಿ ಕೊಂಡುಕೊಳ್ಳದೆ, ತನ್ನ ಪಾತ್ರೆಯಲ್ಲಿ ಸ್ವಲ್ಪವೇ ಸ್ವಲ್ಪ ಉಳಿಸಿಕೊಂಡು ಮೊಸರನ್ನು ಸುರಿದು ಕಳಿಸುತ್ತಿದ್ದರು. ಹೀಗೆ ಉಳಿಸಿಕೊಂಡದ್ದು ಒಟ್ಟಿನಲ್ಲಿ ಕಡೆಗೆ ಪಾವು, ಅಚ್ಚೇರು ಆಗುತ್ತಿತ್ತು ಎನ್ನುತ್ತಾರೆ! ಆತನ ಒಳಮನೆಯ ನೆಲಕೋಣೆಯಲ್ಲಿ ರಾಸಿರಾಸಿ ಚಿಕ್ಕಾಸಿನಿಂದ ಹಿಡಿದು ಬೆಳ್ಳಿ ರೂಪಾಯವರೆಗೂ ರಾಸಿ ಸುರಿದಿರುತ್ತಿತ್ತಂತೆ. ಆದರೆ ಬೆಳಿಗ್ಗೆ $7\text{-}7^{1}/_{2}$ ಗಂಟೆಗೆ ಹೊರಗಡೆ ಬಂದು ಮೊಳಕಾಲಿಗೆ ಚೌಕ ಕಟ್ಟಿಕೊಂಡು, ದಟ್ಟಿಯನ್ನೂ ಮೈಯನ್ನೂ ಗಟ್ಟಿ ಮಾಡಿಕೊಂಡು, ಮೇಲೆ ಮೊಂಡು ತೋಳಿನ ಬನಿಯನ್ನಲ್ಲಿ ಕಿಟಕಿ ಕಾಣಿಸುವ ಬಿನ್ನಿಯದೋ ಬೇರೆಯದೋ, ಗಿರಣಿ ಬನಿಯನ್ ಧರಿಸಿ ಕೂತರೆಂದರೆ, $10\text{-}10^{1}/_{2}$ ಯವರೆಗೆ ಅವರ ದರ್ಬಾರು. 'ಸುಬ್ಬರಾಯರು ಹಂಗೇ ಕುಂತವರಲ್ಲ' ಎಂದು ಯಾರಾದರೂ ಕೇಳಿದರೆ, 'ದಿನಾ ಹಿಂಗೇ' ಎಂದು ಇನ್ನೊಬ್ಬರು ಉತ್ತರ ಕೊಡುವುದು ವಾಡಿಕೆಯಾಗಿತ್ತು. ದಂಡಿನ ನಾಟಿಕೋಟಿ ಶೆಟ್ಟರನ್ನು ಬಿಟ್ಟರೆ ಸುಬ್ಬರಾಯರೇ ದೊಡ್ಡ ಲೇವಾದೇವಿ ವ್ಯವಹಾರವನ್ನು ಇಟ್ಟುಕೊಂಡಿದ್ದವರು ಎಂಬುದು ಜನಜನಿತವಾಗಿದ್ದ ಅಭಿಪ್ರಾಯ. ಕೆಲವೇಳೆ ಅವರಿಗೂ ಸಾವಿರಾರು ರೂಪಾಯಿನ ದಕ್ಷಿಣೆ ನಾಣ್ಯವನ್ನು ಸುಬ್ಬರಾಯರು ಒಂದು ರೂಪಾಯಿಗಿಷ್ಟು, ನೂರಕ್ಕಿಷ್ಟು ಎಂದು ಬೆಲೆ ಹಾಕಿ ಹೊರಬಾಗಿಲನ್ನು ಹಾಕಿ ಅದರ ಅಗಳಿಗಳ ಜೊತೆಗೆ ಕಬ್ಬಿಣದ ಸಲಾಕಿ ಹಾಕಿ ಒಳಕ್ಕೆ ಕರೆದುಕೊಂಡು ಹೋಗಿ ಚಿಲ್ಲರೆ ಎಣಿಸಿ ಕೊಡುತ್ತಿದ್ದರಂತೆ.

1914-15 ಆದ ಮೇಲೆ ಬಾಂಬೆ ಆನಂದ ಭವನ ಬಂದದ್ದು. ಆ ಸುಮಾರಲ್ಲೇ ಅಹಮದ್ ಬಿಲ್ಡಿಂಗ್ಸ್ ಎಂಬ ಹೊಸ ಕಾಲದ ಕಟ್ಟಡ ಎದ್ದಿತ್ತು. ಅದರ ಒಳಗಿನ ಒಂದು ಹಾಲಲ್ಲಿಯೇ ಮುಂದೆ ಪ್ರಖ್ಯಾತವಾದ ಮಾಡರ್ನ್ ಹೊಟೇಲ್ ಮಾಲೀಕರಾದ ಅಪ್ಪಣ್ಣನವರು 'ಕಾಫೀ ಹೊಟೇಲು' ತೆರೆದಿದ್ದರು. ಆ ಬಿಲ್ಡಿಂಗ್ ಒಳಗೆ ಹೊರಗೆ ದೊಡ್ಡ ದೊಡ್ಡ ವ್ಯಾಪಾರದ ಅಂಗಡಿಗಳು. ಬಹುವಾಗಿ ಆ ಹತ್ತಿರವೆಲ್ಲ ಬಟ್ಟೆ ಅಂಗಡಿಗಳಾದುವು. ಕೆಲವು ಕಣ್ಣಿಗೆ ಹೊಡೆಯುವ, ವಿಶೇಷ ಬಗೆಯ ಬಟ್ಟೆಗಳನ್ನು ಹೊರಗೆ ಚಿತ್ರಚಿತ್ರವಾಗಿ ತೂಗು ಹಾಕಿ, ತಗುಲಿ ಹಾಕಿ ಕಣ್ಸೆಳೆಯುವಂತೆ ಮಾಡುತ್ತಿದ್ದರು. ಆ ಕಟ್ಟಡದ ಎರಡೂ ಕಡೆಯ ಬೀದಿಗಳು ರಾಸಕ್ರೀಡೆಗಳಿಗೆ ಎನ್ನುತ್ತಿದ್ದಂತೆ ಹೆಸರಾದ ಗಲ್ಲಿಗಳು. ಕಾಲ ಹಾಗಿತ್ತು. ಪಡ್ಡೆ ಹುಡುಗರನ್ನು ಕಂಡರೆ ದೊಡ್ಡಪೇಟೆಯಲ್ಲಿ ಮಿಠಾಯಿ ಅಂಗಡಿ ಇಟ್ಟುಕೊಂಡಿದ್ದ ಮಾಂಧಾತ – ಒಳ್ಳೇ ವಸ್ತಾದಿ ಆಗಿದ್ದವನು – ಅವನ 2 ಪೂರಿ, ಹಲ್ವ ಕೊಟ್ಟು ಮೈ ತಡವಿ 'ಚೆನ್ನಾಗಿದ್ದೀಯಾ ಮಗು, ಈ ಗಲ್ಲಿಗೆ ಹೋಗಿ ಮೈ



ಕೆಡಿಸಿಕೊಳ್ಳಬೇಡ' ಎಂದು ಉಪದೇಶ ಮಾಡುತ್ತಿದ್ದ ಪ್ರದೇಶಗಳು. ಅಹಮದ್ ಬಿಲ್ಡಿಂಗ್ ಎದುರಿಗೆ ಒಂದು ಸಣ್ಣ ಸೀಳು ದಾರಿ ಹೊರಟು – ಅದು ಈಗಲೂ ಇದೆ– ಎರಡು ಸುತ್ತು ಸುತ್ತಿ ದೊಡ್ಡಪೇಟೆಯ ಗ್ರಂಥಿಗೆ ಅಂಗಡಿ ಸುತ್ತಮುತ್ತ ಬಿಡುವ ಪ್ರದೇಶದಲ್ಲಿ ಮೊದಲಿಂದಲೂ ಬೊಂಬಾಯಿ, ಅಹಮದಾಬಾದ್, ನಾಗಪುರ್ ಗಿರಣಿ ಜವಳಿ ಅಂಗಡಿಗಳ ಗಡಂಗುಗಳು. ಇನ್ನೇನು ಸ್ವಲ್ಪ ದೂರಕ್ಕೆ ಚೌಕ ಬರುತ್ತದೆ ಎನ್ನುವಾಗ ಸುಮಾರು ಎಲ್ಲ ರೇಶಿಮೆ ಜರತಾರಿ ಸೀರೆ, ಧೋತ್ರದ ಅಂಗಡಿಗಳು – ಬಹುಮಟ್ಟಿಗೆ ಬೆಂಗಳೂರಿನ ವೈಶ್ಯರ ಒಡೆತನದಲ್ಲಿ ನಡೆಯುತ್ತಿದ್ದವು. ಹಳೇ ತಾಲ್ಲೂಕು ಕಚೇರಿ ಬಿಲ್ಡಿಂಗ್ ದಾಟಿದ ಮೇಲೆ – ಅದಕ್ಕೆ ತಾಲ್ಲೂಕ್ ಕಚೇರಿ ಗಲ್ಲಿ ಎಂದೇ ಆಗ ಹೆಸರಿತ್ತು – ಮುಂದೆ ಎಡಕ್ಕೆ ವಾಜಪೇಯಂ ಗೋವಿಂದಯ್ಯನವರ ಪುಸ್ತಕದಂಗಡಿ. ಅದರಲ್ಲಿ ಕನ್ನಡ, ತೆಲುಗು, ಸಂಸ್ಕೃತ ಗ್ರಂಥಗಳಿರುತ್ತಿತ್ತು. ಅಧಿದೇವತೆಯಾಗಿ ಚಾಟಿ ಮೀಸೆ ಹೊತ್ತು ತುಂಬು ಕೆನ್ನೆಯ, ಕೈಗೆ ಚಿನ್ನದ ಗೋಲ್ಸಾ – ಸರಿಗೆ – ಹಾಕಿಸಿಕೊಂಡಿದ್ದ ಗೋವಿಂದಯ್ಯನವರು ಕೂತಿರುತ್ತಿದ್ದರು. ಆರಡಿಗಿಂತ ಹೆಚ್ಚು ಎತ್ತರದ ಮನುಷ್ಯ. ಮಾತು ಯಾವಾಗಲೂ ಜರ್ಬಿನದೇ, ಅದಬ್ಬಿನದೇ. ತೆಲುಗು ಮಾತನಾಡುವ ಮುಲಕ ನಾಡು ಜನ. ಪ್ರಖ್ಯಾತವಾದ ವಾಜಪೇಯಂ ಮನೆತನದವರು. ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯ ವಿ. ವೆಂಕಟಸುಬ್ಬಯ್ಯ ಆತ ಅಣ್ಣ-ತಮ್ಮಂದಿರು ಎಂದು ಕೇಳಿದ್ದೇನೆ. ಅವರ ಅಂಗಡಿಯಲ್ಲಿ ಯಾವಾಗಲೂ ಊರಿನ ಪ್ರಸಿದ್ಧ ವಿದ್ವಾಂಸರೂ ಕವಿಗಳೂ ಎನ್ನಿಸಿಕೊಂಡ ಜನ ಯಾವುದೊ ಗ್ರಂಥ ಸಂಪಾದನೆ ಮಾಡುತ್ತಲೊ ಉಂಡೆ ನಸ್ಯ ತೀಡುತ್ತಲೊ ವೀಳೆಯದೆಲೆ ಹಾಕುತ್ತಲೊ ರಸರಸವಾಗಿ ಮಾತನಾಡುತ್ತಲೊ ಕುಳಿತಿರುತ್ತಿದ್ದುದು ರೂಢಿ. ಮುಂದಿನ ಕಾಲಗಳಲ್ಲಿ ಒಂದು ಸಲ ಗ್ರಹಚಾರವಶಾತ್ 'ನಿಮ್ಮಲ್ಲಿ ಕ್ಷೇತ್ರಯ್ಯನ ಪದಗಳಿವೆಯೆ?' ಎಂದು ಅವರನ್ನು ಕೇಳಿದೆ. ನನ್ನ ಗುರುತಿತ್ತು. ನನ್ನ ಆಕೃತಿ ಎಂದಿಗೂ ಕಿರು, ಕುರು. ನನ್ನ ಮುಖ ನೋಡಿದವರೇ 'ಏನಯ್ಯ ನೀನು? ಈ ಕಾಲದಲ್ಲಿ ಯಾರಯ್ಯ ಬೆಂಗಳೂರು ಗಂಡು, ಕ್ಷೇತ್ರಯ್ಯನ ಪದ ಓದುವವನು?' ಎಂದು ಕೇಳಿದರು. ಅವರ ಕತೆಯೂ ಒಂದು ದೊಡ್ಡ ಪುರಾಣವೇ. ತಲೆಯ ಮೇಲೆ ಮಕ್ಕರಿ ಹೊತ್ತ ಗಂಡೊ ಹೆಣ್ಣೊ ಕಿತ್ತಳೆ, ದ್ರಾಕ್ಷಿ, ಪಿಂಡಿ ಖರ್ಜೂರ, ಗೋಡಂಬಿ ಬಂದರೆ ಬಗೆಬಗೆಯಾದ ವ್ಯಾಪಾರ ಇತ್ಯಾದಿ ನಡೆಯುತ್ತಿತ್ತು. ಎದುರಿಗೆ ಅಲ್ಲಿ ಚಿಕ್ಕಪೇಟೆಗೆ ಪ್ರಖ್ಯಾತವಾದ ಮಿಠಾಯಿ ಅಂಗಡಿ. ಅಲ್ಲಿ ಯಾವಾಗಲೂ 2-3 ದೊಡ್ಡ ಬಾಂಡಲೆಗಳಲ್ಲಿ ಹಾಲು ಕಾಯುತ್ತಿರುತ್ತಿತ್ತು. ಬಾದಾಮಿ ಹಾಲು ತಯಾರಾಗುತ್ತಿತ್ತು. ಖೋವಾ ಉತ್ಪತ್ತಿಯಾಗುತ್ತಿತ್ತು. ಅಲ್ಲಿನ ಜಿಲೇಬಿ, ಅವಲಕ್ಕಿ, ಪಕೋಡಾ ಕಂಟೋನ್ಮೆಂಟ್‌ನ ಬ್ರಿಟಿಷ್ ಸೋಲ್ಜರ್‌ಗಳ ರುಚಿಗೆ ಸಿಕ್ಕಿ ಅವರು ಕೆಲವು ಜನ ಸಂಜೆಗಳಲ್ಲಿ ಬಂದು ತಟ್ಟೆ ತಟ್ಟೆ ಕೊಂಡು ಹೋಗುತ್ತಿದ್ದರು. $10\ \text{-}10^{1}/_{2}$ಗೆ ರಾತ್ರಿ ಇನ್ನೇನು ಅಂಗಡಿ ಮುಚ್ಚಬೇಕೆನ್ನುವಾಗಲೂ ಪಕೋಡಾ ತಟ್ಟೆಗಳಲ್ಲಿ ಖಾಲಿ ಉಳಿದಿದ್ದ ಪುಡಿಗಳನ್ನು ಕೊಂಡುಹೋಗುವುದಕ್ಕೇ ಒಂದು ಜಾತ್ರೆ ನೆರೆದು, ಕೆಲವೇಳೆ ಅವನ್ನು ಹರಾಜು ಹಾಕಬೇಕಾಗುತ್ತಿತ್ತು.

ಅಲ್ಲಿಂದ ಮುಂದೆ ಬೆಳ್ಳಿ ಬಂಗಾರದ ಅಂಗಡಿಗಳು. ಅವನ್ನು ನಾನು ಎಂದಿಗೂ ಕಾಣೆ. ಅವುಗಳ ಹೊಳಪು, ಬೆಲೆ ನನ್ನನ್ನು ಬೆಳ್ಳಿ - ಬಂಗಾರ ಜವಾಹಿರಿ ಅಂಗಡಿಗಳಿಂದ ಹೊರಗೇ ಉಳಿಸಿವೆ. ಚಿಕ್ಕಪೇಟೆಯ ವೈಭವ ವರ್ಣಿಸಬೇಕಾದರೆ ಶ್ರೀಯವರ 'ಇಂಗ್ಲಿಷ್ ಗೀತ'ಗಳಲ್ಲಿನ ಇನ್ನೊಂದು ಪ್ರಕರಣಕ್ಕೆ ಸಂಬಂಧಿಸುವ ಮಾತನ್ನು 'ಸಾಲದೊಂದು ದಿನ ಹೇಳಿ ಮುಗಿಸುವರೆ ಹಬ್ಬಿ ಹೆಣೆದದರ (ಅವರ) ಹಿತವನು (ಪರಿಯನು)' ಎಂದು ಸ್ವಲ್ಪ ಮಾರ್ಪಡಿಸಿ ಹೇಳಬಹುದು. ಚಿಕ್ಕಪೇಟೆ ಹೆಸರಿಗೆ ಚಿಕ್ಕಪೇಟೆ. ಈಗಿನ್ನೂ ಈ ಭಾಗದ ಚಿಕ್ಕಪೇಟೆಯನ್ನು ವರ್ಣಿಸಿದ್ದೇನೆಯೇ ಹೊರತು ಎಡಕ್ಕೆ-ಎಂದರೆ ಪಶ್ಚಿಮಕ್ಕೆ – ಕಾಶಿ ವಿಶ್ವೇಶ್ವರ ದೇವಸ್ಥಾನದವರೆಗೂ ಹೋಗಿ ಅಲ್ಲಿಂದ ಉತ್ತರಕ್ಕೆ ತಿರುಗಿ ನೆಲಸಿರುವ ಬಳೇಪೇಟೆಯನ್ನು ವರ್ಣಿಸಿಲ್ಲ. ಅದರ ರೂಪ, ಲಕ್ಷಣ ಅದರದೇ.

* * *

ಚಿಕ್ಕಪೇಟೆಯಿಂದ ಉದ್ದಕ್ಕೆ ಅರಳೇಪೇಟೆ ಚೌಕಕ್ಕೆ ತಿರುಗುವ ಮುಂಚೆ ಹಿಂದಿನ ಕಾಲದ ಪ್ರಖ್ಯಾತವಾದ ಉಡುಪಿ ಹೊಟೇಲಿನ ಇನ್ನೂ ಸ್ವಲ್ಪ ಈಚೆಗೆ ಸ್ನಾನದ ಘಟ್ಟಗಳ (ಃಚಿಣುಖಿಂ ಉುಚಿಣ) ರಸ್ತೆ, ಗೋಪಾಲಸ್ವಾಮಿ ಗುಡಿ ರಸ್ತೆ ಇವೆ. ಗೋಪಾಲಕೃಷ್ಣ ದೇವರ ಗುಡಿ ರಸ್ತೆ ಕೂಡ ನನ್ನ ಕಣ್ಣೆದುರಿಗೆ ಆದುದೇ. ಗುಡಿಗೆ ಈಚೆ ಎಂಪೈರ್ ಹೊಟೇಲ್ ಇತ್ತು. ಅಲ್ಲಿ ಒಂದು ಹಾಸ್ಟೆಲ್. ಆ ಹಾಸ್ಟೆಲಲ್ಲಿ ಅಪ್ಪಣ್ಣನವರು ತಮ್ಮ ವಿದ್ಯಾರ್ಥಿಗಳಿಗೆ ವಿಶೇಷವಾಗಿ ಹಾಸ್ಟೆಲ್ ಸೌಲಭ್ಯಗಳನ್ನು ಏರ್ಪಡಿಸಿದ್ದರು. ಹೊರಗಡೆಯಿಂದ ಹೋದವರಿಗೆ ಯಾವ ಹೆಚ್ಚಿನ ತಿಂಡಿ ತೀರ್ಥಗಳ ಅವಕಾಶ ಇಲ್ಲದಿದ್ದರೂ ಕೆಲವು ಸಲ ಅವರು ಮಾಡುತ್ತಿದ್ದ ಐಸ್‌ಕ್ರೀಂ, ಒಂದು ಹೊಸ ಬಗೆಯ ಹಣ್ಣುಗಳ ಅಥವಾ ರುಚಿ ಸುವಾಸನೆಗಳ ಕಟ್ಟು ಕಟ್ಟುತ್ತಿತ್ತು. ಆ ರಸ್ತೆಗೆ ತಿರುಗುವಾಗ್ಗೆ ಡೆನ್ಸ್‌ಮೋರ್ ಟೈಪ್‌ರೈಟಿಂಗ್ ಇನ್‌ಸ್ಟಿಟ್ಯೂಟ್ ಎಂಬ ಟೈಪ್‌ರೈಟಿಂಗ್ ಪಾಠಶಾಲೆಯನ್ನು ತೆರೆದರು. ಬಹುಶಃ ಅದರ ಯಜಮಾನರು ನಂಜುಂಡರಾಯರು ಎಂಬವರೊ ಏನೊ. ಗುಂಡಿ ಹಾಕದೆ ಓಪನ್ ಕಾಲರ್ ಕೋಟು, ಸ್ಟಿಫ್ ಕಾಲರ್‌ನ ಒಂದು ಟೈ ಹಾಕಿಕೊಂಡು ಜರತಾರಿ ರುಮಾಲು ಕಟ್ಟಿ, ಆ ಕಾಲಕ್ಕೆ ವಿಶೇಷವಾಗಿದ್ದ ಒಂದು ಒಂದೆಳೆ ಬಾಚುವ ಮೀಸೆ ಬಿಟ್ಟು, ಆಗಿಂದಾಗ್ಗೆ ಅದರ ಎರಡು ಕೊನೆಗಳನ್ನು ತಿರುವಿಕೊಳ್ಳುತ್ತಿದ್ದಾತ. ಒಳ್ಳೆಯ ಧೋತ್ರದ ಮುಂಗಚ್ಚೆ ಸಿಕ್ಕಿಸಿಕೊಂಡು ಅದನ್ನು ಪಟ್ಟೆ ಮಾಡಿ ಕಾಲಿನ ಮುಮ್ಮಡಿಯವರೆಗೂ ಈಸಾಡದಂತೆ ಶ್ರೀಮಂತ ಧೋರಣೆಯಿಂದ ಮಾತನಾಡುತ್ತಿದ್ದ ಮನುಷ್ಯ. ಅವರ ಮಗನೇ ಆಚಿನ ಕಾಲಗಳಲ್ಲಿ ನಮ್ಮ ಕಾಲೆಜಲ್ಲಿ ಪ್ರಾಣಿಶಾಸ್ತ್ರದ ಅಧ್ಯಾಪಕರಾಗಿ ಬಂದ ನಾರಾಯಣರಾವ್ ಎಂದು ಎಣಿಸಿದ್ದೇನೆ. ಬಹುಕಾಲದವರೆಗೂ ಸ್ಪಷ್ಟವಾಗಿ ರಸ್ತೆಯಾಗದೆ ಆದರೂ ದೊಡ್ಡ ದಾರಿಯಾಗಿದ್ದ ಅದರ ಎದುರುಗಡೆ ರಸ್ತೆಯಲ್ಲಿ ಇನ್ನೊಂದು ಕಡಲೆ ಗುಗ್ಗರಿ ಅಂಗಡಿ. ಇಲ್ಲಿನ ಸಾಮಾನೂ ಆರ್ಕಾಟ್ ಶ್ರೀನಿವಾಸಾಚಾರ್ ರಸ್ತೆಯ ತೆರದ್ದೇ ಆದರೂ ಇಲ್ಲಿ ಪದಾರ್ಥಗಳನ್ನು ಮಾಡುವ



ಹದ ಹೆಚ್ಚು ಶ್ರೀಮಂತವಾಗಿರುತ್ತಿತ್ತು. ಸಂನ್ಯಾಸಿಯ ಗೌನನ್ನು ಹಾಕಿಕೊಂಡು ಕುತ್ತಿಗೆಯಿಂದ ಒಂದು ಯಾವುದೊ ಬಗೆಯ ಉದ್ದವಾದ ಮಣಿಸರವನ್ನು – ಆ ಮಣಿ ಗಾಜಿನದಲ್ಲ – ಹಾಕಿಕೊಂಡಿರುತ್ತಿದ್ದ, ತಲೆಯ ಮೇಲಿನ ಜುಟ್ಟನ್ನು ಸ್ವಲ್ಪ ಮಟ್ಟಿಗೆ ಬಾಚಿಕೊಳ್ಳುತ್ತಿದ್ದ ಒಬ್ಬಾತನನ್ನು ನಾವು ಅಲ್ಲಿಗೆ ಹೋದ ಸುಮಾರಿಗೆಲ್ಲ ಕಾಣಬಹುದಿತ್ತು. ಅದರ ಪಕ್ಕದಲ್ಲಿ ಆಚೆಗೆ ಒಂದು ಸಣ್ಣ ಹೂವಿನ ಅಂಗಡಿ ಇರುತ್ತಿತ್ತು. ಉಡುಪಿ ಹೊಟೇಲ್ ಜಗಲಿಯಲ್ಲಿ ಈಚೆ ಆಚೆ ಎರಡು ಕೊಠಡಿಗಳು ಇರುತ್ತಿದ್ದವು. ಒಂದರಲ್ಲಿ ಕೋರ್ಟು ಕಚೇರಿಯ ಕಾಗದ ಪತ್ರಗಳನ್ನು ಬೆರಳಚ್ಚು ಮಾಡುತ್ತಿದ್ದ ಜ್ಯೋತಿಷಿ – ಅವರೂ ನಂಜುಂಡಯ್ಯನವರೊ ರಾಯರೊ ಇರಬೇಕು – ಅಂಗಡಿ; ಆಚೆ ಕಡೆ ಸ್ಟ್ಯಾಂಡರ್ಡ್ ಕಾಫಿ ವರ್ಕ್ಸ್ ಎಂಬ ಭೀಮರಾಯರ ಕಾಫಿಪುಡಿ ಅಂಗಡಿ. ಅಲ್ಲಿ ಸ್ವಲ್ಪ ವಿಶೇಷವಾಗಿ ಕಾಫಿಪುಡಿ ಮಾಡುವ ವ್ಯವಸ್ಥೆಯಿತ್ತು. ಬೆಂಗಳೂರಿಗೆಲ್ಲ ಇದ್ದುದು ಉಡುಪಿ ಹೊಟೇಲ್ ಅದೊಂದೇ. ಅಂಥದೊಂದೇ. ಈ ಕಾಲಕ್ಕೆ ಅಶಕ್ಯವಾಗುವಂತೆ ಆಗ ಅಲ್ಲಿ ಬ್ರಾಹ್ಮಣರೊಬ್ಬರಿಗೆ ಮಾತ್ರ ಪ್ರವೇಶವಿತ್ತು. ಒಂದು ಕಾಲದಲ್ಲಿನ್ನೂ ಜಾತಿಗಳಿಗೆ ಸಂಬಂಧಿಸಿದ ವಿರಸಗಳು, ಆಕ್ರೋಶಗಳು ಹೆಚ್ಚಾಗಿ ಬೆಳೆದಿರಲಿಲ್ಲ. ಅವು ಬೆಳೆದದ್ದು ಮದರಾಸಿನ ಪ್ರಭಾವ ಮೈಸೂರು ಸರಕಾರದ ಮೇಲೆ ಬಿದ್ದು ಅಲ್ಲಿನ ಜಸ್ಟಿಸ್ ಪಾರ್ಟಿಗೆ ಸಮವಾದ ಒಂದು ಪ್ರಜಾಸಮಿತಿ ಹುಟ್ಟಿಕೊಂಡು ಬೆಳೆದ ಮೇಲೆ. ಕಾಫಿ ತಿಂಡಿಗಳನ್ನು ರುಚಿಯಾಗಿ, ಶುಚಿಯಾಗಿ ಅಲ್ಲಿ ಮಾಡುತ್ತಿದ್ದರು. ಊಟವೂ ಹಾಗೇ: ಚೊಕ್ಕಟವಾಗಿ, ಮೇಲೆ ಮೇಲೆ ಬಟ್ಟೆ ಹಾಕದೆ ಮಡಿ ಉಟ್ಟ ಜನ, ಹೊಸದಾಗಿ ಬಿಸಿಯಾಗಿ ಮಾಡಿದಂತೆ ಬಡಿಸುತ್ತಿದ್ದರು. ಬ್ರಾಹ್ಮಣರಿಗಾಗಿಯೇ ಇದ್ದುದರಿಂದ ತಾಲ್ಲೂಕ್‌ಗಳಿಂದ, ಡಿಸ್ಟ್ರಿಕ್ಟ್‌ಗಳಿಂದ ಬಂದ ಅನೇಕರು ಹೊಟೇಲ್‌ಗಳಿಗೆ ಹೋಗಿ ಊಟ ಮಾಡಬಹುದೆಂದು ಧೈರ್ಯಗೊಂಡದ್ದು ಇಲ್ಲಿನ ಅವಕಾಶದಿಂದ. ಹೊಟೇಲಿನಲ್ಲಿ ಪದಾರ್ಥಗಳನ್ನು ಹಂಚುವ ಹುಡುಗರು 14 ರಿಂದ 18-20ರ ಒಳಗಿನ ಹುಡುಗರು. ಎಲ್ಲ ಉಡುಪಿ ಕಡೆಯವರು. ಕೋಟ, ಸಾಲಿಗ್ರಾಮ ಮುಂತಾದ ಕಡೆಗಳಿಂದ ಬಂದವರೆಂದು ಕಾಣುತ್ತದೆ.

ಮುಂದೆ ಹೋದರೆ ಚೌಕ. ಚೌಕದಲ್ಲಿ ಒಳಕ್ಕೆ ಹೋದರೆ ಕಾಶಿ ವಿಶ್ವೇಶ್ವರನ ದೊಡ್ಡ ದೇವಸ್ಥಾನ. ಅಲಸೂರಿನ ದೇವಸ್ಥಾನದಲ್ಲಿ ಇದ್ದಷ್ಟು ದೊಡ್ಡ ನವಗ್ರಹ ಮಂಡಲ ಇಲ್ಲದಿದ್ದರೂ ಇಲ್ಲಿಯೂ ನವಗ್ರಹ ವಿಗ್ರಹಗಳ ಪೂಜೆ ಇತ್ತು. ಬಹು ಪ್ರಖ್ಯಾತವಾದ ದೇವಸ್ಥಾನ ಅದು. ಅಲ್ಲಿಂದ ಇನ್ನೂ ಒಳಕ್ಕೆ ಹೋದರೆ ಅಡ್ವೊಕೇಟ್ ಎಲ್. ಶ್ರೀನಿವಾಸ ಅಯ್ಯಂಗಾರ್ಯರ ಲಾಯರ್ ಕಚೇರಿ. ಅದರ ಹಿಂದುಗಡೆ ಬೆಂಗಳೂರಿನ ಬಹುಬಗೆಯ ಸಾರ್ವಜನಿಕ, ಸಾಂಸ್ಕೃತಿಕ ಕಾರ್ಯಗಳಿಗೆ ಮುಂದುವರಿದು ನೆರೆಯುತ್ತಿದ್ದ ಎ.ಡಿ.ಎ.ನ ಮಂದಿರ. ಅದು ನಡೆಯುತ್ತಿದ್ದುದು ಬಿ. ಶ್ರೀನಿವಾಸ ಅಯ್ಯಂಗಾರ್ಯರ ಅಚ್ಚುಕೂಟದ ಮಂದಿರದಲ್ಲಿ ಮಹಡಿಯ ಮೇಲೆ. ಅವರಲ್ಲಿ ಬಳ್ಳಾರಿ ರಾಘವಾಚಾರ್ಯರ ಪ್ರಾಧಾನ್ಯದಿಂದ ತೆಲುಗು–ಇಂಗ್ಲಿಷ್ ನಾಟಕಗಳಿಗೇ ಹೆಚ್ಚು ಪ್ರಾಧಾನ್ಯವಿತ್ತು. ಅಲ್ಲಿಗೆ ಕನ್ನಡ ಪ್ರವೇಶವಾದ್ದು ಸ್ವಲ್ಪ ಕಾಲವಾದ ಮೇಲೇ. ಅವರೇ 'ಫೆಸ್ಟಿವಲ್ ಆಫ್ ಫೈನ್ ಆರ್ಟ್ಸ್'

ಎಂಬ ಕಲೆಗಳ ಸಮಾರಂಭ ಒಂದನ್ನು – 1919ರಲ್ಲಿ ಎಂದು ಕಾಣುತ್ತದೆ – ಏರ್ಪಡಿಸಿ ಬೆಂಗಳೂರಿಗೆ ರವೀಂದ್ರನಾಥ ಟಾಗೋರರನ್ನು ಕರೆಸಿದ್ದರು. ಆ ಉತ್ಸವವನ್ನು ಸಿಟಿ ಮಾರ್ಕೆಟ್ ಈಚೆಗಿರುವ ದೊಡ್ಡಣ್ಣ ಹಾಲ್ ಹಿಂದುಗಡೆ ಇವೊತ್ತಿಗೂ ಇರುವ ಎಸ್.ಎಲ್.ಎನ್. ವಿದ್ಯಾ ಏರ್ಪಾಡುಗಳ ಮಂದಿರದ ಹೊರಗಡೆ ದೊಡ್ಡ ಚಪ್ಪರದಲ್ಲಿ ಏರ್ಪಡಿಸಿದ್ದರು. ಮೈಸೂರಲ್ಲಿದ್ದ ಹುಡುಗರು ನಾವು ಒಂದು ಗಾಡಿ ತುಂಬ ಬಂದು 2-3 ದಿನದ ಆ ಉತ್ಸವದಲ್ಲಿ ಪ್ರೇಕ್ಷಕರಾಗಿದ್ದೆವು. ಅಲ್ಲಿಂದ ಬಂದಾಗ ನಮಗೆ ಆದ ಅನುಭವ ವಿಚಿತ್ರವಾದುದು. ಕಾಲೆಜುಗಳಲ್ಲಿ ಓದುವ ಹುಡುಗರಾದ ನಮಗೆ ಟಾಗೋರ್ ಯಾರು ಎಂದು ಗೊತ್ತಿತ್ತು. ಅವರಿಗೆ ಐದಾರು ವರ್ಷಗಳ ಹಿಂದೆಯೇ ನೋಬೆಲ್ ಪಾರಿತೋಷಕ ಅಂತಾರಾಷ್ಟ್ರೀಯ ಖ್ಯಾತಿ ತಂದಿದ್ದು, ಭಾರತದ ಕೀರ್ತಿ ಪ್ರಪಂಚದ ಮೇಲೆಲ್ಲ ಮೊಳಗುವ ಹಾಗಿತ್ತು. ಅವರ ಆಕೃತಿ ಮೂರ್ತಿಯನ್ನು ಇಂಗ್ಲಿಷ್ ಪತ್ರಿಕೆಗಳಲ್ಲಿ ಹಾಗೂ ನಮ್ಮ ಪತ್ರಿಕೆಗಳಲ್ಲಿ ನೋಡಿ ಹುಡುಗರಾದ ನಾವು ಮುಗ್ಧರಾಗಿದ್ದೆವು. ಆಗ ತಾನೆ ಅಮೇರಿಕಾ, ಜಪಾನುಗಳಿಗೆಲ್ಲ ಹೋಗಿ, ಅಲ್ಲೆಲ್ಲ `Nationalism' ಎಂಬ ಹೆಸರಲ್ಲಿ ಮುದ್ರಿತವಾದ ಭಾಷಣಗಳು ನಡೆದು, ಅಲ್ಲಿನ ಪಾಶ್ಚಾತ್ಯ ನಾಗರಿಕತೆ – ರಾಜಕೀಯಗಳ ದುಷ್ಪ್ರಭಾವವನ್ನು ಕುರಿತು ವರ್ಣಿಸುವ ಅತಿಖಾರವಾದ ಲೇಖನಗಳನ್ನು ಓದಿದ್ದೆವು. ಅದರ ಕೊನೆಯಲ್ಲಿ 'Sunset of the Century' ಎಂಬ ಕವಿತೆ. ಆ ಕವಿತೆಯನ್ನು ಉತ್ಸವ ಸಮಾರಂಭದಲ್ಲಿ ರಾಘವಾಚಾರಿಯವರೇ ಪಠಿಸಿದ ನೆನಪು. ಆ ಉತ್ಸವದ ಏರ್ಪಾಡು ಅತಿಶಯ ಮನೋರಂಜಕವಾದದ್ದು. ಆದರೆ ಆ ಬೆಳಿಗ್ಗೆ ಮೈಸೂರಿನ ರೈಲಿಳಿದು ಬಂದ ನಮಗೆ ಸ್ಟೇಷನ್ ಹಾಗೇ ಇತ್ತು; ಧರ್ಮಾಂಬುಧಿ ಕೆರೆ ಕಟ್ಟೆ, ಅಲ್ಲಿ ತಿರುಗಾಡುವ ಜನ ಎಲ್ಲ ಹಾಗೇ ಇತ್ತು. ಬೆಂಗಳೂರಿಗೇ ಏನೂ ಆಗದಂತೆ ಹೋಗುತ್ತಿದ್ದುದನ್ನು ನೋಡಿ ‘ಇದೇನು ಊರು, ಏನು ಜನ! ಇಂಥ ಮಹದ್ಘಟನೆ ಬೆಂಗಳೂರಿನಲ್ಲಿ ನಡೆಯುವಾಗಲೂ ಇವರಿಗೆ ಅದರ ಗಂಧ ಗಾಳಿ ಹಾಯ್ದಿಲ್ಲದ ಹಾಗೆ ಇದ್ದಾರೆ’ ಎನಿಸಿದ್ದುಂಟು. ಒಂದು ಊರಿನ ಒಟ್ಟು ಸಂಸ್ಕೃತಿಗೂ ಅಲ್ಲಿ ನಡೆಯಬಹುದಾದ ಮಹಾ ಸಮಾರಂಭಗಳ ಹಿರಿಮೆಗೂ ಎಷ್ಟು ವ್ಯತ್ಯಾಸವಿರಬಲ್ಲದು ಎಂಬುದರ ಒಂದು ಮೂಕಾನುಭವ ಆಗುತ್ತಿತ್ತು. ಇಂಗ್ಲಿಷ್, ಬಂಗಾಳಿ ಎರಡೂ ತಿಳಿಯದ ಸಾಮಾನ್ಯ ಜನಕ್ಕೆ ಇಂಥದು ಹೇಗೆ ಗೊತ್ತಾಗಬೇಕು? ಟಾಗೋರ್ ಬರುತ್ತಾರೆಂದು ಡಂಗುರ ಹೊಡೆದರೂ ಟಾಗೋರ್ ಯಾರೊ, ಅದೆಲ್ಲ ಕಟ್ಟಿಕೊಂಡು ನಮಗೇನು ಎನ್ನಬಹುದಾದ ನಾಡಾಡಿ ವರ್ಗ ಅದು. ದೊಡ್ಡ ಊರುಗಳಲ್ಲಿ ರಾಜಮಹಾರಾಜರುಗಳು ಬರಲಿ, ಗೌರ್ನರುಗಳು ಬರಲಿ, ಸಾಹಿತ್ಯ – ಕಲೆಗಳ ಉತ್ಸವಗಳು ಪ್ರದರ್ಶನಗಳು ಹತ್ತು ಕಡೆ ನಡೆಯಲಿ, ಊರಿಗೆ ಯಾವ ವ್ಯತ್ಯಾಸವೂ ಆಗುವುದಿಲ್ಲವೆಂಬುದನ್ನು ಈಚಿನ ಕಾಲಗಳಲ್ಲಿ ಕಂಡ ನನಗೆ, ಆಗ ಬೆಂಗಳೂರಿನ ಈ ಅವಜ್ಞತೆ ಬಹಳ ಹೀನಾಯವಾಗಿ ಕಾಣಿಸಿತು. ಪ್ರಜ್ಞೆಯ ಸ್ತರಗಳು ಎನ್ನುತ್ತಾರೆ. ಒಂದು ಸ್ತರದಿಂದ ಇನ್ನೊಂದು ಮೇಲುಸ್ತರಕ್ಕೆ ಪ್ರಭಾವಗಳೇ ಬೀರುವ ಹಾಗಿಲ್ಲ. ಈ ಮಟ್ಟ



ಈ ಮಟ್ಟವೇ, ಆ ಮಟ್ಟ, ಬೇರೆಯೇ, ಒಂದಕ್ಕೆ ಇನ್ನೊಂದು ಇಲ್ಲ ಅಷ್ಟೆ. ಆ ಸಮಾರಂಭದಲ್ಲಿಯೇ ನಾವು ಕೈಲಾಸಂ ಅವರನ್ನು ಮೊದಲಬಾರಿಗೆ ಕಂಡದ್ದು. ಅವರ ಷೇಕ್ಸ್‌ಪಿಯರ್, ಗಿಲ್ಬರ್ಟ್ ಮತ್ತು ಸಲ್ಲಿವನ್ ಪದ್ಯಭಾಗಗಳ ಪಠನ – Recitation, ‘ಟೊಳ್ಳುಗಟ್ಟಿ’ಯ ವಾಚನ ಆಗಿ ಅದಕ್ಕೆ ‘ಕಂಠೀರವ ನರಸಿಂಹರಾಜ ಪಾರಿತೋಷಕ ವಿಜಯೀ ಗುಂಡೂ ಗುಂಡೂ’ ಎಂದು ಗುಂಡೂರಾಯನೆಂಬ ಹೆಸರಲ್ಲಿ ಕೈಲಾಸಂ ಅವರ ಒಂದು ಹೊಸ ಬಗೆಯ ಸಾಮಾಜಿಕ ಮತ್ತು ನಗೆಸಂಮಿತಿಯ ನಾಟಕ ಹೊರಬಂದದ್ದು. ಅದೇ ಸುಮಾರಲ್ಲಿಯೇ ಕನ್ನಡದ ಇನ್ನೊಬ್ಬ ಖ್ಯಾತನಾಮರಾದ ಸಂಸರ ‘ಸುಗುಣ ಗಂಭೀರ’ ನಾಟಕಕ್ಕೂ ಬಹುಮಾನ ದೊರೆತದ್ದು.

ಟಾಗೋರರನ್ನು ಆ ದಿನ ಅತಿಶಯವಾಗಿ ಬರಮಾಡಿಕೊಂಡರು. ಅವರ ಸ್ವಾಗತದಲ್ಲಿ ಅವರ ತಲೆಯ ಮೇಲೆ ಎತ್ತರದಲ್ಲಿ ವಿದ್ಯುಚ್ಛಕ್ತಿಯ ಒಂದು ಕುಸುಮಾಂಜಲಿ ಪಾತ್ರೆಯನ್ನು ಕಟ್ಟಿದ್ದರು. ಅವರ ಹಿಂದುಗಡೆ ಬೃಹತ್ತಾದ ಅವರ ಆಕೃತಿ ಚಿತ್ರ ಇದ್ದು, ಅದು ಪ್ರಕಾಶಮಾನವಾಗುವಂತೆ ಹಿಂದಿನಿಂದ ಬೆಳಕನ್ನು ಸಂಯೋಜಿಸಿದ್ದರು. ಮೇಲಿಂದ ಈ ಪಾತ್ರೆ ಆರೇಳು ದಳವಾಗಿ ತೆರೆದುಕೊಳ್ಳುತ್ತ ಒಂದೊಂದಾಗಿ ಜಾಜಿ, ಮಲ್ಲಿಗೆ, ಮಲ್ಲೆ ಹೂಗಳನ್ನು ಸುರಿದು, ಕಡೆಗೆ ಒಮ್ಮೆಗೇ ಆರು ದಳಗಳೂ ತೆರೆದು ಚೆಲ್ಲಿ ಚೆಲ್ಲಿ ಬೀಳಿಸುತ್ತಿದ್ದವು. ದೇವತೆಗಳು ಕರೆಯುವ ಪುಷ್ಪವೃಷ್ಟಿ ಎನ್ನುತ್ತಾರೆ. ಮಾನವ ನಿರ್ಮಿತವಾದ ಇದೇ ಇಷ್ಟು ಮೋಹಕವಾಗಿದ್ದರೆ ಮಂದಾರ, ಪಾರಿಜಾತಗಳ ಆ ವೃಷ್ಟಿ ಇನ್ನು ಹೇಗಿರಬಹುದು ಎನ್ನುವಂತಿತ್ತು. Message of the Forests ಎಂಬ ವಿಳಾಸದ ಭಾಷಣವನ್ನು ಮನಸ್ಸಿನ ಒಂದು ಉತ್ತಾನತೆಯಲ್ಲಿ, ಅಂಥ ಸನ್ನಿವೇಶದಲ್ಲಿ ಕವಿ ಓದಿದರು. ತಾರಕ್ಕೆ ಶ್ರುತಿ ಮಾಡಿದ ತಂತ್ರೀ ನಾದದಂತೆ ದನಿ ಎತ್ತಿ In the dim ages of antiquity ಎಂದು ಪ್ರಾರಂಭಿಸಿ ಒಂದು ಗಂಟೆ ಸಭಿಕರನ್ನು ಮಂತ್ರಮುಗ್ಧರನ್ನಾಗಿ ಮಾಡಿದರು. ಆ ಉತ್ಸವ ಬಹಳ ವಿಜೃಂಭಣೆಯಿಂದ ನಡೆಯಿತು. ಆ ದಿನಗಳಲ್ಲಿ ತೆಗೆದುಕೊಂಡಷ್ಟು ಫೋಟೋಗ್ರಾಫ್‌ಗಳನ್ನು ಆವರೆಗೂ ನಾನು ಕಂಡಿರಲಿಲ್ಲ. ಪ್ರಾಚೀನ ಕಾಲಗಳ ಮಹರ್ಷಿಗಳು ಇದ್ದಂತೆ ಅವರಿದ್ದರು-ಎಂದು ಹೇಳುತ್ತಿದ್ದುದು ವಾಡಿಕೆ. ಆದರೆ ದಾಡಿ, ಮುಖ, ರೂಪ, ಯೋಗ್ಯತೆ ಎಲ್ಲ ಅದೇ ಆಗಿರಬಹುದಾದರೂ ಅವರ ವೇಷ ಒಂದು ಕಡೆ ಗೌನು, ಇನ್ನೊಂದು ಕಡೆ ತಲೆಯ ಮೇಲಿನ ಟೋಪಿ - ಈಚಿನ ಕಾಲದ ಮತ್ತು ಬೇರೆ ಮತವರ್ಗದವರ ರೀತಿಯದು ಎನ್ನಬಹುದು. ಆದರೂ ಸಾಮಾನ್ಯ ಮಾನವ ವ್ಯಕ್ತಿತ್ವದ ವರ್ಣರಂಜನೆಗಿಂತ ಅವರ ಆಕೃತಿವಿಶೇಷ, ಅವರ ಚಾರಿತ್ರ, ಕವಿಕೀರ್ತಿ ಮತ್ತು ಆವರೆಗೆ ಅವರು ‘ಸಾಧನ’ ಮುಂತಾದ ಗ್ರಂಥಗಳಲ್ಲಿ ರೂಪಿಸಿ ಪ್ರಕಾಶಪಡಿಸಿದ್ದ ಉಪನಿಷತ್ತಿನ ಅಭಿಪ್ರಾಯಗಳು, ಆವರೆಗೆ ನಮ್ಮಲ್ಲಿ ಪ್ರಕಟವಾಗಿದ್ದ ಇಂಗ್ಲಿಷ್‌ನ ಭಾಷಾಂತರಗಳಲ್ಲಿ ಅಧ್ಯಾತ್ಮದ ಪ್ರಭಾವ, ದೈವವಿಲಾಸ ಮುಂತಾದುವನ್ನು ಕುರಿತ ಗೀತಗಳು ಇದ್ದುದರಿಂದ ಆ ಒಂದು ಅಲೌಕಿಕತೆ ಅವರ ನಿಲವಿನಲ್ಲಿ, ನುಡಿಯಲ್ಲಿ, ನಡೆಯಲ್ಲಿ ಕಾಣುತ್ತಿತ್ತು. ಹೇಗೊ ಏನೊ, ಒಂದು ವಿಶೇಷ

ಉನ್ನತಿ ಟಾಗೋರರ ಪ್ರಪಂಚವನ್ನು ರಚಿಸಿತ್ತು. ಎ.ಡಿ.ಎ ಅವರು ಮುಂದಿನ ವರ್ಷಗಳಲ್ಲಿ ಇಂಥುವೇ ಸಮ್ಮೇಳನಗಳನ್ನು ನಡಸಿ ಬೆಂಗಳೂರಿನ ಕನ್ನಡಿಗರ ಅಭಿಲಾಷೆಯನ್ನು ನೆರವೇರಿಸುವಂತೆ ಕನ್ನಡ ನಾಟಕಗಳನ್ನೂ ಆಡಿದರು. ಬೆಂಗಳೂರಿನ ಇನ್‌ಫ್ಲ್ಯುಯೆಂಜಾ ಕಾಲದಲ್ಲಿ ಆ ಸಂಸ್ಥೆಯು ಪಿ. ಕೋದಂಡರಾಯರ ಅಧ್ಯಕ್ಷತೆಯಲ್ಲಿ ನಡಸಿದ ಔಷಧಿ ಪಥ್ಯಗಳ ಉಪಚಾರ ವ್ಯವಸ್ಥೆ ಹಿಂದೆಂದೂ ಕಂಡದ್ದಲ್ಲ; ಈವರೆಗೂ ಕಂಡುಬಂದಿಲ್ಲ. ಅವರ ತರುವಾಯ ಮಾಸ್ತಿಯವರೂ ಸಿ. ಕೆ. ವೆಂಕಟರಾಮಯ್ಯನವರೂ ಅಲ್ಲಿನ ಕಾರ್ಯಕಲಾಪಗಳಲ್ಲಿ ತಮ್ಮ ಪ್ರಭಾವವನ್ನು ಬೀರಿದರು. ಈ ಊರಿನ ಕನ್ನಡ ಸಾಹಿತ್ಯದ ಮತ್ತು ಕಲಾ ಚಟುವಟಿಕೆಗಳಿಗೆ ಪ್ರೋತ್ಸಾಹ ಉಂಟುಮಾಡಿದರು.

* * *

ಎರಡು ಸಂಸ್ಥೆಗಳು ಚಿಕ್ಕಪೇಟೆಯ ಚೌಕಕ್ಕೂ ಅರಳೇಪೇಟೆಯ ಚೌಕಕ್ಕೂ ನಡುವೆ ಹೆಸರಾದವು. ಒಂದು ಲಾಲ್‌ದಾಸ್ ವೆಂಕಟರಮಣಸ್ವಾಮಿ ದೇವಸ್ಥಾನ. ನೂರಾರು ವರ್ಷದ ಹಿಂದಿನದು. ಒಳಗೆ ಸುತ್ತಲೂ ವಿದ್ಯಾರ್ಥಿಗಳು, ಸಾಧುಗಳು, ವ್ರತಿಗಳು ಇದ್ದರು. ಸನಾತನ ಧರ್ಮಕ್ಕೆ ಸಂಬಂಧಿಸಿದ ಅನೇಕ ಪ್ರಸಂಗಗಳು ಅದಕ್ಕೆ ಸಂಬಂಧಿಸಿದುದು. ಅದರ ಹಿಂದೆಯೇ ಇದ್ದುದು ತುಳಸೀತೋಟದ ರಂಗಮಂದಿರ. ಆ ಗಲ್ಲಿಯನ್ನು ದಾಟಿ ಹೋದರೆ ಅಕ್ಕೀಪೇಟೆ ಕೊಟ್ಟಿಗೆ ಕ್ರಾಸ್. ಅಕ್ಕೀಪೇಟೆ ಕಡೆಗೆ ನೇರ ಹತ್ತಿರದಲ್ಲಿ ಇದ್ದುದು ಕಾಯಂಗಡಿ ಪಾಪಣ್ಣನವರ ಮನೆ. ಕುಸ್ತಿ ಪಂದ್ಯಗಳಲ್ಲಿ ಬಿದ್ದು ಕೈ ಕಾಲು ಮುರಿದುಕೊಂಡವರು ಅದಕ್ಕೂ ಆ ತರಹದ ಇತರ ವಿಕಲತೆಗಳಿಗೂ ಚಿಕಿತ್ಸಾರೂಪವಾದ ಸಂವಹನಾ ಕ್ರಿಯೆಯ ಏರ್ಪಾಡಿಗೂ ಪಾಪಣ್ಣನವರು ಅವರು ಇರುವಷ್ಟು ಕಾಲವೂ ಪ್ರಖ್ಯಾತರಾಗಿದ್ದರು. ದಪ್ಪನೆಯ ಗಟ್ಟಿ ಮನುಷ್ಯರು; ಬಲವಾದ ಮೀಸೆ. 30-40 ವರ್ಷಕ್ಕೆ ಮುಂಚಿತವಾಗಿಯೇ ಆ ಬಗೆಯ ಮೀಸೆ ಹೋಗಿಬಿಟ್ಟಿದೆ. ಬಿಲ್ಲಿನ ಕೊಪ್ಪಿನಂತೆ ಎರಡೂ ಕಡೆ ತಿರುವಿ ಮಾಡಿಕೊಳ್ಳುತ್ತಿದ್ದ ಆಕೃತಿ ಅದರದು. ಒಂದು ಸಂದರ್ಭವಂತೂ ನನ್ನ ಕಣ್ಣಿಗೆ ಕಟ್ಟಿದ ಹಾಗಿದೆ. ಇವೊತ್ತು ಗಾಂಧೀ ಶಿಲಾ ವಿಗ್ರಹವಿರುವ ಕಡೆಯಿಂದ ಹಿಡಿದು ಉದ್ದಕ್ಕೆ ಇನ್ನೊಂದು ಬ್ರಿಗೇಡ್ ರೋಡಾಚೆ ಇರುವ ಒಂದೇ ಬಟಾಬಯಲು ಮೈದಾನವಿತ್ತು. ಬ್ರಿಟಿಷರು ಪ್ರಬಲರಾಗಿರುವಾಗ ಅಲ್ಲಿ ಅವರ ಸೈನ್ಯದ ಪ್ರದರ್ಶನಗಳನ್ನೆಲ್ಲ ನಡಸುತ್ತಿದ್ದರು. ಆ ಮೈದಾನ ನೋಡುವಂತಿತ್ತು. ಅಲ್ಲಿ ಗಾಂಧೀ ಶಿಲಾಮೂರ್ತಿ ಹಿಂದುಗಡೆಯ ಒಂದು ಪ್ರದೇಶದಲ್ಲಿ ದೊಡ್ಡ ಪ್ರದರ್ಶನ ಶಾಲೆ ಕಟ್ಟಿ ಒಂದು ಕುಸ್ತಿ ಏರ್ಪಟ್ಟಿತ್ತು. ನೂರಾರು ಮೈಲಿ ದೂರದಿಂದ ಒಂದು ದಿನದ ಕುಸ್ತಿಯನ್ನು ನೋಡಲು ಜನ ಬಂದಿತ್ತು. ಕುಸ್ತಿಗೆ 5-10 ರೂ. ಟಿಕೆಟ್ ಹಾಕಿದ್ದುದು ಅದೇ ಮೊದಲು ಎನ್ನಬೇಕು. ಕಲ್ಲು - ಕೀಕರ್‌ಸಿಂಗ್ ಎಂಬ ಇಬ್ಬರು ಪಹಲ್‌ವಾನ್‌ರಿಗೆ ನಡೆದ ಪಂದ್ಯ. ಎಷ್ಟು ಸಾವಿರ ಬಾಜಿ ಕಟ್ಟಿದ್ದರೊ ಕಾಣೆ. ಅವರ ಆಕೃತಿಗಳನ್ನು ನೋಡಬೇಕಿತ್ತು. ಒಬ್ಬೊಬ್ಬರೂ ಒಂದೊಂದು ಆನೆಯಂತಿದ್ದರು. ಈಗ ನೆನಪಿಲ್ಲ ನನಗೆ ಯಾರು ಗೆದ್ದರು ಎಂದು. ಗೆಲ್ಲಲು ಇಬ್ಬರೂ ಯೋಗ್ಯರು. ಅವರಲ್ಲಿ ಒಬ್ಬನಿಗೆ ಕಾಲೊ ಕೈಯೊ ಉಳುಕಿ, ಆತನು ಪಾಪಣ್ಣನವರ ಮನೆಗೆ ಬಂದ. ಸಾಮಾನ್ಯವಾಗಿಯೇ ಅವರ ಮನೆಯ ಬಾಗಿಲು ಅಗಲವಾದ್ದು. ಹಿಂದಿನ ಕಾಲದ ಅಂಗಡಿ ಮುಂಗಟ್ಟುಗಳಿಗೆ ಹಾಕಿಸುತ್ತಿದ್ದಂತೆ ಮಡಿಸು-ಕೀಲು ಬಾಗಿಲು. ಎಷ್ಟೋ ದೊಡ್ಡದಾಗಿ ಅದು ತೆರೆದಿದ್ದರೂ ಕೀಕರ್‌ಸಿಂಗ್ ಹಿಡಿಸಲಿಲ್ಲ. ಪಾಪಣ್ಣನವರಿಗೆ ತುಂಬಾ ಸಂತೋಷ. ಸ್ವಲ್ಪ ಹೆಚ್ಚು ಕಡಮೆ ರಸ್ತೆ ತುಂಬಾ ಜನ. ಮಾಳಿಗೆಗಳ ಮೇಲೆ ನಿಂತು, ಜಟಕಾಗಳ ಮೇಲೆ ಹತ್ತಿ ಜನ ಈ ಪಹಲವಾನನನ್ನು ನೋಡುತ್ತಿದ್ದರು. ಎರಡು ದಿನ ಬಂದು ಆತ ನರ, ಮಾಂಸಖಂಡ ನೀವಿಸಿಕೊಂಡು ಹೋದದ್ದು ನನಗೆ ಚೆನ್ನಾಗಿ ನೆನಪಿದೆ.



ಇದು ಅಕ್ಕೀಪೇಟೆಯ ಪಕ್ಕಕ್ಕಾದರೆ ಕೊಟ್ಟಿಗೆ ಇನ್ನೂ ಆ ಕಾಲದಲ್ಲಿ ಹಸು ಎಮ್ಮೆಗಳನ್ನು ಸಾಕುತ್ತಿದ್ದ ಕವಾಡಿಗರ ನೆಲೆಯಾಗಿತ್ತು. ಅಕ್ಕೀಪೇಟೆ ಒಂದು ಭಾಗವೂ ಅಷ್ಟೆ. ಅಲ್ಲಿ ಎಷ್ಟು ನೂರು ಸೇರು ಹಾಲು ಬೇಕಾದರೂ ಸಿಕ್ಕುತ್ತಿತ್ತು. ಅಪ್ಪಟ ಹಸುವಿನ ಬೆಣ್ಣೆ ಬೇಕೆಂದರೆ ಕೊಟ್ಟಿಗೆಯ ಕವಾಡಿಗರಲ್ಲಿಗೇ ಹೋಗಬೇಕಿತ್ತು. ಸ್ವಲ್ಪ ಮುಂದೆ ಕೊಟ್ಟಿಗೆಯಲ್ಲಿ ಎರಡು ಪ್ರಖ್ಯಾತವಾದ ಮನೆಗಳು. ಬಲಕ್ಕೆ ನಮ್ಮ ಸ್ನೇಹಿತರಾದ ಅಪ್ಪಣ್ಣನವರ, ಬಿ.ಎಸ್.ನರಸಿಂಹ ಅಯ್ಯಂಗಾರರ ಮನೆ. ಯಾವಾಗಲೂ ಅವರ ತಂದೆ ಒಂದು 'ಸಾಫ್ಟ್ ಬನಿಯನ್' ಹಾಕಿಕೊಂಡು, ಮೇಲುಕೋಟೆ ಪಂಚೆ ಉಟ್ಟುಕೊಂಡು ಮನೆಯ ಹೊರಗಿನ ಜಗುಲಿಯ ಮೇಲೆ ಕುಳಿತುಕೊಳ್ಳುತ್ತಿದ್ದರು. ಅಪ್ಪಣ್ಣನವರು ಬಹಳ ಎತ್ತರದ ಆಳು. ಸುಂದರವಾದ ಆಕೃತಿ ಉಳ್ಳವರು. ಮುಂದಿನ ಕಾಲದಲ್ಲಿ ಅವರು ನಮ್ಮ ಪ್ರಖ್ಯಾತ ಐ.ಸಿ.ಎಸ್. ಆಡಳಿತಗಾರರೂ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ಗವರ್ನರರೂ ಆದ ಹೆಚ್. ವಿ. ಆರ್. ಅಯ್ಯಂಗಾರ್ ಅವರ ಮಾವಂದಿರು. ಮಹಡಿಯ ಮೇಲಿದ್ದ ಅವರ ಕೊಠಡಿ ಮತ್ತು ಹೊರ ಕೈಸಾಲೆಯಲ್ಲಿ ಒಂದು ತಿರುಗು ಬೀರುವಿನಲ್ಲಿ ದೊಡ್ಡ ದೊಡ್ಡ ಇಂಗ್ಲಿಷ್-ಸಂಸ್ಕೃತ ಪುಸ್ತಕಗಳಿರುತ್ತಿದ್ದವು. ತಂದೆಗೆ ಬಹುಶಃ ಒಬ್ಬನೇ ಮಗ. ಹಣ ಇತ್ತು. ಹುಡುಗ ಲಕ್ಷಣವಾಗಿದ್ದವನು. ಇನ್ನಾವ ವಿಧವಾದ ಕೊಳೆ ಇಲ್ಲದಿದ್ದರೂ ಆತನ ಪೋಷಾಕು ಆಗಿನ ಕಾಲಕ್ಕೆಲ್ಲ ಬಹಳ ಮುಂದುವರಿದ ವೈಖರಿಯದು. ಟೆನ್ನಿಸ್ ಫ್ಲಾನಲ್ ಷರಾಯಿಗಳೊ ಅಥವಾ ಸರ್ಜ್ ವಿಪ್‌ಕಾರ್ಡಿನವೊ, ಆತನು ಧರಿಸುತ್ತಿದ್ದ ಬೌ, ಟೈಗಳೂ ಎಲ್ಲಕ್ಕಿಂತ ಹೆಚ್ಚಾಗಿ ಕಣ್ಣಿಗೆ ಹಾಕುತ್ತಿದ್ದ ಕಡ್ಡಿ-ಕೊಕ್ಕೆ ಇಲ್ಲದ, ಚೌಕಟ್ಟಿಲ್ಲದ ಅಚ್ಚ ಗಾಜಿನ ಕನ್ನಡಕ. ಅದು ಹಿಗ್ಗಿ-ಕುಗ್ಗುವಂಥ ಕೇವಲ ಒಂದು ಕೊಕ್ಕೆಯಿಂದ ಮೂಗಿನ ಹತ್ತಿರ ಎರಡೂ ಕಣ್ಣಿಗೆ ಧರಿಸುವ, ಇಲ್ಲವೇ ಒಂದು ಬಂಗಾರದ ಸರಿಗೆ ಒಂದು ಕಡೆ ತೂಗು ಬಿದ್ದಿರುವ, ಕನ್ನಡಕ. ಬಹುಶಃ ದಂಡಿನ ಕೇಶಾಲಂಕಾರದ ಮಂದಿರಗಳಲ್ಲಿ ರೂಪಿಸಿಕೊಂಡ ಕ್ರಾಪ್. ಬೆಂಗಳೂರು ಹೈಸ್ಕೂಲಲ್ಲಿ – ಅದು ಬಹುಕಾಲ ಕೋಟೆಯಲ್ಲಿತ್ತು – ಕ್ರಿಕೆಟ್ ವರ್ಗದಲ್ಲಿ ಮತ್ತು ಸೆಂಟ್ರಲ್ ಕಾಲೇಜಿನ ಆಟದ ಮೈದಾನದಲ್ಲಿ ಕ್ರಿಕೆಟ್ ಆಟ ನಡೆದಾಗ, ಆತನು ವಿಕೆಟ್ ಕೀಪರ್ ಆಗಿ ಕ್ರಿಕೆಟ್ ಪ್ಯಾಡ್ (ಕಾಲು ಕವಚ)ಗಳನ್ನು ಧರಿಸಿ ನಿಲ್ಲುತ್ತಿದ್ದ ರೀತಿ, ಠೀವಿ

ಕಣ್ಣಿಗೆ ಒಂದು ಹಬ್ಬ. ಆತನು ನಿಂತನೆಂದರೆ ಬ್ಯಾಟ್ ಹಿಡಿದು ಆಡುವವರಿಗೆ ಮೈ ಎಲ್ಲಾ ಕಣ್ಣು, ಎಚ್ಚರ. ಎದುರುಗಡೆಯಿಂದ ಚೆಂಡು ಹಾಯಿಸುವವರಿಗೆ ತುಂಬಾ ಸಂತೋಷ. ಯಾರದೊ ಒಬ್ಬರ ಹೆಸರನ್ನು ಹೇಳಿ 'ಅವನೂ ಕಿಮಕ್ ಕಮಕ್ ಎನ್ನುವ ಹಾಗಿಲ್ಲ' ಎನ್ನುತ್ತಿದ್ದ ಮಾತು, ಆ ಧ್ವನಿ ಅಂದಿನಂತೆ ಇಂದೂ ಕಿವಿಗೆ ಬೀಳುತ್ತಿದೆ. ಸೇಂಟ್ ಜೋಸೆಫ್ ಕಾಲೆಜಲ್ಲಿ ಓದುತ್ತಿದ್ದ ಅವರಿಗೆ ಯಾಕೊ ಪರೀಕ್ಷೆಗಳು ಸುಲಭವಾಗಿ ಮುಗಿಯುತ್ತಿರಲಿಲ್ಲ. ಅತನು ಹೇಳಿಕೊಟ್ಟವರೆಲ್ಲಾ ಪಾಸಾಗಿ ಬಿ.ಎ. ಎಂ.ಎ., ಎಂ.ಎಲ್. ಮಾಡಿದರು. ಆತನು ಹಿಂದಿನ ಕಾಲದ ಇಂಟರ್ ಮಾಡುವ ಹೊತ್ತಿಗೇ ಸ್ವಲ್ಪ ಕಾಲ ಹಿಡಿಯಿತು. ಹಠ ಹಿಡಿದು ತನ್ನ ಮಗನನ್ನು ಎಷ್ಟೋ ಸಲ ಪರೀಕ್ಷೆಗೆ ಕಟ್ಟಿಸಿ ಇಂಟರ್‌ಮೀಡಿಯೆಟ್ ಪಾಸೋ – ಬಿ.ಎ., ಫೇಲೋ ಮಾಡಿಸಿದರು. ಆ ಹಠಕ್ಕೆ ಆ ಹುಡುಗ ದಂಗೆ ಏಳದಿದ್ದುದು ಅಪ್ಪಣ್ಣನ ಪುಣ್ಯ! ಆ ಮಗನೂ ಆಕೃತಿಯಲ್ಲಿ ಶಕ್ತಿಯಲ್ಲಿ ಕಡಮೆಯಲ್ಲವಾಗಿದ್ದರೂ ಅಪ್ಪ ಎದುರಿಗೆ ನಿಂತರೆ ಗಂಧರ್ವಲೋಕದ ಯಾವುದೊ ಚಿತ್ರಾಂಗದನ ಮೈಕಟ್ಟಿನಲ್ಲಿ ಭಯಪಡಿಸಬಲ್ಲ ವ್ಯಕ್ತಿಯ ಹಾಗೆ ಇರುತ್ತಿದ್ದುದರಿಂದ ಮಿಸುಕಾಡುವಂತಿರಲಿಲ್ಲ. ಆತ, ಈಗ ಆಕಾಶವಾಣಿಯಲ್ಲಿರುವ ಶ್ರೀನಾಥ್ ಎ.ಡಿ.ಎ ನಲ್ಲಿ ಪ್ರಹ್ಲಾದ, ಧ್ರುವ ಮುಂತಾದ ಭೂಮಿಕೆಗಳನ್ನು ಮಾಡುತ್ತಿದ್ದರು. ವರದಾಚಾರ್ ಕಂಪನಿಯ ಶೇಷಗಿರಿರಾಯರು ಹಾರ್ಮೋನಿಯಂ ಪಾಠ ಮಾಡುತ್ತಿರುವಾಗ ಬಹುಶಃ ಪ್ರಯೋಜನ ಪಡೆದರು.

ಅಪ್ಪಣ್ಣನವರ ಮನೆಯ ನೇರ ಎದುರು ಎರಡು ಮನೆಗಳು: ಒಂದು ನಮ್ಮ ಎ.ವಿ. ಸ್ಕೂಲು ಉಪಾಧ್ಯಾಯರಾಗಿದ್ದ ಕೊಟ್ಟಿಗೆ ರಾಮಚಂದ್ರರಾಯರ ಮನೆ. ಅವರದು ವಿಶೇಷವಾದ ಆಕೃತಿ. ಅದಕ್ಕೆ ತಕ್ಕ ಮೀಸೆ. ಜರತಾರಿ ಅಥವಾ ರೇಷ್ಮೆ ದೊಡ್ಡಂಚಿನ ಪಂಚೆ ಉಡುತ್ತಿದ್ದವರು. ಕಾಲಿಗೆ ಚಡಾವ್. ಸರಿಗೆ ರುಮಾಲು ತಲೆಗೆ. ಇಂಗ್ಲಿಷ್ ಪಾಠ ಹೇಳಿಕೊಡುತ್ತಿದ್ದರು, ನಮ್ಮ II ಫಾರ್ಮ್ ಅಲ್ಲಿ. ನನ್ನದು II ಫಾರ್ಮ್ 'ಸಿ' ತರಗತಿ. ಅವರು 'ಬಿ' ತರಗತಿಗೆ ಇಂಗ್ಲಿಷ್ ಗ್ರ್ಯಾಮರ್ (ವ್ಯಾಕರಣ) ಪಾಠ ಹೇಳಿಕೊಡುತ್ತಿದ್ದರು. ಅವರಲ್ಲಿ ಪಾಠ ಕಲಿತವರು ಇಂಗ್ಲಿಷ್ ವ್ಯಾಕರಣದ ಮತ್ತು ಭಾಷಾಪದ್ಧತಿಯ ಸಮಸ್ತ ರಹಸ್ಯವನ್ನೂ ಅರಿತುಕೊಳ್ಳಬಲ್ಲವರಾಗಿದ್ದರು. ಅವರ ಬೆತ್ತದ ಏಟು ತಿನ್ನದ ವಿದ್ಯಾರ್ಥಿಯೇ ಇರುತ್ತಿರಲಿಲ್ಲ. ಎಂಥ ಆಳಾದ ವಿದ್ಯಾರ್ಥಿಯೂ ಆತನ ಧ್ವನಿಗೆ, ಆತನ ಪಾಠದ ದಕ್ಷತೆಗೆ ತಗ್ಗಬೇಕಿತ್ತು. ವಾರಕ್ಕೆ ನಾಲ್ವರೈವರು ಜನವಾದರೂ ದಿನಾ ತಪ್ಪದೆ ಲೇಟಾಗಿ ಬಂದು ಸಬೂಬು ಹೇಳಲು 'ಹೊತ್ತಾಗಿ ಹೋಯಿತು ಸಾರ್', 'ಮುಂಚೆ ಬರಲಾಗಲಿಲ್ಲ, ಸರ್, ತಡವಾಗಿ ಹೋಯ್ತು', ಎಂಬ ಪರ್ಯಾಯ ವಾಚಕಗಳನ್ನು ಹೇಳಿಯೋ ಅಥವಾ 'ಅಣ್ಣ ಸತ್ತು ಹೋದ', 'ಅಪ್ಪ ಸತ್ತು ಹೋದ' ಎಂದು ಸಬೂಬು ಹೇಳಿಯೋ 'ಗಧಾ,' 'ಬೇಕೂಫ್' ಎಂದು ಬೈಸಿಕೊಂಡು ಅವರ ಕೈಯಲ್ಲಿ ಏಟು ತಿನ್ನುತ್ತಿದ್ದರು. ಏಟು ತಿನ್ನುವುದು ವಾಡಿಕೆಯಾಗಿ 'ಇಷ್ಟೇ ತಾನೆ!' ಎಂದುಕೊಂಡು ಒಬ್ಬಾತ ತಡಮಾಡಿ ಬರುವುದೂ ತಪ್ಪುತ್ತಿರಲಿಲ್ಲ. ಏನು ಕಷ್ಟವೊ



ಏನೊ; ಗಂಟೆಗೆ ಸರಿಯಾಗಿ ಬರುವುದು ಕಷ್ಟವಾಗಿರಬೇಕು. ಮುರ್ತುಜಾ ಬೇಗ್ ಎಂದೊ ಏನೊ ಆ ಹುಡುಗನ ಹೆಸರು. ಅವರ ಪಕ್ಕದ ಮನೆ ಎತ್ತರವಾಗಿ ಕಟ್ಟಿದ ಶ್ರೀವೈಷ್ಣವರ ಮನೆ; ಬಿ.ಟಿ. ಕೃಷ್ಣಯ್ಯಂಗಾರ್ ಎಂಬವರದು. ಆತ ತುಂಬಾ ಜಾಣರಾದ ವಿದ್ಯಾರ್ಥಿ. ಗಣಿತ ಶಾಸ್ತ್ರದಲ್ಲಿ ಬಹಳ ಚುರುಕು ಬುದ್ಧಿ. ಕೆಲವು ಕಾಲ ಕಾಲೆಜಲ್ಲಿ ಉಪಾಧ್ಯಾಯರಾಗಿದ್ದು, ಅಲ್ಪಕಾಲದಲ್ಲಿಯೇ ತೀರಿಕೊಂಡರಾಗಿ, 2-3 ವರ್ಷಕ್ಕೆ ಹಿಂದೆ ತಾನೇ ಅವರನ್ನು ಮದುವೆಯಾಗಿದ್ದ ಹೆಣ್ಣು ಮಗು ವೈಧವ್ಯಕ್ಕೆ ಈಡಾಗಬೇಕಾಯಿತು.

ಕೊಟ್ಟಿಗೆ ಚೌಕವನ್ನು ದಾಟಿ ಹೋದರೆ ದೊಡ್ಡ ಪ್ರಖ್ಯಾತಿ ಉಳ್ಳ ಸ್ಥಳ : ಮಸ್ತಾನ್ ಸಾಬರ ಮಸೀದಿ. ಬೆಂಗಳೂರಿನ ಎಲ್ಲ ವರ್ಗಗಳವರೂ ಅಲ್ಲಿಗೆ ಹೋಗಿ ಪ್ರದಕ್ಷಿಣೆ ಮಾಡುವುದುಂಟು. ಶಿವನನ್ನು ಒಲ್ಲದ ಮಾಧ್ವರೂ ಶಿವರಾತ್ರಿಯಂದು ಹೇಗೆ ಶಿವ ದೇವಸ್ಥಾನಕ್ಕೆ ಹೋಗಿ ಪೂಜೆ ಮಾಡಿಸಿಕೊಂಡು ಬರುತ್ತಾರೊ ಹಾಗೆ ಮುಸಲ್ಮಾನರ ಈ ಮಸೀದಿಯಲ್ಲಿರುವ ಗೋರಿಯ ಪವಿತ್ರತೆಗೆ ಬಾಗಿ, ಅಲ್ಲಿ ಸಮಾಧಿಸ್ಥರಾದ ಗುರುವಿಗೆ ಹರಕೆ ಹೊತ್ತು ಹಿಂದೂಗಳು ಅನೇಕರು ಕಾಣಿಕೆ ಸಲ್ಲಿಸುವರು. ಅಲ್ಲಿಯ ಬೂದಿಯನ್ನು ಸ್ವೀಕರಿಸಿ, ಆ ಪೂಜಾರಿ ನವಿಲುಗರಿಯ ಒಂದು ಕಂತೆಯಿಂದ ಇವರ ಬಾಗಿದ ತಲೆಯ ಮೇಲೆ ಮೆಲ್ಲಗೆ ಬಡಿದರೆ ಅದನ್ನು ರಕ್ಷೆ ಎಂದುಕೊಳ್ಳುವರು. ಮನಸ್ಸಿನ ಶ್ರದ್ಧೆ ಮತಗಳನ್ನು ಮೀರುತ್ತದೆ. ಹಲವೇಳೆ ಅಂಗವಿಕಲತೆಗಳೇ ಇಂಥ ಶ್ರದ್ಧೆಯಿಂದ ಮಾಯ್ದಿವೆ ಎಂಬ ನಂಬಿಕೆ ಉಂಟು. ವರ್ಷಂಪ್ರತಿ ನಡೆಯುವ ಕರಗದ ಪ್ರಯಾಣ ಈ ಸ್ಥಳದಲ್ಲಿ ನಿಂತು ಮಸೀದಿಯಿಂದ ಮರ್ಯಾದೆಗೊಳ್ಳುವುದು ಎಂಬಾಗ, ಊರು ದೇವರ ಮಂಡಲಿಯಲ್ಲಿ ಈ ಮಸೀದಿಗೆ ದೊಡ್ಡ ಸ್ಥಾನ ಉಂಟೆಂಬುದು ಗೊತ್ತಾಗುತ್ತದೆ.

ಚಿಕ್ಕಪೇಟೆ ಬಳೇಪೇಟೆಗೆ ತಿರುಗುವಾಗ ಒಳಗಡೆಗೆ ಕಾಶಿವಿಶ್ವೇಶ್ವರ ದೇವಸ್ಥಾನ ಇದೆಯಷ್ಟೆ. ಉತ್ತರಕ್ಕೆ ಹೋಗುತ್ತ ಮೊದಲು ಎರಡು ಸ್ಥಳಗಳು ನಮಗೆ ಮೊದಲಿಂದಲೂ ಹೆಸರಾದವು. ಎಡಕ್ಕೆ ಸುಗ್ರೀವನ ಗುಡಿ; ಬಲಕ್ಕೆ ಶ್ರೀನಿವಾಸ ಮಂದಿರ (?). ಸುಗ್ರೀವನಿಗೆ ಒಂದು ಗುಡಿ ಇದೆ ಎಂಬುದು ಅಚ್ಚರಿ ತರುವಂಥ ಸಂಗತಿ ಬೆಂಗಳೂರಲ್ಲಿ. ಆಂಜನೇಯ ಬಲಭೀಮನೆಂದು ಪ್ರಖ್ಯಾತನಾದವನು. ರಾಮಾಯಣದಲ್ಲಿ ಸುಗ್ರೀವನ ದೂತನಾಗಿ ಬಂದು ರಾಮನನ್ನು ಕಂಡ ಮೊದಲ ಕ್ಷಣದಿಂದಲೂ ರಾಮನಿಗೆ ಹೇಗೆ ಹನುಮಂತನಲ್ಲಿ ನಂಬಿಕೆ ಬಂದಿತೊ. ಹನುಮಂತನ ಮೇಲೆ ರಾಮನ ಪ್ರಭಾವ ಹೆಚ್ಚು ಉಂಟಾಗಿ, ಮುಂದೆ ನಡೆಯಲಿರುವ ರಾಮಾಯಣದ ಕಾರ್ಯಗಳಿಗೆಲ್ಲ ಈ ವಾಯುಪುತ್ರನಿಗೆ ಹಿರಿಮೆ ಬೆಳೆಯಿತು. ಕಿಷ್ಕಿಂಧೆಯ ಇತರ ಎಲ್ಲ ವಾನರರಿಗಿಂತಲೂ ಹೆಚ್ಚು ಕೀರ್ತಿ ಹನುಮಂತನಿಗೆ ಸಲ್ಲುತ್ತದೆ. ವಾಲಿ, ಸುಗ್ರೀವ, ಜಾಂಬವಾನ್, ನಳ, ನೀಲ, ಅಂಗದ ಅವರದು ಒಂದು ತೊಟ್ಟು. ಸುಗ್ರೀವನಿಗೆ ಹನುಮಂತನ ಮೇಲಿದ್ದ ವಿಶ್ವಾಸ ಎಷ್ಟು ದೊಡ್ಡದೆಂಬುದನ್ನು ಸೀತೆಯನ್ನು ಹುಡುಕುವ ಕಾರ್ಯಭಾರವನ್ನು

ಅವನಿಗೊಪ್ಪಿಸುವ ಸುಗ್ರೀವನ ಮಾತುಗಳು ಕಾಣಿಸುತ್ತವೆ. ಸಮುದ್ರಲಂಘನ ಮಾಡಿ ಸೀತೆಯನ್ನು ಕಂಡು ಉಂಗುರವನ್ನು ಕೊಟ್ಟು ಚೂಡಾಮಣಿಯನ್ನು ತಂದವನು ಅವನು. ರಾವಣನನ್ನು ಸೋಲಿಸಿದ ರಾಮನ ಜಯದ ವಾರ್ತೆಯನ್ನು ತಂದವನು ಅವನು. ಪುನಃ ಅಯೋಧ್ಯೆಯಲ್ಲಿ ರಾಮಪಟ್ಟಾಭಿಷೇಕವಾಗುವಾಗ ಸೀತೆಯಿಂದ ನೆಚ್ಚಿನ ಬಹುಮಾನವನ್ನು ಪಡೆದವನು ಅವನು. ಚಿರಂಜೀವಿ. ಬಹುಶಃ ಮುಂದಿನ ಬ್ರಹ್ಮಪಟ್ಟಕ್ಕೆ ಕಾದಿರುವವನು. ಆದ್ದರಿಂದಲೇ ಭಾರತೀರಮಣನೆಂದು ಅವನಿಗೆ ಕೀರ್ತಿ ಸಂದಿರುವಂತೆ ಕಾಣುತ್ತದೆ. ಯಾವ ಹಳ್ಳಿಯಲ್ಲಾಗಲಿ, ಜಾನಪದ ದೇವತೆಯಾದ ಮಾರಿಯ ಒಂದು ಗುಡಿಯಿರುವ ಹಾಗೆ, ಇತಿಹಾಸ ಕಾಲದ ದೇವತೆಯಾಗಿ ಆಂಜನೇಯನ ಗುಡಿ ಇದ್ದೇ ಇರುತ್ತದೆ. ಹಾಗೇ ಭರತನ ಗುಡಿಯೂ ಅಪರೂಪ. ವಾನರರಲ್ಲಿ ಸುಗ್ರೀವನ ಗುಡಿಯೂ ಅಪರೂಪ. ಈ ಅಪರೂಪದ ಗುಡಿ ಬೆಂಗಳೂರಿನ ವಿಶೇಷ. ಆ ಗುಡಿಯ ಬಗೆಗೆ ನನಗೆ ಇನ್ನೂ ಹೆಚ್ಚಿನ ಸಂಗತಿ ತಿಳಿದಿಲ್ಲವಾದರೂ ನಮಗೆ ಮೊದಲಿನಿಂದಲೂ ಹುರಿಗಾಳು ದೊರೆಯುತ್ತಿದ್ದುದು ಆ ಗುಡಿಯಲ್ಲಿ ವಾಸವಾಗಿರುತ್ತಿದ್ದ ಒಂದು ಮನೆಯವರಿಂದ. ಆಮೇಲಿನ ಕಾಲದಲ್ಲಿ ಅದಕ್ಕಿಂತ ಉತ್ತಮವಾದ ಹುರಿಗಾಳು ನಮ್ಮ ಪೇಟೆಯಲ್ಲಿಯೇ ಸಿಕ್ಕಿದರೂ ಸುಗ್ರೀವನ ಗುಡಿಯ ಕಾಳು ಆಗ ಬೆಂಗಳೂರಿಗೆಲ್ಲ ಹೆಸರಾದುದಾಗಿತ್ತು. ಇತ್ತ ಶ್ರೀನಿವಾಸ ಮಂದಿರದಲ್ಲಿ ಶ್ರೀವೈಷ್ಣವರ ಪೂಜೆ ಪುರಸ್ಕಾರ ವಿಶೇಷ. ಅಲ್ಲಿ ಶ್ರೀವೈಷ್ಣವ ಸಂನ್ಯಾಸಿ ಒಬ್ಬರು ಇರುತ್ತಿದ್ದರು. ಆ ದೇವಸ್ಥಾನಕ್ಕೆ ಸಂಬಂಧಿಸಿದಂತೆ ಒಬ್ಬ ಶ್ರೀಮಂತ ಮಹಿಳೆ ಅಲ್ಲಿನ ಕಾರ್ಯಭಾರವನ್ನೆಲ್ಲ ನೋಡಿ ಕೊಳ್ಳುತ್ತಿದ್ದರು. ರಾಮನವಮಿಯ ಕಾಲದಲ್ಲಿ 9-10 ದಿನ ತುಳಸೀತೋಟದ ದೇವರ ಉತ್ಸವ ಬಂದಾಗ, ಅಲ್ಲಿ ಮೆರವಣಿಗೆಯನ್ನು ನಿಲ್ಲಿಸಿ ಹೆಚ್ಚಿನ ಪೂಜೆ ಸಲ್ಲಿಸುತ್ತಿದ್ದರು. ಟಾಗೋರರ ಮೇಲೆ ಪುಷ್ಪವೃಷ್ಟಿ ಕರೆಸಿದ ಆ ವಿದ್ಯುಚ್ಛಕ್ತಿ ಯಂತ್ರದಿಂದ – ಅದೇ ಇಲ್ಲಿಗೆ ಬಂತೊ ಇದು ಬೇರೆಯದೊ ನಾ ಕಾಣೆ – ದೇವರ ಮೇಲೆ ಇಲ್ಲಿಯೂ ಹೂಮಳೆ ಸುರಿಯುವ ಏರ್ಪಾಡಿರುತ್ತಿತ್ತು.

ಇದು ದೇವರ ಕೈಂಕರ್ಯವಾದರೆ, ಮಂದಿರಕ್ಕೆ ಸಂಬಂಧಪಟ್ಟಂತೆ ಬಹುಕಾಲದಿಂದ ಒಂದು ವಾಚನಾಲಯವಿರುತ್ತಿತ್ತು. ಅನೇಕ ದಿನಪತ್ರಿಕೆಗಳೂ ವಾರ, ಮಾಸ ಪತ್ರಿಕೆಗಳೂ ಅಲ್ಲಿಗೆ ಬರುತ್ತಿದ್ದುದರಿಂದ ಅನೇಕರು ಬೆಳಿಗ್ಗೆ, ಸಂಜೆ ಅಲ್ಲಿಗೆ ಬಂದು ಪತ್ರಿಕೆಗಳನ್ನು ಓದುವುದು ರೂಢಿಯಾಗಿತ್ತು. ಸ್ವಂತವಾಗಿ ಪತ್ರಿಕೆ ಕೊಂಡು ಓದುವ ಶಕ್ತಿ ನಮ್ಮ ಜನರಲ್ಲಿ ಮೊದಲಿಂದಲೂ ಇಲ್ಲ. ಬಹುಶಃ ಇಷ್ಟವೂ ಇಲ್ಲವೇನೊ. ಕಾರಣ ಏನೇ ಇರಲಿ, ಅಭ್ಯಾಸವಿಲ್ಲ. ಒಂದು ಕಡೆ ಆರ್ಕಾಟ್ ಶ್ರೀನಿವಾಸಾಚಾರ್ ರಸ್ತೆಯ ಸೆಂಟ್ರಲ್ ಮುಸ್ಲಿಂಸ್ ಅಸೋಸಿಯೇಷನ್, ಈ ಕಡೆಯ ಶ್ರೀನಿವಾಸ ಮಂದಿರ, ಊರ ಹೊರಗಿದ್ದ ಸಾರ್ವಜನಿಕ ಪಬ್ಲಿಕ್ ಲೈಬ್ರರಿ – ಈ ಮೂರೇ ಕಡೆ ಇಂಥ ಅವಕಾಶ ದೊರೆಯುತ್ತಿತ್ತು. ಹಿಂದಿನ ಕಾಲದಲ್ಲಿ ಮಾಸ ಪತ್ರಿಕೆಗಳಲ್ಲಿ ಪ್ರಖ್ಯಾತವಾದುವು ಮಾಡರ್ನ್ ರೆವ್ಯೂ, ಇಂಡಿಯನ್ ರೆವ್ಯೂ, ಹಿಂದೂಸ್ತಾನ್ ರೆವ್ಯೂ ಮುಂತಾದವು. ಮಾಡರ್ನ್ ರೆವ್ಯೂನಲ್ಲಿ



ರವೀಂದ್ರರ ಬರವಣಿಗೆ, ಬಂಗಾಳದ ಜನರ ಬಗೆಬಗೆಯ ವಿದ್ಯಾಪ್ರಕರ್ಷವನ್ನು ತೋರಿಸುವ ಬರಹಗಳು ಬರುತ್ತಿದ್ದವು. ರಮಾನಂದ ಚಟರ್ಜಿ ಅವರ ಪ್ರಭಾವ ಬಂಗಾಳಿ ಒಂದೇ ಅಲ್ಲದೆ ಆಳುವ ಬ್ರಿಟಿಷ್ ಅರಸರ ಕಣ್ಣಿಗೂ ಬಿದ್ದು ಅಸುಖವನ್ನುಂಟು ಮಾಡುವಂತೆ ಇತ್ತು. ಬಹುಶಃ ಆ ಕಾಲದ ಮಾಡರ್ನ್ ರೆವ್ಯೂ ಸಮಕ್ಕೆ ವೈವಿಧ್ಯದಲ್ಲಿಯೂ ಗುಣದಲ್ಲಿಯೂ ಲೋಕವಿಸ್ತಾರವಾದ ತಿಳಿವಳಿಕೆಯನ್ನು ಹರಡುವುದರಲ್ಲಿಯೂ ಸರಿದೂಗುವ ಪತ್ರಿಕೆಗಳು ಆಗ ಬೇರೆ ಇರಲಿಲ್ಲ. ಮುಖಪುಟದಲ್ಲಿ ತಪ್ಪದೆ ಬರುತ್ತಿದ್ದ ಒಂದು ವರ್ಣಚಿತ್ರ ಸಾಮಾನ್ಯವಾಗಿ ಬಂಗಾಳದ ಪ್ರಸಿದ್ಧ ಚಿತ್ರಗಾರರಾದ ಅಬನೀಂದ್ರ ನಾಥ ಟಾಗೋರ್, ನಂದಲಾಲ್ ಬಸು, ಉಕ್ಕಿಲ್ ರೇ, ಮುಂತಾದವರ ಮತ್ತು ತತ್ಸಮರಾದ ಭರತಖಂಡದ ಬೇರೆ ಭಾಗದ ಚಿತ್ರಕಾರರು ಚುಗುತಾಯ್ ಮುಂತಾದವರ ಚಿತ್ರಗಳಿರುತ್ತಿದ್ದವು. ಕನ್ನಡಿಗನಾದ ನನಗೆ ಅದರ ಓದಿನಿಂದ ಆ ಜನರ ಹೆಸರುಗಳ ಆಕರ್ಷಣೆಯ ಜೊತೆಗೆ ರಾಷ್ಟ್ರಸ್ವರೂಪ ಜ್ಞಾನವನ್ನು ಪಡೆದುಕೊಂಡು ಸ್ವದೇಶೀ ಉತ್ಸಾಹ ಉಂಟಾಗುವುದಕ್ಕೆ ಅದು ಮಾಡಿದ ಕಾರ್ಯವೂ ಬಹು ದೊಡ್ಡದಾಗಿ ಕಾಣಿಸಿತು. ಇತರ ಭಾಗಗಳಿಗಿಂತ ಬಂಗಾಳ ಮೊದಲು ಎಚ್ಚರಗೊಂಡಿತೇನೊ. ಕಲ್ಕತ್ತವೇ ಈ ಶತಮಾನದ ಮೊದಲ ದಶಕ ಮುಗಿಯುವವರೆಗೂ ರಾಜಧಾನಿಯಾಗಿದ್ದುದು ಇದಕ್ಕೆ ಶಕ್ತಿ ಕೊಟ್ಟಿತ್ತು. ಇಂಡಿಯನ್ ರೆವ್ಯೂ ಅನ್ನು ಮದರಾಸಿನಲ್ಲಿ ಜಿ. ಎ. ನಟೇಶನ್ ಎಂಬವರು ನಡಸುತ್ತಿದ್ದರು. ಮಾಡರ್ನ್ ರೆವ್ಯೂ ಅಷ್ಟಿಲ್ಲದಿದ್ದರೂ ಭರತಖಂಡದ ರಾಜಕೀಯ ಮತ್ತು ವ್ಯವಹಾರ ಜೀವನದ ಅನೇಕ ಸಂಗತಿಗಳನ್ನು ಪ್ರಕಟಿಸುವುದರ ಜೊತೆಗೆ ನಾಡಿನ ನಾಯಕರು ಅನೇಕರ ಜೀವನ ಚರಿತ್ರೆಗಳನ್ನು ಆ ಪತ್ರಿಕೆ ಮಾಡಿಕೊಡುತ್ತಿತ್ತು. ಸುಮಾರು 1915ರಲ್ಲಿ ಮಾಸ್ತಿಯವರು ಇಂಗ್ಲಿಷಿನಲ್ಲಿ ಬರೆದ The Home Life of a Kannada Poet ಎಂಬ ಒಂದು ಲೇಖನ – ರಾಮಾಶ್ವಮೇಧದ ಕರ್ತೃವಾದ ಮುದ್ದಣನ ಜೀವನ ಕುರಿತು ಇಂಗ್ಲಿಷಿನಲ್ಲಿ ಬರೆದ ಮೊದಲ ಪರಿಚಯಾತ್ಮಕ ಚಿತ್ರಣ – ಅದರಲ್ಲಿ ಪ್ರಕಟವಾಗಿತ್ತು. ನನ್ನ ನೆನಪಿನಲ್ಲಿ ಶ್ರೀನಿವಾಸ ಮಂದಿರದ ವಾಚನಾಲಯ, ಇಂಡಿಯನ್ ರೆವ್ಯೂನ ಈ ಬರವಣಿಗೆಗೆ ಅಚಲವಾಗಿ ನಿಂತಿದೆ.

* * *

ಅಲ್ಲಿಂದ ಮುಂದೆ ಹೋದರೆ, ಬಹುಕಾಲ ಹುಡುಗರಾಗಿದ್ದ ನಮಗೆ ಪ್ರಿಯ ವಾಗಿದ್ದುದು ಬಳೇಪೇಟೆಯ ಆಂಜನಪ್ಪ ಅಣ್ಣಯ್ಯಪ್ಪ ಹೊಟೇಲು. ಅವರದೇ ಆದ ಇನ್ನೊಂದು ಉತ್ತರ ಕಾಲದಲ್ಲಿ ಸ್ಥಾಪಿತವಾದರೂ ಮೂಲ ಅದು. ಬಳೇಪೇಟೆಗೆ ಮುಖ್ಯವಾಗಿ ಅವರ ಸಿಹಿ ಖಾರದ ತಿಂಡಿಗಳು ಮಾರಾಟವಾಗುತ್ತಿತ್ತು. ಪ್ರಖ್ಯಾತವಾದ್ದು ಅವರ ಖಾರದ ಅವಲಕ್ಕಿ, ಪಕೋಡಾ ಮತ್ತು ಜಿಲೇಬಿ. ಉತ್ತರಕ್ಕೆ-ಎಂದರೆ, ಪಕ್ಕದಲ್ಲಿಯೇ ರಂಗಸ್ವಾಮಿ ದೇವಸ್ಥಾನಕ್ಕೆ ತಿರುಗುವ ರಸ್ತೆಯಲ್ಲಿ – ಮೊದಲಿಗೆ ಸಿಕ್ಕುತ್ತಿದ್ದುದು ಅವರ ಕಾಫಿ ಹೊಟೇಲು. ಒಳಗೆ ದೋಸೆ, ಪೂರಿ ಮಾಡುತ್ತಿದ್ದರು. ಮೂಲೆಯಲ್ಲಿ ದೊಡ್ಡ

ಬಾಣಲೆ ಇತ್ತು. ಕರೆಯುತ್ತಿದ್ದ ಪೂರಿ ಆಗುತ್ತಾಗುತ್ತಾ ಸಣ್ಣ ವಯಸ್ಸಿನ ಮತ್ತು ದೊಡ್ಡ ಗಿರಾಕಿಗಳು 3-4 ಜನ ಒಟ್ಟಿಗೆ ಹೋಗಿ ಒಂದೊಂದು ಸಲ ಹಾಕಿದ್ದನ್ನೆಲ್ಲ ತಮಗೇ ಹಾಕಿಸಿಕೊಳ್ಳುತ್ತಿದ್ದುದು ಲಕ್ಷಣ. ಅವರ ಮಸಾಲೆ ದೋಸೆ, ಉಡುಪಿ ಹೋಟೇಲಿನ ದೋಸೆಯಂತಲ್ಲ. ಉಡುಪಿಯವರದು ಹೆಚ್ಚು ನಯವಾದ, ನಾಜೂಕಾದ, ಒಂದು ಶ್ರೀಮಂತಿಕೆಯುಳ್ಳ ದೋಸೆ. ಇವರದು ಸಾರ್ವಜನಿಕ ಧಡುವತಿಯದು. ದೋಸೆಯಲ್ಲಿ ತುಂಬುತ್ತಿದ್ದ ಪಲ್ಯದ ತುಂಬಾ ಈರುಳ್ಳಿ. ಹಿಟ್ಟಿಗೆ ಮೈದಾ ಸೇರುತ್ತಿತ್ತೊ ಏನೊ. ಬೇರೆ ಕಡೆಯಷ್ಟಿಲ್ಲ. ಆದರೂ ಕೆಲವರಿಗೆ ಆ ಅನುಮಾನವಿತ್ತು. ಬಳೇಪೇಟೆಯ ಈ ಹೋಟೇಲ್ ರುಚಿ ಪ್ರೀತಿ ಬಹುಕಾಲ ನಡೆಯಿತು. ರಸ್ತೆಯಲ್ಲಿ ಹಾಗೆಯೇ ಮುಂದುವರಿದರೆ, ಬಳೇಪೇಟೆ ಮುಗಿಯುವ ಹೊತ್ತಿಗೆ ಎಡಕ್ಕೆ ನರಸಿಂಹಸ್ವಾಮಿಯ ದೇವಸ್ಥಾನ ಪ್ರಖ್ಯಾತವಾದುದು. ಅದರ ಎದುರಿಗೊಂದು ಅರಳಿಕಟ್ಟೆ. ಆ ರಸ್ತೆಯಲ್ಲಿಯೇ ಸ್ವಲ್ಪ ಮುಂದಕ್ಕೆ ರತ್ನಾವಳಿ ಕಂಪನಿಯ ಎ. ವಿ. ವರದಾಚಾರ್ಯರು ಬೆಂಗಳೂರಿಗೆ ಬಂದಾಗ ಒಂದೆರಡು ಸಲ ಉಳಿದುಕೊಳ್ಳುತ್ತಿದ್ದ ಮನೆ. ಅಲ್ಲಿಯೇ ನನ್ನ ಇಂಗ್ಲಿಷ್ ಮೇಷ್ಟ್ರಾದ ಎಲ್. ಶೇಷಗಿರಿ ರಾವ್ ಅವರ ಮನೆ. ಪರೀಕ್ಷೆಯಲ್ಲಿ ಪಾಸಾಗುವುದಕ್ಕೆ ಸಹಾಯವಾಗುವಂತೆ ಅವರು ಅನೇಕ ವಿದ್ಯಾರ್ಥಿಗಳಿಗೆ ಪಾಠ ಹೇಳುತ್ತಿದ್ದರಾಗಿ, ಅದು ವಿದ್ಯಾರ್ಥಿಪ್ರಿಯವಾಗಿತ್ತು. ಮುಂದಿನ ಕಾಲದಲ್ಲಿ ಅದೇ ಬೀದಿಯಲ್ಲಿ ಎದುರು ಸಾಲಲ್ಲಿ ಕೀರ್ತನಕೇಸರಿ ಶಿವಮೂರ್ತಿ ಶಾಸ್ತ್ರಿಗಳು ತಮ್ಮ ಮನೆ, ಅಚ್ಚುಕೂಟಗಳನ್ನು, 'ಶರಣ ಸಾಹಿತ್ಯ' ಪತ್ರಿಕೆಯ ಕಚೇರಿಯನ್ನು ಮಾಡಿಕೊಂಡರೆಂದು ನೆನಪು. ಈಗ ಬಹುಕಾಲದಿಂದಲೂ ಅಶ್ವತ್ಥ ಕಟ್ಟೆಯ ಬಳಿಯಲ್ಲಿ ಹಳೆಯ ಪುಸ್ತಕಗಳನ್ನು ಮಾರಾಟ ಮಾಡುವ ಅಂಗಡಿಗಳಿವೆ.

ನರಸಿಂಹಸ್ವಾಮಿ ದೇವಸ್ಥಾನದ ಪಕ್ಕದಲ್ಲಿಯೇ ಉಪ್ಪಾರಪೇಟೆ ಪೊಲೀಸ್ ಸ್ಟೇಷನ್. ಅದರ ಪಕ್ಕದಲ್ಲಿ ಅಶ್ವತ್ಥನಾರಾಯಣ ರಾವ್ ಎಂಬವರು ಮಕ್ಕಳ ಪುಸ್ತಕದ ಅಂಗಡಿ ನಡಸುತ್ತಿದ್ದರು. ಅವರು ಥಿಯೋಸಾಫಿಕಲ್ ಸೊಸೈಟಿಯ ಸದಸ್ಯರಾಗಿಯೂ, ಇಲ್ಲಿನ ಕಲಾಜೀವನದಲ್ಲಿ ಜಿ.ವೆಂಕಟಾಚಲಂ ಅವರೊಡನೆ ಸಹಕರಿಸುವವರಾಗಿಯೂ, ಇದೆರಡರ ಜೊತೆಗೆ ಸಂಬಂಧಿಸಿದಂತೆ ಕಮಲಾದೇವಿ ಚಟ್ಟೋಪಾಧ್ಯಾಯ ಮುಂತಾದ ಮಾನ್ಯ ಮಹಿಳೆಯರೊಡನೆ ಕಲಾಕೌಶಲಗಳಿಗೆ ತೊಡಗಿದ್ದ ಕಾರ್ಯಗಳಲ್ಲಿಯೂ ತೊಡಗಿದ್ದರು. ನೆಹರೂ ಅವರ ಆತ್ಮಕಥೆ ಮೊದಲು ಬಂದಾಗ ಅದನ್ನು ಕನ್ನಡಿಸುವುದರಲ್ಲಿ ನಾಲ್ಕಾರು ಜನರನ್ನು ಕಟ್ಟಿಕೊಂಡು ಬಹುಬೇಗ ಕನ್ನಡಕ್ಕೆ ಆ ಪುಸ್ತಕವನ್ನು ತಂದರು. ಅವರು ಪ್ರಕಟಿಸುತ್ತಿದ್ದ ಮಕ್ಕಳ ಪುಸ್ತಕ ಚೆನ್ನಾಗಿ ಅಚ್ಚಾಗಿ ಸರಕಾರದ ಮನ್ನಣೆ ಪಡೆಯಿತು. ಸಾಮರ್‌ಸೆಟ್ ಮಾಮ್ ಭರತಖಂಡಕ್ಕೆ ಬಂದು ಮೈಸೂರಿಗೂ ಭೇಟಿ ಕೊಟ್ಟ ಸಮಯದಲ್ಲಿ ಕನ್ನಡಿಗರ ಪರವಾಗಿ ರಾಯರು ಅವರನ್ನು ಭೇಟಿ ಮಾಡಿದ್ದರು. ಹಾಗೆಯೇ ಪೋಲೆಂಡಿನ ಮೋರಿಸ್ ಫ್ರೀಡ್‌ಮನ್ ಮುಂತಾದವರು ಇಲ್ಲಿ ಬಂದು ಇಲ್ಲಿನ ಜನರೊಡನೆ ಬೆರೆದು ಕಾರ್ಯಕಲಾಪಗಳನ್ನು ಬೆಳಸುವುದರಲ್ಲಿ ಅವರಿಗೆ ನೆರವಾದರು.



ಇಂದು ಮೈಸೂರು ರೋಡಿನಲ್ಲಿರುವ ಬೇಕ್‌ಲೈಟ್ ಫ್ಯಾಕ್ಟರಿ ಮುಂತಾದ್ದರ ಹುಟ್ಟಿಗೆ ಫ್ರೀಡ್‌ಮನ್ ಕಾರಣರಾಗಿದ್ದರು. ನಾನೊಂದು ಸಲ ಫ್ರೀಡ್‌ಮನ್‌ರನ್ನು ಕೇಳಿದೆ: "ಸಣ್ಣದಾಗಿ ಅಗ್ಗವಾದ ಬೆಲೆಗೆ ಸಿಗುವಂತಹ ವಿದ್ಯುಚ್ಛಕ್ತಿ ಚಾಲಿತವಾದ ನೇಗಿಲು, ಟ್ರ್ಯಾಕ್ಟರ್ ಮುಂತಾದವನ್ನು ಮಾಡುವುದಕ್ಕೆ ಆಗುವುದಿಲ್ಲವೆ?" ಎಂದು. ತಕ್ಷಣ ಉತ್ತರ ಬಂದಿತು - "ನಿಮ್ಮ ರೈತರ ಉಪಪತ್ತಿ ಕಡಮೆ. ವ್ಯವಸಾಯದ ಭೂಮಿಯ ಪರಿಮಿತಿ ತುಂಬಾ ಹೆಚ್ಚು. ಬಹುಸಣ್ಣ ತಾಕುಗಳನ್ನು ಉಳ್ಳವರು ರೈತರು, ಯಜಮಾನರು. ಯಾವ ಯಂತ್ರಚಾಲಿತವಾದ ಉಪಕರಣಕ್ಕೂ ವಿಸ್ತಾರವಾದ ಭೂಭಾಗ ಬೇಕು. ವರ್ಷವೆಲ್ಲ ಅಂಥವಕ್ಕೆ ಕೆಲಸವಿರುವುದಿಲ್ಲ. ನಡಸುವವರು ಕುಶಲರಾಗಿರಬೇಕು. ಅವರಿಗೆ ಸಂಬಳ ಕೊಡುವುದು ಇವರ ಶಕ್ತಿಗೆ ಮೀರಿದ್ದು. ಯಂತ್ರಚಾಲನೆಗೆ ಬೇಕಾದ ಪೆಟ್ರೋಲ್ ಮುಂತಾದ ಇಂಧನಗಳನ್ನು ಒದಗಿಸುವ ಖರ್ಚು ಅನೇಕರ ಶಕ್ತಿಗೆ ಮೀರಿದುದು" ಎಂದರು. ಪ್ರಶ್ನೆ ಕೇಳಿದ ನನಗೆ ನನ್ನ ಅಜ್ಞಾನ ಎಷ್ಟೆಂದು ಅರಿವಾಯಿತು. ಇವೆರಡಕ್ಕೂ ಎದುರಿಗೆ ಬೆಂಗಳೂರಿನ ಸಾರ್ವಜನಿಕ ಜೀವನದಲ್ಲಿ ಪರೋಕ್ಷವಾಗಿ ಕಾರ್ಯಮಾಡಿ ಮೊದಲು ಸುಲ್ತಾನ್‌ಪೇಟೆಯಲ್ಲಿ ಶಾಮಣ್ಣನವರ ಬಂಗಲೆಯಲ್ಲಿ ಒಂದು ವ್ಯಾಪಾರಿ ಸಂಸ್ಥೆಯನ್ನು ನಡಸುತ್ತಿದ್ದ ಶ್ರೀ ಬಿ. ವಿ. ಸುಬ್ಬರಾಯಪ್ಪ ಎಂಬವರು ತುಂಬಾ ಬುದ್ಧಿವಂತರು, ಉದ್ಯೋಗ ಸಾಹಸಿಗಳು. ಅವರು ದೊಡ್ಡದಾದ ಒಂದು ಬಂಗಲೆ ಕಟ್ಟಿ ಆ ಸಂಸ್ಥೆಯನ್ನು ನಡಸುತ್ತಿದ್ದರು. ಸುಮಾರು 1920ರಲ್ಲಿ ಬೊಂಬಾಯಿಂದ ಗೋದ್ರೆಜ್ ಮುಂತಾದವರು, ಇಲ್ಲಿನ ವಿದ್ಯಾ ಇಲಾಖೆಗೆ ಸಂಬಂಧಿಸಿದ ಶ್ರೀರಂಗಮ್ಮನವರು, ಲಾಯರ್ ಬೇಲೂರು ಶ್ರೀನಿವಾಸಯ್ಯಂಗಾರ್ ಮುಂತಾದವರೆಲ್ಲ ಬಂದಿದ್ದರು. ಆ ದಿನದ ವಿಶೇಷ ಅವರಿಗೆಲ್ಲ ಏರ್ಪಡಿಸಿದ್ದ ಮೈಸೂರು ಕಡೆಯ ಭೋಜನ ಕೂಟ. ಎಲ್ಲಿಂದ ಅಡಿಗೆಯವರನ್ನು ಕರೆಸಿದ್ದರೊ – ಆ ದಿನದ ಭೋಜನದ ಪ್ರತಿಯೊಂದು ಪದಾರ್ಥವೂ ಪರಿಷ್ಕಾರವಾಗಿ ತಯಾರಾಗಿತ್ತು. ಮುಖ್ಯವಾಗಿ ದ್ರಾಕ್ಷಿಗೊಜ್ಜು ಎಂಬ ಒಂದು ಪದಾರ್ಥ. ಬಹುಶಃ ಅಲ್ಲಿ ಒಂದೇ ಸಲ ನಾನು ಅಂಥುದನ್ನು ನೋಡಿದ್ದು. ಯಾವ ಉತ್ತಮ ಜಾಮೂನಿಗೆ ಮಾಡಿದ ಪಾಕವೂ ಅಷ್ಟು ತಿಳಿಯಾಗಿ ರುಚಿಯಾಗಿ ಇರುವುದಿಲ್ಲ. ಆ ಗೊಜ್ಜಿಗೆ ಹಾಕಿದ ಹುಳಿ ದ್ರಾಕ್ಷಿಯನ್ನು ಹದವಾಗಿ ತುಪ್ಪದಲ್ಲಿ ಕರೆದಿದ್ದುದು ಇನ್ನೆಲ್ಲಿಯೂ ನಾನು ಕಂಡುದಿಲ್ಲ. ನಮ್ಮ ಸಂಸ್ಥಾನದಲ್ಲಿ ಪ್ರಖ್ಯಾತವಾದ ಒಂದು ಕಲಸನ್ನ ಬಿಸಿ ನಿಂಬೆಹುಳಿ ಚಿತ್ರಾನ್ನ ಎಂಬುದು. ಬಹು ಸಣ್ಣದಾದ ಆರಿಸಿದ ಅಕ್ಕಿಯಿಂದ - ಜೀರಿಗೆ ಸಣ್ಣ ಎಂದೊ, ಪರಿಮಳ ಸಣ್ಣ ಎಂದೊ ಹೆಸರಾದದ್ದು – ಮಾಡಿದ್ದು. ಒಂದೊಂದು ಅಗಳೂ ಹದವಾಗಿ ಬೆಂದು ಪ್ರತ್ಯೇಕವಾಗಿರುವಂತಿದ್ದು, ಎಷ್ಟು ಬೇಕೊ ಅಷ್ಟು - ಹೆಚ್ಚಿಲ್ಲ, ಕಡಮೆ ಇಲ್ಲ - ನಿಂಬೆಹುಳಿ ಬಿದ್ದು, ಹಸಿಮೆಣಸಿನಕಾಯಿ, ಒಣಕೊಬ್ಬರಿ ತುರಿ, ಗೋಡಂಬಿ ಬಿದ್ದು ಬಿಸಿಬಿಸಿಯಾಗಿ ಇದ್ದು – ಈ ಪ್ರತಿಯೊಂದೂ ಆ ಪದಾರ್ಥದ ಮಹಾಲಕ್ಷಣ – ಅ ದಿನ ಬೊಂಬಾಯಿಂದ ಬಂದವರಿಗೆ ತುಂಬಾ ಸೊಗಸಿತು. ಊಟ ಆದ ಮೇಲೆ ಹಣ್ಣುಗಳ ಏರ್ಪಾಡು.

ಇದಾದ ಮೇಲೆ ಮೈಸೂರಿಂದ ಈ ಸಮಾರಂಭಕ್ಕಾಗಿ ಕರೆಸಿದ್ದ ವೈಣಿಕ ಶಿಖಾಮಣಿ ಶೇಷಣ್ಣನವರ ವೀಣಾವಾದನ. ಅನನ್ಯಸಾಧಾರಣವಾದ ಒಂದು ಅನುಭವವನ್ನು ನನಗೆ ಈ ಸನ್ನಿವೇಶ ತಂದುಕೊಟ್ಟಿತು. ಆ ಬಿಲ್ಡಿಂಗ್‌ನಲ್ಲಿಯೇ ಕೆಳಗೆ ಡಾ. ಶಿವರಾಂ ಅವರು ಮೊದಲಿಗೆ ತಮ್ಮ ಔಷಧ ಶಾಲೆಯನ್ನು ತೆರೆದಿದ್ದು.

ಸುಮಾರು 1917 ರಿಂದ 20ರವರೆಗೆ (1919) ಎಂದು ಕಾಣುತ್ತದೆ – ಕಟ್ಟಿದುದು ಇಂದಿನ ಮೆಜೆಸ್ಟಿಕ್ ಥಿಯೇಟರ್. ಈಗಿನ ಆಕೃತಿ ಬೇರೆಯಾಗಿದೆ. ಬೆಂಗಳೂರಲ್ಲಿ ಭಾಷಣ ಉಪನ್ಯಾಸಾದಿಗಳಿಗೆ ಹೆಚ್ಚು ಸಂಖ್ಯೆಯ ಸಭಾ ಮಂದಿರಗಳಿರಲಿಲ್ಲ. ಅದು ತೆರೆದ ಕಾಲದಲ್ಲಿ ಪ್ರಖ್ಯಾತ ವಾಗ್ಮಿಗಳಾದ ವಿ. ಸತ್ಯಮೂರ್ತಿಯವರು ದೇಶದ ಸ್ವಾತಂತ್ರ್ಯವನ್ನು ಕುರಿತೊ ಏನೊ ಭಾಷಣ ಮಾಡಿದರು. ಅದರ ಅಧ್ಯಕ್ಷ ಪೀಠದಲ್ಲಿ ಸಿ. ಆರ್. ರೆಡ್ಡಿ ಇದ್ದರು. ಇವರಿಬ್ಬರ ಸ್ವಭಾವ, ಭಾಷಣ ರೀತಿ, ದೃಷ್ಟಿಭಿನ್ನತೆ ವಿಶೇಷ ವಾದುವು. ಸತ್ಯಮೂರ್ತಿಗಳವರ ಭಾಷಣ ಬಹಳ ಚೆನ್ನಾಗಿತ್ತು. ಅಧ್ಯಕ್ಷ ಭಾಷಣದಲ್ಲಿ ರೆಡ್ಡಿಯವರು ಅವರನ್ನು ಪ್ರಶಂಸೆಮಾಡಿ ಇಂಥ ಉಪನ್ಯಾಸಕರಿಂದ ನಮ್ಮ ಜನಕ್ಕೆ ಸ್ವದೇಶಿ ಸ್ಫೂರ್ತಿ ದೊರೆಯುತ್ತದೆ ಎಂದವರೇ ಕಾಂಗ್ರೆಸ್ ಪಂಥಕ್ಕೆ ತಾವು ಸೇರಿದವರಲ್ಲವಾದ್ದರಿಂದ ಒಂದೆರಡು ಬಿರುಕು ಮಾತುಗಳನ್ನು ಆಡಿದ್ದರು. ಸತ್ಯಮೂರ್ತಿ ಯವರು ಭಾಷಣದಲ್ಲಿ ಭಾರತೀಯ ಸಂಸ್ಕೃತಿಯ ಪ್ರಾಚೀನತೆ, ಹಿರಿಮೆಯ ಅತಿಶಯತೆ ಮುಂತಾದುವನ್ನು ಕುರಿತು ಮಾತುಗಳನ್ನು ಆಡಿದ್ದರು. ಅದನ್ನು ಕುರಿತು ರೆಡ್ಡಿಯವರು 'ಸತ್ಯಮೂರ್ತಿಯವರ ಮಾತನ್ನೆಲ್ಲ ಒಪ್ಪುತ್ತೇನೆ. ಇಂದು ಅಂತರ್ರಾಷ್ಟ್ರೀಯ ಪ್ರಭಾವ ಪಡೆದ ರಾಷ್ಟ್ರಗಳ ಪೂರ್ವಿಕರು ಗುಹೆಗಳಲ್ಲಿಯೊ ಕಾಡುಗಳಲ್ಲಿಯೊ ಮರದ ಮೇಲೆಯೊ ಇದ್ದು ಅನಾಗರಿಕರಾಗಿದ್ದಾಗ, ನಮ್ಮವರು ಸಂಸ್ಕೃತಿಯ ಉನ್ನತಿಯನ್ನು ಸಾಧಿಸಿದ್ದರೂ ಒಂದು ಅವರ ಮಹಾಪರಾಧ ಇದು: ಅದನ್ನು ನಡಸಿಕೊಂಡು ಬೆಳಸಿಕೊಂಡು ಹೋಗುವ ಸಂತತಿಯನ್ನು ನಿರ್ಮಾಣ ಮಾಡಲಿಲ್ಲ' – "Failed to assure a worthy progeny" ಎಂದ ಕೂಡಲೇ ಆ ಹೇಳಿದ ರೀತಿ, ಮಾತು ಬಲೂನಿನ ಹಾಗೆ ಉಬ್ಬಿ ಸತ್ಯಮೂರ್ತಿಯವರ ಮಾತಿನ ಪರಿಣಾಮವೆಲ್ಲ ಒಡೆದುಹೋಯಿತು, ಇದಕ್ಕೆ ಬಿದ್ದ ಕರತಾಡನದ ಪ್ರಭಾವದಿಂದ. ರೆಡ್ಡಿಯವರ ಪ್ರಭಾವವನ್ನು ನಾವು ಕಾಲೇಜ್ ತರಗತಿಗಳಲ್ಲೇ ಕಂಡಿದ್ದೆವು. ಸಾರ್ವಜನಿಕ ವೇದಿಕೆಯಿಂದ ನಾವು ಕೇಳಿದ ಭಾಷಣಗಳಲ್ಲಿ ಆವೊತ್ತಿನ ಆ ಇಬ್ಬರ ಪರಸ್ಪರ ವಿಪರೀತವಾದ ಭಾಷಣಗಳು ರೋಮಾಂಚನಕಾರಿಯಾಗಿದ್ದವು.

ಸ್ವಲ್ಪ ಮುಂದೆ ಹೋದರೆ 'ಕಮಲಾ ಛತ್ರ'ವೆಂಬ ಒಂದು ಛತ್ರವೂ ಅದರ ಪಕ್ಕದ ಒಂದು ಬಂಗಲೆಯೂ ಇತ್ತು. ಅವು ನನಗಿಂತ ಪ್ರಾಚೀನವಾದುವು. ಛತ್ರದಲ್ಲಿ ಯಾವುದೊ ಒಂದು ವಿದ್ಯಾರ್ಥಿ ಹಾಸ್ಟೆಲ್ ನಡೆಯುತ್ತಿದೆ. ಕಮಲಾ ಬಂಗಲೆ ಎಂಬುದೂ ಅದರ ಪಕ್ಕದಲ್ಲಿರುವ ಪಾವಟಿಗೆಗಳು ಕಟ್ಟಿರುವ ಒಂದು ಕೊಳವೂ ಬೆಂಗಳೂರಿನ



ಅನೇಕ ಶೃಂಗಾರ ಅದ್ಭುತ ಕತೆಗಳಿಗೆ ನೆಲಸು. ಇವುಗಳಿಗೆ ಸಂಬಂಧಿಸಿದಂತೆ ನರಸಿಂಹಸ್ವಾಮಿ ದೇವಸ್ಥಾನದವರೆಗೂ ಪ್ರೊ. ಕೆ.ವಿ.ಅಯ್ಯರ್ ಅವರ 'ದಯ್ಯದ ಮನೆ'ಯ ಕಥಾನಕ ರೂಪಗೊಂಡಿದೆ. ಆ ಸುಮಾರಲ್ಲಿಯೇ ಇನ್ನು ಕೆಲವು ಕಾಲ ಅಲ್ಲಿ ಕಲೆಗಾಗಿ ನಮ್ಮಲ್ಲಿ ಬಹುಕಾಲದಿಂದ ದುಡಿಯುತ್ತಿರುವ ಎ.ಎನ್.ಸುಬ್ಬರಾಯರ ಒಂದು ಕಲಾಶಾಲೆಯೂ ಬೆಳೆಯಿತು. ಮುಂದೆ ಇವೊತ್ತಿನ ಸುಬೇದಾರ್ ಛತ್ರದ ರಸ್ತೆಯನ್ನು ಕುರಿತು ಏನೂ ಹೇಳುವುದಿಲ್ಲ. ಆದರೆ ಒಂದೆರಡು ಮಾತನ್ನು ಹೇಳದಿದ್ದರೆ ಹಳೆಯ ಬೆಂಗಳೂರಿನ ಕತೆಗೆ ಸಂಬಂಧಿಸಿದ ಎರಡು ಸಂಗತಿಗಳನ್ನು ತಿಳಿಸಿದ ಹಾಗಾಗುವುದಿಲ್ಲ. ಒಂದು, ಅಲ್ಲಿ ಪ್ರಖ್ಯಾತವಾಗಿರುವ ಅಣ್ಣಮ್ಮ ದೇವತೆಯ ಗುಡಿ. ಇನ್ನೊಂದು, ಸುಮಾರು ಈಗಿನ ಸೆಲೆಕ್ಟ್ ಪಿಕ್ಚರ್ ಪ್ಯಾಲೇಸಿನ ಎದುರಿಗಿರುವ ಒಂದು ಚಿತ್ರ ಮಂದಿರ. ಅಲ್ಲಿಯೇ ಮೊದಲು – ಎಂದರೆ ಈಗಿನ ಶಂಕರಪುರದಲ್ಲಿ ಸ್ಥಾಪಿತವಾಗಿರುವ ಶಂಕರಮಠ ಕಟ್ಟುವ ಮುಂಚೆ – ಬೆಂಗಳೂರಿಗೆ ಬಂದಿದ್ದ ಶೃಂಗೇರಿ ಜಗದ್ಗುರುಗಳು ಇಳಿದುಕೊಂಡು ಒಂದು ದೊಡ್ಡ ಮತಧರ್ಮದ ಶ್ರದ್ಧೋತ್ಸಾಹ ಬೆಳೆದು, ಬೆಂಗಳೂರಿನ ಸ್ಮಾರ್ತ ಬ್ರಾಹ್ಮಣ ವರ್ಗಕ್ಕೆಲ್ಲ ಒಂದು ದೊಡ್ಡ ಉತ್ಸಾಹವಾಗಿತ್ತು. ಆಗ ಇನ್ನೂ ಅವರು ಇತರ ಎಲ್ಲ ಜನವರ್ಗಗಳಿಗೂ ಪೂಜಾಸ್ಥಾನವಾಗಿದ್ದರು. ಬ್ರಾಹ್ಮಣರು, ಬ್ರಾಹ್ಮಣರಲ್ಲದವರು ಎಂಬ ಕಾರ್ಪಣ್ಯಗಳು ಆಗ ಇನ್ನೂ ಬೆಳೆದಿರಲಿಲ್ಲವಾದುದರಿಂದ ಸಮಾರಂಭಗಳು ತಂಬಾ ಉತ್ಸಾಹದಿಂದ ನಡೆಯುತ್ತಿದ್ದವು. ಅಣ್ಣಮ್ಮ ದೇವತೆಯ ದೇವಸ್ಥಾನ ಊರ ದೇವರ ನಿಲಯ. ಜಾತಿಪಂಥಗಳ ಲೆಕ್ಕವಿಲ್ಲದೆ ಶುಕ್ರವಾರ, ಮಂಗಳವಾರ ಅಲ್ಲಿ ನಡೆಯುವ ಪೂಜೆ ಇಂದಿಗೂ ಪ್ರಖ್ಯಾತವಾದುದು. ಅದಕ್ಕಿಂತ ಹೆಚ್ಚಾಗಿ ವರ್ಷದ ಜಾತ್ರೆಯ ಕಾಲದಲ್ಲಿ ಆ ದೇವರ ಹೂವಿನ ಪಲ್ಲಕ್ಕಿ ಮೆರವಣಿಗೆ ಆಗುತ್ತದೆ. ಹತ್ತಾರು ಸಾವಿರ ಜನ ನೆರೆಯುತ್ತಾರೆ. ಈಗ ಹೇಗೊ ಏನೊ? ದಕ್ಷಿಣದಿಂದ – ನಮ್ಮವರ ಕೀರ್ತಿ ಎಂದಿಗೂ ಅವರಿಗೆ ಎರಡನೆಯದೇ ಎಂಬಂತಿದೆ – ಓಲಗದ ಒಂದೊ ಎರಡೊ ತಂಡಗಳನ್ನು ಕರಸಿಕೊಂಡು ರಾತ್ರಿಯೆಲ್ಲ ದೇವರ ಮೆರವಣಿಗೆ, ಈ ನಾಗಸ್ವರವಾದನ ನಡೆಯುತ್ತಿತ್ತು. ಶುದ್ಧವಾದ ಕೀರ್ತನೆ ತಾಳ ನುಡಿಸುತ್ತಿದ್ದರು. ತವಿಲ್ ಅಥವಾ ಡೋಲು ಬಡಿಯುವ ಚಾತುರ್ಯ ನಮ್ಮ ಜನರನ್ನು ನಿಬ್ಬೆರಗು ಮಾಡುತ್ತಿತ್ತು. ಇವರು ತಂಜಾವೂರು ಕಡೆಯಿಂದ ಬರುತ್ತಿದ್ದರು.

* * *

ಈಗ ಕೆಂಪೇಗೌಡ ರೋಡ್ ಎಂದು ಪ್ರಸಿದ್ಧವಾದ ರಸ್ತೆ ಹಿಂದೆ ಜೈಲು ಕಾಂಪೌಂಡ್ ರಸ್ತೆ, ಕಿಚ್ಚಟ್ಟಿ ಛತ್ರದ ರಸ್ತೆ ಎಂಬ ಹೆಸರಿನದಾಗಿತ್ತು. ಆ ಕಡೆ ಬಲಕ್ಕೆ – ಎಂದರೆ ಪೂರ್ವಕ್ಕೆ – ತಿರುಗಿದರೆ, ಮೊದಲ ಕಟ್ಟಡ 'ಕೋಲಾ ಲಾಡ್ಜ್' ಎಂಬ ಹೆಸರಿನದಾಗಿತ್ತು. ಅಲ್ಲಿ Dist. Conservator of Forests ಆಫೀಸಿತ್ತು. ಹಾಗೆಯೇ ಅಪ್ಪಣ್ಣನವರ ಮಾಡರ್ನ್ ಹೊಟೇಲ್ ಇತ್ತು. ಇನ್ನೊಂದು ಕಾಲದಲ್ಲಿ ಫಾರೆಸ್ಟ್

ಕಚೇರಿಯ ಒಂದು ಹಾಲಲ್ಲಿಯೇ ನಾವು ಮೊದಲು – 1920ರ ಸುಮಾರಲ್ಲಿ – ಅರಿಯಾಕುಡಿ ರಾಮಾನುಜ ಅಯ್ಯಂಗಾರ್ ಅವರ ಸಂಗೀತವನ್ನು ಕೇಳಿದ್ದು. ಅವರು ಪೂರ್ಚಿ ಶ್ರೀನಿವಾಸ ಅಯ್ಯಂಗಾರ್ಯರ ಶಿಷ್ಯರು. ನಾನೂ ನನ್ನ ಸ್ನೇಹಿತರಾದ ಹೊಸೂರು ಸೀತಾರಾಮಯ್ಯನವರೂ ಮದರಾಸಿಗೆ ಹೋಗಿ ಪೂರ್ಚಿಯವರ ಸಂಗೀತ ಕೇಳಿದ ಅನುಭವ ತಲೆ ತುಂಬ, ಮೈತುಂಬ ಇತ್ತು. ಅವರ ಜೊತೆಯಲ್ಲಿ ಆಗ ಹಾಡಿದ ಶಿಷ್ಯರು ಬಹುಶಃ ಸೇಲಂ ದೊರೆಸ್ವಾಮಿ ಅಯ್ಯಂಗಾರ್ಯರು. ಗುರುವಿನ ಕಟಾಕ್ಷಕ್ಕೆ ಅಷ್ಟು ವಿಶ್ವಾಸವನ್ನು ಪಡೆಯದ ಅರಿಯಾಕುಡಿಯವರ ಹೆಸರನ್ನು ಕೇಳಿದ್ದೆವು. ಆದರೆ ಅವರ ಹಾಡುಗಾರಿಕೆಯನ್ನು ಕೇಳುವ ಅವಕಾಶ ನಮಗೆ ಈ ಮಂದಿರದಲ್ಲಿ ದೊರೆಯಿತು. ಇಲ್ಲಿ ಅರಿಯಾಕುಡಿಯವರನ್ನು ಸ್ಥಾಪಿಸಿದ ಕೀರ್ತಿ ಅವರು ತೀರಿಕೊಳ್ಳುವವರೆಗೂ ಉಳಿದು ಬಂದಿತ್ತು; ದಿನದಿನಕ್ಕೆ ಪುಷ್ಟಿಗೊಂಡಿತು; ಕರ್ನಾಟಕ ಸಂಪ್ರದಾಯದ ಹಾಡುಗಾರಿಕೆಯಲ್ಲಿ ಒಂದು ಬಗೆಯ ಸೀಮಾರೇಖೆಯನ್ನು ಹಾಕಿತು. ಚಂಬೈಯವರು ಬಂದುದು ಸುಮಾರು 1924-25ರ ಸಮಯದಲ್ಲಿ. ನಮ್ಮಲ್ಲಿ ಅನೇಕ ಸರ್ಕಾರಿ ಹುದ್ದೆಗಳಲ್ಲಿದ್ದು ಹೆಸರು ಪಡೆದ ಟಿ. ಜಿ. ರಾಮ ಅಯ್ಯರ್ ಅವರು ಚಂಬೈಯವರನ್ನು ಬೆಂಗಳೂರಿಗೆ ಪರಿಚಯ ಮಾಡಿಕೊಟ್ಟರು. ಅಲ್ಲಿಯೇ ಇನ್ನೊಂದು ಕಾಲದಲ್ಲಿ ಕನ್ನಡದ ಪ್ರಖ್ಯಾತ ಲೇಖಕರಾದ ದೇವುಡು ಶಾಸ್ತ್ರಿಗಳವರು ಹೋಂ ಸ್ಕೂಲ್ ಎಂಬ ಒಂದು ಪಾಠಶಾಲೆಯನ್ನು ಮಕ್ಕಳಿಗಾಗಿ ತೆರೆದು ನಡಸಿದರು. ಧಾರವಾಡದಿಂದ ಬಂದ ಬೆಟಗೇರಿ ಕೃಷ್ಣಶರ್ಮರು ಅಲ್ಲಿ ಉಪಾಧ್ಯಾಯರಾಗಿದ್ದ ನೆನಪು. ಆ ರಸ್ತೆಗೆ ಸಂಬಂಧಿಸಿದಂತೆ ಇಂದು ಬ್ಯಾಂಕ್‌ಗಳು, ದೊಡ್ಡ ಅಂಗಡಿಗಳು, ವಿದೇಶಿ ವರ್ತಕರುಗಳು, ಸಿನೆಮಾ ಮಂದಿರಗಳು ಈ ಊರಿನ ಐಶ್ವರ್ಯಕ್ಕೆ ಪ್ರಕಾಶಕವಾದ ಕಾರ್ಯಗಳನ್ನು ನಡಸುತ್ತಿದ್ದರೂ ಹಿಂದೆ ಇವೊತ್ತು ಏಷಿಯಾಟಿಕ್ ಬಿಲ್ಡಿಂಗ್ ಅಥವಾ ಜನತಾ ಬಜಾರ್ ಇರುವ ಕಡೆಯಿಂದ ಹಿಡಿದು ದೇವಾಂಗ ಬ್ಯಾಂಕಿನವರೆಗೂ ಸುಮಾರು ಎತ್ತರದ ಜೈಲು ಕಾಂಪೌಂಡಿತ್ತು. ಕಲ್ಲಿನಲ್ಲಿ ಕಟ್ಟಿದ್ದು; 15-20 ಅಡಿ ಎತ್ತರದ್ದು. ಮೇಲೆ ಮೊನಚಾದ ಗಾಜಿನ ಚೂರುಗಳನ್ನು ಗಾರೆಯಲ್ಲಿ ನಟ್ಟು ಒಳಗಿಂದ ಹೊರಕ್ಕೂ, ಹೊರಗಿಂದ ಒಳಕ್ಕೂ ಹೋಗದಂತೆ ನಿರ್ಬಂಧ ಏರ್ಪಟ್ಟಿತ್ತು. ಈಚೆ ಕಡೆ ಪ್ರಖ್ಯಾತ ಶ್ರೀಮಂತರಾದ ಬಿ. ವಿ. ಕೃಷ್ಣ ಅಯ್ಯಂಗಾರ್ಯರ ಮನೆ. ಅವರ ಮೊದಲ ಹೆಂಡತಿ ಇದ್ದ ಹಿಂದಿನ ಕಾಲಗಳಲ್ಲಿ ಅವರು ಆ ಮನೆಯಲ್ಲಿ 10-15 ವಿದ್ಯಾರ್ಥಿಗಳಿಗೆ ಊಟ ಉಪಚಾರಗಳ ವಿದ್ಯಾವಸತಿ ಏರ್ಪಡಿಸಿದ್ದರು. ಕೃಷ್ಣಯ್ಯಂಗಾರ್ ಮನೆ ಆಚೆಗೆ ಇದ್ದುದು ಹುಚ್ಚಾಸ್ಪತ್ರೆಯ ಕಾಂಪೌಂಡು. ಒಂದು ಬಗೆಯ ಕೆಂಪು ಬಣ್ಣ ಆ ಕಾಂಪೌಂಡಿಗೆ ಬಳಿದಿರುತ್ತಿತ್ತು. ಇವೊತ್ತು ಸೆಂಟ್ರಲ್ ಕಾಲೇಜಿನ ಮತ್ತು ಅಠಾರಾ ಕಚೇರಿಯ ಗೋಡೆಗಳ ಬಣ್ಣ ಅದು. ರಾಹು ಹೊಡೆದ ಹಾಗೆ ಕಾಣುತ್ತಿತ್ತು ನಮಗೆ. ಸುಮಾರು 1911-12ರ ಹೊತ್ತಿಗೆ ಎ.ವಿ.ವರದಾಚಾರ್ಯರು ಕಿಚ್ಚೆಟ್ಟಿ ಛತ್ರದಲ್ಲಿ ಒಂದು ದೊಡ್ಡ ನಾಟಕ ಮಂದಿರವನ್ನು ಕಟ್ಟಿ ಅಲ್ಲಿ ಪ್ರಹ್ಲಾದ ಚರಿತ್ರೆಯನ್ನು ಬಹುಶಃ ಮೊದಲ ಬಾರಿಗೆ ಆಡಿ ಪ್ರಖ್ಯಾತರಾದರು. ಆ ಮುಂಚೆ



ಮಹಾರಾಜಾ ಕಂಪನಿ ಒಂದು ಅವರಿಗೆ ಹೆಸರು ತಂದಿದ್ದ ಮೃಚ್ಛಕಟಿಕವನ್ನು ಅಲ್ಲಿ ಆಡಿದ್ದರು. ಅಲ್ಲಿನ ಮುಖ್ಯ ನಟನೊಬ್ಬನಿಗೆ ನೇಣುಬಿದ್ದ ಸಂದರ್ಭವೊಂದು ಪ್ರಕಟವಾಗಿ ಕಂಪನಿಗೆ ಮಹಾರಾಜ ಕಂಪನಿ ಎಂಬ ಹೆಸರು ಹೋಗಿ ಅದು ಶ್ರೀ ಕರ್ನಾಟಕ ನಾಟಕ ಸಭಾ ಕಂಪನಿ ಆಗಿತ್ತು. ಆ ಒಳಗೇ ಒಂದು ಕುಸ್ತಿ ಅಖಾಡಾ ಇತ್ತು. ನಗರದೊಳಗಿನ ಯಾವ ದೊಡ್ಡ ಕುಸ್ತಿಗಳೂ ಅಲ್ಲಿ ನಡೆಯುತ್ತಿದ್ದವು. ಅರಳೇಪೇಟೆ ಲಿಟರೆರಿ ಯೂನಿಯನ್ ಎಂಬ ನಾನಿದ್ದ ಪ್ರದೇಶದ ಒಂದು ಸಂಘ ಷೇಕ್ಸ್‌ಪಿಯರ್ ಬರೆದ The Two Gentlemen of Verona ಎಂಬ ಇಂಗ್ಲಿಷ್ ನಾಟಕವನ್ನು ಒಮ್ಮೆ ಆಡಿದರು. ಅದಕ್ಕೆ ಪೂರ್ವಸಿದ್ಧತೆ ಮಾಡುವಾಗ ಒಂದು ದೊಡ್ಡ ಕುಸ್ತಿ ನಾಟಕ ಮಂದಿರದ ಎದುರಿನ ಅಖಾಡಾದಲ್ಲಿ ನಡೆಯಿತು. ಸುಲೇಮಾನ್ ೧ ತುಕಾರಾಮ್ ಎಂಬ ಇಬ್ಬರು ಆ ದಿನದ ವಸ್ತಾದಿಗಳು. ಇಬ್ಬರೂ ಹೊರಗಿನವರು. ಅವರನ್ನು ನೋಡಲು ಬಂದಿದ್ದ ಮಂದಿ ನಮ್ಮವರು ಅಖಾಡಾ ಸುತ್ತ ಘೆರಕಾಯಿಸಿದ್ದರು. ಇಂಥ ಕುಸ್ತಿಗಳಲ್ಲಿ ಕೇವಲ ಕುಸ್ತಿಯ ಚುರುಕು, ಚಳಕ, ಕೌಶಲಗಳ ಜೊತೆಗೆ ಸ್ವಲ್ಪ ಮಟ್ಟಿಗಾದರೂ ಹಿಂದೂ ವಸ್ತಾದಿ, ಮುಸಲ್ಮಾನ ವಸ್ತಾದಿ ಎಂಬ ಪಕ್ಷಪಾತಗಳು ಇರುತ್ತಿದ್ದವು. ಒಂದು ಗಂಟೆಗೆ ಮೀರಿ ಕುಸ್ತಿ ನಡೆಯಿತೆನ್ನಿಸುತ್ತದೆ. ಯಾರು ಗೆದ್ದರೊ ನೆನಪಿಲ್ಲ. ಸಮ ಜೋಡಿಯಾಗಿ ಮುಗಿದಿರಬೇಕು. ಏಕೆಂದರೆ ಪರಿಣಾಮದಲ್ಲಿ ಯಾವ ಗಲಾಟೆಗಳೂ ನಡೆಯಲಿಲ್ಲ.

ಬೆಂಗಳೂರು ನಗರದ ಕಾಲ್ಚೆಂಡಿನ ಪಂಥಗಳಲ್ಲಿಯೂ ಇಂಥ ಕುಸ್ತಿ ಆಟಗಳ ಸ್ಪರ್ಧೆಯಲ್ಲಿಯೂ ಇಂಥ ಪಕ್ಷಪಾತ ಕೆಲವೇಳೆ ಉಲ್ಬಣ ಸ್ಥಿತಿಗೆ ಬರುತ್ತಿತ್ತು. ಸೆಂಟ್ರಲ್ ಕಾಲೆಜ್ ಮೈದಾನದಲ್ಲಿಯೂ ಆನಂದರಾವ್ ಸರ್ಕಲ್ ದಾಟಿ ಮಾಧವರಾಯರ ಬಂಗಲೆಯವರೆಗೂ ಹರಡಿದ್ದ ದೊಡ್ಡ ಮೈದಾನದಲ್ಲಿಯೂ ಕಾಲ್ಚೆಂಡಿನ ಪಂದ್ಯಗಳು ಮೊದಲಿಂದ ನಡೆಯುತ್ತಿದ್ದವು. ಬ್ಯಾಂಗಲೂರ್ ಛಾಂಪಿಯನ್ಸ್, ಮೈಸೂರ್ ಛಾಂಪಿಯನ್ಸ್, ಹಿಂದೂ ಇಲವೆನ್, ಎಕ್ಸ್‌ಲ್‌ಸಿಯರ್ಸ್, ಆ್ಯಕ್ಟಿವ್ ಯೂನಿಯನ್ ಹಿಂದೂ ಸಂಸ್ಥೆಗಳೆಂದು ಹೆಸರಾಗಿದ್ದ ಪಂಗಡಗಳು. ಕ್ರೆಸೆಂಟ್ಸ್, ಕಂಬೈನ್ಡ್ ಯೂನಿಯನ್ ಎಂಬವೂ ಪ್ರಖ್ಯಾತವಾದವು ಮುಸ್ಲಿಂ ಸಂಸ್ಥೆಗಳು. ಎರಡೂ ಕಡೆ ಆಟದಲ್ಲಿ ನಿಷ್ಣಾತರಾದ ಆಟಗಾರರಿದ್ದರು. ಒಮ್ಮೊಮ್ಮೆ ಕಂಟೋನ್‌ಮೆಂಟಿನಿಂದ ಟೆಲಿಗ್ರಾಫ್ ಯೂನಿಯನ್ ಎಂಬ ವಿದೇಶೀ ಸೋಲ್ಜರುಗಳ ಸಂಸ್ಥೆ ಒಂದು ಆಟಕ್ಕೆ ಬರುತ್ತಿತ್ತು. ಅವರು ಕಾಲಿಗೆ ಸ್ಪೋರ್ಟ್ಸ್ ಜೋಡುಗಳನ್ನು ಹಾಕಿಕೊಂಡು ಆಡುತ್ತಿದ್ದರು. ಕ್ರೆಸೆಂಟ್ಸ್ ಮುಂತಾದವರು ಸೋತರೆ ದೊಡ್ಡ ಗಲಭೆಗಳಾಗುತ್ತಿತ್ತು. ಗೆದ್ದರೆ, ನೋಡಲು ಜಟಕಾದಲ್ಲಿ ಬಂದಿದ್ದ ಮಂದಿ ಅವುಗಳ ಮೇಲೆ ಹತ್ತಿ ಬಾವುಟಗಳನ್ನು ಹಾರಿಸುತ್ತಿದ್ದುದೂ ಪಟಾಕಿಗಳನ್ನು ಹಚ್ಚುತ್ತಿದ್ದುದೂ ರೂಢಿ. ಸೋತಾಗ ಒಂದು ವೇಳೆ ಜಗಳ ನಡೆದರೆ ನೋಡಲು ಬಂದು ಕೂತಿದ್ದ ಆಫೀಸರು ವರ್ಗ ಈಚೆಗೆ ಬರುತ್ತಲು ಕುರ್ಚಿಗಳ ಕಾಲು, ಮೇಜುಗಳ ಭಾಗಗಳು ಇವೆಲ್ಲ ಊನವಾಗುತ್ತಿತ್ತು. ಅಷ್ಟೇ ಅಲ್ಲ, ಕಾಲೆಜ್ ಕಡೆಗಿದ್ದ ಹೊಂಗೆ

ಮರಗಳ ಕೊಂಬೆಗಳಿಗೂ ನಷ್ಟವೇ. ಒಮ್ಮೆ ಸೆಂಟ್ರಲ್ ಕಾಲೆಜಿನ ಪ್ರಿನ್ಸಿಪಾಲರಾದ ಜೆ. ಜಿ. ಟೇಟ್ ಸಾಹೇಬರು ಆಟ ಆರಂಭವಾಗಿ 15-20 ನಿಮಿಷ ಆದ ಮೇಲೆ ಆಟ ನೋಡುವುದಕ್ಕೆ ಬಂದರು. ಸೆಂಟ್ರಲ್ ಕಾಲೆಜಿನ ಕ್ರೀಡಾಕಾರ್ಯದರ್ಶಿಯಾಗಿ, ಆ ದಿನ ಅಂಪೈರ್ ಆಗಲೇಬೇಕಾಗಿದ್ದ ಎಂ.ಎಲ್. ನರಸಿಂಹ ಅಯ್ಯಂಗಾರ್ಯರು ಅವರನ್ನು ಎದುರುಗೊಳ್ಳಲು ಬಂದರು. ಆ ದಿನ ಅಂಪೈರ್ ಆಗಲು ಪೊಲೀಸ್ ಆಫೀಸರಾಗಿದ್ದ ಸಿದ್ಧರಾಮಣ್ಣನವರು ಒಪ್ಪಿಕೊಂಡಿದ್ದರಾಗಿ ಇವರಿಗೆ ಬಿಡುವು ದೊರೆತಿತ್ತು. ನರಸಿಂಹ ಅಯ್ಯಂಗಾರ್‌ರನ್ನು ಕಂಡಕೂಡಲೇ ಟೇಟ್ ಸಾಹೇಬರು 'No casualties yet?' ಎಂದು ಪ್ರಶ್ನಿಸಿದರು. ಆ ಆವರಣದ ವಿಶೇಷವನ್ನು ಈ ಪ್ರಶ್ನೆ ಸ್ಪಷ್ಟಪಡಿಸುತ್ತದೆ.

ಇವು Professionals ಅಥವಾ ಕಸುಬುದಾರರ ಆಟದ ವರ್ಗಗಳಾದರೆ, ಸೆಂಟ್ರಲ್ ಕಾಲೆಜಿನ ಕಾಲ್ಚೆಂಡಿನ ಟೀಮು, ಮೈಸೂರು ಮಹಾರಾಜಾ ಕಾಲೆಜಿನ ಟೀಮು ಕಾಲ್ಚೆಂಡು ಆಟದಲ್ಲಿ ಹೆಸರುಗೊಂಡಿದ್ದವು. ಒಂದು ಸಲ ಮಹಾರಾಜಾ ಕಾಲೆಜಿನ ಒಂದು ಟೀಮ್ ಬಂದು, ಆ ಸಲ ಫೈನಲ್ಸ್‌ಗೆ ನಿಂತಿದ್ದ ಲಂಡನ್ ಮಿಷನ್ ಹೈಸ್ಕೂಲ್ ಟೀಮಿನೊಡನೆ ಸೆಣಸಬೇಕಾಗಿತ್ತು. ಮೈಸೂರಿಂದ ಬಂದ ಟೀಮಿನ ಆಟ ಒಂದು ವಿಶೇಷ ಚಾತುರಿಯಿಂದ, ಹೊಂದಿಕೆಯ ಕುಶಲತೆಯಿಂದ ನಡೆಯಿತು. ಆ ದಿನದ ಆಟದಲ್ಲಿ ಸೋಮಯ್ಯನಾಯ್ಡು ಎಂಬಾತನ, ರಾಮಚಂದ್ರರಾಜೇ ಅರಸ್ ಎಂಬವನ ಆಟ ಬೆಂಗಳೂರಿನವರನ್ನೇ ಮೋಹಗೊಳಿಸಿತು. ಇತ್ತ ಕಡೆ ಧರ್ಮಲಿಂಗಂ ಎಂಬವನದು. ಮೈಸೂರಿನವರ ಆಟದಲ್ಲಿ ಚಿಗರೆಗಳ ಒಂದು ದಳ ಸಮೂಹದಲ್ಲಿ ಓಡುತ್ತಿದ್ದಂತೆ ಭಾಸವಾಗುತ್ತಿತ್ತು. Professionalsನಲ್ಲಿ ಕ್ರೆಸೆಂಟ್ಸರ ಕಡೆ ಆತನ ತಮ್ಮ ನವಾಬ್ ಎಂಬಾತ, ಮೂರ್‌ಲಾ ಎಂಬಾತ, ಬಷೀರ್ ಎಂಬವನು ಬಹಳ ಹೆಸರಾದ ಆಟಗಾರರು. ಚಾಂಪಿಯನ್ಸ್ ಕಡೆ ಆರ್. ಎಲ್. ನಂಜಪ್ಪ ಹೆಸರಾದವರು. ಇನ್ನು ಸ್ವಲ್ಪ ಮುಂದಿನ ಕಾಲಗಳಲ್ಲಿ Full Back ಗಳಾಗಿ ಕಾಲೆಜುಗಳ ಕಡೆ, ಈ ಹಿಂದೂ ಪಂಥಗಳ ಕಡೆ ಬಿ. ಟಿ. ಕೆಂಪಣ್ಣ, ಕೃಷ್ಣಸ್ವಾಮಿ ಅಯ್ಯಂಗಾರ್ ಉರುಫ್ ತಾಪತ್ರಯ ಎಂಬವರು ಹೆಸರಾದರು. ಆ ಕಡೆ ಬಾಬಾ ಅವರೊ ಬೇರೆ ಇನ್ನಾರೊ ಚೆಂಡನ್ನು ಒದೆದರೆ ಈ Full backಗಳು ಚೆಂಡು ನೆಲ ಮುಟ್ಟದಂತೆ ಹಿಂದಕ್ಕೆ ವಾಲಿ ಕಳಿಸುತ್ತಿದ್ದರು. ಈಗಿನ ಆಟಗಳು ಹೇಗೊ ಏನೊ ಕಾಣೆ. ಹುಡುಗರಾಗಿದ್ದ ನಮ್ಮ ಕಣ್ಣಿಗೆ ಆ ಕಾಲದ ಆಟ ತುಂಬಾ ಮೋಹಕವಾಗಿರುತ್ತಿತ್ತು. ಆಟಗಳಿಗೆ ಇನ್ನೂ ಪ್ರವೇಶಧನ ಹಾಕುತ್ತಿರಲಿಲ್ಲವಾಗಿ ಯಾರು ಎಲ್ಲಿ ಬೇಕಾದರೂ ನಿಂತು ಆಟವನ್ನು ನೋಡಬಹುದಾಗಿತ್ತು. ಎಲ್ಲಿ ಹೋಗಿ ಕಾರ್ನರ್ ಹೊಡೆಯಬೇಕಾಗಿದ್ದಾಗ, ಪೆನಾಲ್ಟಿ ಒದೆಯಬೇಕಾಗಿದ್ದಾಗ ನೋಡುವವರ ಜೀವವೆಲ್ಲ ಬಾಯಿಗೆ ಬರುತ್ತಿತ್ತು. ಬಾಯಿ, ಕಣ್ಣು ತೆರೆದು ಪ್ರೇಕ್ಷಕರು ಆವೇಶಗೊಳ್ಳುತ್ತಿದ್ದ ರೀತಿ ಅತಿಶಯವಾದ್ದು.

ಸೆಂಟ್ರಲ್ ಕಾಲೆಜಿನ ಪ್ರದೇಶದಲ್ಲಿ ಮೊದಲಿದ್ದುದು ಮಧ್ಯಭಾಗದ ಗಡಿಯಾರದ ಕಟ್ಟಡ ಒಂದೇ. ಆ ಮೇಲೆ ಎರಡು ಪಕ್ಕದಲ್ಲಿ ರಸಾಯನ ಮತ್ತು ಭೌತಶಾಸ್ತ್ರಗಳ



ದೊಡ್ಡ ಕಟ್ಟಡಗಳು ಆದವು. 1916ರಿಂದ ಈಚೆಗೆ ಎಂದು ಕಾಣುತ್ತದೆ, ಗಣಿತಶಾಸ್ತ್ರದ ಭವನವಾದದ್ದು. ಇನ್ನೂ ಈಚೆಗೆ ಹೊಸ ಜೀವಶಾಸ್ತ್ರಗಳ ಭಾಗ. ಇದು ಸೆಂಟ್ರಲ್ ಕಾಲೇಜಿನ ಉಚ್ಛ್ರಾಯದ ಕಾಲ. ಸೆಂಟ್ರಲ್ ಕಾಲೆಜಿನ ಹಿಂದೆ ಮೊದಲಿನಿಂದಲೂ ಹಾಸ್ಟೆಲ್ ಇತ್ತು. ಹಣವಂತರಾದವರ ಮಕ್ಕಳು – ಬಂಧುಗಳು ಮಾತ್ರ ಅಲ್ಲಿ ಸೇರಿಕೊಂಡು ವಿದ್ಯಾಭ್ಯಾಸ ಮಾಡುತ್ತಿದ್ದರು. ತಿಂಗಳಿಗೆ 40-50 ರವರೆಗೂ ರುಸುಮು ಬೀಳುತ್ತಿತ್ತು ಎನ್ನುತ್ತಾರೆ. ಸಾಮಾನ್ಯರಿಗೆ ಅಷ್ಟು ಹಣ ಒದಗಿಸುವುದು ದುಸ್ತರವಾಗುತ್ತಿತ್ತಾಗಿ ಎಂದಾದರೂ ಒಂದು ಸಲ ಯಾರೊ ಒಬ್ಬರ ಅತಿಥಿಯಾಗಿ ಹೋಗಿ ಬಂದವರಿಗೆ ಅಲ್ಲಿನ ಊಟ ಉಪಚಾರಗಳ ವ್ಯವಸ್ಥೆ ತಿಳಿಯುತ್ತಿತ್ತು. ಅವರ ಹಬ್ಬಗಳ ಆಚರಣೆ ಡಬ್ಬು ಎನ್ನುತ್ತಿದ್ದರು. ಗಣೇಶನ ಮಂಗಳಾರತಿ ದಿವಸ ಬಹು ಜನ ಹೊರಗಿನವರಿಗೆ ಕರೆ ಬರುತ್ತಿತ್ತು.

ಸೆಂಟ್ರಲ್ ಕಾಲೆಜಿನ ಎದುರಿಗೆ ಈಚೆ ಕಡೆ ಗಣಿತ ಭವನದ ಎದುರಿಗೆ ಮೊದಲು ಸುಮಾರು 1913ರ ಹೊತ್ತಿಗೆ ಹೈಸ್ಕೂಲು ತೆರೆಯಿತು. ಇತರ ಎಷ್ಟೋ ಹೈಸ್ಕೂಲುಗಳ ಆಡಳಿತಗಾರರಿಗೆ ಕಟ್ಟಡದ ರಚನೆ, ಅಲ್ಲಿನ ಸಭಾಮಂದಿರ, ನಡುವೆಯ ತೆರೆದ ಅಂಗಳ ಅಸೂಯೆಯನ್ನು ಉಂಟುಮಾಡುವಷ್ಟು ವೈಭವಯುತವಾಗಿ ಕಾಣುತ್ತಿತ್ತು. ನಾವು ಎಲ್. ಎಸ್. ಕ್ಲಾಸಿನಲ್ಲಿರುವಾಗ Christmas Carol, Tangle Wood Tales ಎಂದು ಮುಂತಾದ ಪುಸ್ತಕಗಳನ್ನು ಪಠ್ಯವಾಗಿಡುತ್ತಿದ್ದರು. ಒಂದು ಪಠ್ಯದಲ್ಲಿ ಗ್ರೀಕ್ ವೀರನಾದ  ಯೂಲಿಸಿಸ್ ತನ್ನ ನಾವಿಕ ಹಿಂಬಾಲಕರನ್ನು ಕರೆದುಕೊಂಡು Circe's Palace ಎಂಬ ಕಡೆಗೆ ಬರುತ್ತಾರೆ. ಅಲ್ಲಿನ ರೋಮಾಂಚಕಾರಿ ಸನ್ನಿವೇಶ ಹುಡುಗರ ಮನಸ್ಸಿಗೆ ತಟ್ಟುತ್ತಿತ್ತು.  ವೆಸ್ಲಿಯನ್ ಹೈಸ್ಕೂಲ್ ಪ್ರಿನ್ಸಿಪಾಲರೂ ಇಂಗ್ಲಿಷ್ ಉಪಾಧ್ಯಾಯರೂ ಕಾಲ್ಚೆಂಡಿನ ಆಟದಲ್ಲಿ ಹೆಸರಾದವರೂ ಆದ ಎ.ಆರ್.ಫುಲ್ಲರ್ ಎಂಬವರು ಆ ಕಟ್ಟಡವನ್ನು Circe's Palace ಎಂದು ಕರೆದದ್ದುಂಟು. ಅದೇ ಉತ್ತರ ಕಾಲದಲ್ಲಿ ಇಂಟರ್ ಮೀಡಿಯೆಟ್ ಕಾಲೆಜ್ ಆಯಿತು.  ಈಗ ಸರ್ಕಾರಿ ವಿಜ್ಞಾನ ಮತ್ತು ಕಲಾ ಕಾಲೆಜ್ ಆಗಿದೆ.

ಅದರ ಪಕ್ಕದಲ್ಲಿ ಎರಡು ಟೆನ್ನಿಸ್ ಕೋರ್ಟ್‌ಗಳೂ ಅದರ ಪಕ್ಕಕ್ಕೆ ಒಂದು ದೊಡ್ಡ ಹಾಕಿ ಮೈದಾನವೂ ಏರ್ಪಟ್ಟಿತು. ಅದೇ ಕಾಂಪೌಂಡಲ್ಲಿ ಡಿಸ್ಟ್ರಿಕ್ಟ್ ಆಫೀಸ್ ಕಟ್ಟಡ ಎಂಬ ಹೆಸರಲ್ಲಿ ವಿಜ್ಞಾನ ಭಾಗಗಳಿಗೆ ಒಂದು ಕಟ್ಟಡ ತೆರೆದು ಇಂಟರ್ ಮೀಡಿಯೆಟ್ ಕಾಲೆಜಿನ ನೆರವಿಗೆ ದೊರಕಿತು. ಆದರೆ ಆ ಕಾಂಪೌಂಡಿನ ಒಳಗೆ ಸನಾತನದಿಂದ ಎಂಬಂತೆ ನಮ್ಮ ಕಾಲದವರೆಗೂ ನಡೆದು ಬಂದಿದ್ದ ಡಿಸ್ಟ್ರಿಕ್ಟ್ ಮತ್ತು ಮುನ್ಸೀಫ್ ಕೋರ್ಟುಗಳು ನೆಲಸಿದ್ದುವು. ಅಲ್ಲಿನ ನ್ಯಾಯಾಸ್ಥಾನಗಳೂ ಕಕ್ಷಿಗಳೂ ಲಾಯರುಗಳೂ ಸಾಕ್ಷಿವರ್ಗವೂ ಈ ಸಂಸ್ಥಾನದ ಸಮಸ್ತ ಕಾರ್ಪಣ್ಯ, ವಿರಸಗಳ ವ್ಯವಹಾರ ಕಾಂಡಕ್ಕೆ, ಅಪರಾಧ ಕಾಂಡಕ್ಕೆ, ಮುಲ್ಕಿ ವಿಭಾಗಕ್ಕೆ ಹೃತ್‌ಸ್ಥಾನವಾಗಿತ್ತು. ಹೃದಯಕ್ಕೆ

ಶುದ್ಧರಕ್ತವನ್ನು ಸಾಗಿಸುವ ಕ್ರಿಯೆಯ ಜೊತೆಗೆ ಅಶುದ್ಧ ರಕ್ತವನ್ನೆಲ್ಲ ಸಂಗ್ರಹಿಸಿ ಶುಚಿ ಮಾಡಬೇಕಾದ ಕಾರ್ಯವಿದೆಯೆನ್ನುತ್ತಾರೆ. ಈ ಹೃತ್‌ಸ್ಥಾನ ಈ ಅಶುದ್ಧ ಭಾಗದ ಪ್ರತಿನಿಧಿಯಂತೆ. ಒಂದು ದಿನ ಅಲ್ಲಿ ಸುತ್ತು ಹಾಕಿದರೆ ಮಾನವ ವರ್ಗದ ವಿಷಯದಲ್ಲಿ ನಿರಾಸೆಯೂ ನ್ಯಾಯವಂತ ಜೀವನದ ವಿಷಯದಲ್ಲಿ ವಿಶ್ವಾಸವೂ ಖಂಡಿತವಾಗಿ ಮಾಯವಾಗಬಲ್ಲ ದೃಶ್ಯಗಳೇ, ವಾದಗಳೇ, ಮಾತುಕತೆಯೇ, ನಡವಳಿಕೆಯೇ, ತೀರ್ಮಾನವೇ ಅನುಭವಕ್ಕೆ ಬರುತ್ತಿದ್ದವು. ಅಲ್ಲಿಂದಾಚೆಗೆ ಸಬ್‌ರೆಜಿಸ್ಟ್ರಾರ್ ಆಫೀಸು. ಕಾಗದ ಪತ್ರಗಳು ಎಲ್ಲದರ ರಿಜಿಸ್ಟ್ರೇಶನ್ ಅಲ್ಲಾಗಬೇಕು. ಕೋರ್ಟುಗಳದು ಒಂದು ತೆರನಾದರೆ ಅದಕ್ಕೆ ಮೂಲದ್ರವ್ಯ ಒದಗಿಸುವ ಆಸ್ತಿಪಾಸ್ತಿಗಳ ಒಪ್ಪಂದಗಳ ರುಜುವಾತು ಮತ್ತು ಆಧಾರ ಪತ್ರಗಳೆಲ್ಲ ಅಲ್ಲಿ ರಿಜಿಸ್ಟರ್ ಆಗಬೇಕಿತ್ತು. ಅದರ ವೈಖರಿ ಬೇರೆ ತೆರದ್ದಾದರೂ ಅನುಕೂಲ–ಪ್ರತಿಕೂಲ ಕಾಂಡಗಳು ಎರಡಕ್ಕೂ ಸರ್ಕಾರದ ಮುದ್ರೆ ದೊರಕುವ ಕಾಗದ ಪತ್ರಗಳ ದಾಖಲೆಯಾಗುತ್ತಿತ್ತು. ಆ ಕಚೇರಿಯ ಸಿಬ್ಬಂದಿಯ ನಡವಳಿಕೆ ಕೂಡ ಒಂದು ಮಾಮೂಲನ್ನು ಮೊದಲಿನಿಂದ ನಡಸಿಕೊಂಡು ಬಂದಿದೆ. ಅದೂ ಅಷ್ಟೇನೂ ಉತ್ಸಾಹವನ್ನು ತರುವ ಪ್ರಸಂಗವಲ್ಲ. ಅಲ್ಲಿಂದ ಮುಂದೆ ಸೈಂಟ್ ಮಾರ್ಥಾ ಆಸ್ಪತ್ರೆ; ನಾವು ಮಕ್ಕಳಾಗಿದ್ದ ಕಾಲದಿಂದ ಪ್ರಖ್ಯಾತವಾದ್ದು. ಕ್ರೈಸ್ತ ಪಂಥದ ಹೆಣ್ಣುಮಕ್ಕಳೂ ದಾದಿಯರೂ ಚಿಕಿತ್ಸೆಗಳನ್ನು ನಡಸುವವರಾದುದರಿಂದ, ಒಂದು ಮತಶ್ರದ್ಧೆ ಅಲ್ಲಿನ ಕಾರ್ಯಗಳನ್ನು ಹದಗೊಳಿಸುತ್ತಿದ್ದುದರಿಂದ, ಅಲ್ಲಿನ ಔಷಧಿ ಚಿಕಿತ್ಸಾಕ್ರಮ ಬಹುಮಟ್ಟಿಗೆ ಫಲಕಾರಿಯಾಗುತ್ತಿದ್ದವು.

ಈ ಆಸ್ಪತ್ರೆಯ ಎದುರು ಭಾಗದಲ್ಲಿ ರಸ್ತೆಯ ಆಚೆ ಕಡೆ ನೆಲಸಿದ್ದುದು ಬನಪ್ಪ ಪಾರ್ಕ್ ಎಂಬ ಹೆಸರಿನ ಮೈದಾನ. ಅದರ ಒಂದು ಕಡೆ ಒಂದು ಅಶ್ವತ್ಥ ಕಟ್ಟೆ. ಸಾರ್ವಜನಿಕ ಜೀವನಕ್ಕೆ ನಡೆದ ಅನೇಕ ಸಭೆಗಳು ಅಲ್ಲಿಯೂ ಧರ್ಮಾಂಬುಧಿ ಕೆರೆಯ ಕೆಳಗಿನ ಚಿಕ್ಕಲಾಲ್‌ಬಾಗ್ ಎಂಬ ಹೆಸರಿನ ಮ್ಯುನಿಸಿಪಲ್ ಉಪವನದಲ್ಲಿಯೂ ನಡೆಯುತ್ತಿದ್ದವು. ಬನಪ್ಪ ಪಾರ್ಕ್‌ನ ಸಭೆಗಳು ಸ್ವಲ್ಪ ಹೆಚ್ಚು ಕಡಮೆ ಕಾಂಗ್ರೆಸ್ ಪಂಥದ ಪರವಾಗಿಯೂ ಬ್ರಿಟಿಷ್ ಸರ್ಕಾರದ ವಿರುದ್ಧವಾಗಿಯೂ ಆದುದರಿಂದ, ಸಂಸ್ಥಾನದ ಸರ್ಕಾರಕ್ಕೆ ವಿರುದ್ಧವಾಗಿಯೂ ನಡೆವ ಪ್ರಕಾರಗಳು. ಈವರೆಗೂ ಹೇಳಿದ ಸಂಗತಿಗಳಿಗೂ ಈ ಪಾರ್ಕಿನ ವಿಷಯಕ್ಕೂ ಕಾಲ ವ್ಯತ್ಯಾಸ ಉಂಟು. ಬಹುಮಟ್ಟಿಗೆ ಈವರೆಗಿನ ವರ್ಣನೆ 1920ರ ಹಿಂದಿನ ಕಾಲದ್ದು. ಹಳೆಯ ಬೆಂಗಳೂರು ಪಟ್ಟಣ, ಅದರ ಜೀವನಕ್ಕೆ ಸಂಬಂಧಿಸಿದುದು. ಅದರ ರಚನೆಯನ್ನು ಕುರಿತುದು. ಬನಪ್ಪ ಪಾರ್ಕ್ ವ್ಯಕ್ತಿತ್ವ ಪಡೆದುದು ಮೈಸೂರಲ್ಲಿ ಬ್ರಿಟಿಷ್ ಸರ್ಕಾರಕ್ಕೆ ಪ್ರತಿಸ್ಪರ್ಧಿಯಾಗಿ ಜವಾಬ್ದಾರಿ ಸರ್ಕಾರವನ್ನು ಕೇಳಲು ತೊಡಗಿದ ಕಾಲಕ್ಕೂ ಭಾರತದಲ್ಲಿ ಸ್ವಾತಂತ್ರ್ಯದ ಚಳವಳಿ ತೀವ್ರಗೊಂಡ ಕಾಲಕ್ಕೂ ಸಂಬಂಧಿಸಿದ್ದು. ಆದರೆ ಇಲ್ಲಿಯವರೆಗೆ ಬಂದು ಈ ಮೈದಾನದ ವಿಷಯ ಹೇಳದೆ ಮುಂದುವರೆಯುವುದು ಒಂದು ನ್ಯೂನತೆಯಾಗುತ್ತದೆಯಾಗಿ ಇದನ್ನು



ಹೇಳುತ್ತಿದೆ. ಬೊಂಬಾಯಿಂದ ನರಿಮನ್ ಅವರು ಬೆಂಗಳೂರಿಗೆ ಬಂದು ಭಾಷಣ ಮಾಡುತ್ತಿರಲು, ಮೈಸೂರು ಸಂಸ್ಥಾನದ ಪೊಲೀಸಿನವರು ಆ ಸಭೆ ಸಮಾರಂಭಗಳನ್ನು ಅಡ್ಡಿ ಮಾಡಲು, ವಿದ್ಯಾರ್ಥಿಗಳೂ ಸಭೆಯವರೂ ರೇಗಿ ಪೊಲೀಸಿನವರ ಮೇಲೆ ಚಪ್ಪಲಿಗಳನ್ನು ಎಸೆದರು. ಇದನ್ನು ನಾಗರಿಕ ಕ್ರಿಯೆ ಎನ್ನಲೆ? ಅನಾಗರಿಕ ವೆನ್ನಲೆ? ಸಹಜ ಪ್ರತಿಕ್ರಿಯೆ ಎನ್ನಲೆ? ಬಿದ್ದಿದ್ದ ಚಪ್ಪಲಿ ರಾಶಿ ಬಹು ದೊಡ್ಡದಾದ ಕುಪ್ಪೆಯಾಯಿತು. ವಿದ್ಯಾರ್ಥಿ ತಂಡಗಳಿಗೂ ಪೊಲೀಸ್ ತಂಡಗಳಿಗೂ ಆ ಕಾಲದಲ್ಲಿ ಬೆಳೆದ ವೈಮನಸ್ಯ ಅನೇಕ ರೀತಿಗಳಲ್ಲಿ ವೃದ್ಧಿಗೊಂಡು, ಒಂದು ಕಾಲದಲ್ಲಿ ನಾನು ಕೆಲಸ ಮಾಡುತ್ತಿದ್ದ ಇಂಟರ್‌ಮೀಡಿಯೆಟ್ ಕಾಲೆಜಿನ ದುಷ್ಪ್ರಸಂಗ ಒಂದಕ್ಕೆ ಎಡೆ ಮಾಡಿಕೊಟ್ಟು, ಪೊಲೀಸಿನವರು ಅಲ್ಲಿಗೆ ಬಂದು ಅಲ್ಲಿನ ಸೂಪರಿಂಟೆಂಡೆಂಟರಿಗೆ, ನನ್ನಂಥ ಒಬ್ಬರಿಬ್ಬರಿಗೆ ಬೆತ್ತದ ಏಟಿನ ಮುದ್ರಾಧಾರಣ ಮಾಡುವುದಕ್ಕೂ ಅವಕಾಶ ಕೊಟ್ಟಿತು. ಲಾಠಿ ಛಾರ್ಜು ಎನ್ನುವುದರ ಸುಖ ಅನುಭವಿಸಿದವರಿಗೆ ಗೊತ್ತು. ಅಂಥುದನ್ನು ಮೈಮೇಲೆ ಬಾಸುಂಡೆ ಹೊತ್ತು ಅನುಭವಿಸಿದವರಿಗಲ್ಲದೆ ಅದರ ಅರ್ಥ ಆಗುವುದಿಲ್ಲ. ಶಾಂತಿ, ಶಿಸ್ತುಪಾಲನೆಗಳಿಗಾಗಿ ಇಂಥ ಕ್ರಿಯೆಗಳಲ್ಲಿ ತೊಡಗಿದ ರಕ್ಷಣಾಧಿಕಾರಿಗಳಿಗೂ ಶಿಸ್ತು ಸಂಯಮ ಇಲ್ಲದೆ ಉದ್ರೇಕಗೊಂಡು ಕೈಯಲ್ಲಿ ಆಯುಧಗಳು ಏನೂ ಇಲ್ಲದೆ ಪ್ರತಿಭಟಿಸುತ್ತಿದ್ದ ವಿದ್ಯಾರ್ಥಿಗಳ ತಂಡಕ್ಕೂ ಘರ್ಷಣೆ ನಡೆವಾಗ ಯಾವ ಬಗೆಯ ಪ್ರಕೋಪ ಏರ್ಪಡುತ್ತದೆ; ಕಣ್ಣು ಮುಖ ಬಾಯಿ ಕೈ ಹೇಗೆ ಒಂದು ಕ್ರೋಧದಲ್ಲಿ ಕ್ರಿಯಾತ್ಮಕವಾಗುತ್ತವೆ ಎಂಬುದರ ಚಿತ್ರ ನನಗೆ ಕಂಡಿದ್ದು ಆಗ. ನಮ್ಮ ಕಾಲೆಜಲ್ಲಿಯೇ ಓದಿ ಪಾಸು ಮಾಡಿದ್ದ ಒಬ್ಬ ವಿದ್ಯಾರ್ಥಿ ಸಬ್‌ಇನ್ಸ್‌ಪೆಕ್ಟರ್ ಆಗಿ ತನ್ನ ಮೇಲಿನ ಅಧಿಕಾರಿ ಅಪ್ಪಣೆ ಕೊಡುತ್ತಿದ್ದ ಸಮಯದಲ್ಲಿ ತನ್ನ ಉಪಾಧ್ಯಾಯರ ಮೇಲೆಯೇ ಉರುಬಿ ಬರಬೇಕಾದ ಪ್ರಸಂಗ ಒಂದು ವಿಚಿತ್ರ ಸನ್ನಿವೇಶ. ಇಂಥುವನ್ನು 1943 ಆದ ಮೇಲೆ ಮೈಸೂರಲ್ಲಿಯೂ ಕಂಡೆನಾದರೂ ಇದು ಪ್ರಥಮಾನುಭವ. ಈಗ ಆ ಬಗೆಯ ಪ್ರಕ್ಷುಬ್ಧ ವಾತಾವರಣ ಇಲ್ಲ. ಕೆಲವೇಳೆ ಈಗಿನ ಕೆಂಪೇಗೌಡ ರೋಡಿನಿಂದ ಹಿಡಿದು ಉದ್ದಕ್ಕೆ ಆ ರಸ್ತೆಯಲ್ಲಿ ಕುದುರೆ ಸವಾರಿ ಮಾಡಿಕೊಂಡು ಬರುವ ರಾವುತ ರಕ್ಷಣಾ ದಳದವರು ಬಂದೂಕುಗಳನ್ನು ಹಿಡಿದುಕೊಂಡು ಜನಗಳ ಮೇಲೆ ಧಾವಿಸುವ ರಕ್ಷಣಾದಳ ವರ್ಗವೂ ಆ ಪ್ರದೇಶದ ಚಿತ್ರಗಳನ್ನು ಖಚಿತ ಮಾಡಿ ನಿಲ್ಲಿಸುತ್ತದೆ. ಜನರನ್ನು ಚೆದುರಿಸುವುದಕ್ಕೆ ಕಣ್ಣೀರು ಕರಸುವ ಸ್ಫೋಟಕಗಳನ್ನು ಸಿಡಿಸಲು ಅವರು ಯತ್ನಿಸಿದರೆ ಕೈಯಲ್ಲಿ ನೀರುಳ್ಳಿಯನ್ನು ಹಿಡಿದು ಕಣ್ಣೀರು ಕರೆದು ಸುರಿದು ಹೋಗುವ ಹಾಗೆ ಮಾಡಿಕೊಳ್ಳುತ್ತಿದ್ದ ಜನರ – ವಿದ್ಯಾರ್ಥಿಗಳ ಗುಂಪು, ಸವಾರರು ಧಾವಿಸುತ್ತಿರುವಾಗ ನೆಲದ ಮೇಲೆ ರಾಗಿ ಕಾಳನ್ನು ಎರಚಿ ಕುದುರೆಗಳು ಜಾರಿ ಮುಗ್ಗರಿಸುವಂತೆ ಮಾಡುತ್ತಿದ್ದುದೂ ಅಲ್ಲಿನ ವಿಶೇಷ ಲಕ್ಷಣಗಳ ನೆನಪಾಗಿ ಉಳಿದಿವೆ.

* * *

ಇಲ್ಲಿಗೆ ಒಂದು ಸುತ್ತು ಹಳೆಯ ಬೆಂಗಳೂರು ಪಟ್ಟಣವನ್ನು ವರ್ಣಿಸಿ ಅಲ್ಲಿಂದ ಬಲಗಡೆ ತಿರುಗುವ ಅಲಸೂರು ಗೇಟ್ ಪೊಲೀಸ್‌ಸ್ಟೇಷನ್‌ವರೆಗೂ ಬಂದಂತಾಯಿತು. ಒಂದು ಮುಖ್ಯ ಭಾಗವನ್ನು ಅಲ್ಲಿ ವರ್ಣಿಸದೆ ಹಾಗೆಯೇ ಬಿಟ್ಟಿದೆ. ಅದು ಜಾರ್ಜ್ ಓಕ್ಸ್ ಕಟ್ಟಡದ ಪಕ್ಕದಲ್ಲಿ ದೊಡ್ಡಪೇಟೆ ಚೌಕಕ್ಕೆ ಬರುವ ರಸ್ತೆ. ಆ ರಸ್ತೆಗೂ ಈವರೆಗೂ ನಾಲ್ಕು ಮಾತು ಹೇಳಿದ ಉದ್ದ ರಸ್ತೆಗೂ ನಡುವೆ ಕಬ್ಬನ್‌ಪೇಟೆ, ಅಲಸೂರು ಪೇಟೆ ಮುಂತಾದವುಗಳ ಜೀವನ ನನಗೆ ಹೆಚ್ಚಾಗಿ ಪರಿಚಿತವಲ್ಲದ್ದು. ಆದರೆ ಬಹು ಸಾಂದ್ರವಾದ ದಷ್ಟಪುಷ್ಟ ಜನವರ್ಗದ ನೆಲೆ ಅದು. ಮಗುವಾಗಿ ನಾನು ಬೆಂಗಳೂರಿಗೆ ಬಂದಾಗ – ಎಂದರೆ ನನಗೆ 4-5 ವರ್ಷದ ವಯಸ್ಸಿನಲ್ಲಿ – ನನ್ನ ತಂದೆಯವರು ಅಲಸೂರು ಪೇಟೆಯಲ್ಲಿನ ಉದ್ದಿ ನಂಜುಂಡಯ್ಯನವರ ರಸ್ತೆಯ ಒಂದು ಮನೆಯಲ್ಲಿ ಇರುತ್ತಿದ್ದ ನೆನಪು. ಅಲ್ಲಿಯೇ ಮೊದಲ ಸಲ ನಾನು ನನ್ನ ಎರಡನೆಯ ಸೋದರತ್ತೆಯನ್ನು ಕಂಡದ್ದು. ಆ ಸುಮಾರಲ್ಲೇ ಅಲ್ಲಿ ಕಾಶಿಪಂಡಿತರೆಂಬವರು ವಾಸ ಮಾಡುತ್ತ ಬೆಂಗಳೂರಿಗೂ ಕಾಶಿಗೂ ನಡುವೆ ಖಾಸಗಿ ರಾಯಭಾರಿಯಂತೆ ಕ್ಷೇತ್ರದರ್ಶನ, ರೇಷ್ಮೆ, ರುದ್ರಾಕ್ಷಿ, ಕಸ್ತೂರಿ, ಸಾಲಿಗ್ರಾಮ ಮುಂತಾದವುಗಳನ್ನು ಬೆಂಗಳೂರಿನ ಜನರಿಗೆ ತಂದು ಕೊಡುತ್ತಿದ್ದುದನ್ನು ಬಲ್ಲೆ. ರಸ್ತೆಯ ಉದ್ದಕ್ಕೆ ತೊಡಗಿ ಎಡಕ್ಕೆ ತಿರುಗಿದರೆ ಧರ್ಮರಾಯನ ದೇವಸ್ಥಾನ. ಅದಕ್ಕೆ ಸಂಬಂಧಿಸಿದ ನಮ್ಮ ಊರಿನ ಪ್ರಖ್ಯಾತ ತಿಗಳ ಮನೆತನದವರ ಪೂಜಾಕಾರ್ಯ, ಕರಗದ ಸಮಾರಂಭ. ಬೆಂಗಳೂರಲ್ಲಿ ಚೈತ್ರ ಶುದ್ಧ ಪೂರ್ಣಿಮೆಯಂದು ಆ ಸಂಭ್ರಮ ಮೊದಲಿಡುತ್ತಿದ್ದುದು. ಆ ಒಂದು ದಿನ ಬೆಂಗಳೂರಿಗೆ ಬರುತ್ತಿದ್ದಷ್ಟು ಜನ ಬೇರಾವಾಗಲೂ ಬರುತ್ತಿರಲಿಲ್ಲ. ಮಧ್ಯಾಹ್ನ ಅಲಸೂರು ತೇರು ನೋಡಿಕೊಂಡು ಸಂಜೆಯ ಹೊತ್ತಿಗೆ ಎಳ್ಳು ಹಾಕಿದರೆ ಸಿಡಿಯುವಂತೆ ಸಂಚಾರ ಮಾಡುತ್ತಿದ್ದ ಜನಸಂದಣಿ ಸಮಾಜ ವಿಜ್ಞಾನಿಗಳು ವರ್ಣಿಸುವ ಶ್ರೀಸಾಮಾನ್ಯ ವರ್ಗ. ಆ ಒಂದು ದಿವಸದ ಬೆಂಗಳೂರಿನ ವ್ಯಾಪಾರ, ಅವರ ತಿಂಡಿತೀರ್ಥದ ಕಷ್ಟ ಕಾರ್ಪಣ್ಯಗಳು; ಆದರೆ ಶ್ರದ್ಧೆ ಅಳಿಯದೆ, ಉತ್ಸಾಹ ಜಾಳಾಗದೆ ಅವರು ತಿಂದು ತೃಪ್ತಿ ಪಡುತ್ತಿದ್ದ ಸಿಹಿ ಖಾರ ಪದಾರ್ಥಗಳ ಸರಬರಾಜು; ಉದ್ದಕ್ಕೂ ಕರಗ ಹೋಗುವ ದಾರಿಯಲ್ಲಿ ಪಾನಕಾದಿಗಳನ್ನು ಹೋಗುತ್ತಿದ್ದವರಿಗೆಲ್ಲ ಕೊಡುತ್ತಿದ್ದ ಅರವಟ್ಟಿಗೆಗಳು; ಕರಗವನ್ನು ನಿಲ್ಲಿಸಿಕೊಂಡು ಅದಕ್ಕೆ ಸಲ್ಲಿಸುತ್ತಿದ್ದ ಪೂಜೆ, ಬೆಂಗಳೂರಿನ ಜೀವನಕ್ಕೆ ಅಂಥ ಸಮಯಗಳಿಗೇ ವಿಶೇಷವಾದ್ದು. ಮಿಠಾಯಿ, ಬತ್ತಾಸು, ಕಲ್ಯಾಣಸೇವೆ, ಕಡಲೆಪುರಿಗಳ ರಾಸಿ. ಮಧ್ಯಾಹ್ನ ದೊಡ್ಡಪೇಟೆಯ ಚೌಕದವರೆಗೂ ಬಂದು ನಿಲ್ಲುತ್ತಿದ್ದ ರಂಗಸ್ವಾಮಿಯ ತೇರು; ಇಲ್ಲಿಂದ ಧರ್ಮರಾಯನ ತೇರು – ಇವೆಲ್ಲ ಮಾರನೆಯ ಬೆಳಿಗ್ಗೆ 10 ಗಂಟೆಯವರೆಗೂ ದೊಡ್ಡಪೇಟೆಯಲ್ಲಿ ಮೆರವಣಿಗೆ ಹೊರಟು ಮಾರ್ಕೆಟ್ ತಿರುಗಿ, ಸಿದ್ದಿಕಟ್ಟೆ, ಸೀಗೇಬೇಲಿ, ರಾಣಾಸಿಂಗ್ ಪೇಟೆ, ಅರಳೇಪೇಟೆಗಳಲ್ಲಿ ಸಂಚಾರ ಮಾಡುವ ಆ ವೈಭವ ಬೆಂಗಳೂರಿನ ಒಂದು ವಿಶೇಷ ಉತ್ಸವ ಕಾರ್ಯ.



ಧರ್ಮರಾಯ ದೇವಸ್ಥಾನವನ್ನು ದಾಟಿಕೊಂಡು ಸ್ವಲ್ಪ ದೂರ ಹೋದರೆ ಗಾಣಿಗರ ಪೇಟೆ, ಆಮೇಲೆ ನಗರ್ತಪೇಟೆ. ಬಲಗಡೆ ಒಂದು ರಸ್ತೆಗೆ ಕಾಮನ ಹುಣ್ಣಿಮೆಯ ಸಂಬಂಧದಲ್ಲಿ ಬಹು ವಿಜೃಂಭಣೆಯಿಂದ ಕಾಮನ ಸ್ಥಾಪನೆ, ಅಲಂಕಾರ ಒಂದು ವಾರ, ಹತ್ತು ದಿನ ನಡೆಯುತ್ತಿದ್ದುವು. ಗಾಣಿಗರ ಪೇಟೆಯ ಕಾಮಣ್ಣ, ರಾಣಾಸಿಂಗ್ ಪೇಟೆ ಕಾಮಣ್ಣ ಬೆಂಗಳೂರಿಗೆ ಬಹು ಹೆಸರಾದ ಸಂದರ್ಭಗಳು. ಮನ್ಮಥನ ರಂಗು ಯಾವ ಶುಚೀಂದ್ರಂ ವಿಗ್ರಹಗಳ ಆಯಕಟ್ಟಿಗೂ ಶಿಲ್ಪಕ್ಕೂ ಕಡಮೆಯಾಗುತ್ತಿರಲಿಲ್ಲ. ಆ ಅಲಂಕಾರಗಳು ಸೂಕ್ಷ್ಮ ನಯ ಕಲೆಗಾರಿಕೆಯಲ್ಲಿ ತುಂಬ ಮೇಲ್ತರದ್ದು ಎನ್ನುವ ಹಾಗೆ ಈಗ ನನಗೆ ಭಾಸವಾಗದಾದರೂ ಜನತೆಯ ಮನಸ್ಸಿಗೆ ತುಂಬ ತೃಪ್ತಿಯನ್ನೂ ಸಂತೋಷ ವನ್ನೂ ತಂದುಕೊಡುತ್ತಿದ್ದ ದರ್ಶನ ಅದು. ಇನ್ನೂ ಸ್ವಲ್ಪ ಮುಂದೆ ಬಂದರೆ ದೊಡ್ಡದಾದ ಒಂದು ಈಶ್ವರ ದೇವಸ್ಥಾನ, ಬೆಂಗಳೂರಿನ ಬಹು ದೊಡ್ಡ ದೇವಸ್ಥಾನಗಳಲ್ಲಿ ಒಂದು. ಬಹುಶಃ ಕೋಟೆಯ ಶ್ರೀನಿವಾಸ ದೇವರ ಮಂದಿರ, ಊರ ಈ ಕೊನೆಗೆ ಇರುವ ಗವಿ ಗಂಗಾಧರೇಶ್ವರ ಗುಡಿ, ಊರ ನಡುವೆ ಕುತ್ತಿಗೆ ಹಿಸುಕಿದಂತೆ ಒಂದು ಮೂಲೆಯಲ್ಲಿ ಇರುವ ಕಾಶಿವಿಶ್ವೇಶ್ವರನ ಗುಡಿ, ತುಪ್ಪದಾಂಜನೇಯನ ಗುಡಿಯ ಹತ್ತಿರವಿರುವ ರಂಗಸ್ವಾಮಿ ದೇವಸ್ಥಾನ – ಇವೇ ಆ ಕಾಲದ ಪ್ರಖ್ಯಾತ ದೇವಾಲಯಗಳು. ಸ್ವಲ್ಪ ಮುಂದಕ್ಕೆ ತುಂಬಾ ಪ್ರಖ್ಯಾತವಾದ್ದು – ಬೆಂಗಳೂರಿನ ಜೀವನದಲ್ಲಿ ಬಹುಜನರ ಪ್ರೀತಿಗೂ ಭಕ್ತಿಗೂ ಆಕರ್ಷಣೆಗೂ ಪಾತ್ರವಾಗಿದ್ದುದು ಕಾಳಮ್ಮನ ಗುಡಿ. ನವರಾತ್ರಿ ಸಮಯದಲ್ಲಿ 10 ದಿನ ಏನು, 15 ದಿವಸಗಳವರೆಗೂ ದೇವತೆಗೆ ಮಾಡುತ್ತಿದ್ದ ಬಗೆಬಗೆಯ ಅಲಂಕಾರಗಳನ್ನು ನೋಡುವುದಕ್ಕೆ ರಾತ್ರಿ ಹತ್ತಾರು ಸಾವಿರ ಜನ! ಹೂವೇನು, ಹಣ್ಣೇನು, ಶಾಖಾದಿಗಳೇನು, ದ್ರಾಕ್ಷಿ ದಾಳಿಂಬೆಗಳೇನು! ಎಲ್ಲಕ್ಕಿಂತ ವಿಶೇಷವಾಗಿ ಸವರನ್ ಅಲಂಕಾರ ಜನರ ಕಣ್ಣು ಮನಸ್ಸುಗಳನ್ನು ತೃಪ್ತಿಗೊಳಿಸುತ್ತಿತ್ತು. ಅದರ ಪಕ್ಕದ ಒಂದು ದೇವಸ್ಥಾನದ ಮುಂದೆ ಉತ್ಸವಾದಿಗಳು ಹೆಚ್ಚಾಗಿ ನಡೆಯದಿದ್ದರೂ ಮೈಲಿಕಲ್ಲಿನ ಹಾಗೆ ನೆಟ್ಟ ಒಂದು ನಿಲು ಹಲಗೆಯ ಮೇಲೆ ತೆಲುಗು ಅಕ್ಷರದಲ್ಲಿ ಯಾವುದೋ 'ಕಲ್ಪಮು' ಎಂಬ ಹೆಸರಿನ ಬರವಣಿಗೆ ಇರುತ್ತಿತ್ತು. ಅದರ ಎದುರಿಗೆ ನೆಲಸಿದ ಇನ್ನೊಂದು ರಸ್ತೆ ಒಂದು ಬಗೆಯ ನೇಯ್ಗೆಯವರ, ಒಡವೆ ಅಂಗಡಿಗಳವರ ಕಾರ್ಯಶಾಲೆಗಳಾಗಿರುತ್ತಿದ್ದವು. ಉದ್ದಕ್ಕೆ ಒಂದು ಮಸೀದಿಗೆ ಅದು ನಡಸುತ್ತಿತ್ತು. ಇನ್ನೊಂದು ದೊಡ್ಡ ಮಸೀದಿ ದೊಡ್ಡಪೇಟೆಯಲ್ಲಿ ಬೆಳ್ಳಿ ಬಸವಣ್ಣನ ಗುಡಿ ಬೀದಿಗೂ ಚೌಕಕ್ಕೂ ನಡುವೆ ಸರಾಫ ಚನ್ನಬಸಪ್ಪನವರ ಗ್ರಂಥಿಗೆ ಅಂಗಡಿ ಈಚೆಗೆ ಹಿಂದಕ್ಕೆ ಮರೆಯಲ್ಲಿರುವುದು. ಇದರ ಹಿರಿಮೆ ದೊಡ್ಡದೆಂದು ಕೇಳಿದ್ದೇನೆ. ಸದ್ದುಗದ್ದಲವಿಲ್ಲದೆ ಇಲ್ಲಿನ ಪ್ರಾರ್ಥನೆ, ಪೂಜಾ ಕಾರ್ಯಗಳು – ಇಂಥ ಮಾತನ್ನು ಮಸೀದಿಗಳಲ್ಲಿಗೆ ಬಳಸಬಹುದಾದರೆ – ನಡೆಯುತ್ತವೆ. ಯಾವುದೋ ಒಂದು ಆಗರ್ಭ ಶ್ರೀಮಂತಿಕೆ ಇದರ ವಿಶೇಷ ಲಕ್ಷಣವಾಗಿದೆ. ಈಚೆಗೆ ಮಾರ್ಕೆಟ್ ಇಂದ ಟೌನ್‌ಹಾಲ್‌ಗೆ ಹೋಗುವ

ದಾರಿಯಲ್ಲಿ ಒಂದು ಮಸೀದಿ ದೊಡ್ಡದಾಗಿ ಬೆಳೆದಿದೆ. ಆ ಸಂಬಂಧ ನಾನು ಈವರೆಗೂ ಹೇಳಿದ ಆವರಣಕ್ಕೆ ಹೆಚ್ಚಾಗಿ ಹೊಂದುವಂಥದಲ್ಲ.

ಕಂಟೋನ್‌ಮೆಂಟ್ ಅಥವಾ ದಂಡು ಎಂದು ನಾವು ಕರೆಯುತ್ತಿದ್ದ ಪ್ರದೇಶ ಬೆಂಗಳೂರು ಪಟ್ಟಣದಷ್ಟು – ಇನ್ನೂ ಹೆಚ್ಚು – ವಿಸ್ತಾರವಾದ್ದು. ಅದರಲ್ಲಿ ಬಹು ದೊಡ್ಡ ಮಸೀದಿಗಳು, ಕ್ರೈಸ್ತ ಪಂಥದವರ ಚರ್ಚುಗಳು ಇವೆ. ಅಲ್ಲಿ ಆ ಮತಗಳವರ ನೆಲಸು, ಪ್ರಭಾವ ನಗರದಲ್ಲಿಗಿಂತ ಹೆಚ್ಚು. ವಿಕ್ಟೋರಿಯಾ ಅಮೃತಶಿಲಾ ಪ್ರತಿಮೆಯ ಪ್ರದೇಶದಿಂದ ಹಿಡಿದು ಅಲಸೂರಿನವರೆಗೆ ಹೋಗುವ ದಾರಿಯಲ್ಲಿಯೇ ಸೈಂಟ್ ಆಂಡ್ರ್ಯೂಸ್, ಸೈಂಟ್ ಮಾರ್ಕ್ಸ್, ಸೈಂಟ್ ಪಾಲ್ ಮುಂತಾದ ದೊಡ್ಡ ಕ್ರಿಸ್ತ ಪ್ರಾರ್ಥನಾ ಮಂದಿರಗಳು ತಮ್ಮ ವಾಸ್ತುವೈಭವದಿಂದ ಕಾಣುತ್ತವೆ. ಇವುಗಳ ವಾಸ್ತುಶಿಲ್ಪವೂ ರಮ್ಯವಾದವು; ಮನಸ್ಸಿಗೆ ಒಂದು ಗಂಭೀರತೆಯ ಭಾವವನ್ನು ತರುವಂಥವು. ಉತ್ತರದ ಭಾಗದಲ್ಲಿ ಇನ್ನೊಂದು ದೊಡ್ಡ ಚರ್ಚ್ ಕಟ್ಟಡ ತನ್ನದೇ ಆದ ಮುಡಿಯನ್ನು ಎತ್ತಿ ನಿಂತಿರುವುದು ಕಾಣುತ್ತದೆ. ಆ ಪ್ರದೇಶದ ಪರಿಚಯ ನನಗಿಲ್ಲ. ಬೌರಿಂಗ್ ಹಾಸ್ಪಿಟಲ್, ಕಮರ್ಷಿಯಲ್ ರಸ್ತೆ ನಡುವೆ ಒಂದು ಉತ್ತಮ ಆಕೃತಿಯ ಮುಸ್ಲಿಂ ಮಸೀದಿ ಇದೆ. ಆ ಭಾಗದಲ್ಲಿರುವ ಮುಸ್ಲಿಂ ಪಂಥಗಳವರು ಮಸೀದಿಗಳಿಗೆ ಹೋಗುವ ವಿಧಾನಗಳಿಗೂ ನಗರದಲ್ಲಿ ಕಾಣುವ ದೃಶ್ಯಗಳಿಗೂ ಸ್ವಲ್ಪ ವ್ಯತ್ಯಾಸ ಇದೆ. ದಂಡಿನ ಮುಸಲ್ಮಾನರ ಕೈಯಲ್ಲಿ ಬೇಕಾದಷ್ಟು ಹಣವಿದೆ. ಅವರ ವ್ಯಾಪಾರ ದೊಡ್ಡ ಪ್ರಮಾಣದ್ದು. ಹಾಜಿ ಇಸ್ಮಾಯಿಲ್ ಸೇಟ್ ಮುಂತಾದವರ ಪ್ರಭಾವದಿಂದಲೂ ಇತರ ಅನೇಕ ಮುಸ್ಲಿಂ ಶ್ರೀಮಂತರು ನೆಲಸಿ ಕಾರ್ಯಕರ್ತರಾಗಿರುವ ಆ ಭಾಗದಲ್ಲಿನ ಮುಸ್ಲಿಂ-ಕ್ರೈಸ್ತ ಎರಡೂ ಪಂಥಗಳ ಮಂದಿರಗಳು ಯಾರಿಗೂ ಚಿತ್ತಾಕರ್ಷಕವಾದವು. ನಗರಗಳ ಒಳಗೆ ದೊಡ್ಡ ಚರ್ಚ್ ಎಂದರೆ ಚಾಮರಾಜಪೇಟೆಗೆ ಬರುವ ದಾರಿಯಲ್ಲಿ ಬ್ರಿಯಾಂಡ್ ಸರ್ಕಲಲ್ಲಿ ಇರುವ ಚರ್ಚ್; ಮಲ್ಲೇಶ್ವರದ ಕಡೆ ಇರುವ ಒಂದು ದೊಡ್ಡ ಚರ್ಚ್ ಮತ್ತು ಕಾನ್ವೆಂಟ್. ಅದು ವಿಸ್ತರಣಗಳಿಗೆ ಸಂಬಂಧಿಸಿದ ಮಂದಿರಗಳು.

ಒಂದು ಸಣ್ಣ ಸಂಗತಿಯನ್ನು ನಗರವರ್ಣನೆ ಮುಗಿಸುವ ಮುಂಚೆ ಹೇಳಬಹುದು. ಮಾರ್ಕೆಟ್ ಇಂದ ಪಶ್ಚಿಮದ ಕಡೆಗೆ ಬರುತ್ತ ಆರ್ಕಾಟ್ ಶ್ರೀನಿವಾಸಾಚಾರ್ ರಸ್ತೆಗೆ ತಿರುಗುವ ದಾರಿಯಲ್ಲಿ ಈಚೆ ಕಡೆಗೆ ವಿಕ್ಟೋರಿಯಾ ಆಸ್ಪತ್ರೆಯ ದಾರಿಗಳಿದ್ದರೂ ಆಚೆ ಕಡೆಗೆ ನೆಲಸಿರುವುದು ಸಿದ್ದೀಕಟ್ಟೆ, ಸೀಗೇಬೇಲಿ ಎಂದೆ. ಹಿಂದಿನ ಕಾಲದಲ್ಲಿ ಅಲ್ಲಿಗೆ ತಿರುಗುವ ಮೂಲೆಯಲ್ಲಿ ಸಿ.ವಿ. ರಂಗಯ್ಯ ಎಂಬ ಬ್ರಾಹ್ಮಣರ 'ಃಆಣ ಚಿಟಿಜ ಖಆಜ ಅಂಗಡಿ ಇತ್ತು. ಬ್ರಾಹ್ಮಣ ಚಕ್ಕಳದ ವಸ್ತುಗಳನ್ನು ಉತ್ತಮವಾಗಿ ಮಾಡಿಸುವುದರಲ್ಲಿ ತೊಡಗಿದ್ದುದನ್ನು ನಾವು ಅಲ್ಲಿಯೇ ಮೊದಲು ನೋಡಿದ್ದು. ಸಿದ್ದೀಕಟ್ಟೆಯಲ್ಲಿ ಅನೇಕ ವಿದ್ವಾಂಸರು, ಮಾಧ್ವ ಮತ್ತು ಸ್ಮಾರ್ತ ಬ್ರಾಹ್ಮಣ ಕುಟುಂಬಗಳವರು ವಾಸ ಮಾಡುತ್ತಿದ್ದರು. ಬಲಗಡೆ 'ಸದಾಧಾರ' ಎಂಬ ಹೆಸರಿನಲ್ಲಿ ಇದ್ದ ಮನೆಯಲ್ಲಿ ನಮ್ಮ



ಸಂಸ್ಥಾನದಲ್ಲಿ ಪ್ರಖ್ಯಾತರಾದ ದೊಡ್ಡಬೆಲೆ ನಾರಾಯಣಶಾಸ್ತ್ರಿಗಳು ವಾಸಮಾಡುತ್ತಿದ್ದರು. ವೇದ, ಸಾಹಿತ್ಯ, ಯಜ್ಞಯಾಗಾದಿಗಳ ಪ್ರಯೋಗಭಾಗ, ಕನ್ನಡ–ಸಂಸ್ಕೃತ ಕವಿತಾ ನಿರ್ಮಾಣ ಎಲ್ಲದರಲ್ಲಿಯೂ ಗಣ್ಯರಾದ ವಿದ್ವಾಂಸರು ಅವರು. ಜೊತೆಗೆ ಕೋಟೆಯಲ್ಲಿರುವ ಎ. ವಿ. ಸ್ಕೂಲಲ್ಲಿ ಕನ್ನಡ ಪಾಠ ಹೇಳುತ್ತಿದ್ದರು. ದೊಡ್ಡಬೆಲೆ ಅವರ ಊರಾದರೂ ಬೆಲೆಯಲ್ಲಿಯೂ ಅವರು ದೊಡ್ಡವರೇ. ಅವರು ಕಂಠಪಾತ್ತಿ ಕನ್ನಡದ ಒಂದು ಷಟ್ಪದಿಯನ್ನೊ ವೃತ್ತವನ್ನೊ ಓದುವ ಠೀವಿ, ಕಂಠಶ್ರೀ ಕೇಳಿದ ಯಾರ ಕಿವಿಯಲ್ಲಿಯೂ ಮೊಳಗಬಲ್ಲದಾಗಿದ್ದುದು. ಅವರು 'ಶಾರದಾ' ಎಂದೊ ಏನೊ ಹೆಸರಿನ ಒಂದು ಕನ್ನಡ ಪತ್ರಿಕೆಯನ್ನು ನಡಸುತ್ತಿದ್ದರು. ಅಲ್ಲಿ ಕಾವ್ಯಶಾಸ್ತ್ರ ವಿಚಾರಗಳನ್ನು ಆಧಾರ ಗ್ರಂಥಗಳಿಂದ ಪ್ರಕಾಶಪಡಿಸುತ್ತಿದ್ದರು. ಅವರ ಎದುರು ಮನೆ ಬಹು ದೊಡ್ಡ ಅಂಗಳದ್ದು. ಅಲ್ಲಿ ಎಷ್ಟು ಸಂಸಾರಗಳಿದ್ದವೊ! ನನಗೆ ಗುರುತಿದ್ದ ನಾಲ್ಕೈದು ಸಂಸಾರಗಳವರು ಅಲ್ಲಿ ಇದ್ದರು. ಬೆಂಗಳೂರಲ್ಲಿ ಮತ್ತು ಮೈಸೂರಲ್ಲಿ ಪ್ರಸಿದ್ಧರಾದ ಪೊಲೀಸ್ ಇನ್ಸ್‌ಪೆಕ್ಟರ್ ರಘೋತ್ತಮರಾಯರೆಂಬವರು ಒಬ್ಬರು, ಶ್ರೀನಿವಾಸರಾಯರೆಂಬವರೊಬ್ಬರು ಅಲ್ಲಿದ್ದರೆಂದು ನನ್ನ ನಂಬಿಕೆ. ಅವರ ಆಕೃತಿ ವಿಶೇಷ ಅಸಾಧಾರಣವಾದುದು. ಕಾಲೇಜಲ್ಲಿ ನನ್ನ ಜೊತೆಯಲ್ಲಿ ಓದಿ ತತ್ವಶಾಸ್ತ್ರದಲ್ಲಿ ಹೆಸರು ಪಡೆದು ಮೈಸೂರು ವಿಶ್ವವಿದ್ಯಾಲಯದ ಪುಸ್ತಕ ಭಂಡಾರದ ಅಧಿಕಾರಿಗಳಾಗಿ ನಿವೃತ್ತರಾದ ಜಿ. ಹನುಮಂತರಾಯರಿಗೆ ಅಲ್ಲಿದ್ದವರ ಮನೆಯಲ್ಲಿ ಮದುವೆಯಾಗಿತ್ತು. ಬಹುಶಃ ನನ್ನ ತಂದೆಯ ಹುಟ್ಟೂರಿಗೆ ಸಂಬಂಧಿಸಿ ಬೆಂಗಳೂರಲ್ಲಿ ನೆಲಸಿದ್ದ ಶಾಮಣ್ಣನೆಂಬವರು ಅಲ್ಲಿಯೇ ವಾಸಿಸುತ್ತಿದ್ದರು. ಬೆಂಗಳೂರಲ್ಲಿ ಸುಮಾರು 1919-20ರಲ್ಲಿ ಎಂದು ಕಾಣುತ್ತದೆ, ಹುಚ್ಚು ಮಳೆ ಕರೆದು ಅರ್ಧ ಸೀಗೇಬೇಲಿ, ಸಿದ್ದಿಕಟ್ಟೆ ಮುಳುಗಿ ಹೋಯಿತು. ತಗ್ಗಿನಲ್ಲಿರುವ ಮನೆಗಳು ಮಣ್ಣು, ಹಸಿ ಇಟ್ಟಿಗೆಗಳಿಂದ ಕಟ್ಟಿದವು. ಆಗ ಆದ ನಾಶ ಸಾಧಾರಣವಾದ್ದಲ್ಲ, ಹಳೆಯ ಮಾರ್ಕೆಟ್‌ನಲ್ಲಿ ಈಗ ದೊಡ್ಡ ಪೇಟೆಗೆ ತಿರುಗುವ ಸುಮಾರಲ್ಲಿ ಇದ್ದವೂ ಮಣ್ಣಿನವೇ ಸಣ್ಣ ಸಣ್ಣ ಅಂಗಡಿಗಳು. ಹೂ ಕುಂಕುಮ ಹೆಚ್ಚಾಗಿ ಮಾರುತ್ತಿದ್ದ ಪ್ರದೇಶ. ಒಂದು ಮಳೆ ಬಂದರೆ ಈಗಲೂ ಆ ಪ್ರದೇಶವೆಲ್ಲ ಮೊಳಕಾಲಿಗೆ ಮೇಲ್ಪಟ್ಟು ಹೆಚ್ಚು ನೀರು ನಿಲ್ಲುವಂಥದು. ಚಿಕ್ಕಪೇಟೆ ಬಳೇಪೇಟೆಗಳಲ್ಲಿ ಹಲವು ಭಾಗಗಳಲ್ಲಿ ಹಾಗೆ. ಆ ಪ್ರದೇಶದ ಸುಧಾರಣೆಯನ್ನು ಮಾಡಬೇಕಾದರೆ ಹತ್ತಾರು ಕೋಟಿ ವೆಚ್ಚ ಮಾಡಿ ಹೊಸ ಕಟ್ಟಡಗಳನ್ನು ಕಟ್ಟಬೇಕಾದೀತು. ನಮ್ಮ ಮುನಿಸಿಪಾಲಿಟಿಯವರು ಆ ಕಾರ್ಯವನ್ನು ಕೈಕೊಳ್ಳುವ ಸಾಹಸ ಎಂದಿಗಾದರೂ ಮಾಡಬಲ್ಲರೊ ಇಲ್ಲವೊ ಎನ್ನಿಸುತ್ತದೆ.

ಆರ್ಕಾಟ್ ಶ್ರೀನಿವಾಸಾಚಾರ್ ಬೀದಿಯಲ್ಲಿ ಸ್ವಲ್ಪ ಮುಂದಕ್ಕೆ ಬಂದರೆ ಬಂದವಾಡಿ ಚೌಕ. ಅದನ್ನು ದಾಟಿಹೋದರೆ ಮುಂದಕ್ಕೆ ಖಾನ್ ಅಬ್ಬಾಸ್‌ಖಾನ್ ಸಾಹೇಬರ ದೊಡ್ಡ ಮನೆ. ಅವರು ಬೆಂಗಳೂರಿನ ಸಾರ್ವಜನಿಕ ಜೀವನದಲ್ಲಿ ದೊಡ್ಡ ಸ್ಥಾನ ಪಡೆದಿದ್ದರು. ನಮ್ಮ ಲೆಜಿಸ್ಲೇಟಿವ್ ಕೌನ್ಸಿಲ್, ಪ್ರಜಾಪ್ರತಿನಿಧಿ ಸಭೆ, ಬೆಂಗಳೂರಿನ ಮುನಿಸಿಪಲ್ ಪ್ರತಿನಿಧಿ ಸಭೆ ಮುಂತಾದಲ್ಲಿ ಗಣ್ಯರಾಗಿದ್ದರು. ಕನ್ನಡವನ್ನು ಅವರು

ಮಾತನಾಡುತ್ತಿದ್ದ ಹಾಗೆ ಚೊಕ್ಕವಾಗಿ ಗಂಭೀರವಾಗಿ ಮಾತನಾಡಬಲ್ಲ ಮುಸಲ್ಮಾನರನ್ನು – ಏಕೆ? ಕನ್ನಡದ ಇತರ ಹಲವರನ್ನು – ನಾನು ಕಂಡಿಲ್ಲ. ಆತನ ನಿಲುವಂಗಿ, ರುಮಾಲು ವಿಶಿಷ್ಟವಾದುದು. ಅವರ ಮನೆ ಎದುರಿಗೇ ಸುಲ್ತಾನ್‌ಪೇಟೆ ಗಣಪತಿ ಪ್ರತಿಷ್ಠಿತವಾಗಿದ್ದು, ಒಂದು ದೊಡ್ಡ ದೊಂಬಿ ಪ್ರಕರಣಕ್ಕೆ ಸಂಬಂಧಿಸಿದ (1928?) ವಿಗ್ರಹ ಇರುವುದು. ಹಿಂದಿನ ಕಾಲದಲ್ಲಿ ಅಲ್ಲಿ ಬೆಂಗಳೂರಿನ ಒಂದು ಆಕ್ಟ್ರಾಯಿ ಆಫೀಸಿತ್ತು. ಅಬ್ಬಾಸ್‌ಖಾನರೂ ಅಲ್ಲಿ ಕೆಲಸ ಮಾಡಿದ್ದ ಒಬ್ಬ ಅಧಿಕಾರಿಯೇ. ಕೆಲವು ಕಾಲ ಅವರು ಒಂದು ಸಾಗುವಾನಿ ವ್ಯಾಪಾರವನ್ನು ನಡಸುತ್ತಿದ್ದರು. ಅಬ್ಬಾಸ್ ಖಾನ್ ಮನೆಯಿಂದಾಚೆಗೆ ಹಿಂದೆ ಹೇಳಿದಂತೆ ಸೆಂಟ್ರಲ್ ಮಹಮ್ಮಡನ್ ಅಸೋಸಿಯೇಷನ್. ಬಲಕ್ಕೆ, ಎಡಕ್ಕೆ ಸ್ವಲ್ಪ ದೂರದಲ್ಲಿ ಆರ್ಯಬಾಲಿಕಾ ಪಾಠಶಾಲೆ. ಅಲ್ಲಿಂದ ಬಹುಶಃ ಗಣಿತ ಕಲಾನಿಧಿ ಮತ್ತು ಬಾಲಿಕಾ ಗೀತಮುಕ್ತಿ ಕಲಾಪ ಎಂಬ ಪುಸ್ತಕಗಳು ಹೊರಕ್ಕೆ ಬಂದವೆಂದು ನನ್ನ ನಂಬಿಕೆ. Financial Civil Service ಅಲ್ಲಿ ದೊಡ್ಡ ಹುದ್ದೆಗೇರಿದ ಪ್ರಖ್ಯಾತರೊಬ್ಬರ ತಾಯಿ ಆ ಪಾಠಶಾಲೆಗೆ ಮುಖ್ಯೋಪಾಧ್ಯಾಯರಾಗಿದ್ದರು. ಆಮೇಲೆ ಅಲ್ಲಿ ಶಾಂಪೂರವರ ವ್ಯಾಪಾರದ ಮಂಡಲಿ ಸ್ಥಾಪಿತವಾಯಿತು. ಮುಂದುವರಿದರೆ ಶ್ರೀವ್ಸ್ ಅಂಡ್ ಕೊ. ಎಂಬ ಔಷಧಿ ಅಂಗಡಿ ಎತ್ತರದ ಜಗುಲಿಯ ಮೇಲಿತ್ತು. ಹಿಂದಿನ ಕಾಲದಲ್ಲಿ ಪಾಶ್ಚಾತ್ಯ ವೈದ್ಯಕ್ಕೆ ಸಂಬಂಧಿಸಿದ ಎಲ್ಲ ಔಷಧಿಗಳೂ ಅಲ್ಲಿ ದೊರೆಯುತ್ತಿದ್ದುವು. ಸ್ವಲ್ಪ ಮುಂದೆ ಹೋದರೆ ಎಡಗಡೆಗೆ ಸುಲ್ತಾನ್‌ಪೇಟೆಗೆ, ಬಲಗಡೆಗೆ ಹಳೇ ತರಗುಪೇಟೆಗೆ ರಸ್ತೆ ತಿರುಗುತ್ತದೆ.

ಎಡಕ್ಕೆ ಇದ್ದ ಅಕ್ಕೀಪೇಟೆಯ ವಿಷಯವಾಗಿಯಾಗಲಿ, ಅದಕ್ಕೆ ನಡುವೆ ಇರುವ ಅರಳೇಪೇಟೆಯ ಸಂಗತಿಗಳಾಗಲಿ, ಬಲಕ್ಕೆ ತರಗುಪೇಟೆಗೂ ದೊಡ್ಡ - ಚಿಕ್ಕಪೇಟೆಗಳಿಗೂ ನಡುವೆ ಇರುವ ಭಾಗಕ್ಕಾಗಲಿ, ಅತ್ತ ಕಾಳಮ್ಮನ ಗುಡಿಗೂ ಕಬ್ಬನ್‌ಪೇಟೆಗೂ ನಡುವೆ ಇರುವ ಜನವರ್ಗವನ್ನಾಗಲಿ, ಅಲ್ಲಿನ ವಿಶೇಷವನ್ನು ಕುರಿತಾಗಲೀ ವಿವರಿಸುವ ಅವಕಾಶವಿಲ್ಲ. ನನ್ನ ತಿಳಿವಳಿಕೆಯೂ ಕಡಮೆ. ಚಿಕ್ಕಪೇಟೆಯಿಂದ ಉತ್ತರಕ್ಕೆ ಸಂಗೀತ – ನಾಟ್ಯಗಳಿಗೆ ಸಂಬಂಧಿಸಿದ ಒಂದೆರಡು ಮಾತು ಮಾತ್ರ ಹೇಳಬಹುದು. ಒಂದು ಕಾಲದಲ್ಲಿ ಬೆಂಗಳೂರು ಗಾಯನ ಸಮಾಜ ಮಹಿಳೆಯರ ಗಾಯನಕ್ಕೆ ಬಹುಕಾಲ ಅವಕಾಶ ಕೊಡುತ್ತಿರಲಿಲ್ಲ. ಆದುದರಿಂದ ಕೃಷ್ಣ ಗಾನ ಸಮಾಜ ಎಂಬ ಒಂದು ಸಂಸ್ಥೆ ಮುಖ್ಯವಾಗಿ ಶಾಮಯ್ಯಂಗಾರ್ ಎಂಬವರ ಸಹಕಾರದಿಂದ ನಡೆಯುತ್ತಿತ್ತು. ಸಾಹೂಜಿಯವರ ಮನೆ ಎಂಬ ಮನೆಯ ಮೇಲೆ ಮಹಡಿಯಲ್ಲಿ ಕೊಯಮತ್ತೂರು ತಾಯಿ, ನಾಗರತ್ನಮ್ಮ ಮುಂತಾದವರ ಸಂಗೀತಗಳು ನಡೆದವು. ಅಲ್ಲಿನ ಸಭಾಮಂದಿರ ಅಷ್ಟೇನೂ ದೊಡ್ಡದಲ್ಲವಾದರೂ ಕೇಳುವುದಕ್ಕೆ ಹೋಗುವವರು ನೆಮ್ಮದಿಯಿಂದ ಕುಳಿತುಕೊಂಡು ಕೇಳಬಹುದಿತ್ತು. ಸವಿಯಾದ ಕಂಠಸ್ವರದಿಂದ ತಾಯಿ ಹಾಡಿದ ನಾಯಕಿ ರಾಗದ ಒಂದು ಕೃತಿ ಮೃದುತೆ, ಕೋಮಲತೆಗಳಿಗೆ ಸಾಕ್ಷಿಯಾಗಿ ನನ್ನ ನೆನಪಿನಲ್ಲಿ ಈವರೆಗೂ ಅಚ್ಚಳಿಯದೆ ಇದೆ. ಬೆಂಗಳೂರು ನಾಗರತ್ನಮ್ಮ ಅವರ – ಈಕೆ ಉತ್ತರ



ಕಾಲದಲ್ಲಿ ತಿರುವಯ್ಯಾರಿಗೆ ಹೋಗಿ ನೆಲಸಿ ತ್ಯಾಗರಾಜರ ಮಂದಿರ ನಿರ್ಮಾಣ ಹಾಗೂ ಅಲ್ಲಿನ ಉತ್ಸವಗಳ ಏರ್ಪಾಡಿಗೂ ಕಾರಣಳಾದಳು – ಪಂಚರತ್ನ ಕೃತಿಗಳ ಧೀರ ಗಂಭೀರ ಹಾಡುಗಾರಿಕೆಯಿಂದ ಖ್ಯಾತಿಗೊಂಡಿದ್ದರು. ಸ್ವಲ್ಪ ಮುಂದೆ ಹೋದರೆ ಬೆಂಗಳೂರಿನ ಪ್ರಸಿದ್ಧ ವಯೋಲಿನ್ ವಿದ್ವಾಂಸರಾದ ಪುಟ್ಟಪ್ಪ, ತಾಯಪ್ಪನವರ ಮಂದಿರಗಳು ಇದ್ದವೆಂದು ನನ್ನ ಎಣಿಕೆ. ಮೈಸೂರಲ್ಲಿ ವೀಣೆಗೆ ಶೇಷಣ್ಣನವರು, ಸುಬ್ಬಣ್ಣನವರು ಹೇಗೆ ಖ್ಯಾತರೊ ಬೆಂಗಳೂರಲ್ಲಿ ಪಿಟೀಲು ವಾದನಕ್ಕೆ ತಾಯಪ್ಪನವರು, ಪುಟ್ಟಪ್ಪನವರು ಹಾಗೆ. ಪುಟ್ಟಪ್ಪನವರು ಹೆಚ್ಚಾಗಿ ಸಂಗೀತದ ಸಭೆಗಳಿಗೆ ಬಂದುದು ನೆನಪಿಲ್ಲ. ತಾಯಪ್ಪನವರು ಕಡೆಕಡೆಯವರೆಗೂ ವಾದನ ಮಾಡುತ್ತಿದ್ದರು. ಅವರಿಗಿದ್ದ ಗೌರವ ದೊಡ್ಡದು. ಆರಕ್ಕೆ ಹೋಗದೆ ಮೂರಕ್ಕೆ ಇಳಿಯದೆ ಅವರ ವಾದನ ಸಂಗೀತಗಾರನಿಗೆ ಎದುರುವಾದ್ಯವಾಗದೆ, ಅತಿ ಕೌಶಲ್ಯ ಅಥವಾ ವಿದ್ವತ್ತನ್ನು ಪ್ರಕಾಶಪಡಿಸುವಂತೆ ತೊಡಗದೆ, ನುಣುಪಾಗಿ ಹದವರಿತು ನೆರವಾಗುತ್ತಿತ್ತು. ಪುಟ್ಟಪ್ಪನವರ ಮನೆಯಲ್ಲಿ ವರಾಲು ಎಂಬಾಕೆ ಭರತನಾಟ್ಯದ ಬೋಧೆಯನ್ನು ಮಾಡುತ್ತಿದ್ದರು. ಈಗಿನ ಕಾಲದ ಒಬ್ಬರಿಬ್ಬರು ನಾಟ್ಯಕೋವಿದರು ಅವರಲ್ಲಿ ಅಭಿನಯ ಮತ್ತು ನೃತ್ಯದ ಕಲಿಕೆಯನ್ನು ಸಂಪಾದಿಸಿದ್ದರು. ಆ ಪ್ರಪಂಚವನ್ನು ಕುರಿತು ನಾನು ಇನ್ನೇನೂ ಹೇಳುವ ಹಾಗಿಲ್ಲ.

ಅಲ್ಲಿಂದ ಮುಂದಕ್ಕೆ ಅದೇ ಉತ್ತರಕ್ಕೆ ಹೋದರೆ ತುಪ್ಪದಾಂಜನೇಯನ ಗುಡಿ ಒಂದು ಕಡೆ, ಇನ್ನೊಂದು ರಂಗಸ್ವಾಮಿಯ ದೇವಸ್ಥಾನ – ಆ ಸುತ್ತಮುತ್ತಲಿನ ಭಕ್ತಿ ಆದರಗಳಿಗೆ ಪಾತ್ರವಾಗಿದ್ದವು. ರಂಗಸ್ವಾಮಿಯ ತೇರು – ಬಹುಶಃ ಚೈತ್ರ ಪೂರ್ಣಿಮೆಯಂದು – ಬಹಳ ಅದ್ದೂರಿಯಿಂದ ನಡೆಯುತ್ತಿತ್ತು. ಅಲಸೂರುಪೇಟೆ ಕಡೆಯಿಂದ ಧರ್ಮರಾಯನ ತೇರು ಚೌಕಕ್ಕೆ ಬಂದರೆ, ರಂಗಸ್ವಾಮಿ ತೇರು ಉತ್ತರದ ಕಡೆಯಿಂದ ಬಳ್ಳಾಪುರದ ಪೇಟೆ ದಾಟಿ ಚೌಕಕ್ಕೆ ಬರುತ್ತಿತ್ತು. ಆರ್ಕಾಟ್ ಶ್ರೀನಿವಾಸಾಚಾರ್ ಬೀದಿಯ ಕೊನೆಯಿಂದ ಚಿಕ್ಕಪೇಟೆಯ ಎಡಕ್ಕೆ ತಿರುಗಿದರೆ ಬಲಕ್ಕೆ ಒಂದು ನೆಸ್ಯದ ಅಂಗಡಿ ಹೇಗೊ ಬಲಕ್ಕೂ ಹಾಗೇ ಒಂದು ಉಂಡೆ ನೆಸ್ಯದ ಅಂಗಡಿ ಬಹು ಕಾಲ ಪ್ರಸಿದ್ಧವಾಗಿತ್ತು. ಎದುರಿಗೇ ಬಹುಕಾಲ ಶ್ರೀವೈಷ್ಣವರೊಬ್ಬರ ಯಾಜಮಾನ್ಯದ ರೊಟ್ಟಿ ಬಿಸ್ಕತ್ತುಗಳ ಅಂಗಡಿ ಮೊದಲಿಂದಲೂ ನೆಲಸಿತ್ತು. ಒಂದು ವೀರಶೈವ ಮಠ ಅಲ್ಲಿ ಅನೇಕ ಸಂಸ್ಕೃತಿ ಕಾರ್ಯಗಳಿಗೆ ಹೆಸರುವಾಸಿಯಾಗಿತ್ತು. ಬೇತಿಂಗ್‌ಘಾಟ್ ರಸ್ತೆಯಲ್ಲಿ ಸುಮಾರು ಅನಂತ ಶಾಸ್ತ್ರಿಗಳವರ ಮತ್ತು ಇತರ ಕೆಲವು ಸಂಗೀತ ವಿದ್ವಾಂಸರ ಮನೆಗಳೂ ಕಲೆಗಾರರ ಮನೆಗಳೂ ಇದ್ದುವೆಂದು ಕೇಳಿಬಲ್ಲೆ. ಆ ಕಾಲದಲ್ಲಿ ಈ ಕಡೆಗೆ 2-3 ಹೆಸರಾದ ಗರಡಿ ಮನೆಗಳಿದ್ದವು. ರಾಣಾಸಿಂಗ್‌ಪೇಟೆಯಲ್ಲಿ ಒಂದು, ಅರಳೇಪೇಟೆಯಲ್ಲೊಂದು, ಬಳೇಪೇಟೆಯಲ್ಲೊಂದು. ಬೇರೆಯವೂ ಇದ್ದಿರಬಹುದಾದರೂ ನನಗೆ ಗೊತ್ತಿದ್ದವು ಈ ಮೂರು. ಅಲ್ಲಿ ತರಬೇತು ಹೊಂದಿದವರು

ಬೆಂಗಳೂರಿನ ವಸ್ತಾದಿಗಳೆಂದು ಕುಸ್ತಿ ಕಾಳಗಗಳಿಗೆ ಹೆಸರಾದವರು. ಬಹುಮಟ್ಟಿಗೆ ಇಷ್ಟಕ್ಕೆ ಹಳೆಯ ಬೆಂಗಳೂರು ಪಟ್ಟಣದ ಆವರಣ ಸೀಮೆ ಮುಗಿಯಿತೆನ್ನಬೇಕು. ಆದರೆ ಚಾಮರಾಜಪೇಟೆ ಬೆಂಗಳೂರಿನ ಈಚೆ ಕಡೆಯ ಮೊದಮೊದಲ ವಿಸ್ತರಣವಾದುದರಿಂದ ಇದಕ್ಕೆ ಅಂಟಿಕೊಂಡಂತೆ, ಇದರ ವಿಸ್ತರಣದಂತೆ ಮಾರ್ಕೆಟ್ ಎದುರಿನ ವಿಕ್ಟೋರಿಯಾ ಆಸ್ಪತ್ರೆ, ಕಣ್ಣಾಸ್ಪತ್ರೆ, ಟಿಪ್ಪೂ ಸುಲ್ತಾನರ ಅರಮನೆಯ ಪ್ರದೇಶ, ಅದರ ಎದುರಿಗೆ ಇರುತ್ತಿದ್ದ ಸಂಸ್ಕೃತ ಮಹಾಪಾಠಶಾಲೆ ಸೇರುತ್ತದೆ. ಸ್ವಲ್ಪ ಆಚೆಗೆ ಈ ಕಡೆ ವೆಂಕಟರಮಣಸ್ವಾಮಿ ದೇವಸ್ಥಾನ, ಹಿಂದಿನ ಕಾಲಗಳಲ್ಲಿರುತ್ತಿದ್ದ ತಾಲ್ಲೂಕ್ ಕಚೇರಿ; ರಸ್ತೆ ಆಚೆ ಕಡೆಗೆ ಒಂದು ರಕ್ಷಣಾದಳದ ಪೊಲೀಸ್ ಸ್ಟೇಷನ್ ಇರುತ್ತಿದ್ದವು. ಅಲ್ಲಿ ಮತ್ತು ಬ್ರಿಯಾಂಡ್ ಸರ್ಕಲ್ಲಿನ ಆ ಕಡೆಯ ಭಾಗದಲ್ಲಿದ್ದ ಕಾರ್ಯದಳದ ಒಂದು ಸಂಸ್ಥೆಯಲ್ಲಿ ದಿನವೂ ಗಂಟೆ ಬಡಿದು ಬೆಂಗಳೂರಿಗೆ ಹಗಲಿರುಳು ಕಾಲವನ್ನು ಸೂಚಿಸುತ್ತಿದ್ದುವು. ಕಾಲವನ್ನು ಸೂಚಿಸುವ ಇನ್ನೊಂದು ಧ್ವನಿ ನಮ್ಮ ಕಾಲದಲ್ಲಿ ಅದಕ್ಕಿಂತ ಪಶ್ಚಿಮದ ಕಡೆಯಲ್ಲಿದ್ದ ಮಿಷನ್ ಕೆರೆಯ ಆಚೆ ಇದ್ದ ಬಿನ್ನಿ ಕಂಪನಿಯವರ ಕಾರ್ಖಾನೆ. ಅದು ತನ್ನ ಕೂಗಿನಿಂದ (ಸೈರನ್) ಕೆಲಸ ಮಾಡುವವರಿಗೆ ಬೆಳಿಗ್ಗೆಯ ಕಾಲದ ಎಚ್ಚರವನ್ನು ಎರಡು ಸಲ ಕೊಡುತ್ತಿತ್ತು. ಕಂಬಳಿ ಮಿಷನ್ ಕೂಗಿತು ಎಂದರೆ ನಮಗೆ ಇಷ್ಟೇ ಗಂಟೆ ಎಂದು ಗೊತ್ತು. ಒಬ್ಬರಿಬ್ಬರು ಸಂಗೀತಗಾರರ ಕೊರಲ ಸಾಹಸವನ್ನು ಈ ಕಂಬಳಿ ಮಿಷನ್ ಕೂಗಿಗೆ ಹೋಲಿಸುತ್ತಿದ್ದುದುಂಟು. ಪಕ್ಕಕ್ಕೆ ಮಿಷನ್ ಕೆರೆ. ಬೆಳಗ್ಗೆ ಮೈಸೂರ ರೈಲು ಮಿಷನ್ ಕಟ್ಟಡದ ಹತ್ತಿರ ಹತ್ತಿರ ಬಂದು-ಅಲ್ಲಿ ದೊಡ್ಡ ಏರು ಇರುವ ಹಾಗೆ ಕಾಣುತ್ತದೆ, ಅದನ್ನು ಹತ್ತಬೇಕಾದಾಗ ಪಡುತ್ತಿದ್ದ ಕಷ್ಟ ಮಿಷನ್ ಕಟ್ಟಡದ ರಚನೆಯಿಂದಲೊ ಇನ್ಯಾತರಿಂದಲೊ ಪ್ರತಿಧ್ವನಿಸಿ ದಿನಾ 2-3 ನಿಮಿಷಗಳ ಕಾಲ ಮೈಸೂರು ರೈಲು ಬಂದು ಹೋಯಿತು ಅಥವಾ ಇನ್ನೂ ಬರಲಿಲ್ಲ ಎಂಬ ಒಂದು ಸಂಕೇತಕ್ಕೆ ಕಾರಣವಾಗುತ್ತಿತ್ತು.

* * *

ವಿಕ್ಟೋರಿಯಾ ಆಸ್ಪತ್ರೆ ಮೊದಲಿನಿಂದಲೂ ದೊಡ್ಡದೇ. ಈಗಿನಷ್ಟು ವಿಸ್ತಾರ, ಚಿಕಿತ್ಸೆಯ ವೈವಿಧ್ಯ ಇಲ್ಲದಿದ್ದ ಕಾಲದಲ್ಲಿಯೂ ಮಂದಿರದ ಭವ್ಯತೆ, ಗಾತ್ರ ಹಿರಿದು. ದೊಡ್ಡ ಶಸ್ತ್ರಕ್ರಿಯೆ ಅಲ್ಲಿ ಮಾತ್ರ ನಡೆಯುತ್ತಿದ್ದುದರಿಂದ ಅದನ್ನು ಕುರಿತು ಇದ್ದ ಗೌರವ, ಭಯ ಮೊದಲಿಂದಲೂ ನಮ್ಮ ನೆತ್ತರಿಗೆ ತಟ್ಟಿದ್ದೇ. ಎಲ್ಲರೂ ಒಳಕ್ಕೆ ಹೋಗ ಬಹುದಾಗಿದ್ದರೂ ದೊಡ್ಡ ಗೇಟನ್ನು ದಾಟಿ ಕೇಂದ್ರ ಕಟ್ಟಡಕ್ಕೆ ಹೋಗುವುದೆಂದರೆ ಹುಡುಗರಾದ ನಮ್ಮ ಮನಸ್ಸಿನಲ್ಲಿ ಅಳುಕು. ನೇರ ಎದುರಿಗೆ ಅಗಲವಾಗಿರುತ್ತಿದ್ದ ಅದರ ಮೆಟ್ಟಿಲು: ಕೆಲವು ಮೆಟ್ಟಿಲು ಹತ್ತಿದ ಮೇಲೆ ಎಡ-ಬಲ ಅದರ ಭುಜವಿಸ್ತರಣ – ಇವು ಇನ್ನಷ್ಟು ವರ್ಣರಂಜನೆಯುಳ್ಳ ಸಂಗತಿಗಳು. ಶಸ್ತ್ರಚಿಕಿತ್ಸೆ ಹಾಗಿರಲಿ, ಒಂದು ಕಡೆ ವಿದ್ಯುಚ್ಛಕ್ತಿಗೆ ಸಂಬಂಧಿಸಿದ ಕಾರ್ಯಕಲಾಪಗಳನ್ನು, ಸ್ಥಾಪನೆಗಳನ್ನು ನೋಡುವುದಕ್ಕೆ



ಕೂಡ ನಮಗೆ ಧೈರ್ಯವಿಲ್ಲ. ಮನುಷ್ಯರ ಜೀವಕ್ಕೆ ಗತಿ ಏನು ಈ ಶಬ್ದದಲ್ಲಿ? ಈ ಯಂತ್ರಜಾಲದಲ್ಲಿ? – ಎಂಬುದು ಈ ಅಳುಕಿಗೆ ಕಾರಣ. ಈಗಲೇನೊ ದೊಡ್ಡ ರಸ್ತೆಯವರೆಗೂ ಆಸ್ಪತ್ರೆ ಹಬ್ಬಿದೆ. ಆದರೆ Electric Air Station ಎಂಬ ವಿದ್ಯುನ್ಮಂದಿರ ಮಾರ್ಕೆಟ್ ಎದುರಿಗೆ ಆ ಮೂಲೆಯಲ್ಲಿರುತ್ತಿತ್ತು. ಅಲ್ಲಿಂದ ಹಿಡಿದು ಕೋಟೆಯ ದಿಡ್ಡಿ ಬಾಗಿಲವರೆಗೂ ತೆರೆದ ಪ್ರದೇಶ ಕೆಲವು ಕಾಲ ಬಯಲಾಗಿಯೂ ಸ್ವಲ್ಪ ಕಾಲವಾದ ಮೇಲೆ ಉಪವನವಾಗಿಯೂ ಮಾರ್ಪಟ್ಟು, ಅಲ್ಲಿ ಸಣ್ಣದೊಂದು ಕಾರಂಜಿ ನಿರ್ಮಿತವಾಗಿ ಒಂದು ಶಿವನ ವಿಗ್ರಹ ಸ್ಥಾಪಿತವಾಗಿ ಶಿವನ ತಲೆಯ ಮೇಲಿಂದ ಗಂಗೆ ಚಿಮ್ಮಿ ಕೆಳಗೆ ಬೀಳುವ ಹಾಗೆ ಏರ್ಪಾಡಿತ್ತು. ಈಗ ಶಿವನಿಗೂ ಕಾರಂಜಿಗೂ ಸ್ಥಳವಿಲ್ಲವಾಗಿದೆ. ಅಲ್ಲಿ ಶಿವನೂ ಇಲ್ಲ; ಗಂಗೆಯ ಉದ್ಭವವೂ ಇಲ್ಲ. ರಸ್ತೆಯ ಆಚೆ ಕಡೆಗೆ ದೊಡ್ಡಣ್ಣನವರ ಹಾಲ್. ಹಿಂದೆ ಅನೇಕ ಸಭಾಕಾರ್ಯಗಳು, ನಾಟಕಗಳು ಅಲ್ಲಿ ನಡೆಯುತ್ತಿದ್ದವು. ವಿಶ್ವೇಶ್ವರಯ್ಯನವರ ಕಾಲದಲ್ಲಿ ಮೊದಲ ಬಾರಿಗೆ ಸಾರ್ವಜನಿಕರಿಗಾಗಿ ನಡೆದ ಭೌತ ವಿಜ್ಞಾನದ ಉಪನ್ಯಾಸಗಳು ನಡೆದುದು ಅಲ್ಲಿ. ಗೋವಿಂದಸ್ವಾಮಿ ನಾಯಕರ್ ಕಂಪೆನಿ ಎಂಬ ಒಂದು ತಮಿಳು ಕಂಪನಿ ಬಂದು ಸೀತಾಕಲ್ಯಾಣ, ಲಂಕಾದಹನ ಮುಂತಾದ ನಾಟಕಗಳನ್ನು ಆಡಿದ, ನಾನು ನೋಡಿದ ನೆನಪಿದೆ. ಶಿವಧನುಸ್ಸನ್ನು ರಾಮನು ಮುರಿದಾಗ ಉದ್ದಕ್ಕೆ ಸುಮಾರು ಬೆಳ್ಳಗಿದ್ದ ಒಂದು ಪಟ್ಟಿಯನ್ನು ತೆಗೆದುಕೊಂಡು ಅದನ್ನು ಬಾಗಿಸತೊಡಗಿದಾಗ ಸಿಡಿಲು ಗುಡುಗು ಒಟ್ಟಿಗೆ ಬಡಿದ ಹಾಗೆ ಬಡಿಯುತ್ತಿದ್ದದ್ದು ಆಗ 8-10 ವಯಸ್ಸಿನ ನನಗೆ ರೋಮಾಂಚಕಾರಿಯಾಗಿತ್ತು. ರಾವಣನ ಆಸ್ಥಾನದಲ್ಲಿ ರಾಕ್ಷಸ ಚಕ್ರವರ್ತಿ ಎತ್ತರವಾದ ಸಿಂಹಾಸನದ ಮೇಲೆ ಕುಳಿತು ಅಟ್ಟಹಾಸದಿಂದ ಇರುವಾಗ, ಬ್ರಹ್ಮಾಸ್ತ್ರದ ಕೋಡಿಗೆ ಬಾಗಿ ಆಂಜನೇಯನು ಎದುರಿಗೆ ಬಂದು ನಿಂತು ರಾವಣನ ವೈಭವವನ್ನು ನೋಡಿ ತನ್ನ ಬಾಲವನ್ನು ಬಿಚ್ಚಿದ. ಒಂದು ಹಾವಿನ ಹಗ್ಗದಂತೆ ಗುಂಡಗೆ ಅದನ್ನು ಸುತ್ತಿ ಅವನು ಅದರ ಮೇಲೆ ಕುಳಿತಾಗ, ಆ ಬಾಲದ ಶಕ್ತಿಯಿಂದ ಎಂಬಂತೆ ಅದು ಏರಿತು, ಏರಿತು. ಬಹುಶಃ ಯಾವುದೊ ಸ್ಪ್ರಿಂಗ್‌ನ ಏರ್ಪಾಡೆಂಬಂತೆ ಕಾಣುತ್ತದೆ, ಆ ಸಿಂಹಾಸನದ ಎತ್ತರಕ್ಕೂ ಬಾಲ ಏರಿತು! ಅಚ್ಚರಿ ಪಡುತ್ತಿದ್ದ ರಾವಣ ‘ಇವ ಯಾರಡಾ?’ ಎಂದೊ ಏನೊ ಕೇಳಿದಾಗ ‘ಅಂದ ರಾಮಸಾಮಿ ದೂತ ನಾನಡ’ ಎಂದು ರಾಮಶಬ್ದಕ್ಕೆ ಕೈ ಮುಗಿಯುತ್ತ ಪ್ರತಿದರ್ಪದಿಂದ ಆಂಜನೇಯನು ಹಾಡುತ್ತಿದ್ದ ಹಾಡು ಈ ಕಾಲಮಾನದಲ್ಲಿ ಅಳಿಸದೆ ಅನುರಣನ ಮಾಡುತ್ತಿದೆ. ಅಲ್ಲಿನ ನಾಟಕದ ಕಂಪನಿಗಳು ಹೋಗಿ ಮೊದಮೊದಲು ಚಲಚ್ಚಿತ್ರಮಂದಿರ ಸ್ಥಾಪಿತವಾಗಿ ನಡೆದುದೂ ಅಲ್ಲಿಯೇ. ಅದರ ಆಚೆ ಕಡೆ ಕಟ್ಟಿದ ಒಂದು ಹೊಸ ಮಂದಿರ ಮುಸಲ್ಮಾನರ ಕಟ್ಟಡ. ಅಲ್ಲಿನ ಮಹಡಿಯ ಮೇಲಿನ ಒಂದು ದೊಡ್ಡ ಹಾಲಲ್ಲಿ ಸುಮಾರು 1913-14ರಲ್ಲಿ ಗುಹರ್‌ಜಾನ್ ಸಂಗೀತ ಏರ್ಪಟ್ಟಿತ್ತು. ಒಂದು ರೂಪಾಯಿಗೆ ಕಡಮೆ ಟಿಕೇಟು ಇಲ್ಲ. ಮುಂದೆ ಹೋಗಿ ಕುಳಿತುಕೊಳ್ಳಲು 5 ರೂಪಾಯಿ. 50-100ಕ್ಕೆ ಅಭ್ಯಾಸವಾದ ಈ ಕಾಲದಲ್ಲಿ 5 ರೂ.ನ ಮಹತ್ವ ಕಾಣದಿರಬಹುದು. ಆಗ ಅದಕ್ಕೆ ಹೆಚ್ಚು ಬೆಲೆ ಇತ್ತು.

ರಾತ್ರಿ 9 ಗಂಟೆ ಮೇಲೆ ಆರಂಭವಾದ ಆ ಕಚೇರಿ ಕೇಳುವುದಕ್ಕೆ ಹೊರಗೆ ಸಾವಿರ ಜನ ನಿಂತಿದ್ದೆವು. ಮುಂದಿನ ಕಾಲಗಳಲ್ಲಿ ಮೈಸೂರಲ್ಲಿ ಆಕೆಯ ಸಂಗೀತ ಕೇಳುವುದು ನನಗೆ ಶಕ್ಯವಾಗಿತ್ತಾದರೂ ಮೊದಲ ಬಾರಿಗೆ ಮುಸಲ್ಮಾನ್ ಮಹಿಳೆ ಒಬ್ಬಳ ಕಂಠಸ್ವರ ಗಾಯನ ಕೇಳಿದ್ದು ಆಗ. ಆಗ ಇನ್ನೂ ಗ್ರಾಮಫೋನ್‌ಗಳು ಹೊಸದಾಗಿ ತಯಾರಾಗುತ್ತ ಅದರ ಡಿಸ್ಕ್ ಅಥವಾ ರೆಕಾರ್ಡ್‌ಗಳು ತಯಾರಾಗಲು ಸುರುವಾಗಿದ್ದವು. ಕೊನೆಯಲ್ಲಿ My name is Guhar Jan ಎಂದು ಅಂಕಿತವಿರುತ್ತಿತ್ತು. ಕನ್ನಡದ ಕೆಲವು ರೆಕಾರ್ಡುಗಳನ್ನು ಮೈಸೂರಿನ ನಾಗಮ್ಮನವರು ಮಾಡುತ್ತಿದ್ದರು. ಅವರೂ My name is Nagamma ಎಂದು ಹೇಳುತ್ತಿದ್ದುದುಂಟು. ಮೊದಮೊದಲು ಹೀಗೆ ಧ್ವನಿಗಳ ಪರಿಚಯ ಮಾಡಿಕೊಡ ಬೇಕಾಗುತ್ತಿತ್ತು. ಆ ಹೆಸರುಗಳು ಪ್ರಖ್ಯಾತವಾದ ಗಾಯಕರದು. ದೊಡ್ಡಣ್ಣನವರ ಹಾಲಿನ ಹಿಂದೆ ಅವರದೇ ಧರ್ಮಕಾರ್ಯಗಳಿಗಾಗಿ ಉದ್ದೇಶಿತವಾದ ಹಣದಿಂದ ಎಸ್.ಎಲ್.ಎನ್. ಹೈಸ್ಕೂಲು ಕಟ್ಟಡ ಆಯಿತು. ಅದರ ಮುಂದೆಯೇ ನಾನು ಹಿಂದೆ ವರ್ಣಿಸಿರುವ ರವೀಂದ್ರನಾಥ ಠಾಕೂರರ ಸ್ವಾಗತ ಭಾಷಣ ನಡೆದುದು. ಒಳಗಿನ ಒಂದು ಹಾಲಲ್ಲಿ ಕೃಷ್ಣ ಗಾನ ಸಮಾಜದವರು ರಾಜಾಯಿ ಎಂಬಾಕೆಯ ಸಂಗೀತವನ್ನು ಒಮ್ಮೆ ಏರ್ಪಡಿಸಿದ್ದರು. ಮುಂದೆ ಯಾರು ಯಾರಿಗೊ ಕೋಕಿಲಗಾನ, ಕೋಕಿಲಧ್ವನಿ ಎಂಬ ಬಿರುದು ಬಂದಿದೆ. ಆಕೆ ಹಾಗೇ ಇದ್ದರು, ಹಾಗೇ ಹಾಡುತ್ತಿದ್ದರು. ಬಹುತರ ಮೊದಲ ಬಾರಿಗೆ ನಾನು ಕುರಂಜಿ ರಾಗವನ್ನು ಕೇಳಿ ಮೋಹಿತನಾದದ್ದು ಆಕೆ ಹಾಡಿದಾಗ. ನಮ್ಮ ಸಂಗೀತಗಾರರಿಗೂ ತಂಜಾವೂರು, ಕೊಯಮತ್ತೂರು, ತಿರುಚಿರಾಪಲ್ಲಿ ಮುಂತಾದ ದಕ್ಷಿಣ ದೇಶದಿಂದ ಬಂದು ಹಾಡುವ ಸಂಗೀತಗಾರರಿಗೂ ಇರುವ ಒಂದು ವ್ಯತ್ಯಾಸ: ಅವರ ಸಂಗೀತದ ಹೊಮ್ಮುಗೆ ಹೆಚ್ಚಾಗಿ ಕತ್ತರಿಸದೆ, ತಡೆದು ತಡೆದು ಬರದೆ, ಒಂದು ಪ್ರವಾಹದ ಹಾಗೆ ನಡೆದು ಮನಸ್ಸನ್ನು ಆಕರ್ಷಿಸುತ್ತದೆ. ಒಂದು ನುಣುಪು ಪ್ರಕಾಶನದ ವೈಭವಲಹರಿ ಅಲ್ಲಿರುತ್ತದೆ ಮತ್ತು ಜನರನ್ನು ಬೆರಗುಗೊಳಿಸುತ್ತದೆ. ನಮ್ಮವರು ಎಷ್ಟೇ ವಿದ್ವಾಂಸರಾದರೂ ತಮ್ಮ ವಿದ್ವತ್ತಿಗೆ ತಾವೇ ಸೋತು ಅದನ್ನು ಕಷ್ಟಪಟ್ಟು ಪ್ರದರ್ಶಿಸುತ್ತಿರುವಂತೆ ಭಾಸವಾಗುತ್ತದೆ. ಆ ಸುಸ್ವರತೆ, ಹಾಡುಗಾರಿಕೆಯ ಬಿನ್ನಾಣ ನಮ್ಮ ಕಡೆಯವರಿಗೆ ಸಾಧಿಸಲಾಗಲಿಲ್ಲವೇನೊ. ಶಕ್ತಿ ವಿದ್ವತ್ತುಗಳಿಗಿಂತ ಅದರ ಒನಪು, ಲಹರಿ ಅದಕ್ಕೆ ಜನದ ಮನಸ್ಸನ್ನು ಸುಲಭವಾಗಿ ಸೆರೆಗೊಳಿಸುತ್ತದೆ.

ಮಾರ್ಕೆಟ್ ಕಡೆಯಿಂದ ಉದ್ದಕ್ಕೆ ಕೋಟೆಯ ಕಡೆ ಬರುವಾಗ ಮೊದಲಿಂದಲೂ ದೊಡ್ಡಣ್ಣನವರ ಕಾಂಪೌಂಡಿನ ಈ ಕೊನೆಯಲ್ಲಿ ಆಂಜನೇಯ ದೇವಸ್ಥಾನ - ಚಿರಂತನವಾಗಿ ಇದ್ದೇ ಇದೆ. ಅದರ ಎದುರಿಗೆ ಒಂದು ಸಣ್ಣ ಮೈದಾನವಿತ್ತು. ಅಲ್ಲಿ ಒಳಗಡೆಯ ಕೋಟೆ ದಿಡ್ಡಿ ಬಾಗಿಲು; ಹೊರಗೆ ಕೋಟೆಯ ಮೇಲೆ ಹತ್ತಿ ಹೋಗಿ ಬೇರ್ಡ್ ಮುಂತಾದವರನ್ನು ಸೆರೆ ಇಟ್ಟಿದ್ದ ಪ್ರದೇಶವನ್ನು ನೋಡಬಹುದಿತ್ತು. ಪ್ರವೇಶಕ್ಕೆ ಅಡ್ಡಿ ಇರುತ್ತಿರಲಿಲ್ಲವಾಗಿ ಯಾರೂ ಯಾವಾಗಲೂ ನೋಡಿಕೊಂಡು ಬರಬಹುದಿತ್ತು. ಏನೊ ಅವಿಚಾರ ನಡೆದು ಅದಕ್ಕೆ ಅಡ್ಡಿ ಉಂಟಾಯಿತು. ಅಲ್ಲಿನ ಬಾಗಿಲ ಮುಂದಿನ



ಬಯಲಲ್ಲಿ ದೊಡ್ಡದೊಂದು ಅಶ್ವತ್ಥ ಕಟ್ಟೆ ಇತ್ತು. ಅದು ಹೊರಗಡೆಯಿಂದ ಬಂದ ಅನೇಕರಿಗೆ ಪೇಟೆಗೆ ಹೋಗುವ ಮುಂಚೆ ವಿಶ್ರಾಂತಿಸ್ಥಾನವಾಗಿದ್ದುದಲ್ಲದೆ ಅನೇಕ ಬಡವರಿಗೆ ನೆಲೆಯಾಗಿತ್ತು. ಮುಂದೆ ಕೋಟೆ ಕಲಾಸಿಪಾಳ್ಯದ ಕಡೆ ಹೊಗುವ ರಸ್ತೆಯಲ್ಲಿ ಎಸ್.ಎಲ್.ಎನ್. ಹೈಸ್ಕೂಲಿಗೆ ಸಂಬಂಧಿಸಿದ ಯಾವುದೊ ಕೆಲಸಗಾರಿಕೆಯನ್ನು ಕಲಿಸುವ ಶಿಕ್ಷಣ ಶಾಲೆಯಿತ್ತು. ಅಲ್ಲಿಂದ ಉದ್ದಕ್ಕೆ ಕಂದಕ; ಅಗಳಿ. ಆ ಪ್ರದೇಶದಲ್ಲಿಯೇ ಕೋಟೆಯ ಕೊನೆಯ ಭಾಗ. ಆ ರಸ್ತೆ ದಾಟಿ ಬಂದರೆ ಎಡಕ್ಕೆ ಕಟ್ಟಿದ ವಾಣಿವಿಲಾಸ ಹೈಸ್ಕೂಲ್; ಬಲಕ್ಕೆ ನಿರ್ಮಾಣವಾಗುತ್ತಿದ್ದ ವಾಣಿವಿಲಾಸ ಆಸ್ಪತ್ರೆ. ಆಸ್ಪತ್ರೆ ಆದುದೇನೊ ಮಹಿಳೆಯರ ಚಿಕಿತ್ಸೆಗಾಗಿ. ಹಾಗೆ ಪ್ರತ್ಯೇಕವಾದ ಒಂದು ಆಸ್ಪತ್ರೆಯನ್ನು ತೆರೆಯ ಬೇಕಾದುದು ಅಗತ್ಯವೆಂದು ಎಲ್ಲರಿಗೂ ತೋರಿತು. ಹೆಣ್ಣು ಮಕ್ಕಳಿಗೆ ಪ್ರತ್ಯೇಕವಾಗಿ ಒಂದು ಹೈಸ್ಕೂಲನ್ನು ತೆರೆದುದು ಹೊಸ ಕಾಲದ ಒಂದು ಸುಧಾರಣೆ, ಪ್ರಗತಿಯಲ್ಲಿ ಮುಂದಿಟ್ಟ ಹೆಜ್ಜೆ ಎಂದು ಎಲ್ಲರೂ ಭಾವಿಸಿದರು. ಎಂದಿಗೂ ಇರುವಂತೆ ಮೊದಲ ಬಹುಕಾಲ ಅಲ್ಲಿಗೆ ಹೆಣ್ಣು ಹುಡುಗರು ಹೋಗುವುದನ್ನು ನೋಡುವುದಕ್ಕೆ ಜನ ಜಮಾಯಿಸುತ್ತಿದ್ದರು. ಎತ್ತರವಾದ ಪೌಳಿ ಗೋಡೆ ಹಾಕಿ ಗಟ್ಟಿಯಾದ ಗೇಟ್ ಕಟ್ಟಿ ಅವರ ರಕ್ಷಣೆಗೆ, ಇವರ ರಕ್ಷಣೆಗೆ ಏರ್ಪಾಡು ಮಾಡಬೇಕಾಯಿತು. ಅಲ್ಲಿಂದ ಮುಂದಕ್ಕೆ ರಂಗಸ್ವಾಮಯ್ಯಂಗಾರ್ ಮತ್ತು ಆರಾಮದಯ್ಯಂಗಾರ್ ಮನೆಗಳು. ಈ ಎರಡು ಮನೆಗಳಿಂದಲೂ ನನ್ನ ಜೊತೆಗೆ ಎ. ವಿ. ಸ್ಕೂಲಲ್ಲಿ ಓದಿದ ವೇದಾಂತಯ್ಯಂಗಾರ್ ಎಂಬವರೂ ರಾಮಸ್ವಾಮಿ ಅಯ್ಯಂಗಾರ್ ಎಂಬವರೂ ಬರುತ್ತಿದ್ದರು. ಈ ಆರಾಮದ ಯ್ಯಂಗಾರ್ ಅವರ ಹೆಸರೇ ನಾನು ವಿದ್ಯಾ ಇಲಾಖೆಯಲ್ಲಿ ಮೂರು ತಿಂಗಳು ಕೆಲಸ ಮಾಡಿದಾಗ ತಪ್ಪಾಗಿ ಬರೆದು ದಾಸಪ್ಪನವರ ಕೈಲಿ ಎಚ್ಚರಿಕೆ ಪಡೆದಿದ್ದೆ. ಇವೊತ್ತು ಇರುವ ಸಜ್ಜನರಾಯರ ಮನೆ ಆಮೇಲೆ ಬಂತು. ಅವರ ದಾನದಿಂದ ಕಟ್ಟಿದ ಆಸ್ಪತ್ರೆಯ ವಿಸ್ತರಣ ಇನ್ನೊಂದು ಕಟ್ಟಡ.

ಆ ಬೀದಿಯ ಕಡೆಯವರೆಗೂ ಇರುವ ಪ್ರದೇಶದಲ್ಲಿ ಸಂಸ್ಕೃತ ಮಹಾ ಪಾಠಶಾಲೆಯಿತ್ತು. ಆ ಸಂಬಂಧದಲ್ಲಿ ಎರಡು ನೆನಪುಗಳು ದೊಡ್ಡದಾಗಿ ಉಳಿದಿವೆ. ಅದರ ಪ್ರಿನ್ಸಿಪಾಲರು ಚೆನ್ನರಾಯಪಟ್ಟಣದ ವೆಂಕಟರಮಣಯ್ಯನವರು. ವಿದ್ವಾಂಸರು; ಸಂಸ್ಕೃತದಲ್ಲಿ ಮಾತನಾಡಬಲ್ಲವರು, ವಾದ ಮಾಡಬಲ್ಲವರು; ಕವಿತೆ ಮಾಡಬಲ್ಲವರು. ಛಂದಸ್ಸು, ಅಲಂಕಾರಗಳ ಮೇಲೆ ಪುಸ್ತಕ ಬರೆದು ಅಚ್ಚು ಹಾಕಿಸಿದ್ದರು. ಇಷ್ಟು ವಿದ್ವಾಂಸರಾದರೂ ಸ್ವಲ್ಪ ತಿಕ್ಕಲು. ಬಹುಬೇಗ ಸ್ವಾಸ್ಥ್ಯವನ್ನು ಕಳೆದುಕೊಂಡು ರೇಗುತ್ತಿದ್ದರು, ಕೂಗುತ್ತಿದ್ದರು. ಆ ಕಾರಣದಿಂದಾಗಿ ಅವರ ಶಿಸ್ತು ಸ್ವಲ್ಪ ಸಡಿಲವಾಗಿತ್ತೊ ಏನೊ. ಅವರು ಚಾಮರಾಜಪೇಟೆಯ ವಿದ್ವಾಂಸರಲ್ಲಿ ಹೆಸರಾದವರು. ಅವರ ದೊಡ್ಡ ಮಗ ನಮ್ಮ ಜೊತೆಯಲ್ಲಿಯೇ ಎಲ್.ಎಸ್.ಗೆ ಓದಿ ಉತ್ತರ ಕಾಲದಲ್ಲಿ ಇಂಡಿಯಾ ಸರ್ಕಾರದ ಈ.ಒಣ.ಖ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ದೊಡ್ಡ ಅಧಿಕಾರಕ್ಕೆ ಬಂದರು.

ಅವರ ಗಂಡು ಮಕ್ಕಳು, ಹೆಣ್ಣು ಮಕ್ಕಳು, ಮೊಮ್ಮಕ್ಕಳು ಗಣ್ಯ ಜೀವನವನ್ನು ನಡಸುತ್ತಿದ್ದಾರೆ. ಇನ್ನೊಂದು ಸಂಗತಿ: ಅಲ್ಲಿ ಕಡಮೆಯೆಂದರೆ ತಿಂಗಳಿಗೆ ಒಂದು ಸಲವಾದರೂ ಬೆಂಗಳೂರು ಗಾಯನ ಸಮಾಜದ ಕಚೇರಿಗಳು ಏರ್ಪಡುತ್ತಿದ್ದುದು. ಮೈಸೂರಿನ ವಿದ್ವಾಂಸರು ಹೆಚ್ಚು ಸಲ ಅಲ್ಲಿ ಆಹ್ವಾನಿತವಾಗುತ್ತಿರಲಿಲ್ಲವೆಂಬುದು ಮೊದಲಿಂದ ಅದರ ಮೇಲೆ ಹೊತ್ತಿದ್ದ ಒಂದು ಆಕ್ಷೇಪಣೆ. ಅದು ನಿಜ. ಕಾರಣಗಳು ಏನೇ ಇರಬಹುದು; ಎಲ್ಲವೂ ಇರಬಹುದು. ಆ ಕಾಲದ ಮಹನೀಯ ಸಂಗೀತಗಾರರಾದ ಶೇಷಣ್ಣ, ಬಿಡಾರಂ ಕೃಷ್ಣಪ್ಪ, ವಾಸುದೇವಾಚಾರ್ಯ ಇವರಿಗೆ ಕೂಡ ಹೆಚ್ಚು ಸಲ ಆಹ್ವಾನ ಹೋಗಿರಲಿಲ್ಲ. ಒಂದು ಕಾರಣ: ಮದರಾಸಿಂದಲೂ ದಕ್ಷಿಣ ಭಾರತದಿಂದಲೂ ಪ್ರಖ್ಯಾತರಾದ ಹೆಚ್ಚು ಬೆಡಗಿನ ಸಂಗೀತಗಾರರಾದ ವಿದ್ವಾಂಸರು ಬರುತ್ತಿದ್ದರು. ಸಮಾಜದ ಸದಸ್ಯರಾಗಿದ್ದ ಹೆಚ್ಚು ಮಂದಿ ಇಲ್ಲಿ ನೆಲಸಿದ್ದ ಅಯ್ಯರುಗಳು, ಅಯ್ಯಂಗಾರುಗಳು. ಕರ್ನಾಟಕರು, ಮೈಸೂರಿಗರು ಇವರ ಸಂಖ್ಯೆ ಕಡಮೆ. ನಮ್ಮವರು 'ಮೈಸೂರು ಮಡೆಯನ್ ಡ' ಎನ್ನುವ ಕೀರ್ತಿ ಪಡೆದಿದ್ದರು. ಅಧಿಕಾರಗಳಲ್ಲಾಗಲಿ, ಪದವಿ ಶ್ರೀಮಂತಿಕೆಗಳಿಂದಾಗಲಿ, ಚುರುಕಿನಲ್ಲಾಗಲಿ ನಮ್ಮವರು ಅವರಿಗೆ ಸರಿಯಲ್ಲ, ಸಮನಲ್ಲ ಎನ್ನುತ್ತಿದ್ದ ಕಾಲ. ಅದಕ್ಕೆ ಕಾರ್ಯದರ್ಶಿಗಳಾಗಿದ್ದವರು ಒಬ್ಬರು ಲಂಡನ್ ಮಿಷನ್ ಹೈಸ್ಕೂಲಿನ ರಾಮಚಂದ್ರರಾಯರು ಎಂದು; ಇನ್ನೊಬ್ಬರು ಸುಬ್ರಹ್ಮಣ್ಯ ಶಾಸ್ತ್ರಿ ಎಂದೊ ಅಯ್ಯರ್ ಎಂದೊ ಹೆಸರಿನವರು. ಅವರ ತರುವಾಯ ಸೋಮೇಶ್ವರ ಅಯ್ಯರ್; ನಮ್ಮ ಸೆಕ್ರೆಟೇರಿಯಟ್‌ನಲ್ಲಿ ದೊಡ್ಡ ಹುದ್ದೆಯಲ್ಲಿದ್ದವರು. ರಾಮಚಂದ್ರರಾಯರು ತಂಜಾವೂರು ಕಡೆಯವರು. ಇವರಿಬ್ಬರೂ ಅಯ್ಯರುಗಳು. ಸಮಾಜದ ಅಧ್ಯಕ್ಷರು ಬಹುಶಃ ಮೈಸೂರಿನ ಚೀಫ್ ಕೋರ್ಟಿನ ಜಡ್ಜ್ ಆಗಿದ್ದ ಕೆ.ಎಸ್. ಚಂದ್ರಶೇಖರ ಅಯ್ಯರ್‌ರವರು. ಒಂದು ಕಚೇರಿಗೂ ಅವರು ತಪ್ಪಿಸಿಕೊಳ್ಳುತ್ತಿರಲಿಲ್ಲ. ಜಡ್ಜ್ ಆಗಿ ಯಾವ ಕೀರ್ತಿ ಪಡೆದಿದ್ದರೊ ಅದೇ ಕೀರ್ತಿ ಸಂಗೀತದ ಗುಣ ನಿರ್ದೇಶನದಲ್ಲಿಯೂ ನಿರ್ಣಯದಲ್ಲಿಯೂ ಅಧಿಕಾರ ಪಡೆದಿದ್ದರು. ಹೆಚ್ಚು ಮಾತಿನವರಲ್ಲ. ಅವರ ಗಂಭೀರ, ಅವರ ಮೌನ ಎಲ್ಲವನ್ನೂ ಅದಬ್ಬಿನಲ್ಲಿಡುತ್ತಿತ್ತು. ಅಲ್ಲಿ ನಾನು ಕೇಳಿರುವಷ್ಟು ಕರ್ನಾಟಕ ಸಂಗೀತದ ಬಗೆಬಗೆಯ ಉನ್ನತ ಸಾಧನೆಗಳನ್ನು ಮೈಸೂರಲ್ಲಿ ಬಿಟ್ಟರೆ ಬೇರೆಲ್ಲಿಯೂ ಈವರೆಗೆ ಕೇಳಿಲ್ಲ. ಉದ್ದಕ್ಕೆ ನೆಲಸಿದ್ದ ಹಾಲ್; ಅಗಲ ಕಡಮೆ; ಮಾಳಿಗೆ ಎತ್ತರದ್ದಲ್ಲ. ಒಂದು ಕಡೆ ಹೆಂಗಸರಿಗೇ ಮೀಸಲಾದ ಸ್ಥಳ. ಹೆಂಗಸರಿಗೆ ಸಾಮಾನ್ಯವಾಗಿ ತಿಂಗಳಿಗೆ 8 ಆಣೆ ಸದಸ್ಯತ್ವದ ಚಂದಾ. ಗಂಡಸರಿಗೆ ಎರಡು ವರ್ಗ: ರೂ. 1/-, ಎಂಟಾಣೆ. ನಮ್ಮವರು 10–15 ಜನಗಳನ್ನು ಬಿಟ್ಟರೆ ಉಳಿದವರೆಲ್ಲಾ 8 ಆಣೆ ಮೆಂಬರುಗಳು. ಹುಡುಗರಾದ ನಮಗೆ ಎಂಟಾಣೆ ತೆರುವುದಕ್ಕೂ ಅಶಕ್ಯವಾಗಿದ್ದುದರಿಂದ ಉತ್ತರ ದಿಕ್ಕಿನ ಗೋಡೆಗಳಿಗಿದ್ದ ಕಿಟಕಿಗಳ ಕಂಬಿ ಹಿಡಿದು ಅಥವಾ ಹೊರಗಡೆ ನಿಂತು, ಕುಳಿತು ನಾಲ್ಕು ಗಂಟೆಗಳ ಸಂಗೀತ ಕಚೇರಿಗಳನ್ನು ಕೇಳುತ್ತಿದ್ದೆವು. ಗಾಯನ ಸಮಾಜದ ಕಚೇರಿಗಳನ್ನೆಲ್ಲ ಸುಮಾರು 1925ರ ವರೆಗೂ ನಾನು ಹಾಗೇ ಕೇಳಿದ್ದು. ಕೊಳಲು, ವೀಣೆ, ಜಲತರಂಗ, ಮೃದಂಗ, ಬಾಯಿ



ಹಾಡುಗಾರಿಕೆ, ವಯೊಲಿನ್ – ತನಿಯಾಗಿಯೊ ಮೇಳವಾಗಿಯೊ ದಕ್ಷಿಣದ ಬಹು ದೊಡ್ಡ ವಿದ್ವಾಂಸರು ಅಲ್ಲಿ ಪ್ರದರ್ಶಿಸುತ್ತಿದ್ದರು. ಮೈಸೂರಿನ ವಿದ್ವಾಂಸರಲ್ಲಿ ಪಿಟೀಲಿಗೆ ತಾಯಪ್ಪನವರು, ತಬಲಾ ನಂಜಪ್ಪನವರು. ಬೆಂಗಳೂರಿನ ವಿದ್ವಾಂಸರಲ್ಲಿ ಮೃದಂಗಕ್ಕೆ ಹೆಚ್ಚು ಹೆಸರಾದವರು ಆ ಕಾಲದಲ್ಲಿ ಇರಲಿಲ್ಲ. ದಕ್ಷಿಣದವರೆಲ್ಲ ಮೃದಂಗವಾದನ ಮಾಡುತ್ತಿದ್ದರು. ಅದರಲ್ಲಿಯೂ ಅಳಗನಂಬಿ, ದಕ್ಷಿಣಾಮೂರ್ತಿ, ಮಯಿಲತ್ತೂರು ಕೃಷ್ಣಯ್ಯರ್ ಪ್ರಖ್ಯಾತ ಮೃದಂಗವಾದಕರು.

ಮೈಸೂರು - ಬೆಂಗಳೂರುಗಳಲ್ಲಿ ಮೃದಂಗದ ವಾದನ ಆಗುತ್ತಿದ್ದುದು 'ತಾಘಾ' ಎಂಬ ಹೆಸರಿನ ಭರತನಾಟ್ಯದ ಪ್ರಸಂಗಗಳಲ್ಲಿ ಮಾತ್ರ. ಕಡೆಗೆ ಶೇಷಣ್ಣನವರ ವೀಣಾವಾದನದ ಜೊತೆಗೂ ತಬಲಾ ವಾದನಕಾರನೇ ಮೃದಂಗ ಬಾರಿಸುತ್ತಿದ್ದ. ಕೃಷ್ಣಪ್ಪನವರ ಹಾಡುಗಾರಿಕೆಯ ಜೊತೆಗೆ ಆಮೇಲೆ ಮೃದಂಗ ಬಾರಿಸುವುದಕ್ಕೆ ಬಂದವರು ದಕ್ಷಿಣದಿಂದ ಮೈಸೂರಿಗೆ ಬಂದಿದ್ದ ಮುತ್ತುಸ್ವಾಮಿ ತೇವರ್. ಬೆಂಗಳೂರಲ್ಲಿ ಮೃದಂಗಕ್ಕೆ ತಯಾರಾದವರು ದಕ್ಷಿಣದವರಾದ ಅಯ್ಯಾಮಣಿ ಅಯ್ಯರ್ ಎಂಬವರು. ಬಹುದಿನ ಕಾದರೂ ಇಲ್ಲಿಗೆ ಪೂರ್ಚಿ ಶ್ರೀನಿವಾಸಯ್ಯಂಗಾರ್ಯರಾಗಲಿ, ವೀಣೆ ಸುಬ್ಬಣ್ಣನವರಾಗಲಿ ಬರಲಿಲ್ಲ. ಪೂರ್ಚಿಯವರ ಕೀರ್ತಿಯನ್ನು ಕೇಳಿ ನಾನೂ ನನ್ನ ಗೆಳೆಯರೂ ಇಲ್ಲಿಂದ ಮದರಾಸಿಗೆ ಹೋಗಿ ಅವರ ಕಚೇರಿಯನ್ನು ಕೇಳಿ ಬರುವ ಅವಕಾಶ ಮಾಡಿಕೊಂಡೆವು. ಅಲ್ಲಿ ಗೋಖಲೆ ಹಾಲಲ್ಲಿ ನಡೆದ ಅವರ ಕಚೇರಿ ನಮ್ಮ ಸಂಗೀತಾನುಭವದ ಮುಡಿಗಳಲ್ಲಿ ಒಂದಾಗಿತ್ತು. ಗೋವಿಂದಸ್ವಾಮಿ ವಯೊಲಿನ್, ಅಳಗನಂಬಿ ಮೃದಂಗ, ದಕ್ಷಿಣಾಮೂರ್ತಿ ಅವರ ಖಂಜಿರದಂತಹ ಕಚೇರಿ ಕರ್ನಾಟಕ ಸಂಗೀತದಲ್ಲಿ ಅಪರೂಪವಾದದ್ದು. ಆ ವಯಸ್ಸಿನಲ್ಲಿ ನಮಗೆ ಏನು ಸಂಗೀತ ಜ್ಞಾನವಿತ್ತೊ ಇಲ್ಲವೊ: ನಮ್ಮ ಸಂತೋಷ ಯಾವ ವಿದ್ವಾಂಸರದಕ್ಕೂ ಕಡಮೆಯದಲ್ಲ ಎಂದು ಮಾತ್ರ ಹೇಳಬಹುದು. ಮದರಾಸಿನಲ್ಲಿ ನಮ್ಮ Standards ಗಿಂತ ಉತ್ತಮವಾದುದನ್ನು ನಿರೀಕ್ಷಿಸುತ್ತಿದ್ದರು, ಗೌರವಿಸುತ್ತಿದ್ದರು. ನಮ್ಮ ಕಚೇರಿಗಳಲ್ಲಿಯೂ ವಿದ್ವಾಂಸರಿಗೆ ಗಾಯನ ಸಮಾಜದಲ್ಲಿ ಉಚಿತವಾದ ಸ್ಥಾನವಿತ್ತು. ಅನಂತಶಾಸ್ತ್ರಿಗಳು, ದಕ್ಷಿಣಾಮೂರ್ತಿಶಾಸ್ತ್ರಿಗಳು, ಗೋಪಾಲರಾಯರು, ತಾಯಪ್ಪನವರು ಮುಂತಾದವರಿಗೆ ಗೌರವ ಸದಸ್ಯತ್ವ ಕೊಟ್ಟು ಗಾಯನ ಸಮಾಜ ಗೌರವ ಸಲ್ಲಿಸುತ್ತಿತ್ತು. ಅನಂತನವ್ರತದಂತಹ ಒಂದೆರಡು ಸಂದರ್ಭಗಳಲ್ಲಿ ತಪ್ಪದೆ ದಕ್ಷಿಣಾಮೂರ್ತಿಶಾಸ್ತ್ರಿಗಳ ಹರಿಕತೆಗೆ ಎಡೆ ದೊರೆಯುತ್ತಿತ್ತು. ದಕ್ಷಿಣದಿಂದ ಬಂದ ಭಾಗವತರಲ್ಲಿ ಅನಂತರಾಮ ಭಾಗವತರ ಹರಿಕತೆ ಪರಮರಮಣೀಯವಾದ್ದು. ಆತನ ಆಕೃತಿ, ಶಾರೀರಸಂಪತ್ತಿ, ಕುತ್ತಿಗೆಗೆ ಹಾಕಿ ಮೆರೆಯುತ್ತಿದ್ದ ಚಿನ್ನದ ಕಟ್ಟಿನ ರುದ್ರಾಕ್ಷಿ, ಹಾಡುತ್ತಿದ್ದ ತ್ಯಾಗರಾಜರ ಮತ್ತು ದೀಕ್ಷಿತರ ಕೃತಿಗಳು ಬೆಂಗಳೂರಿನ ಸಂಗೀತಗಾರರನ್ನು ಸೆರೆಗೊಳ್ಳುತ್ತಿದ್ದವು. ಆ ಕಾಲದಲ್ಲಿ ಮಧುರವಾದ ಗಂಡುಸಂಗೀತಕ್ಕೆ ಕೆಲವು ದಿನ ಹೆಸರಾಗಿ ಸಣ್ಣ ವಯಸ್ಸಿನಲ್ಲೇ ಮಾಯವಾದವರು ಪುಷ್ಪವನಂ ಎಂಬವರು. ಎರಡು ಸಲ ಬರುತ್ತೇನೆಂದು ಮಾತು

ಕೊಟ್ಟ ಆತ ಬರಲಿಲ್ಲ. ಆತನ ಕಂಠಶ್ರೀ ತುಂಬ ಮೃದುವಾಗಿ ಚಿತ್ತಾಪಹಾರಕವಾಗಿ ಇದ್ದಿತೆಂದು ಕೇಳಿದವರು ಹೇಳಿದ್ದಾರೆ. ಪಿಟೀಲು ವಾದಕರಲ್ಲಿ ನಾವು ಸಣ್ಣವರಾಗಿ ಕೇಳಿದ್ದು ತಿರುಕ್ಕಾಡಿಕೋವಿಲ್ ಕೃಷ್ಣಯ್ಯರ್ ಅವರ ವಾದನ. ಅವರ ಉನ್ನತಿಗೆ ಯಾರೂ ಮಾರುಹೋಗಬೇಕಾದ್ದೇ. ಒಂದು ತಂತಿಯ ಮೇಲೆ ರಾಗದ ಪರಮ ಸೌಖ್ಯಗಳನ್ನು, ತಾಳದ ವಿಶೇಷಗಳನ್ನು ಕಾಣಿಸಬಲ್ಲ ಚಾತುರಿ ಅವರದು. ಗಾಯನ ಸಮಾಜದ ಕಚೇರಿ ಆದ ಕೂಡಲೇ ಶಂಕರಮಠದ ಸಭಾಮಂದಿರದಲ್ಲಿ ಅವರದು ಒಂದು ಕಚೇರಿ ಆಯಿತು. ಆತನಿಗೆ ಮದರಾಸ್ ರೈಲನ್ನು ಹತ್ತಬೇಕಾದ ಅವಸರ. ಅಲ್ಲದೆ ಆ ಸಭಾಮಂದಿರದಲ್ಲಿ ಪ್ರತಿಧ್ವನಿ ತುಂಬ ಹೆಚ್ಚಾಗಿ ಇದ್ದುದರಿಂದ ಆ ದಿನ ಅನೇಕರಿಗೆ ಉತ್ಸಾಹಭಂಗವಾಗಿತ್ತು. ಆದರೂ 'ನಾ ವಾಶಿಕ್ಕರೇ' ಎಂದವರೇ ಒಂದು ಮೂಲೆಗೆಂಬಂತೆ ವಾದ್ಯವನ್ನು ಹಿಡಿದು ಕುಳಿತು ದಿವ್ಯವಾಗಿ ವಾದನ ಮಾಡಿದರು. ಪುದುಕೋಟೆಯವರೆಂದೂ ಪಾಲ್‌ಘಾಟ್‌ನವರೆಂದೂ ಒಳ್ಳೆಯ ವಯೊಲಿನ್ ಬಾರಿಸುವ ನಾರಾಯಣಸ್ವಾಮಿ ಅಯ್ಯರ್ ಎಂಬವರು ನಮ್ಮ ಕೋಟೆ ಹೈಸ್ಕೂಲಲ್ಲಿ ಕಚೇರಿ ಕೊಟ್ಟರು. ಆ ಕಚೇರಿಯನ್ನು ಮಹಡಿಯ ಮೆಟ್ಟಿಲು ಕೆಳಗೆ ನಿಂತು ಕಿಟಕಿಯ ಮೂಲಕ ಕೇಳಿದೆ.

ಬೆಂಗಳೂರು ಗಾಯನ ಸಮಾಜವೆಂದರೆ ಅದರ ಚಂದಾ ವಸೂಲು ಮಾಡುತ್ತಿದ್ದ, ಕಾರ್ಯಕ್ರಮಗಳನ್ನು ಅಚ್ಚು ಮಾಡಿಸಿ ಹಂಚುತ್ತಿದ್ದ ಕೃಷ್ಣಪ್ಪನವರು ನೆನಪಾಗುತ್ತಾರೆ. ಅವರ ಮರಣಪರ್ಯಂತವೂ ಅವರು ಗಾಯನ ಸಮಾಜದ ಗುಮಾಸ್ತೆಯಾಗಿ ಚಂದಾ ವಸೂಲುಗಾರರಾಗಿ ದುಡಿದಿದ್ದಾರೆ. ಗಾಯನ ಸಮಾಜ ಎಂದರೆ ಕೃಷ್ಣಪ್ಪನವರು ಎನ್ನುವಂತಿತ್ತು. ಮುಚ್ಚುಕುತ್ತಿಗೆಯ ಕೋಟು, ಸಾದಾ ರುಮಾಲು ಧರಿಸಿ, ಕೈಯಲ್ಲಿ ಒಂದು ದೊಡ್ಡ ಲೆಡ್ಜರ್ ರಿಜಿಸ್ಟರ್ ಹಿಡಿದು ನಡೆದು ಹೋಗುತ್ತಿದ್ದ ಅವರನ್ನು ಎಲ್ಲಿಯೂ ಗುರುತಿಸಬಹುದಿತ್ತು. ಎಂಟು ಆಣೆಯ ಚಂದಾ ಕೊಡಲು ನಾಲ್ಕು ಸಲ ತಿರುಗಿಸಿದವರನ್ನು ಕುರಿತೂ ಅವರು ಮೃದುವಾಗಿಯೇ ಮಾತನಾಡುತ್ತಿದ್ದರು. 'ಏನಪ್ಪ ನಿಮ್ಮಂತಹ ಸಂಗೀತಪ್ರಿಯರಿದ್ದು ಇಷ್ಟು ಉದಾಸೀನ ಮಾಡಿದರೆ ಸಮಾಜ ಹೇಗೆ ನಡೆಯಬೇಕು? ನಾಳೆ – ಇಂಥವರ ಕಚೇರಿ ಇದೆಯೆ: ಅವರ ಪ್ರಯಾಣದ ವೆಚ್ಚ, ಗೊತ್ತು ಮಾಡಿದ ಹಣ ತಕ್ಷಣ ಸಲ್ಲಿಸಬೇಕಾಗಿದೆಯೆ. ಸದಸ್ಯರು ಹಣ ಕೊಡದಿದ್ದರೆ ಹೇಗೆ?' ಎಂದು ವಸೂಲು ಮಾಡುತ್ತಿದ್ದರು.

ಇಂಥ ಸಮಾಜದಲ್ಲಿ ಒಂದು ಪ್ರಶ್ನೆ ಮುಖ್ಯವಾಗುತ್ತಿತ್ತು. ಸ್ಥಳದ ಸಂಗೀತಗಾರರಿಗೆ ಸಲ್ಲಿಸುತ್ತಿದ್ದ ಹಣದ ಮೊತ್ತ ಕಡಮೆ. ಹೊರಗಡೆಯವರು ಕರಾರು ಮಾಡಿಕೊಂಡು ಬರುತ್ತಿದ್ದರು. ಅವರ ವಿನಿಕೆ ಬೇಕೆಂದರೆ ಅವರಿಗೆ ನೂರೈವತ್ತೊ ಇನ್ನೂರೊ ಕೊಡಬೇಕಿತ್ತು. ಇಲ್ಲಿನವರಿಗೆಲ್ಲ ಶೇಷಣ್ಣನವರು, ಕೃಷ್ಣಪ್ಪನವರು, ವಾಸುದೇವಾಚಾರ್ಯರಂಥವರು ಬಂದರೂ ಇಷ್ಟಿಷ್ಟು ಎಂದು ಗೊತ್ತುಮಾಡಿದ್ದರು. ಮೈಸೂರಿನವರಿಗೆ ಹೀನಾಯವಾಗಿತ್ತು.



ಬೆಂಗಳೂರಲ್ಲಿ ಏನು, ಮೈಸೂರಲ್ಲಿ ಕೂಡ ಗಾಯನ ಸಮಾಜದಲ್ಲಿ ಕಚೇರಿ ನಡೆಯಬೇಕಿದ್ದರೆ, ಅಂಥ ವಿದ್ವಾಂಸರಿಗೆ ಹೆಚ್ಚಿನ ಪುರಸ್ಕಾರ ದೊರೆಯುತ್ತಿತ್ತೊ ಇಲ್ಲವೊ ನಾನರಿಯೆ. ಅಲ್ಲಿನ ಕಷ್ಟ ಇದು: ಸಂಗೀತಗಾರರ ಮತ್ತು ಕಲೆಗಾರರ ಒಳಸ್ಪರ್ಧೆ, ನಿರೀಕ್ಷೆ, ಭಾವವಿಶೇಷಗಳು ವಿಚಿತ್ರವಾಗಿರುತ್ತಿದ್ದುವು. ಅವರದು ಹೆಚ್ಚೇನು ನಮ್ಮದು ಕಡಮೆ ಏನು ಎಂಬುದೊಂದು ಮತ್ತು ಅವರನ್ನು ಒಂದಲ್ಲ ಹತ್ತು ಬಾರಿ ಮನೆಯ ಭಜನೆಗಳಲ್ಲಿಯೊ ಬೇರೆಯಾಗಿಯೊ ಪುಕ್ಕಟೆಯಾಗಿ ಕೇಳುವ ಸನ್ನಿವೇಶಗಳು ಅನೇಕವಾಗಿ ಇರುತ್ತಿದ್ದವಾಗಿ, ಹಣ ಕೊಟ್ಟು ಕೇಳುವುದಕ್ಕೆ ಬರುವ ಸ್ಥಳದ ಜನ ಕಡಮೆಯೇ ಆಗುತ್ತಿದ್ದರು. ಇಂದಿನವರೆಗೂ ಇದು ಹೀಗೆಯೇ ನಡೆದಿದೆ. ಇಲ್ಲಿ ಹೆಸರು ಪಡೆದ ಹಾಡುಗಾರರೊ ವಾದನಕಾರರೊ ವಿನಿಕೆ ಸಲ್ಲಿಸುತ್ತಾರೆಂದರೆ ಇಲ್ಲಿನ ಪ್ರೋತ್ಸಾಹಕರೆಂದು ಕೊಳ್ಳುವ ಉತ್ಸಾಹಶಾಲಿಗಳು ಕೂಡ ಅವರನ್ನು ಕೇಳಲು ಹೋಗುವುದಿಲ್ಲ. ಇನ್ನು ದುಡ್ಡು ಕೊಟ್ಟು ಹೋಗುವವರು ಯಾರು? 'ನೋಡಿ, ಇವರ ಕಚೇರಿ ಎಂದರೆ ಯಾವ Collection ಕೂಡ ಆಗುವುದಿಲ್ಲ. ಚಂಬೈ, ಅರಿಯಾಕುಡಿ, ಶೆಮ್ಮಂಗುಡಿ ಎಂದರೆ ಎಷ್ಟು ಜನ ಬರುತ್ತಾರೆ. ನಮ್ಮ ಖರ್ಚುವೆಚ್ಚ ತುಂಬುತ್ತದೆ' ಎಂದುದು ನಿಜವಾದ ಮಾತು. ಅವರಿಗೆ ತಾಮ್ರಪರ್ಣಿಯಿಂದ ಬಂದವರು, ತಂಜಾವೂರಿನವರು, ಮದರಾಸಿನವರು, ಚಿದಂಬರದವರು ಇತ್ಯಾದಿ ಕೀರ್ತಿ. ಕಾವೇರಿ ಪಾನ ಮಾಡಿದವರು: "ಅಂದ ಕಾವೇರಿ ತೀರ್ಥಂ, ಪಾನಂ, ತಣ್ಣಿ" ಎನ್ನುವವರೇ ಹೊರತು ಮೈಸೂರವರೂ ಕಾವೇರಿ ಪಾನ ಮಾಡಿದವರೇ ಎನ್ನುವುದು ತಟ್ಟುತ್ತಿರಲಿಲ್ಲ. ಸಂಸ್ಕೃತ ಕಾಲೇಜು ಗಾಯನ ಸಮಾಜದ ಕಚೇರಿಗಳು ಕಾಲೇಜು ಅಲ್ಲಿಂದ ವರ್ಗವಾದ ಮೇಲೆ ಶಂಕರಯ್ಯರ ಹಾಲಲ್ಲಿ ತೊಡಗಿದುವು. ಆ ಮಾತು ಬೇರೆ.

* * *

ಸಂಸ್ಕೃತ ಪಾಠಶಾಲೆಯ ಬಲಗಡೆಯ ಮೂಲೆಯಲ್ಲಿ, ಈಗಿನ ಕಣ್ಣಾಸ್ಪತ್ರೆಯ ಈಚೆಯ ಭಾಗದಲ್ಲಿ, ಟಿಪ್ಪೂಸುಲ್ತಾನನ ಮದ್ದುಗುಂಡಿನ ಒಂದು ಉಗ್ರಾಣವಿತ್ತು. ಕೋಟೆಯ ಗೋಡೆಗಿಂತ ಭದ್ರವಾದ ಗೋಡೆ, ಮಾಳಿಗೆ ಅದರದು. ನೆಲದ ಮಟ್ಟಕ್ಕಿಂತ ಕೆಳಗಿನದರಲ್ಲಿ ಅದು ಕಟ್ಟಿದ್ದುದು: ನೆಲದ ಮೇಲೆ ಸ್ವಲ್ಪ ಮಾತ್ರ ಅದರ ಹೊರ ಮಾಳಿಗೆ ಕಾಣಿಸುತ್ತಿತ್ತು. ಪಾಠಶಾಲೆಯ ಕೆಲವು ವಿದ್ಯಾರ್ಥಿಗಳು ಅಲ್ಲಿ ಉಳಿದು ವ್ಯಾಸಂಗ ಮಾಡುತ್ತಿದ್ದರು. ಅದನ್ನು ಒಡೆಯಬೇಕಾದರೆ ಆದ ಪ್ರಯಾಸ ನಾನು ನೋಡಿದ್ದೇನೆ. ಆ ಗಾರೆಯನ್ನು ಒಡೆಯುವುದಕ್ಕೆ ಉಳಿ ಸುತ್ತಿಗೆ ತರಬೇಕಾಯಿತು. ಸುತ್ತಿಗೆ ಪೆಟ್ಟು ಬಿದ್ದರೆ ಉಳಿ ಹಿಂದಕ್ಕೆ ಹಾರುತ್ತಿತ್ತು; ಬೆಂಕಿಯ ಕಿಡಿ ಹಾರುತ್ತಿತ್ತು. ಅಂತಹ ಗಾರೆ. ಮುಕ್ಕಾಲು ಅಂಗುಲ ಕೂಡ ದಪ್ಪ ಇಲ್ಲದ ಸಣ್ಣ ಇಟ್ಟಿಗೆಯ ಕಟ್ಟಡ ಅದು. ಟಿಪ್ಪೂಸುಲ್ತಾನನೆಂದರೆ ನಾಡಾಡಿಯೆ. ಈ ಮದ್ದುಗುಂಡಿನ ಸಂಗ್ರಹಶಾಲೆಗೂ ಕಣ್ಣಾಸ್ಪತ್ರೆಯ ಕಾಂಪೌಂಡುಗಳ ನಡುವೆಯೂ ಉದ್ದಕ್ಕೆ ಈ ರಸ್ತೆಯಿಂದ ಕೋಟೆ

ಆಂಜನೇಯಸ್ವಾಮಿ ಗುಡಿಯವರೆಗೆ ಒಂದು ಸಣ್ಣ ರಸ್ತೆ ಇತ್ತು. ಎಡಕ್ಕೆ ಕೋಟೆ ಗೋಡೆ. ಅದರ ನಡುವೆ ಒಂದು ದೊಡ್ಡ ಗೇಟಿನ ಮೂಲಕ ವಿಕ್ಟೋರಿಯಾ ಆಸ್ಪತ್ರೆಯ ಮೃತಕಳೇಬರಗಳನ್ನು ಸಾಗಿಸಲು ಏರ್ಪಾಡಿತ್ತು. ಬಲಕ್ಕೆ ಮೊದಲು ಸಿಗತಕ್ಕದ್ದು ಸೈಂಟ್ ಲ್ಯೂಕರ ಚರ್ಚು ಮತ್ತು ಅದರ ಪಕ್ಕದಲ್ಲಿ ಒಂದು ದೊಡ್ಡ ಗಂಟೆ. ಅದರ ಹಿಂದೆ ಪುನಃ ಕೋಟೆಯ ದೊಡ್ಡ ರಸ್ತೆಯವರೆಗೂ ಬಯಲು. ರಸ್ತೆಯಲ್ಲಿ ಮುಂದಕ್ಕೆ ಕೆಲವರು ಪೊಲೀಸ್ ಆಫೀಸರುಗಳ, ದೇಶಿ ಆಂಗ್ಲೋ–ಇಂಡಿಯನ್ನರ ಮನೆಗಳು ಇದ್ದವು. ಎಡಗಡೆ ಕೋಟೆಯ ಗೇಟಿದ್ದರೆ ಬಲಕ್ಕೆ ಉದ್ದಕ್ಕೆ ದೊಡ್ಡ ರಸ್ತೆಯಲ್ಲಿ ಸೆಂಟ್ರಲ್ ಪೊಲೀಸ್ ಸ್ಟೇಷನ್ ಇತ್ತು. ಈ ಸ್ಟೇಷನ್, ಸೈಂಟ್ ಲ್ಯೂಕರ ಚರ್ಚು ಎರಡೂ ಕಣ್ಣಾಸ್ಪತ್ರೆಯ ಮುಂದಿನಿಂದ ಬಸವನಗುಡಿ ಕಡೆ ಹೋಗುವ – ಹಿಂದೆ ಹಾರ್ಡಿಂಗ್ ರೋಡ್ ಎಂದಿದ್ದು ಈಗ ಪಂಪ ಮಹಾಕವಿ ರಸ್ತೆ ಎಂದಿರುವ – ರಸ್ತೆಗೆ ವರ್ಗಾವಣೆ ಯಾಗಿದೆ. ಎರಡಕ್ಕೂ ಸ್ವತಂತ್ರವಾದ ಗಟ್ಟಿ ಹೊಸ ಕಟ್ಟಡಗಳಾಗಿವೆ. ಇಷ್ಟಕ್ಕೂ ಎದುರಾಗಿ ರಸ್ತೆಯ ಅಚೆ ಕಡೆ ಇದ್ದುದು ಟಿಪ್ಪು ಸುಲ್ತಾನನ ಅರಮನೆ. ಈಗಲೂ ಸ್ವಲ್ಪ ಮಾರ್ಪಾಟುಗಳೊಡನೆ ಅದು ಪ್ರವಾಸಿಗಳ ಪ್ರೇಕ್ಷಣಾಸ್ಥಾನವಾಗಿದೆ. ಮೈಸೂರು ಹೊಸ ಅರಮನೆಯನ್ನು ಬಿಟ್ಟರೆ ಮುಸ್ಲಿಮವಲ್ಲದ ಇನ್ನಾವ ಮಂದಿರದ ಶಿಲ್ಪದಲ್ಲಿಯೂ ಅಷ್ಟು ಚೊಕ್ಕದಾಗಿ ದೊಡ್ಡ ಕಮಾನುಗಳಲ್ಲಿ ರಚಿಸುವುದು ಶಕ್ಯವಾಗಿಲ್ಲ. ಅಷ್ಟು ಸಣ್ಣ ಕಿಟಿಕಿಗಳುಳ್ಳ ಕೊಠಡಿಗಳಲ್ಲಿ ನವಾಬನೂ ರಾಣಿವಾಸದವರೂ ಹೇಗೆ ವಾಸ ಮಾಡುತ್ತಿದ್ದರೊ ಎನ್ನಿಸುತ್ತದಾದರೂ ಸುಲ್ತಾನನು ಮೈಸೂರಿಗೆ ಹೋಗುವವರೆಗೂ ಅಲ್ಲಿಯೇ ವಾಸ ಮಾಡುತ್ತಿದ್ದನಂತೆ. ಅದರ ಮುಂದೆ ಎತ್ತರವಾಗಿ ಕಟ್ಟಿದ ಧ್ವಜಸ್ಥಾನದ ಕಟ್ಟಡವಿತ್ತು. ಅದರ ಮೇಲೆ ಸುಲ್ತಾನನ ಬಾವುಟ ಹಾರುತ್ತಿತ್ತಂತೆ. ಸ್ವಲ್ಪ ಕಾಲವಾದ ಮೇಲೆ ಸ್ಕೌಟ್ ದಳದ ಹೆಡ್ ಕ್ವಾರ್ಟರ್ಸ್ ಮತ್ತು ಅದರ ನಿರ್ದೇಶಕರ ಕಚೇರಿ ಕಟ್ಟಲಾಯಿತು. ಇನ್ನೊಂದು ಕಡೆ ವೆಂಕಟಸುಬ್ಬರಾಯರು ಎಂಬವರೊ ಯಾರೊ ಒಂದು ಹೊಸ ಕಾಲದ ವ್ಯಾಯಾಮ ಶಿಕ್ಷಣ ಕೇಂದ್ರವನ್ನು ಸ್ಥಾಪಿಸಿದರು. ಅರ್ವಿನ್ ಎಂಬಾತ ಒಬ್ಬ ಸ್ಕೌಟ್ ದಳಕ್ಕೆ ಸಂಬಂಧಿಸಿದಂತೆ ಪ್ರಭಾವಶಾಲಿಯಾಗಿದ್ದ. ಅರಮನೆಯ ಆಚೆಗೆ ಬಲಮೂಲೆಯಲ್ಲಿ ಇದ್ದುದು ವೆಂಕಟರಮಣಸ್ವಾಮಿ ಗುಡಿ. ಶ್ರೀವೈಷ್ಣವರಿಗೆ ಪ್ರಧಾನವಾಗಿ ಪ್ರಿಯವಾದ ದೇವಸ್ಥಾನ. ಎಷ್ಟು ದಿವಸದಿಂದ ಅದು ಅಲ್ಲಿತ್ತೊ! ಚಿಕ್ಕದೇವರಾಜ ಒಡೆಯರ ಕಾಲದಲ್ಲಿ ಅದಕ್ಕೆ ಪ್ರಾಶಸ್ತ್ಯ ಬಂದು ಅದರ ಮುಂಭಾಗದ ಶಿಲ್ಪವೆಲ್ಲ ವಿಸ್ತಾರಗೊಂಡಿತು ಎಂದು ಹೇಳುತ್ತಾರೆ. ದೇವಸ್ಥಾನದ ಮುಂಭಾಗದಲ್ಲಿ ಬಲಗಡೆ ಒಂದು ದೊಡ್ಡ ಗುಲಗಂಜಿ ಮರ. ಹುಡುಗರಾದ ನಮಗೆ ಗುಲಗಂಜಿ ಆರಿಸುವುದು ಒಂದು ಗೀಳಾಗಿತ್ತು. ಜೊತೆಗೆ ದೇವಸ್ಥಾನದ ಪೊಂಗಲು, ಪಾಯಸದ ಆಕರ್ಷಣೆ. ಈಗಲೂ ಪೊಂಗಲು, ಪುಳಿಯೋಗರೆ ಚಪಲವಾದರೆ ಒಬ್ಬರೊ ಇಬ್ಬರೊ ಆ ಸೇವೆಗೆ ನಿಯತವಾದ ರುಸುಮು ಕೊಟ್ಟು ದೇವರ ಪೂಜೆ ಮಾಡಿಸಿ ಅದನ್ನು ಸವಿಯುವುದು ವಾಡಿಕೆ. ಬಿಲ್ವಪತ್ರೆ, ವಿಭೂತಿ ಬಿಟ್ಟರೆ ಶಿವದೇವಸ್ಥಾನಗಳಲ್ಲಿ ಏನಿದೆ?



ಲೋಕರಕ್ಷಕನಾದವನು ವಿಷ್ಣು. ಶ್ರೀದೇವಿ–ಭೂದೇವಿ ಇಬ್ಬರಿಗೂ ಒಡೆಯ. ಯಾರು ಯಾವ ಶಾಪವನ್ನು ಕೊಟ್ಟರೂ ಲೋಕವನ್ನು ಉದ್ಧಾರ ಮಾಡಿ ಲೋಕಕ್ಷೇಮಕರವಾದ ಕಾರ್ಯವನ್ನು ಕಡೆಯದಾಗಿ ನೆರವೇರಿಸಬೇಕಾದವನು ವಿಷ್ಣು ಎಂಬ ಪ್ರತೀತಿ. ತೀವ್ರವಾದ ಶಿವಪಕ್ಷಪಾತವಿಲ್ಲದ ಹಿಂದೂಗಳಿಗೆ ಅಲ್ಲಿನ ಪೂಜೆ ಪುರಸ್ಕಾರ ತುಂಬಾ ಆಕರ್ಷಕವಾಗಿರುತ್ತದೆ. ಹಜಾರ ಮುಖಮಂಟಪಗಳು ವಿಜಯನಗರದ ಒಂದು ರೀತಿಯನ್ನು ಅನುಸರಿಸುವಂತಿವೆ. ವಿಜಯವಿಠಲ ದೇವಸ್ಥಾನದ ಮಾದರಿಯಲ್ಲಿ ಅಲ್ಲಿ ಕಲ್ಲಿನಲ್ಲಿ ಕಡೆದ ರಾಹುತ ವಿಗ್ರಹ, ಮೂಲೆಯ ತೆನೆಗಳು, ದೀಪವನ್ನು ತೂಗಿ ಹಾಕಲು ಏರ್ಪಾಡು ಕಾಣಬಹುದು. ದೇವಸ್ಥಾನದ ಹೊರಗಡೆ ಎತ್ತರವಾದ ದೀಪಸ್ತಂಭಗಳು: ಯಾವುದೊ ಕಾಲದ ಪೂಜೆ, ವೈಭವಗಳಿಗೆ ಇಂಥದು ಸೂಚಿಕೆಗಳು. ಆ ಕಾಲ ಮರಳೀತೊ ಇಲ್ಲವೊ......

ಟಿಪ್ಪೂಸುಲ್ತಾನನ ಅರಮನೆ ದಾಟಿ ಹೋದರೆ ಪಶ್ಚಿಮಕ್ಕೆ ಮೊದಲಿಂದಲೂ ಒಂದು ಆಂಜನೇಯನ ಗುಡಿ. ಅರಮನೆಗೂ ಈ ಗುಡಿಗೂ ನಡುವೆ ಸ್ವಲ್ಪ ಹಿಂದೆ ಇನ್ನೊಂದು ಮಂದಿರವಿತ್ತು. ಅದರಲ್ಲಿ ವೃತ್ತಪತ್ರಿಕೆಯ ಒಂದು ಆಫೀಸು ನಡೆಯುತ್ತಿತ್ತೆಂದು ಕೇಳಿದ್ದೇನೆ. ಅಲ್ಲಿಯೇ ಪ್ರೊ. ರಾಮಮೂರ್ತಿ ಎಂಬ ಸ್ಯಾಂಡೊ ನಾವು ಖಖ – ಖಖಖ ನೇ ಫಾರ್ಮುಗಳಲ್ಲಿ ಓದುತ್ತಿದ್ದಾಗ ಬೆಂಗಳೂರಿಗೆ ಬಂದು ಶರೀರ ಶಿಕ್ಷಣದ ಅದ್ಭುತಗಳನ್ನು ಜನರಿಗೆ ಕಾಣಿಸುತ್ತಿದ್ದರು. ದಪ್ಪ ಸರಪಳಿಗಳನ್ನು ಮುರಿಯುವುದು, ಕಲ್ಲು ಬಂಡೆಗಳನ್ನು ಎದೆಯ ಮೇಲೆ ಏರಿಸಿಕೊಂಡು ಸುತ್ತಿಗೆಯಿಂದ ಒಡೆಸುವುದು, ಎದುರಿಗೆ ನಿಂತು ಮೋಟಾರು ಗಾಡಿಗಳನ್ನು ತಡೆದು ನಿಲ್ಲಿಸುವುದು ಮುಂತಾದ ಪರಾಕ್ರಮಗಳನ್ನು ಅವರು ಕಾಣಿಸುತ್ತಿದ್ದರು. ವ್ಯಾಯಾಮ ಶಿಕ್ಷಣದ ಉತ್ಸಾಹವನ್ನು ಬಿತ್ತಿದವರು ಅವರೇ. ಅವರ ಅಂಗಸೌಷ್ಠವ, ಆ ಮೀಸೆ ನೋಡುವಂಥವು. ನಮಗೆ ಅವು ಯಾವುವೂ ಫಲಿಸದಾದರೂ ಅವರು ಸೂಚಿಸುತ್ತಿದ್ದ ಒಂದು ಹಲ್ವ 'ಹರೀರಾ' ಮಾಡುವ ಪಾಕ ವಿಧಾನ ತುಂಬಾ ಮೆಚ್ಚಿತು. ಬೆಂಗಳೂರಲ್ಲಿ ನಾನು ಮನೆಯಲ್ಲಿ ಸಾಧಿಸುವುದಕ್ಕೆ ಆಗದಿದ್ದರೂ ನನ್ನ ಹಳ್ಳಿಗೆ ಹೋಗಿ ನನ್ನನ್ನು ಸಾಕಿದ ಚಿಕ್ಕಮ್ಮನವರನ್ನು, ಅಜ್ಜಿಯನ್ನು ಪೀಡಿಸಿ ಒಂದೆರಡು ಸಲ ಅದನ್ನು ಸಾಧಿಸಿದ್ದುಂಟು. ಅಷ್ಟು ಪೌಷ್ಟಿಕವಾದ ಆಹಾರವನ್ನು ದಿನಾ ಮಾಡುವುದಕ್ಕೆ ನಮ್ಮಲ್ಲಿ ಗತಿ ಯಾರಿಗೆ ಇದೆ? ಗೋಧಿ ಹಾಲೇನು? ಅದರ ಜೊತೆಗೆ ಗಟ್ಟಿ ಹಸುವಿನ ಹಾಲೇನು? ಬಾದಾಮಿ, ಆಕ್ರೋಟ್, ಕೆಕ್ಕರಿಕೆ – ಕರಬೂಜಗಳ ಬಿತ್ತಗಳ ಲಾವಾಜಮಿ ಏನು? ತುಪ್ಪ ಲವಂಗ ಸಕ್ಕರೆ ಏನು? ಇವಕ್ಕೆಲ್ಲ ಬೀಳುತ್ತಿದ್ದ ಖರ್ಚು ತುಂಬಾ ದುಬಾರಿ. ಆದುದರಿಂದ ಒಂದೆರಡು ಸಲ ರುಚಿ ನೋಡಿ ಜೀರ್ಣಶಕ್ತಿಗೂ ಮೇಲ್ಪಟ್ಟುದರಿಂದ ಅದಕ್ಕೆ ಹೆಚ್ಚು ಹಾತೊರೆಯದೆ ಅದನ್ನು ಬಿಡಬೇಕಾಯಿತು. ದೇಹಶಕ್ತಿ ಬಹುಕಾಲದಿಂದ ನಮಗೆ ದೇವರ ಇಷ್ಟ ಎಂದುಕೊಂಡು ನಮ್ಮ ಮಿತಿಯಲ್ಲೇ ನಾವು ಉಳಿಯಬೇಕಾಯಿತು.

ಆಂಜನೇಯನ ಗುಡಿಗೆ ಇಂದಿನ ಕಟ್ಟಡ ಇರಲಿಲ್ಲ. ಸಾಮಾನ್ಯ ಹೊರಗೋಡೆ, ಅದರ ಒಳಗೆ ದೇವರನ್ನು ಸುತ್ತಿ ಬರುವ ಪ್ರದಕ್ಷಿಣೆಯ ಏರ್ಪಾಡಿನ ವ್ಯವಸ್ಥೆ ಇತ್ತು ಅಷ್ಟೆ. ಅದರ ಪೂಜೆಯ ವೈಭವವೂ ಆ ಕಾಲದಲ್ಲಿ ಸಾಮಾನ್ಯವೆ. ನಾಲ್ಕೈದು ಮಂದಿ ಇದ್ದ ನಾವು 'ಭಾರತ ಪುತ್ರ ಮಂಡಲಿ' ಎಂಬ ಒಂದು ಸಂಸ್ಥೆಯನ್ನು ಸ್ಥಾಪಿಸಿಕೊಂಡು – ಅದನ್ನು ರಿಜಿಸ್ಟರ್ ಮಾಡಿಸಲಿಲ್ಲ – ಅಲ್ಲಿ ಸ್ವದೇಶ ಪ್ರೇಮದ ಅದ್ಭುತ ಭಾಷಣಗಳನ್ನು ನಮ್ಮನಮ್ಮಲ್ಲೇ ಮಾಡಿಕೊಳ್ಳುತ್ತ, ಬ್ರಿಟಿಷ್ ಸರಕಾರದ ದರ್ಪವನ್ನು ನಾಶಮಾಡಲು ಅನೇಕ ಯೋಜನೆಗಳನ್ನು ಕಲ್ಪಿಸಿಕೊಳ್ಳುತ್ತಿದ್ದೆವು. ಅವರಲ್ಲಿ ಒಬ್ಬರಿಗೆ ಹುಚ್ಚು ಹಿಡಿಯಿತು; ಇನ್ನೊಬ್ಬರು ಕಾಲೇಜ್ ಮುಟ್ಟದೆ ಎಲ್ಲಿಯೊ ಹೋಗಿ ಕಡೆಗೆ ಬಳ್ಳಾರಿ ಪ್ರದೇಶದಲ್ಲಿ ಒಬ್ಬ ಪೋಸ್ಟ್‌ಮಾಸ್ಟರ್ ಆಗಿದ್ದರು. ಇನ್ನೊಬ್ಬರು ಚಿಂತಾಮಣಿಯ ಹತ್ತಿರದ ಊರಿನವರು, ಶ್ರೀವೈಷ್ಣವರು. ಅವರು ಹೆಚ್ಚು ಮಾತಿನವರಲ್ಲ. ನಮಗೆ ಬೆಂಬಲ ಒತ್ತಾಸೆ ಕೊಡುತ್ತಿದ್ದವರು. ಅವರಿಗೆ ಸ್ವಲ್ಪ ಭೂಮಿ ಕಾಣಿ ಇದ್ದುದರಿಂದ, ನಮ್ಮ ಮೀಟಿಂಗ್‌ಗಳು ನಡೆದ ದಿನ ನಮಗೆ ಅಲ್ಪೋಪಹಾರಗಳನ್ನು ಒದಗಿಸುತ್ತಿದ್ದರು. ಒಂದು ಷರ್ಟ್, ದಟ್ಟಿ - ಎರಡೇ ಅವರ ಆಜೀವ ಕಾಲದ ವಸ್ತ್ರಾಲಂಕಾರ. ಇನ್ನು ನಾನು; ಒಬ್ಬರಿಬ್ಬರು ಹೆಚ್ಚು ಬಂದು ಹೋಗುತ್ತಿದ್ದರು ಅಷ್ಟೆ. ನಾನು ಮೈಸೂರಿಗೆ ಹೊರಟುಹೋದ ಮೇಲೆ ಆ ಸಂಪರ್ಕ ಬಿಟ್ಟುಹೋಯಿತು. ನನ್ನ ಭಾಷಣಗಳು, ಸಂಪರ್ಕಗಳು ಆಮೇಲಿನ ಕಾಲದಲ್ಲಿ ಸಪ್ಪೆಯಾದವು; ತೀರ್ಮಾನಗಳು, ಆಲೋಚನೆಗಳು ಅವರಿಗೆ ಬೆಂಡು ತೇಲಿದಂತೆ ಕಾಣಿಸಿದವು! "ನೀವು ಏನಾಗಿ ಹೋದಿರಿ? ನಿಮಗೆ ಏನು ಬಂತು?" ಇತ್ಯಾದಿ ಆಕ್ಷೇಪಣೆಗಳು ಆಮೇಲೆ ಬಂದು ನಮ್ಮ ಸಭೆಗಳು ನಿಂತುಹೋದವು. ಈಗ ಹೀಗಾಗಿದ್ದೇನೆ; ಉಳಿದವರು ಯಾರೂ ಇಲ್ಲ. 1940ರ ಮೇಲಿನ ಕಾಲದಲ್ಲಿ ಭರತ ಖಂಡದಲ್ಲಿ ಇಂತಹ ಕ್ರಾಂತಿಗಳನ್ನು ಗಾಂಧೀಜಿಯವರ ಮಾತಿನಂತೆ ನಡಸಬೇಕೆಂದಿದ್ದಾರೆ; ಯಾರೂ ನಾಯಕರಿಗೆ ಕಾಯಬೇಕಾಗಿಲ್ಲ; ಅವರವರಿಗೆ ತೋರಿದಂತೆ ವಿಪ್ಲವ ಕಾರ್ಯಗಳನ್ನು ಮಾಡಬಹುದು ಎಂಬಂತಹ ಸೂಚನೆಗಳನ್ನು ಅವರು ಕೊಟ್ಟಿದ್ದಾರೆ – ಎಂದು ಎಲ್. ಎಸ್. ಆಮರಿ ಅವರು ಈಚೆಗೆ ಲಂಡನ್ನಿನಲ್ಲಿ ಪ್ರಕಾಶನ ಮಾಡಿದರು. ಆದರೆ ಅಂಥದು ಒಂದನ್ನು 1916ರ ಹೊತ್ತಿಗೇ ಭಾರತ ಪುತ್ರ ಮಂಡಲಿಯ ಮಹಾಸದಸ್ಯರಾದ ನಾವು – ಯಾರ ಕೈಯಲ್ಲಿಯೂ ಐದು ರೂ. ಇಲ್ಲ; ಸಮಾಜದ ಪ್ರತಿಷ್ಠೆ ಇಲ್ಲ; ಹತ್ತು ಜನರ ಬೆಂಬಲವಿಲ್ಲ – ಕಲ್ಪಿಸಿಕೊಂಡು, ಹೊಸ ವರ್ಷದ ಆರಂಭ ದಿನದಲ್ಲಿಯೇ, Empire Day ಮುಂತಾದ ದಿನದಲ್ಲಿಯೇ ಬ್ರಿಟಿಷ್ ಸೈನಿಕರೆಲ್ಲ ಅವರವರ ಕಂಟೋನ್ಮೆಂಟುಗಳಲ್ಲಿ ಹೊರಗಡೆ ಪೆರೇಡ್‌ಗೆ ಬಂದಾಗ, ಎಲ್ಲ ಸಿದ್ಧ ಮಾಡಿಟ್ಟುಕೊಂಡು 5-10 ವರ್ಷ ಒಬ್ಬರಿಗೆ ತಿಳಿಯದೆ ಅವರ ಬ್ಯಾರಕ್ಕುಗಳಲ್ಲಿ ಕೆಲಸ ಮಾಡಿಕೊಂಡಿದ್ದು, ಸ್ಫೋಟಕಗಳನ್ನು ನಟ್ಟು ಅವರು ಇನ್ನೇನು ಶಸ್ತ್ರಾಸ್ತ್ರಗಳನ್ನು ನಟ್ಟು ಊಟಕ್ಕೆ ಹೊರಟರು ಎಂಬ ಹೊತ್ತಿಗೆ, ಭರತ ಖಂಡದ ಎಲ್ಲ ಪ್ರದೇಶಗಳಲ್ಲಿಯೂ ಟೆಲಿಫೋನ್, ಟೆಲಿಗ್ರಾಫ್ ತಂತಿಗಳನ್ನು



ಕತ್ತರಿಸಿ, ಈ ಸ್ಫೋಟಕಗಳನ್ನು ಉಡಾಯಿಸಿಬಿಡಬೇಕು – ಎಂಬಂತಹ ಒಂದು ನಿರ್ಣಯಕ್ಕೆ ಬಂದಿದ್ದೆವು. ಆದರೆ ಕ್ಷೀಣಸತ್ವರಾದ, ನೆತ್ತರಿನ Composition ನಲ್ಲಿ ಕೆಂಪು ರಕ್ತಕಣಗಳೇ ಕ್ಷೀಣವಾದ ನಮ್ಮಂತಹ ಕ್ರಾಂತಿಕಾರರಿಂದ ಬ್ರಿಟಿಷರ ಉಚ್ಚಾಟನೆ ಸಾಧ್ಯವಾಗದಿದ್ದುದಕ್ಕಾಗಿ ನನಗೆ ಈಗೇನೂ ಪಶ್ಚಾತ್ತಾಪವಿಲ್ಲ. ಹುಡುಗತನದ ಕನಸುಗಳು!

ಮುಂದೆ ಹೊರಟರೆ 1911-1912ರಲ್ಲಿ ಬಹುಶಃ ಕಣ್ಣಾಸ್ಪತ್ರೆ ಸ್ಥಾಪಿತವಾಯಿತು. ಕೋಟೆಯ ಈ ತುದಿಯಿಂದ ಬಂದರೆ ಅದು ಕೊನೆ. ಚಾಮರಾಜಪೇಟೆಯ ಆ ತುದಿ ಟಿ. ಪರಮಶಿವಯ್ಯರ್ ಅವರ – ಅಂದರೆ ಟಿ. ಪಿ. ಕೈಲಾಸಂ ಅವರ ತಂದೆಯವರ– ವೈಟ್‌ಹೌಸ್. ಇಲ್ಲಿಗೆ ಬೆಂಗಳೂರು ಪಟ್ಟಣದ ನೆಲಸು ಮುಗಿಯುತ್ತದೆ. ಅದು ನಮ್ಮ ಚಾಮರಾಜಪೇಟೆಯ ಗಡಿ.

* * *

ಕಣ್ಣಾಸ್ಪತ್ರೆಯಿಂದ ಹಿಡಿದು ಪೊಲೀಸ್ ಸ್ಟೇಷನ್, ಮಸೀದಿ ಮೈದಾನದವರೆಗೂ ಅಲ್ಲಿಂದ ಮುಂದಕ್ಕೂ ಹರಡಿರುವ ಮೊದಲ ರಸ್ತೆಯಿಂದ ಹಿಡಿದು, ಐದನೆ ರಸ್ತೆಯಲ್ಲಿ ಸಿಟಿ ಇನ್ಸ್‌ಟ್ಯೂಟ್‌ನಿಂದ ಹಿಡಿದು ಡಾ. ರಾಘವೇಂದ್ರರಾಯರ ಮನೆ ದಾಟಿ ಕಡೆಗೆ ಕೆಂಪಾಂಬುಧಿಗೆ ನಡಸುವವರೆಗೂ ಬೆಳೆದ ಭಾಗ ಚಾಮರಾಜಪೇಟೆ. ಈಚಿನ ಕಾಲದಲ್ಲಿ ಬೆಳೆದದ್ದು ಆರನೆಯ ರಸ್ತೆಯ ತುಣುಕು. ಅದೇ ಬೀದಿ ಪೂರ್ವದಲ್ಲಿ ಟಿಪ್ಪುಸುಲ್ತಾನ್ ಕೋಟೆಯ ಅರಮನೆಯವರೆಗೂ ವಿಸ್ತರಿಸಿತ್ತು. ಕೋಟೆಯಿಂದ ಆಚೆ ಕಡೆಗೆ ಕೋಟೆ ಹೈಸ್ಕೂಲು - ಆಂಗ್ಲೋ ವರ್ನಾಕ್ಯುಲರ್ ಸ್ಕೂಲ್ – ಎಂಬ ಭಾಗ ಚಾಮರಾಜಪೇಟೆಯ ಚೌಕಟ್ಟಿಗೆ ಸೇರಿದ್ದೇ. ಆ ಸ್ಕೂಲಿನ ಎಡಕ್ಕೆ ಅವೆನ್ಯೂ ರಸ್ತೆಯಲ್ಲಿ ತಾಲ್ಲೂಕು ಕಚೇರಿ. ಅದರಾಚೆಗೆ ಹಿಂದೆ ಹೇಳಿದ ವೆಂಕಟರಮಣಸ್ವಾಮಿ ಗುಡಿ. ಎಂದರೆ, ಅಲ್ಲಿಂದ ಹಿಡಿದು 'ಈದ್‌ಗಾ'ವರೆಗೂ, ಸಿಟಿ ಇನ್ಸ್‌ಟ್ಯೂಟ್‌ನಿಂದ ಕೆಂಪಾಬುಧಿಯವರೆಗೂ ನಡುವೆ ಇರುವ ಭಾಗ ಚಾಮರಾಜಪೇಟೆ. ಇದರ ನಾಲ್ಕೈದು ರಸ್ತೆಗಳು ಮೊದಲಿಂದ ಪ್ರಖ್ಯಾತವಾದವು. ಐದನೆಯದರಲ್ಲಿ ಶ್ರೀಮಂತರಾಗಿಯೊ ಸರ್ಕಾರದ ದೊಡ್ಡ ಹುದ್ದೆಗಳಲ್ಲಿಯೊ ಇದ್ದು ಸುಮಾರು ವಿಶ್ರಾಂತಿಯ ಕಾಲ ಮುಟ್ಟಿದ್ದ ಜನರೇ ಹೆಚ್ಚು ಮಂದಿ. ಆ ರಸ್ತೆಯ ಪಡುವಲ ಕಡೆಯಿಂದ ಕೋಟೆಗೆ ಬರುವ ಕಡೆ ನೋಡಿದರೆ – ಡಾ. ಅಚ್ಯುತರಾಯರು, ಹುಚ್ಚಾಸ್ಪತ್ರೆಯ ರಾಘವೇಂದ್ರ ರಾಯರು, ಎಚ್. ರಾಮಯ್ಯನವರು, ಆರ್. ರಘುನಾಥ ರಾಯರು. ಕೆ. ಆರ್. ಶ್ರೀನಿವಾಸಯ್ಯಂಗಾರ್, ಪುಟ್ಟಣ್ಣ ಶೆಟ್ಟರು, ಬಿ. ಪುಟ್ಟಯ್ಯನವರು, ಸಿ. ಎಸ್. ದೊರೆಸ್ವಾಮಿ ಅಯ್ಯರು. ಈ ಕಡೆ ಮುಂದೆ ಬಂದರೆ ಅಪ್ಪೂರಾಯರು ಮೊದಲು, ಸಿ. ಕೃಷ್ಣರಾಯರು, ಆಮೇಲೆ ಮೋಕ್ಷಗುಂಡಂ ರಾಮಚಂದ್ರರಾವ್ ಮನೆ. ಬಲಗಡೆಗೆ ದೇಶ್‌ಮುಖ್ ಶ್ಯಾಮರಾಯರು, ಕಡೇ ಮನೆ ರಾಮರಾಯರು, ಡೆಪ್ಯುಟಿ ಕಮೀಷನರ್

ನಾರಾಯಣರಾಯರು – ಹೀಗೆ ಎಲ್ಲ ಹೆಸರಾದ ಬೆಂಗಳೂರಿನ ಹಿರಿಯ ಪ್ರಜೆಗಳು. ಇವುಗಳಲ್ಲಿನ ಯಜಮಾನರನ್ನು ಕುರಿತು ಚಾಮರಾಜಪೇಟೆಗೆ ಅಭಿಮಾನ; ಬೆಂಗಳೂರಿಗೆ ಮೆಚ್ಚು, ಗೌರವ.

ನಾಲ್ಕನೆಯ ರಸ್ತೆಗೆ ಬಂದರೆ, ಅದರ ಪೂರ್ವಭಾಗ ವಿದ್ವಾಂಸರಿಗೆ ಹೆಸರಾದುದು. ಆ ವಿದ್ವಾಂಸರೆಲ್ಲರೂ ಈಗಿನ ಶಂಕರಮಠದ ಈಚೆ-ಆಚೆ ಕಡೆಯವರು. ಲಾಯರು ಎಂ. ಜಿ. ವರದಾಚಾರ್, ನಾರಾಯಣಸ್ವಾಮಿ ಅಯ್ಯರ್, ಗೋಪಾಲಸ್ವಾಮಿ ಅಯ್ಯರ್ ಮನೆ ಆದಮೇಲೆ ವೆಂಕಟರಾಮ ಶಾಸ್ತ್ರಿಗಳು. ಪಕ್ಕದಲ್ಲಿ ಅನುಗೊಂಡನಹಳ್ಳಿ ಸುಬ್ಬಣ್ಣನವರ ಮನೆ, ಅವರ ಎದುರಿಗೆ ವಿಶ್ವೇಶ್ವರ ಶಾಸ್ತ್ರಿಗಳು. ಎದುರಿನ ರಾಮೇಶ್ವರ ಗುಡಿ ದಾಟಿದರೆ ಮೇಲೆ ಎಡಕ್ಕೆ ಎಂ. ಶಾಮರಾಯರು; ಅದರ ಎದುರು ಆಚೆಗೆ ಡೆಪ್ಯುಟಿ ಕಮೀಷನರ್ ನಾನಾರಾಯರು – ಎಲ್ಲ ಆ ಕಾಲದಲ್ಲಿ ಹೆಸರಾದವರು. ಚಪ್ಪಲ್ಲಿ ವಿಶ್ವೇಶ್ವರ ಶಾಸ್ತ್ರಿಗಳು ಬೆಂಗಳೂರು ಸೆಂಟ್ರಲ್ ಕಾಲೇಜಲ್ಲಿ ಸಂಸ್ಕೃತ ವಿದ್ವಾಂಸರು. ಹೊಸಕೋಟೆ ವೆಂಕಟರಾಮ ಶಾಸ್ತ್ರಿಗಳು ಎಲ್ಲಿಯೋ ಮಿಷನ್ ಸ್ಕೂಲಲ್ಲಿ ಉಪಾಧ್ಯಾಯರು. ಮೋಟಗಾನಹಳ್ಳಿ ಸೋದರರ ವಿಚಾರ ಮುಂದೆ ಹೇಳುತ್ತೇನೆ. ಅವರ ಮನೆ ಪಕ್ಕದಲ್ಲಿ ಚನ್ನರಾಯಪಟ್ಟಣದ ವೆಂಕಟರಮಣಯ್ಯನವರು; ಕೋಟೆಯ ಸಂಸ್ಕೃತ ಕಾಲೇಜಿನ ಮುಖ್ಯೋಪಾಧ್ಯಾಯರು. ಎಂ. ಶಾಮರಾಯರು ವಿದ್ಯಾ ಇಲಾಖೆಯ ಇನ್ಸ್‌ಪೆಕ್ಟರ್ ಆಗಿದ್ದವರು.

ಮೂರನೆ ರಸ್ತೆಯ ರಾಮೇಶ್ವರ ದೇವಸ್ಥಾನದ ಹಿಂಭಾಗದಲ್ಲಿನ ನಾಲ್ಕನೆಯ ರಸ್ತೆಯಲ್ಲಿ ಶಂಕರಮಠದ ಮೇಲಕ್ಕೆ–ಹಿಂದೆ ಹಾರ್ಡಿಂಗ್ ರಸ್ತೆಯಾಗಿದ್ದು ಇಂದಿನ ಪಂಪ ಮಹಾಕವಿ ರಸ್ತೆಯವರೆಗೂ ಇದ್ದ ಭಾಗದಲ್ಲಿ – ಒಂದು ಕಾಲದಲ್ಲಿ ಎಂ. ಜಿ. ವರದಾಚಾರ್ ಅವರೂ ಅನಂತನಾರಾಯಣಯ್ಯರ್ ಎಂಬವರೂ ಆಮೇಲೆ ಷೆಡ್ಯೂಲ್ಡ್ ಕ್ಯಾಸ್ಟ್ ಜನರ ನಾಯಕರೂ, ರೆಪ್ರೆಸೆಂಟೇಟಿವ್ ಅಸೆಂಬ್ಲಿಯಲ್ಲಿ ಜನಪ್ರತಿನಿಧಿಗಳ ನೆರವಿಗೆ ನಿಂತ ಆರ್. ಗೋಪಾಲಸ್ವಾಮಿ ಅಯ್ಯರ್ ಅವರೂ ಇದ್ದರು. ವರದಾಚಾರ್ಯರಷ್ಟು ಮೇಧಾವಿಗಳೂ ಆಧುನಿಕ ಮನೋಭಾವದವರೂ ಹೆಚ್ಚು ಜನ ಬೆಂಗಳೂರಲ್ಲಿ ಲಾಯರುಗಳಿರಲಿಲ್ಲ. ಯಾವ ಸಾರ್ವಜನಿಕ ಕಾರ್ಯವಾಗಬೇಕಾಗಲಿ, ಉಪನ್ಯಾಸಗಳಾಗಲಿ, ಸಾಹಿತ್ಯಕ ಅಥವಾ ಸಾಮಾಜಿಕ ಪ್ರಸಂಗಗಳಾಗಲಿ – ಅವುಗಳಲ್ಲೆಲ್ಲ ಮುಂದಾಳಾಗಿ ನಿಂತಿರುತ್ತಿದ್ದವರು ಅವರು. ಅವರ ಪುಸ್ತಕ ಭಂಡಾರ ಕಾನೂನು ಮತ್ತು ನ್ಯಾಯ ಶಾಸ್ತ್ರಗಳಿಗೆ ಮಾತ್ರವೇ ಮಿತವಾಗಿದ್ದಿರಲಿಲ್ಲ. ಸಾಹಿತ್ಯ ಚರಿತ್ರೆ, ರಾಜ್ಯಶಾಸ್ತ್ರ, ಮಾರ್ಲೆ-ಮಿಲ್ ಪುಸ್ತಕಗಳು, ಹರ್ಬರ್ಟ್ ಸ್ಪೆನ್ಸರ್, ಭಾರತದಲ್ಲಿ ಹೊಸಕಾಲದ ಪತ್ರಕರ್ತರ, ಗಣ್ಯ ನಾಯಕರ ಕೃತಿಗಳು, ಅನೇಕ ನಿಯತ ಕಾಲಿಕೆಗಳು ಅವರಲ್ಲಿ ಇರುತ್ತಿದ್ದವು. ನಾಲ್ಕನೆಯ ರಸ್ತೆಯಲ್ಲಿ ಇವರು, ಅಲ್ಲಿಂದ 40 ಗಜ ದೂರದಲ್ಲಿ ಐದನೆಯ ರಸ್ತೆಯಲ್ಲಿ ಸಿ. ಎಸ್. ದೊರೆಸ್ವಾಮಿ ಅಯ್ಯರ್ ಇದ್ದರು. ಈ ಇಬ್ಬರೂ ತುಂಬಾ ಪ್ರಖ್ಯಾತರಾದ ವಿದ್ವಾಂಸರು. ವರದಾಚಾರ್ ಮನೆ ದಾಟಿದ



ಮೇಲೆ ಮೋಟಗಾನಹಳ್ಳಿ ರಾಮಶೇಷ ಶಾಸ್ತ್ರಿಗಳು, ಶಂಕರಶಾಸ್ತ್ರಿಗಳ ಮನೆಗಳು. ಶಂಕರ ಶಾಸ್ತ್ರಿಗಳ ಮಕ್ಕಳೇ ಸುಬ್ರಹ್ಮಣ್ಯ ಶಾಸ್ತ್ರಿಗಳು. ಶಂಕರ ಶಾಸ್ತ್ರಿಗಳು ದೊಡ್ಡವರು. ರಾಮಶೇಷ ಶಾಸ್ತ್ರಿಗಳು ಅವರ ತಮ್ಮ; ಮೈಸೂರು ಅರಮನೆಯಲ್ಲಿ ಪಾಠ ಹೇಳುತ್ತಿದ್ದರಲ್ಲದೆ ಮಹಾರಾಣಿ ಕಾಲೇಜಿನಲ್ಲಿ ಸಂಸ್ಕೃತ ಅಧ್ಯಾಪಕರಾಗಿ ವಿಶ್ರಾಂತರಾದರು. ಆಜಾನುಬಾಹು. ಶಂಕರಶಾಸ್ತ್ರಿಗಳು ಬೆಂಗಳೂರು ದಂಡಿನಲ್ಲಿ – ಬಹುಶಃ ಆರ್ಕಾಟ್ ನಾರಾಯಣಸ್ವಾಮಿ ಸ್ಕೂಲಲ್ಲಿ – ಉಪಾಧ್ಯಾಯರಾಗಿದ್ದರು. ಸೋದರರಿಬ್ಬರೂ ಸಂಸ್ಕೃತ ವಿದ್ವಾಂಸರು; ಆಶುಕವಿಗಳು – ಸಂಸ್ಕೃತದಲ್ಲಿ, ಕನ್ನಡದಲ್ಲಿ. ಚಾಮರಾಜಪೇಟೆಗೆಲ್ಲ ಶಂಕರಶಾಸ್ತ್ರಿಗಳ ಮತ್ತು ಚಪ್ಪಲ್ಲಿ ವಿಶ್ವೇಶ್ವರ ಶಾಸ್ತ್ರಿಗಳ ಮಾತು ಪರಮ ಪ್ರಮಾಣ. ನನ್ನ ಎರಡನೆಯ ಬೀದಿಗೆ ಹರಿಯಾಚಾರ್ಯರು.

* * *

ಸುತ್ತಮುತ್ತಲ ಎಲ್ಲರಿಗೂ ಪೇಟೆಗೆ ಹೋಗುತ್ತೇವೆ ಎಂದರೆ ಈ ಬೆಂಗಳೂರು ಪೇಟೆ. ವ್ಯಾಪಾರವೆಲ್ಲ ಇಲ್ಲಿ. ಇಲ್ಲಿ ನಿತ್ಯ ಸಂತೆ. ಒಂದು ದೊಡ್ಡ ಪಟ್ಟಣದಲ್ಲಿ ಒಂದೊಂದು ಬಗೆಯ ವ್ಯಾಪಾರ, ಅಂಗಡಿ ಕಟ್ಟೆ ಒಂದೊಂದು ಬಗೆಯ ಸಾಮಾನಿಗೆ ಉದ್ದಕ್ಕೆ ನೆಲಸಿರುವುದರಿಂದ ಹಣ್ಣಿನ ಪೇಟೆ, ತರಕಾರಿ ಪೇಟೆ, ಜವಳಿಪೇಟೆ, ಗ್ರಂಧಿಗೆ ಅಂಗಡಿ, ಜವಾಹಿರಿ ಪೇಟೆ ಮುಂತಾಗಿ ವಿಶಿಷ್ಟವಾಗಿರುವುದು ರೂಢಿ, ಈ ಕಾಲದ ವಿಶೇಷ ಲಕ್ಷಣ. ಇಂಥ ಬೀದಿಗಳ ಜೊತೆಗೆ, ಅನೇಕ ಬಗೆಯ ವಸ್ತುಗಳನ್ನು ಒಂದೇ ಪ್ರದೇಶದಲ್ಲಿ ಮಾರುವ, ಕೊಳ್ಳುವ ಸ್ಥಳವಿಶೇಷಗಳನ್ನು ಮಾರ್ಕೆಟ್ಸ್ ಎನ್ನುತ್ತಾರೆ. ಅದರ ವಿಶಿಷ್ಟ ರೂಪ ಇಂಥವು ಮದರಾಸು, ಬೊಂಬಾಯಿ, ಡೆಲ್ಲಿಗಳಲ್ಲಿ ಬಹು ಕಾಲದಿಂದ ಇವೆ. ಈಚಿನ ಕಾಲದವು ಡಿಪಾರ್ಟ್‌ಮೆಂಟಲ್ ಸ್ಟೋರ್ಸ್, ಜನತಾ ಸ್ಟೋರ್ಸ್ ಎಂಬವು; ಸ್ವಾತಂತ್ರ್ಯೋತ್ತರ ಭಾರತದ ವಿಶೇಷಗಳು. ತರಗುಪೇಟೆ ಎಂದೆ – ಇಲ್ಲಿ ದವಸ ಧಾನ್ಯಗಳು ಹೆಚ್ಚಾಗಿ ಮಾರಾಟವಾಗುತ್ತವೆ. ಹಳೇ ತರಗುಪೇಟೆಯ ವರ್ತಕತನ ಹೆಚ್ಚಾಗಿ ಮೈಸೂರಿನವರದೇ ಆಗಿತ್ತು. ಹೊಸ ತರಗುಪೇಟೆಯಲ್ಲಿ ಇಲ್ಲಿನವರೂ ಇತರರೂ 3-4 ಬೇರೆ ಬೇರೆ ರಸ್ತೆಗಳಲ್ಲಿ ಹರಡಿದ್ದರು. ಲಬ್ಬೆ ಜನ ಸಾಹುಕಾರರು ಇಲ್ಲಿ ಹೆಚ್ಚು ಮಂದಿ ವರ್ತಕತನ ನಡಸುತ್ತಿದ್ದರು. ತರಗು ಎಂಬುದು ಕನ್ನಡ ಮಾತು. ಯಾವುದಕ್ಕೆ ಇಂದು ನಾವು ದಲಾಲಿ ಎನ್ನುತ್ತೇವೆಯೊ ಅದರ ಕನ್ನಡ ಪದ ಇದು. ತರಗೆಂಬ ಪದಕ್ಕೆ ಅರ್ಥ ಮರೆತು ಹೋಗಿ ತರಗಿನ ದಲಾಲಿ ಎಂಬ ಮಾತಿನ ಬಳಕೆ ಉಂಟಾಗುತ್ತಿದೆ. ಈ ಅಂಗಡಿಗಳವರೆಲ್ಲರಿಗೂ ವ್ಯಾಪಾರ ಮೌಲಿಕವಾದ್ದಲ್ಲ. ಒಂದೊಂದು ಅಂಗಡಿಯವರಿಗೂ ದೇಶದ ಬೇರೆ ಬೇರೆ ಕಡೆಗಳಿಂದ ಅವರ ಕುಳಗಳಿಂದ ಪದಾರ್ಥಗಳು ಬರುತ್ತವೆ. ಅದಕ್ಕೆ ಪೇಟೆ ಒದಗಿಸುವುದು ಇವರ ಕೆಲಸ. ಮಾರುವವರ ಪ್ರತಿನಿಧಿಗಳು ಇವರು. ಎರಡೂ ಕಡೆಯಿಂದ ಸಾಮಾನ್ಯವಾಗಿ ತರಗನ್ನು ಸಂಗ್ರಹಿಸುತ್ತಾರೆ. ಜೊತೆಗೆ ಧರ್ಮಕ್ಕೆ, ಪೇಟೆಗೆ ಎಂದು ಪದಾರ್ಥಗಳನ್ನು ತರುವವರಿಂದ ಒಂದು ಅಳತೆ ಕ್ರಮದಲ್ಲಿ ಸಾಮಾನನ್ನು

ಸಂಗ್ರಹಿಸುವುದುಂಟು. ಇಲ್ಲಿನ ತೂಕ - ದೊಡ್ಡ ತೂಕ. ಹಿಂದಿನ ಕಾಲದಲ್ಲಿ ದೊಡ್ಡ ತೂಕ ಎಂದರೆ 48 ಸೇರಿನ ಮಣ, ಸೇರಿಗೆ 24 ತೊಲೆ (ಉತ್ತರ ದೇಶದಲ್ಲಿ ಸೇರೆಂದರೆ 72 ತೊಲೆ). ಸಣ್ಣ ವ್ಯಾಪಾರಗಳಲ್ಲಿ ವೀಸೆ ಎಂದರೆ ಸಣ್ಣ ಅಳತೆ 5 ಸೇರು, ದೊಡ್ಡಳತೆ 6. ಇವೆಲ್ಲ ಮಂಡಿಗಳು. ತಮ್ಮ ಮಂಡಿಗೆ ತಾವು ಬೆಳೆದ ಪದಾರ್ಥಗಳನ್ನು ತಂದು ಒದಗಿಸುವಂತೆ ಕುಳಗಳಿಗೆ ಮುಂಗಡವನ್ನು ಕೊಟ್ಟು ಸರಬರಾಜಿನ ವ್ಯವಸ್ಥೆ ಮಾಡಿ ಕೊಳ್ಳುವುದು ಇಲ್ಲಿನ ರೂಢಿ. ಇವು ಸಗಟು ವ್ಯಾಪಾರಗಳ ಅಥವಾ ರಾಸಿ ಸರಕಿನ ವ್ಯಾಪಾರ. ಇಲ್ಲಿಂದ ದೊಡ್ಡ ಪ್ರಮಾಣದಲ್ಲಿ ಪೇಟೆಗಳಿಗೆ, ಅಲ್ಲಿಂದ ಚಿಲ್ಲರೆ ಅಂಗಡಿಗಳಿಗೆ ಸಾಮಾನು ಸಾಗಬೇಕು. ಇದು ಸಗಟು ವ್ಯಾಪಾರವಾದ್ದರಿಂದ ರಾಸಿ ರಾಸಿ ಆಯ್ಕೆ ಆಯಬೇಕೆ ಹೊರತು ರಾಸಿಯಲ್ಲಿ ಆಯುವ ಹಾಗಿರುವುದಿಲ್ಲ. ಬೆಳೆಯುವವರ ಬೆಲೆಗೆ ಪದಾರ್ಥಗಳನ್ನು ಸಾಗಿಸುವುದರ ಬೆಲೆ ಸೇರಿ ಮಂಡಿಗಳಿಗೆ ಬರುತ್ತವೆ. ಕೊಳ್ಳುವವರು ಕೊಡುವ ಬೆಲೆಯಲ್ಲಿ ತರಗಿನವರ ಬೆಲೆ ಸೇರುತ್ತದೆ. ಕೊಳ್ಳುವವರ ಸಾಗಣೆ ವೆಚ್ಚ ಇದಕ್ಕೆ ಸೇರುತ್ತದೆ. ಹಾಕಿದ ಹಣದ ಮೇಲಿನ ಬಡ್ಡಿ ಸಂಗ್ರಹಿಸಿದ್ದನ್ನು ಆಯುವವರು.

ಬಹುಕಾಲದಿಂದ ಹಣ್ಣಿನ ಮಂಡಿಗಳು, ಸುಣ್ಣದ ವ್ಯಾಪಾರ ಒಂದು ಕಡೆಯೂ ತೆಂಗಿನಕಾಯಿ ಮತ್ತು ವೀಳೆಯದೆಲೆ ವ್ಯಾಪಾರ ಇನ್ನೊಂದು ಕಡೆಯೂ ನಡೆಯುತ್ತಿದೆ. ಮಾರ್ಕೆಟ್‌ನ ಪಶ್ಚಿಮ ರಸ್ತೆಗೆ ಮೊದಲಿಂದಲೂ ಸಗಟು ವ್ಯಾಪಾರ ವಿಶಿಷ್ಟವಾಗಿದೆ. ಗುಂಡೋಪಂತರ ಛತ್ರದ ರಸ್ತೆಯನ್ನು ಈಗ ಬಾಳೆಹಣ್ಣಿನ ವ್ಯಾಪಾರಕ್ಕೆ ಬಳಸಲಾಗುತ್ತದೆ. ಸಿಟಿ ಮಾರ್ಕೆಟ್‌ನಲ್ಲಿ ಹೊಸ ಕಟ್ಟಡ ಆಗುವ ಮುಂಚೆ ತರಕಾರಿಯ ವ್ಯಾಪಾರವೆಲ್ಲ ಬೆಂಗಳೂರಲ್ಲಿ ವಾಸವಾಗಿದ್ದ ತಿಗಳರ ಕೈಯಲ್ಲಿತ್ತು. ಧರ್ಮರಾಯನ ಒಕ್ಕಲು ಅವರು. ಆ ಜನತೆಯ ಹೆಂಗಸರು ತರಕಾರಿಯ ವ್ಯಾಪಾರದಲ್ಲಿ ಗಂಡಸರಿಗಿಂತ ದಕ್ಷರು. ಕೈ ತೂಕ, ಬಾಯಿ ಬಣ್ಣ ಎನ್ನುತ್ತಾರೆ. ಬಾಯ ಬಣ್ಣ ಗಡಸು. ಕೈ ತೂಕ ಜಾದು. ಅವರು ಹೇಳಿದಷ್ಟು ಕೊಟ್ಟು ಮಾಡಿದ ತೂಕವನ್ನು ತೆಗೆದುಕೊಂಡು ಬರಬೇಕಿತ್ತು. ಅವರ ಎದುರಿಗೆ ಯಾರೂ ಪ್ರತಿಭಟಿಸುವ ಸ್ಥಿತಿಯಲ್ಲಿರಲಿಲ್ಲ. ಈ ಜನವೇ ಇತ್ತ ಕಡೆ ಹೊಸಕೋಟೆ ಮಾಲೂರವರೆಗೂ ಅತ್ತ ಕಡೆ ದೇವನಹಳ್ಳಿಯವರೆಗೂ ತೋಟಗಾರಿಕೆಯ ಕೆಲಸದಲ್ಲಿ ತೊಡಗಿದ್ದವರು. ಅವರ ಕಾಲದಲ್ಲಿಯೇ ಬೆಂಗಳೂರು ಲಾಲ್‌ಬಾಗಿನ ಎಚ್ಚರಿಕೆಯೆಲ್ಲ ಇದ್ದದ್ದು. ಮೊದಲ ಮಹಾಯುದ್ಧದ ಕಾಲದಲ್ಲಿ ಬ್ರಿಟಿಷ್ ವಾಯುದಳದ ಸೈನಿಕರು ಕೆಲವರನ್ನು ಲಾಲ್‌ಬಾಗಿನ ಕಟ್ಟಡಗಳನ್ನು ಮೀರದಂತೆ ತಿಗಳರು ತಡೆದರು. ಆಳುವ ಜನಾಂಗವಾದ ಬ್ರಿಟಿಷ್ ದಳ ಕೋಪಗೊಂಡು ದಂಡಿನಿಂದ ಲಾಲ್‌ಬಾಗಿಗೆ ಬರುವ ರಸ್ತೆಯಲ್ಲಿ ಇವರನ್ನು ಶಿಕ್ಷಿಸಲೆಂಬಂತೆ ಬಂತು. ಸೇನಾಧಿಕಾರಿಗಳು ನಡೆಯ ಬಹುದಾದ ಈ ಘರ್ಷಣೆಯನ್ನು ತಡೆಯಲು ಠಿಣಾ ಠಿಜ ಛಿಚಿಣಾಟಿಜ ಜಿಠಿಡಿ ಃಡಿಣಾಚಿ ಖಿಡಿಠಿಚಿಠಿ ಎಂದು ಹೇಳಿ ಅವರನ್ನು ತಡೆಯಬೇಕಾಯಿತು. ಲಾಲ್‌ಬಾಗಿನಲ್ಲಿಯಾಗಲಿ, ಕಬ್ಬನ್ ಪಾರ್ಕಿನಲ್ಲಿಯಾಗಲಿ ಈ ತಿಗಳರ ಕೈಯಲ್ಲಿದ್ದ ತೋಟಗಳ ವ್ಯವಸ್ಥೆ ಅಚ್ಚುಕಟ್ಟಾಗಿ



ಸರ್ಪಕಾವಲೆಂಬಂತೆ ನಡೆಯಿತು. ಇವರದೇ ವರ್ಗ ಇಂದು ವಿಶ್ವೇಶ್ವರಪುರವೆಂಬ ಹೆಸರಿನಲ್ಲಿರುವ ವಿಸ್ತರಣದಲ್ಲಿದೆ ಇದು ದಿವಾನ್ ವಿಶ್ವೇಶ್ವರಯ್ಯನವರ ಹೆಸರಲ್ಲಿ 1920-21ರ ಆಚೆಗೆ ಹುಟ್ಟಿದ್ದು. ಈಗ ಮಹಿಳಾ ಸೇವಾ ಸಮಾಜ ಇರುವ ಪ್ರದೇಶದ ಎದುರಿಗೆ ಒಂದು ಕೆರೆ ಇತ್ತು. ಆ ಕೆರೆಯ ಕಟ್ಟೆಯ ಆಚೆಗೆ ದೊಡ್ಡ ಸೇಬು ಅಂಜೂರಗಳ ತೋಟ ಇತ್ತು. ಬೆಂಗಳೂರು ಸೇಬು ಎಂಬುದು ಇಂಡಿಯಾದಲ್ಲೇ ಪ್ರಸಿದ್ಧವಾದ್ದು. ಅದರ ಆಕೃತಿ ರುಚಿ ಬಣ್ಣ ಗಾತ್ರ ತೂಕ ಅನನ್ಯಸಾಧಾರಣವಾದ್ದು. ಅವನ್ನು ಬೆಳಸುತ್ತಿದ್ದ ರೀತಿ ಬೆಂಗಳೂರಿಗೆ ಹೆಸರು ತಂದಿತ್ತು. ಆ ಕಾಲದಲ್ಲಿ ಉತ್ತಮವಾದ್ದು ಡಜನ್ - ಆಗ ಡಜನ್ ಲೆಕ್ಕ, ಈಗ ಕಿಲೋ ಲೆಕ್ಕ - ಒಂದಕ್ಕೆ ಮೂರುಮುಕ್ಕಾಲು ರೂಪಾಯಿಂದ ಐದು ರೂ.ವರೆಗೆ ಇರುತ್ತಿದ್ದವು. ಮಾರ್ಕೆಟ್‌ನಲ್ಲಿ ಈಗ ಹಣ್ಣು ಮಾರುವ ಸ್ಥಳಗಳಲ್ಲಿಯೇ ಸೇಬನ್ನು ಪಶ್ಚಿಮ ಭಾಗದಲ್ಲಿ, ಅಂಜೂರವನ್ನು ಪೂರ್ವಭಾಗದಲ್ಲಿ ಮಾರುವುದು ಪದ್ಧತಿ. ಬೆಂಗಳೂರಿನ ಸೇಬು ಮಾಯವಾದಂತೆ ಈಗ ಸುಮಾರು ಅಂಜೂರವೂ ದಿನದಿನಕ್ಕೆ ಮಾಯವಾಗುತ್ತಿದೆ. ಅದನ್ನು ಕೊಳ್ಳಲು ದಂಡಿಗೇ ಹೋಗಬೇಕು. ಡಜನ್ ಕೊಂಡವರಿಗೆ ತಟ್ಟೆ ತಟ್ಟೆಯೇ ಒಟ್ಟಿಗೆ ಮಾರುತ್ತಿದ್ದರೂ ಅರ್ಧ ಡಜನ್ ಕೊಳ್ಳುವವರಿಗೆ, ಕೊಳ್ಳುವವರು ತಾವೇ ಆರಾರಾಗಿ ವಿಂಗಡಿಸಿ ಎರಡರಲ್ಲಿ ಯಾವುದನ್ನಾದರೂ ಒಂದನ್ನು ಕೊಳ್ಳುವ ಆಯ್ಕೆ ಕೊಡುತ್ತಿದ್ದರು. ಇಚ್ಛೆ ಬಂದುದನ್ನು ಆಯುವ ಧಾರಾಳ ಕೊಳ್ಳುವವರಿಗೆ ಇರಲಿಲ್ಲ. ಬೆಂಗಳೂರಿನ ಸೇಬಿನ ಗಿಡಗಳು ಒಂದಾಳೆತ್ತರ ಅಥವಾ 8-10 ಅಡಿ ಎತ್ತರ ಬೆಳೆದ ಗಿಡಗಳು; ಮರಗಳಲ್ಲ. ಮರಕ್ಕೆ ಸಾವಿರ ಬಿಡುವ ಸೇಬಿನ ಗಿಡಗಳನ್ನು ನಾನಿಲ್ಲಿ ನೋಡಿಲ್ಲ. ಕಾಶ್ಮೀರ, ಕುಲು, ಸಿಮ್ಲಾ ಮುಂತಾದ ಪ್ರದೇಶಗಳಲ್ಲಿ ಮರಗಳಲ್ಲಿಯೇ ಬೆಳೆಯುವುವೆಂದು ಕೇಳಿದ್ದೇವೆ. ಅವೇ ಇಲ್ಲಿ ಗಿಡಗಳಾಗಿ ಬೆಳೆಯುವುವೆಂದು ಹೇಳುತ್ತಾರೆ. ಇದರ ವಿಜ್ಞಾನ ಬಲ್ಲವನು ಬಲ್ಲ.

ಅಲ್ಲಿಂದ ಮುಂದೆ ಮಾವಳ್ಳಿ ದಾಟಿದ ಮೇಲೆ ಉದ್ದಕ್ಕೆ ಲಾಲ್‌ಬಾಗ್ ರಸ್ತೆಯಲ್ಲಿ ಹೂಗಿಡಗಳ, ಬಿತ್ತಗಳ ಮಾರಾಟಗಾರರ ಅಂಗಡಿಗಳು ಮೊದಲಿಂದ ಪ್ರಖ್ಯಾತವಾದವು. ಓಬಳಪ್ಪ, ಮುನಿಸ್ವಾಮಿ, ರುದ್ರಪ್ಪನವರು ಮುಂತಾದವರದು. ಈಗ ಜಯನಗರದ ಕಡೆಗಿರುವ ಲಾಲ್‌ಬಾಗಿನ ಆ ಪಕ್ಕಕ್ಕೆ ಓಬಳಪ್ಪನವರ ಗುಲಾಬಿ ಹೂ ತೋಟ ಒಂದಿತ್ತು. ಅದನ್ನು ಲಾಲ್‌ಬಾಗಿಗೆ ಸೇರಿಸಿಕೊಂಡು ಲಾಲ್‌ಬಾಗನ್ನು ವಿಸ್ತರಿಸಬೇಕೆಂದು ಪ್ರಯತ್ನಿಸಿದರು. ಬೆಲೆಯ ವಿಚಾರದಲ್ಲಿಯೊ ಇನ್ನೇತಕ್ಕೊ ಒಡಂಬಡಿಕೆ ಆಗಲಿಲ್ಲವಂತೆ. ರುದ್ರಪ್ಪ ಅಂಡ್ ಸನ್ಸ್ ದೊಡ್ಡ ಹೂಗಿಡಗಳ, ಅಲಂಕಾರ ಗಿಡಗಳ ಮತ್ತು ಪಾಶ್ಚಾತ್ಯ ಗಿಡಗಳ ಮಾರಾಟಗಾರರು. ಒಂದು ಕಾಲದಲ್ಲಿ ಹಿಂದಿನ ಮಹಾರಾಜರೊಬ್ಬರ ಸಮತೂಗುವಂತೆ ಎರಡು ಕುದುರೆಯದೊ ನಾಲ್ಕು ಕುದುರೆಯದೊ ಗಾಡಿಯನ್ನು ಇಲ್ಲಿನ ಹಿರಿಯರೊಬ್ಬರು ಏರ್ಪಡಿಸಿಕೊಂಡಿದ್ದರಂತೆ. ಇನ್ನೊಂದು ಸಂಗತಿ: ಕೃಷ್ಣರಾಜ ವಾಣೀವಿಲಾಸ ಭಾರತ ಎಂಬ ಮಹಾಭಾರತದ ಕನ್ನಡ ಗದ್ಯಾನುವಾದ ಬಹುಕಾಲ ರುದ್ರಪ್ಪ ಅಂಡ್ ಸನ್ಸ್

ಅವರ ಒಡೆತನಕ್ಕೆ ಒಳಪಟ್ಟಿತ್ತು. ಎಷ್ಟೊ ಕಾಲದ ವರೆಗೆ ಅದರ ಪುನರ್‌ಮುದ್ರಣ ಅರಮನೆಯವರ ಮತ್ತು ಇವರ ಅಪ್ಪಣೆಗಾಗಿ ಕಾಯಬೇಕಾಗಿದ್ದು, ಈಚೆಗೆ ಬಹುಶಃ ಗುಂಡಪ್ಪನವರು ಅದರ ಪ್ರಕಟನೆಗೆ ನೆರವಾದರೆಂದು ಕೇಳಿದ್ದೇನೆ. ಗದ್ಯಾನುವಾದ ಹಲವು ವಿದ್ವಾಂಸರ ಕೈಯಿಂದ ಮಾಡಿದುದರಿಂದ ರಚನೆ ಅನೇಕ ಕೈವಾಡಗಳ ಮತ್ತು ಮನಸ್ಸುಗಳ ಪ್ರತೀಕವಾಗಿದೆ. ಆ ಕನ್ನಡ 19ನೇ ಶತಮಾನದ ಒಂದು ವಿಶಿಷ್ಟವಾಣಿಯದೂ ರೀತಿಯದೂ ರಚನಾವಿಲಾಸದ್ದೂ ಆಗಿ ಕನ್ನಡದ ಗದ್ಯ ಬರವಣಿಗೆಯ ಒಂದು ಸಂಧಿಕಾಲದ ವಚನವಿಲಾಸವನ್ನು ಕಾಣಿಸುತ್ತದೆ. ಕೆಲವು ಭಾಗಗಳು ಮೂಲದ ಹತ್ತಿರದಲ್ಲಿ ನಡೆಯುತ್ತವೆ. ಇನ್ನು ಕೆಲವಕ್ಕೆ ಭಾಷಾಂತರಕಾರರ ಮತದ ವರ್ಣ ಬಂದಿದೆಯೇನೊ ಎನ್ನಿಸುತ್ತದೆ. ಕೆಲವು ಭಾಗಗಳಲ್ಲಿ ಆ ಗದ್ಯಶೈಲಿ ಎಷ್ಟು ಮನೋಹರವಾದ ನಡೆ, ಲಯ, ವಾಕ್ಯ ರಚನೆಯ ಧೋರಣೆ, ಭಣಿತಿ ಕಾಣಿಸು ತ್ತದೆಯೊ ಅವು ಆ ಕನ್ನಡವನ್ನು ತುಂಬ ಪ್ರಿಯವಾಗಿ ಮಾಡುತ್ತವೆ. ಮುದ್ರಾಮಂಜೂಷದ ಶೈಲಿ ಒಂದು ರೀತಿಯದಾದರೆ ಇಲ್ಲಿಯದು ಇನ್ನಷ್ಟು ಸರಳ ಸೌಭಾಗ್ಯವನ್ನು ಪಡೆದುದಾಗಿದೆ.

ಆ ಭಾಗ ದಾಟಿದರೆ ಮುಂದೆಲ್ಲ ನಮ್ಮೂರಿನ ತಿಗಳರು ಬೆಳಸುತ್ತಿದ್ದ ಗೆಡ್ಡೆ ಮತ್ತು ಎಲೆಕೋಸು, ಬಟಾಣಿ, ಹೂ ಕೋಸು, ಹುರಳಿಕಾಯಿ ತೋಟಗಳು. ಅವೆಲ್ಲ ಇಂಗ್ಲಿಷ್ ತರಕಾರಿಗಳು. ಕೋಸುಗಳೇನೊ ಇನ್ನೂ ಪಾಶ್ಚಾತ್ಯವೇ. ಆ ಬೀನ್ಸ್ ಎಂಬ ಹುರಳಿಕಾಯಿ ರುಚಿ ಬೆಂಗಳೂರಿನದರಷ್ಟು ನಾನಿನ್ನೂ ಎಲ್ಲಿಯೂ ಕಂಡಿಲ್ಲ. ಮೈಸೂರಲ್ಲಿ ಅದನ್ನು ಬೆಳೆಯುತ್ತಿರಲಿಲ್ಲ; ಬೆಂಗಳೂರಿಂದ ಹೋಗಬೇಕಿತ್ತು. ಈಗ ಎಲ್ಲಕ್ಕೂ ಯಾವುದೊ ಗೊಬ್ಬರಗಳು, ರಾಸಾಯನಿಕ ದ್ರವ್ಯಗಳು ಬಂದು ಇವುಗಳ ಫಲವಂತಿಕೆ ಯನ್ನು ಹೆಚ್ಚು ಮಾಡುವ ಉದ್ದೇಶದಿಂದ ರುಚಿಗಳೆಲ್ಲ ಹದಗೆಟ್ಟಿವೆ. ತೇಹಿ ನೋ ದಿವಸಾ ಗತಾಃ. ಎಲ್ಲದರ ಪರಿಮಾಣ ಹೆಚ್ಚಾಗಿದೆ. ಎಲ್ಲೆಲ್ಲಿನವೂ ಬೆಂಗಳೂರಿಗೆ ಬಂದು ದುಮುಕುತ್ತಿದೆ. ಕಡೆಗೆ ನಮ್ಮ ಸೌತೆಯ ರುಚಿಯೂ ಕೆಟ್ಟು ಹಾಳಾಯಿತು.

ಲಾಲ್‌ಬಾಗ್ ಮೊದಲು ಟಿಪ್ಪು ಸುಲ್ತಾನನ ಕಾಲದ್ದೊ ಏನೊ. ನಾವು ಹುಡುಗ ರಾಗಿದ್ದಾಗ ಕ್ರುಂಬಿಗೇಲ್ ಎಂಬ ಒಬ್ಬ ಜರ್ಮನ್ ಅಧಿಕಾರಿ ಅದರ ಮೇಲ್ವಿಚಾರಣೆ ನೋಡಿಕೊಳ್ಳುತ್ತಿದ್ದ. ಮೊದಲ ಯುದ್ಧ ಕಾಲದಲ್ಲಿ ಆತನು ಧಾರಾಳ ಕಳೆದುಕೊಂಡು ಇರಬೇಕಾಯಿತು. ಆಮೇಲೆ ಜವರಾಯನವರು, ಆಮೇಲೆ ಮರಿಗೌಡರು ತೋಟವನ್ನು ಅವರವರ ರೀತಿಯಲ್ಲಿ ವಿಸ್ತರಿಸಿದರು. ಮರಿಗೌಡರಂತೂ ಅದಕ್ಕೆ ತಂದ ಪ್ರಾಶಸ್ತ್ಯ ಅನೇಕ ಉತ್ಪತ್ತಿ ಕಾರ್ಯಗಳಿಗೂ ಸುಧಾರಣೆಗಳಿಗೂ ಕಾರಣವಾಯಿತು. ಅದರ ವಿಸ್ತರಣ ಕ್ರಿಯೆ ಮತ್ತು ಅಲಂಕರಣದ ಜೊತೆಗೆ ತರಕಾರಿ ಹಣ್ಣು ಮುಂತಾದವುಗಳ ಬೆಳೆಗಳಿಗೆ ತೋರಿಸಿಕೊಟ್ಟ ದಾರಿ, ಮಂದಿರ ನಿರ್ಮಾಣ ಅತಿಶಯವಾದ ಪ್ರಯೋಜಕತೆಯನ್ನು ಈ ನಾಡಿಗೇ ತಂದುಕೊಟ್ಟಿತು. ಮೊದಲು ಉಪವನವಾಗಿ ಮಾತ್ರ ಅದಿರಲಿಲ್ಲ; ಬೊಟಾನಿಕಲ್ ಗಾರ್ಡನ್ ಎಂಬ ಹೆಸರಿನ ವನಸ್ಪತಿ ವರ್ಗದ ಸಮಸ್ತ ವಿಚಕ್ಷಣೆಗಳನ್ನು



ಕಾಣಿಸಲು ಅದನ್ನು ಬಳಸಿದರು. ಈ ಎತ್ತರದ ತಂಪಿನ ಊರಲ್ಲಿ ಬೆಳೆಯಬಹುದಾದ ಸಮಸ್ತ ಪಾಶ್ಚಿಮಾತ್ಯ ಗಿಡಗಳನ್ನೂ ಬಳ್ಳಿಗಳನ್ನೂ ಹೂಗಳನ್ನೂ ಇಲ್ಲಿ ನಟ್ಟು ಪೋಷಿಸಿ ಬೆಳಸಿದರು. ಮೊದಲಿಂದಲೂ ನಡೆದು ಬಂದ ಲಾಲ್‌ಬಾಗ್ ಹೂ ಹಣ್ಣುಗಳ ಪ್ರದರ್ಶನಗಳಿಗೆ ಐದು ವರ್ಷಕ್ಕೆ ಎರಡು ಬಾರಿಯಾದರೂ ಎಷ್ಟೋ ಜನ ಸುತ್ತಮುತ್ತಲ ಸಸ್ಯಪ್ರಿಯರು ತಮ್ಮ ಗಿಡಗಳನ್ನೂ ಹೂಗಳನ್ನೂ ತಂದು ಪೈಪೋಟಿ ಮಾಡಿ ಬಹುಮಾನಗಳನ್ನು ಪಡೆಯುತ್ತಿದ್ದರು. ಅದು ನಡೆಯುತ್ತಿದೆ. ಆದರೆ ಈ ಗಿಡಗಳೆಲ್ಲ ಪಾಶ್ಚಿಮಾತ್ಯ ದೇಶಗಳ ಅಥವಾ ವಿದೇಶೀಯ ರಂಗಿನವು. ನಮ್ಮ ಯಾವ ಹೂ ಬಳ್ಳಿ ಸಸಿಗಳ ತಳಿಗಳೂ ಇನ್ನೂ ಅಲ್ಲಿ ಪ್ರದರ್ಶನವಾಗುವಂತಿಲ್ಲ. ಮಲ್ಲೆ ಮಲ್ಲಿಗೆ ಜಾಜಿಗಳ ಪರಿಮಳಯುತವಾದ ಒಂದು ಗಿಡ ಒಮ್ಮೆಯೂ ನಾನಲ್ಲಿ ನೋಡಿಲ್ಲ. ಇತರ ಗಿಡಗಳು ಮರಗಳಾಗುವುದರಿಂದ ಬಹುಶಃ ಅವಕ್ಕೆ ಸ್ಥಾನವಿಲ್ಲವೇನೊ. ಆದರೂ ಈ ಕಾಕ್ಸ್‌ಕೊಂಬುಗಳನ್ನೂ ಫ್ಲಾಕ್ಸ್ ಅನ್ನೂ ನೋಡುವ ಕಣ್ಣುಗಳಿಗೆ ಇವುಗಳು ಹೇಗೆ ಸೊಗಸಿಯಾವು? ರಂಗು ರಂಜನೆ ಒಟ್ಟಿಗೆ ನೆಲದ ಮೇಲೆ ಹೆಚ್ಚು ವಿಸ್ತಾರದಲ್ಲಿ ಕಾಣಿಸುವ ಎಷ್ಟೊ ಹೂಗಳಿವೆ, ಗಿಡಗಳ ಎಲೆಗಳಿವೆ. ಕಣ್ಣು ತೃಪ್ತಿ. ಕೆಲವಕ್ಕೆ ಸ್ಪರ್ಶೇಂದ್ರಿಯದ ಮಾರ್ದವ ಉಂಟು. ಆದರೆ ಒಂದರಲ್ಲಿಯೂ ಪರಿಮಳವಿಲ್ಲ - ನಿರ್ಗಂಧ. ಟಿಪ್ಪೂ ಕಾಲದಲ್ಲಿ ನೆಟ್ಟವೆಂಬ ಕೆಲವು ಮಾವುಗಳು, ಬೀಟೆಯ ಮರಗಳು ಅಲ್ಲುಂಟು. ಬಹು ಹಿಂದಿನಿಂದ ಎರಡು ದೊಡ್ಡ ಯೂಕಲಿಪ್ಟಸ್ ಮರಗಳು ಯಾವುದೊ ದೂರದ ದೇಶದಿಂದ ಇಲ್ಲಿ ಬಂದು ಇಲ್ಲಿಯೇ ತವರಾಗಿ ನಿಂತಿದ್ದರೂ ಈ ಜೀವನದೊಡನೆ ಬೆರೆಯೆನೆಂಬ ಒಂದು ಶ್ರೀಮಂತಿಕೆಯ ಪ್ರತ್ಯೇಕತೆಯನ್ನು ಉಳಿಸಿಕೊಂಡು ಬೆಳೆದಿವೆ. ಇಲಿಯಡ್ ಅಲ್ಲಿ The Silver Armed or White Armed Goddess ಎಂದು ಕರೆಸಿಕೊಳ್ಳುವ ಜ್ಯೂಸ್ ದೇವನ ಹೆಂಡತಿಯಂತೆ ನಿಂತಿವೆ. ವಿದೇಶದಿಂದ ತಂದ ಹೆಣ್ಣು ಮನೆಯ ಸೊಸೆಯಾದರೂ ಈ ಮನೆಯನ್ನು ಪೂರ್ತಿ ಒಪ್ಪಿಕೊಳ್ಳದಂತೆ ತನ್ನ ನಿಲವನ್ನು ಕಾಪಾಡಿಕೊಂಡಿವೆ. ಅದರಲ್ಲಿ ಗಾಂಭೀರ್ಯವಿದೆ, ವ್ಯಕ್ತಿತ್ವವಿದೆ. ಗಾಳಿಯ ಅಲುಗಿಗೆ ಅಲುಗುವ ಬಳುಕಿದೆ. ಬಿಂಕವನ್ನು ಕಾಪಾಡಿಕೊಂಡಿದೆ. ಅಲ್ಲಿನ ಬೀಚ್, ಫರ್ ಗಿಡಗಳ ಸೊಗಸೇ ಸೊಗಸು. ಅವೂ ಅಷ್ಟೆ, ನಮ್ಮವಲ್ಲ.

ಒಂದು ಕಾಲದಲ್ಲಿ ಇದನ್ನು ಮೃಗಾಲಯವನ್ನಾಗಿ ಮಾಡಿದ್ದರು. ಸಿಂಹ, ಹುಲಿ, ಪೋಲಾರ್ ಬಿಳಿಕರಡಿ, ನೀರಾನೆ, ಖಡ್ಗಮೃಗ, ಬಗೆಬಗೆಯ ಹಾವುಗಳು, ನರಿ, ತೋಳ, ಚಿರತೆ, ಎಷ್ಟೊ ಬಗೆಯ ಜಿಂಕೆ, ಕೃಷ್ಣಮೃಗ, ಕೋತಿಗಳು, ಮೊಸಳೆ, ಹಕ್ಕಿಗಳು ಇಲ್ಲಿದ್ದವು. ಒಂದು ಸಣ್ಣ ಕೊಳದಲ್ಲಿ ಕೆಲವು ಕಾಲ ಹಂಸಗಳನ್ನು ತಂದಿಟ್ಟಿದ್ದರು. ಚಾಮರಾಜ ಒಡೆಯರ ವಿಗ್ರಹಕ್ಕೆ ಆಚೆಗೆ ಇದ್ದ ಒಂದು ಸಣ್ಣ ಜಲಾಶಯದಲ್ಲಿ ಕನ್ನೈದಿಲೆಯನ್ನು ಸೊಂಪಾಗಿ ಬೆಳಸುತ್ತಿದ್ದರು. ಅದರ ಹತ್ತಿರದಲ್ಲಿ ಪಾದರಿ, ಲಿಂಗಧಾರಿ ಮತ್ತು ಅಶೋಕ, ಮಾಧವೀ ಲತೆ, ವಿದೇಶಿ ಕಕ್ಕೆ ಗಿಡಗಳು, ಜವಾನಿಕಾಗಳೂ ಹುಡುಗರಾದ ನಮಗೆ ಮೋಹಕವಾಗಿರುತ್ತಿದ್ದುವು. ಲಾಲ್‌ಬಾಗ್ ಕಚೇರಿಯಿಂದ ಪೂರ್ವಕ್ಕೆ ಹೋಗುವ

ರಸ್ತೆಯಲ್ಲಿ 8-10 ಜಾತಿಯ ಮಾವುಗಳು. ಎಡ ಪಕ್ಕದಲ್ಲಿ ಸಸ್ಯ ಸಂವರ್ಧನೆಯ ನರ್ಸರಿಗಳು ಇರುತ್ತಿದ್ದುದರ ಜೊತೆಗೆ ಎರಡೂ ಕಡೆ ಸುರಹೊನ್ನೆಯ ಗಿಡಗಳು ಇದ್ದವು. ಒಂದು ಬಗೆಯ ಬಾಳೆಯ ಹಾಗೆ ಎಲೆಯುಳ್ಳ ಒಂದು ದೊಡ್ಡ ಗಿಡ. ಲಾಲ್‌ಬಾಗಿನ ಇನ್ನೊಂದು ಕಡೆ ಎರಡು ದೊಡ್ಡ ಹೊನ್ನೆಯ ಮರಗಳು ಸೂರ್ಯನ ಬೆಳಕು ಹಾಯದಂತೆ, ಅವಕಾಶ ಕೊಡದಂತೆ ದಟ್ಟವಾಗಿ ಬೆಳೆದಿರುತ್ತಿದ್ದವು. ತಮಾಲ, ಮಂದಾರ ಎಂಬ ಬಗೆಯ ಗಿಡಗಳನ್ನು ಅಲ್ಲಿ ಕಾಣುತ್ತಿದ್ದೆವು. 'ಕದಂಬ ಎಂದರೆ ಈಚಲ ಮರವಲ್ಲ, ಇದು, ನೋಡಿ' ಎಂದು ಡಾ. ಬಿ.ಜಿ.ಎಲ್. ಸ್ವಾಮಿಯವರು ಅಲ್ಲಿನ ಒಂದು ಗಿಡವನ್ನು ಗುರುತಿಸಿದರು. ಬಿದಿರು ಮೆಳೆಗಳು, ಕೇತಕಿಯ ಪೊದೆಗಳು ಕೆರೆಯ ಪಕ್ಕದಲ್ಲಿ ಕೆಳಗೆ ಬೆಳೆಯುತ್ತಿದ್ದವು. ಇರುಳರಾಣಿ ಎಂಬ ತಲೆನೋವು ತರಿಸುವ ಹೂ ಗಿಡ, ಲಕೋಟೆ, ಪನ್ನೇರಳೆ, ಸಪೋಟಾ, ಬಾದಾಮಿ ಗಿಡಗಳು ಇನ್ನೂ ಅಲ್ಲಲ್ಲಿವೆ. ಈಚೆಗೆ Geometrical Rose Garden ಬೆಳಸಿದ್ದಾರೆ. ಮೊದಲು ಡಾ. ದೊರೆ ಸ್ವಾಮಿ ಅವರು ಸಣ್ಣದಾಗಿ ತೊಡಗಿದ್ದನ್ನು ಈಗ ಮಹಾವಿಲಾಸವುಳ್ಳ ಗುಲಾಬಿಯ ವನವಾಗಿ ವಿಸ್ತರಿಸಿದ್ದಾರೆ. ಅದಕ್ಕೆ ಉತ್ತರಕ್ಕೆ ಹೋಗುತ್ತ ಅಲ್ಲಿ ಒಂದು ಚೌಕದ ಕೊನೆಯಲ್ಲಿ ಒಂದು ದೊಡ್ಡ ಕೆಂಬೂರುಗದ ಮರವಿದೆ. ಎಲೆಯೆಲ್ಲ ಉದುರಿ ಬತ್ತಲೆಯ ಅದರ ಅಂಗಾಂಗ ವೈಭವವನ್ನು ಈ 60 ವರ್ಷಗಳಿಂದ ನೋಡಿ ನನ್ನ ಕಣ್ಣು ತಣಿಯದೆ ಇದೆ. ಬರಿಯ ಕಾಯಿ ಬಿಟ್ಟು ಬಾಣನ ಕಾದಂಬರಿಯಲ್ಲಿ ಆ ಶಾಲ್ಮಲೀ ವೃಕ್ಷದಲ್ಲಿ ಗಿಣಿಗಳು ಹೇಗೆ ಕುಳಿತ್ತಿದ್ದುವೆಂದು ವರ್ಣನೆ ಇದೆಯೊ ಹಾಗೆ ಆ ಕಾಯಿಗಳು ಗಿಳಿಗಳ ಹಾಗೆ ಮರದ ಕೊಂಬೆಗಳ ತುಂಬ ತುಂಬಿರುತ್ತವೆ. ಅಥವಾ ಕೆಂಪನೆಯ ಬೂರುಗದ ಹೂ ಒಡೆದಾಗ ಆ ಸೌಭಾಗ್ಯ ಕಣ್ಣಿಗೆ ಹಬ್ಬವಾದರೆ, ಕಾಯಿಗಳು ಒಡೆದು ಒಣಗಿ ಬಿರಿದು ಅವುಗಳಿಂದ ತೆಳ್ಳನೆಯ ಅರಳೆ ಎಳೆಎಳೆಯಾಗಿ ಬೆಳ್ಳಗೆ ಗಾಳಿಗೆ ಆಕಾಶಕ್ಕೆ ಹಾರಿಹೋಗುವ ಚಿತ್ರವಂತೂ ಹೃದಯಹಾರಿಯಾದ್ದು. ನಾಲ್ಕು ಹೆಜ್ಜೆ ಆಚೆಗೆ ಒಂದೆರಡು ವಿಶಿಷ್ಟವಾದ ಹಿಪ್ಪೆಯ ಮರಗಳು. ಅದು ಚಿಗುರಾದಾಗ, ಹೂ ಒಡೆದಾಗ ದುಂಬಿಗಳು ಝೇಂಕಾರ ಮಾಡುತ್ತ ಸುತ್ತು ಹಾಕುತ್ತಿರುತ್ತವೆ. ಮಾದಕವಾದ ಅದರ ಪರಿಮಳ ದೂರದಿಂದಲೇ ನಮ್ಮನ್ನು ಸೊಕ್ಕಿಸುತ್ತದೆ. ಮಾವುಗಳು ಎಂದೆ: ಸಣ್ಣ ಎಲೆ ಚಿಗುರು ಗಳಿಂದ ಹಿಡಿದು ಉದ್ದವಾದ ಚಿಗುರಿನ ಜೊಂಪೆಯನ್ನು ಬಿಡುವ ಮರಗಳಲ್ಲಿ ಹೀಗೇ ದುಂಬಿಗಳ ಝೇಂಕಾರ. ಆ ಚಿಗುರುಗಳ ಮೇಲೆ ಕವಿದು ತೊಟ್ಟಿರುವ ಮಧುವನ್ನು ಹುಡುಗರಾದ ನಾವು ಅತ್ತ ಇತ್ತ ನೋಡಿ ಯಾರೂ ಇಲ್ಲವೆಂದು ಗೊತ್ತು ಮಾಡಿಕೊಂಡು ನಾಲಿಗೆಯಿಂದ ನೆಕ್ಕಿದುದುಂಟು. ಆ ಮಧು ಅಷ್ಟು ಸವಿ, ಚಿಗುರು ಅಷ್ಟು ಮೃದು. 'ಪೊಸಮಾವಶೋಕೆಯೊಳ್ ಮರಿದುಂಬಿ ಕೋಗಿಲೆಯೊಳ್ ಎಸೆವ ಸಂಪಗೆ ಪೊಂದಾವರೆಯೊಳ್' ಎಂದು ಷಡಕ್ಷರನು ಬರೆದ ಒಂದು ಸ್ಪರ್ಧೆಯ ಸೌಂದರ್ಯ ಚಿತ್ರ ನಮ್ಮ ಲಾಲ್‌ಬಾಗಿನ ಈ ಗಿಡಗಳಲ್ಲಿ, ಹೂಗಳಲ್ಲಿ ಪ್ರತಿಫಲಿಸುತ್ತ ಇದ್ದುದು ಅನೇಕ ದಶಮಾನಗಳ ಅನುಭವ. ನಾನಿನ್ನೂ ಮಿಡಲ್ ಸ್ಕೂಲಲ್ಲಿರುವಾಗ



ಉಪಾಧ್ಯಾಯರಾದ ಪಾಲ್ ಚಿನ್ನಪ್ಪನವರು ವಾರಕ್ಕೊಮ್ಮೆ ನಮ್ಮನ್ನು ಲಾಲ್‌ಬಾಗಿಗೆ ಕರೆದುಕೊಂಡು ಹೋಗಿ ಜಿಂಕೆಯನ್ನೊ ಹೂವನ್ನೊ ಸಿಂಹವನ್ನೊ ತೋರಿಸಿ ಅವುಗಳನ್ನು ಕುರಿತು ಬರೆಯಿರಿ ಎಂದು ಹೇಳುತ್ತಿದ್ದ ನೆನಪು. ಅದೇ ಚಿನ್ನಪ್ಪನವರು ಒಂದು ಸಲ ಒಂದು ಕಪ್ಪೆಯ ಗಂಟಲನ್ನು ಸೀಳಿ ಅಲ್ಲಿನ ರಕ್ತ ಸಂಚಾರ ಕ್ರಮವನ್ನು ವರ್ಣಿಸಿದ ಘೋರವೂ ನಮ್ಮನ್ನು ಆಟಕ್ಕೆ ವಿನೋದಕ್ಕೆ ಒಳಗು ಮಾಡಿದ ಅವರ ಶಿಷ್ಯ ಪ್ರೀತಿ ಈ ಲಾಲ್‌ಬಾಗಿಗೆ ಸ್ವಲ್ಪಮಟ್ಟಿಗೆ ಸಂಬಂಧಿಸಿದ್ದು. ಇನ್ನಷ್ಟು ಸಣ್ಣ ವಯಸ್ಸಿನಲ್ಲಿ 100-150 ಜನ ವಿದ್ಯಾರ್ಥಿಗಳನ್ನು ಈ Horticultural Show ನೋಡುವುದಕ್ಕೆ ಒಂದು ಭಾನುವಾರ ಬೆಳಗ್ಗೆ ಕರೆದುಕೊಂಡು ಹೋಗಿ ತೋರಿಸುತ್ತಿದ್ದುದು ಅಚ್ಚಳಿಯದೆ ನಿಂತಿದೆ. ಮಾವಳ್ಳಿ ಕಡೆಯಿಂದ ಬರುವ ದೊಡ್ಡ ಗೇಟಿನ ಪಕ್ಕದಲ್ಲಿ ಎರಡೂ ಕಡೆ ಉದ್ದವಾಗಿ ಬೆಳೆದಿರುವ, ಎತ್ತರವಾದ, ದಟ್ಟವಾದ ಎಲೆಯುಳ್ಳ, ಎಂದಿಗೂ ಹಸಿರಾಗಿರುವ, ನೆಳಲು ಕೊಟ್ಟು ಕೆಳಗಿನ ಭಾಗವನ್ನೆಲ್ಲ ಒಂದು ಸಭಾ ಮಂದಿರದಂತೆ ಮಾಡುವ ಸ್ಥಳದಲ್ಲಿಯೇ ರವೀಂದ್ರರು ಬೆಂಗಳೂರಿನವರನ್ನು ಬೆರಗು ಮಾಡಿದುದು; ಒಂದು ಭಾಷಣವನ್ನು ಮಾಡಿದ್ದು. ಅದರ ಪಕ್ಕದಲ್ಲಿಯೇ ಕಮರಿಕೆ ಗಿಡಗಳು. ಹುಳಿಹಣ್ಣಾದ ಅದು ಷಣ್ಮುಖವೊ ಅಷ್ಟಮುಖವೊ ಆಗಿದ್ದರೂ ಮಾಂಸಲವಾಗಿ ತುಂಬ ಸಿಹಿಯಾಗಿದ್ದ ಹಣ್ಣುಗಳನ್ನು ಮೈತುಂಬ ಬಿಡುತ್ತಿದ್ದುದು. ಮುಂದೆ ಚಾಮರಾಜ ಒಡೆಯರು ಕುದುರೆಯ ಮೇಲೆ ಒಂದು ಕೈಲಿ ಬಿಚ್ಚುಗತ್ತಿ ಹಿಡಿದು ಕುಳಿತ ವಿನೋದ ನೋಟ. ಸುತ್ತ ಕಬ್ಬಿಣದಲ್ಲಿ ಎರಕಹೊಯ್ದು ಮಾಡಿದ ಪಾಶ್ಚಿಮಾತ್ಯ ಪುರಾಣ ಕತೆಗಳ ನಿದರ್ಶನವಾಗುವಂತಹ ಸ್ತ್ರೀ ವಿಗ್ರಹಗಳು. ಮೂಲೆಯಲ್ಲಿ ಎತ್ತರದಲ್ಲಿ ನಿಲ್ಲಿಸಿದ ಬಕ ಕೊಕ್ಕರೆಗಳಂತಹ ಪಕ್ಷಿಗಳ ಆಕೃತಿ ಹುಡುಗರ ಮನಸ್ಸನ್ನು ಆಕರ್ಷಿಸಿದರೆ, ಸುತ್ತಲ ಹೂಕಾವಣ ಯಾವುದೊ ಬೇರೆ ಲೋಕ ಇದು, ಎಷ್ಟು ಸುಂದರ ಎಂಬುವ ಕಣ್ಸೆಳೆಯನ್ನು ತರುತ್ತಿದ್ದವು. ಲಾಲ್‌ಬಾಗಿನ ವರ್ಣನೆಯನ್ನು ಮಾಡುವುದು ಶಕ್ಯವಿಲ್ಲ.

ಮೊದಲು ಅಲ್ಲಿನ ಗಾಜಿನ ಮನೆಯನ್ನು ಆಲ್ಬರ್ಟ್ ವಿಕ್ಟರ್ ಬಂದಿದ್ದಾಗ ಕಟ್ಟಿಸಿದರಂತೆ. ಅದಕ್ಕೆ ಮಿರ್ಜಾ ಸಾಹೇಬರ ಕಾಲದಲ್ಲಿ ಗುಡ್ಡದ ಕಡೆಗೆ ಅದೇ ರೀತಿಯ ವಿಸ್ತರಣವನ್ನು ಮಾಡಿಸಿದರು. ಮೊದಲ ಬಾರಿಗೆ ಆ ಎತ್ತರದ ಕಂಬಗಳನ್ನು ಭದ್ರಾವತಿಯ ಕಬ್ಬಿಣದ ಕಾರ್ಖಾನೆಯಿಂದ ಮಾಡಿಸಿ ನಟ್ಟರು. ಇನ್ನೊಂದು ಕಾಲದಲ್ಲಿ ಕೆಲವು ಬಗೆಯ ಸಸ್ಯಗಳನ್ನು ಬಳಸಿ ಕಾಪಾಡುವ ಉದ್ದೇಶದಿಂದ ಹಂದರದಂತಹ ಮನೆಯಲ್ಲಿ ಆರೆಂಟು ಮೇಜುಗಳಂತಹ ಕಬ್ಬಿಣದ ಪೆಟ್ಟಿಗೆಗಳನ್ನು ಇಟ್ಟು ಅದರ ಮೇಲೆ ವಿಶೇಷ ಬಗೆಯ ಗಿಡಗಳ ಕುಂಡಗಳನ್ನು ಇಡುತ್ತಿದ್ದರು. ವಿಶ್ವೇಶ್ವರಯ್ಯನವರ ದಿವಾನ್‌ಗಿರಿಯ ಕಾಲದಲ್ಲಿ ತಾಲ್ಲೂಕ್ ಕಚೇರಿಗಳ ಹತ್ತಿರ ಅವುಗಳಲ್ಲಿ ಜನ ತಮ್ಮ ಕೂಡಿಟ್ಟ ಹಣವನ್ನು ಸಂಗ್ರಹಿಸುವುದಕ್ಕೆಂದು ಏರ್ಪಾಡಾಗಿತ್ತು. ಅವು ಈಗ ಇಲ್ಲ. ಲಾಲ್‌ಬಾಗಿನ ಕೆರೆ ತಕ್ಕಮಟ್ಟಿಗೆ ವಿಸ್ತಾರವಾಗಿದ್ದು ಇಲ್ಲಿನ ಅಗತ್ಯಕ್ಕೆ ಬೇಕಾದ ನೀರೆಲ್ಲವನ್ನೂ ಒದಗಿಸುತ್ತಿತ್ತು.

ಪೂರ್ವದ ಕಡೆಗೆ ಇದ್ದ ಕಲ್ಲುಬಂಡೆಗಳನ್ನು ಒಡೆಸಿ ಗಟ್ಟಿಯಾದ ಕಲ್ಲುಚಪ್ಪಡಿಗಳನ್ನು, ಸೈಜು ಕಲ್ಲುಗಳನ್ನು ಮಾಡುವುದು ವಾಡಿಕೆಯಾಗಿತ್ತು. ಲಾಲ್‌ಬಾಗಿನ ಒಳಗೆ ತಂಬೂರಿಯಾಕಾರದ ಒಂದು ಬಾವಿ ನೋಡುವುದಕ್ಕೆ ರಮ್ಯವಾಗಿರುತ್ತಿತ್ತು. ಈಗ ಅನೇಕ ಬದಲಾವಣೆಗಳಾಗಿವೆ. ಗ್ಲ್ಯಾಸ್‌ಹೌಸ್ ರಸ್ತೆಯಿಂದ ಹಿಡಿದು ದಕ್ಷಿಣದಿಂದ ಪಶ್ಚಿಮಕ್ಕೆ ಬೂರುಗದ ಮರದ ದಾರಿಯಲ್ಲಿ ಇಕ್ಕಡೆಯೂ ರಮ್ಯವಾದ 'ರಾಯಲ್ ಪಾಮ್' ಎಂಬ ಅಡಕೆ ತೆಂಗುಗಳ ಜಾತಿಯ ಮರ ಒಂದರ ರಸ್ತೆ ಇದೆ. ಕಲ್ಕತ್ತಾದ ಬಟಾನಿಕಲ್ ಗಾರ್ಡನ್ನಲ್ಲಿ ಇಂಥುವೇ ಮರಗಳ ಮಹಾಮಾರ್ಗ ಒಂದು ಭಾಗೀರಥಿ (ಹೂಗ್ಲಿ) ನದಿಯ ಕಡೆಗೆ ನಡಸುತ್ತದೆ. ಆ ಮರಗಳು ತುಂಬಾ ಎತ್ತರವಾದವು. ಕಣ್ಣಿಗೆ ಆನಂದವನ್ನೂ ಯಾವುದೊ ಒಂದು ಶುಚಿ ಉನ್ನತಿಯ ಭಾವವನ್ನೂ ಉಂಟುಮಾಡಿಕೊಡುತ್ತವೆ. ನಮ್ಮ ಗಿಡಗಳೇಕೊ ಅಷ್ಟು ಎತ್ತರಕ್ಕೆ ಬೆಳೆದಿಲ್ಲ. ಬೆಳೆದ ಒಂದೆರಡು ಗಿಡಗಳು ದುರ್ದೈವದಿಂದ ನಾಶವಾಗಿವೆ.

* * *

ಈವರೆಗೆ ಬೆಂಗಳೂರು ಪಟ್ಟಣದ ಹಿಂದಿನ ಪರಿಮಂಡಲವನ್ನೂ ಅದಕ್ಕೆ ಸಂಬಂಧಿಸಿದ ಒಂದೆರಡು ವಿಶೇಷಗಳನ್ನೂ ಕಾಣಿಸಿತು. ನನ್ನ ನೆನಪಿನಲ್ಲಿ ಈ ಮಂಡಲದ ಹೊರಗೆ ಬಹುಕಾಲದಿಂದ ಇರುವುದು ಉತ್ತರಭಾಗದಲ್ಲಿ ಇರುವ ತಾತಾ ಇನ್‌ಸ್ಟಿಟ್ಯೂಟ್: ವಿಜ್ಞಾನದ ಪರಿಶೋಧನೆ – ಸಂಶೋಧನೆಗಳಿಗೆ ಮೀಸಲಾದುದು. ಭರತ ಖಂಡದ ಎಲ್ಲ ಪ್ರಾಂತಗಳಿಂದ ವಿಶ್ವವಿದ್ಯಾನಿಲಯಗಳಿಂದ ಆರಿಸಿದ ಉತ್ತಮ ವಿದ್ಯಾರ್ಥಿಗಳು ಅಲ್ಲಿಗೆ ಬಂದು ಎಂ. ಎಸ್ಸಿ., ಡಾಕ್ಟೊರೇಟ್, ಡಿ. ಎಸ್ಸಿ. ಮುಂತಾದವಲ್ಲಿ ಪದವೀಧರರಾಗಿ ಹಿಂದಿರುಗುತ್ತಿದ್ದರು. ಅಲ್ಲಿ ವ್ಯಾಸಂಗ ಮಾಡಿದ್ದೇವೆ, ಸಂಶೋಧನೆ ನಡಸಿದ್ದೇವೆ ಎಂದರೆಯೇ ದೊಡ್ಡ ಗೌರವ, ಬೆಲೆ ಇರುತ್ತಿತ್ತು. ಅಲ್ಲಿನ ಹಾಸ್ಟೆಲ್‌ಗಳು ಉತ್ತರ – ದಕ್ಷಿಣ ಪ್ರಾಂತಗಳವರಿಗೆ ಬೇರೆ ಬೇರೆ ಏರ್ಪಟ್ಟಿತ್ತು. ಈಗ್ಗೆ 50 ವರ್ಷಗಳಿಗೆ ಹಿಂದೆ ಸುಮಾರು ಒಬ್ಬ ಸ್ನೇಹಿತರು ನನ್ನನ್ನು ಅಲ್ಲಿಗೆ ಕರೆದು ಒಂದು ಹಾಸ್ಟೆಲ್‌ನ ಅನುಕೂಲ ತೋರಿಸಿದರು. ಬೆಳಿಗ್ಗೆ ಒಂದೊ ಎರಡೊ ತಿಂಡಿಯ ಪದಾರ್ಥಗಳನ್ನು ಬಿಸಿಯಾಗಿ ಮಾಡುವರು. ಕಾಫಿ ಅಥವಾ ಟೀ ಅಲ್ಲಿನ ವಿದ್ಯಾರ್ಥಿಗಳಿಗೆ ಕೇಳಿದಷ್ಟನ್ನು ಕೊಡುವರು. ಇಷ್ಟಕ್ಕೆಲ್ಲ ಬೀಳುತ್ತಿದ್ದ ರುಸುಮು 0-12-0. ತಿಂಗಳಿಗೆ 75 ರೂ.ನಂತೆ ಖರ್ಚಾಗುತ್ತಿದ್ದ ಅಲ್ಲಿ ವಿದ್ಯಾರ್ಥಿವರ್ಗಕ್ಕೆ ಏತಕ್ಕೂ ಹೊರಗೆ ಬರಲು ಅಗತ್ಯ ಬೀಳದಂತೆ ತಿಂಡಿತೀರ್ಥಗಳ ಏರ್ಪಾಡು ಮಾಡಿದ್ದರು. ಹೆಚ್ಚು ಜನ ಸಿಗರೇಟು ಮುಂತಾದುವಕ್ಕೆ ಕೂಡ ಹೊರಗೆ ಬರುತ್ತಿರಲಿಲ್ಲ. ಅದರ ಸೇವನೆ ಆ ಕಾಲದಲ್ಲಿ ಅಷ್ಟಾಗಿಯೂ ಇರಲಿಲ್ಲ. ಸಿನೆಮಾ ಪೇಟೆ ಅಂಗಡಿಗಳ ಆಕರ್ಷಣೆಯೂ ಆಗ ಅಷ್ಟಿರಲಿಲ್ಲ. ಬಹುಮಟ್ಟಿಗೆ ರಾತ್ರಿ ಕೆಲವು ಗಂಟೆಗಳನ್ನು ಬಿಟ್ಟು ಎಲ್ಲ ಕಾಲಗಳಲ್ಲಿಯೂ ಸಂಶೋಧನ ಮಂದಿರಗಳು ತೆರೆದಿರುತ್ತಿದ್ದವಾದ್ದರಿಂದ ತಮ್ಮ ತಮ್ಮ ಸಂಶೋಧನಾ ಕಾರ್ಯಗಳಲ್ಲಿ ಯಾವಾಗೆಂದರೆ



ಆಗ ಹೋಗಿ ತಮ್ಮ ಅನ್ವೇಷಣೆಗಳನ್ನು ಮುಂದುವರೆಸುತ್ತ ವ್ಯಾಸಂಗತತ್ಪರರಾಗಿರಬಹುದಿತ್ತು. ಈಚೆಗೆ ಭರತ ಖಂಡದಲ್ಲಿ ಬೇರೆ ಬೇರೆ ಕಡೆ ಇಂಥ ಸಂಸ್ಥೆಗಳು ಏರ್ಪಟ್ಟಿರುವುದರಿಂದಲೂ, ಇಲ್ಲಿಗೆ ಆಯ್ದು ಬರುವ ವಿದ್ಯಾರ್ಥಿಗಳ ಸ್ವರೂಪ ಬದಲಾಯಿಸಿರುವುದರಿಂದಲೂ, ಬೇರೆ ಬೇರೆ ಊಟ ತಿಂಡಿಗಳ ಏರ್ಪಾಡು ಹೋಗಿ ಒಂದೇ ಕೇಂದ್ರ ಭೋಜನ ವ್ಯವಸ್ಥೆ ಬಹುಶಃ ಏರ್ಪಟ್ಟಿರುವುದರಿಂದಲೂ, ಇಲಾಖೆಗಳ ಸಂಖ್ಯೆ ಹೆಚ್ಚಿರುವುದರಿಂದಲೂ, ಇವುಗಳ ಮುಖ್ಯರು ಹಿಂದಿನಂತೆ ಒಂದೇ ಮನಸ್ಸಿನ ಸಹಕಾರದಲ್ಲಿಲ್ಲದೆ ವಿರಸ ಸನ್ನಿವೇಶಗಳು ಬೆಳೆಯುತ್ತ ಬಂದಿವೆ ಎಂಬುದರಿಂದಲೂ ಹಿಂದಿನ ಒಂದು ಹದ ನಡೆದುಕೊಂಡು ಬರುವುದು ಸುಲಭವಾಗಿಲ್ಲವೆಂದು ತೋರುತ್ತದೆ. ಇನ್‌ಸ್ಟಿಟ್ಯೂಟ್‌ನವರು ಊರೊಳಗೂ ಹೊರಗೂ ಧಾರಾಳವಾಗಿ ಈಗ ಬಂದು ಹೋಗುತ್ತಿರುವುದು ಹೆಚ್ಚು ವಾಡಿಕೆಯಾಗಿದೆ. ಇದರ ಜೊತೆಗೆ ಮೊದಲು ಭೌತಶಾಸ್ತ್ರಕ್ಕೆ ಸ್ಥಾನವೇ ಇಲ್ಲದಿದ್ದು, ಡಾ. ಸಿ. ವಿ. ರಾಮನ್ ಅಲ್ಲಿಗೆ ಬಂದ ಮೇಲೆ ಅದಕ್ಕೆ ಪ್ರಾಶಸ್ತ್ಯ ಬಂದಿತು. ಡಾ. ಸಿ. ವಿ. ರಾಮನ್ ಆ ಸಂಸ್ಥೆಯನ್ನು ಬಿಟ್ಟು ಹೋಗಿ ತಮ್ಮದೇ ಆದ ಬೇರೊಂದು ಸಂಸ್ಥೆಯನ್ನು ಸ್ಥಾಪಿಸಿಕೊಂಡ ಮೇಲೆ ಇಲ್ಲಿನ ವಿಜ್ಞಾನ ವ್ಯಾಸಂಗದ ವಿಚಕ್ಷಣೆ ಬೇರೆಯಾಗಿರಬೇಕು. ಇಲ್ಲಿನ ಪುಸ್ತಕ ಭಂಡಾರದಷ್ಟು ಮನಸ್ಸಿಗೆ ತೃಪ್ತಿಯನ್ನು ತರುವ ಗ್ರಂಥಸೌಭಾಗ್ಯ ನಾಲ್ಕು ವಿಶ್ವವಿದ್ಯಾನಿಲಯಗಳ ಸಮ್ಮಿಳಿತ ಸೌಭಾಗ್ಯಕ್ಕೂ ಮೀರಿದುದೆನ್ನಿಸುತ್ತದೆ. ವಾರ, ಮಾಸ, ತ್ರೈಮಾಸಿಕ ಪತ್ರಿಕೆಗಳೂ ಅಂತಾರಾಷ್ಟ್ರೀಯ ಸಂಸ್ಥೆಗಳ ಮತ್ತು ಅನ್ಯ ದೇಶಗಳ ಪ್ರಕಟಣೆಕಾರರು ಕಳಿಸುವ ಪುಸ್ತಕಗಳೂ ಯುನೆಸ್ಕೊ ಮುಂತಾದವರ ಪ್ರಕಟಣೆಗಳೂ ವರದಿಗಳೂ ಆರೆಂಟು ಭಾಷೆಗಳ ಆಧಾರ ಗ್ರಂಥಗಳೂ ಬೆರಗುಗೊಳಿಸುತ್ತವೆ. ಶುದ್ಧ ವಿಜ್ಞಾನ ಮತ್ತು ಕಾರ್ಯೋನ್ಮುಖ ಸಂಶೋಧನೆಗಳ ವ್ಯಾಸಂಗ ಎರಡಕ್ಕೂ ಬಗೆಬಗೆಯ ಸಂಶೋಧನೆಗಳು ನಡೆಯಲು ಸೌಕರ್ಯಗಳೂ ಏರ್ಪಾಡೂ ಇಲ್ಲಿದೆ. ವಿಶ್ವೇಶ್ವರಯ್ಯನವರು ಮೈಸೂರಿಗೆ ದಿವಾನರಾಗಿ ಬರುವುದಕ್ಕೆ ಮುಂಚಿತವಾಗಿನಿಂದಲೇ ತಾತಾ ಸಂಸ್ಥೆಗೆ ಇಲ್ಲಿ ನೆಲೆ ಕೊಡಬೇಕೆಂದು ಮೈಸೂರು ಸರಕಾರಕ್ಕೆ ಸಲಹೆ ಕಳಿಸಿ ಇದು ಇಲ್ಲಿ ನಡೆಯುವಂತೆ ವ್ಯವಸ್ಥೆ ಆದುದು ಬಹುದೊಡ್ಡ ವಿದ್ಯಾಸಾಧನೆಯ ಕಾರ್ಯ. ಯಾವ ವಿಶ್ವವಿದ್ಯಾನಿಲಯದವರ ಎಟುಕಿಗೂ ಮೀರಿದಂತಹ ವ್ಯಾಸಂಗ ಮತ್ತು ಸಂಶೋಧನಾ ವ್ಯವಸ್ಥೆಗೆ ಇಲ್ಲಿ ಇರುವ ಅವಕಾಶ ಅತಿಶಯವಾದುದು. ಇದಕ್ಕೆ ಅಂಗವಾಗಿಯೇ ಇದ್ದು ಈಚೆಗೆ ಪ್ರತ್ಯೇಕವಾದ ಅರ್ಥಶಾಸ್ತ್ರದ ಮತ್ತು ಸಮಾಜ ವಿಜ್ಞಾನದ ವ್ಯಾಸಂಗ ಮಂಡಲಿಗಳು ಈ ಸಂಸ್ಥೆಯಿಂದ ಹೊರಗಿದ್ದರೂ, Forest Research Dept. ನ ಸಂಶೋಧನಾಲಯಗಳು ಇದಕ್ಕೆ ಸಂಬಂಧಪಡದಿದ್ದರೂ, ಮೂಲಭೂತವಾದ ಸಂಶೋಧನೆಗಳು ಈ ಆವರಣದಲ್ಲಿ ನಡೆಯಲು ಬೆಂಗಳೂರಿನಲ್ಲಿ ಅವಕಾಶ ಉಂಟಾಗಿದೆ. ಇಂತಹವು ಇದ್ದ ಕಾರಣದಿಂದಲೇ ಮೈಸೂರು ವಿಶ್ವವಿದ್ಯಾನಿಲಯ ಸ್ಥಾಪಿತವಾದಾಗ ಒಂದೇ ಕಡೆ Residential and Teaching University ಸ್ಥಾಪಿಸಬೇಕೆಂದಿದ್ದ ಏರ್ಪಾಡು ತಪ್ಪಿ ಬೆಂಗಳೂರಲ್ಲಿ ವಿಜ್ಞಾನ ವಿಭಾಗ, ಇತರ ಬಗೆಯ

ವ್ಯಾಸಂಗವೆಲ್ಲ ಮೈಸೂರು ಎಂದು ಎರಡು ಕೇಂದ್ರಗಳು ಕವಲೊಡೆದು ಇದೇ ಪ್ರತ್ಯೇಕ ವಿದ್ಯಾನಿಲಯವಾದಾಗ, ಇಲ್ಲಿ ವಿಜ್ಞಾನ ಭಾಗಕ್ಕೇ ಹೆಚ್ಚಾಗಿ ಮೀಸಲಾಗುವಂತೆ, ಯಂತ್ರಶಿಲ್ಪಕ್ಕೆ ಹೆಚ್ಚು ಗಮನ ಕೊಡುವಂತೆ ವಿದ್ಯಾವ್ಯವಸ್ಥೆ ಮೀಸಲಾಗುವುದು ಶಕ್ಯವಾಯಿತು. ಅದಕ್ಕೆ ತಕ್ಕಂತೆ ಈಚಿನ ಕಾಲದಲ್ಲಿ ಇಲ್ಲಿ ಹತ್ತಾರು ದೊಡ್ಡ ದೊಡ್ಡ ಕೈಗಾರಿಕಾ ಉದ್ಯೋಗಗಳು ನೆಲೆಗೊಂಡದ್ದು ಬೆಂಗಳೂರಿನ ಉದ್ಯೋಗ ಮಂಡಲವನ್ನು ವಿಜ್ಞಾನ ಕ್ರಿಯಾಪ್ರಪಂಚಕ್ಕೆ ನೆರವಾಗುವಂತೆ ಮಾಡಿತು.

ದಕ್ಷಿಣ ಭಾಗದಲ್ಲಿ ಗವೀಪುರ, ನರಹರಿರಾಯರ ಗುಡ್ಡ ಇವು ಕೇಂದ್ರವಾಯಿತು. ಈ ಗವಿ ಗಂಗಾಧರೇಶ್ವರ ಗುಡಿ ಮಾಗಡಿ ಕೆಂಪೇಗೌಡನು ಕಟ್ಟಿಸಿದ್ದೆನ್ನುತ್ತಾರೆ. ಒಳಗಡೆ ಸುತ್ತಲೂ ಪ್ರದಕ್ಷಿಣೆಗೆ ಬೇಕಾದ ಅವಕಾಶವಿದೆ. ಕತೆ ಇರುವುದು ಶಿವಗಂಗೆ ಇತ್ಯಾದಿಗಳಲ್ಲಿನಂತೆ ಇರುವ ಒಂದು ಸುರಂಗ ಮಾರ್ಗದಲ್ಲಿ ಕಾಶಿಯವರೆಗೂ ಹೋಗಬಹುದು – ಬದುಕಿಯೊ ಅಥವಾ ಅಲ್ಲಿರುವ ನೀರಿನಿಂದ ತೇಲಿಯೊ! ಆದರೆ ವಿಶೇಷವಾದ ಒಂದು ಸಂಗತಿ – ದೇವಸ್ಥಾನದ ಪ್ರಾಕಾರದಲ್ಲಿರುವ ಛತ್ರಿ, ತ್ರಿಶೂಲ, ಡಮರುಗ. ಅಂಥವು ಸುಮಾರು ಬೇರಲ್ಲಿಲ್ಲ. ಅದರಿಂದಲೇ ಬೆಂಗಳೂರಿನ ಒಂದು ವಿಸ್ತರಣಕ್ಕೆ ಗವೀಪುರ ಎಂಬ ಹೆಸರು ಬಂದಿರುವುದು. ಅದಕ್ಕೂ ಚಾಮರಾಜಪೇಟೆಗೂ ನಡುವೆ ಒಂದು ದೊಡ್ಡ ಕೆರೆ ಈಚಿನ ಕಾಲದವರೆಗೂ ಇತ್ತು (ಈಗಲೂ ಇದೆ). ಹಿಂದಿನ ಕಾಲದಲ್ಲಿ ಅಲ್ಲಿ ನೀರಿನ ವಸತಿ ಚೆನ್ನಾಗಿತ್ತು. ಹುಡುಗರು ಅಲ್ಲಿಗೆ ಈಜಲು ಹೋಗುತ್ತಿದ್ದುದುಂಟು. ಅದಕ್ಕಿಂತ ಹೆಚ್ಚಾಗಿ ಇತ್ತ ಕಡೆಯ ಜನರಿಗೆಲ್ಲ ಕೆರೆಯ ದಂಡೆಯ ಆಚೆ ಕಡೆ ರುದ್ರಭೂಮಿಯ ಏರ್ಪಾಡು ಅನೇಕ ಕರ್ಮಾಂತರಗಳಿಗೆ ಅವಕಾಶ ಕೊಟ್ಟಿತ್ತು. ಹೆಂಗಸರು ಮಕ್ಕಳು ಸಾಮಾನ್ಯ ಆ ಕಡೆ ಹೋಗುತ್ತಿರಲಿಲ್ಲ. ಅದಕ್ಕೆ ಮೇಲೆ ಇನ್ನಷ್ಟು ದೂರದಲ್ಲಿ ನರಹರಿರಾಯರ ಗುಡ್ಡ. ಇದರ ಪ್ರಸಿದ್ಧಿಯನ್ನೂ ರಸಿಕತನದ ಆವರಣವನ್ನೂ ಕುರಿತು ಶ್ರೀ ಡಿ.ವಿ.ಜಿ. ಅವರು ಬರೆದಿದ್ದಾರೆ. ನರಹರಿರಾಯರು ಹಿಂದಿನ ಕಾಲದಲ್ಲಿ ನಮ್ಮ ನಾಡಿನ ನ್ಯಾಯಮಂಡಲದಲ್ಲಿ ಹೆಸರಾದ ಅಧಿಕಾರಿಗಳಾಗಿದ್ದರು. ಆತನು ಸಂತೋಷಕ್ಕಾಗಿ ಕಟ್ಟಿಕೊಂಡಿದ್ದ ಬಂಗಲೆ ಇದು. ತಮಗೆ ಬೇಕಾದಂಥವರನ್ನು ಕರೆಸಿಕೊಂಡು ಗೀತ ನಾಟ್ಯ ವಾದ್ಯಗಾಯನ ರಸಭೋಜನ ಮಾಡಿಸುತ್ತಿದ್ದರೆಂದು ಕೇಳಿದ್ದೇನೆ. ಅಲ್ಲಿಂದ ಈಚಿನ ಕಾಲಗಳಲ್ಲಿ ಸಿದ್ಧಾಂತಿ ಶಿವಶಂಕರ ಶಾಸ್ತ್ರಿಗಳೆಂಬ ವಿದ್ವಾಂಸರು ಅಲ್ಲಿ ಕುಮಾರಸ್ವಾಮಿ ದೇವಾಲಯ ಒಂದನ್ನು ನಡಸುತ್ತಿದ್ದರು. ಈಗಲೂ ದಕ್ಷಿಣದಿಂದ ಬಂದ ತಮಿಳು ಜನ ಕಾವಡಿ ಹೊತ್ತು ಗೊತ್ತಾದ ದಿನಗಳಲ್ಲಿ ಅಲ್ಲಿಗೆ ಸೇವೆ ಸಲ್ಲಿಸಲು ಹೋಗಿ ಬರುತ್ತಾರೆ. ಬಹುಶಃ ಆ ಕಡೆ ತಾತಾ ಇನ್‌ಸ್ಟಿಟ್ಯೂಟ್, ಈ ಕಡೆ ನರಹರಿರಾಯರ ಗುಡ್ಡ – ಇವು ಬೆಂಗಳೂರಿಗೆ ಉತ್ತರ-ದಕ್ಷಿಣ ಮಿತಿಗಳೆಂಬಂತೆ ಇದ್ದುವು. ಮಿತಿ ದಾಟುವುದು, ಗಡಿ ದಾಟುವುದು ಇವೊತ್ತು ಬೆಂಗಳೂರಿನ ವಿಶೇಷ ಲಕ್ಷಣವಾಗಿ, ಈ ಕಡೆ ಬನಶಂಕರಿಯಿಂದ ಆಚೆಗೆ, ಇನ್ನೊಂದು ಕಡೆ ವೈಟ್‌ಫೀಲ್ಡ್ ಅಥವಾ ಕಾಡುಗೋಡಿಯವರೆಗೆ ಹೊಸಕೋಟೆಯ ಅಡ್ಡ ರಸ್ತೆಯವರೆಗೆ, ಮತ್ತೊಂದು



ಕಡೆ ಯಲಹಂಕ ದಾಟಿ, ಇನ್ನೊಂದು ಕಡೆ ಮಾಗಡಿ ರಸ್ತೆಯಲ್ಲಿ ಇತ್ತ ಕೆಂಗೇರಿ ದಾಟಿ ಬೆಂಗಳೂರು ವಿಸ್ತರಿಸಿದೆ.

ಪಟ್ಟಣದ ಭಾಗ ಬೇರೆಯಾಗಿ ದಂಡಿನವರು ಬೇರೆಯಾಗಿ ಇದ್ದಾಗ, ಬೆಂಗಳೂರಿನ ಜನ ಸಂಖ್ಯೆ 2-3 ಲಕ್ಷ ಮಾತ್ರ ಇತ್ತು. ಮಿರ್ಜಾ ಸಾಹೇಬರ ಕಾಲದಲ್ಲಿ ದಂಡಿನ ಪ್ರದೇಶ ಕಂಟೋನ್ಮೆಂಟ್ ಆಗಿದ್ದುದು 'ಸಿವಿಲ್ ಏರಿಯಾ' ಎಂಬ ಹೆಸರಿನಲ್ಲಿ ಬ್ರಿಟಿಷ್ ಸೋಲ್ಜರುಗಳಿದ್ದ ಭಾಗವನ್ನು ಬಿಟ್ಟು ಉಳಿದುದರ ಒಡೆತನವೆಲ್ಲ ಒಪ್ಪಿಸಿದ ಮೇಲೆ, ಅಲ್ಲಿನ 3-4 ಲಕ್ಷ ಜನರ ಸೇರುವೆಯೂ ಆಗಿ ವಿಸ್ತಾರದಲ್ಲಿಯೂ ಜನಸಂದಣಿಯಲ್ಲಿಯೂ ಅಭಿವೃದ್ಧಿಗೊಂಡಿತು. ಮೊದಲಿಂದಲೂ ತೆಲುಗು, ತಮಿಳು, ಉರ್ದು ಭಾಷೆಗಳಿಗೆ ಆಶ್ರಯಗೊಂಡಿದ್ದ ಬೆಂಗಳೂರು ಪಟ್ಟಣ ಈಗ ಇನ್ನಷ್ಟು ಉರ್ದು ತಮಿಳುಗಳು ಸೇರಿ, ಹೊಸ ಕಾಲದಲ್ಲಿ ಉತ್ತರ ದೇಶದ ಅನೇಕ ಇತರ ಪ್ರಾಂತಗಳ ಜನವರ್ಗಗಳು ಬೆಂಗಳೂರು ಎಂಬುದರಲ್ಲಿ ಸೇರಿಕೊಂಡಿವೆ. ಅದು ಬೆಳೆದು ಕೇವಲ ಮೈಸೂರು ಸಂಸ್ಥಾನದ ಆಡಳಿತ ಕೇಂದ್ರವಾಗಿದ್ದ ಬೆಂಗಳೂರು ಕರ್ನಾಟಕದ ರಾಜಧಾನಿಯಾದಾಗ ಇಲ್ಲಿನ ಜನವಸತಿಯೂ ಭೂ ವಿಸ್ತರಣವೂ ಅತಿಶಯವಾಗಿ ಬೆಳೆಯುತ್ತ ಬಂತು. ಕಾರ್ಯಗೌರವಗಳಿಂದ ಇಲ್ಲಿಗೆ ದಿನಾ ಬಂದು ಹೋಗುವವರ ಸಂಖ್ಯೆಯೇ ನಾಲ್ಕೈದು ಲಕ್ಷವಾಗುತ್ತದೇನೊ. ಒಟ್ಟು 15 ರಿಂದ 18 ಲಕ್ಷ ಜನರ ಸಂಖ್ಯೆ ಬೆಂಗಳೂರಿಗೆ ಇದೆಯೆಂದು ಈಚೆಗೆ ಹೇಳುತ್ತಿದ್ದಾರೆ. ಇವೊತ್ತು ಚಾಮರಾಜಪೇಟೆಯಲ್ಲಿರುವ ನನಗೆ ಈಚೆ ಕಡೆ ಬೆಂಗಳೂರಿನ ಮೊದಲ ವಿಸ್ತರಣವಾಗಿ ಈ ಪೇಟೆ ಒಂದು ಸಣ್ಣ ಹಳ್ಳಿಯ ಹಾಗೆ ಪರಿಣಮಿಸಿದೆ. ಇದು ವಿಸ್ತರಣವಲ್ಲ, ಪಟ್ಟಣದ ಹೃದಯಭಾಗವಲ್ಲ ಎಂಬಂತೆ ಆಗಿದೆ. ಇಲ್ಲಿನ 5ನೆಯ ರಸ್ತೆ ಒಂದು ಕಡೆ ಕೆಂಪಾಂಬುಧಿಗೂ ಇನ್ನೊಂದು ಕಡೆ ಕೋಟೆ ಮಾವಳ್ಳಿ ದಾಟಿ ಲಾಲ್‌ಬಾಗ್, ಮನೋರೋಗದ ಆಸ್ಪತ್ರೆ ದಾಟಿ ಹೊಸೂರು ಮಾರ್ಗವಾಗಿ ಮದರಾಸ್ ಆಧಿಪತ್ಯಕ್ಕೂ ನಡಸುವ ರಸ್ತೆಯಾಗಿದೆ. ಈ ಒಂದು ರಸ್ತೆ ಕುರಿತು ಒಂದು ಚರಿತ್ರೆಯನ್ನೇ ಬರೆಯುವಷ್ಟು ಲಕ್ಷಣಗಳು, ಸಂಗತಿಗಳು ಇವೆ.

ಮೊದಲು ಚಾಮರಾಜಪೇಟೆ, ಬಸವನಗುಡಿ; ಆಮೇಲೆ ಈ ನಡುವೆ ಸುಮಾರು 1910-12ರಲ್ಲಿ ಆರಂಭವಾದ ಶಂಕರಪುರ – ಈ ಕಡೆಯ ವಿಸ್ತರಣಗಳಲ್ಲಿ ಪ್ರಖ್ಯಾತವಾದವು. ಆ ಕಡೆ ಕಾಡು ಮಲ್ಲೇಶ್ವರನ ದೇವಸ್ಥಾನದವರೆಗೂ ಸಂಪಂಗಿ ರಸ್ತೆಯಲ್ಲಿ ಮಲ್ಲೇಶ್ವರ ಬೆಳೆದಿತ್ತು. ಅದರ ಈಚೆ ಆಚಿನ ರಸ್ತೆಗಳು ಒಂದು ಕಡೆ ಬೇವಿನ ಮರದ ರಸ್ತೆ, ಇನ್ನೊಂದು ಸ್ಯಾಂಕಿ ಕೆರೆ ಕೆಳಗೆ ವಿಸ್ತರಿಸಿದ ರಸ್ತೆ. ಸುತ್ತಲೂ ಮನೆಗಳು ಕಟ್ಟಿ ವಿಸ್ತಾರಗೊಂಡಿತು. ಮಲ್ಲೇಶ್ವರದ ಈಜುಕೊಳ ಪ್ರಖ್ಯಾತವಾದುದು. ಅಲ್ಲಿಂದಾಚೆಗೆ ಬೆಂಗಳೂರಲ್ಲಿರುವ ರಾಜಾಮಹಲ್ ಅರಮನೆಗೆ ನಡಸುತ್ತದೆ. ಮಲ್ಲೇಶ್ವರಕ್ಕೆ ಈಚೆ ಪಟ್ಟಣದ ಹತ್ತಿರ ಹತ್ತಿರ ಶೇಷಾದ್ರಿಪುರಂ ಬೆಳೆಯಿತು. ಆ

ಒಂದು ಮೂಲೆಯಲ್ಲಿ ಶೇಷಾದ್ರಿ ಅಯ್ಯರ್ ಬಂಗಲೆ ಶ್ರೀಮಂತವಾಗಿ ಬೆಳೆಯಿತು. ಇವೊತ್ತು ಅದು ಕುಮಾರ ಪಾರ್ಕ್ ಆಗಿದೆ. ಅದರಾಚೆಗೆ ಪಂಚತಾರಾ ಹೊಟೇಲ್ ಒಂದು ಅಶೋಕ ಎಂಬ ಹೆಸರಿನಲ್ಲಿ ಆಗಿದೆ. ಆ ರಸ್ತೆಯ ಆಚೆಗೆ ಬಹುದೊಡ್ಡ ಮೈದಾನ, ಪರಂಗಿಯವರ ಆಟ ಗಾಲ್ಫ್‌ಗಾಗಿ ಪ್ರಶಸ್ತವಾಗಿ ರಚಿಸಿದ್ದು. ಅದಕ್ಕೂ ಪಟ್ಟಣಕ್ಕೂ ನಡುವೆ ಕುದುರೆ ಜೂಜಿನ ಮೈದಾನ; ದಕ್ಷಿಣ ದೇಶದಲ್ಲೆಲ್ಲ ಪ್ರಖ್ಯಾತವಾದ ಜೂಜಿನ ವ್ಯವಸ್ಥೆ ಉಳ್ಳದ್ದು. ಅದರ ಅಂಚಿನಲ್ಲಿ ಒಂದು ಕೊನೆಗೆ ವಿ. ಪಿ. ಮಾಧವರಾಯರ ಬಂಗಲೆ, ಇನ್ನೊಂದು ಕೊನೆಗೆ ಕೃಷ್ಣಮೂರ್ತಿಗಳ ಬಂಗಲೆ ಇದೆ. ಇವರು ಸ್ಮಾರ್ತರು; ಅವರು ಮಾಧ್ವರು. ವಿ. ಪಿ. ಮಾಧವರಾಯರ ಕಾಲದಲ್ಲಿಯೇ ಶೃಂಗೇರಿಯ ನರಸಿಂಹ ಭಾರತಿ ಸ್ವಾಮಿಗಳು ಪಾದಪೂಜೆ ಮಾಡಿಸಿಕೊಂಡು ವಿಜೃಂಭಣೆಯನ್ನು ನಡಸಿದ್ದು. ಅವರು ಶಂಕರಮಠವನ್ನೂ ಅಲ್ಲಿನ ಶಂಕರ ದೇವಸ್ಥಾನವನ್ನೂ ಶೃಂಗೇರಿಯ ಸ್ವಾಮಿಗಳಿಗೆ ಒಪ್ಪಿಸಿಕೊಟ್ಟು, ಬೆಂಗಳೂರಿಗೇ ವಿಶೇಷವಾದ, ಅತಿಶಯವಾದ ಶಂಕರಾಚಾರ್ಯರ ಒಂದು ಅಮೃತ ಶಿಲಾ ವಿಗ್ರಹವನ್ನು ಪೂಜಾಸ್ಥಾನವನ್ನು ಕಲ್ಪಿಸಿದುದಲ್ಲದೆ, ಮಂದಿರ ಶಿಲ್ಪದ ಒಂದು ಅತಿಶಯ ವಾಸ್ತುವನ್ನು ನಿರ್ಮಾಣ ಮಾಡಿಸಿದರು. ಅದರಲ್ಲಿನ ಸಭಾಸ್ಥಾನ, ರಚನೆಯ ಅಚ್ಚುಕಟ್ಟು ಬೆಂಗಳೂರಿಗೇ ಒಂದು ಲಕ್ಷಣವನ್ನು ಕೊಡುವಂತಿದೆ. ಹೊರಗಡೆಗೆ ಮಹಡಿಯ ಮೇಲೆ ಚಿತ್ರಾಲಂಕಾರವುಳ್ಳ Stained Glass Window ಎಂಬ ಪ್ರಾಚೀನ ಕಾಲದ ಚಿತ್ರಕಲಾ ವಿಶೇಷದ ಸುಮಾರು 10 ಗಾಜಿನ ಕಿಟಕಿಗಳನ್ನು ರಚಿಸುವಂತೆ ಮಾಡಿದರು. ಅನೇಕ ದಶಕಗಳಿಂದ ಅವಕ್ಕೆ ಕಳೆಯಾಗಲಿ ಕಾಂತಿಯಾಗಲಿ ಇಲ್ಲದೆ, ಕೊನೆಗೆ ಅಂತಹವು ಅಲ್ಲಿದೆಯೆಂಬ ತಿಳಿವಳಿಕೆಯಾಗಲಿ ಜನಕ್ಕೆ ಬಾರದಂತೆ ಅವುಗಳು ಬಡಿದಿವೆ ಅಥವಾ ಬಾರದಿವೆ. ದುರ್ದೈವ. ಮಾಧವರಾಯರೇ ಶಂಕರಮಠವನ್ನು ಭಾರತೀಯ ಗೀರ್ವಾಣ ಪ್ರೌಢ ವಿದ್ಯಾಭಿವರ್ಧಿನಿ ಎಂಬ ಹೆಸರಲ್ಲಿ ಸಂಸ್ಕೃತ ವಿದ್ಯೆಯ ಒಂದು ಅಭ್ಯಾಸ ಮಂದಿರವಾಗಿ ಏರ್ಪಡಿಸಿದರು. ಮಠದವರ ಮತ್ತು ದೇವಸ್ಥಾನದ ಪ್ರಯೋಜನಕ್ಕಾಗಿ ಹೂ ಗಿಡಗಳು, ತೆಂಗಿನ ತೋಟ, ಬಾಳೆಯ ಗಿಡಗಳ ನೆಲಸು – ಇವುಗಳಿಗೆ ಏರ್ಪಾಡು ಮಾಡಿಕೊಟ್ಟರು. ವಿಸ್ತಾರವಾದ ಒಂದು ಪ್ರದೇಶವನ್ನು ಮಠಕ್ಕೆ ಕಲ್ಪಿಸಿಕೊಟ್ಟು, ಶಂಕರಪುರಕ್ಕೆ ನಡಸುವ ಒಂದು ಮೂಲೆಯಲ್ಲಿ ಕೆಲವು ಮನೆಗಳನ್ನು ಕಟ್ಟಿಸಿಕೊಟ್ಟರು. ಅಲ್ಲಿ ವಿದ್ಯಾಶಾಲೆಯ ಪ್ರಾಚಾರ್ಯರೂ ವಿದ್ಯಾರ್ಥಿಗಳೂ ನೆಲೆಸಲು ಏರ್ಪಾಡು ಮಾಡಿಕೊಟ್ಟರು. ಇಂದಿಗೂ ಅಲ್ಲಿಗೂ ಬಸವನಗುಡಿಗೂ ನಡುವೆಯ ಸ್ಥಳ ತಕ್ಕಮಟ್ಟಿಗೆ ಶಾಂತವಾಗಿದೆ. ಹೆಚ್ಚು ಗದ್ದಲ, ಮೋಟಾರು ವಾಹನಗಳ ಕಾಟ, ಕಡೆಗೆ ಪೇಟೆಯ ಗದ್ದಲದ ಆವರಣ ಬೆಳೆಯದೆ ಅದು ಒಂದು ಶಾಂತವಾದ ಪ್ರದೇಶವಾಗಿದೆ. ಇನ್ನಷ್ಟು ಪೇಟೆಯ ಮತ್ತು ಸಾರಿಗೆಯ ಸೌಕರ್ಯ ಅಲ್ಲಿ ದೊರಕಿದ್ದರೆ ಚೆನ್ನಾಗಿತ್ತು ಎಂಬ ಭಾವನೆ ಬರಬಹುದಾದರೂ ಒಂದು ಸುರಕ್ಷಣೆಯ ನೆಮ್ಮದಿ ಅಲ್ಲಿದೆ. ಜೊತೆಗೆ ನಡುಮಟ್ಟದ ಮತ್ತು ಸಿರಿವಂತರ ನಡುವೆಯ ಜನಗಳ ಮನೆಯೇ ಅಲ್ಲಿರುವುದರಿಂದ ಒಂದು ಶುಚಿಯಾದ ವಾತಾವರಣ ಆ



ಪ್ರದೇಶದಲ್ಲಿದೆ. ಈ ಭಾಗದ ರಚನೆಯನ್ನು ನೋಡಿದರೆ ಚಾಮರಾಜಪೇಟೆಯ ಪ್ರದೇಶದಿಂದ ಉದ್ದಕ್ಕೆ ಬಸವಣ್ಣನ ಗುಡಿಗೆ ಹೋಗುವ, ಅಲ್ಲಿಂದ ದಾಟಿ ಇಂದಿನ ಎನ್. ಆರ್. ಕಾಲೋನಿ ಇತ್ಯಾದಿ ಭಾಗಗಳಿಗೆ ಹೋಗುವ ಭಾಗ. ಈಚೆ ಕಡೆ ಚಾಮರಾಜಪೇಟೆ, ಮುಂದೆ ಶಂಕರಪುರ, ಬಸವನಗುಡಿ, ಎನ್. ಆರ್. ಕಾಲೋನಿಗಳಿಗೆ ನಡಸಿದರೆ ಇನ್ನೊಂದು ಕಡೆ ಪುಟ್ಟಣ್ಣ ಚೆಟ್ಟರ ಬಂಗಲೆಯ ಆಚೆಗೆ ಗವೀಪುರ, ಹನುಮಂತನಗರ ಮುಂತಾದ ಕಡೆಗೆ ನಡಸುತ್ತದೆ. ಇತ್ತ ಶಂಕರಪುರ ದಾಟಿದ ಕೂಡಲೇ ವಿಶ್ವೇಶ್ವರಪುರ, ಬಸವನಗುಡಿ, ಜಯನಗರ ಮುಂತಾದ ಕಡೆಗೆ ಹೋಗುತ್ತದೆ. ಅವೆನ್ಯೂ ರಸ್ತೆ ದಾಟಿದ ಕೂಡಲೇ ಪೂರ್ವಕ್ಕೆ ಕೋಟೆ, ಮಾವಳ್ಳಿ ಮುಂತಾದ ಪ್ರದೇಶಗಳಿಗೆ ವಿಂಗಡವಾಗುತ್ತದೆ. ಈ ಒಂದೊಂದು ಕಡೆಯ ಜೀವನ ಲಕ್ಷಣವೂ ಜನಕಲ್ಪವೂ ಒಂದೊಂದು ಬಗೆಯದು.

* * *

ನನಗೆ ಗೊತ್ತಿಲ್ಲದುದರಿಂದ ದಂಡಿನ ಭಾಗದ ಹೆಚ್ಚು ವಿವರಣೆಯನ್ನು ಕೈಕೊಂಡಿಲ್ಲ. ದಂಡಿನ ಮಾರ್ಕೆಟ್, ಕಮರ್ಷಿಯಲ್ ರಸ್ತೆ ಇವುಗಳ ಪರಿಚಯವೂ ಸ್ವಲ್ಪವಿದೆ. ವಿಕ್ಟೋರಿಯಾ ಆಸ್ಪತ್ರೆಗೆ ಸಮನಾದ ಪ್ರಾಶಸ್ತ್ಯವುಳ್ಳ ಬೌರಿಂಗ್ ಆಸ್ಪತ್ರೆ, ಊರ ಒಂದು ಕೊನೆಯಲ್ಲಿ ಇರುವ ಕ್ಷಯರೋಗದ ಆಸ್ಪತ್ರೆ, ಈಚೆ ಕಡೆ ಮುಸ್ಲಿಂ ಆಸ್ಪತ್ರೆ, ಇವುಗಳ ಸ್ಥೂಲ ನಿರ್ದೇಶನ ಮಾಡಿಕೊಳ್ಳುವಷ್ಟು ಮಾತ್ರ ನನ್ನ ಕಣ್ಣು ನೆಲಸು. ಆದರೆ ಪೆರೇಡ್ ಗ್ರೌಂಡ್ ಎಂದು ಹಿಂದೆ ಇದ್ದ ಒಂದು ವಿಸ್ತಾರವಾದ ಭೂ ಪ್ರದೇಶ ಕಣ್ಣಿಗೆ ಕಟ್ಟಿದಂತಿದೆ. ಅಲ್ಲಿ ಬ್ರಿಟಿಷರ ಸೈನ್ಯದ ಪ್ರದರ್ಶನಗಳಾಗುತ್ತಿದ್ದವು. ಉಸಿರಾಡಲು ಚೊಕ್ಕವಾದ ಭೂಮಿ. ಅಲ್ಲಿ ಕಟ್ಟಡಗಳು, ಮಂದಿರಗಳು ಆಗುವವರೆಗೂ ಕಣ್ಣಿಗೆ ಒಂದು ಸಂತೋಷ ತರುತ್ತಿದ್ದ ಭಾಗ ಅದು. ಅಲ್ಲಿಯೇ ಹಿಂದೆ ಹಾಬ್ಸ್–ಸಕ್ಲಿಫ್ ಎಂಬ ಹೆಸರಾಂತ ಕ್ರಿಕೆಟ್ ಆಟಗಾರರು ಬಂದು ಕ್ರಿಕೆಟ್ ಪಂದ್ಯ ನಡೆದದ್ದು. ಈ ಮೈದಾನದ ಎರಡೂ ಕಡೆ ದೊಡ್ಡ ಹೊಟೇಲ್, ಚರ್ಚ್, ಬ್ರಿಟಿಷ್ ಪದಾತಿ ದಳದ ವಸತಿ ಅಥವಾ ನೆಲೆ ಗೃಹಗಳು. ಆಚೆ ಕಡೆ ದಂಡಿನ ವಿದ್ಯುಚ್ಛಕ್ತಿ ಕೇಂದ್ರ. ಈಚೆ ಸೌತ್ ಪೆರೇಡ್ ಎಂಬ ವ್ಯಾಪಾರ ವೈಭವ ಇದೆ. ಕಮರ್ಷಿಯಲ್ ರಸ್ತೆಯ ವ್ಯಾಪಾರರಮ್ಯತೆಗೂ ಸೌತ್ ಪೆರೇಡಿನ ಬ್ರಿಗೇಡ್ ರಸ್ತೆಯ ವ್ಯಾಪಾರವಿಚಕ್ಷಣೆಗೂ ಭೇದವಿದೆ. ಸೌತ್ ಪೆರೇಡಲ್ಲಿ ಹಿಗ್ಗಿನ್ ಬಾತಮ್ಸ್ ಪುಸ್ತಕದ ಅಂಗಡಿ, ಬಾರ್ಟನ್ ಅಂಡ್ ಕಂ. ಎಂಬ ಚಿನ್ನ ಬೆಳ್ಳಿ ವ್ಯಾಪಾರಸ್ಥರು, ಈಗ ಲಿಬರ್ಟಿ ಎಂದು – ಹಿಂದೆ ನ್ಯೂ ಎಂಪೈರ್ ಎಂದು ಹೆಸರಿದ್ದ ಸಿನೆಮಾ ಮಂದಿರ, ಈಗ ಕೃಷ್ಣಯ್ಯ ಚೆಟ್ಟಿ ಅಂಡ್ ಸನ್ಸ್ ಅವರ ಫೋಟೊ ಸಾಮಗ್ರಿಗಳ ಅಂಗಡಿ ಇರುವ ಕಡೆ ಹಷೀಂ ಅಂಡ್ ಕಂ., ಎಂಬುದಿತ್ತು. ಬಹುಕಾಲದಿಂದ ವೆಲ್ಲಿಂಗ್ ಎಂಬ ಇನ್ನೊಂದು ಫೋಟೋಗ್ರಾಫರ್ ಅಂಗಡಿ ಅಲ್ಲಿದೆ. ಅಂಥವು ಈಗ ಇನ್ನೆಷ್ಟೊ ಆಗಿವೆ. ಹಷೀಂ ಅಲ್ಲಿ ಮುತ್ತಿನ ಚಿಪ್ಪಿನ ಗುಂಡಿಗಳು ಸಿಕ್ಕುತ್ತಿದ್ದವು. ಆ ಬಗೆಯ

ಗುಂಡಿಗಳು ಇಲ್ಲಾಗಲಿ, ದೆಹಲಿ ಬೊಂಬಾಯಲ್ಲಾಗಲಿ ಈಗ ಸಿಕ್ಕದಾಗಿವೆ. ಇನ್ನೂ ಸ್ವಲ್ಪ ಕೆಳಕ್ಕೆ ಬಂದರೆ ಹಿಂದೆ ಓರಿಯಂಟಲ್ ಇನ್‌ಷೂರೆನ್ಸ್ ಕಂಪನಿ ಕಟ್ಟಡ ಹೊಸದಾಗಿ ಆಗಷ್ಟೇ ಕಟ್ಟುತ್ತಿದ್ದರು. ಅದರ ರಸ್ತೆಯ ಈಚೆಗೆ ಮೊದಲಿಂದಲೂ ಟ್ರಾಕ್ಟ್ ಅಂಡ್ ಬುಕ್ ಸೊಸೈಟಿ ಮತ್ತು ಬೈಬಲ್ ಸೊಸೈಟಿಯವರ ಕಟ್ಟಡಗಳು. ಅದೇ ರಸ್ತೆಯಲ್ಲಿ ಅಲ್ಲಿಂದ ಉದ್ದಕ್ಕೆ ಎಡಗಡೆಗೆ ದೊಡ್ಡ ಮೋಟಾರ್ ಅಂಗಡಿಗಳು. ರಸ್ತೆ ಪೂರ್ವಕ್ಕೆ ತಿರುಗುವಲ್ಲಿ ಹಿಂದಿನ ಕಾಲದ 'ಡೈಲಿ ಪೋಸ್ಟ್' ಎಂಬ ಬೆಂಗಳೂರಿಗಿದ್ದ ಒಂದೇ ಒಂದು ದಿನಪತ್ರಿಕೆಯ ಕಚೇರಿ. ಅದರ ಎದುರಿನ ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯಾ ಈಗ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಕಟ್ಟಡ. ರಸ್ತೆಯ ಬಲಕ್ಕೆ ಬೌರಿಂಗ್ ಇನ್‌ಸ್ಟಿಟ್ಯೂಟ್ ಇದೆ. ಬೌರಿಂಗ್ ಇನ್‌ಸ್ಟಿಟ್ಯೂಟ್ ಮೊದಲಿನಿಂದಲೂ ಇದೆ. ಅದರಲ್ಲಿ ನಮ್ಮ ದೇಶಿ ಜನಗಳಿಗೆ ಹೆಚ್ಚು ಪ್ರವೇಶ ಇರುತ್ತಿರಲಿಲ್ಲವಾದರೂ ಅಲ್ಲಿನ ಟೆನ್ನಿಸ್ ಕೋರ್ಟುಗಳಲ್ಲಿ ಅನೇಕ ದೊಡ್ಡ ಅಖಿಲ ಭಾರತದ ಗಣ್ಯತೆ, ಅಂತಾರಾಷ್ಟ್ರೀಯ ಖ್ಯಾತಿ ಉಳ್ಳ ಆಟಗಾರರ ಆಟಗಳು ನಡೆದಿವೆ. ಮುಂದಿನ ಭಾಗವೆಲ್ಲ ಹೊರಗಡೆಯಿಂದ ಬರುವ ವಿದೇಶಿ ಜನಗಳಿಗೆ ಊಟ ವಸತಿ ಒದಗಿಸುವ ಮಂದಿರಗಳು. ಒಂದು ಕಡೆ 'ಮಿಸ್ಕಿತ್' ಎಂಬವರ ಪಿಯಾನೊ ಮುಂತಾದ ವಾದ್ಯಗಳ ಅಂಗಡಿ ಇದ್ದರೆ, ಈ ಕಡೆ ಅಬ್ರಹಂ ಅಂಡ್ ಕಂ. ಎಂಬ ಪೀಠೋಪಕರಣ, ಇತ್ಯಾದಿ ಇತರ ಬೆಲೆಯುಳ್ಳ ವಸ್ತುಗಳ ಹರಾಜು ಅಂಗಡಿ (Auctioneers) ಇರುತ್ತಿತ್ತು. ಸ್ವಲ್ಪ ಹಿಂದಕ್ಕೆ ಆಚೆಗೆ ಸೈಂಟ್ ಜೋಸೆಫ್ ಕಾಲೇಜು, ಗುಡ್ ಷೆಪರ್ಡ್ಸ್ ಕಾನ್ವೆಂಟ್, ಬಿಷಪ್ ಕಾಟನ್ ಹೈಸ್ಕೂಲ್ ಮುಂತಾದ ವಿದ್ಯಾಮಂದಿರಗಳೂ, ಕ್ರಿಶ್ಚಿಯನ್ ಮತಗಳವರ ಮಂದಿರಗಳೂ ಬಹುಕಾಲದಿಂದ ಇವೆ. ಗುಡ್ ಷೆಪರ್ಡ್ಸ್ ಕಾನ್ವೆಂಟಿನಲ್ಲಿ ಅಪರೂಪವಾಗಿ ಪಾಶ್ಚಿಮಾತ್ಯ ಸಂಗೀತಗಾರರು ಪ್ರದರ್ಶನಗಳನ್ನು ಏರ್ಪಡಿಸುತ್ತಿದ್ದುದುಂಟು. ಪಾಶ್ಚಿಮಾತ್ಯರ ಸಂಗೀತ ನಾಟಕಗಳನ್ನು ಬಹುಮಟ್ಟಿಗೆ ಸೌತ್ ಪೆರೇಡ್ ಮೈದಾನದ ಆಚೆ ಇದ್ದ ಬಿ.ಆರ್.ವಿ. ನಾಟ್ಯ ಮಂದಿರದಲ್ಲಿ, ಬ್ರಿಗೇಡ್ ರಸ್ತೆಯಲ್ಲಿನ ಆಪೆರಾ ಹೌಸ್ ಅಲ್ಲಿ ಏರ್ಪಡಿಸುತ್ತಿದ್ದರು. ಬಿ.ಆರ್.ವಿ.ಯಲ್ಲಿಯೇ ನಾವು ಅನೇಕ ಇಂಗ್ಲಿಷ್ ನಾಟಕಗಳನ್ನೂ ಯಾಷಾ ಹೈಫಿಟ್ಸ್ ವಯೊಲಿನ್ ವಾದನವನ್ನೂ ಕಂಡದ್ದು, ಕೇಳಿದ್ದು. ನ್ಯೂ ಇಂಪೀರಿಯಲ್‌ನಲ್ಲಿ, ಮೊದಲ ಬಾರಿಗೆ 'ಬೆನ್‌ಹರ್' ಚಿತ್ರದ ಜೊತೆಗೆ ಒಂದು ವಾದ್ಯ ಮೇಳವನ್ನು ಕೇಳಿದುದು. ಉಳಿದುದು ಇನ್ನೆಷ್ಟೋ ದಂಡಿನಲ್ಲಿ.

ಬೆಂಗಳೂರಿನ ನೆಲಸು ಮುಖ್ಯತೆಗಳು ಅನೇಕವಿದ್ದರೂ ಎರಡು ಮಿಷನ್ ಹೈಸ್ಕೂಲ್ ಹೆಸರನ್ನು ಹೇಳಲೇಬೇಕು. ಒಂದು: ಈಗ ಸೆಂಟ್ರಲ್ ಹೈಸ್ಕೂಲ್ ಎಂಬ ಹೆಸರಿನ ಪಾಠಶಾಲೆಯು ಹಿಂದೆ ಲಂಡನ್ ಮಿಷನ್ ಹೈಸ್ಕೂಲ್ ಆಗಿತ್ತು. ಈಗ ಯೂನಿಟಿ ಬಿಲ್ಡಿಂಗ್ ಇರುವ ಬೆಂಗಳೂರು ಕಾರ್ಪೊರೇಷನ್ ಕಚೇರಿಯ ಈಚೆಗಿರುವ ಪ್ರದೇಶದಲ್ಲಿ ವೆಸ್ಲಿಯವರ ಮಿಷನ್ ಹೈಸ್ಕೂಲ್ ಇತ್ತು. ಇವರೆಡೂ ಮಿಷನ್‌ಗಳು ಒಂದು ಕಾಲಕ್ಕೆ ಯುನೈಟೆಡ್ ಮಿಷನ್ ಆದವು. ಈ ಎರಡರಲ್ಲಿಯೂ



ಪ್ರಿನ್ಸಿಪಾಲರುಗಳಾಗಿದ್ದವರು ಹುಡುಗರಿಗೆ ಆಟಪಾಠಗಳಲ್ಲಿ ದೊಡ್ಡ ಉತ್ತೇಜನವನ್ನು ಕೊಡುತ್ತ ತಾವೇ ಆಟಗಾರರಾಗಿಯೂ ಅನೇಕ ವೇಳೆ ಅಂಪೈರುಗಳಾಗಿಯೂ ಫುಟ್‌ಬಾಲ್, ಕ್ರಿಕೆಟ್‌ಗಳಲ್ಲಿ ಭಾಗವಹಿಸುತ್ತಿದ್ದರು. ಈಗಿನ ನರಸಿಂಹರಾಜಾ ರಸ್ತೆ ಹಿಂದೆ ಬಂಬೂ ಬಜಾರ್ ಆಗಿತ್ತು. ಅದು ಈ ರಸ್ತೆಯ ಹಿಂದಕ್ಕೆ ಹೋಗಿ ಬಹುಮಟ್ಟಿಗೆ ಸುತ್ತಮುತ್ತ ಒಂಟೆತ್ತಿನ ಗಾಡಿಗಳು ಬಾಡಿಗೆಗೆ ದೊರೆಯುತ್ತಿದ್ದು ಈಗ ಅವುಗಳ ಸಂಖ್ಯೆ ಕಡಮೆಯಾಗಿ ಹೋಗಿವೆ. ಎತ್ತಿನ ಪ್ರಯೋಜನ, ಗಾಡಿ ಎಳೆಯುವ ಕುದುರೆಯ ಪ್ರಯೋಜನ ಪೂರ್ತಿಯಾಗಿ ಇನ್ನು ಮುಂದೆ ನಿಂತು ಹೋದೀತಾದ್ದರಿಂದ ಎರಡು ಪ್ರಾಣಿಗಳ ಒಂದು ಕ್ರಿಯಾ ವಿಶೇಷವೇ ಇಲ್ಲದಾಗುತ್ತದಾಗಿ ಅವುಗಳ ಉತ್ಪತ್ತಿಯೇ, ಆ ಸಂಬಂಧದ ನಿರ್ಮಾಣ ವಿಧಾನವೇ ನಿಂತುಹೋದೀತು. ಜಟಕಾ, ಎತ್ತಿನಗಾಡಿ ಇನ್ನು ಹೆಚ್ಚಿನ ಕಾಲ ಬಳಕೆಯಲ್ಲಿ ಇರಲಾರದೆನ್ನಿಸುತ್ತದೆ. ಸ್ಥೂಲವಾಗಿ ಇದು ಹಳೆಯ ಬೆಂಗಳೂರಿನ ನೆಲಸು, ಚಿತ್ರಣ ಕ್ರಿಯಾಮಂಡಲ.

* * *

ಬೆಂಗಳೂರು – ಮೈಸೂರುಗಳಿಗೆ ವ್ಯತ್ಯಾಸ, ಸ್ಪರ್ಧೆ ಮೊದಲಿಂದಲೂ ಇದೆ. ಬಹುದಿನ ನಾನು ಮೈಸೂರಿನಲ್ಲಿಯೇ ವ್ಯಾಸಂಗಕ್ಕೆ, ಕೆಲಸಕ್ಕೆ ಇದ್ದರೂ ನನ್ನ ಮನೆ ಬೆಂಗಳೂರಿನಲ್ಲಿಯೇ. ನನ್ನ ಮೈಸೂರು ಪಕ್ಷಪಾತ ಬಹುಶಃ ಹೆಚ್ಚು ಪ್ರಧಾನವಾದುದು. ಆಕ್ಸ್‌ಫರ್ಡ್–ಕೇಂಬ್ರಿಜ್ ವಿದ್ಯಾರ್ಥಿಗಳೂ ಪಕ್ಷಪಾತಿಗಳೂ ಮೇಲ್ಮೆಯಲ್ಲಿ ತಾವು ಹೆಚ್ಚು, ತಾವು ಹೆಚ್ಚು ಎಂದು ಸ್ಪರ್ಧಿಸುವರಂತೆ. ಮಹಾರಾಷ್ಟ್ರದಲ್ಲಿ, ತಮಿಳರಲ್ಲಿ – ಅಷ್ಟೇ ಏಕೆ? ಅನೇಕ ಭಾಷಾ ಪ್ರಾಂತಗಳಲ್ಲಿ – ಪೂನಾ – ನಾಗಪುರ – ಮದರಾಸ್ – ಮಧುರೈಯಲ್ಲಿ, ರಾಜಾಮಹೇಂದ್ರಿ-ವಿಜಯವಾಡದವರಲ್ಲಿ, ಕಲ್ಕತ್ತಾ–ಢಾಕಾ–ಭಾಗಲ್‌ಪುರ್ ಅಲ್ಲಿ, ಅಲಹಾಬಾದ್–ಲಕ್ನೋ–ಆಗ್ರಾದವರಲ್ಲಿ, ಹೀಗೆ – ಇದೇ ಬಗೆಯ ಸ್ಪರ್ಧೆ ನಡೆಯುತ್ತಿದೆ. ಈ ಪ್ರತಿಯೊಂದು ಗುಂಪಿನವರೂ ಸಾಹಿತ್ಯ – ಸಂಸ್ಕೃತಿಗಳಲ್ಲಿ ಮೇಲ್ಪೋಟಿ ಮಾಡುತ್ತಾರೆ. ಹಾಗೇ ನಮ್ಮಲ್ಲಿ ಬೆಂಗಳೂರು–ಮೈಸೂರವರು. ಎಂದರೆ, ಮಹಾರಾಜಾ ಕಾಲೇಜ್, ಸೆಂಟ್ರಲ್ ಕಾಲೇಜ್‌ಗಳ ನಡುವೆ.

ನಾನು ಬೆಂಗಳೂರಿಂದ ಓದಲು ಮೈಸೂರು ಮಹಾರಾಜಾ ಕಾಲೇಜ್‌ಗೆ ಹೋಗಿ ಅಲ್ಲಿಂದ ಪಾಸು ಮಾಡಿ ಅಲ್ಲಿನ ಹೈಸ್ಕೂಲ್ ಉಪಾಧ್ಯಾಯನಾಗಿದ್ದ ಕಾಲದ ಬಹುಭಾಗ ಕೃಷ್ಣರಾಜ ಒಡೆಯರವರ ಕಾಲದ ನಾಗರಿಕತೆ, ನಯ ಜೀವನವನ್ನು ಕಂಡಿದ್ದವನು. ಆದುದರಿಂದ ಆಗ ಮೈಸೂರಿನವನೇ ಆಗಿದ್ದೆ. ಬೆಂಗಳೂರವರು ಸೆಂಟ್ರಲ್ ಕಾಲೇಜಿನ ವಿಜ್ಞಾನ ವಿದ್ಯಾರ್ಥಿಗಳು. ವಿಜ್ಞಾನಕ್ಕೂ, ಕಲಾ ವಿಭಾಗಕ್ಕೂ (Arts) ಮೊದಲಿಂದಲೂ ಎದುರಾಟವೇ. ವಿಜ್ಞಾನಿಗಳು ಗಣಿತಶಾಸ್ತ್ರದವರು: ತಾವು ವಿದ್ಯಾ ವಿಶೇಷದಲ್ಲಿ ಅತಿಶಯವಾದವರೆಂದು, ಬ್ರಹ್ಮಸೃಷ್ಟಿಯಲ್ಲಿ ತಾವು ಮೇಲ್ತರದವರೆಂದು

ಹೇಳಿಕೊಳ್ಳುವುದು ರೂಢಿ. ಚರಿತ್ರೆ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ಸಮಾಜ ವಿಜ್ಞಾನ, ತತ್ವಜ್ಞಾನ ಇವುಗಳ ಕೂಗು ಸ್ವಲ್ಪ ದುರ್ಬಲವಾದ್ದು. ಇದಲ್ಲದೆ ಮೈಸೂರು ಸಿವಿಲ್ ಸರ್ವಿಸ್, ಇಂಡಿಯನ್ ಸಿವಿಲ್ ಸರ್ವಿಸ್, ಎಫ್. ಸಿ. ಎಸ್. ಮುಂತಾದವುಗಳಲ್ಲಿ ಗಣಿತ–ವಿಜ್ಞಾನ ತೆಗೆದುಕೊಂಡವರಿಗೆ ಹೆಚ್ಚು ಪ್ರಾಧಾನ್ಯ ಬರುತ್ತಿತ್ತಾಗಿ ಮೈಸೂರವರಿಗೆ ಹೀನಾಯ ಕಾಣಿಸುತ್ತಿತ್ತು. ಕಲಾವಿಭಾಗದ ಪ್ರಶ್ನಪತ್ರಿಕೆಗಳಲ್ಲಿ ಪೇಪರು ಕೊಟ್ಟವರೇ ಉತ್ತರ ಬರೆದು ಅದಕ್ಕೆ ಬೆಲೆಕಟ್ಟಿದರೂ ನೂರಕ್ಕೆ 60-80 ಕೊಡುವುದು ಕಷ್ಟ. ಫಿಸಿಕ್ಸ್, ಗಣಿತ ಮುಂತಾದವುಗಳಲ್ಲಿ ನೂರಕ್ಕೆ ನೂರು ತೆಗೆದುಕೊಳ್ಳಬಹುದಾಗಿತ್ತು. ವಿಜ್ಞಾನದವರ, ಗಣಿತದವರ ಬುದ್ಧಿಶಕ್ತಿಯೇ ಮೇಲ್ತರದ್ದೆಂದು ಇವುಗಳಲ್ಲಿ ಪಾಸು ಮಾಡುತ್ತಿದ್ದ ಮದರಾಸಿನವರು ಕೇರಳ ಆಂಧ್ರ ಕಡೆಗಳಿಂದ – ಆಗ ಈ ಮೂರೂ ಒಂದೇ ಆಧಿಪತ್ಯದಲ್ಲಿ ಇರುತ್ತಿದ್ದವು – ಅವರ ಬುದ್ಧಿ ಮೇಲ್ತರದ್ದೆಂದು ಮೆರೆಸುತ್ತ ಮೈಸೂರಿನವರು ಕೆಳಗೆ ಎಂದು ಎಣಿಸುವುದು ವಾಡಿಕೆಯಾಗಿತ್ತು. ಸಂಗೀತದಲ್ಲಿ ಇದ್ದಂತೆಯೇ ಇಲ್ಲಿಯೂ.

ಒಮ್ಮೆ 1921-22ರಲ್ಲಿ ಸ್ನೇಹಿತರಾದ ನಾವು 3-4 ಜನ ಬೆಂಗಳೂರು ಉಡುಪಿ ಹೋಟೇಲಲ್ಲಿ ಬೆಳಿಗ್ಗೆಯೊ ಮಧ್ಯಾಹ್ನವೊ ತಿಂಡಿ ತೀರ್ಥಕ್ಕೆ ಹೋಗಿದ್ದಾಗ, ನನಗೆ ಇನ್ನೂ ನೆನಪಿನಲ್ಲಿದೆ, ನಮಗೆ ತುಂಬಾ ವಿಶ್ವಾಸಪಾತ್ರರಾಗಿ ಆಮೇಲೆ ಸ್ನೇಹಿತರಾದ ಕಪನಿಪತಿ ಭಟ್ಟರು ಬೆಂಗಳೂರಿನವರ ಮತ್ತು ಸೆಂಟ್ರಲ್ ಕಾಲೆಜ್ ಮತ್ತು ಇಂಜಿನಿಯರಿಂಗ್ ಕಾಲೆಜಿನವರ ಮೇಲ್ಮೈ ಮೈಸೂರಿನ ನಮಗಿಂತ ಹೆಚ್ಚಿನದೆಂದು ವಾದಿಸಿ ರಾದ್ಧಾಂತಕ್ಕೆ ಬರುವಂತಾಯಿತು. ನಾವಿಬ್ಬರೂ ಮೈಸೂರವರೇ. ಆದರೆ ಊರು–ಕಾಲೆಜುಗಳ ಪಕ್ಷಪಾತ ವಾದಗಳನ್ನು ಬಿರುಸು ಮಾಡಿತು. ಎಷ್ಟು ಹೊತ್ತು ವಾದ ಮಾಡಿದರೂ 'ಯೂಯಂ ಯೂಯಂ ವಯಂ ವಯಂ' ಎಂದು ತೀರ್ಮಾನವಾಗುತ್ತಿತ್ತೇ ಹೊರತು ಒಡಂಬಡಿಕೆಯಾಗುತ್ತಿರಲಿಲ್ಲ. ಈಗ ಎಲ್ಲರದೂ ಒಂದೇ ಯೋಗ್ಯತೆ-ಅಯೋಗ್ಯತೆ ಎಂದು ಸ್ಥಿರಪಟ್ಟಿರುವುದರಿಂದಲೂ ಎರಡೂ ಕಡೆಯ ವಿದ್ಯಾಮಂಡಲಿಗಳಲ್ಲಿ ಎರಡೂ ಬಗೆಯ ವಿದ್ಯಾಭ್ಯಾಸ ನಡೆಯುತ್ತಿರುವುದರಿಂದಲೂ ಅಂಥ ಚರ್ಚೆಯೇ ಬರುತ್ತಿದೆಯೊ ಇಲ್ಲವೊ!

ಒಂದು ರಸ್ತೆ : ಹಾರ್ಡಿಂಗ್ ರೋಡ್, ಮಿರ್ಜಾ ರೋಡ್, ಕಾರಂಜಿ ಕೆರೆ ರಸ್ತೆ ಮೈಸೂರಲ್ಲಿ ಇರುವಂತೆ ನಿಮ್ಮೂರಲ್ಲಿದೆಯೇನ್ರಿ? – ಎಂದು ಇವರು ಕೇಳುವುದು. ನಿಮ್ಮ ಹುಡುಗರನ್ನು ನೋಡಿ : ಅವರು ವೆಚ್ಚ ಮಾಡುವ ಹಣದಲ್ಲಿ ಮೈಸೂರಲ್ಲಿ ಇಬ್ಬರಿಗೆ ವಿದ್ಯಾಭ್ಯಾಸ, ಶಿಕ್ಷಣ ಸೌಕರ್ಯ ದೊರೆಯುತ್ತದೆ – ಎಂದು ಉತ್ತರವಾಗಿ ಅವರೆನ್ನುವುದು. ಬೆಂಗಳೂರಲ್ಲಿ ಬೀದಿ ತಿರುಗಾಡಲು ಇರುವ ಸೌಕರ್ಯ ಮೈಸೂರಲ್ಲಿ ಎಲ್ಲಿ ತರಬೇಕು? ಮೈಸೂರಲ್ಲಿ ಬೀದಿಗಳೇ ಹೆಚ್ಚು : ಮನೆ ಜನ ಕಡಮೆ – ಎಂದೀರಿ. ಪ್ರತಿಯಾಗಿ, ಬೆಂಗಳೂರಿನ ಆಕರ್ಷಣೆಯಿಂದಾಗಿ ಇಲ್ಲಿಗೆ ಹೆಚ್ಚು ಜನ ಬಂದಾರು.



ಈ ಆಕರ್ಷಣೆ ಕೈಗಾರಿಕೆ ಉದ್ಯೋಗ ವ್ಯಾಪಾರಗಳಿಗೆ ಸಂಬಂಧಿಸಿದ್ದು. ಇಲ್ಲಿನ ಗದ್ದಲ ತುಮುಲದಲ್ಲಿ ವಿದ್ಯಾರ್ಜನೆಗೆ ಯಾವ ನೆರವು ದೊರೆತೀತು? ಬಸವನಗುಡಿ – ಮಲ್ಲೇಶ್ವರಗಳಿಂದ ನಡೆದುಕೊಂಡು ಬರುವ ವಿದ್ಯಾರ್ಥಿಗಳು ಹೋಗಲಿ, ಬೈಸಿಕಲ್ ಮೇಲೆ ಬರುವವರಿಗೂ ಜೀವಭಯವೇ. ವಿದ್ಯಾರ್ಜನೆ ಮಾಡಬೇಕಾಗಿರುವಾಗ ತಾನೆ ಮನಸ್ಸಿನ ನೆಮ್ಮದಿ ಇರಬೇಕಾದ್ದು? ಶಾಂತವಾಗಿ ಬೇರೆ ಪ್ರಚೋದನೆಗಳಿಲ್ಲದೆ ಇದ್ದಾಗ ಮನಸ್ಸಿನಲ್ಲಿ ಓದಿಗೆ, ಆಲೋಚನೆಗೆ ಅವಕಾಶ ಇರುತ್ತದೆ, ಸೌಕರ್ಯ ಇರುತ್ತದೆ, – ಎಂದರೆ ಹೆಚ್ಚು ಗಮನವನ್ನು ವಿಜ್ಞಾನದ ಕಾಲೆಜುಗಳ ಆವರಣದಲ್ಲಿ ಕಾಣಬಹುದೇನೊ. ಕಲ್ಲು ಪಾಚಿ ಮೂಳೆ ಕಂಕಾಳ ಊ್ರಖ ಇಂಜಿನಿಯರಿಂಗ್ ಕಾಲೆಜ್‌ಗಳಲ್ಲಿ ಕಬ್ಬಿಣ ಗುದ್ದುವುದು ಇವೇ ಬಹಳ ದೊಡ್ಡವು. ವಸ್ತು ವಿಜ್ಞಾನವನ್ನು ಹೆಚ್ಚು ಖಚಿತವಾಗಿ ತಿಳಿದುಕೊಳ್ಳಬಹುದು – ಎಂದೀರೇನೊ. ಮನುಷ್ಯನ ಮಾನಸಿಕ ಜೀವನ, ಸಮಾಜ ಜೀವನ, ಸಂಸ್ಕಾರ, ಆಧ್ಯಾತ್ಮ ವಿದ್ಯೆ ಇವುಗಳಿಗೆಲ್ಲಿದೆ ನಿಮ್ಮಹಾಳು ಊರಲ್ಲಿ ಬೆಲೆ? ಇವಕ್ಕೆಲ್ಲ ಎಷ್ಟು ವರ್ಷ ಸಾಧಿಸಿದರೆ ಏನು ಪ್ರಯೋಜನ? ಸಂಸ್ಕೃತಿ ಸಾಧನೆಗೆ, ನಯಕ್ಕೆ, ಸಾಹಿತ್ಯಕ್ಕೆ ಮೈಸೂರು ಹುಟ್ಟಿದ್ದು ಎಂದು ಆಗಾಗ್ಗೆ ವಾದ ಬೆಳೆಯುವ ವಾಡಿಕೆ ಇತ್ತು. ನಯನಾಜೂಕುಗಳಲ್ಲಿ ಮೈಸೂರಿನದು ಮೇಲ್ಗಯ್; ಅಲ್ಲಿನ ಹುಡುಗರು ಇನ್ನೂ ಮೃದುಚರ್ಯೆಯುಳ್ಳವರು; ಗಂಡು ಹುಡುಗರು ತಲೆಗೂದಲು ಬಾಚಿಕೊಂಡು ಕೈಗೆ ಬಂಗಾರದ ಬಳೆ ಹಾಕಿಕೊಂಡು ಇರುತ್ತಿದ್ದರು; ನಾಮ ಹಾಕಿಕೊಳ್ಳುವವರು ತಿದ್ದಿ ನಾಮ ತೀಡುತ್ತಿದ್ದರು; ಪರಕಾಲಮಠ, ಅಹೋಬಲಮಠ, ತ್ರಿನಯನೇಶ್ವರನ ಗುಡಿ, ವರಾಹಸ್ವಾಮಿ ಗುಡಿ; ಅರಮನೆ – ಇಲ್ಲಿನ ಓಲಗ, ವರ್ಣಶೃಂಗಾರ, ನಗಾರಿ ನೌಬತ್ತು, ಅರಮನೆಯ ವಾದ್ಯ ಸಂಗೀತಗಳ ಏರ್ಪಾಡು; ನಿಷಾತ್‌ಬಾಗಲ್ಲಿ ವಾರವಾರವೂ ಹುಣ್ಣಿಮೆಗಳಲ್ಲಿಯೂ ನಡೆಯುತ್ತಿದ್ದ ಹಿಂದೂಸ್ತಾನಿ – ಕರ್ನಾಟಕೀ ವಾದ್ಯಮೇಳ; ಪಾಶ್ಚಿಮಾತ್ಯ ವಾದ್ಯವಿದ್ಯೆಯ ತರಬೇತಿಗೆ ಏರ್ಪಡಿಸಿದ್ದ ಶಿಕ್ಷಣಮಂದಿರ; ಪಕ್ಕದ ಮೋಟರ್ ಗಾರಾಜಲ್ಲಿ, ಓಹೋ, ದಿವ್ಯವಾಗಿ ಎಂಬಂತೆ ಕಲ್ಪಿಸಿದ್ದ – ರೋಲ್ಸ್ ರಾಯ್ಸ್, ಪಾಂಟಿಯಾಕ್ ಮುಂತಾದ ತಯಾರಿಯ ಮೋಟಾರುಗಳು; ಎದುರಿಗೇ ಪಕ್ಕಕ್ಕೆ ವಸಂತ ಮಹಲ್ Summer Palace; ಅಲ್ಲಿಂದಾಚೆಗೆ ತಬೇಲಿ (stables); ದಿವ್ಯವಾದ ಕಾರಂಜಿ ಕೆರೆ, ಬೆಟ್ಟದ ಮೇಲಿನ ದೀಪಗಳು, ಅದರಲ್ಲಿ ಪ್ರತಿಫಲಿಸುತ್ತಿದ್ದ ವಿನ್ಯಾಸ; ಕೆರೆಯ ದಂಡೆಯ ಮೇಲೆ ಕುಳಿತು ಬೆಳಗ್ಗೆ–ಸಂಜೆ ಸೂರ್ಯೋದಯ – ಚಂದ್ರೋದಯಗಳನ್ನು ಕಾಣುವ, ಸ್ವಾಗತಿಸುವ ಉಲ್ಲಾಸ; ಮತ್ತಷ್ಟು ವ್ಯವಧಾನವಿದ್ದರೆ ಉತ್ತನಹಳ್ಳಿ ಮೇಲಕ್ಕೊ ಪ್ರತಾಪಕುಮಾರಿ ಅರಮನೆಗೊ ಹೋಗಿ ಅವುಗಳನ್ನು ಸ್ವಾಗತಿಸುವ ಸೌಭಾಗ್ಯ; ಅಲ್ಲಿಂದಾಗಲಿ, ಅಥವಾ ಈ ಕಡೆ ಕುಕ್ಕರಹಳ್ಳಿಯ ಕೆರೆಯಿಂದಾಗಲಿ ನೋಡಿದರೆ ಅರಮನೆಯ ವಿದ್ಯುದಲಂಕಾರದ ಮಹಾವೈಭವ – ಇವೆಲ್ಲ ನಿಮ್ಮ ತಬ್ಬಲಿ ಬೆಂಗಳೂರಿಗೆಲ್ಲಿ ಬರಬೇಕು? ನಿಮ್ಮಲ್ಲಿ ಅಠಾರಾ ಕಚೇರಿಯಿದೆ, ನಿಜ, ತಮಾಷೆ ಬಂಗಲೆ ಇದೆ, ಲಾಲ್‌ಬಾಗಿದೆ, ನಿಮ್ಮಲ್ಲೂ ರೇಸ್‌ಕೋರ್ಸ್ ಇದೆ,

ರೆಸಿಡೆನ್ಸಿಯ ಅದಬ್ಬಿದೆ; ಇವು ಯಾವುವೂ ನಮ್ಮವಲ್ಲ. ಹೊಸದಾಗಿ ಕಟ್ಟಿದ ಅರಮನೆಯ ಕಚೇರಿ ಹೊಸಕಾಲದ ವಾಸ್ತುಶಿಲ್ಪದಲ್ಲಿ ಸೊಗಸಾಗಿದೆ. ಮೈಸೂರಲ್ಲಿ ಬೆಂಗಳೂರಿನ ತೋಪುಖಾನೆಗಳಲ್ಲಿ ಇರುವಷ್ಟು ದೊಡ್ಡದಾದ ಆಯುಧ ಶಾಲೆಗಳಿಲ್ಲ, ನಿಜ. ಆದರೆ ಬೆಂಗಳೂರೆಲ್ಲ ಬ್ರಿಟಿಷ್ ಸರಕಾರಕ್ಕೆ ಸೇರಿದ, ನಮ್ಮನ್ನು ಆಳುವ ವಿದೇಶೀಯರ ಆಡಳಿತ ತಂತ್ರಕ್ಕೆ ಒಳಪಟ್ಟುದು. ಶಸ್ತ್ರಾಸ್ತ್ರಗಳ ಕ್ರೀಡೆಯಲ್ಲ ಸಂಸ್ಕೃತಿ. The Art of Peace ಎಂಬವು ದೊಡ್ಡವು – ಎಂದರೆ,

ನಿಮ್ಮೂರಿಗೆ ಒಂದು ದೊಡ್ಡ ಹೊಟೇಲ್ ಗತಿಯಿದೆಯೇನ್ರಿ? ಟೌನ್‌ಹಾಲ್ ಬಿಟ್ಟರೆ ಇನ್ನೊಂದು ಜನಸಂದಣಿಸುವ, ಮಹೋತ್ಸವಗಳನ್ನು ಮಾಡುವ ಅವಕಾಶ ಎಲ್ಲಿ ತರಬೇಕು? ಬೆಂಗಳೂರಲ್ಲಿ ಬೆಳೆಯುವ ಕೋಸು ಗಡ್ಡೆ, ಎಲೆ ಹೂ, ನಮ್ಮ ಹುರಳಿಕಾಯಿ ನಿಮ್ಮ ಮೈಸೂರಲ್ಲಿ ಎಲ್ಲಿ ಬರಬೇಕು? ನಮ್ಮ ಮಂಡಿಗಳಲ್ಲಿ ಮಾರಾಟವಾಗುವ ಉರುಳುಗಡ್ಡೆ ಈರುಳ್ಳಿ ಹಣ್ಣು ತರಕಾರಿ ನಿಮ್ಮ ಬಡಪಾಯಿ ಮೈಸೂರಿಗೆ ಹೇಗೆ ದೊರಕಬೇಕು? – ಎನ್ನುವರು.

ಹಣ್ಣು ತರಕಾರಿಯ ಮಾತಿಗೆ ಬಂದಾಗ, ಮೈಸೂರಿನವರು ಸೋಲುತ್ತಿರಲಿಲ್ಲ. ಕಲ್ಲಂಗಡಿ, ಸಿದ್ದೋಟ್ ನಮ್ಮಲ್ಲಿ ಸಿಗುವುದಿಲ್ಲ, ನಿಜ. ಆಲೂಗಡ್ಡೆ ನಿಮಗೆ ಹೊರಗಡೆಯಿಂದ ಹೇಗೆ ಬರಬೇಕೊ ನಮಗೂ ಹಾಗೇ ಬರುತ್ತದೆ. ಆದರೆ ನಮ್ಮ ಈರನಗೆರೆ ಬದನೆ, ಬೆಂಡೆ, ನಮ್ಮ ಅರಮನೆ ತೋಟಗಳ ವೀಳೆಯದೆಲೆ, ನಮ್ಮ ಮಲ್ಲಿಗೆ ಜಾಜಿಯ ಪರಿಮಳ, ಬೆಂಗಳೂರು ಬಿಡಿ, ಭರತಖಂಡದಲ್ಲೇ ಇನ್ನೆಲ್ಲಿ ತಂದೀರಿ? ಹೌದು, ಪರಂಗಿ ಎಲೆಯಲ್ಲಿ ವೀಳೆಯದೆಲೆ ಸುತ್ತಿಕೊಡುತ್ತೇವೆ; ತಾವರೆ ಎಲೆಯಲ್ಲಿ ಹೂ ಕಟ್ಟಿಕೊಡುತ್ತೇವೆ; ಹೂ ಕಟ್ಟುವಾಗ ದಾರ ಉಪಯೋಗಿಸುತ್ತೇವೆಯೆ? ಬಾಳೆಯ ನಾರನ್ನು ಸಣ್ಣದಾಗಿ ಸೀಳಿ ಕಟ್ಟುತ್ತೇವೆ; ಬೇಕಾದರೆ ಪನ್ನೀರು ಚಿಮುಕಿಸಿ ಕೊಡುತ್ತೇವೆ; ನಮ್ಮಬುತ್ತಿ ಚಿಗುರು ಬಂಗಾರ–ಬೆಳ್ಳಿಯ ರೇಖೆಗಳ ಹಾಗೆ ಇರುವ, ಕಟ್ಟಿಗೆ 200 ಎಲೆ ಕೊಡುವ ಎಲೆ ಅದು. ವೀಳೆಯದೆಲೆ ಮಾರುವವರ ಬೆಡಗೂ ಥಳಕೂ ತುಂಬಾ ಮೋಹಕವಾದ್ದು. ನಿಮಗೇನು ಜಾತಿಯೆ, ಕುಲವೆ? ಈಚೆಗೆ ಅಚ್ಚಾದ ಒಂದು ತ್ರಿಪದಿಯಂತೆ –

ಹಾಳಾದ ಜೀವವು ಏನೇನು ಬಯಸೀತು?
ಈರನಗೆರೆಯಾಚೆ ಮೈಸೂರ ಬೀದೀಲಿ
ಈರುಳ್ಳಿ ಮಾರುವ ಹುಡುಗಿಯ

ಎಂಬ ರೋಮ್ಯಾನ್ಸ್ ಮೈಸೂರವರಿಗಲ್ಲದೆ ಇನ್ಯಾರಿಗೆ ಸೊಗಸೀತು, ಫಲಿಸೀತು? – ಎನ್ನುವ ಹೊತ್ತಿಗೆ ಮುಖಗಳು ಕೆಂಪಾಗುವುವು; ರಕ್ತ ಕಾಯುವುದು. ಕಾದದ್ದು ಬೆಂಗಳೂರು ಮುಖದಲ್ಲಿ ಕಾಣದಿದ್ದರೂ ಮೈಸೂರು ಹುಡುಗರ ಮುಖದಲ್ಲಿ



ಕಾಣುತ್ತಿದ್ದಿತು. ಸದ್ಯ ಲಡಾಯಿ ಕಟ್ಟುತ್ತಿರಲಿಲ್ಲ. ಸೇವಂತಿಗೆ ಹೂವಿನ ರಾಸಿಗಳನ್ನು – ಅದೂ ಏತರ ಮೇಲೆ – ಈಚಲ ಎಲೆಗಳ ಮೇಲೆ ಹಾಕಿಕೊಂಡು ಆಲೂಗಡ್ಡೆ ರಾಸಿ ಹಾಕುವ ಹಾಗೆ ಹಾಕಿ ಮಾರುವ ಮೈಸೂರು ಸೊಗಸು ಬೆಂಗಳೂರಿನಲ್ಲಿ ನಾವು ಮಾಡಬಲ್ಲವೆ? – ಇತ್ಯಾದಿ ಮಾತು ಬೆಳೆದಾಗ, ಕೈ ಕೈ ಮಿಲಾಯಿಸುವುದು ಒಂದು ಮಾತ್ರ ಬಾಕಿ ಉಳಿದಿರುತ್ತಿತ್ತು. ಆದರೆ ಜಗಳ ಕಾದಾಟವಾಗುತ್ತಿರಲಿಲ್ಲ. ಇವೆರಡೂ ಜೀವನದ ಎರಡು ಪ್ರಕಾರಗಳನ್ನು ಮೆರೆಸುತ್ತಿದ್ದ ಕಾರಣ ಪರಸ್ಪರ ಪೂರಕವಾಗಿರುವ ಜೀವನ ರೀತಿಗಳು.

ಬಹುಕಾಲ ಸಂತೆಪೇಟೆಯ ಕೃಷ್ಣರಾವ್ ಹೊಟೇಲಲ್ಲಿ ತಿಂಡಿತೀರ್ಥ ಕೊಡುತ್ತಿದ್ದ ಪದಾರ್ಥಗಳು ಎನಾಮಲ್ ತಟ್ಟೆಗಳಲ್ಲಿ ಕೊಡುತ್ತಿದ್ದರೂ – ಅವು ಅಲ್ಲಲ್ಲಿ ಎನಾಮಲ್ ಹೋಗಿ ನೋಡಲು ಬಹು ಅಸಹ್ಯವಾಗಿರುತ್ತಿದ್ದವು – ಸ್ವಲ್ಪ ಕಾಲದಲ್ಲಿಯೇ ಬೇರೆ ತಟ್ಟೆಗಳನ್ನು ಬಳಸಿ ಬಾಳೆಲೆ ಇಟ್ಟು ಅದರಲ್ಲಿ ಇಡ್ಲಿ ದೋಸೆ ಕೊಡುವ ಏರ್ಪಾಡು ಆರಂಭವಾಯಿತು. ನೂರಡಿ ರಸ್ತೆಯ – ಬೆಂಗಳೂರಲ್ಲಿ ಎಲ್ಲಿದೆ ಒಂದು ಅಂಥದು? – ಅನ್ನಪೂರ್ಣೇಶ್ವರಿ ಲಾಡ್ಜಲ್ಲಿ ಪಾಲ್‌ಘಾಟ್ ಶಂಕರಯ್ಯರ್ ಎಂಬವರು ಬಂದಿದ್ದಾರೆ ನೋಡಿ, ಅಯ್ಯರಾದರೂ ದಟ್ಟಿ ಷರ್ಟ್, ತಲೆ ಮೇಲೆ ಕುಚ್ಚು ಬಿಟ್ಟು ಕಟ್ಟುವ ರುಮಾಲು; ಸ್ವಲ್ಪ ಆಚೆ ಒಬ್ಬರೇ ಒಬ್ಬರು ಗೋವಿಂದರಾಯರು ವಿದ್ಯಾರ್ಥಿಗಳಾಗಿ ಹೋದ ನಮಗೆ ಎದುರು ನಿಂತು ನಮಗೆ ಕೇಳಿದ ಹಾಗೆ ಟೀ ಮಾಡಿ ಕೊಡುತ್ತಿದ್ದವರು. ಆರಡಿ ಮನುಷ್ಯ. ದಪ್ಪವಲ್ಲದಿದ್ದರೂ ಒಳ್ಳೇ ಮೀಸೆ. ಕಚ್ಚೆ ಹಾಕಿ ಪಂಚೆ ಉಟ್ಟುಕೊಂಡಿದ್ದರೂ ಅದನ್ನು ಸ್ವಲ್ಪ ಮೇಲಕ್ಕೆ ಸಿಕ್ಕಿಸಿಕೊಂಡು ಬಂದ ಯಾರಿಗೂ ಬರಿಯ ಅನುಸರಣೆ ಮಾತಾಡದೆ ಆತನು ಒದಗಿಸುತ್ತಿದ್ದ ತಿಂಡಿ ತೀರ್ಥ ಮಾರುತ್ತಿದ್ದರು. ಒಂದು ದಿನ ನಾನೂ ನನ್ನ ಜೊತೆಯ ಇನ್ನೊಬ್ಬ ಸೀತಾರಾಮಯ್ಯನವರೂ ಈ ಊರಲ್ಲಿ ಟೀ ಚೆನ್ನಾಗಿ ಮಾಡಿಕೊಡುವ ಹೊಟೇಲು ಯಾವುದಿದೆಯೊ ಎಂದು ಮಾತನಾಡುತ್ತಿದ್ದಾಗ, ಆತನಿಗೆ ಅದು ಕೇಳಿಸಿ ನೀವು ನಮ್ಮ ಅಂಗಡಿಗೆ ಬರುವುದಾದರೆ ನಿಮಗೆ ಹೇಗೆ ಬೇಕೊ ಹಾಗೆ ಟೀ ಮಾಡಿಕೊಡುತ್ತೇನೆ ಎಂದರು. “ಚೂಸಿತುವೇಮ್ರ, ಮೈಸೂರಲೋನಿ ಮಗವಾಡು ಒಕಡು ಉನ್ನಾಡು” ಎಂದು ನುಡಿದ ನನ್ನ ಗೆಳೆಯ ‘ಸುಮಾರು ಈ ಹೊತ್ತಿಗೆ ದಿನಾ ಬರುತ್ತೇವೆ, ಮಾಡಿಕೊಡಿ’ ಎಂದರು. “ನಿಮಗೆ ಯಾವ ಬ್ರ್ಯಾಂಡ್ ಟೀ ಬೇಕು?” “ಚೂಸಿತುವೇಮರ” ಎಂದ ಈತ. ‘ಲಿಪ್ಟನ್ ಹಳದಿ ಲೇಬಲ್ ಅಥವಾ ಹಸಿರು’ ಎಂದೆ. ‘ನಾಳೆಯಿಂದ ಮಾಡಿಕೊಡುತ್ತೇನೆ’ ಎಂದರು ರಾಯರು. ಬೆಂಗಳೂರು ಎಂದಾಗ ಮೈಸೂರಿನ ಈ ತಾರತಮ್ಯ ಏಕೆ? – ಎನ್ನಬಹುದು. ಈ ಎರಡು ಪಟ್ಟಣಗಳ ಜೀವನ ವಿದ್ಯಾರ್ಥಿಗಳಾದ ನಮಗೆ ಸಮಸೇವನೆಯಾದ್ದರಿಂದ ಈ ಮಾತಾಡಬೇಕಿದೆ.

ಬೆಂಗಳೂರಲ್ಲಿ ಹೆಚ್ಚಾಗಿ ಸಾದಾ ದೋಸೆಯ ಅಥವಾ ಸೆಟ್ ದೋಸೆಯ ಬಳಕೆ ಕಡಮೆ. ಮೈಸೂರಲ್ಲಿ ಇದಕ್ಕೂ ನನ್ನ ಸ್ನೇಹಿತರು ವ್ಯಾಖ್ಯಾನ ಮಾಡಿದರು. ಬಾಸ್ವೆಲ್‌ಗೆ ಜಾನ್ಸನ್ ಹೇಳಿದ "It's not that in your miserable island eggs are many but pence are few". ಮೂರು ದಿನಕ್ಕೆ ಹಿಂದೆ ಎನ್. ಎಸ್. ಸುಬ್ಬರಾಯರು ಅದನ್ನು Quantity Theory of Money ಎನ್ನುವುದಕ್ಕೆ ನಿದರ್ಶನವಾಗಿ ಹೇಳಿದ್ದರು. ಮೈಸೂರು ಜನರ ಕೈಯಲ್ಲಿ ಬೆಂಗಳೂರಿನಲ್ಲಿರುವ ಹಾಗೆ 'ಮೆಡ್ರಾಸ'ಲ್ಲಿರುವ ಹಾಗೆ ದುಡ್ಡಿಲ್ಲ. ಸಾದಾದೋಸೆ, ಸೆಟ್‌ದೋಸೆಗೇ ತೃಪ್ತರಾಗಬೇಕು. 'ಏನೋ ಈ ದೋಸೆ ಚೆನ್ನಾಗಿರುವುದಿಲ್ಲವೇನೊ' ಎಂದೆ. 'ಇರಬಹುದು, ನನ್ನ ಕಾರಣ ಇದು, ಎಂದ. ಬೆಂಗಳೂರಿನ ಜನ ಹೆಚ್ಚು ರೂಪಾಯಿಗಳನ್ನು ವೆಚ್ಚ ಮಾಡುವವರು, ಹೊಟೇಲುಗಳಲ್ಲಿ ಕೂಡ ಶ್ರೀಮಂತ ಗುಣವನ್ನು ನಿರೀಕ್ಷಿಸುವವರು ಎಂಬುದು ಆತನ ಮನಸ್ಸು, ನಿಜ. ಇದು ವ್ಯಾಪಾರಸ್ಥಳ, ದೊಡ್ಡ ಸಂಬಳ ತರುವ ಹೆಚ್ಚು ಸಂಖ್ಯೆಯ ಜನ ಇರುವ ಸ್ಥಳ; ಹೆಚ್ಚು ಜನ ಮನೆಗಿಂತ ಹೆಚ್ಚಾಗಿ ಹೊಟೇಲುಗಳಿಗೆ ಹೋಗುತ್ತಾರೆ, ವೆಚ್ಚ ಲಕ್ಷ್ಯ ಮಾಡುವುದಿಲ್ಲ ಎಂಬ ಕಾರಣ ಆತನ ಮನಸ್ಸಿನಲ್ಲಿತ್ತು. ಉತ್ತರ ದೇಶಗಳವರಿಗೆ ನಮ್ಮ ಈ ಚಾಳಿಯನ್ನು ಕುರಿತು ಆಕ್ಷೇಪಣೆ ಉಂಟು. ನಮ್ಮ ಜನ ಮನೆಯಲ್ಲಿ ಎಷ್ಟೇ ಇರಲಿ ಇಲ್ಲದಿರಲಿ, ತಿಂದಿರಲಿ ಬಿಡಲಿ, ಹೊಟೇಲಿಗೆ ಹೋಗುವುದು ಹೆಚ್ಚು ಎಂದು. ಇದು ನಿಜ. ದಿನಾ ಬೇಕು ಬೇಕೆಂದಾಗ ಬಿಸಿಬಿಸಿ ಮಸಾಲೆ ದೋಸೆ, ಹೀರೇಕಾಯಿ ಬೋಂಡಾ, ಬಾದಾಮಿ ಹಲ್ವ ಮನೆಯಲ್ಲಿ ಮಾಡಿಕೊಡುತ್ತಾರೆಯೆ? ಯಾವುದೆಂದರೆ ಅದನ್ನು? – ಎನ್ನುವುದು ಈ ಕಡೆಯ ವಾದ. ಇಂಥ ವಾದಕ್ಕೆ ಇತಿ ಎಲ್ಲಿ, ಮಿತಿ ಎಲ್ಲಿ? ವಾದಕ್ಕೆ ನಿಂತಾಗ ನಮ್ಮನ್ನು ಅದು ಎಲ್ಲಿಗೆ ತೆಗೆದುಕೊಂಡು ಹೋಗುತ್ತದೆ ಎಂಬ ಪರಿವೆ ಇರುವುದಿಲ್ಲ.

* * *

ಈಚೆಗೆ ಬೆಂಗಳೂರಿಗೆ ನೂರಾರು – ನಮಗೆ ದಿಗ್ಭ್ರಮೆ ಉಂಟು ಮಾಡುವಷ್ಟು – ವಿಸ್ತರಣಗಳು ಉಂಟಾಗಿವೆ. ಜನವಸತಿ ಉದ್ದಗಲ ಪೂರ್ವ ಪಶ್ಚಿಮ ಬೆಳೆದಿವೆ. ಈಗಿನ ವೈಭವ ಹೆಚ್ಚು ಉದಾರವಾದದ್ದು. ಅದರಲ್ಲಿಯೂ ಸಿಟಿ–ದಂಡು ಸೇರಿದ ಮೇಲಿನದು ಹೋಗಲಿ, ಭರತ ಖಂಡಕ್ಕೆ ಸ್ವಾತಂತ್ರ್ಯ ಬಂದ ಮೇಲೆ, ಬೆಂಗಳೂರು ಕರ್ನಾಟಕಕ್ಕೆ ರಾಜಧಾನಿಯಾಗಿ ರೂಪಿತವಾದ ಮೇಲೆ, ಇಲ್ಲಿಗೆ ಬಂದು ಸೇರುವ ಜನವರ್ಗ ಅಸಂಖ್ಯಾತ. 3-4 ಲಕ್ಷಕ್ಕೆ ಹೆಚ್ಚಿಲ್ಲದಿದ್ದ ಪಟ್ಟಣದ ಸಂಖ್ಯೆ ಈಗ 16-18 ಲಕ್ಷದವರೆಗೂ ಹೆಚ್ಚಿರುವಾಗ ದಿನಗೆಲಸಕ್ಕಾಗಿ ಚಿಮ್ಮಿ ತೇಲಿ ಬಂದು, ಸಂತೆಗೆಂಬಂತೆ ಬೆಳಗ್ಗೆ ನೆರೆದು ಸಂತೆ ಮುಗಿದಾಗ ತಮ್ಮ ತಮ್ಮ ಊರುಗಳಿಗೆ ಹಿಂದಿರುಗಿ ಖಾಲಿ ಮಾಡುವ ಜನವೇ 2-3 ಲಕ್ಷ ಆಗುತ್ತದೆ. ಇವರಿಗೆಲ್ಲ ಅನ್ನ ನೀರು ವಸತಿ ಬೇಕು.



ಅಷ್ಟಕ್ಕೆ ಇನ್ನೂ ಹೆಚ್ಚು ಏರ್ಪಾಡು, ಸೌಕರ್ಯ ಕಲ್ಪಿತವಾಗಬೇಕಾದರೆ ನಗರ ಜೀವನವ್ಯವಸ್ಥೆ ಮತ್ತಷ್ಟು ದಕ್ಷವೂ ಸೌಕರ್ಯಸಾಧಕವೂ ಆಗಬೇಕು. ಇದಾಗುತ್ತಿದೆಯೆ ಎಂದು ಕೇಳುವವರಿಗೆ ಉತ್ತರ ಹೇಳುವುದು ಕಷ್ಟ. ಜನ ಹೆಚ್ಚಿದ ಸೂತ್ರದಿಂದಲೇ ಸೌಕರ್ಯ, ಸುಖ ಹೆಚ್ಚೀತೆ? ರಾಜಕೀಯ ಹೆಚ್ಚಿದೆ. ನಿತ್ಯಜಗಳ ಕೋಟಲೆ ಸಂಪು ಧರಣಿ ಹೆಚ್ಚಿವೆ. ಮ್ಯುನಿಸಿಪಲ್ ಕಾರ್ಪೊರೇಷನನ್ನು ಓಸರಿಸಿ ಸರ್ಕಾರ ಕಮೀಷನರುಗಳನ್ನು ನಿಯಮಿಸುವುದು ಇವೊತ್ತಿನ ವೈಭವ. ಕಮೀಷನರುಗಳು ಸರ್ಕಾರದ ಅಧಿಕಾರಿಗಳಾಗಿರುವುದರಿಂದ ಜನರ ಪ್ರತಿನಿಧಿಗಳಿಗೆ ಹೊಣೆಗಾರರಾಗಿ ಕೆಲಸ ಮಾಡಬೇಕಿರುವುದಿಲ್ಲ. ಹೇಗೋ ಏನೋ ಕೆಲಸ ಮಾಡಿದರಾಯಿತು. ಇದು ವಿರಸಗಳನ್ನು ಬೆಳಸುತ್ತದೆ. ತುಂಬಾ ವಿಸ್ತಾರಗೊಂಡ ಈ ಊರಿಗೆ ಮೊನ್ನೆ ಮೊನ್ನೆಯವರೆಗೂ ನೀರೊದಗಿಸುವ ಕಷ್ಟ ದೊಡ್ಡದಾಗಿತ್ತು. ಪಟ್ಟಣಕ್ಕೆ ಹೆಸರಘಟ್ಟದ ಕೆರೆ, ದಂಡಿಗೆ ಬಹುಶಃ ಎಲೆ ಮಲ್ಲಪ್ಪನವರ ಕೆರೆ ಇದ್ದವು. ವಿಶ್ವೇಶ್ವರಯ್ಯನವರ ಕೃಪೆಯಿಂದಾಗಿ ತಿಪ್ಪಗೊಂಡನಹಳ್ಳಿಯ ಕೆರೆ ಕಟ್ಟಿ ಸ್ವಲ್ಪ ಕಾಲ ಇಲ್ಲಿನ ನೀರಿನ ಸರಬರಾಜು ಸುಸೂತ್ರವಾಗಿ ನಡೆಯಿತು. ಈ ರಾಕ್ಷಸಾಕಾರದ ಬೆಳವಣಿಗೆಯ ಕಾಲದಲ್ಲಿ ಅದೆಲ್ಲಿ ಸಾಕು? ಅನೇಕ ಬಗೆಯ ಪಾಡು ಪಟ್ಟು ಕಾವೇರಿಗೆ ಸೆರೆ ಹಾಕಿ ಈಚೆಗೆ ಅಲ್ಲಿನ ನೀರು ಬೆಂಗಳೂರಿಗೆ ದೊರೆಯುವಂತಾದುದು ಒಂದು ದೊಡ್ಡ ಸಹಾಯವಾಗಿದೆ. ಒಂದು ಕಷ್ಟ ಮಾತ್ರ ಈ ಸಂಬಂಧದಲ್ಲಿ ಆಯಿತು. ನಮ್ಮೂರ ರಸ್ತೆಗಳು ಬಹುಮುಖವಾದ ಇತಿಹಾಸ ಉಳ್ಳವು. ಸಣ್ಣ ಗಾಡಿಗಳ ಓಡಾಟಕ್ಕೆ, ಎರಡು ಸಣ್ಣ ಮೋಟಾರು ಕಾರುಗಳ ಸಂಚಾರಕ್ಕೆ ಸಾಮಾನ್ಯವಾಗಿ ಮಾಡಿದವು. ದೊಡ್ಡ ಗಾತ್ರದ ಎರಡು ಮೋಟಾರುಗಳು ಒಮ್ಮೆಯೇ ಹೋಗುವುದು ಕಷ್ಟವಾಗುತ್ತಿದ್ದ ರಸ್ತೆಗಳಲ್ಲಿ ಲಾರಿ ಬಸ್ಸು ಸ್ಕೂಟರ್ ಆಟೋ ಬೈಸಿಕಲ್ ತಿರುಗಾಡಬೇಕಾಗಿರುವುದರಿಂದ, ಕ್ಷಣ ಗಂಡ ನಿತ್ಯ ಗಂಡ. ಹಳೇ ರಸ್ತೆಗಳನ್ನು ವಿಸ್ತರಿಸುವ ಯತ್ನ ಕೈಗೊಂಡಿದ್ದಾರೆ. ಹೊಸ ವಿಸ್ತರಣಗಳಲ್ಲಿ ಹೊಸ ರಸ್ತೆಗಳು ಹೆಚ್ಚು ವಿಶಾಲವಾಗಿವೆ. ಆದರೂ ಒಂದು ಶಿಸ್ತು ವಾಹನಗಳವರಲ್ಲಿ, ನಡೆದು ಹೋಗುವವರಲ್ಲಿ ಇನ್ನೂ ಸಿದ್ಧಿಸಿಲ್ಲದ್ದರಿಂದ ಇನ್ನೂ ರಸ್ತೆಯ ಸಂಚಾರ ವ್ಯವಸ್ಥೆ ಒಂದು ಹದಕ್ಕೆ ಬಂದಿಲ್ಲ. ಫುಟ್‌ಪಾತ್‌ಗಳೆಂದೆ : ನಮ್ಮ ಅಕ್ಷರ ಅಥವಾ ಉಚ್ಚಾರ ಪ್ರಪಂಚಕ್ಕೆ ಸಲ್ಲದಿದ್ದ ಅವು ನಮ್ಮ ಭಾಷೆಯಲ್ಲಿ ಪುಟ್ಟ ಪಾತುಗಳು ಆಗಿವೆ. ಹೋಗುವ ಗಾಡಿಗಳಿಗೆ ಮುಖ್ಯ ರಸ್ತೆ ತೆರೆದಿರುವುದೇ ಹೊರತು ಇಕ್ಕಟ್ಟಾದ ಪುಟ್‌ಪಾತುಗಳಲ್ಲಿ ನೂರಾರು, ಸಾವಿರಾರು ಜನ ಶ್ರೀಸಾಮಾನ್ಯರು ನುಗ್ಗಿ ಹೋಗಬೇಕಾಗಿರುತ್ತದೆ. ದಾರಿಯಲ್ಲಿ ಮಲಗಿರುವ ಗೂಳಿಗಳು, ನಾಯಿಗಳ ಬಾಣಂತನ, ಇತರ ಕತ್ತೆಗಳಂತಹ ಶಾಂತಿರಸಪ್ರಧಾನವಾದ ಚತುಷ್ಪಾದಿ ಪ್ರಾಣಿ - ಕೃಷ್ಣಶಾಸ್ತ್ರಿಗಳೆಂದಂತೆ – ಮತ್ತು ಇತರ ಪ್ರಾಣಿಗಳು ಇವುಗಳನ್ನು ತಡೆದುಬಿಟ್ಟರೆ "ಕಿಂ ಬ್ರೂಮೊ ವೈಕೃತಂ ತಸ್ಯ?" ಜೊತೆಗೆ ಎರಡು ಕಡೆ ವಿದ್ಯುಚ್ಛಕ್ತಿಯ ಕಾಮಗಾರಿ, ಟೆಲಿಫೋನ್ ಸಂಪರ್ಕ ಸಾಧನೆ, ನೀರಿನ ಕೊಳಾಯಿಗಳನ್ನು ಹಾಕತಕ್ಕದ್ದು ಮುಂತಾದ ಜನಹಿತ ಕಾರ್ಯಗಳಿಗಾಗಿ ಯಾವ ಯಾವ ರಸ್ತೆಗಳನ್ನು ಹೇಗೆ ಹೇಗೆ ಕತ್ತರಿಸಿ ಹಳ್ಳಕೊಳ್ಳ ಮಾಡಿ ರಸ್ತೆಗಳನ್ನು

ದುರ್ಗಮ ಮಾಡುವ ಮಹಾ ಸನ್ನಿವೇಶ ನಮ್ಮ ಬೆಂಗಳೂರಿನದು. ಇಲಾಖೆಗಳಿಗೆ ಪರಸ್ಪರ ಸಂಪರ್ಕವಿಲ್ಲ, ಹೊಂದಿಕೆಯಿಲ್ಲ. ಒಟ್ಟಿನಲ್ಲಿ ಯೋಜನೆಗಳನ್ನು ಮಾಡಿ ಕೆಲಸವನ್ನು ಹೊಂದಿಸಿಕೊಂಡು ಜನದ ಅನುಕೂಲಕ್ಕೆ ಪ್ರತಿಬಂಧಕವಾಗದಂತೆ ಮಾಡುವ ಕಾಲಕ್ಕೆ ಈ ಯುಗದ ಪ್ರಥಮ ಪಾದ ಮುಗಿಯಬೇಕಾಗುತ್ತದೇನೊ. ಟಾರ್ ಕೆಲಸ, ಸಿಮೆಂಟ್ ಕೆಲಸ, ಕಲ್ಲು ಚಪ್ಪಡಿ ಹಾಕುವ ಕೆಲಸ ಇಲ್ಲದಿದ್ದರೆ ಕಂಟ್ರಾಕ್ಟರುಗಳಿಗೆ ಕೆಲಸ ಎಲ್ಲಿ? ಮರಾಮತ್ ಇಲಾಖೆಗೆ (ಮುನಿಸಿಪಾಲಿಟಿಯದಾಗಲಿ, ಸರ್ಕಾರದ್ದಾಗಲಿ) ಅವಕಾಶವೆಲ್ಲಿ? ಮತ್ತು ನಿರುದ್ಯೋಗ ಸಮಸ್ಯೆಗೆ ಪರಿಹಾರವೆಲ್ಲಿ? – ಎಂಬಂತೆ, ಒಂದೇ ಬಗೆಯ ಉದ್ಯೋಗಗಳಿಗೆ ಕೆಲಸ ಕಲ್ಪಿಸಿಕೊಡುವ ಮಹಾವಕಾಶವೆಲ್ಲಿ ಎಂಬಂತಿರುತ್ತದೆ. ಈ ನಡುವೆ ಹೆಂಗಸರು ಮಕ್ಕಳು ಮುದುಕರು ಸಂಚಾರ ಮಾಡುವುದು ದುಸ್ತರ, ಅಪಾಯಕರ ಎಂಬಂತೆ ಆಗುತ್ತಿದೆ. ಬಹುದೊಡ್ಡ ಆಧುನಿಕ ಪಟ್ಟಣಗಳಲ್ಲಿ ಸಂಚಾರ ವ್ಯವಸ್ಥೆಗೆ ಬಹುಕಾಲದಿಂದ ಅಭ್ಯಾಸಗೊಂಡ ಜನ ಹೆಚ್ಚು ಆಕಸ್ಮಿಕಗಳಿಗೆ ಈಡಾಗದಂತೆ ಒಂದು ಸಣ್ಣ ಬಾಣದ ಗೆರೆ ಹಾಕಿ ಎಲ್ಲರೂ ಕಡ್ಡಾಯವಾಗಿ ಎಡಗಡೆಗೊ ಬಲಗಡೆಗೊ ಸಂಚಾರ ಮಾಡಬೇಕು ಎಂದು ಹಾಕಿದರೆ ತೀರುವ ಏರ್ಪಾಡು ಐದಾರು ಕಡೆ ಸುತ್ತ ನಿಲ್ಲುವ ಪೊಲೀಸ್ ಪೇದೆಗಳ ಅಂಕೆ–ಆತಂಕಗಳಿಗೆ ಒಳಪಟ್ಟು ನಡೆಯಬೇಕಾಗಿರುತ್ತದೆ. ಜೊತೆಗೆ ಹೊಸದಾಗಿ ಕಲಿಯುವವರಿಗೆ ಕಲಿಸುವ ಸಂಭ್ರಮ ಬೇರೆ ಇರುತ್ತದೆ. ಯಾವ ರಸ್ತೆ ಒಂದು ದಿಕ್ಕಿನ ಸಂಚಾರಕ್ಕೆ ಮಾತ್ರ ಮಿತವಾದ ರಸ್ತೆ ಎಂದು ವಾರಕ್ಕೆ ಎಂಟು ಸಲ ಮಾರ್ಪಡುವ ಏರ್ಪಾಡಿಂದ ಹೇಗೆ ಹೋಗುವುದೆಂಬ ದಿಗ್ಭ್ರಮೆ ವಾಹನಗಳವರಿಗೆ ಬರುತ್ತಿರುವಾಗ, ಈ ಕಷ್ಟ ಅನುಭವದಿಂದ ಅರ್ಥ ಮಾಡಿಕೊಳ್ಳಬೇಕಾದ್ದು. ಸಂಚಾರದ ಮತ್ತು ವಾಹನ ನಿಯಮಗಳನ್ನು ಪಾಲಿಸುವುದರಲ್ಲಿ ತೋರಿಸುವ ವೈಖರಿ ಮೋಜಿನದು. ಯಾರಿಗೂ ಊರಲ್ಲಿ ಒಂದು ವೇಗದ ಮಿತಿಯನ್ನು ಪಾಲಿಸಬೇಕು ಎಂಬ ಮನಸ್ಸಾಗಲಿ, ಶಿಸ್ತಾಗಲಿ ಇಲ್ಲ. ಮುಂದೆ ಹೋಗುವವರನ್ನು ದಾಟಿಕೊಂಡು ಹೋಗಬೇಕು ಎಂಬ ಆತುರ, ಆವೇಶ. ದೊಡ್ಡ ಗಾಡಿಗಳ ನಡುವೆ ಮೂರು ಕಾಲಿನ ಆಟೋಗಳು, ಬಗೆಬಗೆಯ ಸ್ಕೂಟರ್‌ಗಳು, ಬೈಕುಗಳು ತೂರಿ ಹಾದು ಹೋಗಬೇಕೆನ್ನುವ ಕಷ್ಟ, ಅನನುಕೂಲ ಅಪಾರ. ಕೈತೋರಿಸಿ, ಸೂಚನೆಯೊ ಬೆಳಕೊ ಹಾಯಿಸಿ, ಬೆಲ್ಲು ಹೊಡೆಯಿರಿ-ಎಂಬುದನ್ನು ಯಾರು ಕೇಳಬೇಕು? ನಡೆಯುವವರ ಹಿಂದೆ ಮಾತ್ರ ಹಾರ್ನ್ ಊದಿ ಅವರನ್ನು ಇನ್ನೂ ದಿಕ್ಕೆಡಿಸಬಲ್ಲ ಸಾಹಸ ಅನೇಕ ವೇಳೆ ಕಾಣುತ್ತದೆ. ರಸ್ತೆಗಳು ಎಲ್ಲ ಕಡೆಯಲ್ಲಿಯೂ ಸಮನೆಲಸಿನಲ್ಲಿ ಇರುವುದರಿಂದ ನೆಚ್ಚಿಲ್ಲದಿರುವಾಗ ಗಾಡಿಗಳ ಗಾಲಿಗಳು ಎಗರಿ (skid) ಸ್ವಲ್ಪ ಸ್ಥಳ ತಪ್ಪಿದರೆ ತುಂಬ ಪಕ್ಕದಲ್ಲಿ ನಡೆದುಹೋಗುವವನ ಜೀವಕ್ಕೆ ಅಪಾಯ ತಪ್ಪಿದ್ದಲ್ಲ. ಸಾಮಾನ್ಯವಾಗಿ ಎಡಕ್ಕೆ ತಿರುಗಬೇಕು, ಒಂದು ವರ್ತುಲವೊ ಚೌಕವೊ ಕಂಬವೊ ರಸ್ತೆಗಳು ಸೇರುವಲ್ಲಿ ಮಾಡಿದ್ದರೆ ಅದನ್ನು ಸುತ್ತಿ ಹೋಗಬೇಕು ಎಂಬ ಸೌಮನಸ್ಯವಿಲ್ಲ. ಮೋಟರು ವಾಹನಗಳಿಗೆ ಅರೆ ನಿಮಿಷದ ಕಷ್ಟವಿಲ್ಲ, ತಿರುಗುವಾಗ ಸುತ್ತಬೇಕಾದಲ್ಲಿ



ಸುತ್ತಿ ನಡೆಯುವವರ ಗಮನವನ್ನು ನಿರೀಕ್ಷಿಸಿ ಹೋಗಬೇಕೆಂಬ ಹಂಗೇನು? ಆವರೆಗೆ ರಸ್ತೆಯಲ್ಲಿ ಹೋಗುತ್ತಿದ್ದ ನಾಲ್ಕೈದು ಜನ ಮಕ್ಕಳೊ ಇತರರೊ ಒಂದೇ ದಿಕ್ಕಿನಲ್ಲಿ ಹೋಗುತ್ತಾರೆ ಎಂದು ನಿರೀಕ್ಷಿಸಿದ ಚಾಲಕನು ಬೇಗ ಒಂದು ಕೊಂಬು ಊದಿದರೆ ಈ ಕಡೆ ಅಷ್ಟು ಜನ, ಆ ಕಡೆ ಅಷ್ಟು ಜನ ಹೋಗುವುದು ರೂಢಿ. ನನಗನ್ನಿಸುತ್ತದೆ: ವಾಹನಗಳು ಕಡ್ಡಾಯವಾಗಿ ಎಡಕ್ಕೆ ಹೋಗುವುದೆಂದು ಗೊತ್ತು ಮಾಡಿ ನಡೆಯುವವರು ತಮ್ಮ ಬಲಗಡೆಗೆ ನಡೆಯಬೇಕು ಎಂಬ ಒಂದು ಸಣ್ಣ ನಿಯಮವನ್ನು ಮಾಡಿದರೆ, ನಡೆಯುವವರಿಗೆ ಮುಂದಿನಿಂದ ಬರುವ ಅಪಾಯ ಕಾಣುತ್ತಿರುತ್ತದೆ. ಹಿಂದಿನಿಂದ ಬರುವವರು ನಿರಪಾಯವಾಗಿ ಹೋಗುತ್ತಾರೆ. ಇಲ್ಲ. ಯಾವುದೋ ರೂಲು; ಎಂದಿನಿಂದಲೊ ಬರುತ್ತಿದೆ. ಆಲೋಚನೆ ಮಾಡಿದರೆ ತಾನೆ ಕಷ್ಟ? ಬದಲಾವಣೆ? ಬಸ್ಸುಗಳಲ್ಲಿ ಇಂಥ ಕಡೆ ಹೋಗುವ, ಇಂಥ ನಂಬರಿನ ಬಸ್ಸು ಎಂದು ಸೂಚಿಸುವಾಗ, ಒಳಗೆ ಹಿಂದಿನಿಂದ ಬೆಳಕು ಹಾಯಿಸಿದರೆ ಅದು ಸ್ಫುಟವಾಗಿ ಕಾಣುತ್ತದೆ. ಅಕ್ಷರದ ಮುಂದೆ ತೂಗಿ ಹಾಕಿದರೆ ಇದ್ದದ್ದು ಅಸ್ಪಷ್ಟವಾಗುತ್ತದೆ. ಇಷ್ಟೂ ತಿಳಿಯಲಾರದೆ ಎಂದೀರೇನೊ. ನಾವು ಮಾಡುತ್ತಿರುವುದೇ ಸರಿ ಎಂದು ಮಾಡುವವರು ತಿಳಿದಿರುವಾಗ, ಸರಿ–ತಪ್ಪುಗಳ ಯೋಚನೆ ಯಾರಿಗೆ ಏಕೆ? ಪೊಲೀಸಿನವರಿಗೆ ಫಿರ್ಯಾದು ಮಾಡಿ ಎಂದಾಗ, ಪೊಲೀಸರು ನೆರವಿಗೆ ಬಂದಾರೆಂಬ ನಂಬಿಕೆ ಎಲ್ಲರಿಗೂ ಇಲ್ಲ. ದರ ಹೆಚ್ಚು ಕೇಳುತ್ತಾರೆ ಆಟೋ ಚಾಲಕರು ಎಂದು ಹೇಳಿದರೂ ಕೇಳಿದರೆ ಕೇಳಿದರು, ಬಿಟ್ಟರೆ ಬಿಟ್ಟರು. ಬರೆದುಕೊಳ್ಳುವುದು ಅಪರೂಪ. ಸಣ್ಣ ದೂರಕ್ಕೆ ಬಾರೆಂದು ಕರೆದರೆ ಸ್ಟೇಷನ್‌ನಿಂದ, ಮಾರ್ಕೆಟ್‌ನಿಂದ ವಾಹಕರು ಬಾರರು. ಇಷ್ಟವಿಲ್ಲದಾಗ, ನಿಯಮ ಪಾಲನೆಯ ಉದ್ದೇಶದಿಂದ ಇದು ರಿಪೇರಿಯಾಗುತ್ತದೆ ಎನ್ನುತ್ತಾರೆ. ಬರಿಗೈಯಲ್ಲಿ ಹೋಗುತ್ತಿರುವವರು ಕರೆದರೆ ಅವರಿಗೆ ಗೌರವವಿಲ್ಲ. ನೀವು ಒಬ್ಬರೇ ಹೋದಿರಿ, ನಡುವೆ ಯಾವನೇ ಪೊಲೀಸಿನವನು ಬಂದು ಜೊತೆಯಲ್ಲಿ ಕುಳಿತುಕೊಳ್ಳುತ್ತಾನೆ. ಗಾಡಿಯನ್ನು ಗೊತ್ತು ಮಾಡಿಕೊಂಡಿದ್ದ ನಿಮ್ಮನ್ನು ಕೇಳಬೇಕು ಎಂಬ ಮರ್ಯಾದೆ ಚಾಲಕನಿಗಾಗಲಿ ಪೊಲೀಸಿನವನಿಗಾಗಲಿ ಇಲ್ಲ. ಬೇರೆ ಊರುಗಳಲ್ಲಿ ಸ್ಥಿತಿ ಇನ್ನಷ್ಟು ಮೇಲಾಗಿರಬಹುದು, ಬೀಳಾಗಿರಬಹುದು. ಜನಸಾಂದ್ರತೆ ಹೆಚ್ಚಾಗಿರುವ ಬೆಂಗಳೂರಲ್ಲಿ ಈ ಕಷ್ಟ ಹೇಳತೀರದು. ಸಣ್ಣ ದೂರಕ್ಕೆ ಹೋಗುವಾಗ ಇನ್ನೊಂದು ಸಂದರ್ಭ ಬರುವುದುಂಟು; 'ಅವನು ಕೇಳುವಷ್ಟು ಕೊಡಿ ಸ್ವಾಮಿ, ಅವನೂ ಬದುಕಬೇಡವೆ?' ಎಂದು ಚಾಲಕನ ಪಕ್ಷವನ್ನೇ ಪೊಲೀಸರು ವಹಿಸುವುದೂ ಅಥವಾ 'ಇಷ್ಟು ಸಣ್ಣ ದೂರಕ್ಕೆ ಗಾಡಿ ಏಕೆ ಮಾಡಿದಿರಿ' ಎನ್ನುವುದೂ ಸಾಮಾನ್ಯ. ರಸ್ತೆಯಲ್ಲಿರುವ ಪೊಲೀಸನನ್ನು ಕೇಳಿದರೆ 'ನಾನು ಸಂಚಾರದ ಪೊಲೀಸ್ ಅಲ್ಲ' ಎನ್ನುವುದೊ 'ಸ್ಟೇಷನ್‌ಗೆ ಹೋಗಿ ದೂರು ಕೊಡಿ' ಎನ್ನುವುದೊ ವಾಡಿಕೆ. ಜನದ ಜೀವ, ದೇಹದ ರಕ್ಷಣೆ ಇಂಥ ಸಂದರ್ಭಗಳಲ್ಲಿ ಕಷ್ಟವೆಂದು ಹೇಳಬೇಕಾಗಿಲ್ಲ.

ರಸ್ತೆಗಳು ವರ್ಷ ವರ್ಷವೂ ಹೆಚ್ಚು ಕಡಮೆಯಾಗುತ್ತಲೇ ಹೋಗುವುದು ನಮ್ಮೂರಿನ ಇನ್ನೊಂದು ವಿಶೇಷ. ಹಳೆ ಮನೆಗಳು ಹಿಂದಿನ ಕಾಲದಲ್ಲಿ ರಸ್ತೆಗಿಂತ ಎತ್ತರವಾಗಿರುತ್ತಿದ್ದವು. ಕ್ರಮ ಕ್ರಮವಾಗಿ ರಸ್ತೆ ಈಗ ಎತ್ತರವಾಗುತ್ತ ಬಂದು ತಗ್ಗುತ್ತಿವೆ. ನೋಡುವ ನೋಟ ವಿಕಾರಗೊಳ್ಳುತ್ತದೆ ಎಂಬುದು ಮುಖ್ಯವಲ್ಲ. ಊರಿನ ಕಸ ಎಲ್ಲ ಮನೆಗೆ ಗುಡಿಸಿ ಬೀಸಿ ಬರುವುದು, ಹೊಗೆಗಳು ಹಾಯುವುದು ಸಾಮಾನ್ಯ. ರಸ್ತೆಗಳ ಪಕ್ಕದಲ್ಲಿ ಹಾಕಿರುವ ಕೊಳೆ ನೀರಿನ ಪೈಪುಗಳು ಬಹುಕಾಲದಿಂದ ನಟ್ಟವು. ಹಳೆಯ ಮನೆಯ ಬಚ್ಚಲು ನೀರು ಅವುಗಳ ಎತ್ತರಕ್ಕೆ ಏರಿಹೋಗುವ ಹಾಗಿಲ್ಲ. ಮಳೆಗಾಲದಲ್ಲಂತೂ ಈ ರಸ್ತೆಯ ನೀರು, ಹೊರಗಿಂದ ಹರಿದು ಬರುವ ನೀರು ಈ ಬಚ್ಚಲುಗಳಿಂದ ಮನೆಯೊಳಕ್ಕೇ ಸಂಚಾರ ಮಾಡುತ್ತದೆ. ಮಳೆ ಬಂದಾಗ ಇದರ ಕಷ್ಟ ಎಷ್ಟು ದಾರುಣವಾದುದು ಎಂದು ಕಂಡೀತು. ಬೆಂಗಳೂರು ಒಂದು ಎತ್ತರದಲ್ಲಿ High Grounds : ಸಮುದ್ರ ಮಟ್ಟಕ್ಕಿಂತ 3000–3200 ಅಡಿ ಎತ್ತರವಾಗಿದೆ ಎನ್ನುತ್ತಾರೆ. ಎಂದರೆ ತಿರುಪತಿ ಬೆಟ್ಟದಷ್ಟು ಎತ್ತರ. ನಾವು ತಿಮ್ಮಪ್ಪನಿಗೆ ಸಮರು ಎಂದುಕೊಳ್ಳುವ ಹೆಮ್ಮೆಯವರಾಗಿರಬಹುದು. ಆದರೆ ಊರಿನ ಬಹುಭಾಗ ತುಂಬಾ ತಗ್ಗಿನಲ್ಲಿರುತ್ತವೆ. ಪೇಟೆಯ ಭಾಗಗಳಾದ ಬಳೇಪೇಟೆ, ಚಿಕ್ಕಪೇಟೆ, ಮಾರ್ಕೆಟ್ ಮುಂದಿನ ಭಾಗ ಇವುಗಳ ದುಃಸ್ಥಿತಿ, ಕೊಳಚೆ ನೋಡಬೇಕು. ನಮ್ಮ ಊರಲ್ಲಿ ಯಾರಾದರೂ ಇಂಜಿನಿಯರ್ ಇದ್ದಾರೆಯೆ? ಅವರ ಸಲಹೆ ಸಲ್ಲುತ್ತದೆಯೆ? – ಎಂಬುದರ ಪರ್ಯಾಲೋಚನೆ ಯಾರಿಗೂ ಬಾರದೊ ಏನೊ. ಈಗಂತೂ ರಸ್ತೆಯ ಪಕ್ಕದ ಹೊರ ಚರಂಡಿಗಳೆಲ್ಲ ಮುಚ್ಚಿರುತ್ತವೆಯಾಗಿ ಮಳೆಯ ನೀರು ರಸ್ತೆಯಲ್ಲಿ ಹತ್ತು ನಿಮಿಷದಲ್ಲಿ ಮೊಳಕಾಲಿನ ವರೆಗೂ ಏರುತ್ತದೆ. ಮನೆಗಳ ಕಾಂಪೌಂಡುಗಳು ಕೂಡ ಇವು ಒಳಕ್ಕೆ ಬರುವುದನ್ನು ತಡೆಯುವ ಹಾಗಿಲ್ಲ. ಜೊತೆಗೆ, ಜನ ವಾಸ ಮಾಡುತ್ತಿದ್ದ ಬೀದಿಗಳಲ್ಲಿ ಪ್ರದೇಶಗಳಲ್ಲಿ ಎಲ್ಲೆಲ್ಲಿಯೂ ಗಾಡಿ ಸಂಚಾರ ವ್ಯವಸ್ಥೆಗೆ ಮತ್ತು ಪದಾರ್ಥಗಳ ಸಾಗಣೆಗೆ ಸಂಬಂಧಿಸಿದ ಅಂಗಡಿಗಳಿಗೆ ಅವಕಾಶ ಕೊಡುವುದರಿಂದ, ದಿನ ರಾತ್ರಿ ಆ ಗದ್ದಲ ಉಪಟಳವೇ ಆಗುತ್ತದೆ. ಕಿವಿ ಕರ್ಕಶ ಶಬ್ದಗಳಿಗೆ ಮಂದವಾಗುತ್ತದೆ. ಓದುವವರು, ಕಾಯಿಲೆಯವರು, ವಯಸ್ಸಾದವರು ನೆಮ್ಮದಿಯಿಂದ ಬದುಕುವುದು ಕಷ್ಟವಾಗುತ್ತದೆ. ಲೈಸೆನ್ಸ್, ಪರ್ಮಿಟ್ ಹೇಗೊ ತೆಗೆದುಕೊಳ್ಳುತ್ತಾರೆ. ತೆಗೆದುಕೊಂಡ ಮೇಲೆ ಅವರನ್ನು ಮಾತನಾಡಿಸುವವರು ಯಾರು? ಅವರಿಗೆ ಮುಲ್ಕಿ ಹಕ್ಕುಗಳು ಬರುತ್ತವೆ; ಸ್ವಾತಂತ್ರ್ಯದ ಧಾರಾಳ ಬರುತ್ತದೆ. ಹಣವಂತೂ ಬೇಕಾದಷ್ಟು ಇರುತ್ತದೆ. ಸಾಮಾನ್ಯರು ಅವರನ್ನು ಮಾತಾಡಿಸುವ ಹಾಗಿಲ್ಲ.

ಬೆಂಗಳೂರಿನ ವಿಶೇಷವನ್ನು ಕುರಿತು ಮಾತನಾಡುತ್ತ ಇವನ್ನೇ ಆಡುವುದು ಅನ್ಯಾಯ. ನಮ್ಮೂರಿನ ವಿಶೇಷ ಇಲ್ಲಿನ ಸಿನೆಮಾಗಳು, ಹೊಟೇಲುಗಳು,ಸೆಲೂನುಗಳು, ಅಗಸರವು, ಕೇಶಾಲಂಕರಣಗಳವು. ಈಗಂತೂ ಎಲ್ಲೆಲ್ಲಿಯೂ ಎರಡು ಫರ್ಲಾಂಗ್– ಮೂರು ಫರ್ಲಾಂಗ್‌ಗೆ ಒಂದರಂತೆ ಬಾರುಗಳು. ಜನಗಳ ಕೈಯಲ್ಲಿ ಹೆಚ್ಚು ಹಣ



ಓಡಾಡುವುದರಿಂದ ಸಾರಾಯಿ ಹೆಂಡ ಕುಡಿಯುವವರ ಸಂಖ್ಯೆ ಕಡಮೆಯಾಗುತ್ತಿದೆ, ವಿದೇಶಿ ದ್ರಾವಕಗಳ ಸೇವನೆ ಹೆಚ್ಚಾಗುತ್ತಿದೆ. ಅಥವಾ, ಎರಡೂ ಹೆಚ್ಚಾಗುತ್ತಿದೆ ಎನ್ನೋಣವೆ? ಕುಡಿಯುವುದು, ತಿನ್ನುವುದು ಇಂದಿನ ಫ್ಯಾಷನ್. ಯಾವ ವ್ಯಾಪಾರ, ಸಲಹಾ ಮಂಡಲಿ ಎಂದಾಗಲೂ ಇವುಗಳ ಸೇವನೆ ಒಂದು ವಿಲಾಸ. ಅದಿಲ್ಲದವನು ನಾಗರಿಕನೇ ಅಲ್ಲ. ಕಷ್ಟ ಏನೆಂದರೆ ಸಾಮಾನ್ಯ ಸಂಪಾದನೆ ಇರುವ ಜನ ಕೂಡ ಮಧ್ಯಾಹ್ನ 2-3 ಗಂಟೆಯ ಕಾಲದಲ್ಲಿ – ಹೈಸ್ಕೂಲು ಹುಡುಗರು, ಕಚೇರಿಗಳಲ್ಲಿ ಕೆಲಸ ಮಾಡುವ ಹೆಣ್ಣು–ಗಂಡು ಕೂಡ – ಈ ಪಾನಕಗಳಿಗೆ ಮನಸ್ಸು ತೆರುತ್ತಿರುವುದು ಹಳೆಯ ಕಾಲದ ನನ್ನಂಥವರಿಗೆ ವ್ಯಸನಕರವಾಗುತ್ತಿದೆ. ಸಂಪಾದನೆಯಲ್ಲಿ ಬಹುಭಾಗ ಇದಕ್ಕೆ ವೆಚ್ಚವಾಗುತ್ತಿದ್ದರೆ ಮನೆಗೆ ಕೊಂಡುಹೋಗುವುದೆಷ್ಟು? ನಾಳೆ ಇವರ ಗತಿ ಏನು? ಅದರಿಂದ ಸುಖ, ಶಾಖ, ಮದ ಮಾತ್ರವಲ್ಲ, ಇನ್ನೇತೇತಕ್ಕೊ ಇದು ನಡಸುತ್ತದೆ. ಹೊಟೇಲುಗಳು, ಮೋಟಾರು ಕಾರುಗಳು, ಬಾರುಗಳು, ಡಾಕ್ಟರುಗಳು, ಪೆನ್ಸಿಲಿನ್ ಚುಚ್ಚುಮದ್ದು, ನಿರೋಧ್ ಇತ್ಯಾದಿಗಳ ಸೌಕರ್ಯ ಬೆಳೆದು ಬಂದಿರುವುದರಿಂದ ಜನರ – ಎಂದರೆ ಗಂಡು-ಹೆಣ್ಣಿನ – ಸಂಗಾಪೇಕ್ಷೆ ದುರ್ಮಾರ್ಗಕ್ಕೆ ತಿರುಗುವ ಅವಕಾಶ ಹೆಚ್ಚುತ್ತಿರುವುದಂತೂ ರಾಷ್ಟ್ರದ ಆರೋಗ್ಯ ದೃಷ್ಟಿಯಿಂದ ಅತ್ಯಂತ ಕಳವಳವನ್ನುಂಟು ಮಾಡುವ ಸಂಗತಿಯಾಗಿದೆ. ನೀತಿ ಹೋಗಲಿ, ಯಾರಿಗೆ ಬೇಕು? ಯಾವುದರ ಭೀತಿ? ದೇವರೆ? ಸ್ವರ್ಗದ ಆಸೆ, ನರಕದ ಭೀತಿಯೆ? ನಾಲ್ಕು ಜನ ಏನೆಂದಾರೊ ಎಂದೆ? ಧರ್ಮಸಾಕ್ಷಿಯಾದ ಅಂತರಂಗ ವ್ಯಾಪಾರವೆ? ಇಂದು ಯಾವುದು ಯಾರನ್ನು ತಡೆಯಬಲ್ಲದು? ಎಲ್ಲರೂ ಸ್ವತಂತ್ರರು, ಸಮಾನರು. ಯಾರನ್ನು ಯಾರು ಮಾತಾಡಿಸುವವರು? ಯಾರು ಕೇಳುತ್ತಾರೆ? ಏಕೆ ಕೇಳಬೇಕು? 'ನನ್ನ ಬುದ್ಧಿ, ನನ್ನ ಮೈ, ನನ್ನ ಎದುರಿಗಿರುವ ಬಯಲು, ನಾನು ಸ್ವತಂತ್ರ' ಎಂಬ ಸ್ವತಂತ್ರವಿಹಾರದಲ್ಲಿ, ಅನಧೀನ ವೃತ್ತಿಯಲ್ಲಿ ಬದುಕು ವಿಚಿತ್ರವಾಗಿ ಬೆಳೆಯುತ್ತಿದೆ.

ಕೆಲಸಕ್ಕೊ ಕಾಲೆಜಿಗೊ ಹೋಗುತ್ತೇವೆಂದವರು ಇನ್ನಾರ ಜೊತೆಯಲ್ಲಿಯೊ ಹೋಗಿ ಸಂಜೆವರೆಗೂ ಇದ್ದು ದೇಹದ ತೃಪ್ತಿಯನ್ನು ಪಡೆದುಕೊಂಡು ಸಂಜೆಗೆ ಮನೆಗೆ ಬರಬಹುದು. ಹಳ್ಳಿಗಳಲ್ಲಿ ಹಿಂದಿನ ಕಾಲದಲ್ಲಿ ಈ ಸೌಲಭ್ಯ, ಅವಕಾಶ ಕಡಮೆಯಾಗಿತ್ತು. ಮನುಷ್ಯ ಸ್ವಭಾವ ಪೂರ್ತಿಯಾಗಿ ಬದಲಾಗುವುದು ಶಕ್ಯವಿಲ್ಲ. ಯಾವುದೂ ಹೆಚ್ಚುವುದು ಕಡಮೆಯಾಗುವುದು ಅವಕಾಶಗಳೂ ಪ್ರಚೋದನೆಗಳೂ ಹೆಚ್ಚಾದಂತೆಲ್ಲ ಪ್ರಮಾಣದಲ್ಲಿ ಮಾರ್ಪಡುತ್ತದೆ. ಉದ್ಯೋಗದ ಅವಕಾಶಗಳು ಹೆಚ್ಚಿವೆ; ಸಂಬಳ ಸಾರಿಗೆ ಹೆಚ್ಚಿವೆ; ಸುಖಸಂಪತ್ತಿಗಳ ವೈವಿಧ್ಯ ಹೆಚ್ಚಿದೆ. ಬೇಕಾದ ಅನುಕೂಲತೆಗಳಿವೆ. ಯಾರು ಯಾರನ್ನೂ ಹೇಗೂ ನಿರ್ಬಂಧಪಡಿಸಲಾಗುವುದಿಲ್ಲ. ತಮ್ಮ ಮೇಲೆ ತಾವೇ ನಿಯಮಗಳನ್ನು ಹಾಕಿಕೊಂಡು ನಡೆದರೆ ತಾನೆ ಮೇಲ್ಪಾಡು ಶಕ್ಯ? ಶುಚಿ ಜೀವನ ಬೆಳೆಯುವುದು?

ಹೊಟೇಲುಗಳೆಂದರೆ : ಬೆಂಗಳೂರಲ್ಲಿ ಇರುವಷ್ಟು ಹೊಟೇಲ್ ಸೌಕರ್ಯ

ಬಹುತರ ಸುತ್ತಮುತ್ತಲಿನ ಅನೇಕ ಪ್ರದೇಶಗಳಲ್ಲಿ ಇಲ್ಲ. ನಮ್ಮ ರಾಜ್ಯದಲ್ಲಂತೂ ಇಲ್ಲ. ಬಗೆಬಗೆಯ ಶಾಖಾಹಾರಿ ಮಾಂಸಾಹಾರಿ ಹೊಟೇಲುಗಳಿವೆ. ಕೇವಲ ತಿಂಡಿ ತೀರ್ಥಗಳಿಗೆ ಮಿತವಾದವಿವೆ. ದಿನಕ್ಕೆ 5 ರೂ. ಇಂದ ಹಿಡಿದು 110-120 ರೂ.ಗಳವರೆಗೂ ಬಾಡಿಗೆ ಎತ್ತುವ ಹೊಟೇಲುಗಳಿವೆ. ಕೈಯಲ್ಲಿ ದುಡ್ಡಿದ್ದರಾಯಿತು. ಅಥವಾ ಯಾರೊ ಮೆಚ್ಚುವುದಾದರಾದೀತು. ಆ ಕಾಲದಲ್ಲಿ ಇಂದ್ರನನ್ನು ಕಂಡು ಅಹಲ್ಯೆ ಮೋಹಗೊಂಡಳು. ಈಗಿನ ಕಾಲದ ಇಂದ್ರರಿಗೆ ಮೋಟಾರ್ ಕಾರ್, ಒಡವೆ ವಸ್ತ್ರ ಬೇಕಾದಂತೆ ಖರ್ಚು ಮಾಡುವ ಸಂಪತ್ತಿ ಇದ್ದರಾಯಿತು; ಡಾಕ್ಟರುಗಳಿದ್ದಾರೆ, ಆಸ್ಪತ್ರೆಗಳಿವೆ; ಮನಸ್ಸಿನ ಧಾರಾಳವಿದೆ; ನೀತಿ ನಿಯಮಗಳ ಅಂಕೆ ಶಂಕೆ ಇಲ್ಲ. ಕರ್ತವ್ಯ ಬುದ್ಧಿ ಯಾವಾಗಲೂ ನಿರ್ಬಂಧಪ್ರಿಯವೇ: ಯಾರಿಗೆ ಬೇಕು? ಹೊಟೇಲುಗಳಲ್ಲಿ ನಮ್ಮ ಕಡೆಯವು, ಉತ್ತರದವು, ಪಾಶ್ಚಾತ್ಯ ಅಥವಾ ವಿದೇಶಿ ಪರಿಕರಗಳಿರುವುವು ಎಲ್ಲವೂ ಉಂಟು. ಹಿಂದಿನ ಕಾಲದಲ್ಲಿ ಶಕ್ಯವಾಗದಿದ್ದ ಊಟ ಉಪಚಾರಗಳು ಕೇಳಿದಾಗ ದೊರಕುತ್ತವೆ. ನಾಳೆಗೆ ಗತಿ ಏನು, ನನಗೆ – ಮನೆಯ ಇತರರಿಗೆ ಹೇಗೆ? ಎಂಬ ಯೋಚನೆ ಕೂಡ ಕಡಿವಾಣವೆ. ನಾಳೆಯದು ನಾಳೆಗೆ: ನಾವು ಇರುತ್ತೇವೊ, ಇಲ್ಲವೇ ಇಲ್ಲವೊ, ಇವೊತ್ತಿದ್ದುದು ಬಂತು ಎಂಬ ಭಾವ – ರಾಜಕೀಯ, ಲೌಕಿಕ ಆವರಣದಲ್ಲಿ ಬಲಿಯುತ್ತಿರುವ ಸನ್ನಿವೇಶಗಳು ಇಂಥ ಪರಿಸ್ಥಿತಿಯನ್ನು ಪೋಷಿಸುವಂತಿವೆ. ಯಾರು ಎಲ್ಲಿಗೂ ಹೋಗಬಹುದು, ಏನೂ ಮಾಡಬಹುದು; ಬೇಕಾದ್ದು ನುಡಿಯಬಹುದು, ಬೇಕಾದ ರೀತಿ ಸಂಪಾದನೆ ಮಾಡಿಕೊಳ್ಳಬಹುದು. ಬಹುಗಮನದ ಕ್ರಿಯಾಸ್ವಾತಂತ್ರ್ಯ ಹೆಣ್ಣಿಗೆ ಗಂಡಿಗೆ ಸಮಾನವಾಗಿದೆ. ಇಹಪರಗಳ ಯೋಚನೆ ಪ್ರಾಚೀನ ಪ್ರಾರಬ್ಧ ಎಂಬಂತಹ ಮನೋಭಾವ ಬೆಳೆಯುತ್ತಿರುವಾಗ ಜೀವನದ ಪ್ರಪಂಚ ವಿಸ್ತಾರವಾಗಿ ತೆರೆದಿರುತ್ತದೆ. ಇದಕ್ಕೆ ಎಲ್ಲೆ ಇಲ್ಲ, ಸೀಮೆ ಇಲ್ಲ. ಟಾಗೋರರು ಒಂದು ಸಂದರ್ಭದಲ್ಲಿ ಹೇಳಿದಂತೆ, stretches beyond the infinite prolongation of Railway lines ಎಂಬಂತೆ. ಒಂದು ರೀತಿ ನೋಡಿದರೆ ಇದು ರೋಮಾಂಚಕಾರಿ ಆವರಣ. ಸಾಹಸಗಳಿಗೆ ಫಲವತ್ತಾದ ಭೂಮಿ. ಮನೆ ಹೊರಗೆ ಹಾಕಿದರಾಯಿತು. ಸಮಾಜಭ್ರಷ್ಟರೆಂದರೆ ಲೆಕ್ಕವಿಲ್ಲ. ಧರ್ಮದ ಆಲೋಚನೆ, ಅಡ್ಡಿ ಆತಂಕ ಇಲ್ಲ. ಈ ಪರಿಸ್ಥಿತಿ ಬೇರೆ ದೇಶಗಳ ಮಹಾಪಟ್ಟಣಗಳಲ್ಲಿ ಇತ್ತೆಂದೂ ಓದಿದ್ದೇವೆ. ನಮ್ಮಲ್ಲಿ ಈ ಅನಿರ್ಬದ್ಧ ವ್ಯಾಪಾರ ಕಾಣುತ್ತಿರಲಿಲ್ಲ. ನಮ್ಮ ಜನ conservative ಆಗಿತ್ತು. ಹೊಸ ಆವರಣ ಇದನ್ನೆಲ್ಲ ಬದಲು ಮಾಡಿದೆ.

ಇನ್ನು ಸಿನೆಮಾಗಳು: ಇಲ್ಲಿನಷ್ಟು ಸಂಖ್ಯೆಯ ಮಂದಿರಗಳು ಎಷ್ಟು ವಯಸ್ಸಿನ ಎಷ್ಟು ಮಟ್ಟದ ಜನಕ್ಕೆ ವಿನೋದ ವಿಹಾರಗಳ ಅವಕಾಶವನ್ನು ಕಲ್ಪಿಸುತ್ತಿವೆಯೆಂದರೆ, ಒಂದೊಂದು ಮಂದಿರದ ಎದುರಿಗೂ ಮೂರು ಗಂಟೆ, ನಾಲ್ಕು ಗಂಟೆ ಕ್ಯೂನಲ್ಲಿ ಕಾದು 2-3ರೂ.ಗಳ ರುಸುಮು ಕೊಟ್ಟು ಟಿಕೆಟ್ ಕೊಳ್ಳುವ ದೃಶ್ಯ ಈ ಜನಕ್ಕೆ ಹೊಟ್ಟೆಗೆ



ಬಟ್ಟೆಗೆ ಏನು ಕಷ್ಟವಿರಬಲ್ಲದು ಎಂದು ಯಾರೂ ಕೇಳಬಹುದಾಗುತ್ತದೆ. ಚಿತ್ರಗಳೆಲ್ಲ ರೊಮಾನ್ಸ್, ಹುಟ್ಟು ಉಡುಗೆಗಳನ್ನು ತೊಟ್ಟಂತೆ ಎಷ್ಟು ಮೈ ಕಾಣಿಸಿದರೆ, ಆಡಿದರೆ, ಆಕರ್ಷಿಸಿದರೆ ಅಷ್ಟಷ್ಟೂ ಕಾಣಿಸುವ ಸನ್ನಿವೇಶಗಳೇ ಬೆಳೆಯುತ್ತವೆ. ಹೀಗೆ ಸೋತರೆ ತಪ್ಪೇನು? ಮನುಷ್ಯ ದೇಹವಲ್ಲವೆ? ಉಪ್ಪು ಹುಳಿ ಖಾರ ತಿಂದು ಬೆಳೆದ ಮೈ, ಇದಕ್ಕೆ ಆಶೋತ್ತರಗಳಿಲ್ಲವೆ? – ಎಂಬುದನ್ನು ಪ್ರಚಾರ ಮಾಡುವಂತೆ ಒಂದು ದೇಹ–ತೃಪ್ತಿಯ ವಾದ ವಿಶೇಷವಾಗಿ ಬೆಳೆಯಲು ಇವು ಸಹಾಯ ಮಾಡುತ್ತವೆ. ಅವಕ್ಕೆ ತಕ್ಕಂತಹ ಬರವಣಿಗೆ ಲೋಕವೇನೂ ತಿಳಿಯದ ಹೆಣ್ಣು ಮಕ್ಕಳಿಗೆ, ಗಂಡಸರಿಗೆ ಮನೋವಿಕಾರಗಳನ್ನು ಸುಲಭವಾಗಿ ಮಾಡುತ್ತವೆ. ಇನ್ನೊಂದು ಕಡೆ ಕಳ್ಳತನ, ದರೋಡೆ, ಹಿಂಸಾಚಾರದ ಚಿತ್ರಗಳು. ನಮಗಿಂತ ಹೆಚ್ಚಾಗಿ ವಿದೇಶಿ ಚಿತ್ರಗಳು. ಎಷ್ಟು ಬಗೆಯ ಮೋಸ, ಕೊಲೆಯ ಪ್ರಕರಣ : ಅವುಗಳಲ್ಲಿ ಬಳಕೆಯಾಗುವ ತಂತ್ರ, ಸಂಚು! ಕಡೆಯಲ್ಲಿ ಯಾರೊ ಸಿಕ್ಕಿಬಿದ್ದರೂ ತಪ್ಪಿಸಿಕೊಳ್ಳಬಹುದಾದ ಎಷ್ಟು ಸಾವಿರ ಬಗೆಯ ಮಾರ್ಗಗಳ ಪ್ರದರ್ಶನ! ಎಷ್ಟು ಸುಲಭವಾಗಿ ಧನಗಳಿಕೆ ಮಾಡಬಹುದೆಂಬ ಯೋಚನೆ! ಇವು ನಿಜವಾಗಿ ಯುವಕರ ಮನಸ್ಸನ್ನು ಕಲಕುತ್ತಿದೆ, ಕದಡುತ್ತಿದೆ. ಸಾವಿರ ರೂ. ಸಂಪಾದನೆ ಬರುವವನೂ ಪ್ರಾಮಾಣಿಕವಾಗಿ ಮನೆ ಜೀವನವನ್ನು ನಡಸುತ್ತೇನೆಂದರೆ ಏನನ್ನೂ ಉಳಿಸಲಾಗದ, ಸಾಲ ಮಾಡದೆ ಉಳಿಯಲಾಗದ ಪರಿಸ್ಥಿತಿ ಕವಿದಿರುವಾಗ, ಎಷ್ಟು ಸುಲಭವಾಗಿ ಹತ್ತಾರು ಸಾವಿರ ಅಥವಾ ಲಕ್ಷ ಸಂಪಾದಿಸಬಹುದು! ಲೋಕದಲ್ಲೆಲ್ಲ ಇಂಥದು ನಡೆದು ನಡಸುವವರು ಪ್ರಭಾವಶಾಲಿಗಳಾಗಿ ಮೆರೆಯುತ್ತಿರುವಾಗ ನಾವೇಕೆ ನಿರ್ಬಂಧಗಳಿಗೆ ಒಳಗಾಗಬೇಕು? – ಎಂಬ ಮನಸ್ಸು ಹರಡಲು ಇದು ತೆರೆದ ಬಾಗಿಲು. ಇಲ್ಲಿ ತಪ್ಪು–ಸರಿ ಎಂಬ ಯೋಚನೆಯಲ್ಲ ಮುಖ್ಯ; ಜನವರ್ಗದಲ್ಲಿ ನಗರದ ಆಕರ್ಷಣೆಗಳೂ ಆನುಕೂಲ್ಯಗಳೂ ಹೇಗೆ ಈ ಪರಿಸ್ಥಿತಿಯನ್ನು ಉಲ್ಬಣಗೊಳಿಸುತ್ತಿವೆ ಎಂಬುದನ್ನು ವಿವರಿಸುವುದು ಮಾತ್ರ. ಇವುಗಳ ಜೊತೆಗೆ ಇನ್ನೊಂದು ನಡೆಯುತ್ತಿದೆ: ಹುಡುಗರ ಮನಸ್ಸನ್ನು ರಮಿಸುವಂತೆ, ಆಯಾ ಚಿತ್ರಕತೆಯ ಸಂಬಂಧಕ್ಕೆ ಹೊಂದುವಂತೆ ಚೆಲುವರಾದ, ಸಾಹಸಿಗಳಾದ ಜನ ರಕ್ತವನ್ನು ಕುದಿಸುವ ಸನ್ನಿವೇಶಗಳನ್ನು ಸೃಷ್ಟಿಸುತ್ತಾರೆ. ಯಾವ ಹಾಡುಗಳನ್ನು ಹೇಗೆ ಹಾಡುತ್ತಾರೆ ಎಂಬುದೂ, ಅವುಗಳ ಧಾಟಿಗಳು ಪೂರ್ತಿ ಅಸಾಂಪ್ರದಾಯಿಕವಾದ್ದರಿಂದ ಹಿಂದಿನಿಂದ ಬಂದ ರಾಗವೊ ತಾಳವೊ ಅಭಿರುಚಿಯೊ ಪೂರ್ತಿಯಾಗಿ ಸಡಿಲವಾಗಿ, ದೇಸಿಯಲ್ಲದ ರುಚಿಗಳಿಗೆ ಅಪಕ್ವವಾದ ಮನಸ್ಸುಗಳನ್ನು ಸೆಳೆಯುತ್ತಿವೆ. ಹಿಂದಿನ ಕಾಲದಲ್ಲಿ ನಾಟಕದ ಹಾಡುಗಳು ಎಂದಿತ್ತು. ಇಂದು ಸಿನೆಮಾ ಹಾಡುಗಳು ಪ್ರಪಂಚದಲ್ಲೆಲ್ಲ ಹೀಗೇ ಆಗಿದೆ. ಯಾವನೊ ಸಂಗೀತ ನಿರ್ದೇಶಕ ರಾತ್ರಿಯೊ ಹಗಲೊ ಏಕಾಂತದಲ್ಲಿ ಕುಳಿತು ಅಷ್ಟು ಅರಾಬಿಕ್, ದಕ್ಷಿಣದಲ್ಲಿ ಫ್ರೆಂಚ್ ಮಾದರಿಗಳಲ್ಲಿ ಯಾವುದೊ ಒಂದು ತುಣುಕನ್ನು ಆರಿಸಿಕೊಂಡು, ಅದನ್ನು ಹಿಗ್ಗಿಸಿ ಹೊಂದಿಸಿ ಇಲ್ಲಿ ಹಾಡುಗಳನ್ನು ಕಟ್ಟಿ ವಿಚಿತ್ರ ವಿಚಿತ್ರವಾಗಿ ಹಾಡುಗಾರಿಕೆಯನ್ನು ಕಲ್ಪಿಸಿ ನಮ್ಮ ರೀತಿಗಳನ್ನು ಅಪ್ರಿಯ ಮಾಡುತ್ತಿದ್ದಾರೆ. ಇತ್ತಲೊ ಸಾಂಪ್ರದಾಯಿಕ,

ಶಾಸ್ತ್ರೀಯ ಎಂಬವರ ಹಾಡುಗಾರಿಕೆ ಸುತರಾಂ ಯಾವ ಹೊಸ ಅಭಿರುಚಿಗೂ ಇಷ್ಟಾನಿಷ್ಟಗಳಿಗೂ ಬೆಲೆಕೊಡದೆ, ದಿನದಿನಕ್ಕೆ ಹೆಚ್ಚು ಕರ್ಕಶವಾಗಿ, ಹೆಚ್ಚು ಶಾಸ್ತ್ರನಿಷ್ಠವಾಗಿ ಎನ್ನುತ್ತ ದಕ್ಷಿಣಾದಿ–ಉತ್ತರಾದಿ ಪಂಥಗಳನ್ನು ಜಡಗೊಳಿಸುತ್ತಿವೆ. ನಾಳೆಗೆ ಅವು ಒಙಜಾಟು ಕಾಙುಙಿಝ ಮಾತ್ರ ಆಗಿ ಉಳಿದಾವೇನೊ ಎಂಬಷ್ಟು ಸಂಶಯ ಬರುತ್ತವೆ. ಯುವಕರ ಮನಸ್ಸನ್ನು ಆಕರ್ಷಿಸುವ ವಿದ್ಯೆಗಳು ಸಹಜವಾಗಿ ಸಂಪನ್ನಗೊಳ್ಳುವುದು ಪಾರ್ಕುಗಳಲ್ಲಿ, ಸಿನೆಮಾ ಮಂದಿರಗಳಲ್ಲಿ, ನಾಟ್ಯಶಾಲೆಗಳಲ್ಲಿ, ಹೊಟೇಲುಗಳಲ್ಲಿ, ವಿನೋದ ವಿಹಾರಗಳಲ್ಲಿ. 18-25 ವಯಸ್ಸಿನ ಯುವಕ-ಯುವತಿಯರಿಲ್ಲದಿದ್ದರೆ ಯಾವುದು ಏಳ್ಗೆಗೊಂಡೀತು? ಉಳಿದುದಕ್ಕೆ ಪ್ರೋತ್ಸಾಹ ಇಲ್ಲವೆಂದರೆ ಹೇಗೆ ದೊರೆತೀತು?

(ಅಪೂರ್ಣ)

ಪ್ರಾರಂಭ : 29–1–1975

❑



## ಅನುಬಂಧ

## ವಿ. ಸೀ. ಸಮಗ್ರ ಸಾಹಿತ್ಯ ಸಂಪುಟಗಳು
## ('ಸಂಪದ'ದ ಪ್ರಕಟಣೆ)

1. "ಸ್ನೇಹ–ವಿಶ್ವಾಸ" (1990) ಸಮಗ್ರ ಕಾವ್ಯ ಸಂಪುಟ (ಅರವತ್ತು ಅಪ್ರಕಟಿತ ಕವನ ಸೇರಿವೆ) ಡೆಮಿ 704 ಪುಟ, ಪ್ರೊ. ಎಲ್. ಎಸ್. ಶೇಷಗಿರಿ ರಾವ್ ಅವರ ಪ್ರಸ್ತಾವನೆಯೊಡನೆ, ಬೆಲೆ: ಸಾಧಾರಣ ಪ್ರತಿ: ರೂ. 85/– ಅರೆಕ್ಯಾಲಿಕೊ (ಮ್ಯಾಪ್‌ಲಿಥೋ ಕಾಗದ) ಪ್ರತಿ : ರೂ. 120/–

2. "ಸಮಗ್ರ ಲಲಿತ ಪ್ರಬಂಧ ಸಂಪುಟ" (1992) ಡೆಮಿ 375 ಪುಟ, ಪ್ರೊ. ಕೀರ್ತಿನಾಥ ಕುರ್ತಕೋಟಿ ಅವರ ಪ್ರಸ್ತಾವನೆಯೊಡನೆ, ಮರು ಮುದ್ರಣ (2007) ಬೆಲೆ : ರೂ. 150/–

3. "ಸಮಗ್ರ ನಾಟಕ" (1993) ಡೆಮಿ 576 ಪುಟ, ಡಾ. ಎಚ್. ಕೆ. ರಂಗನಾಥ್ ಅವರ ಪ್ರಸ್ತಾವನೆಯೊಡನೆ, ಬೆಲೆ : ಸಾಧಾರಣ ಪ್ರತಿ : ರೂ. 85/– ಅರೆಕ್ಯಾಲಿಕೊ ಪ್ರತಿ: ರೂ. 120/–

4–5 "ವ್ಯಕ್ತಿಚಿತ್ರ ಸಂಪುಟ" ಭಾಗ ಖ ಮತ್ತು ಖಖ (1993) ಡೆಮಿ 424 ಮತ್ತು 348 ಪುಟಗಳು (50 ಛಾಯಾ ಚಿತ್ರಗಳೂ ಸೇರಿ), ವಿದ್ಯಾಲಂಕಾರ ಪ್ರೊ. ಎಸ್. ಕೆ. ರಾಮಚಂದ್ರರಾವ್ ಅವರ ಪ್ರಸ್ತಾವನೆಯೊಡನೆ, ಬೆಲೆ : ರೂ. 125/– ಮತ್ತು ರೂ. 110/–

6. "ಸ್ಮೃತಿಚಿತ್ರ ಸಂಪುಟ" (1997) ಡೆಮಿ 437 ಪುಟ (5 ಛಾಯಾಚಿತ್ರಗಳೂ ಸೇರಿ), ಪ್ರೊ. ಜಿ. ವೆಂಕಟಸುಬ್ಬಯ್ಯ ಅವರ ಪ್ರಸ್ತಾವನೆ ಮತ್ತು ಡಾ. ಪಿ. ವಿ. ನಾರಾಯಣ ಅವರ ಮುನ್ನುಡಿಯೊಡನೆ, ಬೆಲೆ : ರೂ. 140/–

7. "ವಿಮರ್ಶೆ ಸಂಪುಟ : 1, ಇತಿಹಾಸ ಕಾವ್ಯ" (1998) ಡೆಮಿ 480 ಪುಟ, ವಿದ್ವಾನ್ ಎನ್. ರಂಗನಾಥ ಶರ್ಮಾ ಅವರ ಉಪೋದ್ಘಾತದೊಡನೆ, ಬೆಲೆ: ರೂ. 160/–

8. "ವಿಮರ್ಶೆ ಸಂಪುಟ : 2, ಕಾವ್ಯ, ನಾಟಕ" (2000) ಡೆಮಿ 640 ಪುಟ, ಡಾ. ಟಿ. ವಿ. ವೆಂಕಟಾಚಲಶಾಸ್ತ್ರೀ ಅವರ ಪ್ರಸ್ತಾವನೆ ಮತ್ತು ಡಾ. ಎನ್. ಎಸ್. ತಾರಾನಾಥ ಅವರ ಮುನ್ನುಡಿಯೊಡನೆ, ಬೆಲೆ: ರೂ. 200/–

9. "ವಿಮರ್ಶೆ ಸಂಪುಟ : 3, ಕವಿ ಕಾವ್ಯ ಪರಂಪರೆ" (2003) ಡೆಮಿ 626 ಪುಟ, ಡಾ. ಜಿ. ಎಸ್. ಶಿವರುದ್ರಪ್ಪ ಅವರ ಮುನ್ನುಡಿಯೊಡನೆ, ಬೆಲೆ : ರೂ. 200/– (ಪ್ರತಿಗಳು ತೀರಿವೆ)

10. "ವಿಮರ್ಶೆ ಸಂಪುಟ : 4, ಸಾಹಿತ್ಯಾಲೋಕನ" (2003) ಡೆಮಿ 560 ಪುಟ, ಪ್ರೊ. ಎಂ. ಎಚ್. ಕೃಷ್ಣಯ್ಯ ಅವರ ಅವಲೋಕನದೊಂದಿಗೆ, ಬೆಲೆ : ರೂ. 200/– (ಪ್ರತಿಗಳು ತೀರಿವೆ)

11. "ವಿಮರ್ಶೆ ಸಂಪುಟ : 5, ಸಾಹಿತ್ಯತತ್ತ್ವ–ಕಲಾಮೀಮಾಂಸೆ" (2004) ಡೆಮಿ 474 ಪುಟ, ಡಾ. ಜಿ. ಎಸ್. ಆಮೂರ ಅವರ ಪ್ರಸ್ತಾವನೆಯೊಡನೆ, ಬೆಲೆ : ರೂ.180

12. "ಅನುವಾದ ಸಾಹಿತ್ಯ : ಸಂಪುಟ–1, ಮೋಬಿ ಡಿಕ್" (2007) ಡೆಮಿ 474 ಪುಟ, ಡಾ. ಸಿ. ಎನ್. ರಾಮಚಂದ್ರನ್ ಅವರ ಪ್ರಸ್ತಾವನೆಯೊಂದಿಗೆ, ಬೆಲೆ: ರೂ. 200/–

13. "ಶಾಸ್ತ್ರ ಸಾಹಿತ್ಯ : ಸಂಪುಟ–1 ಕಾನೂನು, ನ್ಯಾಯ, ರಾಜ್ಯಾಂಗ ತತ್ತ್ವ" (2007), ಡೆಮಿ 472 ಪುಟ, ಡಾ. ಸಿ. ಕೆ. ಎನ್. ರಾಜ ಮತ್ತು ನ್ಯಾಯಮೂರ್ತಿ ಎ. ಜೆ. ಸದಾಶಿವ ಅವರ ಪ್ರಸ್ತಾವನೆಯೊಂದಿಗೆ, ಬೆಲೆ ರೂ. 200/–

14. "ಜೀವನ ಚರಿತ್ರೆಗಳು" (2007), ಡೆಮಿ 424 ಪುಟ, ಡಾ. ಪ್ರಭುಶಂಕರ ಅವರ 'ಪರಿಚಯ-ನುಡಿನಮನ'ದೊಡನೆ, ಬೆಲೆ ರೂ. 180/–

15. "ಮಾನವಿಕಶಾಸ್ತ್ರ ಸಂಪುಟ : ಸತ್ಯ ಮತ್ತು ಮೌಲ್ಯ, ಜ್ಞಾನ-ವಿಜ್ಞಾನ" (2008), ಡೆಮಿ 254 ಪುಟ, ಶತಾವಧಾನಿ ಡಾ. ಆರ್. ಗಣೇಶ್ ಅವರ ಪ್ರಸ್ತಾವನೆಯೊಡನೆ, ಬೆಲೆ ರೂ. 125/–

16. "ಹಣಪ್ರಪಂಚ" ಶಾಸ್ತ್ರ ಸಾಹಿತ್ಯ–3 (2009) : ಡೆಮಿ 410 ಪುಟ, ಡಾ. ನವೀನಚಂದ್ರ ಕೆ. ತಿಂಗಳಾಯ ಅವರ ಮುನ್ನುಡಿಯೊಡನೆ, ಬೆಲೆ ರೂ. 200/–

17. "ಸಾಹಿತ್ಯ : ವಿಚಾರ, ವಿಮರ್ಶೆ" ಸಾಹಿತ್ಯ, ಸಂಸ್ಕೃತಿ, ಮತಧರ್ಮ ಕುರಿತು ವಿವೇಚನೆಗಳು (2010) ಡೆಮಿ 472 ಪುಟ, ಡಾ. ಎಸ್. ಆರ್. ರಾಮಸ್ವಾಮಿ ಅವರ ಮುನ್ನುಡಿಯೊಡನೆ, ಬೆಲೆ : ರೂ. 200/-

18. "ಲೋಕಸಮೀಕ್ಷೆ" : ಭಾಗ - 1 (ಲೋಕಜೀವನ ಸಂಬಂಧಿ ಅಂಕಣ ಬರೆಹಗಳು) (2011) ಡೆಮಿ 385 ಪುಟ, ಡಾ. ಎಚ್. ಎಸ್. ರಾಘವೇಂದ್ರರಾವ್ ಅವರ ಪ್ರಸ್ತಾವನೆಯೊಂದಿಗೆ, ಬೆಲೆ : ರೂ. 200/-

19. "ಲೋಕಸಮೀಕ್ಷೆ" : ಭಾಗ - 2 (ಲೋಕಜೀವನ ಸಂಬಂಧಿ ಅಂಕಣ ಬರೆಹಗಳು) (2011) ಡೆಮಿ 354 ಪುಟ, ಬೆಲೆ : ರೂ. 200/-

20. "ಸಂಕೀರ್ಣ ಬರೆಹ ಸಂಪುಟ" : ಭಾಗ - 1 (ಭಾರತದ ಐವರು ಮಾನ್ಯರು- ಪುರಂದರದಾಸ - ಪಾಶ್ಚಾತ್ಯ ನಾಟಕ ವಿವೇಚನೆಗಳು) (2013) ಡೆಮಿ 384 ಪುಟ, ಪ್ರೊ. ಅ. ರಾ. ಮಿತ್ರ ಅವರ ಪ್ರಸ್ತಾವನೆಯೊಂದಿಗೆ, ಬೆಲೆ : ರೂ. 200/-